

# ಐನ್‌ಸ್ಟೈನ್ ಬಾಳಿದರಿಲ್ಲಿ

ಜಿ. ಟಿ. ನಾರಾಯಣರಾವ್

# ಐನ್‌ಸ್ಟೈನ್ ಬಾಳಿದರಿಲ್ಲಿ

ಜಿ. ಟಿ. ನಾರಾಯಣರಾವ್

೨೦೦೮

ಅತ್ರಿ ಬುಕ್ ಸೆಂಟರ್

ಶರಾವತಿ ಕಟ್ಟಡ ಬಲ್ಮಠ ಮಂಗಳೂರು ೫೭೫೦೦೧

*EINSTEIN BALIDARILLI* scientific biography of Albert Einstein in Kannada written by G. T. Narayana Rao, 8 Athree, Kamakshi Hospital Road, Saraswatipura, Mysore 570009. Published by G. N. Ashokavardhana *for* Athree Book Centre, 4 Sharavati building, Balmatta, Mangalore 575 001 (phone 0824 2425161, 2492397); e-mail : athreebook@gmail.com; blog : athree.wordpress.com. *Albert Einstein* first edition (1980) was published by D.V.K.Murthy, and the second edition (1994) by Athree. Revised and enlarged third edition under the new title *Einstein Balidarilli* is published (2000) by Athree Book Centre. Reprint 2009.

Pages xxiv + 336, fully illustrated Rs 70

© ಗ್ರಂಥಸ್ವಾಮ್ಯ ಪ್ರಕಾಶಕರದು

ಪುಟ ೧೯೪ ಐನ್‌ಸ್ಟೈನ್ ಮತ್ತು ಠಾಕೂರ್—ಪೃಥ್ವಿರಾಜ ಅರಸು ಅವರ ಕೃಪೆ
ಪುಟ ೧೯೫ ಐನ್‌ಸ್ಟೈನ್ ಕೈಬರಹ—ಜಿ. ಜಿ. ಪ್ರಭು ಅವರ ಕೃಪೆ

Photo courtesy Lotte Jacobi (USA)

Cover page design R. S. Mohan Murthy

ಮೊದಲನೆಯ ಮುದ್ರಣ ೧೯೮೦ (ಡಿ. ವಿ. ಕೆ. ಮೂರ್ತಿ)
ಎರಡನೆಯ ಮುದ್ರಣ ೧೯೯೪
ಮೂರನೆಯ ಸಂವರ್ಧಿತ ಮುದ್ರಣ ೨೦೦೦
ನಾಲ್ಕನೆಯ ಮುದ್ರಣ ೨೦೦೯

ರೂಪಾಯಿ ಎಪ್ಪತ್ತು

ಮುದ್ರಕರು
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್ ಜಯನಗರ ಮೈಸೂರು ೫೭೦ ೦೧೪ ದೂರವಾಣಿ ೦೮೨೧-೨೫೬೭೭೭೫

# ಅರ್ಪಣೆ

ವಿಜ್ಞಾನದ ಸುವ್ಯವಸ್ಥಿತ ಆದರೆ ಅನನ್ವೇಷಿತ ಲೋಕಕ್ಕೆ ಮೊತ್ತ ಮೊದಲು ಕೈಹಿಡಿದು ಕರೆದೊಯ್ದು ಅದನ್ನು ಅಕ್ಕರೆಯಿಂದ ತೋರಿಸಿದ

**ಶ್ರೀಮಾನ್ ಎ. ಪಿ. ಶ್ರೀನಿವಾಸರಾವ್**

ವಿಜ್ಞಾನಗಳ ರಾಣಿ ಎಂದು ಪ್ರಖ್ಯಾತವಾಗಿರುವ ಗಣಿತಶಾಸ್ತ್ರದ ಬಲ್ಮೆ ಸೊಗಸುಗಳನ್ನು ಸೃಷ್ಟಿಶೀಲ ಕಲಾವಿದನ ವಿನೂತನ ಕುಂಚದಿಂದ ರೇಖಿಸಿ ಕಾಣಿಸಿದ

**ಪ್ರೊಫೆಸರ್ ಕೆ. ಎ. ಕೃಷ್ಣಮೂರ್ತಿ**

ಪರಮಾಣು ಜಗತ್ತಿನ ಅಂತರಂಗ ವ್ಯಾಪಾರಗಳು ಬಹಿರಂಗವಾಗುತ್ತಿದ್ದ ದಿನಗಳಂದು ಅವನ್ನು ಆಕರ್ಷಕವಾಗಿಯೂ ಸ್ಪಷ್ಟವಾಗಿಯೂ ವಿವರಿಸಿದ

**ಪ್ರೊಫೆಸರ್ ಎಸ್. ನಾರಾಯಣ ಹೊಳ್ಳ**

## ಗುರುತ್ರಯರಿಗೆ

---

ನಾರಾಯಣ ಹೊಳ್ಳರು ೧೯೯೩ರಲ್ಲಿಯೂ ಕೃಷ್ಣಮೂರ್ತಿಯವರು ೧೯೯೭ರಲ್ಲಿಯೂ ಅಮರರಾದರು.

**ಶ್ರೀಮಾನ್ ಎ. ಪಿ. ಶ್ರೀನಿವಾಸರಾಯರು** ಪ್ರೌಢಶಾಲೆಯಲ್ಲಿ ನನಗೆ ವಿಜ್ಞಾನ ಕಲಿಸಿದ ಗುರುಗಳು (೧೯೩೯-೪೨). ವಿಜ್ಞಾನಪ್ರಪಂಚದಲ್ಲಿ ಕಾಣಬಹುದಾದ ಕಾರ್ಯ-ಕಾರಣ ಸಂಬಂಧವನ್ನು ಇವರು ಚಿತ್ರಿಸಿದ ನವುರು, ಪ್ರಯೋಗಗಳನ್ನು ಮಾಡಿ ತೋರಿಸುವುದರಲ್ಲಿ ಪ್ರದರ್ಶಿಸಿದ ನಾಜೂಕು ಮತ್ತು ಸಮಗ್ರವಾಗಿ, ವಿಜ್ಞಾನಬೋಧನೆಗೆಂದೇ ತಮ್ಮ ವ್ಯಕ್ತಿತ್ವವನ್ನು ನಿವೇದಿಸಿಕೊಂಡ ಸಮರ್ಪಣಭಾವ ನನ್ನ ತರುಣ ಮತ್ತು ದ್ಯುತಿಗ್ರಾಹಿ ಮನಸ್ಸಿನ ಮೇಲೆ ಅಚ್ಚಳಿಯದ ದಾಖಲೆ ಮೂಡಿಸಿವೆ.

**ಪ್ರೊಫೆಸರ್ ಕೆ. ಎ. ಕೃಷ್ಣಮೂರ್ತಿಯವರು** ಮತ್ತು **ಪ್ರೊಫೆಸರ್ ಎಸ್. ನಾರಾಯಣ ಹೊಳ್ಳರು** ನನಗೆ ಇಂಟರ್‌ಮೀಡಿಯೆಟ್ ತರಗತಿಗಳಲ್ಲಿ ಗಣಿತ ಮತ್ತು ಭೌತವಿಜ್ಞಾನ ಬೋಧಿಸಿದರು (೧೯೪೨-೪೪). ಮುಂದೆ, ನಾನು ಗಣಿತದಲ್ಲಿ ಸ್ನಾತಕೋತ್ತರ ಪದವಿ ಪಡೆದ (೧೯೪೮) ತರುವಾಯ, ನಾಲ್ಕು ವರ್ಷಗಳ ಕಾಲ, ೧೯೪೯-೫೩, ಇವರ ಸಹೋದ್ಯೋಗಿ ಆಗಿದ್ದೆ. ನನ್ನ ವ್ಯಕ್ತಿತ್ವ ರೂಪುಗೊಳ್ಳುತ್ತಿದ್ದ ದಿನಗಳಂದು ಈ ಮಹನೀಯರ ಜೊತೆ ಒದಗಿದ ಆರು ವರ್ಷಗಳ ನಿಕಟ ಸಂಪರ್ಕ ಮತ್ತು ಸಹಯೋಗ ನನ್ನ ಅಭಿರುಚಿ ಆಸಕ್ತಿಗಳಿಗೆ ಖಚಿತ ರೂಪ ಮತ್ತು ಯುಕ್ತ ನಿರ್ದೇಶನ ನೀಡಿದುವು.

ಗಣಿತದ ಎಂಥ ಸಂಕೀರ್ಣ ಪರಿಕಲ್ಪನೆಯೇ ಇರಲಿ ಯಾವ ಜಟಿಲ ಸಮಸ್ಯೆಯೇ ಎದುರಾಗಲಿ, ಕೃಷ್ಣಮೂರ್ತಿಯವರ ನಿಶಿತಮತಿಗೆ ಅದೊಂದು ಲೀಲಾವಿಹಾರ. ಅದರ ತಿರುಳನ್ನು ಅವರು ಒಡನೆ ಗ್ರಹಿಸಿ ಸ್ಪಷ್ಟವಾಗಿಯೂ ಸುಂದರವಾಗಿಯೂ ವಿವರಿಸುತ್ತಿದ್ದರು. ನಾರಾಯಣ ಹೊಳ್ಳರು ನ್ಯೂಕ್ಲಿಯರ್ ಯುಗ ಕ್ರಮಶಃ ಅನಾವರಣಗೊಳ್ಳುತ್ತಿದ್ದ ಆ ರೋಮಾಂಚಕಾರೀ ದಿನಗಳಂದು, ಭೌತ ಜಗತ್ತಿನ ಪ್ರಗಲ್ಭ ವಿದ್ಯಮಾನಗಳನ್ನು ಜಿಜ್ಞಾಸುವಿನ ಅನ್ವೇಷಕ ನೇತ್ರಗಳಿಂದ ಗ್ರಹಿಸಿ ಜೇಮ್ಸ್ ಜೀನ್ಸ್ ಅವರ ವಿನೂತನ ಧಾಟಿಯಲ್ಲಿ ಆಕರ್ಷಕವಾಗಿಯೂ ಸರ್ವಗ್ರಾಹ್ಯವಾಗಿಯೂ ವರ್ಣಿಸುತ್ತಿದ್ದರು. ಇವರುಗಳ ಜ್ಞೇಯನಿಷ್ಠ ಸಂವಹನ ಸಾಮರ್ಥ್ಯ ನನ್ನ ಮೇಲೆ ವಿಶಿಷ್ಟ ಪ್ರಭಾವ ಬೀರಿದೆ.

**ಐನ್‌ಸ್ಟೈನ್ ಬಾಳಿದರಿಲ್ಲಿ** ಪುಸ್ತಕವನ್ನು ಈ ಗುರುತ್ರಯರಿಗೆ ಅರ್ಪಿಸುವುದರಲ್ಲಿ ವಿನೀತ ವಿದ್ಯಾರ್ಥಿಯೊಬ್ಬನ ಸಾಂಪ್ರದಾಯಿಕ ಕೃತಜ್ಞತಾಭಾವ ಪ್ರಕಟಣೆಗಿಂತ ಹೆಚ್ಚಿನ ಒಂದು ಪ್ರತೀಕಾರ್ಥ ಹುದುಗಿದೆ ಎಂದು ಭಾವಿಸಿದ್ದೇನೆ : ಇಂಥ ಗುರುಗಳು, ಅಡಿಗರ ನುಡಿಗಳಲ್ಲಿ, ''ಮಣ್ಣಿನ ಮನದಲಿ ಹೊನ್ನನೆ ಬೆಳೆಯುವ ಅಪೂರ್ವ ತೇಜದ'' ಮಾಂತ್ರಿಕರು.

# ಪರಿವಿಡಿ


| | | | |
|---|---|---|---|
| ಮುನ್ನುಡಿ | ... | ... | viii |
| ನನ್ನ ನುಡಿ | ... | ... | xv |

**೧. ಸುಪ್ತ ಪ್ರತಿಭೆ**

| | | | |
|---|---|---|---|
| ದಿಕ್ಸೂಚಿ ಸೂಚಿಸಿದ ದಿಕ್ಕು | ... | ... | ೧ |
| ತಸ್ಕರ ಶೋಧನೆ | ... | ... | ೩ |
| ನಿರಂಕುಶಮತಿ | ... | ... | ೧೦ |
| ಅನಾಥ ಪಕ್ಷಿ | ... | ... | ೧೧ |
| ಬಿರಿದ ಮುಗುಳು | ... | ... | ೧೨ |
| ಹಿಮ ಕಡಿದ ಹೂವು | ... | ... | ೧೮ |
| ನವ ಅರುಣೋದಯ | ... | ... | ೨೧ |

**೨. ಪ್ರತಿಭೆ ದರ್ಶಿಸಿದ ಪ್ರಪಂಚ**

| | | | |
|---|---|---|---|
| ಹೂವು ಅರಳಿತು | ... | ... | ೨೪ |
| ಏನು ವಿಸ್ಮಯ ಸೃಷ್ಟಿ ! | ... | ... | ೨೫ |
| ಡಾಕ್ಟೊರೇಟ್ ಪದವಿ | ... | ... | ೩೧ |
| ಪ್ರತಿಭಾವಿಕಾಸ | ... | ... | ೩೨ |
| ಝೂರಿಕ್ ವಿಶ್ವವಿದ್ಯಾಲಯ | ... | ... | ೩೫ |
| ಮ್ಯಾಕ್ಸ್ ಪ್ಲ್ಯಾಂಕ್ | ... | ... | ೩೭ |

**೩. ಕಾಲಕ್ಕೆ ತೊಡಿಸಿದ ಕಡಿವಾಣ**

| | | | |
|---|---|---|---|
| ಪ್ರಾಧ್ಯಾಪಕತ್ವದ ಹೊಣೆ | ... | ... | ೩೮ |
| ಪ್ರಾಹಾಕ್ಕೆ ವಲಸೆ | ... | ... | ೩೯ |
| ಪ್ರಾಹಾ ಸಮಸ್ಯೆಗಳು | ... | ... | ೪೧ |
| ಮರಳಿ ಮಾತೃ ಸಂಸ್ಥೆಗೆ | ... | ... | ೪೨ |
| ಪ್ಲ್ಯಾಂಕರಿಂದ ಬಂದ ಕರೆ | ... | ... | ೪೪ |

**೪. ಮಾನವೀಯ ಮುಖ**

| | | | |
|---|---|---|---|
| ಮಿಲಿಟರಿತನದ ಉತ್ಕರ್ಷೆ | ... | ... | ೪೮ |
| ಒಂದನೆಯ ಮಹಾಯುದ್ಧ | ... | ... | ೫೦ |
| ತೊಂಬತ್ತೆರಡರ ಎದುರು ನಾಲ್ಕು | ... | ... | ೫೧ |
| ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತ | ... | ... | ೫೩ |
| ಮರುಮದುವೆ | ... | ... | ೫೫ |
| ತಾಯಿಯ ಕೊನೆ ಗಳಿಗೆ | ... | ... | ೫೭ |
| ನ್ಯೂಟನ್ ತರುವಾಯ ಯಾರು ? | ... | ... | ೫೭ |
| ಗಗನ ಬಯಲಾಟ | ... | ... | ೫೯ |
| ಬೆಳಕು ಬಗ್ಗಿತು | ... | ... | ೬೧ |

ನ್ಯೂಟನ್ ಮಹಾಶಯ . . . . . . ೬೨
ಬರ್ಲಿನ್ನಿನಲ್ಲಿ ರಂಗು ಬದಲಾವಣೆ . . . . . . ೬೪
ಕಲ್ಪನಾ ವಿಲಾಸಿಗಳ ಕಲ್ಪವೃಕ್ಷ . . . . . . ೬೬
ಅಪೂರ್ವ ತೇಜದ ಮಾಂತ್ರಿಕ . . . . . . ೬೭

೫. ರಾಕ್ಷಸರೋ ? ಸಾಕ್ಷರರೋ ?

ಯುದ್ಧೋತ್ತರ ಜರ್ಮನಿ . . . . . . ೭೨
ಆ್ಯಂಟಿರಿಲೆಟಿವಿಟಿ ಕಂಪನಿ . . . . . . ೭೬
ವಿಜ್ಞಾನಿಗಳ ಆಕ್ರೋಶ . . . . . . ೮೦
ಬ್ಯಾಡ್ ನ್ಯಾಹೀಮಿನ ತಿರುಗಣೆ ಮಡು . . . . . . ೮೪
ಜರ್ಮನ್ ಪೌರತ್ವ . . . . . . ೮೭

೬. ಯೆಹೂದ್ಯತ್ವದ ಅರಿವು

ಸೀಮೋಲ್ಲಂಘನ . . . . . . ೮೮
ಝಿಯನಿಸ್ಟ್ ಚಳವಳಿ . . . . . . ೯೧
ಚೈಮ್ ವೈಝ್‌ಮನ್ . . . . . . ೯೪
ಐನ್‌ಸ್ಟೈನ್ ಮತ್ತು ಝಿಯನಿಸಮ್ . . . . . . ೯೫

೭. ಅಪೂರ್ವ ಪಶ್ಚಿಮಾಭಿಯಾನ

ಅಮೆರಿಕಯಾನದ ಪೂರ್ವಸಿದ್ಧತೆ . . . . . . ೯೯
ದೊಗಲೆ ಸುರಾಲಿನ ಪಿಟೀಲುವಾದಕ ಯಾರಿವನು?. . . . . . ೧೦೨
ಅಮೆರಿಕನ್ನರ ಹೃನ್ಮನ ಗೆದ್ದ ಪರಿವ್ರಾಜಕ . . . . . . ೧೦೬
ನ್ಯೂಟನ್ ನಾಡಿನಲ್ಲಿ ಐನ್‌ಸ್ಟೈನ್ ಪ್ರತಿಬಿಂಬ . . . . . . ೧೧೩
ಇಂಗ್ಲಿಷ್ ಜನರಿಂದ 'ಸ್ವಾಗತ' . . . . . . ೧೨೦
ಚಾಬಸಿಯಲ್ಲಿ ಚಂಡಮಾರುತ . . . . . . ೧೨೭
ಫ್ರಾನ್ಸ್ ದೇಶಕ್ಕೆ ಭೇಟಿ . . . . . . ೧೨೯

೮. ಮಾನವೀಯತೆ ಕುಂಚಿಸಿದ ಜಾಡು

ಶಾಂತಿ ಅನ್ವೇಷಕ ಐನ್‌ಸ್ಟೈನ್ . . . . . . ೧೩೪
ನೇಸರು ಮೂಡುವ ನಾಡಿಗೆ ಪಯಣ . . . . . . ೧೩೯
ಪ್ಯಾಲೆಸ್ಟೈನಿನ ಪವಿತ್ರ ಪೀಠಾರೋಹಣ . . . . . . ೧೪೦

೯. ಸಾಧನೆಯ ಹಿರಿಮೆ

ನೊಬೆಲ್ ಪಾರಿತೋಷಿಕ . . . . . . ೧೪೫

೧೦. ಲೆತ್ತವಾಡದ ಭಗವಂತ

ಏಕೀಕೃತ ಸಿದ್ಧಾಂತ . . . . . . ೧೫೫

೧೧. ಐವತ್ತರ ಅಂಚಿನಿಂದಾಚೆಗೆ

ಐನ್‌ಸ್ಟೈನ್ ಐವತ್ತು . . . . . . ೧೬೨
ದೊರೆಯದಿದ್ದ ಉಡುಗೊರೆ . . . . . . ೧೬೫
ಐನ್‌ಸ್ಟೈನ್ ಆಶ್ರಮ . . . . . . ೧೬೮

"ಅವರೇಕೆ ಯೆಹೂದ್ಯರನ್ನು ದ್ವೇಷಿಸುತ್ತಾರೆ !" ... ... ೧೭೧

೧೨. ಜರ್ಮನಿಯಿಂದ ನಿರ್ಗಮನ

ಜರ್ಮನಿಗೆ ಬಡಿದ ಝಂಝಾವಾತ ... ... ೧೭೬
ಯೆಹೂದ್ಯ ಬೇಟೆ ... ... ೧೭೮
ಐನ್‌ಸ್ಟೈನರ ಬವಣೆಗಳು ... ... ೧೮೧
ಯೂರೋಪಿನಲ್ಲಿ ಸಂಜೆ ನೇಸರು ... ... ೧೮೬
ಅಮೆರಿಕದಲ್ಲಿ ಮುಂಜಾನೆ ನೇಸರು ... ... ೧೯೨

೧೩. ಪ್ರಿನ್ಸ್‌ಟನ್ನಿನಲ್ಲಿ ವಿಜ್ಞಾನಿಗಳ ಪ್ರಿನ್ಸ್

ಬೈರಾಗಿ ಬೀಡು ಬಿಟ್ಟಲ್ಲೇ ಬಿಡಾರ ... ... ೧೯೯
ಅನ್ವೇಷಣೆ ... ... ೨೦೫
ಒಲವಿನಲ್ಲಿ ಬೆಳಿ ಒಲವಿನಲ್ಲಿ ಉಳಿ ... ... ೨೧೬

೧೪ . ಬಾಂಬೋ ? ನಾಗರಿಕತೆಯ ಟೂಂಬೋ ?

ಪರಮಾಣು ಭೇದನೆ ... ... ೨೨೦
ಐನ್‌ಸ್ಟೈನ್ ಮತ್ತು ಪರಮಾಣುಬಾಂಬ್ ... ... ೨೩೦
ಪರಮಾಣುಯುದ್ಧ ಅಥವಾ ಶಾಂತಿ ... ... ೨೩೭

೧೫. ಬಾಳಸಂಜೆಯಲ್ಲಿ ಬದುಕು

ಐನ್‌ಸ್ಟೈನ್ ಎಪ್ಪತ್ತು ... ... ೨೩೯
ಮೆಕಾರ್ಥಿತ್ವದ ದಳ್ಳುರಿ ... ... ೨೪೮
ಇಸ್ರೇಲಿನ ಅಧ್ಯಕ್ಷತೆ ? ... ... ೨೫೨
ಜೀವನ ದೃಷ್ಟಿ ... ... ೨೫೩
ಐನ್‌ಸ್ಟೈನರ ದೃಷ್ಟಿಯಲ್ಲಿ ಗಾಂಧೀಜಿ ... ... ೨೫೯
ಐನ್‌ಸ್ಟೈನ್-ರಸಲ್ ಘೋಷಣೆ ... ... ೨೬೨
ಸೂತ್ರ ಛೇದನೆ ... ... ೨೬೪

ಅನುಬಂಧಗಳು

೧. ಕಲ್ಪನೆಯಿಂದ ಕತ್ತರಿಸಿ ತೆಗೆದ ಅಮೃತ ಶಿಲೆ ... ... ೨೬೯
೨. ವೈಜ್ಞಾನಿಕ ಮನೋಧರ್ಮ ... ... ೨೭೩
೩. ವಿಜ್ಞಾನ ಮತ್ತು ಧರ್ಮ ... ... ೨೭೯
೪. ಧರ್ಮ ಮತ್ತು ವಿಜ್ಞಾನ ... ... ೨೮೭
೫. ಐನ್‌ಸ್ಟೈನ್ ಸೂಕ್ತಿ ... ... ೨೯೨
ಟಿಪ್ಪಣಿಗಳು ... ... ೨೯೪
ವಿಷಯ-ಪುಟ ಸೂಚಿ ... ... ೩೨೦
Select Bibliography ... ... ೩೩೪

# ಮುನ್ನುಡಿ

ಪುಸ್ತಕಗಳಿಗೆ ಮುನ್ನುಡಿ ಯಾಕೆ ? ಪುಸ್ತಕ ಬರೆದು ಪ್ರಕಟಿಸುವ ಕಷ್ಟ ತೆಗೆದುಕೊಂಡವನೇ ಮುನ್ನುಡಿ ಬರೆದರೆ ಅದೊಂದು ರೀತಿ. ಅವನು ತಾನು ಪಟ್ಟಪಾಡನ್ನು ತೋಡಿಕೊಳ್ಳುವುದಕ್ಕೆ ಅದೊಂದು ಸಾಧನ ಅಂದುಕೊಳ್ಳಬಹುದು. ಆದರೆ ಪಾಡುಪಡದವನೊಬ್ಬನಿಂದ ಮುನ್ನುಡಿ ಬರೆಸುವುದು ಏನು ಸೊಗಸು ? ಮದುವೆಗಳಲ್ಲಿ ಮದುವಣಗಿತ್ತಿಯನ್ನು ಮಂಟಪಕ್ಕೆ ಕರೆತರುವ ಸೋದರಮಾವನ ಪಾತ್ರ ಮುನ್ನುಡಿಕಾರನದ್ದೇ ? ಅಥವಾ ತಂಪು ಪಾನೀಯಗಳನ್ನು—ಈಗೀಗ ಎಳನೀರನ್ನು ಕೂಡ—ಕುಡಿಯುವುದಕ್ಕೆ ಒದಗಿಸುವ ಹುಲ್ಲು ನಳಿಗೆಯ ಹಾಗೆ ಪುಸ್ತಕಕ್ಕೊಂದು ಮುನ್ನುಡಿಯೇ ?

ನಾನು ಕೇಳುವ ಅನೇಕ ಪ್ರಶ್ನೆಗಳಿಗೆ ನನಗೇ ಉತ್ತರ ಗೊತ್ತಿಲ್ಲದಿರುವ ಹಾಗೆ ಈ ಪ್ರಶ್ನೆಗಳಿಗೂ ಉತ್ತರ ನಾನರಿಯೆ. ಆದರೂ ನನ್ನ ಮಿತ್ರ ಜಿ. ಟಿ. ನಾರಾಯಣರಾಯರು ಕೇಳಿಕೊಂಡೊಡನೆ ಈ ಪುಸ್ತಕಕ್ಕೆ ಮುನ್ನುಡಿ ಬರೆಯಲು ಒಪ್ಪಿಕೊಂಡೆ. ವಯಸ್ಸಾಗಿ, ಹೂರಣವುಳ್ಳ ಬರವಣಿಗೆಯ ಶಕ್ತಿ ಕಳೆದುಕೊಂಡವರಿಗೆ ತಾವಿನ್ನೂ ಜೀವಂತರಾಗಿದ್ದೇವೆಂದು ತಮಗೇ ಖಾತ್ರಿ ಮಾಡಿಕೊಳ್ಳುವುದಕ್ಕೆ ಮುನ್ನುಡಿ ಬರೆಯುವ ಸಂದರ್ಭ ಸಿಕ್ಕಿದರೆ ಅದು ಸುವರ್ಣ ಸಂದರ್ಭ ! ಜಿಟಿಯವರು ಈ ಸದಾಶಯದಿಂದ ನನ್ನನ್ನು ಮುನ್ನುಡಿಕಾರನ ಪಟ್ಟಕ್ಕೇರಿಸಿಲ್ಲವೆಂದು ನಾನು ಆಶಿಸುತ್ತೇನೆ.

ಹಾಗಿದ್ದರೂ ಪರವಾ ಇಲ್ಲ. ಈ ಪುಸ್ತಕವನ್ನು ಪ್ರಕಟನಪೂರ್ವದಲ್ಲಿ ಓದುವ ಸಂದರ್ಭ ದೊರೆತದ್ದು ನನಗೆ ಸಂತೋಷ ತಂದಿದೆ. ನಾನೂರು ಪುಟಗಳ ಈ ಬೃಹದ್‌ಗ್ರಂಥಕ್ಕಾಗಿ ಲೇಖಕರು ತುಂಬಾ ದುಡಿದಿದ್ದಾರೆಂಬುದು ಸ್ಪಷ್ಟವೇ ಇದೆ. ಕನ್ನಡದಲ್ಲಿ ಹಲವು ವಿಜ್ಞಾನ ಲೇಖನ, ಪುಸ್ತಕಗಳ ಕರ್ತರವರು. ಚೊಕ್ಕ ಕೆಲಸ ಮಾಡುವವರು. ಪರಿಣಾಮವಾಗಿ ಈ ಶತಮಾನದ ಅತ್ಯಂತ ಪ್ರಭಾವೀ ವಿಜ್ಞಾನಿಯ ಜೀವನವನ್ನು ಕುರಿತು ಅರಿಯಬೇಕಾದದ್ದನ್ನೆಲ್ಲ ಒಳಗೊಂಡ ಒಂದು ಗ್ರಂಥವನ್ನು ಕನ್ನಡದಲ್ಲಿ ಕಾಣುತ್ತಿದ್ದೇವೆ.

ಐನ್‌ಸ್ಟೈನರು ಪ್ರಪಂಚದಲ್ಲಿ ಬಹಳ ಅಪರೂಪವಾಗಿ 'ಅವತರಿಸುವ' ಪ್ರಚಂಡ ಬುದ್ಧಿಯ ವಿಜ್ಞಾನಿಗಳಲ್ಲಿ ಒಬ್ಬರು, ಬಹುಶಃ ಐದು ಅಥವಾ ಹತ್ತು ಶತಮಾನಗಳಿಗೊಮ್ಮೆ. ಪಡುವಣ ದೇಶಗಳಲ್ಲಿ ಅರಸಿದರೆ ಕ್ರಿಸ್ತಪೂರ್ವದ ಆರ್ಕಿಮಿಡೀಸ್, ಮೂರು ಚಿಲ್ಲರೆ ಶತಮಾನಗಳ ಹಿಂದೆ ಹುಟ್ಟಿದ ನ್ಯೂಟನ್ ನಿಶ್ಚಿತವಾಗಿಯೂ ಈ ವರ್ಗದಲ್ಲಿ ಸೇರುತ್ತಾರೆ. ಜಿಟಿಯವರು ಎಲ್ಲ ವಿಜ್ಞಾನ ಗಳ ಅಂತಿಮ ಆಶಯವಾದ ಗಣಿತಶಾಸ್ತ್ರದಲ್ಲಿ ಶೂನ್ಯವನ್ನು ಕಂಡುಹಿಡಿದ ಭಾರತೀಯನನ್ನು ಈ ವರ್ಗದಲ್ಲಿ ಉಮೇದ್ವಾರನನ್ನಾಗಿ ನಿಲ್ಲಿಸಿರುವಂತಿದೆ. ದುರ್ದೈವದಿಂದ ಅವನು ಯಾರೋ ನಮಗೆ ತಿಳಿಯದಿದ್ದರೂ 'ಶೂನ್ಯ ಸಂಪಾದನೆ' ಮಾಡಿದವನ ಆವಿಷ್ಕರಣದಿಂದ ಆದ ಕ್ರಾಂತಿ ಪರಮಾಣು-ಚ್ಛೇದನದಂಥ ತತ್‌ಕ್ಷಣದ ಪರಿಣಾಮವನ್ನು ತಾರದಿದ್ದರೂ ಮನುಷ್ಯನ ಊಹನೆ ಭಾವನೆಗಳ ಪರಿಮಾಣಾತ್ಮಕ ಅಭಿವ್ಯಂಜನೆಯನ್ನು ನಂಬಲಾರದಷ್ಟು ಸರಳಗೊಳಿಸಿದ ಆ ಅಜ್ಞಾತ ಮಹಾನು ಭಾವನನ್ನು ಪ್ರಪಂಚದ ಪ್ರಥಮ ವರ್ಗದ ಮಿದುಳುಗಳಲ್ಲಿ ಗಣಿಸಬೇಕಾದೀತು. ಇಟಲಿಯ ಲಿಯೊನಾರ್ಡೊ ದ ವಿಂಚಿಯನ್ನು ಈ ಸಾಲಿನಲ್ಲಿ ಹೆಸರಿಸುವ ಚಪಲ ಬರುತ್ತದೆ. ಆದರೆ ಆತನ ಮಿದುಳು ಆರ್ಕಿಮಿಡೀಸ್ ಅಥವಾ ನ್ಯೂಟನ್ನನವುಗಳಿಗಿಂತ ಭಿನ್ನ ಸ್ವರೂಪದ್ದೋ ಅನಿಸುತ್ತದೆ. ಅಥವಾ ಅವನು ಕಾಲ ತಪ್ಪಿ, ನೂರಿನ್ನೂರು ವರ್ಷ ಮುಂಚಿತವಾಗಿ ಹುಟ್ಟಿ ಕೆಟ್ಟನೋ ಏನೋ! ಮಾನವೇತಿಹಾಸದಲ್ಲಿ ಕಾಲ ದೇಶ ತಪ್ಪಿ ಹುಟ್ಟುವುದು, ಸಕಾಲಕ್ಕೆ ಮುಂಚೆ ದಾರ್ಶನಿಕ ವೈಜ್ಞಾನಿಕ

ಕಲ್ಪನೆಗಳು ಆವಿರ್ಭವಿಸುವುದು ಎಂಬುದೊಂದಿದೆ. ಕಲನಶಾಸ್ತ್ರವನ್ನು (calculus) ಮೊತ್ತ ಮೊದಲು ಆವಿಷ್ಕರಿಸಿದವನು ಆರ್ಕಿಮಿಡೀಸನೇ ಎಂದೂ ಆದರೆ ಅವನ ಕಾಲದಲ್ಲಿ ಅದರ ಪ್ರಯೋಜನಕ್ಕೆಡೆಯಿದ್ದಿಲ್ಲವಾಗಿ ಅದು ಮೂಲೆಗುಂಪಾಯಿತೆಂದೂ ಓದಿದ ನೆನಪಾಗುತ್ತದೆ. ಹಾಗಾಗಿ ಎರಡು ಸಾವಿರ ವರ್ಷಗಳ ಮೇಲೆ ನ್ಯೂಟನ್ ಅದನ್ನು ಪುನರಾವಿಷ್ಕರಿಸಬೇಕಾಯಿತು. ನ್ಯೂಟನ್ನನದು ಹೇಗೋ ಹಾಗೆ ಐನ್‌ಸ್ಟೈನರ ಭಾಗ್ಯವೂ ಅವರು ಇತಿಹಾಸದ ತಕ್ಕ ನಿಟ್ಟಿನಲ್ಲಿ ಹುಟ್ಟಿದರು ಎಂಬುದರಲ್ಲಿದೆ. ಇಬ್ಬರ ಮಹಿಮೆಯೂ ಒಂದೇ ಸ್ವಭಾವದ್ದು. ಅವರು ಮಹಾ ಪವಣಿಗರು. ಹಲದಶಕಗಳಿಂದ ಇತರರು ಕಲೆಹಾಕಿದ್ದ ತಥ್ಯಗಳನ್ನು ಏಕಸೂತ್ರದಲ್ಲಿ ಪವಣಿಸಿ ಅವರು ನಿಸರ್ಗದ ವರ್ತನೆಯನ್ನು ಅರ್ಥಪೂರ್ಣವಾಗಿ ಮಾಡಿ ತೋರಿಸಿದರು ; ಭಾರತೀಯ ಪರಿಭಾಷೆಯಲ್ಲಿ ಹೇಳುವುದಾದರೆ 'ಸತ್ಯ'ಗಳನ್ನು ಅಥವಾ 'ತಥ್ಯ'ಗಳನ್ನು'ಋತ'ದ ವ್ಯವಸ್ಥೆಗೆ ಒಳಪಡಿಸಿದರು. ಅಲೆಕ್ಸಾಂಡರ್ ಪೋಪ್ ಕವಿ "ದೇವನೆಂದನು ನ್ಯೂಟನ್ ಆಗಲಿ, ಒಡನೆ ಆಯ್ತು ಎಲ್ಲವು ಬೆಳಕು !" ಎಂದು ಹೇಳಿದಾಗ ಈ ಮಹತಿಯನ್ನೇ ಬಣ್ಣಿಸಿದ್ದ. ಕೊಪರ್ನಿಕಸ್, ಕೆಪ್ಲರ್, ಗೆಲಿಲಿಯೋ ಕಂಡದ್ದನ್ನೆಲ್ಲ ನ್ಯೂಟನ್ ಕಾಣ್ಕೆಯಾಗಿ ಮಾರ್ಪಡಿಸಿದ್ದ.

ಈ ಮಾತು ನ್ಯೂಟನ್ನನಿಗೆ ಅನ್ವಯಿಸುವುದಕ್ಕಿಂತಲೂ ಹೆಚ್ಚಾಗಿ ಆಲ್ಬರ್ಟ್ ಐನ್‌ಸ್ಟೈನರಿಗೆ ಅನ್ವಯಿಸುತ್ತದೆ. ೨೦ನೇ ಶತಮಾನದ ಉದ್ದಾಮ ವಿಜ್ಞಾನಿಗಳು ಕಂಡುಹಿಡಿದ ತಥ್ಯಗಳು ನ್ಯೂಟನ್ ನಿರ್ಮಿಸಿದ 'ವಿಶ್ವ'ವನ್ನು ಕದಲಿಸಿ ಭೌತಶಾಸ್ತ್ರಪ್ರಪಂಚವನ್ನು ಗೊಂದಲದಲ್ಲಿ ಕೆಡಹಿದ್ದಾಗ ಐನ್‌ಸ್ಟೈನರು ಹೊಸದೊಂದು ಕಾಣ್ಕೆಯ ಸೂತ್ರಕ್ಕೆ ವಿಶ್ವವನ್ನು ಒಳಪಡಿಸಿ 'ಅನರ್ಥ'ಗಳಿಗೆ 'ಅರ್ಥ'ದಾನ ಮಾಡಿದರು. ಅವರ ವಿಶೇಷ ಸಾಪೇಕ್ಷತಾ ಸಿದ್ಧಾಂತ ಮತ್ತು ಅನಂತರ ರೂಪಿಸಿದ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತವನ್ನು ಎಷ್ಟುಮಟ್ಟಿಗೆ ವಿಜ್ಞಾನವೆಂದು ಹೇಳಬಹುದೋ ಅಷ್ಟೇ ಮಟ್ಟಿಗೆ 'ದರ್ಶನ'ವೆಂದೂ ಕರೆಯಬಹುದು. ಪದಾರ್ಥ ಮತ್ತು ಶಕ್ತಿಯನ್ನು, ಕಾಲ ಮತ್ತು ದೇಶವನ್ನು ಒಂದೇ ಮಹಾ'ಋತ'ದ ಅಂಕೆಯಲ್ಲಿ ನೆಲೆಗೊಳಿಸಿದ ಅವರ ಕಾರ್ಯ ಕ್ವಾಂಟಮ್ ಭೌತಶಾಸ್ತ್ರದಿಂದ ಉದ್ಭವಿಸಿದ ಸಮಸ್ಯೆಗಳಿಗೆ ಪರಿಹಾರವೊದಗಿಸಿದ ಬಗೆಯನ್ನು ಲೇಖಕರು ಈ ಪುಸ್ತಕದಲ್ಲಿ ವಿಸ್ತೃತವಾಗಿ ವಿವೇಚಿಸಿದ್ದಾರೆ.

ಐನ್‌ಸ್ಟೈನರ ಸಿದ್ಧಿಗಳು ಐಸಾಕ್ ನ್ಯೂಟನ್ನನವುಗಳಿಗೆ ಸರಿಮಿಗಿಲಾಗಿ ನಿಲ್ಲುವ ಬುದ್ಧಿವೈಭವವನ್ನು ಪ್ರದರ್ಶಿಸಿದ್ದರೂ ಈ ಇಬ್ಬರು ಮಹಾಪುರುಷರು ಎಷ್ಟು ಭಿನ್ನಸ್ವಭಾವಗಳವರಾಗಿದ್ದರೆಂಬುದು ಆಶ್ಚರ್ಯ ತರಿಸುತ್ತದೆ. ನ್ಯೂಟನ್ನನ ಬಾಲ್ಯಜೀವನ ಕೆಲಮಟ್ಟಿಗೆ ಐನ್‌ಸ್ಟೈನರದಕ್ಕಿಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ಹಾಯ್ದು ಬಂದಿತ್ತು. ಆದರೆ ಅವನೆಂದೂ ದಡ್ಡ ವಿದ್ಯಾರ್ಥಿ ಎನಿಸಿಕೊಂಡಿರಲಿಲ್ಲ. ಜರ್ಮನ್ ಶಿಕ್ಷಣ ವ್ಯವಸ್ಥೆಯ ಕಬ್ಬಿಣದ ಚೌಕಟ್ಟಿನಲ್ಲಿ ಸಿಕ್ಕಿದ್ದ ಐನ್‌ಸ್ಟೈನರನ್ನು ಹದಿನಾಲ್ಕನೇ ವಯಸ್ಸಿನಲ್ಲಿ ಕೆಲಸಕ್ಕೆ ಬಾರದ ದಡ್ಡನೆಂದು ಅವರ ಶಾಲೆ ಅತ್ಯಂತ 'ಸಂತೋಷ'ದಿಂದ ಹೊರಗೆ ಹಾಕಿತ್ತು. ಬಾಲಕ ಐನ್‌ಸ್ಟೈನನಿಗೂ ಈ ಬಡತರ್ಫಿಯಿಂದ ಅಷ್ಟೇ ಸಂತೋಷವಾಗಿತ್ತು ! ಅದಾಗಿ ಹನ್ನೆರಡು ವರ್ಷಗಳೊಳಗೆ ಈ ದಡ್ಡ, ಜಗತ್ತನ್ನೇ ವಿಸ್ಮಯಗೊಳಿಸುವ ವಿಜ್ಞಾನಪ್ರಬಂಧವನ್ನು ಪ್ರಕಟಿಸಬಹುದೆಂದು ಯಾರು ಎಣಿಸಿದ್ದರು ! ವಾಸ್ತವಿಕವಾಗಿ ವಿದ್ಯಾರ್ಥಿದಶೆಯ ಉದ್ದಕ್ಕೂ 'ನಾಲಾಯಕ'ವೆಂಬ ಬಿರುದನ್ನೇ—ಜರ್ಮನಿಯಲ್ಲಿಯೂ ಸ್ವಿಟ್ಸರ್ಲೆಂಡಿನಲ್ಲಿಯೂ—ಗಳಿಸಿದವರು ಅವರು. ಮಹಾಪ್ರಯೋಗ ಪರೀಕ್ಷೆಗಳ ಯುಗದಲ್ಲಿ ಹುಟ್ಟಿದ ಅವರು ಪ್ರಯೋಗಶಾಲೆಗಳಲ್ಲಿ ಅತ್ಯಲ್ಪ ಕಾಲವನ್ನು ಕಳೆದವರೆಂಬುದು ಇನ್ನೊಂದು ಸೋಜಿಗ. ಅವರ ಮತಿ ಅತಿಸೂಕ್ಷ್ಮ ಮತ್ತು ಅತಿ ವಿಶಾಲ ವಿಷಯಗಳಲ್ಲಿ ಮಾತ್ರ ಗ್ರಹಣಶಕ್ತಿಯನ್ನು ತೋರಿಸು

ತ್ತಿತ್ತು. ಅದು ಮಹಾಪ್ರಶ್ನೆಗಳನ್ನು ಮಾತ್ರ ಕೇಳಬಲ್ಲದ್ದಾಗಿತ್ತು. ಚಿಲ್ಲರೆ ಸಂಗತಿಗಳ ಬಗ್ಗೆ ಆಸಕ್ತಿ ವಹಿಸುವುದು, ಆಸಕ್ತಿ ಇಲ್ಲದ್ದನ್ನು ಅಧ್ಯಯನ ಮಾಡುವುದು ಅವರಿಗೆ ಸುತರಾಂ ಅಸಾಧ್ಯ ವಾಗಿತ್ತು. ಈ ವಿಷಯದಲ್ಲಿ ಐನ್‌ಸ್ಟೈನರು ರವೀಂದ್ರನಾಥ ಠಾಕೂರರಿಗೆ ಹೆಚ್ಚು ಹತ್ತಿರದವ ರೇನೋ. ಠಾಕೂರರಿಗೆ ಹೈಸ್ಕೂಲ್ ಗಣಿತ ಕೂಡ ಹತ್ತದೆ ಅವರು ಮೆಟ್ರಿಕ್ ಕಾಣಲೇ ಇಲ್ಲ. ಇಬ್ಬರೂ ಒಲ್ಲದ್ದನ್ನು ಕಲಿಯಬೇಕೆಂಬುದನ್ನು ದಬ್ಬಾಳಿಕೆಯೆಂದೇ ಭಾವಿಸುವವರು ಮತ್ತು ಯಾವ ವಿಧದ ದಬ್ಬಾಳಿಕೆಗೂ ಸೊಪ್ಪು ಹಾಕುವವರಲ್ಲ.

ಐನ್‌ಸ್ಟೈನರು ಕೇಳಿದ ಮಹಾಪ್ರಶ್ನೆಗಳು ಮತ್ತು ಪಡೆದ ಮಹಾಉತ್ತರಗಳು ಭೌತಶಾಸ್ತ್ರ ಮತ್ತು ವಿಶ್ವಸೃಷ್ಟಿಶಾಸ್ತ್ರದ ಅನೇಕ ಮೂಲ ಕಲ್ಪನೆಗಳನ್ನೇ ಬದಲು ಮಾಡಿದುವು. ಪ್ರಾರಂಭದಲ್ಲಿ ಅವು ಬಲ್ಲವರಿಗೂ ಅತ್ಯಂತ ಅಸಂಭವವೆನ್ನಿಸುವಷ್ಟು ವಿಚಿತ್ರವಾಗಿ ಕಂಡಿದ್ದುವು. ಕಾಲವೆಂಬುದು ವಿಶ್ವದ ಚತುರ್ಥ ಆಯಾಮ, ಪ್ರಕಾಶಕ್ಕೆ ದ್ರವ್ಯರಾಶಿ ಇದೆ, ಬೆಳಕು ವಕ್ರಪಥದಲ್ಲಿ ಸಾಗುತ್ತದೆ, ದೇಶ ಬಾಗಿದೆ, ವಿಶ್ವ ಅನಂತವಲ್ಲ ಆದರೆ ಎಲ್ಲೆ ಇಲ್ಲದ್ದು, ದ್ರವ್ಯ ಮತ್ತು ಶಕ್ತಿ ಮೂಲತಃ ಒಂದೇ, ದ್ರವ್ಯನಾಶದಿಂದ ಶಕ್ತಿ ಹುಟ್ಟುತ್ತದೆ, ವೇಗವೃದ್ಧಿಯೊಡನೆ ಕಾಲ ಸಂಕುಚಿತವಾಗುತ್ತದೆ, ಇತ್ಯಾದಿಗಳು, ಅನಾದಿಯಿಂದ ಮನುಷ್ಯನಿಗೆ ಇಂದ್ರಿಯಗಳ, ಮತ್ತು ಇಂದ್ರಿಯಗಳದೇ ವಿಸ್ತರಣೆ ಗಳಾದ ಉಪಕರಣಗಳ ಮೂಲಕ ಬಂದ ಅನುಭವಕ್ಕೆ ವಿರುದ್ಧವೆಂಬಂತೆ ಕಂಡುಬಂದರೂ ಕಾಲಾಂತರದಲ್ಲಿ ಅವರ ಕಲ್ಪನೆಗಳಲ್ಲಿ ಹೆಚ್ಚಿನವು ಪ್ರತ್ಯಕ್ಷ ಮತ್ತು ಪ್ರಾಯೋಗಿಕ ಪರೀಕ್ಷಣೆಗಳಲ್ಲಿ ತೇರ್ಗಡೆ ಹೊಂದಿ, ಕೇವಲ ಬುದ್ಧಿ, ಕಾಗದ, ಪೆನ್ಸಿಲುಗಳ ಬಲದಿಂದ ಅವರು ಸೃಷ್ಟಿಸಿದ ಸಿದ್ಧಾಂತ ಸೌಧಗಳು ಎಣೆಯಿಲ್ಲದ ಆಶ್ಚರ್ಯಕ್ಕೆ ಪಕ್ಕಾಗಿವೆ. ಅವರ ಕೆಲ ಸಿದ್ಧಾಂತಗಳು ಕೇವಲ ವಿಜ್ಞಾನಿಗಳ ಬುದ್ಧಿಯನ್ನು ಕೆಣಕಿ ಹೊಸ ಹಾದಿಗಳ ಅನ್ವೇಷಣೆಗೆ ಪ್ರೇರಣೆ ಕೊಟ್ಟರೂ ಸಾಮಾನ್ಯ ಮನುಷ್ಯನಿಗೆ ತಲೆಬುಡ ಆಗದ ಕೂಟ ಪ್ರಶ್ನೆಗಳಾಗಿ ಮಾತ್ರ ಕಾಣಿಸುತ್ತಿದ್ದರೆ, ಕೆಲ ಸಿದ್ಧಾಂತಗಳು ಆಗಲೇ ಮಾನವ ಕುಲದ ಹಣೆಬರಹವನ್ನೇ ತಿದ್ದಿ ಬರೆಯುವಂಥ ಪರಿಣಾಮಗಳನ್ನು ಮಾಡಿ ಸಾಮಾನ್ಯರ ಬದುಕಿನಲ್ಲಿ ಭಾಷೆಯಲ್ಲಿ ಆಗಲೇ ತಮ್ಮ ಸತ್ತ್ವ ಪ್ರದರ್ಶಿಸಿವೆ. ಅವರ ಗುರುತ್ವಾಕರ್ಷಣ ತರಂಗ ಕಲ್ಪನೆಯಂಥವು ಇನ್ನೂ ಅಸಂದಿಗ್ಧ ಪ್ರಾಯೋಗಿಕ ಪ್ರಮಾಣಗಳನ್ನು ಎದುರು ನೋಡುತ್ತಿವೆ.

ಇಂಥ ಒಬ್ಬ ಮಹಾಮತಿಯ ವೈಜ್ಞಾನಿಕ ಸಾಧನೆಗಳೇ ಅದ್ಭುತಗಳ ಸರಪಳಿಯಂತಿದ್ದರೆ, ಅವರ ಬದುಕು, ಅವರ ವ್ಯಕ್ತಿತ್ವ ತಮ್ಮ ನಂಬಲಾರದಂಥ ಸರಳತನದಿಂದ ನಮ್ಮ ಮನಸ್ಸನ್ನು ಸೆರೆಹಿಡಿ ಯುತ್ತವೆ. ಈ ಪುಸ್ತಕದಲ್ಲಿ ಅವರ ಅಷ್ಟ ಪೈಲು ಬದುಕಿನ ಅನೇಕ ಪೈಲುಗಳ ವಿವರಗಳೇ ಸಾಮಾನ್ಯ ಓದುಗನನ್ನು ಮೆಚ್ಚಿಸುವ ಅಂಶಗಳಾಗಿವೆ. ಪ್ರಪಂಚವನ್ನೇ ಅಲುಗಿಸುವ ಸಿದ್ಧಾಂತಗಳನ್ನು ಮಂಡಿಸಿದ ಇಂಥ ವ್ಯಕ್ತಿಯ ಶುದ್ಧ ನಿರಹಂಕಾರತೆ ಕತೆಕತೆಯಾಗಿದೆ. ಅವರ ದೊಗಳೆ ಬಟ್ಟೆಗಳು, ಅವುಗಳಲ್ಲೇ ಎಂಥ ಪ್ರತಿಷ್ಠಿತರನ್ನೂ ಕಾಣಹೋಗುವ ಧೈರ್ಯ, ಕೂದಲು ಕತ್ತರಿಸಿಕೊಳ್ಳುವ ತೊಂದರೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ಅವರು 'ಸಿಂಹಕೇಶಿ'ಯಾಗಿದ್ದದ್ದು, ಪ್ರಾಥಮಿಕ ಶಾಲೆಯಲ್ಲಿ ಕಲಿಯುವ ನೆರೆಮನೆಯ ಹುಡುಗಿ ಬಂದು ಕೇಳಿದರೆ ವಿಜ್ಞಾನದ ಈ ಮಹರ್ಷಿ ಅಕ್ಕರೆ ಯಿಂದ ಅವಳಿಗೆ ಲೆಕ್ಕ ಹೇಳಿಕೊಡುವುದು, ತಮಗೆ ಪ್ರೊಫೆಸರ್ ಪದವನ್ನು ಕೊಡಮಾಡಿ ಸಂಬಳ ಎಷ್ಟು ಬೇಡುತ್ತೀರಿ ಎಂದು ಕೇಳಿದರೆ ಎಷ್ಟು ಕೇಳಬೇಕೆಂದರಿಯದ ಅಮಾಯಕತನ, ಹಸುಳೆ ಮಗನನ್ನು ಎತ್ತಿಕೊಂಡು ಆಡಿಸುತ್ತಾಡಿಸುತ್ತ ಇನ್ನೊಂದು ಕೈಯಿಂದ ವಿಜ್ಞಾನದ ಘನಗಹನ ಸಮಸ್ಯೆಗಳಿಗೆ ಪರಿಹಾರವನ್ನು ಟಿಪ್ಪಣಿ ಮಾಡುತ್ತ ಹೋಗಬಲ್ಲ 'ಅಷ್ಟಾವಧಾನ' ಸಾಮರ್ಥ್ಯ, ಗುಂಪಿನಲ್ಲಿ ಬೆರೆತು ಸರಸವಾಡುವಾಗಲೂ ಆಂತರಿಕ ಏಕಾಂಗಿತನವನ್ನು ಅನುಭವಿಸುವ

ನಿರ್ಲಿಪ್ತತೆ—ಇವೆಲ್ಲ ಐನ್‌ಸ್ಟೈನರನ್ನು ಅತ್ಯಂತ ವಾತ್ಸಲ್ಯಪಾತ್ರರನ್ನಾಗಿ ಅಜಾತಶತ್ರುವನ್ನಾಗಿ ಮಾಡಿದ್ದುವು.

ಅಜಾತಶತ್ರು ? ಹೌದು, ಅವರ ದೃಷ್ಟಿಯಲ್ಲಿ, ಅವರಿಗೆ ಯಾರನ್ನೂ ದ್ವೇಷಿಸಲಿಕ್ಕೇ ಬರುತ್ತಿರಲಿಲ್ಲ. ಅದರ ಅರ್ಥ ಅವರಿಗೆ ಶತ್ರುಗಳಿರಲಿಲ್ಲವೆಂದಲ್ಲ.

ಮಿಕಕೂ ಮೀನಿಗು ಒಳ್ಳೆಯ ಜನಕೂ
ಹುಲ್ಲೂ ನೀರೂ ತೃಪ್ತಿಯೆ ಸಾಕು :
ಆದರೆ ಬೇಡನು ಬೆಸ್ತನು ಹಿಸುಣ
ಹಗೆಗಳವರಿಗೂ ವಿನಾಕಾರಣ

ಎಂಬ ಭರ್ತೃಹರಿಯ ಮಾತು ಐನ್‌ಸ್ಟೈನರಿಗೆ ಬಹಳ ಚೆನ್ನಾಗಿ ಅನ್ವಯಿಸುತ್ತಿತ್ತು. ಜಗತ್ತಿನಲ್ಲಿ ಹೇಗೆ ಹೇಗೆ ಅವರ ಮೇಲೆ ಪ್ರೀತಿಗೌರವ ಬೆಳೆಯುತ್ತಿತ್ತೋ ಹಾಗೆ ಹಾಗೆ ಜರ್ಮನಿಯಲ್ಲಿ ಹುಟ್ಟಿ, ಜರ್ಮನ್ ಹೊರತು ಇತರ ಭಾಷೆಗಳನ್ನು ಕೊನೆವರೆಗೂ ಸರಿಯಾಗಿ ಮಾತಾಡಲಾರದಿದ್ದ ಈ ವಿಶ್ವವಿಜ್ಞಾನಿಯನ್ನು ದ್ವೇಷಿಸುತ್ತಿದ್ದವರಲ್ಲಿ ಜರ್ಮನ್ ವಿಜ್ಞಾನಿಗಳೂ—ಅವರಲ್ಲಿ ನೊಬೆಲ್ ಪಾರಿತೋಷಿಕವನ್ನು ಗೆದ್ದವರೂ ಸೇರಿದ್ದರು—ಇದ್ದರೆಂಬುದನ್ನು ನೆನೆದರೆ ಸತ್ಯಶೋಧಕರೆಂದು ಬಿರುದು ಹೊತ್ತ ವಿಜ್ಞಾನಿಗಳೂ ನರಲೋಕದ ಪಿಶುನತೆಗೆ ಹೊರತಾದವರಲ್ಲ ಎಂಬುದು ಕೆನ್ನೆಗೆ ಹೊಡೆದಂತೆ ಪ್ರತೀತಿಗೆ ಬರುತ್ತದೆ. ಐನ್‌ಸ್ಟೈನರ ತಪ್ಪೆಂದರೆ ಅವರು ಯೂರೊಪಿನ 'ಹೊಲೆಯ'ರಾದ ಯೆಹೂದ್ಯರ ಜಾತಿಯಲ್ಲಿ ಹುಟ್ಟಿದ್ದು.

ಜರ್ಮನಿಯಲ್ಲಿ ಐನ್‌ಸ್ಟೈನರಿಗೊದಗಿದ ಅವಸ್ಥೆಯ ಕಥೆ ವಿಚಿತ್ರ ಮಾರ್ಗವನ್ನು ಅನುಸರಿಸಿತು. ಹಿಂಸೆ, ಯುದ್ಧ ಎಂಬುದನ್ನು ಸಹಿಸಲಾರದ ಈ ಶಾಂತಿಪಕ್ಷಪಾತಿ ಮೊದಲನೇ ಮಹಾಯುದ್ಧ ನಡೆಯುತ್ತಿದ್ದಾಗಲೇ ಯುದ್ಧದ ಸೈನಿಕ ಮನೋವೃತ್ತಿಯ ಬಗ್ಗೆ ತಮಗಿರುವ ವಿರೋಧವನ್ನು ಬಹಿರಂಗವಾಗಿಯೇ ಪ್ರಕಟಪಡಿಸಿದ್ದರೂ ಚಕ್ರವರ್ತಿ ಕೈಸರನ ಯುದ್ಧೋತ್ಸಾಹಿ ಸರಕಾರ ಅವರ ಗೊಡವೆಗೆ ಹೋಗದೆ ಅವರ ವೈಜ್ಞಾನಿಕ ಕೆಲಸವನ್ನು ನಿರಾತಂಕವಾಗಿ ನಡೆಸಲು ಬಿಟ್ಟಿತ್ತಾದರೆ, ಯುದ್ಧೋತ್ತರ ಜರ್ಮನಿಯಲ್ಲಿ ತಲೆಯೆತ್ತಿದ 'ಪ್ರಜಾತಂತ್ರ'ದಲ್ಲಿ ಅವರ ಮೇಲೆ ದ್ವೇಷಸಾಧನೆ ಪ್ರಾರಂಭವಾಗಿದ್ದು ಸೋಜಿಗವಾಗಿ ಕಂಡರೂ ಅದು ಬರೇ ವಿರೋಧಾಭಾಸ ಮಾತ್ರ. ಪರಂಪರಾಗತವಾಗಿ ಅಧಿಕಾರ ನಡೆಸುವ ಗುಂಪಿಗಿಂತಲೂ 'ಜನಪ್ರಿಯ' ಮಾರ್ಗಗಳಿಂದ ಹೊಸದಾಗಿ ಅಧಿಕಾರಕ್ಕೆ ಬರುವವರಲ್ಲಿ ಮಿತಾಮಿತ ನ್ಯಾಯಾನ್ಯಾಯ ಸತ್ಯಾಸತ್ಯ ವಿವೇಕ ಕಡಿಮೆಯಿರುತ್ತದೆಂದೂ ಅವರು ಜನಜಂಗುಳಿಯ ಅವಿಚಾರಿತ ರಾಗದ್ವೇಷಗಳ ಮಿತಿಮೀರಿ ಉಬ್ಬಿಸಿದ ಆವೃತ್ತಿಗಳಾಗಿರುತ್ತಾರೆಂದೂ ಇತಿಹಾಸದ ಸಾಮಾನ್ಯ ಅನುಭವ ಹೇಳುತ್ತದೆ. ತಾನೇ ಬಲಿಯಾಗಿ ಸೋತ ಜರ್ಮನಿಯಲ್ಲಿ ತಲೆಯೆತ್ತಿದ ಹೊಸ ನಾಯಕರು, ಜನಜಂಗುಳಿಯಲ್ಲಿ ಶತಮಾನಗಳಿಂದ ತಿರಸ್ಕಾರಪಾತ್ರರಾಗಿದ್ದ ಯೆಹೂದ್ಯರ ಮೇಲಿನ ದ್ವೇಷಕ್ಕೆ ಉರುವಲು ಒಟ್ಟಿ ಅದರ ಬಲದಿಂದ ಅಧಿಕಾರಕ್ಕೆ ಯಶಸ್ವಿಯಾಗಿ ಲಗ್ಗೆ ಹಾಕಿದರು. ಯೆಹೂದ್ಯರ ದ್ವೇಷ ಅವರ ಸರಕಾರದ ಅಧಿಕೃತ ರಾಜನೀತಿಯೇ ಆಯಿತು. ಯೆಹೂದ್ಯರಾದ—ಸಾಲದ್ದಕ್ಕೆ ಯುದ್ಧವಿರೋಧಿಯೂ ಅಂತಾರಾಷ್ಟ್ರೀಯವಾದಿಯೂ ಆಗಿ ಇಮ್ಮಡಿ 'ಅಪರಾಧ'ವೆಸಗಿದ—ಐನ್‌ಸ್ಟೈನರ ಜೀವನ ಜರ್ಮನಿಯಲ್ಲಿ ಅಸಹನೀಯವಾಯಿತು. ಯೆಹೂದ್ಯರಿಗೆ ಸಂಬಂಧಪಟ್ಟದ್ದೆಲ್ಲ ವರ್ಜ್ಯವಾದದ್ದರೊಟ್ಟಿಗೆ ಯೆಹೂದ್ಯವಿಜ್ಞಾನವನ್ನೂ ಬಹಿಷ್ಕರಿಸುವ ವಿಪರೀತ ವೃತ್ತಿಯಲ್ಲಿ ಹೆಸರಾಂತ ಜರ್ಮನ್ ವಿಜ್ಞಾನಿಗಳಲ್ಲಿ ಬಹುಸಂಖ್ಯಾಕರು ಪಾಲುಗೊಂಡು ತಮ್ಮ 'ದೇಶಭಕ್ತಿ'ಯನ್ನು ಪ್ರದರ್ಶಿಸಿದ್ದನ್ನು ನೋಡಿ

ದರೆ ಪ್ಲೇಟೋ ಹೇಳುವ ಪಂಡಿತರ ಆಳಿಕೆಯ ಸಾಧುತ್ವದ ಬಗ್ಗೆಯೇ ಗಂಭೀರ ಸಂದೇಹ ಹುಟ್ಟುತ್ತದೆ. ಈ ದಿವ್ಯದ ಕಾಲದಲ್ಲಿ ಅವರ ಬೆಂಬಲಕ್ಕೆ ನಿಂತ ಧೀರ ವಿಜ್ಞಾನಿಗಳ ಸಂಖ್ಯೆ ಕೈ ಬೆರಳುಗಳಲ್ಲಿ ಎಣಿಸುವಷ್ಟೇ ಇತ್ತೆಂಬುದು ಗಮನಾರ್ಹ. 'ದೇಶಭಕ್ತ' ವಿಜ್ಞಾನಿಗಳು ಎಷ್ಟು ಅವಿವೇಕಿಗಳಾದರೆಂದರೆ, ಐನ್‌ಸ್ಟೈನ್ ಯೆಹೂದ್ಯರಾಗಿದ್ದುದರಿಂದ ಅವರ ಸಾಪೇಕ್ಷತಾಸಿದ್ಧಾಂತವೂ ಅಸ್ಪೃಶ್ಯ ಮತ್ತು ಸುಳ್ಳೆಂಬ ನಿಲುಮೆಯನ್ನು ತಾಳಿ, ಅದು ಪ್ರಾಯೋಗಿಕವಾಗಿ ಪ್ರಮಾಣಿತವಾದ ಮೇಲೂ ಅದನ್ನು ಅಸತ್ಯವೆಂದು ಸಾಧಿಸಲು ತಮ್ಮ ವೇಳೆ ಮತ್ತು ಬುದ್ಧಿಶಕ್ತಿಯನ್ನು ವೆಚ್ಚಮಾಡಿದರು. ಐನ್‌ಸ್ಟೈನರು ಜರ್ಮನ್ ಪೌರತ್ವವನ್ನು ಕೇಳಿ ಪಡೆದು ಜರ್ಮನ್ನರೊಡನೆ ತಮ್ಮ ಸಮಹಿತವನ್ನು ತೋರಿಸಿದ್ದರೂ ಅದು ಅವರನ್ನು ಮತ್ಸರಿಗಳಿಂದ ಕಾಪಾಡಲಿಲ್ಲ. ಅವರನ್ನು ಕೆಲಕಾಲ ಕಾಪಾಡಿದ್ದು ಅವರ ಕೀರ್ತಿ ಮತ್ತು ಸ್ವಿಸ್ ಪೌರತ್ವ. ಆದರೆ ಒಂದೇ ಸಮನೆ ಯೆಹೂದ್ಯರ ವಿರುದ್ಧ ಪ್ರಚಾರಸತ್ರ ನಡೆಯುತ್ತಿರುವಾಗ ತಾವು ಮನಃಸ್ತಿಮಿತದಿಂದ ತಮ್ಮ ವಿಜ್ಞಾನಕಾರ್ಯವನ್ನು ನಡೆಸುವುದು ಅಶಕ್ಯವೆಂದೆನಿಸಿ ಅವರು ದೇಶತ್ಯಾಗ ಮಾಡಿದರು. ಈ ನಿರ್ಣಯ ಕೈಕೊಳ್ಳುವುದಕ್ಕೆ ಇನ್ನು ತುಸು ತಡ ಮಾಡಿದ್ದರೆ ಕಾಲ ಮಿಂಚಿ ಹೋಗಬಹುದಿತ್ತು. ಅವರು ಈ ನಿರ್ಣಯ ಮಾಡಿದ್ದರೋ ಇಲ್ಲವೋ ಎನ್ನುವಷ್ಟರಲ್ಲಿ ಜರ್ಮನಿಯಲ್ಲಿದ್ದ ಅವರ ಆಶ್ರಮ ನಾಟ್ಸಿಗಳ ದಾಳಿಗೆ ತುತ್ತಾಗಿ ಹೋಯಿತು. ಕೊನೆಯಲ್ಲಿ ಐನ್‌ಸ್ಟೈನರು ಅಮೆರಿಕದಲ್ಲಿ ವಸತಿ ಹೂಡಿ ಅಲ್ಲಿಯ ಗೌರವಾನ್ವಿತ ವಿಜ್ಞಾನಿಗಳಾದರು. ಅನೇಕ ವರ್ಷಗಳ ಅನಂತರ ಸಿಂಹಾವಲೋಕನ ಮಾಡುವಾಗ ಆದದ್ದೆಲ್ಲ ಒಳಿತೇ ಆಯಿತೆಂದು ತೋರುತ್ತದೆ. ಐನ್‌ಸ್ಟೈನ್ ಸಿದ್ಧಾಂತಗಳ ಬಗ್ಗೆ ಜರ್ಮನ್ ವಿಜ್ಞಾನಿಗಳೂ ಅಧಿಕಾರಿಗಳೂ ಬೆಳೆಸಿಕೊಂಡ ವಿರೋಧವಲ್ಲದಿದ್ದರೆ ಅವರ ಪ್ರಸಿದ್ಧ $E = mc^2$ ಎಂಬ ದ್ರವ್ಯ-ಶಕ್ತಿ ಸಮೀಕರಣದ ಪ್ರಾಯೋಗಿಕ ಅನ್ವಯದಿಂದ ಉದ್ಭವಿಸಿದ ಪರಮಾಣು ಬಾಂಬನ್ನು ಅಮೆರಿಕಕ್ಕಿಂತ ಮೊದಲು ನಿರ್ಮಿಸಲು ಜರ್ಮನ್ನರು ಯತ್ನಿಸಬಹುದಾಗಿತ್ತೆಂದು ತೋರುತ್ತದೆ. ಒಂದು ವೇಳೆ ಹಾಗಾಗಿದ್ದಿದ್ದರೆ ಜಗತ್ತಿನಲ್ಲಿ ನಾರ್ಡಿಕ್ ರಕ್ತದ್ದಲ್ಲದ ಜನಾಂಗಗಳಲ್ಲಿ ಹುಟ್ಟಿದವರ ಗತಿ ಏನಾಗುತ್ತಿತ್ತೋ ದೇವರೇ ಬಲ್ಲ.

ಇಲ್ಲಿ ನಾವು ಐನ್‌ಸ್ಟೈನ್ ಜೀವನದ ಎರಡು ಮಹಾ ದುರಂತಗಳ ಸಂಧಿಗೆ ಬರುತ್ತೇವೆ. ಮೊದಲನೆಯದೆಂದರೆ ಪರಮಾಣುಬಾಂಬಿನ ನಿರ್ಮಾಣ. ಅದಕ್ಕೆ ಆಧಾರವಾದದ್ದು ಅವರ ದ್ರವ್ಯ-ಶಕ್ತಿ ಸಮೀಕರಣ. ಅಲ್ಲದೆ, ಪರಮಾಣುಭೇದನದಿಂದ ಅಪಾರ ಶಕ್ತಿಯನ್ನು ಬಿಡುಗಡೆ ಮಾಡುವುದು ವ್ಯವಹಾರಸಾಧ್ಯ ಎಂದು ಪ್ರಯೋಗಶಾಲೆಯಲ್ಲಿ ಸಿದ್ಧವಾದ ಸುದ್ದಿ ತಿಳಿದೊಡನೆ ಅದನ್ನು ಉಪಯೋಗಿಸಿ ಜರ್ಮನಿ ಪರಮಾಣುಬಾಂಬನ್ನು ನಿರ್ಮಿಸಿ ಮಾನವಕುಲವನ್ನೇ ಪಾದಾಕ್ರಾಂತ ಮಾಡಿಕೊಳ್ಳಬಹುದೆಂದು ನಡುಗಿದ ಪರಮಾಣುವಿಜ್ಞಾನಿಗಳು, ಅದಕ್ಕೆ ಮೊದಲೇ ಆ ಆಯುಧವನ್ನು ಅಮೆರಿಕ ತಯಾರಿಸಬೇಕೆಂದು ಭಾವಿಸಿದರು. ಇದಕ್ಕೆ ಅಮೆರಿಕನ್ ಸರಕಾರವನ್ನು ಪ್ರಚೋದಿಸಿದ ಪತ್ರಕ್ಕೆ ಐನ್‌ಸ್ಟೈನರು ತಮ್ಮ ಮಿತ್ರರ ಸಲಹೆಯಂತೆ ಅಂಕಿತವಿಕ್ಕಿದರು. ಈ ಪತ್ರದ ಫಲವಾಗಿ ಪರಮಾಣುಬಾಂಬು ಸಿದ್ಧವಾದದ್ದೂ ಅದು ಮಾಡಿದ ಅಪಾರ ನಾಶ ಮತ್ತು ಅದರಿಂದಾಗಿ ಉದ್ಭವಿಸಿದ ಜಾಗತಿಕ ಪರಮಾಣು ಅಸ್ತ್ರ ಸ್ಪರ್ಧೆಯೂ ಐನ್‌ಸ್ಟೈನರ ಶಾಂತಿವಾದಿ ಆತ್ಮಕ್ಕೆ ಶಾಶ್ವತವಾದ ಪಶ್ಚಾತ್ತಾಪ ಶಲ್ಯವಾಗಿ ಬಿಟ್ಟಿತು.

ಎರಡನೇ ದುರಂತ ಇಸ್ರೇಲ್ ರಾಷ್ಟ್ರದ ನಿರ್ಮಾಣಕ್ಕೆ ಸಂಬಂಧಿಸಿದ್ದು. ಶತಮಾನಗಳಿಂದ ಯೂರೋಪಿನ ಯೆಹೂದ್ಯರ ಮೇಲಾಗುತ್ತಿದ್ದ ದಬ್ಬಾಳಿಕೆಯ ಚರಿತ್ರೆಯನ್ನರಿತ ಐನ್‌ಸ್ಟೈನರು ಯೆಹೂದ್ಯರಿಗಾಗಿ ಅವರ ಪುರಾತನ ತಾಯ್ನಾಡಾದ ಪ್ಯಾಲೆಸ್ಟೈನಿನಲ್ಲಿ ಒಂದು 'ತಾಯ್ನಾಡ'ನ್ನು

ನಿರ್ಮಿಸುವ ಪ್ರಯತ್ನಗಳಿಗೆ ತಮ್ಮ ಹೆಸರಿನ ಮತ್ತು ಸ್ವಲ್ಪ ಮಟ್ಟಿಗೆ ಕ್ರಿಯಾತ್ಮಕ ಬೆಂಬಲವಿತ್ತರು. ಈ ಪ್ರಯತ್ನದಲ್ಲಿ ಪ್ಯಾಲೆಸ್ಟೈನಿನ ಪ್ರಸ್ತುತ ನಿವಾಸಿಗಳಾದ ಅರಬರ ಮೇಲೆ ಹಿಂಸೆಯಾಗಬಾರದು, ಅವರ ಸ್ನೇಹದಿಂದಲೇ ಇದಾಗಬೇಕು ಎಂದು ಐನ್‌ಸ್ಟೈನರು ತಮ್ಮ ವ್ಯವಹಾರ ಅರಿಯದ ಸರಳತನದಲ್ಲಿ ಆಶಿಸಿದ್ದರು, ಉಪದೇಶಿಸಿದ್ದರು. ಆದರೆ 'ತಾಯ್ನಾಡಿನ' ಆಪಾತಮಧುರವಾದ ಕಲ್ಪನೆಯು ವ್ಯವಹಾರದಲ್ಲಿ 'ಯೆಹೂದ್ಯ ರಾಷ್ಟ್ರದ' ಕಲ್ಪನೆಯಾಗಿ ಮಾರ್ಪಟ್ಟು, ರಕ್ತಸ್ನಾನದ ನಡುವೆ ಇಸ್ರೇಲ್ ಜನ್ಮತಾಳಿ ಅದರಿಂದ ಮುಖ್ಯವಾಗಿ ಅರಬ್ ಮತ್ತು ಆನುಷಂಗಿಕವಾಗಿ ಇಡೀ ಇಸ್ಲಾಮಿ ಜಗತ್ತಿನಲ್ಲಿ ಎದ್ದ ಅಳಿಸಲಾರದ ವಿದ್ವೇಷ ಜಗತ್ತನ್ನು ಇನ್ನೊಂದು ಮಹಾಯುದ್ಧದ ಪ್ರಪಾತದ ದಂಡೆಗೆ ಒಯ್ದು ನಿಲ್ಲಿಸಿದೆ. ಶಾಂತಿಯನ್ನು, ಅಹಿಂಸೆಯನ್ನು ಬದುಕಿನ ಆದರ್ಶವನ್ನಾಗಿ ಮಾಡಿಕೊಂಡಿದ್ದ ಐನ್‌ಸ್ಟೈನರ ಸದುದ್ದೇಶಕ್ಕೆ ಇದು ವಿಪರೀತವಾಗಿದೆ.

ಇತಿಹಾಸದ ಎಲ್ಲ ಸದುದ್ದೇಶಿ ಮಹಾಪುರುಷರಿಗೂ ಆದ ಅವಸ್ಥೆಯೇ ಇದು. ತಮ್ಮ ಸರಳ ಹೃದಯವನ್ನೇ ನರಕುಲಕ್ಕೂ ಆರೋಪಿಸಿ ಅವರು ಪ್ರವೃತ್ತರಾಗುತ್ತಾರೆ. ಆಮೇಲೆ ಇಡೀ ಕಲ್ಪನೆಯನ್ನು ನರಮನುಷ್ಯನ ನಾರಾಶಂಸಿ[ವೀರಪುಂಗವನ ಪ್ರಶಂಸೆ] ದತ್ತು ತೆಗೆದುಕೊಂಡುಬಿಡುತ್ತದೆ. ಇದಕ್ಕೆ ಮದ್ದಿಲ್ಲವೆಂದೇ ತೋರುತ್ತದೆ.

ಐನ್‌ಸ್ಟೈನರ ತಾತ್ತ್ವಿಕ ಅಭಿಪ್ರಾಯಗಳು ಏನಿದ್ದುವು ? ಅವರು ದೇವರನ್ನು ನಂಬುತ್ತಿದ್ದರೇ? ಇಂದಿನ ಅನೇಕ ವಿಜ್ಞಾನಿಗಳಂತೆ ಅವರು ಮನುಷ್ಯನ ಸುಖದುಃಖಗಳಲ್ಲಿ ಶಿಕ್ಷೆರಕ್ಷೆಗಳಲ್ಲಿ ಆಸಕ್ತಿ ವಹಿಸುವ, ಭಕ್ತಾಭೀಷ್ಟಪ್ರದನಾದ, ವ್ಯಕ್ತಿರೂಪಿ ದೇವರು ಇದ್ದಾನೆಂದು ನಂಬುತ್ತಿರಲಿಲ್ಲ. ಆದರೂ ಅವರು ದೇವರ ಮಾತುಗಳನ್ನು ಪದೇಪದೇ ಆಡುತ್ತಿದ್ದರು. ಈ ದೇವರು ಪ್ರಸಿದ್ಧ ಯೆಹೂದ್ಯ ತತ್ತ್ವಜ್ಞಾನಿ ಮತ್ತು ನೀತಿವಾದಿಯಾದ ಸ್ಪಿನೋಝನ ದೇವರು. ಆತ ವಿಶ್ವನಿಯಾಮಕ ಶಕ್ತಿ. ಈ ಶಕ್ತಿಯ ಗುಣದ ವಿಷಯದಲ್ಲಿ ಐನ್‌ಸ್ಟೈನರು ಸಮಕಾಲೀನ ಭೌತಶಾಸ್ತ್ರಿಗಳೊಡನೆ ತೀವ್ರ ಅಸಹಮತರಾಗಿದ್ದರು. ಪರಮಾಣುವಿಗಿಂತ ಸೂಕ್ಷ್ಮವಾದ ಕಣಗಳ ಅನೂಹ್ಯವರ್ತನೆ ಮೊದಲಾದ ತಥ್ಯಗಳು ಬೆಳಕಿಗೆ ಬಂದಂತೆ ವಿಶ್ವವು ಖಚಿತವಾದ ನಿಯಮಗಳಿಂದ ನಿಯಂತ್ರಿಸಲ್ಪಟ್ಟಿಲ್ಲ ಎಂದು ಅಧಿಕಾಂಶ ವಿಜ್ಞಾನಿಗಳು ದೃಢವಾದ ತೀರ್ಮಾನಕ್ಕೆ ಬಂದಿದ್ದರು. ಆದರೆ ಇವೆಲ್ಲ ಪ್ರಮಾಣಗಳನ್ನು ಧಿಕ್ಕರಿಸಿ ಐನ್‌ಸ್ಟೈನರು ಮಾತ್ರ "ಪರಮಾತ್ಮ ದಾಳ ಒಗೆಯುವುದಿಲ್ಲ" (ಅಂದರೆ ಮನಬಂದಂತೆ ವರ್ತಿಸುವುದಿಲ್ಲ) ಎಂದೇ ನಂಬಿದ್ದರು. ಈ ವಿಷಯದಲ್ಲಿ ಇತರ ಶ್ರೇಷ್ಠ ಭೌತವಿಜ್ಞಾನಿಗಳೊಡನೆ ಅವರಿಗೆ ಗಂಟೆಗಟ್ಟಳೆ ವಾಗ್ಯುದ್ಧವಾಗುತ್ತಿತ್ತು. ಅವರ ಪಾಲಿಗೆ ಅದು ಕಡೆಕಡೆಗೆ ಸೋಲಿನ ಯುದ್ಧವೇ ಆಗಿರುತ್ತಿತ್ತು : ಪ್ರಮಾಣಗಳು ಅವರ ಪಕ್ಷದಲ್ಲಿ ಇರಲಿಲ್ಲ. ಆದರೆ ನೀಟಾದ ಅವರ ಮನಸ್ಸು ಅಂಕೆಯಿಲ್ಲದ ವೃಷಾಕಪಿಯನ್ನು (ವಿಷ್ಣು ಸಹಸ್ರನಾಮದಲ್ಲಿ ಬರುವ ದೇವರ ಒಂದು ಹೆಸರು ಇದು) ವಿಶ್ವದ ಹೆಗಲ ಮೇಲೆ ಇರಿಸಲು ಸುತಾರಾಂ ಒಪ್ಪುತ್ತಿರಲಿಲ್ಲ. ಆದ್ದರಿಂದಲೇ ಅವರು ಕೊನೆಯವರೆಗೂ ವಿಶ್ವದ ಸಮಸ್ತ ವ್ಯಾಪಾರವನ್ನು ಒಂದು ಮಹಾ ನಿಯಮಕ್ಕೆ ಒಳಪಡಿಸುವ ಸಿದ್ಧಾಂತದ ಅನ್ವೇಷಣೆಯಲ್ಲಿ ತನ್ಮಯರಾಗಿದ್ದರು. ಒಂದು ಮಾತಿನಲ್ಲಿ, ಅವರು 'ಋತ'ರೂಪಿ ಪರಮ ಸತ್ಯದ ಆರಾಧಕರಾಗಿದ್ದರು—ಅವರ ದೇವರು "ಋತಂ ಸತ್ಯಂ ಪರಂ ಬ್ರಹ್ಮ" ಎಂದು ಹೇಳಿದರೂ ಸೈ. ಈ ಅಕ್ಷುಣ್ಣ ನಿಯಮರೂಪಿಯಾದ ದೇವರನ್ನು ನಂಬುವವರಿಗೆ ಅಗಾಧ ಎದೆಗಾರಿಕೆ ಬೇಕು ; ವಿಶ್ವನಿಯಮದ ತಡೆಯಿಲ್ಲದ ನಡೆಗೆ ತಲೆವಾಗಿ ತಮ್ಮ ಪಾಲಿಗೆ ಬಂದ ಪಂಚಾಮೃತವನ್ನು ನಿರ್ಲಿಪ್ತಿಯಿಂದ ಸ್ವೀಕರಿಸುವ ಐನ್‌ಸ್ಟೈನರ ಸಮರ್ಪಣಭಾವ ಯಾವೊಬ್ಬ ನಿಜವಾದ ದೈವಭಕ್ತನದಕ್ಕಿಂತ ಕಡಿಮೆಯಾಗಿರಲಿಲ್ಲ. ತಮಗೆ ಬಂದ ಮಿತ್ರ

ವಿಯೋಗ, ಪತ್ನೀವಿಯೋಗ, ದೇಶನಿರ್ವಾಸನ, ಮತ್ತು ಕೊನೆಯಲ್ಲಿ ಬಂದ ದಾರುಣ ವೇದನೆ ವ್ಯಾಧಿ ಎಲ್ಲವನ್ನೂ ದಾರ್ಶನಿಕನಂತೆ ಸಹಿಸುತ್ತ, ಇತರರಿಗೆ ಒಂದಿಷ್ಟೂ ನೋವು, ನೆಮ್ಮದಿಗೇಡು ಉಂಟುಮಾಡದೆ ಬದುಕಿದ, ಮತ್ತು ಮರಣವನ್ನೆದುರಿಸಿದ ಅವರ ಸ್ಥೈರ್ಯಕ್ಕೆ ನಮ್ಮ ಮನಸ್ಸು ಶರಣು ಶರಣೆನ್ನುತ್ತದೆ. ಗಾಂಧೀಜಿಯನ್ನು ಕುರಿತು ಒಮ್ಮೆ ಐನ್‌ಸ್ಟೈನರೇ ಹೇಳಿದ ಮಾತು ಸ್ವತಃ ಅವರಿಗೂ ಅನ್ವಯಿಸುತ್ತದೆ : "ಇಂಥ ಮನುಷ್ಯನೊಬ್ಬ ಈ ಪೃಥ್ವಿಯಲ್ಲಿ ಆಗಿಹೋದನೆಂದು ನಂಬುವುದು ಕಷ್ಟವಾದೀತು."

ನಾರಾಯಣರಾಯರ ಪುಸ್ತಕವನ್ನೋದಿ ಕೆಳಗಿಟ್ಟೊಡನೆ ನನ್ನ ಮನಸ್ಸಿನಲ್ಲಿ ಎಲ್ಲಕ್ಕೂ ಮೇಲೆ ತೇಲುತ್ತ ಉಳಿದ ಭಾವಗಳನ್ನು ಇಲ್ಲಿ ರೇಖಿಸಿದ್ದೇನೆ. ಪುಸ್ತಕ ಓದಿ ನಾನು ಸಂತೋಷಿಸಿದ್ದೇನೆ. ಐನ್‌ಸ್ಟೈನರ ವಿಜ್ಞಾನ ಸಿದ್ಧಾಂತಗಳನ್ನು ವಿವೇಚಿಸುವಲ್ಲಿ ಸಾಮಾನ್ಯ ಓದುಗನಿಗೆ ಕೆಲವೆಡೆ ಜಟಿಲ ವೆಂದು ಅನಿಸಬಹುದು. ಜಿಟಿಯವರು ಖಚಿತತೆಗೆ ಕೊಡುವ ಪ್ರಾಧಾನ್ಯ ಇದಕ್ಕೆ ಒಂದು ಕಾರಣ ವಾಗಿದೆ. ಆದರೆ ಐನ್‌ಸ್ಟೈನರನ್ನು ಅವರು ಬಾಳಿದ ಬಗೆಬಗೆಯ ಪರಿಸರದಲ್ಲಿ ನಿಲ್ಲಿಸಿ ಕಣ್ಣಿಗೆ ಕಟ್ಟುವಂತೆ ಅವರು ಚಿತ್ರಿಸಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಇದು ಐನ್‌ಸ್ಟೈನರ ಜನ್ಮಶತಾಬ್ದಿಗೆ ಉತ್ತಮ ಕೊಡುಗೆಯಾಗಿದೆ.

**ಪಾ. ವೆಂ. ಆಚಾರ್ಯ**

೭ ಜನವರಿ ೧೯೮೦
ಹುಬ್ಬಳ್ಳಿ

## ಪಾವೆಂರಿಗೆ ನಮನ

ಚಿಂತನೆಯ ಕಡಲಿನೊಳಗುಲ್ಲಾಸ ನಾವೆಯಲಿ
ಸಂತತ ಮಹಾಯಾನ ಗೈದಿರುವ ಧೀಶಕ್ತಿ
ಅಂತವಿಲ್ಲದ ಸಂತಸವ ಧಾರೆಯೆರೆದ ಪ್ರ-
ಶಾಂತಮತಿ ನಿನಗಿದೊ ಚಿರನಮನ ಅತ್ರಿಸೂನು

ಪಾವೆಂ ಪೆಸರ್ ಕೇಳಿ ಬಲ್ಲೆಯೇಂ ? ಪರಿಶುದ್ಧ
ಜೀವಕ್ಕೆ ತಾಣವನ್, ಕರ್ತವ್ಯ ಹನುಮಂತ
ಸೇವಾ ಪರಾಯಣಂ, ಪರಗುಣ ಪ್ರೋತ್ಸಾಹಿ
ಭಾವಪ್ರಪಂಚದಾ ಮಾಂತ್ರಿಕನು ಅತ್ರಿಸೂನು

---

ಶ್ರೀಯುತ ಪಾ. ವೆಂ. ಆಚಾರ್ಯರು ೧೯೯೧ರಲ್ಲಿ ಅಮರರಾದರು.

# ನನ್ನ ನುಡಿ

"ವಿಜ್ಞಾನರಂಗದಲ್ಲಿ ತಮ್ಮ ಹೆಸರುಗಳನ್ನು ಶಾಶ್ವತಗೊಳಿಸಿರುವ ಈ ಯುಗದ ಇತರ ಮಹಾವಿಜ್ಞಾನಿಗಳ ಕೊಡುಗೆಗಳನ್ನು ಎಳ್ಳಷ್ಟೂ ಕಡೆಗಣಿಸದೆ ಬೇರೆ ಯಾರನ್ನು ಕುರಿತೂ ಹೇಳಲಾಗದ ಒಂದು ಮಾತನ್ನು ಐನ್‌ಸ್ಟೈನರ ವಿಚಾರವಾಗಿ ಧೈರ್ಯದಿಂದ ಹೇಳಬಹುದು. ಇವರ ಮಾನಸಿಕ ಸಂರಚನೆಯಲ್ಲಿದ್ದ ಏನೋ ಒಂದು ವಿಶೇಷತೆ ಇವರ ವ್ಯಕ್ತಿತ್ವಕ್ಕೆ ಎಣೆ ಇಲ್ಲದ ಮೆರುಗು ಪೂಸಿತ್ತು. ಅಳಿಸಲಾಗದ ಶಾಯಿಯಿಂದ ಇವರು ತಮ್ಮ ಹೆಸರನ್ನು ವಿಜ್ಞಾನೇತಿಹಾಸದ ಪುಟಗಳಲ್ಲಿ ದಾಖಲಿಸಿದ್ದಾರೆ. ಪ್ರಪಂಚದಲ್ಲಿ ಮಾನವ ಉಳಿದಿರುವ ತನಕವೂ ಈ ದಾಖಲೆ ಮಸಕಾಗದು. ಅಲುಗಿಸಲಾಗದಂಥ ವಿಶಿಷ್ಟಸಿದ್ಧಿ ಇವರ ಆವಿಷ್ಕಾರಗಳಲ್ಲಿ ಕಂಡುಬರುತ್ತದೆ. ಸಿದ್ಧಾಂತಗಳು ಆಗಮಿಸುತ್ತವೆ, ಸಿದ್ಧಾಂತಗಳು ನಿರ್ಗಮಿಸುತ್ತವೆ. ಐನ್‌ಸ್ಟೈನ್ ಆದರೋ ಸಿದ್ಧಾಂತಗಳನ್ನು ರೂಪಿಸುವುದಕ್ಕಿಂತ ಹೆಚ್ಚಿನದನ್ನು ಸಾಧಿಸಿದರು. ಇವರು ವಿಶ್ವದ ಮೌನಸ್ವನಗಳನ್ನು ಪರಮಶ್ರದ್ಧೆಯಿಂದ ಆಲಿಸಿ ಅವು ಬಿತ್ತರಿಸುವ ಸಂದೇಶವನ್ನು ಅಚ್ಚಳಿಯದ ಖಚಿತತೆಯಿಂದ ಬರೆದಿಟ್ಟರು. ಭೌತಸನ್ನಿವೇಶವೊಂದನ್ನು ಆವರಿಸಿರುವ ವಿವರಗಳಿಂದ ಇನಿತೂ ವಿಚಲಿತರಾಗದೆ ಅದರ ತಳದಲ್ಲಿ ಹುದುಗಿರುವ ತತ್ತ್ವವನ್ನು ಪತ್ತೆಹಚ್ಚಿ ಸಮಸ್ಯೆಯ ತಿರುಳಿಗೇ ನೇರ ಹುಗಬಲ್ಲ ಇವರ ಚಿಂತನೆಯ ಧಾಟಿ ಬೆರಗುಗೊಳಿಸುವಂತಿತ್ತು. ಇವರೆಂದೂ ಮೇಲುನೋಟದಿಂದ ಮೋಸ ಹೋಗುತ್ತಿರಲಿಲ್ಲ. ಹೀಗಾಗಿ ಇವರ ತೀರ್ಮಾನಗಳು ನಿರಾಕರಿಸಲಾಗದ ಪರಿಪೂರ್ಣತೆಯಿಂದ ಕೂಡಿರುವಂಥವು ಎಂಬುದಾಗಿ ಅಂಗೀಕೃತವಾಗಿವೆ.[೧]"

"[ತಂದೆಯವರನ್ನು ಕುರಿತಂತೆ] ನನ್ನ ಮೊದಲ ನೆನಪಿದು. ಆಗ ನನಗೆ ಸುಮಾರು ಮೂರು, ಪ್ರಾಯಶಃ ನಾಲ್ಕು, ವರ್ಷ ವಯಸ್ಸು ಆಗಿದ್ದಿರಬಹುದು. ಅವರು ಬೆಂಕಿಪೆಟ್ಟಿಗೆಗಳಿಂದ ನನಗೊಂದು ಕೇಬಲ್ ಕಾರ್ ತಯಾರಿಸಿಕೊಟ್ಟಿದ್ದರು. ಆ ದಿನಗಳಲ್ಲಿ ನನ್ನ ಬಳಿ ಇದ್ದ ಆಟಿಗೆಗಳ ಪೈಕಿ ಅದೊಂದು ಉತ್ಕೃಷ್ಟವಾದುದಾಗಿತ್ತೆಂದು ನನ್ನ ನಂಬಿಕೆ. ಆ ಕಾರ್ ಓಡುತ್ತಿತ್ತು ! ಒಂದಿಷ್ಟು ದಾರ, ಹಲಕೆಲವು ಬೆಂಕಿಪೆಟ್ಟಿಗೆಗಳು ಮತ್ತು ಇತರ ಕೆಲವು ತುಣುಕುಗಳನ್ನು ಕಲೆಹಾಕಿ ಅತ್ಯಂತ ಸುಂದರ ವಸ್ತುಗಳನ್ನು ಅವರು ನಿರ್ಮಿಸಬಲ್ಲವರಾಗಿದ್ದರು. ನಿಜಕ್ಕೂ ಈ ತೆರನಾಗಿ ವಸ್ತುಗಳನ್ನು ರೂಪಿಸುವುದು ಅವರಿಗೆ ಪ್ರಿಯವಾದ ಹವ್ಯಾಸವಾಗಿತ್ತು. ಹಾಗೆ ಹೇಳುವುದಾದರೆ ತಮ್ಮ ಕೃತಿಗಳಲ್ಲಿ ಕೂಡ ಅವರು ಇದೇ ಮನೋಧರ್ಮವನ್ನು ಪ್ರದರ್ಶಿಸುತ್ತಿದ್ದರು. ಉದಾಹರಣೆಗೆ, ಭಾಷಣ ಮಾಡಬೇಕಾಗಿ ಬಂದಾಗ ನಿಷ್ಕೃಷ್ಟವಾಗಿ ತಾವೇನು ಹೇಳಬೇಕೆಂಬುದರ ಬಗ್ಗೆ ಪೂರ್ವಭಾವಿಯಾಗಿ ಅವರಿಗೇನೂ ತಿಳಿದಿರುತ್ತಿರಲಿಲ್ಲ. ತಾವು ಹೇಗೆ ಮಾತಾಡಬೇಕು, ನಿರೂಪಣೆ ಎಷ್ಟು ವಿವರವಾಗಿರಬೇಕು ಮುಂತಾದವನ್ನು ತಮ್ಮ ಮೇಲೆ ಸಭಾಸದರು ಬೀರಿದ ಪ್ರಭಾವವನ್ನು ಅನುಸರಿಸಿ ಸಭೆಯಲ್ಲೇ ನಿರ್ಧರಿಸುತ್ತಿದ್ದರು. ಈ ತೆರನಾದ ಸುರೂಪಣೆ (improvization) ಅವರ ವ್ಯಕ್ತಿತ್ವದ ಪ್ರಧಾನ ಲಕ್ಷಣವಾಗಿತ್ತು. ಉಳಿದೆಲ್ಲ ಅಂಶಗಳಲ್ಲಿ ಅವರ ವ್ಯಕ್ತಿತ್ವದ ಪ್ರಧಾನ ಲಕ್ಷಣ ನಾವು ಮಾಮೂಲಾಗಿ ಕಲ್ಪಿಸಿಕೊಳ್ಳುವ ವಿಜ್ಞಾನಿಯದಕ್ಕಿಂತಲೂ ಹೆಚ್ಚಾಗಿ ಕಲಾವಿದನದಾಗಿತ್ತು. ಉದಾಹರಣೆಗೆ, ಒಳ್ಳೆಯ ಸಿದ್ಧಾಂತವೊಂದಕ್ಕೆ ಇಲ್ಲವೇ ಒಳ್ಳೆಯ ಕೆಲಸವೊಂದಕ್ಕೆ ಲಭಿಸಬಹುದಾದ ಪರಮಪ್ರಶಂಸೆ ಎಂದರೆ ಅದು ಸಮರ್ಪಕವಾಗಿದೆ ಎಂಬುದಲ್ಲ ; ಬದಲು ಸುಂದರವಾಗಿದೆ

---

೧. ಕಾರ್ನೀಲಿಯಸ್ ಲ್ಯಾಂಕ್ಜೋಸ್

ಎಂಬುದೇ.[೨]"

"ನಿಸರ್ಗ ಪ್ರಯೋಜನಕಾರಿ ಎಂಬುದಕ್ಕಾಗಿ ವಿಜ್ಞಾನಿ ಅದರ ಅಧ್ಯಯನ ಮಾಡುವುದಿಲ್ಲ : ಅವನು ಅದರ ಅಧ್ಯಯನ ಮಾಡುವುದು ಅದರಲ್ಲಿ ಅವನಿಗೆ ಆನಂದ ಒದಗುವುದರಿಂದ ; ಅದರಲ್ಲಿ ಅವನಿಗೆ ಆನಂದ ಒದಗುವುದು ಅದು ಸುಂದರವಾಗಿರುವುದರಿಂದ. ನಿಸರ್ಗ ಸುಂದರ ವಾಗಿರದಿದ್ದರೆ ಅದನ್ನು ತಿಳಿಯುವುದು ನಿಷ್ಪ್ರಯೋಜಕವಾಗುತ್ತಿತ್ತು ; ನಿಸರ್ಗವನ್ನು ತಿಳಿಯುವುದು ನಿಷ್ಪ್ರಯೋಜಕವಾಗಿದ್ದರೆ ಬದುಕು ಅರ್ಥಹೀನವಾಗುತ್ತಿತ್ತು. ಇಂದ್ರಿಯಗಳಿಗೆ ಎದ್ದು ಕಾಣುವ ಸೌಂದರ್ಯವನ್ನು, ಅಂದರೆ ಗುಣಗಳ ಮತ್ತು ತೋರಿಕೆಗಳ ಸೌಂದರ್ಯವನ್ನು ಕುರಿತು ನಾನಿಲ್ಲಿ ಪ್ರಸ್ತಾವಿಸುತ್ತಿಲ್ಲ ಎಂಬುದು ಸ್ಪಷ್ಟ. ಆ ಸೌಂದರ್ಯವನ್ನು ನಾನು ಕಡೆಗಣಿಸುವೆನೆಂದಲ್ಲ, ಅದೆಂದೂ ನನ್ನ ಉದ್ದೇಶ ಅಲ್ಲ ; ಆದರೆ ವಿಜ್ಞಾನದೊಡನೆ ಅದಕ್ಕೆ ಏನೂ ವ್ಯವಹಾರವಿಲ್ಲ. ಬದಲು, ನನ್ನ ಮನಸ್ಸಿನಲ್ಲಿರುವುದು ಭಾಗಗಳ ಸುಸಂಗತ ಮೇಳನದಿಂದ ಲಭಿಸುವ ಮತ್ತು ಶುದ್ಧ ಪ್ರತಿಭೆಗೆ ಗ್ರಾಹ್ಯವಾಗುವ ಆ ಗಭೀರ ಸೌಂದರ್ಯ.[೩]"

"ಇಂಥವನೊಬ್ಬ ಎಂದಾದರೂ ಈ ನೆಲದ ಮೇಲೆ ರಕ್ತಮಾಂಸಭರಿತನಾಗಿ ಅಡ್ಡಾಡಿದುದು ನಿಜವಿರಬಹುದೇ ಎಂದು ಮುಂಬರಲಿರುವ ಪೀಳಿಗೆಗಳು ಸಂದೇಹಿಸುವುದು ಸಾಧ್ಯ.[೪]"

೨

"ಇಂಥ ವಿಶ್ವಗಾನಪ್ರೇಮಿ, ಸುರೂಪಣಚತುರ, ಸೌಂದರ್ಯಾರಾಧಕ, ಕರುಣಾಮಯಿ ಆಲ್ಬರ್ಟ್ ಐನ್‌ಸ್ಟೈನರ ಜನ್ಮಶತಾಬ್ದಿಯನ್ನು, ೧೯೭೯, ನೀನು ಹೇಗೆ ಆಚರಿಸುವೆ ?" ಇದು, ವಿಶೇಷವಾಗಿ ೧೯೭೫ರಿಂದ ಈಚೆಗೆ, ನನ್ನನ್ನು ಪೀಡಿಸುತ್ತಿದ್ದ ಪ್ರಶ್ನೆ. ನನ್ನ ಪರಿಮಿತ ಅವಕಾಶ ಮತ್ತು ಸೀಮಿತ ಸಾಮರ್ಥ್ಯದ ಪರಿಧಿಯೊಳಗೆ ನಾನು ನಿರ್ವಹಿಸಬಹುದಾಗಿದ್ದುದು ಒಂದೇ : ಅವರ ಜೀವನ ದರ್ಶನವನ್ನು ಕನ್ನಡಿಗಬಾಂಧವರಿಗೆ ಮಾಡಿಸುವುದು. ೧೯೭೯ರಲ್ಲಿ ಪ್ರಕಟವಾಗ ಬೇಕಾಗಿದ್ದ ಪುಸ್ತಕಕ್ಕಾಗಿ ಒಡನೆ ಯುದ್ಧಸಿದ್ಧತಾತೀವ್ರತೆಯಿಂದ ಕಾರ್ಯೋದ್ಯುಕ್ತನಾದೆ.

೧೯೭೮ರ ಮಧ್ಯಭಾಗದಲ್ಲಿ ನನ್ನ ಮುಂದೆ ಅನಾವರಣಗೊಂಡಿದ್ದ ಚಿತ್ರವಿದು : ಐನ್‌ಸ್ಟೈನರ ಬಹುಮುಖ ವ್ಯಕ್ತಿತ್ವದಲ್ಲಿ ಸ್ಥೂಲವಾಗಿ ಎರಡು ಪರಸ್ಪರ ಪೂರಕಾಂಶಗಳು ಬೆಸೆದುಕೊಂಡಿವೆ : ಯುಗಪ್ರವರ್ತಕ ವಿಜ್ಞಾನಿಯಾಗಿ ಆರ್ಕಿಮಿಡೀಸ್ ಮತ್ತು ನ್ಯೂಟನ್ ವ್ಯಕ್ತಿತ್ವಗಳ ಸಂಮಿಲನ, ಮಾನವಹಿತಾಕಾಂಕ್ಷಿಯಾಗಿ ಬುದ್ಧ ಮತ್ತು ಸಾಕ್ರೆಟೀಸ್ ವ್ಯಕ್ತಿತ್ವಗಳ ಸಂತುಲನ. ಹೀಗೆ ಎರಡು ವಿಧದ ಮಹತ್ತುಗಳು ಒಬ್ಬನಲ್ಲೇ ಏಕೀಭವಿಸಿರುವುದು ಲಿಖಿತ ವಿಜ್ಞಾನೇತಿಹಾಸದಲ್ಲೊಂದು ವಿಶೇಷ ಯೋಗ. ಇಂಥ ವ್ಯಕ್ತಿಯನ್ನು ಕುರಿತ ಯಾವುದೇ ಬರವಣಿಗೆ ಲೇಖಕನ ಅಸ್ತಿತ್ವಕ್ಕೇ ಸವಾಲಾಗುತ್ತದೆ : ಕೈಲಾಸಗಿರಿಯನ್ನು ಎತ್ತ ಹೊರಟ ರಾವಣನಂತಾಗಿತ್ತು ನನ್ನ ಪರಿಸ್ಥಿತಿ. ಆದರೆ ಪ್ರತಿಯೊಂದು ಜೀವಿಯಲ್ಲಿಯೂ ಸೋಲೊಪ್ಪದೆ ಸವಾಲೆದುರಿಸಿ ಮುಂದೆ ಸಾಗಬಲ್ಲ ಅದಟನ್ನು ನಿಸರ್ಗ (ಐನ್‌ಸ್ಟೈನರ ಪರಿಭಾಷೆಯಲ್ಲಿ ದೇವರು) ಅನೂಹ್ಯ ಕಾರಣಕ್ಕಾಗಿ ತನ್ನದೇ ಆದ ವಿಚಿತ್ರ ರೀತಿಯಲ್ಲಿ ಅಡಗಿಸಿಟ್ಟಿರುವುದು ಸರಿಯಷ್ಟೆ. ಈ ಅರಿವು ಕೊಡುವ ಧೈರ್ಯದಿಂದ—ನಿಜಕ್ಕೂ

---

೨. ಎಚ್. ಎ. ಐನ್‌ಸ್ಟೈನ್ (ಆಲ್ಬರ್ಟ್ ಐನ್‌ಸ್ಟೈನರ ಮಗ)

೩. ಆನ್ರೀ ಪ್ವಾನ್‌ಕ್ವಾರೇ

೪. ಮಹಾತ್ಮಗಾಂಧಿಯವರನ್ನು ಕುರಿತು ಐನ್‌ಸ್ಟೈನ್ ಬರೆದ ಮಾತು. (ನೋಡಿ ಪುಟ ೨೬೦)

ಅಂಜಿಕೆಯಿಂದ—ವಸ್ತುಸ್ಥಿತಿಯನ್ನು ವಿಶ್ಲೇಷಿಸಿದೆ.

ಐನ್‌ಸ್ಟೈನರ ಸಾಹಸ ಸಿದ್ಧಿಗಳ ಗಾಥೆಯನ್ನು ಎರಡು ವಿಧಗಳಲ್ಲಿ ವರ್ಣಿಸಬಹುದೆಂದು ಮನವರಿಕೆ ಆಯಿತು :

ಒಂದು, ಮಾನವ ಈ ಗ್ರಹದ ಮೇಲೆ ಮೈದಳೆದಂದಿನಿಂದಲೂ ಅನುಸ್ಯೂತವಾಗಿ ಪ್ರವಹಿಸುತ್ತ ಬಂದಿರುವ ವಿಜ್ಞಾನವಾಹಿನಿಯಲ್ಲಿ ಹೇಗೆ ಐನ್‌ಸ್ಟೈನ್ ಒಂದು ಪರ್ವಬಿಂದುವಾದರು ಎಂಬುದರ ಮೇಲೆ ಒತ್ತುಕೊಟ್ಟು ಗ್ರಂಥ ರಚನೆ ಮಾಡುವುದು. ಇಂಥ ಒಂದು ಗ್ರಂಥ ಐನ್‌ಸ್ಟೈನರ ಪಕ್ವ ವಿಜ್ಞಾನಜೀವನದ ಭವ್ಯ ಫಲವಾದ ಸಾಪೇಕ್ಷತಾಸಿದ್ಧಾಂತದ ವೈಜ್ಞಾನಿಕ ಇತಿಹಾಸವಾಗುತ್ತದೆ. ಇದರಲ್ಲಿ ಪರಿಕಲ್ಪನೆಗಳ (concepts) ವಿಕಾಸ ಪ್ರಧಾನ, ವ್ಯಕ್ತಿಗಳು ಕೇವಲ ಪ್ರತೀಕಗಳು—ಹಾದಿಕರೆಯಲ್ಲಿ ನೆಟ್ಟಿರುವ ಕಿಲೊಮೀಟರ್ ಕಲ್ಲುಗಳಂತೆ, ಕಲ್ಲುಗಳಿಗಿಂತ ಅವುಗಳ ಮೇಲೆ ಅಂಕಿಸಲಾಗಿರುವ ಸಂಖ್ಯೆಗಳು ಮುಖ್ಯವಾಗುವಂತೆ. ಈ ಗ್ರಂಥದ ವಾಚಕ ಸಹಜವಾಗಿ ಐನ್‌ಸ್ಟೈನರ ವರ್ಣಮಯ ವ್ಯಕ್ತಿತ್ವದ ಬಹ್ವಂಶದಿಂದ ವಂಚಿತನಾಗಿರುತ್ತಾನೆ.

ಎರಡು, ಎಲ್ಲರಂತೆ ಹುಟ್ಟಿ ಬೆಳೆದು ಬದುಕನ್ನು ಒಪ್ಪಿ ಸ್ವಂತ ಮೌಲ್ಯಗಳನ್ನು ಕಂಡುಕೊಂಡು ಅವುಗಳ ಸಿದ್ಧಿಗಾಗಿ ಶ್ರಮಿಸುತ್ತ ಹೇಗೆ ಇವರು ಮಹಾವಿಜ್ಞಾನಿ ಆದರು, ಮೇಲಾಗಿ ಮಹಾಪುರುಷ ಆದರು ಎಂಬುದನ್ನು ಚಿತ್ರಿಸುವ ಪುಸ್ತಕ ಬರೆಯುವುದು. ಇಂಥ ಒಂದು ಪುಸ್ತಕ ಐನ್‌ಸ್ಟೈನರ ಜೀವನಚರಿತ್ರೆ ಆಗುತ್ತದೆ. ಇದರಲ್ಲಿ ಅವರ ವೈಜ್ಞಾನಿಕ ಸಾಧನೆ ಸಿದ್ಧಿಗಳು ಆನುಷಂಗಿಕವಾಗಿ ಉಲ್ಲೇಖಿತವಾಗಿರುತ್ತವೆ, ಅಷ್ಟೆ. ಈ ಪುಸ್ತಕದ ಓದುಗ ಸಹಜವಾಗಿ ಸಾಪೇಕ್ಷತಾಸಿದ್ಧಾಂತದ ಪರಮಬೌದ್ಧಿಕ ಸೌಂದರ್ಯದಿಂದ[೫] ವಂಚಿತನಾಗಿರುತ್ತಾನೆ.

ಒತ್ತು ಸಿದ್ಧಿಯ ಮೇಲೋ ವ್ಯಕ್ತಿಯ ಮೇಲೋ ಎಂಬುದನ್ನು ತಾತ್ತ್ವಿಕವಾಗಿ ಇವೆರಡು ವಿಧಿಗಳು ಅವಲಂಬಿಸುತ್ತವೆ.

ಪ್ರಸಕ್ತ ಪುಸ್ತಕವನ್ನು ನಾನು ಎರಡನೆಯ ಧಾಟಿಯಲ್ಲಿ ಬರೆದಿದ್ದೇನೆ. ಸಾಮಾನ್ಯ ವಾಚಕನ ದೃಷ್ಟಿಯಿಂದ ಇದು ಅಧಿಕ ಪ್ರಯೋಜನಕಾರಿ ಎಂಬ ಮುಖ್ಯ ಕಾರಣದ ಜೊತೆಗೆ ಮೊದಲನೆಯ ಬಗೆಯ ಗ್ರಂಥರಚನೆಗೆ ನನ್ನ ಸರಕು ಸಾಲದು ಎಂಬ ಅಷ್ಟೇ ಮುಖ್ಯ ಕಾರಣವೂ ಇಲ್ಲಿ ಸೇರಿದೆ. ನಿಜಕ್ಕೂ ಆಧುನಿಕ ಗಣಿತೀಯ ಸಾಪೇಕ್ಷತಾಸಿದ್ಧಾಂತದಲ್ಲಿ ಸ್ವತಃ ಸಂಶೋಧನೆ ಮಾಡಿ ಅರ್ಹತೆ ಪಡೆದಾತ ಮಾತ್ರ ಈ ಕಾರ್ಯಕ್ಕೆ ಕೈಹಾಕಬಹುದು, ಅಷ್ಟೆ.

ಸಂಕಲ್ಪ, ಯೋಜನೆ, ಯೋಚನೆ, ಹಾದಿ ಆಯ್ಕೆ, ನಡೆಯಲು ನಿರ್ಧಾರ (ಅಂದಹಾಗೆ ಮೊದಲು ಮುಂದಿಡಬೇಕಾದದ್ದು ಎಡಗಾಲನ್ನೋ ಬಲಗಾಲನ್ನೋ ? ಆಗ ಕೈಗಳನ್ನು ಹೇಗೆ ಚಾಚಬೇಕು?) ಎಲ್ಲವೂ ಸರಿ. ಆದರೆ ತಲೆಯೊಳಗಿನ ಮಸಕು ಗೆರೆಗಳು ಕಾಗದದ ಮೇಲಿನ ಖಚಿತ ಅಕ್ಷರಗಳಾಗಿ ಪಡಿಮೂಡುವ ಮೊದಲು ಎದುರಾಗುವ ಇತರ ಅಡಚಣೆಗಳು ಅಸಂಖ್ಯಾತ. ಇಂಥವುಗಳ ಹಿಮಾಲಯ ಶ್ರೇಣಿ ೧೯೭೮ರ ಚತುರ್ಥ ಪಾದದಲ್ಲಿ ನನ್ನೆದುರು ಎದ್ದು ನಿಂತಿತು : ನಾನು ಸಂಗ್ರಹಿಸಿದ ಸಾಮಗ್ರಿಯ ಕೊರತೆಯಾಗಲಿ, ನನ್ನ ಪ್ರಯತ್ನದಲ್ಲಿಯ ಅಸಮರ್ಪಕತೆಯಾಗಲಿ, ನನ್ನಲ್ಲಿ ಈ ಒಲವಿನ ದುಡಿಮೆಯ ಬಗೆಗೆ ಸುಪ್ತವಾಗಿ ಇದ್ದಿರಬಹುದಾಗಿದ್ದ ಅಳುಕಾಗಲಿ ಕಾರಣ ವಲ್ಲ. ಅದೊಂದು ಮನೋವೈಜ್ಞಾನಿಕ ಸಮಸ್ಯೆ. ಅರ್ಜುನ ಶಸ್ತ್ರಸಂನ್ಯಾಸ ಮನೋಧರ್ಮ ;

---

೫. ನೋಡಿ 'ಬಲವಿಜ್ಞಾನದ ತತ್ತ್ವಗಳು' : *Principles of Mechanics* by John L. Synge and Byron A. Griffith ಪುಸ್ತಕದ ಕನ್ನಡಾನುವಾದ (ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ)

ಸಾಮಾನ್ಯ ಭಾಷೆಯಲ್ಲಿ ಜಡತ್ವ (inertia). ಆಗ ಕೆಲವು ಘಟನೆಗಳು ಬೆನ್ನಾಲಿನಲ್ಲಿ ಸಂಭವಿಸಿ ನನ್ನ ಮನಸ್ಸಿಗೆ ಹುಮ್ಮಸ್ಸು ತುಂಬಿದುವು (ಪ್ರಾಥಮಿಕ ಭೌತವಿಜ್ಞಾನ ಓದಿದವರು ನ್ಯೂಟನ್ನನ ಪ್ರಥಮ ಚಲನ ನಿಯಮವನ್ನು ನೆನಪಿಸಿಕೊಳ್ಳಬಹುದು) :

ಒಂದು, ೧೯೭೮ರ ನವಂಬರಿನಲ್ಲಿ ಹುಬ್ಬಳ್ಳಿಗೆ ಹೋದೆ—ಸುದೀರ್ಘ ಕಾಲದ ಒಂದು ವಾಗ್ದಾನವನ್ನು ಈಡೇರಿಸಲು. ಅದೆಂದರೆ ಶ್ರೀ ಪಾ. ವೆಂ. ಆಚಾರ್ಯರ ನಲ್ಮೆಯ ಕರೆಗೆ ಮನ್ನಣೆ. ಅವರ ವಿಕಿರಣಪಟು ಮನಸ್ಸಿನೊಡನೆ ಒದಗಲಿದ್ದ ಸಾಹಚರ್ಯ ನನಗೆ ಪ್ರಿಯವಾಗಿತ್ತು. 'ಕಸ್ತೂರಿ'ಯ ಕರ್ತಾರ ಪಾವೆಂ ಅವರ ಮನೆಯಲ್ಲಿ ತಂಗಿದ್ದಾಗ ಅವರನ್ನು ನೋಡಲು ಆ ಪತ್ರಿಕೆಯ ವರ್ತಮಾನ ಸೂತ್ರಧಾರ ಶ್ರೀ ಮಾಧವ ನಾ. ಮಹಿಷಿ ಅಲ್ಲಿಗೆ ಬಂದರು. (೧೯೯೪: ಮಹಿಷಿಯವರು ಈಗ ಬದುಕಿಲ್ಲ.)

ಗೊತ್ತುಗುರಿ ಇಲ್ಲದೆ ಹರಟೆ ಮುಂದುವರಿದಿದ್ದಾಗ ನಾನೆಂದೆ, "೧೯೭೯ ಮಾರ್ಚ್ ೧೪ರಂದು ಐನ್‌ಸ್ಟೈನರ ನೂರೊಂದನೆಯ ಹುಟ್ಟು ಹಬ್ಬ ಬರಲಿದೆ. ಆದ್ದರಿಂದ ಮಾರ್ಚ್ 'ಕಸ್ತೂರಿ'ಯನ್ನು ಐನ್‌ಸ್ಟೈನ್ ಶತಾಬ್ದಿ ಸಂಚಿಕೆಯಾಗಿ ಪ್ರಕಟಿಸಬಾರದೇಕೆ ?" ಮಹಿಷಿ "ಆ ಸಂಚಿಕೆಯ ಪುಸ್ತಕ ವಿಭಾಗದಲ್ಲಿ ಐನ್‌ಸ್ಟೈನರ ಜೀವನ ಚರಿತ್ರೆ ಪ್ರಕಟಿಸೋಣ. ನೀವೇ ಬರೆದುಕೊಡಿ."

ಪಾವೆಂ ಸ್ವಸ್ತಿಪಾನ ಮಾಡಿದರು, ನಾನು ತಥಾಸ್ತು ಎಂದೆ.

ಲಾಗ ಹೊಡೆದು ಜಾಗ ನೋಡುವ ನನ್ನ ಎಂದಿನ ಪ್ರವೃತ್ತಿಗೆ[೬] ಅನುಗುಣವಾಗಿಯೇ ಈ ಪ್ರತಿಕ್ರಿಯೆ ಪ್ರದರ್ಶಿತವಾಗಿತ್ತು !

ಎರಡು, ಮೈಸೂರಿಗೆ ಮರಳಿ ಕೆಲವು ದಿವಸಗಳು ಸಂದಿದ್ದುವು. ದೂರದ ಕೆನಡಾದಲ್ಲಿದ್ದ ಪತ್ತಿರದ ಗೆಳೆಯ ಶ್ರೀ ಟಿ. ಶ್ರೀವೆಂಕಟರಮಣ ನನ್ನ ಕೋರಿಕೆ ಮನ್ನಿಸಿ ಕಳಿಸಿದ್ದ ಕೆಲವು ಅಪೂರ್ವ (ಮತ್ತು ನನಗೆ ತಿಳಿದ ಮಟ್ಟಿಗೆ ಭಾರತದಲ್ಲಿ ಆಗ ಅಲಭ್ಯ) ಆಕರಗ್ರಂಥಗಳು ನನ್ನ ಕೈಸೇರಿದುವು. ಅವುಗಳಲ್ಲಿ ನಾನು ಹೊನ್ನ ಹೆಗ್ಗೆಯನ್ನೇ ಎಡಹಿದ್ದೆ.

ಮೂರು, ನನ್ನ 'ಶಸ್ತ್ರಸಂನ್ಯಾಸ'ದ ಬಗ್ಗೆ ತೀವ್ರ ಸಂತಾಪದಗ್ಧರಾಗಿದ್ದ ಶ್ರೀ ಅಡ್ಯನಡ್ಕ ಕೃಷ್ಣಭಟ್ಟರು ಸಕಾಲದಲ್ಲಿ 'ಗೀತೋಪದೇಶ' ನೀಡಿರದಿದ್ದರೆ ಪ್ರಾಯಶಃ ಬರವಣಿಗೆ ನನ್ನಿಂದ ಸಾಧ್ಯವೇ ಆಗುತ್ತಿರಲಿಲ್ಲ.

ಆಳ ತಿಳಿಯದ, ಓಘವರಿಯದ ಮತ್ತು ಹರವು ಕಾಣದ ತುಂಬು ಹೊನಲಿಗೆ ದುಮುಕಿಯೇ ಬಿಟ್ಟೆ. ಇನ್ನು ಈಸದೆ, ಇದ್ದು ಜೈಸದೆ, ಜೈಸಿ ದಂಡೆ ಏರದೆ ಗತಿಯುಂಟೇ ?

೩

೧೯೭೯ ಮಾರ್ಚ್ ಮತ್ತು ಏಪ್ರಿಲ್ ತಿಂಗಳ 'ಕಸ್ತೂರಿ'ಯ ಪುಸ್ತಕ ವಿಭಾಗದಲ್ಲಿ 'ಆಲ್ಬರ್ಟ್ ಐನ್‌ಸ್ಟೈನ್' ಭಾಗಶಃ ಪ್ರಕಟವಾಯಿತು. ಒಂದು ಮಜಲಿನಿಂದ ಆಚೆಗೆ ಜೀವನಚರಿತ್ರೆ ದಾಟಲಿಲ್ಲ. ಏಕೆಂದರೆ ಇಂಥ ಬರವಣಿಗೆಗಳಲ್ಲಿ—ಜೀವನಚರಿತ್ರೆಯೂ ವಿಜ್ಞಾನಚರಿತ್ರೆಯೂ ಪರಸ್ಪರ ಪೂರಕ ಮತ್ತು ಪೋಷಕವಾಗಿ ಸಾಗುವಪ್ರಕ್ರಿಯೆಗಳಲ್ಲಿ—ಲೇಖಕ, ಪೂರ್ವಯೋಜಿತ ಯಾತ್ರೆಯಲ್ಲಿ ಭಾಗಿ ಆಗುವ ಪ್ರಯಾಣಿಕನಂತಲ್ಲದೆ, ಕಾಲ ಕೆಳಗಿನ ನೆಲದ ಮೇಲೆಯೇ ಗಮನ ಸಾಂದ್ರೀಕರಿಸಿ ಕಾಣದ ಶಿಖರದೆಡೆಗೆ ಮಂದಗತಿಯಿಂದ ಹೆಜ್ಜೆ ಇಡುವ ಪರ್ವತಾರೋಹಿಯಂತೆ

೬. ನೋಡಿ ಪುಟ ೬೪

ಮುನ್ನಡೆಯಬೇಕಾಗುತ್ತದೆ.

ಈ ಅನುಭವದಿಂದ ನನ್ನ ಸಾಮರ್ಥ್ಯದ, ಮಿಗಿಲಾಗಿ, ದೌರ್ಬಲ್ಯದ ಅರಿವು ಚೆನ್ನಾಗಿ ಮೂಡಿತು.

ಸಾಮರ್ಥ್ಯ : ಐನ್‌ಸ್ಟೈನರ ಜೀವನದ ಸಮ್ಯಗ್ದರ್ಶನ ನನಗೆ ಸಿದ್ಧಿಸುವುದು ಅಸಾಧ್ಯವಲ್ಲ. ಸಾಕಷ್ಟು ಶ್ರಮವಹಿಸಿ ಅವರ ಜೀವನಚರಿತ್ರೆಯನ್ನು ಬರೆಯಬಲ್ಲೆ.

ದೌರ್ಬಲ್ಯ : ಐನ್‌ಸ್ಟೈನ್ ಪ್ರಧಾನವಾಗಿ ಸೈದ್ಧಾಂತಿಕ ಭೌತವಿಜ್ಞಾನಿ. ಹಿಂದೆ ಹೇಳಿರುವಂತೆ ನ್ಯೂಟನ್ ಮಹಾಶಯನಿಗೆ ಸರಿಸಾಟಿ ಆಗಬಲ್ಲ ದ್ರಷ್ಟಾರ. ಆದ್ದರಿಂದ ಅವರ ಜೀವನಚರಿತ್ರೆಯಲ್ಲಿ ಭೌತವಿಜ್ಞಾನದ ಪರಿಕಲ್ಪನೆಗಳನ್ನು ಪೂರ್ತಿಯಾಗಿ ವರ್ಜಿಸುವುದು ಅಸಾಧ್ಯ, ಅನ್ಯಾಯ ಕೂಡ. ಜನಪ್ರಿಯ ವಿಜ್ಞಾನ ಶೈಲಿಯಲ್ಲಿ ಮಾತ್ರ ಈ ಕಾರ್ಯ ನನ್ನಿಂದ ಕೈಗೂಡೀತು. ಅಲ್ಲಿಯೂ, ಭೌತವಿಜ್ಞಾನದ ಪ್ರೌಢವಿದ್ಯಾರ್ಥಿ ಅಲ್ಲದ ನಾನು ಅತಿ ಸರಳೀಕರಣ ಮಾಡಿ ಇಲ್ಲವೇ ಮೂಲ ಭಾವನೆಯನ್ನೇ ತಪ್ಪಾಗಿ ಗ್ರಹಿಸಿ ವಿಕೃತ ವರ್ಣನೆಯನ್ನು ಕೊಡುವ ಅಪಾಯ ತಪ್ಪಿದ್ದಲ್ಲ.

ಸ್ವತಃ ಉತ್ತಮ ವಿಜ್ಞಾನಲೇಖಕರೂ ಭೌತವಿಜ್ಞಾನ ಪ್ರಾಧ್ಯಾಪಕರೂ ನನಗೆ 'ಗೀತೋಪದೇಶ' ಮಾಡಿದವರೂ ಆದ ಶ್ರೀ ಅಡ್ಯನಡ್ಕ ಕೃಷ್ಣಭಟ್ಟರಿಗೆ ತಿರುಗುಬಾಣ ಹೊಡೆದೆ. "ನನ್ನ ಹಸ್ತಪ್ರತಿಯನ್ನು, ತತ್ರಾಪಿ ಅದರಲ್ಲಿ ಬರುವ ಭೌತವಿಜ್ಞಾನ ವೃತ್ತಾಂತವನ್ನು, ವಿಮರ್ಶಾತ್ಮಕವಾಗಿ ಓದಿ ತಪ್ಪು ತಿದ್ದಿ ಸರಿಪಡಿಸುವುದು ನಿಮ್ಮ ಹೊಣೆ." ಪರಿಪೂರ್ಣತಾವಾದಿಗಳಾದ ಅಡ್ಯನಡ್ಕರು ಈ ಅಪ್ರಿಯಕಾರ್ಯವನ್ನು ಅತ್ಯುತ್ಸಾಹದಿಂದ ಮತ್ತು ಪರಿಶುದ್ಧ ಪ್ರೇಮದಿಂದ ಯಶಸ್ವಿಯಾಗಿ ನಿರ್ವಹಿಸಿಕೊಟ್ಟಿರುವರು. ಇಷ್ಟಾಗಿಯೂ ಪ್ರಸಕ್ತ ಪುಸ್ತಕದಲ್ಲಿಯ ಭೌತವಿಜ್ಞಾನ ವಿಷಯಗಳಲ್ಲಿಯೇ ಆಗಲಿ ಇತರ ಅಂಶಗಳಲ್ಲಿಯೇ ಆಗಲಿ ಲೋಪದೋಷ ಉಳಿದಿದ್ದರೆ ಅವು ಪೂರ್ತಿ ಸ್ವಯಂಕೃತಾಪರಾಧಗಳು. ಪ್ರಾಜ್ಞ ಓದುಗರು ಅವನ್ನು ನನ್ನ ಗಮನಕ್ಕೆ ತಂದುಕೊಟ್ಟರೆ ಮಹದುಪಕಾರವಾಗುತ್ತದೆ.

ಲೇಖನಕ್ರಿಯೆ ಸಾಗಿದಂತೆ ಐನ್‌ಸ್ಟೈನ್ ವಾಣಿಯನ್ನು—ಅವರ ಲೇಖನಗಳು, ಭಾಷಣಗಳು, ಪತ್ರಗಳು—ಅದರ ಮೂಲ ಮಾಧುರ್ಯಕ್ಕೆ ಇನಿತೂ ಚ್ಯುತಿ ಬಾರದಂತೆ ನನ್ನ ನೇಯ್ಗೆಗೆ ಹೊಂದಿಸುವುದು ಅನಿವಾರ್ಯವಾಯಿತು. "ಭಾವಾತೀತ ಸೌಂದರ್ಯದಿಂದ ಕೂಡಿದ ಸ್ವಂತ ವಿಜ್ಞಾನ ಕ್ಷೇತ್ರದಲ್ಲಿ ಮಾತ್ರವೇ ಅಲ್ಲ ಯೋಗ್ಯಪದಪ್ರಯೋಗದಲ್ಲಿ ಕೂಡ ಐನ್‌ಸ್ಟೈನ್ ಕಲಾವಿದರಾಗಿದ್ದರು.[೨]" ಐನ್‌ಸ್ಟೈನ್ ಗದ್ಯದ ಸೊಗಸು ಮತ್ತು ಕಗ್ಗದ ನವುರು (ಇಂಗ್ಲಿಷ್ ಭಾಷೆಯಲ್ಲಿ) ಭಾವಗಮ್ಯವಾಗುತ್ತಿದ್ದರೂ ಬುದ್ಧಿ ಮೂಸೆಯಲ್ಲಿ ಸ್ಫುಟಗೊಳ್ಳುತ್ತಿದ್ದರೂ ಕನ್ನಡದಲ್ಲಿ ಮಾತ್ರ ಎಂದೂ ತೃಪ್ತಿಕೊಡುವ ಶೈಲಿಯಲ್ಲಿ ಮರುವುಟ್ಟು ಪಡೆಯುತ್ತಿರಲಿಲ್ಲ. ಇಂಥ ದುರ್ಭರ ಸನ್ನಿವೇಶಗಳು ಎದುರಾದಾಗಲೆಲ್ಲ, ಎಂದಿನಂತೆ, ನಾನು ಪ್ರಿಯಮಿತ್ರ ಪ್ರೊ. ಎಚ್. ಜಿ. ಸೂರ್ಯನಾರಾಯಣರಾಯರನ್ನು ಪೀಡಿಸಿದ್ದೇನೆ, ಅವರಿಂದ ಸರಿದಾರಿ ಕಂಡುಕೊಂಡಿದ್ದೇನೆ. ಅವರ ಸೃಷ್ಟಿಶೀಲ ಮನಸ್ಸಿನೊಡನೆ ಒದಗಿದ ಒಡನಾಟ ಬೆಲ್ಲವನು ಮೆದ್ದಂತೆ, ಹೆಜ್ಜೇನು ಕುಡಿದಂತೆ.

ಬರವಣಿಗೆ ಭರದಿಂದ ಮುನ್ನಡೆದಂತೆ ದಿನದಿನ ಎದುರಾಗುತ್ತಿದ್ದ ಬಗೆಬಗೆಯ ಐತಿಹಾಸಿಕ, ಸಾಮಾಜಿಕ ಮತ್ತು ಭಾಷಾಸಮಸ್ಯೆಗಳನ್ನು ನನ್ನ ಹಿರಿಯ ಸಹೋದ್ಯೋಗಿಗಳಾಗಿರುವ ಪ್ರೊ. ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಮತ್ತು ಪ್ರೊ. ಎನ್. ಪ್ರಹ್ಲಾದರಾವ್ ಇವರೊಡನೆ ಚರ್ಚಿಸಿ

---

೨. *Albert Einstein : The Human Side* edited by Helen Dukas and Banesh Hoffmann, ೧೯೭೯. ಇದರ ಅನುವಾದ : *ಆಲ್ಬರ್ಟ್ ಐನ್‌ಸ್ಟೈನ್: ಮಾನವೀಯ ಮುಖ* ಲಭ್ಯವಿದೆ.

ಉಪಯುಕ್ತ ಸಲಹೆ ಪಡೆದಿದ್ದೇನೆ. ಇಷ್ಟೇ ಅಲ್ಲ, ಈ ಮಹನೀಯರು ನನ್ನ 'ಸ್ವಗತ ಭೀಷಣ'ಗಳನ್ನು ಸಹನೆಯಿಂದ ಆಲಿಸಿ, ತಮ್ಮ ವಾದಗಳನ್ನು ಮಂಡಿಸಿ, ನನಗೆ ಹೊಸ ಭಾವನೆಗಳನ್ನು ಒದಗಿಸಿ ಈ ಪುಸ್ತಕದ ಶೈಲಿ ಮೊನಚಾಗಲು ನೆರವಾಗಿದ್ದಾರೆ.

ಇದೇ ಸುಮಾರಿಗೆ (೧೯೭೯ರ ಉತ್ತರಾರ್ಧ) ಇನ್ನೊಂದು ಸುಯೋಗ ತಾನಾಗಿಯೇ ಕೂಡಿಬಂತು : ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತವನ್ನು ಕುರಿತು ಐನ್‌ಸ್ಟೈನ್ ಪ್ರಕಟಿಸಿದ (೧೯೧೫-೧೬) ಸುದೀರ್ಘ ಸಂಶೋಧನ ಪ್ರಬಂಧದ ಇಂಗ್ಲಿಷ್ ರೂಪವನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯ[೮]. ವಿಷಯ ತಿಳಿಯದ ನನ್ನ ಪಾಲಿಗೆ ಇದೊಂದು ದುಸ್ಸಾಹಸ, ಕತ್ತಲೆಯ ನಿಗೂಢ ಆಳಕ್ಕೆ ಕಣ್ಮುಚ್ಚಿ ನೆಗೆತ. ನಮ್ಮ ನಾಡಿನ ಗಣ್ಯ ಸಾಪೇಕ್ಷತಾಸಿದ್ಧಾಂತಿಗಳಾಗಿರುವ ಪ್ರೊ. ಕೆ. ಎನ್. ಶ್ರೀನಿವಾಸರಾವ್ ಮತ್ತು ಇವರ ಶಿಷ್ಯ ಡಾ. ಎ. ವಿ. ಗೋಪಾಲರಾವ್ ಇವರ ಬೌದ್ಧಿಕ ಧುರೀಣತ್ವದಲ್ಲಿ ನಿರ್ವಹಿಸಲಾದ ಈ ಗುರುತರ ಜವಾಬುದಾರಿ ನನಗೆ ಹೊಸ ಬೆಳಕನ್ನು ಕಾಣಿಸಿತು.[೯]

ಐನ್‌ಸ್ಟೈನ್ ಬದುಕಿದ್ದಾಗ ಅವರ ನಿಕಟ ಅನುವರ್ತಿಗಳಾಗಿದ್ದ ಅನೇಕ ಮಂದಿ ವಿದ್ವಾಂಸರು ಇಂದಿಗೂ ಬದುಕಿದ್ದಾರೆ. ಇವರಿಗೆ ಕಾಗದ ಬರೆದು ಮೂಲಮಾಹಿತಿಗಳನ್ನೂ ಛಾಯಾಚಿತ್ರಗಳನ್ನೂ ಒದಗಿಸುವಂತೆ ಪ್ರಾರ್ಥಿಸಿದೆ. ಸಂತೋಷ ಮತ್ತು ಅಭಿಮಾನದಿಂದ—ಇದು ಖುದ್ದು ತಮ್ಮ ಕಾರ್ಯವೆಂಬ ನಿವೇದಿತ ಭಾವದಿಂದ—ಇವರು ನನಗೆ ಅವನ್ನು ಮುಫತ್ತಾಗಿ ನೀಡಿ ಉಪಕರಿಸಿದ್ದಾರೆ. ಈ ವ್ಯಕ್ತಿ, ಅಂತೆಯೇ ಸಂಸ್ಥೆಗಳ, ಹೆಸರುಗಳನ್ನು ಇಲ್ಲಿ ಸ್ಮರಿಸಬಯಸುತ್ತೇನೆ:

Dr Otto Nathan, Trustee of Estate of Albert Einstein and his life-long friend, New York.

Professor Banesh Hoffman, Einstein's collaborator, Professor of Mathematics Emeritus at Queen's College of the City University, New York.

Miss Helen Dukas, Secretary to Albert Einstein since 1928 until his death in 1955. Trustee of Albert Einstein's Literary Estate and Archivist of his papers, Princeton.

Mrs Helen Infeld, Poland (her husband Dr Leopald Infeld was Einstein's collaborator).

Professor John L. Synge, Emeritus Professor of Theoretical Physics, Dublin Institute of Advanced Studies, Dublin.

Ms Lotte Jacobi, New Hampshire, USA.

American Institute of Physics, New York.

The Central Zionist Archives, Jerusalem.

---

೮. *The Foundation of General Theory of Relativity* by A. Einstein. (Original German paper published in *Annalen der Physik*, 49, 1916. Translated into English by W. Perret and G. A. Jeffery)

೯. ಪುಟ ೧೫೩ರಲ್ಲಿ ಮಾದರಿ ಪಾಠವನ್ನು ಉದ್ಧರಿಸಿದೆ. ಪೂರ್ಣ ಪಾಠ 'ವಿಜ್ಞಾನ ಕರ್ನಾಟಕ'ದ ಐನ್‌ಸ್ಟೈನ್ ಶತಾಬ್ದಿ ವಿಶೇಷಾಂಕದಲ್ಲಿ ಪ್ರಕಟವಾಗಿದೆ.

Princeton University Press, Princeton

United States Information service ; American Center Library, Madras.

ಸ್ಥಳೀಯವಾಗಿ ನಾನು ಈ ಮುಂದಿನ ವ್ಯಕ್ತಿಗಳಿಂದ ಮತ್ತು ಸಂಸ್ಥೆಗಳಿಂದ ಉಪಕೃತನಾಗಿದ್ದೇನೆ.

ಪ್ರೊ. ಕೆ. ಎ. ಕೃಷ್ಣಮೂರ್ತಿ ಮತ್ತು ಡಾ. ಎಂ. ಎಸ್. ಪೈ, ಮಂಗಳೂರು ; ಶ್ರೀ ಬಿ. ಜನಾರ್ದನ ಬಾಳಿಗ, ಮಡಿಕೇರಿ ; ಪ್ರೊ. ಜೆ. ಆರ್. ಲಕ್ಷ್ಮಣರಾವ್, ಡಾ. ಎಂ. ಆರ್. ರಾಘವೇಂದ್ರರಾವ್, ಡಾ. ಎಚ್. ಸಂಜೀವಯ್ಯ, ಪ್ರೊ. ಎಸ್. ಅನಂತನಾರಾಯಣ, ಶ್ರೀ ಯು. ಚಂದ್ರಶೇಖರಯ್ಯ ಮತ್ತು ಶ್ರೀ ಸಿ. ಕೆ. ವೆಂಕಟನರಸಿಂಹಯ್ಯ, ಮೈಸೂರು ; ಡಾ. ಶ್ರೀನಿವಾಸ ಹಾವನೂರ, ಮುಂಬಯಿ ; ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಭಂಡಾರ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಭಂಡಾರ, ಮೈಸೂರು ; ಮ್ಯಾಕ್ಸ್ ಮುಲ್ಲರ್ ಭವನ, ಬೆಂಗಳೂರು; ತಾತ ಮೂಲಭೂತ ವಿಜ್ಞಾನ ಮಂದಿರ, ಮುಂಬಯಿ.

೪

ಐನ್‌ಸ್ಟೈನ್ ಹಿಮಾಲಯದಂತೆ : ದೂರದಿಂದ ಮಹೋನ್ನತ, ದುರ್ಗಮ, ಅಭೇದ್ಯ; ಸಮೀಪದಿಂದ ಶ್ರೀಮದ್ಗಂಭೀರ, ಪ್ರಯತ್ನಸಾಧ್ಯ, ಆದರಣೀಯ; ಒಟ್ಟಾರೆ ಹೇಳುವುದಾದರೆ ಆರೋಹಿಯ ಧೃತಿಯನ್ನು ಕ್ಷಣ ಕ್ಷಣ ಪರೀಕ್ಷಿಸುವ ಮಹಾಮಾನದಂಡ. ಈ ಮಾನವಪರ್ವತವನ್ನು ದೂರದಿಂದ ನೋಡಿ ಮೂಕವಿಸ್ಮಿತನಾಗಿ ಕಂಡಷ್ಟನ್ನೇ ಯುಕ್ತಶೈಲಿಯಲ್ಲಿ ನಿರೂಪಿಸುವುದು ಒಂದು ಕ್ರಮ ; ಸ್ವತಃ ಕ್ರಮಿಸುತ್ತ ಶಿಖರ ಏರಿ ಲಭ್ಯ ಅನುಭವಗಳನ್ನು ಬಿತ್ತರಿಸುವುದು ಇನ್ನೊಂದು ಕ್ರಮ. ಎರಡನೆಯ ಕ್ರಮವನ್ನು ಅನುಸರಿಸಿರುವ ನಾನು ಪ್ರಸಕ್ತ ವಿಷಯಕ್ಕೆ ತಕ್ಕುದಾದ ಶೈಲಿಯನ್ನು ರೂಪಿಸಿಕೊಳ್ಳುವುದು ಅಗತ್ಯವಾಯಿತು. ನಾವು ಇಂಗ್ಲಿಷ್ ಭಾಷೆಯಲ್ಲಿ ಕೇಳಿ ಓದಿ ಕಲಿತು ಬರೆದು ರೂಢಿಸಿಕೊಂಡಿರುವ ಆಧುನಿಕ ವಿಜ್ಞಾನ ವಾಙ್ಮಯವನ್ನು ಸ್ಪಷ್ಟವಾಗಿಯೂ ಆಕರ್ಷಕವಾಗಿಯೂ ಕನ್ನಡದಲ್ಲಿ ನಿರೂಪಿಸುವುದು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರ ಹುಡುಕುವುದಕ್ಕೆ ತಾತ್ತ್ವಿಕವಾಗಿ ಇದು ಸಮಾನವಾಗಿತ್ತು. ಅಂದರೆ ಕನ್ನಡದಲ್ಲಿ ಜನಪ್ರಿಯ ವಿಜ್ಞಾನದ ಮಟ್ಟ ಮತ್ತು ಧಾಟಿ, ವಿಶೇಷವಾಗಿ ಈ ಪುಸ್ತಕವನ್ನು ಕುರಿತಂತೆ, ಹೇಗಿರಬೇಕು ? ಇದಕ್ಕೆ ಉತ್ತರ ಅರಸುವಾತ ಸಹಜವಾಗಿ ಕನ್ನಡದಲ್ಲಿ ಈ ವಾಙ್ಮಯದ ವಿಕಾಸವನ್ನು ಎಚ್ಚರಿಕೆಯಿಂದ ಗಮನಿಸಿ ತನ್ನ ಹಾದಿಯನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ಈ ಶತಮಾನದ ಮೊದಲ ಎರಡು ಮೂರು ದಶಕಗಳಲ್ಲಿ ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪ ಮತ್ತು ಶ್ರೀ ನಂಗಪುರಂ ವೆಂಕಟೇಶ ಅಯ್ಯಂಗಾರ್ ಹಾದಿ ಕಡಿದು ಹಿಲಾಲು ಹಿಡಿದು ಮುನ್ನಡೆದಿದ್ದರು. ತರುವಾಯದ ದಿನಗಳಲ್ಲಿ ಶ್ರೀ ಜಿ. ಹನುಮಂತರಾವ್, ಡಾ. ಸಿ. ಎನ್. ಶ್ರೀನಿವಾಸ ಅಯ್ಯಂಗಾರ್ ಮತ್ತು, ವಿಶೇಷವಾಗಿ, ಪ್ರೊ. ಆರ್.ಎಲ್. ನರಸಿಂಹಯ್ಯ ಇನ್ನಷ್ಟು ಮುಂದೆ ಸಾಗಿ ಹೊಸ ಹರವುಗಳನ್ನು ಗುರುತಿಸಿದ್ದರು. ಹೀಗೆ ೧೯೫೦ರ ದಶಕ ಮುಗಿಯುವ ವೇಳೆಗೆ ವಿಜ್ಞಾನ ವಾಙ್ಮಯಕ್ಕೆ ಖಚಿತವಾದ ಒಂದು ವ್ಯಕ್ತಿತ್ವ ಪ್ರಾಪ್ತವಾಗಿತ್ತು : ನಮ್ಮ ಸಾರಸ್ವತ ಸಂಪತ್ತಿನಿಂದ ಪೋಷಿತವಾದ ಮತ್ತು ನಮ್ಮ ಸಂಸ್ಕೃತಿಯಿಂದ ಪ್ರಭಾವಿತವಾದ ಪರಿಪುಷ್ಟ ಕನ್ನಡದಲ್ಲಿ ಆಧುನಿಕ ವಿಜ್ಞಾನ ಪರಿಕಲ್ಪನೆಗಳ ನಿರೂಪಣೆ. ಇಂಥ ಸತ್ತ್ವಪೂರ್ಣ ಶೈಲಿಯ ಉತ್ಕೃಷ್ಟ ನಿದರ್ಶನವನ್ನು ಪ್ರೊ. ಆರ್. ಎಲ್. ನರಸಿಂಹಯ್ಯನವರ ಬರವಣಿಗೆಗಳಲ್ಲಿ ಕಾಣು

ತ್ತೇವೆ. ಹೇಳಬೇಕಾದ ವಿಷಯದ (ಅಂದರೆ ವಿಜ್ಞಾನದ) ಮೇಲೆಯೂ ನಿರೂಪಣ ಮಾಧ್ಯಮದ (ಅಂದರೆ ಕನ್ನಡದ) ಮೇಲೆಯೂ ಪೂರ್ಣ ಪ್ರಭುತ್ವದಿಂದ ಸಿದ್ಧಿಸಿದ ಭಾವ-ಭಾಷೆ ಮಧುರ ಬಾಂಧವ್ಯವಿದು, ರಸಪಾಕವಿದು. ಆರ್‌ಎಲ್‌ಎನ್-ತರುವಾಯದ ದಿನಗಳಲ್ಲಿ ವಿಜ್ಞಾನ ವಾಙ್ಮಯ ಅನುಸರಿಸಿದ ಹಾದಿಯಿಂದ ನಾವು ಕಲಿಯಬಹುದಾದ ಪಾಠ ಬಹುತೇಕ ನಿಷೇಧಾತ್ಮಕ : ಭಾವ-ಭಾಷೆ ಬಾಂಧವ್ಯದ ಎರಕ ಒಡೆದುಹೋದರೆ ವಾಙ್ಮಯದ ಗತಿ ಏನಾದೀತೆಂಬುದಕ್ಕೆ ವಿಪುಲ ನಿದರ್ಶನಗಳನ್ನು ಅಲ್ಲಿ ಕಾಣಬಹುದು. ಖಚಿತವಲ್ಲದ ವಿಷಯವನ್ನು, ಅಡಕವಲ್ಲದ ಕನ್ನಡದಲ್ಲಿ ಗೀಚಿ, ಅಂಥ ಬರವಣಿಗೆಯನ್ನು ಸರಳ ಸುಂದರ ನಿರೂಪಣೆಯೆಂದು ಭ್ರಮಿಸುವ ಈ ಮಾರ್ಗ ಸರ್ವಥಾ ಅನುಸರಣೀಯವಲ್ಲ, ಅನುಕರಣೀಯವಂತೂ ಅಲ್ಲವೇ ಅಲ್ಲ ಎಂಬುದು ಕಂಡಂತೆಯೇ ಇದೆ. ಈ ಬಂಜರು ನೆಲದ ಮೇಲಿನ ಒಣಹಾದಿ ಮತ್ತು ನೀರಸ ಧಾಟಿ ಐನ್‌ಸ್ಟೈನರ ಜೀವನ ಚರಿತ್ರೆಗೆ (ಸಾರ್ವತ್ರಿಕವಾಗಿ, ಯಾವುದೇ ವಾಙ್ಮಯಕ್ಕೆ) ತಕ್ಕುದಾದ್ದಲ್ಲವೆಂದು ತೀರ್ಮಾನಿಸಿ ಅವನ್ನು ತಿರಸ್ಕರಿಸಿ ಹೊಸ ದಾರಿ ಹುಡುಕಬೇಕಾಯಿತು. ಹಾಗೆ ಹೇಳುವುದಾದರೆ, ನಾನು ಕಂಡುಕೊಂಡಿರುವ ಈ ಹೊಸ ಹಾದಿ, ನನ್ನ ಅರಿವಿನ ಬೆಳಕಿನಲ್ಲಿ ಆರ್‌ಎಲ್‌ಎನ್-ಪರಂಪರೆಯ ಮುಂದುವರಿಕೆಯೇ ಹೊರತು ಬೇರೇನೂ ಅಲ್ಲ. ಈ ಶೋಧನೆಯ ದಿಶೆಯಲ್ಲಿ ಕೆಲವೊಂದು ಪ್ರಯೋಗಗಳನ್ನು ರೂಪಿಸಿ ಶೈಲಿಯನ್ನು ನಿರ್ಧರಿಸಿಕೊಂಡೆ. ಸ್ಥೂಲವಾಗಿ ಆ ಪ್ರಯೋಗಗಳಿವು :

೧. ಪ್ರೌಢಶಾಲಾಮಟ್ಟದ ಸಾಮಾನ್ಯ ಜ್ಞಾನವಿರುವ ಕುತೂಹಲಿ ವಾಚಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕವನ್ನು ಬರೆಯಲು ಉದ್ದೇಶಿಸಿದ್ದುದರಿಂದ ಅಂಥ ಶ್ರೋತೃಗಳ ಮುಂದೆ ಇದೇ ವಿಷಯದ ಮೇಲೆ ಭಾಷಣ ಮಾಡಿ ಅನುಭವ ಗಳಿಸುವುದು. ೨. ಕಿರುಲೇಖನಗಳನ್ನು ಬರೆದು ಅವರಿಗೆ ಓದಿ ಹೇಳಿ ಮತ್ತು ಅವರಿಂದ ಓದಿಸಿ ಕೇಳಿ ಅವರ ಟೀಕೆ ಟಿಪ್ಪಣಿಗಳನ್ನು ಸಂಗ್ರಹಿಸುವುದು. ೩. ಪತ್ರಿಕೆಗಳಲ್ಲಿಯೂ ಆಕಾಶವಾಣಿಯಲ್ಲಿಯೂ ಲೇಖನ/ಭಾಷಣ ಬಿತ್ತರಿಸಿ ಜನರ ಪ್ರತಿಕ್ರಿಯೆಗಳನ್ನು ಗಮನಿಸುವುದು. ೪. ವಿಜ್ಞಾನ ವಿಷಯಗಳಲ್ಲಿ, ಅಂತೆಯೇ ಸಾಹಿತ್ಯ ವಿಷಯಗಳಲ್ಲಿ, ಆಸಕ್ತರಾಗಿರುವ ವಿದ್ವಾಂಸರೊಡನೆ ವಿಚಾರವಿನಿಮಯ ನಡೆಸುವುದು. ೫. ಬರವಣಿಗೆ ಮುಂದೆ ಮುಂದೆ ಸಾಗುತ್ತಿದ್ದಂತೆ 'ದಾರಿ ಯಾವುದಯ್ಯಾ ವೈಕಂಠಕೆ' ಎಂಬ ಕುರುಡು ಗಲ್ಲಿತಲಪು-ಸನ್ನಿವೇಶ ಎದುರಾದಾಗಲೆಲ್ಲ ಅಭಿಜಾತ ಸಾಹಿತ್ಯವನ್ನು (classical literature) ಮೆಲುಕು ಹಾಕಿ ಹೊಸ ಹುರುಪು ಪಡೆಯುವುದು.

ಆಗ ಮನವರಿಕೆಯಾದ ಸೂತ್ರ : ಸಾಹಿತ್ಯರಹಿತ ವಿಜ್ಞಾನ ಬರಡು, ವಿಜ್ಞಾನರಹಿತ ಸಾಹಿತ್ಯ ಕುರುಡು. ಈ ಅನುಭವದಿಂದ ಮತ್ತು ತತ್ಪೂರ್ವ ಹಲವಾರು ವರ್ಷಗಳಿಂದ ನಾನು ಮಾಡುತ್ತ ಬಂದಿದ್ದ ಲೇಖನಕೃಷಿಯ ಬೆಂಬಲದಿಂದ ಸಜ್ಜಿತನಾಗಿ 'ಆಲ್ಬರ್ಟ್ ಐನ್‌ಸ್ಟೈನ್' ಪುಸ್ತಕ ಬರೆಯಲು ಕಳಕ್ಕೆ ಇಳಿದೆ.

ಬರವಣಿಗೆಯ ವಾಸ್ತವ ಪ್ರಕ್ರಿಯೆ ಖಂಡಿತ ಸುಲಭವಾಗಿರಲಿಲ್ಲ ; ಆದರೆ ವಿಶೇಷ ಆನಂದದಾಯಕವಾಗಿತ್ತು. ಭಾವ-ಭಾಷೆ ಸಾಮರಸ್ಯ ಸಾಧಿಸಲು ಮತ್ತು ಜೊತೆಯಲ್ಲೇ, ಪುಸ್ತಕದ ಸಾವಯವ ಏಕತೆ ಕಾಯ್ದಿಡಲು ಸತತ ಹೋರಾಟ ನಡೆಸಬೇಕಾಗಿದ್ದುದೇ ಇವೆರಡರ ಕಾರಣ. ವಿವರಗಳು ಇಲ್ಲಿ ಅಪ್ರಕೃತ. ಆದರೆ ಒಂದು ಮಾತು : 'ಹಲಗೆ ಬಳಪವ ಪಿಡಿಯದ' ದವನ ಕೃತಿ ಇದಲ್ಲ, ಬದಲು, 'ಕರಡು ಕಾಗದ ರೀಮುಗಟ್ಟಲೆ ಹರಡಿ, ಶಾಯಿಯ ಸೇರುಗಟ್ಟಲೆ ಸುರಿದು ರಚಿಸಿದ' ಪುಸ್ತಕವಿದು. ಟನ್ ತೂಕದ ರದ್ದಿ ಅದುರಿನಿಂದ ಗ್ರಾಮ್ ತೂಕದ ಶುದ್ಧ ಲೋಹವನ್ನು (ಪುಟ ೨೨೧) ಸಂಸ್ಕರಿಸಿ ಪಡೆವ ಈ ವಿಧಾನ ನನಗೆ ಪೂರ್ಣ ತೃಪ್ತಿ ನೀಡಿದೆ.

ಓದುಗರಲ್ಲಿ ಒಂದು ಅರಿಕೆ. ಪ್ರಧಾನವಾಗಿ ಐನ್‌ಸ್ಟೈನರ ಬಹು ವರ್ಣಮಯ ವ್ಯಕ್ತಿತ್ವದ. ಮತ್ತು ಆನುಷಂಗಿಕವಾಗಿ ಆಧುನಿಕ ಭೌತವಿಜ್ಞಾನದ ಸಂಕೀರ್ಣ ಪರಿಕಲ್ಪನೆಯ ಎರಕವನ್ನು ಕನ್ನಡದಲ್ಲಿ ಸಾಧಿಸುವಾಗ ಸ್ಪಷ್ಟ ಮತ್ತು ಆಕರ್ಷಕ ಸಂವಹನತೆ ಒದಗಲೋಸ್ಕರ ಇಲ್ಲಿ ಬಗೆ ಬಗೆಯ ವರಿಸೆಗಳನ್ನು—ಒಂದು ರೀತಿಯಲ್ಲಿ ಸರಕು ಮಾರಾಟದ ತಂತ್ರಗಳನ್ನು—ಪ್ರಯೋಗಿಸುವುದು ಅನಿವಾರ್ಯವಾಗಿದೆ. ಮೊದಲ ಓದಿಗೆ ಫಕ್ಕನೆ ಗಳ ಹಿಸುಕಿದಂತಾದರೆ ಅಥವಾ ಕಾಲೆಡಹಿದಂತಾದರೆ ದಯಮಾಡಿ ಸ್ವಲ್ಪ ಸಹನೆ ತಳೆದು, ಸಾಧ್ಯವಾದರೆ ಸ್ವಲ್ಪ ಕಾಲಾವಕಾಶಾನಂತರ, ಆ ಭಾಗವನ್ನು ಇನ್ನೊಮ್ಮೆ ಓದಬೇಕು. ಟಿಪ್ಪಣಿಗಳಲ್ಲಿರುವ ವಿವರಣೆಯನ್ನು ಗಮನಿಸಬೇಕು. ಈ ತೆರನಾದ ಪುನರಪಿ ಪ್ರಯತ್ನ ಖಾತ್ರಿ ಪ್ರಯೋಜನಕಾರಿ ಆಗುತ್ತದೆ—ಅಂದರೆ ಐನ್‌ಸ್ಟೈನ್ ಜೀವನದ ನವುರು ಮಗ್ಗುಲುಗಳನ್ನು ಚೆನ್ನಾಗಿ ಗ್ರಹಿಸಲು ನೆರವಾಗುತ್ತದೆ. ಸಾಕ್ಷಾತ್ ಎಡ್ಮಂಡ್ ಹಿಲರಿ ಮತ್ತು ತೇನ್‌ಸಿಂಗರಂಥ ಘಟಾನುಘಟಿಗಳಿಗಾದರೂ ಮೌಂಟ್ ಎವರೆಸ್ಟ್ ಆರೋಹಣ ಸಾಧ್ಯವಾದದ್ದು ಮಜಲು ಏರಿಕೆಯ ವಿಧಾನದಿಂದ ತಾನೇ !

೫

ನನ್ನ ಕಾಲೇಜ್ ದಿನಗಳ (೧೯೪೨-೪೭) ಎಲ್ಲ ಹುಡುಗರಂತೆ ನಾನು ಕೂಡ ಮೊದಲು ದೊಂಬರಾಟವಾಡಿದ್ದು ಪದ್ಯರಚನೆಯ ಮತ್ತು ಬರಿಸುವ ಮಂಟಪದಲ್ಲಿ; ಮುಂದೆ ಹುಚ್ಚಾಟವಾಡಿದ್ದು ಸಣ್ಣ ಕತೆಗಳ ಮಾಯಾಲೋಕದಲ್ಲಿ. ಆದರೆ ಬಲುಬೇಗ ಭ್ರಮನಿರಸನವಾಗಿ ನಾನು ಆ ಕ್ಷೇತ್ರಗಳಿಂದ ಕಂಬಿಕಿತ್ತು ಜನಪ್ರಿಯವಿಜ್ಞಾನವಾಙ್ಮಯ ಬರೆಯುವ ಹವ್ಯಾಸಕ್ಕೆ ಕೈಹಾಕಿದೆ (೧೯೪೯). ನನ್ನ ಮೊದಲ ಲೇಖನವೇ—ಆ ಹಿಂದಿನ ಕವನ ಕತೆಗಳಂತಲ್ಲದೇ—'ಕರ್ಮವೀರ' ದಲ್ಲಿ ಪ್ರಕಟಣೆಗೆ ಸ್ವೀಕೃತವಾಗಿತ್ತು ! ದೀಪಾವಳಿ ವಿಶೇಷಾಂಕಕ್ಕೆ ಬರೆಯಲು ಕರೆ ಬಂದಿತು. ಎಲ್ಲಕ್ಕೂ ಮಿಗಿಲಾಗಿ ಖುದ್ದು ಸಂಪಾದಕರೇ ನನಗೆ ಕಾಗದ ಬರೆದು, ಮುಂದೊಂದು ದಿನ ನನ್ನನ್ನು ಭೇಟಿಯಾಗಿ, ನನ್ನ ಪ್ರಯೋಗವನ್ನು ಹೊಗಳಿದರು. ಈ ಅಪ್ರಸಿದ್ಧ ಮತ್ತು ಅನಾಮಧೇಯ ತರುಣನನ್ನು (ಪ್ರಾಯ ೨೩) ಹೀಗೆ ಬೆನ್ನು ತಟ್ಟಿ ಹುರಿದುಂಬಿಸಿದವರು ಕನ್ನಡದ ಹಿರಿಯ ಪತ್ರಿಕೋದ್ಯಮಿ ಮತ್ತು ಪ್ರಸಿದ್ಧ ಲೇಖಕ ಶ್ರೀ ಪಾ. ವೆಂ. ಆಚಾರ್ಯರು. ಇವರು ಕನ್ನಡ ವಾಙ್ಮಯದಲ್ಲಿ, ಇತರ ಪ್ರಕಾರಗಳ ಜೊತೆಗೆ, ಜನಪ್ರಿಯ ವಿಜ್ಞಾನ ಪ್ರಕಾರದಲ್ಲಿಯೂ ಯಶಸ್ವಿಯಾಗಿ ಕೈಯಾಡಿಸಿದ್ದಾರೆ, ಮತ್ತು ಹೊಸ ಬರೆಹಗಾರರ ಪೀಳಿಗೆಯನ್ನೇ ಸೃಷ್ಟಿಸಿದ್ದಾರೆ. ಪಾವೆಂ ಅವರು ನನ್ನ ಕೋರಿಕೆಯನ್ನು ಮನ್ನಿಸಿ ಪ್ರಸಕ್ತ ಪುಸ್ತಕಕ್ಕೆ ಮುನ್ನುಡಿ ಬರೆದಿರುವುದು ನನಗೆ ತುಂಬ ಅಭಿಮಾನದ ಸಂಗತಿ.

ಈ ಪುಸ್ತಕದ ಪ್ರಕಾಶಕರಾಗಿರುವ ಶ್ರೀ ಡಿ. ವಿ. ಕೆ. ಮೂರ್ತಿಯವರು ಪ್ರಖರ ಚಿಂತನಶೀಲರು ಮತ್ತು ಯೋಗ್ಯ ಮಾರ್ಗದರ್ಶಕರು. ವಿಶ್ವಕವಿ ರವೀಂದ್ರನಾಥ ಠಾಕೂರರ ಜೊತೆ ಐನ್‌ಸ್ಟೈನ್ ನಡೆಸಿದ ಸಂಭಾಷಣೆಯ ಸಂಗ್ರಹಾನುವಾದ ಮಾಡುವಾಗ (ಪುಟ ೧೬೯) ನನಗೆ ಎದುರಾದ ಸಮಸ್ಯೆಗಳಿಗೆ ಇವರು ಯುಕ್ತ ಪರಿಹಾರ ಒದಗಿಸಿದ್ದಾರೆ. ಪುಸ್ತಕರಚನೆಯ ಉದ್ದಕ್ಕೂ ಇವರೊಂದಿಗಿನ ಒಡನಾಟದಿಂದ ಲಾಭ ಪಡೆದಿದ್ದೇನೆ.

ಶ್ರೀಮತಿ ಎಚ್. ಆರ್. ವಿಮಲ ಶ್ರದ್ಧೆಯಿಂದ ಹಸ್ತಪ್ರತಿಗಳನ್ನು ಬೆರಳಚ್ಚಿಸಿದ್ದಾರೆ. ಶ್ರೀ ಜಿ.ಎಚ್. ಕೃಷ್ಣಮೂರ್ತಿ ದಿನದಿನ ಗಳಿಗೆಗಳಿಗೆ ನನ್ನ 'ಕಣ್ಣ ಮುಂದೆ ನಿಂತಿ'ದ್ದು ಈ ಪುಸ್ತಕದ ಸುಂದರ ಹಾಗೂ ಕ್ಷಿಪ್ರ ಮುದ್ರಣಕ್ಕೆ ಕಾರಣರಾಗಿದ್ದಾರೆ. ಮೈಸೂರು ಪ್ರಿಂಟಿಂಗ್ ಅಂಡ್

ಪಬ್ಲಿಷಿಂಗ್ ಹೌಸಿನ ಕಾರ್ಮಿಕ ಬಂಧುಗಳ ನಿಷ್ಠಾಪೂರ್ವಕಸೇವೆಯನ್ನು ಮೆಚ್ಚುತ್ತೇನೆ.

'ಪರೀಕ್ಷಿದ್ರಾಜ ಮತ್ತು ನಿಂಬೆಹಣ್ಣು' ಕಥೆಯ ಧ್ವನ್ಯರ್ಥ ಮತ್ತು ಐನ್‌ಸ್ಟೈನರ ಪ್ರಸಿದ್ಧ ಹೇಳಿಕೆ 'ದೇವರು ಚತುರ, ಆದರೆ ನೀಚನಲ್ಲ' ಎಂಬುದರ ಸೂಚ್ಯಾರ್ಥ ನನಗೆ ಚೆನ್ನಾಗಿ ಮನವರಿಕೆ ಆದದ್ದು ಕೃಷ್ಣಮೂರ್ತಿಯವರ ಮತ್ತು ನನ್ನ ಸಂಪಾತಿದೃಷ್ಟಿಯನ್ನೂ ತಪ್ಪಿಸಿ ಈ ಪುಸ್ತಕದಲ್ಲಿ ಉಳಿದುಹೋಗಿರುವ ಕೆಲವು ಮುದ್ರಣ ದೋಷ ತಕ್ಷಕಗಳನ್ನು ಕಂಡಾಗ. ಓದುಗರು ಒಪ್ಪೋಲೆಯನ್ನು ಗಮನಿಸಬೇಕಾಗಿ ವಿನಂತಿ.

'ಆಲ್ಬರ್ಟ್ ಐನ್‌ಸ್ಟೈನ್' ಪುಸ್ತಕದ ಬರವಣಿಗೆ ಮತ್ತು ಪಾಠಭಾಗದ ಮುದ್ರಣ ಮತ್ತು 'ನನ್ನ ನುಡಿ'ಯ ಹಸ್ತಪ್ರತಿ ೧೯೭೯ರಲ್ಲಿಯೆ ಮುಗಿದದ್ದು ನನಗೊಂದು ವಿಧದ ಭಾವನಾತ್ಮಕ ಸಂತೃಪ್ತಿ ನೀಡಿದೆ. ಮಂಕುತಿಮ್ಮನ ಮಾತಿನಲ್ಲಿ 'ಜೀವವಿಂತಜ್ಞಾತಸೂತ್ರದಾಟದ ಬೊಂಬೆ, ಭಾವಿಸಾ ಸೂತ್ರಗಳ.' ಅವೇ ಸೂತ್ರಗಳ ಫಲವಾಗಿ ಈ ಪುಸ್ತಕ ೧೯೮೦ರಲ್ಲಿ ಪ್ರಕಟವಾಗಲಿದೆ.

'ಎನಗಿಂತ ಕಿರಿಯರಿಲ್ಲ'ವೆಂಬಂತೆ ಬೆಳೆದರೂ ಇವರಿಗಿಂತ ಹಿರಿಯರಿಲ್ಲವೆಂಬಂಥ ಎತ್ತರ ವೇರಿದ ದಾರ್ಶನಿಕ ವಿಜ್ಞಾನಿ ಐನ್‌ಸ್ಟೈನ್. "ದೇಹ ಮತ್ತು ಆತ್ಮ ಎರಡು ವಿಭಿನ್ನ ವಸ್ತುಗಳಲ್ಲ, ಬದಲು, ಒಂದೇ ವಸ್ತುವನ್ನು ಅರಿಯುವ ಎರಡು ವಿಭಿನ್ನ ಮಾರ್ಗಗಳು. ಇದೇ ರೀತಿ ಭೌತವಿಜ್ಞಾನ ಮತ್ತು ಮನೋವಿಜ್ಞಾನ ನಮ್ಮ ಅನುಭವಗಳನ್ನು ವ್ಯವಸ್ಥಿತ ಚಿಂತನೆಯ ಮೂಲಕ ಒಟ್ಟಾಗಿ ಸಂಯೋಜಿಸಲು ಎರಡು ವಿಭಿನ್ನ ಪ್ರಯತ್ನಗಳು ಮಾತ್ರ," ಎಂಬುದಾಗಿಯೂ "ರಾಜಕೀಯ ಒಂದು ಲೋಲಕ. ಅನಾಯಕತೆ ಮತ್ತು ದಬ್ಬಾಳಿಕೆ ನಡುವಿನ ಇದರ ತೊನೆದಾಟಗಳಿಗೆ ಉರುವಲು ಪೂರೈಕೆ ಆಗುವುದು ಅವಿಚ್ಛಿನ್ನವಾಗಿ ಪುನರುಜ್ಜೀವನಗೊಳಿಸಲ್ಪಡುತ್ತಿರುವ ಭ್ರಮೆಗಳಿಂದ," ಎಂಬುದಾಗಿಯೂ ನಿತ್ಯಸತ್ಯಗಳನ್ನು ಅರುಹಿದ ಐನ್‌ಸ್ಟೈನರ ಜೀವನ ಸಂದೇಶ ಮತ್ತು ಮಾನವ ಪ್ರೇಮ ಸರ್ವಜನಗ್ರಾಹ್ಯವಾಗಲಿ, ಜನಜೀವನ ಅರ್ಥಪೂರ್ಣವಾಗಲಿ ಎಂದು ಹಾರೈಸುತ್ತೇನೆ.

೩೧ ಡಿಸೆಂಬರ್ ೧೯೭೯

*   *   *

ಬುದ್ಧ, ಕ್ರಿಸ್ತ, ಶಂಕರ, ಬಸವಣ್ಣ, ಗಾಂಧಿ ಮೊದಲಾದ ದೃಷ್ಟಾರರು ಬಾಳಿ ಬೆಳಗಿದ ನೆಲವಿದು: 'ಬುವಿಯಿದು ಬರಿ ಮಣ್ಣಲ್ಲೋ!' ಜ್ಞಾನದ ಅಗೋಚರ ಅಜ್ಞಾತಕ್ಕೆ ಹನುಮಂತ-ಲಂಘಿಸಿ ನವ ದರ್ಶನ ಪಡೆಯಲು ಐನ್‌ಸ್ಟೈನರಿಗೆ ಪ್ರೇರಣೆ ನೀಡಿದ ಜೀವಂತ ವೇದಿಕೆ ಇದು. ಎಂದೇ ಈ ಮೂರನೆಯ ಸಂವರ್ಧಿತ ಆವೃತ್ತಿಯ ಶೀರ್ಷಿಕೆ *ಐನ್‌ಸ್ಟೈನ್ ಬಾಳಿದರಿಲ್ಲಿ*.

ಪುಸ್ತಕವನ್ನು ಗಣಕ-ಬೆರಳಚ್ಚಿಸಿದ ಕುಮಾರಿ ಸಿ. ಕೆ. ದೇವಿಕ, ಅಚ್ಚುಕರಡು ತಿದ್ದಿದ ಸೌ. ಜಿ.ಎ. ರುಕ್ಮಿಣಿಮಾಲಾ, ಪುಸ್ತಕದ ಮುದ್ರಣ ಸೌಂದರ್ಯಕ್ಕೆ ಕಾರಣರಾಗಿರುವ ಶ್ರೀ ರಾ. ವೆಂ. ಶ್ರೀನಿವಾಸಮೂರ್ತಿ, ಇವರ ಸುಪುತ್ರ ಶ್ರೀ ರಾ. ಶ್ರೀ. ಮೋಹನಮೂರ್ತಿ ಮತ್ತು ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್‌ನ ಕಾರ್ಮಿಕ ಬಂಧುಗಳು—ಸರ್ವರಿಗೂ ಆದರದ ನಮನಗಳು.

೩೧ ಡಿಸೆಂಬರ್ ೨೦೦೦

೮ 'ಅತ್ರಿ' ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತೀಪುರ
ಮೈಸೂರು ೫೭೦ ೦೦೯
ದೂರವಾಣಿ ೦೮೨೧ ೫೪೩೭೮೫

**ಜಿ. ಟಿ. ನಾರಾಯಣರಾವ್**

# ೧. ಸುಪ್ತ ಪ್ರತಿಭೆ

## ದಿಕ್ಸೂಚಿ ಸೂಚಿಸಿದ ದಿಕ್ಕು

ಬಾನಾಚೆಯಿಂ ವಿಶ್ವಸತ್ತ್ವ ತಾನಿಳಿದಿಳೆಗೆ
ನಾನೆನುವ ಚೇತನದಿ ರೂಪಗೊಂಡಿಹುದೋ ?
ನಾನೆನುವ ಕೇಂದ್ರದಿನೆ ಹೊರಟ ಸತ್ತ್ವದ ಪರಿಧಿ
ಬಾನಾಚೆ ಹಬ್ಬಿಹುದೊ ? ಮಂಕುತಿಮ್ಮ

ಯೆಹೂದ್ಯ ವಣಿಕರ ಅಲೆಮಾರಿ ಕುಟುಂಬವೊಂದು ಜರ್ಮನಿ ರಾಷ್ಟ್ರದ ವುರ್ಟೆನ್‌ಬರ್ಗ್ ರಾಜ್ಯದ ಉಲ್ಮ್‌ಪಟ್ಟಣದಲ್ಲಿ ನೆಲಸಿತ್ತು. ಹರ್ಮನ್ ಐನ್‌ಸ್ಟೈನ್ (೧೮೪೭-೧೯೦೨) ಮನೆಯ ಹಿರಿಯ. ಪೌಲೀನ್ (೧೮೫೮-೧೯೨೦) ಇವರ ಹೆಂಡತಿ, ಜೇಕಬ್ (೧೮೫೦-೧೯೧೦) ತಮ್ಮ. ಐನ್‌ಸ್ಟೈನ್ ಸಹೋದರರು ವಿದ್ಯುದ್ರಾಸಾಯನಿಕ ಕಾರ್ಖಾನೆಯೊಂದರ ಮಾಲಿಕರು. ಇದರ ತಾಂತ್ರಿಕಾಂಶಗಳ ನಿರ್ವಹಣೆ ತಮ್ಮನ ಹೊಣೆ, ವ್ಯಾಪಾರ ವಹಿವಾಟುಗಳ ಉಸ್ತುವಾರಿ ಅಣ್ಣನದು. ಹರ್ಮನ್ ಅಂಥ ವ್ಯವಹಾರಕುಶಲಿ ಏನೂ ಆಗಿರಲಿಲ್ಲ. ಮುಗ್ಧತೆಯ ಕಡೆಗೇ ಒತ್ತು ಜಾಸ್ತಿ. ಹೀಗಾಗಿ ಕಾರ್ಖಾನೆ ಪದೇ ಪದೇ ನಷ್ಟಕ್ಕೆ ಈಡಾಗುತ್ತಿತ್ತು. ಆದರೆ ಇವರ ಜೀವನಶ್ರದ್ಧೆಯಾಗಲಿ ಸಾಹಿತ್ಯಾಸಕ್ತಿಯಾಗಲಿ ಇದರಿಂದ ಬಾಧಿತವಾಗುತ್ತಿರಲಿಲ್ಲ.

ಪೌಲೀನ್ ವಿಶೇಷ ಸಾಮರ್ಥ್ಯವಂತ ಪ್ರಾಜ್ಞೆ. ಸಂಗೀತ, ಕಲೆ, ಸುಸಂಸ್ಕೃತ ಜೀವನ ಇವುಗಳಲ್ಲಿ ಅಪಾರ ಶ್ರದ್ಧೆ ಇರುವಾಕೆ. ಮನೆವೆಚ್ಚಕ್ಕೆ ಒದಗುತ್ತಿದ್ದ ರೊಕ್ಕ ಬಲು ಕಡಿಮೆ ಆಗಿದ್ದರೂ ಅಷ್ಟರಿಂದಲೇ ತೃಪ್ತಿ ತಳೆದು ಬದುಕಿಗೆ ಒಪ್ಪ ಓರಣ ತರುತ್ತಿದ್ದ ಕುಶಲಿ. ಮನೆಯಲ್ಲಿ ಹೆಚ್ಚು ಕಡಿಮೆ ಪ್ರತಿ ಸಂಜೆಯೂ ಸೇರುತ್ತಿದ್ದ ಸಂಗೀತಮೇಳದ ಕೇಂದ್ರ ವ್ಯಕ್ತಿ ಅಥವಾ ಪ್ರಧಾನಶ್ರುತಿ ಈಕೆಯೇ. ಜರ್ಮನ್ ಅಭಿಜಾತ (classical) ಸಂಗೀತಪ್ರಪಂಚದಲ್ಲಿ ವಿಹರಿಸುವುದು ಈ ಕಲಾಭಿಮಾನಿಗಳ ಪ್ರಿಯ ಹವ್ಯಾಸ.

ಜೇಕಬ್ ಒಬ್ಬ ಎಂಜಿನಿಯರ್. ಈ ವೃತ್ತಿಗೆಂದೇ ಶಿಕ್ಷಣ ಪಡೆದಾತ. ಅಮೂರ್ತ ಬೌದ್ಧಿಕ ಚಿಂತನೆಗಳಲ್ಲಿ ಹೆಚ್ಚಿನ ಒಲವು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ. ಇಂದಿನ ಪಟ್ಟಣಗಳಿಗೆ ಹೋಲಿಸಿದಾಗ ಅಂದಿನ ಉಲ್ಮ್‌ಪಟ್ಟಣ ವಿಸ್ತೃತ ಗ್ರಾಮದಂತಿತ್ತು. ಸರಳ ಶಾಂತಜೀವನ. ಐನ್‌ಸ್ಟೈನ್ ಕುಟುಂಬಕ್ಕೆ ಹೇಳಿಕೊಳ್ಳುವಂಥ ಸಿರಿವಂತಿಕೆ ಇರದಿದ್ದರೂ ಬದುಕಿನಲ್ಲಿ ನೆಮ್ಮದಿಗೆ ಏನೂ ಕೊರತೆ ಇರಲಿಲ್ಲ. ಕರ್ಮಠ ಯೆಹೂದ್ಯ ಸಂಪ್ರದಾಯವಾದಿಗಳಲ್ಲದ ಇವರು ಆ ಧರ್ಮದ ಸಾರವಾದ ಮಾನವೀಯತೆ, ಸಚ್ಚಾರಿತ್ರ್ಯ, ಕರ್ತವ್ಯಪರಾಯಣತೆ, ಜೀವನ ಮೌಲ್ಯಗಳ ಬಗ್ಗೆ ವಿಶ್ವಾಸ—ಇವನ್ನು ಹೀರಿ ಮೈಗೂಡಿಸಿಕೊಂಡು ಋಜುಜೀವನ ಬಾಳುತ್ತಿದ್ದರು.

ಹರ್ಮನ್ ಮತ್ತು ಪೌಲೀನ್ ಐನ್‌ಸ್ಟೈನ್ ದಂಪತಿಗಳ ಮೊದಲ ಕೂಸು ೧೮೭೯ ಮಾರ್ಚ್ ೧೪ರಂದು ಹುಟ್ಟಿತು. ಗಂಡು ಮಗು ಮನೆಗೆ ಹಬ್ಬ, ಮನಕ್ಕೆ ಮುದ ತಂದಿತ್ತು. ಮಗುವಿಗೆ ಆಲ್ಬರ್ಟ್ (ಐನ್‌ಸ್ಟೈನ್) ಎಂಬುದಾಗಿ ಹೆಸರಿಟ್ಟರು.

ಉಲ್ಮ್‌ಪಟ್ಟಣದ ವ್ಯವಹಾರದಲ್ಲಿ ಯಶಸ್ಸು ಕಾಣದ ಈ ವಣಿಕ ಕುಟುಂಬ ಮರುವರ್ಷ ನೆರೆ ರಾಜ್ಯ ಬವೇರಿಯಕ್ಕೆ ವಲಸೆ ಹೋಗಿ ಮ್ಯೂನಿಕ್ ನಗರದಲ್ಲಿ ನೆಲಸಿತು. ಕಾರ್ಖಾನೆಯ ಪಕ್ಕದಲ್ಲಿಯೇ ವಾಸಕ್ಕಾಗಿ ಎರಡು ಮನೆಗಳನ್ನು ಹರ್ಮನ್ ಮತ್ತು ಜೇಕಬ್ ಕುಟುಂಬಗಳು ಬಾಡಿಗೆಗೆ

ಹಿಡಿದುವು. ಪಟ್ಟಣದ ಮಂದನಡೆಗೆ ಒಗ್ಗಿ ಹೋಗಿದ್ದ ಇವರು ಈಗ ನಗರದ ಬಿರುಸು ಹೆಜ್ಜೆಗೆ ಹೊಂದಿಕೊಳ್ಳಬೇಕಾಗಿತ್ತು. ವಿಶೇಷ ತೊಂದರೆ ಏನೂ ಆಗಲಿಲ್ಲ. ಮನೆಯಲ್ಲಿಯ ಸಂಗೀತ ವಾತಾವರಣ ಈಗ ಹಿಂದಿಗಿಂತಲೂ ಹೆಚ್ಚು ಕಳೆಗಟ್ಟಿ ಬದುಕಿಗೆ ಅವಶ್ಯವಾದ ನೆಮ್ಮದಿ ಊಡುತ್ತಿತ್ತು. ಹಳೆ ಒಡಂಬಡಿಕೆಯ (Old Testament) ಪಠಣ ಮತ್ತು ಜರ್ಮನ್ ಅಭಿಜಾತ ಸಾಹಿತ್ಯದ ವಾಚನ ದೈನಂದಿನ ಸಂಜೆ ಕಾರ್ಯಕ್ರಮದ ಮುಖ್ಯ ಭಾಗಗಳೇ ಆಗಿದ್ದುವು.

ಅಣುಗ ಆಲ್ಬರ್ಟ್ ಕಣ್ತೆರೆದದ್ದು ಈ ಪರಿಸರದಲ್ಲಿ, ತಾಯಿ ನಲ್ಮೆಯಿಂದ ಕಟ್ಟಿ ಹೊರೆಯುತ್ತಿದ್ದ ಬೆಚ್ಚಗಿನ ಗೂಡಿನಲ್ಲಿ, ತಂದೆ ತಾಳ್ಮೆಯಿಂದ ನೋಡಿ ಹಿಗ್ಗುತ್ತಿದ್ದ ಇಚ್ಛೆ ಅರಿವ ಬೀಡಿನಲ್ಲಿ. ಈ ಮಗುವಿನಲ್ಲಿ ಬಾಲಬೃಹಸ್ಪತಿಯ ಯಾವ ಲಕ್ಷಣವೂ ಪ್ರಕಟವಾಗಲಿಲ್ಲ. ಇಷ್ಟೇ ಅಲ್ಲ. ವಯಸ್ಸಿಗೆ ಅನುಗುಣವಾಗಿ ಇವನ ಬುದ್ಧಿ ವಿಕಾಸಗೊಳ್ಳುತ್ತಿದ್ದಂತೆಯೂ ತೋರಲಿಲ್ಲ. ಈತ ಮಾತು ಕಲಿತದ್ದು ತೀರ ತಡವಾಗಿ. ಇತರ ಪುಟಾಣಿಗಳೊಡನೆ ಕೂಡಿ ಆಡಲು ಇವನೆಂದೂ ಮುಂದಾಗಲಿಲ್ಲ.

ಮಗುವಿಗೆ ನಾಲ್ಕು ಅಥವಾ ಐದು ವರ್ಷ ವಯಸ್ಸಾಗಿದೆ. ಒಂದು ದಿನ ಶೀತಜ್ವರದಿಂದ ನರಳುತ್ತ ಮಂಕಾಗಿ ಮುದ್ದೆಯಾಗಿ ನರಳುತ್ತ ಮಲಗಿದೆ. ಔಷಧಿ ತರಲೆಂದು ಅಂಗಡಿಗೆ ಹೋಗಿದ್ದ ಹರ್ಮನ್ ಅಲ್ಲೊಂದು ದಿಕ್ಸೂಚಿ (compass) ಕಂಡಿದ್ದಾರೆ. ಸರಿ. ಅದನ್ನು ಖರೀದಿಸಿ ತಂದು ಮಗನಿಗೆ ಕೊಟ್ಟಿದ್ದಾರೆ. ಸುಸ್ತು ಹೊಡೆದು ಮುದುರಿ ಕುಸಿದಿದ್ದ ಮಗು ನಾಜೂಕಾದ ಪೆಟ್ಟಿಗೆ ಕಂಡು ಎದ್ದು ಕುಳಿತಿದೆ. ಅದರೊಳಗೆ ಏನು ವಿಚಿತ್ರ ! ವಿಲಿವಿಲಿ ಒದ್ದಾಡುತ್ತಿರುವ, ಸೆರೆಯಿಂದ ಬಿಡಿಸಿಕೊಳ್ಳಲು ತವಕಿಸುತ್ತಿರುವ, ಯಾವ ಬಾಹ್ಯಕಾರಕದ (agent) ಪ್ರಭಾವವೂ ಇಲ್ಲದೆ ಚಡಪಡಿಸುತ್ತಿರುವ ಸೂಜಿ. ಪೆಟ್ಟಿಗೆಯನ್ನು ಹೇಗೆಯೇ ಇಟ್ಟರೂ ಎತ್ತ ಕಡೆಗೇ ತಿರುಗಿಸಿದರೂ ಸೂಜಿ ಮಾತ್ರ ಜಪ್ಪಯ್ಯ ಎಂದು ಪಟ್ಟು ಬಿಡದೆ ಒಂದೇ ದಿಕ್ಕಿಗೆ ಗುರಿಮಾಡಿ ನಿಲ್ಲುತ್ತಿದೆ.

"ಅಪ್ಪಾ ! ಸೂಜಿ ಯಾವಾಗಲೂ ಒಂದೇ ದಿಕ್ಕಿಗೆ ತಿರುಗಿರುವುದರ ಕಾರಣವೇನು ?" ಮಗುವಿನ ಕಣ್ಣುಗಳಲ್ಲಿ ವಿಸ್ಮಯದ ಕಾಂತಿ.

"ನಿನಗದು ಅರ್ಥವಾಗದು ಮರಿ. ಭೂಕಾಂತತ್ವ (geomagnetism) ಈ ಸೂಜಿಯನ್ನು ಎಳೆಯುತ್ತಿರುವುದರಿಂದ."

"ಭೂ-ಭೂ-ಭೂ-ಏನಪ್ಪ ನೀನು ಹೇಳಿದ್ದು ?"

"ನಿನಗದರ ಗೊಡವೆ ಬೇಡ ಆಲ್ಬರ್ಟ್. ಕಣ್ಣಿಗೆ ಕಾಣದ ಒಂದು ವಿಶಿಷ್ಟ ಬಲದ ವಿಚಿತ್ರ ಹೆಸರದು. ನೀನು ದಿಕ್ಸೂಚಿಯೊಡನೆ ಆಡುತ್ತಿರು."

"ಆದರೆ ಸೂಜಿ ಏಕೆ ಹೀಗೆ ವರ್ತಿಸುತ್ತದೆ ?"

ಮಗುವಿನ ಕೊನೆಗಾಣದ 'ಏಕೆ'ಗಳಿಗೆ ಸರಿ ಉತ್ತರ ಹೇಳಿ ಅದರಿಂದ 'ಸರಿ' ಎನ್ನಿಸಿಕೊಳ್ಳಬಲ್ಲ 'ಅಪ್ಪ'ಗಳೆಲ್ಲಿದ್ದಾರೆ ?

ಈ ಪ್ರಥಮ ವಿಸ್ಮಯಾನುಭವವನ್ನು ಕುರಿತು ಆಲ್ಬರ್ಟ್ ಐನ್‌ಸ್ಟೈನ್ ತಮ್ಮ ಅರುವತ್ತೇಳನೆಯ ವಯಸ್ಸಿನಲ್ಲಿ (೧೯೪೬) ಬರೆದ "ಆತ್ಮಚರಿತ್ರೆಯ ಟಿಪ್ಪಣಿಗಳು" ಎಂಬ ಲೇಖನದಲ್ಲಿ ಪ್ರಸ್ತಾವಿಸಿದ್ದಾರೆ : "ಆ ಸೂಜಿ ಇಂಥ ನಿರ್ಧಾರಿತ ರೀತಿಯಲ್ಲಿ ವರ್ತಿಸಿತೆಂಬುದು ಪರಿಕಲ್ಪನೆಗಳು ನೆಲೆಗೊಂಡಿರುವ ಮತ್ತು ಪ್ರಜ್ಞೆಗೆ ನಿಲುಕದ ಪ್ರಪಂಚದಲ್ಲಿ ಸ್ಥಳ ಪಡೆಯಬಲ್ಲ (ನೇರ 'ಸ್ಪರ್ಶ'ಕ್ಕೆ ಸಂಬಂಧಿಸಿದ ಪರಿಣಾಮ) ಘಟನೆಗಳ ಸ್ವಭಾವದೊಡನೆ ಹೊಂದಿಕೊಳ್ಳಲೇ ಇಲ್ಲ. ಆ ಅನುಭವ ನನ್ನ ಮೇಲೆ ಗಾಢವಾದ ಮತ್ತು ಚಿರಕಾಲ ಉಳಿಯಬಲ್ಲ ಮುದ್ರೆ ಒತ್ತಿತು ಎಂಬುದು ಇನ್ನೂ

ನೆನಪಿದೆ. ಅಥವಾ ಕೊನೆಯ ಪಕ್ಷ ನೆನಪಿದೆ ಎಂದು ನಂಬಿದ್ದೇನೆ. ಘಟನೆಗಳ ಹಿಂದೆ ಆಳದಲ್ಲಿ ಹುದುಗಿಕೊಂಡಿರುವ ಏನೋ ಒಂದು ಇದ್ದಿರಲೇಬೇಕು."

ಐನ್‌ಸ್ಟೈನ್ ದಂಪತಿಗಳಿಗೆ ೧೮೮೧ರಲ್ಲಿ, ಅಂದರೆ ಅವರು ಮ್ಯೂನಿಕ್ಕಿಗೆ ಹೋಗಿ ನೆಲಸಿದ ಮರುವರ್ಷ, ಅವರ ಎರಡನೆಯ ಮಗು ಹುಟ್ಟಿತು—ಆಲ್ಬರ್ಟನಿಗೆ ಆಡಲು ಪುಟಾಣಿ ತಂಗಿ, ಮಾಜಾ (೧೮೮೧-೧೯೫೧) ಅಣ್ಣನ ಅವಳಿಯಂತೆ ಪುಟ್ಟ ಮಾಜಾ ಬೆಳೆದಳು.

## ತಸ್ಕರ ಶೋಧನೆ

ಒಂದು ಪ್ರಶ್ನೆಯನುತ್ತರಿಸಿದೆನೆಂದರೆ
ಮತ್ತೊಂದು ಪ್ರಶ್ನೆಯ ಥಟ್ಟನೆ ಕೇಳುವೆ
ಅದಕೆ ಉತ್ತರವಿತ್ತು ತೃಪ್ತಿ ಪಡಿಸಿದರೆ
ಬೇರೊಂದನೆ ಕೇಳಿ ದಂಗುಬಡಿಸುವೆ
ನೀನು ಕಠಿಣ ಪರೀಕ್ಷಕ ಸದಾಶಿವಗುರು

ಎಸ್. ವಿ. ಪರಮೇಶ್ವರಭಟ್ಟ

ಆರು ವರ್ಷದ ಆಲ್ಬರ್ಟನನ್ನು ಶಾಲೆಗೆ ಸೇರಿಸಿದರು (೧೮೮೫). ಇವನಿಗೆ ಮಾತು ಕಡಿಮೆ. ಸತ್ಯನಿಷ್ಠ. ಸರೀಕರೊಡನೆ ಬೆರೆಯುತ್ತಿರಲಿಲ್ಲ. ಆಟವಂತೂ ಬಲುದೂರ. ಹೀಗಾಗಿ ಅವರ ದೃಷ್ಟಿಯಲ್ಲಿ ಇವನೊಬ್ಬ 'ಅಜ್ಜಯ್ಯ.' ತರಗತಿಯ ಉಕ್ಕಿನ ಶಿಸ್ತು ಇವನ ಕತ್ತು ಹಿಸುಕುತ್ತಿತ್ತು. ಪಾಠ ಪ್ರವಚನಗಳ ವಿಧಾನವೇನು ? ತರಗತಿಯೊಂದು ಮಿಲಿಟರಿ ಕವಾಯತಿರಂಗ. ವಿದ್ಯಾರ್ಥಿಗಳು ಅಲ್ಲಿಯ ಮೂಕಯೋಧರು. ಕೀಲುಗೊಂಬೆಗಳು. ಅಧ್ಯಾಪಕನೇ ದಂಡನಾಯಕ. ಕಲಿಕೆ ಎಂದರೇನು ? ಪಠ್ಯಪುಸ್ತಕಗಳನ್ನು ಉರುಹೊಡೆಯುವುದು ಮತ್ತು ದಂಡನಾಯಕ ಕೇಳಿದ ಪ್ರಶ್ನೆಗಳಿಗೆ ದಿಢೀರ್ ಉತ್ತರ ಒಪ್ಪಿಸುವುದು. ಒಂದು ಪ್ರಶ್ನೆ, ಒಂದು ಉತ್ತರ—ಇದು ಅಲ್ಲಿಯ ವ್ಯವಹಾರ ನಿಯಮ. ಅತಿ ಕ್ಷಿಪ್ರವಾಗಿ ತಾರಸ್ಥಾಯಿಯಲ್ಲಿ ಅರಚುವಾತನೇ ಸುಟಿ ವಿದ್ಯಾರ್ಥಿ. ಇಂಥ ಕಡ್ಡಾಯದ ತುರ್ತು ಕಸಾಯಿಖಾನೆಯಲ್ಲಿ ಕುತೂಹಲ ಮೊದಲ ಬಲಿ ಆಗುವುದು ನಿರೀಕ್ಷಿತವೇ. ಅಲ್ಲಿ ಆಲ್ಬರ್ಟ್ ಕುರಿಮರಿಯಂತೆ ನವೆಯುತ್ತಿದ್ದ. ಅವನ ಆಸಕ್ತಿ ಒಂದಿಷ್ಟೂ ಕುದುರಲಿಲ್ಲ.

"ಆತ್ಮ ಚರಿತ್ರೆ"ಯಲ್ಲಿಯ ಟಿಪ್ಪಣಿ : "ಆಧುನಿಕ ಬೋಧನ ವಿಧಾನಗಳು ಅನ್ವೇಷಣೆಯ ಸುಕುಮಾರ ಕುತೂಹಲವನ್ನು ಇನ್ನೂ ತುಳಿದಪ್ಪಳಿಸದಿರುವುದೊಂದು ಪವಾಡವೇ ಸೈ. ಕೋಮಲವಾದ ಈ ಪುಟ್ಟ ಸಸಿ ಅರಳಲು ಉತ್ತೇಜನೆಯ ಜೊತೆಗೆ ಅತ್ಯವಶ್ಯವಾದದ್ದು ಮುಕ್ತ ಪರಿಸರ. ಇದಿಲ್ಲದಿದ್ದರೆ ಸಸಿ ಕಮರಿ ನಶಿಸಿಹೋಗುವುದು ದಿಟ. ನೋಡುವ ಹಾಗೂ ಅರಸುವ ಕೆಲಸದಲ್ಲಿಯ ಸಂತೋಷವನ್ನು ಕಡ್ಡಾಯ ಕ್ರಮಗಳಿಂದ ಮತ್ತು ಕರ್ತವ್ಯಪ್ರಜ್ಞೆಯ ಗಿಡಿತದಿಂದ ಪ್ರೇರಿಸುವುದು ಸಾಧ್ಯವೆಂದು ಭಾವಿಸುವುದು ಶುದ್ಧಾಂಗ ತಪ್ಪು."

ತರಗತಿಯ ಶ್ಮಶಾನ ಮೌನ. ದಂಡನಾಯಕ ಹುಕುಂ ಚಾಲೂ ಮಾಡಿದ, "ಈ ಹುಡುಗ ಶತದಡ್ಡ. ಅತ್ಯಂತ ಸರಳ ವಿಷಯಗಳನ್ನೂ ಕಲಿಯಲಾರ. ಆಲ್ಬರ್ಟ್ ! ನಿನ್ನನ್ನೇ ಕುರಿತು ನಾನು ಹೇಳುತ್ತಿರುವುದು. ನಾನು ಈಗ ತಾನೇ ಕೇಳಿದ ಪ್ರಶ್ನೆಗೆ ಒಡನೆ ಉತ್ತರ ಬೊಗಳು, ಹೂಂ."

ಹುಡುಗ ಮೂಕನಾಗಿದ್ದ. ವಿದ್ಯಾರ್ಥಿಗಳ ಗೇಲಿಗೆ ಗ್ರಾಸವಾಗಿದ್ದ. ಆದರೆ ಕಟುಕ ಶಿರೋಮಣಿಯ ಮಾರಕಾಸ್ತ್ರಕ್ಕೆ ಅಂಜಿ ಅವರು ಮೌನ ತಳೆದಿದ್ದರು. ಹೆದರಿದ ಹುಡುಗನ ನಿರುತ್ತರ ಸ್ಥಿತಿಯನ್ನು ದಂಡನಾಯಕ ಅವಿಧೇಯತೆ, ಧಾರ್ಷ್ಟ್ಯ ಎಂಬುದಾಗಿ ಬಗೆದ. ಕ್ಷಣಕ್ಷಣ ಇವನ


ಹರ್ಮನ್
೧೮೪೭-೧೯೦೨
ವಿ. ಪಾಲೀನ್ ಕೋಚ್
೧೮೫೮-೧೯೨೦
ಮಾಜ
೧೮೮೧-೧೯೫೧
ವಿ. ಪಾಲ್ ವಿಂಟೆಲರ್
ಆಲ್ಬರ್ಟ್
೧೮೭೯-೧೯೫೫
ವಿ.೧ ಮಿಲೇವ ಮಾರಿಕ್
೧೮೭೫-೧೯೪೮
(ವಿ.೧ ಮ್ಯಾಕ್ಸ್ ಲೋವೆಂತಾಲ್)
ವಿ.೨ ಎಲ್ಸಾ ಐನ್‌ಸ್ಟೈನ್ ಲೋವೆಂತಾಲ್
೧೮೭೬-೧೯೩೬
ಲಿಸರ್ಲ್
೧೯೦೨- ?
ಎಡುವರ್ಡ್
೧೯೧೦-೬೫
ಹ್ಯಾನ್ಸ್ ಆಲ್ಬರ್ಟ್
೧೯೦೪-೭೩
ವಿ.೧ ಫ್ರೀಡಾ ನೆಕ್ಟ್
೧೮೯೫-೧೯೫೮
ವಿ.೨ ಎಲಿಝಬೆತ್
ರೊಬೋಝ್
೧೯೦೨-೯೫
ಇಲ್ಸೆ
೧೮೯೭-೧೯೩೪
ವಿ. ರೂಡಾಲ್ಫ್
ಕೇಯ್ಸರ್
ಮಾರ್ಗಟ್
೧೮೯೯-೧೯೮೬
ವಿ./ವಿಚ್ಛೇ. ಡ್ಮಿಟ್ರೀ
ಮಾರಿಯನಾಫ್
ಕ್ಲೌಸ್
೧೯೩೨-೩೮
ಬರ್ನ್ಹಾರ್ಡ್ ಸೀಸರ್
೧೯೩೦-
ವಿ. ಡಾರಿಸ್ ಆ್ಯಶ್ವರ್
೧೯೩೦-
ಈವ್‌ಲಿನ್
೧೯೪೧-
ವಿ./ವಿಚ್ಛೇ.
ತಾಮಸ್
೧೯೫೫-
ವಿ. ಕ್ಯಾತರೀನ್ ಚಾಂಗ್
ಪಾಲ್
೧೯೫೮-
ವಿ. ಕ್ಯಾಸ್ಸಂಡ್ರ
ಟೆಡ್ಡಿ
೧೯೬೦ (?)-
ವಿ.
ಮಿರಾ
ವಿ./ವಿಚ್ಛೇ.
ಚಾರ್ಲ್ಸ್
೧೯೭೧ (?)-
ಎಡುವರ್ಡ್, ಮೈಕೇಲ್,
ಲಿಲಿ
ಮ್ಯಾಕ್ಸ್,
ಸ್ಯಾಮ್ಯುಯೆಲ್ ಮತ್ತು ಸೈಮನ್
(ಅವಳಿಗಳು)
ವಿ. = ವಿವಾಹ, ವಿಚ್ಛೇ. = ವಿವಾಹ ವಿಚ್ಛೇದನ





ಆಲ್ಬರ್ಟ್ ಐನ್‌ಸ್ಟೈನರ ತಂದೆ ಹರ್ಮನ್ ಮತ್ತು ತಾಯಿ ಪೌಲೀನ್



ತಂಗಿ ಮಾಜಾ ಜೊತೆ ಆಲ್ಬರ್ಟ್ (೧೮೯೩)



ಹದಿಹರಯದ ಆಲ್ಬರ್ಟ್ (೧೮೯೩)

ಮುಸುಡಿನ ರಂಗೇರುತ್ತಿತ್ತು ಸಿಟ್ಟಿನಿಂದ. ಕೊನೆಗೊಮ್ಮೆ ಅಬ್ಬರಿಸಿಯೇ ಬಿಟ್ಟ, "ಆಲ್ಬರ್ಟ್ ! ನೀನಿಲ್ಲಿಂದ ತೊಲಗಿಯೇ ಹೋಗು."

ಸದ್ಯ ಪೆಟ್ಟು ಕುಟ್ಟಲಿಲ್ಲ, ಬಚಾವ್ ! ಒಳಗಿನ ಅಸಹನೀಯ ಬೇಗೆಗಿಂತ ಹೊರಗಿನ ಶಾಂತ ಪರಿಸರ ಈ ಮಗುವಿಗೆ ಸಹ್ಯವಾಯಿತು, ಪ್ರಿಯವಾಯಿತು ಕೂಡ.

ಆಲ್ಬರ್ಟ್ ಎಂದೂ ಅವಿಧೇಯನಾಗಿರಲಿಲ್ಲ. ಆದರೆ ಯಾವುದೇ ಪ್ರಶ್ನೆಯನ್ನು ಅರ್ಥವಿಸಿ ಅದಕ್ಕೆ ಸಮರ್ಪಕ ಉತ್ತರವನ್ನು ಮನಸ್ಸಿನಲ್ಲಿ ರೂಪಿಸಿ ಯೋಗ್ಯ ಭಾಷೆಯಲ್ಲಿ ಹೇಳಲು ಇವನಿಗೆ ಕಾಲಾವಕಾಶ ಬೇಕಾಗುತ್ತಿತ್ತು.

"ವಿದ್ಯಾರ್ಥಿಯಾಗಿ ನಾನು ವಿಶೇಷ ಚುರುಕಾಗಿಯೂ ಇರಲಿಲ್ಲ, ಮಡೆಯನಾಗಿಯೂ ಇರಲಿಲ್ಲ. ನನ್ನ ಪ್ರಧಾನ ದೌರ್ಬಲ್ಯವಿದ್ದದ್ದು ಸ್ಮರಣಸಾಮರ್ಥ್ಯದಲ್ಲಿ, ಅದೂ ಪದಗಳನ್ನು ಹಾಗೂ ಪಠ್ಯಗಳನ್ನು ಕುರಿತಂತೆ . . . ಸ್ವಾಧ್ಯಾಯದಿಂದಲೇ ಕಲಿತೆ," ಎಂಬುದಾಗಿ ೧೯೫೫ರಲ್ಲಿ ಬರೆದರು.

ಶಾಲೆಯ ಪಾಠಪ್ರವಚನ ಇವನಿಗೆ ಸುತರಾಂ ಹಿಡಿಸಲಿಲ್ಲ. ಪಟಾಲಮ್ಮಿನ ದೈಹಿಕ ಕವಾಯತಿಗೂ ತರಗತಿಯ ಮಾನಸಿಕ ದೊಂಬರಾಟಕ್ಕೂ ನಿಕಟ ಸಾಮ್ಯವಿದೆ. ಎರಡರ ತಳಹದಿಯೂ ಕ್ರೌರ್ಯಸಹಿತವಾದ ಶಿಸ್ತು ಎಂಬುದಾಗಿ ಇವನು ಭಾವಿಸಿದ್ದ. ಮನೆಯ ಮುಕ್ತ ವಾತಾವರಣ ಮತ್ತು ನಿಸರ್ಗದ ಸ್ವತಂತ್ರ ಆದರೂ ಕ್ರಮಬದ್ಧ ವರ್ತನೆ ಈ ತರಹದ ನೀರಸ ಶಿಸ್ತಿನಿಂದ ಬಂಧಿತವಾಗಿಲ್ಲ ಎಂದೂ ಇವನಿಗೆ ಅನ್ನಿಸುತ್ತಿತ್ತು.

ಎಂಟು ವರ್ಷದ ಆಲ್ಬರ್ಟ್ ತಂದೆಯನ್ನು ಗಂಭೀರವಾಗಿ ಪ್ರಶ್ನಿಸಿದ, "ನಾನೇಕೆ ಶಾಲೆಗೆ ಹೋಗಬೇಕು ?"

"ಏನು ? ಅಜ್ಞಾನಿಯಾಗಿ ಬಾಳಬೇಕೆಂದಿರುವೆಯಾ ?"

"ಅಜ್ಞಾನಿ ಎಂದರೇನರ್ಥ ?"

ಪೌಲೀನ್ ನಕ್ಕು ನುಡಿದರು, "ಹರ್ಮನ್ ! ನೀನೆಂದೂ ಆಲ್ಬರ್ಟನನ್ನು ಪ್ರಶ್ನೆ ಕೇಳುವ ಸ್ಪರ್ಧೆಯಲ್ಲಿ ಸೋಲಿಸಲಾರೆ. ನನ್ನ ಹಾಡುಗಾರಿಕೆ ಮಾತ್ರ ಅವನನ್ನು ಸಮಾಧಾನ ಪಡಿಸಬಲ್ಲದು."

ಮಗುವಿನ ಮೃದು ತಲೆ ನವಿರನ್ನು ತಾಯಿ ನವುರಾಗಿ ನೇವರಿಸುತ್ತ ನಯವಾಗಿ ಹಾಡತೊಡಗಿದರು. ಆದರೆ ಇವನು ಸುಮ್ಮನಾಗಲಿಲ್ಲ. ತಾಯಿಗೇ ಪ್ರಶ್ನೆ ಎಸೆದ, "ಅಮ್ಮಾ ! ಪ್ರಶ್ನೆ ಕೇಳುವುದು ತಪ್ಪೇ ?"

"ಭಲೆ ! ಪುನಃ ಅದೇ ಚಾಳಿ ! ನಿನ್ನ ಹಾಡಿಗೂ ಈ ಪೋರ ಮಣಿಯಲಿಲ್ಲ," ಹರ್ಮನ್ನರ ಕೊಂಕುನುಡಿ.

"ಮಗೂ, ಪ್ರಶ್ನೆ ಕೇಳುವುದು ಖಂಡಿತ ತಪ್ಪಲ್ಲ. ಆದರೆ ಇತರರನ್ನು ಲೇವಡಿ ಮಾಡಲು ಇಲ್ಲವೇ ಅಪಮಾನಗೊಳಿಸಲು ಮಾತ್ರ ಪ್ರಶ್ನೆ ಹಾಕಕೂಡದು."

"ನಾನೆಂದೂ ಹಾಗೆ ಮಾಡಿಲ್ಲ, ಮಾಡಲಾರೆ. ನನಗೆ ತಿಳಿಯದ್ದು ಇಷ್ಟೊಂದು ಇರುವಾಗ ಇದನ್ನೆಲ್ಲ ತಿಳಿಯಲಿಕ್ಕಾಗಿ ಮಾತ್ರ ಪ್ರಶ್ನೆ ಕೇಳುತ್ತೇನೆ, ಬೇರೆ ಕಾರಣವಿಲ್ಲ. ತಿಳಿಯಬೇಕೆಂದು ಆಶಿಸುವುದೂ ತಪ್ಪೇ ?"

"ಖಂಡಿತ ತಪ್ಪಲ್ಲ. ಇಂಥ ತಿಳಿವಳಿಕೆ ಗಳಿಸಬೇಕೆಂದೇ ನಿನ್ನನ್ನು ಶಾಲೆಗೆ ಕಳಿಸುತ್ತಿದ್ದೇವೆ. ಆದರೆ ನೀನು ಶಾಲೆಗೇ ಹೋಗುವುದಿಲ್ಲವೆಂದು ಹಠ ಹಿಡಿದಿದ್ದೀಯ ?"

"ಇಲ್ಲ ಇಲ್ಲ. ಅಲ್ಲಿ ಪ್ರಶ್ನೆ ಕೇಳಿದರೆ ಹೊಡೆಯುತ್ತಾರೆ, ಅಪಮಾನಿಸುತ್ತಾರೆ. ಎಂದೂ ಉತ್ತರ

ಹೇಳುವುದಿಲ್ಲ. ನನಗೆ ಶಾಲೆ ಎಂದರೆ ಹೆದರಿಕೆ. ಅದೊಂದು ದೊಡ್ಡ ಉಕ್ಕಿನ ಕೋಟೆ. ಉಪಾಧ್ಯಾಯ ಅದರ ಕೊತವಾಲ." ಮಗುವಿನ ಸಾತ್ತ್ವಿಕ ರೋಷ ಉಕ್ಕೇರಿತ್ತು.

ಆಲ್ಬರ್ಟ್ ಹೋಗುತ್ತಿದ್ದ ಶಾಲೆ ಮ್ಯೂನಿಕ್ಕಿನಲ್ಲಿ ಶಿಸ್ತು ದಕ್ಷತೆಗಳಿಗೆ ಒಳ್ಳೆಯ ಹೆಸರು ಗಳಿಸಿತ್ತು. ಅದು ಕ್ಯಾತೊಲಿಕ್ ಕ್ರಿಶ್ಚಿಯನರ ಶಾಲೆ. ಹೀಗಾಗಿ ಅದರ ಅಧಿಕಸಂಖ್ಯಾತ ವಿದ್ಯಾರ್ಥಿಗಳು ಅದೇ ಕೋಮಿನವರು. ನಿಜಸಂಗತಿ ಏನೆಂದರೆ ಆಲ್ಬರ್ಟ್ ಒಬ್ಬನೇ ಅಲ್ಲಿದ್ದ ಯೆಹೂದ್ಯ ವಿದ್ಯಾರ್ಥಿ. ಇದರ ಅರಿವು ಆಗ ಇವನಿಗೆ ಮೂಡಿರಲಿಲ್ಲ. ಶಾಲೆಯಲ್ಲಾದರೂ ಪ್ರಕಟಿತವಾಗಿ ಈ 'ಮತಭೇದ' ಪ್ರಜ್ಞೆಯನ್ನು ಮಕ್ಕಳ ಮನಸ್ಸಿಗೆ ಗಿಡಿಯುತ್ತಿದ್ದರೆಂದು ಹೇಳಲುಬಾರದು. ಆದರೆ ಜಾತಿಭೇದಗರಳದ ಹರಡಿಕೆಗೆ ಜನ ತಿಳಿದೊ ತಿಳಿಯದೆಯೊ ಅನುಸರಿಸುವ ಪ್ರಚ್ಛನ್ನ ವಿಧಾನಗಳು ಹಲವು ಹನ್ನೊಂದು. ಇಂಥ ಒಂದು ಸನ್ನಿವೇಶ ಆ 'ತುರಂಗಶಾಲೆ'ಯಲ್ಲಿ ಒಮ್ಮೆ ತಲೆದೋರಿತು.

ಒಮ್ಮೆ ಅಧ್ಯಾಪಕ ತರಗತಿಗೆ ಒಂದು ದೈತ್ಯ ಮೊಳೆ ತಂದ. ಅದರ ಭೀಷಣತೆಯನ್ನು ವಿವರಿಸುವ ಭರಾಟೆಯಲ್ಲಿ, "ನಮ್ಮ ಜೀಸಸ್ ಕ್ರೈಸ್ತನನ್ನು ಶಿಲುಬೆಗೇರಿಸಿ ಆತನ ಕೈಕಾಲುಗಳಿಗೆ ಜಡಿದ ಮೊಳೆಗಳು ಈ ಮಾದರಿಯವು," ಎಂದು ಅಭಿನಯಪೂರ್ವಕವಾಗಿ ತೋರಿಸಿದ. ಈ ಹೇಯ ಕೃತ್ಯವನ್ನು ಎಸಗಿದವರು ಯೆಹೂದ್ಯರೆಂಬುದು ಆತನ ಇಂಗಿತ. ಬಹುಶಃ ಹೆಚ್ಚಿನ ಹುಡುಗರಲ್ಲಿಯೂ ಇದೇ ಭಾವನೆ ಧ್ವನಿಸಿರಬಹುದು. ಮನೆಮನೆಯಲ್ಲಿ ಮಗುಮಗುವಿಗೆ 'ಆಪ್ಯಾಯಮಾನ'ವಾಗಿ ಊಡುವ 'ಅಮೃತ'ವೆಂದರೆ ಪರಮತ ದ್ವೇಷ ಮತ್ತು ಸ್ವಮತವ್ಯಾಮೋಹ. ಎಂದ ಮೇಲೆ ಪ್ರತಿಯೊಂದು ಮಗುವೂ ಇತರ ಎಲ್ಲ ಮಕ್ಕಳನ್ನೂ ನೋಡುವುದು ಈ ಬಣ್ಣಗಾಜಿನ ಮೂಲಕವೇ ತಾನೇ. ಸುಮಾರು ಇಪ್ಪತ್ತು ಶತಮಾನಗಳ ಹಿಂದೆ ನಡೆಯಿತೆನ್ನಲಾದ ಅಪರಾಧಕ್ಕೆ ಇಂದು ಆ ಸ್ಥಳದಿಂದ, ಕಾಲದಿಂದ ಮತ್ತು ಪೀಳಿಗೆಯಿಂದ ಅತಿ ದೂರದಲ್ಲಿರುವ ಯಾರೋ ನಿರಪರಾಧಿಗಳು ತಲೆಗಂದಾಯ ತೆರಬೇಕೆಂಬ ದಾರುಣ ಸನ್ನಿವೇಶದ ಹಿನ್ನೆಲೆಯಲ್ಲಿರುವ ರಾವಣ ಬುದ್ಧಿ, ಇತಿಹಾಸದಿಂದ ಮಾನವ ಪಾಠ ಕಲಿಯುವುದಿಲ್ಲ ಎನ್ನುವುದನ್ನು ಎತ್ತಿ ತೋರಿಸುತ್ತದೆ. (ಭಾರತ ಕಲಿತಿದೆಯೇ ? ಇಸವಿ ೨೦೦೦.)

"ಅಮ್ಮಾ ! ಜೀವಂತ ವ್ಯಕ್ತಿಯನ್ನು ಶಿಲುಬೆಗೇರಿಸಿ ಮೊಳೆ ಜಡಿದರಂತೆ. ಎಂಥ ಕೆಟ್ಟ ಜನ." ಗದ್ಗದ ಕಂಠದಿಂದ ಆಲ್ಬರ್ಟ್ ತಾಯಿಗೆ ನಿವೇದಿಸಿಕೊಂಡ, "ಆ ದೈತ್ಯ ಮೊಳೆಯನ್ನು ಬಡಿದಾಗ ಅವನಿಗೆಷ್ಟು ನೋವಾಗಿರಬಹುದು. . ."

"ಆಲ್ಬರ್ಟ್ ! ನಾನು ಕತೆ ಹೇಳುತ್ತೇನೆ ಕೇಳು," ಎಂದು ಹೇಳಿ ಪೌಲೀನ್ ಮಗುವಿನ ಮನಸ್ಸನ್ನು ಬೇರೆಡೆಗೆ ಎಳೆಯಲು ಹವಣಿಸಿದರು.

ಮತಾಚರಣೆಗಳ ವಿಷಯವಾಗಿ ಯಾವ ಅಂಧ ಅಥವಾ ಕರ್ಮಠ ಸಂಪ್ರದಾಯಕ್ಕೆ ಸೇರದವರೂ ವಿಶಾಲವಿವೃತಮನಸ್ಕರೂ (open minded) ಆಗಿದ್ದ ಐನ್‌ಸ್ಟೈನ್ ದಂಪತಿಗಳು ತಮ್ಮ ಮಗುವಿನ ಪರಿಶುದ್ಧ ಪುಪ್ಪುಸಗಳ ಒಳಸೇರಿದ ಈ ವಿಷಾನಿಲದ ಬಗ್ಗೆ ಕಳವಳಗೊಂಡರು. ಆದರೆ ಅವರೇನು ಮಾಡುವಂತಿದ್ದರು ?

ಮಗು ಮತ್ತೆ ಮತ್ತೆ ಕೇಳುತ್ತಲೇ ಇತ್ತು, "ದೈತ್ಯಮೊಳೆಯನ್ನು ಗಿಡಿದಾಗ ಅವನಿಗೆಷ್ಟು ನೋವಾಗಿರಬಹುದು. . . "

ಶಾಲೆಯ ಕೊಂಕುನುಡಿ ಕೂರಸಿಯದಕ್ಕಿಂತಲೂ ಕ್ರೂರವಾದ ಗಾಯವನ್ನು ಮಗುವಿನ ಮುಗ್ಧ ಮನಃಪಟಲದ ಮೇಲೆ ಕೆತ್ತಿತ್ತು.

೧೮೮೯, ಬಿಸ್ಮಾರ್ಕನ ಜರ್ಮನಿ. ಮಿಲಿಟರಿ ಪೌರುಷದ ಉತ್ಸರ್ಪಿಣೀ ಪರ್ವ. ಉಗ್ರ

ರಾಷ್ಟ್ರೀಯತೆ ಎಲ್ಲೆಲ್ಲೂ ಪುಟಿದೇಳುತ್ತ ಜನರನ್ನು ಒಂದಾಗಿ ಬೆಸೆಯುತ್ತಿತ್ತು. ಆ ದಿನಗಳಂದು ಮ್ಯೂನಿಕ್ ನಗರದಲ್ಲಿ ಸೈನಿಕ ತುಕ್ಕಡಿಗಳ ಸಾಮೂಹಿಕ ಕವಾಯತಿ ಮಾಮೂಲೀ ನೋಟವಾಗಿತ್ತು. ಗರಿಗರಿ ಸಮವಸ್ತ್ರ, ಕಣ್ಣು ಕೋರೈಸುವಂತೆ ಥಳಥಳಿಸುವ ಗುಂಡಿಗಳು, ಬಣ್ಣಬಣ್ಣದ ಪಾಗು, ಮಿರಮಿರನೆ ಮಿಂಚುವ ಬೂಟುಗಳು ಇವುಗಳಿಂದ ಅಲಂಕೃತರಾದ ಸುಟಿ ಯುವಕರು, ವೀರ್ಯ ವತ್ತಾದ ಡೋಲು ವಾದ್ಯಗಳ ಬಜಾವಣೆಯ ತಾಳ ಅನುಸರಿಸುತ್ತ, ಬೂಟ್ ಹಿಮ್ಮಡಿಗಳನ್ನು ನೆಲಕ್ಕೆ ಬಡಿದು ಕುಕ್ಕಿ, ಕೈಗಳನ್ನು ಬೀಸಿಬೀಸಿ, ಎದೆ ಮುಂದೆ ಮಾಡಿ, ಕಣ್ಣುಗಳನ್ನು ಶೂನ್ಯದಲ್ಲಿ ಕೀಲಿಸಿ, ದರ್ಪ ಅಭಿಮಾನಪೂರಿತರಾಗಿ ನಡೆಯುತ್ತಿದ್ದ ದೃಶ್ಯ, ಪ್ರಜೆಗಳ ಮನಸ್ಸಿನಲ್ಲಿ ಪಿತೃಭೂಮಿ ಜರ್ಮನಿಯ ಬಗ್ಗೆ ಹೆಮ್ಮೆ ಟಂಕಿಸುತ್ತಿತ್ತು. ಜರ್ಮನಿಯ ಆಸುರೀ ತ್ರಾಣದ ಅಂತೆಯೇ ಉಜ್ಜ್ವಲ ವೈಭವದ ದಿವ್ಯ ಪ್ರತೀಕವಾದ ಚಮೂದಳವನ್ನು ಸೇರಲಾಗದ ಹಿರಿಯರು ತಮ್ಮ ಎಳೆಯರಿಗೆ ಸೈನಿಕರ ಕವಾಯತಿಗಳನ್ನು ತೋರಿಸುತ್ತ ಹೇಗೆ ಆ ಮಕ್ಕಳು ದೊಡ್ಡವರಾದ ಬಳಿಕ ಈ ಸಂತೋಷ ಸಾಹಸದಲ್ಲಿ ಭಾಗಿಗಳಾಗಿ ಮೆರೆಯಬೇಕು ಎಂಬುದನ್ನು ಉಪದೇಶಿಸುತ್ತಿದ್ದರು. ದಂಡಿಗೆ ದಾಖಲಾಗುವುದೇ ಗಂಡು ಗುಂಡಿಗೆಗಳ ಹಿರಿ ಗುರಿ ಆಗಿತ್ತು. ದಾಳಿ ಹೂಡುವುದು, ಮಲೆತು ಕಾದಾಡುವುದು, ಸೆರೆ ಹಿಡಿಯುವುದು, ಶಿಕ್ಷೆ ನೀಡುವುದು ಮೊದಲಾದ ಸೈನಿಕ ಆಟಗಳು ಮಕ್ಕಳ ಪ್ರಿಯ ಹವ್ಯಾಸಗಳಾಗಿದ್ದುವು.

ಆದರೆ ಆಲ್ಬರ್ಟ್ ಈ ಬಹುಸಂಖ್ಯಾತರಿಂದ ಬೇರೆಯವನೇ ಆಗಿದ್ದ. ಇವನು ನಗಾರಿ ಬಡಿತದ ನಾದಕ್ಕೆ ಬೆಚ್ಚಿಬೀಳುತ್ತಿದ್ದ, ಹಿಮ್ಮಡಿ ಹೊಡೆತದ ಪೆಟ್ಟಿಗೆ ಭಯಪಡುತ್ತಿದ್ದ, ಎದೆ ಮುಂದೆ ಮಾಡಿ ನಡೆವ ರಕ್ಕಸರತ್ತ ಆಕರ್ಷಿತನಾಗಲಿಲ್ಲ. ದೊಡ್ಡವನಾದಾಗ ತಾನು ಆ ಕುರಿಗಳಂತೆ ಕಡ್ಡಾಯದ ಕಟ್ಟುಪಾಡುಗಳಿಗೆ ಒಳಪಡುವುದು ಖಂಡಿತ ಸಾಧ್ಯವಿಲ್ಲ ಎಂದು ಅಂಜಿ ಅಳುಕಿ ನುಡಿಯುತ್ತಿದ್ದ. ಶಿಸ್ತಿನ ನಡೆ, ಲಯಬದ್ಧ ಚಲನೆ ಮತ್ತು ದರ್ಪವರ್ತನೆ ಇವು ಅನುಕರಣೀಯ ಗುಣಗಳೆಂಬ ಭಾವನೆ ಸಾಮಾನ್ಯ ಮಕ್ಕಳಲ್ಲಿ ಮೊಳೆಯುತ್ತಿದ್ದಾಗ ಇವನು ಕಂಡದ್ದು ಅವುಗಳ ಹಿಂದಿದ್ದ ಕಠಿಣ ಆಜ್ಞೆಗಳ ಕಠೋರತೆಯನ್ನು, ಅಂತಃಕರಣರಹಿತ ಮಾನವಮನಸ್ಸಿನ ದೌಷ್ಟ್ಯವನ್ನು, ಜೀವನವನ್ನು ವೈವಿಧ್ಯರಹಿತ ನೀರಸ ಏಕತಾನತೆಗೆ ತಳ್ಳಲು ಹವಣಿಸುತ್ತಿದ್ದ ಅಂಕುಶಹೀನ ಪ್ರವೃತ್ತಿಯ ಪಾಶವೀಯತೆಯನ್ನು. "ಪ್ರೇಮವಿಲ್ಲದ ಗಾನ ಕೇಳನೋ ಹರಿ ತಾಳನೋ !"

ನಿಸರ್ಗದ ನಿರಂತರ ನಾವೀನ್ಯ ಇವನಲ್ಲಿ ಪರಮಾಶ್ಚರ್ಯವನ್ನು ಪ್ರೇರಿಸುತ್ತಿತ್ತು. ಹಗಲು ಇರುಳುಗಳ ಎಂದೂ ಮುಗಿಯದ ಒಂದನ್ನಿನ್ನೊಂದು ಹಿಡಿಯುವ ಆಟ, ಗಗನವೈಭವವಾದ ಸೂರ್ಯನ ಸರ್ವಗ್ರಹಣ ಸಾಮರ್ಥ್ಯ, ಇರುಳರಸನಾದ ಉಡುಪತಿಯ ಬಗೆಬಗೆಯ ವರಿಸೆಗಳು, ನಕ್ಷತ್ರಗಳ ಚಿರಂತನ ಮೂಕಶ್ಲೋಕ, ಗಿಡಮರಗಳ ಮತ್ತು ಹಕ್ಕಿ ಹುಪ್ಪಡಿಗಳ ಮೂಲಕ ಪ್ರಕೃತಿ ಪ್ರದರ್ಶಿಸುತ್ತಿದ್ದ ಋತುಗಾನ ಇವೆಲ್ಲವೂ ಇವನ ಸುಪ್ತ ಮನಸ್ಸಿನ ಮೇಲೆ ಅಗಾಧ ಪ್ರಭಾವ ಅಚ್ಚೊತ್ತಿದುವು. ಮನೆಯಲ್ಲಿ ಆಚರಿಸುತ್ತಿದ್ದ ಧಾರ್ಮಿಕ ಆಚರಣೆಗಳು—ಪ್ರಾರ್ಥನೆ, ಪೂಜೆ, ಅತಿಥಿ ಸತ್ಕಾರ, ಧರ್ಮಗ್ರಂಥ ಪಠನ—ನೈಸರ್ಗಿಕ ವಿದ್ಯಮಾನಗಳ ಜೊತೆ ವಿಶೇಷ ರೀತಿಯಲ್ಲಿ ಹೊಂದಿಕೊಂಡಿದ್ದುದನ್ನು ಕಂಡು ಜೀವನವೆಂಬುದು ಅಖಂಡವಾದ ಸುಂದರ ನೇಯ್ಗೆ ಎಂಬ ಭಾವದಿಂದ ಉದ್ದೀಪಿತನಾಗುತ್ತಿದ್ದ, ರೋಮಹರ್ಷಿತನಾಗುತ್ತಿದ್ದ. "ದಯವೇ ಧರ್ಮದ ಮೂಲ ವಯ್ಯಾ !"

ಮಗನ ಮನೋಧರ್ಮ ತಿಳಿದಿದ್ದ ತಂದೆಗೆ ಇವನ ವಾದದ ಯಾಥಾರ್ಥ್ಯ ಮನವರಿಕೆ ಯಾಗಿತ್ತು. "ಜರ್ಮನಿಯ ನೈಜ ಸಂಸ್ಕೃತಿಗೆ ಜಂಗು ಹಿಡಿದಿದೆ," ಎಂಬುದಾಗಿ ಹರ್ಮನ್

ಪರಿತಪಿಸುತ್ತಿದ್ದರು. ಪ್ರಚಲಿತ ಕಾನೂನು ಕಠಿಣವಾಗಿತ್ತು : ಮಕ್ಕಳು ಶಾಲೆಯ 'ಗಿರಣಿ' ಮೂಲಕ ಹಾಯಲೇಬೇಕಾಗಿತ್ತು ಜ್ಞಾನತರಣಿ ದರ್ಶನಕ್ಕೆ !

"ಆಲ್ಬರ್ಟ್ ! ನೀನು ದೊಡ್ಡವನಾಗಿ ಹುದ್ದೆ ಹಿಡಿದು ಬದುಕಬೇಕು. ಶಾಲೆಯ ಡಿಪ್ಲೊಮ ವಿಲ್ಲದೆ ಹುದ್ದೆ ದೊರೆಯದು. ಸುಧಾರಿಸಿಕೊಂಡು ಹೋಗು." ತಂದೆಯ ಮಾತು ಗಂಭೀರ ವಾಗಿತ್ತು, ಕರುಣಾಪೂರ್ಣವಾಗಿತ್ತು, ಮರುಪ್ರಶ್ನೆಗೆ ಇಂಬುಗೊಡುವಂತಿರಲಿಲ್ಲ.

"ಅಪ್ಪಾ ! ಇನ್ನು ಮುಂದೆಂದೂ ನಾನು ಶಾಲೆಯನ್ನು ದೂರುವುದಿಲ್ಲ. ಶಾಲೆಯಲ್ಲಿ ಹೊಂದಿ ಕೊಂಡು ಹೋಗಲು ಸಾಧ್ಯವಿರುವಷ್ಟೂ ಪ್ರಯತ್ನಪಡುತ್ತೇನೆ."

ಇಷ್ಟಾಗುವಾಗ ಚಿಕ್ಕಪ್ಪ ಜೇಕಬ್ ಅಲ್ಲಿಗೆ ಬಂದರು. ಇಡೀ ರಾದ್ಧಾಂತದ ವರದಿಯನ್ನು ಅವರಿಗೆ ಒಪ್ಪಿಸಿದ್ದಾಯಿತು. ಅವರೆಂದರು, "ಆಲ್ಬರ್ಟ್ ! ನಿನಗೆ ಪ್ರಿಯವಾದ ಕೆಲಸವನ್ನೇ ನೀನು ಮಾಡಬೇಕು ಎನ್ನುವುದನ್ನು ಒಪ್ಪುತ್ತೇನೆ. ಆದರೆ ಬದುಕಿನಲ್ಲಿ ಯಾವಾಗಲೂ ಇಂಥ ಸುಸಂ ದರ್ಭವೇ ಒದಗುವುದಿಲ್ಲ. ಅಪ್ರಿಯವಾದ ಕೆಲಸಗಳಲ್ಲೂ ಸಂತೋಷ ತಳೆಯುವ ಗುಣ ಬೆಳೆಸಿಕೊಳ್ಳಬೇಕು. ನೀನು ಶಾಲೆಗೆ ಹೋಗು."

"ನಾನು ಶಾಲೆಯನ್ನು ದ್ವೇಷಿಸುತ್ತೇನೆ."

"ಈ ಪದವನ್ನು ನೀನು ಬಳಸಬಾರದು. ಪ್ರಪಂಚದಲ್ಲಿ ಸಾಕಷ್ಟು ದ್ವೇಷ ಅಸೂಯೆ ಇವೆ. ಆದ್ದರಿಂದ ಶಾಲೆಯನ್ನು ನೀನು ಪ್ರತ್ಯೇಕವಾಗಿ ದ್ವೇಷಿಸಬೇಕಾಗಿಲ್ಲ. ಅದಿರಲಿ ನೀನು ಯಾವ ವಿಷಯವನ್ನು ತೀವ್ರವಾಗಿ 'ದ್ವೇಷಿಸುವೆ' ಹೇಳು ನೋಡೋಣ." ಹುಡುಗ ಕ್ಷಣಕಾಲ ಯೋಚಿಸಿದ. "ನಾನು ಹೆಚ್ಚು ದ್ವೇಷಿಸುವುದು ಬೀಜಗಣಿತವನ್ನೋ ಜ್ಯಾಮಿತಿಯನ್ನೋ ಖಚಿತವಾಗಿ ನಿರ್ಧರಿಸ ಲಾರೆ. ಇವೆರಡರ ಬಗ್ಗೆಯೂ ನನಗೆ ಒಂದೇ ತೆರನಾದ ತಿರಸ್ಕಾರವಿದೆ."

"ಇಷ್ಟೇ ತಾನೆ ! ಈ ವಿಷಯಗಳಂಥ ಮೊದ್ದು ಗಣಿತವಿಭಾಗಗಳು ಬೇರೊಂದಿಲ್ಲ. ಇವನ್ನು ನೀನು ತಿರಸ್ಕರಿಸುವುದುಂಟೇ ? ಚೆನ್ನಾಯಿತು. ನೀನೆಂದಾದರೂ ಕಳ್ಳ-ಕೊತವಾಲ ಆಟ ಅಥವಾ ಆ ತರಹದ ಆಟ ಆಡಿದ್ದುಂಟೆ ?"

"ಉಂಟು."

"ಈಗ ನಾನೊಂದು ಬದಲಾವಣೆ ಸೂಚಿಸುತ್ತೇನೆ. ನೀನೊಬ್ಬ ಪತ್ತೇದಾರಿ. ನೀನು ತುಬ್ಬು ಮಾಡಬೇಕಾಗಿರುವುದು ನಿನಗೆ ಗೊತ್ತಿಲ್ಲದ ಒಬ್ಬ ಕಳ್ಳನನ್ನು. ಅವನನ್ನು $x$ ಎಂದು ಕರೆಯೋಣ. ಕಳ್ಳನ ಬಗ್ಗೆ ತಿಳಿದಿರುವ ಎಲ್ಲ ಮಾಹಿತಿಗಳನ್ನು—ಕಳ್ಳತನ ಎಷ್ಟು ಹೊತ್ತಿಗಾಯಿತು, ಏನೇನು ಸಾಮಾನುಗಳು ಕಳವಾಗಿವೆ, ಕಳ್ಳನ ಬೆರಳಚ್ಚು ಹೇಗಿದೆ ಮುಂತಾದವನ್ನು—$x$ನ ಮೇಲೆ ಹಚ್ಚು. ಆಗ ನಿನಗೊಂದು ಸಮೀಕರಣವೋ ಜ್ಯಾಮಿತೀಯ ಚಿತ್ರವೋ ದೊರೆಯುತ್ತದೆ. ಮುಂದಿನ ಹಾದಿಯನ್ನು ಅದೇ ನಿನಗೆ ಕಾಣಿಸುತ್ತದೆ. ಕೈ ಹಿಡಿದು ನಡೆಸಿಕೊಂಡು ಹೋಗಿ $x$ನ್ನು ನಿನಗೊಪ್ಪಿಸು ತ್ತದೆ. ಈಗ ಹೇಳು, ಬೀಜಗಣಿತವಾಗಲಿ ಜ್ಯಾಮಿತಿಯಾಗಲಿ ನಿನಗೇಕೆ ಅಪ್ರಿಯವಾಗಬೇಕು ?"

ಜೇಕಬ್ ಬೀಜಗಣಿತದ 'ಹಿಕಮತ್ತ'ನ್ನು ತಸ್ಕರಶೋಧನೆಗೆ ಹೋಲಿಸಿ ವಿವರಿಸಿದ್ದೇ ತಡ ಆಲ್ಬರ್ಟನ ಮುಂದೆ ಸ್ವಯಂಪ್ರಭೆಯ ಮಾಯಾಲೋಕ ಅನಾವರಣಗೊಂಡಂತಾಯಿತು. ಮುಂದಿನ ದಿನಗಳಲ್ಲಿ ಈ ತರುಣ 'ಪತ್ತೇದಾರಿ' ಸ್ವಚ್ಛಂದವಾಗಿಯೂ ನಿರಾತಂಕವಾಗಿಯೂ ಗಣಿತ ಮತ್ತು ಭೌತವಿಜ್ಞಾನ ಕ್ಷೇತ್ರಗಳಲ್ಲಿ ವಿಹರಿಸಬಲ್ಲವನಾದ. ಉಪಾಧ್ಯಾಯರಿಂದ ದಡ್ಡ ನೆಂದು ತಿರಸ್ಕರಿಸಲ್ಪಟ್ಟಿದ್ದ ಹುಡುಗ ಅತ್ಯಂತ ಕಠಿಣ ವಿಷಯಗಳಲ್ಲಿ ತರಗತಿಗೇ ಒಂದನೆ ಯವನಾದ.

## ನಿರಂಕುಶಮತಿ

ತಮ್ಮ ಸಂಶೋಧನಕಾರ್ಯದಲ್ಲಿ ತಾವು ಕುರುಡುಗಲ್ಲಿಯ ಕೊನೆ ತಲಪಿ ಮುಂದೆ ಸಾಗಲು ಎಡೆಯಿಲ್ಲವೆಂದಾದಾಗೆಲ್ಲ ಅವರು ಸಂಗೀತಕ್ಕೆ ಶರಣುಹೋಗುತ್ತಿದ್ದರು. ಮತ್ತು ಸಾಧಾರಣವಾಗಿ, ತಮ್ಮ ತಾತ್ಕಾಲಿಕ ಕಷ್ಟಗಳಿಂದ ಪಾರಾಗಿ ಹೊರಬರುತ್ತಿದ್ದರು.

ಐನ್‌ಸ್ಟೈನರ ಮಗ

ಸಂಶೋಧನೆಯ ಮೇಲೆ ಸಂಗೀತ ಯಾವ ಪರಿಣಾಮವನ್ನೂ ಬೀರದು. ಆದರೆ ಇವೆರಡೂ ಒಂದೇ ಮೂಲದಿಂದ ಜನಿಸಿದವಾಗಿ ಇವು ಒದಗಿಸುವ ತೃಪ್ತಿಗಳು ಪರಸ್ಪರ ಪೂರಕವಾಗಿರುತ್ತವೆ.

ಐನ್‌ಸ್ಟೈನ್

ಗಾನಪ್ರಿಯರಾದ ಹರ್ಮನ್ ಮತ್ತು ಪೌಲೀನ್ ತಮ್ಮ ಮಗನಿಗೆ ಪಿಟೀಲು ಪಾಠ ಹೇಳಿಸಿದರು. ಆದರೆ ಆಲ್ಬರ್ಟನಿಗೆ ದೊರೆತ ಶಿಕ್ಷಕ ಎಂಥವನು ? ಅವನ ನಿಗಾ ಪಿಟೀಲಿನ ತಂತ್ರದತ್ತ ಹೆಚ್ಚು, ಕಲೆಯತ್ತ ಕಡಿಮೆ. ಇಲ್ಲಿಯೂ ಆಲ್ಬರ್ಟನ ನಿರ್ಮಲ ಬುದ್ಧಿ ಗುರುತಿಸಿದ್ದು ಮಿಲಿಟರಿ ಪ್ರಹಾರ ವನ್ನೇ ವಿನಾ ಕಲಾವಿಹಾರವನ್ನಲ್ಲ. ಆರು ವರ್ಷದ ಅಣುಗ ಬಲವಂತಿಕೆಯ ಈ ಮಾಘ ಸ್ನಾನವನ್ನು ವಿರೋಧಿಸಿದ. ಅಂತೂ ಇವನ ಕಮಾನಿನ ಎಳೆತ ಮತ್ತು ಬೆಟ್ಟುಗಳ ಮಿಡಿತ ಕುಂಟುತ್ತ ಪರಡುತ್ತ ತೆವಳಿದುವು. ಪ್ರಾಯ ಹದಿಮೂರು ತುಂಬಿದಾಗ ಇವನೆದುರು ಮೊರ್ಝಾರ್ಟನ[1] ವಿಖ್ಯಾತ ಸೊನಾಟಗಳು (ಮೂರು ಅಥವಾ ನಾಲ್ಕು ಗತಿಗಳಲ್ಲಿ ಮುಖ್ಯತಃ ಪಿಯಾನೋ ವಾದ್ಯಕ್ಕಾಗಿ ರಚಿಸಿದ ಪಾಶ್ಚಾತ್ಯ ಸಂಗೀತ ಕೃತಿಗಳು) ಪ್ರತ್ಯಕ್ಷವಾದುವು. ಆ ಪಾರಲೌಕಿಕ ಕಲಾವಂತಿಕೆ ಇವನ ಎಳೆ ಮನವನ್ನು ಸೂರೆಗೊಂಡಿತು. ಆದರೆ ಮನದಲ್ಲಿ ಸ್ಫುರಿಸುತ್ತಿದ್ದ ಭಾವ ಪಿಟೀಲಿನ ಮಾಧ್ಯಮಕ್ಕೆ ಇಳಿದು ರಸವಾಗಿ ಹರಿಯುತ್ತಿರಲಿಲ್ಲ—ಇವನ ವಾದನತಂತ್ರಸಿದ್ಧಿ ತೀರ ಕಡಿಮೆ.

ಬಾಲ್ಯದ ಈ ಅನುಭವವನ್ನು ಕುರಿತಂತೆ ಪ್ರೌಢ ಐನ್‌ಸ್ಟೈನರ ಮಾತುಗಳಿವು, "ಆರನೆಯ ವಯಸ್ಸಿನಿಂದ ಹದಿನಾಲ್ಕರ ತನಕ ನಾನು ಪಿಟೀಲು ಪಾಠ ಹೇಳಿಸಿಕೊಂಡೆ. ಆದರೆ ಯಾಂತ್ರಿಕ ವರಿಸೆಗಳನ್ನು ಮೀರಿ ನಿಂತಿರುವ ಸಂಗೀತ ತಿಳಿದಿರದಿದ್ದ ಶಿಕ್ಷಕರ ಜೊತೆ ನನ್ನ ಅದೃಷ್ಟ ಕುದುರಲಿಲ್ಲ. ನಾನು ಕಲಿಯಲು ನಿಜವಾಗಿ ತೊಡಗಿದ್ದು ಸುಮಾರು ಹದಿಮೂರು ವರ್ಷ ವಯಸ್ಸಿನವನಾದಾಗ ಮಾತ್ರ, ಅದೂ ಮೊರ್ಝಾರ್ಟನ ಸೊನಾಟಗಳ ಬಗ್ಗೆ ಪ್ರೇಮ ಆದರ ತಳೆದ ಮೇಲೆಯೇ. ಅವುಗಳ ಕಲಾತ್ಮಕತೆಯನ್ನೂ ವಿಶಿಷ್ಟ ನಯವನ್ನೂ ಪುನರುತ್ಪಾದಿಸಲು ಮಾಡಿದ ಪ್ರಯತ್ನ ನನ್ನ ತಂತ್ರವನ್ನು ಸುಧಾರಿಸಿಕೊಳ್ಳಲು ನನ್ನನ್ನು ಒತ್ತಾಯಿಸಿತು. ವ್ಯವಸ್ಥಿತವಾಗಿ ಅಭ್ಯಾಸ ಮಾಡದೆಯೂ ನಾನು ಈ ಸುಧಾರಣೆಯನ್ನು ಸೊನಾಟಗಳಿಂದ ಪಡೆದುಕೊಂಡೆ. ಒಟ್ಟಾರೆ ಹೇಳುವುದಾದರೆ ಕರ್ತವ್ಯಪ್ರಜ್ಞೆಗಿಂತ ಒಲವೇ ಹೆಚ್ಚು ಲೇಸಾದ ಗುರುವೆಂದು ನಂಬಿದ್ದೇನೆ. ಕನಿಷ್ಠ ಪಕ್ಷ ನನ್ನ ಮಟ್ಟಿಗಂತೂ ಇದು ಪೂರ್ತಿ ನಿಜವಾಗಿತ್ತು."

ಒಮ್ಮೆ ಗುರಿ ಹೊಳೆಯಿತೊ ಮತ್ತೆ ದಾರಿ ಹೊಡೆಯುವುದು ಇವನಿಗೆ ಬಲು ಸಲೀಸು. ಅಧಿಕೋತ್ಸಾಹದಿಂದ ಸ್ವಂತ ಪ್ರಯತ್ನ ಪ್ರಯೋಗಿಸಿದ. ಪಿಟೀಲುವಾದನ ಇವನ ಬದುಕಿನ ಅಖಂಡ ಭಾಗವಾಗಿ ವಿಕಾಸಗೊಂಡಿತು. ಹವ್ಯಾಸೀವಾದಕನಾಗಿ ಶ್ರೇಷ್ಠ ಗುಣಮಟ್ಟ ಐದಿದ್ದ. ಸ್ವಂತ ಸುಖವೇ ಮುಖ್ಯಲಕ್ಷ್ಯ.

ಪ್ರಾಕೃತಿಕ ವಿಜ್ಞಾನ—ಅಂದರೆ ಪ್ರಕೃತಿಯ ವಿದ್ಯಮಾನಗಳನ್ನು ಕುರಿತ ಅಧ್ಯಯನ, ಉದಾ ಹರಣೆಗೆ ಖಗೋಳವಿಜ್ಞಾನ, ಭೌತವಿಜ್ಞಾನ ಇತ್ಯಾದಿ—ಇವನಿಗೆ ಪ್ರೀತಿಯ ವಿಷಯ. ಸ್ನೇಹಿತರಿಂದ ದೊರೆತ ಜನಪ್ರಿಯ ವಿಜ್ಞಾನಪುಸ್ತಕಗಳನ್ನು ಈತ ಬರಗೇಡಿ ಅಶನ ಕಬಳಿಸುವ ಆತುರತೆಯಿಂದ

ಓದಿ ಅರಗಿಸಿಕೊಂಡ. ನಿಸರ್ಗದ ಬಗೆಬಗೆಯ ಘಟನೆಗಳನ್ನು ಕಾರ್ಯಕಾರಣ ಸಂಬಂಧ[೫] ನೀಡಿ ವಿವರಿಸುತ್ತಿದ್ದ ಈ ಪುಸ್ತಕಗಳು ಇವನ ಚಿಂತನೆಯನ್ನು ಹರಿತಗೊಳಿಸಿದುವು.[೬] ಪರಿಣಾಮವಾಗಿ ಧಾರ್ಮಿಕ ನಂಬಿಕೆಗಳ ಬುಡ ಕುಸಿಯಿತು. ಬೈಬಲ್ಲಿನಲ್ಲಿ ವರ್ಣಿತವಾಗಿದ್ದ ಪ್ರಪಂಚ ಮತ್ತು ನಡವಳಿಕೆಗಿಂತ ವಾಸ್ತವ ಲೋಕ ಮತ್ತು ವರ್ತನೆ ತೀರ ಬೇರೆಯೇ ಆಗಿದ್ದುವು. ಕಾಣುವ ಈ ಲೋಕದ ಮುಂದೆ ಕಾಣದ ಆ ಲೋಕ ಕಟ್ಟುಕತೆ ಎನ್ನಿಸಿತು. ಧರ್ಮಗ್ರಂಥದಲ್ಲಿ ಉಕ್ತವಾಗಿದ್ದ ಸಂಗತಿಗಳನ್ನು ಸಂದೇಹ, ಪ್ರಶ್ನೆ ಎತ್ತದೆ ಅಂಧಶ್ರದ್ಧೆಯಿಂದ ಒಪ್ಪಿಕೊಳ್ಳಬೇಕೇ ಬೇಡವೇ ಎಂಬ ಮಾನಸಿಕ ತುಮುಲದಿಂದ ಆಲ್ಬರ್ಟ್ ಜರ್ಜರಿತನಾದ. ಪ್ರಭುಶಕ್ತಿ ಅಥವಾ ಅಧಿಕಾರದರ್ಪ—ಅದು ಧಾರ್ಮಿಕ ಛಾಯೆಯದೇ ಆಗಿರಲಿ, ರಾಜಕೀಯ ಸ್ವರೂಪದ್ದೇ ಆಗಿರಲಿ, ಬೇರೆ ಯಾವುವೇ ಮೊಹರಿನದಾಗಿರಲಿ—ಈತನಲ್ಲಿ ತಿರಸ್ಕಾರ ಅಸಹನೆಗಳನ್ನು ಪ್ರೇರಿಸುತ್ತಿತ್ತು.

ಮುಂದೊಂದು ದಿವಸ ಐನ್‌ಸ್ಟೈನರನ್ನು 'ವಿಜ್ಞಾನರಂಗದ ನಿರ್ವಿವಾದ ಪ್ರಭು' ಎಂಬುದಾಗಿ ವರ್ಣಿಸಿದಾಗ ಇವರು ಕೊಟ್ಟ ಉತ್ತರ ಮಾರ್ಮಿಕವಾಗಿದೆ. "ಪ್ರಭುಶಕ್ತಿಯ ಬಗ್ಗೆ ನನಗಿರುವ ತಿರಸ್ಕಾರಕ್ಕಾಗಿ ನನ್ನನ್ನು ಶಿಕ್ಷಿಸಲೆಂದೇ ವಿಧಿ ಖುದ್ದು ನನ್ನನ್ನೇ ಒಬ್ಬ 'ಪ್ರಭು'ವಾಗಿ ಮಾಡಿದೆ!"

ಇವರ ಮನಸ್ಸು ಎಳವೆಯಿಂದಲೇ ಸಕಲ ವಿಧದ ಅಂಕುಶಗಳನ್ನೂ ದ್ವೇಷಿಸುತ್ತಿತ್ತು. ಇಂಥ ನಿರಂಕುಶಮತಿ ಇವರದಲ್ಲವಾಗಿದ್ದರೆ ಇವರೆಂದೂ ವಿಜ್ಞಾನಪ್ರಪಂಚದಲ್ಲಿ ತರ್ಕ-ಅಂಕುಶ-ಅತೀತ ಔನ್ನತ್ಯ ಏರಿ ವಿಶಾಲ ವಿಶ್ವ ನೋಡಿ ವಿವರಿಸುವುದು ಸಾಧ್ಯವಾಗುತ್ತಿರಲಿಲ್ಲ.

ಆಲ್ಬರ್ಟಿನ ಧಾರ್ಮಿಕಶ್ರದ್ಧೆಯ ಬುಡ ಹಂದಾಡಿದ ತರುಣದಲ್ಲಿ ಉತ್ಕೃಷ್ಟ ಜ್ಯಾಮಿತಿ ಗ್ರಂಥವೊಂದು ಇವನಿಗೆ ದೊರೆಯಿತು. ಯೂಕ್ಲಿಡ್ ಜ್ಯಾಮಿತಿ[೭] ಎಂಬುದಾಗಿ ಸುಪರಿಚಿತವಾಗಿರುವ ಈ ಗಣಿತವಿಭಾಗವು ಬಿಂದು, ಸರಳರೇಖೆ, ವಕ್ರರೇಖೆ, ಸಮತಲಾಕೃತಿಗಳು, ಮೂರು ಆಯಾಮಗಳಲ್ಲಿಯ ವಿವಿಧ ಘನಾಕೃತಿಗಳು ಮುಂತಾದವುಗಳ—ಅಂದರೆ ನಮ್ಮ ಇಂದ್ರಿಯಗಮ್ಯ ಪ್ರಪಂಚದ[೮]—ಗಣಿತೀಯ ಗುಣಲಕ್ಷಣಗಳನ್ನು ನಿಷ್ಕೃಷ್ಟವಾಗಿಯೂ ತಾರ್ಕಿಕವಾಗಿಯೂ ವಿವರಿಸಿ ರುಜುವಾತಿಸುತ್ತದೆ. ಪರಮಾತ್ಮ ಶ್ರೇಷ್ಠ ಕಲಾವಿದ, ಅವನ ಪರಮೋತ್ಕೃಷ್ಟ ಕಲಾಕೃತಿ ಜ್ಯಾಮಿತಿ, ಇದರ ಪ್ರಕಟಿತ ರೂಪವೇ ವಿಶ್ವ ಎಂಬ ಪ್ರಾಚೀನ ಹೇಳಿಕೆ ಉಂಟು. ಸಹಜವಾಗಿ ಈ ಜ್ಯಾಮಿತಿಯ ಅಮೂರ್ತಸೌಂದರ್ಯ ಆಲ್ಬರ್ಟಿನ ವರ್ಣರಂಜಿತ ಮನಸ್ಸಿಗೆ ಆಪ್ಯಾಯಮಾನವಾಯಿತು.

## ಅನಾಥಪಕ್ಷಿ

ಹರ್ಮನ್ ಐನ್‌ಸ್ಟೈನ್, "ನನ್ನ ಮುದ್ದು ಮಗನನ್ನು ಯಾವ ವೃತ್ತಿಗೆ ತರಬೇತುಮಾಡಲಿ?"

ಮುಖ್ಯೋಪಾಧ್ಯಾಯ, "ಅಂಥ ಚಿಂತೆ ಅನಾವಶ್ಯಕ. ಈತ ಮೊದ್ದ. ಎಲ್ಲೂ ಯಶಸ್ವಿ ಆಗಲಾರ."

ಜರ್ಮನಿಯಲ್ಲಿ ಲಷ್ಕರಶಾಹಿಯ ಪರಿಣಾಮವಾಗಿ ರಾಷ್ಟ್ರೀಯತೆಯೂ ಅಧಿಕಾರಸತ್ತೆಯೂ ಉಲ್ಬಣಿಸುತ್ತಿದ್ದುವು. ಉಪ್ರೋತ್ಪನ್ನವಾಗಿ ಯೆಹೂದ್ಯದ್ವೇಷ ಗುಪ್ತಗಾಮಿಯಾಗಿ ಬುಸುಗುಟ್ಟುತ್ತಿತ್ತು. ಬೋಳೆ ಸ್ವಭಾವದವರೂ ಯೆಹೂದ್ಯ ಮತದವರೂ ಆಗಿದ್ದ ಐನ್‌ಸ್ಟೈನ್ ಸಹೋದರರಿಗೆ ಉಸಿರುಕಟ್ಟುವ ಈ ಹವೆಯಲ್ಲಿ ತಮ್ಮ ವ್ಯವಹಾರವನ್ನು ಲಾಭದಾಯಕವಾಗಿ ನಿರ್ವಹಿಸುವುದು ಸಾಧ್ಯವಾಗಲಿಲ್ಲ. ಮ್ಯೂನಿಕ್ ನಗರವಾಸ ಅಸಹನೀಯವಾಯಿತು (೧೮೯೪). ಹೀಗಾಗಿ ಅವರು ಇಟಲಿ ದೇಶದ ಮಿಲಾನ್ ನಗರಕ್ಕೆ ವಲಸೆ ಹೋಗಿ ತಮ್ಮ ಹಿಂದಿನ ಉದ್ಯಮವನ್ನು ಅಲ್ಲಿ ಪ್ರಾರಂಭಿಸಿದರು.

ಇತ್ತ ಹದಿನೈದರ ಹುಡುಗ ಆಲ್ಬರ್ಟ್ ಒಂಟಿಯಾಗಿ ಮ್ಯೂನಿಕ್ಕಿನಲ್ಲಿ ಉಳಿದಿದ್ದು ವಿದ್ಯಾಭ್ಯಾಸ ಮುಂದುವರಿಸಬೇಕಾಗಿತ್ತು. ಸದಾ ಅಂತರ್ಮುಖಿಯಾಗಿದ್ದ ಈ ಚೇತನ ಸಹಪಾಠಿಗಳಿಗಾಗಲಿ ಅಧ್ಯಾಪಕರಿಗಾಗಲಿ ಅರ್ಥವಾಗದ ಒಗಟಾಗಿತ್ತು. ಈತ ಗಣಿತ ಮತ್ತು ಭೌತವಿಜ್ಞಾನಗಳಲ್ಲಿ ಅತಿ ಪ್ರವೀಣ, ತರಗತಿಯಲ್ಲಿ ಇತರರಿಗಿಂತ ಎತ್ತರದಲ್ಲಿದ್ದ. ಆದರೆ ಭಾಷೆ ಕಲಿಕೆಯಲ್ಲಿ ತೀರ ಕೆಳಗಿದ್ದ. ಯಾಂತ್ರಿಕವಾಗಿ ವ್ಯಾಕರಣ ನಿಯಮಗಳನ್ನೂ ಛಂದಸ್ಸೂತ್ರಗಳನ್ನೂ ಪದಗುಚ್ಛಗಳನ್ನೂ ಗಟ್ಟಿ ಮಾಡಿ ಈ ಪ್ರಾವೀಣ್ಯ ಗಳಿಸಬೇಕಾಗಿತ್ತು. ಕಡ್ಡಾಯತನದ ಲೇಪವಿದ್ದ ಎಲ್ಲ ವಿಧಿಗಳೂ ಇವನಿಗೆ ನಿಷಿದ್ಧ. ಈತ ಮಿತಭಾಷಿ. ಮೌನಿ ಎನ್ನುವುದೇ ಹೆಚ್ಚು ಸರಿ. ಎಂದೂ ಗರ್ವದಿಂದ ಬೀಗಿದವನಲ್ಲ. ಸದಾ ಸ್ನೇಹಶೀಲನಾಗಿಯೇ ವರ್ತಿಸಿದವ. ಆದರೆ ಆಟೋಟಗಳಲ್ಲಾಗಲಿ ಹರಟೆ ಗೇಲಿಗಳಲ್ಲಾಗಲಿ ಭಾಗವಹಿಸಲಾರ. ಸ್ಪಷ್ಟವಾಗಿ ವ್ಯಕ್ತಪಡಿಸದಿದ್ದರೂ ಅಧಿಕಾರಮುದ್ರೆ ಬಿದ್ದಿದ್ದ ಪ್ರತಿಯೊಂದನ್ನೂ—ಪಾಠ ಉರು ಹೊಡೆಯುವುದು, ಮನೆಗೆಲಸ ಮಾಡಿ ಒಪ್ಪಿಸುವುದು, ಒಟ್ಟಾರೆ 'ಗುರುವಿನ ಗುಲಾಮ'ನಾಗಿರುವುದು—ಇವನು ಮನಸಾ ವಿರೋಧಿಸುತ್ತಿದ್ದ. ಶಿಕ್ಷಣ ಸಂಸ್ಥೆಯ ವಿಧಿ ನಿರ್ಬಂಧಗಳು ತನಗೆ ತೊಡಿಸಿದ ಬಳೆ ಸಂಕೋಲೆಗಳೆಂದೇ ಇವನ ಭಾವನೆ. ಬಾನನ್ನು ಬೊಗಸೆ ಹಿಡಿದೀತೇ ?

ಅಂದಿನ ಸಂದಿಗ್ಧ ಸನ್ನಿವೇಶವನ್ನು ಐನ್‌ಸ್ಟೈನ್ ೧೯೪೦ರಲ್ಲಿ ಬರೆದ ಒಂದು ಕಾಗದದಲ್ಲಿ ವಿವರಿಸಿದ್ದಾರೆ : "ಆ ಶಾಲೆಯಲ್ಲಿ ನಾನು ಕಾಲ ಸವೆಯುತ್ತಿದ್ದಾಗ ನನ್ನ ಮೇಲುಸ್ತುವಾರಿಯ ಹೊಣೆ ಹೊತ್ತಿದ್ದ ಗ್ರೀಕ್ ಭಾಷಾ ಉಪಾಧ್ಯಾಯರು ಒಂದು ದಿನ ನನ್ನನ್ನು ತಮ್ಮ ಕೊಠಡಿಗೆ ಕರೆಸಿ ನಾನು ಶಾಲೆಯಿಂದ ತೊಲಗಿಹೋದರೆ ಕ್ಷೇಮವೆಂದು ಸೂಚಿಸಿದರು. 'ನಾನು ಅಪರಾಧ ವೆಸಗಿಲ್ಲವಲ್ಲ.' ಎಂಬ ನನ್ನ ಅಹವಾಲಿಗೆ ಅವರೆಂದರು, 'ನಿನ್ನ ಖುದ್ದು ಇರುವಿಕೆಯೇ ತರಗತಿ ಯಲ್ಲಿ ನನ್ನ ಬಗ್ಗೆ ಗೌರವವನ್ನು ಕೆಡಿಸುತ್ತಿದೆ.' ನಿಜವಾಗಿ ಹೇಳುವುದಾದರೆ ನಾನೇ ಶಾಲೆ ತೊರೆದು ನನ್ನ ಹೆತ್ತವರನ್ನು ಅನುಸರಿಸಿ ಇಟಲಿಗೆ ತೆರಳಬೇಕೆಂದು ಯೋಚಿಸುತ್ತಿದ್ದೆ. ಶಾಲೆಯಲ್ಲಿಯ ನೀರಸವೂ ಯಾಂತ್ರಿಕೀಕೃತವೂ ಆದ ಬೋಧನವಿಧಾನ ಇದರ ಮುಖ್ಯ ಕಾರಣ. ಪದಗಳನ್ನು ಕುರಿತಂತೆ ನನ್ನ ನೆನಪು ಬಲು ಮಂಕಾಗಿದ್ದುದರಿಂದ ನಾನು ಸಾಕಷ್ಟು ತೊಂದರೆಗಳನ್ನು ಎದುರಿಸಬೇಕಾಗಿತ್ತು. ಈ ಕಷ್ಟ ನಿವಾರಣೆಗಾಗಿ ಪ್ರಯತ್ನಿಸುವುದು ಅರ್ಥಹೀನವೆಂದು ನನಗನ್ನಿ ಸಿತು. ಹೀಗಾಗಿ ಅವರು ವಿಧಿಸಿದ ಸಮಸ್ತ ಶಿಕ್ಷೆಗಳನ್ನೂ ಸಹಿಸುವುದೊಂದೇ ಹಾದಿ. ಉರು ಹೊಡೆದದ್ದನ್ನು ಹುಚ್ಚಾಬಟ್ಟೆ ಕಕ್ಕುವುದಲ್ಲ ಎಂಬ ನಿರ್ಧಾರಕ್ಕೆ ಬಂದೆ."

ಉಭಯಪಕ್ಷಗಳೂ ಪರಸ್ಪರರಿಂದ ಬಿಡುಗಡೆ ಪಡೆಯಲು ಬಯಸಿದ್ದುವು. ಆದರೆ ಸಂಸ್ಥೆಯ ನಿಯಮಗಳು ಸುಲಭವಾಗಿರಲಿಲ್ಲ. ಆಲ್ಬರ್ಟ್ ವೈದ್ಯಕೀಯ ಶಿಫಾರಸು ಪತ್ರವನ್ನು ಶಾಲೆಗೆ ಒಪ್ಪಿಸಿ ತುರಂಗವಿಮುಕ್ತನಾದ. ಅಂತರಂಗಸುಖಿಯಾದ—ಅಂತರಂಗದ ಕದವು ತೆರೆಯಿತಾಗ !

ಅನಾಥಪಕ್ಷಿ ಇಟಲಿಗೆ ಹೋಗಿ ತಾಯಿಯ ಒಲುಮೆ ಗೂಡು ಸೇರಿತು.

**ಬಿರಿದ ಮುಗುಳು**

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕಹಿತಕೆ
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ
ಓ ಬನ್ನಿ, ಸೋದರರೆ ವಿಶ್ವಪಥಕೆ !

**ಕುವೆಂಪು**

ಇಟಲಿಗೆ ಬಂದವನೇ ಆಲ್ಬರ್ಟ್ ತನ್ನ ಜರ್ಮನ್ ಪೌರತ್ವವನ್ನೂ ಯೆಹೂದ್ಯ ಮತಾವಲಂಬನೆಯನ್ನೂ ಕೊಡಹಿ ಬಿಸುಟ. ನಿಜಕ್ಕೂ ಅವನೀಗ ಜಾತ್ಯತೀತ ವಿಶ್ವಮಾನವನಾಗಿದ್ದ[೮] (೧೮೯೫). ಕಟ್ಟುಗಳುಂಟೇ, ಕಟ್ಟುಪಾಡುಗಳುಂಟೇ ವಿಶ್ವಮತಿಯ ವಿಹಾರ ವೈಭವಕ್ಕೆ ?

ಸದ್ಯ ಇಟಲಿ ಅವನ ತವರೂರು. ಅಲ್ಲಿಯದು ಸುಂದರ ಸ್ವತಂತ್ರ ವಾತಾವರಣ. ಪ್ರಕೃತಿ ಸೌಂದರ್ಯಕ್ಕೂ ಶಿಲ್ಪಕಲೆಗೂ ಹೆಸರಾಂತ ದೇಶವದು. ಜನ ಮೃದು ಹೃದಯಿಗಳು, ಸ್ನೇಹಪರರು. ಸ್ನೇಹಿತನೊಡಗೂಡಿ ಆಲ್ಬರ್ಟ್ ಗುಡ್ಡಬೆಟ್ಟ ಕಾಡುಮೇಡು ಎಲ್ಲ ಕಡೆ ಬೇಕಾಬಿಟ್ಟಿ ಅಲೆದು ಯಥೇಚ್ಛವಾಗಿ ಸ್ವಾತಂತ್ರ್ಯಾಮೃತಪಾನಮಾಡಿ ಸುಖಿಸಿದ ; ಹರ್ಷ ತಳೆದ, ಹೊಸ ನೋಟ ಪಡೆದ, ಹೊಸಬನೇ ಆದ. ಭವಿಷ್ಯ ? ಅದರ ಗೊಡವೆಯೇ ಆಗ ಅವನಿಗಿರಲಿಲ್ಲ.

ಆದರೆ ಹರ್ಮನ್ನರ ವ್ಯವಹಾರ ಅಲ್ಲಿಯೂ ಕೈಗೊಡಲಾರಂಭಿಸಿತ್ತು. ಹೀಗಾಗಿ ಅವರು ಮಗನಿಗೆ ಭವಿಷ್ಯವನ್ನು ಕುರಿತಂತೆ ನಾಲ್ಕು ಎಚ್ಚರಿಕೆ ಮಾತು ಹೇಳುವುದು ಅಗತ್ಯವಾಯಿತು. ಆಲ್ಬರ್ಟ್ ಮತ್ತೆ ಶಾಲೆ ಸೇರಿ ತೇರ್ಗಡೆಗೊಂಡು ಡಿಪ್ಲೊಮ ಗಳಿಸಿ ಹುದ್ದೆ ಹಿಡಿಯಬೇಕೆಂಬುದು ಅವರ ಆಶಯ.

* * *

ಹೂರಣವನ್ನು ಕಣಿಕ ಆವರಿಸಿರುವಂತೆ ಸ್ವಿಟ್ಸರ್ಲೆಂಡ್ ದೇಶವನ್ನು ಇಟಲಿ, ಆಸ್ಟ್ರಿಯ, ಜರ್ಮನಿ ಮತ್ತು ಫ್ರಾನ್ಸ್ ದೇಶಗಳು ಸುತ್ತುವರಿದಿವೆ. ಇದೊಂದು ನೆಲದ್ವೀಪ. ಆವರಣ ದೇಶಗಳ ಪ್ರಭಾವ ಇಲ್ಲಿ ಎದ್ದು ಕಂಡರೂ ಇದು ಸ್ವತಂತ್ರರಾಷ್ಟ್ರ. ಉನ್ನತ ಶಿಕ್ಷಣಸಂಸ್ಥೆಗಳಿಗೆ ಎಂತೊ ಮುಕ್ತ ವಾತಾವರಣಕ್ಕೂ ಅಂತೆ ಹೆಸರಾಂತ ದೇಶ. ಇಲ್ಲಿಯ ಝೂರಿಕ್ ನಗರದ ಜರ್ಮನ್ ಭಾಷಾಪ್ರದೇಶದಲ್ಲಿ ಫೆಡರಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ—ಸಂಕ್ಷೇಪವಾಗಿ ಪಾಲಿಟೆಕ್ನಿಕ್—ಎಂಬ ವಿಖ್ಯಾತ ಶಿಕ್ಷಣಸಂಸ್ಥೆ ಇತ್ತು. ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿ ಈ ಸಂಸ್ಥೆ ಸೇರಿ ಅಧ್ಯಯನ ಮುಂದುವರಿಸಬೇಕೆಂದು ಇಚ್ಛಿಸಿದ ಆಲ್ಬರ್ಟ್ ಪ್ರವೇಶಪರೀಕ್ಷೆ ಬರೆದ. ಇವನಿಗೆ ದೊರೆತ ಬಿರುದು FAILED* (ಅನುತ್ತೀರ್ಣ ಅಥವಾ ನಪಾಸು). ಉರು ಹೊಡೆದು ಕಾರಬೇಕಾಗಿದ್ದ ಭಾಷಾಪತ್ರಿಕೆಗಳೂ ಸಸ್ಯ ಮತ್ತು ಪ್ರಾಣಿವಿಜ್ಞಾನ ಪತ್ರಿಕೆಗಳೂ ಈ ಪೋರನ ಎದುರಿದ್ದ ತಮ್ಮ 'ಹಳೆ ಹಗೆತನ'ವನ್ನು ಈಗ ಸಾಧಿಸಿದ್ದುವು ! ಆದರೆ ಗಣಿತ ಮತ್ತು ಭೌತವಿಜ್ಞಾನಗಳಲ್ಲಿ ಈತ ತನ್ನ ಖಚಿತ ಮುದ್ರೆ ಟಂಕಿಸದಿರಲಿಲ್ಲ. ಇವನ ಪಾಡನ್ನೂ, ಅಂತೆಯೇ, ಮೇಲ್ಮೆಯನ್ನೂ ಪಾಲಿಟೆಕ್ನಿಕ್ಕಿನ ಹಿರಿಯ ಪ್ರಾಧ್ಯಾಪಕರು ಗಮನಿಸಿದ್ದರು. ಉತ್ತಮ ಗಣಿತವಿದನಾಗಬಹುದಾದ ಗುಣಗಳು ಇವನಲ್ಲಿ ಹುದುಗಿವೆ ಎಂಬುದನ್ನು ಗುರುತಿಸಿದ್ದರು. ಇಂಥವನು ವೃಥಾ ಪ್ರವೇಶ ಪರೀಕ್ಷೆಯ ಪುನಸ್ಸಿದ್ಧತೆಯಲ್ಲಿ ಕಾಲಹರಣ ಮಾಡುವುದರ ಬದಲಾಗಿ ಸ್ವಿಟ್ಸರ್ಲೆಂಡಿನ ಇನ್ನೊಂದು ಭಾಗದಲ್ಲಿದ್ದ ಆರೌ ಪಟ್ಟಣದ ಶಾಲೆಯಲ್ಲಿ ಪೂರ್ವಶಿಕ್ಷಣ ಪಡೆದು ಪಾಲಿಟೆಕ್ನಿಕ್ಕಿಗೆ ನೇರ ಪ್ರವೇಶ ಪಡೆಯಬಹುದೆಂದು ಸೂಚಿಸಿದರು.

ಮತ್ತೆ ಮ್ಯೂನಿಕ್ಕಿನ ತುರಂಗಶಾಲೆಯ ಪುನರಾವರ್ತನೆ ? ಆರೌಗೆ ಹೋಗಲಾರೆ ಎಂದು

---

* ಗಣಿತಮೇರು ಶ್ರೀನಿವಾಸ ರಾಮಾನುಜನ್ (೧೮೮೭-೧೯೨೦) ಕೂಡ FA ಪರೀಕ್ಷೆಯಲ್ಲಿ FAILED (೧೯೦೪). ಪರೀಕ್ಷೆಯ ಅಂಧಯಂತ್ರ ಪ್ರತಿಭೆಯ ಪ್ರಕಾಶವನ್ನು ಎಂದಾದರೂ ಗುರುತಿಸೀತೇ ? ವ್ಯವಸ್ಥೆಯ ಜಡಚೌಕಟ್ಟಿನೊಳಗೆ ಪಟು ಸಾಕ್ರಟೀಸನಿಗೆ ನೆಲೆ ಉಂಟೇ ? ನೋಡಿ:ಇದೇ ಲೇಖಕನ *ರಾಮಾನುಜನ್ ಬಾಳಿದರಿಲ್ಲಿ*

ಆಲ್ಬರ್ಟ್ ಒಮ್ಮೆ ಯೋಚಿಸಿದ. ಏನಾದರೂ ಕೆಲಸ ಹಿಡಿದು ಬಾಳೋಣವೆಂದು ಬಗೆದ. ಆದರೆ ಹದಿನಾರರ ಹುಂಬ. ಸ್ವಿಟ್ಸರ್ಲೆಂಡ್ ಪೌರತ್ವವಿರದಾತ. ಯಾವ ಸಾರ್ಥಕ ಹುದ್ದೆಯನ್ನು ತಾನೇ ಅಲ್ಲಿ ಗಳಿಸಿಕೊಂಡಾನು ? ಅಡಿಯ ಹಿಂದಿಡೆ ನರಕ, ಸರಿ, ಅಡಿಯ ಮುಂದಿಡೆ ಕೂಡ ನರಕವೇ. ಆದರೂ ಅವನು ಅಡಿಯನ್ನು ಮುಂದಿಟ್ಟ, ಆರೌ ಶಾಲೆಯನ್ನು ಸೇರಿಯೇಬಿಟ್ಟ, ದಿಟ್ಟ.

ಪರಮಾಶ್ಚರ್ಯ ! ಆಲ್ಬರ್ಟ್ ಕನಸು ಕಾಣುತ್ತಿದ್ದ ವಿಮುಕ್ತ ಶಾಲೆ ಅದಾಗಿತ್ತು. ಶಾಲೆಯ ಒಬ್ಬ ಉದಾತ್ತ ಉಪಾಧ್ಯಾಯ ಪ್ರೊಫೆಸರ್ ಜಾಸ್ಟ್ ವಿಂಟೆಲರ್ (೧೮೪೬-೧೯೨೯) ಇವನಿಗೆ ತನ್ನ ಮನೆಯಲ್ಲಿಯೇ ಆಸರೆ ಕೊಟ್ಟು ಉಪಚರಿಸಿದ. ಆ ತುಂಬು ಸಂಸಾರದ ಜೊತೆ ನಡೆಸಿದ ಒಂದು ವರ್ಷದ ವಾಸ್ತವ್ಯ ಆಲ್ಬರ್ಟನನ್ನು ಹೊಸ ವ್ಯಕ್ತಿಯಾಗಿಯೇ ಮಾರ್ಪಡಿಸಿತು. ಪ್ರೊಫೆಸರ್ ವಿಂಟೆಲರರ ಮಗ ಪಾಲ್‌ನನ್ನು (೧೮೮೨-೧೯೫೨) ಮುಂದೊಂದು ದಿನ ಮಾಜಾ ಮದುವೆಯಾದಾಗ ಈ ಸಂಬಂಧಕ್ಕೆ ಹೊಸ ಅರ್ಥ ಬಂದಿತು.

ಈ ವೇಳೆಗೆ ಇವನು ಕಲನಶಾಸ್ತ್ರವನ್ನು (calculus)[೯] ಸ್ವಂತವಾಗಿ ಕಲಿತು ಅದರಲ್ಲಿ ಪ್ರಾವೀಣ್ಯ ಗಳಿಸಿದ್ದ. ಭೌತ ಮತ್ತು ಗಣಿತವಿಜ್ಞಾನಗಳ ಪ್ರಮುಖ ಹತ್ಯಾರು ಮತ್ತು ಭಾಷೆ ಕಲನಶಾಸ್ತ್ರ. ಭೌತಪ್ರಪಂಚ ಕುರಿತಂತೆ ಹಲವಾರು ಮೂಲಭೂತ ಪ್ರಶ್ನೆಗಳು ಇವನನ್ನು ಕಾಡುತ್ತಿದ್ದುವು. ಎರಡು ಮುಖ್ಯ ಪ್ರಶ್ನೆಗಳಿವು : ಬೆಳಕಿನ ಅಲೆಯೊಡನೆ ಧಾವಿಸುವಾತನಿಗೆ ಆ ಅಲೆ ಹೇಗೆ ಕಾಣಬಹುದು ? ಬೆಳಕಿನ ಅಲೆಗಿಂತ ಅಧಿಕ ವೇಗದಲ್ಲಿ ಜಿಗಿಯುವಾತನಿಗೆ ಆ ಅಲೆ ಸ್ಥಗಿತವಾಗಿರುವಂತೆ ಕಾಣಬಹುದೇ ? (ಬೆಳಕಿನ ವೇಗ ಸೆಕೆಂಡಿಗೆ ಮೂರು ಲಕ್ಷ ಕಿಲೊಮೀಟರುಗಳು).

ಆರೌ ಶಾಲೆಯಲ್ಲಿದ್ದಾಗ ಆಲ್ಬರ್ಟ್ 'ಅಭ್ಯಾಸ'ವಾಗಿ ಬರೆದ ಮತ್ತು ಅಧ್ಯಾಪಕನಿಂದ ತಿದ್ದಲ್ಪಟ್ಟ ಪ್ರಬಂಧದ ಸಾರ :

"ಭವಿಷ್ಯದ ಬಗೆಗೆ ನನ್ನ ಯೋಜನೆಗಳು : ಸುಖಿಯಾದ ಒಬ್ಬ ವ್ಯಕ್ತಿ ವರ್ತಮಾನದ ಬಗ್ಗೆ ಅದೆಷ್ಟು ಸಂತುಷ್ಟನಾಗಿರುವನೆಂದರೆ ಅವನೆಂದೂ ಭವಿಷ್ಯ ಕುರಿತು ಹೆಚ್ಚಿನ ಚಿಂತೆ ಹಚ್ಚಿಕೊಳ್ಳುವುದೇ ಇಲ್ಲ. ತರುಣರಾದರೋ ದಿಟ್ಟ ಯೋಜನೆಗಳ ಬೆಂಬತ್ತಿ ಸಾಗುವುದೇ ಸದಾ ಅವರ ಪ್ರವೃತ್ತಿ. ತನ್ನ ಆಸೆ ಆಕಾಂಕ್ಷೆಗಳ ಲಕ್ಷ್ಯವೇನು ಎಂಬುದರ ಬಗ್ಗೆ ಸಾಧ್ಯವಾಗುವಷ್ಟು ನಿಷ್ಕೃಷ್ಟ ಚಿತ್ರ ರೂಪಿಸಿಕೊಳ್ಳಬೇಕಾದದ್ದು ನಿಷ್ಠಾವಂತ ತರುಣನಿಗೆ ಸಹಜವಾದದ್ದೂ ಹೌದು.

"ಪರೀಕ್ಷೆಗಳನ್ನು ಜಯಪ್ರದವಾಗಿ ಅಡ್ಡಹಾಯುವ ಸೌಭಾಗ್ಯ ನನ್ನದಾದರೆ ಆಗ ನಾನು ಫೆಡರಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ದಾಖಲಾಗುತ್ತೇನೆ. ಅಲ್ಲಿ ನಾಲ್ಕು ವರ್ಷ ಪರ್ಯಂತ ತಂಗಿದ್ದು ಗಣಿತವನ್ನೂ ಭೌತವಿಜ್ಞಾನವನ್ನೂ ವ್ಯಾಸಂಗಿಸುತ್ತೇನೆ. ನೈಸರ್ಗಿಕ ವಿಜ್ಞಾನಗಳ ಈ ವಿಭಾಗದಲ್ಲಿ, ಇವುಗಳ ಸೈದ್ಧಾಂತಿಕ ಶಾಖೆಗಳನ್ನು ಆಯ್ದುಕೊಂಡು, ಪ್ರಾಧ್ಯಾಪಕನಾಗುವ ಆಸೆ ಇಟ್ಟುಕೊಂಡಿದ್ದೇನೆ.

"ನಾನು ಈ ಯೋಜನೆ ಆಯಲು ಕಾರಣಗಳಿವು : ಎಲ್ಲಕ್ಕಿಂತ ಮುಖ್ಯವಾದವೆಂದರೆ ಅಮೂರ್ತ ಮತ್ತು ಗಣಿತೀಯ ಚಿಂತನೆಯತ್ತ ನನಗಿರುವ ವೈಯಕ್ತಿಕ ಒಲವು, ಮತ್ತು ನನ್ನಲ್ಲಿ ಕಲ್ಪನಾವಿಹಾರ ಹಾಗೂ ಪ್ರಾಯೋಗಿಕ ಕೌಶಲ ಇವುಗಳ ಅಭಾವ. ಇನ್ನು ನನ್ನ ಅಪೇಕ್ಷೆಗಳೂ ಇವೆ. ಅವಾದರೂ ನನ್ನಲ್ಲಿ ಇದೇ ನಿರ್ಧಾರವನ್ನು ಪ್ರೇರಿಸಿವೆ. ಇದು ತೀರ ಸಹಜವಾದದ್ದು. ಒಬ್ಬಾತನ ಒಲವು ಸದಾ ಇರುವುದು ಆತ ಕುಶಲತೆಯಿಂದ ನಿರ್ವಹಿಸಬಲ್ಲ ಕಾರ್ಯಗಳನ್ನು ಮಾಡುವುದರತ್ತ. ಅಲ್ಲದೇ ವೈಜ್ಞಾನಿಕ ವೃತ್ತಿಯಲ್ಲಿ ಒಂದು ವಿಧದ ಸ್ವಾತಂತ್ರ್ಯವಿದೆ. ಇದು ನನಗೆ ಪರಮ ಪ್ರಿಯವಾದದ್ದು."

ಕೆಲಸವನು ಮಾಡುತ್ತ ಸಂತೋಷ ತಳೆವಾತ
ಸುಲಭಮಾರ್ಗವ ತೊರೆದು ಹೊಸ ಹಾದಿ ತುಳಿವಾತ
ಗೆಲುವು ಸೋಲುಗಳನ್ನು ಲೆಕ್ಕಿಸದೆ ದುಡಿವಾತ
ತಿಳಿಯೊ ಜೀವನ್ಮುಕ್ತ ಸಂತೃಪ್ತ ಅತ್ರಿಸೂನು

ಆಲ್ಬರ್ಟ್ ಆರೌ ಶಾಲೆಯಲ್ಲಿ, ಮೇಲಾಗಿ ಅಲ್ಲಿಯ ಹಿತಕರ ಪರಿಸರದಲ್ಲಿ, ಸಾಕಷ್ಟು ಬೌದ್ಧಿಕ ಪೋಷಣೆ ಪಡೆದು ಝೂರಿಕ್ಕಿನ ಪಾಲಿಟೆಕ್ನಿಕ್ಕನ್ನು ಪ್ರವೇಶಿಸಿದ. ತನ್ನ ಆಸಕ್ತಕ್ಷೇತ್ರ ಭೌತವಿಜ್ಞಾನ, ಜೀವನಧ್ಯೇಯ ಉದಾತ್ತ ಉಪಾಧ್ಯಾಯನಾಗುವುದು ಎಂಬ ಸ್ಪಷ್ಟ ನಿಲವನ್ನು ಇವನೀಗ ತಳೆದಿದ್ದ. ತಂದೆಯಿಂದ ಹಾಗೂ ಸಮೀಪದ ಬಂಧುವೊಬ್ಬನಿಂದ ಮಿತಮೊತ್ತದ ಆರ್ಥಿಕ ಸಹಾಯ ಒಸರಿ ಬರುತ್ತಿತ್ತು. ಆ ಮಹಾನಗರದಲ್ಲಿ ಈ ಅಪ್ರಸಿದ್ಧ ತರುಣನ ಬಾಳು ಬಹುತೇಕ ಬಡತನದ್ದೇ—ಉಣಿಸು ವಸನ ವಸತಿ ಒಂದೊಂದರಲ್ಲೂ. ಹೊಟ್ಟೆ ಕಟ್ಟಿ ಕಾಸು ಉಳಿಸಿ ಸಂಗೀತಗೋಷ್ಠಿಗಳಿಗೆ ಶುಲ್ಕ ತೆತ್ತು ಹೋಗುತ್ತಿದ್ದ. ಮುಂದೊಂದು ದಿವಸ ಸ್ವಿಸ್ ಪೌರತ್ವ ಸಂಪಾದಿಸಲು ಹಣ ಬೇಕಾದೀತೆಂದು ಬಗೆದು ತನ್ನ ಅಲ್ಪ ಆದಾಯದಲ್ಲಿ ಒಂದಿಷ್ಟನ್ನು ಆ ಉದ್ದೇಶಕ್ಕಾಗಿ ಮೀಸಲಿಡುತ್ತಿದ್ದ. ಆಡಂಬರದ ಬಾಳು ಇವನನ್ನೆಂದೂ ಆಕರ್ಷಿಸಿದ್ದಿಲ್ಲ—ಭವಿಷ್ಯದ ಪರಮೋಜ್ಜ್ವಲ ದಿನಗಳಲ್ಲಿ ಕೀರ್ತಿ ಸಂಪತ್ತು ಜನಾರಾಧನೆ ಇವನ ಬೆನ್ನಟ್ಟಿ ಬೆರಸಿಕೊಂಡು ಬಂದಾಗ ಕೂಡ.

ತರುಣ ಆಲ್ಬರ್ಟ್ ಹೇಗಿದ್ದ ?

ಕಟ್ಟುಮಸ್ತಾದ ಆಳು, ಕೊನರುತ್ತಿದ್ದ ಮೀಸೆ, ದಟ್ಟ ಗುಂಗುರುಕೂದಲು. ಉಜ್ಜ್ವಲ ನೇತ್ರಗಳು, ಸೌಮ್ಯ ಮತ್ತು ಆಕರ್ಷಕ ವದನ. ಸದಾ ಗಂಭೀರ, ಚಿಂತನಶೀಲ. ಅಡಕವಲ್ಲದ ಅಳ್ಳಕ ಉಡುಪು. ಜನಸಂದಣಿಯಿಂದ ದೂರವಿರಲು ಚಡಪಡಿಸುವಾತ. ಯೋಚಿಸಿ ಪದಗಳನ್ನು ತೂಗಿ ನಿಧಾನವಾಗಿ ಮಾತಾಡುವ ಅಥವಾ ಹೊರಗೆಡಹುವ ಪ್ರವೃತ್ತಿ. ಕ್ರಾಂತಿಕಾರೀ ಭಾವನೆಗಳ ಸಂತತ ತಾಡನೆಗಳಿಂದ ಪೀಡಿತನಾದ ತರುಣ. "ಭಾವನೆಗಳು ದೇವರಿಂದ ಬರುತ್ತವೆ," ಎಂಬುದಾಗಿ ಮುಂದೊಂದು ದಿವಸ ಜಗದ್ವಿಖ್ಯಾತ ಐನ್‌ಸ್ಟೈನ್ ಹೇಳಿದ್ದುಂಟು. ಅವರ ಪರಿಭಾಷೆಯಲ್ಲಿ ನಿಸರ್ಗವೇ ದೇವರು, ಮನುಷ್ಯಕಲ್ಪಿತ ಮಾನವರೂಪದ ದೇವರು ಅಲ್ಲ.

ಐನ್‌ಸ್ಟೈನರ ಜೀವನಚರಿತ್ರೆಯನ್ನು ಇವರ ಅಳಿಯ (ಮಗಳ ಗಂಡ) ರೂಡಾಲ್ಫ್ ಕೈಸರ್ (೧೮೯೩-೧೯೬೪) ಬರೆದಿದ್ದಾರೆ. ಈ ಗ್ರಂಥಕ್ಕೆ ಮುನ್ನುಡಿಯಾಗಿ ಐನ್‌ಸ್ಟೈನ್ ಬರೆದಿರುವ ಮಾತು, "ಪುಸ್ತಕದ ವಾಸ್ತವಾಂಶಗಳು ಯಥಾಯೋಗ್ಯವಾಗಿ ನಿಷ್ಕೃಷ್ಟವಾಗಿರುವುದನ್ನೂ ಇದರ ವ್ಯಕ್ತಿಗುಣ ವರ್ಣನೆ, ಆದ್ಯಂತ, ನಾನು ಇನ್ನೊಬ್ಬ ಆಗಲಾರೆ ಹೇಗೊ ಹಾಗೆ ಒಬ್ಬ ಇನ್ನೊಬ್ಬ ಆಗದೆ ತಾನೇ ಆಗಿರುವಾತನಿಂದ ನಿರೀಕ್ಷಣೆ ಮಾಡಬಹುದಾದಷ್ಟು ಸಮರ್ಪಕವಾಗಿರುವುದನ್ನೂ ಕಂಡೆ. ಪ್ರಾಯಶಃ ಇಲ್ಲಿ ಗಮನಿಸದಿರುವ ಅಂಶವೆಂದರೆ ಎಂದೂ ಆಯಾಸ ಹೊಂದದೆ ಕ್ರಿಯಾಶೀಲವಾಗಿರುವ ನಿಸರ್ಗ ಆತ್ಮಾನಂದಕ್ಕಾಗಿಯೊ ಎಂಬಂತೆ ವ್ಯಕ್ತಿಯಲ್ಲಿ ನೆಡುವ ಅತಾರ್ಕಿಕತೆ, ಅಸಾಂಗತ್ಯ, ವೈಲಕ್ಷಣ್ಯ ಮತ್ತು ವೈಕಲ್ಯ ಕೂಡ. ಆದರೆ ಇವು ಪ್ರತ್ಯೇಕಿತವಾಗುವುದು ವ್ಯಕ್ತಿಯ ಸ್ವಂತ ಮನಸ್ಸಿನ ಮೂಸೆಯಲ್ಲಿ ಮಾತ್ರ."

ಐನ್‌ಸ್ಟೈನರ ಭಾವನೆಯಲ್ಲಿ ಪರವಸ್ತು, ದೇವರು, ನಿಸರ್ಗ, ವಿಶ್ವ ಎಂದರೆ ಒಂದೇ—

ಜೀವ ಜಡರೂಪ ಪ್ರಪಂಚವನದಾವುದೋ
ಆವರಿಸಿಕೊಂಡುಮೊಳನೆರೆದುಮಿಹುದಂತೆ

ಭಾವಕಳವಡದಂತೆ ಅಳತೆಗಳವಡದಂತೆ
ಆ ವಿಶೇಷಕೆ ಮಣಿಯೊ ಮಂಕುತಿಮ್ಮ

"ಸುದೀರ್ಘ ಜೀವನದಲ್ಲಿ ನಾನು ಒಂದು ಸಂಗತಿಯನ್ನು ಕಂಡುಕೊಂಡಿದ್ದೇನೆ. ವಾಸ್ತವತೆಗೆ ಎದುರಾಗಿ ಅಳೆದಾಗ ನಮ್ಮ ಸಮಸ್ತ ವಿಜ್ಞಾನವೂ ತೀರ ಆದಿಮವಾದದ್ದು, ಬಾಲಿಶವಾದದ್ದು. ಹೀಗಿದ್ದಾಗ್ಯೂ ಇದು ನಮ್ಮ ವಶದಲ್ಲಿರುವ ಅತ್ಯಂತ ಅಮೂಲ್ಯವಸ್ತು." ವಿಶ್ವವಿಸ್ಮಯಗಳ ಮೂಕ ಪ್ರೇಕ್ಷಕರಾಗಿ ಐನ್‌ಸ್ಟೈನ್ ಆಡಿದ ನುಡಿಗಳಿವು.

ತಾತ್ತ್ವಿಕವಾಗಿ ಈಗ ಆಲ್ಬರ್ಟ್ ಪಾಲಿಟೆಕ್ನಿಕ್ಕಿನ ವಿದ್ಯಾರ್ಥಿ (೧೮೯೬). ಆದರೆ ಒಮ್ಮೆ ಅನುಭವಿಸಿದ ಸ್ವಾತಂತ್ರ್ಯದ ರಸಸುಖವನ್ನು ಇವನು ತರಗತಿಗೆ ಹೋಗಿ ಕುಳಿತುಕೊಂಡು ಪಾಠ ಆಲಿಸುತ್ತ ಟಿಪ್ಪಣಿ ಗೀಚುತ್ತ ಅಧ್ಯಾಪಕರು ಸೂಚಿಸಿದ ಆಕರಗ್ರಂಥಗಳನ್ನು ಪಠಿಸುತ್ತ ಕಳೆದು ಕೊಂಡಾನೇ ? ಇಂಥ ಯಾವ ನಿರ್ಬಂಧವೂ ಇವನಿಗೆ ಒಗ್ಗದು—ಅಲರ್ಜಿ ! ಹಾಗಾದರೆ ಇವನೇಕೆ ಪಾಲಿಟೆಕ್ನಿಕ್ಕಿಗೆ ದಾಖಲಾದ ? ಹೊಟ್ಟೆಪಾಡಿಗೆ ಹುದ್ದೆ ಬೇಕು. ಹುದ್ದೆ ಪಡೆಯಲು ಪದವಿ (ಡಿಪ್ಲೊಮ) ಬೇಕು, ಪದವಿ ಗಳಿಸಲು ಪಾಲಿಟೆಕ್ನಿಕ್ ವಿದ್ಯಾರ್ಥಿ ಆಗಬೇಕು.

ಪಾಲಿಟೆಕ್ನಿಕ್ಕಿನ ಪ್ರಾಧ್ಯಾಪಕರು ತಮ್ಮ ಪಾಠಪ್ರವಚನಗಳಿಂದಾಗಲಿ ಆಸಕ್ತಿ ಚಿಂತನೆಗಳಿಂದಾಗಲಿ ಇವನನ್ನು ತಮ್ಮೆಡೆಗೆ ಆಕರ್ಷಿಸಲು ಸಮರ್ಥರಾಗಲಿಲ್ಲ. ನಿಯಮಿತ ಪಠ್ಯಪಟ್ಟಿ ವಿಧಿಸಿದ್ದ ಸೀಮಿತ ಜಾಡಿನೊಳಗೆ ಕ್ರಮಬದ್ಧವಾಗಿ ಸಾಗುತ್ತಿದ್ದ ಅವರ ಬೋಧನವಿಧಾನದಲ್ಲಿ ವಿಜ್ಞಾನದ ಸಾರಭೂತಾಂಶವೇ ಗೈರುಹಾಜರಾಗಿದೆ ಎಂದು ಇವನಿಗೆ ಅನ್ನಿಸುತ್ತಿತ್ತು. ಮಾಹಿತಿಗಳ ಅಚ್ಚುಗಟ್ಟಾದ ಗುಪ್ಪೆ ವಿಜ್ಞಾನವಲ್ಲ—ಅದರ ಹಿಂದಿರುವ ಸೃಷ್ಟ್ಯಾತ್ಮಕ ಮನಸ್ಸಿನ ಅಮೂರ್ತ ವ್ಯಾಪಾರವೇ ವಿಜ್ಞಾನ. ಸಿದ್ಧಾಂತಗಳ ವ್ಯವಸ್ಥಿತ ನಿರೂಪಣೆ ವಿಜ್ಞಾನವಲ್ಲ—ಅದರ ಬುಡದಲ್ಲಿರುವ ಅನ್ವೇಷಕ ಬುದ್ಧಿ ಎಸಗುವ ಆವಿಷ್ಕಾರವೇ ವಿಜ್ಞಾನ. ಸಮೀಕರಣಗಳ ಗೋಜುಗೋಜಲು ಮಜಲು ವಿಜ್ಞಾನವಲ್ಲ—ಅದರ ತಳದಲ್ಲಿರುವ ಪ್ರತಿಭಾಗೋಚರ ಸತ್ಯವೇ ವಿಜ್ಞಾನ. ಕುತೂಹಲಭರಿತ ಮತ್ತು ಸೃಜನಶೀಲ ಮಾನವಮತಿ ನಿಸರ್ಗದ ಅಸಂಖ್ಯ ಅನಿರೀಕ್ಷಿತ ಅನೂಹ್ಯ ಮತ್ತು 'ಅಕ್ರಮ' ವಿದ್ಯಮಾನಗಳ ಜೊತೆ ಅಂತರಕ್ರಿಯೆ ನಡೆಸಿದಾಗ ವಿಜ್ಞಾನ[೧೧] ಮೈದಳೆಯುತ್ತದೆ. ಆಲ್ಬರ್ಟ್ ಕನಸು ಕಾಣುತ್ತಿದ್ದುದು ಇಂಥ ವಿಜ್ಞಾನವನ್ನು, ವ್ಯವಹರಿಸುತ್ತಿದ್ದುದು ಇಂಥ ವಿಜ್ಞಾನಲೋಕದಲ್ಲಿ, ಸ್ಫೂರ್ತಿ ಪಡೆಯುತ್ತಿದ್ದುದು ಇಂಥ ವಿಜ್ಞಾನದಿಂದ. ಅಚ್ಚರಿಯ ಸಂಗತಿ ಎಂದರೆ ವಿಜ್ಞಾನಗಳ ರಾಣಿ ಎಂದು ಪ್ರಸಿದ್ಧವಾಗಿರುವ ಖುದ್ದು ಗಣಿತವಿಜ್ಞಾನದ ಬಗ್ಗೆಯೇ ಈತ ವಿರಕ್ತನಾಗಿದ್ದುದು. ತಾನು ರೂಪಿಸಿಕೊಂಡಿದ್ದ ಪಥಕ್ರಮಣಕ್ಕೆ—ಭೌತವಿಜ್ಞಾನದ ಮೂಲಭೂತ ನಿಯಮಗಳ ಅನ್ವೇಷಣೆ—ಪ್ರಾಥಮಿಕ ಗಣಿತನಿಯಮಗಳೂ ಸೂತ್ರಗಳೂ ಸಾಕು, ಪ್ರೌಢಗಣಿತವೇನೂ ಬೇಕಾಗದು ಎಂಬುದಾಗಿ ಇವನು ಅಂದು ನಂಬಿದ್ದ. ಹೀಗಾಗಿ ಸಾಕ್ಷಾತ್ ಹರ್ಮನ್ ಮಿಂಕೊವ್ಸ್ಕೀಯವರಂಥ (೧೮೬೪-೧೯೦೯) ಅಂತಾರಾಷ್ಟ್ರೀಯ ಖ್ಯಾತಿವೆತ್ತ ಗಣಿತ ವಿದ್ವಾಂಸರ ತರಗತಿಗಳು ಕೂಡ ಇವನಿಗೆ ರುಚಿಸಲಿಲ್ಲ.

ಪಾಲಿಟೆಕ್ನಿಕ್ಕಿನಲ್ಲಿ ತಾವು ಇದ್ದ ದಿನಗಳನ್ನು ಕುರಿತು ಐನ್‌ಸ್ಟೈನ್ "ಆತ್ಮಚರಿತ್ರೆ"ಯಲ್ಲಿ ಬರೆದಿದ್ದಾರೆ, "ಅಲ್ಲಿ ಬಲು ಸಮರ್ಥ ಗಣಿತ ಪ್ರಾಧ್ಯಾಪಕರಿದ್ದರು (ಉದಾಹರಣೆಗೆ ಹರ್ವಿಟ್ಝ್, ಮಿಂಕೊವ್ಸ್ಕೀ ಮೊದಲಾದವರು). ಹೀಗಾಗಿ ನಿಜಕ್ಕೂ ನಾನು ಪರಿಪುಷ್ಟ ಗಣಿತಶಿಕ್ಷಣ ಪಡೆಯಬಹುದಾಗಿತ್ತು. ಆದರೂ ಹೆಚ್ಚಿನ ವೇಳೆಯನ್ನು ಭೌತವಿಜ್ಞಾನದ ಪ್ರಯೋಗಮಂದಿರದಲ್ಲಿ ಕೆಲಸ ಮಾಡುತ್ತ ವಿನಿಯೋಗಿಸುತ್ತಿದ್ದೆ. ಅಲ್ಲಿ ಅನುಭವದೊಡನೆ ಒದಗುತ್ತಿದ್ದ ನೇರ ಸಂಸ್ಪರ್ಶ ನನ್ನನ್ನು

ಸಂಮೋಹಗೊಳಿಸಿತ್ತು. ಉಳಿಕೆ ಕಾಲ ಹೆಚ್ಚಾಗಿ ಮನೆಯಲ್ಲಿ ಕಿರ್ಖಫ್, ಹೆಲ್ಮ್‌ಹಾಲ್ಟ್ಝ್, ಹರ್ಟ್ಸ್ ಮೊದಲಾದವರ[೧೧] ಕೃತಿಗಳ ಅಧ್ಯಯನದಲ್ಲಿ ನಿರತನಾಗಿರುತ್ತಿದ್ದೆ. ಗಣಿತವನ್ನು ನಾನು ಸ್ವಲ್ಪ ಮಟ್ಟಿಗೆ ಕಡೆಗಣಿಸಿದ್ದು ಪ್ರಾಕೃತಿಕ ವಿಜ್ಞಾನಗಳಲ್ಲಿ ನನಗೆ ಗಣಿತಕ್ಕಿಂತ ಪ್ರಬಲತರ ಆಸಕ್ತಿ ಇತ್ತೆಂಬ ಒಂದೇ ಕಾರಣಕ್ಕಾಗಿ ಅಲ್ಲ. ಬೇರೊಂದು ವಿಚಿತ್ರಾನುಭವವೂ ಅದರ ಕಾರಣವಾಗಿತ್ತು : ಗಣಿತ ಹಲವಾರು ವಿಶೇಷ ವಿಭಾಗಗಳಾಗಿ ಒಡೆದು ಹೋಗಿದ್ದುದನ್ನು ಕಂಡೆ ; ಪ್ರತಿಯೊಂದು ವಿಭಾಗವೂ ನಮಗೆ ದತ್ತವಾಗಿರುವ ಅಲ್ಪಾಯುಷ್ಯವನ್ನು ಸುಲಭವಾಗಿ ಆಪೋಶಿಸಲು ಸಾಕು. ಹೀಗಾಗಿ, [ಸರ್ವ ಸಮಾನವಾದ ಎರಡು ಹುಲ್ಲುಕಂತೆಗಳನ್ನು ಎದುರು ಹಿಡಿದಾಗ] ಯಾವ ನಿರ್ದಿಷ್ಟ ಹುಲ್ಲುಕಂತೆಯನ್ನು ಆಯಬೇಕು ಎಂಬುದನ್ನು ನಿರ್ಧರಿಸಲಾಗದ ಬ್ಯೂರಿಡನ್ನನ ಕತ್ತೆಯಂತಾಯಿತು[೧೨] ನನ್ನ ಸ್ಥಿತಿ. ಗಣಿತಕ್ಷೇತ್ರದಲ್ಲಿ ಮೂಲಭೂತವಾಗಿ ಪ್ರಮುಖವಾದದ್ದು ಯಾವುದು, ನಿಜಕ್ಕೂ ಆಧಾರ ರೂಪದ್ದು ಯಾವುದು ಎಂಬುದನ್ನು ಉಳಿದ ಹೆಚ್ಚು ಕಡಿಮೆ ನಿವಾರ್ಯ ಪ್ರೌಢಪಾಂಡಿತ್ಯದಿಂದ ಸ್ಪಷ್ಟವಾಗಿ ವಿಭೇದೀಕರಿಸುವಷ್ಟರ ಮಟ್ಟಿಗೆ ನನ್ನ ಅಂತರ್ಬೋಧೆ (intuition) ಬಲಶಾಲಿ ಆಗಿಲ್ಲದಿದ್ದುದೇ ಇದರ ಕಾರಣವೆಂಬುದರಲ್ಲಿ ಸಂದೇಹವಿಲ್ಲ. ಇಷ್ಟೂ ಅಲ್ಲದೆ ನಿಸರ್ಗಜ್ಞಾನದ ಬಗ್ಗೆ ನನಗಿದ್ದ ಕುತೂಹಲ ನಿಸ್ಸಂದಿಗ್ಧವಾಗಿಯೂ ಪ್ರಬಲತರವಾಗಿತ್ತು ; ಆದರೆ ಭೌತವಿಜ್ಞಾನದ ಆಧಾರತತ್ತ್ವಗಳನ್ನು ಕುರಿತ ಹೆಚ್ಚು ಆಳವಾದ ತಿಳಿವಳಿಕೆಯನ್ನು ಗಳಿಸುವುದರತ್ತ ಸಾಗುವ ಹಾದಿ ಅತ್ಯಂತ ಜಟಿಲ ಹಾಗೂ ಸೂಕ್ಷ್ಮ ಗಣಿತವಿಧಾನಗಳಿಂದ ಬಂಧಿತವಾಗಿದೆ ಎಂಬ ಸಂಗತಿ ವಿದ್ಯಾರ್ಥಿ ಆಗಿದ್ದ ನನಗೆ ಸ್ಪಷ್ಟವಾಗಿರಲಿಲ್ಲ. ಮುಂದೆ ಸ್ವತಂತ್ರವಾಗಿ ವೈಜ್ಞಾನಿಕ ಅನ್ವೇಷಣೆ ಮಾಡುತ್ತ ಸಾಗಿದಂತೆ ಕ್ರಮೇಣ ಈ ಜ್ಞಾನೋದಯವಾಯಿತು. ನಿಜಸಂಗತಿ ಎಂದರೆ ಭೌತ ವಿಜ್ಞಾನವೂ ಪ್ರತ್ಯೇಕ ವಲಯಗಳಾಗಿ ಒಡೆದುಹೋಗಿತ್ತು. ಇಂಥ ಒಂದೊಂದು ವಲಯವೂ, ಆಳವಾದ ತಿಳಿವಳಿಕೆ ಗಳಿಸಬೇಕೆಂಬ ಹಸಿವನ್ನು ಎಂದೂ ಹಿಂಗಿಸದೆ, ಇಡೀ ಆಯುರ್ಮಾನದ ಕಾರ್ಯವನ್ನೇ ಕಬಳಿಸಬಲ್ಲದಾಗಿತ್ತು. ಇಲ್ಲಿಯೂ ಅರ್ಧಂಬರ್ಧವಾಗಿ ಸಂಬಂಧಿತವಾಗಿದ್ದ ದತ್ತಾಂಶಗಳ (data) ರಾಶಿ ಅಗಾಧವಾಗಿತ್ತು. ಆದರೆ ಈ ರಂಗದಲ್ಲಿ ನಾನು ಬೇಗನೆ ಯಾವುದು ಮೂಲಭೂತಾಂಶಗಳತ್ತ ಒಯ್ಯಬಲ್ಲದು ಎಂಬುದನ್ನು ಮೂರಿಯಿಂದಲೇ ಮೂಸಲು ಕಲಿತೆ, ಮತ್ತು ಮನಸ್ಸಿನ ಮೇಲೆ ಪೇರಿಕೊಂಡು ಬಂದು ಅದನ್ನು ಸಾರಭೂತ ವಿಷಯದಿಂದ ಕದಲಿಸುವ ಉಳಿದೆಲ್ಲವುಗಳಿಂದ ವಿಮುಖನಾಗಲು ತೊಡಗಿದೆ. ಇಲ್ಲೊಂದು ಸಿಕ್ಕು ಇತ್ತು : ತನಗೆ ಒಲವು ಇರಲಿ ಇಲ್ಲದಿರಲಿ, ವಿದ್ಯಾರ್ಥಿ, ಪರೀಕ್ಷೆಗಳಿಗೋಸ್ಕರ ಇವೆಲ್ಲ ರದ್ದಿಗಳನ್ನೂ ಮನದಾಳಕ್ಕೆ ಗಿಡಿಯಲೇಬೇಕಾಗಿತ್ತು. ಈ ಬಲವದ್ಬಂಧ ನನ್ನನ್ನು ಎಷ್ಟು ಧೃತಿಗೆಡಿಸಿಬಿಟ್ಟಿತೆಂದರೆ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣನಾದ ತರುವಾಯ ಮುಂದಿನ ಪೂರ್ತಿ ಒಂದು ವರ್ಷ ಕಾಲ ನನಗೆ ಯಾವುದೇ ವೈಜ್ಞಾನಿಕ ಸಮಸ್ಯೆಯ ಪರಿಶೀಲನೆಯೂ ಅರುಚಿಕರವಾಗಿತ್ತು."

ಆಲ್ಬರ್ಟನ ಚಿಂತನವಿಧಾನದಲ್ಲಿ ಎದ್ದು ಪರಿಮಳಿಸುತ್ತಿದ್ದ ಹೊಸತನ, ವಾದದಲ್ಲಿ ಹೊರ ಹೊಮ್ಮುತ್ತಿದ್ದ ಅತ್ಯಂತ ಸುಸಂಸ್ಕೃತ ಕಂಪು, ಮೇಲಾಗಿ ಈತನ ಸಮಗ್ರ ವ್ಯಕ್ತಿತ್ವದಲ್ಲೇ ಅಂತರ್ಗತವಾಗಿದ್ದ ಅಮೂರ್ತಾಕರ್ಷಣೆಯ ಪ್ರಭೆ ಇವನಿಗೆ ಅನೇಕ ವಿಚಿತ್ರ ಸ್ನೇಹಿತರನ್ನು ತಂದುಕೊಟ್ಟವು. ಇವರ ಪೈಕಿ ಹೆಸರಿಸಬೇಕಾದವರು ಮುಖ್ಯವಾಗಿ ಮೂವರು : ಮಾರ್ಸೆಲ್ ಗ್ರಾಸ್‌ಮ್ಯಾನ್ (೧೮೭೮-೧೯೩೬), ಫ್ರೀಡರಿಷ್ ಆ್ಯಡ್ಲರ್ (೧೮೭೯-೧೯೬೦), ಕುಮಾರಿ ಮಿಲೇವಾ ಮ್ಯಾರಿಷ್ (೧೮೭೫-೧೯೪೮). ತರಗತಿಯ ಟಿಪ್ಪಣಿಗಳನ್ನು ಟಾಕುಟೀಕಾಗಿ ಬರೆದು ಅಭ್ಯಸಿಸುತ್ತಿದ್ದ ಆದರ್ಶ ಸುಟಿ ಯುವಕ ಗ್ರಾಸ್‌ಮ್ಯಾನ್. ಎಲ್ಲ ಮಿಲಿಟರಿತನವನ್ನೂ ಆಮೂಲಾಗ್ರವಾಗಿ

ವಿರೋಧಿಸುತ್ತಿದ್ದ ಶಾಂತಿವಾದಿ ಆ್ಯಡ್ಲರ್. ಬಲು ಜಿಗುಟು ಸ್ವಭಾವದ ಮತ್ತು ಸ್ವತಂತ್ರ ಧೋರಣೆಯ ದಿಟ್ಟ ಮಹಿಳೆ ಮಿಲೇವಾ. ಈ ನಾಲ್ವರ ಕೂಟ ಭೌತಗಣಿತವಿಜ್ಞಾನಗಳ ಬುಡಮೇಲು ಮಾಡಿತು ; ಮಹಾವಿಜ್ಞಾನಿಗಳು ಒಪ್ಪಿ ಅಂಗೀಕರಿಸಿದ್ದ ಪರಿಕಲ್ಪನೆಗಳ ಬಗ್ಗೆ ಮೂಲಭೂತ ಚಿಂತನೆ ನಡೆಸಿ ಹಲವಾರು ಹುಳುಕುಗಳನ್ನು ಹೊರಗೆಡಹಿತು; ಕಾಡು ಬೆಟ್ಟ ಸರೋವರಗಳಲ್ಲಿ ಸ್ವಚ್ಛಂದವಾಗಿ ವಿಹರಿಸಿತು.

ಪಾಲಿಟೆಕ್ನಿಕ್ಕಿನ ಅಂತಿಮ ಪರೀಕ್ಷೆಯ ಗಲ್ಲುಗಂಬಕ್ಕೆ ಆಲ್ಬರ್ಟ್ ಏರಬೇಕಾಗಿತ್ತು. ಗ್ರಾಸ್‌ಮ್ಯಾನನ ತರಗತಿ ಟಿಪ್ಪಣಿಗಳಿಗೆ ಶರಣು ಹೋಗುವುದೊಂದೇ ಇವನನ್ನು ಉಳಿಸಲು ಇದ್ದ ಉಪಾಯ. ಎಣೆ ಇಲ್ಲದ ಕರುಣೆಯಿಂದ, ಆದರೆ ಸ್ನೇಹಿತನಿಗೆ ತಾನು ಸಲ್ಲಿಸಬೇಕಾದ ಸೇವೆ ಇದು ಎಂಬ ನಿವೇದನ ಭಾವದಿಂದ, ಆತ ಆಲ್ಬರ್ಟನಿಗೆ ತನ್ನ ಪುಸ್ತಕ ರಾಶಿಯನ್ನು ಒಪ್ಪಿಸಿದ. ಈತ ಅವನ್ನು ಓದಿ ಪರೀಕ್ಷೆ ಬರೆದು ಉತ್ತಮ ಅಂಕ ಪಡೆದು ಉತ್ತೀರ್ಣನಾದ (೧೯೦೦).

ಆ ವೇಳೆಗೆ ಆಲ್ಬರ್ಟ್ ಮತ್ತು ಮಿಲೇವಾ ತಾವು ವಿವಾಹಬಂಧಿತರಾಗಲಿದ್ದೇವೆಂಬ ನಿರ್ಧಾರ ಪ್ರಕಟಿಸಿದರು.

### ಹಿಮಕಡಿದ ಹೂವು

ಹುಟ್ಟಿದುದು ಚಿಪ್ಪು
ಮುತ್ತಿದುದು ಕಡಲಗಲುಪ್ಪು
ಮುಳುಗಿದುದೊ ನೀರಾಳ ಕಪ್ಪು ಕಪ್ಪು
ಚಿಪ್ಪಲ್ಲ
ಬೆಳಕನೊಳಗೊಂಡ ಮಿಂಚಿನ ಬೆಳ್ಪು
ಸ್ವಾತಿಸ್ನೇಹದ ಮೀನಗಣ್ಣಿನೊಳ್ಪು

ಅಂಬಿಕಾತನಯದತ್ತ

ಜರ್ಮನಿಯ ಪೌರತ್ವ ತೊರೆದಿದ್ದ ಆಲ್ಬರ್ಟ್ ಸ್ವಿಟ್ಸರ್ಲೆಂಡಿನ ಪ್ರಜೆ ಆಗಲು ಬಯಸಿದ. ಈ ಉದ್ದೇಶಕ್ಕಾಗಿ ಉಳಿತಾಯ ಮಾಡುತ್ತಿದ್ದ ಹಣವೀಗ ಕೈಗೂಡಿಬಂತು. ೧೮೯೯ ಅಕ್ಟೋಬರಿನಲ್ಲಿ ಅರ್ಜಿ ಸಲ್ಲಿಸಿದ. ೧೯೦೧ ಫೆಬ್ರುವರಿಯಲ್ಲಿ ಅದು ಮಂಜೂರಾಗಿ ಆಲ್ಬರ್ಟ್ ಐನ್‌ಸ್ಟೈನ್ ಸ್ವಿಟ್ಸರ್ಲೆಂಡಿನ ಪ್ರಜೆ ಆದರು. ಅಲ್ಲಿಗೆ ಇವರ ಪೌರರಾಹಿತ್ಯವೆಂಬ ತ್ರಿಶಂಕುತ್ವ ಕೊನೆಗೊಂಡಂತಾಯಿತು. ಜರ್ಮನಿಯ ಸೈನಿಕ ಸಿಂಡಿನಲೇಪ ಅಳಿಸಿಹೋದಂತಾಯಿತು. ಆದರೆ ಜರ್ಮನಿತ್ವ ? ಯೆಹೂದ್ಯತ್ವ ? ಹುಟ್ಟು ಬಿಟ್ಟೀತೇ ಘಟ್ಟವೇರಿದರೂ ?

ಆಗ ತಾನೇ ಅರಳಿದ ಮೊಗ್ಗು, ಹೊರಲೋಕವನ್ನು ಕಣ್ಣಾಗಲಿಸಿ ಸವಿಯುತ್ತಿದ್ದ ನಿಸರ್ಗದ ಹಿಗ್ಗು, ಬದುಕಿಗೆ ಗೆಲುವನ್ನು ಎರೆಯಲು ತವಕಿಸುತ್ತಿದ್ದ ಹೂವು, ನೆಲದ ಸಾರವನ್ನು ಹೀರಿ ಮೈತುಂಬಿದ್ದ ಬಾಳ ಚೆಲುವು—ಆಲ್ಬರ್ಟ್ ಐನ್‌ಸ್ಟೈನ್ ಉತ್ತಮ ಪದವೀಧರ—ಮುಂದಿನ ಒಂದು ವರ್ಷ ಕಾಲ ಅವ್ಯಾಹತ ಹಿಮಪಾತಕ್ಕೆ ಈಡಾಗಿ ನರಳಬೇಕಾಯಿತು. ಇಂಥ ಬುದ್ಧಿಶ್ರೀಮಂತ ಹಾಗೂ ಗುಣಧೀಮಂತ ತರುಣನನ್ನು ಮಾತೃವಿದ್ಯಾಸಂಸ್ಥೆ ಝೂರಿಕ್ಕಿನ ಪಾಲಿಟೆಕ್ನಿಕ್ ತುಂಬ ಆದರ ಅಭಿಮಾನಗಳಿಂದ ತನ್ನ ಅಧ್ಯಾಪಕ ವೃಂದಕ್ಕೆ ಬರಮಾಡಿಕೊಂಡು ಆತನ ಶ್ರೇಯೋಭಿವೃದ್ಧಿಗೆ ಪ್ರೇರಕವಾಗಬೇಕಾಗಿತ್ತು, ತನ್ನ ವರ್ಚಸ್ಸನ್ನು ವೃದ್ಧಿಪಡಿಸಿಕೊಳ್ಳಬೇಕಾಗಿತ್ತು. ಆದರೆ ಹೀಗೆ ನಡೆಯಲಿಲ್ಲ. ಎಳೆ ಕಲ್ಪವೃಕ್ಷದ ಬಾಳೇನೂ ಸುಲಭ ಅಲ್ಲ. ಎರಡು ಅವೈಜ್ಞಾನಿಕ

ಪ್ರಬಲ ಆತಂಕಗಳು ಐನ್‌ಸ್ಟೈನರ ಹಾದಿಗೆ ಅಡ್ಡ ಬಂದುವು :

ಪ್ರತಿಭೆಯಲ್ಲಿ ಕೆಳದರ್ಜೆಯಲ್ಲಿದ್ದರೂ ಅಧಿಕಾರ ನಿಮಿತ್ತ ಒದಗಿದ್ದ ಅಂತಸ್ತಿನಲ್ಲಿ ಮೇಲು ಮಟ್ಟದಲ್ಲಿದ್ದ ಪ್ರಾಧ್ಯಾಪಕರು, ಪ್ರಖರ ಪ್ರತಿಭಾನ್ವಿತನೂ ಸ್ವತಂತ್ರ ಪ್ರವೃತ್ತಿಯವನೂ ಆಗಿದ್ದ ಖಾಸಾ ಶಿಷ್ಯ ಐನ್‌ಸ್ಟೈನ್, ತಮ್ಮ ಬಳಗಕ್ಕೆ ಬರುವುದನ್ನು ಇಷ್ಟಪಡಲಿಲ್ಲ (ದ್ವಿತೀಯ ದರ್ಜೆಯ ಬುದ್ಧಿಸಾಮರ್ಥ್ಯ ಪ್ರಥಮ ಮಟ್ಟದ ಅಧಿಕಾರ ಸ್ಥಾನದಲ್ಲಿದ್ದರೆ ತೃತೀಯ ಹಾಗೂ ತದನಂತರದ ದರ್ಜೆಯ ಬುದ್ಧಿಸಾಮರ್ಥ್ಯಗಳನ್ನು ಮಾತ್ರ ಉತ್ಪಾದಿಸುತ್ತದೆ !) ; ಪ್ರಚ್ಛನ್ನವಾಗಿ ಹೊಗೆ ಆಡುತ್ತಿದ್ದ ಯೆಹೂದ್ಯದ್ವೇಷ (ಹುಟ್ಟಿನ ಆಕಸ್ಮಿಕತೆಯಿಂದಲೂ ಅನಿವಾರ್ಯತೆಯಿಂದಲೂ ವ್ಯಕ್ತಿಗೆ ಬೀಳುವ ಜಾತಿಮುದ್ರೆ ಪ್ರತಿಭಾವಿಕಾಸಕ್ಕೆ ಮಾರಕವಾಗುವುದು ಮಾನವೇತಿಹಾಸದ ದುರಂತ ಅಧ್ಯಾಯಗಳಲ್ಲಿ ಒಂದು).

ಮಕ್ಕಳಿಗೆ ಖಾಸಗಿ ಪಾಠ ಹೇಳಿ, ಶಾಲೆಯಲ್ಲಿ ಹಂಗಾಮಿ ಕೆಲಸ ಮಾಡಿ, ಅಂಗಡಿ ಲೆಕ್ಕ ಬರೆದು, ಪಿಟೀಲು ವಾದ್ಯ ನುಡಿಸಿ ಈ ಜಗತ್ಪ್ರತಿಭೆ ಜೀವ-ದೇಹ ಸಂಬಂಧ ಕಡಿದುಹೋಗದಂತೆ ಕಾಪಾಡಿಕೊಂಡು ಬರಬೇಕಾಯಿತು.

ಇಂಥ ದುರ್ದಿನಗಳಲ್ಲಿಯೂ ಪಾಲಿಟೆಕ್ನಿಕ್ಕಿನ ಕಹಿ ಒಗರು ಕಿರುನಾಲಗೆಯನ್ನು ಕುಟುಕುತ್ತಿದ್ದ ಕ್ಷಣಗಳಲ್ಲಿಯೂ ಇವರ ಜ್ಞಾನಪಿಪಾಸೆ ತನ್ನ ಅಸ್ತಿತ್ವವನ್ನು ಅಚ್ಚೊತ್ತದೆ ಇರಲಿಲ್ಲ. ವಿಜ್ಞಾನಾಸಕ್ತಿ ಕ್ರಮೇಣ ಮರಳಿತು. ಸಂಶೋಧನ ಪ್ರಬಂಧ ಬರೆದರು. ಇದನ್ನು ಜರ್ಮನಿಯ ಲೈಪ್ಸಿಗ್ಗಿನಿಂದ ಪ್ರಕಟವಾಗುತ್ತಿದ್ದ *Annalen der Physik* ಎಂಬ ಪ್ರಸಿದ್ಧ ಪತ್ರಿಕೆಗೆ ಕಳಿಸಿದರು. ಇದೇ ಇವರ ಮೊದಲ ಸಂಶೋಧನ ಪ್ರಬಂಧ. ವಿಷಯ : Deductions from the phenomena of capillarity (ಲೋಮನಾಳತೆಯ ವಿದ್ಯಮಾನಗಳಿಂದ ನಿಗಮನಗಳು). ೧೯೦೦ ಡಿಸೆಂಬರ್ ೧೩ ಸಂಚಿಕೆಯಲ್ಲಿ ಇದು ಪ್ರಕಟವಾಯಿತು.

ಲೈಪ್ಸಿಗ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ (ಮುಂದೆ ೧೯೦೯ರಲ್ಲಿ ನೊಬೆಲ್ ಪಾರಿತೋಷಿಕ ಗಳಿಸಿದ) ವಿಲ್‌ಹೆಲ್ಮ್ ಆಸ್ಟ್‌ವಾಲ್ಡ್ (೧೮೫೩-೧೯೩೨) ಅವರಿಗೆ ಈ ಪ್ರಬಂಧದ ನಕಲನ್ನು ಕಳಿಸುತ್ತ ಐನ್‌ಸ್ಟೈನ್ ನಿವೇದಿಸಿಕೊಂಡರು, "ಸಾಮಾನ್ಯ ರಸಾಯನವಿಜ್ಞಾನ ಕುರಿತು ನೀವು ರಚಿಸಿರುವ ಪುಸ್ತಕದಿಂದ ಸ್ಫೂರ್ತಿಪಡೆದು ಲಗತ್ತು ಪ್ರಬಂಧ ಬರೆದದ್ದಾಗಿದೆ. ಎಂದೇ ಇದರ ಒಂದು ಪ್ರತಿಯನ್ನು ನಿಮಗೆ ಒಪ್ಪಿಸುವ ಸ್ವಾತಂತ್ರ್ಯ ವಹಿಸಿದ್ದೇನೆ. ಇದೇ ಸಂದರ್ಭದಲ್ಲಿ ನಿರಪೇಕ್ಷ ಮಾಪನಗಳಲ್ಲಿ ಪರಿಶ್ರಮವಿರುವ ಗಣಿತೀಯ ಭೌತವಿಜ್ಞಾನಿಯೊಬ್ಬನ ಸೇವೆ ನಿಮಗೆ ಬೇಕಾಗಬಹುದೇ ಎಂದು ನಿಮ್ಮನ್ನು ಕೋರುವ ಸಾಹಸ ಮಾಡುತ್ತಿದ್ದೇನೆ. ನನಗೆ ಏನೂ ಆದಾಯವಿಲ್ಲವಾದ್ದರಿಂದ ಮಾತ್ರ, ಮತ್ತು ಇಂಥ ಒಂದು ನೆಲೆ ಮಾತ್ರ ನನಗೆ ಇನ್ನಷ್ಟು ಜ್ಞಾನಾರ್ಜನೆಯ ಸಾಧ್ಯತೆಯನ್ನು ಒದಗಿಸಬಲ್ಲದಾದ್ದರಿಂದ, ಈ ಪ್ರಾರ್ಥನೆ ಸಲ್ಲಿಸುವ ಸ್ವಾತಂತ್ರ್ಯ ವಹಿಸುತ್ತಿದ್ದೇನೆ" (ಮಾರ್ಚ್ ೧೯೦೧).

"... ನನ್ನ ಈ ಕಾಗದಕ್ಕೆ ಲಗತ್ತಿಸಿರುವ ಪ್ರಬಂಧಗಳನ್ನು ನೀವು ಪರಾಂಬರಿಸಬೇಕೆಂದು ಬಿನ್ನವಿಸುತ್ತೇನೆ. ನಾನು ಬಡವ. ಈ ಪ್ರಮೇಯಗಳಲ್ಲಿ ಏನಾದರೂ ಹುರುಳಿದೆ ಎಂದು ನಿಮಗೆ ಮನವರಿಕೆಯಾದರೆ ಇವನ್ನು ಪ್ರಕಟಿಸಬೇಕೆಂದು ಕೋರುತ್ತೇನೆ. . . ಅನನುಭವಿಯಾದ ನಾನು, ನೀವು ನೀಡಬಹುದಾದ ಯಾವುದೇ ಹಿತೋಕ್ತಿಯನ್ನೂ ಅಮೂಲ್ಯವಾದದ್ದೆಂದು ಸ್ವೀಕರಿಸುತ್ತೇನೆ. . . " (೧೭-೧-೧೯೦೩).

"ಮಿದುಳನ್ನು ಕಾಪಾಡಿಕೊಳ್ಳಲು ನನಗೆ ಆಹಾರ ಅಗತ್ಯವಾಗಿದೆ. ಇದೇ ನನ್ನ ಈಗಿನ ಆದ್ಯ ಆವಶ್ಯಕತೆ, ನಿಮ್ಮಿಂದ ಬರಬಹುದಾದ ಯಾವುದೇ ಅನುಕಂಪಪೂರಿತ ಪತ್ರವೂ ಇಲ್ಲಿಯ ವಿಶ್ವವಿದ್ಯಾಲಯದಿಂದ ಇಲ್ಲವೇ

ಸರ್ಕಾರದಿಂದ ನನಗೊಂದು ವಿದ್ಯಾರ್ಥಿವೇತನ ದೊರಕಿಸಿಕೊಡುವುದರಲ್ಲಿ ನೆರವಾದೀತು" (೨೭-೨-೧೯೧೩). ಶ್ರೀನಿವಾಸ ರಾಮಾನುಜನ್(೧೮೮೭-೧೯೨೦) ಜಿ. ಎಚ್. ಹಾರ್ಡಿಯವರಿಗೆ (೧೮೭೭-೧೯೪೭) ಬರೆದ ಪತ್ರಗಳಿಂದ ಉದ್ಧೃತ. (ನೋಡಿ ಇದೇ ಲೇಖಕನ *ರಾಮಾನುಜನ್ ಬಾಳಿದರಿಲ್ಲಿ*)

ಜರ್ಮನಿಯಲ್ಲಿ ಅಂದಿನ ವಿಶ್ವವಿದ್ಯಾಲಯ ಪ್ರಾಧ್ಯಾಪಕರು ಮಹಾಘನತೆ ಪಡೆದ ಅತಿಮಾನವರೆಂದೇ ಪರಿಗಣಿತರಾಗಿದ್ದರು. ಸಾಮಾನ್ಯ ಮಂದಿ ಅವರ ನೆರಳನ್ನು ಕೂಡ ಸೋಂಕುವಂತಿರಲಿಲ್ಲ. ಘನಹೊಂದಿದ ಪ್ರಾಧ್ಯಾಪಕ ಆಸ್ಟ್‌ವಾಲ್ಡರು ಅಪ್ರಸಿದ್ಧ ಐನ್‌ಸ್ಟೈನರ ಯಾಚನಾಪತ್ರಕ್ಕೆ ಮಾರೋಲೆ ಕರುಣಿಸಲಿಲ್ಲ.

ವಿಜ್ಞಾನಭಾವನೆಗಳು ಪುಂಖಾನುಪುಂಖವಾಗಿ ಬಂದು ಐನ್‌ಸ್ಟೈನರನ್ನು ಬೇರೊಂದು ಲೋಕಕ್ಕೆ ಒಯ್ಯುತ್ತಿದ್ದುವು. ಭೌತವಿಜ್ಞಾನದಲ್ಲಿ, ವ್ಯಾಪಕವಾಗಿ ಭೌತವಿಶ್ವದ ವಿಶಿಷ್ಟ ವಿದ್ಯಮಾನಗಳಲ್ಲಿ, ಊಹನೆಗಳನ್ನು (speculations) ಮಂಡಿಸುತ್ತ ಅವುಗಳ ಬೆನ್ನಟ್ಟಿ ಫಲಿತಾಂಶಗಳನ್ನು ಪಡೆಯುವುದು ಇವರ ಗೀಳಾಯಿತು.

ಸಾಧಾರಣವಾಗಿ ಸಂಶೋಧನೆ ಮುನ್ನಡಿ ಇಡುವುದು ಪ್ರಾಯೋಗಿಕ ಪ್ರತಿರೂಪ ವಿಧಾನದಿಂದ. ಈ ವಿಧಾನದಲ್ಲಿ ವೀಕ್ಷಣೆಗಳಿಂದಲೂ ಪ್ರಯೋಗಗಳಿಂದಲೂ ಲಭಿಸಿದ ಮಾಹಿತಿಗಳನ್ನು ಆಧರಿಸಿ ಇವನ್ನು ತಾಳೆಪಡಿಸಬಲ್ಲ ಪ್ರತಿರೂಪವನ್ನು (model) ಸಿದ್ಧಪಡಿಸುತ್ತಾರೆ. ಇದೊಂದು ಭೌತಾಕೃತಿ ಆಗಿರಬಹುದು, ಇಲ್ಲವೇ ಗಣಿತೋಕ್ತಿ ಆಗಿರಬಹುದು. ತರುವಾಯ ಈ ಪ್ರತಿರೂಪ ಎಷ್ಟರಮಟ್ಟಿಗೆ ವಾಸ್ತವತೆಯೊಡನೆ ಹೊಂದುತ್ತದೆ, ಅಂದರೆ ಇದನ್ನು ವಿವರಿಸುವುದರಲ್ಲಿ ಯಶಸ್ವಿಯಾಗುತ್ತದೆ ಎಂಬುದನ್ನು ಪ್ರತ್ಯಕ್ಷವಾಗಿ/ಪ್ರಾಯೋಗಿಕವಾಗಿ ತಪಾಸಿಸುತ್ತಾರೆ. ಈ ವೇಳೆ ಲಭಿಸುವ ದೋಷಗಳನ್ನು ಗಮನಿಸಿ ಪ್ರತಿರೂಪವನ್ನು ಯುಕ್ತವಾಗಿ ಮಾರ್ಪಡಿಸುತ್ತಾರೆ. ಹೀಗೆ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ಪರಿಪೂರ್ಣತೆಯೆಡೆಗೆ ಸಾಗುವ ವಿಧಾನವಿದು. ಯೋಹನ್ ಕೆಪ್ಲರ್ (೧೫೭೧-೧೬೩೦) ಆವಿಷ್ಕರಿಸಿದ ಗ್ರಹಚಲನ ನಿಯಮಗಳು[೧೩] ಈ ವಿಧಾನಕ್ಕೆ ನಿದರ್ಶನ. ಊಹನಾವಿಧಾನವಾದರೊ ವಾಸ್ತವತೆ ಕುರಿತು ಬರೆದ ಭಾಷ್ಯ. ಮಹರ್ಷಿಪ್ರಣೀತ ಊಹನೆಗಳು ಪ್ರಾಯಶಃ ನಿಜವಾಗುತ್ತವೆ. ವಿಶ್ವಗುರುತ್ವಾಕರ್ಷಣ ನಿಯಮವನ್ನು[೧೪] ಐಸಾಕ್ ನ್ಯೂಟನ್ (೧೬೪೨-೧೭೨೭) ಪ್ರತಿಪಾದಿಸಿದ್ದು ಊಹನಾವಿಧಾನದಿಂದ. ನ್ಯೂಟನ್ ಅನಂತರ ಭೌತವಿಜ್ಞಾನ ವ್ಯೋಮದಲ್ಲಿ ಉದಯಿಸಿದ ಮಹೋಜ್ಜ್ವಲ ತಾರೆಯೇ ಐನ್‌ಸ್ಟೈನ್.

ಊಹನೆಗಳಿಂದ ಹೊಟ್ಟೆ ತುಂಬಿಸುವುದು ಸಾಧ್ಯವಿಲ್ಲವಷ್ಟೆ ! ವಾಸ್ತವತೆಯ ಈ ನಕ್ರಪೂರಿತ ಮಡುವಿನಿಂದ ಅಂದು ಐನ್‌ಸ್ಟೈನರನ್ನು ದಂಡೆ ಹತ್ತಿಸಿದ್ದು ಇವರ ಮಾಜಿ ಸಹಪಾಠಿ ಗ್ರಾಸ್‌ಮ್ಯಾನ್. ತುತ್ತಿನ ಚೀಲ ಭರ್ತಿಸಲು ಆ ಕೆಲಸ ಈ ಕೆಲಸ ಎಂದುಂಟೇ, ಮೋಚಿ ಕೆಲಸವೇ ಸಾಚಾ ಕೆಲಸ, ಅದರಲ್ಲೇ ತೃಪ್ತಿ ತಳೆಯುತ್ತೇನೆ ಎಂದುಕೊಂಡಿದ್ದ ಐನ್‌ಸ್ಟೈನರಿಗೆ ಈ ಮಿತ್ರ ಸೂಚಿಸಿದ್ದು ಇಂಥದೇ ಒಂದು ಕೆಲಸವನ್ನು : ಸ್ವಿಟ್ಸರ್ಲೆಂಡಿನ ಬರ್ನ್ ನಗರದಲ್ಲಿದ್ದ ಏಕಸ್ವ ಕಛೇರಿಯಲ್ಲಿ (Patent Office) ಏಕಸ್ವ ತಪಾಸಣೆಕಾರನ ಹುದ್ದೆ. ಗ್ರಾಸ್‌ಮ್ಯಾನರ ಪ್ರಭಾವದಿಂದ ಐನ್‌ಸ್ಟೈನರಿಗೆ ಈ 'ಹಿರಿ ಹುದ್ದೆ' ದಕ್ಕಿತು. ೧೯೦೨ ಜೂನ್ ೨೩ರಂದು ಇವರು ಕೆಲಸಕ್ಕೆ ದಾಖಲಾದರು. ಕಲಿತದ್ದು ಸೈದ್ಧಾಂತಿಕ ಭೌತವಿಜ್ಞಾನ, ಪ್ರಾವೀಣ್ಯ ಗಳಿಸಿದ್ದು ಭೌತ ಮತ್ತು ಗಣಿತವಿಜ್ಞಾನಗಳಲ್ಲಿ ; ಮಾಡುತ್ತಿದ್ದ ಕೆಲಸ ? ಉಪಜ್ಞೆಕಾರರು (inventors) ತಮ್ಮ ನೂತನ ಉಪಜ್ಞೆಗಳಿಗೆ (inventions) ಏಕಸ್ವ ಪಡೆಯಲು ಸಲ್ಲಿಸುತ್ತಿದ್ದ ತಾಂತ್ರಿಕ ನಕ್ಷೆ ಹಾಗೂ ವಿವರಗಳನ್ನು ವೈಜ್ಞಾನಿಕ ತಪಾಸಣೆಗೆ ಒಳಪಡಿಸಿ ಅವರ ಕೋರಿಕೆಗೆ ಮನ್ನಣೆ (ಅಂದರೆ ಏಕಸ್ವ) ನೀಡಬಹುದೇ ಬಾರದೇ ಎಂದು

ಶಿಫಾರಸು ಮಾಡುವುದು. ಒಂದೊಂದು ಆಲೇಖ್ಯದ (design) ಹಿಂದೆಯೂ ಒಂದೊಂದು ಅಜ್ಞಾತ, ಸೃಜನಶೀಲ ಮನಸ್ಸು ಹುದುಗಿದೆ, ಆ ಚೈತನ್ಯವನ್ನು ತಾನು ಗೌರವದಿಂದ ಸ್ವಾಗತಿಸಿ ಅದಕ್ಕೆ ಮನ್ನಣೆ ಕೊಡಬೇಕು ಎಂಬ ನಿವೇದನಭಾವದಿಂದ ಇವರು ಆ ಹೊಣೆಗಾರಿಕೆ ನಿರ್ವಹಿಸುತ್ತಿದ್ದರು.

'ತಸ್ಕರಶೋಧನೆ'ಯಲ್ಲಿ (ಅಜ್ಞಾತ ಜನ ಶೋಧನೆ) ನಿಷ್ಣಾತರಾಗಿದ್ದ ಐನ್‌ಸ್ಟೈನರ ಪ್ರಖರ ಮತಿಗೆ ಏಕಸ್ವತಪಾಸಣೆ ಅತಿ ಸುಲಭದ ಹವ್ಯಾಸವಾಗಿ ಕಂಡುಬಂದಿತು. ತಮ್ಮ ದೈನಂದಿನ ಕರ್ತವ್ಯವನ್ನು ಕೇವಲ ಎರಡು ಮೂರು ಗಂಟೆಗಳಲ್ಲಿ ಬಲು ಹಗುರವಾಗಿ, ಆದರೆ ಅತ್ಯಂತ ಪರಿಷ್ಕಾರವಾಗಿ, ನಿರ್ವಹಿಸುತ್ತಿದ್ದರು. ಉಳಿದ ವೇಳೆ ?

## ನವ ಅರುಣೋದಯ

ಯುಗವೊಂದು ಕಂತುತಿರೆ ಹೊಸತೊಂದು ಮೂಡುತಿರೆ
ನೊಗಹೊತ್ತ ಎತ್ತದನು ಕಂಡೀತೆ ? ಹೊಡೆವ ಗಾ-
ಡಿಗನ ಲಕ್ಷ್ಯವನು ಸೆಳೆದೀತೆ ? ಕಾದಿತ್ತು ಜಗ
ಯುಗಪುರುಷನಾಗಮನಕಾಗಿ ತಿಳಿ ಅತ್ರಿಸೂನು.

ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ—ಅಂದರೆ ಐನ್‌ಸ್ಟೈನ್ ರಂಗಪ್ರವೇಶ ಮಾಡಲಿದ್ದ ಸಂದರ್ಭದಲ್ಲಿ—ಭೌತವಿಜ್ಞಾನಕ್ಷೇತ್ರ ಪರ್ಯಾಪ್ತ ಸ್ಥಿತಿ ತಲಪಿತ್ತು. ಇದರಲ್ಲಿ ನೂತನ ಸಂಶೋಧನೆಗಳಿಗೆ ಎಳ್ಳಷ್ಟೂ ಅವಕಾಶವಿರಲಿಲ್ಲ. ಕೇವಲ ಒಂದು ನೂರಾ ಎಪ್ಪತ್ತಮೂರು ವರ್ಷಗಳ ಹಿಂದೆ, ೧೭೨೭ರಲ್ಲಿ, ಗತಿಸಿದ್ದ ನ್ಯೂಟನ್ನನ ಸಾಮ್ರಾಜ್ಯ ಸರ್ವವ್ಯಾಪಿಯೂ ಸರ್ವಗ್ರಾಹಿಯೂ ಆಗಿ ಭೌತವಿಜ್ಞಾನದಲ್ಲಿ ತಿಳಿಯುವಂಥದು ಅಥವಾ ಅರಸುವಂಥದು ಏನೂ ಇಲ್ಲ ಎನ್ನುವ ಶೂನ್ಯಪರಿಸ್ಥಿತಿ ಏರ್ಪಟ್ಟಿತ್ತು. ವಿಶ್ವದ ಸಮಸ್ತ ವಿದ್ಯಮಾನಗಳೂ ನ್ಯೂಟನ್ ವಿಧಿಸಿದ ಚೌಕಟ್ಟಿನ ಒಳಗೆ ಕ್ರಮಬದ್ಧವಾಗಿ ಗಣಿತ ನಿಯಮಾನುಸಾರ ನಡೆಯುತ್ತಿರುವಾಗ ಹೊಸ ಸಮಸ್ಯೆಗೆ ಅವಕಾಶವೆಲ್ಲಿ ?

ಹೀಗಿದ್ದರೂ ಆಗ ಈಗ ಅಲ್ಲಿ ಇಲ್ಲಿ ಕೆಲವೊಂದು ಅಪಸ್ವರ ಕೇಳಿ ಬರದೇ ಇರುತ್ತಿರಲಿಲ್ಲ. ಎರಡು ಉದಾಹರಣೆಗಳನ್ನು ಉಲ್ಲೇಖಿಸಬಹುದು.

ಮೊದಲಿನ ಅಪಸ್ವರ ಬೆಳಕಿನ ಸಂಚಾರಮಾಧ್ಯಮವೆಂದು ನಂಬಲಾಗಿದ್ದ ಈಥರನ್ನು ಕುರಿತದ್ದು. ನಾವು ಮಾತಾಡಿದ್ದು ನೆರೆಯವನಿಗೆ ಕೇಳುವುದು ಶಬ್ದದ ಅಲೆಗಳು ವಾಯುಮಾಧ್ಯಮದ ಮೂಲಕ ಸಾಗುವುದರಿಂದ ಸಾಧ್ಯವಾಗುತ್ತದೆ. ನಿರ್ವಾತದಲ್ಲಿ ಶಬ್ದ ಪ್ರಸಾರವಾಗದು, ಆದರೆ ಬೆಳಕು ಪ್ರಸಾರವಾಗಬಲ್ಲದು ಎಂಬ ಸಂಗತಿ ಇಂದಿನ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಸಹ ಪ್ರಾಯೋಗಿಕವಾಗಿ ತಿಳಿದಿದೆ. ಪಾರಕ ಗಾಜಿನ ಜಾಡಿಯೊಳಗಿರಿಸಿದ ಅಲಾರಮ್-ಗಡಿಯಾರ-ಪ್ರಯೋಗಮಾಡಿ ಅಥವಾ ನೋಡಿ ಬೆರಗಾಗದವರಾರು ? ಬೆಳಕಾದರೂ ಸಂಚರಿಸುವುದು ಅಲೆ ಅಲೆಗಳಾಗಿಯೇ ಎಂದು ತಿಳಿದಿತ್ತು. ಎಂದ ಮೇಲೆ ಬೆಳಕಿನ ಅಲೆಗಳನ್ನು ಒಯ್ಯಬಲ್ಲ ಮಾಧ್ಯಮವೊಂದು ಇರಲೇಬೇಕಷ್ಟೆ. ಅದು ಹೇಗೂ ವಾಯು ಅಲ್ಲ. ಆದ್ದರಿಂದ ಅದಕ್ಕೊಂದು ಕಾಲ್ಪನಿಕ ಹೆಸರಿಟ್ಟರು. ಅದೇ ಈಥರ್. ಬಲು ತೆಳು ಪದಾರ್ಥವೆಂದರ್ಥ. ಬೆಳಕಿನ ಸಂಚಾರಮಾಧ್ಯಮವಾದ ಈಥರಿನ ಗುಣಲಕ್ಷಣಗಳ ಶೋಧನೆಯನ್ನು ಪ್ರಾಯೋಗಿಕವಾಗಿಯೂ ಗಣಿತೀಯವಾಗಿಯೂ ಕೈಗೊಂಡರು. ನಕ್ಷತ್ರಗಳಿಂದ ಹೊರಹೊಮ್ಮುವ ಬೆಳಕು ವಿಶ್ವವ್ಯಾಪಿಯಾದ ಈಥರ್ ಕಡಲಿನಲ್ಲಿ

ಈಸಿ ಭೂಮಿಗೆ ಬರುತ್ತದೆ. ಆದ್ದರಿಂದ ನಕ್ಷತ್ರಗಳು ನಮಗೆ ಗೋಚರಿಸುತ್ತವೆ ಎಂಬುದಾಗಿ ತರ್ಕ ವಿವರಿಸಿತು. ಆದರೆ ಈ ಈಥರನ್ನು ಸೆರೆಹಿಡಿಯಲು ಮಾಡಿದ ಸರ್ವಪ್ರಯತ್ನಗಳೂ ವಿಫಲವಾದುವು. ಹಾಗಾದರೆ ಈಥರ್ ಇಲ್ಲ ಅನ್ನೋಣವೇ ? ಬೆಳಕು ಪ್ರಸಾರವಾಗದು. ಈಥರ್ ಇದೆ ಅನ್ನೋಣವೇ ? ಅದು ಕೈಗೆ ಸಿಕ್ಕುತ್ತಿಲ್ಲ. ಇನ್ನಷ್ಟು ಸೂಕ್ಷ್ಮ ಪ್ರಯೋಗಗಳಿಂದ ಅದನ್ನು ಪತ್ತೆಹಚ್ಚಬೇಕೆಂದು ಚಿಂತಿಸುತ್ತಿದ್ದಾಗ ಗಣಿತಗಣನೆಗಳು ತಿಳಿಸಿದ್ದು ಬೇರೆಯದನ್ನೇ—ಅವುಗಳ ಪ್ರಕಾರ ಈಥರ್ ಇರುವುದಾದ ಪಕ್ಷ ವಿಶ್ವನಿಶ್ಚಲವಾಗಿರಬೇಕು. ಇದರ ಅರ್ಥ ಭೂಮಿ, ಚಂದ್ರ, ಬುಧ, ಶುಕ್ರ ಮುಂತಾದ ಸಮಸ್ತ ಆಕಾಶಕಾಯಗಳೂ ಚಲನರಹಿತವಾಗಿವೆ ಎಂದು. ವಸ್ತುಸ್ಥಿತಿ ಹೀಗಿಲ್ಲ. ವಿಶ್ವದ ಪ್ರತಿಯೊಂದು ಕಾಯವೂ ಸದಾ ಗತಿಶೀಲವಾಗಿದೆ. ನಿಜಕ್ಕೂ ಚಲನೆಯೇ ಜಗತ್ತಿನ ಧರ್ಮ. ಈ ವ್ಯಾಘಾತದ (contradiction) ಮರ್ಮವೇನು ?

ಎರಡನೆಯ ಅಪಸ್ವರ ಖುದ್ದು ಬೆಳಕಿನ ವೇಗ ಕುರಿತದ್ದು. ಹರಿಯುತ್ತಿರುವ ನೀರಿಗೆ ಈಸಲು ದುಮುಕಿದವನಿಗೆ ಅಥವಾ ಅದರಲ್ಲಿ ದೋಣಿ ಹಾಯಿಸಲು ಯತ್ನಿಸಿದವನಿಗೆ ಒಂದು ಸಂಗತಿ ಮನವರಿಕೆ ಆಗಿರುತ್ತದೆ : ಹೊನಲಿನ ದಿಶೆಯಲ್ಲಿ ಚಲನೆ ಸುಲಭ, ಎದುರು ದಿಶೆಯಲ್ಲಿ ಕಷ್ಟ. ವ್ಯಕ್ತಿಯ ವೇಗವೂ ಹೊನಲಿನ ವೇಗವೂ ಸೇರಿ ಮೊದಲನೆಯ ಚಲನೆ ಸುಲಭವಾದರೆ ಎರಡನೆಯದರಲ್ಲಿ ವ್ಯಕ್ತಿ, ಹೊನಲಿನ ವೇಗವನ್ನು ಎದುರಿಸಿ ಸಾಗಬೇಕಾಗಿರುವುದರಿಂದ ಚಲನೆ ಕಷ್ಟವಾಗುತ್ತದೆ. ತಾತ್ತ್ವಿಕವಾಗಿ ಇದರ ಅರ್ಥವಿಷ್ಟು : ವಸ್ತುವಿನ ಚಲನೆಯ ವೇಗಕ್ಕೆ ಆಕರದ (source), ಅಂದರೆ ಆ ವಸ್ತುವಿನ ಉಗಮ ಸ್ಥಾನದ, ವೇಗವೂ ಸೇರಿ ವಸ್ತುವಿನ ಫಲಿತವೇಗ ಹೆಚ್ಚಾಗಬಹುದು, ಕಡಿಮೆಯಾಗಬಹುದು. ಅಂತೂ ಫಲಿತವೇಗವು ಆಕರ ನಿಶ್ಚಲ ಸ್ಥಿತಿಯಲ್ಲಿದ್ದಾಗಿನ ವೇಗಕ್ಕಿಂತ ಬೇರೆ ಆಗಿರುತ್ತದೆ. ಬೆಳಕು ಕುರಿತಂತೆ ಕೂಡ ಈ ತತ್ತ್ವ ಸಿಂಧುವಾಗಬೇಕು. ಅಂದರೆ ಬೆಳಕನ್ನು ಬೀರುವ ಆಕರ ಸ್ವತಃ ಚಲಿಸುತ್ತಿದ್ದರೆ ಆಗ ಬೆಳಕಿನ ವೇಗ ತದನುಗುಣವಾಗಿ ಹೆಚ್ಚು ಅಥವಾ ಕಡಿಮೆ ಆಗಬೇಕು ಎಂಬುದಾಗಿ ವಿಜ್ಞಾನಿಗಳು ಭಾವಿಸಿದ್ದರು. ಮೈಕಲ್‌ಸನ್ ಮತ್ತು ಮಾರ್ಲೀ ಎಂಬ ಇಬ್ಬರು ಭೌತವಿಜ್ಞಾನಿಗಳು ಈ ಭಾವನೆಯ ತಳ ಶೋಧಿಸಲು ಪ್ರಯೋಗವನ್ನು ರೂಪಿಸಿದರು.[೧೫] ಸೆಕೆಂಡಿಗೆ ಸುಮಾರು ಮೂರು ಲಕ್ಷ ಕಿಲೊಮೀಟರ್ ದೂರ ನೆಗೆಯುವ—ಈ ದೂರ ಸಾಕ್ಷಾತ್ ಭೂಮಿಗೆ ಏಳು ಪ್ರದಕ್ಷಿಣೆಗಳಿಗಿಂತಲೂ ಜಾಸ್ತಿ ಆಗುವುದು—ಬೆಳಕಿನ ಮೇಲೆ ಪ್ರಯೋಗವೆಸಗುವುದೇನೂ ಸಾಮಾನ್ಯ ಸವಾಲಾಗಿರಲಿಲ್ಲ. ೧೮೮೭ರಲ್ಲಿ ಕೈಗೊಂಡ ಅವರ ರೋಮಾಂಚಕಾರೀ ಪ್ರಯೋಗ ಬೆಳಕನ್ನು ಕುರಿತ ನಂಬಿಕೆಯ ಬುಡವನ್ನೇ ಹಂದಾಡಿಸಿಬಿಟ್ಟಿತು. **ಬೆಳಕಿನ ವೇಗವು ಆಕರದ ವೇಗವನ್ನು ಅವಲಂಬಿಸಿಲ್ಲ.** ಆಕರ ನಿಶ್ಚಲವಾಗಿರಲಿ ಚಲಿಸುತ್ತಿರಲಿ ಅಲ್ಲಿಂದ ಹೊಮ್ಮುವ ಬೆಳಕಿನ ಮೇಲೆ ಯಾವ ಪರಿಣಾಮವೂ ಆಗದು. ಬೆಳಕಿನ ವೇಗ ಸದಾ ಒಂದೇ, ಅದು ನಿರ್ದ್ರವ್ಯತೆಯಲ್ಲಿ ಸೆಕೆಂಡಿಗೆ ೨೯೯,೭೭೪ ಕಿಲೊಮೀಟರುಗಳೆಂದು ಪ್ರಯೋಗ ಶ್ರುತಪಡಿಸಿತು. ಈ ವ್ಯಾಘಾತದ ಮರ್ಮವೇನು ?

ಇಲ್ಲಿ ಇನ್ನೊಂದು ವಿಚಾರ ಕುರಿತಂತೆ ಎರಡು ಮಾತು ಅವಶ್ಯ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಅಣು ಪರಮಾಣುಗಳ ಸೂಕ್ಷ್ಮಪ್ರಪಂಚದ ಕೆಲವೊಂದು ಅಂತರಂಗ ವಿವರಗಳು ಕ್ರಮೇಣ ಬಹಿರಂಗವಾಗತೊಡಗಿದುವು. ಇವನ್ನು ವಿವರಿಸುವಲ್ಲಿ ನ್ಯೂಟನ್-ಬಲವಿಜ್ಞಾನದ (Newtonian mechanics) ಹತ್ಯಾರುಗಳು ಫಲಕಾರಿಗಳಾಗುತ್ತಿರಲಿಲ್ಲ. ನಮ್ಮ ವ್ಯವಹಾರಪ್ರಪಂಚವೊಂದು ದೊಡ್ಡ ಯಂತ್ರ. ಉದಾಹರಣೆಗೆ ವಾಹನಗಳ ಚಲನೆ, ನೈಸರ್ಗಿಕ ಚಲನೆ ಇತ್ಯಾದಿ ವಿದ್ಯಮಾನಗಳು ಹೇಗೆ ಸಂಭವಿಸುತ್ತವೆ, ಅವು ಭವಿಷ್ಯದಲ್ಲಿ ಹೇಗೆ ವರ್ತಿಸಲಿವೆ

ಮುಂತಾದವನ್ನು ತಿಳಿಯಲು ಪ್ರಪಂಚವನ್ನು ಯಂತ್ರವೆಂದು ಪರಿಗಣಿಸಿ ಇದಕ್ಕೆ ನ್ಯೂಟನ್-ಬಲವಿಜ್ಞಾನದ ಹತ್ಯಾರುಗಳನ್ನು ಪ್ರಯೋಗಿಸಿದರಾಯಿತು. ರೇಲ್ವೇ ವೇಳಾಪಟ್ಟಿಯನ್ನು ತಯಾರಿಸುವಲ್ಲಿಂದ ಹಿಡಿದು ಭವಿಷ್ಯದ ಗ್ರಹಣಗಳನ್ನು ಮುನ್ನುಡಿಯುವಲ್ಲಿವರೆಗೆ ಮಾನವ ಗಳಿಸಿರುವ ಯಶಸ್ಸು ಇಂಥ ಪ್ರಯೋಗಗಳಿಂದಾಗಿದೆ. ಅಂದಮಾತ್ರಕ್ಕೆ ಇವೇ ಹತ್ಯಾರುಗಳಿಂದ ಅಣು ಪರಮಾಣು ಪ್ರಪಂಚದ ಸೂಕ್ಷ್ಮಲೋಕವನ್ನು ಕೂಡ ನಿಭಾಯಿಸಲು ಬಂದೀತೆಂದು ಹೇಳುವಂತಿಲ್ಲ. ಹೊಸ ಹತ್ಯಾರುಗಳು ಅನಿವಾರ್ಯವಾಗುತ್ತವೆ—ಹೇಗೆ ಉದರಶಸ್ತ್ರಚಿಕಿತ್ಸೆಗೆ ಬಳಸುವ ಉಪಕರಣಗಳಿಗಿಂತ ಭಿನ್ನವಾದವು ನೇತ್ರ ಶಸ್ತ್ರಚಿಕಿತ್ಸೆಗೆ ಅಗತ್ಯವಾಗುವುವೊ ಹಾಗೆ. ನೆಲಕ್ಕೆ ಬಂಡಿ, ಜಲಕ್ಕೆ ದೋಣಿ, ಬಾನಿಗೆ ವಿಮಾನ !

೧೮೫೮ರಿಂದ ೧೯೪೭ರ ತನಕ ಬಾಳಿದ ಜರ್ಮನ್ ಭೌತವಿಜ್ಞಾನಿ ಮ್ಯಾಕ್ಸ್ ಪ್ಲ್ಯಾಂಕ್[೧೭] ಎಂಬವರು ಶಕಲ ಸಿದ್ಧಾಂತವೆಂಬ (Quantum theory) ಭೌತವಿಜ್ಞಾನದ ನೂತನ ಶಾಖೆಯನ್ನು ಪ್ರವರ್ತಿಸಿ ಈ ಸೂಕ್ಷ್ಮೋಪಕರಣಗಳನ್ನು ಒದಗಿಸಿದರು. ಬೆಳಕು ಅಲೆಗಳಾಗಿ ಚಲಿಸುವಂತೆಯೇ ಅತ್ಯಂತ ಸೂಕ್ಷ್ಮಕಣಗಳಾಗಿಯೂ ಚಲಿಸುತ್ತದೆ ಎಂಬ ನಿಲವಿಗೆ ಶಕಲಸಿದ್ಧಾಂತ ಸಮರ್ಪಕ ತಳಹದಿ ಕಟ್ಟಿತು. ಬೆಳಕಿನ ಸೂಕ್ಷ್ಮಕಣಗಳಿಗೆ—ನಿಖರವಾಗಿ, ಶಕ್ತಿ ಕಟ್ಟುಗಳಿಗೆ—ಫೋಟಾನುಗಳೆಂದು ಹೆಸರು. ಸ್ಥೂಲವಾಗಿ, ಬೆಳಕೆಂಬುದು ಫೋಟಾನುಗಳ ಎರಚಿಕೆ ಎಂದು ಭಾವಿಸಬಹುದು. ಮ್ಯಾಕ್ಸ್ ಪ್ಲ್ಯಾಂಕರ ಕ್ರಾಂತಿಕಾರೀ ಸಿದ್ಧಾಂತ ಪ್ರಪಂಚದ ಬೆಳಕನ್ನು ಕಂಡದ್ದು ೧೯೦೦ ಡಿಸೆಂಬರ್ ೧೪ರಂದು—ಶಕಲ ಸಿದ್ಧಾಂತದ ಜನ್ಮದಿನವದು.

ಹೀಗೆ ಇಪ್ಪತ್ತನೆಯ ಶತಮಾನದ ಮೊದಲ ವರ್ಷದಲ್ಲಿ ಭೌತವಿಜ್ಞಾನಪ್ರಪಂಚ ಒಂದು ಪರ್ವಬಿಂದುವನ್ನು ತಲಪಿತ್ತು : ಬೆಳಕಿನ ತೋರ್ಕೆ ಅಸಂಗತ ಚಲನೆಯನ್ನು ಸಮರ್ಪಕವಾಗಿ ವಿವರಿಸಲಾಗದ ನ್ಯೂಟನ್ ಚೌಕಟ್ಟು, ಪರಮಾಣುಪ್ರಪಂಚದ ನಡವಳಿಕೆಯನ್ನು ಸಮರ್ಥವಾಗಿ ವಿವರಿಸಬಲ್ಲ ಶಕಲ ಸಿದ್ಧಾಂತ—ಇವು ದಟ್ಟವಾಗಿ ಕವಿದು ಹವೆ ಗಾಢವಾಗಿತ್ತು. ಯಾವ ಪೂರ್ವಗ್ರಹದಿಂದಲೂ ಬಾಧಿತವಾಗದ, ಸ್ವತಂತ್ರವಾಗಿಯೂ ಮೂಲಭೂತವಾಗಿಯೂ ಚಿಂತಿಸಿ ಊಹನೆಗಳನ್ನು ಮಂಡಿಸಬಲ್ಲ, ಪ್ರತ್ಯುತ್ಪನ್ನಮತಿಯೊಂದೇ ಭೌತವಿಜ್ಞಾನವನ್ನು ಈ ಕುರುಡುಗಲ್ಲಿಯಿಂದ ಪಾರುಗಾಣಿಸಬಲ್ಲದಾಗಿತ್ತು. "ನಾಡಿನ ಪುಣ್ಯದ ಪೂರ್ವ ದಿಗಂತದಿ ನವ ಅರುಣೋದಯ ಹೊಮ್ಮುತಿದೆ ! ಚಿರನೂತನ ಚೇತನದುತ್ಸಾಹದಿ ನವೀನ ಜೀವನ ಚಿಮ್ಮುತಿದೆ !" (ಕುವೆಂಪು)

ಅಂದಿನ ಋಷಿಯನುಭವ
ತಣ್ಣನೆ ಮೈದೋರಿದ ನಾರಾಯಣ
ಬಿರುಬೆಂಕಿಯ ನಡುವಣ ಶೀತಲ ಕಮಲಾಸನ
ಹರಣವುಚ್ಚಳಿಸೆ ಸೃಷ್ಟಿಯೆ ನೂತನ

ಪುತಿನ

# ೨. ಪ್ರತಿಭೆ ದರ್ಶಿಸಿದ ಪ್ರಪಂಚ

## ಹೂವು ಅರಳಿತು

ಹೊಟ್ಟೆಪಾಡಿಗಾಗಿ ವಿಜ್ಞಾನವನ್ನು ಅವಲಂಬಿಸಬೇಕಾಗದಿದ್ದ ಪಕ್ಷದಲ್ಲಿ ವಿಜ್ಞಾನವೊಂದು ಅದ್ಭುತ ವಿಷಯವೇ ಸರಿ. ವ್ಯಕ್ತಿ ತಾನು ಸಮರ್ಥವಾಗಿ ದುಡಿಯಬಲ್ಲೆನೆಂದು ಭಾವಿಸುವ ಕಾರ್ಯದ ಮೂಲಕ ಅನ್ನ ಗಳಿಸಬೇಕು. ಎಂದು ನಾವು ಯಾರಿಗೇ ಆಗಲಿ ಲೆಕ್ಕ ಒಪ್ಪಿಸಬೇಕಾಗುವುದಿಲ್ಲವೊ ಅಂದು ಮಾತ್ರ ವೈಜ್ಞಾನಿಕ ಸಾಹಸೋದ್ಯಮದಲ್ಲಿ ಸಂತೋಷ ಕಾಣುತ್ತೇವೆ.

ಐನ್‌ಸ್ಟೈನ್

ಏಕಸ್ವ ಕಛೇರಿಯ ಹುದ್ದೆಯು ನಿರುದ್ಯೋಗಿ ಐನ್‌ಸ್ಟೈನರಿಗೆ ವರಪ್ರದಾನದಂತೆ ಒದಗಿಬಂದಿತ್ತು: ಹೊಟ್ಟೆಗೆ ಹಿಟ್ಟು ನಿಲ್ಲಲು ನೆಲೆ ನಿಗದಿಯಾದುವು. ಇವರು ಆ ಮೊದಲೇ ಒಲಿದಿದ್ದ ಹೆಣ್ಣು ಮಿಲೇವಾರನ್ನು ಮದುವೆಯಾಗಿ (೬-೧-೧೯೦೩) ಸಂಸಾರ ಹೂಡಿದರು.

ಕಛೇರಿಯಲ್ಲಿ ಐನ್‌ಸ್ಟೈನ್ ಮಾಡುತ್ತಿದ್ದ 'ಮೋಚಿ' ಕೆಲಸ ಬಲುಬೇಗ, ಒಂದೆರಡು ಗಂಟೆಗಳಲ್ಲೇ, ಮುಗಿಯುತ್ತಿತ್ತು. ಉಳಿದ ವೇಳೆ ?

ಬೆಳಕಿನ ಅಲೆಯ ಜೊತೆ ಕಾಲಿಡುವಾತನಿಗೆ ಅದು ಹೇಗೆ ಕಂಡೀತು ? ಅದಕ್ಕಿಂತ ರಭಸವಾಗಿ ಓಡುವಾತನಿಗೆ ? ಇಂಥ ಪ್ರಶ್ನೆಗಳು ಇವರನ್ನು ಈಗ ಹಿಂದೆಂದಿಗಿಂತಲೂ ಗಾಢವಾಗಿ ಬಾಧಿಸುತ್ತಿದ್ದುವು. ವಿಜ್ಞಾನಿಯ ಅನ್ವೇಷಕ ಬುದ್ಧಿಯಿಂದ, ತತ್ತ್ವಜ್ಞಾನಿಯ ಉನ್ನತ ನಿಲವಿನಿಂದ ಮತ್ತು ದ್ರಷ್ಟಾರನ ಮಂತ್ರದೃಷ್ಟಿಯಿಂದ ಇವರು ಆ ಭಾವನೆಗಳ ಬೆಂಬತ್ತಿದರು.

ಏಕಸ್ವ ಕಛೇರಿಯ ಕೆಲಸ ಐನ್‌ಸ್ಟೈನರಿಗೆ ನಿಜಕ್ಕೂ ತುಂಬ ಅನುಕೂಲತೆಯದಾಗಿತ್ತು. ವಿಶ್ವವಿದ್ಯಾಲಯಗಳ 'ಬೌದ್ಧಿಕ ಹವೆ'ಯ ಅಡ್ಡಿ ಆತಂಕಗಳೂ 'ಅಭಿಪ್ರಾಯವಿನಿಮಯ'ದ ಸದ್ದುಗದ್ದಲಗಳೂ ಇಲ್ಲದೆ ತಮ್ಮಷ್ಟಕ್ಕೆ ತಾವೇ ಸ್ವಂತ ಊಹನೆಗಳನ್ನು ಮಂಡಿಸಲು ಹಿತಕರವಾಗಿತ್ತು. ಆಯ್ದ ಕೆಲವು ಪರಿಣತ ಹಾಗೂ ಆಸಕ್ತ ಮಿತ್ರರೊಡನೆ ತಮ್ಮ ಕ್ರಾಂತಿಕಾರೀ ಭಾವನೆಗಳನ್ನು ಚರ್ಚಿಸುತ್ತಿದ್ದರು—ಅಪರಾತ್ರಿಯ ತನಕ ಇಂಥ ಚರ್ಚೆಗಳು ಬಿರುಸಿನಿಂದ ನಡೆಯುತ್ತಿದ್ದುವು, ನೆರೆಕರೆಯವರಿಗೆ ಇವರೇನು ಹುಚ್ಚರೋ ಜಗಳಗಂಟಿಗಳೋ ಎಂಬ ಅಭಿಪ್ರಾಯ ಮೂಡುವಂತೆ. ಅನೇಕ ವೇಳೆ ತಮ್ಮ ಹಿರಿಯ ಮಗನನ್ನು ಆರೈಕೆ ಮಾಡುತ್ತ, ಆದರೆ ಒಂದಿಷ್ಟೂ ತನ್ಮಯತೆ ಕಳೆದುಕೊಳ್ಳದೆ, ಐನ್‌ಸ್ಟೈನ್ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದರು.

ಇವೆಲ್ಲವುಗಳ ಫಲವಾಗಿ—ಗಾಢ ಅಧ್ಯಯನ, ಗಭೀರ ಚಿಂತನೆ, ತೀವ್ರ ಚರ್ಚೆ, ಒಟ್ಟಾರೆ ಕಠಿಣ ಪರಿಶ್ರಮ—ಐನ್‌ಸ್ಟೈನ್ ತಮ್ಮ ಸಿದ್ಧಾಂತಗಳನ್ನು ಅತ್ಯಂತ ನಿಷ್ಕೃಷ್ಟ ಹಾಗೂ ಕಲಾಪೂರ್ಣ ಪರಿಭಾಷೆಯಲ್ಲಿ ನಿರೂಪಿಸಬಲ್ಲವರಾಗಿದ್ದರು. ವಿಶ್ವದಲ್ಲಿ ಎಲ್ಲವೂ ಸಾಪೇಕ್ಷವೇ (relative), ನಿರಪೇಕ್ಷವೆಂಬುದೇ (absolute) ಇಲ್ಲ, ತಾನು ಈ ಸಾಪೇಕ್ಷತೆಗೆ (relativity) ಸಂಬಂಧಿಸಿದಂಥ ಊಹನೆಗಳನ್ನು ಬೆಂಬತ್ತಿದ್ದೇನೆ ಎಂಬುದಾಗಿ ಇವರು ಸ್ನೇಹಿತರೊಡನೆ ಹೇಳುತ್ತಿದ್ದುದುಂಟು. ಕ್ರಮೇಣ relativity ಎಂಬ ಹೆಸರೇ ಘನೀಭವಿಸಿ ಇವರು ಪ್ರತಿಪಾದಿಸಿದ ಸಿದ್ಧಾಂತಕ್ಕೆ theory of relativity (ಸಾಪೇಕ್ಷತಾಸಿದ್ಧಾಂತ) ಎಂಬ ಹೆಸರೇ ಗಟ್ಟಿ ಆಯಿತು. (ಐನ್‌ಸ್ಟೈನರ ಮಾತೃಭಾಷೆ ಜರ್ಮನ್. ಇದರಲ್ಲಿ theory of relativityಯ ಸಮಾನ ಪದ relativitatstheorie.)

ಜೂನ್ ೧೯೦೫. ಆಲ್ಬರ್ಟ್ ಐನ್‌ಸ್ಟೈನ್ ತಮ್ಮ ಸಂಶೋಧನ ಪ್ರಬಂಧದ 'ಹೊರೆ'ಯನ್ನು ಬರ್ನ್ ನಗರದ ಅಂಚೆ ಕಛೇರಿಗೆ ಕೊಂಡೊಯ್ದರು. ಮೂವತ್ತು ಪುಟಗಳಲ್ಲಿ ಓರಣವಾಗಿಯೂ

ಅಡಕವಾಗಿಯೂ ಕೈಬರೆಹದಲ್ಲಿ ಲಿಖಿತವಾಗಿದ್ದ ಪ್ರಬಂಧವನ್ನು ಪ್ರತಿಷ್ಠಿತ ವಿಜ್ಞಾನ ಪತ್ರಿಕೆ *Annalen der Physik*ಗೆ 'ಹೊತ್ತುಹಾಕಿ'ದರು. ಈ 'ಕೇವಲ' ಮೂವತ್ತು ಪುಟಗಳ ನಿಬಂಧ ಭವಿಷ್ಯದಲ್ಲಿ ಹೇಗೆ ವಿಜ್ಞಾನದ ಹಣೆಬರೆಹವನ್ನೇ ಪ್ರಪಂಚದ ಮುಖವನ್ನೇ ಬದಲಾಯಿಸಿಬಿಟ್ಟೀತು ಎಂಬ ಸಂಗತಿ ಆಗ ಸಾಕ್ಷಾತ್ ಅದರ ಕರ್ತೃವಿಗೂ ತಿಳಿದಿರಲಾರದು. ಅಂಬಿಕಾತನಯದತ್ತರ ನುಡಿಗಳಲ್ಲಿ—

ಯುಗಯುಗಗಳ ಹಣೆಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸು ಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ !

*Physik* ಪತ್ರಿಕೆಯಲ್ಲಿ ಐನ್‌ಸ್ಟೈನರ ಪ್ರಬಂಧ ಪ್ರಕಟವಾದಾಗ ಅದು ವಿಜ್ಞಾನಪ್ರಪಂಚದಲ್ಲಿ ಪ್ರಚಂಡ ಚಂಡಮಾರುತವನ್ನೇ ಉತ್ಪಾದಿಸಿತು: ಆ ಭಾವನೆಗಳ ನಾವೀನ್ಯ, ಸರಳತೆ, ನಿರೂಪಣೆಯ ಸಹಜತೆ, ಸೌಂದರ್ಯ ಒಂದೊಂದರಿಂದಲೂ. ಇಷ್ಟೇ ಅಲ್ಲ, ಆ ತನಕ ಎಲ್ಲಿಯೂ ಕೇಳಿಬರ ದಿದ್ದಂಥ ಈ ಅಪ್ರಸಿದ್ಧ ಅನಾಮಧೇಯ ಐನ್‌ಸ್ಟೈನ್ ಯಾರು ? ಅವರು ಪ್ರಾಧ್ಯಾಪಕರಾಗಿರುವ ವಿಶ್ವವಿದ್ಯಾಲಯ ಯಾವುದು ? ಅವರ ಹಿನ್ನೆಲೆ ಏನು ? ಇವು ಕೂಡ ವಿಜ್ಞಾನಿಗಳಿಗೆ ಆಸಕ್ತ ವಿಷಯ ಗಳಾಗಿದ್ದುವು. ಸ್ವಿಟ್ಸರ್ಲೆಂಡಿನ ಬರ್ನ್ ನಗರದ ಏಕಸ್ವ ಕಛೇರಿಯಲ್ಲಿ ಗುಮಾಸ್ತನಾಗಿರುವ 'ಕ್ಷುದ್ರವ್ಯಕ್ತಿ' ಈ ಮಹಾ ನಿಬಂಧದ ಭದ್ರ ಶಕ್ತಿ ಆಗಿರಬಹುದೆಂಬುದು ಅವರ ಊಹೆಗೆ ಮೀರಿ ದ್ದಾಗಿತ್ತು. ಈ ಒಗಟನ್ನು ಬಿಡಿಸಿಯೇ ತೀರಬೇಕೆಂದು ಬಗೆದು ಹಿರಿಯ ಪ್ರಸಿದ್ಧ ಪ್ರಾಧ್ಯಾಪಕ ರೊಬ್ಬರು ಖುದ್ದಾಗಿ ಬರ್ನ್ ನಗರಕ್ಕೆ ಚಿತ್ತೈಸಿಯೇಬಿಟ್ಟರು. ಇನ್ನೂ 'ಹುಡುಗತನ' ಮಾಯದ ತರುಣ ಐನ್‌ಸ್ಟೈನರನ್ನು ಕಂಡಾಗ ಅವರಿಗಾದ ಅಚ್ಚರಿಗೆ ಎಣೆಯೇ ಇರಲಿಲ್ಲ. ಐನ್‌ಸ್ಟೈನರ ಗಣಿತ ಗುರು ಸುವಿಖ್ಯಾತ ಮಿಂಕೊವ್ಸ್ಕಿ (ಇವರ ತರಗತಿಗಳಿಗೂ ವಿದ್ಯಾರ್ಥಿ ಐನ್‌ಸ್ಟೈನ್ ಚಕ್ಕರ್ ಹೊಡೆಯುತ್ತಿದ್ದರೆಂಬ ಸಂಗತಿ ಅಲಾಯಿದ!) ಈ ನಿಬಂಧ ಓದಿ ಸಂತೋಷ ಆಶ್ಚರ್ಯ ಪುಳಕಿತ ರಾಗಿ ಬಾಯಿಗೆ ಬೆರಳಿಟ್ಟರು—ತರಗತಿಯಲ್ಲಿ ತಾನು 'ಸೋಮಾರಿ ನಾಯಿ' ಎಂದು ಹೆಸರಿಸಿದ್ದ ಆ ಅಗಣ್ಯ ಆ ಪರಮಗಣ್ಯ ನಿರೂಪಣೆಯ ಕಾರಣಿಕ ಮಾನ್ಯನೇ ಎಂದು !

### ಏನು ವಿಸ್ಮಯ ಸೃಷ್ಟಿ !

ಏನು ಭೈರವ ಲೀಲೆಯೀ ವಿಶ್ವವಿಭ್ರಮಣೆ !
ಏನು ಭೂತಗ್ರಾಮ ನರ್ತನೋನ್ಮಾದ !
ಏನಗ್ನಿಗೋಳಗಳು ಏನಂತರಾಳಗಳು !
ಏನು ವಿಸ್ಮಯ ಸೃಷ್ಟಿ ! ಮಂಕುತಿಮ್ಮ

ಐನ್‌ಸ್ಟೈನ್ ಏನು ಸಾಧಿಸಿದ್ದರು ಎಂಬುದರ ಅತಿ ಸ್ಥೂಲ ವಿವರಣೆಯನ್ನು ಮಾತ್ರ ಇಲ್ಲಿ ಕೊಡಬಹುದು, ಅಷ್ಟೆ.

ರಾಶಿ (mass), ಆಕಾಶ (space), ಚಲನೆ ಮತ್ತು ಕಾಲ ಮುಂತಾದವುಗಳ ಬಗ್ಗೆ ಕೊನೆಯ ಮಾತನ್ನು ಅಥವಾ ಅಂತಿಮ ತೀರ್ಪನ್ನು ಭೌತವಿಜ್ಞಾನ ಹೇಳಿ ಶತಮಾನಗಳೇ ಸಂದಿದ್ದುವು. ವಿಶ್ವವೊಂದು ಪರಿಪೂರ್ಣ ಯಂತ್ರ. ಇದರ ಎಲ್ಲ ಚಟುವಟಿಕೆಗಳನ್ನೂ, ಯಂತ್ರದ ವರ್ತನೆ

ಯನ್ನು ವಿವರಿಸುವಷ್ಟೇ ಸುಲಭವಾಗಿ ವಿವರಿಸಬಹುದು ಎಂಬುದಾಗಿ ವಿಜ್ಞಾನಿಗಳು ಭಾವಿಸಿದ್ದರು. ವಿಶ್ವದ ಯಾಂತ್ರಿಕ ಪ್ರತಿರೂಪಕ್ಕೆ ಹಾಗೂ ವರ್ತನೆಗೆ ಮಹಾವಿಜ್ಞಾನಿಗಳ ಅಂಗೀಕಾರಮುದ್ರೆ ಬಿದ್ದು ಆ ಪ್ರಕಾರವೇ ವಿಶ್ವವನ್ನು ಅರ್ಥವಿಸುವುದು ಸಾಧ್ಯವಾಗಿರುವಾಗ ಭೌತವಿಜ್ಞಾನ ಮಾಡಬೇಕಾದದ್ದೇನು ? ಅಲ್ಲಿಂದ ಮುಂದಕ್ಕೆ ಸಾಗುವ ಪ್ರಯತ್ನ ಅಂದರೆ ನಾಜೂಕುಗೊಳಿಸುವುದು ಮಾತ್ರ.

ಆದರೆ ಐನ್‌ಸ್ಟೈನ್ ಪ್ರಚಲಿತ ಅಂಗೀಕೃತ ಚೌಕಟ್ಟನ್ನು ತೊರೆದರು—ಇದೊಂದು ನಿರ್ಮೋಚನ ಕ್ರಿಯೆ (moulting). ಪೊರೆಕಳಚಿ ಹುಳು ಚಿಟ್ಟೆಯಾಗಿ ಹೊರಬರುವ ವಿಶಿಷ್ಟ ವಿದ್ಯಮಾನ. ಪ್ರಚಲಿತ ಚೌಕಟ್ಟು ತೊಡಿಸಿದ್ದ ಬಣ್ಣಗಾಜನ್ನು ಇವರು ಕಳಚಿ ಹಾಕಿದರು. ರಾಶಿ, ಆಕಾಶ, ಚಲನೆ, ಕಾಲ ಒಂದೊಂದನ್ನೂ ಕುರಿತು ಮೂಲಭೂತವಾಗಿ ಚಿಂತಿಸಿ ತಮ್ಮ ಊಹನೆಗಳನ್ನು ವಿಜ್ಞಾನದ ಪರಿಭಾಷೆಗೆ ಅನುವಾದಿಸಿ ಹೊಸ ಜಾಡಿನಲ್ಲಿ ನಡೆದರು—ಆನೆ ನಡೆದಂತೆ ; ಹೊಸ ಹರವನ್ನು ಕಂಡರು—ವೈನತೇಯ ಕಂಡಂತೆ.

ಓ ಗೆಳೆಯ ! ನೀ ಸದಾ ಪಥ ಕಡಿದು ಮುಂದೆ ನಡೆ
ಸಾಗರ ವಿಶಾಲತೆ ಹಿಮಾಲಯ ಮಹೌನ್ನತ್ಯ
ಬಾಗುವುವು ನಿನ್ನ ಪದತಲದಲ್ಲಿ, ಗುರಿಕುರಿತ
ಜಾಗರಣೆ ಋಜುಯಶಸ್ಸಿನ ಮೂಲ ಅತ್ರಿಸೂನು

ಕಲ್ಲನ್ನು ಎಸೆದು ನೋಡಿ, ಗುಂಡನ್ನು ಹೊಟ್ಟಿಸಿ ನೋಡಿ, ಗಗನರಾಕೆಟನ್ನು ಉಡಾಯಿಸಿ ನೋಡಿ. ಈ ಒಂದೊಂದು ವಸ್ತುವಿಗೂ ನಿರ್ದಿಷ್ಟರಾಶಿ ಉಂಟು. ಈಗ, ಕಲ್ಲಿನ ವೇಗಕ್ಕಿಂತ ಗುಂಡಿನದು ಹೆಚ್ಚು, ರಾಕೆಟಿನದು ಇನ್ನೂ ಹೆಚ್ಚು. ಈ ಹಿರಿವೇಗಗಳು ಅವುಗಳಿಗೆ ಹೇಗೆ ಒದಗುತ್ತವೆ ? ಪ್ರಾರಂಭಿಕ ನೂಕುಬಲವನ್ನು ಅಧಿಕಗೊಳಿಸುವುದರಿಂದ ಎನ್ನುವಿರಿ. ಕಲ್ಲಿನ ಮೇಲೆ ಋದ್ದು ಈ ಪ್ರಯೋಗ ಮಾಡಿಯೂ ನೋಡಬಹುದು. (ಎಚ್ಚರಿಕೆ : ಗಾಜಿನ ಮನೆಯಲ್ಲಿ ವಾಸಿಸುವವರು ಈ ಪ್ರಯೋಗಕ್ಕೆ ಕೈಹಾಕಬಾರದು !) ಆದ್ದರಿಂದ ಅಧಿಕ ಬಲಕ್ಕೆ (force) ಅಧಿಕ ವೇಗವೆಂದು (velocity) ತಿಳಿಯುವಿರಿ. ವಾಸ್ತವವಾಗಿ ಬಲ-ವೇಗ ಸಂಬಂಧ ಲೋಕಪ್ರಜ್ಞೆ (=ಅನೇಕ ಸಂದರ್ಭಗಳಲ್ಲಿ ಪರಂಪರಾಗತವಾಗಿ ಕೂಡಿ ಬಂದಿರುವ ಕುರುಡು ನಂಬಿಕೆಗಳ ಮೊತ್ತ) ತಿಳಿಸುವುದಕ್ಕಿಂತ ಎಷ್ಟೋ ಪಟ್ಟು ಜಟಿಲವಾದದ್ದು. ಬಲವನ್ನು ಹೆಚ್ಚು ಕಡಿಮೆ ಮಾಡಿದಂತೆ ವೇಗದ ದರ ಬದಲಾಗುತ್ತಿರುವುದು. ಅಂದರೆ ವೇಗ ಸ್ಥಿರವಾಗಿ ಉಳಿದಿರುವುದಿಲ್ಲ. ವೇಗದ ಬದಲಾವಣೆಯ ದರಕ್ಕೆ—ಅಂದರೆ ವೇಗ ಇಂತಿಷ್ಟು ಕಾಲದಲ್ಲಿ ಇಂತಿಷ್ಟು ಬದಲಾಯಿತು ಎಂಬುದನ್ನು ತಿಳಿಸುವ ಮಾನಕ—ವೇಗೋತ್ಕರ್ಷ (acceleration) ಅಥವಾ ವೇಗಾಪಕರ್ಷ (retardation) ಎಂದು ಹೆಸರು. ಬೈಸಿಕಲ್ ಏರಿ ಹೆಚ್ಚುಹೆಚ್ಚು ರಭಸದಿಂದ ಪೆಡಲ್ ತುಳಿದಾಗ ಅಥವಾ ಕಾರಿನಲ್ಲಿ ಕುಳಿತು ಟಾಪ್‌ಗಿಯರನ್ನು ಲಗಾಯಿಸಿ ಆ್ಯಕ್ಸಲರೇಟರನ್ನು ಅಮುಕಿದಾಗ, ಇತ್ಯಾದಿ, ನಾವು ಅನುಭವಿಸುವುದು ವೇಗೋತ್ಕರ್ಷವನ್ನು. ತಾತ್ತ್ವಿಕವಾಗಿ ಇಲ್ಲಿ ಚಲನೆಯ ದಿಶೆಯಲ್ಲಿ ಬಲವನ್ನು ಪ್ರಯೋಗಿಸಿದ್ದೇವೆ. ಹೀಗಲ್ಲದೆ ರಭಸದಿಂದ ಓಡುತ್ತಿರುವ ವಾಹನಕ್ಕೆ ಬರಿಹಾಕಿದರೆ, ಇಲ್ಲವೇ ಇಂಧನ ಪೂರೈಕೆಯನ್ನು ನಿಲ್ಲಿಸಿದರೆ, ಇಲ್ಲವೇ ಎರಡನ್ನೂ ಮಾಡಿದರೆ ಆಗ ನಾವು ಅನುಭವಿಸುವುದು ವೇಗಾಪಕರ್ಷವನ್ನು. ತಾತ್ತ್ವಿಕವಾಗಿ ಇಲ್ಲಿ ಚಲನೆಯ ವಿರುದ್ಧ ದಿಶೆಯಲ್ಲಿ ಬಲ ಪ್ರಯೋಗಿಸಿದ್ದೇವೆ. ಈಗ ನಮ್ಮ 'ಪರಿಷ್ಕೃತ ಲೋಕಪ್ರಜ್ಞೆ' ಹೊಸತೊಂದು ಸಲಹೆ ನೀಡುತ್ತದೆ : ಬಲವನ್ನು 'ಅತಿ'ಗೆ ಏರಿಸಿ ಅತಿ ವೇಗೋತ್ಕರ್ಷವನ್ನು ಪಡೆದುದಾದರೆ ಒಂದು

ಘಟ್ಟದಲ್ಲಿ ವೇಗ ಅನಂತವೇ ಆಗಬೇಕು; ಆದ್ದರಿಂದ ವಿಶ್ವದಲ್ಲಿ, ತಾತ್ತ್ವಿಕವಾಗಿ, ಅನಂತ ವೇಗವನ್ನು ಏರುವುದು ಸಾಧ್ಯವಾಗಬೇಕು, ಅಥವಾ ಕನಿಷ್ಠಪಕ್ಷ, ಅನಂತವೇಗವನ್ನು ಗುರುತಿಸುವುದಾದರೂ ಕೈಗೂಡಬೇಕು. ಇದರ ಅರ್ಥವೇನು ಗೊತ್ತೆ ? ಅನಂತವೇಗವನ್ನು ಏರಿದ ವಸ್ತು ಅಥವಾ ಶಕ್ತಿ ಒಂದೇ ಮುಹೂರ್ತದಲ್ಲಿ ವಿಶ್ವವ್ಯಾಪಿಯಾಗಿರುತ್ತದೆ ! ಇದು ಹಾಗಿರಲಿ. ಈಗ, ವಿಶ್ವದ ಯಾವುದೇ ವಸ್ತು ಏದಬಹುದಾದ ವೇಗಕ್ಕೆ ಗರಿಷ್ಠಮಿತಿ ಇದೆ ಎಂದು ಯಾರಾದರೂ ನುಡಿದದ್ದಾದರೆ ಆತನ ಮತಿಸ್ವಾಸ್ಥ್ಯದ ಬಗ್ಗೆ ನಿಮಗೆ ಸಂದೇಹ ಮೂಡುವುದು ಖರೆ.

ಪುನಃ ಮೇಲಿನ ಉದಾಹರಣೆಗಳನ್ನೇ ಪರಿಶೀಲಿಸಿ. ಕಲ್ಲಿನ ಇಲ್ಲವೇ ಗುಂಡಿನ ಇಲ್ಲವೇ ನೌಕೆಯ ರಾಶಿಯ ಮೇಲೆ, ಅಂತೆಯೇ ಗಾತ್ರದ ಮೇಲೆ, ಆಯಾ ವೇಗದಿಂದ ಏನೂ ಪರಿಣಾಮವಾಗಿರುವುದಿಲ್ಲ. ಅರ್ಥಾತ್ ಆ ವಸ್ತುವಿನ ರಾಶಿ (ಅಂತೆಯೇ ಗಾತ್ರ ಕೂಡ) ಅದರ ನಿಶ್ಚಲಸ್ಥಿತಿಯಲ್ಲಿ ಎಷ್ಟಿತ್ತೊ ಚಲನಸ್ಥಿತಿಯಲ್ಲಿಯೂ ಅಷ್ಟೆ ಇರುತ್ತದೆ ಎಂದರೆ ನೀವು ಒಪ್ಪುತ್ತೀರಿ. ಈಗ, ಆರೋಪಿತ ವೇಗದ ಪರಿಣಾಮವಾಗಿ ರಾಶಿಯ ಅಳತೆಯಲ್ಲಿ (ಅಂತೆಯೇ ಗಾತ್ರದಲ್ಲಿ ಕೂಡ) ವ್ಯತ್ಯಯ ಉಂಟಾಗುತ್ತದೆಂದು ಯಾರಾದರೂ ಹೇಳಿದ್ದಾದರೆ ಆತನಿಗೆ ಬುದ್ಧಿ ವಿಕಲ್ಪವಾಗಿರಬಹುದೇ ಎಂಬ ಸಂಶಯ ನಿಮಗೆ ಮೂಡುವುದು ಖಾತ್ರಿ.

ಬೆಳಕು, ವಿದ್ಯುತ್ತು, ಉಷ್ಣ ಮುಂತಾದ ಅಮೂರ್ತ ಅನುಭವಗಳಿಗೆ ಒಟ್ಟಾಗಿ 'ಶಕ್ತಿ' (energy) ಎಂಬ ಹೆಸರುಂಟು. ಶಕ್ತಿಯ ನೆರವಿನಿಂದ 'ಕಾರ್ಯ' (work) ಮಾಡಬಲ್ಲೆವು. ಉದಾಹರಣೆಗೆ ವಿದ್ಯುತ್ತಿನ ನೆರವಿನಿಂದ ಪಂಖ ಚಾಲನೆ. ಬಲ್ಬ್ ಉರಿಯದಿರುವಾಗ, ಮತ್ತು ಉರಿಯುತ್ತಿರುವಾಗ ಅದನ್ನು ತೂಗಿ ನೋಡಿ. ತೂಕ ಒಂದೇ ಇರುತ್ತದೆ. ಆದ್ದರಿಂದ ಬೆಳಕಿಗೆ ರಾಶಿ ಇಲ್ಲ. ತಂತಿಯ ಮೂಲಕ ವಿದ್ಯುತ್ತು ಹರಿಯದಿರುವಾಗ, ಮತ್ತು ಹರಿಯುತ್ತಿರುವಾಗ ಅದನ್ನು ತೂಗಿ ನೋಡಿ. ವ್ಯತ್ಯಾಸವಿಲ್ಲ. ಆದ್ದರಿಂದ ವಿದ್ಯುತ್ತಿಗೆ ರಾಶಿ ಇಲ್ಲ. ಕಬ್ಬಿಣದ ಗುಂಡು ತಣ್ಣಗಿರುವಾಗ, ಮತ್ತು ಕಾದಿರುವಾಗ ಅದನ್ನು ತೂಗಿ ನೋಡಿ. ವ್ಯತ್ಯಯ ನಾಸ್ತಿ. ಆದ್ದರಿಂದ ಉಷ್ಣಕ್ಕೆ ರಾಶಿ ಇಲ್ಲ. ಒಟ್ಟಾರೆ ಹೇಳುವುದಾದರೆ ಶಕ್ತಿಗೆ ರಾಶಿ ಇಲ್ಲ. ಈಗ, ಶಕ್ತಿಗೆ ರಾಶಿ ಇದೆ ಎಂದು ಯಾರಾದರೂ ಸಾಧಿಸಿದ್ದಾದರೆ ಆತನ ಮಿದುಳರಾಶಿಯಲ್ಲಿ ಊನವಿರಬಹುದೇ ಎಂಬುದಾಗಿ ನೀವು ಶಂಕಿಸುವುದು ದಿಟ.

ಶಕ್ತಿಗೆ ರಾಶಿ ಇರುವುದಾದರೆ ರಾಶಿಗೆ ಶಕ್ತಿ ಇರಬೇಕಷ್ಟೆ ? ಹೌದು ! ಕಿರಿ ಕಲ್ಲಿನ ತುಣುಕಿನಲ್ಲಿ ಹಿರಿ ಆನೆಗಳ ದಂಡೇ ಮಾಡಬಲ್ಲ ಕಾರ್ಯಕ್ಕೆ ಸಮಾನವಾದ ಶಕ್ತಿ ಹುದುಗಿದೆ. ನಿಸರ್ಗದ ಒಂದೊಂದು 'ನಿಷ್ಪ್ರಯೋಜಕ'ವಸ್ತುವೂ ಹೀಗೆಯೇ—ಅಗಾಧ ಶಕ್ತಿಯ ಘನೀಭವಿತ ರೂಪ. ಸಾಮಾನ್ಯ ಪ್ರಜ್ಞೆಗೆ (common sense, ಪೂರ್ವಗ್ರಹಗಳ ಸಂಕಲನ ?) ತೀರ ಹೊರಗಾದ ಇಂಥ ಒಂದು ಹೇಳಿಕೆಯನ್ನು ಯಾರಾದರೂ ಮಂಡಿಸಿದ್ದಾದರೆ ಆತ ಶತಶುಂಠನೆಂದು ನೀವು ತೀರ್ಮಾನಿಸುವುದು ಶತಸ್ಸಿದ್ಧ.

ಓಡುತ್ತಿರುವ ಬಂಡಿಯಿಂದ ನೇರ ಹೊರ ದುಮುಕಿದಾತ ಮುಗ್ಗರಿಸಿ ಮಣ್ಣು ಮುಕ್ಕುತ್ತಾನೆ. ನಿಂತಿರುವ ಬಂಡಿಯಿಂದ ಹೊರ ಜಿಗಿದಾತ ಸಲೀಸಾಗಿ ಕೆಳಗಿಳಿದಿರುತ್ತಾನೆ. ಏಕೆ ಈ ವಿಪರ್ಯಾಸ? ಒಂದನೆಯ ಪ್ರಯೋಗದಲ್ಲಿ ಬಂಡಿಯ ವೇಗ ವ್ಯಕ್ತಿಗೆ ಆರೋಪಿತವಾಗಿ ಆತನ ಊಹೆ ತಪ್ಪಿ ಆತ ಸಮತೋಲ ಕಳೆದುಕೊಂಡು ಮುಗ್ಗರಿಸುತ್ತಾನೆ. ಎರಡನೆಯ ಪ್ರಯೋಗದಲ್ಲಿ ಬಂಡಿಗೆ ವೇಗವಿಲ್ಲದ್ದರಿಂದ ಊಹಾನುಸಾರವಾಗಿಯೇ ನೆಲಕ್ಕೆ ಇಳಿದಿರುತ್ತಾನೆ. ಆದ್ದರಿಂದ ವಸ್ತುವಿನ ಮೇಲೆ ಆಕರ-ವೇಗದ ಪರಿಣಾಮ ಇದೆ. ಸಹಜವಾಗಿ, ಬೆಳಕಿನ ಮೇಲೆಯೂ ಆಕರ-ವೇಗದ

ಪರಿಣಾಮವಿದೆಯೆಂದು ನೀವು ತೀರ್ಮಾನಿಸುತ್ತೀರಿ. ಆಕರದ ವೇಗ *v*, ಬೆಳಕಿನ ವೇಗ *c* ಇರಲಿ. ಆಕರವು ಬೆಳಕಿನ ದಿಶೆಯಲ್ಲಿ ಚಲಿಸುತ್ತಿದ್ದರೆ—ಉದಾಹರಣೆಗೆ, ಮುಂದಕ್ಕೆ ಓಡುತ್ತಿರುವ ರೇಲ್ ಎಂಜಿನ್ ಮತ್ತು ಅದು ಬೀರುತ್ತಿರುವ ಬೆಳಕಿನ ದೂಲ—ಬೆಳಕಿನ ಸಮಗ್ರ ವೇಗ $c+v$ ಎಂದೂ ಹೀಗಲ್ಲದೆ ಆಕರವು ಬೆಳಕಿನ ವಿರುದ್ಧ ದಿಶೆಯಲ್ಲಿ ಚಲಿಸುತ್ತಿದ್ದರೆ—ಉದಾಹರಣೆಗೆ ಹಿಂದಕ್ಕೆ ಓಡುತ್ತಿರುವ ರೇಲ್ ಎಂಜಿನ್ ಮತ್ತು ಅದು ಮುಂದಕ್ಕೆ ಬೀರುತ್ತಿರುವ ಬೆಳಕಿನ ದೂಲ—ಬೆಳಕಿನ ಸಮಗ್ರ ವೇಗ $c-v$ ಎಂದೂ ಸುಲಭ ಗಣನೆಗಳಿಂದ ಹೇಳುತ್ತೀರಿ. ಈಗ, ಬೆಳಕನ್ನು ಉತ್ಪಾದಿಸುವ ಆಕರದ ವೇಗ ಎಷ್ಟೇ ಇದ್ದರೂ ಯಾವ ದಿಶೆಗೇ ಇದ್ದರೂ ಅಲ್ಲಿಂದ ಹೊಮ್ಮುವ ಬೆಳಕಿನ ವೇಗದ ಮೇಲೆ ಅದರ ಪರಿಣಾಮವೇನೂ ಇಲ್ಲ, ಬೆಳಕು ಸದಾ ಒಂದೇ ವೇಗದಿಂದ ಅಂದರೆ *c*ಯಿಂದ ಮಾತ್ರ ಸಾಗುತ್ತಿರುವುದು ಎಂದು ಯಾರಾದರೂ ಮಂಡಿಸಿದ್ದಾದರೆ ಆತನ ಬುದ್ಧಿಯ ಆಕರಕ್ಕೆ ಏನೋ ಆಗಿರಬೇಕು ಎಂಬುದಾಗಿ ನೀವು ನಿರ್ಧರಿಸುವುದು ಸ್ಪಷ್ಟ.[೧೭]

ಇವೆಲ್ಲವನ್ನೂ—ಇವು ಸಾಮಾನ್ಯ ಓದುಗರಿಗೆ ತಿಳಿಯುವಂಥವು, ಇನ್ನು ಗಣಿತ ಮತ್ತು ಭೌತವಿಜ್ಞಾನ ಪರಿಣತರಿಗೆ ಮಾತ್ರ ಅರ್ಥವಾಗುವಂಥ ಹೊಸ ಸಂಗತಿಗಳು ಎಷ್ಟೋ ಇವೆ—ವಿಜ್ಞಾನ ಸಿದ್ಧಾಂತಗಳ ರೂಪದಲ್ಲಿ ಸಾಕ್ಷ್ಯಾಧಾರ ಸಮೇತ ಪ್ರಕಟಿಸಿದವರು ಆಲ್ಬರ್ಟ್ ಐನ್‌ಸ್ಟೈನ್. ಎಂದೇ ಇವರು ನವಮನ್ವಂತರಪ್ರವರ್ತಕರು, ವಿಜ್ಞಾನರಂಗದ ಸೀಮೋಲ್ಲಂಘನಕಾರರು.

ಐನ್‌ಸ್ಟೈನರ ಪ್ರತಿಪಾದನೆಗಳಿಗೆ ಒಟ್ಟಾಗಿ ವಿಶೇಷ ಸಾಪೇಕ್ಷತಾ ಸಿದ್ಧಾಂತವೆಂದು (Special theory of Relativity, ಹೆಸರು. ಜರ್ಮನ್ ಭಾಷೆಯಲ್ಲಿ ಇದು Speziellen Relativitats-theorie). ಇದರಿಂದ ಬೆಳಕಿಗೆ ಬಂದ ಅಂದರೆ ಪ್ರಕಟವಾದ ಕೆಲವು ಮುಖ್ಯ ಫಲಿತಾಂಶಗಳನ್ನು ಈಗ ನೋಡೋಣ.

ಈಥರಿನ ಅಸ್ತಿತ್ವವನ್ನೇ ಐನ್‌ಸ್ಟೈನ್ ತೊಡೆದು ಹಾಕಿದರು. ಆ ಕೂಡಲೇ ಅದನ್ನು ಆಧರಿಸಿ ನಿಂತಿದ್ದ ಹಲವಾರು ಅಸಾಂಗತ್ಯಗಳು ರೆಕ್ಕೆ ಕಡಿದ ಮಳೆಹಾತೆಗಳಂತೆ ನೆಲಕ್ಕೆ ಕುಸಿದು ಕುಕ್ಕರಿಸಿದುವು. ಅಂದರೇನಾಯಿತು ? ಬೆಳಕಿನ ಸಂಚಾರಕ್ಕೆ ಯಾವ ಮಾಧ್ಯಮವೂ ಬೇಡ, ಅದು ನಿರ್ದ್ರವ್ಯತೆಯಲ್ಲಿ ಸಂಚರಿಸಬಲ್ಲ ಶಕ್ತಿರೂಪ, ಅದನ್ನು ಶಬ್ದದ ಗುಣದೊಂದಿಗೆ ಹೋಲಿಸಿದ್ದೇ ತಪ್ಪು ಎಂಬ ಸಂಗತಿಗಳು ಸ್ಪಷ್ಟವಾದುವು. ಸಾಹಿತ್ಯ ಪರಿಭಾಷೆಯಲ್ಲಿ 'ಐನ್‌ಸ್ಟೈನ್ ಪರಿಣಾಮ' ಎಂದರೆ, "ನಿಜಕ್ಕೂ ಇರದ, ಆದರೆ ನಾವು ಇದೆಯೆಂದು ಭಾವಿಸಿ ಆ ಕಾರಣದಿಂದ ಅನಾವಶ್ಯಕ ಕಷ್ಟಕೋಟಲೆಗಳನ್ನು ಅನುಭವಿಸಿ, ಕೊನೆಗೆ ಜ್ಞಾನ ಸಾಕ್ಷಾತ್ಕಾರವಾದಾಗ 'ಅದನ್ನು'ಇಲ್ಲವೆಂದು ಸಾರಿ ಭಾರವಿಮುಕ್ತರಾಗುವ ಮನಃಸ್ಥಿತಿ."

ವಿಶ್ವದಲ್ಲಿ ವೇಗದ ಗರಿಷ್ಠ ಮಿತಿಯೆಂದರೆ ನಿರ್ದ್ರವ್ಯತೆಯಲ್ಲಿ ಬೆಳಕಿನ ವೇಗ—ಸೆಕೆಂಡಿಗೆ ಸುಮಾರು ಮೂರು ಲಕ್ಷ ಕಿಲೊಮೀಟರುಗಳು. ಇದನ್ನು *c* ಪ್ರತೀಕದಿಂದ ಸೂಚಿಸುವುದು ವಾಡಿಕೆ.

ರಾಶಿಗೂ (ಪ್ರತೀಕ *m*) ಶಕ್ತಿಗೂ (ಪ್ರತೀಕ *E*) ಅವಿನಾಸಂಬಂಧವಿದೆ. ಶಕ್ತಿರಹಿತ ರಾಶಿ ಇಲ್ಲ. ರಾಶಿರಹಿತ ಶಕ್ತಿ ಇಲ್ಲ. ಬೆಂಕಿ-ಶಾಖ ಸಂಬಂಧದಂತೆ. ಅಂತಿಮ ವಿಶ್ಲೇಷಣೆಯಲ್ಲಿ, ಯಾವುದು ಶಕ್ತಿಯೋ ಅದು ರಾಶಿಯೂ ಹೌದು, ಯಾವುದು ರಾಶಿಯೋ ಅದು ಶಕ್ತಿಯೂ ಹೌದು. ಇವೆರಡರ ನಡುವಿನ ಗಣಿತ ಸಂಬಂಧ ಹೀಗಿದೆ : $E = mc^2$.

ಆರೋಪಿತ ವೇಗ *v*ಯ ಪರಿಣಾಮವಾಗಿ ರಾಶಿಯಲ್ಲಿ ಆಧಿಕ್ಯ ಕಂಡುಬರುತ್ತದೆ, ಅರ್ಥಾತ್ ಚಲನೆಯಲ್ಲಿರುವ ರಾಶಿ *m*, ನಿಶ್ಚಲಸ್ಥಿತಿಯಲ್ಲಿರುವ ವಸ್ತುವಿನ ರಾಶಿ $m_0$ಗಿಂತ ಕಡಿಮೆ ಇರುತ್ತದೆ. ಇವೆರಡರ ನಡುವಿನ ಗಣಿತ ಸಂಬಂಧವಿದು :

$$m = \frac{m_0}{\sqrt{1-v^2/c^2}}$$

ಆರೋಪಿತ ವೇಗ $v$ಯ ಪರಿಣಾಮವಾಗಿ ವಸ್ತುವಿನ ದೀರ್ಘತೆ ಸಂಕೋಚಿಸಲ್ಪಡುತ್ತದೆ. ಚಲನೆಯಲ್ಲಿರುವ ವಸ್ತುವಿನ ದೀರ್ಘತೆ $l$, ನಿಶ್ಚಲ ಸ್ಥಿತಿಯಲ್ಲಿರುವ ವಸ್ತುವಿನ ದೀರ್ಘತೆ $l_0$ ಗಿಂತ ಕಡಿಮೆ ಇರುತ್ತದೆ. ಇವೆರಡರ ನಡುವಿನ ಗಣಿತ ಸಂಬಂಧವಿದು :

$$l = l_0\sqrt{1-v^2/c^2}$$

ವೇಗ $v$ಯ ಬೆಲೆ ಬೆಳಕಿನ ವೇಗ $c$ಯನ್ನು ಸಮೀಪಿಸಿದಂತೆ ರಾಶಿ $m$ನ ಬೆಲೆ ಹೆಚ್ಚು ಹೆಚ್ಚು ಆಗಿ ಅದೇ ವೇಳೆ ಉದ್ದ $l$ನ ಬೆಲೆ ಕಡಿಮೆ ಕಡಿಮೆ ಆಗಿ $v$ಯು $c$ಯೇ ಆಗುವಾಗ $m$ ಅನಂತ ವಾಗುತ್ತದೆ. $l$ ಶೂನ್ಯವಾಗುತ್ತದೆ. ಹೀಗೆ ವಸ್ತುವಿನ ವೇಗ ಬೆಳಕಿನ ವೇಗವನ್ನು ತಲಪಿದ್ದಾದರೆ ಆಗ ಅದರ ರಾಶಿ ಅನಂತವೂ ದೀರ್ಘತೆ (ಗಾತ್ರ) ಶೂನ್ಯವೂ ಆಗುತ್ತವೆ. ಭೌತವಿಶ್ವದಲ್ಲಿ ಇಂಥ ವಿಪರ್ಯಾಸ ಅಸಾಧ್ಯ. ಆದ್ದರಿಂದ ಯಾವ ವಸ್ತುವೂ ಬೆಳಕಿನ ವೇಗ ಐದಲಾರದು.

ನಮ್ಮ ಇಂದ್ರಿಯಾನುಭವಗಳ ಪ್ರಕಾರ ಕಾಲವೆಂಬುದು ಸತತ ಏಕಮುಖ ಏಕವೇಗ ಪ್ರವಾಹ. ಇದಕ್ಕಿಂತ ಭಿನ್ನವಾದದ್ದು ಆಕಾಶ ಅಥವಾ ದೇಶ (space). ಆಕಾಶಕ್ಕೆ ಉದ್ದ, ಅಗಲ, ಎತ್ತರ (ಆಳ) ಎಂಬ ಮೂರು ಪ್ರತ್ಯೇಕ ಆಯಾಮಗಳಿವೆ (dimensions). ಈ ಆಯಾಮಗಳಲ್ಲಿ ನಾವು ಹಿಂದೆ ಮುಂದೆ, ಎಡಬಲ, ಮೇಲೆ ಕೆಳಗೆ ಬೇಕಾದಂತೆ ಬೇಕಾದ ವೇಗದಲ್ಲಿ ಚಲಿಸಬಲ್ಲೆವು. ಚಲಿಸದೆಯೂ ಇರಬಲ್ಲೆವು. ಕಾಲ ಹೀಗಲ್ಲ. ನಮ್ಮ ಇಂಥ ಯಾವ 'ಮರ್ಜಿ'ಗೂ ಅದು ಸಗ್ಗುವುದಿಲ್ಲ. ಎಂದೇ ಆಕಾಶ ಮತ್ತು ಕಾಲ ಎರಡು ಪ್ರತ್ಯೇಕ ಅನುಭವಗಳೆಂದು ಭಾವಿಸಿದ್ದೇವೆ. ತದನುಸಾರವಾಗಿ ನಮ್ಮ ವಿಜ್ಞಾನ ಮತ್ತು ತಂತ್ರವಿದ್ಯೆಯನ್ನು[೧೮] (science and technology) ಅಭಿವರ್ಧಿಸಿದ್ದೇವೆ. ಇವುಗಳಿಂದ ಸಮರ್ಪಕ ಫಲಿತಾಂಶ ಪಡೆದು ಬಾಳುತ್ತಿದ್ದೇವೆ. ಆದರೆ ವಿಶೇಷ ಸಾಪೇಕ್ಷತಾಸಿದ್ಧಾಂತ ಈ ನಿಲವನ್ನು ಒಪ್ಪುವುದಿಲ್ಲ. ನಮ್ಮ ಸೀಮಿತಾನುಭವದ ವಿಸ್ತರಣೆಯೇ ವಿಶ್ವ. ಅರ್ಥಾತ್, ವಿಶ್ವದಲ್ಲಿಯೂ ಆಕಾಶ ಮತ್ತು ಕಾಲ ಎಂಬವು ಎರಡು ಪ್ರತ್ಯೇಕ ಅನುಭವ ಗಳು ಎಂಬುದನ್ನು ತಿರಸ್ಕರಿಸಿ ಆಕಾಶ-ಕಾಲ ಅಥವಾ ದೇಶ-ಕಾಲ ಸಾತತ್ಯವನ್ನು (space-time continuum) ಪ್ರತಿಪಾದಿಸುತ್ತದೆ.

$E=mc^2$ದಂಥ ಅತ್ಯಂತ ಸುಂದರ, ಗಹನ ಮತ್ತು ಸತ್ತ್ವಪೂರ್ಣ ಸೂತ್ರವನ್ನು ಆವಿಷ್ಕರಿಸಿ ದಾತ ಈ ಏಕೈಕ ಮಹಾಸಿದ್ಧಿಯಿಂದ ಪ್ರಾಪ್ತವಾಗುವ ಕೀರ್ತಿಶ್ರೀಯೊಂದರ ಅಡಿಪಾಯದ ಮೇಲೆಯೇ ತನ್ನ ಭವಿಷ್ಯಜೀವನಸೌಧವನ್ನು ನಿರ್ಮಿಸುತ್ತ ಬೇರೆ ಏನನ್ನೂ ಮಾಡದೆ ವೃತ್ತಿಯಿಂದ ನಿವೃತ್ತನಾಗಬಹುದು ಎಂಬುದಾಗಿ ವಿಖ್ಯಾತ ಭೌತರಸಾಯನವಿಜ್ಞಾನಿ ಮತ್ತು ನೊಬೆಲ್ ಪ್ರಶಸ್ತಿ ಪುರಸ್ಕೃತ ವಾಲ್ಟರ್ ನರ್ನ್ಸ್ಟ್ (೧೮೬೪-೧೯೪೧) ಒಮ್ಮೆ ಹೇಳಿದ್ದರು. (ಶ್ಲಾಘನೆಯ ಈ ಮಾತು ಗಳನ್ನು ಐನ್‌ಸ್ಟೈನರಿಗೆ ವರದಿ ಮಾಡಿದಾಗ ಅವರು ನಕ್ಕು ನುಡಿದರು, "ಆ ಹಳೆ ಅಪರಾಧಿಗೆ ಇದು ಪ್ರಿಯವಾದೀತು ನಿಜ. ಆದರೆ ನಾನವರಿಗೆ ಈ ಸುಖ ಒದಗಿಸಲಾರೆ!") ಐನ್‌ಸ್ಟೈನರ ಊಹನೆಯ ಪ್ರಕಾರವೇ ವಿಶ್ವದಲ್ಲಿ ರಾಶಿ-ಶಕ್ತಿ ಅನ್ಯೋನ್ಯತೆ ಇದೆಯೆಂದು ಈ ಸಮೀಕರಣ ದೃಢಪಡಿಸಿತು. ವಾಸ್ತವತೆ ಯಾವ ಸುಳುಹನ್ನು ಕೊಡದೆಯೂ ಊಹನೆಗೆ ಮಣಿದ ಅಪೂರ್ವ ಪ್ರಸಂಗವಿದು. ಇದರಲ್ಲಿ ಐನ್‌ಸ್ಟೈನ್ ವ್ಯಕ್ತಿತ್ವದ ವಿಶೇಷ ಪರಿಮುದ್ರೆ ಟಂಕಿಸಲ್ಪಟ್ಟಿದೆ. ಇತರ ಯಾವುದೇ ಸಮಕಾಲೀನ ಪ್ರತಿಭೆಗೂ $E = mc^2$ ಪ್ರಾಯಶಃ ಗೋಚರವಾಗುತ್ತಿರಲಿಲ್ಲ.

ಈ ಸಮೀಕರಣದ ಅರ್ಥ...! ನಮ್ಮ ಕೈಗೆ ದೊರೆಯುವ ಯಾವುದೇ ವಸ್ತುವಿನ ತುಣುಕನ್ನು

೧ ಗ್ರಾಮ್‌ನಷ್ಟು ತೆಗೆದುಕೊಂಡು ಪೂರ್ಣ ನಿರ್ನಾಮಗೊಳಿಸುವುದು, ಅಂದರೆ ಅದರ ರಾಶಿಯನ್ನು ಸಂಪೂರ್ಣವಾಗಿ ಶಕ್ತಿರೂಪಕ್ಕೆ ಪರಿವರ್ತಿಸುವುದು. ಸಾಧ್ಯವಾದರೆ ಆ ಶಕ್ತಿಯ ಮೊತ್ತ ೩ ಕೋಟಿ ೩೦ ಲಕ್ಷ ಕುದುರೆಗಳು ಒಟ್ಟಿಗೆ ಒಂದು ಗಂಟೆ ಕಾಲ ಮಾಡುವ ಕಾರ್ಯಕ್ಕೆ ಸಮಾನವಾಗುತ್ತದೆ—ಅಷ್ಟೊಂದು ಅಗಾಧಶಕ್ತಿಯ ಉಗ್ರಾಣ ಯಾವುದೇ ಜಡವಸ್ತು. ಸೂರ್ಯ ಮತ್ತು ನಕ್ಷತ್ರಗಳಲ್ಲಿ ಅತಿಯಾದ ಸಂಮರ್ದ (pressure) ಮತ್ತು ಉಷ್ಣ (heat) ಇರುವುದರಿಂದ—ಭೂಮಿಯಲ್ಲಿ ಇವುಗಳ ಅನುಭವ ನಮಗೆಂದೂ ಆಗದು (ಸದ್ಯ ಬಚಾವ್ ! ಹೀಗಾಗಿ ಉಳಿದಿದ್ದೇವೆ !)—ಆ ಆಕಾಶ ಕುಲುಮೆಗಳಿಗೆ ಬಿದ್ದ ವಸ್ತು ನಿರ್ನಾಮವಾಗಿ ಶಕ್ತಿಯ ಉತ್ಪಾದನೆ ಆಗುತ್ತಿರುವುದು. ಪರಮಾಣು ಬಾಂಬಿನಲ್ಲಾದರೂ ನಡೆಯುವುದು ಇದಕ್ಕೆ ಸಮಾನವಾದ ಒಂದು ಕ್ರಿಯೆ—ಅಲ್ಪವಸ್ತುನಷ್ಟದಿಂದ ಅಪಾರ ಶಕ್ತಿಯ ಬಿಡುಗಡೆ. ಇಂದು (೨೦ನೆಯ ಶತಮಾನದ ಕೊನೆಯ ಪಾದ) ವ್ಯಾಪಕವಾಗಿ ಬಲು ದುಬಾರಿ ವೆಚ್ಚದಿಂದ ಚಾಲ್ತಿಗೆ ಬಂದಿರುವ 'ಶಾಂತಿಗಾಗಿ ಪರಮಾಣು' ಯೋಜನೆಯ ಹಿನ್ನೆಲೆ ತತ್ತ್ವ ಕೂಡ ಇದೇ—ವಸ್ತು 'ಹಿಂಡಿ' ಶಕ್ತಿ ಬಸಿತ.*

ಶಕ್ತಿಯ ರಾಶಿ ಎಷ್ಟು ಎಂಬುದನ್ನು ಗ್ರಹಿಸಲು ಒಂದು ಉದಾಹರಣೆ : ಉದ್ದ ಅಗಲ ಆಳ ತಲಾ ೧.೬ ಕಿಲೊಮೀಟರ್ (೧ ಮೈಲು) ಇರುವ ಮಹಾ ಸರೋವರ ನೀರಿನಿಂದ ಭರ್ತಿ ಆಗಿರಲಿ. ಅದರ ಉಷ್ಣತೆಯನ್ನು (temperature) ೧° ಸೆಲ್ಸಿಯಸಿನಷ್ಟು ಏರಿಸಲು ಅವಶ್ಯವಾಗುವ ಉಷ್ಣ ಶಕ್ತಿಯ ರಾಶಿ ಕೇವಲ ೧೯೦ ಗ್ರಾಮ್‌ಗಳು.

ಇಷ್ಟು ತಿಳಿಯುವಾಗ ನಿಮಗೊಂದು ಸಂದೇಹ ಮೂಡುತ್ತದೆ : ಯಾವುದೇ ವಸ್ತು ಅಷ್ಟೊಂದು ಅಗಾಧ ಶಕ್ತಿಯ ಘನೀಭವಿತ ರೂಪವಾಗಿದ್ದರೆ ಆ ರಹಸ್ಯವನ್ನು ಮಾನವ ೨೦ನೆಯ ಶತಮಾನದ ತನಕವೂ ಗಮನಿಸದಿದ್ದುದೇಕೆ ? ಅದರ ಲಾಭ ಪಡೆಯದಿದ್ದುದೇಕೆ ? ಖುದ್ದು ಐನ್‌ಸ್ಟೈನರೇ ಈ ಪ್ರಶ್ನೆ ಎತ್ತಿ ಇದಕ್ಕೆ ಉತ್ತರವಿತ್ತಿದ್ದಾರೆ : "ಉತ್ತರ ಬಲು ಸರಳವಾಗಿದೆ. ಎಲ್ಲಿಯ ತನಕ ಯಾವುದೇ ವಸ್ತುವಿನಿಂದ ಒಂದಿನಿತು ಶಕ್ತಿಯೂ ಹೊರಸೂಸುವುದಿಲ್ಲವೋ ಅಲ್ಲಿಯ ತನಕ ಅದನ್ನು ಗುರುತಿಸುವುದು ಅಸಾಧ್ಯ—ಆಗರ್ಭ ಶ್ರೀಮಂತನೊಬ್ಬ ಬಿಡಿಗಾಸನ್ನೂ ವೆಚ್ಚಿಸದಿದ್ದರೆ ಅಥವಾ ಕೊಡದಿದ್ದರೆ ಹೇಗೊ ಹಾಗೆ; ಆತನ ಶ್ರೀಮಂತಿಕೆ ಯಾವ ಮಟ್ಟದ್ದು ಎಂದು ಯಾರೂ ಅಂದಾಜು ಮಾಡಲಾರರು."

ವಿಕಿರಣಪಟುತ್ವದ (radioactivity) ಆವಿಷ್ಕಾರವಾದದ್ದು (೧೮೯೬) ಒಂದು ಆಕಸ್ಮಿಕ. 'ಆಗರ್ಭ ಶ್ರೀಮಂತ'ನಾದ ನಿಸರ್ಗ ವಿಕಿರಣಪಟುತ್ವದ ಮೂಲಕ 'ಪುಡಿಗಾಸುಗಳನ್ನು ಎಸೆಯು'ತ್ತಿದ್ದುದನ್ನು ಮಾನವ ಗುರುತಿಸಿದಾಗ ಪರಮಾಣುಹೂರಣದ ಪ್ರಥಮ ಸಂದೇಶ ಆತನಿಗೆ ದೊರೆಯಿತು. ನಿಜಕ್ಕೂ ನಿಸರ್ಗ ಜಿಪುಣಾಗ್ರೇಸರ ಕುಬೇರ. ನಿಸರ್ಗದ ಪ್ರತಿಯೊಂದು ಕಣದಲ್ಲಿಯೂ ಅಗಾಧಶಕ್ತಿ ಹುದುಗಿದೆ ದಿಟ. ಆದರೆ ಈ ಶಕ್ತಿ ನಮಗೆ ಸುಲಭಲಭ್ಯವಾಗಿಲ್ಲ. ವಿಜ್ಞಾನ ಮತ್ತು ತಂತ್ರವಿದ್ಯೆ ಹಿರಿಮಟ್ಟಕ್ಕೆ ಅಭಿವರ್ಧಿಸಿರುವ ಇಂದಿನ ದಿನಗಳಲ್ಲಿಯೂ ಕೇವಲ ಕೆಲವೇ ಅಪೂರ್ವ ವಸ್ತುಗಳನ್ನು ಉಪಯೋಗಿಸಿ ಪರಮಾಣುಗರ್ಭದಿಂದ ಶಕ್ತಿ ಹಿಂಡುವ ಭಗೀರಥ ಸಾಹಸ ಕೈಗೂಡಿದೆ.

---

*ವಿದಲನ (fission) ಮತ್ತು ಸಂಲಯನ (fusion) ಎಂಬ ಎರಡು ಬಗೆಗಳಲ್ಲಿ ಪರಮಾಣು (ಬೈಜಿಕ nuclear) ಶಕ್ತಿಯನ್ನು ಪಡೆಯಬಹುದು. 'ಶಾಂತಿಗಾಗಿ/ಯುದ್ಧಕ್ಕಾಗಿ ಪರಮಾಣು' ಸದ್ಯ ಮೊದಲನೆಯ ಬಗೆಗೆ ಸೇರಿದೆ. ನಾಕ್ಷತ್ರಿಕ ಶಕ್ತಿ ರಹಸ್ಯ ಎರಡನೆಯ ಬಗೆಯದು.

ಜಡವೆಂಬುದೇನು ? ಸೃಷ್ಟಿಯಲಿ ಚೇತನ ಸುಪ್ತಿ
ಅಡಗಿ ನಿದ್ರಿಪುದಲ್ಲಿ ಚೈತನ್ಯದಗ್ನಿ
ಮಿಡಿಯೆ ಪರಸತ್ತ್ವ ವಿದ್ಯುದ್ದೀಪ್ತಿಯದನಾಗ
ನಡೆವುದದು ಜೀವಿವೊಲು ಮಂಕುತಿಮ್ಮ

## ಡಾಕ್ಟೊರೇಟ್ ಪದವಿ

ಪರಿಕಲ್ಪನೆಗಳ ಪರಸ್ಪರ ಸಂಬಂಧಗಳ ಹೊರತಾಗಿ ಬೇರಾವುದನ್ನೂ ಗಣಿತ ಪರಿಗಣಿಸದು. ಅನುಭವ ದೊಡನೆ ಅವುಗಳ ಸಂಬಂಧವೇನೆಂಬುದು ಗಣಿತದ ಗೊಡವೆ ಅಲ್ಲ. ಭೌತವಿಜ್ಞಾನವಾದರೂ ಗಣಿತ ಪರಿಕಲ್ಪನೆಗಳೊಡನೆಯೇ ವ್ಯವಹರಿಸುತ್ತದೆ. ಆದರೆ ಇವುಗಳಿಗೆ ಅನುಭವದ ಸಂಗತಿಗಳೊಡನೆ ಇರುವ ಸಂಬಂಧದ ಸ್ಪಷ್ಟ ನಿರ್ಧರಣೆಯಿಂದ ಮಾತ್ರ ಇವು ಭೌತ ಅರ್ಥ ಪಡೆಯುತ್ತವೆ.

ಐನ್‌ಸ್ಟೈನ್

ಉಪಾಧ್ಯಾಯವೃತ್ತಿ ಐನ್‌ಸ್ಟೈನರ ಮೊದಲ ಒಲವು. ಇದು ದೊರೆಯಲಿಲ್ಲ. ಹೀಗಾಗಿ ಇವರು ದೊರೆತ ಏಕಸ್ವತಪಾಸಣೆಕಾರನ ಹುದ್ದೆ ಒಪ್ಪಿಕೊಂಡರು. ಇದನ್ನು ಸೇರುವ ಮೊದಲು ಇವ ರೊಂದು ಸಂಶೋಧನ ಪ್ರಬಂಧ ಬರೆದಿದ್ದರೆಂದೂ (೧೯೦೦) ಅದನ್ನು *Annalen der Physik* ಪ್ರಕಟಿಸಿತ್ತೆಂದೂ ಹಿಂದೆ ಹೇಳಿದ್ದು ಸರಿಯಷ್ಟೆ. ಈ ಪ್ರಬಂಧವನ್ನು ಇವರು ಝೂರಿಕ್ ವಿಶ್ವವಿದ್ಯಾಲಯಕ್ಕೆ ತಮ್ಮ ಡಾಕ್ಟೊರೇಟ್ (PhD) ನಿಬಂಧವಾಗಿ ಸಲ್ಲಿಸಿದರು. ಆದರೆ ವಿಶ್ವವಿದ್ಯಾ ಲಯದ ಭೌತವಿಜ್ಞಾನ ಪ್ರಾಧ್ಯಾಪಕ ಪ್ರೊಫೆಸರ್ ಆಲ್ಫ್ರೆಡ್ ಕ್ಲೈನರ್ (೧೮೪೯-೧೯೧೬) ಇದನ್ನು ಸ್ವೀಕರಿಸಲಿಲ್ಲ; ಐನ್‌ಸ್ಟೈನರಿಗೆ ಡಾಕ್ಟೊರೇಟ್ ಪದವಿ ಮಂಜೂರಾಗಲಿಲ್ಲ. ಮಹತ್ತನ್ನು ಅಧಿಕ ಮಹತ್ತು ಮಾತ್ರ ಗುರುತಿಸಬಲ್ಲದು ಅಲ್ಲವೇ ?

೧೯೦೫ರಲ್ಲಿ ಅರಳಿದ ಹಲವಾರು ಸಂಶೋಧನ ಪ್ರಬಂಧಗಳ ಪೈಕಿ ಒಂದನ್ನು ಐನ್‌ಸ್ಟೈನ್ ಪುನಃ ಅದೇ ವಿಶ್ವವಿದ್ಯಾಲಯಕ್ಕೆ ಹೊಸ ಡಾಕ್ಟೊರೇಟ್ ನಿಬಂಧವಾಗಿ ಒಪ್ಪಿಸಿದರು. ಈ ಸಲವೂ ಪ್ರೊಫೆಸರ್ ಕ್ಲೈನರ್ ಅಡ್ಡಗಾಲಿಟ್ಟರು. ಪ್ರಬಂಧ ತೀರ ಸಂಕ್ಷೇಪವಾಗಿದ್ದುದೇ ಕಾರಣ. ಐನ್ ಸ್ಟೈನ್ ಸೋಲೊಪ್ಪಲಿಲ್ಲ. ಆ ಪ್ರಬಂಧಕ್ಕೆ ಕೇವಲ ಒಂದೇ ಒಂದು ಹೆಚ್ಚಿನ ವಾಕ್ಯ ಸೇರಿಸಿ ಅದನ್ನು 'ವಿಸ್ತಾರ'ಗೊಳಿಸಿ ವಿಶ್ವವಿದ್ಯಾಲಯಕ್ಕೆ ಮರುಸಲ್ಲಿಸಿದರು. ವಿಶ್ವವಿದ್ಯಾಲಯ (ಅಂದರೆ ಪ್ರೊಫೆಸರ್ ಕ್ಲೈನರ್) 'ಹೊಸ' ಪ್ರಬಂಧವನ್ನು ಒಡನೆ ಸ್ವೀಕರಿಸಿ ಅಭ್ಯರ್ಥಿಗೆ ಡಾಕ್ಟೊರೇಟನ್ನು 'ಅನುಗ್ರಹಿಸಿತು' (೧೯೦೫). ಎಷ್ಟಾದರೂ ವಿಶ್ವವಿದ್ಯಾಲಯದ ಮರ್ಯಾದೆ ಪ್ರಶ್ನೆ ಅಲ್ಲವೇ !

ಅದೇ ವಿಶ್ವವಿದ್ಯಾಲಯದಲ್ಲಿ ತಾನೊಬ್ಬ ಅಧ್ಯಾಪಕನಾಗಬೇಕೆಂಬುದು ಇವರ ಹೆಬ್ಬಯಕೆ. ಆದರೆ ಇಪ್ಪತ್ತಾರರ ತರುಣ, ಶಿಕ್ಷಣಕ್ಷೇತ್ರದಲ್ಲಿ ಪೂರ್ವಾನುಭವವಿಲ್ಲದವ, ನೇರವಾಗಿ ಪ್ರಾಧ್ಯಾ ಪಕ ಗದ್ದುಗೆ ಏರುವಂತಿರಲಿಲ್ಲ. ತತ್ಪೂರ್ವ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಭ್ಯಾಸಿ ಶಿಕ್ಷಕನಾಗಿ (privatdozent) ಮುಫತ್ತು ಸೇವೆ ಸಲ್ಲಿಸಿ ಅರ್ಹತೆ ಗಳಿಸಬೇಕಾಗಿತ್ತು. ಇಂಥವನ ಉಪನ್ಯಾಸತರಗತಿಗಳಿಗೆ ಆಸಕ್ತ ವಿದ್ಯಾರ್ಥಿಗಳು ಹಾಜರಾಗಬಹುದು. ಹೀಗೆ ಬಂದವರು ಪಾವತಿ ಸುವ ಶುಲ್ಕವೊಂದೇ ಇವನ ವರಮಾನ. ಸಹಜವಾಗಿ ಇದು ಅತ್ಯಲ್ಪವಾಗಿರುತ್ತಿತ್ತು. ಆದ್ದರಿಂದ ಇತರ ಮೂಲಗಳಿಂದ ಆದಾಯವಿದ್ದ ತರುಣರು ಮಾತ್ರ ಅಭ್ಯಾಸಿ ಶಿಕ್ಷಕರಾಗುತ್ತಿದ್ದರು.

ಬರ್ನ್ ನಗರದ ಏಕಸ್ವ ಕಛೇರಿಯಲ್ಲಿ ಗುಮಾಸ್ತರಾಗಿದ್ದ ಐನ್‌ಸ್ಟೈನರಿಗೆ ಹೊಟ್ಟೆ ಪಾಡಿನ ಚಿಂತೆ ಇರಲಿಲ್ಲ. ಎಂದೇ ಇವರು ಸ್ಥಳೀಯ ಬರ್ನ್ ವಿಶ್ವವಿದ್ಯಾಲಯಕ್ಕೆ ಅಭ್ಯಾಸಿ ಶಿಕ್ಷಕ ಹುದ್ದೆಗೆ

ಅರ್ಜಿ ಸಲ್ಲಿಸುವುದು ಕೈಗೂಡಿತು. ತಮ್ಮ ಅರ್ಹತೆಯನ್ನು ಸಾಬೀತುಗೊಳಿಸಲು ತಾವು ವಿಶೇಷ ಸಾಪೇಕ್ಷತಾಸಿದ್ಧಾಂತಕ್ಕೆ ಪೀಠಿಕೆಯಾಗಿ ಬರೆದಿದ್ದ ಪ್ರಬಂಧದ ನಕಲನ್ನು ಅರ್ಜಿಗೆ ಲಗತ್ತಿಸಿದ್ದರು. ಅರ್ಜಿ ಸ್ವೀಕೃತವಾಗಲಿಲ್ಲ. ಕಾರಣ ? ಲಗತ್ತು ಪ್ರಬಂಧ ಅರ್ಥಾತೀತವಾಗಿತ್ತು ! ಈ ಕಹಿ ಅನುಭವ ಇವರಿಗೆ ವಿಶ್ವವಿದ್ಯಾಲಯ ಹುದ್ದೆಯ ಬಗೆಗೇ ಜುಗುಪ್ಸೆ ಹುಟ್ಟಿಸಿತು. ಯಾವುದಾದರೂ ಪಾಲಿಟೆಕ್ನಿಕ್ ಇಲ್ಲವೇ ಪ್ರೌಢಶಾಲೆಯನ್ನು ಉಪಾಧ್ಯಾಯನಾಗಿ ಸೇರೋಣವೆಂದು ಬಗೆದು ಹಲವೆಡೆಗಳಿಗೆ ಅರ್ಜಿ ಗುಜರಾಯಿಸಿದರು. ಸಹಪಾಠಿ ಮಾರ್ಸೆಲ್ ಗ್ರಾಸ್‌ಮ್ಯಾನರಿಗೆ—ಇವರು ಈ ವೇಳೆಗೆ ಝ್ಯೂರಿಕ್ಕಿನ ಪಾಲಿಟೆಕ್ನಿಕ್ಕಿನಲ್ಲಿ ಗಣಿತ ಪ್ರಾಧ್ಯಾಪಕರಾಗಿದ್ದರು—ಬರೆದ ಕಾಗದದಲ್ಲಿ (೩ ಜನವರಿ ೧೯೦೮) ಇಂಥ ಹುದ್ದೆ 'ಗಿಟ್ಟಿಸಲು' ತಾನು ಯಾರನ್ನು ಕಂಡು ಮಾತಾಡಬೇಕು ಎಂಬ 'ವ್ಯಾವಹಾರಿಕ' ಸಲಹೆ ಯಾಚಿಸಿದ್ದರು. ಉಪಾಧ್ಯಾಯನಾಗಬೇಕೆಂದು ತಾನು ಬಯಸುವುದು ಅಧಿಕಾರಾಪೇಕ್ಷೆಯಿಂದಲ್ಲ, ಸ್ವಪ್ರತಿಷ್ಠೆ ಮೆರೆಸಬೇಕೆಂದೂ ಅಲ್ಲ, ಬದಲು ಆ ವೃತ್ತಿಯಲ್ಲಿ "ನನ್ನ ಖಾಸಗಿ ವೈಜ್ಞಾನಿಕ ಕಾರ್ಯವನ್ನು ಕಡಿಮೆ ಪ್ರತಿಕೂಲ ಸನ್ನಿವೇಶಗಳಲ್ಲಿ ಮುಂದುವರಿಸುವುದು ಸಾಧ್ಯವಾದೀತೆಂಬ ನಂಬಿಕೆಯಿಂದ" ಎಂಬುದಾಗಿ ವಿವರಣೆ ನೀಡಿದರು.

## ಪ್ರತಿಭಾವಿಕಾಸ

"ಪ್ರಪಂಚದ ಮೂರು ಮಹಾಮೇಧಾವಿಗಳನ್ನು ಹೆಸರಿಸಬಲ್ಲಿರಾ ?"
"ಆರ್ಕಿಮಿಡೀಸ್, ನ್ಯೂಟನ್ ಮತ್ತು ಗೌಸ್."
"ನಾಲ್ಕನೆಯ ಮೇಧಾವಿಯೊಬ್ಬನನ್ನು ಈ ಸಾಲಿಗೆ ಸೇರಿಸಬಲ್ಲಿರಾ ?"
"ಖಂಡಿತ—ಐನ್‌ಸ್ಟೈನ್."

ಅನಾಮಿಕ

ಮಾನವನ ಊಹನಾಪ್ರತಿಭೆ ಈ ತನಕ ಮೂರು ಸಲ ಮಾತ್ರ ಪರಮೋತ್ತುಂಗ ಗಿರಿಶಿಖರವೈದಿದೆ ಎಂದು ವಿಜ್ಞಾನೇತಿಹಾಸಕಾರರು ಹೇಳುತ್ತಾರೆ.

'ಇತಿಹಾಸದೃಷ್ಟಿಗಸ್ಪಷ್ಟ ಪ್ರಾಚೀನದಲಿ' ಅಜ್ಞಾತ ಭಾರತೀಯ ಸೊನ್ನೆಯನ್ನು ಸೃಷ್ಟಿಸಿದಾಗ[೧೯] ಒಮ್ಮೆ ಊಹನಾಪ್ರತಿಭೆ ಶೃಂಗಕ್ಕೆ ಜಿಗಿಯಿತು. ಸೊನ್ನೆಯ ದೆಸೆಯಿಂದಾಗಿ ಎಷ್ಟು ದೊಡ್ಡ ಸಂಖ್ಯೆಯನ್ನಾದರೂ ಅತಿಸರಳವಾಗಿ ಮತ್ತು ವೈಜ್ಞಾನಿಕವಾಗಿ ನಿರೂಪಿಸುವುದು ಸಾಧ್ಯವಾಗಿದೆ. ಸಂಖ್ಯೆಗಳ ಗಟ್ಟಿ ನೆಲದ ಮೇಲೆ ನಾಗರಿಕತೆ ವಿಕಸಿಸಿದೆ, ವಿಜ್ಞಾನಸೌಧ ಭದ್ರವಾಗಿ ನಿಂತಿದೆ. ತಂತ್ರವಿದ್ಯೆ ವಿಶ್ವವ್ಯಾಪಿಯಾಗಿದೆ. ಸಂಖ್ಯಾಪ್ರಪಂಚದ ಸೌಂದರ್ಯಾಸ್ವಾದನೆ ಮಾಡಿದವರು "ದೇವರು ಮೂಲತಃ ಸಂಖ್ಯಾವಿದ" ಎಂದು ಉದ್ಗರಿಸುವುದುಂಟು.

ಕ್ರಿಸ್ತಶಕ ೧೬೬೬ರಲ್ಲಿ ಐಸಾಕ್ ನ್ಯೂಟನ್ ವಿಶ್ವ ಗುರುತ್ವಾಕರ್ಷಣ ನಿಯಮವನ್ನು ಆವಿಷ್ಕರಿಸಿದಾಗ[೨೦] ಊಹನಾಪ್ರತಿಭೆ ಎರಡನೆಯ ಸಲ ಶೃಂಗಕ್ಕೆ ಜಿಗಿಯಿತು. ಸೂರ್ಯನ ಸುತ್ತ ಗ್ರಹಗಳು ಶಿಸ್ತಿನಿಂದ ಪರಿಭ್ರಮಿಸುವುದರ ರಹಸ್ಯವನ್ನು ಈ ನಿಯಮವು ಗಣಿತಸೂತ್ರಗಳಲ್ಲಿ ವಿವರಿಸಿತು. ವಿಶ್ವಕ್ಕೆ ನಿರ್ದಿಷ್ಟ ಮತ್ತು ಖಚಿತ ಭೌತ ಚೌಕಟ್ಟನ್ನು ಒದಗಿಸಿತು. ನ್ಯೂಟನ್ ಕಟ್ಟಿದ ಸುಂದರ ಮತ್ತು ಸುಭದ್ರ ಮಂದಿರದೊಳಗೆ ವಿಜ್ಞಾನ ಮತ್ತು ತಂತ್ರವಿದ್ಯೆ ಬೆಳೆದು ಅಭಿವರ್ಧಿಸಿ ಇಂದಿನ ಪ್ರಗತಿಯನ್ನು ಸಾಧಿಸಿವೆ.

ಊಹನಾಪ್ರತಿಭೆ ಮೂರನೆಯ ಸಲ ಶೃಂಗಕ್ಕೆ ಜಿಗಿದದ್ದು ಐನ್‌ಸ್ಟೈನರ ಸಿದ್ಧಿಗಳ ಮೂಲಕ. ಇವರು ೧೯೦೫ರಲ್ಲಿ ಪ್ರಕಟಿಸಿದ ವಿಶೇಷ ಸಾಪೇಕ್ಷತಾ ಸಿದ್ಧಾಂತ ಮತ್ತು ೧೯೧೫ರಲ್ಲಿ ಪ್ರಕಟಿಸಿದ

ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ ಈ ಸಾಹಸಗಳು.

ಐನ್‌ಸ್ಟೈನರ ಸಿದ್ಧಾಂತ ಸಮಕಾಲೀನ ವಿಜ್ಞಾನಿಗಳನ್ನು ದಿಙ್ಮೂಢರನ್ನಾಗಿಸಿತು—ಹಿಮಾಶ್ಮ ಪ್ರವಾಹ ಬಯಲಸೀಮೆಯವರ ಮೇಲೆ ಹಠಾತ್ತನೆ ಆಕ್ರಮಣ ನಡೆಸಿದರೆ ಆಗುವಂತೆ. ಪ್ರೊಫೆಸರ್ ಕ್ಲೈನರ್ ವಿಶೇಷ ಸಾಪೇಕ್ಷತಾಸಿದ್ಧಾಂತವನ್ನು ಓದಿದರು. ಅರ್ಥವಾಯಿತೊ ಇಲ್ಲವೊ ಆದರೂ ಆ ಪ್ರಬಂಧಗಳಲ್ಲಿ ಅಡಕವಾಗಿದ್ದ ಗಭೀರ ಚಿಂತನೆಯಿಂದ ಪ್ರಭಾವಿತರಾದರು. ಅವುಗಳ ತಳದಲ್ಲಿ ಮಹಾಪ್ರತಿಭೆ ಹುದುಗಿದೆ ಎಂದು ಮನವರಿಕೆ ಆಯಿತು. ಇಂಥ ಮಹಾಪುರುಷನನ್ನು ತಮ್ಮ ವಿಶ್ವವಿದ್ಯಾಲಯಕ್ಕೆ (ಝೂರಿಕ್) ಆಹ್ವಾನಿಸಬೇಕೆಂದು ಆಶಿಸಿದರು. ಆದರೆ ಪ್ರಚಲಿತ ಕಾನೂನು ಸ್ಪಷ್ಟವಾಗಿತ್ತು. ಕಠಿಣವಾಗಿಯೂ ಇತ್ತು—ಅಭ್ಯಾಸಿಶಿಕ್ಷಕನಾಗಿ ಅಭ್ಯರ್ಥಿ ತನ್ನ ಅರ್ಹತೆಯನ್ನು ಸ್ಥಾಪಿಸಿದ ತರುವಾಯವೇ ಪ್ರಾಧ್ಯಾಪಕ ಅಂತಸ್ತಿಗೆ ಬಡ್ತಿ ಪಡೆಯಬಹುದಿತ್ತು.

ಕ್ಲೈನರ್ ಬರ್ನಿಗೆ ಹೋದರು. ಐನ್‌ಸ್ಟೈನರನ್ನು ಕಂಡರು. ವಿವರ ತಿಳಿದರು. ಇನ್ನೊಮ್ಮೆ ಬರ್ನ್ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸುವಂತೆ ಇವರ ಮನವೊಲಿಸಿದರು. ಹಿಂದಿನ ಸಲದ ಅರ್ಜಿ ಎಷ್ಟು ಸುಲಭವಾಗಿ ತಿರಸ್ಕೃತವಾಗಿತ್ತೋ ಈ ಸಲದ ಅರ್ಜಿ ಅಷ್ಟೇ ಸುಲಭವಾಗಿ ಪುರಸ್ಕೃತವಾಯಿತು. ಹೀಗೆ ಐನ್‌ಸ್ಟೈನರಿಗೆ ಮುಂದೆ ಝೂರಿಕ್ ವಿಶ್ವವಿದ್ಯಾಲಯವನ್ನು ಪ್ರಾಧ್ಯಾಪಕರಾಗಿ ಪ್ರವೇಶಿಸಲು ರಾಜಮಾರ್ಗ ಸಿದ್ಧವಾಯಿತು. ಯಶಸ್ಸೇ ಯಶಸ್ಸಿನ ಮೂಲ !

ಏಕಸ್ವ ಕಛೇರಿಯಲ್ಲಿ ಐನ್‌ಸ್ಟೈನ್ ಪ್ರತಿ ದಿವಸ ಎಂಟು ತಾಸುಗಳ ಕಡ್ಡಾಯ ಬೈಠಕ್ಕು ಕೊಟ್ಟು ಉಳಿದ ವೇಳೆಯಲ್ಲಿ ಅಭ್ಯಾಸಿಶಿಕ್ಷಕರಾಗಿ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡಬೇಕಾಗಿತ್ತು. ಹೊಸ ಹೊಸ ಭಾವನೆಗಳೂ ಸಾಧ್ಯತೆಗಳೂ ಇವರನ್ನು ಸತತವಾಗಿ ತಾಡಿಸಿ ರಿಂಗಣಿಸುತ್ತಿದ್ದ ದಿನಗಳವು. ಅವುಗಳ ಬೆಂಬತ್ತಿ ಸಂಶೋಧನೆಯ ಹೊಸ ಜಾಡು ಕಡಿಯುತ್ತ ಮುನ್ನಡೆಯುವುದು ಅನಿವಾರ್ಯವಾಗಿತ್ತು. ಪರಿಸ್ಥಿತಿ ಇವರ ಮೇಲೆ ಇಂಥ ಕಡ್ಡಾಯ ನಿರ್ಬಂಧ ಹೇರಿತ್ತು. ಹೀಗಾಗಿ ತರಗತಿಯ ಪ್ರವಚನಕ್ಕೆ ಅತ್ಯವಶ್ಯವಾದ ಟಿಪ್ಪಣಿ ತಯಾರಿಕೆ ಇವರಿಗೆ ಸಾಧ್ಯವಾಗುತ್ತಿರಲಿಲ್ಲ. ಕ್ರಮಬದ್ಧ ಉಪನ್ಯಾಸ ಪ್ರದಾನವಂತೂ ಈ ಅಂಕುಶಹೀನಮತಿಗೆ ಎಂದೂ ಕೈಗೂಡದು. ಇವರ ಉಡುಪು ? ವಿಶ್ವವಿದ್ಯಾಲಯದ ಅಧ್ಯಾಪಕನಿಗೆ ಖಂಡಿತ ಸಲ್ಲದ ಅನೌಪಚಾರಿಕ ಗವಸು ! ದೊಗಲೆ ಸುರಾಲು, ಸಡಿಲ ಜುಬ್ಬ, ಕಾಲುಚೀಲ ಎಳೆದುಕೊಳ್ಳದೆ ಪಾದರಕ್ಷೆ ತೊಟ್ಟರೂ ತೊಟ್ಟರೇ. ಕಂಠ ಕೌಪೀನವಿದ್ದರೂ ಇತ್ತು—ಆಗಲೂ ಅಳ್ಳಕ. ಇಂಥ ಒಬ್ಬ ಅನ್ಯಮನಸ್ಕ ತರುಣ ಈ ಭವ್ಯ ಪರಿಸರದಲ್ಲಿ ಸುತರಾಂ ಹೊಂದುತ್ತಿರಲಿಲ್ಲ. ಉಡುಪು, ನಡವಳಿಕೆ ಮೊದಲಾದ ಹೊರಡೌಲುಗಳನ್ನು ಕುರಿತಂತೆ ಐನ್‌ಸ್ಟೈನ್ ಎಂದೂ ಸುಧಾರಿಸಲೇ ಇಲ್ಲ : "ನನ್ನ ದೃಷ್ಟಿಯಲ್ಲಿ ಸೊತ್ತುಗಳು, ಬಾಹ್ಯ ಯಶಸ್ಸು, ಪ್ರಚಾರ, ಭೋಗ ಇವು ಸದಾ ತಿರಸ್ಕಾರಾರ್ಹವಾದವು. ಸರಳವೂ ಆಡಂಬರರಹಿತವೂ ಆದ ಜೀವನವಿಧಾನ ಪ್ರತಿಯೊಬ್ಬನಿಗೂ ಅತ್ಯುತ್ಕೃಷ್ಟವಾದದ್ದೆಂದು ನಂಬಿದ್ದೇನೆ—ದೇಹ ಮನಸ್ಸು ಎರಡಕ್ಕೂ."

ಆ ದಿನಗಳಂದು ಅನೇಕ ಬಡ ಯೆಹೂದ್ಯ ವಿದ್ಯಾರ್ಥಿಗಳು ರಷ್ಯ ದೇಶದಿಂದ ಬರ್ನ್ ವಿಶ್ವವಿದ್ಯಾಲಯಕ್ಕೆ ಓದಲು ಬರುತ್ತಿದ್ದರು. ಅಲ್ಲಿಯ ಸೇವಕರ ದೃಷ್ಟಿಯಲ್ಲಿ ಐನ್‌ಸ್ಟೈನ್ ಕೂಡ ಈ ಬಡವರ ಸಾಲಿಗೆ ಸೇರಿದ ಒಬ್ಬ 'ರಸ್ಸ್' ಎಂದಿತ್ತು. ಅದೇ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿನಿಯಾಗಿ ಬಂದು ಸೇರಿದ್ದ ಮಾಜಾ (ಐನ್‌ಸ್ಟೈನರ ತಂಗಿ) ತನ್ನ ಸುಪ್ರಸಿದ್ಧ ಅಣ್ಣನನ್ನು ಅವರ ತರಗತಿಗೇ ಹೋಗಿ ನೋಡಬಯಸಿದರು. ಮಾಜಾ ದ್ವಾರಪಾಲಕನನ್ನು ಪ್ರಶ್ನಿಸಿದರು, "ನನ್ನ ಅಣ್ಣ ಡಾಕ್ಟರ್ ಐನ್‌ಸ್ಟೈನ್ ಪಾಠ ಹೇಳುತ್ತಿರುವ ಕೊಠಡಿ ಯಾವುದು?"

ದ್ವಾರಪಾಲಕನಿಗೆ ಪರಮಾಶ್ಚರ್ಯ. ಸುಟಿಯಾಗಿ ಉಡುಗೆ ತೊಟ್ಟು ನಿಂತಿದ್ದ ಈ ತರುಣಿಯನ್ನು ನೋಡಿ ಉದ್ಗರಿಸುತ್ತಾನೆ : "ಏನು ? ಏನು ? ಆ ರಸ್ಸ್ ನಿಮ್ಮ ಅಣ್ಣ !" ('ಕುಲೀನ'ರು ರಶ್ಯನರನ್ನು ಕುಚೇಷ್ಟಿಸುತ್ತಿದ್ದ ಧಾಟಿ.)

ಇಂಥ ಐನ್‌ಸ್ಟೈನರ ತರಗತಿಗಳನ್ನು ವಿದ್ಯಾರ್ಥಿಗಳು ಒಲಿಯದಿದ್ದುದು ಆಶ್ಚರ್ಯವಲ್ಲ. ಬರುತ್ತಿದ್ದ ಕೆಲವರಾದರೂ ಇವರ ಮಿತ್ರರು ಮಾತ್ರ. ವೈಯಕ್ತಿಕ ಸ್ನೇಹ ದಾಕ್ಷಿಣ್ಯಗಳದೇ ಹೆಚ್ಚಿನ ಒತ್ತಾಯ.

ತಮ್ಮ 'ಹೆಗ್ಗೆ'(ನಿಧಿ) ಹೇಗೆ ಹಿಗ್ಗುತ್ತಿದೆ ಎಂಬುದನ್ನು ತಿಳಿದು ಹಿಗ್ಗಲು ಒಂದು ದಿನ ಖುದ್ದು ಕ್ಲೈನರರೇ ಐನ್‌ಸ್ಟೈನರ ತರಗತಿಗೆ 'ಬಿಜಯಂಗೈದರು.' ಅವರಿಗೆ ಆದದ್ದು ತೀವ್ರ ಹತಾಶೆ, ಬಡಿದದ್ದು ಪ್ರಬಲ ಆಘಾತ. ಈ ತೆರನಾದ ಅರೆಬಾಯಿ ತೆರೆದ ಗುಣುಗುಣುಕೆಗಳು ವಿದ್ಯಾರ್ಥಿಗಳಿಗೆ ಗ್ರಾಹ್ಯವಾಗವು. ಐನ್‌ಸ್ಟೈನ್ ಇನ್ನಷ್ಟು ಕ್ರಮಬದ್ಧ ಸಿದ್ಧತೆಯೊಡನೆ ತರಗತಿಗೆ ಹೋಗಬೇಕು, ಸಂವಹನತೆಯ ಸೌಲಭ್ಯ ಗಳಿಸಿಕೊಳ್ಳಬೇಕು ಎಂಬ ಆತ್ಮೀಯ ಹಿತವಚನ ನುಡಿದರು.

"ನಾನು ಝೂರಿಕ್ಕಿನಲ್ಲಿ ಪ್ರಾಧ್ಯಾಪಕನಾಗಿ ನೇಮನ ಪಡೆಯಬೇಕೆಂದು ಅಪೇಕ್ಷಿಸುವುದಿಲ್ಲ." ಎಂದರು ಐನ್‌ಸ್ಟೈನ್—ಕೋಪಾವಿಷ್ಟರಾಗಿ ಅಲ್ಲ, ತಾನು ಯಾವುದೇ ವಿಧವಾದ ಕಟ್ಟುಪಾಡಿಗೆ ಒಳಪಡುವುದು ಸಾಧ್ಯವಾಗದು ಎಂಬುದರ ಅರಿವಿನಿಂದ.

ಈ ವೇಳೆಗೆ ಝೂರಿಕ್ ವಿಶ್ವವಿದ್ಯಾಲಯ ಸೈದ್ಧಾಂತಿಕ ಭೌತವಿಜ್ಞಾನದ ಸಹಾಯಕ ಪ್ರಾಧ್ಯಾಪಕ ಹುದ್ದೆಯನ್ನು ಸೃಷ್ಟಿಸಿತು (೧೯೦೯). ಆಡಳಿತೆಯ ಹಿರಿಯರ ಆಸೆ ಇದ್ದದ್ದು ಫ್ರೀಡರಿಶ್ ಆ್ಯಡ್ಲರರನ್ನು (ಇವರು ಪಾಲಿಟೆಕ್ನಿಕ್ಕಿನಲ್ಲಿ ಐನ್‌ಸ್ಟೈನರ ಸಹಪಾಠಿ ಆಗಿದ್ದರು) ಈ ಹುದ್ದೆಗೆ ಆಯಬೇಕೆಂದು. ಬೌದ್ಧಿಕವಾಗಿ ಆ್ಯಡ್ಲರ್ ಉತ್ತಮ ಪದವಿ ಗಳಿಸಿ ಅರ್ಹತೆ ಸಂಪಾದಿಸಿದ್ದರು. ರಾಜಕೀಯವಾಗಿ ಇವರಿಗೆ ಪ್ರಬಲ ಬೆಂಬಲವಿತ್ತು. ಸಚ್ಚಾರಿತ್ರ್ಯ ಮತ್ತು ಉನ್ನತ ಆದರ್ಶಗಳಿಗೆ ಪರ್ಯಾಯನಾಮದಂತಿದ್ದ ತರುಣ ಆ್ಯಡ್ಲರ್ ಬೇರೆ ತೆರನಾಗಿಯೇ ಯೋಚಿಸಿದರು. ಇವರ ಲಕ್ಷ್ಯವಿದ್ದದ್ದು ಐನ್‌ಸ್ಟೈನರತ್ತ. ಬುದ್ಧಿಮತ್ತೆ, ವಿಜ್ಞಾನಸಿದ್ಧಿ, ಸಂಶೋಧನಸಾಮರ್ಥ್ಯ ಒಂದೊಂದರಲ್ಲಿಯೂ ತನಗಿಂತ ಎಷ್ಟೆಷ್ಟೋ ಉಚ್ಚಮಟ್ಟದಲ್ಲಿದ್ದ ಅವರನ್ನೇ ಈ ಹುದ್ದೆಗೆ ಆಮಂತ್ರಿಸಬೇಕೆಂದು ಹಠ ಹಿಡಿದರು. ಒತ್ತಾಯ ಹೇರಿದರು. ಸ್ವತಃ ಆಹ್ವಾನಿತ ಅಭ್ಯರ್ಥಿಯೇ ಗುಣೈಕಪಕ್ಷಪಾತಿಯಾಗಿ ಕಳದಿಂದ ಕೆಳಗಿಳಿದು ಅಧಿಕ ಅರ್ಹತೆ ಇದ್ದವನಿಗೆ ಎಡೆ ಮಾಡಿಕೊಟ್ಟದ್ದು ಆ್ಯಡ್ಲರರ ಪರಿಶುದ್ಧ ಅಂತಃಕರಣಕ್ಕೆ ಹೇಗೆ ಪರಮೋಚ್ಚ ನಿದರ್ಶನವೊ ಹಾಗೆ ಐನ್‌ಸ್ಟೈನರ ಸಾರಸ್ವತ ಶ್ರೀಮಂತಿಕೆಗೆ ಸಂದ ಅತಿ ಶ್ರೇಷ್ಠ ಗೌರವ ಕೂಡ.

ಝೂರಿಕ್ ವಿಶ್ವವಿದ್ಯಾಲಯದ ವರಿಷ್ಠರು ೧೯೦೯ ಮೇ ೭ರಂದು ಡಾಕ್ಟರ್ ಆಲ್ಬರ್ಟ್ ಐನ್‌ಸ್ಟೈನರನ್ನು ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆ ಮಾಡಿದರು. ಏಕಸ್ವ ಗುಮಾಸ್ತ ಐನ್‌ಸ್ಟೈನ್ ರಾಜಿನಾಮೆ ಕಾಗದವನ್ನು ಕಛೇರಿಯ ಮುಖ್ಯಾಧಿಕಾರಿ ಫ್ರೀಡ್ರಿಚ್ ಹ್ಯಾಲರ್ (೧೮೪೪-೧೯೩೬) ಅವರಿಗೆ ಒಪ್ಪಿಸಿದರು.

"ಕಾರಣವೇನು?"

"ನನಗೆ ಝೂರಿಕ್ ವಿಶ್ವವಿದ್ಯಾಲಯದಿಂದ ಸಹಾಯಕ ಪ್ರಾಧ್ಯಾಪಕತ್ವದ ಆಹ್ವಾನ ಬಂದಿದೆ. ಅಲ್ಲಿಗೆ ಹೋಗಬೇಕೆಂದಿದ್ದೇನೆ."

"ಮಿಸ್ಟರ್ ಐನ್‌ಸ್ಟೈನ್ ! ಸುಮ್ಮನೆ ತಮಾಷೆ ಮಾಡಬೇಡಿ. ಯಾರೂ ಈ ಹುಚ್ಚು ವಿವರಣೆಯನ್ನು ಒಪ್ಪಲಾರರು."

ಈ ಸುಕುಮಾರ ಜೀವ, ತಮ್ಮ ಕಛೇರಿಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಗುಮಾಸ್ತ. ಕೇವಲ ಕ್ಷಣಿಕ ಮಾನಸಿಕ ತುಮುಲಕ್ಕೆ ಈಡಾಗಿ ಹಾಳಾಗಿ ಹೋಗಬಾರದೆಂಬ ಸಾನುಕಂಪ ಭಾವದಿಂದ ಹ್ಯಾಲರ್ ಮಾತಾಡಿದ್ದರು. ತಮ್ಮ ವಶದಲ್ಲಿದ್ದ ಅನರ್ಘ್ಯ ರತ್ನದ ಮೌಲ್ಯ ಹೇಗೆ ತಾನೇ ಅವರಿಗೆ ತಿಳಿದೀತು ?

ಐನ್‌ಸ್ಟೈನ್ ೧೯೦೯ ಅಕ್ಟೋಬರ್ ೧೫ರಂದು ಏಕಸ್ವ ತಪಾಸಣೆಕಾರ ಹುದ್ದೆಯಿಂದ ಬಿಡುಗಡೆ ಗೊಂಡು ಝೂರಿಕ್ ವಿಶ್ವವಿದ್ಯಾಲಯವನ್ನು ಸೇರಿಕೊಂಡರು. ಬಾನಾಡಿ ಪ್ರತಿಭೆಗೆ ಸಮುಚಿತ ನೀಡ (ಗೂಡು) ಒದಗಿತು.

ಏಕಸ್ವ ಕಛೇರಿಯಲ್ಲಿ ತಾವಿದ್ದ ಏಳು ಮಾಂತ್ರಿಕ ವರ್ಷಗಳನ್ನು ಕುರಿತು ತಮ್ಮ ಅಂದಿನ ಮಿತ್ರನಿಗೆ, ೧೯೧೯ರಲ್ಲಿ, ಕಾಗದ ಬರೆಯುತ್ತ ಐನ್‌ಸ್ಟೈನ್ ಆ ಕಛೇರಿಯನ್ನು, "ನನ್ನ ಅತ್ಯಂತ ಸುಂದರ ಭಾವನೆಗಳನ್ನು ರೂಪಿಸಿ ಕಾವು ಕುಳಿತು ಮರಿ ಮಾಡಿದ ಹಾಗೂ ಒಟ್ಟಾರೆ ನನಗೆ ಅತ್ಯಂತ ಸಂತೋಷದಾಯಕ ಕ್ಷಣಗಳನ್ನು ನೀಡಿದ ಲೌಕಿಕ ಏಕಾಂತ," ಎಂಬುದಾಗಿ ವರ್ಣಿಸಿದ್ದರು.

## ಝೂರಿಕ್ ವಿಶ್ವವಿದ್ಯಾಲಯ

> ವಿಶೇಷ ಸಾಪೇಕ್ಷತಾಸಿದ್ಧಾಂತದ ಆಧುನಿಕ ರೂಪ ಪ್ರಾರಂಭವಾದದ್ದು ಐನ್‌ಸ್ಟೈನರಿಂದಲ್ಲ, ಬದಲು ಇವರಿಗೆ ಆ ಮೊದಲು ಉಪಾಧ್ಯಾಯರಾಗಿದ್ದ ಹರ್ಮನ್ ಮಿಂಕೊವ್ಸ್ಕೀಯವರಿಂದ....ಆಕಾಶ-ಕಾಲ ನಾಲ್ಕು ಆಯಾಮಗಳ ಪ್ರಾಂತ, ಇದರಲ್ಲಿ ಘಟನೆಗಳು ಬಿಂದುಗಳಿಂದ ಸೂಚಿಸಲ್ಪಡುತ್ತವೆ ಎಂಬ ಪರಿಕಲ್ಪನೆಯನ್ನು ಸೃಷ್ಟಿಸಿ ಮಿಂಕೊವ್ಸ್ಕೀ ವಿಶೇಷ ಸಾಪೇಕ್ಷತಾಸಿದ್ಧಾಂತಕ್ಕೆ ಅದರಲ್ಲಿ ತತ್ಪೂರ್ವ ಇರದಿದ್ದ ನೂತನ ಜ್ಯಾಮಿತೀಯ ಸೌಂದರ್ಯವನ್ನೂ ಸರಳತೆಯನ್ನೂ ಒದಗಿಸಿದರು. ಐನ್‌ಸ್ಟೈನ್ ಕಲ್ಪಣೆಯಿಂದ (quarry) ಅಮೃತಶಿಲೆಯನ್ನು ಕತ್ತರಿಸಿ ತೆಗೆದರೆ ಮಿಂಕೊವ್ಸ್ಕೀ ಆ ಅಮೃತಶಿಲೆಯನ್ನು ಉಪಯೋಗಿಸಿ ವಿಗ್ರಹವನ್ನು ಕಂಡರಿಸಿದರು.
>
> ಜಾನ್ ಎಲ್. ಸಿಂಗ್

ಝೂರಿಕ್ ಪಾಲಿಟೆಕ್ನಿಕ್ಕಿನಲ್ಲಿ ಐನ್‌ಸ್ಟೈನ್ ವಿದ್ಯಾರ್ಥಿ ಆಗಿದ್ದಾಗ ವಿಖ್ಯಾತ ಗಣಿತವಿದ ಹರ್ಮನ್ ಮಿಂಕೊವ್ಸ್ಕೀ ಇವರ ಗುರುವೃಂದದಲ್ಲಿದ್ದರೆಂದೂ ತಮ್ಮ ಭಾವೀ ಮಹಾ ಪ್ರತಿಭಾವಂತ ಶಿಷ್ಯನನ್ನು ಇವರು 'ಸೋಮಾರಿ ನಾಯಿ'ಯೆಂದು ಭಾವಿಸಿದ್ದರೆಂದೂ ಹಿಂದೆ ಹೇಳಿದೆ. ವಿಶೇಷ ಸಾಪೇಕ್ಷತಾಸಿದ್ಧಾಂತ ಪ್ರಕಟವಾದಾಗ ಮಿಂಕೊವ್ಸ್ಕೀ, ಅಂತಾರಾಷ್ಟ್ರೀಯ ಖ್ಯಾತಿವೆತ್ತ ಗಟಿಂಗೆನ್ ವಿಶ್ವವಿದ್ಯಾಲಯದಲ್ಲಿ (ಜರ್ಮನಿ) ಪ್ರಾಧ್ಯಾಪಕರಾಗಿದ್ದರು. ಇವರ ಅನ್ವೇಷಕ ನಿಶಿತಮತಿ ಗಾರು ನೆಲ ಮುಂಗಾರನ್ನು ಹೀರಿ ಪರಿಮಳಿಸಿ ಕೊನರುವಂತೆ ಆ ಸಿದ್ಧಾಂತವನ್ನು ಸ್ವೀಕರಿಸಿ ಅದರ ಸತ್ತ್ವಕ್ಕೆ ಆಧುನಿಕ ಗಣಿತ ಪರಿಭಾಷೆಯಲ್ಲಿ ಮರುವುಟ್ಟು ಕೊಟ್ಟು ಪ್ರಕಟಿಸಿತು (೧೯೦೭). ಅನಾಮಧೇಯ ಐನ್‌ಸ್ಟೈನರ 'ಭ್ರಾಂತಿಜನ್ಯ ವಕ್ರತೆ'ಗೆ ಲಭಿಸಿದ ಈ ಶೈಕ್ಷಣಿಕ ಹಾಗೂ ಬೌದ್ಧಿಕ ಮುದ್ರೆಯ ಪರಿಣಾಮವಾಗಿ ತಜ್ಞರ ತಂಡದಲ್ಲಿ ಅದು ಉಚ್ಚ ಅಂತಸ್ತು ಪಡೆದು ಗೌರವಾನ್ವಿತ ವಾಯಿತು.

೧೯೦೮ರಲ್ಲಿ ಸಮಾವೇಶಗೊಂಡ ಜರ್ಮನ್ ವಿಜ್ಞಾನಿಗಳ ಎಂಬತ್ತನೆಯ ಮಹಾ ಅಧಿವೇಶನ ದಲ್ಲಿ ಸಾಪೇಕ್ಷತಾಸಿದ್ಧಾಂತದ ಉತ್ಸಾಹೀಪ್ರತಿಪಾದಕರಾದ ಮಿಂಕೊವ್ಸ್ಕೀಯವರು ಆಕರ್ಷಣ ಕೇಂದ್ರವಾಗಿದ್ದರು : "ಇಂದಿನಿಂದ ಮುಂದಕ್ಕೆ ಸ್ವತಃ ಆಕಾಶವೂ ಖುದ್ದು ಕಾಲವೂ ಪೂರ್ಣ ಛಾಯೆಗಳಾಗಿ ಕರಗಿ ಹೋಗಿ ಅವೆರಡರ ಒಂದು ಬಗೆಯ ಸಂಯೋಜನೆ ಮಾತ್ರ ಸ್ವತಂತ್ರ ಅಸ್ತಿತ್ವ

ಪಡೆದಿರಲು ವಿಧಿತವಾಗಿವೆ." ಎಂಬುದಾಗಿ ಇವರು ಹುಮ್ಮಸ್ಸಿನಿಂದ ವಿವರಿಸಿದರು. ಆಕಾಶ-ಕಾಲ ಸಾತತ್ಯವನ್ನು ಗಣಿತೀಯವಾಗಿ ತಿಳಿಯಹೇಳಿದ್ದು ಆ ವಿಜ್ಞಾನಿಗಳ ಮುಂದೆ ಹೊಸ ಹರವನ್ನು ತೆರೆದು ಬಿತ್ತರಿಸಿ ತೋರಿಸಿದಂತಾಯಿತು.

ಮಿಂಕೊವ್ಸ್ಕೀಯವರ ಗಣಿತಾತ್ಮಕ ಸಾಪೇಕ್ಷತಾಸಿದ್ಧಾಂತವನ್ನು ಕುರಿತು ಐನ್‌ಸ್ಟೈನ್ ಒಮ್ಮೆ ಅರ್ಧಗಾಂಭೀರ್ಯದಿಂದ ಹೇಳಿದ್ದರು, "ಖುದ್ದು ನನಗೇ ಅರ್ಥವಾಗದಷ್ಟರ ಮಟ್ಟಿಗೆ ಗಣಿತ ಇಂದು ಸಾಪೇಕ್ಷತಾಸಿದ್ಧಾಂತವನ್ನು ಆಕ್ರಮಿಸಿಬಿಟ್ಟಿದೆ !"

ಗಣಿತವನ್ನು ಕುರಿತು ಐನ್‌ಸ್ಟೈನರಿಗಿದ್ದ ಪ್ರಾರಂಭಿಕ ಭಾವನೆಗಳು ತುಂಬ ಸರಳವಾಗಿದ್ದುವು. ಭೌತವಿಜ್ಞಾನರಂಗದಲ್ಲಿ ತಮ್ಮ ಸಂಶೋಧನೆಗಳನ್ನು ಮುಂದುವರಿಸಲು ಪ್ರೌಢಗಣಿತವೇನೂ[೨೧] ಬೇಕಾಗದು ಎಂಬುದಾಗಿ ಇವರು ಭಾವಿಸಿದ್ದರು. ಆದರೆ ಸಾಪೇಕ್ಷತಾಸಿದ್ಧಾಂತದ ನವುರು ಹಾದಿ ಬಲು ಬೇಗ ಇವರಿಗೆ ಸಂಕೀರ್ಣ ಗಣಿತದ ಆವಶ್ಯಕತೆಯನ್ನು ಸ್ಪಷ್ಟಪಡಿಸಿತು. ೧೯೧೨ ಅಕ್ಟೋಬರ್ ೨೯ರಂದು ಇವರು ಬರೆದ ಕಾಗದದಲ್ಲಿ ಈ ಅಂಶ ಎತ್ತಿ ವಿವರಿಸಿದ್ದಾರೆ : "ಗುರುತ್ವಾಕರ್ಷಣೆಯ ಸಮಸ್ಯೆಯೊಂದರಿಂದಲೇ ಪೂರ್ತಿ ಬಂಧಿತನಾಗಿದ್ದೇನೆ. ಇಲ್ಲಿರುವ ಸ್ನೇಹಪರ ಗಣಿತಜ್ಞರೊಬ್ಬರ ನೆರವಿನಿಂದ ಎಲ್ಲ ಅಡಚಣೆಗಳನ್ನೂ ಅಡ್ಡಹಾಯಬಲ್ಲೆ ಎಂಬ ಭರವಸೆ ಈಗ ಮೂಡಿದೆ. ಆದರೆ ಈ ಒಂದು ವಿಷಯವಂತೂ ಖಾತ್ರಿ : ನನ್ನ ಜೀವಮಾನವಿಡೀ ನಾನು ಈಗಿನಷ್ಟು ಕಠಿಣವಾಗಿ ಹಿಂದೆಂದೂ ಪರಿಶ್ರಮಿಸಿದ್ದಿಲ್ಲ ; ನನ್ನ ಮುಗ್ಧತೆಯ ಕಾರಣವಾಗಿ ನಾನು ಗಣಿತದ ಸೂಕ್ಷ್ಮ ಕೋಮಲ ಮಗ್ಗುಲುಗಳನ್ನು ಶುದ್ಧ ವಿಲಾಸ ಸಾಮಗ್ರಿಗಳೆಂದು ಭಾವಿಸಿದ್ದೆ. ಆದರೆ ಈಗ ನಾನು ಗಣಿತದ ಬಗ್ಗೆ ಅಪಾರ ಗೌರವ ತಳೆದಿದ್ದೇನೆ. ಈ ಸಮಸ್ಯೆಯೊಡನೆ ಹೋಲಿಸುವಾಗ ಸಾಪೇಕ್ಷತಾವಾದದ ಮೂಲ ಸಿದ್ಧಾಂತ ಮಕ್ಕಳಾಟಿಗೆ."

ಈ ಸ್ನೇಹಪರ ಗಣಿತಜ್ಞ ಬೇರೆ ಯಾರೂ ಅಲ್ಲ. ಐನ್‌ಸ್ಟೈನರ ಬಾಲ್ಯಮಿತ್ರ ಮಾರ್ಸೆಲ್ ಗ್ರಾಸ್‌ಮ್ಯಾನ್.

೧೯೦೯ ಸೆಪ್ಟೆಂಬರ್ ೨೧ರಂದು ಸಮಾವೇಶಗೊಂಡ ಜರ್ಮನ್ ವಿಜ್ಞಾನಿಗಳ ಮಹಾ ಅಧಿವೇಶನಕ್ಕೆ ಐನ್‌ಸ್ಟೈನರನ್ನು ಆಹ್ವಾನಿಸಲಾಗಿತ್ತು. ಆ ವೇಳೆಗೆ ಇವರಿನ್ನೂ ಏಕಸ್ವ ಕಛೇರಿ ಗುಮಾಸ್ತರಾಗಿಯೇ ಇದ್ದರು. ಇವರ ಭಾಷಣ ಅಣು ಪರಮಾಣು ಪ್ರಪಂಚವನ್ನು ಕುರಿತ ಭಾಷ್ಯವಾದ ಶಕಲಸಿದ್ಧಾಂತವನ್ನೂ ನಕ್ಷತ್ರ ನೀಹಾರಿಕಾ ಪ್ರಪಂಚವನ್ನು ಕುರಿತ ಭಾಷ್ಯವಾದ ಸಾಪೇಕ್ಷತಾಸಿದ್ಧಾಂತವನ್ನೂ ಒಳಗೊಂಡ ವ್ಯಾಪಕ ಸಮೀಕ್ಷೆ ಆಗಿತ್ತು. ಲೋಕದ ಧೀಮಂತ ಚೇತನಗಳಾದ ವೃತ್ತಿ ವಿಜ್ಞಾನಿಗಳ—ಐನ್‌ಸ್ಟೈನ್ 'ವೃತ್ತಿ ವಿಜ್ಞಾನಿ' ಆಗಿರಲಿಲ್ಲ, 'ಹವ್ಯಾಸಿ ವಿಜ್ಞಾನಿ' ಆಗಿದ್ದರು—ಮಹಾಸಭೆ ಅದು. ಶಕಲ ಸಿದ್ಧಾಂತದ ನಿರ್ಮಾಪಕ ಮ್ಯಾಕ್ಸ್ ಪ್ಲ್ಯಾಂಕ್ ಸಾಕ್ಷಾತ್ತಾಗಿ ಆ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಇಂಥ ಬ್ರಹ್ಮಸಭೆಯಲ್ಲಿ ಅಥವಾ ಶೃಂಗಸಭೆಯಲ್ಲಿ ಮೂವತ್ತರ ಗುಮಾಸ್ತನಿಗೇನು ಸ್ಥಾನವಿದ್ದೀತು ? ಆದರೆ ಇವರ ಭಾಷಣ ಆಲಿಸಿದ ಬಳಿಕ ಅವರಿಗೆಲ್ಲ ಖಚಿತವಾಗಿ ಮನವರಿಕೆ ಆಯಿತು ಈತ ಸಾಮಾನ್ಯ ಅಲ್ಲ, ತನ್ನ ಭಾಷಣ ವಸ್ತುವಿನ ಮೇಲೆ ಪೂರ್ಣ ಪ್ರಭುತ್ವವಿರುವ ಸಮರ್ಥ ವಿಜ್ಞಾನಿ, ನವಯುಗವನ್ನು ಆವಾಹಿಸುತ್ತಿರುವ ವಿಶೇಷ ಚೇತನ ಎಂದು.

ಅಂದಮಾತ್ರಕ್ಕೆ ಐನ್‌ಸ್ಟೈನರ ವಾದಸರಣಿ ಆ ವಿಜ್ಞಾನಿಗಳಿಗೆ ತಿಳಿಯಿತೆಂದಾಗಲಿ ಅದನ್ನು ಅವರು ಅನುಮೋದಿಸಿದರೆಂದಾಗಲಿ ಅರ್ಥವಲ್ಲ. ಆದರೆ ಇಲ್ಲೊಂದು ಅಸಾಂಪ್ರದಾಯಿಕ ನೂತನ ದೃಷ್ಟಿ ತೀವ್ರ ಕ್ರಿಯೋದ್ಯುಕ್ತವಾಗಿದೆ ಎಂಬುದು ಅವರಿಗೆ ಮಂದಟ್ಟಾಯಿತು. ಬೇಂದ್ರೆ ನುಡಿಗಳಲ್ಲಿ—

ಅರಿಯದು ಅಳವು ತಿಳಿಯದು ಮನವು
ಕಾಣದೋ ಬಣ್ಣಾ
ಕಣ್ಣಿಗೆ—ಕಾಣದೋ ಬಣ್ಣಾ
ಶಾಂತೀರಸವೇ ಪ್ರೀತೀಯಿಂದಾ
ಮೈದೋರಿತಣ್ಣಾ
ಇದು ಬರಿ—ಬೆಳಗಲ್ಲೋ ಅಣ್ಣಾ

## ಮ್ಯಾಕ್ಸ್ ಪ್ಲ್ಯಾಂಕ್

[ಮ್ಯಾಕ್ಸ್ ಪ್ಲ್ಯಾಂಕರ] ಈ ಆವಿಷ್ಕಾರ [ಶಕಲ ಸಿದ್ಧಾಂತ] ಇಪ್ಪತ್ತನೆಯ ಶತಮಾನದ ಸಮಸ್ತ ಭೌತ ವಿಜ್ಞಾನ ಸಂಶೋಧನೆಯ ಆಧಾರವಾಗಿ, ತರುವಾಯದ ದಿನಗಳಲ್ಲಿ ಇದರ ಅಭಿವರ್ಧನೆಯನ್ನು ಹೆಚ್ಚು ಕಡಿಮೆ ಪೂರ್ತಿಯಾಗಿ ಪ್ರಭಾವಿಸಿದೆ . . . ಇದು ಅಭಿಜಾತ ಬಲವಿಜ್ಞಾನ ಮತ್ತು ವಿದ್ಯುದ್ಗತಿವಿಜ್ಞಾನದ ಚೌಕಟ್ಟನ್ನೇ ನಿರ್ನಾಮಗೊಳಿಸಿ ಸಮಸ್ತಭೌತವಿಜ್ಞಾನಕ್ಕೂ ಅನ್ವಯವಾಗುವ ನವ ಪರಿಕಲ್ಪನಾತ್ಮಕ ಆಧಾರವನ್ನು ಶೋಧಿಸುವ ಕರ್ತವ್ಯವನ್ನು ವಿಜ್ಞಾನಕ್ಕೆ ವಿಧಿಸಿದೆ.

ಐನ್‌ಸ್ಟೈನ್

ಮ್ಯಾಕ್ಸ್ ಪ್ಲ್ಯಾಂಕ್ ಮತ್ತು ಐನ್‌ಸ್ಟೈನ್—ಇಪ್ಪತ್ತನೆಯ ಶತಮಾನದ ಜಗತ್ತಿನ ಮುಖವನ್ನೇ ಬದಲಾಯಿಸಿದ ಎರಡು ಮಹಾ ಚೇತನಗಳು—ಮೊದಲಿಗೆ ಭೇಟಿ ಆದದ್ದು ಈ ಸಭೆಯಲ್ಲಿ. ಪ್ಲ್ಯಾಂಕರಿಗೆ ಆಗ ವಯಸ್ಸು ಐವತ್ತೊಂದು. ಐನ್‌ಸ್ಟೈನರಿಗೆ ಕೇವಲ ಮೂವತ್ತು. ಪ್ಲ್ಯಾಂಕ್ ಮಹಾ ವಿಜ್ಞಾನಿ ಎಂಬುದಾಗಿ ಪ್ರಪಂಚವಿಖ್ಯಾತರಾಗಿದ್ದವರು. ಐನ್‌ಸ್ಟೈನ್ ಆಗತಾನೇ ಉದಯಿಸಿದ್ದ ಮಹೋಜ್ಜ್ವಲ ಆಕಾಶಕಾಯ. ಇದು ಗ್ರಹವೇ ನಕ್ಷತ್ರವೇ ನೋವಾವೇ ಎಂಬುದನ್ನು ನಿರ್ಧರಿಸುವ ಸ್ಥಿತಿಯಲ್ಲಿ ವಿಜ್ಞಾನಪ್ರಪಂಚ ಆಗ ಇರಲಿಲ್ಲ. ಪ್ಲ್ಯಾಂಕ್ ಎಷ್ಟು ಹಿರಿಯ ವಿಜ್ಞಾನಿಯೊ ಅಷ್ಟೆ ಹಿರಿಯ ಸಹೃದಯ ಕೂಡ. ಪರಿಶುದ್ಧ ಮಾನವೀಯತೆಯಲ್ಲಿ, ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದರಲ್ಲಿ, ಮತ್ತು ಯೋಗ್ಯ ಕಾರಣವನ್ನು ಪುರಸ್ಕರಿಸುವುದರಲ್ಲಿ ಇವರದು ಎತ್ತಿದ ಕೈ. ಅನಾಮಧೇಯ, ಅಪರಿಚಿತ, ಅಪ್ರಸಿದ್ಧ ಐನ್‌ಸ್ಟೈನರ ಕ್ರಾಂತಿಕಾರೀ ಸಂಶೋಧನ ಪ್ರಬಂಧಗಳು *Annalen der Physik* ಪತ್ರಿಕೆಗೆ ಪ್ರಕಟಣೆಗಾಗಿ ತಲಪಿದಾಗ (೧೯೦೫) ಅವನ್ನು ಪರಿಶೀಲಿಸಿ ಸಮ್ಮತಿ ಮುದ್ರೆ ಒತ್ತಿದವರು ಸಾಕ್ಷಾತ್ ಪ್ಲ್ಯಾಂಕ್ ಮಹಾಶಯರೇ. ಬೇರೆ ಯಾರಿಗೇ ಆಗಲಿ ಆ ಪ್ರಬಂಧಗಳು ಪರಾಮರ್ಶನೆಗಾಗಿ ಹೋಗಿದ್ದುವಾದರೆ ಅವನ್ನು ಅವರು ಸಂಪ್ರದಾಯ ವಿರೋಧಿ ಅಟಾಟೋಪಗಳೆಂದು ತಿರಸ್ಕರಿಸಿಬಿಟ್ಟಿರುತ್ತಿದ್ದರು. ಸ್ವತಃ ಸಂಪ್ರದಾಯಶರಣರೂ ಜಾಗರೂಕ ವೃತ್ತಿವಿದರೂ ಆಗಿದ್ದ ಪ್ಲ್ಯಾಂಕ್ ಆ ಪ್ರಬಂಧಗಳನ್ನು ಹೊಸನೋಟ ಮೈಗೂಡಿಸಿಕೊಂಡು ಓದಿದರು, ಅವುಗಳ ಸವಿಹೂರಣ ಮೆಲ್ಲುತ್ತ ಮೈ ಮರೆತರು, ನಿರೂಪಣೆಯ ಸುಸಾಂಗತ್ಯಕ್ಕೆ ಮಾರುಹೋದರು, ಹಚ್ಚ ಹೊಸತನವನ್ನು ಮೆಚ್ಚಿದರು, ಹಿನ್ನೆಲೆಯ ಜೀವಂತ ಪ್ರತಿಭೆಗೆ ಮಣಿದರು. ಆ ವೇಳೆಗಾಗಲೇ ಸುಪ್ರಸಿದ್ಧವಾಗಿದ್ದ ತಮ್ಮ ಹಲವಾರು ಭಾವನೆಗಳನ್ನು ಐನ್‌ಸ್ಟೈನ್ ಟೀಕಿಸಿದ್ದರೂ ಪ್ಲ್ಯಾಂಕರ ಪರಿಶುಭ್ರ ಆಸಕ್ತಿ ಇನಿತೂ ಮಂಕಾಗಲಿಲ್ಲ.

ಸಹಜವಾಗಿ ಪ್ಲ್ಯಾಂಕ್, ಐನ್‌ಸ್ಟೈನರನ್ನು ಆದರದಿಂದ ಬರಮಾಡಿಕೊಂಡರು. ಇತ್ತ ಐನ್‌ಸ್ಟೈನರಿಗಾದರೂ ಪ್ಲ್ಯಾಂಕರೊಡನೆ ಒದಗಿದ ಆ ಮೊದಲ ಭೇಟಿ ವಿಶೇಷ ಉತ್ತೇಜನಕಾರಿಯೂ ಚೇತೋಹಾರಿಯೂ ಆಗಿತ್ತು. ಪ್ರಚಲಿತ ಭೌತವಿಜ್ಞಾನದ ಮುಂಚೂಣಿಯಲ್ಲಿದ್ದ ಜಟಿಲ ಸಮಸ್ಯೆಗಳನ್ನು ಇವರಿಬ್ಬರೂ ಖಾಸಗಿಯಾಗಿ ಚರ್ಚಿಸಿ ಅಭಿಪ್ರಾಯ ವಿನಿಮಯಿಸಿಕೊಂಡರು.

ಪ್ಲ್ಯಾಂಕರನ್ನು ಕುರಿತಂತೆ ಐನ್‌ಸ್ಟೈನರಿಗೆ ಯಾವ ಮಟ್ಟದ ಗೌರವವಿತ್ತು ಎನ್ನುವುದನ್ನು ಒಂದು ಘಟನೆಯಿಂದ ನಿದರ್ಶಿಸಬಹುದು. ೧೯೨೮ರ ಸುಮಾರಿಗೆ, ಆ ವೇಳೆಗೆ ನೊಬೆಲ್ ಪ್ರಶಸ್ತಿ ಪುರಸ್ಕೃತರಾಗಿ ಜಗದ್ವಿಖ್ಯಾತರಾಗಿದ್ದ, ಐನ್‌ಸ್ಟೈನರನ್ನು ಪ್ಲ್ಯಾಂಕ್ ರಚಿಸಿದ್ದ ಒಂದು ಗ್ರಂಥಕ್ಕೆ ಮುನ್ನುಡಿ ಬರೆಯಬೇಕೆಂದು ಪ್ರಾರ್ಥಿಸಿಕೊಳ್ಳಲಾಯಿತು. ಐನ್‌ಸ್ಟೈನ್ ಬರೆದರು, "ಮ್ಯಾಕ್ಸ್ ಪ್ಲ್ಯಾಂಕರನ್ನು ನಾನು ಲೋಕಕ್ಕೆ ಪರಿಚಯಿಸುತ್ತೇನೆ ಎಂದು ಭಾವಿಸುವುದೇ ಧಾರ್ಷ್ಟ್ಯದ ನಿಲವಾದೀತು. ಶಕಲಸಿದ್ಧಾಂತದ ಆವಿಷ್ಕರ್ತೃವಾದ ಈ ನಕ್ಷತ್ರ ಸ್ವಯಂಪ್ರಭೆಯಿಂದಲೇ ಬೆಳಗಬಲ್ಲದು. ಅದು ಯಾವುದೇ ಕಡಿಮೆ ಪ್ರಭೆಯ ಕಾಯದ ಬೆಳಕನ್ನು ಪ್ರತಿಫಲಿಸಿ ಶೋಭಿಸಬೇಕಾಗಿಲ್ಲ."

೧೯೨೮ರಲ್ಲಿ ಮ್ಯಾಕ್ಸ್ ಪ್ಲ್ಯಾಂಕರ ಷಷ್ಟಿಪೂರ್ತಿ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಆಗ ಅಭಿನಂದನ ಭಾಷಣ ಮಾಡುತ್ತ ಐನ್‌ಸ್ಟೈನ್ ಹೇಳಿದರು : "ವಿಜ್ಞಾನ ದೇವಾಲಯ ಹಲವು ಪ್ರಾಕಾರಗಳಿಂದ ಸಂಯೋಜಿತವಾಗಿರುವ ಸಂಕೀರ್ಣ ರಚನೆ. ಇದರ ನಿವಾಸಿಗಳ ಸ್ವಭಾವಗಳು ವಿವಿಧವಾಗಿರುವುವೊಂದೇ ಅಲ್ಲ, ಇವರು ದೇವಾಲಯದ ಒಳಗೆ ಉತ್ಪಾದಿಸುವ ಪ್ರಭಾವಗಳು ಕೂಡ ಹಾಗೆಯೇ. ಇವರ ಪೈಕಿ ಹೆಚ್ಚಿನ ಪ್ರತಿಯೊಬ್ಬನೂ ತನ್ನ ಬುದ್ಧಿ ಸಾಮರ್ಥ್ಯದ ಉತ್ಕೃಷ್ಟತೆಯ ಬಗ್ಗೆ ಸಂತೃಪ್ತಿ ತಳೆದವನಾಗಿದ್ದು ವಿಜ್ಞಾನ ಕ್ರಿಯಾಕಲಾಪಗಳಲ್ಲಿ ಉದ್ಯುಕ್ತನಾಗಿರುವನು. ತನ್ನ ಜೀವದ ಪ್ರಬಲ ಚಡಪಡಿಕೆಗಳು ಹೊರಹೊಮ್ಮಲು ಅವಕಾಶ ಒದಗಿಸಿ ಬಾಳಹಂಬಲಗಳನ್ನು ಈಡೇರಿಸಿಕೊಳ್ಳಲು ಚೆನ್ನಾಗಿ ಒಗ್ಗುವ ಕ್ರೀಡೆಯಾಗಿ ವಿಜ್ಞಾನವನ್ನು ಈತ ಕಂಡುಕೊಂಡಿದ್ದಾನೆ. ಉಪಯುಕ್ತ ಸಿದ್ಧಿಗಳನ್ನು ಗಳಿಸುವುದರತ್ತ ಮಾತ್ರ ತಮ್ಮ ಮಿದುಳ ಸಾಮಗ್ರಿಯನ್ನು ವ್ಯಯಿಸುವ ಹಲಮಂದಿಯೂ ಇದ್ದಾರೆ ನಿಜ. ಈಗ ದೇವದೂತನೊಬ್ಬ ಧರೆಗಿಳಿದು ಬಂದು ಇವೆರಡು ವರ್ಗಗಳಿಗೂ ಸೇರಿದ ಎಲ್ಲರನ್ನೂ ದೇವಾಲಯದಿಂದ ಉತ್ಪಾಟಿಸುವುದಾದ ಪಕ್ಷದಲ್ಲಿ, ಗಮನಾರ್ಹ ಮಂದಿ ತೊಲಗಿ ಹೋಗುತ್ತಾರೆ. ಹಾಗಿದ್ದರೂ ದೇವಾಲಯದೊಳಗೆ ಈಗಿನ ಹಾಗೂ ಹಿಂದಿನ ಕೆಲವೊಂದು ಮಂದಿ ಉಳಿದೇ ಇರುತ್ತಾರೆ. ಈ ವಿರಳರ ಸಾಲಿನಲ್ಲಿ ನಾವು ನಮ್ಮ ಪ್ಲ್ಯಾಂಕರನ್ನು ಎಣಿಸುತ್ತೇವೆ. ಎಂದೇ ಇವರಿಗೆ ನಮ್ಮ ತುಂಬು ಹೃದಯದ ಅಭಿವಂದನೆ, ಪ್ರೀತಿ ಸಲ್ಲುತ್ತವೆ." ತ್ಯಾಗರಾಜರ 'ಎಂದುರೋ ಮಹಾನುಭಾವುಲು' ಕೃತಿಯ ಗಂಭೀರಗತಿಯಲ್ಲಿ ಈ ಭಾಷಣ ಮುನ್ನಡೆಯುತ್ತದೆ.

# ೩. ಕಾಲಕ್ಕೆ ತೊಡಿಸಿದ ಕಡಿವಾಣ

## ಪ್ರಾಧ್ಯಾಪಕತ್ವದ ಹೊಣೆ

> ಅವರನ್ನು ಉತ್ತಮ ಆಚಾರ್ಯರಾಗಿ ಮಾಡಬಲ್ಲ ಎರಡು ಮುಖ್ಯ ಗುಣಗಳು ಅವರಲ್ಲಿದ್ದುವು. ಮೊದಲನೆಯದು, ಸಾಧ್ಯವಾಗುವಷ್ಟು ಮಂದಿ ಜನರಿಗೆ, ವಿಶೇಷತಃ ಅವರ ಪರಿಸರದಲ್ಲಿದ್ದವರಿಗೆ, ಉಪಯುಕ್ತ ಮತ್ತು ಸ್ನೇಹಶೀಲ ಆಗಿರುವುದು. ಎರಡನೆಯದು, ಅವರ ಕಲಾಪ್ರಜ್ಞೆ. ಇದು ಅವರನ್ನು ವೈಜ್ಞಾನಿಕ ಭಾವನೆಯೊಂದರ ಸರಣಿಯನ್ನು ತಾರ್ಕಿಕವಾಗಿಯೂ ಸ್ಪಷ್ಟವಾಗಿಯೂ ಯೋಚಿಸುವಂತೆ ವಿಧಿಸಿದುದರ ಜೊತೆಗೆ ಅವರಿಗೂ ಅವರನ್ನು ಆಲಿಸಿದ ಪ್ರತಿಯೊಬ್ಬನಿಗೂ ಸೌಂದರ್ಯಾನುಭೂತಿ ಸ್ಫುರಿಸುವ ರೀತಿ ಆ ಭಾವನೆಯನ್ನು ರೂಪಿಸುವಂತೆ ಕೂಡ ವಿಧಿಸಿತು. ಸ್ವಂತ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದು ಅವರಿಗೆ ಇಷ್ಟವಾಗಿತ್ತೆಂದು ಇದರ ಅರ್ಥ.
>
> **ಫಿಲಿಪ್ ಫ್ರ್ಯಾಂಕ್**

ಝ್ಯೂರಿಕ್ಕಿನ ಸಹಾಯಕ ಪ್ರಾಧ್ಯಾಪಕತ್ವ ಐನ್‌ಸ್ಟೈನರ ಬೌದ್ಧಿಕ ತೃಷೆಯನ್ನೇನೂ ಹಿಂಗಿಸಿದಂತೆ ತೋರಿತು. ಆದರೆ "ನನ್ನ ಖಾಸಗಿ ವೈಜ್ಞಾನಿಕ ಕಾರ್ಯವನ್ನು ಕಡಿಮೆ ಪ್ರತಿಕೂಲ ಸನ್ನಿವೇಶಗಳಲ್ಲಿ ಮುಂದುವರಿಸುವುದು" ಇಲ್ಲಿ ಅಷ್ಟೇನೂ ಯಶಸ್ವಿಯಾಗಿ ಕೈಗೂಡಲಿಲ್ಲ. ಪ್ರಾಧ್ಯಾಪಕರಾಗಿ ಇವರು ಆಡಳಿತೆಯಲ್ಲಿ ಸಾಕಷ್ಟು ಕಾಲ ವ್ಯಯಿಸಬೇಕಾಗಿತ್ತು. ಆಡಳಿತೆ ಎಂದರೆ ಅಧಿಕಾರ. ಅಧಿಕಾರ ಚಲಾವಣೆಯಿಂದ ಪ್ರತಿಷ್ಠೆ. ಪ್ರತಿಷ್ಠೆಯ ನಿಚ್ಚಣಿಕೆ ಏರಿದರೆ ಯಶಸ್ಸು. ಇದು ಲೌಕಿಕ ಮಾರ್ಗ. ಆದರೆ ಐನ್‌ಸ್ಟೈನರ ಪಾರಲೌಕಿಕ ಪ್ರತಿಭೆಗೆ ಇದು ಹಿಡಿಸದು. ತಿಳಿಯದು ಕೂಡ. ಹೀಗಾಗಿ ಇವರು ವೃತ್ತಿಗೌರವ (?) ಕಾಪಾಡಿಕೊಳ್ಳಲು ಬಾರದ ಬೋಳೆಜನ ಎಂಬ 'ಗೌರವ' ಗಳಿಸಿದರು. ವಿದ್ಯಾರ್ಥಿಗಳಿಗೆ ನೀಡಬೇಕಾದ ಪಾಠಪ್ರವಚನಗಳು ಇವರ ವೃತ್ತಿಜೀವನದ ಮುಖ್ಯಕರ್ತವ್ಯ ವಾಗಿತ್ತು. ಆದರೆ ಇವರ ವಿಕಿರಣಪಟು ಮನಸ್ಸಿನಿಂದ ನಿರಂತರವಾಗಿಯೂ ಸ್ವಚ್ಛಂದವಾಗಿಯೂ ಸಿಡಿಯುತ್ತಿದ್ದ ಭಾವನೆಗಳನ್ನು ಪಳಗಿಸಿ ಅವರಿಗೆ ಅರ್ಥವಾಗುವ ರೀತಿಯಲ್ಲಿ ಊಡುವ ತಂತ್ರ ಇವರಿಗೆ ಒಲಿದಿರಲಿಲ್ಲ. ಇವರ ಉಪನ್ಯಾಸಗಳು ಸಾಧಾರಣ ವಿದ್ಯಾರ್ಥಿಗಳ ಅಳವಿಗೆ ಮೀರಿದ ಅಮೂರ್ತ ಚಿಂತನೆಗಳಾಗಿರುತ್ತಿದ್ದುವು. ಹೀಗಾಗಿ ಇವರು ಕನಸುಗಾರ, ಅನ್ಯಮನಸ್ಕ ಮುಂತಾದ 'ಬಿರುದು'ಗಳಿಗೆ ಪಾತ್ರರಾದರು. ಇವರ ವರ್ತನೆ ಎಲ್ಲರೊಡನೆಯೂ ಸಾಫ್ ಸೀದಾ—ಕೆಲಸದಾಳಿ ನಿಂದ ತೊಡಗಿ ಪರಮಾಧಿಕಾರಿಯವರೆಗೆ. ಎಲ್ಲಿಯೂ ದರ್ಪವಿಲ್ಲ. ಅಸಹಜ ವಿನಯವೂ ಇಲ್ಲ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ಸಲ್ಲದ ಈ ವರ್ತನೆ ಇವರಿಗೆ ವಿಚಿತ್ರ ಪುರುಷ ಎಂಬ ಅಭಿಧಾನವನ್ನು ತಂದುಕೊಟ್ಟಿತು.

ಇತ್ತ ಐನ್‌ಸ್ಟೈನರ ಸಾಮಾಜಿಕ ಅಂತಸ್ತು ಗುಮಾಸ್ತಿಕೆಯ ನೆಲಮಟ್ಟದಿಂದ ಪ್ರಾಧ್ಯಾಪಕತ್ವದ ಮೇಲುಪ್ಪರಿಗೆಗೆ ಬಡ್ತಿ ಪಡೆದಿದ್ದುದರಿಂದ ಇವರ ಮನೆ ವೆಚ್ಚ ಏರಿತ್ತು. ಆದರೆ ಆದಾಯ ಹಿಂದಿ ನಷ್ಟೇ ಇತ್ತು. ಹೀಗಾಗಿ ಆಯವ್ಯಯ ಹೊಂದಾಣಿಕೆ ಒಂದು ಸಮಸ್ಯೆಯೇ ಆಯಿತು. ಐನ್‌ಸ್ಟೈನ್ ಎಂದೂ ವ್ಯವಹಾರಕುಶಲಿ ಆಗಿದ್ದಿಲ್ಲ. ಪತ್ನಿ ಮಿಲೇವಾ ಮನೆಯಲ್ಲಿ ವಿದ್ಯಾರ್ಥಿ-ಬೋರ್ಡರುಗಳಿಗೆ ಆಸರೆ ನೀಡಿ ನಾಲ್ವರ ಕುಟುಂಬವನ್ನು ಸಮತೋಲನದಲ್ಲಿಡುತ್ತಿದ್ದರು. ಬಹುತೇಕ ಬಡತನದ ಬಾಳೇ.

"ನನ್ನ ಸಾಪೇಕ್ಷತಾಸಿದ್ಧಾಂತದಲ್ಲಿ ನಾನು ಆಕಾಶದ ಪ್ರತಿಯೊಂದು ಬಿಂದುವಿನಲ್ಲಿಯೂ ಒಂದೊಂದು ಗಡಿಯಾರವನ್ನು ಸ್ಥಾಪಿಸಿದ್ದೇನೆ. ವಾಸ್ತವದಲ್ಲಾದರೊ ನನ್ನ ಕೋಣೆಯಲ್ಲಿ ಕೂಡ ಒಂದು ಗಡಿಯಾರ ಇಡಲಾರದವನಾಗಿದ್ದೇನೆ," ಎಂದೊಮ್ಮೆ ಐನ್‌ಸ್ಟೈನ್ ಲಘುವಿನೋದ ಮಿಶ್ರಿತವಾಗಿ ಹೇಳಿದ್ದರು.

## ಪ್ರಾಹಾಕ್ಕೆ ವಲಸೆ

ಮನುಷ್ಯನ ಆಸೆ ಆಕಾಂಕ್ಷೆಗಳ ನಿರುಪಯುಕ್ತತೆ ಮತ್ತು ನಿಸರ್ಗ ಹಾಗೂ ಭಾವನಾಪ್ರಪಂಚ ಎರಡರಲ್ಲಿಯೂ ಪ್ರಕಾಶಿತವಾಗುವ ಮಹೋನ್ನತ ಹಾಗೂ ಅತ್ಯದ್ಭುತ ಕ್ರಮ ವ್ಯಕ್ತಿಯ ಅರಿವಿಗೆ ಬಂದು ವೈಯಕ್ತಿಕ ಅಸ್ತಿತ್ವ ಒಂದು ಬಗೆಯ ತುರಂಗವಾಸವೆಂಬ ಭಾವ ಅವನಲ್ಲಿ ಪ್ರಬಲವಾಗಿ ಬೇರೂರಿ ಸಮಗ್ರ ವಿಶ್ವವನ್ನೂ ವಿಶಿಷ್ಟ ಏಕ ಘಟಕವಾಗಿ ಅನುಭವಿಸಬೇಕೆಂಬ ಉತ್ಕಟೇಚ್ಛೆ ತೀವ್ರ ವಾಗುತ್ತದೆ. ಈ ವಿಶ್ವಮತದ ಆರಂಭ ಮನುಕುಲದ ಮೊದಲ ದಿನಗಳಲ್ಲಿಯೇ ಕಂಡುಬರುತ್ತದೆ— ಡೇವಿಡ್ಡನ ಅನೇಕ ಸ್ತೋತ್ರಗೀತೆಗಳಲ್ಲಿ ಮತ್ತು ಕೆಲವು ಮಂದಿ ಪ್ರವಾದಿಗಳ ಪ್ರವಚನಗಳಲ್ಲಿ.

ವಿಶೇಷವಾಗಿ ಶಾಪೆನ್‌ಹಾರನ ಉತ್ಕೃಷ್ಟ ಬರವಣಿಗೆಗಳಿಂದ ತಿಳಿದು ಬಂದಿರುವಂತೆ ಬೌದ್ಧಮತದಲ್ಲಿ ವಿಶ್ವಮತದ ಪ್ರಬಲ ಅಂಶ ಅಂತರ್ಗತವಾಗಿತ್ತು.

ಐನ್‌ಸ್ಟೈನ್

ಹಂಗರಿ, ಆಸ್ಟ್ರಿಯ, ಜರ್ಮನಿ, ಪೋಲೆಂಡ್ ಮತ್ತು ಸೋವಿಯತ್ ಒಕ್ಕೂಟ ಇವುಗಳಿಂದ ಆವೃತವಾಗಿರುವ ನೆಲದ್ವೀಪ ಚೆಕೊಸ್ಲೋವಾಕಿಯಾ. ಈ ದೇಶದ ಪ್ರಾಹಾ (Prague) ನಗರದಲ್ಲಿಯ ಪ್ರಾಹಾ ವಿಶ್ವವಿದ್ಯಾಲಯ ಮಧ್ಯ ಯೂರೋಪಿನಲ್ಲಿಯೇ ಅತ್ಯಂತ ಪ್ರಾಚೀನವಾದುದಾಗಿತ್ತು. ಇದರಲ್ಲಿದ್ದ ಜರ್ಮನ್ ಹಾಗೂ ಚೆಕ್ ಪ್ರಾಧ್ಯಾಪಕರು ಹಠಗಟ್ಟಿ ತಮ್ಮ ತಮ್ಮ ಮಾತೃಭಾಷೆಗಳಲ್ಲಿಯೇ ಉಪನ್ಯಾಸ ನೀಡುತ್ತಿದ್ದರು. ಸಹಜವಾಗಿ ಎರಡೂ ಭಾಷೆಗಳವರ ನಡುವೆ ವೈಮನಸ್ಯ ಬೆಳೆದು ಅದಕ್ಕೆ ಸಾಕಷ್ಟು ರಾಜಕೀಯವೂ ಬೆರೆತು ಪರಿಸ್ಥಿತಿ ಬಿಗಡಾಯಿಸುತ್ತಿತ್ತು. ಜರ್ಮನರ ದಾನಿನಾನುತನವೂ (superiority complex) ಚೆಕ್ಕರ ದೀನನಾನುತನವೂ (inferiority complex) ಎದುರು ಬದಿರಾಗಿ ನಿಂತು ಕಳದಲ್ಲಿ ಕಾವೇರುತ್ತಿತ್ತು. ವಿದ್ಯಾಮಂದಿರಕ್ಕೆ ತಾಗಿದ್ದ ಈ ಒಳಗಿಚ್ಚನ್ನು ನಿವಾರಿಸಲು, ಆಗ ಈ ವಿಶ್ವವಿದ್ಯಾಲಯದ ಮೇಲೆ ಪರಮಾಧಿಕಾರ ಹೊಂದಿದ್ದ ಆಸ್ಟ್ರಿಯಾ ಸರ್ಕಾರ, ೧೮೮೮ರಲ್ಲಿ, ಪ್ರಾಹಾ ವಿಶ್ವವಿದ್ಯಾಲಯವನ್ನು ಪ್ರಾಹಾದ ಜರ್ಮನ್ ವಿಶ್ವವಿದ್ಯಾಲಯ ಮತ್ತು ಪ್ರಾಹಾದ ಚೆಕ್ ವಿಶ್ವವಿದ್ಯಾಲಯ ಎಂಬ ಎರಡು ಸ್ವಾಯತ್ತ ಸಂಸ್ಥೆಗಳಾಗಿ ಒಡೆಯಿತು. ಇವೆರಡು 'ವೈರಿ ಬಣ'ಗಳ ನಡುವೆ ಸಾಹಚರ್ಯವಾಗಲಿ ಸಹಕಾರವಾಗಲಿ ಏರ್ಪಡಲಿಲ್ಲ, ಜ್ಞಾನಬಂಧ ಭಿತ್ತಿ ಮಾತ್ರ ಎದ್ದಿತು. ಪ್ರಾಹಾದಿಂದ ಹೊರಗೆ ಕೂಡುತ್ತಿದ್ದ ಅಂತಾರಾಷ್ಟ್ರೀಯ ಸಭೆ ಸಮ್ಮೇಳನಗಳಲ್ಲಿ ಈ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಅಪರೂಪಕ್ಕೆ ಅಕಸ್ಮಾತ್ತಾಗಿ ಭೇಟಿ ಆಗುವುದಿತ್ತು. ಅಲ್ಲಿಯೂ ಯಾಂತ್ರಿಕ ಮತ್ತು ಔಪಚಾರಿಕ ವಿಧಿನಿಯಮಗಳ ಆಚೆಗೆ ಸಂವಹನ ಏರ್ಪಡುತ್ತಿರಲಿಲ್ಲ.

ಪ್ರಾಹಾದ ಜರ್ಮನ್ ವಿಶ್ವವಿದ್ಯಾಲಯದಲ್ಲಿ ಸೈದ್ಧಾಂತಿಕ ಭೌತವಿಜ್ಞಾನ ಪ್ರಾಧ್ಯಾಪಕಪೀಠ ೧೯೧೦ರ ವೇಳೆಗೆ ತೆರವಾಯಿತು. ಅದಕ್ಕೆ ಸಮರ್ಥ ವಿಜ್ಞಾನಿಯನ್ನು ನಾಮಕರಿಸುವ ಪರಮಾಧಿಕಾರ ಆಸ್ಟ್ರಿಯಾ ಚಕ್ರವರ್ತಿಯದಾಗಿತ್ತು. ಈ ಪ್ರತಿಷ್ಠಿತ ಪೀಠಕ್ಕೆ ಐನ್‌ಸ್ಟೈನರನ್ನು ಆಹ್ವಾನಿಸಬೇಕೆಂದು ಶಿಕ್ಷಣತಜ್ಞರು ಚಕ್ರವರ್ತಿಗೆ ಕಳಕಳಿಯ ವಿನಂತಿ ಸಲ್ಲಿಸಿದರು. ಮನ್ನಣೆ ಪಡೆದಿರುವ ಯಾವುದೇ ಇಗರ್ಜಿಯೊಂದರ ಸದಸ್ಯವ್ಯಕ್ತಿಯನ್ನು ಮಾತ್ರ ತಾನು ಆಮಂತ್ರಿಸುವುದು, ಅರ್ಥಾತ್, ಆತ ಅಧಿಕೃತ ಮನ್ನಣೆ ಪಡೆದಿರುವ ದೇವರಲ್ಲಿ ನಂಬಿಕೆ ಇರುವವನಾಗಿರತಕ್ಕದ್ದು ಎಂಬುದು ಚಕ್ರವರ್ತಿಯ ಷರತ್ತಾಗಿತ್ತು. ಆದರೆ ಪ್ರಾಹಾ ದೃಷ್ಟಿಯಿಂದ ಐನ್‌ಸ್ಟೈನ್ ಪರದೇಶೀಯ (ಸ್ವಿಸ್ ಪ್ರಜೆ), ಮೇಲಾಗಿ ಯೆಹೂದ್ಯ, ಹೀಗೆ ಎರಡು ಸ್ಪಷ್ಟ ಅಡಚಣೆಗಳಿದ್ದರೂ ಇವರ ಮಹೋನ್ನತ ಸಿದ್ಧಿಯನ್ನು ಗಮನಿಸಿ ಇವರಿಗೆ ಪ್ರಾಧ್ಯಾಪಕ ಪೀಠಕ್ಕೆ ಬರಲು ಕರೆ ಕಳಿಸಲಾಯಿತು (೧೯೧೧). ತತ್ಸಂಬಂಧವಾದ ಪ್ರಶ್ನಾವಳಿಯಲ್ಲಿ ಐನ್‌ಸ್ಟೈನ್ ತಾವು ಯಾವುದೇ ದೇವರೊಡನೆ ಅಥವಾ ಇಗರ್ಜಿಯೊಡನೆ ಸಂಬಂಧಹೊಂದಿದವರಲ್ಲವೆಂದು ಬರೆದರು.

ಇವರು ಕೆಲಸಕ್ಕೆ ದಾಖಲಾಗುವ ಮುನ್ನ ದಾಖಲೆತಪಾಸಣೆಕಾರನ ಬೇಲಿ ದಾಟಬೇಕಾಗಿತ್ತು. ಆತ ಕೇಳಿದ, "ಯಾವುದಕ್ಕೂ ಸೇರಿದವರಲ್ಲವೆಂದು ನಮೂದಿಸಿದ್ದೀರಿ. ಇದನ್ನು ಬದಲಾಯಿಸಬೇಕಲ್ಲ?"

"ಸರಿ, ಮೊಝಾಯಿಕ್ ಎಂದು ಬರೆದುಕೊಳ್ಳಿ," ಎಂದರು ಐನ್‌ಸ್ಟೈನ್ ಪೂರ್ತಿ ನಿರುದ್ವಿಗ್ನರಾಗಿ. (ಮೋಸಸ್ ಎಂಬಾತ ಕ್ರಿಪೂಸು ೧೫-೧೩ ಶತಮಾನಗಳಲ್ಲಿ ಬಾಳಿದ್ದ ಹೀಬ್ರೂ ಪ್ರವಾದಿ

ಹಾಗೂ ಧರ್ಮಪ್ರವರ್ತಕ. ಇಸ್ರೇಲಿಯರನ್ನು ಈಜಿಪ್ಟಿನ ಮುಷ್ಟಿಯಿಂದ ಬಿಡಿಸಿದಾತ. ಇವನು ಪ್ರತಿಪಾದಿಸಿದ ಧರ್ಮಾನುಯಾಯಿಯೇ ಮೊಝಾಯಿಕ್. ರೂಢಿಯಲ್ಲಿ ಯೆಹೂದ್ಯ.)

"ಹಾಗೆ ಬದಲಾಯಿಸಲು ಪುರಾವೆ ?"

"ಯಾವುದಕ್ಕೂ ಸೇರಿದವನಲ್ಲ ಎನ್ನುವುದಕ್ಕೇನು ಪುರಾವೆ ?"

"ನಿಮ್ಮ ಹೇಳಿಕೆಯೇ."

"ಸರಿ, ಅದೇ ನನ್ನ ಹೇಳಿಕೆ ಮೇರೆಗೆ ಈಗ ಅದನ್ನು ಮೊಝಾಯಿಕ್ ಎಂದು ಬದಲಾಯಿಸಿ ಕೊಳ್ಳಿ."

ಐನ್‌ಸ್ಟೈನರ ತರ್ಕದ ಮುಂದೆ ತಪಾಸಣೆಕಾರ ನಿರುತ್ತರಿಯಾದ.

## ಪ್ರಾಹಾ ಸಮಸ್ಯೆಗಳು

ಯಾವುದೇ ಜನಾಂಗದ ಭಾಗವಾಗಿರುವ ಒಂದು ಸಮುದಾಯದ ಸದಸ್ಯರು ಪ್ರತ್ಯೇಕವಾಗಿ ಎದ್ದು ಕಾಣುತ್ತಿರುವ ತನಕವೂ ಆ ಜನಾಂಗ ಘರ್ಷಣವಿಮುಕ್ತವಾಗಿರಲಾರದು. ಜನಸಮಷ್ಟಿಯಲ್ಲಿ ಏಕ ರೂಪತೆ ಐದುವುದು ಸಾಧ್ಯವಾಗಬಹುದಾದರೂ ಅಪೇಕ್ಷಣೀಯವಲ್ಲವೆಂಬುದು ನನ್ನ ಅಭಿಪ್ರಾಯ. ಪ್ರತಿಯೊಂದು ಸಮಾಜದಲ್ಲಿಯೂ ಸಾಮಾನ್ಯ ನಂಬುಗೆಗಳು, ಗುರಿಗಳು ಹಾಗೂ ಒಂದೇ ತೆರನಾದ ಆಸಕ್ತಿಗಳು, ಒಂದು ಅರ್ಥದಲ್ಲಿ ಘಟಕಗಳಾಗಿ ವರ್ತಿಸುವಂಥ ಸಮುದಾಯಗಳನ್ನು ಸೃಷ್ಟಿಸುತ್ತವೆ. ಸದಾ ಈ ಸಮುದಾಯಗಳ ನಡುವೆ ಘರ್ಷಣೆ ಇದ್ದೇ ಇರುತ್ತದೆ—ವ್ಯಕ್ತಿಗಳ ನಡುವೆ ಇರುವ ಅದೇ ತೆರನಾದ ತಿರಸ್ಕಾರ ಮತ್ತು ಪೈಪೋಟಿ.

ಐನ್‌ಸ್ಟೈನ್

ಪ್ರಾಹಾ ನಗರದಲ್ಲಿ ಐನ್‌ಸ್ಟೈನರ ನಡವಳಿಕೆ ಹಿಂದಿನಂತೆಯೇ ಇತ್ತು : ಔಪಚಾರಿಕತೆ, ಆಡಂಬರ, ಹಮ್ಮು, ಬಿಮ್ಮು, ಕುಲೀನತೆ ಮುಂತಾದ ಅಂತಸ್ತುಸೂಚಕ 'ಸದ್ಗುಣ'ಗಳಿಂದ ಎಂದೂ ಬಾಧಿತವಾಗದ ಸಭ್ಯಸದ್ವರ್ತನೆ. ಅಲ್ಲೊಂದು ಸಂಪ್ರದಾಯವಿತ್ತು. ಇದರ ಪ್ರಕಾರ ಹೊಸತಾಗಿ ನೇಮನಗೊಂಡು ಬಂದ ಪ್ರಾಧ್ಯಾಪಕ ತಮ್ಮ ಸಹೋದ್ಯೋಗಿಗಳ ಬಿಡಾರಗಳಿಗೆ ಸೌಹಾರ್ದ ಭೇಟಿ ಕೊಡಬೇಕಾಗಿತ್ತು. ಈ ಸಲಹೆಯನ್ನು ಉತ್ಸಾಹದಿಂದ ಸ್ವೀಕರಿಸಿದ ಐನ್‌ಸ್ಟೈನ್ ತಮ್ಮ ಮನೆಯಿಂದ ದೂರಗಳಲ್ಲಿದ್ದ ಪ್ರಾಧ್ಯಾಪಕರ ಮನೆಗಳಿಗೆ ಮೊದಲು ಹೋದರು. ಸಹಜ ವಾಗಿ ಆ ಪ್ರಾಧ್ಯಾಪಕರುಗಳಿಗೆ ಹೆಮ್ಮೆ ಎನ್ನಿಸಿತು. ಈ ನೆವನದಿಂದಾದರೂ ಪ್ರಾಚೀನ ಸುಂದರ ನಗರ ಪ್ರಾಹಾದ ಬಹುಭಾಗವನ್ನು ನೋಡಬಹುದೆಂಬುದು ಇವರ ನಿಜ ಅಭಿಲಾಷೆ. ಕುಲೀನ ಸಮಾಜದ ಕೃತ್ರಿಮ ವರ್ತನೆ, ಅಳೆದು ಆಡುವ ಮಾತಿನ ಧಾಟಿ, ಹೂರಣಕ್ಕಿಂತಲೂ ತೋರಣಕ್ಕೆ ಹೆಚ್ಚು ಬೆಲೆ ಕೊಡುವ 'ಸಭ್ಯತೆ' ಇವರಿಗೆ ಬಲುಬೇಗ ಉಸಿರು ಕಟ್ಟಿಸಿದುವು. ಹೀಗಾಗಿ ಇವರು ಮುಂದಿನ ಭೇಟಿಗಳನ್ನು ಅನಾಮತ್ತಾಗಿ ರದ್ದುಗೊಳಿಸಿದರು. ಇವರ ಆಗಮನವನ್ನು ಪ್ರತೀಕ್ಷಿಸು ತ್ತಿದ್ದು ಹತಾಶರಾದವರು ಐನ್‌ಸ್ಟೈನ್ ಗರ್ವಿಷ್ಠ, ಅಧಿಕಾರಪಿತ್ತ ತಲೆಗೇರಿದ ದುರಹಂಕಾರಿ ಎಂದು ಮುಂತಾಗಿ ಗೊಣಗಿದ್ದಿತ್ತು. ಪ್ರತಿಯೊಬ್ಬನೂ ಇನ್ನೊಬ್ಬನನ್ನು ತನ್ನ ಕಣ್ಣುಗಳ ಮೂಲಕ ನೋಡುವನೇ ಹೊರತು ಆತ ಇರುವಂತೆ ಅಲ್ಲ. ಕುರುಡ ಆನೆ ನ್ಯಾಯ ! ಇನ್ನೂ ಗಂಭೀರ ವಾಗಿ(!) ಹೇಳುವುದಾದರೆ ಅಂಧ-ಗಜ ನ್ಯಾಯ.

ಪ್ರಾಹಾ ನಿವಾಸಿಗಳ ಪೈಕಿ ಜರ್ಮನರು ಶೇಕಡಾ ಐದು ಇದ್ದಿರಬಹುದು, ಅಷ್ಟೆ. ಉಳಿದವ ರೆಲ್ಲರೂ ಚೆಕ್ಕರು. ಈ ಅಲ್ಪಸಂಖ್ಯಾತ ಜರ್ಮನರಲ್ಲಿಯೂ ಬಹುಸಂಖ್ಯಾತರು ಯೆಹೂದ್ಯರೇ.

ಇವರು ಸ್ಥಿತಿಸಂಪನ್ನರು ಕೂಡ. ಶುದ್ಧ ಜರ್ಮನರು ಯೆಹೂದ್ಯರನ್ನು ತೀವ್ರವಾಗಿ ದ್ವೇಷಿಸುತ್ತಿದ್ದರೂ ಪ್ರಾಹಾದಲ್ಲಿ ತಮ್ಮ ಉಳಿವಿಗಾಗಿ ಯೆಹೂದ್ಯರನ್ನು ಆಶ್ರಯಿಸುವುದು ಅನಿವಾರ್ಯವಾಗಿತ್ತು. ಹೀಗೆ ಪ್ರಾಹಾ ದ್ವೀಪದಲ್ಲಿದ್ದ ಶುದ್ಧ ಜರ್ಮನರ ಮತ್ತು ಯೆಹೂದ್ಯರ ನಡುವೆ ಒಂದು ತೆರನಾದ ಅಸ್ವಾಭಾವಿಕ ಸಹವರ್ತನೆ, ಅಸಹಜ ಶಾಂತಿ ಮತ್ತು ನಿರ್ಬಂಧಿತ ಕೊಡುಕೊಳು ಸಂಬಂಧ ಏರ್ಪಟ್ಟಿದ್ದುವು.

ಶುದ್ಧ ಜರ್ಮನರಿಗೆ ತಮ್ಮ 'ಶ್ರೇಷ್ಠತೆ, ರಾಜರಕ್ತತ್ವ, ಆರ್ಯತ್ವ ಮುಂತಾದ ಸರ್ವೋಚ್ಚ ಗುಣ' ಕುರಿತಂತೆ ಅಚಲ ಶ್ರದ್ಧೆ ಇತ್ತು. ಭಗವಂತನ ನೇರ ಪ್ರತಿನಿಧಿಗಳಾದ ತಾವು ಮಾತ್ರ ಪ್ರಪಂಚಧುರೀಣರಾಗಲು ಅರ್ಹತೆ ಪಡೆದಿರುವ ಏಕೈಕ ಜನಾಂಗವೆಂದು ನಂಬಿದ್ದರು. ಇಂಥ ಮದೋನ್ಮತ್ತರು ಚೆಕ್ಕರನ್ನು ನಿಕೃಷ್ಟವಾಗಿಯೂ ತಿರಸ್ಕಾರಯುತವಾಗಿಯೂ ನಡೆಸಿಕೊಳ್ಳುತ್ತಿದ್ದರು. ಚೆಕ್ಕರಾದರೂ ಜರ್ಮನರನ್ನು ಮನಸ್ವೀ ಹಳಿಯುತ್ತಿದ್ದರು. ಅವರ ದೃಷ್ಟಿಯಲ್ಲಿ ಜರ್ಮನರೆಂದರೆ ತಕ್ಕಷ್ಟು ಆರ್ಥಿಕ ಹಾಗೂ ಸಾಮಾಜಿಕ ಸ್ಥಾನಮಾನಗಳಿಸಿದ್ದ ಯೆಹೂದ್ಯರು ಮಾತ್ರ. ಹೀಗೆ ಪ್ರಚ್ಛನ್ನವಾಗಿ ಯೆಹೂದ್ಯದ್ವೇಷ ಹೊಗೆಯಾಡುತ್ತಿದ್ದ ಪ್ರಾಹಾದಲ್ಲಿ ಐನ್‌ಸ್ಟೈನರಂಥ ಮಹಾಮತಿಗೂ ಅದರ ಕಾವು ತಟ್ಟದಿರಲಿಲ್ಲ. ಅನೇಕ ಮಂದಿ ಯೆಹೂದ್ಯ ವಿದ್ಯಾರ್ಥಿಗಳು ಇವರನ್ನು ಕಂಡು ಯೂರೋಪ್ ಖಂಡದ ವಿವಿಧ ಪ್ರದೇಶಗಳಲ್ಲಿ ಹರಡಿ ಹಂಚಿಹೋಗಿದ್ದ ತಮ್ಮ ಜನಾಂಗದವರು ಅನುಭವಿಸುತ್ತಿದ್ದ ಬವಣೆ ಕೋಟಲೆಗಳನ್ನು ಯಥಾವತ್ತಾಗಿ ವಿವರಿಸುತ್ತಿದ್ದರು. ಇಂಥ ವರ್ಣನೆಗಳಲ್ಲಿ ಐನ್‌ಸ್ಟೈನರಿಗೆ ಕಂಡದ್ದು ಮಾನವ ಮನಸ್ಸಿನಲ್ಲಿಯೇ ಬೆಸೆದುಕೊಂಡಿದ್ದ ರಾಕ್ಷಸಪ್ರವೃತ್ತಿಯ ಪ್ರಕಟಿತ ರೂಪ. ಇಂದು ಅದರ ಪ್ರಕೋಪಕ್ಕೆ ಯೆಹೂದ್ಯರು ಎದುರಾಗಬಹುದು ; ನಾಳೆ ಬೇರೊಂದು ಜನಾಂಗದವರು ಬಲಿ ಆಗಬಹುದು. ಇಂಥ ಯಾವುದೇ ದುಷ್ಟ ಪ್ರವೃತ್ತಿಯನ್ನು ಇವರು ಅನುಮೋದಿಸದಿದ್ದರೂ ಮಾನವ ಇದರಿಂದ ಪೂರ್ಣ ಮುಕ್ತನಾದಾನೆಂದೇನೂ ಭಾವಿಸಿರಲಿಲ್ಲ.

## ಮರಳಿ ಮಾತೃಸಂಸ್ಥೆಗೆ

ಐನ್‌ಸ್ಟೈನರ ನಿರ್ಧಾರಯುತ ಪ್ರಬಂಧ ಪ್ರಕಟವಾಗುವ ಅದೇ ಮೊದಲು, ೧೯೦೫ರಲ್ಲಿ, ಸಾಪೇಕ್ಷತಾ ಸಿದ್ಧಾಂತದ ಸಮಸ್ತ ಘಟಕಗಳೂ ಪ್ವಾನ್‌ಕ್ವಾರೇ ವಶದಲ್ಲಿದ್ದುವೆಂದು ಡೀ ಬ್ರಾಗ್ಲೀ ಹೇಳಿದ್ದಾರೆ. ಹಾಗಾದರೆ ಪ್ವಾನ್‌ಕ್ವಾರೇ ಸಾಪೇಕ್ಷತೆಯನ್ನು ಅಭಿವರ್ಧಿಸುವ ಕಾರ್ಯವನ್ನು ಐನ್‌ಸ್ಟೈನರಿಗೆ ಬಿಟ್ಟುಕೊಟ್ಟುದರ ರಹಸ್ಯವೇನು ? ಅವರು ಅತಿ ಮಡಿವಂತ ಶುದ್ಧ ಗಣಿತವಿದರಾಗಿದ್ದು ಭೌತಸಿದ್ಧಾಂತಗಳ ಬಗೆಗೆ ಸಂದೇಹ ಸ್ವಭಾವದವರಾಗಿದ್ದುದರಿಂದ ವಿರುದ್ಧ ವಿಧಾನಗಳ ನಡುವೆ ಯಾವುದನ್ನು ಆಯಬೇಕು ಎಂಬುದನ್ನು ನಿರ್ಧರಿಸಲು ಅಸಮರ್ಥರಾಗಿದ್ದರು. ಇದೇ ಈ ರಹಸ್ಯದ ಕಾರಣ. ಹೀಗಾಗಿ ಆ ಫ್ರೆಂಚ್ ಮಹಾಮತಿಯ [ಪ್ವಾನ್‌ಕ್ವಾರೇ] ಪ್ರಗಲ್ಭ ಗಣಿತಜ್ಞಾನದೊಡನೆ ಹೋಲಿಸಿದಾಗ ತೀರ ಅಪ್ರಬುದ್ಧ ಸ್ಥಿತಿಯಲ್ಲಿದ್ದ, ಆಗ ಕೇವಲ ಇಪ್ಪತ್ತೈದು ವರ್ಷ ವಯಸ್ಸಿನವರಾಗಿದ್ದ, ತರುಣ ಆಲ್ಬರ್ಟ್ ಐನ್‌ಸ್ಟೈನ್ ಅವರಿಗಿಂತ ಮೊದಲೇ ಒಂದು ಸಂಶ್ಲೇಷಣೆಯನ್ನು ತಲಪುವುದು ಸಾಧ್ಯವಾಯಿತು. ಈ ಸಂಶ್ಲೇಷಣೆ ಇವರ ಪೂರ್ವಜರ ಸಮಸ್ತ ಆಂಶಿಕ ಪ್ರಯತ್ನಗಳನ್ನೂ ಉಪಯೋಗಿಸುತ್ತ ಮತ್ತು ಸಮರ್ಥಿಸುತ್ತ ಎಲ್ಲ ತೊಡಕುಗಳನ್ನೂ ಒಮ್ಮೆಗೇ ಗುಡಿಸಿ ಝಾಡಿಸಿ ಒಗೆದುಬಿಟ್ಟಿತು. ಭೌತವಾಸ್ತವತೆಯ ಬಗೆಗಿನ ಪ್ರಗಲ್ಭ ಅಂತರ್ಬೋಧೆಯಿಂದ ಮಾರ್ಗದರ್ಶಿತವಾದ ತೀವ್ರ ಚಟುವಟಿಕೆಯ ಮಹಾಸಿದ್ಧಿ ಇದು.

ಜಾನ್ ಎಲ್. ಸಿಂಗ್

ಮಾರ್ಸೆಲ್ ಗ್ರಾಸ್‌ಮ್ಯಾನ್ ಆಗ (೧೯೧೧-೧೨) ಝೂರಿಕ್ಕಿನ ಪಾಲಿಟೆಕ್ನಿಕ್ಕಿನಲ್ಲಿ ಗಣಿತ ಪ್ರಾಧ್ಯಾಪಕರಾಗಿದ್ದರು. ಏನಾದರೂ ಮಾಡಿ ಐನ್‌ಸ್ಟೈನರನ್ನು ತಮ್ಮ ಸಂಸ್ಥೆಗೆ ಸೇರಿಸಿಕೊಳ್ಳ ಬೇಕೆಂಬುದು ಇವರ ಹಂಬಲ. ಪಾಲಿಟೆಕ್ನಿಕ್ಕಿನ ಆಡಳಿತೆಯವರು ಐನ್‌ಸ್ಟೈನರ ಅರ್ಹತೆಯನ್ನು ಖಾತ್ರಿಮಾಡಿಕೊಳ್ಳಲೋಸ್ಕರ ಹಲವು ಪ್ರಸಿದ್ಧ ವಿಜ್ಞಾನಿಗಳಿಗೆ ಅವರ ಅಭಿಪ್ರಾಯ ಕೋರಿ ರಹಸ್ಯ ಪತ್ರ ಬರೆದರು.

ಮೇರಿ ಕ್ಯೂರಿ (ಅಥವಾ ಮದಾಮ್ ಕ್ಯೂರಿ, ೧೮೬೭-೧೯೩೪. ಸುಪ್ರಸಿದ್ಧ ರಸಾಯನವಿಜ್ಞಾನಿ, ೧೯೦೩ರ ನೊಬೆಲ್ ಪ್ರಶಸ್ತಿ ಪುರಸ್ಕೃತೆ) ಸೊಗಸಾದ ಶಿಫಾರಸು ಬರೆದರು : "ಆಧುನಿಕ ಸೈದ್ಧಾಂತಿಕ ಭೌತವಿಜ್ಞಾನ ಕುರಿತು ಐನ್‌ಸ್ಟೈನ್ ಪ್ರಕಟಿಸಿರುವ ಕೃತಿಗಳನ್ನು ನಾನು ಬಲು ಮೆಚ್ಚಿಕೊಂಡಿದ್ದೇನೆ. ಅಲ್ಲದೆ, ಗಣಿತೀಯ ಭೌತವಿಜ್ಞಾನಿಗಳೆಲ್ಲರೂ ಈ ಕೃತಿಗಳು ಅತ್ಯುನ್ನತ ದರ್ಜೆಯವಾಗಿವೆ ಎನ್ನುವು ದರಲ್ಲಿ ಒಮ್ಮತದವರಾಗಿರುವರೆಂದು ತಿಳಿದೂ ಇದ್ದೇನೆ. ಬ್ರಸ್ಸೆಲ್ಸಿನ ವಿಜ್ಞಾನ ಅಧಿವೇಶನಕ್ಕೆ ಹೋಗಿದ್ದೆ. ಐನ್‌ಸ್ಟೈನ್ ಕೂಡ ಅದರಲ್ಲಿ ಪಾಲ್ಗೊಂಡಿದ್ದರು. ಅಲ್ಲಿ ನನಗೆ ಇವರ ಭಾವನೆಗಳ ಸ್ಪಷ್ಟತೆ, ಪುರಾವೆಗಳ ಹರವು ಮತ್ತು ವಿದ್ವತ್ತಿನ ಗಭೀರತೆ ಇವನ್ನು ಕಂಡುಕೊಳ್ಳುವುದು ಸಾಧ್ಯ ವಾಯಿತು. ಇವರಿನ್ನೂ ತರುಣರಾಗಿರುವರೆಂಬುದನ್ನು ಪರಿಗಣಿಸಿದ್ದಾದರೆ ಇವರ ಸುತ್ತ ಎಷ್ಟೋ ಆಶಯಗಳನ್ನು ಹೆಣೆಯಬಹುದು, ಮತ್ತು ಇವರಲ್ಲಿ ಭವಿಷ್ಯದ ಅಗ್ರಮಾನ್ಯ ಸಿದ್ಧಾಂತಿಗಳ ಪೈಕಿ ಒಬ್ಬರನ್ನು ಗುರುತಿಸಬಹುದು."

ಶ್ರೇಷ್ಠ ಗಣಿತವಿದ, ಮತ್ತು ಸಾಪೇಕ್ಷತಾಸಿದ್ಧಾಂತದ ಯೋಗ್ಯತೆಯನ್ನು ಗುರುತಿಸಿದ ಮೊದಲಿ ಗರ ಪೈಕಿ ಒಬ್ಬರಾಗಿದ್ದ ಆನ್ರೀ ಪ್ವಾನ್‌ಕ್ವಾರೇ (೧೮೫೪-೧೯೧೨. ) ಮುಕ್ತ ಮನಸ್ಸಿನಿಂದ ಐನ್ ಸ್ಟೈನರ ಹಿರಿಮೆಯನ್ನು ಹೊಗಳಿದರು : "ನಾನು ಎಂದೂ ಕಂಡಂಥ ಅತ್ಯಂತ ಸ್ವತಂತ್ರಚಿಂತನ ಶೀಲರ ಪೈಕಿ ಐನ್‌ಸ್ಟೈನ್ ಒಬ್ಬರು. ಇವರಿನ್ನೂ ಯುವಕರು. ಹಾಗಿದ್ದರೂ ತಮ್ಮ ಕಾಲದ ವಿಜ್ಞಾನಿ ಗಳ ಮುಂಚೂಣಿಯಲ್ಲಿ ಸ್ವಂತ ಯೋಗ್ಯತೆಯಿಂದ ಇವರೊಂದು ಪರಮಗೌರವಾನ್ವಿತ ಸ್ಥಾನ ಗಳಿಸಿ ಕೊಂಡಿದ್ದಾರೆ."

ಪಾಲಿಟೆಕ್ನಿಕ್ಕಿನಿಂದ ಅಧಿಕೃತ ಆಹ್ವಾನಪತ್ರ ಐನ್‌ಸ್ಟೈನರಿಗೆ ಹೋಯಿತು. ಆದರೆ ಆ ವೇಳೆ ಗಾಗಲೇ ಇವರ ಖ್ಯಾತಿ ವಿಜ್ಞಾನವಲಯದಲ್ಲಿ ಅಂತಾರಾಷ್ಟ್ರೀಯವಾಗಿತ್ತು. ಇವರ ಹೆಸರಿನ ಸುತ್ತ ನಿಗೂಢ ಪ್ರಭಾವಲಯ ಆವರಿಸಿತ್ತು. ಹೀಗಾಗಿ ಯೂರೋಪಿನ ಬೇರೆ ಬೇರೆ ವಿಶ್ವವಿದ್ಯಾಲಯಗಳು ಇವರನ್ನು ತಮ್ಮಲ್ಲಿಗೆ ಸೆಳೆದುಕೊಳ್ಳಲು ತವಕಿಸುತ್ತಿದ್ದುವು. ಆದರೆ ಐನ್‌ಸ್ಟೈನ್ ದಂಪತಿಗಳ ಒಲವಿದ್ದುದು ಝೂರಿಕ್ಕಿನ ಪಾಲಿಟೆಕ್ನಿಕ್ಕನ್ನು ಸೇರುವುದರಲ್ಲಿಯೇ—ಅಲ್ಲಿ ಇವರು ಓದಿ ಬೆಳೆದು ದೊಡ್ಡವರಾಗಿದ್ದರು. ಅಲ್ಲಿಯ ಜನ ಮತ್ತು ನಿಸರ್ಗ ಇವರಿಗೆ ಆತ್ಮೀಯವಾಗಿದ್ದುವು.

೧೯೧೨ ಅಕ್ಟೋಬರಿನಲ್ಲಿ ಐನ್‌ಸ್ಟೈನ್ ಝೂರಿಕ್ ಪಾಲಿಟೆಕ್ನಿಕ್ಕನ್ನು ಪ್ರಾಧ್ಯಾಪಕರಾಗಿ ಸೇರಿ ದರು. ಒಮ್ಮೆ ವಿದ್ಯಾರ್ಥಿಯಾಗಿ ಪ್ರವೇಶ ದೊರೆಯದಿದ್ದ, ಮುಂದೆ ವಿದ್ಯಾರ್ಥಿಯಾಗಿದ್ದಾಗ ವಿಶೇಷ ಪೋಷಣೆ ಏನನ್ನೂ ಪಡೆಯದಿದ್ದ, ಬಳಿಕ ಅಲ್ಲಿಯೇ ಉದ್ಯೋಗಾರ್ಥಿಯಾಗಿ ಕೈಚಾಚಿ ದಾಗ ಅದು ಲಭಿಸಿರದಿದ್ದ ಆ ಮಾತೃಸಂಸ್ಥೆಯಲ್ಲಿ, ಈಗ ಇವರು ಹೆಮ್ಮೆಯ ಪುತ್ತಳಿಯಾಗಿ ಶೋಭಿಸಿದರು. ನಿಜ, ವೃತ್ತಿ ನಿಷ್ಠೆಯೇ ಸಂತೃಪ್ತಿಯ ನೆಲೆ ಮತ್ತು ಸೆಲೆ.

ಸಂದದಿನಗಳ ನೆನೆದು ಪರಿತಪಿಸುವವ ಮೂರ್ಖ
ಮುಂದೆಬಹ ಕಾಲವನು ಕಾಯುವವ ಶತಮೂಢ

ಇಂದೊಂದೆ ನಿಜವೆಂದು ಋಜುಬದುಕ ಬಾಳುವವ
ವಂದ್ಯ ಸಮಚಿತ್ತ ಉತ್ಸಾಹಿಕಾಣ್ ಅತ್ರಿಸೂನು

ಆಸ್ಟ್ರಿಯಾ ಸರ್ಕಾರದ ಸೇವೆಯಿಂದ (ಅಂದರೆ ಪ್ರಾಹಾ ವಿಶ್ವವಿದ್ಯಾಲಯದಿಂದ) ಝೂರಿಕ್ಕಿಗೆ ನಿರ್ಗಮಿಸುವ ಮುನ್ನ ಐನ್‌ಸ್ಟೈನ್ ಕೆಲವೊಂದು ಕಾಗದ ದಾಖಲೆಗಳನ್ನು ಪೂರ್ತಿಗೊಳಿಸ ಬೇಕಾಗಿತ್ತು. ಇಂಥ ವಿಚಾರಗಳಲ್ಲಿ ತೀರ ಉದಾಸೀನ ಸ್ವಭಾವದವರಾಗಿದ್ದ ಇವರು ಈ 'ಅಗತ್ಯ ಪೂರೈಕೆ'ಯನ್ನು ಈಡೇರಿಸಲೇ ಇಲ್ಲ. ಹೀಗಾಗಿ ಕಛೇರಿಯ ಕಡತದಲ್ಲಿ, "ಐನ್‌ಸ್ಟೈನ್—ಕೊನೆ ಗೊಳ್ಳಲಿಲ್ಲ" ಎಂಬ ಷರಾ ಉಳಿದಿತ್ತು. ಹಲವಾರು ವರ್ಷಗಳ ತರುವಾಯ, ಆಗ ಪ್ರಪಂಚ ಪ್ರಸಿದ್ಧ ವಿಜ್ಞಾನಿ, ಐನ್‌ಸ್ಟೈನ್ ಪ್ರಾಹಾಕ್ಕೆ ಆಗಮಿಸಿದಾಗ ಈ 'ತಪ್ಪಿ'ನ ಸುಳುಹು ಇವರಿಗೆ ತಿಳಿಯಿತು. ಒಡನೆ ಇವರು ಆ ಕಛೇರಿಗೆ ಹೋಗಿ ಸಂಬಂಧಿಸಿದ ಗುಮಾಸ್ತನಿಗೆ ತಪ್ಪೊಪ್ಪಿಗೆ ಸಲ್ಲಿಸಿ ದಾಖಲೆ ಕಾಗದಗಳನ್ನು ಪೂರ್ತಿಗೊಳಿಸಿದರು. ಕಡತದಲ್ಲಿ ಬದಲಾದ ಷರಾ ಹೀಗಿತ್ತು : "ಐನ್‌ಸ್ಟೈನ್—ಕೊನೆಗೊಂಡರು."

ಝೂರಿಕ್ಕಿನ ಪಾಲಿಟೆಕ್ನಿಕ್ಕಿನಲ್ಲಿದ್ದಾಗ (೧೯೧೨-೧೪) ಐನ್‌ಸ್ಟೈನರ ಪ್ರತಿಭೆ ಪೂರ್ಣವಾಗಿ ವಿಕಾಸಗೊಂಡಿತು. ೧೯೧೫ರಲ್ಲಿ ಪ್ರಕಟವಾದ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತ ಅಂತಿಮ ರೂಪ ತಳೆದದ್ದು ಈ ಅವಧಿಯಲ್ಲೆ. ಈ ಹಿಂದೆ ಹೇಳಿದಂತೆ ಇವರಿಗಿಲ್ಲಿ ಗ್ರಾಸ್‌ಮ್ಯಾನರಿಂದ ಗಣಿತ ಸಹಾಯ ಒದಗಿತು. ಇದೊಂದು ಯೋಗಾಯೋಗ.

## ಪ್ಲ್ಯಾಂಕರಿಂದ ಬಂದ ಕರೆ

ಬರ್ನ್ ನಗರದಲ್ಲಿ ಐನ್‌ಸ್ಟೈನ್ ವಾಸಿಸುತ್ತಿದ್ದ ವಠಾರಕ್ಕೆ ಹೋಗಿದ್ದ ಒಬ್ಬ ವಿದ್ಯಾರ್ಥಿ ಹೀಗೆ ಬರೆದಿದ್ದಾನೆ : "ತಮ್ಮ ಅಧ್ಯಯನ ಕೊಠಡಿಯಲ್ಲಿ ಅವರು ಗಣಿತಸೂತ್ರಗಳು ತುಂಬಿ ಬಿರಿಯುತ್ತಿದ್ದ ಕಾಗದಗಳ ರಾಶಿ ನಡುವೆ ಮುಳುಗಿ ಹೋಗಿದ್ದರು. ಎಡಗೈಯಲ್ಲಿ ಕಿರಿ ಮಗನನ್ನು ಎತ್ತಿಕೊಂಡಿದ್ದರು. ಬಲಗೈಯಲ್ಲಿ ಬರೆಯುತ್ತಿದ್ದರು. ಅದೇ ವೇಳೆ ಅಲ್ಲೇ ಇಟ್ಟಿಗೆಗಳ ಜೊತೆ ಆಟವಾಡುತ್ತಿದ್ದ ಹಿರಿ ಮಗ ಆಲ್ಬರ್ಟ್ ಕೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರವನ್ನು ಹೇಳುತ್ತಿದ್ದರು. 'ಕೊಂಚ ತಾಳು, ನಾನು ಹೆಚ್ಚು ಕಡಿಮೆ ಕೊನೆಯ ಹಂತಕ್ಕೆ ಬಂದಿದ್ದೇನೆ.' ಮಕ್ಕಳನ್ನು ಸ್ವಲ್ಪ ಹೊತ್ತು ನನ್ನ ವಶಕ್ಕೆ ಬಿಟ್ಟು ಅವರು ತಮ್ಮ ಕಾರ್ಯ ಮುಂದುವರಿಸಿದರು."

ರೊನಾಲ್ಡ್ ಕ್ಲಾರ್ಕ್

ಎಲ್ಲಿ ಪ್ರಪಂಚ ನಮ್ಮ ವೈಯಕ್ತಿಕ ಆಸೆ ಆಕಾಂಕ್ಷೆಗಳ ರಂಗಭೂಮಿ ಆಗುವುದು ಕೈದಾಗುವುದೊ, ಎಲ್ಲಿ ನಾವು ಇದರೆದುರು ಮುಕ್ತಜೀವಿಗಳಾಗಿ ಇದನ್ನು ಮೆಚ್ಚುತ್ತ ಪ್ರಶ್ನಿಸುತ್ತ ಮತ್ತು ವೀಕ್ಷಿಸುತ್ತ ನಿಲ್ಲುವೆವೊ, ಅಲ್ಲಿ ನಾವು ಕಲೆಯ ಮತ್ತು ವಿಜ್ಞಾನದ ಪ್ರಪಂಚ ಪ್ರವೇಶಿಸಿರುತ್ತೇವೆ. ನೋಡಿದ್ದನ್ನೂ ಅನುಭವಿಸಿದ್ದನ್ನೂ ತರ್ಕಶಾಸ್ತ್ರದ ಪರಿಭಾಷೆಯಲ್ಲಿ ಚಿತ್ರಿಸಿದ್ದಾದರೆ ಆಗ ನಾವು ವಿಜ್ಞಾನದಲ್ಲಿ ಉದ್ಯುಕ್ತ ರಾಗಿರುತ್ತೇವೆ. ಜಾಗ್ರತ ಮನಸ್ಸಿಗೆ ಅಪ್ರವೇಶ್ಯವಾಗುವ ಅಂತರ್ಬೋಧೆಯಿಂದ ಅರ್ಥಪೂರ್ಣ ವಾದದ್ದೆಂಬುದಾಗಿ ಪರಿಗಣಿಸಲ್ಪಡುವ ರೂಪಗಳ ಮೂಲಕ ಅದನ್ನು ಸಂವಹನಿಸಿದ್ದಾದರೆ ಆಗ ನಾವು ಕಲೆಯಲ್ಲಿ ಉದ್ಯುಕ್ತರಾಗಿರುತ್ತೇವೆ. ವೈಯಕ್ತಿಕ ಕಾಳಜಿ ಮತ್ತು ಸಂಕಲ್ಪಗಳಿಗೆ ಅತೀತವಾದ ಆ ಯಾವುದೋ ಒಂದರ ಬಗೆಗಿನ ಸಪ್ರೇಮನಿಷ್ಠೆಯೇ ಇವೆರಡಕ್ಕೂ ಸಾಮಾನ್ಯವಾದದ್ದು.

ಐನ್‌ಸ್ಟೈನ್

ಜರ್ಮನಿಯ ಸಾರ್ವಭೌಮ ಎರಡನೆಯ ಕೈಸರ್ ವಿಲ್‌ಹೆಲ್ಮ್ (೧೮೫೯-೧೯೪೧), ತನ್ನ ರಾಜ್ಯ ಬಲಿಷ್ಠವಾಗಬೇಕಾದರೆ ಅದರ ವಿಜ್ಞಾನ ತಳಹದಿ ಸುಭದ್ರವಾಗುವುದು ಅತ್ಯಗತ್ಯ, ಅನಿವಾರ್ಯ ಕೂಡ ಎಂದು ದೃಢವಾಗಿ ನಂಬಿದ್ದ. ಈ ರಾಷ್ಟ್ರದ ವಿಜ್ಞಾನಿಗಳ ನೇತಾರರೂ ಸ್ವತಃ ವಿಜ್ಞಾನ ಸೀಮಾಪುರುಷರೂ ಆಗಿದ್ದ ಮ್ಯಾಕ್ಸ್ ಪ್ಲ್ಯಾಂಕರಲ್ಲಿ ವಿಲ್‌ಹೆಲ್ಮನಿಗೆ ಅಪಾರ ವಿಶ್ವಾಸ ಅಭಿಮಾನ ಗಳಿದ್ದುವು. ಪ್ರಪಂಚದ ಶ್ರೇಷ್ಠ ವಿಜ್ಞಾನಿಗಳನ್ನು ಆಕರ್ಷಿಸಬಲ್ಲ ದೇಗುಲ ಬರ್ಲಿನ್ ಆಗುವಂತೆ ಯೋಜನೆಯನ್ನು ರೂಪಿಸಿ ನಿರ್ವಹಿಸಬೇಕೆಂದು ಅವರಿಗೆ ಪ್ರೋತ್ಸಾಹ ನೀಡಿದ.

ತರುಣ ವಿಜ್ಞಾನಿಗಳ ರಾಜನಾದ ಐನ್‌ಸ್ಟೈನರನ್ನೇ ಬರ್ಲಿನ್ನಿಗೆ ಕರೆತರಬೇಕೆಂಬುದು ಪ್ಲ್ಯಾಂಕರ ಮೊದಲ ಆಸೆ. ೧೯೧೩ರ ಬೇಸಗೆಯಲ್ಲಿ ಖುದ್ದು ಇವರೇ ಝ್ಯೂರಿಕ್ಕಿಗೆ ಹೋಗಿ ಅವರಿಗೆ ಮುಕ್ತ ಆಹ್ವಾನ ನೀಡಿದರು. ಇವರೊಡ್ಡಿದ ಆಕರ್ಷಣೆಗಳೇನೂ ಸಾಧಾರಣ ಮಟ್ಟದವಾಗಿರಲಿಲ್ಲ : ಸುಪ್ರಸಿದ್ಧ ರಾಯಲ್ ಪ್ರಶ್ಯನ್ ಅಕಾಡಮಿ ಆಫ್ ಸೈನ್ಸಿನಲ್ಲಿ ಚುನಾಯಿತ ಪ್ರಾತಿನಿಧ್ಯ, ಭರ್ಜರಿ ಗೌರವ ಸಂಭಾವನೆ, ಪ್ರಾಧ್ಯಾಪಕ ಅಂತಸ್ತು, ಶೀಘ್ರವೇ ಸ್ಥಾಪಿತವಾಗಲಿದ್ದ ಕೈಸರ್ ವಿಲ್‌ಹೆಲ್ಮ್ ಇನ್‌ಸ್ಟಿಟ್ಯೂಟಿನ ವಿಜ್ಞಾನ ಸಂಶೋಧನ ಶಾಖೆಯ ನಿರ್ದೇಶಕತ್ವ, ಜರ್ಮನಿಯ ವರಿಷ್ಠ ವಿಜ್ಞಾನಿ ಗಳೊಡನೆ ನಿಕಟ ಸಂಪರ್ಕ, ಇತ್ಯಾದಿ. ಇನ್ನು ಹೊಣೆಗಾರಿಕೆ ? ಪಾಠ ಮಾಡಬಹುದು, ಮಾಡದಿರ ಬಹುದು, ಪೂರ್ಣಕಾಲವೂ ಇವರಿಗೆ ಪ್ರಿಯವಾದ ಸಂಶೋಧನಕಾರ್ಯದಲ್ಲಿಯೇ ಮಗ್ನರಾಗಿರ ಬಹುದು. ದೇವಾಲಯದಲ್ಲಿ ಪ್ರತಿಷ್ಠಿತ ಮೂರ್ತಿಯ ಹೊಣೆಗಾರಿಕೆ ಏನು ? ನಿಷ್ಕ್ರಿಯಾವಂತ ದೇವರನ್ನು ಮನಸಾರೆ ತಿರಸ್ಕರಿಸುತ್ತಿದ್ದ ಕ್ರಿಯಾಶೀಲ ಐನ್‌ಸ್ಟೈನರಿಗೆ ಬಂದ ಆಮಂತ್ರಣ ದೇವತ್ವದ ಸಿಂಹಾಸನ ! ಮಹಾಮಾನವತ್ವಕ್ಕೆ ಸಿಂಹಾಸನ !

ಆತ್ಮೀಯ ನಗರ ಝ್ಯೂರಿಕ್. ಇದು ಮುಕ್ತ ವಾತಾವರಣದ ಬೀಡು. ಪತ್ನಿ ಮಿಲೇವಾರಿಗೆ ಮೆಚ್ಚಿನ ನಾಡು. ಇಲ್ಲಿ ಉದ್ಯೋಗಸ್ವಾಸ್ಥ್ಯ ಒದಗಿದೆ. ಬರ್ಲಿನ್ ಹೀಗಲ್ಲ. ಪರಕೀಯ ಪ್ರಜ್ಞೆಯ ನಗರ. ಮಿಲಿಟರಿವಾದಿಗಳ ನೆಲೆ, ಯೆಹೂದ್ಯದ್ವೇಷಿಗಳ ಗೂಡು. ಅಲ್ಲಿ ವೃತ್ತಿಸಂತೃಪ್ತಿ ಲಭಿಸೀತೇ? ಆಮಿಷಗಳು ಎಷ್ಟೇ ಆಕರ್ಷಕವಾಗಿದ್ದರೂ ತಾನು ಯಾವುದೇ ಬಂಧನಕ್ಕೆ ಯಾ ಅನುಜ್ಞೆಗೆ ಯಾ ಷರತ್ತಿಗೆ ಒಳಪಟ್ಟು ಸಂಶೋಧನೆ ಸಾಗಿಸಬಲ್ಲೆನೇ ? "ಭಾವನೆಗಳು ದೇವರಿಂದ ಬರುತ್ತವೆ" ಎಂಬುದು ಐನ್‌ಸ್ಟೈನರ ಪ್ರಸಿದ್ಧ ಹೇಳಿಕೆ. ಅರಿಯದ ತಾಣದಲ್ಲಿ ಈ 'ದೇವರು' ವರ ಕರುಣಿಸಿಯಾನೇ ? ಇದೇ ವೇಳೆಗೆ ಐನ್‌ಸ್ಟೈನ್ ದಾಂಪತ್ಯಸಂಬಂಧ ಅತಿ ದುರ್ಬಲ ಸ್ಥಿತಿಯಲ್ಲಿತ್ತು : ಜಿಗುಟು ಮತ್ತು ಹಠಮಾರಿ ಸ್ವಭಾವದ ಮಿಲೇವಾ ಒಂದು ದಿವಸವೂ ಈ ಮಹಾಪುರುಷನಿಗೆ ನೆಮ್ಮದಿಯ ಬಾಳನ್ನು ಒದಗಿಸಲಿಲ್ಲ. ಆಂತರಿಕ ವೇದನೆಯೇ ಸೃಜನಶೀಲ ಸಂವೇದನೆಯ ಪ್ರೇರಕ ವಾಗಿರಬಹುದೇ !

ಐನ್‌ಸ್ಟೈನರಿಗೆ ಬರ್ಲಿನ್ನಿನಲ್ಲಿ ಬೇರೊಂದು ವಿಧವಾದ ಪ್ರಲೋಭನೆ ಇತ್ತು. ಇವರ ತಂದೆಯ ಜ್ಞಾತಿ ರೂಡಾಲ್ಫ್ ಐನ್‌ಸ್ಟೈನ್ ಎಂಬ ವಾಣಿಜ್ಯೋದ್ಯಮಿ ಅಲ್ಲಿದ್ದರು. ಶ್ರೀಮತಿ ರೂಡಾಲ್ಫರು, ಪೌಲೀನರ (ಐನ್‌ಸ್ಟೈನರ ತಾಯಿ) ಸೋದರಿ. ಹೀಗೆ ಈ ಕುಟುಂಬ ಐನ್‌ಸ್ಟೈನರಿಗೆ ಉಭಯ ಪಕ್ಷಗಳಿಂದಲೂ ತೀರ ಸಮೀಪವಾಗಿತ್ತು. ರೂಡಾಲ್ಫರ ಮಗಳು ಎಲ್ಸಾ ಈಗ ವಿಧವೆಯಾಗಿ ತನ್ನಿಬ್ಬರು ಹೆಣ್ಣುಮಕ್ಕಳೊಂದಿಗೆ ತವರು ಸೇರಿದ್ದರು. ಈಕೆ ಹುಡುಗಿ ಆಗಿದ್ದಾಗ ಹಿರಿಯ ಐನ್‌ಸ್ಟೈನ್-ಕುಟುಂಬದ ಮ್ಯೂನಿಕ್ ಬಿಡಾರಕ್ಕೆ ಆಗಾಗ ಭೇಟಿ ಕೊಡುವುದಿತ್ತು. ಆ ದಿನಗಳಂದು ಕಿರಿಯ ಆಲ್ಬರ್ಟ್ ಮತ್ತು ಎಲ್ಸಾ ಒಟ್ಟಿಗೆ ಆಡಿ ಓಡಿ ನಲಿದಿದ್ದರು. ಈಕೆಯ ಸೌಮ್ಯ ಹಾಗೂ ಸ್ನೇಹಶೀಲ ವರ್ತನೆ ಅಣ್ಣ ಆಲ್ಬರ್ಟನ ಮೇಲೆ ವಿಶೇಷ ಪ್ರಭಾವ ಬೀರಿತ್ತು. ಬರ್ಲಿನ್ನಿನಲ್ಲಿ ಈ



ಪತ್ನಿ ಮಿಲೇವಾ ಜೊತೆ ಆಲ್ಬರ್ಟ್ (೧೯೧೧)



ಪ್ರಥಮ ಪುತ್ರ ಹ್ಯಾನ್ಸ್ ಆಲ್ಬರ್ಟ್ ಜೊತೆ ಐನ್‌ಸ್ಟೈನ್ ದಂಪತಿಗಳು (೧೯೦೪)



ಎಡುವರ್ಡ್, ಮಿಲೇವಾ, ಹ್ಯಾನ್ಸ್ ಆಲ್ಬರ್ಟ್ (೧೯೧೪)

ಬರ್ನ್‌ನಲ್ಲಿ (೧೯೦೫)



ಬರ್ಲಿನ್ನಿನಲ್ಲಿ (೧೯೧೭)





ಮ್ಯಾಕ್ಸ್ ಪ್ಲ್ಯಾಂಕ್ (ಸು. ೧೯೦೦)



ಎರಡನೆಯ ಪತ್ನಿ ಎಲ್ಸಾ ಜೊತೆ ೧೯೪೦ರ ವೇಳೆಗೆ

ಟೆಲ್ ಅವೀವ್ ನಗರದ
ಪುರಸಭಾ ಸದಸ್ಯರ ಜೊತೆ (೧೯೨೩)



ನೀಲ್ಸ್ ಬೋರ್ ಜೊತೆ (ಸು. ೧೯೨೭)



ಸುಸಂಸ್ಕೃತ ಕುಟುಂಬದ ಒಡನಾಟ ತನಗೆ ಲಭಿಸೀತು, ಕೌಟುಂಬಿಕ ಬೇಗುದಿಯಲ್ಲಿ ಬೆಂದ ತನಗೆ ಇದರಿಂದ ಸಾಂತ್ವನ ದೊರೆತೀತು ಎಂಬುದಾಗಿ ಇವರಿಗೆ ಅನ್ನಿಸಿದ್ದರೆ ಆಶ್ಚರ್ಯವಿಲ್ಲ.

ಏಪ್ರಿಲ್ ೧೯೧೪ರಲ್ಲಿ ಐನ್‌ಸ್ಟೈನ್ ಕುಟುಂಬಸಮೇತ ಬರ್ಲಿನ್ ಸೇರಿ ಹೊಸ ಹುದ್ದೆ ವಹಿಸಿ ಕೊಂಡರು. ವೃತ್ತಿಯಲ್ಲಿ ಇವರೀಗ ಶಿಖರಾಗ್ರ ತಲಪಿದ್ದರು. ವಿಜ್ಞಾನಪ್ರಪಂಚದಲ್ಲಿ ಇವರ ಖ್ಯಾತಿ ಅಂತಾರಾಷ್ಟ್ರೀಯವಾಗಿತ್ತು. ಆದರೆ ಸಾರ್ವಜನಿಕ ವಲಯದಲ್ಲಿ ಮಾತ್ರ ಇವರಿನ್ನೂ ಅಪರಿಚಿತ ರಾಗಿಯೇ ಇದ್ದರು.

ಐನ್‌ಸ್ಟೈನ್-ಕುಟುಂಬ ಬರ್ಲಿನ್ ಸೇರಿದ ತರುಣದಲ್ಲಿಯೇ ಇವರ ದಾಂಪತ್ಯ ಒಡೆಯಿತು. ಇಬ್ಬರು ಗಂಡು ಮಕ್ಕಳ ಜೊತೆ—ಹ್ಯಾನ್ಸ್ ಆಲ್ಬರ್ಟ್ (೧೯೦೪-೭೩) ಮತ್ತು ಎಡ್ವರ್ಡ್ (೧೯೧೦-೬೫)—ಮಿಲೇವಾ ಝ್ಯೂರಿಕ್ಕಿಗೆ ಹಿಂತಿರುಗಿದರು. ಇವರಿಗೆ ಐನ್‌ಸ್ಟೈನ್ ಪ್ರೀತಿವಿಶ್ವಾಸ ಪೂರ್ವಕವಾಗಿ ಮಾಸಿಕ ಅಶನಾರ್ಥ ಕಳಿಸುತ್ತಿದ್ದರು. ಮಾನಸಿಕ ವ್ಯಾಧಿಯಿಂದ ನರಳುತ್ತಿದ್ದ ಮಿಲೇವಾ ೧೯೪೮ರಲ್ಲಿ ಮಡಿದರು.

# ೪. ಮಾನವೀಯ ಮುಖ

## ಮಿಲಿಟರಿತನದ ಉತ್ಕರ್ಷೆ

> ವ್ಯಕ್ತಿಗಾಗಿ ರಾಷ್ಟ್ರ ನಿರ್ಮಿತವಾದದ್ದೇ ವಿನಾ ರಾಷ್ಟ್ರಕ್ಕಾಗಿ ವ್ಯಕ್ತಿ ಅಲ್ಲ. ಅಂದರೆ ರಾಷ್ಟ್ರ ನಮ್ಮ ಸೇವಕ ಆಗಿರತಕ್ಕದ್ದು. ನಾವು ಅದರ ಗುಲಾಮರಾಗಿರುವುದಲ್ಲ. ಸೇನಾಶಿಕ್ಷಣ ಮತ್ತು ಯುದ್ಧಕ್ರಿಯೆ ಇವು ಗಳಲ್ಲಿ ಭಾಗವಹಿಸುವಂತೆ ರಾಷ್ಟ್ರ ನಮ್ಮನ್ನು ಬಲಾತ್ಕಾರವಾಗಿ ಒತ್ತಾಯಿಸಿದಾಗ ಅದು ಈ ಮೇಲಿನ ಕಟ್ಟಲೆಯನ್ನು—ನೀತಿಸಂಹಿತೆಯನ್ನು—ಅತಿಕ್ರಮಿಸಿರುತ್ತದೆ. ಈ ಗುಲಾಮತನದ ಗೇಯ್ಮೆಯ ಉದ್ದೇಶ ಮತ್ತು ಪರಿಣಾಮ ಏನು ? ಇತರ ದೇಶಗಳ ಜನರನ್ನು ಕೊಲ್ಲುವುದು ಇಲ್ಲವೇ ಅವರ ಅಭಿವರ್ಧನಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪಿಸುವುದು. ಎಂದೇ ಇದು ಅತಿ ಹೇಯವಾದದ್ದು.
>
> ಐನ್‌ಸ್ಟೈನ್

ಬಿಸ್‌ಮಾರ್ಕನ ಆಳ್ವಿಕೆಯ ಕಾಲದಲ್ಲಿ ಪ್ರಶ್ಯನ್ ಮಿಲಿಟರಿತನದ ಕಬಂಧ ಬಾಹುಗಳು ಸರ್ವ ವ್ಯಾಪಿಯಾದುವು. ಒಂದಿಗೇ ಜರ್ಮನ್ ರಾಷ್ಟ್ರೀಯತೆಯ 'ಪುನರುಜ್ಜೀವನ'ವೂ ಆರಂಭ ವಾಯಿತು. ೧೮೮೮ರಲ್ಲಿ ಚಕ್ರವರ್ತಿ ಗದ್ದುಗೆ ಏರಿದ ಎರಡನೆಯ ವಿಲ್‌ಹೆಲ್ಮನ ಆಡಳಿತೆಯಲ್ಲಿ ಈ ಉಗ್ರ ರಾಷ್ಟ್ರೀಯತೆಗೆ ನಂಜಿನ ಕೋರೆದಾಡೆಗಳೂ ಸೇರಿಕೊಂಡುವು. ಪ್ರಪಂಚದಲ್ಲಿ ಜರ್ಮನ್ ಜನಾಂಗದವರೇ—ತಮ್ಮ ಧಮನಿಗಳಲ್ಲಿ ಪರಿಶುದ್ಧ ಆರ್ಯರಕ್ತ ಪ್ರವಹಿಸುತ್ತಿರುವ ನಾರ್ಡಿಕ್ ವಂಶಸ್ಥರೇ—ಪರಮೋತ್ಕೃಷ್ಟ ಮಾನವರು ಎಂಬ ಭಾವವು ಪ್ರಚ್ಛನ್ನವಾಗಿ ರಾಷ್ಟ್ರಕ ರಲ್ಲಿ ಪಸರಿಸುತ್ತಿತ್ತು. ಶಿಕ್ಷಣ ದೇವಾಲಯಗಳ ಅರ್ಚಕರೂ (ಅಂದರೆ ಪ್ರಾಧ್ಯಾಪಕರು) ಸಾಧಾರಣ ವಾಗಿ ಈ ವಿಷ ಅನಿಲದಿಂದ ಕಲುಷಿತರಾಗದಿರಲಿಲ್ಲ.

ಉಗ್ರ ರಾಷ್ಟ್ರೀಯತೆ ಎಂಬುದೊಂದು ದಾನಿನಾನುತನ ನಿಲವು. ಇತರರೊಡನೆ ವ್ಯವಹರಿಸು ವಾಗ ಸ್ವಯಂಚಾಲಿತವಾಗಿ ಪುಟನೆಗೆದು ಮುಂಚೂಣಿಯಲ್ಲಿ ನಿಲ್ಲುವ ಬೇಲಿ. ಇತರರು ಸರ್ವವಿಧ ದಲ್ಲಿಯೂ ತಮಗೆ ಅಡಿಯಾಳುಗಳಾಗಿ—ಎಂದೂ ಸಮಾನರಾಗಿ ಅಲ್ಲ, ಇನ್ನು ಮೇಲಿನವರಾಗು ವುದು ಸಾಧ್ಯವೇ ಇಲ್ಲವಷ್ಟೆ—ಜೈಜೈಕಾರ ಘೋಷಿಸುತ್ತ ಕುರ್ನಿಸಾತ್ ಮಾಡುತ್ತ ನಜರೊಪ್ಪಿಸು ತ್ತಿರಬೇಕೆನ್ನುವ ಅಹಂಭಾವ.

ಸ್ವಿಸ್ ಪ್ರಜೆ ಮತ್ತು ಯೆಹೂದ್ಯ ಮತಾವಲಂಬಿ ಐನ್‌ಸ್ಟೈನ್ ಇಂಥ ಹವೆಯಲ್ಲಿ ಸುಖಿಯಾಗಿದ್ದರೇ ? ತಮ್ಮ ಸಂಶೋಧನೆ ಸಿದ್ಧಿಗಳಿಂದಲೂ ಒಲವು ನಿಲವುಗಳಿಂದಲೂ ಇವರಿಗೀಗ ಪೂರ್ಣ ಆತ್ಮವಿಶ್ವಾಸ ಪ್ರಾಪ್ತವಾಗಿತ್ತು. ಆದ್ದರಿಂದ ಎಲ್ಲಿಯೂ ಇವರು ತಮ್ಮ ವಿಜ್ಞಾನ ವ್ಯಕ್ತಿತ್ವವನ್ನು ಸಮರ್ಥಿಸಿಕೊಳ್ಳಬೇಕಾದ ಪ್ರಮೇಯ ಎದುರಾಗಲಿಲ್ಲ. ಪ್ರಾಧ್ಯಾಪಕರಾಗಿ ಇವರೆಂದೂ ತಮ್ಮ ಅಂತಸ್ತನ್ನು ಮೆರೆಸಲಿಲ್ಲ. ಎಲ್ಲರಿಗೂ ಎಲ್ಲ ವೇಳೆಗಳಲ್ಲಿಯೂ ಸುಲಭವಾಗಿ ಕಾಣಸಿಗುತ್ತಿದ್ದರು. ಅವರ ಸಮಸ್ಯೆಗಳನ್ನು ಅವು ಗಹನವೇ ಇರಲಿ, ಸರಳವೇ ಇರಲಿ, ಶ್ರದ್ಧೆಯಿಂದ ಆಲಿಸಿ ಪರಿಹಾರ ಸೂಚಿಸುತ್ತಿದ್ದರು. ವಿಶೇಷೀಕರಣ (specialization) ಇವರ ದೃಷ್ಟಿಯನ್ನು ಮಬ್ಬುಗೊಳಿಸಿರಲಿಲ್ಲ. ಬದುಕಿನ ಎಲ್ಲ ಚಟುವಟಿಕೆಗಳೂ ಇವರಿಗೆ ಪ್ರಿಯವಾಗಿದ್ದುವು—ಸಾಹಿತ್ಯ, ಸಂಗೀತ, ಕಲೆ, ಸಾಮಾಜಿಕ ಸಮಸ್ಯೆಗಳು, ಮತ ಧರ್ಮ ಯಾವುದೂ ಇವರ ಆಸಕ್ತಿಯ ಪರಿಧಿಯಿಂದ ಹೊರಗಿರಲಿಲ್ಲ. ಇಷ್ಟಿದ್ದರೂ ಕ್ರಮೇಣ ಪರಕೀಯ ಪ್ರಜ್ಞೆ ಇವರನ್ನು ಆವರಿಸಿತು. ಇದಕ್ಕೆ ಮೂರು ಮುಖ್ಯ ಕಾರಣಗಳಿದ್ದುವು.

ಮೊದಲನೆಯದು, ಇವರ ವ್ಯಕ್ತಿತ್ವದ ಸಂರಚನೆಯೇ ಹಾಗಿತ್ತು : 'ನಿಮ್ಮೊಡನಿದ್ದೂ ನಿಮ್ಮಂತಾಗದ' ಸ್ವಭಾವ. ಆ ದಿನಗಳಂದು ಐನ್‌ಸ್ಟೈನರ ಸಂಶೋಧನ ಸಂಗಾತಿಯಾಗಿದ್ದ ಭೌತವಿಜ್ಞಾನಿ ರೂಡಾಲ್ಫ್ ಲ್ಯಾಡೆನ್‌ಬರ್ಗ್ (೧೮೮೨-೧೯೫೨) ಹೀಗೆ ವಿವರಿಸಿದ್ದಾರೆ, "ಅಂದು ಬರ್ಲಿನ್ನಿನಲ್ಲಿ ಎರಡು ಬಗೆಯ ಭೌತವಿಜ್ಞಾನಿಗಳಿದ್ದರು. ಐನ್‌ಸ್ಟೈನ್ ಒಂದು ಕಡೆ, ಉಳಿದೆಲ್ಲರೂ ಇನ್ನೊಂದು ಕಡೆ."

ಸ್ವತಃ ಐನ್‌ಸ್ಟೈನರೇ ತಮ್ಮ ಪದ್ಮಪತ್ರಮಿವಾಂಭಸಿತ್ವವನ್ನು[೨೨] ವರ್ಣಿಸಿದ್ದಾರೆ : "ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಜವಾಬ್ದಾರಿಕೆ ಇವುಗಳ ಬಗ್ಗೆ ನನಗಿರುವ ತೀವ್ರ ಕಳಕಳಿಗೂ ಇತರ ಮನುಷ್ಯರೊಡನೆ ಆಗಲಿ ಮಾನವ ಕುಟುಂಬಗಳ ಜೊತೆ ಆಗಲಿ ನೇರ ಸಂಪರ್ಕ ಗಳಿಸುವುದರ ಆವಶ್ಯಕತೆ ಬಗ್ಗೆ ನನಗಿರುವ ಸ್ಪಷ್ಟ ಅನಾಸ್ಥೆಗೂ ನಡುವೆ ಎದ್ದುಕಾಣುವ ವೈದೃಶ್ಯ ವಿಚಿತ್ರವಾಗಿದೆ. ನಿಜವಾಗಿಯೂ ನಾನು 'ಒಂಟಿ ಹಾದಿಗ.' ನನ್ನ ದೇಶಕ್ಕಾಗಲಿ, ನನ್ನ ಮನೆಗಾಗಲಿ, ನನ್ನ ಸ್ನೇಹಿತರುಗಳಿಗಾಗಲಿ, ಕೊನೆಗೆ ನನ್ನ ಸಮೀಪ ಕುಟುಂಬಸ್ಥರಿಗೇ ಆಗಲಿ ನಾನೆಂದೂ ಪೂರ್ಣ ಹೃದಯದಿಂದ ಸೇರಿದವನಾಗಲಿಲ್ಲ. ಇವೆಲ್ಲ ಬಂಧಸಂಬಂಧಗಳ ನಡುವೆಯೂ ನಾನು ದೂರತ್ವದ ಪ್ರಜ್ಞೆಯನ್ನು ಮತ್ತು ಏಕಾಂತತ್ವದ ಆವಶ್ಯಕತೆಯನ್ನು ಎಂದೂ ಕಳೆದುಕೊಳ್ಳಲಿಲ್ಲ."

ಎರಡನೆಯದು ಸಾಂಸಾರಿಕ ಜೀವನದ ಗೈರುಹಾಜರಿ. ಮನೆಯಲ್ಲಿ ಮಕ್ಕಳಿಲ್ಲ, ಮಡದಿಯೂ ಇಲ್ಲ. ಇವರ ಯೋಗಕ್ಷೇಮದ ಗೊಡವೆ ಗಮನಿಸುವ ಜನರಿಲ್ಲ.

ಮೂರನೆಯದು, ದೇಶದ ರಾಜಕೀಯ ಹವೆ. ಐನ್ (ಅಸಲಿ) ಜರ್ಮನರೆಲ್ಲರೂ, ವಿಜ್ಞಾನಿಗಳನ್ನೂ ಒಳಗೊಂಡಂತೆ, ಉಗ್ರ ರಾಷ್ಟ್ರಪ್ರೇಮಿಗಳು. ಎಂದರೆ ವಿಜ್ಞಾನ, ತರ್ಕ, ಅಂತಾರಾಷ್ಟ್ರೀಯ ದೃಷ್ಟಿಕೋನ ಯಾವುದೇ ಏನೇ ಹೇಳಲಿ ಅದು ಗೌಣ ; ಜರ್ಮನ್ ರಾಷ್ಟ್ರೀಯತೆಯೇ ಪ್ರಧಾನವಾಗಿರುವ ಗುಣ. ಖುದ್ದು ಮ್ಯಾಕ್ಸ್ ಪ್ಲ್ಯಾಂಕ್ ಕೂಡ ಈ ಗುಣದಿಂದ ಹೊರಗಿರಲಿಲ್ಲ. ಈ ರಾಷ್ಟ್ರೀಯತೆಯ ಲಕ್ಷಣಗಳೇನು ? ಮಿಲಿಟರಿ ಶಿಸ್ತು, ಎಲ್ಲದರಲ್ಲಿಯೂ ಬಲು ಅಚ್ಚುಕಟ್ಟುತನ, ಜರ್ಮನ್ ಸರ್ವಶ್ರೇಷ್ಠತೆಯ ಬಗ್ಗೆ ಅಪಾರ ವಿಶ್ವಾಸ, ಶೀತಲ ದಕ್ಷತೆ, ಇತ್ಯಾದಿ. ಐನ್‌ಸ್ಟೈನರ ಮಾತಿನಲ್ಲಿ, "ಈ ತಣ್ಣಗಿನ ನಯಸಾಣೆ ಮಂದಿ ನನ್ನಲ್ಲಿ ಕಿರಿಕಿರಿ ಉಂಟುಮಾಡುತ್ತಿದ್ದಾರೆ. ಇತರರ ಮನಸ್ಸಿನ ಆಳ ಹರವುಗಳನ್ನು ಇವರು ಗ್ರಹಿಸಲಾರರು. ಪ್ರತಿಯೊಂದನ್ನೂ ಇವರಿಗೆ ಕರಾರುವಾಕ್ಕಾಗಿ ವಿವರಿಸಲೇಬೇಕು."

ಗಳಹಿಸುಕುವ ಇಂಥ ವಾತಾವರಣದಲ್ಲಿ ಮುಕ್ತಜೀವಿ ವಿಶ್ವಮಾನವ ಐನ್‌ಸ್ಟೈನ್ ಏನನ್ನೊ ಕಳೆದುಕೊಂಡವರಂತೆ ಚಡಪಡಿಸುತ್ತಿದ್ದುದು ನಿರೀಕ್ಷಿತವೇ.

## ಒಂದನೆಯ ಮಹಾಯುದ್ಧ

> ನಮ್ಮ ಶಾಲಾ ಪುಸ್ತಕಗಳು ಯುದ್ಧವನ್ನು ಉದಾತ್ತೀಕರಿಸಿ ಅದರ ಕ್ರೌರ್ಯವನ್ನು ಮರೆಮಾಚುತ್ತವೆ. ಮಕ್ಕಳ ಧಮನಿಗಳಲ್ಲಿ ದ್ವೇಷವನ್ನು ಹೊಗಿಸುತ್ತವೆ. ನಾನು ಯುದ್ಧದ ಬದಲಾಗಿ ಶಾಂತಿ ಬೋಧಿಸಿ ಯೇನು. ದ್ವೇಷದ ಬದಲಾಗಿ ಪ್ರೇಮ ಬೆಳೆಸಿಯೇನು.
>
> ಐನ್‌ಸ್ಟೈನ್

೧೯೧೪ರ ಆಗಸ್ಟ್ ತಿಂಗಳಲ್ಲಿ ಒಂದನೆಯ ಮಹಾಯುದ್ಧದ ಕಿಡಿ ಸಿಡಿಯಿತು. ಸಾಮ್ರಾಜ್ಯ ವಿಸ್ತರಣೆಗಾಗಿ ತಹತಹಿಸುತ್ತಿದ್ದ ಮತ್ತು ಶೌರ್ಯ ಪ್ರದರ್ಶನಕ್ಕಾಗಿ ಸಿಡಿಮಿಡಿಯುತ್ತಿದ್ದ ಚಕ್ರ ವರ್ತಿ ವಿಲ್‌ಹೆಲ್ಮ್, ನೆರೆರಾಜ್ಯ ಬೆಲ್ಜಿಯಮ್ಮಿನ ತಾಟಸ್ಥ್ಯವನ್ನು ಉದ್ದೇಶಪೂರ್ವಕವಾಗಿ ಭಂಗ ಗೊಳಿಸಿದ. ಕ್ಷಿಪ್ರಾಕ್ರಮಣೆಯಿಂದ ಗಿಟ್ಟುವ ಅತಿ ಲಾಭದ ಹೊಂಗನಸು ಕಾಣುತ್ತಿದ್ದ ಜರ್ಮನಿ ಕಾಲಿಟ್ಟದ್ದು ಮಾತ್ರ ಕಾಣದ ಕಂಪದ (ಕೆಸರುಗದ್ದೆ) ತಿಳಿಯದ ಆಳಕ್ಕಾಗಿತ್ತು. ಈ ಮದೋನ್ಮತ್ತ ಪಾಶವೀ ವರ್ತನೆ ಯೂರೊಪ್ ರಾಷ್ಟ್ರಗಳನ್ನು (ಇಂಗ್ಲೆಂಡನ್ನೂ ಒಳಗೊಂಡಂತೆ) ನವಂಬರ್ ೧೯೧೮ರ ತನಕ ಯುದ್ಧಾಗ್ನಿಗೆ ಆಜ್ಯಾಹುತಿಯಾಗಿ ಸುರಿದು ಸರ್ವನಾಶದ ಬರೆಯಂಚಿಗೆ ಕೊಂಡೊಯ್ದಿತು. ಫಲಿತಾಂಶ ? ಖಳನಾಯಕ ವಿಲ್‌ಹೆಲ್ಮ್ ದೊರೆ ಸ್ಥಾನಚ್ಯುತನಾದ. 'ಪವಿತ್ರ' ಜರ್ಮನಿ ಹಾಳಾಯಿತು, ಅಪಮಾನ ಕಳಂಕಲೇಪಿತವಾಯಿತು.

ಕೊಳುಗುಳದ ಕಾವು ಏರುತ್ತಿರುವಾಗ ಆಂತರಿಕ ಧೃತಿಯನ್ನು ಉನ್ನತ ಮಟ್ಟದಲ್ಲಿ ಕಾಯ್ದಿರಿಸಲು ಸರ್ಕಾರಗಳು ಸ್ವಾಭಿಮಾನ, ದೇಶಪ್ರೇಮ, ಸಂಸ್ಕೃತಿ, ಶತ್ರುದೌಷ್ಟ್ಯ, ಅಂತಾರಾಷ್ಟ್ರೀಯ ಪಿತೂರಿ ಮುಂತಾದ ಅಮೂರ್ತಗುಣಗಳತ್ತ ಜನಲಕ್ಷ್ಯವನ್ನು ಹೊರಳಿಸುವುದು ಸಾಧಾರಣ ನೀತಿ. ಪ್ರತಿಯೊಂದು ರಾಷ್ಟ್ರವೂ ಶತ್ರುರಾಷ್ಟ್ರದ ಪ್ರತಿಯೊಂದು ವರ್ಗವನ್ನೂ ತನ್ನ ಅದೇ ವರ್ಗದ ವೈಯಕ್ತಿಕ ವೈರಿ ಎಂಬುದನ್ನು ಇಡಿ ಇಡಿಯಾಗಿಯೂ ಬಿಡಿ ಬಿಡಿಯಾಗಿಯೂ ಜನಗಣಮನಕ್ಕೆ ಗಿಡಿಯುತ್ತದೆ. ಹೀಗೆ ಒಂದು ರಾಷ್ಟ್ರದ ವಿಜ್ಞಾನಿಗಳು ಶತ್ರುರಾಷ್ಟ್ರದ ವಿಜ್ಞಾನಿಗಳ ಖಾಸಾ ಎದುರಾಳಿಗಳಾಗುತ್ತಾರೆ. ಯುದ್ಧಸಹಾಯಕ ಶಸ್ತ್ರಾಸ್ತ್ರಗಳನ್ನೂ ಯಂತ್ರಸಲಕರಣೆಗಳನ್ನೂ ತಯಾರಿಸುವಲ್ಲಿ ವಿಜ್ಞಾನಿವರ್ಗಗಳ ನಡುವೆ ಬದುಕು-ಸಾವು ಪೈಪೋಟಿ ತಲೆದೋರುತ್ತದೆ. ಫಲಿತಾಂಶ : ಜರ್ಮನ್-ವಿಜ್ಞಾನಕ್ಕೂ ಯೂರೊಪಿನ ಇತರ ರಾಷ್ಟ್ರಗಳ ವಿಜ್ಞಾನಕ್ಕೂ ನಡುವೆ ಪೂರ್ಣ ದಿಗ್ಬಂಧ ಏರ್ಪಟ್ಟಿತು.

ದಾಳಿಕೋರದೇಶ ಜರ್ಮನಿ ತನ್ನ 'ಸತ್ಯನಿಷ್ಠ' ನೀತಿಯನ್ನು ಎಂದಿನ ಶೀತಲ ದಕ್ಷತೆಯಿಂದ ಪ್ರಸರಿಸಿತು. "ನಾಗರಿಕ ಪ್ರಪಂಚಕ್ಕೆ ಪ್ರಣಾಳಿಕೆ"ಯನ್ನು ಪ್ರಕಟಿಸಿ, ಜರ್ಮನಿ ಹೇಗೆ ನಿರಪರಾಧಿ ರಾಷ್ಟ್ರ, ಜರ್ಮನ್ ಸಂಸ್ಕೃತಿಯ ರಕ್ಷಣೆಗೋಸ್ಕರ ಶಸ್ತ್ರಧಾರಣೆ ಮಾಡಿ ಯುದ್ಧಭಾಗಿ ಆಗುವುದು ಹೇಗೆ ಅನಿವಾರ್ಯವಾಯಿತು ಮುಂತಾದವನ್ನು ವಿವರಿಸಿತು. ಜರ್ಮನಿಯ ಸಂಸ್ಕೃತಿಯೂ ಮಿಲಿಟರಿತನವೂ ಒಂದೇ, ಬೇರೆ ಬೇರೆ ಅಲ್ಲ ಎಂದು ಇದು ಒತ್ತಿ ಹೇಳಿತು. ಮಹಾವರಿಷ್ಠರ ಈ ಪ್ರಣಾಳಿಕೆಗೆ ತೊಂಬತ್ತೆರಡು ಜರ್ಮನ್ ಬುದ್ಧಿವಂತರು ರುಜುವಿಕ್ಕಿದ್ದರು. ಮ್ಯಾಕ್ಸ್ ಪ್ಲ್ಯಾಂಕ್ ಇವರಲ್ಲೊಬ್ಬರು. ಐನ್‌ಸ್ಟೈನ್ ಹೇಗೂ ಇವರ ಸಾಲಿನಲ್ಲಿರಲಿಲ್ಲ. ಇವರನ್ನು ರುಜು ಹಾಕಿ ಎಂದು ಯಾರೂ ಕೋರಿರಲಿಲ್ಲ. ಕೋರಿದ್ದರೆ ಅದು ದೊರೆಯುತ್ತಲೂ ಇರಲಿಲ್ಲ. ಹೇಗೂ

ತಾಂತ್ರಿಕವಾಗಿ ಇವರು ಸ್ವಿಸ್ ಪ್ರಜೆಯಾಗಿದ್ದರಷ್ಟೆ.

ಜರ್ಮನಿಯ ಸಂಗೀತವನ್ನೂ ಸಾಹಿತ್ಯವನ್ನೂ ಅಪಾರವಾಗಿ ಮೆಚ್ಚಿ ಪ್ರೀತಿಸುತ್ತಿದ್ದ ಯೂರೋಪಿಯನ್ನರಿಗೆ ತೊಂಬತ್ತೆರಡು ಬುದ್ಧಿವಂತರ ಪ್ರಣಾಳಿಕೆ ಅರ್ಥವಾಗದ ಒಗಟಾಯಿತು. ಜರ್ಮನರು ಹೂಡಿದ ದಾಳಿ ನುಂಗಲಾಗದ ಕಾದ ಸಬಳವಾಯಿತು. ಬಿಸ್‌ಮಾರ್ಕನ (ವಿಲ್‌ಹೆಲ್ಮನ) ಜರ್ಮನಿ ಬೇರೆ ಗ್ಯೊಥೇಯ (Johan Wolfgang Von Goethe, ೧೭೪೯-೧೮೩೨) ಜರ್ಮನಿ ಬೇರೆ ಎಂಬುದು ಅವರಿಗೆ ತಿಳಿದದ್ದು ತೀರ ತಡವಾಗಿ.

"ಶಾಂತಿಕಾಲದಲ್ಲಿ ವಿಜ್ಞಾನಿಗಳು ಪ್ರಪಂಚವ್ಯಕ್ತಿಗಳು, ಯುದ್ಧಕಾಲದಲ್ಲಿ ರಾಷ್ಟ್ರ ವ್ಯಕ್ತಿಗಳು" ಎಂಬ ಪ್ರಚಲಿತ ನಿಲವು ಐನ್‌ಸ್ಟೈನರಿಗೆ ಅಸಹ್ಯವಾಗಿತ್ತು. ಇಂಥ ಸಂಕುಚಿತ ಭಾವ ಸಲ್ಲ. ಇದು ವಿಜ್ಞಾನದ ವ್ಯಭಿಚಾರವೆಂದು ಇವರ ಭಾವನೆ. ಆದರೆ ವಸ್ತುಸ್ಥಿತಿ ಏನೆಂದರೆ ಪ್ರಾಚೀನ ಕಾಲದಿಂದಲೂ ಪ್ರಸಿದ್ಧ ವಿಜ್ಞಾನಿಗಳು ಒಂದಲ್ಲ ಒಂದು ರೀತಿಯಲ್ಲಿ ಯುದ್ಧೋದ್ಯಮದೊಡನೆ ಸಹಕರಿಸುತ್ತಲೇ ಬಂದಿದ್ದಾರೆ. ಆರ್ಕಿಮಿಡೀಸ್, ನ್ಯೂಟನ್, ಫ್ಯಾರಡೇ, ನೊಬೆಲ್ ಮೊದಲಾದವರು ಕೂಡ. ಒಂದನೆಯ ಮಹಾಯುದ್ಧದ ವೇಳೆ ಸಾಕ್ಷಾತ್ ಮದಾಮ್ ಕ್ಯೂರಿ, ರುದರ್‌ಫರ್ಡ್ ಇವರಂಥ ಅಗ್ರಗಣ್ಯರೂ ತಮ್ಮ ಚಿಂತನೆಗಳನ್ನು ಯುದ್ಧೋಪಯುಕ್ತ ಸಂಶೋಧನೆಗಳತ್ತ ಹರಿಸಿದ್ದರು. ವಾಸ್ತವವಾಗಿ ವಿಜ್ಞಾನೇತಿಹಾಸವೂ ಯುದ್ಧೇತಿಹಾಸವೂ ಸನ್ನಿಕಟವಾಗಿ ಹೆಣೆದುಕೊಂಡಿವೆ. ಯಾವುದು ಯಾವುದರ ಕಾರಣ ಮತ್ತು ಪರಿಣಾಮವೆಂಬುದೊಂದು ಬೀಜವೃಕ್ಷ ನ್ಯಾಯ.

## ತೊಂಬತ್ತೆರಡರ ಎದುರು ನಾಲ್ಕು

> ನನ್ನ ಶಾಂತಿವಾದವೆಂಬುದು ನನಗೆ ಪ್ರವೃತ್ತಿಯಿಂದಲೇ ಒದಗಿರುವ ಸಂವೇದನೆ : ನಾನು ಇದರಿಂದ ಬಂಧಿತನಾಗಿದ್ದೇನೆ. ಮಾನವಹತ್ಯೆ ಅತಿ ಬೀಭತ್ಸವಾಗಿರುವುದೇ ಇದರ ಕಾರಣ. ನನ್ನ ನಿಲವು ಯಾವುದೇ ಬೌದ್ಧಿಕ ಸಿದ್ಧಾಂತದ ಫಲವಲ್ಲ. ಬದಲು, ಪ್ರತಿಯೊಂದು ಬಗೆಯ ಕ್ರೌರ್ಯ ಮತ್ತು ದ್ವೇಷ ಕುರಿತಂತೆ ನನ್ನಲ್ಲಿ ದೃಢವಾಗಿರುವ ತೀವ್ರ ವೈರದಿಂದ ಇದು ಜನಿಸಿರುವುದಾಗಿದೆ. ಈ ಪ್ರತಿಕ್ರಿಯೆಯನ್ನು ನಾನು ತಾರ್ಕಿಕ ಚೌಕಟ್ಟಿನೊಳಗೆ ಹಿಡಿದಿಡಲು ಪ್ರಯತ್ನಿಸಿದ್ದಾದರೆ ನಿಜಕ್ಕೂ ಅದು ಕಾರ್ಯೋತ್ತರ ಚಿಂತನೆ ಎನ್ನಿಸೀತು.
>
> ಐನ್‌ಸ್ಟೈನ್

ಇಂಥ ದುರ್ಭರ ಸನ್ನಿವೇಶದಲ್ಲಿ ಐನ್‌ಸ್ಟೈನ್ ಏಕಾಂಗಿಯಾಗಿ ನಿಂತರು. ಪ್ರಪಂಚದ ಮೂಕಮನಸ್ಸಾಕ್ಷಿಯ ಶೋಕಮೂರ್ತಿಯಾಗಿ ನಡೆದರು. ಹೆಗ್ಗಡಲಿನ ನಡುವಿನ ದೀಪಸ್ತಂಭದಂತೆ ನೆಲೆದೀವಿಗೆಯಾದರು. ಜರ್ಮನಿಯ ಆಕ್ರಮಣಶೀಲ ವರ್ತನೆಯನ್ನು ಮನಸಾರೆ ಖಂಡಿಸಿದ್ದ ಇವರು ಈ ರಾಷ್ಟ್ರದ ಸಮರಪತನವನ್ನು ಹಾರೈಸಿದರು. "ನಾಗರಿಕ ಪ್ರಪಂಚಕ್ಕೆ ಪ್ರಣಾಳಿಕೆ"ಗೆ ಎದುರಾಗಿ ಮುಂದಿನ ಕೆಲವೇ ದಿನಗಳಲ್ಲಿ "ಯೂರೋಪಿಯನ್ನರಿಗೆ ಪ್ರಣಾಳಿಕೆ" ಯನ್ನು ಪ್ರಕಟಿಸಿದರು. ಇದರ ರುಜುಗಾರರು ಮಾತ್ರ ನಾಲ್ಕೇ ನಾಲ್ಕು ಋಜುಪುರುಷರು: ಐನ್‌ಸ್ಟೈನ್, ಇವರ ಸಹೋದ್ಯೋಗಿ ಜಾರ್ಜ್ ನಿಕೊಲಾಯ್, ಬರ್ಲಿನ್ ವೇಧಶಾಲೆಯ ಮುಖ್ಯಸ್ಥ ಎಂಬತ್ತು ವರ್ಷ ವಯಸ್ಸಿನ ವಿಲ್‌ಹೆಲ್ಮ್ ಫಾರ್ಸ್ಟರ್ (ಇವರು ತೊಂಬತ್ತೆರೆಡು ಬುದ್ಧಿವಂತರ ಸಾಲಿನಲ್ಲಿಯೂ ಇದ್ದರು—ಎಂಬತ್ತರ ನಡುಕ ?), ಮತ್ತು ಆಟ್ಟೊ ಬ್ಯೂಯೆಕ್.

"ವಾದ್ಯಬಜಾವಣೆಗೆ ಅನುಗುಣವಾಗಿ ಅಡ್ಡ ನೀಟ ಸಾಲುಗಳಲ್ಲಿ ಕಾಲು ಕುಕ್ಕಿ ನಡೆಯುವುದನ್ನು

ಮೆಚ್ಚುವಾತ ನನ್ನ ತಿರಸ್ಕಾರಕ್ಕೂ ಅರ್ಹನಲ್ಲ ; ಅವನಲ್ಲಿ ಮಹಾಮಸ್ತಿಷ್ಕ ತಪ್ಪಾಗಿ ಸೇರಿಕೊಂಡಿದೆ; ಅವನಿಗೆ ಕಶೇರುರಜ್ಜುವೊಂದೇ ಧಾರಾಳವಾಗಿ ಸಾಕಾಗಿತ್ತು." ಎಂದ ಐನ್‌ಸ್ಟೈನರು ತಮ್ಮ ಪ್ರಣಾಳಿಕೆಯಲ್ಲಿ ಮಾನವನ ಅಥವಾ ರಾಷ್ಟ್ರದ ಸಮಸ್ಯೆಗಳನ್ನು ಯುದ್ಧ ಪರಿಹರಿಸಬಲ್ಲದು ಎಂಬ ವಾದವನ್ನು ಪೂರ್ಣವಾಗಿ ತಳ್ಳಿಹಾಕಿದರು. ಪ್ರಣಾಳಿಕೆಯ ಉದ್ಧೃತಾಂಶ :

"ಯುದ್ಧ ಈಗಿನಂತೆ ಹಿಂದೆಂದೂ ಇಷ್ಟೊಂದು ಪೂರ್ತಿಯಾಗಿ ಸಾಂಸ್ಕೃತಿಕ ಸಹಕಾರವನ್ನು ಬುಡಮೇಲು ಮಾಡಿದ್ದಿಲ್ಲ. ಇದು ಘಟಿಸಿರುವುದಾದರೂ ಯಾವಾಗ ? ಸಾರ್ವತ್ರಿಕ ಪ್ರಪಂಚ-ವ್ಯಾಪಿ ನಾಗರಿಕತೆಯ ದಿಶೆಯತ್ತ ನಮ್ಮನ್ನು ಅವಶ್ಯವಾಗಿ ಒಯ್ಯಬಲ್ಲ ಅಂತಾರಾಷ್ಟ್ರೀಯ ಸಂಬಂಧಗಳ ಅಗತ್ಯವನ್ನು ನಾವು ಪರಿಗಣಿಸಲೇಬೇಕು ಎಂಬುದನ್ನು ತಂತ್ರವಿದ್ಯೆ ಮತ್ತು ಸಂಸ್ಕೃತಿಗಳಲ್ಲಿ ಸಾಧಿಸಿರುವ ಪ್ರಗತಿಯು ಸಾರಿ ಸಾರಿ ಹೇಳುತ್ತಿರುವ ಇದೇ ದಿನಗಳಂದು. ಈ ಮೊದಲು ಎಷ್ಟೊಂದು ಅಂತಾರಾಷ್ಟ್ರೀಯ ಬಂಧಗಳು ಬೆಸೆದುಕೊಂಡಿದ್ದುವು ಎಂಬ ಕಾರಣಕ್ಕಾಗಿಯೇ ಪ್ರಾಯಶಃ ಈಗಿನ ಹಠಾತ್ ಛೇದನೆ ನಮಗೆ ಇನ್ನಷ್ಟು ದಾರುಣ ವೇದನೆ ಉಂಟುಮಾಡುವುದಾಗಿದೆ.

"ನಮಗೇನೂ ಅಚ್ಚರಿ ಆಗಬೇಕಾಗಿಲ್ಲ. ಸರ್ವಮಾನ್ಯ ಪ್ರಪಂಚಸಂಸ್ಕೃತಿಯನ್ನು ಕೊಂಚವಾದರೂ ಲೆಕ್ಕಿಸುವ ಯಾರೇ ಆಗಲಿ ಅದು ನಿಂತಿರಲೇಬೇಕಾದ ತತ್ತ್ವಗಳ ರಕ್ಷಣೆಗಾಗಿ ಈಗ ಎರಡು ತೆರದಲ್ಲಿ ಬದ್ಧನಾಗಿದ್ದಾನೆ. ಹೀಗಿದ್ದ್ಯಾಗ್ಯೂ ಯಾರಿಂದ ಇಂಥ ಸಂವೇದನೆಗಳನ್ನು ನಿರೀಕ್ಷಿಸಬಹುದಾಗಿತ್ತೊ—ಪ್ರಧಾನತಃ ವಿಜ್ಞಾನಿಗಳು ಮತ್ತು ಕಲಾವಿದರು—ಅಂಥವರು ಈ ತನಕ, ಹೆಚ್ಚು ಕಡಿಮೆ ಪ್ರತಿಯೊಬ್ಬನೂ ಎನ್ನುವಂತೆ, ಅಂತಾರಾಷ್ಟ್ರೀಯ ಸಂಬಂಧಗಳ ವಿಸ್ತರಣೆಗೆ ಯಾವುದೇ ಹೆಚ್ಚಿನ ಅಪೇಕ್ಷೆಯನ್ನು ತೊರೆದೇಬಿಟ್ಟಿರುವರೆಂಬಂಥ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ಪ್ರತೀಕಾರ ಭಾವನೆಯಿಂದ ಮಾತಾಡಿದ್ದಾರೆ ಮತ್ತು ಶಾಂತಿಯನ್ನು ಬೆಂಬಲಿಸುವುದರಲ್ಲಿ ವಿಫಲರಾಗಿದ್ದಾರೆ.

"ಪ್ರಪಂಚ ಈ ತನಕ ಸಂಸ್ಕೃತಿ ಎಂದು ಯಾವುದನ್ನು ಹೇಳಿಕೊಂಡು ಬಂದಿದೆಯೊ ಅದಕ್ಕೆ ಸಲ್ಲದ ಈ ನಿಲವನ್ನು ಉಗ್ರ ರಾಷ್ಟ್ರಪ್ರೇಮದ ಹೆಸರಿನಲ್ಲಿ ಕ್ಷಮಿಸಲು ಬಾರದು. ಹೀಗಲ್ಲದೇ. ಅದನ್ನು ಕ್ಷಮಿಸಬಹುದೆಂಬ ಭಾವನೆ ಬುದ್ಧಿವಂತರಲ್ಲಿ ಸಾರ್ವತ್ರಿಕ ಚಲಾವಣೆಗಳಿಸಿದ್ದಾದರೆ ಅದೊಂದು ಘೋರ ದುರದೃಷ್ಟ. ಅದು ಸ್ವತಃ ಸಂಸ್ಕೃತಿಗೆ ಮುಳುವಾಗುವುದು ಮಾತ್ರವಲ್ಲ, ಯಾವ ರಾಷ್ಟ್ರಗಳ ರಕ್ಷಣೆಗೋಸ್ಕರ ಈ ಮಾರಣಹೋಮ[ಯುದ್ಧ]ವನ್ನು ಹೂಡಲಾಗಿದೆಯೊ ಖುದ್ದು ಅವುಗಳ ಅಸ್ತಿತ್ವವನ್ನೇ ಅಪಾಯಕ್ಕೆ ಈಡು ಮಾಡದಿರದು ಎಂಬುದರ ಬಗ್ಗೆ ನಮಗೆ ಇನಿತೂ ಸಂದೇಹವಿಲ್ಲ."

ಪ್ರಣಾಳಿಕೆ ಮುಂದುವರಿಯುತ್ತ, ಹೇಗೆ ತಂತ್ರವಿದ್ಯೆ ಪ್ರಪಂಚವನ್ನು ಸಂಕೋಚಿಸಿದೆ, ಹೇಗೆ ಸಂಪರ್ಕಜಾಲವು ಸಪ್ತಸಾಗರಗಳನ್ನೂ ಸಮಸ್ತ ನಗರಗಳನ್ನೂ ಬೆಸೆದಿದೆ ಎಂಬುದನ್ನು ವಿವರಿಸುತ್ತದೆ. ಇಡೀ ಪ್ರಪಂಚವೇ ಈಗ ಒಂದು ಘಟಕವಾಗಿದೆ. ಪರಿಸ್ಥಿತಿ ಹೀಗಿರುವಾಗ ಯೂರೋಪ್ ಖಂಡವು ಅಂತಃಕಲಹಗಳಿಂದ ವಿನಾಶಮಾರ್ಗ ಹಿಡಿಯುವುದು ಸಲ್ಲ. ಇಂದಿನ ಯುದ್ಧಗಳಲ್ಲಿ ಭಾಗಿಗಳೆಲ್ಲರೂ ಸೋತು ಸುಣ್ಣಾಗುವುದರಿಂದ ನಿಜವಾದ ವಿಜಯಿಗಳ ಇತ್ಯರ್ಥವೆಂದೂ ಆಗದು. ಆದ್ದರಿಂದ ಪ್ರಾಜ್ಞರು ಎಲ್ಲೇ ಇದ್ದರೂ ಯುದ್ಧನಿವಾರಣೆಗಾಗಿ ಪೂರ್ಣ ಪ್ರಯತ್ನ ಮಾಡುವುದು ಆದ್ಯ ಕರ್ತವ್ಯ. ಯೂರೋಪಿನ ಅಖಂಡ ಸಂಸ್ಕೃತಿಯನ್ನು ಕಾಪಾಡುವತ್ತ ಮೊದಲ ಹೆಜ್ಜೆ ಇಡಬೇಕು. ಎಲ್ಲ ಯೂರೋಪಿಯನ್ನರೂ ಒಂದಾಗಿ ಯೂರೋಪಿನ ಒಕ್ಕೂಟ ಸ್ಥಾಪಿಸುವುದರತ್ತ

ಉದ್ಯುಕ್ತರಾಗಬೇಕು. "ನಾವೇ ಮೊದಲ ಹೆಜ್ಜೆ ಇಡಲು—ಸವಾಲೆಸೆಯಲು—ನಿರ್ಧರಿಸಿದ್ದೇವೆ. ನೀವು ನಮ್ಮ ರೀತಿಯಲ್ಲಿಯೇ ಯೋಚಿಸುವವರಾಗಿದ್ದರೆ, ಯೂರೋಪಿಯನ್ ಐಕ್ಯಕ್ಕಾಗಿ ವ್ಯಾಪಕ ಆಂದೋಳನ ಪ್ರಾರಂಭಿಸಲು ನೀವೂ ಅಪೇಕ್ಷಿಸುವವರಾಗಿದ್ದರೆ, ನಿಮ್ಮ ರುಜುವನ್ನು ಈ ಪ್ರಣಾಳಿಕೆಗೆ ಅಂಕಿತಗೊಳಿಸುವುದರ ಮೂಲಕ ಪಣ ತೊಡಬೇಕೆಂದು ಕೋರುತ್ತೇವೆ."

ಅಕಾಲವಿಕಾಲ ಗ್ರಹಚಾರವೆಂದಿಲ್ಲ
ಸತ್ಕಾರ್ಯನಿರತನಿಗೆ ವರ್ತಮಾನ ಮುಹೂರ್ತ
ವೇ ಸದಾ ಶುಭಕಾಲ ಹೃದಯದನಿ ಶುದ್ಧವಿರೆ
ಮಿದುಳ ನುಡಿ ನೇರವಿರ್ಪುದು ದಿಟವೊ ಅತ್ರಿಸೂನು

ವಿನಾಶಪಥಗಾಮಿಗೆ ವಿವೇಕವೆಲ್ಲಿಂದ ಮೂಡಬೇಕು ? ಮದ್ದುಗುಂಡು ಹಿಡಿದವನಿಗೆ ಯಾವ ಗಂಡು ತಾನೇ ಮದ್ದು ಮಾಡೀತು ? ಸುರುಸುರು ಬತ್ತಿಯ ಖಾಲಿ ಕೊನೆಗೆ ಕಿಡಿತಾಗಿಸಿ ಆಗಿತ್ತು. ಮದ್ದಿನ ಉಗ್ರಾಣ ಹೊಟ್ಟಿಯೇ ಹೊಟ್ಟಿತು. ಯುದ್ಧಾಗ್ನಿಯಿಂದ ಯೂರೋಪ್ ಉರಿದೇ ಉರಿಯಿತು. ತೊಂಬತ್ತೆರಡರ ಮುಂದೆ ನಾಲ್ವರು, ರೋಷಾವಿಷ್ಟ ಹಿರಣ್ಯಕಶಿಪುವಿನೆದುರು ಸೆಟೆದು ನಿಂತ ಪ್ರಹ್ಲಾದನಂತಾದರು.

ಜಗದ್ವಿಖ್ಯಾತ ವಿಜ್ಞಾನಿ ಐನ್‌ಸ್ಟೈನ್ ತಮ್ಮ ಖಾಸಾ ಸೊತ್ತು, ತಮ್ಮ ರಾಷ್ಟ್ರದ ಬೌದ್ಧಿಕ ಅಂತಸ್ತಿಗೆ ವಿಶೇಷ ಬಡ್ತಿ ಮತ್ತು ಮೆರುಗು ನೀಡಿರುವ ಬೃಹಸ್ಪತಿ ಎಂದು ಮುಂತಾಗಿ ಅಭಿಮಾನ-ಪರವಶರಾಗಿದ್ದ ಜರ್ಮನ್ ಪ್ರಭುಗಳಿಗೆ, ಯುದ್ಧಾರಂಭದ ದಿನಗಳು ಒದಗಿಸಿದ ಸುಖೋಷ್ಣ ದಿಂದ ಅಂತೆಯೇ ಪ್ರಾರಂಭಿಕ ಕ್ಷಿಪ್ರ ಯಶಸ್ಸು ನೀಡಿದ ಕುಮ್ಮಕ್ಕಿನಿಂದ ಬೀಗಿದ್ದ ಆ ಉನ್ಮತ್ತ ರಾಷ್ಟ್ರಕರಿಗೆ, ನಾಲ್ವರ ಪ್ರಣಾಳಿಕೆ ಬೆನ್ನಿಗಿರಿದ ಕಠಾರಿಯಂತೆ ತಿವಿಯಿತು. ರಾಷ್ಟ್ರದ್ರೋಹಿ, ಹುಟ್ಟಾ ಜರ್ಮನಿಗನಾಗಿದ್ದರೂ ಸ್ವಿಸ್ ಪೌರತ್ವ ಸ್ವೀಕರಿಸಿರುವ ಅಭಿಮಾನಹೀನ, ಅನ್ನವಿಕ್ಕಿದ ಕೈಯನ್ನೇ ಕಡಿಯುವ ಕೃತಘ್ನ ಶೈಲಾಕ್, ಜರ್ಮನಿ ಒದಗಿಸಿದ ಆರ್ಥಿಕ ಸವಲತ್ತು ಮತ್ತು ಸ್ಥಾನಿಕ ದವಲತ್ತು ಬೇಕಾಗಿದ್ದರೂ ಈ ದೇಶಕ್ಕೆ ನಿಷ್ಠೆ ಮಾತ್ರ ಸಲ್ಲಿಸಲೊಲ್ಲದ ಅಲೆಮಾರಿ ವಣಿಕ ಮುಂತಾದ ಅವೈಜ್ಞಾನಿಕ ವಿಶೇಷಣಗಳಿಗೆ ಐನ್‌ಸ್ಟೈನ್ ಪಾತ್ರರಾಗಬೇಕಾಯಿತು. ಉದ್ವೇಗದ ಹಾದಿಯನ್ನು ತರ್ಕದ ಜಲ್ಲಿಗಳಿಂದ ಕಟ್ಟಿಲ್ಲವಷ್ಟೆ. ಐನ್‌ಸ್ಟೈನರ ಹಿರಿ ಹೆಸರೂ ಸ್ವಿಸ್ ಪೌರತ್ವವೂ ಇವರ ವ್ಯಕ್ತಿಗೆ ಅಪಾಯವೊದಗದಂಥ ಅಮೂರ್ತ ಭಿತ್ತಿಯನ್ನು ಇವರ ಸುತ್ತ ನಿರ್ಮಿಸಿದ್ದುವು. ಆದರೆ ಎಷ್ಟು ದಿನ ?

## ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ

ನ್ಯೂಟನ್ ಅವರ ಶುದ್ಧಕಾಲದ[೨೩] ಪರಿಕಲ್ಪನೆ ಯಾವಾಗ ವಿಶೇಷ ಸಾಪೇಕ್ಷತಾಸಿದ್ಧಾಂತದಿಂದ ನಾಶ ಗೊಳಿಸಲ್ಪಟ್ಟಿತೊ ಆಗ ಅವರ ಗುರುತ್ವಾಕರ್ಷಣಸಿದ್ಧಾಂತ ಕೂಡ ಪುನಃಪರಿಶೀಲನೆಗೆ ಒಳಪಡಬೇಕಾ ಯಿತೆಂಬುದು ಸುವಿದಿತ. ಈ ನಿಟ್ಟಿನಲ್ಲಿ ಇತರ ಅನೇಕರು ಪ್ರಯತ್ನ ನಡೆಸಿದಾಗ್ಯೂ ಜಯಗಳಿಸಿದವರು ಐನ್‌ಸ್ಟೈನ್ ಮಾತ್ರ. ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತವೆಂಬುದಾಗಿ ಇವರು ಹೆಸರಿಸಿರುವ ಸಿದ್ಧಾಂತ ದಲ್ಲಿ ಇದನ್ನು ಸಾಧಿಸಿದರು. ರಿಲೆಟಿವಿಟಿ (ಸಾಪೇಕ್ಷತೆ) ಎಂಬ ಪದವನ್ನು ಭವಿಷ್ಯ ಪೀಳಿಗೆಗಳ ಮೇಲೆ ಹೇರುವಲ್ಲಿ ಪ್ವಾನ್‌ಕ್ವಾರೇ ಯಶಸ್ವಿಯಾದರೆಂಬುದು ವಿಚಿತ್ರ ಸಂಗತಿಯೇ ಸರಿ. ಈ ಪದಕ್ಕೆ ಯಾರೂ ಒಂದು ಅರ್ಥವನ್ನು ನೀಡಿಲ್ಲವೆಂಬುದಾಗಿ ತೋರುತ್ತದೆ. ಆದರೆ ಇಲ್ಲಿ ಈ ಪದದ ಉಪಯೋಗ ವೊಂದರ ಹೊರತಾಗಿ ತಮ್ಮ ಗುರುತ್ವಾಕರ್ಷಣ ಸಿದ್ಧಾಂತದ ನಿಜ ಸಂಸ್ಥಾಪಕ ಸಾಕ್ಷಾತ್ ಐನ್‌ಸ್ಟೈನರೇ

ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇದನ್ನು ಸ್ಪಷ್ಟಿಸಲು ಇವರು ಸಾಕಷ್ಟು ಕಠಿಣವಾಗಿದ್ದ ಗಣಿತ ತಂತ್ರಗಳನ್ನು "ಕಲಿಯ" ಬೇಕಾಯಿತು. ಈ ಕಲಿಕೆಯ ವೇಳೆ ಅವನ್ನು ಇವರು ಸುಧಾರಿಸಿದರು ಮತ್ತು ಸರಳೀಕರಿಸಿದರು. ತತ್ಪರಿಣಾಮವಾಗಿ ಅವು ಸಾಪೇಕ್ಷತೆಯೊಡನೆ ಏನೇ ಸಂಬಂಧವಿರದ ಕಾರ್ಯದಲ್ಲಿ ಉದ್ಯುಕ್ತರಾಗಿದ್ದ ಹಲವು ಭೌತವಿಜ್ಞಾನಿಗಳಿಗೆ ಸುಲಭವಾಗಿ ಲಭ್ಯವಾದುವು.

ಜಾನ್ ಎಲ್. ಸಿಂಗ್

ವಿಶೇಷ ಸಾಪೇಕ್ಷತಾಸಿದ್ಧಾಂತವೇ ಆಗಲಿ ಮುಂದೆ ೧೯೧೫ರಲ್ಲಿ ಪ್ರಕಟವಾದ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತವೇ ಆಗಲಿ (General theory of Relativity) ಕಲ್ಪನಾವಿಲಾಸಿಯೊಬ್ಬನ ಊಹನಾವಿಹಾರಗಳಲ್ಲ : ಸ್ಪಷ್ಟ ಗಣನೆಗಳು, ನಿಖರ ಮಾಪನೆಗಳು ಮುಂತಾದವುಗಳ ಮೇಲೆ ನಿರ್ಮಿಸಲಾದ ಬೃಹಚ್ಛಿಲ್ಪಗಳು. ಇವುಗಳಿಗೆ ನಿಷ್ಕೃಷ್ಟ ಸಾಧನೆಗಳನ್ನು ಐನ್‌ಸ್ಟೈನ್ ನೀಡಿದ್ದಾರೆ. ಪ್ರಯೋಗಗಳಲ್ಲಿ ಇವುಗಳ ಸಾಧುತ್ವ ಸ್ಥಿರೀಕೃತವಾಗಿದೆ. ಕೆಲವು ಉದಾಹರಣೆಗಳನ್ನು ಈಗ ನೋಡೋಣ.

ಬೆಳಕಿನ ಕಿರಣ ಸರಳರೇಖೆಯಲ್ಲಿ ಸಂಚರಿಸುವುದೆಂದು ತಿಳಿದಿತ್ತು. ಸಾಪೇಕ್ಷತಾಸಿದ್ಧಾಂತ ಇದಕ್ಕೊಂದು ಮುಖ್ಯ ಸ್ಪಷ್ಟೀಕರಣ ನೀಡಿತು. ಕಿರಣಗಳು ಪ್ರಬಲ ಗುರುತ್ವಾಕರ್ಷಣ ಕ್ಷೇತ್ರವನ್ನು, ಉದಾಹರಣೆಗೆ ನಕ್ಷತ್ರಗಳಂಥ ಮಹಾಕಾಯಗಳ ಸನಿಹದಲ್ಲಿ, ಅಡ್ಡಹಾಯುವಾಗ ಅದರತ್ತ ಬಾಗುತ್ತವೆ ಎಂಬುದಾಗಿ ಈ ಸಿದ್ಧಾಂತ ಪ್ರತಿಪಾದಿಸಿದ್ದು ಮಾತ್ರವಲ್ಲ ಆ ಬಾಗುವನ್ನು ಕರಾರುವಾಕ್ಕಾಗಿ ಕಣಿ ನುಡಿಯಿತು ಕೂಡ. ಸೂರ್ಯನನ್ನು ಕುರಿತಂತೆ ಇದು ಕೇವಲ ೧.೭೫ ಕೋನ-ಸೆಕೆಂಡುಗಳು (ಕೋನದ ಡಿಗ್ರಿ =೧°=೩೬೦೦ ಕೋನ-ಸೆಕೆಂಡುಗಳು).

ನ್ಯೂಟನ್-ಬಲವಿಜ್ಞಾನದ ಪರಿಮಿತಿಯೊಳಗೆ ಸೌರವ್ಯೂಹದ ಎಲ್ಲ ಗ್ರಹಗಳ ವರ್ತನೆಯನ್ನೂ ಬಹುತೇಕ ಕರಾರುವಾಕ್ಕಾಗಿ ವಿವರಿಸುವುದು ಸಾಧ್ಯವಾಗಿತ್ತು. ಆದರೆ ಕಂಡಂತೆಯೇ ಬುಧಗ್ರಹ ಈ ಶಿಸ್ತಿಗೆ ಒಳಪಟ್ಟಿರಲಿಲ್ಲ. ಸೂರ್ಯನಿಗೆ ಅತಿ ಸಮೀಪವಿರುವ ಗ್ರಹವಿದು. ಇದರ ವರ್ಷ (ಸೂರ್ಯನನ್ನು ಪರಿಭ್ರಮಿಸಲು ತೆಗೆದುಕೊಳ್ಳುವ ಅವಧಿ) ಕೇವಲ ೮೮ ಭೂದಿವಸಗಳು.




ಚಿತ್ರ ೧. ಸೂರ್ಯನ ($S$) ಸುತ್ತ ಯಾವುದೇ ಗ್ರಹದ ($E$) ಕಕ್ಷೆ. ಇದೊಂದು ದೀರ್ಘವೃತ್ತ. ಇದರ ನಾಭಿಯಲ್ಲಿ—ಕೇಂದ್ರದಲ್ಲಿ ($C$) ಅಲ್ಲ—ಸೂರ್ಯ ಇದೆ. $P$ ಪುರರವಿ ಬಿಂದು. $A$ ಅಪರವಿ ಬಿಂದು.

ಸೂರ್ಯನನ್ನು ಬುಧ ಇತರ ಗ್ರಹಗಳಂತೆಯೇ ದೀರ್ಘವೃತ್ತಾಕಾರದ ಕಕ್ಷೆಯಲ್ಲಿ (orbit), ಸೂರ್ಯ ಈ ದೀರ್ಘವೃತ್ತದ (ellipse) ಒಂದು ನಾಭಿಯಲ್ಲಿ (focus) ಇರುವಂತೆ, ಪರಿಭ್ರಮಿಸುತ್ತದೆ. ಬುಧಕಕ್ಷೆಯ ಮೇಲಿನ ಸೂರ್ಯಸಮೀಪ ಅಂದರೆ ಪುರರವಿ ಬಿಂದುವು (perihelion) ತುಸು ವಿಚಿತ್ರವಾಗಿ ವರ್ತಿಸುತ್ತಿರುವುದು ವೀಕ್ಷಣೆಯಿಂದ ತಿಳಿದಿತ್ತು. ಗ್ರಹ ಒಮ್ಮೆ ಪುರರವಿ




ಚಿತ್ರ ೨. ಸೂರ್ಯನ ($S$) ಸುತ್ತ ಬುಧಗ್ರಹದ ಪ್ರರೂಪೀ ಕಕ್ಷೆ. ಇಲ್ಲಿ $A$ ಪುರರವಿ. $A$ಯಿಂದ ಒಮ್ಮೆ ಹೊರಟ ಗ್ರಹ ಅಪ್ರದಕ್ಷಿಣ ದಿಶೆಯಲ್ಲಿ (ಆಕಾಶದಲ್ಲಿ ಪಶ್ಚಿಮ-ಪೂರ್ವ ದಿಶೆ )ಪರಿಭ್ರಮಿಸಿ $A$ಗೆ ಮರಳುವಾಗ ಬುಧನ ಒಂದು ವರ್ಷ ಮುಗಿದಿರುತ್ತದೆ. ವಾಸ್ತವವಾಗಿ $A$ ಬಿಂದು ಸ್ಥಿರವಾಗಿರದೆ ಅಪ್ರದಕ್ಷಿಣ ದಿಶೆಯಲ್ಲಿ ಅತ್ಯಲ್ಪವಾಗಿ ಸರಿಯುವುದೆಂದು ವೀಕ್ಷಣೆಗಳಿಂದ ತಿಳಿದಿತ್ತು. ಈ ಸರಿತ ಒಂದು ಶತಮಾನದ ಅವಧಿಯಲ್ಲಿ ಸುಮಾರು ೪೩ ಕೋನಸೆಕೆಂಡುಗಳು ; ಬುಧಕಕ್ಷೆಯ ಪುರರವಿ ಇಂದು $A$ ಆಗಿದ್ದರೆ ಒಂದು ಶತಮಾನದ ಅನಂತರ ಅದು $B$ ಆಗಿರುವಂಥ ಪರಿಸ್ಥಿತಿ. $AB$ಯ ಅಳತೆಯೇ ಪುರರವಿಯ ಮುನ್ನಡೆ, ಅಥವಾ ಪುರೋಗಮನ.

ಯಿಂದ ಹೊರಟು ಒಂದು ಪರಿಭ್ರಮಣಾನಂತರ ಅದೇ ಬಿಂದುವಿಗೆ, ಮೈದಾನದಲ್ಲಿ ಸುತ್ತೋಟದ ಓಟಗಾರರು ಹೊರಟಲ್ಲಿಗೆ ಮತ್ತೆ ಬರುವಂತೆ, ಮರಳುವಷ್ಟರಲ್ಲಿ ಆ ಬಿಂದು ಗ್ರಹಚಲನೆಯ ದಿಶೆಯಲ್ಲಿ ಮುನ್ನಡೆದು, ಗ್ರಹವು ಪೂರ್ಣ ಪರಿಭ್ರಮಣೆ ಮುಗಿಸಿದ ಬಳಿಕ ಅದನ್ನು 'ಸ್ವೀಕರಿಸುವ' ವಿಚಿತ್ರ ವಿದ್ಯಮಾನವಿದು. ಈ ಮುನ್ನಡೆಯ ಅಳತೆ ಒಂದು ಶತಮಾನದಲ್ಲಿ ಸುಮಾರು ೪೩ ಕೋನ-ಸೆಕೆಂಡುಗಳು ಮಾತ್ರ. ನ್ಯೂಟನ್-ಬಲವಿಜ್ಞಾನದ ಪ್ರಕಾರ ವಿವರಿಸಲು ಸಾಧ್ಯವಾಗಿರದ ಈ ವೈಚಿತ್ರ್ಯವನ್ನು ಐನ್‌ಸ್ಟೈನರ ಸಿದ್ಧಾಂತ ಸಂದೇಹಾತೀತವಾಗಿ ಪರಿಹರಿಸಿ ನಿವಾರಿಸಿತು (೧೯೧೫).

## ಮರುಮದುವೆ

ಯುದ್ಧ ದಿನಗಳಂದು ನಾನೊಮ್ಮೆ ಬರ್ಲಿನ್ನಿಗೆ ಭೇಟಿ ನೀಡಿದ್ದೆ. ಐನ್‌ಸ್ಟೈನ್ ನನ್ನನ್ನು ತಮ್ಮ ಚಿಕ್ಕಪ್ಪನ (ರೂಡಾಲ್ಫ್ ಐನ್‌ಸ್ಟೈನ್) ಮನೆಗೆ ಭೋಜನಕ್ಕೆ ಬರಲು ಆಮಂತ್ರಿಸಿದರು. ಮೊದಲು ನಾನು ಬರಲೊಲ್ಲೆನೆಂದೆ : "ಪ್ರತಿಯೊಂದೂ ಬಲು ತುಟ್ಟಿಯಾಗಿರುವ ಈ ಸಮಯದಲ್ಲಿ ಅನಿರೀಕ್ಷಿತ ಅತಿಥಿಯನ್ನು ಯಾರೂ ಸ್ವಾಗತಿಸಲಾರರು." ಆಗ ಐನ್‌ಸ್ಟೈನ್ ಅವರ ಎಂದಿನ ನೈಷ್ಠಿಕವಾಣಿಯಲ್ಲಿ ನುಡಿದರು, "ಇಂಥ ಧರ್ಮಸೂಕ್ಷ್ಮಗಳಿಂದ ನೀವೇನೂ ಬಾಧಿತರಾಗಬೇಕಾಗಿಲ್ಲ. ತದ್ವ್ಯತಿರಿಕ್ತವಾಗಿ ನನ್ನ ಚಿಕ್ಕಪ್ಪನಲ್ಲಿ ಜನಸಂಖ್ಯೆಯ ತಲಾ ಸರಾಸರಿಗಿಂತ ಹೆಚ್ಚು ಆಹಾರ ಸಂಗ್ರಹವಿದೆ. ನೀವು ಅವರ ಮನೆಯಲ್ಲಿ ಉಂಡದ್ದಾದರೆ ಸಾಮಾಜಿಕ ನ್ಯಾಯದ ಕಾರಣವನ್ನು ಪೋಷಿಸಿದಂತಾಗುತ್ತದೆ." ಇದು ಮಗುವಿನ ಮುಗ್ಧತೆ ಎಂದೆನ್ನಿಸಿದರೂ ಇದನ್ನು ಕಟ್ಟಾಮ್ಲ ಟೀಕೆ ಎಂಬುದಾಗಿಯೂ ಪರಿಗಣಿಸಬಹುದು.

ಫಿಲಿಪ್ ಫ್ರ್ಯಾಂಕ್

ಕಾಳೆಗದ ದಿನಗಳಂದು ಬರ್ಲಿನ್ನಿನಲ್ಲಿ ನಾಗರಿಕ ಜೀವನ ಅಸ್ತವ್ಯಸ್ತವಾಯಿತು. ಆಹಾರ, ನೀರು, ಪ್ರಾಥಮಿಕ ಸೌಕರ್ಯಗಳು ಎಲ್ಲದರಲ್ಲೂ ಕಡುಹಸುಗೆ ಜಾರಿಗೆ ಬಂದಿತು. ಏಕಾಂಗಿಯಾಗಿದ್ದ ಐನ್‌ಸ್ಟೈನರಿಗೆ ಇಂಥ ಪರಿಸರದಲ್ಲಿ ಯುಕ್ತಾಹಾರ ವಿಹಾರ ವಿಶ್ರಾಂತಿ ದೊರೆಯುತ್ತಿರಲಿಲ್ಲ. ಸಂಶೋಧನಸಮಸ್ಯೆಗಳು ಮತ್ತು ಲೋಕಶಾಂತಿಗೆ ಭಂಗ ತರುತ್ತಿದ್ದ ಘಟನೆಗಳು ಎಂಬ ಎರಡು ಬಗೆಯ ಬೆಂಕಿಗಳಿಂದ ಇವರು ಬೇಯುತ್ತಿದ್ದರು. ರೂಡಾಲ್ಫರ ಮನೆಗೆ ಆಗ ಈಗ ಹೋಗುವುದು,

ಅಲ್ಲಿ ಎಲ್ಸಾ ಅಕ್ಕರೆಯಿಂದ ಅಟ್ಟು ಉಣಬಡಿಸುತ್ತಿದ್ದ ತಿಂಡಿ ತಿನಸುಗಳನ್ನು ಮೆಲ್ಲುವುದು, ವಾದ ಸಂವಾದಗಳಲ್ಲಿ ಲೀನರಾಗುವುದು, ಪಿಟೀಲು ವಾದನದಲ್ಲಿ ಮೈಮರೆಯುವುದು ಇವು ಐನ್‌ಸ್ಟೈನರ ಮನದ ಬೆಂಗಾಡಿಗೆ ತಂಪೆರೆಯುತ್ತಿದ್ದ ತನಿರಸಗಳಾಗಿದ್ದುವು. ಅನೇಕ ಸಂದರ್ಭಗಳಲ್ಲಿ ಇವರು ಅಲ್ಲಿಯೇ ತಂಗುವುದೂ ಇತ್ತು.

೧೯೧೭ರಲ್ಲಿ ಇವರು ಉಲ್ಬಣ ಉದರವ್ಯಾಧಿಗೆ ತುತ್ತಾದರು. ಪರಿಸ್ಥಿತಿ ವಿಷಮವಾಗಿತ್ತು. ಇವರ ಆರೈಕೆಯ ಪೂರ್ತಿಹೊಣೆಯನ್ನು ಎಲ್ಸಾ ವಹಿಸಿಕೊಂಡರು. ಈ 'ಪಾರಲೌಕಿಕ ಜೀವಿ' ಮರ್ತ್ಯಲೋಕಕ್ಕೆ ದೃಢಾರೋಗ್ಯ ಸಮೇತ ಇಳಿದು ಬರುವಂತೆ ಶ್ರಮಿಸಿದ ಸಾವಿತ್ರಿ ಈಕೆ. ಇವರ ನಲ್ಮೆಯ ಶುಶ್ರೂಷೆ ಒದಗಿರದಿದ್ದರೆ ಐನ್‌ಸ್ಟೈನ್ ಕತೆ ಅಲ್ಲಿಗೇ ಮುಗಿದಿರುತ್ತಿತ್ತೊ ಏನೊ.

ಮಿಲೇವಾ ಜೊತೆಗಿನ ಮದುವೆಗೆ ಅಧಿಕೃತ ವಿಚ್ಛೇದನೆ ೧೯೧೯ರಲ್ಲಿ ದೊರೆಯಿತು. ತರುವಾಯ ಅದೇ ವರ್ಷದ ಜೂನ್ ತಿಂಗಳಿನಲ್ಲಿ ಐನ್‌ಸ್ಟೈನ್ ಎಲ್ಸಾರನ್ನು ಮದುವೆ ಆದರು ; ಮತ್ತು ಈಕೆಯ ಇಬ್ಬರು ಹೆಣ್ಣು ಮಕ್ಕಳನ್ನು ದತ್ತು ಸ್ವೀಕರಿಸಿದರು. ಆರ್ಥಿಕವಾಗಿ ಈಗ ಎರಡು ಸಂಸಾರ ನಿರ್ವಹಿಸುವ ಹೊಣೆ ಇವರದಾಯಿತು : ಮಿಲೇವಾ ಮತ್ತು ಇಬ್ಬರು ಗಂಡು ಮಕ್ಕಳಿಗೆ ಹಣ ಒದಗಿಸುವುದು, ಸ್ವಂತ ಕುಟುಂಬವನ್ನು ಪೋಷಿಸುವುದು.

ಎಲ್ಸಾ ಭಾರತೀಯ ಋಷಿಪತ್ನಿಯಂತೆ ತನ್ನ ಪತಿಯನ್ನು ಜತನದಿಂದ ಕಾಪಾಡಿಕೊಂಡು ಬಂದರು. ಭೌತವಿಜ್ಞಾನದಲ್ಲಿ, ಅಷ್ಟೇಕೆ ಯಾವುದೇ ವಿಜ್ಞಾನವಿಭಾಗದಲ್ಲಿ, ಈ ಮಹಾರಾಯತಿಗೆ ಏನೂ ಪ್ರವೇಶವಿರಲಿಲ್ಲ. ಆದರೆ ಉತ್ತಮ ಗೃಹಿಣಿಯಾಗಿ ಸಮರ್ಥ ಮಹಾಪ್ರತಿಭಾನ್ವಿತ ಪತಿಗೆ ಒದಗಿಸಬೇಕಾದ ಸುಭದ್ರ ಮತ್ತು ಆದರ್ಶ ಗೃಹಪರಿಸರ ಒದಗಿಸುವುದರಲ್ಲಿ ಇವರು ಪರಮ ಕೃತಾರ್ಥರಾದರು. ಪಕ್ವ ಮಾತೃಹೃದಯದ ಈ ಗೃಹಸ್ತ್ರೀ ಐನ್‌ಸ್ಟೈನರಿಗೆ ದಿವ್ಯ ರಕ್ಷೆಯಾಗಿ, ಗೃಹಶ್ರೀಯಾಗಿ ನಿಂತಿಲ್ಲವಾಗಿದ್ದರೆ ಇವರ ಭವಿಷ್ಯ ಹೇಗೆ ರೂಪುಗೊಳ್ಳುತ್ತಿತ್ತೊ ಊಹಿಸುವುದೂ ಸಾಧ್ಯವಾಗದು.

"ನನ್ನ ಹೆಂಡತಿಗೆ ಏನೂ ವಿಜ್ಞಾನ ತಿಳಿದಿಲ್ಲವೆಂಬುದು ಸಂತಸದ ಸಂಗತಿ. ಮೊದಲ ಹೆಂಡತಿಗೆ ತಿಳಿದಿತ್ತು," ಎಂಬುದಾಗಿ ಐನ್‌ಸ್ಟೈನ್ ಮಿತ್ರನೊಡನೆ ಹೇಳಿದ್ದುಂಟು.[೨೪]

ಒಂದನೆಯ ಮಹಾಯುದ್ಧದ ಗಂಡಾಂತರ ದಿನಗಳಂದು ಎಲ್ಸಾ ಒಮ್ಮೆ ಅರ್ಧ ಗಾಂಭೀರ್ಯದಿಂದ, ತನ್ನ ಜತನ ವಸ್ತುವಾದ ಐನ್‌ಸ್ಟೈನರ ಭೌತವಿಜ್ಞಾನ ಮೇಲ್ಮೆಯನ್ನು ವರ್ಣಿಸಿದ್ದರು. "ನಮ್ಮ ಆಲ್ಬರ್ಟ್ಲ್ ಎಂಥ ಜಾಣ ಭೌತವಿಜ್ಞಾನಿ ಎಂಬುದು ನನಗೆ ಚೆನ್ನಾಗಿ ಗೊತ್ತು. ಇಂದು ಆಹಾರ ಪದಾರ್ಥಗಳು ಸಿಕ್ಕುವುದು ಬಲು ಕಷ್ಟ. ಸಿಕ್ಕ ಡಬ್ಬಿಗಳಲ್ಲಿ ಅವನ್ನು ಹುಡುಕಬೇಕು. ಇನ್ನು ಈ ಡಬ್ಬಿಗಳೋ ! ತುಕ್ಕು ಹಿಡಿದವು, ತಿರುಚಿಕೊಂಡವು, ವಿಕಾರ ಮಾದರಿಯವು. ವಿದೇಶೀ ತಯಾರಿಕೆಗಳೂ ಸಾಕಷ್ಟಿವೆ. ಇವನ್ನು ಬಿಚ್ಚಿ ತೆರೆಯುವುದು ಹೇಗೆಂಬುದು ಯಾರಿಗೂ ತಿಳಿಯದು. ತೆರೆ ಸೂತ್ರ ಈ ಡಬ್ಬಗಳಿಗೆ ಲಗತ್ತಾಗಿ ದೊರೆಯುವುದೂ ಇಲ್ಲ. ಆದರೆ ನಮ್ಮ ಆಲ್ಬರ್ಟ್ಲನಿಗೆ ತೆರೆಯಲಾಗದ ಒಂದೇ ಒಂದು ಡಬ್ಬಿ ಕೂಡ ಈ ತನಕ ಎದುರಾಗಿಲ್ಲ!" ('ಆಲ್ಬರ್ಟ್' ಪದವನ್ನು ಎಲ್ಸಾ ಉಚ್ಚರಿಸುತ್ತಿದ್ದುದು 'ಆಲ್ಬರ್ಟ್ಲ' ಎಂದು.)

ಯಶಸ್ವೀ ಏಕಸ್ವ ಗುಮಾಸ್ತ, ಬುಧಕಕ್ಷೆಯ ಜಟಿಲ ನೇಯ್ಗೆಗಳನ್ನು ಎಳೆ ಎಳೆಯಾಗಿ ಬಿಡಿಸಿದವ, ಪರಮಾಣುರಹಸ್ಯವನ್ನು ಭೇದಿಸಿದವ, ವಿಶ್ವದರ್ಶನಕ್ಕೆ ಹೊಸ ಕಿಟಕಿ ತೆರೆದವ—ಇಂಥವನೆದುರು ಡಬ್ಬಿಯ ಸಿಸೇಮೆ ತೆರೆಯದಿದ್ದೀತೇ ?

## ತಾಯಿಯ ಕೊನೆ ಗಳಿಗೆ

ನಾಟಕದ ಕಡೆಯ ಅಂಕದ ಕಡೆಯ ದೃಶ್ಯವನ್ನು ಕಡೆಗಣಿಸಲಾಗದು. ಅದು ಆರಂಭದ ದೃಶ್ಯದಷ್ಟೇ ಅದ್ಭುತ ರಮ್ಯವಾಗಿರಬೇಕು. ಅಷ್ಟೇ ಕುತೂಹಲದಾಯಕವಾಗಿರಬೇಕು, ವಿಸ್ಮಯಕಾರಕವಾಗಿರಬೇಕು. ಜೀವನನಾಟಕಕ್ಕೆ ಸಹ ಈ ಮಾತು ಅನ್ವಯಿಸುತ್ತದೆ ಸದಾಶಿವಗುರು.

ಎಸ್. ವಿ. ಪರಮೇಶ್ವರಭಟ್ಟ

ಮನೆ ನೆಮ್ಮದಿ ಆಯಿತು. ಆದರೆ ಮನವರಳಲಿಲ್ಲ. ಏಡಿಗಂತಿ ಬೇನೆಯಿಂದ ನವೆಯುತ್ತಿದ್ದ ತಾಯಿ ಮಗನೆದುರೇ ಗಳಿಗೆ ಎಣಿಸುತ್ತಿದ್ದರು.

ಮಿತ್ರ ಮ್ಯಾಕ್ಸ್ ಬಾರ್ನ್‌ರಿಗೆ (೧೮೮೨-೧೯೭೦, ಜರ್ಮನ್-ಬ್ರಿಟಿಷ್ ಭೌತವಿಜ್ಞಾನಿ, ಶಕಲ ಸಿದ್ಧಾಂತದ ಗಣಿತ ತಳಹದಿಯನ್ನು ಭದ್ರಪಡಿಸುವುದರಲ್ಲಿ ಪ್ರಮುಖ ಪಾತ್ರಧಾರಿ. ೧೯೫೪ರಲ್ಲಿ ನೊಬೆಲ್ ಪಾರಿತೋಷಿಕ ಪುರಸ್ಕೃತ) ಮಾರ್ಚ್ ೧೯೨೦ರಲ್ಲಿ ಒಂದು ಕಾಗದ ಬರೆದರು. ತಾವು ಯಾವ ಊರು ಸೇರಬೇಕು ಎಂಬುದರ ಬಗ್ಗೆ ಬಾರ್ನ್ ಆ ಮೊದಲು ಐನ್‌ಸ್ಟೈನರ ಸಲಹೆ ಕೋರಿದ್ದರು. ಇವರನ್ನು ಕೊರೆಯುತ್ತಿದ್ದ ಮನದಳಲು ಈ ಕಾಗದದಲ್ಲಿ ಪಡಿ ಮೂಡಿದೆ, ". . . ವ್ಯಕ್ತಿ ಎಲ್ಲಿ ನೆಲಸುತ್ತಾನೆ ಎಂಬುದು ಮುಖ್ಯವಲ್ಲ. ಅತಿಯಾಗಿ ವಿಚಾರ ಮಾಡುವುದನ್ನು ಬಿಟ್ಟು ಸಹಜ ಪ್ರವೃತ್ತಿಯನ್ನು ಅನುಸರಿಸುವುದೇ ಉತ್ತಮ ಮಾರ್ಗ. ಅಲ್ಲದೆ ಎಲ್ಲಿಯೂ ಬೇರುಗಳಿಲ್ಲದ ವ್ಯಕ್ತಿಯಾದ ನಾನು ನಿಮಗೆ ಯುಕ್ತ ಸಲಹೆ ನೀಡಲು ಸಮರ್ಥನೆಂದು ಭಾವಿಸಿಲ್ಲ. ನನ್ನ ತಂದೆಯವರ ದೇಹಶೇಷಗಳು ಮಿಲಾನಿನಲ್ಲಿ ಹುದುಗಿವೆ. ಇದೇ ಕೆಲವು ದಿನಗಳ ಹಿಂದೆ ನನ್ನ ತಾಯಿಯವರನ್ನು ಇಲ್ಲಿ ಮಣ್ಣುಗೂಡಿಸಿದ್ದೇನೆ. ಸ್ವತಃ ನಾನೇ ಹಿಂದೆ ಮುಂದೆ ನೆಲೆ ಬದಲಾಯಿಸುತ್ತ ಬಂದಿದ್ದೇನೆ. ಪ್ರತಿಯೊಂದು ಕಡೆಯೂ ಹೊಸಬನೇ ಆಗಿದ್ದೇನೆ. ನನ್ನ ಮಕ್ಕಳು ಸ್ವಿಟ್ಸರ್ಲೆಂಡಿನಲ್ಲಿದ್ದಾರೆ. ಅವರನ್ನು ನೋಡಬೇಕೆಂದು ಬಯಸಿದಾಗ ಸಾಕಷ್ಟು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ತನಗೆ ಸಮೀಪ ಮತ್ತು ಪ್ರಿಯರಾದವರ ಜೊತೆ ತಾನಿದ್ದಲ್ಲೇ ಮನೆ ಎಂಬುದು ನನ್ನಂಥ ಒಬ್ಬ ವ್ಯಕ್ತಿಯ ಆದರ್ಶವಾಗಿರಬೇಕು. ಇಂಥ ನಾನು ನಿಮಗೆ ಸಲಹೆ ನೀಡಲು ಅಧಿಕಾರ ಪಡೆದಿಲ್ಲ."

## ನ್ಯೂಟನ್ ತರುವಾಯ ಯಾರು ?

ಇಪ್ಪತ್ತನೆಯ ಶತಮಾನದ ಪ್ರಥಮಾರ್ಧವು, ಭೌತವಿಜ್ಞಾನಕ್ಕೆ ಲಭಿಸಿದ ಅಸಾಧಾರಣ ಕುಮ್ಮಕ್ಕಿನಿಂದ ಪ್ರಖ್ಯಾತವಾಗಿ, ವಿಜ್ಞಾನೇತಿಹಾಸದ ಪರಮೋಜ್ಜ್ವಲ ಅಧ್ಯಾಯಗಳ ಪೈಕಿ ಒಂದಾಗಿ ಉಳಿದಿರುತ್ತದೆ. ಆ ಕೆಲವೇ ವರ್ಷಗಳಲ್ಲಿ ಮಾನವಕೃತ ವಿಜ್ಞಾನಗಳು ಶತಮಾನಗಳ ಕಾಲ ಉಳಿದಿರಬಲ್ಲ ಎರಡು ಚಿರ ದಾಖಲೆಗಳನ್ನು ಸ್ಥಾಪಿಸಿದುವು : ಸಾಪೇಕ್ಷತಾಸಿದ್ಧಾಂತ ಮತ್ತು ಶಕಲಸಿದ್ಧಾಂತ. ಮೊದಲನೆಯದು ಪೂರ್ತಿಯಾಗಿ ಆಲ್ಬರ್ಟ್ ಐನ್‌ಸ್ಟೈನರ ಸೃಜನಶೀಲ ಮಿದುಳಿನ ಕೊಡುಗೆ. ಎರಡನೆಯದರ ಆರಂಭದ ಶಿಲಾನ್ಯಾಸ ಪ್ಲ್ಯಾಂಕರಿಂದ ಆಯಿತಾದರೂ ಇದರ ಮುನ್ನಡೆಯಲ್ಲಿಯ ಕೆಲವೊಂದು ಗಮನಾರ್ಹ ಸಿದ್ಧಿಗಳಿಗೆ ಐನ್‌ಸ್ಟೈನ್ ಕಾರಣ.

ಲೂಯೀ ಡಿ ಬ್ರಾಗ್ಲೀ

೧೯೧೯ ನವಂಬರ್ ತಿಂಗಳು. ವೈರಿರಾಷ್ಟ್ರ ಜರ್ಮನಿ ಯುದ್ಧದಲ್ಲಿ ಸೋತು ಶರಣಾಗತವಾದ ಶುಭದಿವಸದ ಪ್ರಥಮ ವಾರ್ಷಿಕೋತ್ಸವ. ಮಿತ್ರರಾಷ್ಟ್ರ ಇಂಗ್ಲೆಂಡಿನ ವಿಖ್ಯಾತ ದೈನಿಕ *The Times* ನವಂಬರ್ ೭ರಂದು ಈ ಶುಭ ಸಮಾಚಾರವನ್ನು ಭರ್ಜರಿ ಶೀರ್ಷಿಕೆಯಲ್ಲಿ ಮಿಂಚಿಸಿತು: "ಧನ್ಯ ಹುತಾತ್ಮರು. ಶಸ್ತ್ರವಿರಾಮ ದಿನಾಚರಣೆ. ದೇಶಾದ್ಯಂತ ರೈಲು ಸಂಚಾರದ ನಿಲುಗಡೆ."

ಈ ಅತ್ಯಾನಂದಕರ ಸುವಾರ್ತೆ ಪ್ರಕಟವಾಗಿದ್ದ ಮಹಾ ಸುದಿನದಂದು ಅದೇ ಪತ್ರಿಕೆಯಲ್ಲಿ ಇನ್ನೂ ಒಂದು 'ಬಿಸಿಸುದ್ದಿ' ಇಷ್ಟೇ ಗಣ್ಯಸ್ಥಾನ ಪಡೆದಿತ್ತು : "ವಿಜ್ಞಾನದಲ್ಲಿ ಕ್ರಾಂತಿ. ನ್ಯೂಟನ್ನನ ಭಾವನೆಗಳು ಧೂಳಿಧೂಸರಿತ."

ಆದದ್ದೇನು ? ನೇರ ಸಲಾಕಿಯಂತೆ ವಿಶ್ವಾದ್ಯಂತ ಧಾವಿಸುವುದೆಂದು ಭಾವಿಸಲಾಗಿದ್ದ ಬೆಳಕನ್ನು ಐನ್‌ಸ್ಟೈನ್ ಬಗ್ಗಿಸಿದ್ದರು !

ಬೆಳಕು ಪ್ರಬಲ ಗುರುತ್ವಾಕರ್ಷಣಕ್ಷೇತ್ರದ ಸನಿಹದಲ್ಲಿ ಸಾಗುವಾಗ ಇದರತ್ತ ಬಾಗುವುದೆಂಬುದಾಗಿ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತ ಕಣಿ ನುಡಿದಿತ್ತು (೧೯೧೫). ಬೆಳಕಿನ 'ಧಾರೆ'ಯನ್ನು ಕ್ಷೇತ್ರ 'ಹಿಡಿದು' ತನ್ನೆಡೆಗೆ ಜಗ್ಗುವಂಥ ವಿದ್ಯಮಾನವಿದು : ಸಾಗರೋತ್ತರಣನಿರತ ವಾಯುಸುತ ಹನುಮಂತನನ್ನು ಸಿಂಹಿಕೆ ಸೆಳೆದಂತೆ. ಬಾಗುಕೋನವನ್ನು ಕೂಡ ಸಿದ್ಧಾಂತ ಗಣಿಸಿತ್ತು.

ವಿಜ್ಞಾನದಲ್ಲಿ ಪ್ರಯೋಗವೊಂದೇ ಊಹನೆಯ ನಿಕಷ. ಭೂಮಿಯಲ್ಲಿ ಒದಗುವ ಯಾವ ನೈಸರ್ಗಿಕ ಗುರುತ್ವಾಕರ್ಷಣಕ್ಷೇತ್ರವೂ ಉದಾಹರಣೆಗೆ ಹಿಮಾಲಯ ಪಂಕ್ತಿಯಂಥ ಬೆಟ್ಟಗಳ ಹಿರಿದಂಡು ಕೂಡ, ಚಟುಲಗತಿಯ ಬೆಳಕಿಗೆ ಕಡಿವಾಣ ತೊಡಿಸಿ ಲಗಾಮು ಜಗ್ಗುವುದರಲ್ಲಿ ಯಶಸ್ವಿ ಆಗದು. ಮನುಷ್ಯನಿರ್ಮಿತ ಕೃತಕ ಕ್ಷೇತ್ರವಂತೂ ಅತಿ ದುರ್ಬಲವಾದುದರಿಂದ ನಿಷ್ಪ್ರಯೋಜಕ. ಸೂರ್ಯಸಮಾನ ತಾರೆಗಳು ಮಾತ್ರ ಪರಿಣಾಮಕಾರಿ ಆದಾವು ಅಷ್ಟೆ. ಆದರೆ ಸೂರ್ಯಸಾಮೀಪ್ಯದಲ್ಲಿ ಒಂಟಿ ಕಿರಣದ ಬಾಗನ್ನು ಅರಸುವುದೂ ಉಪ್ಪಿನ ಮೊಳದಿಂದ ಕಡಲಾಳವನ್ನು ಅಳೆಯುವುದೂ ಒಂದೇ !

ಬಾನ ಹಿರಿ ಆಳಗಳಲ್ಲಿ ಹರಡಿಹೋಗಿರುವ ಎಣಿಕೆಗೆ ನಿಲುಕದ ನಕ್ಷತ್ರಗಳ ಬೆಳಕಿನ ಹುಡಿಗಳು ಒಟ್ಟಾಗಿ ನಮ್ಮಲ್ಲಿ ಬಗೆಬಗೆಯ ರಂಗವಲ್ಲಿಗಳನ್ನು ಬಿಂಬಿಸುತ್ತವೆ. ಇವು ದೀರ್ಘಕಾಲ




ಚಿತ್ರ ೩. ನಕ್ಷತ್ರಕ್ಕೂ ($A$) ಭೂಮಿಗೂ ($E$) ನಡುವೆ ಸೂರ್ಯ ($S$) ಇದ್ದಿಲ್ಲವಾಗಿದ್ದರೆ ಆಗ ನಕ್ಷತ್ರದಿಂದ ಹೊರಟ ಬೆಳಕಿನ ಕಿರಣ ಸರಳರೇಖೆಯಲ್ಲಿ ಸಂಚರಿಸಿ ಭೂಮಿಯನ್ನು ತಲಪಿರುತ್ತಿತ್ತು. ಆದರೆ ಈಗ ಸೌರ ಗುರುತ್ವಾಕರ್ಷಣಕ್ಷೇತ್ರದ ಕಾರಣವಾಗಿ $AE$ ರೇಖೆಯು ಚಿತ್ರದಲ್ಲಿ ಕಾಣಿಸಿರುವಂತೆ ಬಗ್ಗಿದೆ. ಇದರ ಪರಿಣಾಮವಾಗಿ ಭೂಮಿಯಲ್ಲಿರುವ ವೀಕ್ಷಕನಿಗೆ ನಕ್ಷತ್ರಸ್ಥಾನ ಸೂರ್ಯನಿಂದ ಹೊರಕ್ಕೆ $B$ಗೆ ಸರಿದಿರುವಂತೆ ಕಾಣುತ್ತದೆ. ಭೂಮಿಯಿಂದ ಕಾಣುವ ನಕ್ಷತ್ರಪ್ರತಿಬಿಂಬವು ಬೊಟ್ಟು ಗೆರೆಯ ಕೊನೆಯಲ್ಲಿ $B$ಯಲ್ಲಿದೆ. ಎರಡು ಗೆರೆಗಳ ನಡುವಿನ ಕೋನವೇ ನಕ್ಷತ್ರದ ಸರಿತ.

ಬದಲಾಗವು. ಹೀಗಾಗಿ ಸಮೀಪ ಕಾಯಗಳಾದ ಚಂದ್ರ, ಗ್ರಹ, ಸೂರ್ಯ ಮುಂತಾದವು ನಕ್ಷತ್ರ ರಂಗವಲ್ಲಿ ರಂಜಿತ ಆಕಾಶ ತೆರೆಯ ಮೇಲೆ ಸರಿಯುತ್ತಿರುವಂತೆ ಭಾಸವಾಗುತ್ತವೆ. ಸೂರ್ಯ ಯಾವುದೇ ಮುಹೂರ್ತದಲ್ಲಿ ಈ ತೆರೆಯ ಮೇಲೆ ಎಲ್ಲಿ ಕಾಣುತ್ತದೆ ಎಂಬುದನ್ನು ಕರಾರುವಾಕ್ಕಾಗಿ ಗಣಿಸಿ ನಿರ್ಧರಿಸಬಹುದು, ಮತ್ತು ವೀಕ್ಷಣೆಯಿಂದ ಗಣನೆಯ ಸತ್ಯತೆಯನ್ನು ರುಜುಪಡಿಸಬಹುದು. ಪೂರ್ಣ ಸೂರ್ಯಗ್ರಹಣ ಮುಹೂರ್ತದಲ್ಲಿ, ಸೂರ್ಯನ ಒತ್ತಿಗೆ ಹಿನ್ನೆಲೆಯಲ್ಲಿರುವ ನಕ್ಷತ್ರಚಿತ್ರಗಳನ್ನು, ಛಾಯಾಚಿತ್ರೀಕರಿಸುವುದು ಸಾಧ್ಯ. ಈ ಚಿತ್ರಗಳಿಂದ, ಆ ಮುಹೂರ್ತದಲ್ಲಿ ಭೂಮಿಗೆ ಕಾಣುವಂತೆ, ನಕ್ಷತ್ರಸ್ಥಾನಗಳನ್ನು ನಿಷ್ಕೃಷ್ಟವಾಗಿ ನಿರ್ಧರಿಸಬಹುದು. ಇವನ್ನು ಅವೇ ನಕ್ಷತ್ರಗಳ ನಿಜಸ್ಥಾನಗಳೊಂದಿಗೆ ಹೋಲಿಸಿದಾಗ ಎರಡರ ನಡುವೆ ತುಸುವಾದರೂ ವ್ಯತ್ಯಯ ಕಂಡುಬಂದರೆ ಈ ಸ್ಥಾನಪಲ್ಲಟದ ಕಾರಣವು ಸೂರ್ಯನ ಪ್ರಬಲ ಗುರುತ್ವಾಕರ್ಷಣಕ್ಷೇತ್ರವೆಂದು ತೀರ್ಮಾನಿಸಬಹುದು. ಅಂದರೆ ನಕ್ಷತ್ರಗಳಿಂದ ಹೊರಟು ಸೂರ್ಯನ ಸಮೀಪವಾಗಿ ಹಾದು ಭೂಮಿಗೆ ಬರುವ ಬೆಳಕಿನ ಕಿರಣಗಳು ಸೌರ ಗುರುತ್ವಾಕರ್ಷಣಕ್ಷೇತ್ರದ ಕಾರಣವಾಗಿ ಬಗ್ಗುತ್ತವೆ ಎಂಬುದು ದೃಢಪಡುತ್ತದೆ.

ಐನ್‌ಸ್ಟೈನರ ಜೀವನಚರಿತ್ರಕಾರ ಫಿಲಿಪ್ ಫ್ರ್ಯಾಂಕ್ (ಇವರು ಪ್ರಾಹಾದಲ್ಲಿ ಐನ್‌ಸ್ಟೈನ್ ತೆರವು ಮಾಡಿದ ಸ್ಥಾನಕ್ಕೆ ಪ್ರಾಧ್ಯಾಪಕರಾಗಿ ನೇಮಕಗೊಂಡರು) ಹೇಳುತ್ತಾರೆ : "ಐನ್‌ಸ್ಟೈನ್ ಇಷ್ಟದಿಂದ ಬಳಸುವ ಉಪಮೆಯ ಮಾತಿನಲ್ಲಿ ಹೇಳುವುದಾದರೆ ನವಸಿದ್ಧಾಂತಗಳನ್ನು ಅಂದದ ಉಡುಪುಗಳಿಗೆ ಹೋಲಿಸಬಹುದು. ಇವು ಉಡುಪು ತಯಾರಕರ ಗಾಜಿನ ತೆರೆಕಪಾಟುಗಳಲ್ಲಿ ಪ್ರದರ್ಶಿತವಾಗಿ ಎಲ್ಲ ಮಹಿಳೆಯರ ಕಣ್ಣುಗಳನ್ನೂ ಸೆಳೆಯುತ್ತವೆ. ಸುರಸುಂದರಿಯೊಬ್ಬಳು ಇಂಥ ಪೋಷಾಕನ್ನು ಖರೀದಿಸಲು ಬಯಸುತ್ತಾಳೆ. ಆದರೆ ಇದು ಅವಳಿಗೆ ಒಪ್ಪವಾದೀತೇ ? ಅವಳ ಸೌಂದರ್ಯವನ್ನು ಮಸಗಿಸೀತೇ ? ಇಲ್ಲ ಮಸುಳಿಸೀತೇ ? ಉಜ್ಜ್ವಲ ದೀಪಗಳ ಪ್ರಕಾಶದಲ್ಲಿ ಇದನ್ನವಳು ತೊಟ್ಟು ಮೆರೆವ ತನಕ ಇತ್ಯರ್ಥವಾಗದು. ಐನ್‌ಸ್ಟೈನರ ಸಿದ್ಧಾಂತ (ಬೆಳಕಿನ ಬಗ್ಗುವಿಕೆ) ಅಂಗಡಿಯ ತೆರೆಕಪಾಟದಲ್ಲಿ ಇರಿಸಲಾದ ಮತ್ತು ಆ ತನಕ ತೊಡದಿದ್ದ ಪೋಷಾಕು.[೨೫] ಸೂರ್ಯ ಗ್ರಹಣವೇ ಇದನ್ನು ತೊಡಲು ಒದಗಿಬಂದ ಮೊದಲ ಅವಕಾಶ."

## ಗಗನ ಬಯಲಾಟ

> ಗಣಿತವಿದನ ದೃಷ್ಟಿಯಲ್ಲಿ ಗುರುತ್ವಾಕರ್ಷಣೆಯ ಬಗೆಗೆ ಐನ್‌ಸ್ಟೈನ್ ಮಂಡಿಸಿದ ನೂತನ ಪರಿಕಲ್ಪನೆ ಸೌಂದರ್ಯ ಹಾಗೂ ತಾರ್ಕಿಕ ಸರಳತೆಯಿಂದ ಕೂಡಿತ್ತು. ಆದರೆ ವೀಕ್ಷಣ-ಖಗೋಳವಿಜ್ಞಾನಿಯ ದೃಷ್ಟಿಯಲ್ಲಿ ಇವೆಲ್ಲವೂ ಕೇವಲ ಮಾಯೆಯೇ ಆಗಿರಬಹುದಾದ ಚಿಂತಾಜನಕ ಸಂದೇಹವಂತೂ ಇದ್ದೇ ಇತ್ತು. ನ್ಯೂಟನ್ನನ ಸಿದ್ಧಾಂತ ಇವರಿಗೆ ಸಮರ್ಪಕ ಸೇವೆ ಒದಗಿಸಿತ್ತಾಗಿ ಇವರ ದೃಷ್ಟಿಕೋನವನ್ನು ಬದಲಾಯಿಸಲು ಕೇವಲ ಗಣಿತಚಮತ್ಕಾರ ಅಥವಾ ನಾಜೂಕುತನ ಒಂದೇ ಸಾಕಾಗದೆ ಬೇರೇನೋ ಒಂದು ಬೇಕಾಗಿತ್ತು. ಖಗೋಳವಿಜ್ಞಾನಿಗಳ ಪ್ರಕಾರ ಸೂರ್ಯಗ್ರಹಣವೊಂದೇ ಇಂಥ ಅವಕಾಶವನ್ನು ಒದಗಿಸಬಲ್ಲದಾಗಿತ್ತು.
>
> **ಫಿಲಿಪ್ ಫ್ರ್ಯಾಂಕ್**

ಇಂಗ್ಲೆಂಡಿನ ವಿಜ್ಞಾನಿಗಳು ಪ್ರಯೋಗಪರಿಣತಮತಿಗಳು. ಅಡಚಣೆ ಕಡಿದಾದಷ್ಟೂ ಹಿರಿ ಹಿಗ್ಗುವ ಹುಮ್ಮಸಿಗರು. ಬೆಳಕಿನ ಬಗ್ಗುವಿಕೆಯ ಪರೀಕ್ಷಣೆ ಇವರಿಗೆದುರಾದ ಇಂಥ ಒಂದು ಮಹಾಸವಾಲು. ವಿಖ್ಯಾತ ಇಂಗ್ಲಿಷ್ ಖಗೋಳವಿಜ್ಞಾನಿ ಸರ್ ಆರ್ಥರ್ ಎಡಿಂಗ್ಟನ್ (೧೮೮೨-

೧೯೪೪) ಇವರ ಹಿರಿತನದಲ್ಲಿ ತಜ್ಞರ ಒಂದು ಸಮಿತಿ ಮೈದಳೆಯಿತು. ಉದ್ದೇಶ : ೧೯೧೯ ಮೇ ೨೯ರಂದು ಸಂಭವಿಸಲಿದ್ದ ಪೂರ್ಣ ಸೂರ್ಯಗ್ರಹಣದ ಛಾಯಾಚಿತ್ರೀಕರಣ, ಅಧ್ಯಯನ, ಮತ್ತು ಐನ್‌ಸ್ಟೈನ್-ಸಿದ್ಧಾಂತದ ತಪಾಸಣೆ. ೧೯೧೮ ನವಂಬರ್ ೧೧ರಂದು ಯುದ್ಧವಿರಾಮಕ್ಕೆ ರುಜು ಬಿದ್ದೊಡನೆಯೇ ಸಮಿತಿಯು ಕ್ಷಿಪ್ರ ಕಾರ್ಯೋದ್ಯುಕ್ತವಾಗಿ ತನ್ನ ಯೋಜನೆಯ ವಿವರಗಳನ್ನು ಪ್ರಕಟಿಸಿತು. ವೈರಿಜನಾಂಗದ (ಜರ್ಮನಿ) ವಿಜ್ಞಾನಸಿದ್ಧಾಂತವನ್ನು ಪರೀಕ್ಷಿಸಲು ಇವರಿಗೇನು ಮಾರಿಹೊಕ್ಕಿದೆ ಎಂದು ಸ್ವಜನಾಂಗದವರು (ಇಂಗ್ಲೆಂಡ್) ಟೀಕಿಸಿದ್ದುಂಟು. ಆದರೆ ಸ್ವತಃ ಕ್ವೇಕರ್ ಪಂಥದ (ಯುದ್ಧವನ್ನು ವಿರೋಧಿಸುವ,ಶಾಂತಿಯನ್ನು ಪ್ರತಿಪಾದಿಸುವ, ಸರಳ ಜೀವನ ವನ್ನೂ ಗಭೀರ ಮತ್ತು ಗಂಭೀರ ಚಿಂತನೆಯನ್ನೂ ಬೆಂಬಲಿಸುವ ಕ್ರಿಶ್ಚಿಯನ್ ಸ್ನೇಹಿತರ ಕೂಟ) ಎಡಿಂಗ್ಟನ್ ಈ ಕುಹಕಿಗಳ ಅಂಬೋಣಗಳಿಗೆ ಸೊಪ್ಪು ಹಾಕಲಿಲ್ಲ. ಅಂತಾರಾಷ್ಟ್ರೀಯವೂ ಸ್ನೇಹ ಶೀಲವೂ ಆಗಿರುವ ವಿಜ್ಞಾನ ಸಿದ್ಧಾಂತಗಳು, ಹೇಗೆ ಸೂರ್ಯರಶ್ಮಿ ವಾಯುಮಂಡಲ ಮುಂತಾದವೂ ಹಾಗೆ, ಮಾನವ ಪರಂಪರೆಯ ಸೊತ್ತು, ಇಲ್ಲಿ ಮಿತ್ರ- ಅಥವಾ ಸ್ವಕೀಯ-ವಿಜ್ಞಾನ, ವೈರಿ- ಅಥವಾ ಪರಕೀಯ-ವಿಜ್ಞಾನ ಎಂಬ ವಿಭೇದೀಕರಣ ಸಲ್ಲದೆಂಬುದಾಗಿ ಇವರ ನಂಬಿಕೆ.

ಪೂರ್ಣ ಸೂರ್ಯಗ್ರಹಣ ಘಟಿಸುವಾಗಲೂ ಅದು ಗೋಚರವಾಗುವುದು ಭೂಮಿಯ ಅತಿ ಸೀಮಿತ ಸ್ಥಳಗಳಿಗೆ ಮಾತ್ರ. ಅಲ್ಲಿಯೂ ಪೂರ್ಣತೆಯ ಅವಧಿ ತೀರ ಮಿತ. ಆಗಲೂ ಹವೆ ಕೈಗೊಟ್ಟರೆ ಭೂಮಿಬಂಧಿತ ವಿಜ್ಞಾನಿ ಥೇಟ್ ಧೃತರಾಷ್ಟ್ರನೇ.

ಇಂಗ್ಲೆಂಡಿನ ಅನ್ವೇಷಕರು ಪೂರ್ಣಗ್ರಹಣ ಗೋಚರಿಸುವ ಎರಡು ದೂರದೂರದ ನೆಲೆಗಳಿಗೆ ವಲಸೆ ಹೋದರು : ಮೊದಲನೆಯ ತಂಡದವರು ಬ್ರೆಝಿಲ್ಲಿಗೆ, ಎರಡನೆಯ ತಂಡದವರು ಪಶ್ಚಿಮ ಆಫ್ರಿಕದ ಗಿನೀ ಕಡಲ್ಗಾಲುವೆಯಲ್ಲಿಯ ಪ್ರಿನ್ಸಿಪೀ ನಡುಗುಡ್ಡೆಗೆ. ಎರಡನೆಯದರ ನಾಯಕತ್ವವನ್ನು ಎಡಿಂಗ್ಟನ್ನರೇ ವಹಿಸಿಕೊಂಡಿದ್ದರು.

ಪ್ರಿನ್ಸಿಪೀ ತಂಡ ಯೋಗ್ಯ ಸ್ಥಳದಲ್ಲಿ ಒಂದು ತಿಂಗಳ ಮೊದಲೇ ಠಿಕಾಣಿ ಹೂಡಿತು, ಸಲಕರಣೆಗಳನ್ನು ಸಜ್ಜುಗೊಳಿಸಿತು. ಗಗನ ಮಾಯಾಲಾಂದ್ರದ ನೆರಳು ಬೆಳಕಿನಾಟ ನೋಡಿ ಛಾಯಾಚಿತ್ರೀಕರಿಸಲು ಸಿದ್ಧವಾಯಿತು. ಕೊನೆಗೂ ಗಳಿಗೆ ಬಟ್ಟಲು ತುಂಬಿತು. ಸೂರ್ಯ ವೃಷಭ ರಾಶಿಯಲ್ಲಿ ಹೈಯೆಡೀಝ್ ನಕ್ಷತ್ರಗಳ (ಕೃತ್ತಿಕಾ-ರೋಹಿಣಿ ರೇಖೆಯ ಮೇಲೆ ರೋಹಿಣಿಗೆ ಹತ್ತಿರ ದಲ್ಲಿವೆ) ಮುನ್ನೆಯಲ್ಲಿದ್ದಾಗ ಗ್ರಹಣ ಆರಂಭವಾಯಿತು. ಆದರೆ ದುರ್ದೈವ : ಹವೆರಾಯ ಸಹಕರಿ ಸಲಿಲ್ಲ. ಈಗ ಮೋಡಗಳ ತೆಳುಬುರಕಿ ಮುಸುಕಿತು, ದಟ್ಟವಾಯಿತು, ಹಠಾತ್ತನೆ ಅವಕುಂಠನ ಹರಿಯಿತು, ಬಾನಬಯಲಾಟದ ಪೂರ್ಣದರ್ಶನವಾಯಿತು, ಮತ್ತೆ ಬಂದಿತು ಆನೆಗಳ ದಂಡು. ಪೂರ್ಣತೆಯ ಅವಧಿ ೩೦೨ ಸೆಕೆಂಡುಗಳು ಮಾತ್ರ. ೨ರಿಂದ ೨೦ ಸೆಕೆಂಡ್ ಅವಧಿಗಳ ಒಟ್ಟು ಹದಿನಾರು ಛಾಯಾಚಿತ್ರಗಳನ್ನು ಒಡ್ಡಲಾಯಿತು. ಎಡಿಂಗ್ಟನ್ನರು ಈ ರೋಮಾಂಚಕ ಅನುಭವ ವನ್ನು ಉಮರ್ ಖಯ್ಯಾಮನ ಪದ್ಯ ಉಲ್ಲೇಖಿಸಿ ಹೆಪ್ಪುಗಟ್ಟಿಸಿದ್ದಾರೆ :

ಮೇಲೂ ಕೆಳಗೂ ಒಳಗೂ ಹೊರಗೂ
ನೋಡೋ ! ನಡೆದಿದೆ ಜಂಜಾಟ—
ಇದು ಅಲ್ಲೋ ಬರಿದೇ ನೆರಳಾಟ :
ಪೆಟ್ಟಿಗೆಯೊಳಗಡೆ ನೇಸರ ದೀವಿಗೆ
ಉಡುಪತಿ ತೆರೆಯನು ಹಿಡಿದಿಹ ತಾರೆಗೆ
ಕಾಣೋ ! ಮಾಂತ್ರಿಕರಾಟೋಟ !

ಉಭಯ ಅನ್ವೇಷಕ ತಂಡಗಳಿಂದಲೂ ಲಭಿಸಿದ ಛಾಯಾಚಿತ್ರಗಳ ಕೂಲಂಕಷ ಅಧ್ಯಯನ ಸಾಕಷ್ಟು ದೀರ್ಘಕಾಲ ತೆಗೆದುಕೊಂಡಿತು. ಸನ್ನಿವೇಶ ಹಾಗಿತ್ತು : ಕೋನ-ಸೆಕೆಂಡಿನೊಡನೆ (ಕೋನದ ೧ ಡಿಗ್ರಿಯ ೩೬೦೦ನೆಯ ಒಂದು ಅಂಶ) ವ್ಯವಹಾರ ; ಗಣಕವಾಗಲಿ (computer) ಎಲೆಕ್ಟ್ರಾನಿಕ್ ಗುಣನಕಾರಿಯಾಗಲಿ (electronic calculator) ಎಲೆಕ್ಟ್ರಾನ್ ಸೂಕ್ಷ್ಮದರ್ಶಕವಾಗಲಿ (electron microscope) ಇರದಿದ್ದ ದಿನಗಳು ; ಯುಗಪ್ರವರ್ತಕ ನೂತನ ಸಿದ್ಧಾಂತದ ಭವಿಷ್ಯ ಈ ಪ್ರಯೋಗದ ಫಲಿತಾಂಶದಿಂದ ನಿರ್ಧರಿತವಾಗಲಿತ್ತು. ಆದರೆ ಸ್ವತಃ ಐನ್‌ಸ್ಟೈನರಿಗೆ ತಮ್ಮ ಊಹನೆಯ ಖಚಿತತೆ ಬಗ್ಗೆ ಲೇಶವೂ ಸಂದೇಹವಿರಲಿಲ್ಲ.

## ಬೆಳಕು ಬಗ್ಗಿತು

ನಾಟಕೀಯವಾಗಿ ಮೂಡಿ ಬಂದ ಈ 'ದುರಂತ'ದ [ನ್ಯೂಟನ್ ಸಿದ್ಧಾಂತಕ್ಕೆ ಒದಗಿದ 'ಸೋಲು'] ಸಾರಭೂತಾಂಶ ಅಸಂತೋಷವಲ್ಲ. ವಿಶ್ವಘಟನೆಗಳ ಮರುಕರಹಿತ ವರ್ತನೆಯಲ್ಲಿ ಇದು ಅಂತರ್ಗತವಾಗಿದೆ. ಈ ಮರುಕರಹಿತ ಅನಿವಾರ್ಯತೆ ವೈಜ್ಞಾನಿಕ ಚಿಂತನೆಯೊಳಗೆ ಹಾಸುಹೊಕ್ಕಾಗಿ ಪಸರಿಸಿದೆ. ಭೌತವಿಜ್ಞಾನದ ನಿಯಮಗಳೆಂದರೆ ವಿಧಿಯ ಶಾಸನಗಳು.

**ಎ. ಎನ್. ವೈಟ್‌ಹೆಡ್**

ಐನ್‌ಸ್ಟೈನ್ ೧೯೧೫ರಲ್ಲಿ ಕರಾರುವಾಕ್ಕಾಗಿ ನಿರೂಪಿಸಿದ್ದ ಊಹನೆಯನ್ನು ವಿಶ್ವ ಒಪ್ಪಿಕೊಂಡಿತ್ತು. ಆದದ್ದೇನು ? ಸೂರ್ಯನ ಹಿನ್ನೆಲೆಯಲ್ಲಿದ್ದ ನಕ್ಷತ್ರಗಳು ಛಾಯಾಚಿತ್ರಗಳಲ್ಲಿ ಪಡಿಮೂಡಿದ್ದುವು. ಸೌರಗುರುತ್ವಾಕರ್ಷಣ ಕ್ಷೇತ್ರದ ಕಾರಣವಾಗಿ ವಿಚಲಿತವಾಗಿದ್ದ ಸ್ಥಾನಗಳವು. ಇತ್ತ ನಕ್ಷತ್ರಗಳ ನಿಜಸ್ಥಾನಗಳು ಪ್ರತ್ಯೇಕವಾಗಿ ತಿಳಿದಿದ್ದುದರಿಂದ ನಿಜ ಮತ್ತು ವಿಚಲಿತ ಸ್ಥಾನಗಳ ನಡುವಿನ ಸೂಕ್ಷ್ಮಾಂತರವನ್ನು ಅಳೆದು ನಿರ್ಧರಿಸುವುದು ಸಾಧ್ಯವಾಯಿತು. ಊಹನೆ (ಅಂದರೆ ಗಣಿತಗಣನೆ) ಕಣಿ ನುಡಿದದ್ದು ೧.೭೫ ಕೋನ ಸೆಕೆಂಡುಗಳು ; ಅಳತೆ (ಅಂದರೆ ವಾಸ್ತವ ವೀಕ್ಷಣೆ) ಸ್ಥಿರಪಡಿಸಿದ್ದು ೧.೬೪ ಕೋನ ಸೆಕೆಂಡುಗಳು. ಅಳತೆ ಎಂದೂ ಪರಿಪೂರ್ಣ ನಿಷ್ಕೃಷ್ಟವಾಗಿರುವುದಿಲ್ಲ. ಐನ್‌ಸ್ಟೈನ್ ಬೇರೆ ಒಂದು ಸಂದರ್ಭದಲ್ಲಿ ಹೇಳಿದ್ದಾರೆ : "ಗಣಿತ ಸೂತ್ರಗಳು ಪರಿಪೂರ್ಣವಾಗಿದ್ದರೆ ಅವು ವಿಶ್ವದ ಯಥಾಪ್ರತಿಬಿಂಬಗಳಲ್ಲ ; ಅವು ವಿಶ್ವದ ಯಥಾಪ್ರತಿಬಿಂಬಗಳಾಗಿದ್ದರೆ ಪರಿಪೂರ್ಣವಾಗಿರುವುದಿಲ್ಲ."

ಗ್ರಹಣದ ಚಿತ್ರಗಳನ್ನೂ ಖಗೋಳವಿಜ್ಞಾನಿಗಳ ಮೆಚ್ಚುಗೆಯ ನುಡಿಗಳನ್ನೂ ಐನ್‌ಸ್ಟೈನರಿಗೆ ಬರ್ಲಿನ್ನಿನಲ್ಲಿ ಒಪ್ಪಿಸಿದಾಗ, "ಎಷ್ಟು ಅದ್ಭುತ, ಅದ್ಭುತ ಛಾಯಾಚಿತ್ರಗಳು," ಎಂದು ಉದ್ಗರಿಸಿದರು ಮಗುವಿನ ಬೆರಗುಗಣ್ಣುಗಳಿದ. ತಮ್ಮ ಊಹನೆಯ ಸತ್ಯತೆಯ ಬಗ್ಗೆ ಅವರಿಗೆ ಇನಿತೂ ಸಂದೇಹವಿರದ್ದರಿಂದ—ಅದು ಹಾಗೆಯೇ ಇರತಕ್ಕದ್ದು ಎಂಬುದೇ ಅವರ ನಿಲುವು—ಈ ಸ್ಥಿರೀಕರಣ ಅವರನ್ನು ಭಾವೋದ್ದೀಪಿತರನ್ನಾಗಿಸಲಿಲ್ಲ. "ಇದು ಹಾಗಿರಲಿಲ್ಲವಾಗಿದ್ದರೆ ನಾನು ದೇವರ ಬಗ್ಗೆ ವ್ಯಥೆಪಟ್ಟಿರುತ್ತಿದ್ದೆ !" (ದೇವರು = ನಿಸರ್ಗ)

ಇಂಗ್ಲೆಂಡಿನ ಪ್ರತಿಷ್ಠಿತ ವಿಜ್ಞಾನ ಸಂಸ್ಥೆಗಳಾದ ರಾಯಲ್ ಸೊಸೈಟಿ ಮತ್ತು ರಾಯಲ್ ಅಸ್ಟ್ರನಾಮಿಕಲ್ ಸೊಸೈಟಿ ನವಂಬರ್ ೬ರಂದು ಸಂಯುಕ್ತಾಧಿವೇಶನ ಕೂಡಿ ಐನ್‌ಸ್ಟೈನ್ ಸಿದ್ಧಾಂತದ ಪ್ರಾಯೋಗಿಕ ಯಶಸ್ಸನ್ನು ಘೋಷಿಸಿದುವು. ರಾಯಲ್ ಸೊಸೈಟಿಯ ಅಧ್ಯಕ್ಷ ಸರ್ ಜೆ. ಜೆ. ತಾಮ್ಸನ್ (೧೮೫೬-೧೯೪೦, ಇಂಗ್ಲೆಂಡಿನ ಭೌತವಿಜ್ಞಾನಿ, ಉಪಪರಮಾಣವಿಕ ಕಣವಾದ ಎಲೆಕ್ಟ್ರಾನನ್ನು ಆವಿಷ್ಕರಿಸಿ ತನ್ಮೂಲಕ ಪರಮಾಣುಲೋಕವನ್ನು ಅನಾವರಣಗೊಳಿಸಿದಾತ ;



ಚಿತ್ರ ೪. ಗ್ರಹಣದ ಕಾರಣವಾಗಿ ವಿಚಲನೆಗೊಂಡ ನಕ್ಷತ್ರಗಳು ಬೆಳ್ಳಗಿವೆ; ಇವೇ ನಕ್ಷತ್ರಗಳ ನಿಜ ನೆಲೆಗಳು ಅಲ್ಲೇ ಸಮೀಪದಲ್ಲಿರುವ ಕಪ್ಪು ನಕ್ಷತ್ರಗಳು, ಅಂದರೆ ಭೂಮಿಗೂ ಈ ನಕ್ಷತ್ರಗಳಿಗೂ ನಡುವೆ ಸೂರ್ಯ ಇರದಾಗಿನ ಸ್ಥಾನಗಳು.

೧೯೦೭ರ ನೊಬೆಲ್ ಪ್ರಶಸ್ತಿ ಪುರಸ್ಕೃತ) ಅಧಿವೇಶನವನ್ನು ಉದ್ಘಾಟಿಸಿದರು : "ಮಾನವ ಚಿಂತನೆಯ ಇತಿಹಾಸದಲ್ಲಿಯ ಪರಮಶ್ರೇಷ್ಠ ಸಿದ್ಧಿಗಳ ಪೈಕಿ ಐನ್‌ಸ್ಟೈನ್-ಸಿದ್ಧಾಂತವು ಪ್ರತ್ಯೇಕ ವಾಗಿ ನಿಂತಿರುವ ಒಂದು ದ್ವೀಪದ ಆವಿಷ್ಕಾರವಲ್ಲ : ನವವೈಜ್ಞಾನಿಕ ಭಾವನೆಗಳ ಅಖಂಡ ಖಂಡವೇ ಇದಾಗಿದೆ. ಗುರುತ್ವಾಕರ್ಷಣೆ ಕುರಿತು ನ್ಯೂಟನ್ ತನ್ನ ತತ್ತ್ವಗಳನ್ನು ಪ್ರತಿಪಾದಿಸಿದ ತರುವಾಯ ಮೂಡಿರುವ ಅತ್ಯಂತ ಮಹತ್ತ್ವಪೂರ್ಣ ಆವಿಷ್ಕಾರ."

ಐನ್‌ಸ್ಟೈನ್ ಬೆಳಕನ್ನು 'ಬಗ್ಗಿಸಿದ್ದರು' ; ಇಂಗ್ಲೆಂಡಿನ ಆಸ್ತಿ ಮತ್ತು ಅಭಿಮಾನದ ಮೂರ್ತಿ ನ್ಯೂಟನ್ನನನ್ನು 'ಸೋಲಿಸಿದ್ದರು.' ಆದರೂ ಉದಾರಿಗಳಾದ ಇಂಗ್ಲಿಷರು ಮನುಜಕುಲ ಒಂದೇ, ವಿಜ್ಞಾನಫಲಗಳು ನಿಸರ್ಗಬಲಗಳಂತೆ ಮಾನವಕೃತ ದಿಗ್ಬಂಧನಗಳನ್ನು ಮೀರಿರುವಂಥವು ಎಂಬ ಸಂಗತಿಗಳನ್ನು ತಮ್ಮ ಅಂತಃಕರಣಪೂರ್ವಕ ಆಚರಣೆಯಿಂದ ಪ್ರಪಂಚಕ್ಕೆ ತೋರಿಸಿಕೊಟ್ಟಿದ್ದರು.

## ನ್ಯೂಟನ್ ಮಹಾಶಯ

ಅವರ [ನ್ಯೂಟನ್] ಬಗೆಗೆ ಯೋಚಿಸುವುದೆಂದರೆ ಅವರ ಕೃತಿಯ ಬಗೆಗೆ ಯೋಚಿಸುವುದೆಂದರ್ಥ. ಏಕೆಂದರೆ ಚಿರಂತನಸತ್ಯದ ಆವಿಷ್ಕಾರಕ್ಕಾಗಿ ನಡೆದ ಹೋರಾಟದ ದೃಶ್ಯ ಅವರ ಮೇಲೆ ಪ್ರದರ್ಶಿತ ವಾಯಿತು ಎಂಬುದಾಗಿ ಭಾವಿಸುವುದರ ಮೂಲಕ ಅವರನ್ನು ತಿಳಿದುಕೊಳ್ಳಬಹುದು. ಸರಳ ಭೌತ ಊಹೆಗಳಿಂದ ಶುದ್ಧ ತಾರ್ಕಿಕ ನಿಗಮನಮಾಡಿ ಪ್ರಜ್ಞಾಗೋಚರ ವಿದ್ಯಮಾನಗಳಿಗೆ ಯುಕ್ತ ವಿವರಣೆ ಗಳನ್ನು ಕೊಡುವುದು ಸಾಧ್ಯವಾಗಬೇಕೆಂಬುದಾಗಿ ನ್ಯೂಟನ್‌ರಿಗಿಂತ ಸಾಕಷ್ಟು ಹಿಂದೆಯೇ ಇದ್ದ ಬಲಿಷ್ಠ ಮತಿಗಳು ಪರಿಭಾವಿಸಿದ್ದುವು. ಆದರೆ ಸುಸ್ಪಷ್ಟವಾಗಿ ರೂಪಿಸಲಾದ ಆಧಾರ ಭಾವನೆಯನ್ನು ಯಶಸ್ವಿಯಾಗಿ ಪತ್ತೆ ಹಚ್ಚಿದ ಮೊದಲಿಗರೆಂದರೆ ನ್ಯೂಟನ್. ಇದರಿಂದ ಅವರು ಗಣಿತಚಿಂತನೆಯ ಮೂಲಕ ತಾರ್ಕಿಕವಾಗಿಯೂ ಪರಿಮಾಣಾತ್ಮಕವಾಗಿಯೂ ಅನುಭವದೊಡನೆ ಸಂಗತವಾಗಿರುವ ವಿದ್ಯಮಾನಗಳ ಒಂದು ವಿಶಾಲಕ್ಷೇತ್ರವನ್ನೇ ನಿಗಮಿಸಲು ಸಮರ್ಥರಾದರು.

ಐನ್‌ಸ್ಟೈನ್

ಐನ್‌ಸ್ಟೈನ್ ಏನೂ ಮಹಾ ಪುರುಷರಾದರು. ಆದರೆ ಎಷ್ಟು ಮಂದಿಗೆ ಇವರ ಸಾಧನೆಯ ಹಿರಿಮೆ ಅರ್ಥವಾಗಿತ್ತು ? ಲಂಡನ್ನಿನ ದೈನಿಕ *The Times* ಸಾಪೇಕ್ಷತಾಸಿದ್ಧಾಂತಕ್ಕೆ ಜನಪ್ರಿಯ ವಿವರಣೆಯನ್ನು ಬರೆದುಕೊಡಬೇಕೆಂದು ಇವರನ್ನೇ ಪ್ರಾರ್ಥಿಸಿತು. ೧೯೧೯ ನವಂಬರ್ ೨೮ರ ಸಂಚಿಕೆಯಲ್ಲಿ ಐನ್‌ಸ್ಟೈನರ ಲೇಖನ ಪ್ರಕಟವಾಯಿತು. ಅದರಲ್ಲಿ ಇವರು ತಮ್ಮ ಅಭಿಮಾನ ಮೂರ್ತಿಯೂ ವಿಜ್ಞಾನ ಸೀಮಾಪುರುಷನೂ ಆದ ನ್ಯೂಟನ್ನನಿಗೆ ಗೌರವ ಸಮರ್ಪಿಸಿದ್ದಾರೆ : "ಜ್ಞಾನಾನ್ವೇಷಕರ ನಡುವಿನ ಅಭಿಪ್ರಾಯವಿನಿಮಯವು ಯುದ್ಧಕಾರಣದಿಂದ ಶೋಚನೀಯವಾಗಿ ಮುರಿದುಬಿದ್ದ ಬಳಿಕ ಈಗ ಒದಗಿ ಬಂದಿರುವ ಅವಕಾಶವನ್ನು ಸ್ವಾಗತಿಸುತ್ತ ಇಂಗ್ಲೆಂಡಿನ ಖಗೋಳವಿಜ್ಞಾನಿಗಳಿಗೂ ಭೌತವಿಜ್ಞಾನಿಗಳಿಗೂ ಸಂತೋಷದ ಮತ್ತು ಕೃತಜ್ಞತೆಯ ಸುಹೃತ್ತು ಗಳನ್ನು ನಿವೇದಿಸುತ್ತೇನೆ. ಯುದ್ಧದಿನಗಳಂದು ನಿಮ್ಮ ಶತ್ರುಗಳ ನಾಡಿನಲ್ಲಿ ಪರಿಪೂರ್ಣಗೊಳಿಸ ಲ್ಪಟ್ಟು ಪ್ರಕಟಿಸಲಾದ ಸಿದ್ಧಾಂತದ ಪರಿಣಾಮವನ್ನು ಪರೀಕ್ಷಿಸಲು ನಿಮ್ಮ ಅಗ್ರಗಣ್ಯ ವಿಜ್ಞಾನಿಗಳು ಕಾಲ ಮತ್ತು ಶ್ರಮ ವ್ಯಯಿಸಿದ್ದಾರೆ. ಅಲ್ಲದೆ ನಿಮ್ಮ ವಿಜ್ಞಾನ ಸಂಸ್ಥೆಗಳು ಈ ಪರೀಕ್ಷೆಗಾಗಿ ಹಣ ಹೂಡಲು ಒಮ್ಮತದಿಂದ ಮುಂಬಂದಿವೆ. ವೈಜ್ಞಾನಿಕ ಕಾರ್ಯವನ್ನು ಕುರಿತಂತೆ ನಿಮ್ಮ ದೇಶದ ಉನ್ನತ ಹಾಗೂ ಭವ್ಯ ಪರಂಪರೆಗಳಿಗೆ ಅನುಗುಣವಾಗಿಯೇ ಈ ಕೆಲಸಗಳು ನಡೆದಿವೆ ಎಂಬು ದನ್ನು ನಾನು ಬಲ್ಲವನಾಗಿದ್ದೇನೆ. . . . ಒಂದು ವಿಚಾರ : ನ್ಯೂಟನ್ ಮಹಾಶಯರ ಮೇರುಕೃತಿ ಯನ್ನು ಸಾಪೇಕ್ಷತಾಸಿದ್ಧಾಂತವಾಗಲಿ ಬೇರಾವುದೇ ಸಿದ್ಧಾಂತವಾಗಲಿ ಪ್ರತಿಸ್ಥಾಪಿಸಬಹುದೆಂದು ಯಾರೂ ಭಾವಿಸದಿರಲಿ. ನೈಸರ್ಗಿಕ ತತ್ತ್ವಶಾಸ್ತ್ರದ ವಲಯದಲ್ಲಿ ಆ ಮಹಾಶಯರ ಗಂಭೀರ ಹಾಗೂ ಪರಿಶುಭ್ರ ಭಾವನೆಗಳು ನಮ್ಮ ಸಮಸ್ತ ಆಧುನಿಕ ಪರಿಕಲ್ಪನಾತ್ಮಕ ಸಂರಚನೆಯ ಭದ್ರ ಬುನಾದಿಯಾಗಿ ಸದಾಕಾಲ ತಮ್ಮ ವಿಶಿಷ್ಟ ಮಾನ್ಯತೆಯನ್ನು ಉಳಿಸಿಕೊಂಡೇ ಇರುತ್ತವೆ."

ಇದೇ ಲೇಖನದ ಕೊನೆಯಲ್ಲಿ ಇವರು ಸ್ವಂತ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಒಂದು ವಿಚಿತ್ರ ಟಿಪ್ಪಣಿ ಸೇರಿಸಿದ್ದರು : "ನನ್ನ ಬದುಕು ಮತ್ತು ವ್ಯಕ್ತಿ ಇವನ್ನು ಕುರಿತಂತೆ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನದಲ್ಲಿಯ ಕೆಲವು ಹೇಳಿಕೆಗಳು ಆ ಲೇಖಕರ ಕಲ್ಪನಾವಿಲಾಸದ ಕೂಸು ಗಳು ! ಓದುಗನ ಮನೋರಂಜನೆಗೋಸ್ಕರ ಸಾಪೇಕ್ಷತಾತತ್ತ್ವದ ಅನ್ವಯ ಹೇಗಾಗಿದೆ ಎಂಬು ದಕ್ಕೆ ಆ ಲೇಖನವೂ ಒಂದು ನಿದರ್ಶನ : ಇಂದು ನನ್ನನ್ನು ಜರ್ಮನಿಯಲ್ಲಿ 'ಜರ್ಮನ್ ಪ್ರಭೃತಿ' ಎಂದೂ ಇಂಗ್ಲೆಂಡಿನಲ್ಲಿ 'ಸ್ವಿಸ್ ಯೆಹೂದ್ಯ' ಎಂದೂ ವರ್ಣಿಸಲಾಗುತ್ತಿದೆ. ಎಂದಾದರೂ ನಾನು ಅನಿಷ್ಟ ವ್ಯಕ್ತಿ ಎಂಬ 'ಖ್ಯಾತಿ' ಪಡೆದು ಪರಿಸ್ಥಿತಿ ತಿರುಗಾಮುರುಗಾ ಆದರೆ ಆಗ ತದ್ವಿಪರೀತವಾಗಿ ನಾನು ಜರ್ಮನರಿಗೆ 'ಸ್ವಿಸ್ ಯೆಹೂದ್ಯ'ನೂ ಇಂಗ್ಲಿಷರಿಗೆ 'ಜರ್ಮನ್ ಪ್ರಭೃತಿ'ಯೂ ಆಗಿರು ತ್ತೇನೆ." (ಇದು ಪ್ರವಾದಿವಾಣಿ ಆಯಿತು ಎಂದು ಮುಂದೆ ನೋಡಲಿದ್ದೇವೆ.)

ಸ್ವಪ್ರತಿಷ್ಠೆಗೆ ಊನ ತರಬಹುದಾದಂಥ ಯಾವುದೇ ಟೀಕೆ ಯಾರಿಂದಲೇ ಬಂದರೂ ಅದನ್ನು ಹಾಗೆಯೇ ನುಂಗುವುದು ಸರ್ವಶಕ್ತ ಸಂಪಾದಕನ ಸರ್ವಾಂತರ್ಯಾಮಿತ್ವಕ್ಕೆ ಸವಾಲಲ್ಲವೇ ? 'ವಿಚಿತ್ರ ಟಿಪ್ಪಣಿ'ಯನ್ನು ಪ್ರಕಟಿಸಿದ ಪತ್ರಿಕೆ ಅದಕ್ಕೆ ತನ್ನ ಷರಾವನ್ನು ಬರಾಯಿಸಿತು : "ಐನ್ ಸ್ಟೈನರ ಲಘು ಹಾಸ್ಯವನ್ನು ನಾವೊಪ್ಪುತ್ತೇವೆ. ಆದರೆ ಅವರ ಸಿದ್ಧಾಂತದ ಸಾರ್ವತ್ರಿಕ ಧೋರಣೆಗೆ ಅನುಸಾರವಾಗಿಯೇ ಡಾ. ಐನ್‌ಸ್ಟೈನ್ ತಮ್ಮ ಬಗೆಗಿನ ನಿರಪೇಕ್ಷ ವಿವರಣೆಯನ್ನು ಒದಗಿಸಿಲ್ಲ ವೆಂಬುದನ್ನು ನಾವು ಗಮನಿಸಿದ್ದೇವೆ."

ಖುದ್ದು ಐನ್‌ಸ್ಟೈನರನ್ನು ಸೋಲು ಗೆಲವುಗಳಾಗಲಿ ಅಳಲು ಉಲಿವುಗಳಾಗಲಿ ಇನಿತೂ ಬಾಧಿಸಿರಲಿಲ್ಲ. ವಿಜ್ಞಾನದ ನಡೆಯನ್ನು ಕುರಿತಂತೆ ನ್ಯೂಟನ್ನನ ಮಾತುಗಳು ಇವರ ಉಸಿರಾಗಿ

ದ್ದುವು : "ಹಿರಿಯರ ಹೆಗಲ ಮೇಲೆ ನಿಂತಿರುವ ನಾನು ಅವರಿಗಿಂತ ಕೊಂಚ ಆಚೆಗೆ ಕಾಣಬಲ್ಲೆ ಅಷ್ಟೆ." ಇಷ್ಟೆ ಅಲ್ಲ, "ಪ್ರಪಂಚಕ್ಕೆ ನಾನು ಹೇಗೆ ಕಾಣುವೆನೊ ಅರಿಯೆ. ನನ್ನ ಮಟ್ಟಿಗೆ ಹೇಳುವುದಾದರೆ ನಾನೊಬ್ಬ ಕಡಲ ಕಿನಾರೆಯಲ್ಲಿ ಆಡುತ್ತಿರುವ ಕಿರಿ ಹೈದ ಮಾತ್ರ. ನನ್ನ ಅಡ್ನಾಟಗಳ ವೇಳೆ ಒಮ್ಮೊಮ್ಮೆ ನುಣುಪಾದ ಹರಳನ್ನೊ ಚೆಲುವಾದ ಚಿಪ್ಪನ್ನೊ ಹೆಕ್ಕುವುದುಂಟು. ಆದರೆ ನನ್ನಿಯ ಹೆಗ್ಗಡಲಿಡೀ ನನ್ನೆದುರು [ಅನನ್ವೇಷಿತವಾಗಿ] ಚೆಲ್ಲಿಕೊಂಡಿದೆ."

ನ್ಯೂಟನ್ ಮಹಾಶಯನ ಮುನ್ನೂರನೆಯ ಹುಟ್ಟು ಹಬ್ಬವನ್ನು ಪ್ರಪಂಚಾದ್ಯಂತ ವಿಜೃಂಭಣೆಯಿಂದ ಆಚರಿಸಿದಾಗ (೧೯೪೨) ಐನ್‌ಸ್ಟೈನ್ ತಮ್ಮ ಖಾಸಗಿ ಟಿಪ್ಪಣಿ ಪುಸ್ತಕದಲ್ಲಿ ಆ ಮಹಾತ್ಮನಿಗೆ ತಮ್ಮ ನಮನ ಸಲ್ಲಿಸಿದ್ದರು. (ಪ್ರಕಟಣೆ ಇದರ ಉದ್ದೇಶವಲ್ಲ, ಪದ್ಯ ಜರ್ಮನ್ ಭಾಷೆಯಲ್ಲಿದೆ) :

ಗಗನವಂ ನೋಡಿ ಕಲಿಯೋ ಆ ಮಹಾತ್ಮಂಗೆ
ಗೌರವವ ಸಲ್ಲಿಸುವ ಬಗೆಯ ನೀ—ತಾರೆಗಳ-
ನಂತ ಮೂಕತ್ವದಲಿ ಪಥ ಬೆಳಗಿ ಎತ್ತಿ ಪಿಡಿ-
ದಿಹವು ನ್ಯೂಟನ್ನನ ಚಿರಂಜೀವಿ ತತ್ತ್ವಗಳ

## ಬರ್ಲಿನ್ನಿನಲ್ಲಿ ರಂಗು ಬದಲಾವಣೆ

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನಾವು ಒಟ್ಟಾಗಿ ಟ್ರಾಮ್ ಪ್ರಯಾಣ ಮಾಡಿ ರೈಚ್‌ಸ್ಟ್ಯಾಗ್ ಕಟ್ಟಡಕ್ಕೆ, ಅಲ್ಲಿದ್ದ ಜನರನ್ನು ಪ್ರಾದೇಶಿಕ ಪ್ರಜಾಪ್ರಭುತ್ವವಾದಿಗಳಾಗಿ ಪರಿವರ್ತಿಸಬಲ್ಲೆವೆಂದು ದೃಢನಂಬಿಕೆ ತಳೆದು, ಹೋದದ್ದು ನಿಮಗೆ ನೆನಪಿದೆಯೇ ! ನಲವತ್ತರ ವಯಸ್ಸಿಗೆ ನಾವು ಅದೆಂಥ ಬೋಳೆ ಮಂದಿ ಆಗಿದ್ದೆವು ! ಅದನ್ನು ಯೋಚಿಸುವಾಗ ನಾನು ನಗಬೇಕಾಗುತ್ತದೆ. ಮಿದುಳಿಗಿಂತ 'ಕಶೇರು ರಜ್ಜು' ಅದೆಷ್ಟು ಪ್ರಮುಖ ಪಾತ್ರವಹಿಸುತ್ತದೆ ಮತ್ತು ಅವರ ಹಿಡಿತ ಅದೆಷ್ಟು ಪ್ರಬಲವಾದದ್ದು ಎಂಬುದನ್ನು ನಾವು ಯಾರೂ ಅರಿತಿರಲಿಲ್ಲ.

**ಐನ್‌ಸ್ಟೈನ್ (ಬಾರ್ನ್‌ರಿಗೆ ಬರೆದ ಕಾಗದ, ೭-೯-೧೯೪೪)**

ಯುದ್ಧಾಂತ್ಯವನ್ನು ಇಂಗ್ಲೆಂಡ್ ಮುಕ್ತ ಮನದಿಂದ ಸಂಭ್ರಮಯುತವಾಗಿ ಆಚರಿಸುತ್ತಿದ್ದಾಗ ಐನ್‌ಸ್ಟೈನರ ಬರ್ಲಿನ್ನಿನಲ್ಲಿ ಮಾತ್ರ ರಂಗು ಕ್ಷಣಕ್ಷಣ ಬೇರೆಬೇರೆ ಛಾಯೆ ತಳೆಯುತ್ತಿತ್ತು.

೧೯೧೮ ನವಂಬರ್ ೯ರಂದು ಕೈಸರ್ ಸಿಂಹಾಸನತ್ಯಾಗ ಮಾಡಿದ. ಜರ್ಮನ್ ಚಕ್ರಾಧಿಪತ್ಯ ಕೊನೆಗೊಂಡು ಜರ್ಮನ್ ಗಣರಾಜ್ಯ ತಲೆಯೆತ್ತಿತು. ಕಾರ್ಲ್ ಫ್ರೆಡ್ರಿಚ್ ಈಬರ್ಟ್ (೧೮೭೧-೧೯೨೫) ಇದರ ಚಾನ್ಸಲರ್. ವಾಮಪಂಥದತ್ತ ಒಲವಿದ್ದ ಮತ್ತು ಮಿಲಿಟರಿತನದ ಕಟ್ಟಾ ವಿರೋಧಿ ಆಗಿದ್ದ ಐನ್‌ಸ್ಟೈನರಿಗೆ ಈ ಘಟನೆ ಅತಿ ಸಂತೋಷ ನೀಡಿತು. ಜರ್ಮನಿಯ ಸಕಲ ಶಾಂತಿವಾದಿಗಳಿಗೂ ಕಾಳೆಗ ನಿಲುಗಡೆ ಮತ್ತು ಗಣರಾಜ್ಯ ಸ್ಥಾಪನೆ ಹೊಂಬೆಳಗನ್ನು ಕಾರಂಜಿಸುವ ಉದ್ಘಟನೆಗಳೆನ್ನಿಸಿದುವು. ಅದೇ ದಿನದ ತರಗತಿ ಪಾಠಕ್ಕೆ ಸಂಬಂಧಿಸಿದ ಟಿಪ್ಪಣಿ ಪುಸ್ತಕದಲ್ಲಿ ಐನ್‌ಸ್ಟೈನ್ ಷರಾ ಬರೆದಿದ್ದರು : fiel aus wegen Revolution (ಕ್ರಾಂತಿಯ ಕಾರಣವಾಗಿ ರದ್ದುಗೊಳಿಸಲಾಯಿತು).

ಉಗ್ರ ರಾಷ್ಟ್ರೀಯವಾದಿಗಳಿಗೆ ಜರ್ಮನ್ ಗಣರಾಜ್ಯದ ಉದ್ಘಾಟನೆ ಖಂಡಿತ ಸಂತೋಷದ ಘಟನೆ ಆಗಿರಲಿಲ್ಲ. ತಮ್ಮ ಸೋಲಿನ ಕರ್ಮಾಂತರವದು ಎಂಬ ದುಃಖ, ಕ್ರೋಧ ಮತ್ತು ದ್ವೇಷಭಾವನೆಯಿಂದ ಸದ್ಯದ ಅನಿವಾರ್ಯತೆಗೆ ಮಣಿದಿದ್ದರು, ಅಷ್ಟೆ. ಬರ್ಲಿನ್ ನಗರದಲ್ಲಿ

ಕ್ರಾಂತಿಯ ಕಾಳ್ಗಿಚ್ಚು ದಟ್ಟವಾಗಿ ಹಬ್ಬಿತು. ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಆಡಳಿತ ಕಛೇರಿಗೆ ಮುತ್ತಿಗೆ ಹಾಕಿ ರೆಕ್ಟರರನ್ನೂ ಅವರ ಸಹವರ್ತಿಗಳನ್ನೂ ಘೇರಾಯಿಸಿದರು ; ರೆಕ್ಟರರನ್ನು ಪದಚ್ಯುತಿಗೊಳಿಸಲಾಗಿದೆಯೆಂದು ಘೋಷಿಸಿದರು. ಬಂಧನಕ್ಕೊಳಗಾದವರಿಂದ ಸಹಾಯ ಯಾಚನೆಯ ದೂರವಾಣಿ ಮೊರೆ ಐನ್‌ಸ್ಟೈನರಿಗೆ ಹೋಯಿತು. ಒಡನೆ ಇವರು ದೂರದ ರೈಚ್‌ಸ್ಟ್ಯಾಗ್ ಕಟ್ಟಡದಲ್ಲಿದ್ದ ವಿದ್ಯಾರ್ಥಿಪರಿಷತ್ತಿಗೆ ತೆರಳಿದರು—ಟ್ರಾಮ್‌ನಲ್ಲಿ ಒಂದಷ್ಟು ದೂರ ಹೋಗಬೇಕಾಗಿತ್ತು. ಜೊತೆಗಿಬ್ಬರು ವಾಮಪಂಥೀಯ ಸಹೋದ್ಯೋಗಿಗಳು—ಮ್ಯಾಕ್ಸ್ ಬಾರ್ನ್ ಮತ್ತು ಮನೋವಿಜ್ಞಾನಿ ಮ್ಯಾಕ್ಸ್ ವರ್ದಿಮರ್. ಟ್ರಾಮಿನಿಂದಿಳಿದ ಕಾರಣಪುರುಷ ಐನ್‌ಸ್ಟೈನ್ (ಕಾಲಪುರುಷ ಕೂಡ) ವಿದ್ಯಾರ್ಥಿಪರಿಷತ್ತಿಗೆ ನಡೆದುಹೋದರು. ಯಾವ ಅಡೆತಡೆಯೂ ಇವರಿಗೆ ಎದುರಾಗಲಿಲ್ಲ. ಮಿಂಚಿನ ಹೊಳೆ ತುಳುಕಿತು. ವಿದ್ಯಾರ್ಥಿ ಮುಖಂಡರು ತಂತಾವೇ ಎದ್ದು ನಿಂತರು. ಮಂತ್ರಮುಗ್ಧರಾದರು. ಐನ್‌ಸ್ಟೈನ್ ನುಡಿದರು. "ನೀವು ದಿಗ್ಬಂಧಿಸಿರುವ ವಿಶ್ವ ವಿದ್ಯಾಲಯದ ಅಧಿಕಾರಿಗಳನ್ನು ಒಡನೆ ಬಿಡುಗಡೆ ಮಾಡಬೇಕು."

"ಗೌರವಾನ್ವಿತ ಪ್ರಾಧ್ಯಾಪಕರೇ ! ವಿಶ್ವವಿದ್ಯಾಲಯದ ಕಾರ್ಯಕಲಾಪಗಳಲ್ಲಿ ವಿದ್ಯಾರ್ಥಿಗಳು ಕೈಹಾಕುವುದನ್ನು ಕುರಿತು ನಿಮ್ಮ ಮತವೇನು?"

ಐನ್‌ಸ್ಟೈನ್ ಹಲವು ನಿಮಿಷಗಳತನಕ ಯೋಚಿಸಿದರು. "ಶಿಕ್ಷಣ ವಿಚಾರಗಳಲ್ಲಿ ಪೂರ್ಣ ಸ್ವಾತಂತ್ರ್ಯವೇ ಜರ್ಮನ್ ವಿಶ್ವವಿದ್ಯಾಲಯಗಳ ಹಿರಿಮೆ ಎಂಬುದಾಗಿ ನಂಬಿದ್ದೇನೆ. ಇದರ ಪರಿಣಾಮವಾಗಿ ಉಪನ್ಯಾಸಕರಿಗೆ ಅವರೇನನ್ನು ಬೋಧಿಸಬೇಕೆಂಬುದರ ಬಗ್ಗೆ ಆಗಲಿ ವಿದ್ಯಾರ್ಥಿಗಳಿಗೆ ಅವರೇನನ್ನು ಕಲಿಯಬೇಕೆಂಬುದರ ಬಗ್ಗೆ ಆಗಲಿ ವಿಶೇಷ ನಿರ್ಬಂಧಗಳೇನೂ ವಿಧಿಸಲ್ಪಟ್ಟಿಲ್ಲ. ಹೀಗಾಗಿ ಮುಕ್ತ ಚಿಂತನೆ ಬೋಧನೆ ಮತ್ತು ಅಧ್ಯಯನ ಇಲ್ಲಿ ಸೊಗಸಾಗಿ ಅಭಿವರ್ಧಿಸಿವೆ. ಈಗ ನೀವು ಹೇರಲಿರುವ ನಿಯಮಾವಳಿಯ ಪರಿಣಾಮವಾಗಿ ಮೊದಲು ಹರಣವಾಗುವುದು ಈ ಮುಕ್ತ ಪರಿಸರ. ಆಗ ಜ್ಞಾನವೃಕ್ಷದ ತಾಯಿಬೇರಿಗೇ ಗೆದ್ದಲು ಹಿಡಿದಂತಾಗುತ್ತದೆ. ಖಂಡಿತ ಇದು ವಿಶ್ವವಿದ್ಯಾಲಯದ ಆರೋಗ್ಯಕ್ಕೆ ಹಿತವಲ್ಲ."

"ಹಾಗಾದರೆ ವಿದ್ಯಾರ್ಥಿಗಳು. . ."

"ವಿದ್ಯಾರ್ಥಿಗಳ ಹಸ್ತಕ್ಷೇಪ ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ಅಪಾಯಕಾರಿ. ಸಂದೇಹಾತೀತವಾಗಿ ಅನಪೇಕ್ಷಣೀಯ."

ಅನಿರೀಕ್ಷಿತ ಬಾಂಬ್ ಸಿಡಿತದಿಂದ ದಂಗುಬಡಿದ ವಿದ್ಯಾರ್ಥಿ ಮುಖಂಡರು ಸಾವರಿಸಿಕೊಂಡು, "ಮಾನ್ಯರೇ ! ಈ ಸಮಸ್ಯೆಯ ಪರಿಹಾರ ನಮ್ಮ ಅಳವಿಗೆ ಮೀರಿದ್ದು. ದಯಮಾಡಿ ಚಾನ್ಸಲರರನ್ನೇ ನೋಡುವಿರಾ ?" ಎಂಬುದಾಗಿ ನಿವೇದಿಸಿದರು.

ಸರಿ, ತ್ರಿಮೂರ್ತಿಗಳ ಕಾಲ್ನಡಿಗೆಯ ಜಂಬೂಸವಾರಿ ಗಣರಾಜ್ಯದ (ಇದು ಘೋಷಣೆಯಾಗಿ ಕೆಲವು ಗಂಟೆಗಳೂ ಸಂದಿರಲಿಲ್ಲ) ವರಿಷ್ಠರಾದ ಚಾನ್ಸಲರರ ಸಮ್ಮುಖಕ್ಕೆ ಚಿತ್ತೈಸಿತು. ಇಲ್ಲೂ ಅಷ್ಟೆ : ಹಾದಿಗುಂಟ ಎಲ್ಲ ಬೇಲಿಗಳೂ ತಂತಾವೇ ಕಳಚಿಕೊಂಡು ಚಾನ್ಸಲರ್ ದರ್ಶನ ಒಡನೆ ಲಭಿಸಿತು—ಶಿಶು ಕೃಷ್ಣನನ್ನು ಎತ್ತಿಕೊಂಡಿದ್ದ ವಸುದೇವನೆದುರು ತುರಂಗದ್ವಾರಗಳೆಲ್ಲವೂ ತಂತಾವೇ ತೆರೆದುಕೊಂಡಂತೆ, ಯಮುನೆಯೂ ನಡೆಮುಡಿ ಹಾಸಿದಂತೆ.

ಕಾರ್ಲ್ ಈಬರ್ಟ್ ಇವರ ಅಹವಾಲೆಯನ್ನು ಆಲಿಸಿ ಒಡನೆ ಸಂಬಂಧಿಸಿದ ಅಧಿಕಾರಿಗೆ ಯುಕ್ತ ಅನುಜ್ಞೆ ನೀಡಿದರು. ಪರಿಣಾಮವಾಗಿ ರೆಕ್ಟರ್ ಮತ್ತು ಸಹವರ್ತಿಗಳು ದಿಗ್ಬಂಧನವಿಮೋಚಿತರಾದರು.

ಈ ತುರ್ತು ಸನ್ನಿವೇಶದಲ್ಲಿ ತಾವು ಪ್ರದರ್ಶಿಸಿದ ನೇರ ವರ್ತನೆಯನ್ನು ಐನ್‌ಸ್ಟೈನ್ ಕಾಲು ಶತಮಾನದ ತರುವಾಯ ಒಮ್ಮೆ ನೆನಪಿಸಿಕೊಂಡರು, "ನಮಗೆ ಆಗ ನಲವತ್ತು ವರ್ಷ ವಯಸ್ಸಾಗಿದ್ದರೂ ಎಂಥ ಹುಂಬರಾಗಿದ್ದೆವು ! ಚಕ್ರವಾತದ ಕಣ್ಣಿಗೇ ದುಮುಕಿದೆವಲ್ಲ ! ಅದೊಂದು ಹುಚ್ಚು ಸಾಹಸ. ಮಾನವನಲ್ಲಿ ಬುದ್ಧಿಗಿಂತ ಪ್ರವೃತ್ತಿ ಅದೆಷ್ಟು ಬಲಿಷ್ಠವಾಗಿರುವುದೆಂಬುದರ ಅರಿವು ನಮಗೆ ಯಾರಿಗೂ ಇರಲಿಲ್ಲ."

## ಕಲ್ಪನಾ ವಿಲಾಸಿಗಳ ಕಲ್ಪವೃಕ್ಷ

ಒಡಲ ನೂಲಿನಿಂದ ನೇಯುವಂತೆ ಜೇಡ ಜಾಲಾ
ತನ್ನ ದೈವರೇಷೆ ಬರೆಯುವಂತೆ ತಾನೆ ಭಾಲಾ
ಉಸಿರಿನಿಂದ ಹುಡುಕುವಂತೆ ತನ್ನ ಬಾಳ ಮೇಲಾ
ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸಾ

ಅಂಬಿಕಾತನಯದತ್ತ

ವಿಧಿ ಐನ್‌ಸ್ಟೈನರ ಜೀವನದಲ್ಲಿ ಅನಿರೀಕ್ಷಿತ ಗರಗಳನ್ನು ಎಸೆದೇಬಿಟ್ಟಿತು. ಬೆಳಕಿನ ಕಿರಣದ ವಿಚಲನೆ, ಇದರ ಪ್ರತ್ಯಕ್ಷ ವೀಕ್ಷಣೆ ಮತ್ತು ಪ್ರಸಿದ್ಧ ವಿಜ್ಞಾನಿಗಳಿಂದ ಇದಕ್ಕೆ ದೊರೆತ ಮನ್ನಣೆ—ಈ ಸುದ್ದಿಗಳು ಬೆಳಕಿನ ವೇಗದಿಂದ ಪ್ರಪಂಚವಿಡೀ ವ್ಯಾಪಿಸಿದುವು. ವಿಜ್ಞಾನಿಗಳ ಮಾತು ಒತ್ತಟ್ಟಿಗಿರಲಿ. ಈಗ ಜನಸಾಮಾನ್ಯರೂ ತಮಗೆ ಹೊಸತೇನೊ ಗಳಿಕೆಯಾಗಿದೆ ಎಂಬ ಭಾವದಿಂದ ಹರ್ಷ ಪುಳಕಿತರಾಗಿ ನಲಿದಾಡಿದರು. ಇವರ ದೃಷ್ಟಿಯಲ್ಲಿ ನ್ಯೂಟನ್ ಗತಕಾಲದ ಇತಿಹಾಸದ ಮೊಡಕು ಮೂಲೆಯಲ್ಲಿ ಮಾಯವಾಗಿ ಹೋಗಿದ್ದ ನಾಮವಿಶೇಷ ಮಾತ್ರ. ಆತನ ಸುಗ್ರೀವಾಜ್ಞಾನುಸಾರ ಗ್ರಹೋಪಗ್ರಹಗಳು ಹಾಗೂ ಬೆಳಕಿನ ಕಿರಣಗಳು ವರ್ತಿಸುತ್ತಿವೆಯೆಂದೂ ಆ ಕಾರಣವಾಗಿ ಹಗಲಿರುಳುಗಳು ಹಾಗೂ ಋತುಭೇದಗಳು ಶಿಸ್ತಿನಿಂದ ಸಾಗುತ್ತಿವೆಯೆಂದೂ ಅಸ್ಪಷ್ಟವಾಗಿ ಇವರಿಗೆ ತಿಳಿದಿತ್ತು. ಈಗ ಅಂಥ ಮಹಾಕೀರ್ತಿಶಾಲಿಯನ್ನು ಸಿಂಹಾಸನದಿಂದ ಕೆಳಗಿಳಿಸಿದ ಪರಮ ಪ್ರತಾಪಶಾಲಿ ತಮ್ಮ ನಡುವೆ ತಮ್ಮಂತೆಯೇ ಇದ್ದಾನೆಂಬ ಸಂಗತಿ ಇವರಲ್ಲಿ ಅನಿರ್ವಚನೀಯ ಆನಂದವನ್ನು ಹೊಮ್ಮಿಸಿತ್ತು. ಇವರ ದೃಷ್ಟಿಯಲ್ಲಿ ಐನ್‌ಸ್ಟೈನ್ ಜಗದೇಕವೀರ, ವಿಶ್ವಚಕ್ಷು. ಎಷ್ಟೋ ನವಜಾತಶಿಶುಗಳಿಗೆ ಆಲ್ಬರ್ಟ್ ಐನ್‌ಸ್ಟೈನ್ ಎಂದೇ ಹೆಸರು ಇಡಲಾಯಿತು. ರಿಲೆಟಿವಿಟಿ ಎಂಬ ಹೆಸರು ವ್ಯಾಪಾರಲಾಂಛನವಾಗಿ ಬಳಕೆಗೆ ಬಂದಿತು. "ರಿಲೆಟಿವಿಟಿ ಗುರುತಿನ ಸಿಗಾರನ್ನೇ ಸೇದುತ್ತ ಬೆಳಕಿನೊಡನೆ ವಿಶ್ವಪರ್ಯಟನೆ ಮಾಡಿ" ಎಂಬ ಜಾಹೀರಾತು ಕೂಡ ಪ್ರಕಟವಾಯಿತು!

ಇನ್ನು ವೈಜ್ಞಾನಿಕ ಕಲ್ಪನಾವಿಲಾಸಿಗಳು ಸುಮ್ಮನೆ ತಣ್ಣಗೆ ಕುಳಿತಾರೇ ? ಅವರ ಕಲ್ಪನೆಗೆ ಹೊಸರೆಕ್ಕೆ ಚಿಗುರೊಡೆಯಿತು. ವಿಶ್ವದಲ್ಲಿ ಬೆಳಕಿನ ವೇಗವೇ ಗರಿಷ್ಠವಾದದ್ದು, ಯಾವ ವಸ್ತುವೂ ಬೆಳಕಿನ ವೇಗವನ್ನು ಐದಲಾರದು. ಯಾವುದೇ ವಸ್ತು ಬೆಳಕಿನ ವೇಗವನ್ನು ಸಮೀಪಿಸಿದಂತೆ ಅದರ ಗಾತ್ರ ಶೂನ್ಯದತ್ತ ಸಂಕೋಚಿಸುತ್ತದೆ, ಬೆಳಕಿನ ವೇಗದಿಂದ ಸಂಚರಿಸಬಲ್ಲವನಿಗೆ ಕಾಲ ಸ್ಥಗಿತವಾಗಿರುತ್ತದೆ ಎಂಬವು ಸಾಪೇಕ್ಷತಾವಾದದಿಂದ ಅನುಗತವಾಗಿದ್ದುವು.

ಸರಿ, ಈಗ ನಿಮ್ಮ ಮಾಲಿ ನಾಯರ್ ತೋಟದ ಸುತ್ತ ಬೇಲಿ ಹಾಕಲು ತೊಡಗುತ್ತಾನೆ. ಅವನು ಬೆಳಕಿನ ವೇಗದಿಂದ ಈ ಕೆಲಸ ಮಾಡುವನೆಂದಾದರೆ ಬೇಲಿಯ ಅವಸ್ಥೆ ಏನು ?

ಬೆಳಕಿನ ವೇಗದಿ ಬೇಲಿಯ ಹಾಕಲು
ಹೊರಟನು ನಾಯರ್ ತೋಟಕ್ಕೆ

ಆದರೆ ನೋಡೋ ವೈಚಿತ್ರ್ಯ
ಐನ್‌ಸ್ಟೈನ್ ತತ್ತ್ವದ ವೈಶಿಷ್ಟ್ಯ :
ಕಂಬಗಳೆಲ್ಲವು ತಂತಿಗಳೆಲ್ಲವು
ಸಂಕೋಚಿಸಿದುವು ಶೂನ್ಯಕ್ಕೆ !

ಮಹಾಶ್ವಾನ ನಕ್ಷತ್ರಪುಂಜದಲ್ಲಿರುವ (Canis Major) ಲುಬ್ಧಕ (Sirius) ಗೋಚರ ನಕ್ಷತ್ರಗಳ ಪೈಕಿ ಸೂರ್ಯನಾದ ಬಳಿಕ ಪರಮೋಜ್ಜ್ವಲವಾದದ್ದು. ಡಿಸೆಂಬರ್, ಜನವರಿ ತಿಂಗಳುಗಳ ಸಂಜೆ ಇದನ್ನು ಆಕಾಶದ ಪೂರ್ವ-ದಕ್ಷಿಣ ವಲಯದಲ್ಲಿ ಸುಲಭವಾಗಿ ಗುರುತಿಸಬಹುದು. ಭೂಮಿಯಿಂದ ಇದರ ದೂರ ೯ ಜ್ಯೋತಿರ್ವರ್ಷಗಳು.[೨೬] ನೀವು ಪುಷ್ಪಕ ವಿಮಾನ ಏರಿ ಬೆಳಕಿನ ವೇಗಕ್ಕಿಂತ ಕೊಂಚವೇ ಕಡಿಮೆ ವೇಗದಲ್ಲಿ ಲುಬ್ಧಕಕ್ಕೆ ಹೋಗಿ ಮರಳುವಿರಾದರೆ ಒಟ್ಟು ಪ್ರಯಾಣ ನಿಮ್ಮ ಗಡಿಯಾರದ ಹಾಗೂ ದೇಹಕ್ರಿಯೆಗಳ ಅನುಭವದ ಪ್ರಕಾರ ಕೆಲವೇ ಗಂಟೆಗಳಲ್ಲಿ ಮುಗಿದಿರುತ್ತದೆ. ಮುಂಜಾನೆಯ ನಾಷ್ಟಾ ಮುಗಿಸಿ ಹೊರಟಿರೆಂದಾದರೆ ರಾತ್ರಿ ಊಟಕ್ಕೆ ಹಿಂತಿರುಗುವಿರಿ—ಅಷ್ಟು ಬೇಗ, ಅಷ್ಟು ಸಲೀಸು. ಆದರೆ ಭೂಮಿಯಲ್ಲಿ ಉಳಿದಿದ್ದ ನಿಮ್ಮ 'ನತದೃಷ್ಟ' ಬಾಂಧವರ ಅನುಭವವೇ ಬೇರೆ—ಅದೇ ಅವಧಿಯಲ್ಲಿ ಅವರಿಗೆ ಹದಿನೆಂಟು ವರ್ಷಗಳಷ್ಟು ವಯಸ್ಸು ಜಾಸ್ತಿ ಆಗಿರುತ್ತದೆ !

ಬೆಳಕಿನ ವೇಗದಲ್ಲೇ ಚಲಿಸಿದ್ದಾದರೆ ಕಾಲಪ್ರವಾಹ ನಿಂತೇ ಹೋಗಿರುತ್ತದೆ. ಬೆಳಕಿನ ವೇಗವನ್ನು ಮೀರಿ ಚಲಿಸಿದ್ದಾದರೆ ? ಆಗ ಯಮಧರ್ಮರಾಯ ನಿಮಗೆ ಮಣಿಯುವುದು ಖರೆ. ನೀವು ಕಾಲಪ್ರವಾಹದೆದುರು, ಅಂದರೆ ಭೂತಕಾಲದತ್ತ ಹೋಗುತ್ತಿರುತ್ತೀರಿ. ಹೀಗೆ ಸಾಗುವ ಒಬ್ಬ ವ್ಯಕ್ತಿ ಗಾಂಧಿ ಅಜ್ಜಯ್ಯನ ಜೊತೆ ವೈಷ್ಣವ ಜನತೋ ಹಾಡುತ್ತಾನೆ ; ಬುದ್ಧಂ ಶರಣಂ ಗಚ್ಛಾಮಿ ಪಾದಯಾತ್ರೆಯಲ್ಲಿಯೂ ಭಾಗಿಯಾಗುತ್ತಾನೆ ; ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಪಾಂಚಜನ್ಯ ಮೊಳಗುವುದನ್ನು ಕೇಳಿ ರೋಮಹರ್ಷಿತನಾಗುತ್ತಾನೆ : 'ಎಂದೂ ತೀರದ ತೀರವು ದೊರೆಯದ' ಕಾಲಾಕ್ಷದ ಋಣದಿಶೆಯಲ್ಲಿ ಹೋಗುತ್ತಲೇ ಇರುತ್ತಾನೆ. ಉಷಾ ಈ ತೆರನಾಗಿ ಜಿಗಿಯುತ್ತಾಳೆ. ಆಗೇನಾಯಿತು ಗೊತ್ತೇ ?

ಬೆಳಕಿನ ವೇಗಕ್ಕಿಂತಲು ರಭಸದಿ
ಓಡುವ ಪೋಕರಿ ಹುಡುಗಿ ಉಷಾ
ಐನ್‌ಸ್ಟೈನರ ರಿಲೆಟಿವಿಟಿ ಕ್ರಮದಲಿ
ಜಿಗಿಯುತ್ತಿಳಿದಳು ಕಳೆದ ನಿಶಾ !

## ಅಪೂರ್ವ ತೇಜದ ಮಾಂತ್ರಿಕ

ಅದೃಶ್ಯಲೋಕದ ಅನೂಹ್ಯ ರೂಪದ
ಅನಂತಕಾಲದ ಯಾತ್ರಿಕರೇ
ಮಣ್ಣಿನ ಮನದಲಿ ಹೊನ್ನನೆ ಬೆಳೆಯುವ
ಅಪೂರ್ವ ತೇಜದ ಮಾಂತ್ರಿಕರೇ !

ಗೋಪಾಲಕೃಷ್ಣ ಅಡಿಗ

ನಿಂದಕರಿರಬೇಕಿರಬೇಕು
ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗ
ದುಷ್ಟಜನರು ಈ ಸೃಷ್ಟಿಯೊಳಿದ್ದರೆ

ಶಿಷ್ಟಜನರಿಗೆಲ್ಲ ಕೀರ್ತಿಗಳು
ಇಷ್ಟಪ್ರದ ಶ್ರೀಕೃಷ್ಣ ನಿನ್ನೊಳು
ಇಷ್ಟೇ ವರವನು ಬೇಡುವೆನಯ್ಯ

ಪುರಂದರದಾಸರು

ಮುಗ್ಧ ಐನ್‌ಸ್ಟೈನರು ತಾವೆಂಥೆಂಥ 'ಘೋರ ಅಪರಾಧ'ಗಳಿಗೆ—ಕವಿಗಳಿಗೆ ವಿಪುಲ ಗ್ರಾಸ ಒದಗಿಸಿದ ಅಕ್ಷಮ್ಯ ಅಪರಾಧವೂ ಇವುಗಳಲ್ಲಿ ಸೇರಿದೆ—ಕಾರಣರಾದವೆಂಬುದನ್ನು ತಿಳಿಯದೆ ಪ್ರಪಂಚದ ಪ್ರಖರ ಪ್ರಚಾರ ಮಾಧ್ಯಮಕ್ಕೆ ಸುಲಭಲಭ್ಯ 'ಯಜ್ಞಪಶು'ವಾದರು. ಪರಿಣಾಮವೇನು ಗೊತ್ತೇ ? ಇವರ ಪಾವನ ಏಕಾಂತತೆ ಶಾಶ್ವತವಾಗಿ ನಷ್ಟವಾಗಿ ಹೋಯಿತು. ಇವರಿಗಿಂತ ಹೆಚ್ಚು ಪ್ರಚಾರವನ್ನು ಉಪೇಕ್ಷಿಸಿದ, ಪ್ರಸಿದ್ಧಿಯನ್ನು ಕಡೆಗಣಿಸಿದ, ಒಂಟಿತನವನ್ನು ಬಯಸಿದ, ಮತ್ತು ಸರಳತೆಯನ್ನು ಆಶಿಸಿದ ವಿಜ್ಞಾನಿ ಇನ್ನೊಬ್ಬನಿರಲಿಲ್ಲ. ಆದರೆ ಸನ್ನಿವೇಶಗಳ ಪಿತೂರಿ. ಇವರಿಗೆ ದೊರೆತ ಪ್ರಚಾರ, ಇವರು ಗಳಿಸಿದ ಪ್ರಸಿದ್ಧಿ, ಇವರನ್ನು ಮುತ್ತಿದ ಜನಜಂಗುಳಿ ಮತ್ತು ಇವರ ಬಗ್ಗೆ ಜನ ತಳೆದ ಆರಾಧನಭಾವ ಎಲ್ಲವೂ ಅತಿಯಾಗಿದ್ದುವು. ಉಸಿರು ಕಟ್ಟಿಸುವಂತಿದ್ದುವು, ಪವಾಡ ಪುರುಷನ ದೈವಿಕ ಅಂತಸ್ತಿಗೆ ಇವರನ್ನು ಏರಿಸಿಬಿಟ್ಟಿದ್ದುವು. Rarely lonely mostly alone (ವಿರಳವಾಗಿ ಏಕಾಕಿ ಬಹುತೇಕ ಏಕಾಂಗಿ)—ಎಂಬ ಪದಗಳಲ್ಲಿ ಅಬ್ರಾಹಾಮ್ ಪಾಯ್ಸ್ (೧೯೧೮) ಇವರನ್ನು ವರ್ಣಿಸಿದ್ದಾರೆ. ರುಜು ಕೇಳಿ ಕಾಗದ ಬರೆಯುವವರು, ಸಂದರ್ಶನ ಬೇಡಿ ಬರುವವರು, ಅದಿಂದ ಳದ ವರೆಗೆ ಪ್ರಶ್ನೆ ಕೇಳುವ ಪತ್ರಿಕಾ ಸರ್ವಜ್ಞರು, ಅಸಂಖ್ಯಾತ ಪತ್ರ ಮಿತ್ರರು, ಉಡುಗೊರೆ ಕಳಿಸುವವರು—ಇಂಥ ಹಲಬಗೆಯ ದಂಡುಗಳನ್ನು ಇವರು ಎದುರಿ(ಸ್ವಾಗತಿ)ಸುವುದರ ಜೊತೆಗೆ ವಿಜ್ಞಾನವೃತ್ತಿಬಾಂಧವರೊಡನೆ ಮತ್ತು ಆಸಕ್ತರೊಡನೆ ತಾಂತ್ರಿಕ ವಿಷಯಗಳನ್ನು ಕುರಿತ ಸಲ್ಲಾಪಕೂಡ ಇಟ್ಟುಕೊಳ್ಳಬೇಕಾಗಿತ್ತು. ಏಕಾಕಿ ಅಂದರೆ ಜನಪರಿವೇಷ್ಟಿತ ನಲ್ಲದವ, ಏಕಾಂಗಿ ಅಂದರೆ ಆಂತರಂಗಿಕವಾಗಿ ಒಂಟಿಯಾಗಿ ಚಿಂತಿಸುವವ ಎಂದರ್ಥ.

ಸಾಹಿತ್ಯೋಪಾಸಕನೊಬ್ಬನಿಗೆ ಐನ್‌ಸ್ಟೈನರ ಹಿರಿಮೆ ಪತ್ರಿಕಾ ವರದಿಗಳ ಮೂಲಕ ತಿಳಿಯಿತು. ರಿಲೆಟಿವಿಟಿ ಎಂಬ ಪದದಲ್ಲಿ ಏನೊ ಮಾಂತ್ರಿಕತೆ ಇದೆ. ಇದನ್ನು ತಾನು ಚೆನ್ನಾಗಿ ಗ್ರಹಿಸಿ ಈ ಪದವನ್ನು ಚಲಾವಣೆಗೆ ತರಬೇಕೆಂಬುದಾಗಿ ನಿರ್ಧರಿಸಿದ. ವಿಜ್ಞಾನ ವಿಷಯಗಳಲ್ಲಿ ಈತ ಮುಗ್ಧ ಶಿಶು. ಹಾಗಿದ್ದರೂ ಐನ್‌ಸ್ಟೈನ್ ಮತ್ತು ರಿಲೆಟಿವಿಟಿ ಕುರಿತ ಎಲ್ಲ ವರದಿಗಳನ್ನೂ ಕಲೆಹಾಕಿ ಅಚ್ಚು ಕಟ್ಟಾಗಿ ದಫ್ತರಿಸಿ ಕಡತ ತಯಾರಿಸಿದ. ಇದು ಅವನ ಅಮೂಲ್ಯ ಆಸ್ತಿ, ಘನೀಭವಿತ ರಿಲೆಟಿವಿಟಿ! ಐನ್‌ಸ್ಟೈನರೊಡನೆ ಭೇಟಿ ಗಿಟ್ಟಿಸಿಕೊಂಡ :

"ಪ್ರಾಧ್ಯಾಪಕ ಮಹೋದಯರೇ ! ನಾನು ತಮ್ಮ ಅಮೂಲ್ಯ ಕೊಡುಗೆ ರಿಲೆಟಿವಿಟಿಯಿಂದ ಬಹಳ ಪ್ರಭಾವಿತನಾಗಿದ್ದೇನೆ. ನೋಡಿ ನನ್ನ ಸಂಗ್ರಹವಿದು."

ಐನ್‌ಸ್ಟೈನ್ ಸಹಜವಾಗಿದ್ದರು. ಕುತೂಹಲದಿಂದ ಅವನನ್ನು ನೋಡುತ್ತಿದ್ದರು, ಅಷ್ಟೆ.

ಆತನೇ ಮುಂದುವರಿಸಿದ, "ತಮ್ಮ ಪ್ರಗಲ್ಭ ಪ್ರಬಂಧಗಳಲ್ಲಿ ಬಂದಿರುವ ವಿಶೇಷ ಪದಗಳಾದ potential, invariant, covariant, energy tensor, relativity-postulate, hyper-Euclidean, internal system ಇವುಗಳ ಅರ್ಥ ಹೇಳುವಿರಾ ? ಇವನ್ನು ಕೆಲವೇ ಪದಗಳಲ್ಲಿ ನೀವು ನನಗೆ ವಿವರಿಸಬಲ್ಲಿರಾ ?"

"ಖಂಡಿತವಾಗಿಯೂ, ಅವು ಕೇವಲ ತಾಂತ್ರಿಕ ಪದಗಳು ಅಷ್ಟೆ."

ಮನೋವಿಜ್ಞಾನಿಯೊಬ್ಬ ಬಂದ. ಇವರ ಜೀನಿಯಸನ್ನು (ಮಹಾಪ್ರತಿಭೆ ಅಥವಾ ಬೃಹಸ್ಪತಿತ್ವ)

ಪೃಥಕ್ಕರಿಸಿ ವಿಶ್ಲೇಷಿಸುವುದು ಅವನ ಉದ್ದೇಶ. ಮಹಾಪ್ರತಿಭೆ ಆನುವಂಶಿಕವೇ, ಅಲ್ಲವೇ ? ಅವನೇ ಹೇಳುತ್ತಾನೆ, "ಬುದ್ಧಿಸಾಮರ್ಥ್ಯ ಅಥವಾ ಪ್ರತಿಭೆ ಒಂದೇ ಕುಟುಂಬದಲ್ಲಿ ತಲೆಮಾರಿನಿಂದ ತಲೆಮಾರಿಗೆ ಅನೂಚಾನವಾಗಿ ಹರಿಯುವುದರಲ್ಲಿ ನಿಸರ್ಗದ ಉದ್ದೇಶಿತ ಹಸ್ತಕ್ಷೇಪವೇನೂ ಇದ್ದಂತಿಲ್ಲ. ಅಂಥಾದ್ದರಲ್ಲೂ ಎರಡು ಮೂರು ನಾಲ್ಕು ತಲೆಗಳವರೆಗೆ ಒಂದೇ ಕುಟುಂಬದಲ್ಲಿ ಪ್ರತಿಭಾವಂತರು ಜನಿಸಿದರೆ ಇಂಥ ಜನನದ ಕಾರಣ ಕೇವಲ ಆಕಸ್ಮಿಕ."

ಐನ್‌ಸ್ಟೈನ್ ಉತ್ತರಿಸುತ್ತಾರೆ, "ನಿಮ್ಮ ಹೇಳಿಕೆ ಸರಿಯಲ್ಲ. ಆನುವಂಶಿಕ ಪ್ರತಿಭೆ ಖಂಡಿತವಾಗಿಯೂ ಅನೇಕ ಸಂದರ್ಭಗಳಲ್ಲಿ ಇದ್ದೇ ಇರುವುದು. ಆದರೆ ನಾವದನ್ನು ಗಮನಿಸಿರುವುದಿಲ್ಲ. ಏಕೆಂದರೆ ತನ್ನಷ್ಟಕ್ಕೆ ತಾನಿರುವ ಪ್ರತಿಭೆ, ಅಂದರೆ ಸುಪ್ತ ಪ್ರತಿಭೆ, ಮತ್ತು ಗುರುತಿಸಲ್ಪಡುವ ಸಾಧ್ಯತೆಗೆ ಒಳಪಟ್ಟು ಪ್ರಕಟವಾಗುವ ಪ್ರತಿಭೆ, ಅಂದರೆ ಪ್ರಕಟಿತ ಪ್ರತಿಭೆ ಎರಡೂ ಒಟ್ಟಿಗೆ ಇರುವುದು ಅತಿವಿರಳ. ಸುಪ್ತ ಪ್ರತಿಭೆಗೂ ಗಮನಾರ್ಹ ಸಿದ್ಧಿಗಳಲ್ಲಿ ಪ್ರಕಾಶಕ್ಕೆ ಬರುವ ಪ್ರಕಟಿತ ಪ್ರತಿಭೆಗೂ ನಡುವೆ ಇರುವ ವ್ಯತ್ಯಾಸಗಳು ತೀರ ಕ್ಷುಲ್ಲಕವಾದವು. ಯಾವುದೊ ಒಂದು ಅನುಕೂಲ ಕ್ಷಣದಲ್ಲಿ, ಪ್ರಾಯಶಃ ಏನೊ ಒಂದು ಒತ್ತಡ ಅಥವಾ ಆವೇಗ ಅಥವಾ ಕ್ಷೋಭೆಯ ಕಾರಣ ಸಾಕು ಆ ಸುಪ್ತ ಪ್ರತಿಭೆ ಉಜ್ಜ್ವಲ ಪ್ರಕಾಶದಿಂದಲೂ ವರ್ಣವೈಭವದಿಂದಲೂ ಚಿಪ್ಪೊಡೆದು ಹೊರಬರಲು ಅಥವಾ ಬಹುಶಃ ಅದಕ್ಕೆ ವಿಜ್ಞಾನದ ಅಭಿವರ್ಧನೆಯಲ್ಲಿಯ ಯಾವುದೊ ಒಂದು ಅಸಾಧಾರಣ ಸನ್ನಿವೇಶ ಆವಶ್ಯಕವಾಗಿರಬಹುದು. ಇದು ಒದಗಿರದಿದ್ದ ಪಕ್ಷದಲ್ಲಿ ಅದು ನಿದ್ರಾಸ್ಥಿತಿಯಲ್ಲಿಯೇ ಇರುತ್ತಿತ್ತು. ಇಂಥ ಸುಪ್ತ ಪ್ರತಿಭೆಯನ್ನು ಇಲ್ಲವೆಂದು ತೀರ್ಮಾನಿಸಲು ನಮಗೇನು ಹಕ್ಕುಂಟು ?"*

"ಭಾವನೆಗಳು ದೇವರಿಂದ (ನಿಸರ್ಗದಿಂದ) ಬರುತ್ತವೆ." ಎಂದು ಪದೇ ಪದೇ ಉದ್ಗರಿಸುತ್ತಿದ್ದ ಐನ್‌ಸ್ಟೈನ್ ತಾವು ಜೀನಿಯಸ್ ಎಂಬುದನ್ನು ಎಂದೂ ಒಪ್ಪಲಿಲ್ಲ.

"ನಿಸರ್ಗದ ಎದುರು ನಿಂತಾಗ ಸೈದ್ಧಾಂತಿಕ ಭೌತವಿಜ್ಞಾನಿ ಅದೆಂಥ ದೀನದರಿದ್ರ ಅಸಮರ್ಪಕನೆನಿಸುತ್ತಾನೆ—ಮತ್ತು ತನ್ನ ವಿದ್ಯಾರ್ಥಿಗಳ ಎದುರು !" ತಮ್ಮಂತೆಯೇ ಸೈದ್ಧಾಂತಿಕ ಭೌತವಿಜ್ಞಾನಿಯಾಗಿದ್ದ ಮಿತ್ರ ಪಾಲ್ ಏರೆನ್‌ಫೆಸ್ಟ್ (೧೮೮೦-೧೯೩೩) ಎಂಬವರಿಗೆ ಒಮ್ಮೆ ಐನ್‌ಸ್ಟೈನ್ ಹೀಗೆ ಬರೆದಿದ್ದರು.

ಸಮಕಾಲೀನ ವಿಜ್ಞಾನಪರಿಸರದ ಕೂಸುಗಳಾಗಿ ವಿವಿಧ ಭಾವನೆಗಳು ತೇಲುತ್ತಿರುತ್ತವೆ. ಇವು ಆ ಸಂದರ್ಭದಲ್ಲಿ ಕಾರ್ಯೋದ್ಯುಕ್ತರಾಗಿರುವ ಪ್ರತಿಭಾವಂತ ವಿಜ್ಞಾನಿಗಳನ್ನು ಮಾಧ್ಯಮಗಳಾಗಿ ಬಳಸಿಕೊಂಡು ಪ್ರಕಟವಾಗುತ್ತವೆ. ಕೊಪರ್ನಿಕಸನ ಸೂರ್ಯಕೇಂದ್ರವಾದ (ಹದಿನಾರನೆಯ ಶತಮಾನ), ನ್ಯೂಟನ್ನನ ವಿಶ್ವಗುರುತ್ವಾಕರ್ಷಣನಿಯಮ (ಹದಿನೇಳನೆಯ ಶತಮಾನ), ಡಾರ್ವಿನ್ನನ ವಿಕಾಸವಾದ (ಹತ್ತೊಂಬತ್ತನೆಯ ಶತಮಾನ) ಉದಾಹರಣೆಗಳು.[೨೨] ಅಂದ ಮಾತ್ರಕ್ಕೆ ಈ ಮಹಾ ವಿಜ್ಞಾನಿಗಳ ಸಾಧನೆಗಳು ಕಡಿಮೆ ಎಂದು ಈ ಮಾತಿನ ಅರ್ಥವಲ್ಲ. ಇವರು ಜನಿಸಿರದಿದ್ದರೂ ಸರಿಸುಮಾರಾಗಿ ಆಯಾ ಅವಧಿಯಲ್ಲೇ ಬೇರೆಯವರು ಈ ಆವಿಷ್ಕಾರಗಳನ್ನು ಮಾಡಿರುತ್ತಿದ್ದರು. "ಆದರೆ ಸಮಗ್ರ ಸಾಪೇಕ್ಷತಾಸಿದ್ಧಾಂತದ ಸಂರಚನೆಯನ್ನು ಕುರಿತಂತೆ ಇದೇ ಮಾತನ್ನು, ಅಂದರೆ ಇದು ಹತ್ತೊಂಬತ್ತನೆಯ ಅಥವಾ ಇಪ್ಪತ್ತನೆಯ ಶತಮಾನದ ವಿಜ್ಞಾನ

---

* ರತ್ನಾಕರ ನಾಮಕ ವ್ಯಾಧ ಆದಿಕವಿ ವಾಲ್ಮೀಕಿಯಾಗಿ "ಚಿಪ್ಪೊಡೆದು ಹೊರ" ಬಂದ "ಮಾನಿಷಾದ" ಪ್ರಕರಣವನ್ನು ನೆನಪಿಸಿಕೊಳ್ಳಿ.

ಪರಿಸರದ ಶಿಶು ಎಂಬ ಮಾತನ್ನು, ಹೇಳಲಾಗುವುದಿಲ್ಲ. ಐನ್‌ಸ್ಟೈನ್ ಎಂಬ ವಿಶಿಷ್ಟ ವ್ಯಕ್ತಿ ಜನಿಸಿರದಿದ್ದಿದ್ದರೆ ಪ್ರಾಯಶಃ ಇನ್ನೂ ಇನ್ನೂರು ವರ್ಷಗಳ ಕಾಲ ಮಾನವ ಸಾಪೇಕ್ಷತಾ ಸಿದ್ಧಾಂತದ ಆಗಮನಕ್ಕಾಗಿ ಕಾದಿರಬೇಕಾಗಿತ್ತು," ಎಂಬುದಾಗಿ ಐನ್‌ಸ್ಟೈನರ ಸಂದರ್ಶನಕಾರ ಅಲೆಕ್ಸಾಂಡರ್ ಮಾರ್ಝ್ಕೊವ್ಸ್ಕಿ ಬರೆದಿದ್ದಾರೆ.

ಐನ್‌ಸ್ಟೈನ್ ಶುದ್ಧ ಆಸ್ತಿಕರು. ಮೊರ್ಝಾಯಿಕ್ ಮತ ಮತ್ತು ಅದರ ಧರ್ಮಾಚರಣೆಗಳಲ್ಲಿ ಇವರಿಗೆ ಆಳವಾದ ಭಕ್ತಿ ಶ್ರದ್ಧೆ ಇದ್ದುವು. ಆದರೆ ಇವರು ನಂಬಿದ ದೇವರು ಯಾರು ? ಇವರೇ ನೀಡಿರುವ (೧೯೨೯) ವಿವರಣೆ ಹೀಗಿದೆ : "ವಾಸ್ತವತೆಯ ಅಥವಾ ಅಸ್ತಿತ್ವದ (ಸೃಷ್ಟಿಯ) ಕ್ರಮ ಬದ್ಧ ಸುಸಾಂಗತ್ಯದಲ್ಲಿ ಪ್ರಕಾಶಿತನಾಗುತ್ತಿರುವ ಸ್ಪಿನೋಝನ[೮] ದೇವರನ್ನು ನಂಬುತ್ತೇನೆ ; ಜನರ ಅದೃಷ್ಟದ ಬಗ್ಗೆ ಚಿಂತಿಸುವ ದೇವರನ್ನಲ್ಲ."

೧೯೪೭ರಲ್ಲಿ ಐನ್‌ಸ್ಟೈನ್ ದೇವರನ್ನು ಹೀಗೆ ವರ್ಣಿಸಿದರು : "ವೈಯಕ್ತಿಕ ದೇವರ ಬಗೆಗಿನ ಭಾವನೆ ಮಾನವಶಾಸ್ತ್ರೀಯ ಪರಿಕಲ್ಪನೆ ಎಂದು ನನಗೆ ಅನ್ನಿಸುತ್ತದೆ. ನಾನೇನೂ ಇದನ್ನು ಗಂಭೀರವಾಗಿ ಸ್ವೀಕರಿಸಲಾರೆ. ಮಾನವಪ್ರಜ್ಞೆಯ ಹೊರಗೆ ಯಾವುದೊ ಮನಸ್ಸು ಅಥವಾ ಗುರಿ ಇದೆಯೆಂದು ಊಹಿಸುವುದು ಕೂಡ ನನಗೆ ಸಾಧ್ಯವಾಗದು. ನನ್ನ ಅಭಿಪ್ರಾಯ ಸ್ಪಿನೋಝನದರ ಹತ್ತಿರದ್ದು : ನಾವು ನಿವೇದಿತರಾಗಿ ಅಲ್ಲಿಯೂ ಅಪರಿಪೂರ್ಣವಾಗಿ ಮಾತ್ರ ಗ್ರಹಿಸಬಹುದಾದ ಕ್ರಮ ಮತ್ತು ಸುಸಾಂಗತ್ಯದಲ್ಲಿ ನಂಬಿಕೆ, ಮತ್ತು ಇದರ ಸೌಂದರ್ಯದ ಬಗ್ಗೆ ಮೆಚ್ಚುಗೆ. ನಮ್ಮ ಅಪರಿಪೂರ್ಣ ಜ್ಞಾನ ಮತ್ತು ತಿಳಿವಳಿಕೆಯಿಂದಲೆ ನಾವು ತೃಪ್ತರಾಗಿದ್ದುಕೊಂಡು ಮೌಲ್ಯಗಳನ್ನೂ ನೈತಿಕ ಹೊಣೆಗಳನ್ನೂ ಕೇವಲ ಮಾನವಸಮಸ್ಯೆ ಎಂಬುದಾಗಿ ಪರಿಗಣಿಸಬೇಕೆಂದು ಭಾವಿಸಿದ್ದೇನೆ. ಈ ಸಮಸ್ಯೆ ಎಲ್ಲ ಮಾನವಸಮಸ್ಯೆಗಳ ಪೈಕಿ ಅತಿ ಮುಖ್ಯವಾದದ್ದು."

ಇನ್ನೊಂದು ಸಂದರ್ಭದಲ್ಲಿ ಹೀಗೆ ಹೇಳಿದರು : "ವಿಶ್ವದ ನಿಗೂಢತೆ ಒದಗಿಸುವ ರಸಾನು ಭವವೇ ಅತ್ಯಂತ ಸುಂದರವಾದದ್ದು. ಇದೇ ನಿಜವಾದ ಎಲ್ಲ ಕಲೆ ಮತ್ತು ವಿಜ್ಞಾನಗಳ ಆಕರ. ಯಾರಿಗೆ ಈ ಅನುಭವ ಪರಕೀಯ ಎನ್ನಿಸುವುದೊ ಯಾರು ನಿಗೂಢತೆಯ ಎದುರು ಮೂಕ ವಿಸ್ಮಯದಿಂದ ಬೆಕ್ಕಸ ಬೆರಗಾಗಿ ನಿಂತು ಕಣ್ಣರಳಿಸಲಾರರೊ ಅವರು ಇದ್ದೂ ಸತ್ತಂತೆಯೇ—ಅವರ ಕಂಗಳು ಇಂಗಿಹೋಗಿರುತ್ತವೆ. ಅತ್ಯುತ್ಕೃಷ್ಟ ಜ್ಞಾನವಾಗಿಯೂ ಪರಮೋಜ್ಜ್ವಲ ಸೌಂದರ್ಯವಾಗಿಯೂ ಪ್ರಕಟವಾಗುವ ಗಮ್ಯಾತೀತ ಪದಾರ್ಥವೊಂದುಂಟು. ನಮ್ಮ ಮಂದ ಸಂವೇದನೆಗಳು ಇದನ್ನು ಇದರ ಅತ್ಯಂತ ಆದಿಮ ರೂಪಗಳಲ್ಲಿ ಮಾತ್ರ ಗ್ರಹಿಸಬಲ್ಲವು ಎಂಬು ದನ್ನು ಅರಿಯುವುದೆ—ಈ ತಿಳಿವಳಿಕೆ, ಈ ಭಾವನೆ—ನಿಜವಾದ ಧಾರ್ಮಿಕತೆಯ ತಿರುಳು. ಈ ಅರ್ಥದಲ್ಲಿ, ಈ ಅರ್ಥದಲ್ಲಿ ಮಾತ್ರ, ನಾನು ಶ್ರದ್ಧಾವಂತ ಧಾರ್ಮಿಕ ವ್ಯಕ್ತಿಗಳ ಸಾಲಿಗೆ ಸೇರಿದವನಾಗಿದ್ದೇನೆ."

ಋಗ್ವೇದದಲ್ಲಿ ಉಕ್ತವಾಗಿರುವ ಋಷಿವಾಣಿಯನ್ನು ಇಲ್ಲಿ ಅರ್ಥಪೂರ್ಣವಾಗಿ ಉಲ್ಲೇಖಿಸ ಬಹುದು : "ದೇವಸ್ಯ ಪಶ್ಯ ಕಾವ್ಯಂ ನಮಮಾರ ನಜೀರ್ಯತಿ" (ದೇವರ ಕಾವ್ಯವನ್ನು ನೋಡು. ಅದಕ್ಕೆ ಮರಣವಿಲ್ಲ. ಜೀರ್ಣವೂ ಇಲ್ಲ.) ನಿಸರ್ಗವೇ ದೇವರು, ನೈತಿಕತೆಯೇ ಉಸಿರು, ಅನುಕಂಪವೇ ಬಸಿರು, ಆಗ ಬದುಕು ಸದಾ ಹಸುರು !

ಐನ್‌ಸ್ಟೈನ್ ಮಹಾದ್ರಷ್ಟಾರರೆಂಬುದಾಗಿ ಖ್ಯಾತಿವಂತರಾಗಿದ್ದಾಗ ಒಮ್ಮೆ ಅವರನ್ನೊಂದು ಪ್ರಶ್ನೆ ಕೇಳಲಾಯಿತು : "ನಿಮ್ಮ ವಿಜ್ಞಾನಪ್ರತಿಭೆ ತಂದೆ ಕಡೆಯಿಂದಲೂ ಸಂಗೀತಪ್ರತಿಭೆ ತಾಯಿ ಕಡೆಯಿಂದಲೂ ಆನುವಂಶಿಕವಾಗಿ ಬಳುವಳಿ ಬಂದವಾಗಿರಬಹುದೇ ?"

ಅವರ ಉತ್ತರ ನೇರವಾಗಿತ್ತು, ಪಾರದರ್ಶಕವಾಗಿತ್ತು : "ನನಗೆ ಯಾವ ವಿಶೇಷ ಪ್ರತಿಭೆಯೂ ಇಲ್ಲ. ನಾನು ತೀವ್ರ ಕುತೂಹಲಿ ಆಗಿದ್ದೇನೆ ಮಾತ್ರ. ಎಂದೇ ಇದು ಆನುವಂಶಿಕತೆಯ ಪ್ರಶ್ನೆ ಅಲ್ಲ."

ಆ ಪ್ರಶ್ನೆಯಲ್ಲೇ ಒಂದು ದೋಷ ನುಸುಳಿತ್ತು : ಐನ್‌ಸ್ಟೈನರ ವಿಜ್ಞಾನಪ್ರತಿಭೆಯನ್ನು (ಇದು ನಿಸ್ಸಂಶಯವಾಗಿಯೂ ಪರಮೋಚ್ಚ ಮಟ್ಟದ್ದಾಗಿತ್ತು) ಸಂಗೀತಪ್ರತಿಭೆಗೆ (ಇದೆಂದೂ ಶ್ರೇಷ್ಠ ವೃತ್ತಿಕಲಾವಿದರ ಪ್ರತಿಭೆಯ ಮಟ್ಟಕ್ಕೆ ಏರಿರಲಿಲ್ಲ) ಸಮೀಕರಿಸಿದ್ದು. ವಿಜ್ಞಾನರಂಗದಲ್ಲಿ ಐನ್‌ಸ್ಟೈನರ ವೈಶಿಷ್ಟ್ಯವೇನು ? ಬನೇಶ್ ಹಾಫ್‌ಮನ್,೧೯೦೬, (ಇವರು ಐನ್‌ಸ್ಟೈನರೊಡನೆ ಪ್ರಿನ್‌ಸ್ಟನ್ನಿನಲ್ಲಿ ಸಂಶೋಧನೆ ನಡೆಸಿದ್ದರು, ೧೯೩೭) ಹೇಳುತ್ತಾರೆ : "ಯಾವ ಒಂದು ಗುಣದ ಗೈರುಹಾಜರಿಯಿಂದ ಅತ್ಯಂತ ತೀವ್ರವಾದ ಕುತೂಹಲವೂ ಬರಿದೆ ಬರಡು ಎನ್ನಿಸುತ್ತದೋ ಆ ಗುಣದ ಮಾಂತ್ರಿಕ ಸ್ಪರ್ಶ ಇವರಿಗೆ ಮಾತ್ರ ವಿಶಿಷ್ಟವಾಗಿತ್ತು : ಅಧಿಕತರ ಸಾಮರ್ಥ್ಯವಿರುವ ಸಾಧಾರಣ ವ್ಯಕ್ತಿಗಳ ಭೂರಿಸಂತೆಯಿಂದ ಮಹಾ ಪ್ರತಿಭಾನ್ವಿತರನ್ನು ಪ್ರತ್ಯೇಕಿಸಿ ಕಾಣಿಸುವ ತರ್ಕಾತೀತ ಸತ್ಯಭೂಯಿಷ್ಠ ಮಾಂತ್ರಿಕತೆ ಇವರ ಸೊತ್ತಾಗಿತ್ತು." ನಹಿ ಜ್ಞಾನೇನ ಸದೃಶಂ !

ಒಮ್ಮೆ ಐನ್‌ಸ್ಟೈನ್ ತಮ್ಮ 'ಖ್ಯಾತಿ'ಯ ಬಗ್ಗೆ ಹೀಗೆ ಬರೆದಿದ್ದರು : "ಖ್ಯಾತಿಯೊಡನೆ ನಾನು ಅಧಿಕಾಧಿಕ ಮುಠ್ಠಾಳನಾಗುತ್ತಿದ್ದೇನೆ. ಇದು ತೀರ ಸಾಮಾನ್ಯ ವಿದ್ಯಮಾನವೆಂಬುದು ಕಂಡಂತೆಯೇ ಇದೆ. ಒಬ್ಬ ಏನಾಗಿದ್ದಾನೆ ಮತ್ತು ಇತರರು ಒಬ್ಬನ ಬಗ್ಗೆ ಏನು ಯೋಚಿಸುತ್ತಾರೆ, ಅಥವಾ ಕನಿಷ್ಠಪಕ್ಷ ತಾವು ಏನು ಯೋಚಿಸುತ್ತೇವೆಂದು ಹೇಳುತ್ತಾರೆ ಇವುಗಳ ನಡುವಿನ ಅಗಲು ತುಂಬ ಅಗಲವಾದದ್ದು. ಆದರೆ ಇವನ್ನೆಲ್ಲ ಆತ ಸುಹಾಸ ಪ್ರಜ್ಞೆಯಿಂದ ಸ್ವೀಕರಿಸಬೇಕಾಗುತ್ತದೆ."

ಐನ್‌ಸ್ಟೈನರ ಚಿಂತನ ವಿಧಾನ ಹೇಗಿತ್ತು ? ಈ ಪ್ರಶ್ನೆಗೆ ಹಾಫ್‌ಮನ್ ಸ್ವಂತಾನುಭವ ಮತ್ತು ಸಮೀಪದರ್ಶನದಿಂದ ನೀಡಿರುವ ಉತ್ತರ : "ಇವರ ಏಕಾಗ್ರತೆಯ ತೀವ್ರತೆ ಹಾಗೂ ಗಭೀರತೆ ಪರಮಾದ್ಭುತ. ಜಗ್ಗದ ಜಿಗುಟು ಸಮಸ್ಯೆಯೊಡನೆ ಗುದ್ದಾಡುತ್ತಿರುವಾಗ ಅದನ್ನು ಇವರು ಹಿಂಸ್ರಪಶು ತನ್ನ ಎರೆಯನ್ನು ಗೋಳುಹುಯ್ದುಕೊಳ್ಳುವಂತೆ ಪೀಡಿಸುತ್ತಿದ್ದರು. ತೋರ್ಕೆಗೆ ಅಡ್ಡ ಹಾಯಲಾಗದಂಥ ಅಡಚಣೆ ಪದೇಪದೇ ನಮಗೆದುರಾಗುತ್ತಿತ್ತು [ಹಾಫ್‌ಮನ್ ಮತ್ತು ಇನ್‌ಫೆಲ್ಡ್ ಎಂಬ ಇಬ್ಬರು ಸಹಾಯಕರು]. ಆಗ ಇವರೆದ್ದು ನಿಂತು ಹೊಗೆ ಕೊಳವೆಯನ್ನು (ಪೈಪ್) ಮೇಜದ ಮೇಲಿಟ್ಟು ತಮ್ಮ ವಿಚಿತ್ರ ಆಕರ್ಷಕ ಇಂಗ್ಲಿಷಿನಲ್ಲಿ 'I will a little tink' [ಯೋಚಿಸುತ್ತೇನೆ ಕೊಂಚ ನಾನು] ಎನ್ನುವರು. ತರುವಾಯ, ನರೆಯುತ್ತಿದ್ದ ತಮ್ಮ ನೀಳ ಕೂದಲಿನ ಒಂದು ಕುರುಳನ್ನು ತೋರುಬೆರಳಿನಿಂದ ಸುರುಳಿ ಸುತ್ತುತ್ತ ಕೆಳಗೆ ಮೇಲೆ ಶತಪಥ ಕಾಲಿಡುವರು. ಕನಸಿನಾಳದ ದೂರ ನೆಟ್ಟ, ಆದರೂ ಒಳತಿರುಗಿದ ನೋಟ ಇವರ ವದನದ ಮೇಲೆ ಸುಳಿಯುತ್ತದೆ. ಅಲ್ಲಿ ಏಕಾಗ್ರತೆಯ ಸುಳುಹಿಲ್ಲ, ಹುಬ್ಬು ಗಂಟಿಕ್ಕಿರುವುದಿಲ್ಲ, ಚರ್ಮ ನೆರಿಗಟ್ಟಿರುವುದಿಲ್ಲ—ಚಿರ ಶಾಂತ ಆಂತರಿಕ ತಾದಾತ್ಮ್ಯಭಾವ ಮಾತ್ರ. ನಿಮಿಷಗಳು ಸರಿಯುತ್ತವೆ. ಐನ್‌ಸ್ಟೈನ್ ಕಾಲಿಡುವುದನ್ನು ಒಮ್ಮೆಗೇ ನಿಲ್ಲಿಸುವರು. ಅದೇ ವೇಳೆ ಅವರ ಮುಖ ಹೂನಗುವಿನಿಂದ ಅರಳಿರುತ್ತದೆ. ಸಮಸ್ಯೆಗೆ ಅವರು ಪರಿಹಾರ ಪತ್ತೆಹಚ್ಚಿದ್ದಾರೆ ಎನ್ನುವುದರ ಕುರುಹು ಇದು. ಕೆಲವೊಮ್ಮೆ ಈ ಪರಿಹಾರ ಎಷ್ಟು ಸರಳವಾಗಿರುತ್ತಿತ್ತೆಂದರೆ ನಾವೇ ಇದನ್ನು ಯೋಚಿಸಲಾಗದಿದ್ದುದಕ್ಕಾಗಿ ಇನ್‌ಫೆಲ್ಡ್ ಮತ್ತು ನಾನು ತಲೆ ತಲೆ ಚಚ್ಚಿಕೊಳ್ಳುತ್ತಿದ್ದೆವು. ಆದರೆ ಐನ್‌ಸ್ಟೈನರ ಮನದಾಳದಲ್ಲಿ, ನಮಗೆ ಮುಳುಗಿ ಅಳೆಯಲಾಗದ ಒಂದು ಪ್ರಕ್ರಿಯೆಯಿಂದ, ಈ ಮೋಡಿ ನಡೆದುಹೋಗಿರುತ್ತಿತ್ತು."

## ೫. ರಾಕ್ಷಸರೋ ? ಸಾಕ್ಷರರೋ ?

### ಯುದ್ಧೋತ್ತರ ಜರ್ಮನಿ

ಮಾನವನ ಹಕ್ಕುಬಾಧ್ಯತೆಗಳ ಅಸ್ತಿತ್ವ ಮತ್ತು ಸಾಧುತ್ವ ನಕ್ಷತ್ರಲಿಖಿತ ದಾಖಲೆಗಳೇನೂ ಅಲ್ಲ. ಮನುಷ್ಯರ ನಡುವಿನ ನಡವಳಿಕೆಯನ್ನು ಕುರಿತ ಆದರ್ಶಗಳು ಮತ್ತು ಸಮಾಜದ ಅಪೇಕ್ಷಣೀಯ ರಚನೆ ಹೇಗಿರಬೇಕು ಎಂಬುದನ್ನು ಇತಿಹಾಸದ ಉದ್ದಕ್ಕೂ ಪ್ರತಿಭಾನ್ವಿತ ವ್ಯಕ್ತಿಗಳು ಚಿಂತಿಸಿದ್ದಾರೆ ಮತ್ತು ಪ್ರತಿಪಾದಿಸಿದ್ದಾರೆ. ಸೌಂದರ್ಯ ಮತ್ತು ಸಾಂಗತ್ಯ ಗಳಿಕೆಗಾಗಿ ಕಡುಬಯಕೆ, ಮತ್ತು ಐತಿಹಾಸಿಕ ಅನುಭವ ಇವುಗಳ ಫಲವಾಗಿ ಈ ದಿವ್ಯ ಆದರ್ಶಗಳನ್ನೂ ದೃಢನಂಬಿಕೆಗಳನ್ನೂ ಮಾನವ ನಿರ್ವಿಕಾರ ಬುದ್ಧಿಯಿಂದ, ಸೈದ್ಧಾಂತಿಕವಾಗಿ, ಸ್ವೀಕರಿಸಿದ್ದಾಗಲೇ ಎಲ್ಲ ಯುಗಗಳಲ್ಲಿಯೂ ಆತನ ಪಾಶವಿಕ ಪ್ರವೃತ್ತಿಗಳ ಒತ್ತಾಯಕ್ಕೆ ಮಣಿದು ಆತ ಅವನ್ನು ತುಳಿದಪ್ಪಳಿಸಿಯೂ ಇದ್ದಾನೆ. ಇತಿಹಾಸದ ಬಲು ದೊಡ್ಡ ಭಾಗ ಮಾನವ ಹಕ್ಕುಬಾಧ್ಯತೆಗಳ ಸ್ಥಾಪನೆಯ ಹೋರಾಟದ ಕತೆಗಳಿಂದ ತುಂಬಿ ತುಳುಕಾಡುತ್ತಿದೆ. ಕೊನೆ ಇರದ ಹೋರಾಟವಿದು. ಇದರಲ್ಲಿ ಅಂತಿಮ ಜಯವೆಂದೂ ಕೈಗೂಡದು. ಆದರೆ ಈ ಹೋರಾಟದಲ್ಲಿ ದಣಿವು ಇಣುಕಿದ್ದೇ ಆದರೆ ಆಗ ಸಮಾಜ ನಾಶವಾಗುವುದು ದಿಟ.

ಐನ್‌ಸ್ಟೈನ್

ಒಂದನೆಯ ಮಹಾಯುದ್ಧವನ್ನು (೧೯೧೪-೧೮) ಪ್ರವರ್ತಿಸಿ ಪ್ರಳಯಾಗ್ನಿಯನ್ನು ಪ್ರಪಂಚಕ್ಕೆ ಆಹ್ವಾನಿಸಿ ಆವಾಹಿಸಿದ್ದು ಜರ್ಮನಿ. ತನ್ನ ಉದ್ದೇಶದ ಸಾಚಾತನದ ಬಗ್ಗೆ, ತನಗೆ ವಿಜಯ ಸಿದ್ಧಿಸುವುದರ ಖಚಿತತೆಯ ಬಗ್ಗೆ, ಮತ್ತು ತಾನು ಲೋಕನಾಯಕತ್ವ ಪಡೆಯುವುದರ ಬಗ್ಗೆ ಪೂರ್ಣ ವಿಶ್ವಾಸ ತಳೆದಿದ್ದ, ಆ ದುರಭಿಮಾನಿ ರಾಷ್ಟ್ರವನ್ನು ಯುದ್ಧಾಪಜಯ ಆಕಸ್ಮಿಕ ಆಘಾತವಾಗಿ ಬಂದು ಬಡಿಯಿತು. ಜರ್ಮನಿಯ ಬುದ್ಧಿಜೀವಿಗಳು "ನಾಗರಿಕ ಪ್ರಪಂಚಕ್ಕೆ ಪ್ರಣಾಳಿಕೆ" ಸಲ್ಲಿಸಿದ ತೊಂಬತ್ತೆರಡು ಬುದ್ಧಿವಂತರನ್ನು ಅನುಸರಿಸುತ್ತ ತಮ್ಮ ಉಗ್ರರಾಷ್ಟ್ರನಾಯಕರನ್ನು ಅಂಧ ವಿಶ್ವಾಸ ಅಭಿಮಾನಗಳಿಂದ ಬೆಂಬಲಿಸುತ್ತ ಯುದ್ಧದಲ್ಲಿ ವಿಜಯದ ಗಳಿಕೆಗಾಗಿ ಸ್ವಕ್ಷೇತ್ರಗಳಲ್ಲಿ ಮನಃಪೂರ್ವಕವಾಗಿ ದುಡಿದಿದ್ದರು. ತಮ್ಮ ರಾಷ್ಟ್ರದ ಸೇನಾಸಾಮರ್ಥ್ಯ, ಧುರೀಣತ್ವ, ಸಮರ ಸಿದ್ಧತೆ, ಮೇಲಾಗಿ ಅಧೋರಚನೆಯಲ್ಲಿದ್ದ (infrastructure) ವಿಜ್ಞಾನ ಮತ್ತು ತಂತ್ರವಿದ್ಯೆ ಎಲ್ಲವೂ ಸರ್ವೋಚ್ಚ ಮಟ್ಟದಲ್ಲಿದ್ದರೂ ತಮಗೇಕೆ ಈ ಹಠಾತ್ ಸೋಲು ಎದುರಾಯಿತು ? ಪ್ರತಿಗಾಮಿಬಲಗಳು ಬೆನ್ನಿನಲ್ಲಿ ಇರಿದುದರ ದುಷ್ಫಲವಿದು. ದೇಶದ್ರೋಹಿಗಳು ಅಂತಾರಾಷ್ಟ್ರೀಯ ಸಂಚುಗಾರರೊಡನೆ ಶಾಮೀಲಾಗಿ ಜರ್ಮನಿಯನ್ನು ವಂಚಿಸಿದ್ದೇ ಇದರ ಕಾರಣ. ಆದ್ದರಿಂದ ಈಗ ಸಂಭವಿಸಿರುವುದು ತಮ್ಮ ಪವಿತ್ರ ಪಿತೃಭೂಮಿಯ ಸೇನಾಪತನವಲ್ಲ, ಆಂತರಿಕ ರಾಷ್ಟ್ರಘಾತಕರು ಜರ್ಮನಿಯ ಮುಖಕ್ಕೆ ಮೆತ್ತಿದ ಮಹಾಕಳಂಕ ಎಂಬುದಾಗಿ ಬುದ್ಧಿಜೀವಿಗಳು ಭಾವಿಸಿದರು.

ಸಾರ್ವಜನಿಕ ಆಕ್ರೋಶ ಯೆಹೂದ್ಯರ, ಪ್ಯಾಸಿಫಿಸ್ಟುಗಳ (ಶಾಂತಿವಾದಿಗಳು) ಹಾಗೂ ವಾಮ ಪಂಥೀಯರ ವಿರುದ್ಧ ಭುಗಿಲೆದ್ದಿತು. ಯಾವ ಒಂದು ನಿರ್ದಿಷ್ಟ ತಾಯಿನಾಡೂ ಇರದಿದ್ದ ಆದರೆ ಹೆಚ್ಚು ಕಡಿಮೆ ಎಲ್ಲ ನಾಡುಗಳಲ್ಲಿಯೂ ಹರಡಿ ಹೋಗಿದ್ದ, ವಿಶೇಷವಾಗಿ ವ್ಯಾಪಾರವಹಿವಾಟುಗಳಲ್ಲಿಯೂ ಸಂಗೀತ ಕಲೆಗಳಲ್ಲಿಯೂ ಪರಿಣತರಾಗಿ ತಕ್ಕಮಟ್ಟಿನ ಸಂಪನ್ನಜೀವನವನ್ನು ಬಾಳುತ್ತಿದ್ದ, ವ್ಯವಸ್ಥಿತ ಶಿಕ್ಷಣ ಕುರಿತು ಸ್ಪಷ್ಟ ಒಲವಿದ್ದ ಮತ್ತು ತಮ್ಮ ವಿಶಿಷ್ಟ ಧಾರ್ಮಿಕ ಪರಂಪರೆಯ ಕಾರಣವಾಗಿ ಯಾವುದೇ ಕೂಟದಲ್ಲಿ ಇತರರಿಗಿಂತ ಬೇರೆಯಾಗಿ ಎದ್ದು ಕಾಣುತ್ತಿದ್ದ

ಯೆಹೂದ್ಯರು ಜರ್ಮನಿಯ ಉಗ್ರರಾಷ್ಟ್ರೀಯರ ದೃಷ್ಟಿಯಲ್ಲಿ ಉದರವ್ರಣವಾಗಿದ್ದರು. ಪ್ಯಾಸಿಫಿಸ್ಟರು ತಾತ್ತ್ವಿಕವಾಗಿ ಯುದ್ಧವಿರೋಧಿಗಳು ಮತ್ತು ಶಾಂತಿವಾದಿಗಳು. ಇವರು ಜರ್ಮನಿಯ ಕದನಕುತೂಹಲವನ್ನು ಪ್ರಕಟವಾಗಿಯೇ ಖಂಡಿಸಿದ್ದರು. ಚಕ್ರವರ್ತಿ ಹೂಡಿದ ಯುದ್ಧವನ್ನು ದೇಶದ ಯುದ್ಧವೆಂದು ಸಮೀಕರಿಸಲು ಇವರು ಒಪ್ಪಿರಲಿಲ್ಲ. ಇನ್ನು ವಾಮಪಂಥೀಯರು ಜರ್ಮನಿಯ ಸಮಾಜವಾದಿ ಹಾಗೂ ತತ್ತ್ವಜ್ಞಾನಿ ಕಾರ್ಲ್ ಮಾರ್ಕ್ಸ್ (೧೮೧೮-೮೩) ಎಂಬಾತನ ಚಿಂತನೆ, ಬೋಧನೆ ಮತ್ತು ಲೇಖನಗಳಿಂದ ಪ್ರಭಾವಿತರಾದವರು. ಚಕ್ರವರ್ತಿವಿರೋಧಿಗಳು, ಒಬ್ಬ ವ್ಯಕ್ತಿಯ ಅಥವಾ ಒಂದು ಕುಟುಂಬದ ಆಳ್ವಿಕೆಯನ್ನು ಪೂರ್ಣವಾಗಿ ತಿರಸ್ಕರಿಸಿ ಕಾರ್ಮಿಕರ ಪ್ರಜಾಪ್ರಭುತ್ವವನ್ನು ಬೆಂಬಲಿಸುವವರಾಗಿದ್ದರು.

ಜರ್ಮನಿಯ ಅಪಮಾನಿತ ಅಭಿಮಾನಪ್ರಜ್ಞೆ ಐನ್‌ಸ್ಟೈನರಲ್ಲಿ ಈ ಮೂರೂ ದುರ್ಗುಣಗಳ ಮೂರ್ತರೂಪವನ್ನು ಗುರುತಿಸಿತು : ಇವರು ಹುಟ್ಟಿನಿಂದ ಯೆಹೂದ್ಯರು (ಜರ್ಮನ್ ಪೌರತ್ವ ತೊರೆದು ಸ್ವಿಸ್ ಪೌರತ್ವ ಸ್ವೀಕರಿಸಿದವರು), ಯುದ್ಧಾರಂಭದಲ್ಲಿಯೇ "ಯೂರೋಪಿಯನ್ನರಿಗೆ ಪ್ರಣಾಳಿಕೆ" ಪ್ರಕಟಿಸುವುದರ ಮೂಲಕ ಸ್ಪಷ್ಟವಾಗಿ ಜರ್ಮನಿಯ ಯುದ್ಧ ಪ್ರಯತ್ನಗಳನ್ನು ವಿರೋಧಿಸಿದ ಪ್ಯಾಸಿಫಿಸ್ಟರು, ಸಮಾಜವಾದದತ್ತ ಒಲವಿದ್ದವರು. ಇವಿಷ್ಟೂ ಸಾಲದೊ ಎಂಬಂತೆ ಜರ್ಮನಿಯ ಅತ್ಯಂತ ಕರಾಳ ದಿನದ (ಸಮರಪತನ) ಪ್ರಥಮ ಶ್ರಾದ್ಧದಂದೇ, ೭-೧೧-೧೯೧೯, ಐನ್‌ಸ್ಟೈನರ ವ್ಯಕ್ತಿತ್ವಕ್ಕೆ ಪ್ರಪಂಚದ ಸಾರ್ವಜನಿಕರ ದೃಷ್ಟಿಯಲ್ಲಿ ವಿಶೇಷ ಮಹತ್ತ್ವ ಪ್ರಾಪ್ತವಾಯಿತು. ಐನ್‌ಸ್ಟೈನ್ ಬೆಳಕನ್ನು ಬಗ್ಗಿಸಿದ್ದರು, ನ್ಯೂಟನ್ನನನ್ನು ಸೋಲಿಸಿದ್ದರು ! ಕಾಳಗದ ಜಂಜಡಗಳಿಂದ ನೊಂದು ಗಾಸಿಗೊಂಡು ಬದುಕಿನಲ್ಲಿ ಹೊಸ ಹಸುರು ಕಂಡೇವೇ ಎಂದು ತಹತಹಿಸುತ್ತಿದ್ದ ಜನರಿಗೆ ಈ ಸುದ್ದಿ ವಿಶೇಷ ಸಾಂತ್ವನ ನೀಡಿತು. ಭೂಮಿಯ ಮೇಲಿನ ವರ್ತಮಾನ ವಾಸ್ತವತೆ ಕಠೋರವಾಗಿತ್ತು. ಹೀಗಾಗಿ ಸಾಪೇಕ್ಷತಾಸಿದ್ಧಾಂತದ ತಥ್ಯವನ್ನು ಪರೀಕ್ಷಿಸಲು ಇಂಗ್ಲಿಷ್ ಖಗೋಳವಿಜ್ಞಾನಿಗಳು ಕೈಗೊಂಡ ಅನ್ವೇಷಣೆ ಅಂತಾರಾಷ್ಟ್ರೀಯ ಸಹಕಾರಕ್ಕೆ ಉಜ್ಜ್ವಲ ನಿದರ್ಶನವಾಗಿಯೂ ಅದರ ಸವಿವರ ವರ್ಣನೆ ಮಾನವಾಂತಃಕರಣವನ್ನು ಉದಾತ್ತೀಕರಿಸುವ ರಮ್ಯ ಚಿತ್ರಣವಾಗಿಯೂ ಜನರಿಗೆ ಆಪ್ಯಾಯಮಾನವಾದುವು. ಕಾರಣಪುರುಷ ಐನ್‌ಸ್ಟೈನ್ ಜನರ ಆರಾಧ್ಯಮೂರ್ತಿಯಾದರು.

ರಾಜಕೀಯ ವ್ಯಕ್ತಿ, ಸೇನಾನಾಯಕ, ಧಾರ್ಮಿಕ ಮುಖಂಡ, ಕಲಾವಿದ ಅಥವಾ ಕ್ರೀಡಾಪಟು ಮಹತ್ತ್ವದ ಸಾಧನೆಯನ್ನು ಸಿದ್ಧಿಸಿದಾಗ ಸಾರ್ವಜನಿಕರ ವಿಶೇಷ ಪ್ರೇಮಕ್ಕೆ ಪಾತ್ರನಾಗುತ್ತಾನೆ. ಜನ ಅವನೊಬ್ಬ ಧರೆಗಿಳಿದ ದೇವರೆಂದೇ ಭಾವಿಸಿ ಅವನನ್ನು ಪೂಜಿಸತೊಡಗುತ್ತಾರೆ. ಜನರ ಈ ವಿಶ್ವಾಸ ಅವನ ವ್ಯಕ್ತಿತ್ವವಿಕಾಸಕ್ಕೂ ಅಗತ್ಯ. ಆದರೆ ವಿಜ್ಞಾನಿಯೊಬ್ಬನಿಗೆ ಈ ಪಟ್ಟ ದೊರೆತದ್ದಾದರೆ ವನ್ಯಜಂತುವನ್ನು ಮೃಗಾಲಯದಲ್ಲಿ ಬಂಧಿಸಿದಂಥ ಕೃತಕ ಪರಿಸ್ಥಿತಿ ತಲೆದೋರುತ್ತದೆ. ಆ ಗಳಿಗೆ ಅವನ ವಿಜ್ಞಾನಚಿಂತನೆ, ಪ್ರಯೋಗ ಮುಂತಾಗಿ ಮುಕ್ತ ಪರಿಸರದಲ್ಲಿ ನಡೆಯುವ ನಿರಂಕುಶ ಮತಿಯ ಸ್ವಚ್ಛಂದ ವಿಹಾರಗಳು ಕೊನೆಗಾಣುತ್ತವೆ. ಲೌಕಿಕ ಪ್ರಚಾರದ ಉಜ್ಜ್ವಲ ಪ್ರಕಾಶದಲ್ಲಿ ಈ ಪಾರಲೌಕಿಕ ಪ್ರತಿಭೆ ವರ್ತಿಸಬೇಕಾದ ಬಗೆ ವಿಜ್ಞಾನ ಪ್ರಪಂಚದೊಳಗಿನ ವರ್ತನೆಗಿಂತ ಪೂರ್ತಿ ಬೇರೆಯೇ ಆದದ್ದು.

ಐನ್‌ಸ್ಟೈನರಿಗೆ ಅವರ ಯಾವ ಪ್ರಯತ್ನವೂ ಇಲ್ಲದೆ ಊಹಾತೀತ ಸಾರ್ವತ್ರಿಕ ಪ್ರಚಾರ ಮತ್ತು ಸಾರ್ವಜನಿಕ ಆರಾಧನೆ ಲಭಿಸಿದುವು. ಇಂಥ ಸನ್ನಿವೇಶದಲ್ಲಿ ಅವರ ವರ್ತನೆ ಹೇಗಿರಬೇಕು ?

ದೇಶದ್ರೋಹಿ ಬಾಲ್ಶೆವಿಕ್ (ಬಾಲ್ಶೆವಿಕರೆಂದರೆ ಸೋವಿಯತ್ ಒಕ್ಕೂಟದಲ್ಲಿ ಅಧಿಕಾರ ಗಳಿಸಿ

ಹೊಸ ಸಮತಾವಾದಿ ಸರ್ಕಾರ ಸ್ಥಾಪಿಸಿದ ವಾಮಪಂಥೀಯರು; ಒಟ್ಟಾಗಿ ಕಮ್ಯೂನಿಸ್ಟರು ಅಥವಾ ವಾಮಪಂಥೀಯರು) ಯೆಹೂದ್ಯನಿಗೊದಗಿದ ಪ್ರಪಂಚ ವ್ಯಕ್ತಿತ್ವ ಜರ್ಮನ್ ಉಗ್ರರಾಷ್ಟ್ರೀಯರ ದೃಷ್ಟಿಯಲ್ಲಿ ದಾವಾನಲಕ್ಕೆ ಹುಯ್ದ ತುಪ್ಪವಾಯಿತು. ಈ ಖಾಂಡವ ವನದಹನದಿಂದ ಪಾಲ್ ವೇಯ್ಲೆಂಡ್ ಎಂಬ ಹೆಸರಿನ ರಕ್ತಬೀಜಾಸುರ ಆವಿರ್ಭವಿಸಿದ. ಇವನೊಂದು ಹೊಸ ವೈಜ್ಞಾನಿಕ ಕೂಟದ ಪ್ರವರ್ತಕ ಮತ್ತು ವ್ಯವಸ್ಥಾಪಕ. ಜರ್ಮನ್ ನೈಸರ್ಗಿಕ ತತ್ತ್ವಜ್ಞಾನಿಗಳ ಅಧ್ಯಯನಕೂಟ ವೆಂದು (Study Group of German Natural Philosophers) ಇದರ ಹೆಸರು. (ಇಂದು 'ವಿಜ್ಞಾನ'ವೆಂಬ ಪದ ಭೌತವಿಜ್ಞಾನ, ರಸಾಯನವಿಜ್ಞಾನ, ಜೀವವಿಜ್ಞಾನ ಮೊದಲಾದವುಗಳ ಒಕ್ಕೂಟವನ್ನು ಪ್ರತಿನಿಧಿಸುತ್ತದೆ ; ತತ್ತ್ವಶಾಸ್ತ್ರ, ಇತಿಹಾಸ, ವೇದಾಂತ ಮೊದಲಾದವನ್ನು ಅಲ್ಲ. ಆದರೆ ಹತ್ತೊಂಬತ್ತನೆಯ ಶತಮಾನದಲ್ಲಿ, ಅಂತೆಯೇ ಇಪ್ಪತ್ತನೆಯ ಶತಮಾನದ ಪೂರ್ವಾರ್ಧ ದಲ್ಲಿ ಕೂಡ, ಇಂದಿನ 'ವಿಜ್ಞಾನ'ಗಳನ್ನು ನೈಸರ್ಗಿಕ ತತ್ತ್ವಜ್ಞಾನ ಅಥವಾ ನೈಸರ್ಗಿಕ ತತ್ತ್ವಶಾಸ್ತ್ರ ಎಂಬುದಾಗಿ ಕರೆಯುತ್ತಿದ್ದುದು ವಾಡಿಕೆ.)

ಪಾಲ್ ವೇಯ್ಲೆಂಡನ ಅಧ್ಯಯನ (ಕಾಳ)ಕೂಟದ ಉದ್ದೇಶಗಳ ಪೈಕಿ ಕೆಲವು ಇವು : ಶುದ್ಧ ಜರ್ಮನ್ (ನಾರ್ಡಿಕ್-ಆರ್ಯನ್) ವಿಜ್ಞಾನವನ್ನು ಬಾಲ್ಶೆವಿಕ್, ಯೆಹೂದ್ಯ ಮುಂತಾದ ಕಳಪೆ ವಿಜ್ಞಾನಗಳ ಕಲಬೆರಕೆಯಿಂದ ಸಂರಕ್ಷಿಸುವುದು, ಚಿರಕಾಲದಿಂದ ನಡೆದುಕೊಂಡು ಬಂದು ಎಲ್ಲರಿಗೂ ತಿಳಿದಿರುವ ಹಾಗೂ ವೈಜ್ಞಾನಿಕ ಪ್ರಯೋಗ ಮತ್ತು ವೀಕ್ಷಣೆಗಳಿಂದ ರುಜುವಾತಾ ಗಿರುವ ವಾಸ್ತವ ಸತ್ಯಸಂಗತಿಗಳನ್ನು ಅಲ್ಲಗಳೆಯುವ ಇಲ್ಲವೇ ಮರೆಮಾಡುವ ಊಹನೆಗಳನ್ನು ತಿರಸ್ಕರಿಸುವುದು, ವಿಜ್ಞಾನದ ಹೆಸರಿನಲ್ಲಿ ಪವಾಡಗಳಂಥ ಅವೈಜ್ಞಾನಿಕ ಕೃತಿಗಳನ್ನೆಸಗಿ ಜನದೃಷ್ಟಿಗೆ ಮಂಕುಬೂದಿ ಎರಚುವವರ ಹುಸಿತನವನ್ನು ಬಯಲುಗೊಳಿಸುವುದು, ಇತ್ಯಾದಿ. ಐನ್‌ಸ್ಟೈನರನ್ನು ವ್ಯಕ್ತಿಶಃ ದೂಷಿಸಿ ಅಪಮಾನಿಸುವುದು ಮತ್ತು ಅವರ ಸಿದ್ಧಾಂತಗಳನ್ನು ಪೊಳ್ಳೆಂದು ಸಾಧಿಸುವುದು ಕೂಟದ ಪ್ರಕಟಿತೋದ್ದೇಶ. ಹಲವಾರು ಗುಪ್ತಮೂಲಗಳಿಂದ, ವಿಶೇಷವಾಗಿ ಯೆಹೂದ್ಯದ್ವೇಷಿ ಗಳಿಂದ, ಕೂಟಕ್ಕೆ ಅಪಾರ ಧನಸಂಪತ್ತು ಹರಿದುಬರುತ್ತಿತ್ತು. ಎದ್ದು ಕಾಣುವ ದೊಡ್ಡ ಭಿತ್ತಿ ಪತ್ರಗಳನ್ನು ಬರ್ಲಿನ್‌ನಗರದ ಪ್ರೇಕ್ಷಣೀಯ ಸ್ಥಳಗಳಲ್ಲಿ ಪ್ರದರ್ಶಿಸುವುದು, ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸುವುದು, ಮತ್ತು ವಿಶೇಷ ಸಭೆಸಮಾರಂಭಗಳನ್ನು ಏರ್ಪಡಿಸಿ ಅಲ್ಲಿ ಸಾಪೇಕ್ಷತಾಸಿದ್ಧಾಂತವನ್ನು ಜರೆಯುವುದು—ಇವು ಈ ಕೂಟ ಅನುಸರಿಸಿದ ಕೆಲವು ತಂತ್ರಗಳು. ಇಂಥ ಕಾರ್ಯಕಲಾಪಗಳಲ್ಲಿ ಭಾಗವಹಿಸಿದವರಿಗೆ ಕೂಟ ಆಕರ್ಷಕ ಸಂಭಾವನೆ ಹಂಚುತ್ತಿತ್ತು.

೧೯೧೯-೨೦ರ ಸಂಧಿಕಾಲ. ಜರ್ಮನ್ ಬಲಪಂಥೀಯರಲ್ಲಿ (ಇವರು ಉಗ್ರರಾಷ್ಟ್ರ ಪ್ರೇಮಿ ಗಳು) ಅತ್ಯಂತ ಜನಪ್ರಿಯವಾಗಿದ್ದ ಒಂದು ಸಾಹಿತ್ಯ ಮಾಸಪತ್ರಿಕೆ ವಿಶೇಷ ಲೇಖನವನ್ನು ಪ್ರಕಟಿ ಸಿತು. ಜರ್ಮನಿಯ ಸಮರಪತನದ ಕಾರಣವನ್ನು ಇದರಲ್ಲಿ ವಿಶ್ಲೇಷಿಸಲಾಗಿತ್ತು. ರಣಾಂಗಣದ ಪರಿಸ್ಥಿತಿ ತಮಗೆ (ಜರ್ಮನರಿಗೆ) ಅನುಕೂಲವಾಗಿಯೇ ಇದ್ದು ತಾವು ಯಾವ ಕಾರಣದಿಂದಲೂ ಶಸ್ತ್ರವಿರಾಮ ಕೌಲಿಗೆ ಮಣಿಯಬೇಕಾಗಿರದಿದ್ದರೂ ಅಮೆರಿಕದ ಅಧ್ಯಕ್ಷ ವುಡ್ರೋ ವಿಲ್ಸನ್ (೧೮೫೬-೧೯೨೪; ಅಮೆರಿಕ ಸಂಯುಕ್ತ ಸಂಸ್ಥಾನಗಳ ಇಪ್ಪತ್ತೆಂಟನೆಯ ಅಧ್ಯಕ್ಷ, ೧೯೧೩-೨೧) ಜರ್ಮನರಿಗೆ ನ್ಯಾಯಸಮ್ಮತ ಶಾಂತಿ ದೊರಕಿಸಿಕೊಡುವುದಾಗಿ ಆಶ್ವಾಸಿಸಿದುದರಿಂದ ಅವರ ಮಾತಿಗೆ ಕಟ್ಟುಬಿದ್ದು ಯುದ್ಧ ನಿಲ್ಲಿಸಿದ್ದಾಯಿತು. ಆದರೆ ಅಧ್ಯಕ್ಷ ವಿಲ್ಸನ್ ನಿಜಕ್ಕೂ ಮಾಡಿ ದ್ದೇನು? ಸ್ಥಳೀಯ ಪ್ರಾಧ್ಯಾಪಕ 'ತೇಜಃಪುಂಜ'ದ ನೆರವಿನಿಂದ ಹುಂಬ ಜರ್ಮನರಿಗೆ ಮೋಸ ಬಗೆದದ್ದು. ಇದು ಸಾಲದೆಂಬಂತೆ ಈಗ ಜರ್ಮನ್ ಪ್ರಾಧ್ಯಾಪಕರೊಬ್ಬರ 'ವಿಶೇಷ ಸಿದ್ಧಿ'

ಯೊಂದನ್ನು ಅದೇ ಮುಗ್ಧ ಜರ್ಮನರ ಗೋಣಿನೊಳಕ್ಕೆ ವೈಜ್ಞಾನಿಕ ಸಂಶೋಧನೆಯ ಮಹೋನ್ನತ ವಿಜಯವೆಂಬುದಾಗಿ ಉತ್ಸಾಹಸಂತೋಷಾತಿಶಯದಿಂದ ಗಿಡಿಯುತ್ತಿರುವುದು. "ದುರದೃಷ್ಟ ಸಂಗತಿಯೆಂದರೆ ಪ್ರೌಢವಿದ್ಯಾಸಂಪನ್ನರು ಕೂಡ ಈ ಪ್ರಚಾರದಿಂದ ಮೋಸಹೋಗಿದ್ದಾರೆ. ಅಭಿನವ ಕೊಪರ್ನಿಕಸ್ ಎಂಬ ಹುಸಿ ಹೆಸರು ಹೊತ್ತಿರುವ ಪ್ರೊಫೆಸರ್ ಐನ್‌ಸ್ಟೈನರ ಅಭಿಮಾನಿಗಳ ಸಾಲಿನಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರೆಲ್ಲರೂ ಸೇರಿರುವುದು ಇನ್ನೂ ದುರದೃಷ್ಟಕರ. ಸ್ಪಷ್ಟ ಮತ್ತು ನೇರ ಮಾತುಗಳಲ್ಲಿ ಹೇಳುವುದಾದರೆ ರಾಜಕೀಯವಾಗಿ ಹಿಂದೆಂದಿಗಿಂತಲೂ ಅತ್ಯಂತ ಶೋಚನೀಯವಾಗಿರುವ ಇಂದಿನ ಪರಿಸ್ಥಿತಿಗೆ ಅನುಗುಣವಾಗಿಯೇ ಈ ಕುಖ್ಯಾತ ವೈಜ್ಞಾನಿಕ ಹಗರಣ ಹೊಂದಿಕೊಳ್ಳುತ್ತದೆ. ಖುದ್ದು ಜರ್ಮನ್ ಪ್ರಾಧ್ಯಾಪಕರೇ ಐನ್‌ಸ್ಟೈನರ ಜೊತೆ ಅಡ್ಡ ಹಾದಿ ಹಿಡಿದಿರುವರೆಂದಾದ ಬಳಿಕ ಹೇಗೆ ತಾನೇ ಕಾರ್ಮಿಕರು ಮಾರ್ಕ್ಸ್‌ನ ಅನುಯಾಯಿಗಳಾಗುವುದನ್ನು ತಪ್ಪೆಂದು ಹೇಳಬಲ್ಲೆವು ?"

ಪ್ರಾಯೋಗಿಕ ಭೌತವಿಜ್ಞಾನ ರಂಗದಲ್ಲಿ ಹೆಸರು ಗಳಿಸಿದ್ದ ಮತ್ತು ಸಮರದಿನಗಳಂದು ನವಸಂಶೋಧನೆಗಳನ್ನು ಮಾಡಿ ಕೃತಕೃತ್ಯರಾಗಿದ್ದ ಶುದ್ಧ ಜರ್ಮನ್ ಭೌತವಿಜ್ಞಾನಿಗಳ ಪೈಕಿ ಅನೇಕ ಮಂದಿ ಐನ್‌ಸ್ಟೈನರ ವಿಜಯವನ್ನು ಸಂದೇಹ ದೃಷ್ಟಿಯಿಂದ ನೋಡುತ್ತಿದ್ದರು. ಸುವ್ಯಾಖ್ಯಿತ ಪ್ರಯೋಗಗಳು, ನಿಖರ ಮಾಪನೆಗಳು ಮತ್ತು ನಿಷ್ಕೃಷ್ಟ ಗಣನೆಗಳು ಒದಗಿಸಿದ ಫಲಿತಾಂಶಗಳ ಬದಲಾಗಿ ಕನಸಿನ ಅರಮನೆಯಿಂದ ಹೊರಗೆಳೆದ ಮಾಯಾಮಂತ್ರಕ್ಕೆ ಇಷ್ಟೊಂದು ಪ್ರಸಿದ್ಧಿ, ಅದೂ ವಿಜ್ಞಾನ ಪ್ರಪಂಚದಲ್ಲೇ, ದೊರೆಯುವುದೆಂದರೇನು ? ಹಾಗಾದರೆ ಇನ್ನು ಮುಂದೆ ವಿಜ್ಞಾನ ಕ್ಷೇತ್ರವು ಜಾದೂಗಾರರಿಗೆ ಮಾತ್ರ ಮೀಸಲಾಗಿರಬೇಕೇ ? ಇದು ಹೇಗೂ ಇರಲಿ. ಈ ಮಹನೀಯರ ಸಂದೇಹ ಪೂರ್ಣ ನಿರ್ಮತ್ಸರವಾದದ್ದೆಂದು ಸಾಧಿಸಲು ಬಾರದು. ಇವರಿಗೆ ಸಮರ್ಥ ಪಿಟೀಲು ಪಕ್ಕವಾದ್ಯ ನುಡಿಸಿದವರು ಶುದ್ಧ ಜರ್ಮನ್ ಸಂಸ್ಕೃತಿಯ ಆರಾಧಕರಾದ ತತ್ತ್ವವಿದರು. ಸಾಪೇಕ್ಷತಾಸಿದ್ಧಾಂತದ ತತ್ತ್ವಶಾಸ್ತ್ರೀಯಾಂಶ, ತತ್ತ್ವಶಾಸ್ತ್ರದ ಕೆಲವೊಂದು ಸೂತ್ರಗಳೊಡನೆ ಹೊಂದಿಕೊಳ್ಳುವುದಿಲ್ಲ; ಆದ್ದರಿಂದ ಆ ಸಿದ್ಧಾಂತವನ್ನು ಸ್ವೀಕರಿಸತಕ್ಕದ್ದಲ್ಲವೆಂದು ಇವರು ವಾದಿಸಿದರು. ಅದೇ ಉಸಿರಿನಲ್ಲಿ ಇವರು ಸಾಪೇಕ್ಷತಾಸಿದ್ಧಾಂತ ನಿಜಕ್ಕೂ ಊಹನಾಪ್ರತಿಭೆಯ ಉತ್ಕೃಷ್ಟ ಫಲ, ಆದರೆ ಇಂಥ ಯಶಸ್ಸು ಪವಿತ್ರ ನಾರ್ಡಿಕ್-ಆರ್ಯನ್ ರಕ್ತಜರಾದ ಶುದ್ಧ ಜರ್ಮನರಿಗೆ ಮಾತ್ರ ಮೀಸಲಾದದ್ದು, ಹೀನಸುಳಿಯವರಾದ ಯೆಹೂದ್ಯರಿಗೆ ಅಲ್ಲ ಎಂಬುದಾಗಿಯೂ ಡೋಲು ಬಜಾಯಿಸಿದರು.

ತೋಳ-ಕುರಿಮರಿ ವ್ಯಾಜ್ಯದಲ್ಲಿ ನ್ಯಾಯತುಲಾಯಂತ್ರದ ಸೂಚಿ ಸದಾ ತೋಳದತ್ತ ವಾಲಿರಬೇಕಾದದ್ದು ಲೌಕಿಕ ನೀತಿ ಮಾತ್ರವಲ್ಲ, ಸ್ವತಃ ತುಲಾಯಂತ್ರದ ಹಿತದೃಷ್ಟಿಯಿಂದ ಕೂಡ ಅಗತ್ಯ!

ಐನ್‌ಸ್ಟೈನ್ ತಮ್ಮ ಆಪ್ತಮಿತ್ರರಾದ ಮ್ಯಾಕ್ಸ್ ಬಾರ್ನರಿಗೆ ಅದೇ ವರ್ಷದ ತರುಣದಲ್ಲಿ (ಜನವರಿ ೧೯೨೦) ಬರೆದ ಕಾಗದದಲ್ಲಿ ಬರ್ಲಿನ್ನಿನ ರಂಗ ಚಿತಾವಣೆಯನ್ನೂ ರಂಗು ಬದಲಾವಣೆಯನ್ನೂ ಪ್ರಸ್ತಾವಿಸಿದ್ದಾರೆ : "ಇಲ್ಲಿಯ ರಾಜಕೀಯ ಸನ್ನಿವೇಶ ಬಾಲ್ಶೆವಿಕ್ಕರ ಪರವಾಗಿ ಕ್ರಮಶಃ ಬದಲಾಗುತ್ತಿರುವುದು ಕಂಡುಬರುತ್ತಿದೆ. ಪಾಶ್ಚಾತ್ಯ ರಾಷ್ಟ್ರಗಳ ಅಸಂಗತ ಹಿನ್ನೆಲೆಯಲ್ಲಿ ಗಮನಿಸುವಾಗ ರಶ್ಯನರು ಪ್ರಕಟಿತವಾಗಿ ಸಾಧಿಸಿರುವ ಗಮನಾರ್ಹ ಸಿದ್ಧಿಗಳು ತಡೆಯಲಾಗದ ರಭಸದಿಂದ ಮುನ್ನುಗ್ಗುತ್ತಿರುವಂತೆ ಭಾಸವಾಗುತ್ತವೆ. ನಮ್ಮ [ಜರ್ಮನಿ] ಸ್ಥಾನವಂತೂ ತೀರ ಅಸಂಗತ. ಆದರೆ ಈ ಹೊಸ ಅಲೆ ನಮ್ಮನ್ನು ಸ್ವಾಹಾಕರಿಸುವ ಮೊದಲು ನೆತ್ತರ ಹೊನಲೇ ಹರಿದು ಹೋಗಬೇಕಾದೀತು. ಏಕೆಂದರೆ ಅದೇ ವೇಳೆ ಪ್ರತಿಗಾಮೀ ಬಲಗಳೂ ಹೆಚ್ಚುಹೆಚ್ಚು

ಹಿಂಸಾತ್ಮಕವಾಗುತ್ತಿವೆ. ನಿಕೊಲಾಯವರ [ತೊಂಬತ್ತೆರಡರ ಎದುರು ರುಜುವಿಕ್ಕಿದ ನಾಲ್ವರ ಪೈಕಿ ಒಬ್ಬರು ಮತ್ತು ಐನ್‌ಸ್ಟೈನರ ಆಪ್ತ ಅನುಯಾಯಿ] ಮೇಲೆ ಹಲ್ಲೆ ಎಸಗಲಾಗುತ್ತಿದೆ. ಮಗು ದೊಮ್ಮೆ ಅವರ ಪರವಾಗಿ ನಾನು ಸಾರ್ವಜನಿಕ ರಂಗಪ್ರವೇಶ ಮಾಡಬೇಕಾದೀತು. ಅಂದ ಹಾಗೆ ಬಾಲ್ಶೆವಿಕ್ಕರ ಸಿದ್ಧಾಂತಗಳು ಎಷ್ಟೇ ಹಾಸ್ಯಾಸ್ಪದವಾಗಿದ್ದರೂ ಅವರು ಮಾತ್ರ ಅಷ್ಟೇನೂ ಕೆಟ್ಟವರೆಂದು ನನಗೆ ಅನ್ನಿಸುವುದಿಲ್ಲ. ಹತ್ತಿರದಿಂದ ಅವರ ಚಟುವಟಿಕೆಗಳನ್ನು ಗಮನಿಸುವುದು ಕುತೂಹಲಕಾರಿಯಾದೀತು. ಇದು ಹೇಗೂ ಇರಲಿ. ಅವರ ಸಂದೇಶ ಅತ್ಯಂತ ಪರಿಣಾಮಕಾರಿ ಎನ್ನಿಸುತ್ತದೆ. ಏಕೆಂದರೆ ಮಿತ್ರರಾಷ್ಟ್ರಗಳು ಜರ್ಮನ್ ಸೇನಾಬಲವನ್ನು ಹತಗೊಳಿಸಲು ಬಳಸಿದ ಆಯುಧಗಳು ಬಾಲ್ಶೆವಿಕ್ಕರೆದುರು ನೇಸರಿನೆದುರಿನ ಮಂಜಿನಂತೆ ಕರಗಿಯೇ ಹೋಗುತ್ತವೆ.''

## ಆ್ಯಂಟಿರಿಲೆಟಿವಿಟಿ ಕಂಪೆನಿ

ಜಂಗಮ ನಿಂದೆಯ ಮಾಡಿ, ಲಿಂಗವ ಪೂಜಿಸುವ
ಭಕ್ತನ ಅಂಘವಣೆ ಎಂತೋ ?
ಶಿವ ಶಿವ, ನಿಂದಿಸುವ ಪೂಜಿಸುವ
ಪಾತಕವಿದ ಕೇಳಲಾಗದು !
''ಗುರುವಿನ ಗುರುಜಂಗಮ''
ಇಂತೆಂದುದು ಕೂಡಲಸಂಗನ ವಚನ —ಬಸವಣ್ಣನವರು

''ಜರ್ಮನ್ ನೈಸರ್ಗಿಕ ತತ್ತ್ವಜ್ಞಾನಿಗಳ ಅಧ್ಯಯನಕೂಟ''ವನ್ನು ಐನ್‌ಸ್ಟೈನ್ ''ಆ್ಯಂಟಿರಿಲೆಟಿ ವಿಟಿ ಕಂಪೆನಿ'' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಇದರ ಅಶೈಕ್ಷಣಿಕ ಮತ್ತು ಮತೀಯ ಚಟುವಟಿಕೆಗಳ ಬಗ್ಗೆ ಇವರು ಮೊದಲು ತಳೆದದ್ದು ದಿವ್ಯ ನಿರ್ಲಕ್ಷ್ಯ ಭಾವ. ಆದರೆ ಅರ್ನ್‌ಸ್ಟ್ ಗೆರ್ಕೀಯರಂಥ (೧೮೭೮-೧೯೬೦) ಸಮರ್ಥ ಪ್ರಾಯೋಗಿಕ ವಿಜ್ಞಾನಿ ಕೂಡ ಈ ಕೂಟವನ್ನು ಸೇರಿ ಕೊಂಡು ಇದರ ನಿಲವನ್ನು ಪೋಷಿಸಿದಾಗ ಪರಿಸ್ಥಿತಿಯ ಶ್ರುತಿ ಬದಲಾಯಿತು. ಪ್ರಯೋಗ ಮಾರ್ಗದ ಮೂಲಕ ಸಿದ್ಧಾಂತಲಕ್ಷ್ಯ ತಲಪುವ ಎಂಥ ಧೀಮಂತ ಮತಿಗಳೂ ಎಷ್ಟರಮಟ್ಟಿಗೆ ತಮ್ಮ ವಿಧಾನದ ದಾಸಾನುದಾಸರಾಗಿಬಿಡುವರೆಂದರೆ ಇವರಿಗೆ ವಿಜ್ಞಾನದಲ್ಲಿ ಇತರ ಒಂದು ಮಾರ್ಗವಿದ್ದೀತು ಎಂಬ ಭಾವನೆ ಕೂಡ ಸಹ್ಯವಾಗುವುದಿಲ್ಲ—ಬಾಲ ನಾಯಿಯನ್ನು ಆಡಿಸು ವಂಥ ತಿರುಗುಮುರುಗಾ ಸನ್ನಿವೇಶ, ಲಾಂಗೂಲಶ್ವಾನಚಾಲನೆ (tail wagging the dog)! ಸಾಪೇಕ್ಷತಾಸಿದ್ಧಾಂತ ಸಾರಭೂತವಾಗಿ ಊಹನಾತ್ಮಕವಾದದ್ದು. ಗೆರ್ಕೀಗೆ ಇದರ ನವುರು ಅರಿಯಲು ಬೇಕಾಗುವ ಕೋಮಲ ಮನಸ್ಸು ಇರಲಿಲ್ಲವಾಗಿ ಈತ ಇದನ್ನು ವಿರೋಧಿಸಲು ಕಳಕ್ಕೆ ದುಮುಕಿದ.

ವಿಖ್ಯಾತ ಭೌತವಿಜ್ಞಾನಿ ಮತ್ತು ೧೯೦೫ರ ನೊಬೆಲ್ ಪಾರಿತೋಷಿಕ ಸಮ್ಮಾನಿತ ಫಿಲಿಪ್ ಲೆನಾರ್ಡ್ (೧೮೬೨-೧೯೪೭) ತನ್ನ ಘನವ್ಯಕ್ತಿತ್ವದ ಭಾರವನ್ನು ಕೂಟದ ಚಟುವಟಿಕೆಗಳಿಗೆ ಸಮರ್ಪಿಸಿಕೊಂಡಾಗ ಆ್ಯಂಟಿರಿಲೆಟಿವಿಟಿ ಕಂಪೆನಿಯ ಪವಿತ್ರ ನಾಮಧೇಯ ಸಾರ್ಥಕ್ಯ ಕಂಡಿತು. ಲೆನಾರ್ಡ್[೨೯] ಆದರೂ ಗೆರ್ಕೀಯರಂತೆಯೇ ಪ್ರಯೋಗನಿಷ್ಣಾತ. ದ್ಯುತಿವೈದ್ಯುತ ಪರಿಣಾಮ ವನ್ನು[೩೦] ಕುರಿತಂತೆ ಈತ ಮಂಡಿಸಿದ್ದ ಪ್ರಾಯೋಗಿಕ ಫಲಿತಾಂಶಗಳನ್ನು ಐನ್‌ಸ್ಟೈನ್ ವಿಶೇಷ ಸಾಪೇಕ್ಷತಾಸಿದ್ಧಾಂತವನ್ನು (೧೯೦೫) ರೂಪಿಸುವ ಸಂದರ್ಭದಲ್ಲಿ ಉಪಯೋಗಿಸಿಕೊಂಡಿದ್ದರು. ಆ ವೇಳೆ ಇವರಿಬ್ಬರ ನಡುವೆ ಆತ್ಮೀಯತೆ ಕೂಡ ಬೆಳೆದಿತ್ತು. ಐನ್‌ಸ್ಟೈನರನ್ನು ಲೆನಾರ್ಡ್,




ಚಿತ್ರ ೫. ದ್ಯುತಿವೈದ್ಯುತ ಪರಿಣಾಮ. ಬೆಳಕು (ಎಡಗಡೆಯಿಂದ *L*) ಲೋಹದ ಮೇಲೆ (*M*) ಪಾತವಾದಾಗ ಎಲೆಕ್ಟ್ರಾನುಗಳು (ಬಲಗಡೆಯಲ್ಲಿ *E*) ಬಿಡುಗಡೆ ಆಗುತ್ತವೆ.

"ಗಭೀರ ಮತ್ತು ವಿಶೇಷ ಪರಿಣಾಮಕಾರಿ ಚಿಂತನಶೀಲ" ಎಂಬುದಾಗಿ ವರ್ಣಿಸಿದ್ದುಂಟು (೧೯೦೯). ಅಂದು ಐನ್‌ಸ್ಟೈನ್, ಲೆನಾರ್ಡನ ಆರಾಧ್ಯಮೂರ್ತಿ. ಆದರೆ ವರ್ಷಗಳು ಉರುಳಿದಂತೆ, ಐನ್‌ಸ್ಟೈನ್-ಸಿದ್ಧಾಂತ ಮತ್ತು ವ್ಯಕ್ತಿತ್ವ ಕೀರ್ತಿ ಗಳಿಸಿ ಬೆಳಗಿದಂತೆ, ಜರ್ಮನ್ ರಾಷ್ಟ್ರೀಯತೆಯ ಕ್ರೂರ ವಿಷದಂತ ಬಲಿತಂತೆ, ಮತಭ್ರಾಂತಿ ವಿಜ್ಞಾನವ್ಯಕ್ತಿತ್ವವನ್ನು ಅತಿಕ್ರಮಿಸಿ ಮತಿಗೆಡಿಸಿದಂತೆ, ಲೆನಾರ್ಡ್ ಬದ್ಧ ಐನ್‌ಸ್ಟೈನ್-ದ್ವೇಷಿಯಾದ, ಸಾಪೇಕ್ಷತಾಸಿದ್ಧಾಂತದ ಆಮೂಲಾಗ್ರ ಖಂಡನೆ ಇವನ ಗೀಳಾಯಿತು. ಲೆನಾರ್ಡನ ಈ ತಿಪ್ಪರಲಾಗ ನಿಜಕ್ಕೂ ವಿವರಣಾತೀತವಾಗಿದೆ.

"ಜರ್ಮನ್ ನೈಸರ್ಗಿಕ ತತ್ತ್ವಜ್ಞಾನಿಗಳ ಅಧ್ಯಯನಕೂಟ" ತನ್ನ ಸಾರ್ವಜನಿಕ ಅಧಿವೇಶನವನ್ನು ೧೯೨೦ ಆಗಸ್ಟ್ ೨೪ರಂದು ಬರ್ಲಿನ್ನಿನಲ್ಲಿ ಅದ್ದೂರಿಯಿಂದ ಜರಗಿಸುವುದಾಗಿ ಡಂಗುರ ಸಾರಿತು. ಜನರಲ್ಲಿ ಭಾವೋದ್ರೇಕ ಮೂಡಿಸುವ ಸಮಾಚಾರ ಬಿತ್ತಿ ತಮ್ಮ ಬೇಳೆ ಬೇಯಿಸಲು ಸದವಕಾಶಗಳಿಗಾಗಿ ಸದಾ ಹಾತೊರೆಯುವ ಪೀತದೈನಿಕಗಳು ಅಧಿಕ ರಭಸದಿಂದ ಕಾರ್ಯೋದ್ಯುಕ್ತವಾದುವು. ತಮ್ಮಿಂದ ಏನನ್ನು ಕಿಸಿಯಲಾಗದಿದ್ದರೂ ವಿಷಯವೇನೆಂದು ತಿಳಿಯುವ ಯೋಗ್ಯತೆ ಇನಿತು ಕೂಡ ಇಲ್ಲದಿದ್ದರೂ ಯಾವನೋ ಒಬ್ಬ ಪ್ರಸಿದ್ಧಪುರುಷನ ತೇಜೋವಧೆ ಆಗಲಿದೆಯೆಂದು ತಿಳಿದಾಗ ದಿಢೀರನೆ 'ಸತ್ಯಪಕ್ಷಪಾತಿ'ಗಳಾಗುವ ಕ್ರೂರಾನಂದಿಗಳು ಅಥವಾ ಹಿಂಸಾನಂದಿಗಳು (sadists) ಇಲ್ಲೇನೋ ಹೊಸ ಹೆಗ್ಗ ಗಿಟ್ಟಲಿದೆಯೆಂದು ಸಂತೋಷಿಸಿದರು. ನಿಕೃಷ್ಟ ಯೆಹೂದ್ಯ ಮಾಯಾವಿಯ ಮೋಸವನ್ನು ನಿರ್ನಾಮಗೊಳಿಸಬಲ್ಲ ಒಬ್ಬ ಸಮರ್ಥನನ್ನು (ಲೆನಾರ್ಡ್) ಉತ್ಕೃಷ್ಟ ನಾರ್ಡಿಕ್-ಆರ್ಯನ್ ಕುಲ ಕೊನೆಗೂ ಹೆತ್ತಿತಲ್ಲ ಎಂದು ಹೆಮ್ಮೆ ತಳೆದರು. ನಿಜ, ಪಿತೃಭೂಮಿ ಬರಡಲ್ಲ, ಜರ್ಮನ್ ಶುದ್ಧರಕ್ತ ಅಕ್ರಿಯಾಶೀಲವಲ್ಲ: ಎದ್ದು ಬರುವನು ಕುಂಭಕರ್ಣ ಖರೆ ಖರೆ !ಕಾಸುವನು ನಿನಗೆ ಬರೆಬರೆ !

ಬರ್ಲಿನ್ನಿನ ಫಿಲ್‌ಹಾರ್ಮಾನಿಕ್ ಸಭಾಂಗಣ ಶ್ರೋತೃಗಡಣದಿಂದ ಕಿಕ್ಕಿರಿದು ಬಿರಿಯುತ್ತಿದೆ. ಸಾಪೇಕ್ಷತಾಸಿದ್ಧಾಂತದ ಪತನವನ್ನು ಖಚಿತವಾಗಿ ಸೂಚಿಸುವ ಗಾಢ ಹವೆ ಅಲ್ಲಿ ದಟ್ಟವಾಗಿ

ಕವಿದಿದೆ. ದುರಂತ ನಾಟಕೀಯ ಸನ್ನಿವೇಶದ ಎಲ್ಲ ರಾಗಭಾವಛಾಯೆಗಳೂ ಮೇಳೈಸಿವೆ. ಅದನ್ನು ವಿದ್ವಜ್ಜನರ ತರ್ಕಭೂಯಿಷ್ಠ ಚರ್ಚಾಕೂಟ ಎನ್ನುವುದಕ್ಕಿಂತಲೂ ಓಟಕೀಳಲು ಮಲೆಯುತ್ತಿರುವ ಕೊಬ್ಬಿದ ಕೋಣಗಳ ಕಂಬಳದ ಕೆಸರ ಗದ್ದೆ ಎನ್ನುವುದೇ ಹೆಚ್ಚು ಯುಕ್ತವಾದದ್ದು. ಜನ ನಿರೀಕ್ಷಿಸುತ್ತಿದ್ದಾರೆ ತೆರೆ ಏಳುವುದನ್ನು. ಕ್ಲುಪ್ತ ಕ್ಷಣದಲ್ಲಿ ಪ್ರತ್ಯಕ್ಷರಾದರು ಆ್ಯಂಟಿರಿಲೆಟಿವಿಟಿ ಕಂಪೆನಿಯ ಡೈರೆಕ್ಟರುಗಳು—ಸಭಾಸದರ ಆಶೋತ್ತರಗಳೇ ಹೆಪ್ಪುಗಟ್ಟಿ ಮೈದಳೆದಂತೆ. ಇಲ್ಲಿ ವೇಯ್ಲೆಂಡ್, ಇಲ್ಲಿ ಗೆರ್ಕೀ, ಇಲ್ಲಿ ಇತರ ಮುಂದಾಳುಗಳು. ಇವರ ನಡುವೆ ಮುಕುಟಮಣಿಯಂತೆ ಮೆರೆಯುತ್ತಿದ್ದಾನೆ ನೊಬೆಲ್ ಪ್ರಶಸ್ತಿ ಸಮ್ಮಾನಿತ ಲೆನಾರ್ಡ್. ಇವನ ಅಸ್ತಿತ್ವ ಈ ಸಭೆಗೆ ವಿಶಿಷ್ಟ ಬೌದ್ಧಿಕ ಅಂತಸ್ತನ್ನು ಆವಾಹಿಸಿದೆ. ಪೂರ್ಣ ಸೂರ್ಯಗ್ರಹಣದ ಬಾನಬಯಲಾಟವನ್ನು ಮೀರಿಸಿತ್ತು ಈ ನವವಿಜ್ಞಾನಿಗಳ ಕಪಟ ಚೀರಾಟ, ಘೋರ ಮಾತು, ಪ್ರಚಂಡ ಹಿಮ್ಮಾತು, ತಾರ ಮುಮ್ಮಾತು ! ಖಂಡನೆ, ಮಂಡನೆ, ದೂಷಣೆ ! ಮಾತು ಜ್ಯೋತಿರ್ಲಿಂಗವಲ್ಲ, ಪತಿತಪಾವನ ಬೀಜಮಂತ್ರವಲ್ಲ, ಬದಲು, ಹುಸಿಯ ಕತ್ತಲೆಯನ್ನೇ ಹರಡುವ ಕಪ್ಪು ಗವಸು, ಸಜ್ಜನರ ಹೆಸರಿಗೆ ಕೊಳೆಬಳಿಯುವ ರೊಚ್ಚೆರಾಡಿ.

"ಸಾಪೇಕ್ಷತಾ ಸಿದ್ಧಾಂತಕ್ಕೆ ಲಭಿಸಿರುವ ಅತಿಪ್ರಚಾರ ಶುದ್ಧ ಮೋಸ, ಮುಗ್ಧ ಜರ್ಮನರನ್ನು ಚಿರದಾಸ್ಯದ ರಸಾತಳಕ್ಕೆ ಕೆಡೆಯಲು ವೈರಿಗಳು ನೇಯ್ದಿರುವ ವಂಚಕಜಾಲ, ಪ್ರಾಮಾಣಿಕ ಜನರನ್ನು ಹೊಗಳಿ ಹೊನ್ನಶೂಲಕ್ಕೆ ಏರಿಸಲು ಇಂಗ್ಲಿಷರು ಕಟ್ಟಿರುವ ಮಾಯಾವ್ಯೂಹ. ಆರ್ಯರ ಪವಿತ್ರ ಸ್ಮರಣೆ ಪ್ರಜ್ಞೆಗಳಿಂದ ಉದ್ದೀಪಿತರಾಗಿರುವ ಶುದ್ಧ ಜರ್ಮನರು ಎಂದೂ ಈ ಯೆಹೂದ್ಯ ವಿಜ್ಞಾನದ ಕೃತ್ರಿಮತೆಗೆ ಬಲಿಯಾಗಬಾರದು. ನಿಮ್ಮೆದುರಿರುವ ನಿಜಸವಾಲೆಂದರೆ ಜರ್ಮನಿಯ ಅಂತಸ್ಸತ್ತ್ವ ಉಳಿಯಬೇಕೇ ? ಇಲ್ಲ, ಯೆಹೂದ್ಯವಿಜ್ಞಾನ ಬಲಿಯಬೇಕೇ ಎಂಬುದು . . ."

"ಆರ್ಯಪ್ರಜ್ಞೆ ಚಿರಾಯುವಾಗಲಿ, ಯೆಹೂದ್ಯಚಿಂತನೆ ಮಣ್ಣೇ ಮುಕ್ಕಲಿ" ಎಂಬ ಒಕ್ಕೊರಲಿನ ಲಯಬದ್ಧ ಜಯಘೋಷ ಕರತಾಡನ ಸಿಂಹನಾದ ದಿಗಂತವ್ಯಾಪಿಯಾಗಿದ್ದಾಗ ಅದಕ್ಕೆ ಸಾಕ್ಷಾತ್ ಐನ್‌ಸ್ಟೈನ್ ಕೂಡ ಯಥಾಶಕ್ತಿ ಕೊಡುಗೆ ಸಲ್ಲಿಸಿದ್ದರು, ಚಪ್ಪಾಳೆ ತಟ್ಟಿ ! ಇವರು ಅದೇ ಸಭೆಯಲ್ಲಿ ಸುಖಾಸೀನರಾಗಿದ್ದುಕೊಂಡು ನಿರ್ಲಿಪ್ತಭಾವದಿಂದ ಅದರ ಕಾರ್ಯಕಲಾಪಗಳನ್ನು ಗಮನಿಸುತ್ತಿದ್ದರು. ಸಭೆ ಬರಖಾಸ್ತಾದಾಗ, "ಅದರ ನಡವಳಿಕೆ ನಗು ತರಿಸುವಂತಿತ್ತು," ಎಂದರು. ಆದರೆ ಹೊಗೆಯುತ್ತಿದ್ದ ಹಗೆತನದ ಮೂರಿ ಇವರನ್ನು ಕುಕ್ಕದಿರಲಿಲ್ಲ, ಎಚ್ಚರಿಸದಿರಲಿಲ್ಲ. ತಸ್ಮಾಜ್ಜಾಗ್ರತ ಜಾಗ್ರತ !

ಐನ್‌ಸ್ಟೈನರ ಸುಪ್ತಪ್ರಜ್ಞೆಗೆ ಒಂದು ಸಂಗತಿಯಂತೂ ಸ್ಪಷ್ಟವಾಗಿತ್ತು : ಮುಳುಗಿದ್ದ ದೊಡ್ಡ ನೀರ್ಗಲ್ಲ ಬೆಟ್ಟದ ಪುಟ್ಟ ಕೊಡಿ ಮಾತ್ರ ಈ ಸಭೆ, ನಾಡಿನ ಧಮನಿಗಳಲ್ಲಿ ಪ್ರವಹಿಸುತ್ತಿರುವ ವಿಷರಕ್ತದ ಪ್ರಥಮ ನಾಡಿಮಿಡಿತ ಮಾತ್ರ ಈ ಸಭೆ, ಮುಂದೆ ಕವಿಯಲಿರುವ ಕಾರ್ಗತ್ತಲೆಯ ಕರಾಳ ಛಾಯೆ ಮಾತ್ರ ಈ ಸಭೆ. ತನಗೆ ಬೇಡವಾಗಿದ್ದರೂ ಸಾರ್ವಜನಿಕ ಉಜ್ಜ್ವಲ ಪ್ರತಿಬಿಂಬವೊಂದು ಈಗ ತನ್ನ ಹೆಸರಿನ ಸುತ್ತ ಬೆಳಬೆಳಗುತ್ತಿದೆ. ಜನರಿಗೂ ತನಗೂ ನಡುವೆ ವಿಕೃತ ಭೂತಗನ್ನಡಿಯೊಂದು ಹುಟ್ಟಿ ಬೆಳೆದಿದೆ. ಇಂಥ ಪರಿಸ್ಥಿತಿ ಸೃಷ್ಟಿಸಿರುವ ಹೊಸ ಚೌಕಟ್ಟಿನಲ್ಲಿ ತನ್ನ ವರ್ತನೆ ಇದಕ್ಕೆ ಅನುಗುಣವಾಗಿ ಇರಬೇಕೇ ವಿನಾ ವಿಜ್ಞಾನಪ್ರಪಂಚ ವಿಧಿಸುವ ಚೌಕಟ್ಟಿಗೆ ಅನುಗುಣವಾಗಿ ಅಲ್ಲ ಎಂದವರು ನಿರ್ಧರಿಸಿದರು. ಮಾರುಕಟ್ಟೆಯ ಜನಜಂಗುಳಿಗೆ ಇಳಿದ ಬಳಿಕ ಅಲ್ಲಿ ವಿಜ್ಞಾನಸಂಶೋಧನ ಮಂದಿರದ ಶಾಂತಿಯನ್ನೂ ಗಾಂಭೀರ್ಯವನ್ನೂ ನಿರೀಕ್ಷಿಸುವುದು ಸಲ್ಲ ಎಂದು ಇವರಿಗೆ ತಿಳಿದಿತ್ತು.

*Berliner Tageblatt* ಎಂಬ ವೃತ್ತಪತ್ರಿಕೆಗೆ ಐನ್‌ಸ್ಟೈನ್ ತಮ್ಮ ನಿಲವನ್ನು ವಿವರಿಸುವ ಲೇಖನವನ್ನು ಪ್ರಕಟಣೆಗೋಸ್ಕರ ಕಳಿಸಿದರು. ಇದರ ಶೀರ್ಷಿಕೆ : "ಆ್ಯಂಟಿರಿಲೇಟಿವಿಟಿ ಸಿದ್ಧಾಂತ ಕಂಪೆನಿ ನಿಯಮಿತಕ್ಕೆ ನನ್ನ ಜವಾಬು." ಲೇಖನದ ಮೊದಲ ಪರಿಚ್ಛೇದ : "ಜರ್ಮನ್ ನೈಸರ್ಗಿಕ ತತ್ತ್ವಜ್ಞಾನಿಗಳ ಅಧ್ಯಯನ ಕೂಟವೆಂಬ ಸೋಗಿನ ಹೆಸರು ಹೊತ್ತಿರುವ ಕೊಳಕು ಕಲಸು ಮೇಲೋಗರ ತಂಡವೊಂದು ಅಸ್ತಿತ್ವಕ್ಕೆ ಬಂದಿದೆ. ಸಾಪೇಕ್ಷತಾಸಿದ್ಧಾಂತವನ್ನೂ ಇದರ ಕರ್ತೃವಾದ ನನ್ನನ್ನೂ ಕೀಳಾಗಿಸುವುದೇ ಈ ಸಂಘದ ಹಂಗಾಮಿ ಉದ್ದೇಶ. ಶ್ರೀಗಳಾದ ವೇಯ್ಲೆಂಡ್ ಮತ್ತು ಗರ್ಕೀ ಈ ವಿಷಯದ ಮೇಲೆ ತಮ್ಮ ಕೂಟದ ಪ್ರಥಮ ಸಭೆಯನ್ನು ಈಚೆಗೆ ಫಿಲ್ ಹಾರ್ಮೊನಿಕ್ಕಿನಲ್ಲಿ ಜರಗಿಸಿದ್ದಾರೆ. ಖುದ್ದು ನಾನೂ ಅಲ್ಲಿ ಹಾಜರಿದ್ದೆ. ಆ ಸಭೆಯಲ್ಲಿ ಉಪನ್ಯಾಸವಿತ್ತ ಯಾವ ಭಾಷಣಕಾರನೂ ನನ್ನ ಲೇಖನಿಯಿಂದ ಜವಾಬುಪಡೆಯಲು ಅರ್ಹನಲ್ಲವೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಇಷ್ಟೇ ಅಲ್ಲ, ಅವರ ಚಟುವಟಿಕೆಯ ತಳದಲ್ಲಿ ಸತ್ಯಾನ್ವೇಷಣೆಗಿಂತ ಬೇರೆಯೇ ಆದ ಉದ್ದೇಶ ಅಡಗಿದೆಯೆಂದು ನಂಬಲು ನನಗೆ ಪ್ರಬಲ ಕಾರಣಗಳಿವೆ. (ನಾನು ಅಂತಾರಾಷ್ಟ್ರೀಯ ಉದಾರ ಧೋರಣೆಯಿರುವ ಯೆಹೂದ್ಯ ಪಂಥೀಯನಾಗಿರದೆ ಸ್ವಸ್ತಿಕಸಹಿತನಾದ ಯಾ ರಹಿತನಾದ ಜರ್ಮನ್ ರಾಷ್ಟ್ರಕನಾಗಿದ್ದರೆ ಆಗ . . .) ನನ್ನ ಅಭಿಪ್ರಾಯಗಳನ್ನು ನಾನು ಬಹಿರಂಗಪಡಿಸಲೇಬೇಕೆಂಬುದಾಗಿ ನನ್ನ ಹಿತೈಷಿಗಳು ಕೋರಿರುವ ಮೇರೆಗೆ ಈಗ ಜವಾಬು ಕೊಡುತ್ತಿದ್ದೇನೆ."

ಇದೇ ಧಾಟಿಯಲ್ಲಿ ಮುಂದುವರಿಯುತ್ತ, ಸೈದ್ಧಾಂತಿಕ ಭೌತವಿಜ್ಞಾನದಲ್ಲಿ ಒಂದಿನಿತಾದರೂ ಕೈಯಾಡಿಸಿರುವ ಯಾವನೇ ವಿಜ್ಞಾನಿಗೂ ಸಾಪೇಕ್ಷತಾಸಿದ್ಧಾಂತದ ಭದ್ರ ಅಡಿಪಾಯ ಹಾಗೂ ಸುಂದರ ರಚನೆ, ತಾರ್ಕಿಕ ಸಾಮಂಜಸ್ಯ ಹಾಗೂ ಪ್ರಾಯೋಗಿಕ ಅರ್ಹತೆ ತಿಳಿಯದಿರದು ಎಂಬುದಾಗಿ ಬರೆದಿದ್ದಾರೆ. ಈ ಸಿದ್ಧಾಂತ ವಿಶದೀಕರಿಸುವ ಸಂಗತಿಗಳನ್ನು ಹುಸಿಯೆಂದು ತೋರಿಸುವ ಯಾವುದೇ ನೈಸರ್ಗಿಕ ಅಂಶಗಳೂ ಈ ತನಕ ಬೆಳಕಿಗೆ ಬಂದಿಲ್ಲ. ಸೈದ್ಧಾಂತಿಕ ಭೌತವಿಜ್ಞಾನದ ಮುಂಚೂಣಿಯಲ್ಲಿರುವ ಲೊರೆಂಟ್ಸ್ (೧೮೫೩-೧೯೨೮), ಪ್ಲ್ಯಾಂಕ್ ಮೊದಲಾದ ಶ್ರೇಷ್ಠ ವಿಜ್ಞಾನಿಗಳು ಸಾಪೇಕ್ಷತಾಸಿದ್ಧಾಂತವನ್ನು ತೀಕ್ಷ್ಣ ವೈಜ್ಞಾನಿಕ ಅಗ್ನಿಪರೀಕ್ಷೆಗೆ ಒಳಪಡಿಸಿದ ತರುವಾಯವೇ ಒಪ್ಪಿಕೊಂಡಿರುವುದಾಗಿದೆ. ಇಷ್ಟೇ ಅಲ್ಲ, ಇವರ ಪೈಕಿ ಅನೇಕ ಮಹನೀಯರು ಈ ಸಿದ್ಧಾಂತಕ್ಕೆ ಸ್ವಂತ ಕೊಡುಗೆಗಳನ್ನಿತ್ತು ಇದನ್ನು ಪುಷ್ಟೀಕರಿಸಿಯೂ ಇದ್ದಾರೆ. "ಸಾಪೇಕ್ಷತಾ ಸಿದ್ಧಾಂತದ ಪ್ರಕಟಿತ ವಿರೋಧಿಯಾಗಿ ಹೆಸರಿಸಬಹುದಾದ ಅಂತಾರಾಷ್ಟ್ರೀಯ ಖ್ಯಾತಿವಂತ ವಿಜ್ಞಾನಿಯೆಂದರೆ ಲೆನಾರ್ಡ್ ಒಬ್ಬರೇ. ಪ್ರಾಯೋಗಿಕ ವಿಜ್ಞಾನದಲ್ಲಿ ಇವರಿಗಿರುವ ಪರಿಣತಿಯನ್ನು ಒಪ್ಪುತ್ತೇನೆ. ಆದರೆ ಸೈದ್ಧಾಂತಿಕ ಭೌತವಿಜ್ಞಾನದಲ್ಲಿ ಇವರಿನ್ನೂ ಏನನ್ನೂ ಸಾಧಿಸಿರುವುದಿಲ್ಲ. ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತದೆದುರು ಇವರು ಮಂಡಿಸಿರುವ ಅಭ್ಯಂತರಗಳು ಎಷ್ಟು ಕ್ಷುಲ್ಲಕವಾದವೆಂದರೆ ಈ ತನಕ ನಾನವುಗಳಿಗೆ ಸಮಜಾಯಿಷಿ ಕೊಡುವ ಗೋಜಿಗೇ ಹೋಗಿರಲಿಲ್ಲ. ಈ ಕೊರತೆಯನ್ನು ಈಗ ನಿವಾರಿಸಲಿಚ್ಛಿಸುತ್ತೇನೆ."

ವೈರಿಗಳ ಕದಳಿವನವನ್ನು ತುಳಿದಪ್ಪಳಿಸುವುದು ಈ ಗಜರಾಜನಿಗೆ ತೀರ ಸುಲಭ ಲೀಲೆಯಾಗಿತ್ತು. ಅದೇ ತಿಂಗಳಿನಲ್ಲಿ ಬ್ಯಾಡ್ ನ್ಯಾಹೀಮ್ ಎಂಬಲ್ಲಿ ಕೂಡಲಿದ್ದ ಜರ್ಮನ್ ವಿಜ್ಞಾನಿಗಳ ಹಾಗೂ ಡಾಕ್ಟರುಗಳ ಅಸೋಸಿಯೇಷನ್ನಿನ ವಾರ್ಷಿಕಾಧಿವೇಶನದಲ್ಲಿ ಯಾರು ಬೇಕಾದರೂ ಸಾಪೇಕ್ಷತಾಸಿದ್ಧಾಂತಕ್ಕೆ ವಿರೋಧವಾದ ತಮ್ಮ ಅಭಿಪ್ರಾಯಗಳನ್ನು ವೈಜ್ಞಾನಿಕವಾಗಿ ಮಂಡಿಸಲು ಬರಬಹುದೆಂದು ಪಂಥಾಹ್ವಾನನೆಸೆದರು.

ಸಾಪೇಕ್ಷತಾಸಿದ್ಧಾಂತದ ನಿಕಷ ಖಂಡಿತವಾಗಿಯೂ ಮಾರುಕಟ್ಟೆಯಲ್ಲ, ಮತಧರ್ಮವಾದಿಗಳ ಕುಹಕ ಸಮುದಾಯವಲ್ಲ, ರಾಜಕಾರಣಿಗಳ ಕುತಂತ್ರ ಕೂಟವೂ ಅಲ್ಲ, ಬದಲು, ಆ ಕ್ಷೇತ್ರದಲ್ಲಿ ಪ್ರಾವೀಣ್ಯ ಗಳಿಸಿ ತಾಕತ್ತಿನ ತ್ರಾಣದಿಂದ ಅರ್ಥವಿಸಿ ಮಾತಾಡಬಲ್ಲ ಶ್ರೇಷ್ಠ ವಿಜ್ಞಾನಿಗಳ ಸಮ್ಮೇಳನ ಮಾತ್ರ. ವೈಯಕ್ತಿಕವಾಗಿ ಐನ್‌ಸ್ಟೈನರಿಗೆ ಇಂಥ ಯಾವ ಅಥವಾ ಯಾರ ಶಿಫಾರಸೂ ಅಗತ್ಯವಿರಲಿಲ್ಲ.

## ವಿಜ್ಞಾನಿಗಳ ಆಕ್ರೋಶ

> ನಿಸರ್ಗದ ರಹಸ್ಯಗಳನ್ನು ಅರಿಯಬೇಕೆಂಬ ತಡೆಯಲಾಗದ ಹಂಬಲದಿಂದ ನನ್ನ ವೈಜ್ಞಾನಿಕ ಕಾರ್ಯ ಪ್ರವರ್ತಿತವಾಗಿದೆ—ಬೇರೆ ಯಾವ ಭಾವನೆಗಳಿಂದಲೂ ಅಲ್ಲ, ನ್ಯಾಯದ ಬಗ್ಗೆ ನನಗಿರುವ ಪ್ರೀತಿ ಮತ್ತು ಮಾನವಸ್ಥಿತಿಗತಿಗಳ ಸುಧಾರಣೆಗೆ ಕೊಡುಗೆ ನೀಡಲು ನಾನು ಮಾಡುವ ಪ್ರಯತ್ನ ನನ್ನ ವೈಜ್ಞಾನಿಕ ಆಸಕ್ತಿಗಳಿಗಿಂತ ಪೂರ್ತಿ ಸ್ವತಂತ್ರವಾದವು.
>
> ಐನ್‌ಸ್ಟೈನ್

೧೯೨೦ರ ದಿನಗಳಂದು ವಿಜ್ಞಾನಿಯೊಬ್ಬ ತನ್ನ ನಿಲವನ್ನು ವಿವರಿಸಲು ವೃತ್ತಪತ್ರಿಕಾ ಮಾಧ್ಯಮ ವನ್ನು ಬಳಸುವುದು ಗೊತ್ತೇ ಇರಲಿಲ್ಲ. ಇಷ್ಟೇ ಅಲ್ಲ. ಎಂಥೆಂಥ ಕ್ರಾಂತಿಕಾರಿ ಆವಿಷ್ಕಾರಗಳಾ ದಾಗಲೂ ಅವುಗಳ ಹಿಂದಿದ್ದ ವಿಜ್ಞಾನಿಗಳ ವ್ಯಕ್ತಿವಿವರಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುದು ತೀರ ಅಪರೂಪ. ಅಲ್ಲೂ ಅತಿ ಸಂಕ್ಷೇಪ. ಉದಾಹರಣೆಗೆ ಎಕ್ಸ್ ಕಿರಣಗಳ ಅಸ್ತಿತ್ವ ಪ್ರಥಮ ಬಾರಿಗೆ ಬೆಳಕಿಗೆ ಬಂದಾಗ (೧೮೯೬) ಈ ವರದಿಯೇನೋ ವೃತ್ತಪತ್ರಿಕೆಗಳಲ್ಲಿ ಅಚ್ಚಾಯಿತು. ಆದರೆ ಅದರ ಆವಿಷ್ಕರ್ತೃ ವಿಲ್‌ಹೆಲ್ಮ್ ಕೊನ್ರಾಡ್ ರಂಟ್‌ಜನ್ (೧೮೪೫-೧೯೨೩) ಇವರ ವ್ಯಕ್ತಿತ್ವದ ಬಗೆಗೆ ಯಾವ ವಿವರವೂ ಪ್ರಕಟವಾಗಲಿಲ್ಲ. ಖುದ್ದು ವಿಜ್ಞಾನಿಗಳೇ ವ್ಯಕ್ತಿವೃತ್ತಾಂತ ಪ್ರಕಟಣೆ ಕೀಳು ಅಭಿರುಚಿಯ ದ್ಯೋತಕ ಮತ್ತು ಅಗ್ಗದ ಪ್ರಚಾರ ಎಂಬುದಾಗಿ ಭಾವಿಸುತ್ತಿದ್ದರು. ಇಂತಿರುವಾಗ ವಿಜ್ಞಾನಿಗಳ ಚಕ್ರವರ್ತಿ, ಸದಭಿರುಚಿಯ ಮೂರ್ತರೂಪ, ಸದ್ವರ್ತನೆಯ ಪ್ರತ್ಯಕ್ಷ ಮೂರ್ತಿ ಐನ್‌ಸ್ಟೈನ್ ಹೀಗೆ ವೃತ್ತಪತ್ರಿಕೆಗೆ ಧಾವಿಸಿಯಾರೆಂಬುದು ನ್ಯಾಯಪಕ್ಷಪಾತಿ ವಿಜ್ಞಾನಿ ಗಳಿಗೆ ನಂಬಲಾಗದ, ನುಂಗಲಾರದ ಮತ್ತು ಸಹಿಸಲಾಗದ ಕಹಿಸತ್ಯವಾಗಿತ್ತು. ಐನ್‌ಸ್ಟೈನರನ್ನು ಬರೆಯಂಚಿಗೆ ತಳ್ಳಿದ ದ್ವೇಷ ಪ್ರಸಂಗದ ಪೂರ್ಣ ಮಾಹಿತಿ ಅವರಿಗೆ ತಿಳಿದಿತ್ತು.

ಮ್ಯಾಕ್ಸ್ ಬಾರ್ನರ ಪತ್ನಿ ಹೆಡ್ವಿಗ್ ಸೆಪ್ಟೆಂಬರಿನಲ್ಲಿ ಐನ್‌ಸ್ಟೈನರಿಗೆ ಬರೆದ ಕಾಗದದಲ್ಲಿ ತಮ್ಮ ಮನದಳಲನ್ನು ತೋಡಿಕೊಂಡಿದ್ದಾರೆ : "ನಿಮ್ಮನ್ನು ಕಾಡುತ್ತಿರುವ ಅಹಿತಕರ ಹುಯಿಲುಗಳ ಬಗ್ಗೆ ನಮಗೆ ತೀವ್ರ ಸಂಕಟವಾಗುತ್ತದೆ. ಅವುಗಳಿಂದ ನೀವು ತುಂಬ ಕ್ಷೋಭೆಗೀಡಾಗಿರಬೇಕು. ಇದಲ್ಲವಾಗಿದ್ದರೆ ವೃತ್ತಪತ್ರಿಕೆಗಳಲ್ಲಿ ಬಂದಿರುವ ದುರದೃಷ್ಟಕರವೆಂದು ಹೇಳಬಹುದಾದ ಆ ಜವಾಬು ಬರೆಯಲು ನಿಮ್ಮನ್ನು ನೀವು ಒಪ್ಪಿಸಿಕೊಳ್ಳುತ್ತಿರಲಿಲ್ಲ. ನಿಮ್ಮನ್ನು ತಿಳಿದಿರುವವರು ಖಿನ್ನರಾಗಿದ್ದಾರೆ. ಅವರು ನಿಮ್ಮೊಡನೆ ಸಂಕಟಪಡುತ್ತಾರೆ. ಏಕೆಂದರೆ ಈ ಕುಖ್ಯಾತ ದ್ವೇಷಬಿತ್ತನೆ ಯನ್ನು ನೀವು ಗಾಢವಾಗಿ ಹೃದಯಕ್ಕೆ ಹಚ್ಚಿಕೊಂಡಿದ್ದೀರಿ ಎಂಬುದನ್ನು ಅವರು ಅರಿಯಬಲ್ಲರು. ನಿಮ್ಮನ್ನು ತಿಳಿಯದವರಿಗೆ ನಿಮ್ಮ ಬಗೆಗೆ ಮಿಥ್ಯಾ ಚಿತ್ರ ಮೂಡುತ್ತದೆ. ಇದು ಕೂಡ ಕಳವಳಕಾರಿ."

ಜರ್ಮನಿಯ ಹಿರಿಯ ವಿಜ್ಞಾನಿಗಳು ಐನ್‌ಸ್ಟೈನರಿಗೆ ಒದಗಿದ ದುಃಸ್ಥಿತಿ ಕಂಡು ಮಮ್ಮಲ ಮರುಗಿದರು. ಐನ್‌ಸ್ಟೈನ್ ಈ ತೆರನಾದ ಅನ್-ಐನ್‌ಸ್ಟೈನ್ (ಐನ್‌ಸ್ಟೈನರಿಗೆ ಸಲ್ಲದ) ಪ್ರತಿಕ್ರಿಯೆ ಯನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸುವಂಥ ಹೀನಸ್ಥಿತಿಗೆ ಕುಸಿಯಬೇಕಾಗಿದ್ದರೆ, "ಈ ಗಲೀಜು

ಸೂಕರಗಳು ನಿಜಕ್ಕೂ ನಿಮ್ಮ ಜೀವದ ತಾಯಿಬೇರನ್ನೇ ಕುತ್ತಿರಬೇಕು. ನಮಗೆಲ್ಲ ಇದರಿಂದ ಅತಿ ವ್ಯಾಕುಲವಾಗಿದೆ," ಎಂಬುದಾಗಿ ವೈಯಕ್ತಿಕ ಪತ್ರ ಬರೆದರು. ಒಬ್ಬ ಕಾರ್ಯನಿರತ ವಿಜ್ಞಾನಿ ತನ್ನ ವೈಜ್ಞಾನಿಕ ಚಿಂತನೆ ಹಾಗೂ ಸಿದ್ಧಾಂತಗಳ ಸಾಧುತ್ವವನ್ನು ಅಂತೆಯೇ ತನ್ನ ವ್ಯಕ್ತಿತ್ವದ ನಿಲವು ಹಾಗೂ ಬೀಸುಗಳ ಸಾಂಗತ್ಯವನ್ನು ಸಮರ್ಥಿಸಿಕೊಳ್ಳಲು 'ಮಾರುಕಟ್ಟೆಯ ವ್ಯವಹಾರ'ಗಳಿಗೆ ಶರಣುಹೋಗಬೇಕಾಗುವಂಥ ಪರಿಸ್ಥಿತಿ ಈ ವಿಜ್ಞಾನಿವೃಂದಕ್ಕೆ ನಿಜಕ್ಕೂ ಭಯಂಕರವೆನ್ನಿಸಿತು. ಇವರ ಪೈಕಿ ಹಲಮಂದಿ ಒಂದುಗೂಡಿ ಅದೇ *Berliner Tageblatt* ಪತ್ರಿಕೆಯಲ್ಲಿ ತಮ್ಮ ಪ್ರತಿಭಟನೆಯನ್ನು ಪ್ರಕಟಿಸಿದರು : "ಐನ್‌ಸ್ಟೈನರು ತಮ್ಮ ಸಾಪೇಕ್ಷತಾಸಿದ್ಧಾಂತದಲ್ಲಿ ಕಂಡರಿಸಿಟ್ಟಿರುವ ಆಳವೂ ಉತ್ಕೃಷ್ಟವೂ ಆದ ಬೌದ್ಧಿಕ ಕಾರ್ಯವನ್ನು ಕುರಿತಂತೆ ಈ ಅಂಕಣದಲ್ಲಿ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಪ್ರಕೃತ ಪತ್ರದ ಉದ್ದೇಶವಲ್ಲ. ಈ ಸಿದ್ಧಾಂತವನ್ನು ಸಮರ್ಥಿಸುವ ವಿಸ್ಮಯಕಾರಿ ವಿಜಯಗಳು ಈಗಾಗಲೆ ಸಿದ್ಧಿಸಿವೆ. ಹೆಚ್ಚಿನ ರುಜುವಾತುಗಳು ಸಹಜವಾಗಿ ಭವಿಷ್ಯದ ಸಂಶೋಧನೆಗಳಲ್ಲಿ ಅಡಗಿವೆ. ನಾವಿಲ್ಲೊಂದು ಸಂಗತಿಯನ್ನು ಒತ್ತಿ ಹೇಳಬೇಕಾಗಿದೆ : ಸಾಪೇಕ್ಷತೆಯನ್ನು ಕುರಿತ ಐನ್‌ಸ್ಟೈನರ ಸಂಶೋಧನೆಗಳು ಮಾತ್ರವಲ್ಲ ಅವರ ಕಾರ್ಯ ಕೂಡ ಅವರಿಗೆ ವಿಜ್ಞಾನೇತಿಹಾಸದಲ್ಲಿ ಶಾಶ್ವತ ಗಣ್ಯಸ್ಥಾನ ದೊರಕಿಸಿಕೊಟ್ಟಿವೆ. ಈ ನಿಟ್ಟಿನಲ್ಲಿ, ಬರ್ಲಿನ್ನಿನ ವಿಜ್ಞಾನಜೀವನವೊಂದರ ಮೇಲೆಯೇ ಅಲ್ಲ, ಅಖಿಳ ಜರ್ಮನಿಯ ವಿಜ್ಞಾನಜೀವನದ ಮೇಲೆ ಸಹ ಅವರ ಪ್ರಭಾವ ಎಷ್ಟು ಗಾಢವಾದದ್ದು ಎಂಬುದನ್ನು ನಾವು ಅಂದಾಜಿಸಲಾರೆವು. ಐನ್‌ಸ್ಟೈನರ ಸಹವಾಸ ಸುಖ ಲಭಿಸಿರುವ ಯಾವನೇ ಅದೃಷ್ಟವಂತನಿಗೂ ಒಂದು ಸಂಗತಿ ತಿಳಿದಿದೆ : ಇತರರ ಸಾಂಸ್ಕೃತಿಕ ಮೌಲ್ಯಗಳ ಬಗೆಗೆ ಗೌರವ, ವೈಯಕ್ತಿಕ ವಿನಯ, ಅಲ್ಲದೇ ಪ್ರಚಾರವನ್ನು ಕುರಿತಂತೆ ಭೀಷ್ಮ ನಿರ್ಲಕ್ಷ್ಯ ಈ ಸದ್ಗುಣಗಳಲ್ಲಿ ಇವರಿಗೆ ಸರಿಸಾಟಿಯಾಗಬಲ್ಲ ಸಜ್ಜನರಿಲ್ಲ." ಸಜ್ಜನರ ಸಹವಾಸ ಹೆಜ್ಜೇನು ಮೆದ್ದಂತೆ !

ಐನ್‌ಸ್ಟೈನ್ ಜರ್ಮನಿ ತೊರೆದು ಪರದೇಶಕ್ಕೆ ಹೋಗಬಹುದೇ ? ಈ ಸುದ್ದಿ ಗಾಢವಾಗಿ ಹಬ್ಬಿತು. ಇದು ನಿಜವಾದರೆ ಜರ್ಮನ್ ವಿಜ್ಞಾನಿಗಳಿಗೆ ಇದಕ್ಕಿಂತ ಅಪ್ರಿಯವಾದ ಮತ್ತು ಅಕಾಲಿಕವಾದ ಆಘಾತ ಇನ್ನೊಂದು ಇದ್ದಿರಲಾರದು. ಜರ್ಮನ್ ಫಿಸಿಕ್ಸ್ ಸೊಸೈಟಿಯ ಅಧ್ಯಕ್ಷರಾದ ಆರ್ನಾಲ್ಡ್ ಸೊಮ್ಮರ್‌ಫೆಲ್ಡ್ (೧೮೬೮-೧೯೫೧) ಸೆಪ್ಟೆಂಬರ್ ಇರಂದು (೧೯೨೦) ಐನ್‌ಸ್ಟೈನರಿಗೊಂದು ಕಾಗದ ಬರೆದು: "ನಿಮಗೆದುರಾಗಿ ಹೂಡಲಾದ ಬರ್ಲಿನ್ ಬೇಟೆಯ ದುಷ್ಟ ಪ್ರಸಂಗವನ್ನು ವ್ಯಕ್ತಿಯಾಗಿಯೂ ಅಧ್ಯಕ್ಷನಾಗಿಯೂ ನಾನು ಅತಿಕ್ಷೋಭೆ ರೋಷಗಳಿಂದ ಗಮನಿಸಿದ್ದೇನೆ. . . . ಜರ್ಮನ್ ವಿಜ್ಞಾನಿಗಳ ಹಾಗೂ ಡಾಕ್ಟರುಗಳ ಅಸೋಸಿಯೇಷನ್ನಿನಲ್ಲಿ ನಾವೇನು ಕ್ರಮಕೈಗೊಳ್ಳಬೇಕು ಎಂಬುದರ ಬಗ್ಗೆ ಇಂದು ಪ್ಲ್ಯಾಂಕರೊಡನೆ ಪರ್ಯಾಲೋಚಿಸಿದ್ದೇನೆ. 'ವೈಜ್ಞಾನಿಕ' ಮಾರುಕಟ್ಟೆ ಭಾಷಣದ ಎದುರು ನಮ್ಮ ತೀವ್ರಪ್ರತಿಭಟನೆಯನ್ನೂ ನಿಮ್ಮ ಬಗ್ಗೆ ನಮ್ಮ ಗಾಢವಿಶ್ವಾಸಪ್ರದರ್ಶನವನ್ನೂ ನಮ್ಮ ಅಸೋಸಿಯೇಷನ್ನಿನ ಅಧ್ಯಕ್ಷರಾದ ನನ್ನ ಸಹೋದ್ಯೋಗಿ ಫಾನ್-ಮ್ಯೂಲರ್ ಅವರಿಗೆ ಬರವಣಿಗೆಯಲ್ಲಿ ಕೊಡಬೇಕೆಂಬುದಾಗಿ ನಿರ್ಧರಿಸಿದ್ದೇವೆ. ಬ್ಯಾಡ್ ನ್ಯಾಹೀಮ್ ಸಭೆಯಲ್ಲಿ ಇದನ್ನು ಔಪಚಾರಿಕವಾಗಿ ಏನೂ ಮತಕ್ಕೆ ಹಾಕುವುದಿಲ್ಲ. ಆದರೆ ವೈಜ್ಞಾನಿಕ ಮನಸ್ಸಾಕ್ಷಿಯ ಪ್ರಕಟಿತವಾಣಿಯಾಗಿ ಇದನ್ನು ಎತ್ತಲಾಗುವುದು. ನೀವು ಜರ್ಮನಿಯನ್ನು ತೊರೆದುಹೋಗಕೂಡದು. ನಿಮ್ಮ ಸಮಸ್ತ ಕಾರ್ಯವೂ ಜರ್ಮನ್ (ಮತ್ತು ಡಚ್) ವಿಜ್ಞಾನದಲ್ಲಿ ಬೇರೂರಿರುವುದಾಗಿದೆ. ಜರ್ಮನಿಯಲ್ಲಿ ಕಾಣುವಷ್ಟು ಅರಿವನ್ನು ನೀವಿನ್ನೆಲ್ಲೂ ಕಾಣಲಾರಿರಿ. ಪ್ರತಿಯೊಬ್ಬನೂ ಜರ್ಮನಿಯನ್ನು ಇಷ್ಟೊಂದು ತಿರಸ್ಕಾರಯುತವಾಗಿ ಅಪಾರ್ಥ

ವಿಸುತ್ತಿರುವ ಈ ಕಹಿ ಸನ್ನಿವೇಶದಲ್ಲಿ ನೀವು ಈ ದೇಶವನ್ನು ಕೈಬಿಡುವುದು ನಿಮ್ಮ ಸ್ವಭಾವಕ್ಕೆ ವಿರುದ್ಧವಾದದ್ದು. ಇನ್ನು ಒಂದೇ ಒಂದು ಸಂಗತಿ ಮಾತ್ರ : ನಿಮ್ಮ ಅಭಿಪ್ರಾಯಗಳನ್ನೇ ನೀವು ಹೊಂದಿದವರಾಗಿದ್ದು ಯುದ್ಧ ದಿನಗಳಂದು ಫ್ರಾನ್ಸ್, ಇಂಗ್ಲೆಂಡ್ ಅಥವಾ ಅಮೆರಿಕಾದಲ್ಲಿ ನೆಲಸಿದ್ದು ಸಾರ್ವಜನಿಕ ಅಭಿಪ್ರಾಯಕ್ಕೂ ಅಲ್ಲಿಯ ಮಿಥ್ಯಾವ್ಯವಸ್ಥೆಗೂ ಬೆನ್ನು ತಿರುಗಿಸಿದ್ದಿದ್ದರೆ —ನೀವು ಹೀಗೆ ಮಾಡಿರುತ್ತಿದ್ದಿರಿ (ರಸಲ್ ಮೊದಲಾದವರಂತೆ) ಎಂಬುದರ ಬಗ್ಗೆ ನನಗೆ ಇನಿತೂ ಸಂದೇಹವಿಲ್ಲ—ಆಗ ಆ ಸರಕಾರಗಳು ಖಾತ್ರಿ ನಿಮ್ಮನ್ನು ಬಂಧಿಸಿಡುತ್ತಿದ್ದುವು . . . ಏತನ್ಮಧ್ಯೆ ನೀವು ನಿಮ್ಮ ಸ್ಥಿತಪ್ರಜ್ಞಹಸನ್ಮುಖತ್ವವನ್ನೂ ಎಲ್ಲ ಕಡೆ ನಿಂದನೆಗೀಡಾಗಿರುವ ಜರ್ಮನಿಯ ಪರ ಸಹಾನುಭೂತಿಯನ್ನೂ ಮರುಗಳಿಸಿಕೊಂಡಿರುವಿರೆಂದು ಆಶಿಸುತ್ತಿದ್ದೇನೆ. ಜರ್ಮನಿಯನ್ನು ನೀವು ನಡುನೀರಿನಲ್ಲಿ ಕೈಬಿಡುವ ಯೋಚನೆಯನ್ನೇ ರದ್ದುಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ."

ನಲ್ಮೆಯ ಇನಿವಾತನ್ನು ಸೂಸುವ ಈ ಕಾಗದಕ್ಕೆ ಐನ್‌ಸ್ಟೈನ್ ಸೆಪ್ಟೆಂಬರ್ ೬ರಂದು ಮಾರೋಲೆ ಕಳಿಸಿದರು : "ನನ್ನೆದುರಾಗಿ ನಡೆದ ಆ ದಾಳಿಯಲ್ಲಿ ನಮ್ಮ ಭೌತವಿಜ್ಞಾನಿಗಳ ಪೈಕಿ ಹೆಚ್ಚಿನವರು ಪಾಲ್ಗೊಂಡಿದ್ದರೆಂದು ನಂಬುವುದರ ಮೂಲಕ ನಾನು ಅದಕ್ಕೆ ಹೆಚ್ಚಿನ ಮಹತ್ತ್ವ ನೀಡಿದೆನೆಂದು ತೋರುತ್ತದೆ. ಹಾಗಾಗಿ ಎರಡು ದಿವಸಗಳ ತನಕ ನೀವು ಬರೆದಿರುವಂತೆ 'ಕೈ ಬಿಡುವ ಯೋಚನೆ' ಮಾಡಿದೆ. ಆದರೆ ನನ್ನ ವಿಧೇಯ ಸ್ನೇಹಿತರನ್ನು ತೊರೆದು ಹೋಗುವುದು ತಪ್ಪೆಂಬ ಭಾವನೆ ಮತ್ತು ತಿಳಿವಳಿಕೆ ಒಡನೆ ಮೂಡಿದುವು. ಬಹುಶಃ ನಾನು ಆ ಲೇಖನ ಬರೆಯಬಾರದಿತ್ತೋ ಏನೋ. ಆದರೆ ವ್ಯವಸ್ಥಿತವಾಗಿ ಪುನರಾವರ್ತಿಸುತ್ತಿದ್ದ ಪ್ರತಿಭಟನೆಗಳ ಹಾಗೂ ನಿಂದನೆಗಳ ಎದುರು ನಾನು ಮೌನ ತಳೆದಿದ್ದರೆ ಅವನ್ನು ಒಪ್ಪಿಕೊಂಡಿದ್ದೇನೆಂಬ ಭಾವನೆ ಅವರಿಗೆ ಬರಬಹುದಾಗಿತ್ತು. ಇದನ್ನು ನಿವಾರಿಸಬೇಕೆಂಬುದು ನನ್ನ ನಿಲವಾಗಿತ್ತು. ನನ್ನ ಪ್ರತಿಯೊಂದು ಹೇಳಿಕೆಯನ್ನೂ ಪತ್ರಕರ್ತರು ಅವರ ಸರಕು ಮಾರಾಟಕ್ಕಾಗಿಯೆ ಬಳಸಿಕೊಂಡಿರುವುದು ದುರ್ದೈವ. ನಾನು ಏಕಾಂತವಾಸಿ ಆಗಬೇಕು."

ಐನ್‌ಸ್ಟೈನ್ ಸೆಪ್ಟೆಂಬರ್ ೯ರಂದು ಬಾರ್ನ್ ದಂಪತಿಗಳಿಗೆ (ಇವರ ಈ ಹಿಂದೆ ಉಲ್ಲೇಖಿಸಿದ ಪತ್ರಕ್ಕೆ) ಉತ್ತರ ಬರೆದರು : "ನನ್ನ ಮೇಲೆ ತೀರ ಕಠಿಣರಾಗಬೇಡಿ. ಪ್ರತಿಯೊಬ್ಬನೂ ಮೌಢ್ಯದ ಗುಡಿಯಲ್ಲಿ ಆ ದೇವಿಯನ್ನೂ ಮನುಕುಲವನ್ನೂ ಪ್ರಸನ್ನಗೊಳಿಸಲೋಸ್ಕರ ಕಾಲದಿಂದ ಕಾಲಕ್ಕೆ ಬಲಿ ತೆರಲೇಬೇಕು. ಇದನ್ನೇ ನಾನಾದರೂ ನನ್ನ ಲೇಖನದ ಮೂಲಕ ಪರಿಷ್ಕಾರವಾಗಿ ಮಾಡಿದ್ದಾಗಿದೆ . . . ಮೊದಲ ಪ್ರತಿಕ್ರಿಯೆಯಾಗಿ ನಾನು ಹೊರವಲಸೆಯ ಯೋಚನೆ ಮಾಡಿದ್ದುಂಟು. ಆದರೆ ಬೇಗನೆ ನನ್ನ ಒಳನೋಟವೂ ಜಡತ್ವವೂ ಮರಳಿದುವು. ಇಂದು ನಾನೊಂದು ಹಾಯಿ ದೋಣಿಯನ್ನೂ ನೀರಿನ ಒತ್ತಿಗಿರುವ ಹಳ್ಳಿ ಜೋಪಡಿಯನ್ನೂ ಖರೀದಿಸುವ ಯೋಚನೆಯಲ್ಲಿದ್ದೇನೆ—ಬರ್ಲಿನ್ನಿನ ಸಮೀಪ ಎಲ್ಲಾದರೂ."

ಐನ್‌ಸ್ಟೈನರಿಗೆ ಜರ್ಮನಿಯಲ್ಲಿ ಹವೆ ಬಿಗಡಾಯಿಸುತ್ತಿದೆ ಎಂಬ ಸುದ್ದಿ ಈ ವೇಳೆಗೆ ಸರ್ವವ್ಯಾಪಿ ಆಗಿತ್ತು. ಇಂಗ್ಲೆಂಡಿನಲ್ಲಿದ್ದ ಜರ್ಮನಿಯ ರಾಯಭಾರಿ ಸ್ಥಳೀಯ ಪರಿಸ್ಥಿತಿಯನ್ನು ಕುರಿತ ಗುಪ್ತವರದಿಯನ್ನು ತನ್ನ ಸರ್ಕಾರಕ್ಕೆ ಸಲ್ಲಿಸಿದ (ಸೆಪ್ಟೆಂಬರ್ ೯) : "ಸುವಿಖ್ಯಾತ ಭೌತವಿಜ್ಞಾನಿ ಪ್ರೊಫೆಸರ್ ಐನ್‌ಸ್ಟೈನರ ಎದುರು ಜರ್ಮನಿಯಲ್ಲಿ ನಡೆಸಲಾದ ಹಿಂಸಾತ್ಮಕ ವಾಗ್ದಾಳಿಯ ಬಗ್ಗೆ ಇಂಗ್ಲಿಷ್ ಪತ್ರಿಕೆಗಳು ವರದಿ ಮಾಡಿವೆ. ಐನ್‌ಸ್ಟೈನರು ಜರ್ಮನಿಯನ್ನು ತೊರೆದು ಅಮೆರಿಕಕ್ಕೆ ಹೋಗಲು ಇಚ್ಛಿಸಿರುವರೆಂಬ ಸುದ್ದಿ ಇಂದಿನ *Morning Post*ನಲ್ಲಿ ಪ್ರಕಟವಾಗಿದೆ. ಪ್ರವಾದಿಗೆ ಸ್ವಂತ ರಾಷ್ಟ್ರದ ವಿನಾ ಬೇರೆಲ್ಲೂ ಗೌರವ ಸಲ್ಲದಿರುವುದಿಲ್ಲ ಎಂಬ ಹೇಳಿಕೆಯ ತಥ್ಯ

ಇಂಗ್ಲೆಂಡಿನಲ್ಲಿ ಸುಪರಿಚಿತವಾಗಿದ್ದರೂ ಜರ್ಮನಿಯಲ್ಲಿ ಪ್ರೊಫೆಸರ್ ಐನ್‌ಸ್ಟೈನರ ಎದುರು ಹೂಡಲಾದ ದೂಷಣೆಗಳು ಇಲ್ಲಿ [ಇಂಗ್ಲೆಂಡ್] ತುಂಬ ಕೆಟ್ಟ ಚಿತ್ರವನ್ನು ಪ್ರತಿಬಿಂಬಿಸಿವೆ. ಐನ್‌ಸ್ಟೈನರ ನಾಮಧೇಯ ಪ್ರಪಂಚಾದ್ಯಂತ ಸುಪರಿಚಿತವಾಗಿದೆ. ಪ್ರಕೃತ ಸಂದರ್ಭದಲ್ಲಿ ಇವರು ವಿಶೇಷವಾಗಿ ಜರ್ಮನಿಯ ಪ್ರಥಮ ದರ್ಜೆಯ ಸಾಂಸ್ಕೃತಿಕ ನಿಯೋಗಿ ಎಂಬ ಅಭಿಧಾನ ಪಡೆಯಲು ಪೂರ್ಣ ಅರ್ಹತೆ ಗಳಿಸಿದ್ದಾರೆ. ಇಂಥ ಶ್ರೇಷ್ಠ ವ್ಯಕ್ತಿಯನ್ನು ನಾವು ಜರ್ಮನಿಯಿಂದ ಹೊರದಬ್ಬಬಾರದು. ಅವರನ್ನು ಪರಿಣಾಮಕಾರಿಯಾಗಿ ಸಾಂಸ್ಕೃತಿಕ ಪ್ರಚಾರಕ್ಕೆ ಬಳಸಿಕೊಳ್ಳಬೇಕು. ಪ್ರೊಫೆಸರ್ ಐನ್‌ಸ್ಟೈನ್ ನಿಜವಾಗಿಯೂ ಜರ್ಮನಿಯನ್ನು ತೊರೆಯಲೇಬೇಕೆಂಬುದಾಗಿ ಉದ್ದೇಶಿಸಿರುವರಾದ ಪಕ್ಷ ವಿದೇಶಗಳಲ್ಲಿ ಜರ್ಮನಿಯ ಕೀರ್ತಿ ಬೆಳಗಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡಾದರೂ ಈ ಘನವಿದ್ವಾಂಸರು ಜರ್ಮನಿಯಲ್ಲಿಯೇ ಉಳಿಯುವಂತೆ ಅವರ ಮನ ಒಲಿಸಲೇಬೇಕು."

ಈ ಎಲ್ಲ ಗಲೀಜು ರಾಡಿ ಎರಚಾಟ ಬರ್ಲಿನ್ನಿನಲ್ಲಿ ನಡೆದಾಗ ಹಿರಿಯ ವಿಜ್ಞಾನಿ ಮ್ಯಾಕ್ಸ್ ಪ್ಲ್ಯಾಂಕ್ ಆಸ್ಟ್ರಿಯಾದಲ್ಲಿದ್ದರು. ಇವರಿಗೆ ಸಂಗತಿ ತಡವಾಗಿ ತಿಳಿಯಿತು. ತುಂಬ ವ್ಯಾಕುಲರಾದರು. ಒಡನೆ ಐನ್‌ಸ್ಟೈನರಿಗೆ ಪತ್ರ ಬರೆದು (ಸೆಪ್ಟೆಂಬರ್ ೫) ತಮ್ಮ ಸಂತಾಪ ವ್ಯಕ್ತಪಡಿಸಿದರು. ಆ ನಾಲಾಯಕ್ ಬೇಕೂಫ್ ಮಂದಿಯ ಕೂರುನುಡಿಗಳಿಂದ ಐನ್‌ಸ್ಟೈನರ ಬುದ್ಧಿ ಕಹಿ ಆಗಬಾರದೆಂದು ಪ್ರಾರ್ಥಿಸಿಕೊಂಡರು. ಪಿಸುಣಜನರ ಹೀನವರ್ತನೆ ಸುಸಂಸ್ಕೃತ ಐನ್‌ಸ್ಟೈನರ ಕೋಮಲ ಮನಸ್ಸಿನ ಮೇಲೆ ಎಂಥ ದುಷ್ಪರಿಣಾಮ ಬೀರಿತ್ತೆಂಬುದನ್ನು ಯೋಚಿಸಿ ಪ್ಲ್ಯಾಂಕರಿಗೆ ಬಹಳ ಕಳವಳವಾಗಿತ್ತು. ಯಾವುದೊ ದುರ್ಬಲ ಕ್ಷಣದಲ್ಲಿ ಐನ್‌ಸ್ಟೈನ್ ಈ ಜರ್ಮನರಿಗೆ ಪಾಠ ಕಲಿಸಲೆಂದು ದೇಶತ್ಯಾಗ ಮಾಡಿದರೆ ? ಯಾವ ಇತರ ದೇಶವೂ ಆದರದಿಂದ ಸ್ವಾಗತಿಸಬಹುದಾದ ಈ ಮಹಾನುಭಾವನ ನಿರ್ಗಮನದಿಂದ ಜರ್ಮನಿಗೂ ಜರ್ಮನ್ ವಿಜ್ಞಾನಕ್ಕೂ ಅಪಾರ ನಷ್ಟ ಉಂಟಾಗುವುದು ಖಂಡಿತ. ಇವರು ಜರ್ಮನಿಯಲ್ಲಿ ಉಳಿಯುವುದು ಜರ್ಮನ್ ವಿಜ್ಞಾನಕ್ಕೆ ಎಷ್ಟು ಅಗತ್ಯವಾದುದೊ ಖುದ್ದು ಇವರ ಏಳ್ಗೆಗೆ ಕೂಡ ಅಷ್ಟೇ ಮುಖ್ಯವಾದುದು. ಆದ್ದರಿಂದ ಇಂಥ ಗಹನ ನಿರ್ಧಾರವನ್ನು ಬರ್ಲಿನ್ನಿನಲ್ಲಿರುವ ಹಿರಿಯಮಿತ್ರರೊಡನೆ ಸಮಾಲೋಚಿಸಿ ಕೈಗೊಳ್ಳಬೇಕು. ಐನ್‌ಸ್ಟೈನರಿಗೆ ಸರ್ಕಾರವೂ ವಿಜ್ಞಾನ ಸಂಸ್ಥೆಗಳೂ ಸಾಕಷ್ಟು ಹಣವನ್ನು ಇಡುಗಂಟಾಗಿ ಒದಗಿಸಿ ಇವರು ತಮ್ಮ ವಿಜ್ಞಾನ ಕಾರ್ಯಕಲಾಪಗಳನ್ನು ಮನಸೋಇಚ್ಛೆ ರೂಪಿಸಿ ನಿರ್ವಹಿಸಲು ಅನುವಾಗುವುದರಲ್ಲಿ ಸಂದೇಹವಿಲ್ಲ. ಆದರೂ ಹಣಗಳಿಕೆ ಇವರ ಉದ್ದೇಶವಾಗಿದ್ದರೆ ಅದನ್ನು ತಮಗೆ ತಿಳಿಸಬೇಕೆಂದು ಪ್ಲ್ಯಾಂಕರು ತಮ್ಮ ಪತ್ರದಲ್ಲಿ ನಿವೇದಿಸಿದ್ದರು.

ಪ್ಲ್ಯಾಂಕ್ ಮಹಾಶಯ ಐನ್‌ಸ್ಟೈನರಿಗೆ ಕಾಗದ ಬರೆದದ್ದು ಮಾತ್ರವಲ್ಲ, ತಮ್ಮ ಹಿಮಾಲಯ ಭವ್ಯ ವ್ಯಕ್ತಿತ್ವವನ್ನು ಒಡನೆ ಈ ಕರ್ತವ್ಯದಲ್ಲಿ ನಿಯೋಗಿಸಿದರು ಕೂಡ. ಪರಿಣಾಮವಾಗಿ ಜರ್ಮನಿಯ ವಿದ್ಯಾಸಚಿವರೇ ಐನ್‌ಸ್ಟೈನರಿಗೆ ಪತ್ರ ಬರೆದು ಇವರು ಜರ್ಮನಿಯಲ್ಲಿ ಉಳಿದುಕೊಳ್ಳಬೇಕೆಂದು ಸವಿನಯ ಪ್ರಾರ್ಥನೆ ಸಲ್ಲಿಸಿದರು.

ಸಚಿವರು ತಮ್ಮ ಕಾಗದದಲ್ಲಿ ಐನ್‌ಸ್ಟೈನರ 'ವಿರೋಧಿ'ಗಳ ಬೇಜವಾಬ್ದಾರಿಕೆಯ ನಡೆಯನ್ನು ಖಂಡಿಸಿದರು. ಅದು ಜರ್ಮನ್ ಪ್ರಜ್ಞೆಗೆ ಅಪಮಾನಕಾರಿ ಎಂದು ಪರಿತಪಿಸಿದರು. ಜರ್ಮನಿಯ ವರಿಷ್ಠ ವಿಜ್ಞಾನಿಗಳು ಐನ್‌ಸ್ಟೈನರ ಸಿದ್ಧಾಂತಗಳಿಗೂ ವ್ಯಕ್ತಿತ್ವಕ್ಕೂ ನೀಡಿರುವ ಸಹಜ ಗೌರವವನ್ನು ಅಭಿಮಾನದಿಂದ ಸ್ಮರಿಸಿದರು. ಐನ್‌ಸ್ಟೈನ್ ಜರ್ಮನಿಗೆ ತಂದು ಕೊಟ್ಟಿರುವ ಕೀರ್ತಿ ಪ್ರತಿಷ್ಠೆಗಳನ್ನು ತುಂಬು ಹೃದಯದಿಂದ ನೆನೆದರು. "ಆದ್ದರಿಂದ ಗೌರವಾನ್ವಿತ ಪ್ರಾಧ್ಯಾಪಕರೇ !

ವಿಜ್ಞಾನಪ್ರಪಂಚದ ಮೊದಲ ಸಾಲಿನ ರತ್ನಗಳ ಪೈಕಿ ಒಬ್ಬರೆಂದು ಹಿಂದಿನ ದಿನಗಳಲ್ಲಿಯೂ ಮುಂಬರಲಿರುವ ಎಲ್ಲ ದಿನಗಳಲ್ಲಿಯೂ ನಿಮ್ಮನ್ನು ಹೆಮ್ಮೆಯಿಂದ ಪರಿಗಣಿಸಿರುವ ಬರ್ಲಿನ್ನನ್ನು ನೀವು, ಈ ವಿಕೃತಮತಿಗಳ ಕೂರುಹಲ್ಲೆಗಳ ದುಷ್ಪರಿಣಾಮವಾಗಿ, ತೊರೆಯಲು ಯೋಚಿಸುತ್ತಿರುವಿರೆಂಬ ಸುದ್ದಿಗಳಲ್ಲಿ ಏನೂ ತಥ್ಯಾಂಶವಿಲ್ಲವೆಂಬ ಭರವಸೆಯನ್ನು ನನಗೆ ನಾನು ಕೊಟ್ಟುಕೊಂಡಿದ್ದೇನೆ ಎಂಬುದನ್ನು ನಿಮಗೆ ನಿವೇದಿಸಲು ನಿಮ್ಮ ಅನುಮತಿ ಕೋರುತ್ತೇನೆ."

ಸೆಪ್ಟೆಂಬರ್ ೧೨ರಂದು ಐನ್‌ಸ್ಟೈನ್ ಆತ್ಮೀಯ ಮಿತ್ರರೊಬ್ಬರಿಗೆ ಬರೆದ ಕಾಗದದಲ್ಲಿ ತಮ್ಮ ಮನದುಮ್ಮಳವನ್ನೂ ಚಿಂತನಧಾಟಿಯನ್ನೂ ತೋಡಿಕೊಂಡಿದ್ದಾರೆ : ". . . ನನ್ನ ಇಷ್ಟಾನಿಷ್ಟಗಳನ್ನು ಮಾತ್ರ ಅನುಸರಿಸುತ್ತ ನನಗೆ ತೋಚಿದಂತೆ ವರ್ತಿಸುವಷ್ಟು ಸರಳವಲ್ಲ ನನ್ನ ಸ್ಥಿತಿ. ಪ್ಲ್ಯಾಂಕ್ ಮಹಾಶಯ ನನಗೆ ಬರೆದ ಕಾಗದವನ್ನು ನಿಮಗೆ ಕಳುಹಿಸುತ್ತಿದ್ದೇನೆ. ಬರ್ಲಿನ್ನಿಗೆ ನಾನು ಬೆನ್ನು ಹಾಕುವುದು ಸಹಜವಾದದ್ದು ಮತ್ತು ಸರಿಯಾದದ್ದು ಎಂಬುದಾಗಿ ಪ್ಲ್ಯಾಂಕ್ ಪರಿಗಣಿಸಿದ ವಿನಾ ನಾನು ಹಾಗೆ ಮಾಡಲಾರೆನೆಂದು ಅವರಿಗೆ ಮಾರೋಲೆ ಬರೆದಿದ್ದೇನೆ. . . ನನ್ನ ರಾಜಕೀಯ ಆಶೋತ್ತರಗಳು ಈಡೇರುತ್ತಿರುವ ಪ್ರಕೃತ ಸನ್ನಿವೇಶದಲ್ಲಿ ನಾನು ಅನಾವಶ್ಯಕವಾಗಿ ಭಾಗಶಃ ಆದರೂ ನನ್ನ ಆರ್ಥಿಕ ಲಾಭಕ್ಕಾಗಿ ಜರ್ಮನಿಯನ್ನು ತೊರೆದು ಹೋಗುವುದು ನನ್ನನ್ನು ಪ್ರೇಮ ಆದರಗಳಿಂದ ಬೆಸೆದು ಬಂಧಿಸಿರುವ ನನ್ನ ಮಿತ್ರರಿಗೆ ಬಗೆದ ದ್ರೋಹವಾದೀತು. ಜರ್ಮನಿಯ ದುಗುಡ ದುಮ್ಮಾನಗಳ ಈ ಮುಹೂರ್ತದಲ್ಲಿ ನಾನು ಹೊರಹೊರಟುದಾದರೆ ಅದು ಈ ಮಿತ್ರರಿಗೆ ಅತಿವೇದನೆ ಉಂಟುಮಾಡದಿರದು. ಇವರು ಎಷ್ಟು ಒಲವನ್ನು ನನ್ನ ಮೇಲೆ ಮಳೆಗರೆಯುತ್ತಿದ್ದಾರೆ ಎಂಬುದರ ಅಂದಾಜೇ ನಿಮಗಾಗದು. ನನ್ನ ಮಿದುಳು ಸ್ರವಿಸಿಕೊಡಹುವ ಬೆವರ ಹನಿಗಳನ್ನು ಕಲೆ ಹಾಕುವುದು ಮಾತ್ರ ಈ ಎಲ್ಲರ ಉದ್ದೇಶವಲ್ಲ . . . ಇಲ್ಲಿ ಉಳಿದಿರುವುದು ಇನ್ನು ಅಸಾಧ್ಯವೆನ್ನುವ ಮಟ್ಟಕ್ಕೆ ಘಟನೆಗಳು ತಿರುಗಿದ್ದಾದರೆ ಆಗ ಮಾತ್ರ ನಾನು ಹೊರಡಬಲ್ಲೆ ಅಷ್ಟೆ. ಘಟನೆಗಳ ಇಂಥ ತಿರುವು ಸಂಭವಿಸಬಹುದು. ಆದರೆ ಇದು ಆದ ಹೊರತು ನಾನಿಲ್ಲಿಂದ ಹೊರಡುವುದು ಪ್ಲ್ಯಾಂಕರಿಗೆ ನೀಡಿರುವ ಗಂಭೀರ ವಾಗ್ದಾನದ ಹೇಯ ಭಂಗವೆನ್ನಿಸೀತು."

## ಬ್ಯಾಡ್ ನ್ಯಾಹೀಮಿನ ತಿರುಗಣೆ ಮಡು

ಲೆನಾರ್ಡನ ರಾಷ್ಟ್ರೀಯ ಭಾವೋನ್ಮತ್ತತೆ ಅನೇಕ ಘಟನೆಗಳಲ್ಲಿ ಪ್ರಕಟವಾಗುತ್ತಿತ್ತು. ಸುವಿಖ್ಯಾತ ರಶ್ಯನ್ ಭೌತವಿಜ್ಞಾನಿ ಎ. ಎಫ್. ಜೋಫ್ (೧೮೮೦-೧೯೬೫) ಯುದ್ಧಾನಂತರ ತಮ್ಮ ಜರ್ಮನ್ ಸಹವರ್ತಿಗಳ ಜೊತೆ ಸಂಪರ್ಕವೇರ್ಪಡಿಸಲೋಸ್ಕರ ಒಮ್ಮೆ ಜರ್ಮನಿ ಮೂಲಕ ಪಯಣಿಸುತ್ತಿದ್ದರು. ಆಗ ಹೈಡಬಲ್‌ಬರ್ಗಿನಲ್ಲಿದ್ದ ಲೆನಾರ್ಡ್ ಜೊತೆ ವೈಜ್ಞಾನಿಕ ವಿಷಯಗಳನ್ನು ಚರ್ಚಿಸಲೆಂದು ಇವರು ಅಲ್ಲಿಗೆ ಹೋದರು. ಲೆನಾರ್ಡ್ ಇದ್ದ ಸಂಸ್ಥೆಯ ಸೇವಕನನ್ನು ಕರೆದು ತಾವು ಬಂದಿರುವ ಸುದ್ದಿಯನ್ನು ಆತನಿಗೆ ಮುಟ್ಟಿಸಬೇಕೆಂದು ಹೇಳಿದರು. ಆ ಸೇವಕ ಹಿಂತಿರುಗಿ ಬಂದು ಜೋಫ್ ಅವರಿಗೆ ಹೀಗೆ ನುಡಿದ. "ತಮ್ಮ ಪಿತೃಭೂಮಿಯ ಶತ್ರುಗಳೊಡನೆ ಸಂಭಾಷಿಸುವುದಕ್ಕಿಂತ ಹೆಚ್ಚಿನ ಮುಖ್ಯ ಕಾರ್ಯವನ್ನು ಹರ್ ಗೆಹೀಮ್ರಾ ಲೆನಾರ್ಡ್ ನಿರ್ವಹಿಸಬೇಕಾಗಿದೆಯೆಂದು ನಿಮಗೆ ತಿಳಿಸಲು ನನಗೆ ಆಣತಿ ನೀಡಿದ್ದಾರೆ."

ಫಿಲಿಪ್ ಫ್ರ್ಯಾಂಕ್

ಜರ್ಮನಿ ದೇಶದ ಹೆಸ್ ರಾಜ್ಯದಲ್ಲಿ ಫ್ರ್ಯಾಂಕ್‌ಫರ್ಟ್ ನಗರವಿದೆ. ಇಲ್ಲಿಂದ ಸುಮಾರು ೩೨ ಕಿಮೀ ದೂರದಲ್ಲಿರುವ ಸುಂದರ ಪ್ರಶಾಂತ ಪಟ್ಟಣವೇ ಬ್ಯಾಡ್ ನ್ಯಾಹೀಮ್. ಪರ್ವತಗಳ

ತಪ್ಪಲಲ್ಲಿ, ವೃಕ್ಷಗಳ ಮಡಿಲಲ್ಲಿ, ಹಿಮಮಣಿಗಳ ಮಾಲೆಯಲ್ಲಿ ಅಡಗಿಕೊಂಡಿದ್ದ ನ್ಯಾಹೀಮ್ ಅಂದು ವೃದ್ಧರ ಆರೋಗ್ಯಧಾಮ, ನಿವೃತ್ತರ ಶಾಂತಾಗಾರ ಮತ್ತು ಚಿಂತನಶೀಲರ ತಪೋವನ ಎಂಬ ಖ್ಯಾತಿ ಗಳಿಸಿತ್ತು. ಆಗ ಈಗ ಅಲ್ಲಿ ನಡೆಯುತ್ತಿದ್ದ ವಿವಿಧ ಛಾಯೆಗಳ ಬುದ್ಧಿಜೀವಿಗಳ ಸಮ್ಮೇಳನಗಳು ಈ ಪಟ್ಟಣಕ್ಕೆ ನವಸ್ಪಂದನವನ್ನು ಕೊಡುವುದಿತ್ತು. ಇವಲ್ಲವಾದರೆ ಎಲ್ಲವೂ ಮೌನ, ಶಾಂತ ನಿಸರ್ಗನಿಯಮಿತ.

೧೯೨೦ ಸೆಪ್ಟೆಂಬರ್ ಕೊನೆಯ ವಾರ. ನ್ಯಾಹೀಮಿನ ನೈಸರ್ಗಿಕ ಹಸಿರುಡೆ ಕೃತಕ ಖಾಕಿ ಬಣ್ಣಕ್ಕೆ ತಿರುಗಿದಂತೆ ತೋರಿತು. ಇಡೀ ಪಟ್ಟಣವು ಹೊಸ ಅಲೆಯೊಂದರ ಬಿಗಿ ಹಿಡಿತಕ್ಕೆ ಸಿಕ್ಕಿಹಾಕಿ ಕೊಂಡಿದೆಯೊ ಎಂಬಂಥ ಅನುಭವ ಅಲ್ಲಿಯ ನೆಮ್ಮದಿ ಮಂದಿಗಾಯಿತು. ಸನೀನು ಸಜ್ಜಿತ ಬಂದೂಕುಧಾರಿ ಆರಕ್ಷಕ ಪಡೆ ನ್ಯಾಹೀಮ್ ಪರಿಸರಕ್ಕೆ ಯಾವುದೇ ತೆರನಾಗಿಯೂ ಹೊಂದದ ರೀತಿಯಲ್ಲಿ ಅಪಸ್ವರ ಮಿಡಿಯುತ್ತ, ಕವಾಯತಿ ಪ್ರದರ್ಶಿಸುತ್ತ, ಗಸ್ತು ತಿರುಗತೊಡಗಿತು. ಪಟ್ಟಣಕ್ಕೆ ಒದಗಿದ ಅಥವಾ ಒದಗಲಿದ್ದ ಗಂಡಾಂತರವಾದರೂ ಏನು ?

ಜರ್ಮನ್ ವಿಜ್ಞಾನಿಗಳ ಹಾಗೂ ಡಾಕ್ಟರುಗಳ ಅಸೋಸಿಯೇಷನ್ನಿನ ವಾರ್ಷಿಕಾಧಿವೇಶನ ಸೆಪ್ಟೆಂಬರ್ ೨೫ರಂದು ಅಲ್ಲಿ ಸಮಾವೇಶಗೊಳ್ಳುವುದರಲ್ಲಿತ್ತು. ಆ್ಯಂಟಿರಿಲೆಟಿವಿಟಿ ಕಂಪೆನಿ ಯವರು—ಪ್ರಚ್ಛನ್ನವಾಗಿ ಉಗ್ರಜರ್ಮನ್ ರಾಷ್ಟ್ರೀಯರು ಮತ್ತು ತೀವ್ರ ಯೆಹೂದ್ಯದ್ವೇಷಿ ಗಳು—ಈ ಅಧಿವೇಶನದಲ್ಲಿ ರಿಲೆಟಿವಿಟಿಯ ವಿರುದ್ಧ ಪೂರ್ಣ ಸಮರವನ್ನೇ ಹೂಡಲು ಸನ್ನದ್ಧ ರಾಗಿ ಬರುವರೆಂದು ವಿಜ್ಞಾನಿಗಳಿಗೆ ಗೊತ್ತಿತ್ತು. ಆದರೆ ಮಾನವ ವ್ಯವಹಾರಗಳ ಬಗ್ಗೆ ಇವರಿಗಿಂತ ಹೆಚ್ಚು ಕುಶಲಿಗಳಾಗಿದ್ದ ಸರ್ಕಾರದ ವರಿಷ್ಠರಿಗೆ ಇನ್ನೂ ಚೆನ್ನಾಗಿ ತಿಳಿದಿತ್ತು : ಸಾಮಾನ್ಯರಿಗೆ ಅರ್ಥವಾಗದ ಸಮೀಕರಣಗಳ, ಪ್ರತೀಕಗಳ ಹಾಗೂ ನಾಲಗೆ ತಿರುಚಕ ಪಾರಿಭಾಷಿಕ ಪದಗಳ ಸೀಮಿತ ಕ್ಷೇತ್ರಕ್ಕೆ ಈ ಸಮರ ಬಂಧಿತವಾಗಿರದು. ಎಲ್ಲರಿಗೂ ಬಲವಾಗಿಯೇ ಅರಿವಾಗುವ ಪೆಟ್ಟುಕುಟ್ಟುಗಳ ರಟ್ಟೆ ತ್ರಾಣ ಪ್ರದರ್ಶನಕ್ಕೂ ಇಳಿಯದಿರದು ಎಂಬುದಾಗಿ ಶಾಂತಿಪಾಲಕರು ಸಕಾರಣವಾಗಿಯೇ ಊಹಿಸಿದ್ದರು. ಯೆಹೂದ್ಯದ್ವೇಷದ ಕಾಳಮೇಘ ಆಗ ಅಷ್ಟು ದಟ್ಟವಾಗಿತ್ತು. ಎಂದೇ ಶಾಂತಿಪಾಲನೆಗಾಗಿ ಆರಕ್ಷಕ ಪಡೆ ನಿಯೋಜಿಸಲ್ಪಟ್ಟುದಾಗಿತ್ತು.

ಆ್ಯಂಟಿರಿಲೆಟಿವಿಟಿ ಕಂಪೆನಿಯವರ ಸಮರಸಿದ್ಧತೆ ವಿಜ್ಞಾನಿಯ ಕ್ರಮಬದ್ಧತೆಯಿಂದಲೂ ದ್ವೇಷ ಸಾಧಕನ ಜಿಗುಟುತನದಿಂದಲೂ ಕೂಡಿ ಪರಿಪೂರ್ಣವಾಗಿತ್ತು. ಕೆಲಮಂದಿ ಪ್ರತಿಷ್ಠಿತ ವಿಜ್ಞಾನಿ ಗಳನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು (ಪಕ್ಷಾಂತರಿಸಲು !) ಅವರಿಗೆ ಹಿರಿಮೊತ್ತದ ದುಡ್ಡಿನ ಎರೆ ಯನ್ನು ಒಡ್ಡಲಾಗಿತ್ತು. ಫೆಲಿಕ್ಸ್ ಏರೆನ್‌ಹಾಫ್ಟ್ (೧೮೭೯-೧೯೫೨) ಎಂಬ ವಿಜ್ಞಾನಿಗೆ ಬಂದಿದ್ದ ಇಂಥ ಆಮಿಷಪತ್ರವನ್ನು ಆತ ನೇರ ಐನ್‌ಸ್ಟೈನರಿಗೇ ತೋರಿಸಿ ಅವರನ್ನು ಎಚ್ಚರಗೊಳಿಸಿದ್ದ.

ಸೆಪ್ಟೆಂಬರ್ ೨೫. ಅಧಿವೇಶನದ ಸಭಾಂಗಣ ಕಿಕ್ಕಿರಿದು ತುಂಬಿ ಬಿರಿಯುತ್ತಿದೆ. ಉದ್ವೇಗ ಮತ್ತು ಆವೇಶಭರಿತ ವಾತಾವರಣ ಯಾವ ಗಳಿಗೆಗೂ ಕಿಡಿ ಪ್ರಜ್ವಲಿಸಿ ಸಿಡಿಯಬಲ್ಲ ಸ್ಥಿತಿಯ ಲ್ಲಿದೆ. ಮ್ಯಾಕ್ಸ್ ಪ್ಲ್ಯಾಂಕ್ ಅಧ್ಯಕ್ಷರಾಗಿ ಉಪಸ್ಥಿತರಿದ್ದಾರೆ. ಇಡೀ ಸಭೆಯನ್ನು ವ್ಯವಸ್ಥಿತವಾಗಿ ನಿಭಾಯಿಸುವ ಹೊಣೆ ಇವರದು. ಕ್ರಮವಿಧಿಯ ತಪಶೀಲನ್ನು ಇವರು ಎಚ್ಚರಿಕೆಯಿಂದ ತಯಾರಿಸಿದ್ದಾರೆ. ಗಣಿತಾತ್ಮಕವೂ ತಾಂತ್ರಿಕವೂ ಆದ ಪ್ರಬಂಧಗಳ ಮಂಡನೆಗೆ ಸಿಂಹ ಭಾಗ ದೇಯ ಸಲ್ಲುವಂತೆ ನೋಡಿಕೊಂಡಿದ್ದಾರೆ. ಹೀಗೆ ಮಾಡುವುದರ ಮೂಲಕ ಲೆನಾರ್ಡನ ಅವೈಜ್ಞಾ ನಿಕ ಟೀಕೆಗಳಿಗೆ ಮತ್ತು ವೈಯಕ್ತಿಕ ದೂಷಣೆಗೆ ಆದಷ್ಟು ಕಡಿಮೆ ಕಾಲಾವಕಾಶವನ್ನು ಒದಗಿಸ ಬೇಕೆಂಬುದೇ ಉದ್ದೇಶ.

ಶೂನ್ಯ ಮುಹೂರ್ತ ಬಂದೇ ಬಂತು. ಲೆನಾರ್ಡ್ ಎದ್ದು ಗುಡುಗಿದ, "ಈಥರಿನ ಗುರುತ್ವಾಕರ್ಷಣ ಸಿದ್ಧಾಂತವನ್ನು ಕುರಿತ ಚರ್ಚೆಯಲ್ಲಿ ಭಾಗವಹಿಸಲು ನನಗೆ ಪರಮ ಸಂತೋಷವಾಗುತ್ತದೆ. ಆದರೆ ಗುರುತ್ವಾಕರ್ಷಣ ಸಿದ್ಧಾಂತದಿಂದ ದ್ರವ್ಯರಾಶಿಗಳನ್ನು ಕುರಿತ ತೀರ್ಮಾನಗಳಿಗೆ ಸಾಗುವಾಗ ವಿಜ್ಞಾನಿಯ ಸರಳಜ್ಞಾನ ಈ ಸಿದ್ಧಾಂತಗಳನ್ನು ಸ್ವೀಕರಿಸಲು ಒಪ್ಪಲಾರದೆಂದು ನಾನು ಹೇಳಲೇಬೇಕು. ವೀಕ್ಷಣೆಗಳ ಫಲಿತಾಂಶವನ್ನು ಒಬ್ಬ ಸಮೀಕರಣಗಳ ಮೂಲಕ ನಿರೂಪಿಸಬಹುದು; ಅಥವಾ ಸಮೀಕರಣಗಳನ್ನು ಒಬ್ಬ ವೀಕ್ಷಣೆಗಳ ಮುನ್ನೆಲೆಯಲ್ಲಿ ವಿವರಿಸಬಹುದು.[೩೧] ಎರಡನೆಯ ರೀತಿಯನ್ನು ನಾನು ಬಲುಮಟ್ಟಿಗೆ ಅಂಗೀಕರಿಸುತ್ತೇನೆ. ಆದರೆ ಐನ್‌ಸ್ಟೈನರು ಮೊದಲಿನದನ್ನು ಬೆಂಬಲಿಸುತ್ತಾರೆ."

ಲೆನಾರ್ಡನ ಭಾಷಣದಲ್ಲಿ ಭಾವೋದ್ರೇಕವಿರಲಿಲ್ಲ—ಇದು ಅನಿರೀಕ್ಷಿತ : ವಿಜ್ಞಾನಿಯ ತಾರ್ಕಿಕ ವಾಗ್ಝರಿಯೂ ಇರಲಿಲ್ಲ—ಇದು ನಿರೀಕ್ಷಿತ. ಸಾಪೇಕ್ಷತಾಸಿದ್ಧಾಂತ ತಾರ್ಕಿಕವಾಗಿ ಅಸಮಂಜಸವೆಂದಾಗಲಿ ಪ್ರಾಯೋಗಿಕ ಫಲಿತಾಂಶಗಳ ಜೊತೆ ಸಂಗತವಾಗಿಲ್ಲವೆಂದಾಗಲಿ ಲೆನಾರ್ಡ್ ವಾದಿಸಿ ಸಾಧಿಸಲು ಪ್ರಯತ್ನಿಸಲೇ ಇಲ್ಲ. ಬದಲು ಅದು ವಸ್ತುಗಳನ್ನು ಸಾಮಾನ್ಯ ಪ್ರಜ್ಞೆಯು ಕಂಡು ವಿವರಿಸುವ ಧಾಟಿಗೆ ಪೂರ್ತಿ ವಿರುದ್ಧವಾದದ್ದು ಎಂಬುದು ಆತನ ವಾದದ ಸಾರ. ಇದರ ಜೊತೆಗೆ ಬೇಕಾದಷ್ಟು ಅನುಚಿತ ಅವೈಜ್ಞಾನಿಕ ಉಲ್ಲೇಖಗಳು ಸೇರಿಕೊಂಡಿದ್ದುವು. ಇವು ಮುಖ್ಯೋದ್ದೇಶವನ್ನು ಮರೆಮಾಡುವ ಹೊಗೆತೆರೆ (smoke screen) ಮಾತ್ರ. ಯೆಹೂದ್ಯದ್ವೇಷವನ್ನು ಪ್ರಸರಿಸುವುದೇ ಸ್ಪಷ್ಟ ಧೋರಣೆ.

ಸಭೆಯ ನಡವಳಿಕೆಗಳನ್ನು ಐನ್‌ಸ್ಟೈನ್ ಎಚ್ಚರಿಕೆಯಿಂದ ಆಲಿಸಿದರು. ಟಿಪ್ಪಣಿ ಬರೆದುಕೊಳ್ಳಲು ಲೆಕ್ಕಣಿಕೆಗಾಗಿ ಜೇಬುಗಳನ್ನು ಪರದಾಡಿದರೆ ಎಂದಿನಂತೆ ಅದು ಅಲ್ಲಿ ಇರಲಿಲ್ಲ ! ಪಕ್ಕದಲ್ಲಿ ಕುಳಿತಿದ್ದ ಮಿತ್ರ ವಿಜ್ಞಾನಿಯಿಂದ ಪೆನ್ಸಿಲನ್ನು ಎರವಲು ಇಸಕೊಂಡರು. (ಆದರೆ ಅದನ್ನು ಅವನಿಗೆ ಹಿಂತಿರುಗಿಸಲು ಎಂದಿನಂತೆ ಮರೆತರು ಎಂಬುದು ಅಲಾಯಿದ !)

ಲೆನಾರ್ಡನ ಪೂರ್ವವರ್ತನೆ ಮತ್ತು ಅದೇತಾನೇ ಆತ ಮಾಡಿ ಮುಗಿಸಿದ್ದ ಹೀನಾಯ ಭಾಷಣ ಐನ್‌ಸ್ಟೈನರ ಸಾತ್ತ್ವಿಕ ಕ್ರೋಧವನ್ನು ಬಡಿದೆಬ್ಬಿಸಿದುವು. ಆ ಗಳಿಗೆ ಅವರ ಸುಹಾಸಪ್ರಜ್ಞೆ ಮಾಯವಾಗಿ ಅವರು ಕಟೂಗ್ರ ಉತ್ತರ ಝಳಪಿಸಿದರು. ಆದರೆ ಕೊನೆಯಲ್ಲಿ ನಾಲ್ಕು ಸಮಾಧಾನದ ಮಾತು ನುಡಿದರು, "ಜನರಿಗೆ ಯಾವುದು ಸುಸ್ಪಷ್ಟವೆಂದು ಭಾಸವಾಗುತ್ತದೆ ಯಾವುದು ಆಗುವುದಿಲ್ಲ ಎಂಬ ತಾರತಮ್ಯಜ್ಞಾನ ಕಾಲಕಾಲಕ್ಕೆ ಬದಲಾಗುತ್ತದೆಂದು ಹೇಳಬಯಸುತ್ತೇನೆ. ನಿಜಕ್ಕೂ ಸುಸ್ಪಷ್ಟತೆಯನ್ನು ಕುರಿತ ಅಭಿಪ್ರಾಯಗಳು ಸ್ವಲ್ಪ ಮಟ್ಟಿಗೆ ಕಾಲಾವಲಂಬಿಯಾಗಿವೆ. ಭೌತವಿಜ್ಞಾನ ಅಮೂರ್ತ, ಅದು ಸುಸ್ಪಷ್ಟವಲ್ಲವೆಂದು ನನ್ನ ಭಾವನೆ. ಗೆಲಿಲಿಯನ್ ಬಲವಿಜ್ಞಾನವನ್ನು ಬೇರೆಬೇರೆ ಕಾಲಗಳಲ್ಲಿ ಯಾವ ಯಾವ ಸ್ಪಷ್ಟತೆಯಿಂದ ಅರ್ಥವಿಸಲಾಗಿದೆ ಎಂಬುದರತ್ತ ನೀವು ಲಕ್ಷ್ಯ ಹರಿಸಿದ್ದಾದರೆ ಯಾವುದು ಸ್ಪಷ್ಟ ಯಾವುದು ಸ್ಪಷ್ಟ ಅಲ್ಲ ಎಂಬುದರ ಬಗೆಗೆ ದೃಷ್ಟಿಕೋನಗಳು ಹೇಗೆ ಬದಲಾಗಿವೆಯೆಂಬುದು ತಿಳಿದೀತು."

ಇನ್ನೂ ಇಬ್ಬರು ಭಾಷಣ ಮಾಡಿದರು—ಒಬ್ಬ ಪರವಾಗಿ, ಇನ್ನೊಬ್ಬ ವಿರೋಧವಾಗಿ. ಸಭೆಯ ಒಂದು ಮೂಲೆಯಿಂದ ವ್ಯವಸ್ಥಿತವಾದ ಕೂಗು ಗದ್ದಲ ಕೇಳಿಬರುತ್ತಿದ್ದುವು. ಕ್ರಮೇಣ ಕಾವೇರುತ್ತಿತ್ತು. ಆದರೆ ಇಷ್ಟಾಗುವಾಗ ಸಾಪೇಕ್ಷತಾಸಿದ್ಧಾಂತದ ಚರ್ಚೆಗೆಂದು ಮೀಸಲಿಟ್ಟಿದ್ದ ಕಾಲ ಸಂದು ಹೋಗಿತ್ತು. ಪ್ಲ್ಯಾಂಕ್ ಮಹಾಶಯ ನಿಟ್ಟುಸಿರು ಬಿಟ್ಟು ಹಗುರಾಗಿ ತಮ್ಮ ವಿಶಿಷ್ಟ ಸುಹಾಸಮಯ ಧಾಟಿಯಲ್ಲಿ ಸಭೆಯನ್ನು ವಿಸರ್ಜಿಸಿದರು, "ಸಭೆಗೆ ಲಭ್ಯವಾಗಿರುವ ನಿರಪೇಕ್ಷ ಕಾಲಾವಧಿಯನ್ನು

ವಿಸ್ತರಿಸುವುದು ಸಾಪೇಕ್ಷತಾಸಿದ್ಧಾಂತಕ್ಕೆ ಇನ್ನೂ ಸಾಧ್ಯವಾಗಿಲ್ಲದಿರುವುದು ದುರ್ದೈವ. ಹೀಗಾಗಿ ನಮ್ಮ ಈ ಭೈರಕ್ಕು ಈಗ ಬರಖಾಸ್ತಾಗಿದೆ."

ಹೀಗೆ ಆ ಸಭೆ ಆ್ಯಂಟಿರಿಲೆಟಿವಿಟಿ ಕಂಪೆನಿಯವರ ದ್ವೇಷಾಸೂಯೆಗಳ ಜೀನಿಕುಪ್ಪಿಗೆ ತಾತ್ಕಾಲಿಕ ವಾಗಿ ಬಿರಡೆ ಜಡಿದಂತೆ ತೋರಿತು.

ಮುಂದಿನ ತಿಂಗಳು ಐನ್‌ಸ್ಟೈನ್ ಬರ್ಲಿನ್ನಿನಿಂದ ಮ್ಯಾಕ್ಸ್ ಬಾರ್ನರಿಗೆ ಬರೆದ ಕಾಗದದಲ್ಲಿ ಈ ಪ್ರಕರಣವನ್ನು ಉಲ್ಲೇಖಿಸಿದ್ದರು. "ಭವಿಷ್ಯಗರ್ಭದಲ್ಲಿ ಹುದುಗಿರುವುದೆಲ್ಲವನ್ನೂ ನಾನು ಸಂಬಂಧವಿಲ್ಲದ ಪ್ರೇಕ್ಷಕನಂತೆ ಅನುಭವಿಸುತ್ತ ಬಾಳುತ್ತಿದ್ದೇನೆ. ನ್ಯಾಹೀಮಿನಲ್ಲಿ ಆಗಗೊಟ್ಟಂತೆ ಇನ್ನೊಮ್ಮೆ ನಾನು ಉದ್ರೇಕಭಾವಕ್ಕೆ ಎಡೆಗೊಡುವುದಿಲ್ಲ. ದುಷ್ಟ ಸಂಘದಲ್ಲಿದ್ದುದರ ಮೂಲಕ ಹೇಗೆ ನಾನು ನನ್ನ ಸುಹಾಸ ಪ್ರಜ್ಞೆ ಕಳೆದುಕೊಂಡೆ ಎಂಬುದನ್ನು ನಿಜಕ್ಕೂ ಊಹಿಸಲಾರದವನಾಗಿದ್ದೇನೆ."

## ಜರ್ಮನ್ ಪೌರತ್ವ

> ಭವಿಷ್ಯ ಪೀಳಿಗೆಗಳು ಯೂರೋಪಿನ ಸಿದ್ಧಿ ಸಾಧನೆಗಳನ್ನು ಪುನರ್ವಿಮರ್ಶಿಸುವಾಗ ಆ ಜನ ನಮ್ಮ ಬಗ್ಗೆ, ಮೂರು ಶತಮಾನಗಳ ಕಾಲ ನಡೆಸಿದ ಅವ್ಯಾಹತ ಸಾಂಸ್ಕೃತಿಕ ಪ್ರಯತ್ನ ನಮ್ಮನ್ನು ಮತಾಂಧತೆಯ ತಮಸ್ಸಿನಿಂದ ತೊಡಗಿ ರಾಷ್ಟ್ರೀಯತೆಯ ಉನ್ಮಾದಕ್ಕಿಂತ ಆಚೆಗೆ ಕೊಂಡೊಯ್ಯಲು ಸಮರ್ಥವಾಗಲಿಲ್ಲ ಎಂದು ಹೇಳಲು ಎಡೆಮಾಡಿಕೊಡೋಣವೇ ? ನಾನೀಗ ಜರ್ಮನಿನಿವಾಸಿಯಾಗಿರುವುದರಿಂದಲೂ ನನಗೆ ಜರ್ಮನ್ ವಿಜ್ಞಾನಿಗಳೊಡನೆ ನಿಕಟ ಸಂಪರ್ಕವಿರುವುದರಿಂದಲೂ ಈ ಸನ್ನಿವೇಶವನ್ನು ಸುಧಾರಿಸಲು ನನ್ನ ಸಾಮರ್ಥ್ಯದ ಮಿತಿಯವರೆಗೆ ಶ್ರಮಿಸಲು ಸಿದ್ಧನಿದ್ದೇನೆ.
>
> ಐನ್‌ಸ್ಟೈನ್

ಬ್ಯಾಡ್ ನ್ಯಾಹೀಮಿನ ಸಭೆಯ ಕಾರ್ಯಕಲಾಪಗಳಿಗೆ ವಿಶೇಷವಾದ ಅಂತಾರಾಷ್ಟ್ರೀಯಪ್ರಸಿದ್ಧಿ ಲಭಿಸಿತು. ಹೀಗಾಗಿ ಸಾಮಾನ್ಯ ಜನರ ದೃಷ್ಟಿಯಲ್ಲಿ ಐನ್‌ಸ್ಟೈನ್ ಹಾಗೂ ಅವರ ಆವಿಷ್ಕಾರಗಳು ಅತಿ ನಿಗೂಢ ವಸ್ತುಗಳೆನ್ನಿಸಿದುವು. ಐನ್‌ಸ್ಟೈನರಲ್ಲಿ ಜನ ತಮ್ಮ ಬದುಕಿಗೆ ಸಾಂತ್ವನವೆರೆಯುವ ಋಷಿಯನ್ನು ಕಂಡರೆ ಸಾಪೇಕ್ಷತಾಸಿದ್ಧಾಂತದಲ್ಲಿ ಸಕಲಾರಿಷ್ಟನಿವಾರಕ ತಾರಕ ಮಂತ್ರವನ್ನೇ ಗುರುತಿಸಿದರು. ಇದ್ದದ್ದನ್ನೂ ಇಲ್ಲದ್ದನ್ನೂ ಸೇರಿಸಿ ಪತ್ರಿಕೆಗಳು ರಂಗು, ಮಸಾಲೆ ಮತ್ತು ಖಾರ ಸುದ್ದಿಗಳನ್ನು ಪ್ರಕಟಿಸಿದುವು : ಸಾಪೇಕ್ಷತಾಸಿದ್ಧಾಂತದ ಗಹನ ಲೋಕಪ್ರವೇಶಕ್ಕೆ ದಿಢೀರ್ ಸೂತ್ರಗಳನ್ನು ನೀಡಿದುವು.

ಜರ್ಮನ್ ಗಣರಾಜ್ಯದ ಪ್ರಭುಗಳಿಗೆ ಐನ್‌ಸ್ಟೈನರ ಹಿರಿಮೆ ಚೆನ್ನಾಗಿ ತಿಳಿದಿತ್ತು. ಈ ಮಹಾ ವಿಜ್ಞಾನಿಯ ಸಿದ್ಧಾಂತ ಜರ್ಮನಿಗೆ ಕೀರ್ತಿ ತಂದದ್ದು ಸರ್ಕಾರದ ನಾಯಕರಿಗೆ ಸಂತೋಷ ನೀಡಿತ್ತಾದರೂ ಅದರ ಬಹ್ವಂಶ ಇಂಗ್ಲಿಷರಿಗೆ ಸಂದುಹೋಯಿತಲ್ಲ ಎಂಬ ಹತಾಶೆಯೂ ಅದರಲ್ಲಿ ಬೆರೆತಿತ್ತು. ರಾಷ್ಟ್ರದ ವಿದ್ಯಾಸಚಿವರು, ಈ ಹಿಂದೆ ಹೇಳಿದಂತೆ, ಐನ್‌ಸ್ಟೈನರಿಗೆ ಕಾಗದ ಬರೆದು ಇವರು ಜರ್ಮನಿಯಲ್ಲಿಯೇ ಉಳಿದಿದ್ದು ತಮ್ಮ ಸಂಶೋಧನೆಗಳನ್ನೂ ಪ್ರಾಯೋಗಿಕ ಪರೀಕ್ಷೆಗಳನ್ನೂ ನಡೆಸುತ್ತಿರಬೇಕೆಂದು ಪ್ರಾರ್ಥಿಸಿದರು. ಇವುಗಳಿಗೆ ಬೇಕಾಗುವ ಆರ್ಥಿಕ ಹಾಗೂ ಇತರ ಸಹಾಯಗಳನ್ನು ಸರ್ಕಾರ ಒದಗಿಸುವುದಾಗಿ ಆಶ್ವಾಸಿಸಿದರು.

ವಿಜ್ಞಾನಚಿಂತನೆಯ ಪ್ರಮುಖ ಕೇಂದ್ರವಾಗಿ ಬರ್ಲಿನ್ನಿನ ಮಹತ್ತ್ವ ಎಷ್ಟು ಹಿರಿಯದೆಂಬುದು ಐನ್‌ಸ್ಟೈನರಿಗೆ ತಿಳಿದಿತ್ತು. ಜರ್ಮನಿಯ ಅಂತಾರಾಷ್ಟ್ರೀಯ ಪ್ರತಿಷ್ಠೆ ನಿಮ್ನ ಮಟ್ಟಕ್ಕೆ ಕುಸಿದಿದ್ದ

ಪ್ರಕೃತ ಸಂದರ್ಭದಲ್ಲಿ, ನೂತನ ಗಣರಾಜ್ಯವನ್ನು ಸರಿಯಾದ ಹಾದಿಯಲ್ಲಿ ಮುನ್ನಡೆಸಲು ಸರ್ಕಾರದ ವರಿಷ್ಠರು ಟೊಂಕಕಟ್ಟಿ ಕಾರ್ಯೋದ್ಯುಕ್ತರಾಗಿರುವ ವರ್ತಮಾನ ಸನ್ನಿವೇಶದಲ್ಲಿ, ಪ್ರಗತಿಶೀಲ ಚಿಂತನಕಾರರೆಲ್ಲರೂ ಸರ್ಕಾರಕ್ಕೆ ಬೆಂಬಲವಾಗಿ ದುಡಿಯಬೇಕೆಂದು ಐನ್‌ಸ್ಟೈನ್ ಪ್ರಾಮಾಣಿಕವಾಗಿ ಭಾವಿಸಿದರು. ಇವರು ಸಚಿವರಿಗೆ ಮಾರೋಲೆ ಬರೆಯುತ್ತ, "ನಾನು ನಿಕಟ ಮಾನವೀಯ ಮತ್ತು ವೈಜ್ಞಾನಿಕ ತಂತುಗಳಿಂದ ಬಂಧಿತನಾಗಿರುವ ನಗರವಾದ ಬರ್ಲಿನ್ನ"ನ್ನು ತೊರೆದು ಹೋಗುವುದಿಲ್ಲವಾಗಿ ಮಾತುಕೊಟ್ಟರು. ಇಷ್ಟೇ ಅಲ್ಲ. ಜರ್ಮನ್ ಪೌರತ್ವ ಪಡೆಯಲು ಅರ್ಜಿ ಸಲ್ಲಿಸಿದರು ಕೂಡ. ೧೯೨೦ ಜುಲೈ ೧ರಂದು ವೈಮರ್ (ಜರ್ಮನ್ ಗಣರಾಜ್ಯ) ಸಂವಿಧಾನ ರೀತ್ಯ ಇವರು ಜರ್ಮನ್ ಪ್ರಜೆ ಆದರು.

ಐನ್‌ಸ್ಟೈನರ ಔದಾರ್ಯಪೂರಿತ ವರ್ತನೆಯನ್ನು ಅರ್ಥಮಾಡಿಕೊಂಡು ಇವರಿಗೆ ಯೋಗ್ಯ ನೆಲೆಯನ್ನೂ ಹಿತಕರ ಪರಿಸರವನ್ನೂ ಒದಗಿಸಬಲ್ಲಂಥ ಅಂತಃಪ್ರಜ್ಞೆ ಜರ್ಮನಿಗಿತ್ತೇ ? ಇವರ ಭಾವನೆಗೆ ಗೌರವ ನೀಡುವಂಥ ಹಿರಿಮೆ ಆ ದೇಶಕ್ಕಿತ್ತೇ ? ಇವರನ್ನು ಜತನದಿಂದ ಕಾಪಾಡಿ ಕೊಂಡು ದೇಶಾಭಿವೃದ್ಧಿ ಸಾಧಿಸುವ ದೂರದೃಷ್ಟಿ ಅಲ್ಲಿತ್ತೇ ?

## ೬. ಯೆಹೂದ್ಯತ್ವದ ಅರಿವು

### ಸೀಮೋಲ್ಲಂಘನ

ಬಾಕ್ ಅಥವಾ ಮೊಝಾರ್ಟ್ ಇವರಿಬ್ಬರ ಪೈಕಿ ಯಾರು ನನಗೆ ಹೆಚ್ಚು ಅರ್ಥವೀಯುತ್ತಾರೆಂಬುದನ್ನು ಹೇಳುವುದು ಅಸಾಧ್ಯ. ಸಂಗೀತದಲ್ಲಿ ನಾನು ತರ್ಕವನ್ನು ನಿರೀಕ್ಷಿಸುವುದಿಲ್ಲ. ಒಟ್ಟಾರೆ ಹೇಳುವುದಾದರೆ ನಾನು ಅಂತರ್ಬೋಧೆಯಿಂದ ವರ್ತಿಸುತ್ತೇನೆಯೇ ವಿನಾ ಯಾವುದೇ ಸಿದ್ಧಾಂತದ ಅರಿವಿನಿಂದ ಅಲ್ಲ. ಯಾವುದೇ ಕೃತಿಯ ಆಂತರಿಕ ಏಕತೆಯನ್ನು [ಶಿಲ್ಪ] ಅಂತರ್ಬೋಧೆಯಿಂದ ಗ್ರಹಿಸಲಾಗದಿದ್ದರೆ ಅದು ನನಗೆ ಪ್ರಿಯವಾಗದು.

ಐನ್‌ಸ್ಟೈನ್

"ಪ್ರತಿಯೊಬ್ಬ ಮನುಷ್ಯನನ್ನೂ ಆತ ಒಬ್ಬ ವ್ಯಕ್ತಿಯೆಂದು ಗೌರವಿಸಬೇಕು. ಯಾರಿಗೂ ಮೂರ್ತಿಪೂಜೆ ಸಲ್ಲಿಸಬಾರದು. ನನ್ನ ಯಾವುದೇ ತಪ್ಪು ಯಾ ಒಪ್ಪು ಇಲ್ಲದಿದ್ದರೂ ನಾನೇ ನನ್ನ ಬಾಂಧವರಿಂದ ಅತಿಯಾದ ಮೆಚ್ಚುಗೆಗೂ ಗೌರವಕ್ಕೂ ಪಾತ್ರನಾಗಿರುವುದು ವಿಧಿಯ ಅಣಕವೇ ಸೈ. ಅಲ್ಪಸಾಮರ್ಥ್ಯವಂತನಾದ ನಾನು ನಿರಂತರ ಪರಿಶ್ರಮದಿಂದ ಸಾಧಿಸಿರುವ ಒಂದೆರಡು ಸಂಗತಿಗಳನ್ನು ಅರ್ಥವಿಸಬೇಕೆಂಬ ಜನರ ಹಂಬಲವೇ—ಬಹುಮಂದಿಗೆ ಇದು ಸಿದ್ಧಿಸದು—ಪ್ರಾಯಶಃ ಇದರ ಕಾರಣವಾಗಿರಬಹುದು," ಐನ್‌ಸ್ಟೈನ್ ನುಡಿ.

ಐನ್‌ಸ್ಟೈನರನ್ನು ಕುರಿತ ಈ ಅತಿಯಾದ ಮೆಚ್ಚುಗೆ ಮತ್ತು ಗೌರವದ ಫಲವಾಗಿ ಇವರನ್ನು ತಮ್ಮಲ್ಲಿಗೆ ಬರಮಾಡಿಕೊಳ್ಳಬೇಕು, ಇವರ ಭಾಷಣಗಳನ್ನು ಆಲಿಸಬೇಕು ಎಂದು ಪ್ರಪಂಚಾದ್ಯಂತ ವಿಜ್ಞಾನಸಂಸ್ಥೆಗಳೂ ಸರ್ಕಾರಗಳೂ ಆಸೆಪಟ್ಟುವು. ಆಮಂತ್ರಣಗಳ ಹಿಮಾಶ್ಮ ಪ್ರವಾಹವೇ ಐನ್‌ಸ್ಟೈನರನ್ನು ಪರಿವೇಷ್ಟಿಸಿತು. ಬರ್ಲಿನ್ನನ್ನೂ ಅಲ್ಲಿಯ ವಿಜ್ಞಾನ ಹವೆಯನ್ನೂ ಇವರೆಷ್ಟು ಪ್ರೀತಿಸುತ್ತಿದ್ದರೂ ಅಲ್ಲಿ ಸಂಭವಿಸಿದ ದ್ವೇಷಪೂರಿತ ಘಟನೆಗಳು ಇವರ ಮನಸ್ಸಿಗೆ ಕಡು ಬಿಸಿ ಬರೆ ಕಾಸಿದ್ದುವು. ಈ ಗಾಯ ಮಾಯಲು ಕೈಗೊಳ್ಳಬಹುದಾಗಿದ್ದ ಒಂದು ಶಮನೋಪಕ್ರಮ ವೆಂದರೆ ಒಂದಷ್ಟು ಕಾಲ ವಿದೇಶಯಾತ್ರೆ ಹೋಗುವುದು. ಅಲ್ಲಿಯ ಹೊಸ ಜನ ನೆಲ ಹವೆ ತಮ್ಮ

ಮನಸ್ಸಿಗೆ ಚೇತೋಹಾರಿಯಾಗಬಹುದೆಂದು ಇವರು ಭಾವಿಸಿದರು. ಇವರ ಲೌಕಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸುತ್ತಿದ್ದ ಎಲ್ಸಾರಿಗೂ ಇದು ಪ್ರಿಯವಾಯಿತು.

೧೯೨೦ ಮೇಯಲ್ಲಿ ಐನ್‌ಸ್ಟೈನ್ ಹಾಲೆಂಡಿಗೆ ಹೋದರು. ಅಲ್ಲಿಯ ಲೈಡನ್ ವಿಶ್ವವಿದ್ಯಾಲಯದಲ್ಲಿ ಸಾವಿರದನಾನೂರು ವಿದ್ಯಾರ್ಥಿಗಳ ಬೃಹತ್ಸಭೆಯ ಮುಂದೆ ಇವರು "ಈಥರ್ ಮತ್ತು ಸಾಪೇಕ್ಷತಾಸಿದ್ಧಾಂತ" ಎಂಬ ವಿಷಯ ಕುರಿತು ಭಾಷಣವಿತ್ತರು. ಯಾವ 'ಈಥರ್' ಪರಿಕಲ್ಪನೆಯನ್ನು ಇವರು ಬೆಳಕಿನ ಚಲನಮಾಧ್ಯಮದ ಅಂತಸ್ತಿನಿಂದ ಉಚ್ಚಾಟನೆಗೊಳಿಸಿದ್ದರೋ ಅದೇ ಪದ 'ಈಥರ'ನ್ನು ಈಗ ವಕ್ರಾಕಾಶವನ್ನು (curved space) ನಿರ್ದೇಶಿಸಲು ಬಳಸಬಹುದೆಂದು ಸೂಚಿಸಿದರು. ಮೊದಲಾಗಲಿ ಮತ್ತಾಗಲಿ ಸಾಪೇಕ್ಷತಾಸಿದ್ಧಾಂತದ, ಇಲ್ಲವೇ ಈಥರ್ ಪರಿಕಲ್ಪನೆಯ ಬಗ್ಗೆ ಸ್ಪಷ್ಟ ಚಿತ್ರವಿರದಿದ್ದ ಅರ್ಧಜ್ಞಾನಿಗಳು ಐನ್‌ಸ್ಟೈನರ ಸೂಕ್ಷ್ಮತರ್ಕ, ಅರ್ಥವ್ಯತ್ಯಾಸ ಮುಂತಾದ ನವುರು ಕುಸುರುಗಳನ್ನು ತಿಳಿಯದೆ, "ಇವರು ಒಮ್ಮೆ ಈಥರ್ ಇಲ್ಲವೆನ್ನುತ್ತಾರೆ, ಒಮ್ಮೆ ಈಥರ್ ಇದೆ ಎನ್ನುತ್ತಾರೆ. ಇವರಿಗೇ ಸ್ಪಷ್ಟ ಕಲ್ಪನೆ ಇಲ್ಲ. ಆದ್ದರಿಂದ ಇವರನ್ನು ನಾವು ಗಂಭೀರವಾಗಿ ಏನೂ ಪರಿಗಣಿಸಬೇಕಾಗಿಲ್ಲ," ಎಂದು ಗೊಣಗಿದರು.

೧೯೨೧ರ ತರುಣದಲ್ಲಿ, ಆ ವೇಳೆಗೆ ಸ್ವತಂತ್ರ ಗಣರಾಜ್ಯವಾಗಿದ್ದ, ಚೆಕೊಸ್ಲೊವಾಕಿಯಾದ ರಾಜಧಾನಿ ಪ್ರಾಹಾಕ್ಕೆ ತೆರಳಿದರು. ಅಲ್ಲಿ ಫಿಲಿಪ್ ಫ್ರ್ಯಾಂಕ್ (೧೮೮೪-೧೯೬೬) ಇವರ ಆತಿಥೇಯ. ಪ್ರಾಹಾವನ್ನು ಐನ್‌ಸ್ಟೈನ್ ಬಿಟ್ಟು ಬರ್ಲಿನ್ನಿಗೆ ಹೊಸ ಹುದ್ದೆ ಹಿಡಿಯಲು ಹೋದಾಗ ಇವರ ಸ್ಥಾನವನ್ನು ಭರ್ತಿಮಾಡಿದ ಪ್ರಾಧ್ಯಾಪಕರೇ ಫ್ರ್ಯಾಂಕ್. ಇವರು ಐನ್‌ಸ್ಟೈನರ ಜೀವನಚರಿತ್ರಕಾರ ಕೂಡ ಹೌದು.

ಈಗ ಜಗದ್ವಿಖ್ಯಾತರಾಗಿ ಆಗಮಿಸುತ್ತಿರುವ ಐನ್‌ಸ್ಟೈನರ ವಸತಿಯನ್ನು ಯಾವುದಾದರೂ ಹೊಟೇಲಿನಲ್ಲಿ ಏರ್ಪಡಿಸಿದುದಾದರೆ ಇವರನ್ನು ಮುತ್ತುವ ವಂದಿಮಾಗಧರಿಂದ, ವೈಚಿತ್ರ್ಯ ಶೋಧಕರಿಂದ ಮತ್ತು ಪತ್ರಿಕಾ ಜಿಗಣೆಗಳಿಂದ ಇವರಿಗೆ ಇನಿತೂ ಏಕಾಂತತೆ ದೊರೆಯದೆಂದು ಮನಗಂಡ ಫ್ರ್ಯಾಂಕ್ ಇವರ ವಾಸ್ತವ್ಯವನ್ನು ತಮ್ಮ ಬಿಡಾರದಲ್ಲಿಯೆ ಏರ್ಪಡಿಸಿದರು. ಅದೇ ಕೆಲವು ತಿಂಗಳ ಹಿಂದೆ ಫ್ರ್ಯಾಂಕ್ ಮದುವೆಯಾಗಿದ್ದರು. ಯುದ್ಧಾನಂತರದ ದಿನಗಳ ಕಠಿಣ ಗೃಹಸಮಸ್ಯೆ ಪ್ರಾಹಾದಲ್ಲಿ ತೀವ್ರವಾಗಿತ್ತು. ಹೀಗಾಗಿ ಫ್ರ್ಯಾಂಕ್ ದಂಪತಿಗಳು ಪ್ರಯೋಗ ಮಂದಿರದ ಎರಡು ಕೊಠಡಿಗಳಲ್ಲಿ ತಮ್ಮ ಸಂಸಾರ ಹೂಡಿದ್ದರು. ಅಡುಗೆ ಮಾಡಲು ಇವರಿಗಿದ್ದ ಒಲೆಯೆಂದರೆ ಬುನ್ಸೆನ್ ಜ್ವಾಲಕ ಮಾತ್ರ (Bunsen burner; ಪ್ರಯೋಗಮಂದಿರಗಳಲ್ಲಿ ಇಂದಿಗೂ ಬಳಕೆಯಲ್ಲಿದೆ ; ಅನಿಲಪೂರೈಕೆಯಿಂದ ಉರಿಯುವ 'ಬುಡ್ಡಿ ದೀಪ').

ಫ್ರ್ಯಾಂಕ್ ಬರೆದಿದ್ದಾರೆ, "ಕೊಠಡಿಯಲ್ಲಿಯ ಸೋಫಾದ ಮೇಲೆ ಅವರು ಮಲಗಬೇಕೆಂದು ನಾನು ಸೂಚಿಸಿದೆ. ಅಂಥ ಸುವಿಖ್ಯಾತ ವ್ಯಕ್ತಿಗೆ ಇದು ಸರಿಯಾದ ಏರ್ಪಾಡಾಗಿರಲಿಲ್ಲ, ನಿಜ. ಆದರೆ ಸರಳಜೀವನಕ್ಕೂ ಸಾಮಾಜಿಕ ಸಂಪ್ರದಾಯಗಳಿಗೆ ಬದ್ಧವಾಗದ ಸಂದರ್ಭಗಳಿಗೂ ಒಗ್ಗಿಕೊಳ್ಳಬಲ್ಲ ಅವರಿಗೆ ಇದು ತೃಪ್ತಿ ನೀಡಿತು . . . ಮರುಮುಂಜಾನೆ 'ಸುಖನಿದ್ರೆಯಾಯಿತೇ?' ಎಂದು ಕುಶಲ ಪ್ರಶ್ನೆ ಕೇಳಿದೆ. 'ಓಹೋ! ನಾನು ಇಗರ್ಜಿಯಲ್ಲಿದ್ದೇನೋ ಎಂಬ ಭಾವನೆ ಬಂತು. ಇಂಥ ಪ್ರಶಾಂತ ಕೊಠಡಿಯಲ್ಲಿ ನಿದ್ರೆ ತಿಳಿದೇಳುವುದೊಂದು ಅದ್ಭುತ ಅನುಭವ' ಎಂದರು."

ಮರುಹಗಲು ಐನ್‌ಸ್ಟೈನ್ ಪ್ರಾಹಾ ನಗರದಲ್ಲಿದ್ದ ತಮ್ಮ ಹಳೆಯ ಸ್ನೇಹಿತರನ್ನು ಸಂದರ್ಶಿಸಿದರು. ಫ್ರ್ಯಾಂಕ್ ಇವರ ಜೊತೆಗಿದ್ದರು. ಮಧ್ಯಾಹ್ನದ ಊಟಕ್ಕೆ ಮನೆಗೆ (ಪ್ರಯೋಗ ಮಂದಿರಕ್ಕೆ) ಮರಳುತ್ತಿದ್ದಾಗ, "ನಾವೇನಾದರೂ 'ತರಕಾರಿ'ಯನ್ನು ಕೊಂಡು ಹೋಗೋಣ. ಇಲ್ಲವಾದರೆ

ನಿಮ್ಮ ಹೆಂಡತಿಗೆ ವಿಪರೀತ ತ್ರಾಸವಾದೀತು," ಎಂದರು ಐನ್‌ಸ್ಟೈನ್.

ಕರುವಿನ ಯಕೃತ್ತು ಖರೀದಿಸಿ ತಂದು ಅದನ್ನು ಬೇಯಿಸಲು ಶ್ರೀಮತಿ ಫ್ರ್ಯಾಂಕರಿಗೆ ಕೊಟ್ಟದ್ದಾಯಿತು. ಇಬ್ಬರು ವಿಜ್ಞಾನಿಗಳೂ ಯಥಾ ಪ್ರಕಾರ ಮಾತಿನಲ್ಲಿ ಲೋಕ ಮರೆತರು. ಅವರ ವಾದ ವಿವಾದಗಳು ತಾರಸ್ಥಾಯಿಯಲ್ಲಿ ಸಾಗಿದಂತೆ, ಅದನ್ನು ಮೀರಿಸುವ ಧಾಟಿಯಲ್ಲಿ ಬುನ್ಸೆನ್ ಜ್ವಾಲಕದ ಮೇಲಿದ್ದ ಪಾತ್ರೆಯಿಂದ ಯಕೃತ್ತು ನೀರಿನಲ್ಲಿ ಕುದಿಯುವ ಕೊತಕೊತ ಸದ್ದು ಕೇಳಿಸಿತು. ಒಡನೆ ಐನ್‌ಸ್ಟೈನ್ ಮಾತು ನಿಲ್ಲಿಸಿ ಶ್ರೀಮತಿ ಫ್ರ್ಯಾಂಕರನ್ನು ಕುರಿತು ಹೇಳಿದರು, "ಅದೇನು ನೀವು ಮಾಡುತ್ತಿರುವುದು ? ಯಕೃತ್ತನ್ನು ನೀರಿನಲ್ಲಿ ಕುದಿಸುತ್ತಿರುವಿರಾ ? ನಿಮಗೆ ಗೊತ್ತಿಲ್ಲವೇನು ನೀರಿನ ಕುದಿಬಿಂದು (boiling point) ಬಲು ಕಡಿಮೆ, ಅದರಲ್ಲಿ ಯಕೃತ್ತನ್ನು ಬೇಯಿಸಿ ಕರಿಯಲು ಸಾಧ್ಯವಾಗದೆಂದು ?"

ವಿವಾಹಪೂರ್ವದಲ್ಲಿ ಕಾಲೇಜ್ ವಿದ್ಯಾರ್ಥಿನಿ ಆಗಿದ್ದ ಶ್ರೀಮತಿ ಫ್ರ್ಯಾಂಕರಿಗೆ ಅಡುಗೆಯ ಹಿಕಮತ್ತುಗಳು ಗೊತ್ತಿರಲಿಲ್ಲ. ಬೇಳೆಯನ್ನು ಬೇಯಿಸಬಲ್ಲ ನೀರು ಯಕೃತ್ತನ್ನು ಕೂಡ ಬೇಯಿಸಬಲ್ಲುದೆಂದು ಅವರು ಭಾವಿಸಿದ್ದರು. ಸಾಪೇಕ್ಷತಾಸಿದ್ಧಾಂತದ ಕರ್ತೃ ಪಾಕಸಿದ್ಧಾಂತದ ಸೂಕ್ಷ್ಮವನ್ನು ಶ್ರೀಮತಿ ಫ್ರ್ಯಾಂಕರಿಗೆ ವಿವರಿಸಿದರು. "ನೀರಿಗಿಂತ ಹಿರಿ ಕುದಿಬಿಂದುವಿರುವ ಬೆಣ್ಣೆ ಅಥವಾ ಕೊಬ್ಬಿನ ಮಾಧ್ಯಮದಲ್ಲಿ ಯಕೃತ್ತನ್ನು ಕರಿಯಬೇಕು, ಗೊತ್ತಾಯಿತೇ ?"

ಐನ್‌ಸ್ಟೈನರ ಸಕಾಲಿಕ ಎಚ್ಚರಿಕೆ ಅಲ್ಲವಾಗಿದ್ದರೆ ಅವರ ಅಂದಿನ ರಸದೂಟ ಕರಿಕೂಟವಾಗುತ್ತಿತ್ತೊ ಏನೊ ! ವಿಜ್ಞಾನದ ವಿದ್ಯಾರ್ಥಿನಿ ಆಗಿರದಿದ್ದ ಶ್ರೀಮತಿ ಫ್ರ್ಯಾಂಕರ ನಿಘಂಟಿನಲ್ಲಿ ಅಂದಿನಿಂದ ಐನ್‌ಸ್ಟೈನ್ ಸಿದ್ಧಾಂತವೆಂದರೆ[೩೨] ಕರುವಿನ ಯಕೃತ್ತನ್ನು ಕರಿಯುವ ಕುದಿಬಿಂದು ಸಿದ್ಧಾಂತವೆಂಬ ನೂತನ ಆಯಾಮ ಪಡೆಯಿತು !

ಅಂದು ಸಂಜೆ ಐನ್‌ಸ್ಟೈನರಿಂದ ಸಾರ್ವಜನಿಕ ಭಾಷಣವಿತ್ತು. ಇದಾದ ತರುವಾಯ ಬಹು ಮಂದಿ ಆಢ್ಯರು ಇವರ ಜೊತೆ 'ವಿನೋದ ಸಂಧ್ಯೆ'ಯ ವಿಹಾರಕ್ಕಾಗಿ ಅಲ್ಲೇ ಉಳಿದರು. ಆಶು ಭಾಷಣಗಳು, ಹಾಡುಗಬ್ಬಗಳು, ನಗೆಚಮತ್ಕಾರಗಳು ಮುಂತಾದವು ಆ ಸ್ನೇಹ ಸಮ್ಮಿಲನಕ್ಕೆ ವಿಶೇಷ ಕಳೆ ತಂದುಕೊಟ್ಟವು. "ಏನಾದರೂ ಮಾತಾಡಿ," ಎಂದು ಮುಖ್ಯ ಅತಿಥಿಗಳನ್ನು ಎಲ್ಲ ಶ್ರೋತೃಗಳೂ ಒತ್ತಾಯಿಸಿದರು.

"ನಾನು ಭಾಷಣ ಬೀರುವುದಕ್ಕಿಂತಲೂ ಪಿಟೀಲು ಬಾರಿಸಿದರೆ ಅದು ನಿಮಗೆ ಹೆಚ್ಚು ಪ್ರಿಯವಾದೀತೆಂದು ಭಾವಿಸಿದ್ದೇನೆ," ಎಂದು ಹೇಳಿ ಪಿಟೀಲುವಾದನ ಶುರುಮಾಡಿಯೇಬಿಟ್ಟರು ಈ ಮಾಯಾಲೋಕದ ಕಿಂದರಿ ಜೋಗಿ !

ಗ್ರಹ ನಕ್ಷತ್ರಗಳ ಲಯಬದ್ಧ ಚಲನೆಯನ್ನು ಗೋಳಗಳ ಸಂಗೀತವೆಂಬುದಾಗಿ ವರ್ಣಿಸುವುದುಂಟು. ಕಿವಿಗೆ ಕೇಳದ ಆದರೆ ತೆರೆದ ಕಂಗಳಿಗೆ ಕಾಣುವ ಈ 'ಸಂಗೀತ'ಕ್ಕೆ ದನಿಗೂಡಿಸಿದರು ಐನ್‌ಸ್ಟೈನ್. "ಐನ್‌ಸ್ಟೈನರಿಗೆ ತಮ್ಮ ಭಾವನೆಯನ್ನು ಈ ತೆರನಾಗಿ ಅಭಿವ್ಯಕ್ತಿಸುವುದು ಸುಲಭವಾಗಿತ್ತು. ತಮ್ಮ ಸರಳ ಮತ್ತು ಖಚಿತ ರೀತಿಯಲ್ಲಿ ಭಾವಪೂರ್ಣವಾಗಿ ಅವರು ಮೊಝಾರ್ಟನ ಒಂದು ಸೊನಾಟವನ್ನು ನುಡಿಸಿದರು. ವಿಶ್ವಸಂಕೀರ್ಣತೆಯ ಬಗ್ಗೆ ಅವರಿಗಿದ್ದ ಗಾಢ ಅನುಕಂಪವನ್ನೂ ಅದೇ ವೇಳೆ ಅದನ್ನು ಸರಳಸೂತ್ರಗಳಲ್ಲಿ ನಿರೂಪಿಸಬಹುದಾದ ಸಾಧ್ಯತೆ ಒದಗಿಸುವ ಬೌದ್ಧಿಕ ಆನಂದವನ್ನೂ ಅವರ ವಾದನ ಸೆರೆಹಿಡಿದಿತ್ತು."

ಪ್ರಾಹಾದಿಂದ ಮುಂದಿನ ಮಜಲು ಆಸ್ಟ್ರಿಯಾ ದೇಶದ ವಿಯೆನ್ನಾ ನಗರ. ಫೆಲಿಕ್ಸ್ ಏರೆನ್‌ಹಾಫ್ಟ್ ಇಲ್ಲಿ ಐನ್‌ಸ್ಟೈನರ ಆತಿಥೇಯ. ಇವರು ಪ್ರಾಯೋಗಿಕ ವಿಜ್ಞಾನಿ, ಐನ್‌ಸ್ಟೈನರ ಆಪ್ತ

ಮಿತ್ರ. ಈ ಭೇಟಿಯ ವೈಖರಿಯನ್ನು ಏರೆನ್‌ಹಾಫ್ಟ್ ಸೊಗಸಾಗಿ ವರ್ಣಿಸಿದ್ದಾರೆ :

"ಐನ್‌ಸ್ಟೈನ್ ನನ್ನ ಮನೆಯಲ್ಲಿ ಉಳಿದುಕೊಂಡಿದ್ದರು. ಅವರು ವಿಯೆನ್ನಾಕ್ಕೆ ಬಂದಾಗ ಎರಡು ಕೋಟು, ಎರಡು ಷರಾಯಿ, ಎರಡು ಬಿಳಿ ಷರಟು ಮತ್ತು ಒಂದೇ ಒಂದು ಬಿಳಿ ಕಾಲರ್ ಇಷ್ಟನ್ನು ತಮ್ಮೊಡನೆ ತಂದಿದ್ದರು. 'ಮನೆಯಿಂದ ತರಲು ಏನನ್ನಾದರೂ ಮರೆತು ಬಂದಿರುವಿರಾ ?' ಎಂಬುದಾಗಿ ನನ್ನ ಪತ್ನಿ ಕೇಳಿದಾಗ ಅವರು 'ಇಲ್ಲ'ವೆಂದರು. ಆದರೆ ನಿಜಕ್ಕೂ ಅವರು ಚಪ್ಪಲಿಗಳನ್ನು ತಂದಿರಲಿಲ್ಲ, ಸಾಬೂನು ಸರಂಜಾಮುಗಳನ್ನೂ ತಂದಿರಲಿಲ್ಲವೆಂದು ಇವಳಿಗೆ ಗೊತ್ತಾಯಿತು. ಹೊಸ ಕಾಲರುಗಳನ್ನೂ ಒಳಗೊಂಡಂತೆ ಈ ಎಲ್ಲ ಪರಿಕರಗಳನ್ನೂ ಇವಳು ಅವರಿಗೆ ಒದಗಿಸಿಕೊಟ್ಟಳು. ಆದರೆ ಮುಂದೆ ಅವರನ್ನು ಸಭಾಂಗಣದಲ್ಲಿ ಆ ಮುಂಜಾನೆ ಕಂಡಾಗ ಅವರು ಬರಿಗಾಲಿನಲ್ಲಿಯೇ ಇದ್ದರು ! 'ನಿಮಗೆ ಚಪ್ಪಲಿಗಳ ಆವಶ್ಯಕತೆ ಇಲ್ಲವೇ ?' ಎಂದು ಪ್ರಶ್ನಿಸಿದರು. 'ಇಲ್ಲ ಅವು ವೃಥಾ ಹೊರೆ !' ಎಂದರು. ಅವರು ಧರಿಸಿದ್ದ ಷರಾಯಿ ತುಂಬ ನೆರಿನೆರಿಯಾಗಿ ಮುದುಡಿಕೊಂಡಿದ್ದುದನ್ನು ಕಂಡ ನನ್ನ ಹೆಂಡತಿ ಇಸ್ತ್ರಿ ಹಾಕಿದ ಮೀಸಲು ಷರಾಯಿಯನ್ನು ಸಿದ್ಧಪಡಿಸಿಟ್ಟಿದ್ದಳು. ಇದನ್ನವರು ತೊಟ್ಟು ಸುಟಿಯಾಗಿ ಮುಂದಿನ ಭಾಷಣಸಭೆಗೆ ಹೋಗಬೇಕೆಂಬುದು ಇವಳ ಇಂಗಿತ. ಆದರೆ ಅವರು ವೇದಿಕೆ ಏರಿದಾಗ ಇವಳಿಗೆ ಕಂಡದ್ದೇನು ? ಅದೇ ಹಳೆಯ ನೆರಿಗಟ್ಟಿದ ದೊಗಲೆ ಸುರಾಲಿನಿಂದ ಅಲಂಕೃತರಾಗಿದ್ದ ಐನ್‌ಸ್ಟೈನ್ !"

ಉಡುಗೆ ತೊಡಿಗೆ ಮುಂತಾದ ಹಿರಿಕಿರಿ ಬಾಹ್ಯ ಪರಿಕರಗಳು ಇವರಲ್ಲಿ ವಿಚಿತ್ರ ಅನುಭವಗಳನ್ನು ಪ್ರೇರಿಸುತ್ತಿದ್ದುವು. ಕನಿಷ್ಠ ಆವಶ್ಯಕತೆಗಳ ವಿನಾ ಉಳಿದೆಲ್ಲವೂ ಹೆಣಭಾರಗಳೆಂಬಂತೆ ಇವರು ಅವುಗಳಿಂದ ದೂರವಿರುತ್ತಿದ್ದರು : "ಪ್ರಪಂಚದ ಇತರ ಮಂದಿ ದಂತಕೂರ್ಚ, ಹಲ್ಲುಸರಿ, ಕಾಲರ್, ಇಜಾರು, ನಾಜೂಕು ದುಸ್ತು ಮುಂತಾದವುಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಾದರೆ ಸರಿ, ಅದು ಅವರ ಗ್ರಹಚಾರ. ನನಗೇಕೆ ಅವುಗಳ ಗೊಡವೆ ?" ಎಂಬುದು ಇವರ ನಿಲವು. ಇವರು ಮನೆಯಿಂದ ಪರಸ್ಥಳಕ್ಕೆ ಹೋಗಿ ಬಂದರೆಂದರೆ ಎಲ್ಸಾರಿಗೆ ಗೊತ್ತು, ತಾನು ಜತನದಿಂದ ಜೋಡಿಸಿಕೊಟ್ಟಿದ್ದ ಪದಾರ್ಥಗಳನ್ನು ಇವರು ಉಪಯೋಗಿಸಿಯೇ ಇರುವುದಿಲ್ಲ, ಅಥವಾ ಅಪ್ಪಿತಪ್ಪಿ ಉಪಯೋಗಿಸಿದ್ದರೆ ಅವನ್ನು ಅಲ್ಲಿಯೇ ಮರೆತುಬಿಟ್ಟು ಹಿಂತಿರುಗಿರುತ್ತಾರೆಂದು : "ನಮ್ಮ ಯಜಮಾನರ ತಲೆ ಭದ್ರವಾಗಿ ಅವರ ಕತ್ತಿಗೆ ಕೀಲಿಸಿಕೊಂಡಿರುವುದು ಎಂಥ ದೊಡ್ಡ ಅನುಕೂಲ. ಇಲ್ಲವಾದಲ್ಲಿ ಅವರು ಹೋದಲ್ಲಿ ತಲೆಯನ್ನೇ ಮರೆತು ಹಿಂತಿರುಗುತ್ತಿದ್ದರು," ಎಂಬುದಾಗಿ ಎಲ್ಸಾ ಬರೆದಿದ್ದಾರೆ.

ಹೂರಣವು ಭದ್ರವಾಗಿರಲು ತೋರಣವು ಹೊರೆ
ಹೂರಣವಶುದ್ಧವಾಗಿರೆ ತೋರಣವು ಕೃತಕ
ಭೂರಿಜನ ಹೂರಣವ ಮರೆತು ತೋರಣದ ಶೃಂ-
ಗಾರದಲಿ ಹಾಳುಗೈವರು ಬದುಕ ಅತ್ರಿಸೂನು

## ಝಿಯನಿಸ್ಟ್ ಚಳವಳಿ

ಜ್ಞಾನಕ್ಕಾಗಿಯೇ ಜ್ಞಾನಾನ್ವೇಷಣೆ, ನ್ಯಾಯವನ್ನು ಕುರಿತು ಅತ್ಯುಗ್ರಪ್ರೇಮ ಮತ್ತು ವೈಯಕ್ತಿಕ ಸ್ವಾತಂತ್ರ್ಯಾಪೇಕ್ಷೆ ಇವು ಯೆಹೂದ್ಯ ಪರಂಪರೆಯ ಲಕ್ಷಣಗಳು. ಇಂಥ ಪರಂಪರೆಗೆ ನಾನು ಸೇರಿರುವುದು ನನ್ನ ಪರಮ ಭಾಗ್ಯವೆಂದು ಭಾವಿಸಿದ್ದೇನೆ. ತರ್ಕ ಒದಗಿಸುವ ಆದರ್ಶ ಮತ್ತು ವೈಯಕ್ತಿಕ ಸ್ವಾತಂತ್ರ್ಯ ಇವುಗಳಿಗೆ ಎದುರಾಗಿ ಕತ್ತಿ ಮಸೆಯುತ್ತ ದೈತ್ಯ ಬಲದ ಬೆಂಬಲದಿಂದ ಅಂತಃಕರಣರಹಿತ

> ರಾಷ್ಟ್ರಸ್ಥಾಪನೆ ಮಾಡಲು ಉದ್ಯುಕ್ತರಾಗಿರುವವರು ನಮ್ಮಲ್ಲಿ ಸಹಜವಾಗಿಯೇ ತಮ್ಮ ಬದ್ಧ ವೈರಿಗಳನ್ನು ಕಾಣುತ್ತಿದ್ದಾರೆ. ಇತಿಹಾಸ ನಮಗೆ ಬರಡು ಬಂಜರಿನಲ್ಲಿ ಬೆಳೆಯೆತ್ತುವ ಕಷ್ಟಪಾತ್ರವನ್ನು ವಿಧಿಸಿದೆ. ಆದರೆ ನಾವು ಸತ್ಯ, ನ್ಯಾಯ ಮತ್ತು ಧರ್ಮ ಇವುಗಳ ನೆಚ್ಚಿನ ಬಂಟರಾಗಿ ನಿಂತಿರುವ ತನಕವೂ ಜೀವಂತ ಜನಾಂಗಗಳ ಪೈಕಿ ಅತ್ಯಂತ ಪ್ರಾಚೀನ ಜನಾಂಗವಾಗಿರುತ್ತೇವೆ. ಅಷ್ಟೇ ಅಲ್ಲ, ನಮ್ಮ ಸೃಜನಶೀಲ ಕಾರ್ಯದಿಂದ ಇದುವರೆಗಿನಂತೆ ಮುಂದಕ್ಕೂ ಮಾನವಕುಲವನ್ನು ಉದಾತ್ತೀಕರಿಸಬಲ್ಲ ಸತ್ಫಲಗಳನ್ನು ಉತ್ಪಾದಿಸುತ್ತಿರುತ್ತೇವೆ.
>
> ಐನ್‌ಸ್ಟೈನ್

ಯೆಹೂದ್ಯರ ಪ್ರಾಚೀನ ನೆಲೆ ಪ್ಯಾಲೆಸ್ಟೈನ್. ಜೆರೂಸಲೆಮ್ ಈ ಪ್ರಾಂತದ ಮುಖ್ಯ ನಗರ. ಇಲ್ಲಿರುವ ಝಿಯನ್ (Zion) ಬೆಟ್ಟದ ಮೇಲೆ ಯೆಹೂದ್ಯರ ಪುರಾತನ ದೇವಾಲಯವಿದೆ. ಎಂದೇ ಝಿಯನ್ ಪದ ಕಾಲಾಂತರದಲ್ಲಿ ವಿವಿಧ ಅರ್ಥ ಛಾಯೆಗಳನ್ನು ಮೈಗೂಡಿಸಿಕೊಂಡು ಬೆಳೆದು ಬಂದಿದೆ : ಯೆಹೂದ್ಯಜನಾಂಗ, ಯೆಹೂದ್ಯರ ಮಾತೃಭೂಮಿ, ಜೂಡಾಯಿಸಮ್ (ಯೆಹೂದ್ಯರ ಮತ) ಕಂಡಿರುವ ಆದರ್ಶ ಜನಾಂಗ ಯಾ ಸಮಾಜ ಇತ್ಯಾದಿ. ಝಿಯನ್ ಪಂಥದ ಅಥವಾ ಧರ್ಮದ ಅನುಯಾಯಿಗೆ ಝಿಯನಿಸ್ಟ್ (Zionist) ಎಂದು ಹೆಸರು.

ಇತಿಹಾಸದ ಹಲವಾರು ದುರಂತಗಳ ಫಲವಾಗಿ ಯೆಹೂದ್ಯರು ತಾಯಿ ನೆಲ ಪ್ಯಾಲೆಸ್ಟೈನಿನಿಂದ ನೆಲೆದಪ್ಪಿ ಊರೂರು ತಿರುಗಾಡುವ ಅಲೆಮಾರಿಗಳಾದರು. ಶತಮಾನಗಳ ಅವಧಿಯಲ್ಲಿ ಇವರ ಪೀಳಿಗೆಗಳು ಮುಖ್ಯವಾಗಿ ರಷ್ಯ, ಯೂರೋಪ್, ಅಮೆರಿಕ, ಆಫ್ರಿಕ ಖಂಡಗಳಲ್ಲಿ ಹರಡಿ ಹಂಚಿ ಹೋದುವು. ಒಂದಷ್ಟು ಮಂದಿ ಪ್ಯಾಲೆಸ್ಟೈನಿನಲ್ಲಿಯೇ ಉಳಿದುಕೊಂಡರು. ಆದರೆ ಇಲ್ಲಿಯೂ ಅವರು ಸಾಮಾನ್ಯ ಪ್ರಜೆಗಳಾಗಿದ್ದರೇ ವಿನಾ ಪ್ರಭುಗಳಾಗಿರಲಿಲ್ಲ. ಕ್ರಮೇಣ ಆಯಾ ಪ್ರದೇಶದ ನಾಗರಿಕತೆಯಿಂದ ಪ್ರಭಾವಿತರಾಗಿ ಸ್ಥಳೀಯ ಸಾಂಸ್ಕೃತಿಕ ಗುಣಗಳನ್ನು ತಮ್ಮ ಬದುಕಿಗೆ ಒಗ್ಗೂಡಿಸಿಕೊಂಡು ಒಂದಿಗೇ ತಮ್ಮ ಸಾಂಸ್ಕೃತಿಕ ಅಸ್ತಿತ್ವವನ್ನೂ ಉಳಿಸಿಕೊಂಡು ಅಲ್ಲಿಯ ವಿಶಿಷ್ಟ ಸಾಂಸ್ಕೃತಿಕ ಘಟಕವಾಗಿ ವಿಕಸಿಸಿದರು. ಹೀಗೆ ಜರ್ಮನ್ ಯೆಹೂದ್ಯರು, ರಶ್ಯನ್ ಯೆಹೂದ್ಯರು ಮುಂತಾದ ಪ್ರಭೇದಗಳು ಹದಿಗಟ್ಟಿದುವು. ಪ್ರಾಯಶಃ ಪ್ಯಾಲೆಸ್ಟೈನಿನಲ್ಲಿ ಉಳಿದಿದ್ದ ಯೆಹೂದ್ಯರು ಮಾತ್ರ ಅವರ ಮಾತೃಭಾಷೆ ಹೀಬ್ರೂವನ್ನು ವ್ಯವಹಾರಗಳಿಗೆ ಉಪಯೋಗಿಸುತ್ತಿದ್ದರು. ಉಳಿದ ಘಟಕಗಳ ಮಾತೃಭಾಷೆ ಸಾಮಾನ್ಯವಾಗಿ ಆಯಾ ಪ್ರದೇಶದ ಭಾಷೆಯೇ ಆಗಿತ್ತು. ಕೆಲವೊಂದು ಪ್ರಮುಖ ಸಂಪ್ರದಾಯಗಳು ಮತ್ತು ಆಚರಣೆಗಳು ಇವೆಲ್ಲ ಘಟಕಗಳಿಗೆ ಸಾಮಾನ್ಯವಾಗಿದ್ದ ಲಕ್ಷಣಗಳು ಮಾತ್ರ.

ವಿದ್ಯೆ, ಕಲೆ, ವ್ಯಾಪಾರ ಮುಂತಾದ ಪ್ರಕಾರಗಳಲ್ಲಿ ಯೆಹೂದ್ಯರದು ಎತ್ತಿದ ಕೈ. ಶ್ರಮ ವಹಿಸಿ ದುಡಿದು ಸಂಪತ್ತು ಗಳಿಸಿ ನಾಜೂಕು ಬದುಕು ಬಾಳುವುದು ಇವರ ಜೀವನ ಶೈಲಿ. ಸ್ಥಳೀಯ ಬಹುಸಂಖ್ಯಾತರಿಂದ ತೀರ ಬೇರೆಯೇ ಆಗಿ ತೋರುತ್ತಿದ್ದ ಇವರು ಸಾಧಾರಣವಾಗಿ ಅಲ್ಲಿಯವರ ಈರ್ಷ್ಯಾಸೂಯೆಗಳಿಗೆ ಪಾತ್ರರಾಗಿ ಬಾಳಬೇಕಾಗುತ್ತಿತ್ತು. ಯೇಸುಕ್ರಿಸ್ತನ ಕೊಲೆಪಾತಕತನವೆಂಬ ಬ್ರಹ್ಮಕಪಾಲ ಇವರನ್ನು ಶಾಶ್ವತವಾಗಿ ಕಚ್ಚಿಕೊಂಡಿದ್ದ ಶಾಪವಾಗಿತ್ತು. ಶ್ರೀಮಂತರೂ ಧೀಮಂತರೂ ಆದ ಇವರು ಅನೇಕ ವೇಳೆ ರಾಜಕಾರಣದಲ್ಲಿಯೂ ರಾಜಕೀಯ ಪಿತೂರಿಯಲ್ಲಿಯೂ ಕೈಯಿಕ್ಕುವುದು ಅನಿವಾರ್ಯವಾಗುತ್ತಿತ್ತು. ಇವೆಲ್ಲ ಕಾರಣಗಳಿಂದಾಗಿ ಯೆಹೂದ್ಯರು ಗಮನೀಯ ಸಂಖ್ಯೆಯಲ್ಲಿ ನೆಲಸಿದ್ದೆಡೆಗಳಲ್ಲೆಲ್ಲ ಅವರ ವಿರುದ್ಧವಾದ ದ್ವೇಷ ಸಾರ್ವತ್ರಿಕವೂ ಪ್ರಚ್ಛನ್ನವೂ ಆಗಿ ಹೊಗೆಯುತ್ತಿತ್ತು. ಉತ್ಕೃಷ್ಟತೆಯನ್ನು ಸಹಜವಾಗಿ ಮೆಚ್ಚಿಗೌರವಿಸುವವರು ಬಲು ಕಡಿಮೆ.

ಅಸೂಯಾಪರರಾಗಿ ತೆಗಳಿ ಹೀನೈಸುವವರೇ ಬಹುಮಂದಿ.

ಸ್ವಂತ ನಾಡಿಲ್ಲದವರೂ ಇದ್ದ ನಾಡವರಿಗೆ ಬೇಡವಾದವರೂ ಆದ ಯೆಹೂದ್ಯರ ಒಂದು ಮುಖ್ಯ ಕನಸು ಪ್ಯಾಲೆಸ್ಟೈನಿಗೆ ಮರಳುವುದು ಮತ್ತು ಅಲ್ಲಿ ನೆಮ್ಮದಿಯಿಂದ ಬಾಳುವುದು. ಈ ಕನಸುಗಾರರೇ ಝಿಯನಿಸ್ಟುಗಳು. ಇವರು ತಮ್ಮ ಆಶೋತ್ತರಗಳ ಈಡೇರಿಕೆಗಾಗಿ ಹೂಡಿದ ಕಾರ್ಯಕ್ರಮದ ಹೆಸರು ಝಿಯನಿಸ್ಟ್ ಚಳವಳಿ. ಅಂದಮಾತ್ರಕ್ಕೆ ಎಲ್ಲ ಯೆಹೂದ್ಯರೂ ಈ ಚಳವಳಿಯನ್ನು ಅನುಮೋದಿಸಿದರೆಂದು ಭಾವಿಸಬೇಕಾಗಿಲ್ಲ.

ಆಧುನಿಕ ಝಿಯನಿಸ್ಟ್ ಚಳವಳಿ ೧೮೯೭ರ ಸುಮಾರಿಗೆ ಹೆಪ್ಪುಗಟ್ಟಿ ನಿರ್ದಿಷ್ಟ ಆಕಾರ ತಳೆಯತೊಡಗಿತು. ಇದು ಪ್ರಪಂಚಾದ್ಯಂತ ಯೆಹೂದ್ಯರಲ್ಲಿ ತಾವು ಪ್ಯಾಲೆಸ್ಟೈನಿನಲ್ಲಿ ಮಾತ್ರ ಭೂಮಿ ಗಳಿಸಲು ಹಕ್ಕು ಪಡೆದಿರುವ ವಿಶಿಷ್ಟ ಜನಾಂಗದ ಸದಸ್ಯರೆಂಬ ಆಸೆಯನ್ನು ಕೊನರಿಸಿತು. ಹೀಗಿದ್ದರೂ ಐನ್‌ಸ್ಟೈನರಂಥ ಬುದ್ಧಿಜೀವಿ ಯೆಹೂದ್ಯರಿಗೆ ಈ ಚಳವಳಿಯ ಕಾವು ಸೋಂಕಿರಲಿಲ್ಲ. ಸ್ಥಳೀಯ ಜೀವನದೊಡನೆ ಸಮರಸವಾಗಿ ಬೆರೆತು ನವಜ್ಞಾನಾನ್ವೇಷಣೆ ಮಾಡುವುದರಲ್ಲಿ ಇವರ ಆಸಕ್ತಿ ಇತ್ತೇ ವಿನಾ ಅರಿಯದ ದೂರದ ಪ್ಯಾಲೆಸ್ಟೈನಿನಲ್ಲಿ, ಎರಡು ಸಾವಿರ ವರ್ಷಗಳ ಹಿಂದಿನ ಊಹೆಗೂ ನಿಲುಕದ ಬದುಕನ್ನು ಬಾಳುವುದರಲ್ಲಲ್ಲ. ಭೂತಕಾಲದ ಅಸ್ಪಷ್ಟತೆಯನ್ನು ಬೆಂಬತ್ತುವುದು ಇವರ ಜಾಯಮಾನವಾಗಿರಲಿಲ್ಲ, ಬದಲು ವರ್ತಮಾನದ ವಾಸ್ತವತೆಗಳನ್ನು ವೈಜ್ಞಾನಿಕವಾಗಿ ಸ್ವೀಕರಿಸಿ ಭವಿಷ್ಯಕಾಲದ ಬಗ್ಗೆ ತಾರ್ಕಿಕ ಊಹನೆಗಳನ್ನು ಮಂಡಿಸುತ್ತ ಬಾಳುವುದು ಇವರ ಧರ್ಮವಾಗಿತ್ತು. ಜಾತಿಮತಾತೀತರಾಗಿದ್ದ ಐನ್‌ಸ್ಟೈನ್ ತಾನೊಬ್ಬ ಮಾನವ—ಮೊದಲಿಗೂ ಕೊನೆಗೂ—ತಾನೊಬ್ಬ ಶಾಂತಿವಾದಿ, ಸತ್ಯಾನ್ವೇಷಕ ಎಂದೇ ಭಾವಿಸಿದ್ದರು.

ಮೆಲುನಡೆಯ ಹೊನಲಿನ ಹಾದಿಗೆ ಅಡ್ಡವಾಗಿ ನಡುಗಡ್ಡೆ ಮೈದಳೆದು ಉಳಿದುಕೊಂಡರೆ ಆಶ್ಚರ್ಯವಿಲ್ಲ. ಆದರೆ ಭರದಿಂದ ಏರುತ್ತಿರುವ ಮತ್ತು ಸತತವಾಗಿ ತಾಂಟುತ್ತಿರುವ ಪ್ರವಾಹದ ಮಾರ್ಗದಲ್ಲಿ ದ್ವೀಪ ತಲೆಯೆತ್ತದು. ಅಕಸ್ಮಾತ್ತಾಗಿ ಅದೇನಾದರೂ ತಲೆಯೆತ್ತಿದುದಾದರೆ ದೀರ್ಘ ಕಾಲ ಏಕಾಂಗಿಯಾಗಿ ನಿಂತಿರಲಾರದು. ಯೆಹೂದ್ಯ ರಾಷ್ಟ್ರಪ್ರೇಮ ಅಥವಾ ಝಿಯನಿಸ್ಟ್ ಚಳವಳಿ ಇಂಥ ಒಂದು ಆರೋಹೀಪ್ರವಾಹ. ಇತರರು ಯೆಹೂದ್ಯರನ್ನು ದ್ವೇಷಿಸಿದಷ್ಟೂ ಇವರಿಗೆ ಮರ್ಯಾದೆಯಿಂದ ಬಾಳಲು ಅವಕಾಶಗಳನ್ನು ನಿರಾಕರಿಸಿದಷ್ಟೂ ಇವರನ್ನು ಜಾತಿಬಾಹಿರರೆಂದು ತಿರಸ್ಕಾರಪೂರ್ವಕವಾಗಿ ಕಂಡಷ್ಟೂ ಝಿಯನಿಸ್ಟ್ ಚಳವಳಿ ತೀವ್ರವಾಗಿ ಪ್ರವರ್ಧಿಸುತ್ತಿತ್ತು. ಇಂಥ ಏರುನೀರಿನ ಹೊಡೆತ ಜಾತಿಮತಾತೀತ ಐನ್‌ಸ್ಟೈನ್-ದ್ವೀಪವನ್ನು ತಾಡಿಸದೆ ಇರಲಿಲ್ಲ.

೧೯೧೪ರ ವೇಳೆಗೆ ಐನ್‌ಸ್ಟೈನರಿಗೆ ಸ್ಪಷ್ಟವಾಗಿ ತಮ್ಮ ಯೆಹೂದ್ಯತ್ವದ ಅರಿವಾಯಿತು. ಪ್ರಚಲಿತ ಸನ್ನಿವೇಶಗಳ ದುಷ್ಪರಿಣಾಮವದು. ೧೯೨೧ರಲ್ಲಿ ಇದರ ಬಗ್ಗೆ ಅವರು ಬರೆದರು : "ಸುಮಾರು ಒಂದು ತಲೆಮಾರಿನ ಹಿಂದಿನ ತನಕವೂ ಜರ್ಮನಿಯ ಯೆಹೂದ್ಯರಿಗೆ ತಾವು ಯೆಹೂದ್ಯ ಜನಾಂಗದವರೆಂಬ ಭಾವನೆ ಇರಲೇ ಇಲ್ಲ. ತಾವೊಂದು ಧಾರ್ಮಿಕ ಸಮುದಾಯದ ಸದಸ್ಯರೆಂಬ ನಂಬಿಕೆ ಮಾತ್ರ ಇತ್ತು, ಅಷ್ಟೆ." ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಉಲ್ಬಣಿಸಿದ ಹಿಂದೂ-ಮುಸ್ಲಿಮ್ ದಾವಾನಲ, ಭಾರತದೊಳಗೆ ಉದರವ್ರಣವಾಗಿರುವ ಉಗ್ರವಾದಿಗಳ ತೀವ್ರ ಉದ್ರೇಕ ಮುಂತಾದವು ಈಚಿನ ದುಷ್ಟ ನಿದರ್ಶನಗಳು.

ಝಿಯನಿಸ್ಟ್ ಚಳವಳಿಯನ್ನು ಸ್ಥಳೀಯರು ನಿರ್ಲಕ್ಷಿಸಿದ್ದರೆ ಅಥವಾ ಯೆಹೂದ್ಯರು ಕೂಡ ಮನುಷ್ಯರು ಎಂಬಂಥ ಅನುಕಂಪಪೂರಿತ ದೃಷ್ಟಿ ತಳೆದಿದ್ದರೆ ಪ್ರಾಯಶಃ ಅದು ತೆಲುಗಾಳಿಯಂತೆ ಒಮ್ಮೆ ಬೀಸಿ ಮರೆಯಾಗಿ ಸೋಟುತ್ತಿತ್ತೋ ಏನೋ. ಆದರೆ ಮಾನವಜೀವನದ ಪರಿಸರದಲ್ಲಿ

ಪ್ರೀತಿ-ದ್ವೇಷ, ಅಂಗೀಕಾರ-ತಿರಸ್ಕಾರ, ಸ್ವಾರ್ಥ-ಪರಾರ್ಥ ಉಲ್ಬಣಸ್ಥಿತಿಯಲ್ಲಿ ಧಾವಿಸುವುದೇ ಸಾಧಾರಣಕ್ರಮ. ಝಿಯನಿಸ್ಟ್ ಚಳವಳಿಯಾದರೂ ಈ ವಿಧಿಗೆ ಅಪವಾದವಾಗಲಿಲ್ಲ. ಇತರರು ಇದನ್ನು ಹೆಚ್ಚು ಹೆಚ್ಚು ಸಂದೇಹ ದೃಷ್ಟಿಯಿಂದ ಗಮನಿಸುತ್ತಿದ್ದಂತೆ ಅಧಿಕಾಧಿಕವೇಗ (velocity, ಪ್ರತೀಕ $v$) ಗಳಿಸುತ್ತ ಜೊತೆಯಲ್ಲೇ ರಾಶಿಯನ್ನು (mass, ಪ್ರತೀಕ $m$) ಕಲೆಹಾಕಿಕೊಳ್ಳುತ್ತ ಅಭಿವರ್ಧಿಸತೊಡಗಿತು. ಎದುರಾದ ವಿರೋಧಕ್ಕೆ ಅನುಲೋಮವಾಗಿ ಇದರ ತ್ರಾಣ ಬೆಳೆಯಿತು. ಇದಕ್ಕೆ ವಿಷದಂತಗಳು ಮೊಳೆತು ಇದರ ಕಚ್ಚುವ ಕೆಚ್ಚು ಹೆಚ್ಚಾಯಿತು. ಯಾವುದೇ ವಸ್ತುವಿನ ನಾಶಕಾರಕ ಸಾಮರ್ಥ್ಯ (ಭೌತಿಕವಾಗಿ) ಅದರ ರಾಶಿ ($m$) ಮತ್ತು ವೇಗ($v$)ಗಳ ಗುಣಲಬ್ಧ, ಅಂದರೆ $mv$. ಇದಕ್ಕೆ ಸಂವೇಗ momentum ಎಂದು ಹೆಸರು. ಝಿಯನಿಸ್ಟ್ ಚಳವಳಿಯ ಸಂವೇಗ ತೀವ್ರವಾಗಿ ಏರುತ್ತಿತ್ತು.

ಒಂದನೆಯ ಮಹಾಯುದ್ಧದ ಮೊದಲು ಯೆಹೂದ್ಯರ ಸ್ಥಿತಿಗತಿ ಯೂರೋಪ್ ರಾಷ್ಟ್ರಗಳಲ್ಲಿ ಶೋಚನೀಯವಾಗಿತ್ತು. ಬಡತನ, ಅವಕಾಶರಾಹಿತ್ಯ, ಪರಕೀಯತ್ವ ಒಂದೊಂದೂ ಇವರ ಧೃತಿಯನ್ನು ಕುಗ್ಗಿಸಿತ್ತು. ರಷ್ಯ ದೇಶದಲ್ಲಿ ಭೌಗೋಳಿಕ ಕಾಠಿಣ್ಯವೂ ಇವುಗಳ ಜೊತೆಗೂಡಿ ಯೆಹೂದ್ಯರ ಬಾಳು ನರಕವಾಗಿತ್ತು. ಯುದ್ಧ ಬಂತು. ಇವರ ಜೀವನಸಂಗ್ರಾಮ ತಗ್ಗಿತೇ ? ಇಲ್ಲ. ಇವರನ್ನು ರಾಷ್ಟ್ರಹೀನರನ್ನಾಗಿ ಮಾಡಿದ ಅವೇ ರಾಷ್ಟ್ರಗಳು ಈಗ ಇವರ ರಾಷ್ಟ್ರಹೀನತೆಯನ್ನೇ ಕಾರಣವಾಗಿ ಎತ್ತಿಹಿಡಿದು ಇದರ ಫಲವಾಗಿ ಇವರು ಅಂತಾರಾಷ್ಟ್ರೀಯತೆಯ ಆರಾಧಕರು, ಆದ್ದರಿಂದ ತಾವಿರುವ ತಾವಿನ ಬಗ್ಗೆ ನಿರಭಿಮಾನಿಗಳು, ಎಂದೇ ವಿಶ್ವಾಸಾರ್ಹರಲ್ಲ ಎಂಬ ನಿಲವನ್ನು ತಳೆದುವು. ಇವರ ಸುತ್ತ ಸಂದೇಹ, ತಿರಸ್ಕಾರ, ದ್ವೇಷ ಎಂಬ ಇಟ್ಟಿಗೆಗಳಿಂದ ಕಟ್ಟಿದ ದುರ್ಗಮಾಭೇದ್ಯ ಭಿತ್ತಿಗಳು ಎದ್ದುವು. ಹೀಗೆ ಪ್ಯಾಲೆಸ್ಟೈನಿನಲ್ಲಿ ನೆಲೆ ಇಲ್ಲದವರಾದ ಮತ್ತು ಇಲ್ಲಿ ಅಥವಾ ಎಲ್ಲಿಯೂ ಸಲ್ಲದವರಾದ ಯೆಹೂದ್ಯರಿಗೆ ಸಿದ್ಧ ಆಧಾರಸ್ತಂಭವಾಗಿ ಲಭಿಸಿದ್ದು ಝಿಯನಿಸ್ಟ್ ಚಳವಳಿ.

## ಚೈಮ್ ವೈಝ್‌ಮನ್

ಯಾವುದೋ ಒಂದು ಶ್ರದ್ಧೆಯನ್ನು ಹೊಂದಿರುವುದು ಮಾತ್ರ ನನ್ನ ಆಸೆ ಅಲ್ಲ, ನನ್ನನ್ನು ಹೊಂದಿರುವ ಒಂದು ಶ್ರದ್ಧೆ ನನಗೆ ಬೇಕು.

ಚಾರ್ಲ್ಸ್ ಕಿಂಗ್ಸ್ಲೀ

ಚೈಮ್ ವೈಝ್‌ಮನ್ (೧೮೭೪-೧೯೫೨) ರಶ್ಯಸಂಜಾತ ಯೆಹೂದಿ. ಝಾರರ (Czars) ರಶ್ಯದಲ್ಲಿ ಯೆಹೂದ್ಯರಿಗೆ ವಿಶೇಷ ಭವಿಷ್ಯವೇನೂ ಇರಲಿಲ್ಲ. ಹೀಗಾಗಿ ವೈಝ್‌ಮನ್ ದೂರದ ಜರ್ಮನಿಗೆ ಪಯಣಿಸಿದರು. ಅಲ್ಲಿ ಅಧ್ಯಯನ ಮುಂದುವರಿಸಿ, ೧೯೦೦ರಲ್ಲಿ ರಸಾಯನವಿಜ್ಞಾನ ಡಾಕ್ಟೊರೇಟ್ ಪದವಿ ಗಳಿಸಿದರು. ಮುಂದಿನ ಕೆಲವು ವರ್ಷ ಜಿನೀವಾದಲ್ಲಿ ಉಪಾಧ್ಯಾಯರಾಗಿ ದುಡಿದು ಇಂಗ್ಲೆಂಡಿಗೆ ವಲಸೆ ಹೋದರು (೧೯೦೪). ಅಲ್ಲಿಯ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಜೀವರಸಾಯನವಿಜ್ಞಾನ ಪ್ರವಾಚಕರಾಗಿ ನೇಮನ ಪಡೆದರು. ಮುಂದೆ ೧೯೧೦ರಲ್ಲಿ ಬ್ರಿಟಿಷ್ ಪೌರತ್ವ ಕೂಡ ಗಳಿಸಿದರು. ಇಂಗ್ಲೆಂಡಿನಲ್ಲಿ ಯೆಹೂದ್ಯದ್ವೇಷ ಇರಲಿಲ್ಲವಾಗಿ ವೈಝ್‌ಮನ್ನರಿಗೆ ಅಲ್ಲಿಯ ಬದುಕು ಹಿತವಾಯಿತು.

ಒಂದನೆಯ ಮಹಾಯುದ್ಧಾಗ್ನಿ ಉರಿಯತೊಡಗಿದಾಗ ವೈಝ್‌ಮನ್ನರ ದೆಸೆ ಕುಲಾಯಿಸಿತು. ಯುದ್ಧರಂಗದ ಮುಖ್ಯ ಇಂಧನವೆಂದರೆ ಸ್ಫೋಟಕಗಳು. ಇವನ್ನು ಅಗ್ಗವಾಗಿಯೂ ಸಮೃದ್ಧ

ವಾಗಿಯೂ ಕ್ಷಿಪ್ರವಾಗಿಯೂ ತಯಾರಿಸಲು ಕೆಲವೊಂದು ಬಗೆಯ ಸಂಶ್ಲೇಷಿತ ರಾಸಾಯನಿಕಗಳು ಅವಶ್ಯ. ಇವುಗಳ ಶೋಧನೆಯಲ್ಲಿ ನಿರತರಾಗಿದ್ದ ವೈಝ್‌ಮನ್ ಹೊನ್ನ ಹೆಗ್ಗೆಯನ್ನೇ ಶೋಧಿಸಿದ್ದರು—'ಕಡವರವನೆಡಹಿಸಂಧಿಸಿದ ಕಡುಬಡವನಂತೆ !' ಇವರ ಸಂಶೋಧನೆಗಳು ಬ್ರಿಟಿಷ್ ಯುದ್ಧ ಪ್ರಯತ್ನಗಳಿಗೆ ಅಪಾರ ಕುಮ್ಮಕ್ಕು ನೀಡಿದುವು. ತತ್ಪರಿಣಾಮವಾಗಿ ಸರ್ಕಾರದ ಉಚ್ಚ ವಲಯಗಳಲ್ಲಿ ಇವರ ಪ್ರತಿಷ್ಠೆ ಉನ್ನತ ಸ್ಥಾನಕ್ಕೇರಿತು. ಉಗ್ರ ಝಿಯನಿಸ್ಟ್ ಆಗಿದ್ದ ಇವರು ತಮ್ಮ ವರ್ಚಸ್ವೀ ವ್ಯಕ್ತಿತ್ವವನ್ನು ಆ ಚಳವಳಿಯನ್ನು ಬಲಪಡಿಸುವುದರತ್ತ ಧಾರೆ ಎರೆಯಲು ನಿರ್ಧರಿಸಿದರು.

ಪ್ಯಾಲೆಸ್ಟೈನಿನ ಮೇಲೆ ಪರಮಾಧಿಕಾರ ಹೊಂದಿದ್ದ ಬ್ರಿಟಿಷ್ ಸರ್ಕಾರ ವೈಝ್‌ಮನ್ನರ ಸಂಘಟನೆ ಮತ್ತು ಧುರೀಣತ್ವಗಳಿಗೆ ಮಣಿದು ೧೯೧೭ ನವೆಂಬರ್ ೨ರಂದು ಬಾಲ್ಫರ್ ಘೋಷಣೆಯನ್ನು ಅಂಗೀಕರಿಸಿತು. ಪ್ರಾಯಶಃ ಪ್ರಪಂಚರಾಜನೀತಿಯೂ ಯೆಹೂದ್ಯ ಪಕ್ಷಪಾತಿಯಾಗಿದ್ದುದು ಇದರ ಕಾರಣವಾಗಿರಬಹುದು. ಪ್ಯಾಲೆಸ್ಟೈನಿನಲ್ಲಿ ಯೆಹೂದ್ಯ ರಾಷ್ಟ್ರ ಸ್ಥಾಪನೆಯನ್ನು ಈ ಘೋಷಣೆ ತಾತ್ತ್ವಿಕವಾಗಿ ಒಪ್ಪಿಕೊಂಡಿತು.

## ಐನ್‌ಸ್ಟೈನ್ ಮತ್ತು ಝಿಯನಿಸಮ್

ಮತಾಂತರಗೊಂಡು ಬೇರೆ ಹೆಸರಿಟ್ಟುಕೊಂಡ ಒಬ್ಬ ಯೆಹೂದ್ಯ ಹೇಗೆ ತನ್ನ ಯೆಹೂದ್ಯತ್ವವನ್ನು ಕಳೆದುಕೊಳ್ಳುವುದಿಲ್ಲವೊ ಹಾಗೆ ಯೆಹೂದ್ಯ ಜನರಿಗಾಗಿ ಮತ್ತು ಪ್ಯಾಲೆಸ್ಟೈನಿನಲ್ಲಿ ಯೆಹೂದ್ಯ ನೆಲೆಗಳಿಕೆಗಾಗಿ ದುಡಿಯುವ ಜರ್ಮನ್ ಯೆಹೂದ್ಯ ತನ್ನ ಜರ್ಮನಿತ್ವವನ್ನು ಕಳೆದುಕೊಳ್ಳುವುದಿಲ್ಲ. ಇವೆರಡು ಗುಣಲಕ್ಷಣಗಳು ವಿಭಿನ್ನ ಸ್ವರೂಪದ ವಾಸ್ತವತೆಗಳ ಮೇಲೆ ನಿಂತಿವೆ. ವಿರೋಧನ್ಯಾಸವಿರುವುದು ಯೆಹೂದ್ಯ ಮತ್ತು ಜರ್ಮನ್ ನಡುವೆ ಅಲ್ಲ, ಬದಲು, ಪ್ರಾಮಾಣಿಕತೆ ಮತ್ತು ಶೀಲಹೀನತೆ ನಡುವೆ. ತನ್ನ ಮೂಲ, ಜನಾಂಗ ಮತ್ತು ಸಂಪ್ರದಾಯಕ್ಕೆ ನಿಷ್ಠನಾಗಿ ಇರುವಾತ ತಾನು ಪ್ರಜೆಯಾಗಿರುವ ರಾಷ್ಟ್ರಕ್ಕೆ ವಿಧೇಯನಾಗಿಯೂ ಇರುತ್ತಾನೆ. ಒಂದಕ್ಕೆ ನಿಷ್ಠಾವಂತನಾಗಿರದಾತ ಇನ್ನೊಂದಕ್ಕೂ ನಿಷ್ಠಾವಂತನಾಗಿರುವುದಿಲ್ಲ.

ಐನ್‌ಸ್ಟೈನ್

ಎಲ್ಲ ಝಿಯನಿಸ್ಟರೂ ಯೆಹೂದ್ಯರಾಗಿದ್ದರು ನಿಜ. ಆದರೆ ಇದರ ವಿಲೋಮೋಕ್ತಿ—ಎಲ್ಲ ಯೆಹೂದ್ಯರೂ ಝಿಯನಿಸ್ಟರು—ನಿಜವಾಗಿರಲಿಲ್ಲ. ಐನ್‌ಸ್ಟೈನ್ ಈ ಎರಡನೆಯ ಪಂಗಡದಲ್ಲಿದ್ದರು. ಉದ್ದೇಶಪೂರ್ವಕವಾಗಿ ಅಲ್ಲ. ಮನುಜಮತಾನುಯಾಯಿಯೂ ವಿಶ್ವಪಥಗಾಮಿಯೂ ಆಗಿದ್ದ ಇವರೆಂದೂ ಇಕ್ಕಟ್ಟು ಓಣಿ ಚಿಂತನೆ ಹರಿಸುತ್ತಿರಲಿಲ್ಲ. ಉಗ್ರರಾಷ್ಟ್ರೀಯತೆಯ ಹುಟ್ಟಾ ಎದುರಾಳಿ ಇವರು. ಫಿಲಿಪ್ ಫ್ರ್ಯಾಂಕ್ ಇವರ ಒಲವು ನಿಲವುಗಳನ್ನು ವಿವರಿಸಿದ್ದಾರೆ :

"ಜರ್ಮನ್ ರಾಷ್ಟ್ರೀಯತೆಯ ಸ್ಥಾನದಲ್ಲಿ ಯೆಹೂದ್ಯ ರಾಷ್ಟ್ರೀಯತೆಯನ್ನು ಸ್ಥಾಪಿಸುವುದರಲ್ಲಿ ಇವರೇನೂ ಸೌಕರ್ಯ ಕಾಣಲಿಲ್ಲ. ಪ್ಯಾಲೆಸ್ಟೈನ್ ಯೋಜನೆಯಲ್ಲಿ ಅಂತರ್ಗತವಾಗಿದ್ದ ತೊಂದರೆಗಳನ್ನು ಇವರು ಮುಂದಾಗಿಯೇ ಕಂಡಿದ್ದರು. ತಮ್ಮ ರಾಷ್ಟ್ರೀಯ ನೆಲೆಯಲ್ಲಿ ಬಿಡಾರ ಹೂಡಬೇಕೆಂಬ ಉದ್ದೇಶದಿಂದ ಅಲ್ಲಿಗೆ ಒಳವಲಸೆ ಹೋಗುವ ಎಲ್ಲ ಯೆಹೂದ್ಯರನ್ನೂ ಬಲು ಚಿಕ್ಕದಾದ ಆ ದೇಶ ಧರಿಸಲಾರದೆಂದು ಇವರು ಭಾವಿಸಿದ್ದರು. ಯೆಹೂದ್ಯ ಮತ್ತು ಅರಬ್ ರಾಷ್ಟ್ರೀಯತೆಗಳ ನಡುವೆ ತಿಕ್ಕಾಟ ಉಂಟಾದೀತೆಂದು ತಿಳಿದಿದ್ದರು. ಝಿಯನಿಸ್ಟುಗಳು ಅನೇಕ ವೇಳೆ ಈ ಸಮಸ್ಯೆಗಳ ಗುರುತ್ವವನ್ನು ಸುಲಭೀಕರಿಸಿದ್ದಿತ್ತು, ಇಲ್ಲವೇ ಹಗುರಗೊಳಿಸಿದ್ದಿತ್ತು.

ಆದರೆ ಇಂಥ ಅಡ್ಡಹಾಯಿಕೆಗಳೆಲ್ಲ ಅನುಕೂಲಸಿಂಧು ಮಾರ್ಗಗಳೆಂಬ ಅರಿವು ಐನ್‌ಸ್ಟೈನರಿಗಿತ್ತು. ಇಷ್ಟೆಲ್ಲ ಸಂದೇಹ ಸದಸದ್ವಿವೇಚನೆ ಇವರಲ್ಲಿದ್ದಾಗ್ಯೂ ಝಿಯನಿಸಮ್ಮನ್ನು ಬೆಂಬಲಿಸಲು ಕೂಡ ಇವರು ಸಾಕಷ್ಟು ಕಾರಣಗಳನ್ನು ಕಾಣದಿರಲಿಲ್ಲ. ಯೆಹೂದ್ಯರಲ್ಲಿ ಆತ್ಮ ಪ್ರತ್ಯಯದ ಅಭಾವವನ್ನು ಗಮನಿಸಿದ ಐನ್‌ಸ್ಟೈನ್ ದುಃಖಿತರಾಗಿದ್ದರು. ಈ ನಿರ್ವಿಣ್ಣ ಭಗ್ನ ಮನೋರಥ ಮಂದಿಯಲ್ಲಿ ಝಿಯನಿಸಮ್ ಒಂದೇ ಆ ಅಗತ್ಯ ಜೀವಪೋಷಕ ಧಾತುವನ್ನು ಪ್ರೇರಿಸಬಲ್ಲ ಪಟು ಚಟುವಟಿಕೆಯಾಗಿದ್ದಂತೆ ಇವರಿಗೆ ತೋರಿತು. ಯೆಹೂದ್ಯರಲ್ಲಿ ಇದನ್ನು ಪ್ರವರ್ತಿಸಬಲ್ಲ ಯಾವುದೇ ತರಬೇತಿ ಇವರ ಮೆಚ್ಚುಗೆ ಗಳಿಸುತ್ತಿತ್ತು. ಆದರೆ ಅದು ರಾಷ್ಟ್ರೀಯತೆಯ ಮೇಲೆ ತೂಕ ಹೇರುವುದು ಮಾತ್ರ ಇವರಿಗೆ ಇಷ್ಟವಾದುದಾಗಿರಲಿಲ್ಲ. ಹೀಗಿದ್ದರೂ ಯೆಹೂದ್ಯರ ಮಾನಸಿಕಸ್ಥಿತಿ, ತತ್ರಾಪಿ ಜರ್ಮನ್ ಯೆಹೂದ್ಯರ ಮಾನಸಿಕ ಸಂಕ್ಷೋಭೆ, ಐನ್‌ಸ್ಟೈನರ ಮೇಲೆ ಗಾಢ ಪ್ರಭಾವ ಬೀರದಿರಲಿಲ್ಲ. ಈ ದುಃಸ್ಥಿತಿಯನ್ನು ಶಮನಗೊಳಿಸಿ ನಿವಾರಿಸಬಲ್ಲ ಪ್ರತಿಯೊಂದು ಶೈಕ್ಷಣಿಕ ಕ್ರಮವನ್ನೂ ಇವರು ಶಿಫಾರಸು ಮಾಡಿದರು. ಎಂದೇ ತಾನೊಬ್ಬ ಝಿಯನಿಸಮ್ಮಿನ ಬೆಂಬಲಿಗನೆಂದು ಸಾರ್ವಜನಿಕವಾಗಿ ಘೋಷಿಸಲು ೧೯೨೧ರಲ್ಲಿ ನಿರ್ಧರಿಸಿದರು."

ಐನ್‌ಸ್ಟೈನ್ ಬಲು ಸೊಗಸಾದ ವಿವರಣೆ ನೀಡಿದ್ದಾರೆ :

"ಕಳೆದ ಎರಡು ಸಾವಿರ ವರ್ಷ ಪರ್ಯಂತ ಯೆಹೂದ್ಯಮಂದಿಯ ಸಾಮಾನ್ಯ ಆಸ್ತಿಯೆಂದರೆ ಅವರ ಭೂತಕಾಲ ಮಾತ್ರ. ಈ ವಿಶಾಲ ಪ್ರಪಂಚಾದ್ಯಂತ ಹರಡಿಹೋಗಿರುವ ನಮ್ಮ ಜನಾಂಗದಲ್ಲಿ ಜನ ಎಚ್ಚರಿಕೆಯಿಂದ ಸಂರಕ್ಷಿಸಿಕೊಂಡು ಬಂದಿದ್ದ ಸಂಪ್ರದಾಯದ ವಿನಾ ಸಾಮಾನ್ಯವಾದದ್ದು ಏನೂ ಇರಲಿಲ್ಲ. ಒಂಟಿಯಾಗಿ ಯೆಹೂದ್ಯ ಪ್ರಭೃತಿಗಳು ಘನ ಸಾಧನೆಗಳನ್ನು ಸಿದ್ಧಿಸಿರುವುದು ನಿಜ. ಆದರೆ ಯೆಹೂದ್ಯಮಂದಿಗೆ ಒಟ್ಟಾಗಿ ಯಾವುದೇ ಸಾಮೂಹಿಕ ಫಲಿತಾಂಶ ಸಾಧಿಸಲು ಅವಶ್ಯವಾದ ತ್ರಾಣ ಉಡುಗಿಹೋಗಿದೆಯೆಂದೆನ್ನಿಸುತ್ತದೆ. . .

"ಝಿಯನಿಸಮ್ಮಿನ ಧುರೀಣರ ಎದುರಿಗಿರುವ ಉದ್ದೇಶ ರಾಜಕೀಯವಾದುದಲ್ಲ. ಅದು ಸಾಮಾಜಿಕ ಮತ್ತುಸಾಂಸ್ಕೃತಿಕ. ಪ್ಯಾಲೆಸ್ಟೈನಿನಲ್ಲಿರುವ ಸಮುದಾಯವು ಬೈಬಲ್ಲಿನಲ್ಲಿ ಉಕ್ತವಾಗಿರುವ ಪ್ರಕಾರ, ನಮ್ಮ ಪೂರ್ವಜರ ಸಾಮಾಜಿಕ ಆದರ್ಶಗಳತ್ತ ಸಾಗಬೇಕು, ಮತ್ತು ಅದೇ ವೇಳೆ ಆಧುನಿಕ ಭೌದ್ಧಿಕ ಜೀವನದ ನೆಲೆಯೂ ಸಮಸ್ತ ಪ್ರಪಂಚದ ಯೆಹೂದ್ಯರ ಪಾರಮಾರ್ಥಿಕ ಕೇಂದ್ರವೂ ಆಗಿರಬೇಕು. ಈ ಚಿಂತನೆಗೆ ಅನುಗುಣವಾಗಿ ಜೆರೂಸಲೆಮ್ಮಿನಲ್ಲಿ ಯೆಹೂದ್ಯ ವಿಶ್ವವಿದ್ಯಾಲಯವೊಂದರ ಸ್ಥಾಪನೆ ಝಿಯನಿಸ್ಟ್ ಸಂಘಟನೆಯ ಪ್ರಮುಖೋದ್ದೇಶಗಳ ಪೈಕಿ ಒಂದು. . .

"ಯೆಹೂದ್ಯರಾದ ನಮಗೆ ಪ್ಯಾಲೆಸ್ಟೈನ್ ಪ್ರಕರಣ ಕೇವಲ ಆದಾನಶೀಲ (input adding) ಕಾರ್ಯಕ್ರಮವಲ್ಲ. ವಸಾಹತುಶಾಹಿ ಯೋಜನೆಯೂ ಅಲ್ಲ. ಯೆಹೂದ್ಯ ಜನಾಂಗದವರಿಗೆ ವಿಶಿಷ್ಟ ಪ್ರಾಮುಖ್ಯವಿರುವ ಸಮಸ್ಯೆಯದು. ಪೂರ್ವ ಯೂರೋಪಿನ ಯೆಹೂದ್ಯರ ಆಸರೆದಾಣ ಮಾತ್ರ ಪ್ಯಾಲೆಸ್ಟೈನ್ ಅಲ್ಲ. ಬದಲು ಅದು ಸಮಸ್ತ ಯೆಹೂದ್ಯ ಜನಾಂಗದವರ ಸಾಂಸ್ಥಿಕ ಪ್ರೇರಣೆಯ ಮೂರ್ತರೂಪ ಕೂಡ ಹೌದು. ಈ ಸಾಂಸ್ಥಿಕ ಪ್ರಜ್ಞೆಯನ್ನು ಬಡಿದೆಬ್ಬಿಸಿ ಬಲಗೊಳಿಸಲು ಇದು ಸಕಾಲವೇ ? ಸ್ವಪ್ರೇರಿತ ಭಾವನೆಗಳಿಂದ ಮಾತ್ರವೇ ಅಲ್ಲ, ತರ್ಕಸಮ್ಮತ ಆಧಾರಗಳಿಂದ ಕೂಡ ನಾನೀ ಪ್ರಶ್ನೆಗೆ ಅನಿರ್ಬಂಧಿತ ಉತ್ತರ ಕೊಡಲು ಬದ್ಧನಾಗಿದ್ದೇನೆ. ನನ್ನ ಉತ್ತರ 'ಹೌದು' ಎಂದು.

"ಗತ ಶತ ಸಂವತ್ಸರಗಳ ಕಾಲ ಜರ್ಮನಿಯ ಯೆಹೂದ್ಯೇತಿಹಾಸವನ್ನು ಒಮ್ಮೆ ಗಮನಿಸೋಣ.

ಒಂದು ನೂರು ವರ್ಷಗಳ ಹಿಂದೆ ನಮ್ಮ ಪೂರ್ವಜರು, ಕೇವಲ ಕೆಲವು ಅಪವಾದಗಳನ್ನುಳಿದು, ಘೆಟ್ಟೋದಲ್ಲಿ [ಯೆಹೂದ್ಯರು ಕಡ್ಡಾಯವಾಗಿ ವಾಸಿಸಲು ಮೀಸಲಾಗಿದ್ದ ನಗರದ ಒಂದು ಮೂಲೆ; ಸಾಮಾಜಿಕ ಕಾನೂನಿನ ಯಾ ಆರ್ಥಿಕ ಒತ್ತಡದ ಕಾರಣವಾಗಿ ಅಲ್ಪಸಂಖ್ಯಾತ ಜನಾಂಗದವರು ಒಟ್ಟೈಸಿ ನೆಲಸುವ ತಾಂಡೆ; ಹೊಲಗೇರಿ] ವಾಸಿಸುತ್ತಿದ್ದರು. ಅವರಲ್ಲಿ ಬಹುಮಂದಿ ರಾಜಕೀಯ ಹಕ್ಕುಬಾಧ್ಯತೆಗಳಿಲ್ಲದವರು. ಮತೀಯ ಸಂಪ್ರದಾಯ, ಜೀವನರೀತಿ ಮತ್ತು ಕಾನೂನು ಪ್ರತಿಬಂಧ ಇವುಗಳ ಅಡ್ಡಗೋಡೆಗಳು ಅವರನ್ನು ಜೆಂಟೈಲರಿಂದ [ಯೆಹೂದ್ಯೇತರರು] ಪ್ರತ್ಯೇಕಿಸಿದ್ದುವು. ಅವರ ಬೌದ್ಧಿಕ ಅಭಿವರ್ಧನೆ ಸ್ವಕೀಯ ಸಾಹಿತ್ಯದಷ್ಟಕ್ಕೆ ಮಾತ್ರ ಸೀಮಿತವಾಗಿತ್ತು. ಹೀಗಾಗಿ ಮಹಾಪುನರುಜ್ಜೀವನ ಕಾಲದಿಂದಲೂ [೧೪-೧೭ ಶತಮಾನ renaissance] ಯೂರೋಪನ್ನು ಒಂದೇ ಬೀಸಿನಲ್ಲಿ ಲೇಹಿಸಿದ ಆ ಬೌದ್ಧಿಕ ಭರತದಿಂದ ಅವರು ಪ್ರಭಾವಿತರಾಗದೆ ಉಳಿದರು. ಆದರೂ ಆ ಅಪ್ರಸಿದ್ಧ ಮತ್ತು ವಿನೀತ ಮಂದಿಗೆ ಇಂದಿನ ನಮಗಿಂತ ಹೆಚ್ಚಿನ ಮೇಲ್ಮೆಯೊಂದಿತ್ತು : ಅವರಲ್ಲಿ ಪ್ರತಿಯೊಬ್ಬನೂ ರೋಮರೋಮದಲ್ಲಿ ಸಹ ಒಂದು ಸಮುದಾಯಕ್ಕೆ ಸೇರಿದವನಾಗಿದ್ದ, ಅದರಲ್ಲಿ ಪೂರ್ಣಮಗ್ನನಾಗಿದ್ದ, ತಾನು ಅದರ ಒಬ್ಬ ಗಣ್ಯ ಸದಸ್ಯನೆಂಬ ಪ್ರಜ್ಞಾವಂತನಾಗಿದ್ದ. ಇಷ್ಟಾಗಿಯೂ ಆ ಸಮುದಾಯ ಅವನಿಂದ ಅವನ ಚಿಂತನೆಯ ನೈಸರ್ಗಿಕ ವಿಧಿಗಳಿಗೆ ವಿರೋಧವಾದದ್ದೇನನ್ನೂ ತಗಾದೆ ಮಾಡಲಿಲ್ಲ. ಅಂದಿನ ದಿನಗಳಲ್ಲಿ ನಮ್ಮ ಪೂರ್ವಜರು ಬೌದ್ಧಿಕವಾಗಿಯೂ ದೈಹಿಕವಾಗಿಯೂ ತೀರ ದುರ್ಬಲ ಮಾದರಿಗಳಾಗಿದ್ದರು. ಆದರೆ ಸಾಮಾಜಿಕವಾಗಿ ಹೇಳುವುದಾದರೆ ಅತ್ಯಂತ ಅಪೇಕ್ಷಣೀಯ ಭಾವಸ್ವಾಸ್ಥ್ಯಗಳಿಸಿದ್ದರು.

"ಅಷ್ಟರಲ್ಲಿ ಬಂದಿತು ವಿಮೋಚನೆ. ಇದು ವ್ಯಕ್ತಿಯ ಮುಂದೆ ಆತ ಕನಸಿನಲ್ಲೂ ಕಾಣದಿದ್ದ ಸಾಧ್ಯತೆಗಳನ್ನು ತೆರೆದೊಡ್ಡಿತು. ಆಗ ಕೆಲಮಂದಿ ವಾಣಿಜ್ಯ ಹಾಗೂ ಸಾಮಾಜಿಕ ಜೀವನದ ಮೇಲುಪ್ಪರಿಗೆಗಳಿಗೇರಿ ಅಲ್ಲಿ ತಮಗೊಂದು ನೆಲೆ ಗಿಟ್ಟಿಸಿಕೊಂಡರು. ಪಾಶ್ಚಾತ್ಯ ಲೋಕದ ಕಲೆ ಮತ್ತು ವಿಜ್ಞಾನ ಸಾಧಿಸಿದ್ದ ಅದ್ಭುತ ಸಿದ್ಧಿಗಳನ್ನು ಅವರು ಅತ್ಯಾಶೆಯಿಂದ ಕಬಳಿಸಿದರು. ಈ ಪ್ರಕ್ರಿಯೆಯಲ್ಲಿ ಅವರು ಅತಿರೇಕ ಉತ್ಸಾಹದಿಂದ ಭಾಗಿಗಳಾದದ್ದು ಮಾತ್ರವಲ್ಲ, ಅದಕ್ಕೆ ಸ್ವತಃ ಅಮೂಲ್ಯ ಸ್ವಂತ ಕೊಡುಗೆಗಳನ್ನು ಕೂಡ ಸಲ್ಲಿಸಿದರು. ಅದೇ ವೇಳೆ ಅವರು ಜೆಂಟೈಲ್ ಜೀವನದ ಬಾಹ್ಯರೂಪಗಳನ್ನು ಅನುಕರಿಸುತ್ತ ತಮ್ಮ ಧಾರ್ಮಿಕ ಹಾಗೂ ಸಾಮಾಜಿಕ ಸಂಪ್ರದಾಯಗಳಿಂದ ಹೆಚ್ಚು ಹೆಚ್ಚು ದೂರ ಸರಿದರು. ಅಲ್ಲದೆ ಜೆಂಟೈಲ್ ಆಚಾರ ವಿಚಾರಗಳನ್ನೂ ರೀತಿರಿವಾಜುಗಳನ್ನೂ ಚಿಂತನಧಾಟಿಯನ್ನೂ ಅಳವಡಿಸಿಕೊಂಡರು. ಅವರು ಬಾಳುತ್ತಿದ್ದಲ್ಲಿಯ ಜನಾಂಗದ ಸಂಖ್ಯಾಬಾಹುಳ್ಯ ಮತ್ತು ಅತ್ಯಧಿಕವಾಗಿ ವ್ಯವಸ್ಥೆಗೊಂಡಿದ್ದ ಸಂಸ್ಕೃತಿ ಇವುಗಳ ನಡುವೆ ಅವರ ಅಸ್ತಿತ್ವವು ಪೂರ್ಣ ನಷ್ಟವಾಗಿ ಹೋದೀತೋ ಹೀಗಾಗಿ ಕೆಲವೇ ತಲೆಮಾರುಗಳಲ್ಲಿ ಅವರ ಯಾವುದೇ ಛಾಯೆಯೂ ಉಳಿದಿರಲಾರದೋ ಎಂಬಂತೆ ಭಾಸವಾಯಿತು. ಮಧ್ಯ ಮತ್ತು ಪಶ್ಚಿಮ ಯೂರೋಪಿನಲ್ಲಿ ಯೆಹೂದ್ಯ ರಾಷ್ಟ್ರಕತ್ವದ (nationality) ಪೂರ್ಣ ಅಂತರ್ಧಾನ ಅನಿವಾರ್ಯವೆಂದು ತೋರಿತು.

"ಆದರೆ ಘಟನೆಗಳು ಬೇರೆ ತೆರನಾಗಿಯೇ ರೂಪುಗೊಂಡುವು. ವಿವಿಧ ಜನಾಂಗಗಳಿಗೆ ಸೇರಿದ ರಾಷ್ಟ್ರಕತ್ವಗಳಿಗೆ ಪರಸ್ಪರ ಬೆಸೆತವನ್ನು ನಿರೋಧಿಸುವ ಅಂತಃಪ್ರಜ್ಞೆಯೊಂದಿರುವುದೆಂದು ಅನ್ನಿಸುತ್ತದೆ. ಭಾಷೆ ಮತ್ತು ರೀತಿಗಳಲ್ಲಿಯೂ, ತಕ್ಕಷ್ಟು ವ್ಯಾಪಕವಾಗಿ, ಧಾರ್ಮಿಕ ಆಚರಣೆಗಳಲ್ಲಿಯೂ ಯೆಹೂದ್ಯರು ತಮ್ಮ ವಲಯದ ಯೂರೋಪಿಯನ್ ಜನರ ಜೊತೆ ಎಷ್ಟು ಹೊಂದಾಣಿಕೆ ತಂದುಕೊಂಡಿದ್ದರೂ ಯೆಹೂದ್ಯರ ಹಾಗೂ ಅವರ ಆತಿಥೇಯರ ನಡುವಿನ ಪರಕೀಯ ಭಾವ

ಎಂದೂ ಮಾಸಲಿಲ್ಲ. ಈ ಸ್ವಪ್ರೇರಿತ ಭಾವವೇ ಪ್ರತಿಸೆಮಿಟಿಸಮ್ಮಿನ [anti-semitism; ಮೂಲತಃ Shemನಿಂದ ಬಂದವರು Semites, ವ್ಯಾಪಕವಾಗಿ ಯೆಹೂದ್ಯರು] ಅಂದರೆ ಯೆಹೂದ್ಯದ್ವೇಷದ ಕಾರಣ. ಆದ್ದರಿಂದ ಇದನ್ನು ಸದ್ಭಾವಪೂರಿತ ಪ್ರಚಾರದಿಂದ ನಿವಾರಿಸುವುದು ಸಾಧ್ಯವಾಗದು. ತಮ್ಮ ತಮ್ಮ ಜಾಡುಗಳಲ್ಲಿ ಸಾಗುವುದೇ ರಾಷ್ಟ್ರಕತ್ವಗಳ ಪ್ರವೃತ್ತಿ—ಅವು ಒಂದಿಕೆಗೆ (blending) ಒಳಪಡವು. ಇಂಥ ಸನ್ನಿವೇಶದಲ್ಲಿ ಪರಸ್ಪರ ಸಹಿಷ್ಣುತೆ ಹಾಗೂ ಗೌರವಗಳಿಂದ ಮಾತ್ರ ತೃಪ್ತಿಕರ ಪರಿಸ್ಥಿತಿಯನ್ನು ತಲಪಬಹುದು, ಅಷ್ಟೆ.

"ಆ ದಿಶೆಯಲ್ಲಿಯ ಮೊದಲಿನ ಹೆಜ್ಜೆಯೆಂದರೆ ಯೆಹೂದ್ಯರಾದ ನಾವು ನಮ್ಮ ರಾಷ್ಟ್ರಕತ್ವದ ಇರವಿನ ಬಗ್ಗೆ ಮಗುದೊಮ್ಮೆ ಪ್ರಜ್ಞಾವಂತರಾಗುವುದು, ಹಾಗೂ ಆರೋಗ್ಯಕರ ಅಸ್ತಿತ್ವಕ್ಕೆ ಅವಶ್ಯವಾದ ಸ್ವಾಭಿಮಾನವನ್ನು ಮರುಗಳಿಸಿಕೊಳ್ಳುವುದು. ಇನ್ನೊಮ್ಮೆ ನಾವು ನಮ್ಮ ಪೂರ್ವಜರ ಹಾಗೂ ನಮ್ಮ ಇತಿಹಾಸದ ಬಗ್ಗೆ ಹೆಮ್ಮೆ ತಳೆಯಲು ಕಲಿಯಬೇಕು, ಮತ್ತು ಮಗುದೊಮ್ಮೆ ಒಂದು ಜನಾಂಗವಾಗಿ ನಮ್ಮ ಸಮುದಾಯಪ್ರಜ್ಞೆಯನ್ನು ಬಲಗೊಳಿಸಲು ಉದ್ದೇಶಿತವಾದ ಸಾಂಸ್ಕೃತಿಕ ಕಾರ್ಯಗಳಲ್ಲಿ ಉದ್ಯುಕ್ತರಾಗಬೇಕು. ನಾವು ಮಾನವಕುಲದ ಸಾಂಸ್ಕೃತಿಕ ಅಭಿವರ್ಧನೆಯಲ್ಲಿ ವ್ಯಕ್ತಿಗಳಾಗಿ ಪಾತ್ರವಹಿಸಿದರೆ ಮಾತ್ರ ಸಾಲದು, ಒಟ್ಟಾಗಿ ಜನಾಂಗಗಳು ನಿರ್ವಹಿಸಬಲ್ಲ ಕಾರ್ಯಗಳನ್ನು ಕೂಡ ಪ್ರಯತ್ನಿಸಬೇಕು. ಈ ತೆರನಾಗಿ ಮಾತ್ರ ಯೆಹೂದ್ಯರು ಸಾಮಾಜಿಕ ಆರೋಗ್ಯವನ್ನು ಮರುಗಳಿಸಬಲ್ಲರು.

"ಈ ದೃಷ್ಟಿಯಿಂದ ನೀವು ಝಿಯಯನಿಸ್ಟ್ ಚಳವಳಿಯನ್ನು ಪರಾಂಬರಿಸಬೇಕೆಂಬುದಾಗಿ ಅಪೇಕ್ಷಿಸುತ್ತೇನೆ. ನಮ್ಮ ಮೂಲನಿವಾಸದ ಆರ್ಥಿಕ ಹಾಗೂ ಸಾಂಸ್ಕೃತಿಕ ಪುನಾರಚನೆಯ ಕರ್ತವ್ಯವನ್ನು ಇಂದು ಇತಿಹಾಸವೇ ನಮಗೆ ವಿಧಿಸಿದೆ. ಉತ್ಸಾಹಿಗಳು, ಅದ್ಭುತ ಸಾಮರ್ಥ್ಯೋಪೇತ ಪುರುಷರು ಈಗಾಗಲೇ ಜಾಡು ಕಡಿದಿದ್ದಾರೆ. ನಮ್ಮ ಜನಾಂಗದ ಹಲವಾರು ಶ್ರೇಷ್ಠ ಸದಸ್ಯರು ಈ ಉದ್ದೇಶಸಾಧನೆಗೆ ತ್ರಿಕರಣಪೂರ್ವಕಸೇವೆ ಸಲ್ಲಿಸಲು ಮುಂದಾಗಿದ್ದಾರೆ. ಆ ಪ್ರತಿಯೊಬ್ಬ ವ್ಯಕ್ತಿಯೂ ಈ ಕಾರ್ಯದ ಪ್ರಾಮುಖ್ಯವನ್ನು ಪೂರ್ತಿಯಾಗಿ ಗ್ರಹಿಸುವಂತಾಗಲಿ, ಹಾಗೂ ಆತನ ಸಾಮರ್ಥ್ಯಾನುಸಾರ ಇದರ ಯಶಸ್ಸಿಗೆ ತನ್ನ ದೇಣಿಗೆ ಸಲ್ಲಿಸುವಂತಾಗಲಿ."

ಝಿಯಯನಿಸ್ಟ್ ಚಳವಳಿಯನ್ನು ಐನ್‌ಸ್ಟೈನ್ ಖಚಿತವಾಗಿ ಬೆಂಬಲಿಸಿದ್ದು ಬಹುಮಂದಿ ಜರ್ಮನ್ ಯೆಹೂದ್ಯರನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿಹಾಕಿತು. ತಮ್ಮ ವಿದ್ಯೆಬುದ್ಧಿಗಳಿಂದಲೂ ಸ್ಥಾನಸಿದ್ಧಿಗಳಿಂದಲೂ ಸಂಪತ್ತು ಸಮೃದ್ಧಿಗಳಿಂದಲೂ ತಾವು ಇತರ ಎಲ್ಲ ರಾಷ್ಟ್ರಗಳ ಯೆಹೂದ್ಯರಿಗಿಂತಲೂ ಶ್ರೇಷ್ಠ ವರ್ಗದವರೆಂಬ 'ರಾಜರಕ್ತವಿನ್ಯಾಸ' ತಳೆದಿದ್ದ ಇವರಿಗೆ ಸಾಕ್ಷಾತ್ ತಮ್ಮ ರಾಜನೇ ತಮಗೆದುರಾಗಿ ನಿಂತದ್ದು ವಿಚಿತ್ರವೆನಿಸಿತು. ಅಖಂಡ ಜರ್ಮನ್ ಸಂಸ್ಕೃತಿಯೊಂದಿಗೆ ವಿಲೀನವಾಗಬೇಕೆಂಬ ತಮ್ಮ ಆಸೆಗೆ ಐನ್‌ಸ್ಟೈನರ ಸ್ಪಷ್ಟ ನಿಲವು ಬಿಗಿ ಕಡಿವಾಣ ತೊಡಿಸಿತೆಂದು ಇವರು ಬಗೆದರು.

ವಿಲೀನೀಕರಣವನ್ನು ಸಮರ್ಥಿಸುವ ಯೆಹೂದ್ಯನಂಬಿಕೆಯ ಜರ್ಮನ್‌ನಾಗರಿಕರ ಕೇಂದ್ರೀಯ ಸಂಸ್ಥೆ ಪ್ರತಿಸೆಮಿಟಿಸಮ್ಮನ್ನು ಬೌದ್ಧಿಕ ಸಮತಲದಲ್ಲಿ ಎದುರಿಸಲೋಸ್ಕರ ಸಾರ್ವಜನಿಕ ಸಭೆ ಏರ್ಪಡಿಸಿತು. ಸಹಜವಾಗಿ ಐನ್‌ಸ್ಟೈನರಿಗೂ ಆಮಂತ್ರಣ ಪತ್ರ ಹೋಯಿತು. ೧೯೨೦ ಏಪ್ರಿಲ್ ಇರಂದು ಇವರು ಉತ್ತರ ಬರೆದರು :

"ಇಂಥ ಒಂದು ತಿಳಿವಳಿಕೆ ಜಯಗಳಿಸುವುದು ಸಾಧ್ಯವೆಂಬ ನಂಬಿಕೆ ನನಗಿದ್ದಿದ್ದರೆ ನಾನು ಸಂತೋಷವಾಗಿ ಬರುತ್ತಿದ್ದೆ.

"ಮೊದಲನೆಯದಾಗಿ, ಪ್ರತಿಸೆಮಿಟಿಸಮ್ಮನ್ನೂ ನಮ್ಮ ಯೆಹೂದ್ಯ ಮಂದಿಯಲ್ಲಿರುವ ದಾಸ್ಯ ಭಾವವನ್ನೂ ಹೆಚ್ಚಿನ ತಿಳಿವಳಿಕೆಯಿಂದ ಎದುರಿಸಬೇಕಾದೀತು. ನಮ್ಮವರಲ್ಲೇ ಅಧಿಕ ಘನತೆ ಮತ್ತು ಅಧಿಕ ನಿರವಲಂಬನೆ ಅಗತ್ಯ. ನಾವೊಂದು ರಾಷ್ಟ್ರವೆಂಬುದಾಗಿ ದಿಟ್ಟತನದಿಂದ ನಮ್ಮನ್ನು ನಾವೇ ಪರಿಗಣಿಸದಿರುವ ತನಕ ಮತ್ತು ನಮಗೆ ನಾವೇ ಗೌರವ ನೀಡದಿರುವ ತನಕ ನಾವು ಇತರರ ಮನ್ನಣೆಗೆ ಪಾತ್ರರಾಗೆವು ; ಅಥವಾ ಸರಿಯಾಗಿ ಹೇಳುವುದಾದರೆ ಆಗ ಮಾತ್ರ ಆ ಮನ್ನಣೆ ತಾನಾಗಿಯೇ ನಮ್ಮೆಡೆಗೆ ಬಂದೀತು, ಅಷ್ಟೆ. ಯೆಹೂದ್ಯೇತರರೊಡನೆ ಸಂಪರ್ಕವಿರುವಲ್ಲಿಯ ತನಕವೂ ಪ್ರತಿಸೆಮಿಟಿಸಮ್ ಒಂದು ಮನೋವೈಜ್ಞಾನಿಕ ವಿದ್ಯಮಾನವಾಗಿ ಇದ್ದೇ ಇರುತ್ತದೆ. ಅದರಿಂದೇನಾದೀತು ? ಪ್ರಾಯಶಃ ನಮ್ಮನ್ನು ನಾವು ಒಂದು ಜನಾಂಗವಾಗಿ ಕಾಪಾಡಿಕೊಂಡು ಬಂದಿರುವುದು ಪ್ರತಿಸೆಮಿಟಿಸಮ್ಮಿನ ಪ್ರಭಾವ. ಕನಿಷ್ಠಪಕ್ಷ ನಾನಾದರೂ ಹಾಗೆ ಭಾವಿಸಿದ್ದೇನೆ.

"ಯೆಹೂದ್ಯನಂಬಿಕೆಯ ಜರ್ಮನ್‌ನಾಗರಿಕರು ಎನ್ನುವಂಥ ಪದಗುಚ್ಛವನ್ನು ನಾನು ಕಂಡುದಾದರೆ ಸ್ವಲ್ಪಮಟ್ಟಿಗೆ ವಿಷಾದಯುಕ್ತ ನಗು ಬೀರದಿರಲಾರೆ. ಅಂದವಾದ ಈ ಹಣೆಚೀಟಿಯಲ್ಲಿ ಏನು ಕಾಣುತ್ತೇವೆ ? ಯೆಹೂದ್ಯನಂಬಿಕೆ ಎಂದರೇನು ? ಒಬ್ಬ ವ್ಯಕ್ತಿ ಯೆಹೂದ್ಯನಾಗಿ ಉಳಿಯುವುದು ಸಾಧ್ಯವಾಗದಂಥ ಅಪನಂಬಿಕೆಯೊಂದಿದೆಯೇ ? ಇಲ್ಲ. ಆದರೆ ಸಂಭಾವಿತ ಜನ ಎರಡು ಸಂಗತಿಗಳನ್ನು ನಂಬುವರು ಎಂಬುದನ್ನಿದು ಸೂಚಿಸುತ್ತದೆ : (೧) ನನ್ನ ಬಡ (ಪೂರ್ವ ಯೂರೋಪಿನ) ಯೆಹೂದ್ಯ ಜ್ಞಾತಿಗಳೊಡನೆ ನಾನು ಯಾವ ಸಂಬಂಧವನ್ನೂ ಇಟ್ಟುಕೊಳ್ಳ ಬಯಸುವುದಿಲ್ಲ, ಮತ್ತು (೨) ನನ್ನ ಸ್ವಂತಮಂದಿಯ ಮಗುವೆಂಬುದಾಗಿ ನಾನು ಪರಿಗಣಿಸಲ್ಪಡಬೇಕೆಂದು ಅಪೇಕ್ಷಿಸುವುದಿಲ್ಲ. ಬದಲು, ಯೆಹೂದ್ಯ ಕೋಮಿನ ಒಬ್ಬ ಸದಸ್ಯನೆಂಬುದಾಗಿ ಮಾತ್ರ ಪರಿಗಣಿಸಲ್ಪಡಬೇಕೆಂದು ಅಪೇಕ್ಷಿಸುತ್ತೇನೆ.

"ಇದು ನಿಷ್ಠೆಯೇ ? ಇಂಥ ಅಪ್ರಾಮಾಣಿಕ ಮಂದಿಯ ಬಗ್ಗೆ 'ಆರ್ಯ'ನಲ್ಲಿ ಏನಾದರೂ ಗೌರವ ಮೂಡೀತೇ ? ನಾನು ಜರ್ಮನ್ ನಾಗರಿಕ ಅಲ್ಲ, ಅಥವಾ 'ಯೆಹೂದ್ಯನಂಬಿಕೆ' ಎನ್ನಬಹುದಾದ ಯಾವ ಗುಣವೂ ನನ್ನಲ್ಲಿಲ್ಲ. ಆದರೆ ನಾನೊಬ್ಬ ಯೆಹೂದ್ಯ. ಯೆಹೂದ್ಯರು ಭಗವಂತನ ಸರ್ವಶ್ರೇಷ್ಠ ಸೃಷ್ಟಿ ಎಂಬುದಾಗಿ ನಾನು ಪರಿಗಣಿಸದಿದ್ದರೂ ಈ ಬಳಗಕ್ಕೆ ಸೇರಿರುವುದು ನನಗೆ ಸಂತೋಷ ನೀಡಿದೆ. ಪ್ರತಿಸೆಮಿಟಿಸಮ್ಮನ್ನು ನಾವು ಶಾಂತವಾಗಿ ಯೆಹೂದ್ಯೇತರರಿಗೆ ಬಿಟ್ಟುಕೊಟ್ಟು ನಮ್ಮ ಬಳಗದ ಜನರ ಬಗ್ಗೆ ಒಲವನ್ನು ಉಳಿಸಿಕೊಳ್ಳೋಣ.

"ನನ್ನ ಈ ಆತ್ಮನಿವೇದನೆ ನಿಮ್ಮನ್ನು ರೊಚ್ಚಿಗೇಳಿಸುವುದಿಲ್ಲವೆಂದು ಆಶಿಸುತ್ತೇನೆ. ನೋವು ಅಥವಾ ನಿರ್ದಯ ನನ್ನ ಉದ್ದೇಶವಲ್ಲ."

## ೭. ಅಪೂರ್ವ ಪಶ್ಚಿಮಾಭಿಯಾನ

### ಅಮೆರಿಕಯಾನದ ಪೂರ್ವಸಿದ್ಧತೆ

ಯೆಹೂದ್ಯರಿಗೆ ಜೀವನದಲ್ಲಿ ಸುಖಸಂತೋಷವನ್ನು ಮತ್ತೆ ಗಳಿಸಿಕೊಡಬಲ್ಲ ನೂತನ ಯೆಹೂದ್ಯ ಆದರ್ಶವೇ ಝಿಯನಿಸಮ್. ವೈಝ್‌ಮನ್ ಅವರ ಆಹ್ವಾನವನ್ನು ನಾನು ಅಂಗೀಕರಿಸಿದ್ದು ನನಗೆ ಸಂತೋಷ ನೀಡಿದೆ.

ಐನ್‌ಸ್ಟೈನ್

ಚೈಮ್ ವೈಝ್‌ಮನ್ ಶ್ರೇಷ್ಠ ತಂತ್ರವಿದ ಮಾತ್ರವಲ್ಲ ಮಹಾಮುತ್ಸದ್ದಿಯೂ ಹೌದು.

ಯೆಹೂದ್ಯರಿಗೆ ಪ್ಯಾಲೆಸ್ಟೈನಿನಲ್ಲಿ ಚಿರನೆಲೆ ಒದಗಿಸಿ ಅವರನ್ನು ಒಂದು ಜನಾಂಗವಾಗಿ ನೇಯುವುದು ಇವರ ಬದುಕಿನ ಏಕೈಕ ಉದ್ದೇಶವಾಗಿತ್ತು. ಇದನ್ನು ಈಡೇರಿಸಲು ಮೊದಲ ಹೆಜ್ಜೆಯಾಗಿ ಜೆರೂಸಲೆಮ್ಮಿನಲ್ಲಿ ಆಧುನಿಕ ಮಾದರಿಯ ಯೆಹೂದ್ಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕು, ಅದು ಪ್ರಪಂಚದ ಮಹಾಮತಿಗಳನ್ನು ಆಕರ್ಷಿಸಬಲ್ಲ ಗುರುತ್ವಾಕರ್ಷಣ ಕೇಂದ್ರವಾಗಬೇಕು ಎಂಬುದಾಗಿ ಹಂಚಿಕೆ ಹಮ್ಮಿಕೊಂಡರು. ಇಂಥ ಎಲ್ಲ ಕೆಲಸಗಳ ತಳದಲ್ಲಿ ಎರಡು ಮುಖ್ಯ ಪರಿಕರಗಳು ಅಗತ್ಯ : ಸಂಘಟನೆ ಮತ್ತು ಸಂಪತ್ತು. ಮೊದಲನೆಯದನ್ನು ವೈಝ್‌ಮನ್ ಒದಗಿಸಿದ್ದರು. ಎರಡನೆಯದನ್ನು ಕಲೆ ಹಾಕಲು ಅವರೀಗ ಮುಂದಾದರು.

ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ನೆಲಸಿದ್ದ ಯೆಹೂದ್ಯರು ಅತ್ಯಂತ ಶ್ರೀಮಂತರಾಗಿದ್ದರು. ನವನಾಗರಿಕತೆಯ ಆ ಕ್ವಥನ ಭಾಂಡದಲ್ಲಿ ಸಂಲಯಿಸುತ್ತಿದ್ದ (fuse) ಇವರ ವಿಶೇಷಾಸಕ್ತಿ ಇದ್ದುದು ವ್ಯಾವಹಾರಿಕ ಪ್ರಪಂಚದ ಗೆಲವಿನಲ್ಲಿ ಮಾತ್ರ : ದುಡಿಮೆ-ಗಳಿಕೆ-ದುಡಿಮೆ-ಗಳಿಕೆ ಗಾಲಿ ಉರುಳಿಕೆಯಲ್ಲಿ ಯೆಹೂದ್ಯತ್ವ ಅಥವಾ ಝಿಯನಿಸಮ್ ಎಂಬ ಅಮೂರ್ತಪಾರಲೌಕಿಕ ಗುಣ ಈ ಇಹಲೋಕದ ಚತುರರನ್ನು ಅಷ್ಟೇನೂ ಆಕರ್ಷಿಸುತ್ತಿರಲಿಲ್ಲ. ವಿಶಾಲ ರಾಷ್ಟ್ರದ ವಿಭಿನ್ನ ಆರ್ಥಿಕ ಸ್ತರಗಳಲ್ಲಿ ಹರಡಿ ಹಂಚಿಹೋಗಿದ್ದ ಯೆಹೂದ್ಯ ಮಂದಿಯನ್ನು ಒಂದು ಕಾರಣದ ಸುತ್ತ ಸಂಘಟಿಸಿ ಅವರ ಔದಾರ್ಯಪ್ರಜ್ಞೆಯನ್ನು ಸಂಘನಿಸಿ (condense) ಅದಕ್ಕೆ ಮನವಿ ಸಲ್ಲಿಸಿ ಅವರ ಮನವೊಲಿಸಿ ಅವರಿಂದ ಆರ್ಥಿಕ ಸಹಾಯ ಗಳಿಸುವುದು ಹೇಗೆ ಎನ್ನುವುದು ವೈಝ್‌ಮನ್ನರ ಎದುರಿದ್ದ ಸವಾಲಾಗಿತ್ತು.

ಸಹಜವಾಗಿ ಇವರ ದೃಷ್ಟಿ ಐನ್‌ಸ್ಟೈನರ ಮೇಲೆ ಬಿತ್ತು. ತಮ್ಮ ವೈಜ್ಞಾನಿಕ ಸಾಧನೆ ಸಿದ್ಧಿಗಳಿಂದ ಹೇಗೊ ನಿರ್ಭೀತ ವಿನ್ಯಾಸ ವರ್ತನೆಗಳಿಂದ ಹಾಗೆ ಪ್ರಪಂಚಾದ್ಯಂತ ಸುಪ್ರಖ್ಯಾತರಾಗಿದ್ದ ಐನ್‌ಸ್ಟೈನ್ ಸಾರ್ವಜನಿಕ ವಲಯದಲ್ಲಿ ಚಲಾವಣೆಗೆ ಒದಗಬಹುದಾದ ಅತ್ಯಮೂಲ್ಯ ನಾಣ್ಯವೆಂದು ಇವರು ಬಗೆದರು. ಆದರೆ ರಾಜಕಾರಣದಲ್ಲಿ ಗೆಲವು ಗೆಲ್ಲುವಂತೆ ಬೇರಾವುದೂ ಗೆಲ್ಲದು ಎಂಬ ವ್ಯವಹಾರನೀತಿಯನ್ನು ಪರಿಶುದ್ಧ ಜೀವಿ ಐನ್‌ಸ್ಟೈನರಲ್ಲಿ ನಿರೀಕ್ಷಿಸುವುದು ತಪ್ಪು, ಅದು ಅಪಾಯಕಾರಿಯೂ ಆದೀತು ಎಂಬ ಸೂಕ್ಷ್ಮ ಇವರಿಗೆ ತಿಳಿಯದ್ದಲ್ಲ. ಆಗ ಅರಬ್ಬರ ನಾಡಾಗಿದ್ದ ಪ್ಯಾಲೆಸ್ಟೈನಿನಲ್ಲಿ ಯೆಹೂದ್ಯರಿಗೆ ನೆಲೆ ಒದಗಿಸಲು ಬಲಪ್ರದರ್ಶನ ಅಗತ್ಯ. ಮೊದಲೇ ಸಾಮರಸ್ಯವಿರದ ಅರಬ್-ಯೆಹೂದ್ಯ ವಿಷಮಕೂಟದಲ್ಲಿ ಈ ಪ್ರಕರಣ ದ್ವೇಷಾನಲ ಕಿಡಿಸದಿರದು, ಆದರೆ ಈ ಅನಪೇಕ್ಷಣೀಯ ಉಪೋತ್ಪನ್ನವನ್ನು ಮುತ್ಸದ್ದಿತನದಿಂದ ನಿವಾರಿಸಿ ಗುರಿಯತ್ತ ನಡೆಯಬೇಕು—ಇದು ಗಟ್ಟಿ ನೆಲದ ಮೇಲೆ ನಡೆಯುತ್ತಿದ್ದ ವೈಝ್‌ಮನ್ನರ ದಿಟ್ಟ ನಿಲವು. ಐನ್‌ಸ್ಟೈನರದು ? ಇವರು ಶಾಂತಿವಾದಿ. ಬಲಪ್ರಯೋಗಕ್ಕೆ ಹುಟ್ಟಾಕಟ್ಟಾ ವಿರೋಧಿ. ಯೆಹೂದ್ಯತ್ವ ಜೀವನಧರ್ಮವಾಗಿ ಪ್ರಕಟವಾಗಬೇಕೇ ವಿನಾ ಪ್ರತ್ಯೇಕೀಕರಣದಲ್ಲಿ ಹೆಪ್ಪುಗಟ್ಟಬಾರದೆಂಬ ಉದಾತ್ತ ಧೋರಣೆ ತಳೆದವರು. ವಿಜ್ಞಾನದಂತೆ ಮಾನವವ್ಯವಹಾರವೂ ಜಾತ್ಯತೀತವಾಗಿರಬೇಕೆಂದು ನಂಬಿದವರು. ಈ ಶೃಂಗಸ್ಥಾನದಿಂದ ಝಿಯನಿಸಮ್ಮನ್ನು ಬೆಂಬಲಿಸಿದವರು, ವೈಝ್‌ಮನ್ ಈಗ ತಮ್ಮ ವಾಸ್ತವತೆಯ ಗಟ್ಟಿ ನೆಲಕ್ಕೂ ಐನ್‌ಸ್ಟೈನರ ಆದರ್ಶದ ಕನಸಿನ ಮನೆಗೂ ನಡುವೆ ಸಂಕ ಕಟ್ಟುವ ಕರ್ತವ್ಯಕ್ಕಿಳಿದರು. ಇವರಿಬ್ಬರೂ ಪರಸ್ಪರ ಗೌರವ ಅಭಿಮಾನವಿದ್ದ ಸ್ನೇಹಿತರು. ಭೌಗೋಲಿಕವಾಗಿ ಇವರ ನಡುವೆ ಸಾಕಷ್ಟು ವಿಶಾಲ ಅಂತರವಿದ್ದರೂ—ಜರ್ಮನಿ, ಇಂಗ್ಲೆಂಡ್—ಝಿಯನಿಸಮ್ ಇವರ ನಡುವೆ ನಿಕಟ ಬಾಂಧವ್ಯ ಬೆಸೆದಿತ್ತು. ಅಂದಮಾತ್ರಕ್ಕೆ ವೈಝ್‌ಮನ್ ಅನುಸರಿಸುತ್ತಿದ್ದ ವಿಧಾನಗಳನ್ನು ಐನ್‌ಸ್ಟೈನ್ ಪೂರ್ಣವಾಗಿ ಅನುಮೋದಿಸುತ್ತಿದ್ದರೆಂದೇನೂ ಭಾವಿಸಬೇಕಾಗಿಲ್ಲ.

ಅವುಗಳ ಹಿಂದಿದ್ದ ಘನೋದ್ದೇಶವನ್ನು ಮಾತ್ರ ಇವರು ಮೆಚ್ಚಿಕೊಂಡಿದ್ದರು, ಅಷ್ಟೆ.

ನಿಧಿಸಂಗ್ರಹಾರ್ಥ ಅಮೆರಿಕಯಾತ್ರೆ ಕೈಗೊಳ್ಳಲು ವೈಝ್‌ಮನ್ ೧೯೨೦ರ ಕೊನೆ ಭಾಗದಲ್ಲಿ ನಿರ್ಧರಿಸಿದರು. ತಮ್ಮ ಬಳಗದಲ್ಲಿ ಐನ್‌ಸ್ಟೈನ್ ಇರಲೇಬೇಕೆಂಬುದು ಅವರ ಆಸೆ. ಪತ್ರ ವ್ಯವಹಾರ ನಡೆಯಿತು. ಇವರನ್ನು ಮುಖತಃ ಕಂಡು ಇವರ ಮನವೊಲಿಸಲು ವೈಝ್‌ಮನ್ ಜರ್ಮನಿಯಲ್ಲಿದ್ದ ತಮ್ಮ ಮಿತ್ರ ಕುರ್ಟ್ ಬ್ಲೂಮೆನ್‌ಫೆಲ್ಡ್ (೧೮೮೪-೧೯೬೩) ಎಂಬವರನ್ನು ನಿಯೋಗಿಸಿದ್ದರು.

ಬ್ಲೂಮೆನ್‌ಫೆಲ್ಡ್, "ಮಾನ್ಯರೇ ! ವೈಝ್‌ಮನ್ನರ ಜೊತೆ ಅಮೆರಿಕಕ್ಕೆ ಹೋಗಲು ದಯಮಾಡಿ ಒಪ್ಪಬೇಕು." ಐನ್‌ಸ್ಟೈನ್, "ಆಗದು. ಜೆರೂಸಲೆಮ್ಮಿನಲ್ಲಿ ಹೀಬ್ರೂ ವಿಶ್ವವಿದ್ಯಾಲಯ ಎಂಬ ಭಾವನೆ ಅಷ್ಟೊಂದು ಅಮೂಲ್ಯವಾದದ್ದೆಂದು ತಿಳಿದಿದ್ದೀರಾ ?"

ಬ್ಲೂಮೆನ್‌ಫೆಲ್ಡರಿಗೆ ಸಮರ್ಪಕ ಜವಾಬು ನೀಡಲಾಗಲಿಲ್ಲ.

ಐನ್‌ಸ್ಟೈನ್, "ಖುದ್ದು ನೀವೇ ಪೂರ್ಣ ಮನಸ್ಸಿನಿಂದ ಬೆಂಬಲಿಸದ ಭಾವನೆಯನ್ನು ನಾನು ಎತ್ತಿ ಹಿಡಿಯಬಲ್ಲೆನೆಂದು ಹೇಗೆ ತಾನೇ ನಿರೀಕ್ಷಿಸುವಿರಿ ? ಅಲ್ಲದೆ ಅಲ್ಲಿ ನಾನು ಯಾವ ಪಾತ್ರ ವಹಿಸಬೇಕೆಂದು ನೀವು ಅಪೇಕ್ಷಿಸುತ್ತೀರೊ ಅದಕ್ಕೆ ನಾನು ಅರ್ಹನಲ್ಲ. ನಾನು ವಾಗ್ಮಿ ಅಲ್ಲ. ಜನರನ್ನು ಒಲಿಸಬಲ್ಲಂಥ ಏನನ್ನೂ ಎಂದೂ ಮಾಡಲಾರೆ. ಅವರಿಗೆ ಬೇಕಾಗಿರುವುದು, ಈಗ ಸಾರ್ವಜನಿಕ ದೃಷ್ಟಿಕ್ಷೇತ್ರದಲ್ಲಿರುವ, ನನ್ನ ಹೆಸರು ಮಾತ್ರ."

ಬ್ಲೂಮೆನ್‌ಫೆಲ್ಡರ ದೌತ್ಯಕ್ಕೆ ಹಿಮಶೈತ್ಯ ಬಡಿದು ಪೈತ್ಯ ಹಿಡಿದು ಅದು ಕಗ್ಗಲ್ಲ ಮೇಲೆ ಕೆಡೆಯಿತು. ಅನ್ಯಮಾರ್ಗ ತೋಚದೆ ಅವರು ವೈಝ್‌ಮನ್ನರ ತಂತಿ ಸಂದೇಶವನ್ನೇ ಮರುಜಪಿಸಿದರು, "ಇಂದು ಝಿಯನಿಸಮ್ಮಿಗೆ ಏನು ಬೇಕು ಎಂಬುದನ್ನು ನಾವು ತಿಳಿದು ಆಗಬೇಕಾದದ್ದೇನೂ ಇಲ್ಲ. ಇದರ ತಳದಲ್ಲಿ ಮಡುಗಟ್ಟಿರುವ ಸಮಸ್ಯೆಗಳ ಬಗ್ಗೆ ನಮಗಿಬ್ಬರಿಗೂ ತಿಳಿದಿರುವುದು ಅತ್ಯಲ್ಪ. ವೈಝ್‌ಮನ್ ಝಿಯನಿಸಮ್ಮನ್ನು ಪ್ರತಿನಿಧಿಸುತ್ತಿದ್ದಾರೆ. ಅವರೊಬ್ಬರೇ ನಿರ್ಧಾರ ತಳೆಯಲು ಸಮರ್ಥರು. ಅವರು ನಮ್ಮ ಸಂಘಟನೆಯ ಅಧ್ಯಕ್ಷರು. ಈಗ ನೀವು ಝಿಯನಿಸಮ್ಮಿಗೆ ಪರಿವರ್ತಿತರಾಗಿರುವುದು ನಿಜವಾದ ಪಕ್ಷ, ನಾನು ನಿಮ್ಮನ್ನು ವೈಝ್‌ಮನ್ನರ ಪರವಾಗಿ, ನೀವು ಅವರ ಜೊತೆ ಅಮೆರಿಕಕ್ಕೆ ಹೋಗಬೇಕು, ಮತ್ತು ಈ ಮುಹೂರ್ತದಲ್ಲಿ ಅವರು ಏನನ್ನು ಅವಶ್ಯವೆಂದು ಭಾವಿಸುತ್ತಾರೊ ಅದನ್ನು ಮಾಡಬೇಕು ಎಂದು ಕೇಳಲು ಹಕ್ಕು ಪಡೆದಿದ್ದೇನೆ."

ಸಾಕ್ಷಾತ್ ಬ್ಲೂಮೆನ್‌ಫೆಲ್ಡರಿಗೆ ನಂಬಲಾಗದ ತೆರದಲ್ಲಿ ಐನ್‌ಸ್ಟೈನರ ಉತ್ತರ ಹೊರ ಚಿಮ್ಮಿತು, "ಈಗ ನೀವನ್ನುತ್ತಿರುವುದು ಖರೆ. ಅಗತ್ಯವಾಗಿ ಒಪ್ಪಬೇಕಾದದ್ದೇ. ಸವಾಲು, ಜವಾಬು, ಸಬೂಬು, ಪರಾ ನಮ್ಮನ್ನು ಎಲ್ಲಿಗೂ ಒಯ್ಯವು. ನಿಮಗೆ ವೈಝ್‌ಮನ್ನರ ತಂತಿಯೆಂದರೆ ಅದೊಂದು ಆಜ್ಞೆ, ಸದ್ಯದಲ್ಲಿ ನಾನು ಕೂಡ ಈ ಸನ್ನಿವೇಶದ ಭಾಗವಾಗಿದ್ದೇನೆ ಎಂಬುದು ನನಗೀಗ ಅರ್ಥವಾಗುತ್ತಿದೆ. ಎಂದೇ ನಾನೂ ಆಮಂತ್ರಣವನ್ನು ಸ್ವೀಕರಿಸಲೇಬೇಕು. ಒಪ್ಪಿಕೊಂಡಿದ್ದೇನೆಂದು ವೈಝ್‌ಮನ್ನರಿಗೆ ತಂತಿ ಕಳಿಸಿ."

ನಿಲ್ಲಿಸು ಸಬೂಬು ನೀಡುವ ವ್ಯರ್ಥ ಚಾಳಿಯನು
ಒಲ್ಲದಾ ಕೆಲಸದಲಿ ಒಲುಮೆ ತಳೆ, ಮೇರುಗಿರಿ
ಹುಲ್ಲಿನೆಸಳಾಗುವುದು, ಸಂತೃಪ್ತಿ ಮನದೊಳಿದೆ
ಸಲ್ಲದೈ ಪರನಿಂದೆ ಸೋಲಿಂಗೆ ಅತ್ರಿಸೂನು

ಹೀಗೆ ತಮ್ಮ ಜನಪ್ರಿಯತೆಯನ್ನು ಅಮೆರಿಕದಲ್ಲಿ ಚಲಾಯಿಸಿ ಝಿಯನಿಸಮ್ಮಿಗೆ ಬೆಂಬಲ

ದೊರಕಿಸಲು ಐನ್‌ಸ್ಟೈನ್ ನಿರ್ಧರಿಸಿದಾಗ ಜರ್ಮನಿಯಲ್ಲಿ ಇವರನ್ನು ದ್ವೇಷಿಸುತ್ತಿದ್ದವರಿಗೆ, ವ್ಯಾಪಕವಾಗಿ, ಯೆಹೂದ್ಯರನ್ನು ಖಂಡಿಸುತ್ತಿದ್ದವರಿಗೆ, ಮೆಲ್ಲಲು ಪುಷ್ಕಳ ಗ್ರಾಸ ಮತ್ತು ಮಸೆಯಲು ಕ್ರೂರ ಕುಠಾರ ತಂತಾವೇ ಒದಗಿ ಬಂದುವು.

ಫಿಲಿಪ್ ಫ್ರ್ಯಾಂಕ್ ಬರೆದಿದ್ದಾರೆ, "ಜರ್ಮನಿಯಲ್ಲಿ ಮುಂದೆ ಬರಲಿದ್ದ ನಾಟ್ಸೀಕ್ರಾಂತಿಯ ಸುಳುಹು ಕೆಲವೇ ಮಂದಿ ಜರ್ಮನ್ ವಿಜ್ಞಾನಿಗಳಿಗೆ ಮತ್ತು ಕೇವಲ ಬೆರಳೆಣಿಕೆ ಮಂದಿ ಯೆಹೂದ್ಯರಿಗೆ ಮಾತ್ರ ವೇದ್ಯವಾಗಿದ್ದಾಗ ಐನ್‌ಸ್ಟೈನರಿಗೆ ಅಲ್ಲಿಯ ಸನ್ನಿವೇಶಗಳು ತಮ್ಮ ಬಳಗದವರಿಗೆ ತುಂಬ ಪ್ರತಿಕೂಲವಾಗುವುದರತ್ತ ಬಿಗಡಾಯಿಸುತ್ತಿವೆ ಎಂಬುದು ತಕ್ಕಷ್ಟು ಸ್ವಚ್ಛವಾಗಿ ಕಂಡು ಬಂದಿತ್ತು. ತೋರ್ಕೆ ನಿಚ್ಚಳ ಮೇಲ್ಮೈಯ ಕೆಳಗೆ ಕಾದು ಕೆಂಪಾಗಿದ್ದು, ಅವಕಾಶ ದೊರೆತಾಗ ಹಠಾತ್ತನೆ ಚಿಪ್ಪೊಡೆದು ಹೊರ ಚಿಮ್ಮಲು ಹವಣಿಸುತ್ತಿದ್ದ, ಮುಂದೆ ರಾಷ್ಟ್ರೀಯ ಸಮಾಜವಾದಿ ಪಕ್ಷವೆಂಬ (National Socialist Party) ಹೆಸರಿನಿಂದ ಅಧಿಕಾರಾರೂಢವಾಗಲಿದ್ದ, ನಾಟ್ಸೀ ದಾವಾನಲದ ಲಾವಾರಸದ ಮೂರಿಯನ್ನು ಇವರಾಗಲೇ ಮೂಸಿದ್ದರು. ನಿಜಕ್ಕೂ ಈ ಚಳವಳಿಯ ಕಂಪನದ ತೊನೆತವನ್ನು ಮೊದಲಿಗೆ ಗ್ರಹಿಸಿದವರ ಪೈಕಿ ಐನ್‌ಸ್ಟೈನ್ ಒಬ್ಬರು. ಪ್ರಾಹಾದಲ್ಲಿ ಇವರು ಉಪನ್ಯಾಸ ನೀಡಲು ಬಂದಿದ್ದಾಗ ಈ ಶಂಕೆಯನ್ನು ನನ್ನೊಡನೆ ತೋಡಿಕೊಂಡಿದ್ದರು. ಆ ವೇಳೆ, ೧೯೨೧ನೆಯ ಇಸವಿ ಅದು, ತಾವು ಜರ್ಮನಿಯಲ್ಲಿ ಹತ್ತು ವರ್ಷಗಳಿಗಿಂತ ಹೆಚ್ಚು ಕಾಲ ಉಳಿಯಲಾರೆ ಎಂಬುದಾಗಿ ಇವರು ಭಾವಿಸಿದ್ದರು. ಇವರ ಅಂದಾಜು ಕೇವಲ ಎರಡು ವರ್ಷಗಳಷ್ಟು ಕಡಿಮೆಯಾಗಿತ್ತು."

ಸರ್ವ ಜನಾಂಗಗಳಿಗೆ ಸಮಾನಾವಕಾಶಗಳನ್ನು ಒದಗಿಸುತ್ತಿದ್ದ ಸ್ವತಂತ್ರ ಪ್ರಜಾಪ್ರಭುತ್ವ ಅಮೆರಿಕ ರಾಷ್ಟ್ರವನ್ನು ಕಣ್ಣಾರೆ ಕಂಡು ಅಲ್ಲಿಯ ಮುಕ್ತ ಪರಿಸರದಲ್ಲಿ ಸಮೃದ್ಧವಾಗಿ ಉಸಿರಾಡಿ ಮರಳಬೇಕೆಂಬುದು ಐನ್‌ಸ್ಟೈನರ ಆಸೆ. ಸ್ಥಳೀಯ ರೇಜಿಗೆಗಳಿಂದ ದೊರೆಯಲಿದ್ದ ಈ ತಾತ್ಕಾಲಿಕ ಬಿಡುಗಡೆಯನ್ನು ಇವರು ಮುಕ್ತಮನದಿಂದ ಸ್ವಾಗತಿಸಿದರು.

ಐನ್‌ಸ್ಟೈನ್ ಅಮೆರಿಕಕ್ಕೆ ಬರಲು ನಿರ್ಧರಿಸಿರುವರೆಂಬ ಸುದ್ದಿಯನ್ನು ಆ ದೇಶ ಆದರ ಅಭಿಮಾನಪೂರ್ವಕವಾಗಿ ಸ್ವೀಕರಿಸಿತು. ಅಭಿನವ ಕೊಪರ್ನಿಕಸನನ್ನು, ಇಪ್ಪತ್ತನೆಯ ಶತಮಾನದ ನ್ಯೂಟನ್ನನನ್ನು, ವಿಶ್ವಸಾಗರೋತ್ತರಣನಿರತ ಕೊಲಂಬಸನನ್ನು ಸ್ವಾಗತಿಸಲು ಅಮೆರಿಕ ಉತ್ಸುಕವಾಯಿತು. ಅಲ್ಲಿಂದ ವಿವಿಧ ಸಂಸ್ಥೆ ಸಂಘಟನೆಗಳು ಇವರಿಗೆ ಆಮಂತ್ರಣ ಕಳಿಸುವುದರಲ್ಲಿ ಪೈಪೋಟಿಗಿಳಿದುವು. ಜಾತಿ ಮತ ಜನಾಂಗಾತೀತವಾದ ಸಾಮೂಹಿಕ ಪ್ರಜ್ಞೆಯ ಪ್ರಕಟಿತ ರೂಪವದು.

೧೯೨೧ ಮಾರ್ಚ್ ೨೧. ಐನ್‌ಸ್ಟೈನ್ ದಂಪತಿಗಳು ಅಮೆರಿಕಯಾನ ತೊಡಗಲು ಸನ್ನದ್ಧರಾಗಿ ಬರ್ಲಿನ್ನಿನಿಂದ ನಿರ್ಗಮಿಸಿದರು. ಅದೇ ಸುಮಾರಿಗೆ ಇಂಗ್ಲೆಂಡಿನಿಂದ ಹೊರಟ ವೈಝ್‌ಮನ್ ದಂಪತಿಗಳು ಹಾಲೆಂಡಿಗೆ ಬಂದು ಇವರ ಜೊತೆ ಸೇರಿದರು.

### ದೊಗಲೆ ಸುರಾಲಿನ ಪಿಟೀಲುವಾದಕ ಯಾರಿವನು ?

೧೯೨೧ರಲ್ಲಿ ಇವರು ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಸಂದರ್ಶಿಸಿದಾಗ ನ ಭೂತೋ ಸಂಭ್ರಮೋತ್ಸಾಹಗಳಿಂದ ಸ್ವಾಗತಿಸಲ್ಪಟ್ಟರು. ಆಳಿದ ಯಾವ ಚಕ್ರವರ್ತಿಗೂ ಬೌದ್ಧಿಕ ಜಗತ್ತಿನ ಈ ಸಾರ್ವಭೌಮನಿಗೆ ಲಭಿಸಿದಂಥ ಅತಿಶಯ ಆನಂದದ ಸ್ವಾಗತ ಲಭಿಸಿರಲಿಲ್ಲ. ತೆರೆದ ಕಾರಿನಲ್ಲಿ ನಿಂತಿದ್ದ ಐನ್‌ಸ್ಟೈನರ ಮೆರವಣಿಗೆ ನ್ಯೂಯಾರ್ಕ್ ಬೀದಿಗಳಲ್ಲಿ ಸಾಗಿದಂತೆ ಇಕ್ಕೆಲಗಳಲ್ಲಿಯೂ

> ಕಿಕ್ಕಿರಿದಿದ್ದ ಸಾವಿರಗಟ್ಟಲೆ ಜನ ಇವರ ಮೇಲೆ ಹರ್ಷದ ಹೊನಲು ಹರಿಸಿದರು. ಹತ್ತು ವರ್ಷಗಳ ತರುವಾಯ ಲಾಸ್ ಏಂಗೆಲ್ಸಿನಲ್ಲಿ ಇವೇ ದೃಶ್ಯಗಳು ಪುನರಾವರ್ತಿಸಿದುವು—ಆಗ ಚಾರ್ಲಿ ಚಾಪ್ಲಿನ್ ಐನ್‌ಸ್ಟೈನರನ್ನು ರೇಲ್ವೇ ನಿಲ್ದಾಣದಿಂದ ಹಾಲಿವುಡ್ಡಿನ ಬೀದಿಗಳ ಮೂಲಕ ಕಾರ್ ಮೆರವಣಿಗೆಯಲ್ಲಿ ಕೊಂಡೊಯ್ದರು. ಐನ್‌ಸ್ಟೈನರತ್ತ ತಿರುಗುತ್ತ ಚಾಪ್ಲಿನ್ ಹೇಳಿದರು, "ನೋಡಿ ! ಅವರು ನನಗೆ ಜಯ ಘೋಷ ಬೀರುತ್ತಿದ್ದಾರೆ, ಏಕೆಂದರೆ ನಾನು ಪ್ರತಿಯೊಬ್ಬನಿಗೂ ಅರ್ಥವಾಗಿದ್ದೇನೆ ; ಅವರು ನಿಮಗೆ ಜಯಘೋಷ ಬೀರುತ್ತಿದ್ದಾರೆ, ಏಕೆಂದರೆ ನೀವು ಯಾರಿಗೂ ಅರ್ಥವಾಗಿಲ್ಲ !"
>
> **ಕಾರ್ನೀಲಿಯಸ್ ಲ್ಯಾಂಕ್ಜೋಸ್**

ಅಮೆರಿಕ ದೇಶದ ನ್ಯೂಯಾರ್ಕ್ ಬಂದರಿಗೆ ಈ ಸಾಂಸ್ಕೃತಿಕ-ವೈಜ್ಞಾನಿಕ ನಿಯೋಗ ಆಗಮಿಸಿದಾಗ (೨-೪-೧೯೨೧) ಅಲ್ಲಿಯ ಪರಿಸ್ಥಿತಿ ಹೇಗಿತ್ತು ? ಪೂರ್ವದ ಈ ಅಪೂರ್ವ ಮಹೋಜ್ಜ್ವಲ ತಾರೆಯನ್ನು ಸ್ವಾಗತಿಸಲು ಇಡಿ ಅಮೆರಿಕವೇ ಅಲ್ಲಿ ಒಂದಾಗಿ ಸೇರಿತ್ತೋ ಎಂಬ ಸಂತೋಷ, ಸಂಭ್ರಮ, ಉತ್ಸವ, ಉತ್ಸಾಹ. ಪರದೇಶಗಳಲ್ಲಿ ಜೈತ್ರಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಸ್ವದೇಶಕ್ಕೆ ಮರಳುವ ಚಕ್ರವರ್ತಿಯನ್ನು ಸ್ವಾಗತಿಸುವಾಗ ಪ್ರಕಟವಾಗುವ ಜನಗಣಮನಸಾಗರದ ಸಹಜ ಭೋರ್ಗರೆತ, ಅತಿಶಯಾನಂದದ ಮೊರೆತ.

ಹಡಗು ರೇವಿನಲ್ಲಿ ತಂಗಿ ಲಂಗರು ಹೂಡುವ ಮೊದಲೇ ಆದ್ಯತಾ ಶ್ರೇಣಿಯ ಎಲ್ಲ ವಿಧಿ ನಿರ್ಬಂಧಗಳನ್ನೂ ಮುರಿದು, ಸ್ವಾಗತ ಸಮಿತಿಯ ವರಿಷ್ಠರನ್ನೂ ಸದಸ್ಯರನ್ನೂ ಹಿಂದೆ ತೊರೆದು, ಹಡಗಿನತ್ತ ಓಡಿದರಯ್ಯಾ ಓಡಿದರು, ಅದರ ಅಟ್ಟವನ್ನು ಏರಿದರಯ್ಯಾ ಏರಿದರು—ಸರ್ವಾಂತರ್ಯಾಮಿ ಸರ್ವಜ್ಞಸರ್ವಶಕ್ತ ಪತ್ರಿಕಾಕರ್ತರು ಹಾಗೂ ಛಾಯಾಚಿತ್ರಕಾರರು ; ಪ್ರತಿಯೊಬ್ಬನಿಗೂ ತಾನು ಈ ಯುಗಪುರುಷನನ್ನು ಮೊದಲು ನೋಡಿದಾತ, ತಾನು ಈತನ ವಿಶೇಷ ಭಂಗಿಯನ್ನು ಮೊದಲು ಸೆರೆಹಿಡಿದಾತ, ತಾನು ಈತನೊಡನೆ ಮೊದಲು ಮಾತಾಡಿದಾತ, ಕೈಕುಲುಕಿದಾತ ಎಂಬ ಹಿರಿಮೆ ಗಳಿಸಿದವನಾಗಬೇಕೆಂಬ ತವಕ. ಪ್ರೀತಿ, ಕುತೂಹಲ, ವಾತ್ಸಲ್ಯ, ಗಹನ ನಿರೀಕ್ಷೆ ಮುಂತಾದ ಉತ್ಸಾಹಪ್ರೇರಕ ಅಮೂರ್ತ ಗುಣಗಳು ಕಟ್ಟೆ ಬಿರಿದು ಹರಿಯುತ್ತಿದ್ದ ಈ ಪರಿಸರದಲ್ಲಿ ಮುನ್ನುಗ್ಗಿದವನೇ ಜಾಣ, ದಾಕ್ಷಿಣ್ಯ ಸಂಕೋಚಗಳಿಂದ ಹಿಂತಗ್ಗಿದವನೇ ಕೋಣ !

ನ್ಯೂಯಾರ್ಕಿನ ನಗರಪತಿ, ನಗರಸಭಾಧ್ಯಕ್ಷ, ನಗರಸಭಾಸದಸ್ಯರು ಮತ್ತು ಇತರ ಗಣ್ಯರು ಹಡಗಿನಲ್ಲಿಯೇ ಐನ್‌ಸ್ಟೈನ್-ದಂಪತಿಗಳಿಗೆ ಸ್ವಾಗತ ಬಯಸಿ ಇವರನ್ನು ತಮ್ಮ ನೆಲಕ್ಕೆ ಆದರದಿಂದ ಬರಮಾಡಿಕೊಂಡರು. ಅಲ್ಲಿ ತುಂಬಿದ್ದ ಜನಜಂಗುಳಿಯಲ್ಲಿ ಮೆಲ್ಲಮೆಲ್ಲನೆ ಸೆರೆಬಿಡಿಸುತ್ತ ಮುಂದೆ ಮುಂದೆ ತಳ್ಳುತ್ತ ವೈಝ್‌ಮನ್ ನಡೆದರು. ಇವರದು ಭವ್ಯಾಕಾರ, ನಗುಮೊಗ, ಆದರೆ ಕಡುಪು ಸ್ವಭಾವ. ಇವರ ಜೊತೆ ತಂತಾನೆ ಮುಂದಕ್ಕೆ ಸರಿಸಲ್ಪಡುತ್ತಿದ್ದ ಮತ್ತೂ ಹೋಲಿಕೆಯಿಂದ ತುಸು ಕುಳ್ಳಗಿದ್ದ ವ್ಯಕ್ತಿಯೇ ಐನ್‌ಸ್ಟೈನ್ : ಬೆಳಕಾದರೂ ಪ್ರಬಲ ಗುರುತ್ವಾಕರ್ಷಣ ಕ್ಷೇತ್ರದ ಸನಿಹದಲ್ಲಿ ಬಾಗಲೇಬೇಕಷ್ಟೆ !

ಸಿಂಹಕೇಸರದಂತೆ ಇಳಿಬಿದ್ದ ಕೇಶರಾಶಿ, ಭರ್ಜರಿ ಗಂಡು ಮೀಸೆ, ತುಂಬು ನೀಳ ಮೊಗದ ಮೇಲೆ ಪೂರ್ಣ ಆತ್ಮವಿಶ್ವಾಸ ಸೂಸುವ ಛಾಯೆ, ಅಪೂರ್ವ ಪ್ರಭೆಯನ್ನು ಬೀರುವ ಚಿರಂತನ ಜಿಜ್ಞಾಸುವಿನ ಅನ್ವೇಷಕ ನೇತ್ರಗಳು, ಯಾವ ಜನರಾಶಿಯಲ್ಲಿಯೂ ಎದ್ದುಕಾಣುವ ಭವ್ಯಸುಂದರ ವ್ಯಕ್ತಿತ್ವ—ಇವರೇ ಐನ್‌ಸ್ಟೈನ್. ಧರ್ಮಕ್ಷೇತ್ರದಲ್ಲಿ ಹೇಗೊ ವಿಜ್ಞಾನಕ್ಷೇತ್ರದಲ್ಲಿ ಹಾಗೆ ಆಗಮಿಸುವ 'ಸಂಭವಾಮಿ ಯುಗೇ ಯುಗೇ' ಯುಗಪುರುಷ.

ಪೌರಸ್ತ್ಯ ದೇಶದ ಋಷಿಗಳನ್ನು ನೆನಪಿಗೆ ತರುವ, ಮತ್ತು ಐಹಿಕ ಪರಿಸರಕ್ಕೆ ಒಂದಿಷ್ಟೂ

ಹೊಂದಿಕೊಳ್ಳದ. ಆದರೂ ಅದೇ ಪರಿಸರದ ಸಾರವಾಗಿರುವ ಈ ಮಹಾಮಾನವನೇ ಐನ್‌ಸ್ಟೈನ್.

ಇವರ ದುಸ್ತು ಹೇಗಿತ್ತು ? ಹಳೆಯ ಮಾಸಲು ಬೂದು ಬಣ್ಣದ ನಿಲುವಂಗಿ, ದೊಗಲೆ ಸುರಾಲು, ತಲೆಯನ್ನು ಅಳ್ಳಕವಾಗಿ ಹಿಡಿದಿಟ್ಟಿದ್ದ ಕರಿಮರಿಗೆ (ಹ್ಯಾಟ್), ಬಲಗೈಯಲ್ಲಿ ಹೊಗೆ ಕೊಳವೆ, ಎಡಗೈಯಲ್ಲಿ ಪಿಟೀಲು ಪೆಟ್ಟಿಗೆ, ಬಲು ಮಜಾನೋಟ ಕಂಡವರಿಗೆ—ಅನಿರೀಕ್ಷಿತವಾದ್ದರಿಂದಲೂ ಸ್ವತಃ ವಿಚಿತ್ರವಾದ್ದರಿಂದಲೂ. ಆದರೆ ಮಂಡೆಯೊಳಗಿನ ವಸ್ತು ? ತಾಜಾಮಾಲು !

"ಕಲಾವಿದನ ಹಾಗೆ ಕಂಡರು."

"ಸಂಗೀತಗಾರನ ಹಾಗೆ ಇದ್ದರು."

"ಮಗುವಿನ ಮುಗ್ಧತೆ ಸೂಸುವ ಕಣ್ಣುಗಳು ಅವರ ವಿಶೇಷ ಆಕರ್ಷಣೆ."

"**ಅವರು** ಭವ್ಯ ವಿಜ್ಞಾನಿಯೇ ? ಆಶ್ಚರ್ಯ ! ಅಂಥ ಯಾವ ಲಕ್ಷಣವೂ ಕಾಣಲಿಲ್ಲವಲ್ಲ !"

"ಅವರನ್ನು ಯಾರೊಡನೆ ತಾನೇ ಹೋಲಿಸೋಣ ? ಉಪಮಾತೀತರಾಗಿದ್ದರವರು ನೆಪೋಲಿಯನ್ನನಂತೆ. ಐನ್‌ಸ್ಟೈನರನ್ನು ಐನ್‌ಸ್ಟೈನರೊಡನೆ ಮಾತ್ರ ಹೋಲಿಸಬಲ್ಲೆವಷ್ಟೆ."

ರಾಮಂ ರಾಮೋಪಮಂ, ಸಾಗರಂ ಸಾಗರೋಪಮಂ, ಐನ್‌ಸ್ಟೈನ್ ಐನ್‌ಸ್ಟೈನೋಪಮಂ !

ಜನರ ಹಾಗೂ ಪತ್ರಿಕಾ ಪ್ರತಿನಿಧಿಗಳ ಮಾದರಿ ಪ್ರತಿಕ್ರಿಯೆಗಳಿವು. ಸಾರ್ವಜನಿಕರ ಪ್ರೀತಿ ಗೌರವಗಳಾಗಲಿ ಭಕ್ತಿ ಆರಾಧನೆಗಳಾಗಲಿ ಐನ್‌ಸ್ಟೈನರಿಗೆ ನೂತನ ಅನುಭವಗಳಾಗಿರಲಿಲ್ಲ. ಆದರೆ ತರುಣ ಅಮೆರಿಕದ ಈ ಪ್ರಥಮ ಸಂಘಟ್ಟನೆ, ಪರಿಮುದ್ರೆ ಅಥವಾ ಹುಣ್ಣಿಮೆ ಕಡಲಿನ ಅಮಲು ಇವರ ಸಮಸ್ತ ಊಹಾಪೋಹಗಳನ್ನೂ ಮೀರಿ ಜಿಗಿದಿತ್ತು.

ವರದಿಗಾರರು ಪ್ರಶ್ನಿಸಿದರು, "ಮಾನ್ಯರೇ ! ತಮಗೆ ಹೇಗನ್ನಿಸಿತು ?"

"ಆಹಾ ! ಸಾಕ್ಷಾತ್ ಧರೆಗಿಳಿದ ಗಂಧರ್ವನಂತೆ !"

ಐನ್‌ಸ್ಟೈನರ ಸುಹಾಸಪ್ರಜ್ಞೆ ಅತ್ಯುನ್ನತ ಮಟ್ಟದ್ದು. ಅವರ ಪ್ರತಿಯೊಂದು ಉದ್ಗಾರವೂ ಋಕ್ಕುವಿನಂತೆ ಅರ್ಥಪೂರ್ಣವಾಗಿರುತ್ತಿತ್ತು.

"ಸಾಪೇಕ್ಷತಾಸಿದ್ಧಾಂತದ ಸತ್ತ್ವವನ್ನು ಕೇವಲ ಕೆಲವೇ ಸರಳ ವಾಕ್ಯಗಳಲ್ಲಿ ವಿವರಿಸಬಹುದೇ?"

ವಾಸ್ತವ ಸ್ಥಿತಿ ಏನೆಂದರೆ ಸಾಪೇಕ್ಷತಾಸಿದ್ಧಾಂತವನ್ನು ಈ ತೆರನಾಗಿ ವಿವರಿಸುವುದು ಅಸಾಧ್ಯ. ಸರಳೀಕರಣ ಅದರ ಹೂರಣವನ್ನೇ ಹೋಮ ಮಾಡಿದರೆ ತಾಂತ್ರೀಕರಣ ಅದನ್ನು ಪೂರ್ತಿ ಮರೆ ಮಾಡಿರುತ್ತದೆ. ಉಭಯ ಸಂದರ್ಭಗಳಲ್ಲಿಯೂ ಸಾಮಾನ್ಯವಾಚಕ—ಅಂದರೆ ಸಾಕಷ್ಟು ಗಣಿತ ಹಾಗೂ ಭೌತವಿಜ್ಞಾನಗಳ ಹಿನ್ನೆಲೆ ಇಲ್ಲದಾತ—ಸಾಪೇಕ್ಷತಾಸಿದ್ಧಾಂತದ ಪರಮ ಬೌದ್ಧಿಕ ಸೌಂದರ್ಯದಿಂದ ವಂಚಿತನಾಗಿರುತ್ತಾನೆ. ಆದರೆ ಪ್ರಶ್ನೆಗಳನ್ನು ಉತ್ತರಿಸಲು ಐನ್‌ಸ್ಟೈನ್ ಎಂದೂ ಹಿಂಜರಿದವರಲ್ಲ, ಪ್ರಶ್ನಕಾರರು ಯಾರೇ ಇರಲಿ, ಅವರಿಗೆ ನೋವು ಉಂಟುಮಾಡಬಾರದು, ಅವರನ್ನು ಅಪಮಾನಿಸಬಾರದು, ಅವರು ಅರ್ಥಗ್ರಹಿಸಲು ನೆರವಾಗುವಂತೆ ವಿವರಿಸಬೇಕೆಂಬ ಉದಾರ ಧೋರಣೆ ತಳೆದವರು.

ಐನ್‌ಸ್ಟೈನ್, "ನೀವು ನನ್ನ ಉತ್ತರವನ್ನು ಅತಿ ಗಂಭೀರವಾಗಿ ಪರಿಗಣಿಸದೆ ಇದೊಂದು ಬಗೆಯ ಲಘುಹಾಸವೆಂದು ಭಾವಿಸುವುದಾದರೆ ಆಗ ನಾನು ಈ ತೆರನಾಗಿ ವಿವರಿಸಬಲ್ಲೆ : ವಿಶ್ವದಿಂದ ಎಲ್ಲ ದ್ರವ್ಯಾತ್ಮಕ ವಸ್ತುಗಳೂ [material bodies—ಕಲ್ಲು ನೀರು ಗಾಳಿ ಚಂದ್ರ ಸೂರ್ಯ ನಕ್ಷತ್ರ ಮುಂತಾದ ಅಳತೆ ಅಥವಾ ತೂಕಕ್ಕೆ ಸಿಕ್ಕುವ ಪದಾರ್ಥಗಳು] ಅಂತರ್ಧಾನವಾದದ್ದಾದರೆ ಆಗ ಆಕಾಶ ಮತ್ತು ಕಾಲ [space and time] ಉಳಿದಿರುತ್ತವೆಂಬುದಾಗಿ ಮೊದಲಿಗೆ ನಂಬಲಾಗಿತ್ತು. ಆದರೆ ಈಗ ಸಾಪೇಕ್ಷತಾಸಿದ್ಧಾಂತದ ಪ್ರಕಾರ ವಸ್ತುಗಳ ಜೊತೆಯಲ್ಲೇ ಆಕಾಶ ಮತ್ತು

ಕಾಲ ಒಟ್ಟಾಗಿಯೇ ಅಂತರ್ಧಾನವಾಗಿಬಿಡುತ್ತವೆ."

"ಪ್ರಪಂಚದಲ್ಲಿ ಕೇವಲ ಹನ್ನೆರಡು ಮಂದಿ ಮಾತ್ರ ಸಾಪೇಕ್ಷತಾಸಿದ್ಧಾಂತವನ್ನು ಅರ್ಥಮಾಡಿಕೊಂಡಿದ್ದಾರಂತೆ. ಇದು ನಿಜವೇ ?"

"ಖಂಡಿತ ನಿಜವಲ್ಲ. ನಾನೆಂದೂ ಹಾಗೆ ಹೇಳಿಲ್ಲ. ಹಾಗೆ ಭಾವಿಸಲೂ ಇಲ್ಲ. ಈ ಸಿದ್ಧಾಂತವನ್ನು ಅಭ್ಯಸಿಸಿದ ಪ್ರತಿಯೊಬ್ಬ ಭೌತವಿಜ್ಞಾನಿಯೂ ಇದನ್ನು ಸುಲಭವಾಗಿ ತಿಳಿದುಕೊಳ್ಳಬಲ್ಲ. ಬರ್ಲಿನ್ನಿನಲ್ಲಿರುವ ನನ್ನ ಎಲ್ಲ ವಿದ್ಯಾರ್ಥಿಗಳೂ ಇದನ್ನು ತಿಳಿದುಕೊಂಡಿದ್ದಾರೆ."

ಆದರೆ ಈ ಉತ್ತರ ನೀಡುವಲ್ಲಿ ಐನ್‌ಸ್ಟೈನ್ 'ಎನಗಿಂತ ಕಿರಿಯರಿಲ್ಲ' ಎಂಬ ನಿಲವನ್ನು ಸಹಜವಾಗಿ ತಳೆದಿದ್ದರು. ಅವರದು ಖಂಡಿತ ಅತಿ ಆಶಾವಾದವಾಗಿತ್ತೆಂದು ಫ್ರ್ಯಾಂಕ್ ಹೇಳಿದ್ದಾರೆ.

"ಶ್ರೀಮತಿ ಐನ್‌ಸ್ಟೈನರೇ ! ನಿಮಗೆ ಸಾಪೇಕ್ಷತಾಸಿದ್ಧಾಂತ ಚೆನ್ನಾಗಿ ಅರ್ಥವಾಗಿರಬೇಕಲ್ಲ ?"

"ನನಗೆ ! ಖಂಡಿತ ಏನೂ ತಿಳಿದಿಲ್ಲ. ಅವರಿದನ್ನು ಅನೇಕ ಸಲ ವಿವರಿಸಿರುವರಾದರೂ ನನ್ನ ಸುಖಸಂತೋಷಗಳಿಗೆ ಈ ತಿಳಿವಳಿಕೆ ಅಗತ್ಯವಲ್ಲ."

"ನೀವು ಗಣಿತಪಾರಂಗತರೇ ?"

"ಹೌದು ! ನಮ್ಮ ಮನೆವಾರ್ತೆ ಲೆಕ್ಕಾಚಾರಗಳನ್ನು ಸರಿತೂಗಿಸುವಷ್ಟರಮಟ್ಟಿಗೆ."

ಐನ್‌ಸ್ಟೈನ್ ದನಿಗೂಡಿಸಿದರು, "ಅಲ್ಲಿ ಎಲ್ಸಾಳದೇ ಮೇಲುಗೈ, ನಾನು ಸೋಲುವುದೇ ಸೈ."

ಎಲ್ಸಾ ಮುಂದುವರಿಸಿದರು, "ಆದರೆ ನೀವು ಹೀಗೊಂದು ಮುತ್ತಿಕೊಂಡು ಪೂಜೆ ಮಾಡಿದರೆ ಇವರಿಗೆ ಬಹಳ ಮುಜಗರವಾಗುತ್ತದೆ. ಪ್ರದರ್ಶನ ವಸ್ತುವಾಗಿ ಮೆರೆಯುವುದು ಇವರಿಗೆ ಪ್ರಿಯವಲ್ಲ. ಅದಕ್ಕಿಂತ ಕಾಡಿನಲ್ಲಿ ಅಲೆಯುತ್ತ ಏನಾದರೂ ಕೆಲಸ ಮಾಡುತ್ತ ಪಿಟೀಲು ನುಡಿಸುತ್ತ ಇರುವುದು ಹೆಚ್ಚು ಪ್ರಿಯವಾದೀತು. ಇನ್ನು ಇವರೇನಾದರೂ ಒಂದು ಸಮಸ್ಯೆಯಿಂದ ಬಂಧಿತರಾದರೆಂದರೆ ಮುಗಿದೇ ಹೋಯಿತು—ಹಗಲು ಇರುಳು ಎನ್ನುವ ವ್ಯತ್ಯಾಸವೇ ಆಗ ತಿಳಿಯದು."

"ಅದಿರಲಿ ಪ್ರೊಫೆಸರ್ ಮಹಾಶಯರೇ ? ಸಾಮಾನ್ಯ ಜನರಿಗೆ ಅರ್ಥವಿಸಲು ಸಾಧ್ಯವಾಗದ ನಿಮ್ಮ ಈ ಅಮೂರ್ತ ಸಿದ್ಧಾಂತದ ಬಗ್ಗೆ ಇಷ್ಟೊಂದು ಭೂರಿ ಮಂದಿಗೆ ಆಸಕ್ತಿ ಕುದುರಲು ಕಾರಣವೇನಿರಬಹುದು ?"

ಪುನಃ ಸುಹಾಸವೇ ಶರಣು, "ವಿಜ್ಞಾನವಿಚಾರಗಳಲ್ಲಿ ಅನ್ಯತ್ರ ಉದಾಸೀನರಾಗಿರುವ ಜನ ಸಾಪೇಕ್ಷತಾಸಿದ್ಧಾಂತ ಕುರಿತಂತೆ ದಿಢೀರನೆ ಅತ್ಯುತ್ಸಾಹ ತಳೆದು ಆ ಕಾರಣಕ್ಕಾಗಿ ನನಗೆ ಇಂಥ ಅದ್ದೂರಿ ಸ್ವಾಗತ ಬಯಸುವುದರ ಕಾರಣವೇನಿರಬಹುದೆಂಬುದನ್ನು ನೀವು ಮನೋರೋಗ ನಿದಾನಶಾಸ್ತ್ರದ ಸಮಸ್ಯೆಯೆಂದು ಪರಿಗಣಿಸಬೇಕಾದೀತು."

"ನಿಮ್ಮ ಸಿದ್ಧಾಂತ ವಿಶ್ವವನ್ನು ಕುರಿತದ್ದು. ಮತಧರ್ಮಗಳಿಗೆ ಸ್ಫೂರ್ತಿಯ ಸೆಲೆ ಮತ್ತು ಚಲಾವಣೆಯ ನೆಲೆ ಈ ಬೃಹದ್ವಿಶ್ವ. ಜನರನ್ನು ಉತ್ಸಾಹಗೊಳಿಸುವ ಅಂತೆಯೇ ಉದ್ರೇಕಗೊಳಿಸುವ ಸಾಧನೆಗಳಿವು. ಈ ಕಾರಣಕ್ಕಾಗಿ ಪ್ರಾಯಶಃ ಜನರ ವಿಶೇಷ ಲಕ್ಷ್ಯ ನಿಮ್ಮ ಸಿದ್ಧಾಂತದತ್ತ ಮತ್ತು ನಿಮ್ಮತ್ತ ಹೊರಳಿದುದಾಗಿರಬಹುದು."

"ಇರಲೂಬಹುದು. ಆದರೆ ಒಂದು ವಿಚಾರ. ಈ ಸಿದ್ಧಾಂತ ಸಾಧಾರಣ ಮನುಷ್ಯನ ಅಥವಾ ಹಾದಿಹೋಕನ ಮನಸ್ಸಿನ ಮೇಲೆ ಏನೂ ಪರಿಣಾಮ ಬೀರದು. ಸಾಪೇಕ್ಷತಾಸಿದ್ಧಾಂತದಲ್ಲಿ ಸರಳ ತತ್ತ್ವಗಳಿಂದ ತೊಡಗಿ ಕೆಲವೊಂದು ನೈಸರ್ಗಿಕ ಘಟನೆಗಳನ್ನು ನಿಗಮಿಸಲಾಗಿದೆ—ಇಲ್ಲೇ ಈ ಸಿದ್ಧಾಂತದ ಏಕೈಕ ಪ್ರಾಮುಖ್ಯವಿರುವುದಾಗಿದೆ. ಸಹಜವಾಗಿ ಇದು ತತ್ತ್ವಜ್ಞಾನಿಗಳಿಗೆ ಕುತೂಹಲ

ಕಾರಿಯಾದದ್ದು. ಹಾದಿಹೋಕರಿಗೆ ಖಂಡಿತ ಅಲ್ಲ." ಜನರಿಗೆ ತೃಪ್ತಿ ಆಗಲಿಲ್ಲ.

ಪ್ರಶ್ನೆಗಳ ಮೊದಲ ಸುರಿಮಳೆ ಹೀಗೆ ಲಘುವಿನೋದ ಮತ್ತು ಅನೌಪಚಾರಿಕ ಹವೆಯಲ್ಲಿ ಕೊನೆಗೊಂಡಾಗ ಐನ್‌ಸ್ಟೈನ್ ಮುಕ್ತಾಯ ಹಾಡಿದರು. "ಬಹಳ ಸಂತೋಷ, ಸಭ್ಯರೇ, ನಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವೆನೆಂದು ಭಾವಿಸಲೇ ?"

ಮೆರವಣಿಗೆ ಹಡಗದಿಂದ ನ್ಯೂಯಾರ್ಕ್ ದಂಡೆಗಿಳಿಯಿತು. ಅಲ್ಲಿ ನೆರೆದಿದ್ದ ಸಹಸ್ರಾರು ಮಂದಿಯ ಉತ್ಸಾಹ ಉಕ್ಕೇರಿತು. ಅದೊಂದು ರಾಷ್ಟ್ರೀಯ ಹಬ್ಬವಾಗಿತ್ತು. ಜನರ ದೃಷ್ಟಿಯಲ್ಲಿ ಈಗ ಐನ್‌ಸ್ಟೈನ್ ತಮ್ಮ ಆತ್ಮೀಯ ಬಂಧು, ಸಲುಗೆಯ ಸಾಫ್‌ಸೀದಾ ವ್ಯಕ್ತಿ—"ದೊರಕದ ವಸ್ತುವು ದೊರಕಿತು ತಮ"ಗಿಂದು !

ನ್ಯೂಯಾರ್ಕಿನ ನಗರಪಾಲಕರು ಐನ್‌ಸ್ಟೈನ್ ಮತ್ತು ವೈಝ್‌ಮನ್ ದಂಪತಿಗಳನ್ನು ತಮ್ಮ ನಾಡಿಗೆ ವಿಧ್ಯುಕ್ತವಾಗಿ ಬರಮಾಡಿಕೊಂಡರು. ಬೃಹತ್ ಸಭಾಂಗಣದಲ್ಲಿ ಐದು ಸಾವಿರಕ್ಕೂ ಮಿಕ್ಕಿ ನೆರೆದಿದ್ದ ಶ್ರೋತೃಗಡಣದಲ್ಲಿ ಈ ರಾಜಾತಿಥಿಗಳಿಗೆ ಭವ್ಯ ಸಾರ್ವಜನಿಕ ಸ್ವಾಗತ ಕೋರಿದರು. ಐನ್‌ಸ್ಟೈನರಿಗೆ ನ್ಯೂಯಾರ್ಕ್ ನಗರದ ಸ್ವಾತಂತ್ರ್ಯವನ್ನು (Freedom of the City) ಒಪ್ಪಿಸಿದರು. ಮಹಾಪುರುಷರಿಗೆ ಮಾತ್ರ ಸಲ್ಲುವ ಉಚ್ಚಗೌರವವಿದು. ತತ್ಸಂಬಂಧ ಸನದಿನ ಒಕ್ಕಣೆಯ ಮೊದಲ ಪದಗಳಿವು : "ಸ್ವಿಟ್ಸರ್ಲೆಂಡಿನವರಾದ ಆಲ್ಬರ್ಟ್ ಐನ್‌ಸ್ಟೈನ್ . . " ಕಾರಣ? ಮಾಜಿ ಶತ್ರುರಾಷ್ಟ್ರವಾದ ಜರ್ಮನಿಯ ಪ್ರಜೆಗೆ ಮಿತ್ರರಾಷ್ಟ್ರವಾದ ಅಮೆರಿಕದಲ್ಲಿ ನಗರ ಸ್ವಾತಂತ್ರ್ಯ ಕೊಡುವುದು ಉಚಿತವೇ ?

## ಅಮೆರಿಕನ್ನರ ಹೃನ್ಮನ ಗೆದ್ದ ಪರಿವ್ರಾಜಕ

> ಜೀವನದ ಬಗೆಗೆ ಇವರಿಗೆ ಅಸೀಮ ಉತ್ಸಾಹವಿತ್ತು. ಇದರ ಸಮಸ್ತ ಮುಖಗಳನ್ನೂ ಇವರು ಸಂಪೂರ್ಣವಾಗಿ ಅನುಭವಿಸಿ ಸಂತೋಷಿಸಬಲ್ಲವರಾಗಿದ್ದರು. ಇವರ ಸಕಲ ಸಾಮರ್ಥ್ಯಗಳೂ ರಚನಾತ್ಮಕ ಸ್ವಭಾವದವಾಗಿದ್ದುದರಿಂದ ಇವರು ಲಘು ಮನಸ್ಕರಾಗಿಯೂ ಹರ್ಷಚಿತ್ತರಾಗಿಯೂ ಇರಬಲ್ಲವರಾಗಿದ್ದರು. ಯಾರ ಬಗ್ಗೆಯೂ ದ್ವೇಷ ಭಾವ ತಳೆಯುವುದು ಇವರಿಗೆ ಬೇಕಾಗಿರಲಿಲ್ಲ—ತಮಗೆ ಪ್ರಿಯರಾಗದವರನ್ನು ಇವರು ಅವರಿಗೆ ಯಾವ ತೊಂದರೆಯನ್ನೂ ಕೊಡದೆ ದೂರವಿಡ ಬಲ್ಲವರಾಗಿದ್ದರು. ಇವರದು ಪೂರ್ಣವಾಗಿ ನಿರಾಳವಾದ ನಗು. ಇವರ ಅಸುವಿನ ಹಿರಿಯಾಳದಿಂದ ಕಿರಿತೊರೆಯಾಗಿ ಹೊಮ್ಮುತ್ತಿದ್ದ ನಗು ಕ್ರಮೇಣ ತಾರಕ್ಕೇರಿ ಕಾರಂಜಿಯಾಗಿ ಪುಟನೆಗೆದು ಭವ್ಯ ಜಲಪಾತವಾಗಿ ಭೋರ್ಗರೆಯುತ್ತಿತ್ತು. ಕಟ್ಟೆಯೊಡೆದ ಈ ಹುಮ್ಮಸ್ಸಿನ ವೈಭವವೇನು ? ಇವರು ಹಾಸ್ಯಪ್ರಿಯರು. ವಿಶೇಷವಾಗಿ ಯೆಹೂದೀ ಚಟಾಕಿಗಳನ್ನು ಅತಿಶಯ ಉತ್ಸಾಹದಿಂದ ಹಾರಿಸು ತ್ತಿದ್ದರು. ಇವರ ವಿನೋದಶೀಲತೆ ಉಜ್ಜ್ವಲ ಹಾಗೂ ವಿಚ್ಛಿದ್ರಕಾರಕ. ಆದರೆ ಎಂದೂ ವೇದನ ದಾಯಕವಲ್ಲ.
>
> **ಕಾರ್ನೀಲಿಯಸ್ ಲ್ಯಾಂಕ್ಜೋಸ್**

ಅಮೆರಿಕದಲ್ಲಿ ಐನ್‌ಸ್ಟೈನರ (ಸ)ರಸಯಾತ್ರೆಗೆ ನಾಲ್ಕು ಮುಖಗಳಿದ್ದುವು :

ಒಂದು, ಝಿಯನಿಸ್ಟ್ ಚಳವಳಿಗಾಗಿ ಧನಸಂಗ್ರಹ ಮಾಡಲು ವೈಝ್‌ಮನ್ನರ ಜೊತೆ ಸಮಾ ರಂಭಗಳಲ್ಲಿ ಭಾಗವಹಿಸುವುದು. ಅಲ್ಲೆಲ್ಲ ಐನ್‌ಸ್ಟೈನ್ ಸಹಜ ಭೋಳೆತನದಿಂದ 'ಅತಿಸತ್ಯ' ಹೇಳಿ ಮುಖ್ಯೋದ್ದೇಶಕ್ಕೆ ಭಂಗತರುವಂಥ ತೊಂದರೆಯಂತೂ ಸದಾ ಇದ್ದದ್ದೇ. ಈ 'ಸದ್ಗುಣ'ದ ಬಗ್ಗೆ ಬ್ಲೂಮೆನ್‌ಫೆಲ್ಡ್ ಮೊದಲಾಗಿಯೇ ವೈಝ್‌ಮನ್ನರಿಗೆ ಎಚ್ಚರಿಕೆ ನೀಡಿದ್ದರು. ಮಹಾಮುತ್ಸದ್ದಿಯೂ ಪಾತಾಳಗರಡಿಯೂ ಆಗಿದ್ದ ಇವರು ಎಲ್ಲ ಕಡೆಗಳಲ್ಲಿಯೂ ಐನ್‌ಸ್ಟೈನ

ರನ್ನು ಉತ್ಸವಮೂರ್ತಿಯಾಗಿ ಬಳಸಿಕೊಂಡು ತಮ್ಮ ಉದ್ದೇಶಕ್ಕೆ ಪ್ರಚಾರ ಸಾಧಿಸಿಕೊಂಡರು. ಐನ್‌ಸ್ಟೈನರಾದರೂ ಎಲ್ಲಿಯೂ 'ಅಧಿಕಪ್ರಸಂಗ'ವೆಸಗಲಿಲ್ಲ. ಇವರ ಭಾಷಣ ಚುಟುಕಾಗಿರುತ್ತಿತ್ತು : "ನಿಮ್ಮ ಧುರೀಣ ಡಾಕ್ಟರ್ ವೈಝ್‌ಮನ್ ಮಾತಾಡಿದ್ದಾರೆ. ನಮ್ಮೆಲ್ಲರ ಪರವಾಗಿ ಅವರು ಬಲು ಸೊಗಸಾಗಿ ಹೇಳಿದ್ದಾರೆ. ಅವರನ್ನು ಹಿಂಬಾಲಿಸಿ. ನಿಮಗೆ ಒಳ್ಳೆಯದಾಗುತ್ತದೆ. ಇಷ್ಟೇ ನಾನು ಹೇಳಬೇಕಾದದ್ದು."

ಎರಡು. ಜೆರೂಸಲೆಮ್ಮಿನಲ್ಲಿ ಹೀಬ್ರೂ ವಿಶ್ವವಿದ್ಯಾಲಯದ ಸ್ಥಾಪನೆ. ಇದು ಐನ್‌ಸ್ಟೈನರ ಪ್ರೀತಿಯ ಮಿದುಳಶಿಶು. "ಜೆರೂಸಲೆಮ್ ದೇವಾಲಯದ ನಾಶಾನಂತರ ಪ್ಯಾಲೆಸ್ಟೈನಿನಲ್ಲಿ ಸಂಭವಿಸಬಹುದಾದ ಮಹಾ ಘಟನೆ ಇದು," ಎಂಬುದಾಗಿ ಇವರು ವರ್ಣಿಸುತ್ತಿದ್ದರು. ಮೊದಲನೆಯದು ಸರಸ್ವತೀ ಮಂದಿರದ ವಿನಾಶಕೃತ್ಯ, ಎರಡನೆಯದು ನೂತನ ಮಂದಿರದ ಸ್ಥಾಪನೆ ಕಾಯಕ. ಖುದ್ದು ತಾವೇ ವಿದ್ಯೆಗಾಗಿ ಹಾದಿ ಬೀದಿ ಅಲೆದು, ಬೇಲಿ ಕದವ ಬಡಿದು ನಿರಾಶರಾದದ್ದು ಇವರ ಮನಸ್ಸಿನಲ್ಲಿ ಅಚ್ಚಳಿಯದ ಗಾಯ ಕೆತ್ತಿತ್ತು.

"ಮುಕ್ತ ಸಂಶೋಧನೆಯ ವಲಯಗಳಿಗೆ ಪ್ರವೇಶ ಗಳಿಸಿಕೊಂಡಂಥ ನಮ್ಮ ಬಳಗದವರು ಅತ್ಯಂತ ವೇದನಾಯುಕ್ತ ಅವಹೇಳನೆಗೆ ಈಡಾಗಬೇಕಾಯಿತು. ಪೂರ್ಣವಿಲೀನೀಕರಣದಲ್ಲಿ ತೇದುಹೋದರು. ತಮ್ಮ ಸಾಂಸ್ಕೃತಿಕ ಧುರೀಣರನ್ನು ಕಳೆದುಕೊಂಡರು. ಹೀಗಾಗಬಾರದು. ನಮ್ಮ ಧಾರ್ಮಿಕಜೀವನಕ್ಕೆ ಸ್ವಂತ ಗೃಹ ಹೊಂದಲು ಕಾಲವೀಗ ಪಕ್ವವಾಗಿದೆ."

ಮೂರು, ಸಾಪೇಕ್ಷತಾಸಿದ್ಧಾಂತವನ್ನು ಕುರಿತು ಭಾಷಣಗಳು. ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ ಐನ್‌ಸ್ಟೈನ್ ತೀರ ಸಹಜವಾಗಿ ಮತ್ತು ಅಷ್ಟೇ ಅನೌಪಚಾರಿಕವಾಗಿ ಪ್ರಾಧ್ಯಾಪಕರೊಬ್ಬರ ತರಗತಿಗೆ ಅನುಮತಿ ಪಡೆದು ಪ್ರವೇಶಿಸಿದರು. ಸಾಪೇಕ್ಷತಾಸಿದ್ಧಾಂತವನ್ನು ಆ ಪ್ರಾಧ್ಯಾಪಕರು ತಮ್ಮ ವಿದ್ಯಾರ್ಥಿಗಳಿಗೆ ವಿವರಿಸುತ್ತಿದ್ದುದನ್ನು ಆಲಿಸಿ ಹರ್ಷ ತಳೆದು ಅವರನ್ನು ಅಭಿನಂದಿಸಿದರು.

ಅದೇ ವಿಶ್ವವಿದ್ಯಾಲಯದ ಭೌತವಿಜ್ಞಾನ ಪ್ರಾಧ್ಯಾಪಕ ಮೈಕಲ್ ಪ್ಯೂಪೀನ್ (೧೮೫೮-೧೯೩೫) ಐನ್‌ಸ್ಟೈನರನ್ನು ಅತ್ಯಾದರದಿಂದ ತಮ್ಮ ವಿಭಾಗಕ್ಕೆ ಸ್ವಾಗತಿಸಿದರು.

ಸರ್ಬಿಯಾ ದೇಶದ (ಯೂಗೊಸ್ಲೇವಿಯ) ಅನಾಥ ಕುರುಬ ಹೈದ ಮೈಕಲ್ ನಿರ್ಗತಿಕನಾಗಿ ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ತಲಪಿದ (೧೮೭೪). ದೊರೆತ ಕೆಲಸ ಮಾಡುತ್ತ, ಎದುರಾದ ಹಾದಿ ತುಳಿಯುತ್ತ, ಸಿಕ್ಕಿದ ಹೊತ್ತಗೆ ಓದುತ್ತ, ಬದುಕಲೇಬೇಕೆಂಬ ಛಲದಿಂದ ಉದ್ದೀಪಿತನಾಗಿ ಕೊಲಂಬಿಯಾ ವಿಶ್ವವಿದ್ಯಾಲಯದ ಪಾವಟಿಗೆಗಳನ್ನೇರಿ ಪದವೀಧರನಾದ (೧೮೮೩). ಕಲಾವಿಷಯಗಳನ್ನು ಓದೋಣವೆಂದು ಬಗೆದವನ ಕೈಗೆ ಆಕಸ್ಮಿಕವಾಗಿ ಜನಪ್ರಿಯ ವಿಜ್ಞಾನಗ್ರಂಥವೊಂದು ಬಿತ್ತು. ಇದರಿಂದ ಇವನು ತುಂಬ ಪ್ರಭಾವಿತನಾಗಿ ಮುಂದೆ ವಿಜ್ಞಾನವನ್ನೇ ತನ್ನ ವೃತ್ತಿಕ್ಷೇತ್ರವಾಗಿ ಆಯ್ದುಕೊಂಡ. ಅಂದು ಶುದ್ಧವಿಜ್ಞಾನ ಕುರಿತಂತೆ ಅಗ್ರಸ್ಥಾನದಲ್ಲಿದ್ದ ಜರ್ಮನಿಗೆ ತೆರಳಿ ಮಹಾ ವಿಜ್ಞಾನಿಗಳ ಶಿಷ್ಯತ್ವದಲ್ಲಿಅಧ್ಯಯನ ನಡೆಸಿ ಪದವಿ ಪಡೆದು ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಬಂದು ಪ್ರಾಧ್ಯಾಪಕನಾಗಿ ಸೇರಿಕೊಂಡ.

ಶ್ರೇಷ್ಠ ಉಪಜ್ಞೆಕಾರ (inventor) ಮತ್ತು ಪ್ರಯೋಗಪಟು (experimentalist) ಎಂಬುದಾಗಿ ಖ್ಯಾತಿವೆತ್ತ ಮೈಕಲ್ ಪ್ಯೂಪೀನರ ಸಂಶೋಧನೆಯ ಫಲವಾಗಿ ಪ್ರಥಮ ಅಟ್ಲಾಂಟಿಕ್-ಉತ್ತರಣ-ದೂರವಾಣಿ-ಹೊರಜಿ (Trans-Atlantic telephone cable) ಕಾರ್ಯ ಸಾಫಲ್ಯ ಪಡೆಯಿತು. ಪ್ರಯೋಗಪಟುಗಳು ಸಿದ್ಧಾಂತಪಟುಗಳನ್ನು ಗಾಳಿಗುದುರೆಯ ಬೆನ್ನೇರಿ ಸಾಗುವ

ಕನಸುಗಾರರೆಂಬುದಾಗಿ ಸಂಶಯದಿಂದಲೂ ತಿರಸ್ಕಾರದಿಂದಲೂ ನೋಡುವುದು ವಾಡಿಕೆ. ಆದರೆ ಸಾಪೇಕ್ಷತಾಸಿದ್ಧಾಂತವನ್ನು ಚೆನ್ನಾಗಿ ತಿಳಿದುಕೊಂಡಿದ್ದ ಪ್ಯೂಪೀನ್, ಐನ್‌ಸ್ಟೈನರನ್ನು, "ಗತಿ ವಿಜ್ಞಾನ ವಿಕಸನಗೊಂಡು ಮೈದಳೆದ—ಅದರಲ್ಲಿ ಕ್ರಾಂತಿ ತಲೆದೋರಿ ಮೈದಳೆದ ಅಲ್ಲ—ಸಿದ್ಧಾಂತದ ಆವಿಷ್ಕರ್ತೃ," ಎಂಬುದಾಗಿ ವರ್ಣಿಸಿದರು.

ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಐನ್‌ಸ್ಟೈನ್ ವೇಗೋತ್ಕರ್ಷಿತ ವ್ಯವಸ್ಥೆಗಳಲ್ಲಿ (accelerated systems) ಕೆಲವೊಂದು ವಸ್ತುಗಳ 'ಮೂರ್ಖ' ವರ್ತನೆಯನ್ನು ಹಾವಭಾವ ಸಹಿತ ವಿವರಿಸಿದರು. ಲೌಕಿಕ ನಯನಾಜೂಕುಗಳ ಬಗ್ಗೆ ಅನ್ಯಮನಸ್ಕರಾಗಿದ್ದ ಇವರ ವರ್ತನೆ ಸಭಾಸದರಿಗೆ ತುಂಬ ಮೋಜಿನದಾಗಿತ್ತು.

ಪ್ರಿನ್‌ಸ್ಟನ್ ವಿಶ್ವವಿದ್ಯಾಲಯ—ಭವಿಷ್ಯದಲ್ಲಿ ಐನ್‌ಸ್ಟೈನ್ ಈ ನಗರದಲ್ಲಿ ಸ್ಥಾಪಿತವಾಗಲಿದ್ದ ಸಂಸ್ಥೆಯನ್ನು ಸೇರಲಿದ್ದರು—ಮೇ ೯ರಂದು ಇವರಿಗೆ ಗೌರವ ಡಾಕ್ಟೊರೇಟ್ ಪದವಿ ಪ್ರದಾನಿಸಿ, "ಚಿಂತನೆಯ ವಿಚಿತ್ರ ಸಮುದ್ರಗಳನ್ನು ಏಕಾಂಗಿಯಾಗಿ ಯಾನಿಸುತ್ತಿರುವ ನವ ಕೊಲಂಬಸನಿಗೆ ನಮಿಸುತ್ತೇವೆ" ಎಂಬುದಾಗಿ ಸನ್ಮಾನಿಸಿತು.

ಅಲ್ಲಿ ಇವರು ಒಂದು ವಾರ ತಂಗಿದ್ದರು. ಪ್ರತಿ ದಿನವೂ ಒಂದೊಂದು ಉಪನ್ಯಾಸ ಕಾರ್ಯಕ್ರಮವಿತ್ತು. ಅದೇ ವೇಳೆ ಸಾಪೇಕ್ಷತಾಸಿದ್ಧಾಂತದ ರತ್ನಭಂಡಾರದ ಬೀಗಮುದ್ರೆ 'ಒಡೆದ' ಸುದ್ದಿ ಪ್ರಕಟವಾಯಿತು. 'ಒಡೆದವ' ಅಮೆರಿಕದ ಭೌತವಿಜ್ಞಾನಿ ಮಿಲ್ಲರ್.

ಡೇಟನ್ ಕ್ಲಾರೆನ್ಸ್ ಮಿಲ್ಲರ್ (೧೮೬೬-೧೯೪೧) ಅಮೆರಿಕದಲ್ಲಿ ಅಂಗಡಿ ಮಾಲಿಕನೊಬ್ಬನ ಮಗನಾಗಿ ಹುಟ್ಟಿ ಪ್ರಿನ್‌ಸ್ಟನ್ ವಿಶ್ವವಿದ್ಯಾಲಯದಿಂದ ಡಾಕ್ಟೊರೇಟ್ ಪದವಿ ಗಳಿಸಿ (೧೮೯೦) ಕ್ಲೀವ್‌ಲೆಂಡಿನ ಕೇಸ್ ಸ್ಕೂಲಿನಲ್ಲಿ ಪ್ರಾಧ್ಯಾಪಕನಾಗಿ ನೇಮಕಗೊಂಡ. ಆಕರದ ಚಲನವೇಗವು ಬೆಳಕಿನ ವೇಗದ ಮೇಲೆ ಯಾವ ಪ್ರಭಾವವನ್ನೂ ಬೀರುವುದಿಲ್ಲವೆಂಬುದಾಗಿ ಬೆಳಕಿನ ವಿಚಿತ್ರ ವರ್ತನೆಯನ್ನು ಮೈಕಲ್‌ಸನ್-ಮಾರ್ಲೀ ಪ್ರಯೋಗ (೧೮೮೭) ಸ್ಥಾಪಿಸಿದ್ದು ಸರಿಯಷ್ಟೆ. ತರುವಾಯದ ದಿನಗಳಲ್ಲಿ ಇದೇ ಪ್ರಯೋಗವನ್ನು ಮತ್ತೆ ಮತ್ತೆ ಸೂಕ್ಷ್ಮ ತಪಾಸಣೆಗಳಿಗೆ ಒಳಪಡಿಸಲಾಯಿತು. ಈ ಪ್ರಯೋಗಗಳಲ್ಲಿ ಮಿಲ್ಲರ್ ೧೯೦೨ರಿಂದ ೧೯೦೪ರ ತನಕ, ಮಾರ್ಲೀ ಜೊತೆ ಕೆಲಸ ಮಾಡಿದ್ದ. ಇಂಥ ನಾಜೂಕು ತಪಾಸಣೆಗಳ ಫಲವಾಗಿ ಪ್ರಯೋಗ ಇನ್ನಷ್ಟು ಪರಿಷ್ಕಾರವಾಗಿಯೂ ಭದ್ರವಾಗಿಯೂ ದೃಢಪಟ್ಟಿತು. ಇದನ್ನು ಆಧರಿಸಿಯೇ ಐನ್‌ಸ್ಟೈನ್, ೧೯೦೫ರಲ್ಲಿ, ಈಥರಿನ ಅಸ್ತಿತ್ವವನ್ನು ತೊಡೆದುಹಾಕಿ ವಿಶೇಷ ಸಾಪೇಕ್ಷತಾಸಿದ್ಧಾಂತವನ್ನು ಪ್ರತಿಪಾದಿಸಿದರೆಂದು ಹಿಂದೆ ಹೇಳಿದೆ. ಆದರೆ ಮಿಲ್ಲರ್ ಮಾತ್ರ ಈಥರ್-ನಿರಾಕರಣೆವಾದವನ್ನಾಗಲಿ ಅದರ ಮೇಲೆ ಕಟ್ಟಲಾದ ವಿಶೇಷ ಸಾಪೇಕ್ಷತಾಸಿದ್ಧಾಂತವನ್ನಾಗಲಿ ಒಪ್ಪಲಿಲ್ಲ. ಈಥರ್‌ಅಲೆತ ಅಥವಾ ಈಥರ್ ಮಾರುತ ಇದ್ದೇ ಇದೆ, ಅದು ಈ ತನಕ ಯಾವುದೇ ಸೂಕ್ಷ್ಮಾತಿಸೂಕ್ಷ್ಮ ಪ್ರಯೋಗಗಳಿಗೂ ಸೆರೆಸಿಕ್ಕದಿದ್ದುದರ ಕಾರಣ ನಿಸರ್ಗದ 'ಕುಹಕತೆ'ಯಲ್ಲಿದೆಯೇ ಹೊರತು ಈಥರ್‌ರಾಹಿತ್ಯದಲ್ಲಿ ಅಲ್ಲವೆಂಬುದಾಗಿ ವಾದಿಸಿದ. ೧೯೨೧ರ ವೇಳೆಗೆ, ತಾನು 'ಕುಹಕಿ' ನಿಸರ್ಗದ ಚಕ್ರವ್ಯೂಹ ಕೋಟೆಯನ್ನು ಭೇದಿಸಿ ಈಥರ್-ಹೂರಣವನ್ನು ತಲಪಿದುದಾಗಿ ಘೋಷಿಸಿದ. ಹಾಗಾದರೆ ಸಾಪೇಕ್ಷತಾ ಸಿದ್ಧಾಂತ ?

ಹೀಗೆ ಐನ್‌ಸ್ಟೈನ್ ಪ್ರಿನ್‌ಸ್ಟನ್ನಿನಲ್ಲಿದ್ದಾಗ ಬಿಸಿಬಿಸಿ ಸುದ್ದಿ ಎಂದರೆ, "ಈಥರಿನ ಪುನರಾಗಮನ, ಸಾಪೇಕ್ಷತೆಯ ನಿರ್ಗಮನ," ಅಥವಾ "ಈಥರಿನ ಪತ್ತೆ, ಸಾಪೇಕ್ಷತೆಗೆ ಲತ್ತೆ!" ಪುನರಾಯಾನ್ ಮಹಾಕಪಿಃ !

ಇಂಥ ಎಲ್ಲ ಸನ್ನಿವೇಶಗಳಲ್ಲಿಯೂ ಮಾನವಮತಿ ವರ್ತಿಸುವ ಧಾಟಿ ಒಂದು ಪ್ರರೂಪಕ್ಕೆ ಅಳವಡುತ್ತದೆ. ಅದರ ಸ್ಥೂಲ ರೂಪರೇಖೆ ಹೀಗಿದೆ. ನಿಸರ್ಗದ ವಿವಿಧ ರಹಸ್ಯಗಳನ್ನು ಭೇದಿಸಿ ತಿಳಿಯಲು ಉದ್ಯುಕ್ತನಾಗುವ ವಿಜ್ಞಾನಿ ವಿಶಿಷ್ಟ ಪ್ರಯೋಗಗಳನ್ನು ರೂಪಿಸುತ್ತಾನೆ. ತಾನು ಇದೆಯೆಂದು ನಂಬಿರುವ ಅಥವಾ ಊಹಿಸಿರುವ ಲಕ್ಷ್ಯವನ್ನು ಈ ಪ್ರಯೋಗದ ಮೂಲಕ ತಲಪುವುದು ಅವನ ಉದ್ದೇಶ: ಆದರೆ ತನ್ನ ಯಾವುದೇ ಪಟ್ಟುಗಳಿಗೆ ನಿಸರ್ಗ ಮಣಿಯದಾಗ ಹತಾಶನಾಗುವ ವಿಜ್ಞಾನಿ ನಿಸರ್ಗದ 'ಉದ್ದೇಶ'ಗಳ 'ಪ್ರಾಮಾಣಿಕತೆ'ಯ ಬಗ್ಗೆ ಸಂದೇಹ ತಳೆಯುತ್ತಾನೆ. ನಿಸರ್ಗ ತನ್ನೆದುರು 'ಸಂಭಾವಿತವಲ್ಲದ' ರೀತಿಯಲ್ಲಿ, ಅಂದರೆ ವಾಮಮಾರ್ಗ ಗಾಮಿಯಾಗಿ, ಸಂಚು ಹೂಡುತ್ತಿದೆ' ತನ್ನನ್ನು 'ಸೋಲಿಸು'ವುದೊಂದೇ ಅದರ 'ಉದ್ದೇಶ.' ಅದು 'ಕುಹಕ' ಸ್ವಭಾವದ್ದು ಎಂದು ನಂಬುತ್ತಾನೆ—ಕುಣಿಯಲು ಬಾರದ ನರ್ತಕಿ ರಂಗಸ್ಥಳದಲ್ಲಿ ತಪ್ಪು ಕಾಣುವಂತೆ.

ಪ್ರಿನ್ಸ್‌ಟನ್ನಿನಲ್ಲಿದ್ದ ಐನ್‌ಸ್ಟೈನರ ಮುಂದೆ ಮಿಲ್ಲರ್ ಫಲಿತಾಂಶಗಳನ್ನು ಪ್ರಕಟಿಸಲಾಯಿತು. ಇವರಾಗ ಇನಿತೂ ಅಪ್ರತಿಭರಾಗಲಿಲ್ಲ. ವಿಚಲಿತರಾಗಲಿಲ್ಲ, ಕೊನೆಗೆ, ವಿಸ್ಮಿತರೂ ಆಗಲಿಲ್ಲ. 'ವಾಸ್ತವತೆಯ ಅಥವಾ ಅಸ್ತಿತ್ವದ (ಸೃಷ್ಟಿಯ) ಕ್ರಮಬದ್ಧ ಸುಸಾಂಗತ್ಯದಲ್ಲಿ ಪ್ರಕಾಶಿತನಾಗು ತ್ತಿರುವ ಸ್ಪಿನೋಝನ ದೇವರನ್ನು' ನಂಬಿದ್ದ ಐನ್‌ಸ್ಟೈನ್ ಖಚಿತವಾಗಿ ನುಡಿದರು. "ದೇವರು ನಿಗೂಢ, ಆದರೆ ಕುಹಕಿಯಲ್ಲ." (God is subtle but not malicious.)

ದೇವರು (ಐನ್‌ಸ್ಟೈನರ ಪರಿಭಾಷೆಯಲ್ಲಿ ಈ ಪದದ ಅರ್ಥ ನಿಸರ್ಗ) ಸೂಕ್ಷ್ಮಾತಿಸೂಕ್ಷ್ಮ ನಿಯಮ ಸೂತ್ರಾವಳಿಗಳಿಂದ ಬಂಧಿತನಾಗಿರುವುದೂ ಈ ಜಟಿಲ ನೇಯ್ಗೆಯೊಳಗಿನ ವಿಧಿ ನಿರ್ಬಂಧಗಳು ಬಲು ನವುರಾಗಿರುವುದೂ ನಿಜ. ಆದರೆ ಇವು ಮಾನವನನ್ನು ಸೋಲಿಸಲು ಯಾ ಹಿಂಸಿಸಲು ಇರುವಂಥವು ಖಂಡಿತ ಅಲ್ಲ, ಇವನ್ನು ನೋಡುವ ಯಾ ಅರಿಯುವ 'ದಿವ್ಯದೃಷ್ಟಿ' ಯನ್ನು ಮಾನವ ಗಳಿಸಿಕೊಂಡಾಗ ಮಾತ್ರ ಇವು ಪ್ರಕಟವಾದಾವು ಎಂಬುದು ಐನ್‌ಸ್ಟೈನರ ನಿಲವು, 'ಕಣುಗಳನು ತೆರೆವರ್ಗೆ ಗೋಚರಿಸುತಿಹನು' ಪರಮಾತ್ಮ (=ನಿಸರ್ಗ), ಅಲ್ಲವೇ ? ವಿಜ್ಞಾನ, ಹಾಗೆ ಹೇಳುವುದಾದರೆ ಯಾವುದೇ ಜ್ಞಾನಪ್ರಕಾರ, ಬೆಳೆದು ಅಭಿವರ್ಧಿಸಿ ನಳನಳಿಸುವುದು ಈ ತೆರನಾಗಿಯೇ, 'ತಮಸೋ ಮಾ ಜ್ಯೋತಿರ್ಗಮಯ' ರೀತಿಯಲ್ಲೇ.

೧೯೨೨ ಆಗಸ್ಟ್ ೭ರಂದು ಮ್ಯಾಕ್ಸ್ ಬಾರ್ನ್, ಐನ್‌ಸ್ಟೈನರಿಗೆ ಬರೆದ ಕಾಗದದಲ್ಲಿ ಮಿಲ್ಲರ್ ಪ್ರಯೋಗದ 'ಯಶಸ್ಸಿ'ನ ಬಗ್ಗೆ ಉಲ್ಲೇಖಿಸಿದ್ದಾರೆ. "ಈ ಸುದ್ದಿಯ ಒಂದು ಪದವನ್ನೂ ನಾನು ನಂಬಲಾರೆ. ಆದರೆ ಇದರ ಬಗ್ಗೆ ನೀವು ನಮಗೊಂದು ಸಾಲು ಬರೆಯಲು ಕಾಲಾವಕಾಶ ಮಾಡಿಕೊಂಡದ್ದಾದರೆ ಇಲ್ಲಿರುವ (ಜರ್ಮನಿ) ನಾವೆಲ್ಲರೂ ನಿಮಗೆ ಆಭಾರಿಗಳಾಗಿರುತ್ತೇವೆ."[೩೩]

೧೯೨೫-೨೬ರಲ್ಲಿ ಬಾರ್ನ್ ಅಮೆರಿಕ ದೇಶಕ್ಕೆ ಹೋಗಿದ್ದರು. ಆಗ ಇವರು ಮಿಲ್ಲರ್ ಮಹಾ ಶಯನನ್ನು ಭೇಟಿ ಮಾಡಿ ಆತನ ಈಥರ್-ಶೋಧಕ ಉಪಕರಣವನ್ನು ಪ್ರತ್ಯಕ್ಷವಾಗಿ ಪರೀಕ್ಷಿಸಿ ದರು. ಮೌಂಟ್ ವಿಲ್ಸನ್ ಶಿಖರಾಗ್ರದ ಮೇಲೆ ಅದನ್ನು ಅಳವಡಿಸಲಾಗಿತ್ತು. ಸೂಕ್ಷ್ಮಾತಿಸೂಕ್ಷ್ಮ ಬಾಹ್ಯಬಲಗಳು ಕೂಡ ಅದರ ಮೇಲೆ ಯಾವ ಪರಿಣಾಮವನ್ನೂ ಬೀರದಂತೆ ಅದನ್ನು 'ದಿಗ್ಬಂ ಧಿಸ'ಲಾಗಿತ್ತು—ಅಷ್ಟು ಭದ್ರ, ಸುರಕ್ಷಿತ. ಸೂಕ್ಷ್ಮ ಹಾಗೂ ಪಟುಬೆಳಕಿನ ವಿಚಲನೆಯನ್ನು ಪತ್ತೆಹಚ್ಚಲು ಇಷ್ಟೊಂದು ಏರ್ಪಾಡು. ಆದರೆ ಸ್ವತಃ ಆ ಉಪಕರಣ ಎಷ್ಟು 'ಲಾಯಿಲೋಟ್' ಮತ್ತು 'ಲೊಡ್ಯಾಸ್' ಆಗಿತ್ತೆಂದರೆ ಕೊಂಚ ಕೆಮ್ಮಿದರೆ ನಿಟ್ಟುಸಿರುಬಿಟ್ಟರೆ ಅಥವಾ ಅದನ್ನು ನಿಭಾಯಿಸುವಾಗ ಬೆಟ್ಟು ಅತ್ಯಲ್ಪ ಹಂದಾಡಿದರೆ ಲಭ್ಯ ಫಲಿತಾಂಶ ಬೇರೆಯೇ ಆಗುತ್ತಿತ್ತೆಂದು

ಬಾರ್ನ್ ಬರೆದಿದ್ದಾರೆ. ನವುರನ್ನು ಅಧಿಕ ನವುರಿನಿಂದ ಅರಿಯಬಹುದೇ ಹೊರತು ಒರಟಿನಿಂದ ಅಲ್ಲ.

ನಾಲ್ಕು, ಸಾರ್ವಜನಿಕ ಸಂಪರ್ಕ. ಜನರ ಆಶೋತ್ತರಗಳ ಬಗ್ಗೆ, ಒಲವು ನಿಲವುಗಳ ಬಗ್ಗೆ ಮತ್ತು ವಾದವಿವಾದಗಳ ಬಗ್ಗೆ ಐನ್‌ಸ್ಟೈನ್ ಎಂದೂ ಎಲ್ಲಿಯೂ ಲಘು ಮನೋಭಾವ ತಳೆದವರಲ್ಲ. ಯಾವ ಸನ್ನಿವೇಶದಲ್ಲಿಯೂ ಸುಹಾಸಪ್ರಜ್ಞೆ ಕಳೆದುಕೊಂಡವರಲ್ಲ.

ಅಮೆರಿಕದ ಪತ್ರಿಕಾ ಪ್ರತಿನಿಧಿಗಳೊಡನೆ ಮಾತಾಡುತ್ತ ಇವರು ಹೇಳಿದರು, "ಜರ್ಮನಿ ಮತ್ತು ಯೂರೋಪಿನ ಇತರ ಅನೇಕ ದೇಶಗಳಲ್ಲಿ ಯೆಹೂದ್ಯರಿಗೆ ಯೋಗ್ಯ ಶಿಕ್ಷಣ ದುರ್ಲಭವಾಗಿದೆ. ಜೀವನಾವಕಾಶಗಳಂತೂ ತೀರ ಸೀಮಿತವಾಗಿವೆ. ಈ ಯೆಹೂದ್ಯರು ನಿರ್ಭೀತಿಯಿಂದ ನೆಲಸಿ ಮುಕ್ತ ಪರಿಸರದಲ್ಲಿ ಆಸಕ್ತ ಶಿಕ್ಷಣ ಪಡೆಯಲು ಒಂದು ಸ್ಥಳ ಒದಗೀತೆಂದು ಆಶಿಸುತ್ತೇನೆ. ಇದಕ್ಕೆ ಹಣ ಬೇಕು. ಸಹಕಾರಮನೋಭಾವವಿರಬೇಕು, ಪರಸ್ಪರ ಸೌಹಾರ್ದಮಯ ಪರಿಸರ ಬೇಕು."

"ಆದರೆ ನೀವು ವಿಜ್ಞಾನಿಗಳು, ಜಾತಿ ಜನಾಂಗಾತೀತರಾಗಿರಬೇಕಾದವರು, ದುಡ್ಡಿನ ಯಾಚನೆಗಾಗಿ ಕೈಯೊಡ್ಡುವುದು ನಿಮ್ಮ ಕಸಬಲ್ಲ."

"ನಾನೂ ಒಬ್ಬ ಮನುಷ್ಯ ಎನ್ನುವುದನ್ನು ನೀವು ಮರೆತಂತೆ ತೋರುತ್ತದೆ. ಮಾನವೀಯತೆ ಮೊದಲು, ವಿಜ್ಞಾನ ಬಳಿಕ."

"ಕಾಲೇಜ್ ವ್ಯಾಸಂಗ ನಿಜಕ್ಕೂ ಅಗತ್ಯವೆಂದು ನಂಬಿರುವಿರಾ ? ಉಪಯುಕ್ತ ವಿದ್ಯೆಯನ್ನು ಯೋಗ್ಯ ಗ್ರಂಥಗಳಿಂದ ಸಂಪಾದಿಸಬಹುದಲ್ಲ ?"

"ಮಾಹಿತಿಗಳ ಗುಪ್ಪೆ ವಿಜ್ಞಾನ ಆಗಿದ್ದರೆ ಪುಸ್ತಕ ಅದನ್ನು ಒದಗಿಸುತ್ತಿತ್ತು. ಆದರೆ ನಿಜವಾದ ವಿದ್ಯೆ ಎಂಬುದು ಎಳೆಮನಸ್ಸಿಗೆ ಪ್ರಖರ ಮತಿಗಳ ಜೊತೆಗಿನ ಒಡನಾಟದಿಂದ ಒದಗುವ ಮಾನಸಿಕ ಸಂಸ್ಕಾರ. ಇದಕ್ಕೆ ಕಾಲೇಜ್ ವಿದ್ಯೆ ಅತ್ಯಮೂಲ್ಯ ಅವಕಾಶ ಒದಗಿಸುತ್ತದೆ."

ವ್ಯಾಸಂಗಕ್ಷೇತ್ರದಲ್ಲಿ ನಿರಾಸಕ್ತ ಮತ್ತು ಮತ್ಸರಿ ಅಧ್ಯಾಪಕರಿಂದ ಭರ್ತ್ಸನೆಗೊಳಗಾದ ವಿದ್ಯಾರ್ಥಿನಿಯೊಬ್ಬಳು ತನ್ನ 'ಆತ್ಮವೃತ್ತಾಂತ'ವನ್ನು ಬರೆದು ಐನ್‌ಸ್ಟೈನರಿಗೆ ಓದಲು ಹಾಗೂ ಇವರ ಅಭಿಪ್ರಾಯ ತಿಳಿಯಲು ಕಳಿಸಿಕೊಟ್ಟಿದ್ದಳು. ಅದಕ್ಕೆ ಇವರು ಬರೆದ ಮಾರೋಲೆ ಮಾರ್ಮಿಕವಾಗಿದೆ, "ನಿನ್ನ ಹಸ್ತಪ್ರತಿಯ ಸುಮಾರು ಹದಿನಾರು ಪುಟಗಳನ್ನು ಓದಿ ನಸುನಕ್ಕಿದ್ದೇನೆ. ನಿನ್ನ ಬರವಣಿಗೆ ಸುಟಿಯಾಗಿದೆ. ದಕ್ಷ ವೀಕ್ಷಣೆಯಿಂದ ಕೂಡಿದೆ, ಪ್ರಾಮಾಣಿಕವಾಗಿದೆ, ಒಂದು ಮಜಲಿನವರೆಗೆ ಸ್ವಂತ ಕಾಲುಗಳ ಮೇಲೆ ನಿಂತಿದೆ. ಆದರೂ ಇದು ವಿಶಿಷ್ಟ ಸ್ತ್ರೀತ್ವಪೂರಿತವಾಗಿದೆ: ವಿಪರೀತಾರ್ಥಗಳಿಂದ ಕೂಡಿದ್ದು ವೈಯಕ್ತಿಕ ಕಟುತಿರಸ್ಕಾರದಿಂದ ಕಲುಷಿತವಾಗಿದೆಯೆಂಬುದು ನನ್ನರ್ಥ. ನನ್ನ ಅಧ್ಯಾಪಕರ ಸಮ್ಮುಖದಲ್ಲಿ ನಾನು ಕೂಡ ಇದೇ ತೆರನಾದ ನರಕ ಅನುಭವಿಸಿದ್ದೇನೆ. ನನ್ನ ಸ್ವತಂತ್ರ ಮನೋಭಾವ ಅವರಿಗೆ ಇಷ್ಟವಾಗಲಿಲ್ಲ. ಹೀಗಾಗಿ ಅವರಿಗೆ ಸಹಾಯಕರು ಅವಶ್ಯವಾದಾಗ ಅವರು ನನ್ನನ್ನು ಪರಿಗಣಿಸಲಿಲ್ಲ. (ನಾನು ನಿನ್ನಷ್ಟು ಯೋಗ್ಯ ವಿದ್ಯಾರ್ಥಿ ಆಗಿರಲಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ.) ಅಂದಮಾತ್ರಕ್ಕೆ ನನ್ನ ವಿದ್ಯಾರ್ಥಿಜೀವನವನ್ನು ಕುರಿತು ಬರೆಯುವುದಾಗಲಿ, ಅದನ್ನು ಯಾರಾದರೂ ಮುದ್ರಿಸುವಂತೆ ಇಲ್ಲವೇ ಓದುವಂತೆ ಪ್ರೇರಿಸುವುದಾಗಲಿ ಮಾಡಿದ್ದರೆ ಅದು ನಿಷ್ಪ್ರಯೋಜಕವಾಗಿರುತ್ತಿತ್ತೆಂದು ಭಾವಿಸುತ್ತೇನೆ. ಅಲ್ಲದೆ ತಮ್ಮದೇ ರೀತಿಯಲ್ಲಿ ಬಾಳಬವಣೆಗಳನ್ನು ಸಹಿಸುತ್ತಿರುವ ಇತರರ ಬಗ್ಗೆ ದೂರಿಡುವಾತನ ಮಟ್ಟ ಜನರ ದೃಷ್ಟಿಯಲ್ಲಿ ಕುಸಿಯುತ್ತದೆ. ಆದ್ದರಿಂದ ನಿನ್ನ ರೋಷವನ್ನು ನುಂಗಿಕೊ; ಮತ್ತು ಹಸ್ತಪ್ರತಿಯನ್ನು ನಿನ್ನ ಗಂಡು ಮತ್ತು ಹೆಣ್ಣುಮಕ್ಕಳ ಉಪಯೋಗಾರ್ಥ ಕಾಪಾಡು. ಅದರ ವಾಚನದಿಂದ

ಅವರಿಗೆ ಸಮಾಧಾನ ದೊರೆತೀತು—ತಮ್ಮ ಬಗ್ಗೆ ಅಧ್ಯಾಪಕರು ಏನು ಹೇಳುತ್ತಾರೆ ಯಾ ಯೋಚಿಸುತ್ತಾರೆ ಎಂಬುದಕ್ಕೆ ಕವಡೆ ಕಿಮ್ಮತ್ತೂ ಕೊಡದಿರುವಂತೆ . . .ಒಟ್ಟಾರೆ ಶಿಕ್ಷಣದ ಅತಿಸಾರವೇ ಕಂಡುಬರುತ್ತದೆ, ಅದೂ ಅಮೆರಿಕದ ಶಾಲೆಗಳಲ್ಲಿ ವಿಶೇಷವಾಗಿ. ವಿದ್ಯಾಬೋಧನೆಯ ಏಕೈಕ ತರ್ಕಸಮ್ಮತ ರೀತಿಯೆಂದರೆ ನಾವೇ ಮಾದರಿ ಆಗುವುದು—ಕನಿಷ್ಠಪಕ್ಷ ಯಾವುದನ್ನು ಬಿಡಬೇಕೆಂಬುದರ ಬಗ್ಗೆಯಾದರೂ, ಯಾವುದನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಸಾಧ್ಯವಾಗದಿದ್ದರೂ."

ತಾಮಸ್ ಆಲ್ವ ಎಡಿಸನ್ (೧೮೪೭-೧೯೩೧) ಸುಪ್ರಸಿದ್ಧ ಉಪಜ್ಞೆಕಾರ (inventor). ಮಯನ ಅವತಾರ ಎನ್ನುವಂಥ ಕೀರ್ತಿಪಡೆದಾತ. ತಂತ್ರವಿದ್ಯೆ, ಅಂದರೆ ವಿಜ್ಞಾನದ ಪ್ರಾಯೋಗಿಕಾನ್ವಯ, ಇವರ ಉಸಿರು ; ಸಿದ್ಧಾಂತ, ಅಂದರೆ ಸಮಸ್ಯೆಗಳ ಬೆಂಬತ್ತಿ ವೈಜ್ಞಾನಿಕ ವಿಧಾನಗಳ ಮೂಲಕ ನೂತನ ಸತ್ಯಗಳ ನಿರೂಪಣೆ, ಇವರ ಕಸಬಲ್ಲ. ೧೯-೨೦ನೆಯ ಶತಮಾನಗಳಲ್ಲಿ ಐನ್‌ಸ್ಟೈನ್ ಭೌತ ವಿಜ್ಞಾನಕ್ಕೆ ಸುಭದ್ರ ಅಸ್ತಿಭಾರ ಕಟ್ಟಿ ನಿಲ್ಲಿಸಿದ ಸೈದ್ಧಾಂತಿಕ ವಿಜ್ಞಾನಿಯಾದರೆ (theoretical scientist) ಎಡಿಸನ್ ಈ ಅಸ್ತಿಭಾರದ ಮೇಲೆ ಭವ್ಯ ಸೌಧವನ್ನು ನಿರ್ಮಿಸಿದ ಅನ್ವಿತ ವಿಜ್ಞಾನಿ (applied scientist). ನಮ್ಮ ದೈನಂದಿನ ಅಗತ್ಯ ಸಲಕರಣೆಗಳಾದ ವಿದ್ಯುದ್ದೀಪ, ದೂರವಾಣಿ, ಗಾನದೋಸೆ (gramophone record), ಸಿನೆಮ ಮುಂತಾದವೆಲ್ಲವೂ ಮೂಲತಃ ಎಡಿಸನ್ನರ ಮಿದುಳು ಕೂಸುಗಳು. ವಿದ್ಯುತ್ತನ್ನು ದಾಸ್ತಾನಿಡುವ ಸುಪರಿಚಿತ ಸಲಕರಣೆಯಾದ ಬ್ಯಾಟರಿ ತಯಾರಿಕೆಯ ಹಾದಿಯಲ್ಲಿ ಇವರು ಎಂಟು ಸಾವಿರ ಪ್ರಯೋಗಗಳನ್ನು ಮಾಡಿ ಸೋತಿದ್ದರು. ಆದರೆ ಈ 'ಮಹಾವೈಫಲ್ಯ'ದಿಂದ ಈತ ಎಳ್ಳಷ್ಟೂ ನಿರಾಶನಾಗಲಿಲ್ಲ, "ಅದಕ್ಕೇನಾಯಿತು ! ಸರಿಯಾದ ಫಲ ನೀಡದ ಎಂಟು ಸಾವಿರ ರೀತಿಗಳನ್ನು ತಿಳಿದುಕೊಂಡದ್ದೊಂದು ಲಾಭವಲ್ಲವೇ?" ಎಂದರು. ಶೇಕಡಾ ೯೯ ಬೆವರು, ಶೇಕಡಾ ೧ ಬೆಳಕು !

ಸ್ವತಃ ಕಾಲೇಜ್ ಮೆಟ್ಟಲುಗಳನ್ನೇರಿರದ ಮತ್ತು ಸಾಂಪ್ರದಾಯಿಕ ಶಿಕ್ಷಣ ಪಡೆದಿರದ ಎಡಿಸನ್, ಸಹಜವಾಗಿ ಕಾಲೇಜ್ ಶಿಕ್ಷಣವೇ ನಿಷ್ಪ್ರಯೋಜಕವೆಂದು ಸಾರ್ವತ್ರೀಕರಿಸಿದ್ದರು. ಅಮೂರ್ತರೂಪದ ಅಸ್ಪಷ್ಟಚಿಂತನ ವಿಧಾನಗಳ ಬೋಧನೆ ಶಿಕ್ಷಣವಾಗದು. ಮೂರ್ತ ರೂಪದ ಸ್ಪಷ್ಟ ಹಾಗೂ ಉಪಯುಕ್ತ ಮಾಹಿತಿಗಳ ಖಚಿತ ಬೋಧನೆಯೇ ಶಿಕ್ಷಣವೆಂದು ಭಾವಿಸಿದ್ದರು. ತಮ್ಮ 'ಸಿದ್ಧಾಂತ'ವನ್ನು ರುಜುವಾತಿಸಲು ಪ್ರತ್ಯಕ್ಷ ಕಾರ್ಯನಿರತರಿಗೆ ಒಡನೆ ನೆರವಾಗಬಲ್ಲ ವಾಸ್ತವಾಂಶಗಳ ಯಾದಿಯನ್ನೇ ತಯಾರಿಸಿದ್ದರು. ಇದನ್ನು ಆಧರಿಸಿ ಪ್ರಶ್ನೆಗಳ ಸರಮಾಲೆಯನ್ನು ರೂಪಿಸಿದ್ದರು. ಸಾಂಪ್ರದಾಯಿಕ ಕಾಲೇಜ್ ಶಿಕ್ಷಣ ಮುಗಿಸಿ ಪದವೀಧರರಾದವರಿಗೆ ಈ ಸರಮಾಲೆಯನ್ನು ಕೊಟ್ಟಾಗ ಅವರಲ್ಲಿ ಹೆಚ್ಚಿನವರು ಅನುತ್ತೀರ್ಣರಾಗುತ್ತಿದ್ದರು. ಈ ತೆರನಾಗಿ ಎಡಿಸನ್ನರ 'ಸಿದ್ಧಾಂತ'ಕ್ಕೆ 'ಸಾಧನೆ' ಲಭಿಸುತ್ತಿತ್ತು.

ಪ್ರಪಂಚದ ಮಹಾ ಮೇಧಾವಿ ಎಂದೆನಿಸಿದ್ದ ಐನ್‌ಸ್ಟೈನರ ಎದುರು ಎಡಿಸನ್ನರ ಸವಾಲನ್ನು (ಪ್ರಶ್ನಾಮಾಲಿಕೆ) ಎಸೆಯಲಾಯಿತು.

ಪ್ರಶ್ನೆ, "ಶಬ್ದದ ವೇಗವೆಷ್ಟು ?"

ಐನ್‌ಸ್ಟೈನ್, "ನನಗೆ ತಿಳಿಯದು. ಯಾವುದೇ ತೃತೀಯ ದರ್ಜೆಯ ಪಠ್ಯಪುಸ್ತಕದಲ್ಲಿ ಸುಲಭವಾಗಿ ದೊರೆಯುವ ಈ ಮಾಹಿತಿಯನ್ನು ನಾನು ನನ್ನ ಸೀಮಿತ ಮಿದುಳಿನೊಳಕ್ಕೆ ಗಿಡಿಯಲಾರೆ." ಮೊದಲ ಪಾಳಿಯಲ್ಲೇ ಐನ್‌ಸ್ಟೈನರಿಗೆ ಎಡಿಸನ್ ಬೇಲಿಯನ್ನು ದಾಟಲಾಗಲಿಲ್ಲ ! ಇಲ್ಲ, ದಾಟಿದರು :

ವ್ಯಾಖ್ಯೆ ನಿರೂಪಣೆ ಪ್ರಶ್ನಾಮಾಲಿಕೆ
ಸೂತ್ರ ನಿಯಮಗಳ ಗೊಂಡಾರಣ್ಯದ
ಬೇಲಿಯ ಕಟ್ಟಿದನಾ ಎಡಿಸನ್ !
ಐನ್‌ಸ್ಟೈನ್ ಬಂದನ್ ಸರ್ವೇಕ್ಷಣೆಯನ್
ಕ್ಷಣದೊಳ್ ಮಾಳ್ದನ್—ಬುಡದೊಳ್ ನೆಲವನ್
ಕೊರೆಯುತ ದಾಟಿದನಾ ಕಡೆಗೆ ! Gone and won !

ಐನ್‌ಸ್ಟೈನರ ಅಮೆರಿಕಯಾತ್ರೆ ತುಂಬ ಯಶಸ್ವಿಯಾಯಿತು. ಬೇರೆ ಯಾವ ವಿಜ್ಞಾನ ವ್ಯಕ್ತಿಗೂ ಆ ತನಕ ದೊರೆಯದಿದ್ದಂಥ ಪ್ರೀತಿ ಮತ್ತು ಆರಾಧನಾಭಾವದಿಂದ ಜನ ಇವರನ್ನು ಒಪ್ಪಿ ಸ್ವೀಕರಿಸಿದರು. ಜನರ ಒಳ್ಳೆಯತನದ ಬಗ್ಗೆ ಅಪಾರ ವಿಶ್ವಾಸವಿದ್ದ ಇವರಿಗೆ ಎದೆಯೊಲವಿನ ಈ ಸಹಜ ಅಭಿವ್ಯಕ್ತಿ ಮುದ ನೀಡಿತು. ಆದರೆ ತಲೆ ಬೀಗಲಿಲ್ಲ, ವಿನೋದಪ್ರಜ್ಞೆ ಮಾಸಲಿಲ್ಲ.

ಫ್ರ್ಯಾಂಕ್ ಕೇಳಿದರು, "ಅಷ್ಟೊಂದು ಪ್ರೀತಿವಿಶ್ವಾಸಗಳನ್ನು ನಿಮ್ಮ ಮೇಲೆ ಮಳೆಗರೆದಾಗ ನಿಮಗೇನನ್ನಿಸಿತು ?"

ಐನ್‌ಸ್ಟೈನ್, "ವಿಜಯಿಯಾದ ಮಷ್ಟಿಕಾಳೆಗ ಜಟ್ಟಿಯೊಬ್ಬನಿಗೆ ಕೂಡ ಇದೇ ಮಾದರಿ ಸ್ವಾಗತ ದೊರೆಯುತ್ತದೆಂಬುದನ್ನು ಗಮನಿಸುವಾಗ ನಾನೇನೂ ಜಂಬ ಮಾಡಬೇಕಾಗಿಲ್ಲವೆಂದು ತೋರುತ್ತದೆ !"

ಒಮ್ಮೆ ಇವರೇ ಫ್ಯಾಶನ್ ಬಗ್ಗೆ ಲಘುವಾಗಿ ಹೇಳಿದ್ದರು, "ನ್ಯೂಯಾರ್ಕಿನಲ್ಲಿರುವ ರಮಣೀಮಣಿಯರಿಗೆ ಪ್ರತಿವರ್ಷವೂ ಹೊಸ ಧಾಟಿ ನಯ ನಾಜೂಕು ಬೇಕು—ಈ ವರ್ಷದ ಫ್ಯಾಶನ್ ರಿಲೆಟಿವಿಟಿ."

ಅಮೆರಿಕದೇಶದ ಬಗ್ಗೆ ಅಭಿಮಾನ ಮತ್ತು ಸದಭಿಪ್ರಾಯಪೂರಿತರಾಗಿ ಐನ್‌ಸ್ಟೈನ್ ಮರಳಿದರು. ನವ ಜ್ಞಾನಾನ್ವೇಷಕರಾಗಿ ಲವಲವಿಕೆಯಿಂದ ದುಡಿಯುತ್ತಿದ್ದ ಅಮೆರಿಕದ ತರುಣ ಜನಾಂಗ ಇವರಿಗೆ ಪ್ರಿಯವಾಯಿತು. "ಅಮೆರಿಕದ ಯುವ ಜನಾಂಗದಿಂದ ನಿರೀಕ್ಷಿಸಬಹುದಾದದ್ದು ಬಹಳಷ್ಟು ಉಂಟು : ಅದಿನ್ನೂ ಅಚೋಷಿತ ಮಧುಚಷಕ—ಹಸುರು ಮತ್ತು ಹೊಸತು."

"ನ್ಯೂಯಾರ್ಕ್ ನಗರದ ಆಹಾರಮಂದಿರಗಳು ನನಗೆ ಪ್ರಿಯವಾದುವು—ವಿವಿಧ ರಾಷ್ಟ್ರಗಳ ವರ್ಣಯುತ ಲಾಂಛನಗಳ ಮೇಳ ಅತಿ ಸುಂದರ ದೃಶ್ಯ. ಒಂದೊಂದರಲ್ಲಿ ಒಂದೊಂದು ಬಗೆಯ ಹವೆ. ನಿಜಕ್ಕೂ ಅದೊಂದು ರಾಷ್ಟ್ರೀಯತೆಗಳ ಅಭಯಾರಣ್ಯ. ಅಲ್ಲಿ ಒಬ್ಬ ಒಂದರಿಂದ ಇನ್ನೊಂದಕ್ಕೆ ಸಲೀಸಾಗಿ ಸಾಗಬಲ್ಲ."

ಅಮೆರಿಕ-ಆತಿಥ್ಯದ ಸವಿಯನ್ನು ಐನ್‌ಸ್ಟೈನ್ ಸುಮಾರು ಎರಡು ತಿಂಗಳ ಕಾಲ ಉಂಡರು. ತನ್ನಲ್ಲಿದ್ದ ಏನೊ ವಿಶೇಷ ಗುಣದ ಅಥವಾ ಮಾಂತ್ರಿಕತೆಯ ಕಾರಣವಾಗಿ ಜನ ತನ್ನನ್ನು ಅಷ್ಟೊಂದು ಸನ್ಮಾನಿಸಿದರೆಂಬುದನ್ನು ಇವರು ನಂಬಲಾರದವರಾಗಿದ್ದರು. ಯಾವುದೇ ವಿಶೇಷ ಬುದ್ಧಿಸಾಮರ್ಥ್ಯವಿಲ್ಲದ ತನ್ನಲ್ಲಿ ಅತಿಮಾನವಬುದ್ಧಿಶಕ್ತಿಯನ್ನು ಗುರುತಿಸಿ ಆ ಕಾರಣಕ್ಕಾಗಿ ಗೌರವ ಸಲ್ಲಿಸಿದ್ದು ಇವರಿಗೆ ಊಹಾತೀತ ಒಗಟಾಯಿತು. ತನ್ನಲ್ಲಿ ವಾಸ್ತವವಾಗಿ ಇರುವ ಗುಣಕ್ಕೂ ಇದೆಯೆಂದು ಜನ ಅಂದಾಜು ಮಾಡಿರುವ ಗುಣಕ್ಕೂ ನಡುವೆ ಅಜಗಜಾಂತರ ಉಂಟು. ಇಂಥಲ್ಲಿ ತನ್ನಂಥ ಒಬ್ಬ ಸಾಮಾನ್ಯನಿಗೆ ಆತನ ಯೋಗ್ಯತೆಗೆ ಸಂಬಂಧ ಇಲ್ಲದಷ್ಟು ಅತಿ ಮರ್ಯಾದೆ ಸಲ್ಲುವುದು ಅಸಹನೀಯವೇ ಸರಿ. ಆದರೆ ಒಂದು ಸಮಾಧಾನದ ಸಂಗತಿ ಇದೆ: ಸರ್ವ ಸಾಧಾರಣವಾಗಿ ವರ್ತಮಾನಯುಗ ಪ್ರಾಪಂಚಿಕೈಶ್ವರ್ಯ, ಅಂತಸ್ತು, ಭೋಗ

ಸಾಮಗ್ರಿ ಸಂಚಯನ, ದರ್ಪ, ದುರಹಂಕಾರ ಮುಂತಾದವುಗಳತ್ತ ಅಧಿಕವಾಗಿ ವಾಲಿಕೊಂಡಿದೆ ಎಂಬುದಾಗಿ ದೂರಿಡುತ್ತಿರುವ ವೇಳೆಯಲ್ಲೇ ಬೌದ್ಧಿಕ ಹಾಗೂ ನೈತಿಕ ಕ್ಷೇತ್ರವೊಂದರಲ್ಲಿ ಮಾತ್ರ ತಮ್ಮ ಪೂರ್ತಿ ಆಸೆ ಆಕಾಂಕ್ಷೆಗಳನ್ನು ನೆಟ್ಟಿರುವಂಥ ವ್ಯಕ್ತಿಗಳನ್ನು ಗಣ್ಯರನ್ನಾಗಿ ಪರಿಗಣಿಸುತ್ತಿರುವುದೊಂದು ಸ್ವಾಗತಾರ್ಹ ಲಕ್ಷಣವೇ ಸರಿ. ಸಂಪತ್ತು ಮತ್ತು ಅಂತಸ್ತಿಗಿಂತ ಎತ್ತರ ಮಟ್ಟದಲ್ಲಿ ಜ್ಞಾನ ಮತ್ತು ನ್ಯಾಯವನ್ನು ಜನ ಇರಿಸಿದ್ದಾರೆಂಬುದನ್ನು ಇದು ರುಜುವಾತಿಸುತ್ತದೆ.

"ವಿಜ್ಞಾನಕ್ಕೆ ಅಮೆರಿಕ ನೀಡುತ್ತಿರುವ ಪುರಸ್ಕಾರ ರಾಷ್ಟ್ರೀಯ ಸರಹದ್ದುಗಳಿಗೆ ಸೀಮಿತವಾಗಿಲ್ಲ ಎಂಬುದನ್ನು ನಾನು ಕೃತಜ್ಞತಾಭಾವದಿಂದ ಸ್ಮರಿಸುತ್ತೇನೆ. ನಾಗರಿಕ ಪ್ರಪಂಚಾದ್ಯಂತ ವೈಜ್ಞಾನಿಕ ಸಾಹಸೋದ್ಯಮಗಳು ಅಮೆರಿಕದ ಸಂಸ್ಥೆಗಳ ಹಾಗೂ ವ್ಯಕ್ತಿಗಳ ಧಾರಾಳತನದ ಬೆಂಬಲವನ್ನು ಪರಮ ಹರ್ಷದಿಂದ ಸ್ವಾಗತಿಸಿವೆ. ಇದು ನಿಮಗೆಲ್ಲರಿಗೂ ತುಂಬ ಸಮಾಧಾನ ಸಂತೃಪ್ತಿ ತರುವ ವಿಷಯವೆಂದು ನಂಬಿದ್ದೇನೆ. ಅಂತಾರಾಷ್ಟ್ರೀಯ ಚಿಂತನೆ ಸಂವೇದನೆಗಳನ್ನು ಪ್ರತಿನಿಧಿಸುವ ಈ ಕುರುಹುಗಳು ಖಂಡಿತ ಸ್ವಾಗತಾರ್ಹ. ಏಕೆಂದರೆ ಪ್ರಪಂಚ ಉತ್ತಮ ಮತ್ತು ಯೋಗ್ಯ ಭವಿಷ್ಯದತ್ತ ಸಾಗಬೇಕಾಗಿದ್ದರೆ ಅದರ ದುರೀಣರಾಷ್ಟ್ರದಲ್ಲಿ ಮತ್ತು ವ್ಯಕ್ತಿಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಾಗಿ ಇಂದು ಅಂತಾರಾಷ್ಟ್ರೀಯ ಚಿಂತನೆ ಮತ್ತು ಸಂವೇದನೆ ಅಗತ್ಯ. ಹೊಣೆಗಾರಿಕೆಯ ಉಚ್ಚ ಪ್ರಜ್ಞೆಯಿಂದ ಹೊಮ್ಮುವ ಅಮೆರಿಕ ಜನಾಂಗದ ಈ ಅಂತಾರಾಷ್ಟ್ರೀಯತೆ ಅತಿ ಶೀಘ್ರವಾಗಿ ರಾಜಕೀಯ ವಲಯಕ್ಕೂ ವಿಸ್ತರಿಸಲೆಂಬುದು ನನ್ನ ಆಶಯ. ಅಂತಾರಾಷ್ಟ್ರೀಯ ಸಂಬಂಧಗಳನ್ನು ಕ್ರಮಗೊಳಿಸುವುದರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಂಥ ಮಹಾ ರಾಷ್ಟ್ರದ ಪಟು ಸಹಕಾರವಿಲ್ಲದಿದ್ದಿದ್ದರೆ ಈ ದಿಸೆಯಲ್ಲಿ ಸಾಗಲು ಮಾಡುವ ಸರ್ವ ಪ್ರಯತ್ನಗಳೂ ನಿಷ್ಪರಿಣಾಮಕಾರಿಗಳಾಗಿ ಉಳಿಯುವುದು ದಿಟ." ಶುದ್ಧ ಮನದ ಮುಕ್ತ ನಮನ.

## ನ್ಯೂಟನ್ ನಾಡಿನಲ್ಲಿ ಐನ್‌ಸ್ಟೈನ್ ಪ್ರತಿಬಿಂಬ

ಆಧುನಿಕ ತಂತ್ರವಿದ್ಯೆಯ ಅಭಿವರ್ಧನೆಗೆ ಅನಿವಾರ್ಯವಾದ ಬೌದ್ಧಿಕ ಸಲಕರಣೆಗಳು ಮುಖ್ಯವಾಗಿ ನಕ್ಷತ್ರವೀಕ್ಷಣೆಯಿಂದ ನಮಗೆ ಒದಗಿ ಬಂದಿವೆ. ಇಂದಿನ ದಿನಗಳಲ್ಲಿ ಆಗಿರುವ ಈ ತಂತ್ರವಿದ್ಯೆಯ ದುರುಪಯೋಗಕ್ಕೆ ನ್ಯೂಟನ್ ಅವರಂಥ ಸೃಜನಶೀಲ ಮೇಧಾವಿಗಳು ಹೊಣೆಗಾರರಾಗಲಾರರು—ಹೇಗೆ ಇವರ ಕಲ್ಪನೆ ಗರಿಗೆದರಿ ಹಾರಲು ಕಾರಣವಾದ ಆ ನಕ್ಷತ್ರಗಳು ಹೊಣೆ ಆಗಲಾರವೋ ಹಾಗೆ.

ಐನ್‌ಸ್ಟೈನ್

ಐನ್‌ಸ್ಟೈನರ ಅಮೆರಿಕಯಾತ್ರೆಯನ್ನು ಕುರಿತ ಕಾರ್ಯಕ್ರಮ ನಿರ್ಧಾರಿತವಾದ ತರುಣದಲ್ಲಿ ಇಂಗ್ಲೆಂಡಿನ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದ ಕುಲಪತಿ ಇವರಿಗೊಂದು ಕಾಗದ ಬರೆದು (೧೪-೨-೧೯೨೧) ತಮ್ಮಲ್ಲಿಗೆ ಉಪನ್ಯಾಸ ನೀಡಲು ಇವರು ಬರಬೇಕೆಂದು ಪ್ರಾರ್ಥಿಸಿದರು. ಈ ಆಹ್ವಾನವನ್ನು ಒಪ್ಪಿ ಐನ್‌ಸ್ಟೈನ್ ಅದೇ ೨೩ರಂದು ಮಾರೋಲೆ ಬರೆದರು, "ನನ್ನ ಇಂಗ್ಲಿಷ್‌ಜ್ಞಾನ ಹೆಚ್ಚುಕಡಿಮೆ ಸೊನ್ನೆ, ಫ್ರೆಂಚ್ ಆದರೋ ಅಪರಿಪೂರ್ಣ. ಆದ್ದರಿಂದ ಜರ್ಮನ್ ಭಾಷೆಯಲ್ಲಿಯೇ ನಾನು ಮಾತಾಡುವುದು ಅನಿವಾರ್ಯ."

ಅಂದಮಾತ್ರಕ್ಕೆ ಇವರಿಗೆ ಇಂಗ್ಲೆಂಡಿನಲ್ಲಿ ರಾಜೋಪೇತ ಭವ್ಯಸ್ವಾಗತ ಕಾದಿತ್ತೆಂದು ಭಾವಿಸಲಾಗದು. ನೈಜ ಅಂತಾರಾಷ್ಟ್ರೀಯ ದೃಷ್ಟಿಕೋನವಿದ್ದ ಎಡಿಂಗ್ಟನ್ನರಂಥ ಕೆಲವೇ ಹಿರಿಯ ವಿಜ್ಞಾನಿಗಳು ಮಾತ್ರ ನೆಲದ ಮೇಲಿನ ರಾಗದ್ವೇಷಗಳ ಸಂಕುಚಿತ ಜಾಲದಿಂದ ಮೇಲೆದ್ದು ಶುದ್ಧ ವಾಯುಮಂಡಲಸಂಚಾರಿಗಳಾಗಿ ಕಾಲದೇಶಾತೀತ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು. ಉಳಿದ

ಬಹುಸಂಖ್ಯಾತ ವಿಜ್ಞಾನಿಗಳಿಗೆ ಇಂಥ ವಿಶಾಲ ಮನೋಭಾವವಿರಲಿಲ್ಲ. ಜರ್ಮನಿ ತಮ್ಮ ವೈರಿ ದೇಶ. ಐನ್‌ಸ್ಟೈನ್ ಅದರ ಪ್ರಜೆ, ಯುದ್ಧ ದಿನಗಳಂದು ಇವರು ಜರ್ಮನಿಯಲ್ಲಿಯೇ ಇದ್ದರು, ಆದ್ದರಿಂದ ಸಹಜವಾಗಿ ಇವರು ಆ ದೇಶಕ್ಕೆ ಯುದ್ಧಾನುಕೂಲಿಯಾಗಿದ್ದಿರಬೇಕು. ಇಂಥ ಛಾಯಾವ್ಯಕ್ತಿಯನ್ನು ತಾವು ಬರಮಾಡಿಕೊಳ್ಳುವುದೆಂದರೇನು ? ಇದು ಅವರ ನಿಲುಮೆ.

"ಜರ್ಮನ್ ನಾಟಕದ ಪ್ರತಿಯೊಂದು ದೇಖಾವೆಯೂ ಜರ್ಮನ್ 'ಸಂಸ್ಕೃತಿ'ಗೆ ನೀಡಿದ ಬೆಂಬಲ. ಆದ್ದರಿಂದ ಬ್ರಿಟಿಷ್ ಸಂಸ್ಕೃತಿಗೆ ಬಾರಿಸಿದ ಕೊಡಲಿ ಪೆಟ್ಟು," ಎಂಬುದು ಸಾರ್ವಜನಿಕ ಭಾವ. ಉಕ್ಕಿನ ಪೆಠಾರಿಯನ್ನಾದರೂ ಕುಠಾರಿಸಬಹುದು, ಹಠದ್ವೇಷ ಬಂಧಿತ ಮನೋವಠಾರವನ್ನಲ್ಲ.

೧೯೧೯ರಲ್ಲಿ ಸಂಭವಿಸಿದ ಪೂರ್ಣ ಸೂರ್ಯಗ್ರಹಣವನ್ನು ವೀಕ್ಷಿಸಿದ ಬ್ರಿಟಿಷ್ ನಿಯೋಗ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತವನ್ನು ಸಂದೇಹಾತೀತವಾಗಿ ಸ್ಥಿರೀಕರಿಸಿದಾಗ ಸಹಜವಾಗಿ ಐನ್‌ಸ್ಟೈನ್ ಗ್ರೇಟ್ ಬ್ರಿಟನ್ ಬಗ್ಗೆ ಆದರ ಅಭಿಮಾನ ಕೃತಜ್ಞತೆ ತಳೆದರು. ದುಷ್ಟ ರಾಜಕೀಯ ಬಲಗಳಿಂದಲೂ ತೀವ್ರ ಯೆಹೂದ್ಯದ್ವೇಷದಿಂದಲೂ ಜರ್ಮನ್ ಪರಿಸ್ಥಿತಿ ಹದಗೆಟ್ಟು ದುರ್ಧರವಾದಾಗ, ಆಗಸ್ಟ್ ೧೯೩೦ರಲ್ಲಿ, ಐನ್‌ಸ್ಟೈನ್ ಇಂಗ್ಲೆಂಡ್ ಕಡೆಗೆ ಆಶಾಪೂರಿತದೃಷ್ಟಿ ಹರಿಸಿದ್ದಿತ್ತು. ಅದೇ ಸೆಪ್ಟೆಂಬರಿನಲ್ಲಿ ಸರ್ ಜೇಮ್ಸ್ ಜೀನ್ಸ್ (೧೮೭೭-೧೯೪೬, ಇಂಗ್ಲೆಂಡಿನ ಗಣಿತವಿದ ಹಾಗೂ ಖಗೋಳವಿಜ್ಞಾನಿ, ಶ್ರೇಷ್ಠ ಸಂಶೋಧಕ ಹಾಗೂ ಜನಪ್ರಿಯ ವಿಜ್ಞಾನ ಗ್ರಂಥಗಳ ಲೇಖಕ), ಭೌತವಿಜ್ಞಾನಿ ಅರ್ನೆಸ್ಟ್ ರುದರ್ಫರ್ಡರಿಗೊಂದು ಕಾಗದ ಬರೆದರು. "ಕೇಂಬ್ರಿಜ್ಜಿಗೊಬ್ಬ ಪ್ರಥಮ ದರ್ಜೆಯ ಅನ್ವಿತ ಗಣಿತವಿದನ ಅಥವಾ ಭೌತವಿಜ್ಞಾನಿಯ ಆವಶ್ಯಕತೆ ಇದೆಯೆಂದು ನೀವು ಹೇಳಿದ್ದಿರಿ. ಆಲ್ಬರ್ಟ್ ಐನ್‌ಸ್ಟೈನರನ್ನು ಕುರಿತಂತೆ ನಿಮ್ಮ ಭಾವನೆ ಏನಿರಬಹುದೆಂದು ಯೋಚಿಸುತ್ತಿದ್ದೆ. ಲಗತ್ತು ವರದಿಯ ಪ್ರಕಾರ ಅವರು ಬರ್ಲಿನ್ನಿನಿಂದ ಶೀಘ್ರವಾಗಿ ಹೊರ ಹೋಗಬಹುದೆಂದು ತೋರುತ್ತದೆ. ಅಲ್ಲಿ ಅವರ ಬಗ್ಗೆ ಸಾಕಷ್ಟು ಗಲಭೆ ಆಗಿದೆ ಎಂಬುದನ್ನು ನೀವು ಗಮನಿಸಿರಬಹುದು. ಇಂಥ ಸನ್ನಿವೇಶದಲ್ಲಿ ಅವರು ಇಂಗ್ಲೆಂಡಿನ ಆಹ್ವಾನವನ್ನು ಪರಿಗಣಿಸಿಯಾರೆಂದು ಭಾವಿಸಿದ್ದೇನೆ. ಕೇಂಬ್ರಿಜ್ಜಿನಲ್ಲಿ ಗಣಿತಭೌತವಿಜ್ಞಾನ ಅಧ್ಯಯನ ಕೇಂದ್ರದ ಪುನಸ್ಸ್ಥಾಪನೆ ಮಾಡುವುದಕ್ಕೆ ನಿಮ್ಮ ಜೊತೆಗಿರಲು ಸರಿಯಾದ ವ್ಯಕ್ತಿ ಅವರೆಂಬುದು ನನ್ನ ಅಭಿಪ್ರಾಯ. ನಾನು ಯೋಚಿಸಬಹುದಾದ ಒಂದೇ ಒಂದು ಗಂಭೀರ ಆತಂಕವೆಂದರೆ ಅವರು ಇಂಗ್ಲಿಷ್ ಮಾತಾಡುವುದಿಲ್ಲ, ಅಥವಾ ಮಾತಾಡಲಿಲ್ಲ. ಆದರೆ ಬೇಗನೆ ಇಂಗ್ಲಿಷನ್ನು ಕಲಿತಾರೆಂದು ಭಾವಿಸಿದ್ದೇನೆ. ಅವರ ವಯಸ್ಸು ನಲವತ್ತೆರಡು—ಹತ್ತಿರ ಹತ್ತಿರ ನಲವತ್ತಮೂರು. ಅವರಲ್ಲಿ ಇನ್ನೂ ಸಾಕಷ್ಟು ಸೃಜನಶೀಲಸಾಮರ್ಥ್ಯ ಉಳಿದಿದೆಯೆಂದು ನಂಬಿದ್ದೇನೆ."

ಈ ಪತ್ರಕ್ಕೆ ರುದರ್ಫರ್ಡ್ ಮಾರೋಲೆ ಬರೆದದ್ದು ದಾಖಲಾಗಿಲ್ಲ. ಐನ್‌ಸ್ಟೈನರ ಬಗ್ಗೆ ಇವರು ಅಷ್ಟೇನೂ ಉತ್ಸಾಹಿಗಳಾಗಿರಲಿಲ್ಲ. ಕಾರಣ ?

ಸರ್ ಜೆ. ಜೆ. ಥಾಮ್ಸನ್ (೧೮೫೬-೧೯೪೦) ಮತ್ತು ಇವರ ಶಿಷ್ಯ ಅರ್ನೆಸ್ಟ್ ರುದರ್ಫರ್ಡ್ (೧೮೭೧-೧೯೩೭) ಇಂಗ್ಲೆಂಡಿನ ಭೌತವಿಜ್ಞಾನಿಗಳು, ಪರಮಾಣುಪ್ರಪಂಚ ಕುರಿತಂತೆ ಮೂಲಭೂತ ಗಹನ ಸಂಶೋಧನೆಗಳನ್ನು ಮಾಡಿದ ಪ್ರಪಂಚಪ್ರಸಿದ್ಧರು. ವಿದ್ಯುತ್ತಿನ ಪೊಟ್ಟಣ ಹಾಗೂ ವಾಹನವಾದ ಎಲೆಕ್ಟ್ರಾನನ್ನು ಆವಿಷ್ಕರಿಸಿ (೧೮೯೭) ಉಪಪರಮಾಣವಿಕ ಕಣಗಳು ಅಡಗಿಕೊಂಡಿರುವ ಗವಿಬಾಗಿಲಿನ ಸಿಸೇಮೆ ತೆರೆದವರು ಥಾಮ್ಸನ್. ಪರಮಾಣುಗರ್ಭದಲ್ಲಿರುವ ನ್ಯೂಕ್ಲಿಯಸ್ಸಿನ ಅಸ್ತಿತ್ವವನ್ನು ಪ್ರಾಯೋಗಿಕವಾಗಿ ಸಮರ್ಥಿಸಿ ಅಗೋಚರಪರಮಾಣುವಿಗೆ ಗೋಚರ

ಪ್ರತಿರೂಪ ನೀಡಿ ಗವಿಯೊಳಗಿನ ಅನರ್ಘ್ಯ ರತ್ನರಾಶಿಗೆ ಹಾದಿ ಕಡಿದವರು ರುದರ್ಫರ್ಡ್.

ಹೈಡ್ರೊಜನ್, ಆಕ್ಸಿಜನ್, ಕಾರ್ಬನ್, ಚಿನ್ನ, ಬೆಳ್ಳಿ ಮುಂತಾದ ಭೌತಜಗತ್ತಿನ ನಿರ್ಮಾಣ ಘಟಕಗಳಿಗೆ ಧಾತುಗಳೆಂದು (elements) ಹೆಸರು. ಯಾವುದೇ ಧಾತುವಿನ ಸಾಧ್ಯ ಸೂಕ್ಷ್ಮತಮ ಕಣವೇ ಆ ಧಾತುವಿನ ಪರಮಾಣು (atom). ಗುಂಡುಪಿನ್ನಿನ ಮೊನೆ ಮೇಲೆ ಕೋಟ್ಯಂತರ ಪರಮಾಣುಗಳು ಸುಖವಾಗಿ ಸಹಜೀವಿಸಬಲ್ಲವು—ಯಾವುದೇ ಪರಮಾಣುವಿನ ಗಾತ್ರ ಇಷ್ಟೊಂದು ಕಿರಿಯದು. ಅತ್ಯಂತ ಸಾಮರ್ಥ್ಯಯುತ ಸೂಕ್ಷ್ಮದರ್ಶಕವೂ ಒಂಟಿಪರಮಾಣು ಚಿತ್ರವನ್ನು ಲಂಬಿಸಿ ಅದರ ಆಕಾರವನ್ನು ಬಿಂಬಿಸಲಾರದು. ಪ್ರತಿಯೊಂದು ಪರಮಾಣುವಿಗೂ ಒಂದು ಕೇಂದ್ರವಿದೆ. ಇದಕ್ಕೆ ನ್ಯೂಕ್ಲಿಯಸ್ ಎಂದು ಹೆಸರು. ಇದನ್ನು ಸುತ್ತುವರಿದುಕೊಂಡು ಸತತ ಚಲನೆಯಲ್ಲಿರುವ ಕಣಗಳಿವೆ. ಇವು ಎಲೆಕ್ಟ್ರಾನುಗಳು. ನ್ಯೂಕ್ಲಿಯಸ್ಸಾದರೂ ಅಖಂಡ ದ್ರವ್ಯವಲ್ಲ; ಅದು ಪ್ರೋಟಾನ್, ನ್ಯೂಟ್ರಾನ್ ಮುಂತಾದ ಕಣಗಳ ಒಕ್ಕೂಟ. ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನ್ ಮುಂತಾದ ಪರಮಾಣುಸಾಮ್ರಾಜ್ಯ ನಿವಾಸಿಗಳಿಗೆ ಒಟ್ಟಾಗಿ ಉಪಪರಮಾಣವಿಕ ಕಣಗಳೆಂದು (subatomic particles) ಹೆಸರು.

ವಿಕಿರಣಪಟುತ್ವದ ಕಾರಣವಾಗಿ ಯುರೇನಿಯಮ್ಮಿನಂಥ ಕೆಲವು ಧಾತುಗಳು ನೈಸರ್ಗಿಕ ವಿದಲನೆಗೆ (fission) ಒಳಪಟ್ಟು ಸ್ವಯಂಚಾಲಿತವಾಗಿ ಶಕ್ತಿ ಹೊರಸೂಸುವುದರ ಮರ್ಮವನ್ನು ವಿವರಿಸುವಲ್ಲಿ ರುದರ್ಫರ್ಡರ ಪಾತ್ರ ಪ್ರಮುಖವಾದದ್ದು. ಈ ನೈಸರ್ಗಿಕ ವಿದ್ಯಮಾನವನ್ನು ಮಾನವ ಸ್ವೇಚ್ಛೆಯಂತೆ ನಿಯಂತ್ರಿಸಿ ಕೃತಕ ವಿದಲನೆಯನ್ನು ಪ್ರವರ್ತಿಸಿದಾಗ ಪರಮಾಣುಶಕ್ತಿ ಅವನ ಕರಗತವಾಯಿತು. ಅಲ್ಪದ್ರವ್ಯನಾಶದಿಂದ ಅಗಾಧಶಕ್ತಿಯ ಉತ್ಸರ್ಜನೆ (emission) ಎಂಬುದು ಪರಮಾಣುಶಕ್ತಿಯ ಸೂತ್ರ. ಎಷ್ಟು ದ್ರವ್ಯ ಎಷ್ಟು ಶಕ್ತಿಗೆ ಕಾರಣ, ಅಥವಾ ವಿಲೋಮವಾಗಿ, ಎಷ್ಟು ಶಕ್ತಿಯಲ್ಲಿ ಎಷ್ಟು ದ್ರವ್ಯವಿದೆ ಎಂಬುದನ್ನು ಪರಿಮಾಣಾತ್ಮಕವಾಗಿ ನಿರೂಪಿಸಿದ್ದು, ಈ ಹಿಂದೆ ಹೇಳಿದಂತೆ, ಐನ್‌ಸ್ಟೈನರ ರಾಶಿ-ಶಕ್ತಿ ಸಮಾನತಾ ಸಂಬಂಧ, $E=mc^2$. ಆದರೆ, ಪರಮಾಣುಶಕ್ತಿಯನ್ನು ಮಾನವ ಪಳಗಿಸಿ ಬೇಕಾದಾಗ ಬಸಿಯಬಲ್ಲ ಎಂಬುದು ಕೇವಲ ತಿಂಗಳ ಬೆಳಕು (ಭ್ರಾಂತಿಜನ್ಯ ಭಾವನೆ) ಹೊರತು ಬೇರೇನೂ ಅಲ್ಲ ಎಂದು ರುದರ್ಫರ್ಡ್ ಉದ್ಗರಿಸಿದ್ದರು. ಸದ್ಯ ಇವರು ಪರಮಾಣುಯುಗಪ್ರವರ್ತಕ ಇಸವಿ (೧೯೪೫) ತನಕ ಬದುಕಿರಲಿಲ್ಲ, ಬಚಾವ್ !

ಒಟ್ಟಾರೆ ಹೇಳುವುದಾದರೆ ಐನ್‌ಸ್ಟೈನರ ಸಿದ್ಧಿಸಾಧನೆಗಳ ಬಗ್ಗೆ ಅಂದು (೧೯೨೦) ತಾಮ್ಸನ್ನರಿಗಾಗಲಿ ರುದರ್ಫರ್ಡರಿಗಾಗಲಿ ವಿಶೇಷ ಅಭಿಮಾನವಿದ್ದಂತೆ ತೋರಲಿಲ್ಲ. ರುದರ್ಫರ್ಡರ ಅಭಿಪ್ರಾಯದಲ್ಲಿ ಐನ್‌ಸ್ಟೈನ್ ಸಾಧಿಸಿದ್ದು ಕೇವಲ ನ್ಯೂಟನ್ ಭಾವನೆಗಳ ಸಾರ್ವತ್ರೀಕರಣ ಮಾತ್ರ. ಪ್ರಚಲಿತ ಗಣಿತ ಹಾಗೂ ಭೌತವಿಜ್ಞಾನಗಳ ನೆರವಿನಿಂದ ಆ ಭಾವನೆಗಳಿಗೆ ಒದಗಿಸಿದ ಭದ್ರ ಅಸ್ತಿಭಾರ ಮಾತ್ರ. ಇನ್ನು ತಾಮ್ಸನ್ ? ಸಾಪೇಕ್ಷತಾಸಿದ್ಧಾಂತದ ಆನೆ ನಡಿಗೆಯನ್ನು ಇವರು ವೃದ್ಧಸಿಂಹನ ನಿರ್ಲಕ್ಷ್ಯಧೋರಣೆಯಿಂದ ಗಮನಿಸಿದ್ದುಂಟು, ಅಷ್ಟೆ. ಬ್ರಹ್ಮಾಂಡವಿಜ್ಞಾನವನ್ನು (cosmology, ವಿಶ್ವವಿಕಾಸವನ್ನು ಅಧ್ಯಯನ ಮಾಡುವ ಖಗೋಳವಿಜ್ಞಾನ ವಿಭಾಗ) ಕುರಿತಂತೆ—ಐನ್‌ಸ್ಟೈನರ ಕ್ರಾಂತಿಕಾರೀ ಭಾವನೆಗಳನ್ನೂ ಒಳಗೊಂಡಂತೆ—ಹೊಸ ಹೊಸ ವಾದಗಳು ಪುಂಖಾನುಪುಂಖವಾಗಿ ಪ್ರವಹಿಸುತ್ತಿದ್ದ ದಿನಗಳವು. ಹೊಸಮಾಹಿತಿಗಳು ಒಮ್ಮೆಗೇ ಕೋಡಿ ಬಿರಿದು ಹರಿದು ಬಂದಾಗ ಅವನ್ನು ವಿಶ್ಲೇಷಿಸಿ ಅರ್ಥವಿಸಲು ನವೋಪಕರಣಗಳು ವ್ಯಾಪಕವಾಗಿ ಒದಗಿದಾಗ ವಿಜ್ಞಾನಿಗಳ ಊಹನಾಪ್ರತಿಭೆ ನೂತನ ಶಿಖರಾಗ್ರಗಳಿಗೆ ಜಿಗಿದದ್ದು ಸ್ವಾಭಾವಿಕ. ಈ

ಜಿಗಿತ ಓಟಗಳೊಡನೆ ಕಾಲಿಡಲಾಗದ ತಾಮ್ಸನ್ ಕೊಂಚ ಅಸಹನೆಯಿಂದಲೇ ಬಿರುನುಡಿದಿದ್ದರು, "ನಮ್ಮ ಮುಂದೆ ಐನ್‌ಸ್ಟೈನ್ ಆಕಾಶವಿದೆ, ಡ ಸಿಟರ್ ಆಕಾಶವಿದೆ, ವ್ಯಾಕೋಚಿಸುವ ವಿಶ್ವಗಳಿವೆ, ಸಂಕೋಚಿಸುವ ವಿಶ್ವಗಳಿವೆ, ಆಂದೋಲಿಸುವ ವಿಶ್ವಗಳಿವೆ, ವಿಚಿತ್ರ ವಿಶ್ವಗಳೂ ಇವೆ ! ಇನ್ನೇನೆಲ್ಲ ಬೇಕು ? ವಸ್ತುತಃ ಶುದ್ಧಗಣಿತವಿದನೊಬ್ಬ ಕೇವಲ ಸಮೀಕರಣಗಳನ್ನು ಗೀಚುವುದರ ಮೂಲಕ ವಿಶ್ವಗಳನ್ನು ಸೃಷ್ಟಿಸಬಲ್ಲ. ಇನ್ನು ಅವನೊಬ್ಬ ವ್ಯಕ್ತಿವಾದಿಯಾಗಿದ್ದರೆ ನಿಜಕ್ಕೂ ಸ್ವಂತ ವಿಶ್ವವನ್ನೇ ಹೊಂದಿರಬಲ್ಲ."

ಪ್ರಯೋಗಚತುರರು (ಖಂಡಿತವಾಗಿಯೂ ತಾಮ್ಸನ್ ಮತ್ತು ಇವರ ಶಿಷ್ಯ ರುದರ್ಫರ್ಡ್ ಈ ಸಾಲಿಗೆ ಸೇರಿದವರು) ಸಿದ್ಧಾಂತಕುಶಲಿಗಳನ್ನು (ಐನ್‌ಸ್ಟೈನ್ ಈ ವರ್ಗದ ಉತ್ತುಂಗಪುರುಷ) ಕಡೆಗಣಿಸುತ್ತಿದ್ದ ಮನೋಭಾವವನ್ನಿಲ್ಲಿ ಮೂಸಬಹುದು.

ಒಮ್ಮೆ ಸಾಪೇಕ್ಷತಾಸಿದ್ಧಾಂತದ ಬಗ್ಗೆ ಕೇಂಬ್ರಿಜ್ಜಿನ ಟ್ರಿನಿಟಿ ಕಾಲೇಜಿನಲ್ಲಿ ಎಡಿಂಗ್ಟನ್ ಭಾಷಣವೀಯುತ್ತಿದ್ದರು. ಬೆಳಕಿನ ವೇಗದ ಸನಿಹದ ಅಗಾಧ ಜವಗಳಿಂದ ವಸ್ತು ಧಾವಿಸುವಾಗ ಇದರ ಗಾತ್ರ ಕುಗ್ಗುವುದನ್ನು ವಿವರಿಸಲು ಒಂದು ಸುಲಭೋದಾಹರಣೆಯನ್ನು ಉಲ್ಲೇಖಿಸಿದರು, "ಈಗ ನೋಡಿ ಆರು ಅಡಿ ಎತ್ತರದ ವ್ಯಕ್ತಿ ನೆಲದಿಂದ ನೇರ ಮೇಲಕ್ಕೆ ಸೆಕೆಂಡಿಗೆ ೧,೬೧,೦೦೦ ಮೈಲು ವೇಗದಿಂದ ಹಾರಿದ್ದಾದರೆ ಆತನ ಎತ್ತರ ಮೂರು ಅಡಿಗೆ ಕುಗ್ಗಿರುತ್ತದೆ : ಅವನ ನಿಜ ಎತ್ತರದ ಅರ್ಧದಷ್ಟಕ್ಕೆ !"

$l = l_0 \sqrt{1-v^2/c^2}$ ಸಮೀಕರಣವನ್ನು ಹಿಂದೆ ಉಲ್ಲೇಖಿಸಿದೆ. ಇದರಲ್ಲಿ $l_0$ =೬ ಅಡಿ, $v$ =೧,೬೧,೦೦೦ ಮೈಲು, $c$ = ೧,೮೬,೦೦೦ ಮೈಲು ಬೆಲೆಗಳನ್ನು ಆದೇಶಿಸಿ ಸರಳೀಕರಿಸಿದರೆ $l$ =೩ ದೊರೆಯುತ್ತದೆ. ನೆಲದ ಮೇಲೆ ನಿಂತು ನೋಡುವಾತನಿಗೆ ನೆಗೆದಾತ ಮೂರು ಅಡಿಗೆ ಕುಗ್ಗಿರುವಂತೆ ಭಾಸವಾಗುವುದೆಂದು ಇದರ ಅರ್ಥ.

ತಾಮ್ಸನ್ ಮಹಾಶಯ ಇದೇ ಧಾಟಿಯಲ್ಲಿ ಮುಂದೆ ಸಾಗಿ ಈ ಉದಾಹರಣೆಯನ್ನು ಗೇಲಿ ಮಾಡಿದರು, "ನಿಜ ಎತ್ತರವನ್ನು ಕಾಪಾಡಿಕೊಳ್ಳಲು ಮೇಲುಪ್ಪರಿಗೆಗೆ ನೆಗೆಯುವುದಕ್ಕಿಂತ ಕೆಳ ಅಂತಸ್ತಿನಲ್ಲಿ ತಂಗಿರುವುದು ಲೇಸು ತಾನೇ. ಆದರೆ ಇದು ನಿಜಕ್ಕೂ ಆ ವ್ಯಕ್ತಿಗೆ ನೆಮ್ಮದಿ ನೀಡದು. ಏಕೆಂದರೆ ಎತ್ತರ ಎತ್ತರ ಹೋದಂತೆ ವ್ಯಕ್ತಿಯ ಮೇಲೆ ಗುರುತ್ವಾಕರ್ಷಣದ ಪ್ರಭಾವ ಕಡಿಮೆ ಕಡಿಮೆ ಆಗುವುದರಿಂದ ಆತನ ತೂಕ ತಗ್ಗಿರುತ್ತದೆ. ಅಂದರೆ ಆತ ಹಗುರಾಗಿರುತ್ತಾನೆ."

ಈ ಲಘುಟೀಕೆಯ ಹಿನ್ನೆಲೆ ಮುಖ್ಯವಾದದ್ದು. ಇಂಗ್ಲೆಂಡಿನ ಕೆಲಮಂದಿ ಗಣ್ಯರು ಸಾಪೇಕ್ಷತಾ ಸಿದ್ಧಾಂತವನ್ನು ಒಪ್ಪಿಕೊಂಡಿದ್ದರು ನಿಜ. ಆದರೆ ಸಾಮಾನ್ಯವಾಗಿ ವಿಜ್ಞಾನಿಗಳ ಮನದಂತರಾಳದಲ್ಲಿ ಒಂದು ಸಂದೇಹ ಹುದುಗಿತ್ತು : ಪ್ರಯೋಗಸಿದ್ಧಿ ಪಡೆಯದ ಊಹನೆ ಕೇವಲ ಜಾದೂ ಆಗಿರಲಾರದೇ ? ಇಂಥ ಜಾದೂಗಾರನಿಗೆ ವಿಜ್ಞಾನಿಯ ಹಿರಿಪಟ್ಟ ಕಟ್ಟಿ ಗೌರವಿಸುವುದು ತರವೇ?

"ಗುರುತ್ವಾಕರ್ಷಣೆಯನ್ನು ನಾವೀಗ ತಿಳಿಯಲಾರೆವು. ಐನ್‌ಸ್ಟೈನರ ಸಿದ್ಧಾಂತ ಇದನ್ನು ಅರ್ಥವಿಸಲು ನಮಗೆ ನೆರವಾಗದು," ಎಂಬ ಪ್ರಚಲಿತ ಭಾವನೆಯ ಹಿನ್ನೆಲೆಯಲ್ಲಿ ನುಸುಳಿಕೊಂಡಿದ್ದುದು ವಿಜ್ಞಾನದ ಮೊಗವಾಡ ತೊಟ್ಟಿದ್ದ ಅಸೂಯೆ—ಕನಸುಗಾರರೂ ಉದ್ವೇಗಶಾಲಿಗಳೂ ಯುದ್ಧಾತುರರೂ ಆಗಿದ್ದ ಜರ್ಮನರ ವಿಜ್ಞಾನವು, ವಾಸ್ತವವಾದಿಗಳೂ ಪ್ರಯೋಗಪಟುಗಳೂ ಶಾಂತಿಪ್ರಿಯರೂ ಆಗಿದ್ದ ಇಂಗ್ಲಿಷರ ವಿಜ್ಞಾನಕ್ಕಿಂತ ಮಿಗಿಲಾಗಿರುವುದು ಸಾಧ್ಯವೇ ಎಂಬ ಅವೈಜ್ಞಾನಿಕ ದೃಷ್ಟಿ. ವಿಜ್ಞಾನಿಯ ಅವಿಜ್ಞಾನ ಪರಮ ಪ್ರಗಾಢವಾದದ್ದು, ಕೋಟಿಸೂರ್ಯಸಮಪ್ರಭೆ

ಯಿಂದಲೂ ನಿವಾರಣೀಯವಾಗದ್ದು, ತನಗೆ ಅರ್ಥವಾಗದ್ದು, ತನಗೆ ನಿಗೂಢವೆನಿಸಿದ್ದು ಮತ್ತು ತನ್ನ ಪರಿಭಾಷೆಯಲ್ಲಿ ನಿರೂಪಿತವಾಗದ್ದು ಅರ್ಥಹೀನಬೊಂತೆ ಎಂದೇ ಈ ಮಹಾರಾಯನ ತೀರ್ಮಾನ. ನಿದ್ದೆ ಹತ್ತಿರದಿದ್ದಾಗ ನಿದ್ದೆ ಹತ್ತಿರುವಾತನ ಹಾಗೆ ನಟಿಸುವಾತನನ್ನು ಹರಿಹರ ಬ್ರಹ್ಮರೂ ಎಬ್ಬಿಸಲಾರರು ! ಎದ್ದೇಳು ಮಂಜುನಾಥ !

ಅಂದು (೧೯೧೯) ಐನ್‌ಸ್ಟೈನರನ್ನು ಗೇಲಿಮಾಡಲೆಂದು ಬರೆಯಲಾಗಿದ್ದ ಕೆಲವು ಕಗ್ಗಗಳು ವ್ಯಾಪಕವಾಗಿ ಬಳಕೆಯಲ್ಲಿದ್ದುವು. ಅವುಗಳ ಒಂದು ಮಾದರಿಯನ್ನಿಲ್ಲಿ[೩೪] ಕೊಟ್ಟಿದೆ :

ನಂಬದಿರುವುದೆ ಬಾಳಿನುಸಿರಾದ ವಿಜ್ಞಾನಿ-
ಗಳು ಪೂರ್ತಿ ಪಲ್ಟಿ ಹೊಡೆದಿಹರು—ಭೋಪ್ರಭುವೆನುತ
ಐನ್‌ಸ್ಟೈನರನು ಹಾಡಿಹೊಗಳುತ್ತ ಭಟ್ಟಂಗಿ-
ತನದಲ್ಲಿ ಮೆರೆಯುತ್ತಿಹರು : ಪತ್ರಿಕಾಕರ್ತ-
ರವರಿಂದ ನುಡಿಮುತ್ತ ಬಯಸಿ ಭೇಟಿಯ ಕೋರಿ
ಚಾಮರವ ಬೀಸಿ ಛತ್ರಿಯ ಹಿಡಿದು ಓಲೈಸಿ
  ಬಳಿಕ ಅವರನು ಹೊಗಳಿ ಮರುಹೊಗಳಿ ಮರುಹೊಗಳಿ
  ಎಲ್ಲವನು ಗಗನಮಯ ಮಾಡಿ ಮರುಳಾಗುವರು !

ವಿಶ್ವನಿರ್ಮಾಪಕರು ಬೇರಾರು ? ಐನ್‌ಸ್ಟೈನ್ !
ಮೊದಲ ನುಡಿಕಾರರಿನ್ನಾರು ? ಅಗೊ ಐನ್‌ಸ್ಟೈನ್ !
ಅವರೀಗ ಪ್ರಜ್ವಲಿಸುತಿಹರು ಬೆಳಕನು ಮಹೋ-
ಪಾಧ್ಯಾಯ ಪೀಠದಿಂ ನಾಲ್ದೆಸೆಗೆ ಬೀರುತ್ತ
ಬೇಕೆನಿಸುವಷ್ಟು ಸಂಖ್ಯೆಯಲಿ ವಾರ್ತಾಪತ್ರಿ-
ಕೆಗಳಿಂದು ಅವರ ಗುಣಗಾನ ಗೈಯ್ಯುತ್ತಿಹವು
  ಬಳಿಕ ಅವರನು ಹೊಗಳಿ ಮರುಹೊಗಳಿ ಮರುಹೊಗಳಿ
  ಎಲ್ಲವನು ಗಗನಮಯ ಮಾಡಿ ಮರುಳಾಗುವುವು !

ಬಾನಬಟ್ಟೆಯಲಿ ರವಿಯೇಕೆ ಹದವರಿತು ಸರಿ
ಯುತಿಹ ? ಐನ್‌ಸ್ಟೈನ್ ಮಹಾಪ್ರಭುವಿನಾಣತಿಯೆಂದು !
ಶಶಿಯೇಕೆ ಬಗೆಬಗೆಯ ಕಲೆಗಳಿಂ ರಾಜಿಪನ್ ?
ತಾರೆಗಳ ಮೂಕವಿಸ್ಮಯದ ಹಿನ್ನೆಲೆಯದೇಂ ?
ಬುಧವೇತಕಡ್ಡಡ್ಡ ಸಾಗುತಿದೆ ? ಮತ್ತೇಕೆ ?
ಐನ್‌ಸ್ಟೈನ್ ಮಹೋನ್ನತರಭೀಪ್ಸೆಯಂ ಪಾಲಿಸಲ್ !
  ಜನವಿಂತು ಹೊಗಳಿ ಪಾಡುತ ನಲಿದು ಮರುಹೊಗಳಿ
  ಎಲ್ಲವನು ಗಗನಮಯ ಮಾಡಿ ಮರುಳಾಗುವರು !

ವೇದಾಂತಪರಿಣತರು ಊಹನಾಕುಶಲಿಗಳು
ಕರಮುಗಿದು ನಿಂತಿಹರು ಅವರ ಪೀಠದ ಸುತ್ತ
ವಿಶ್ವವಿದ್ಯಾಲಯ ಪ್ರಾಧ್ಯಾಪಕ ಸಮೂಹವೂದುತಿದೆ
ದಿಗ್ವಿಜಿತ್ತಿಯೊಡೆಯುವಂತವರ ತುತ್ತೂರಿಯನು
ರೀಮಾನ್ ಪ್ರತೀಕಗಳ ಮತ್ತೆ ಕ್ರಿಸ್ಟೋಫಲ್ ಪ್ರ-
ತೀಕಗಳ ನಿರ್ಮಾಣಕಾರರೇ ಅವರೆಂದು

ಸಾರುತವರನು ಹೊಗಳಿ ಮರುಹೊಗಳಿ ಮರುಹೊಗಳಿ
ಎಲ್ಲವನು ಗಗನಮಯ ಮಾಡಿ ಮರುಳಾಗುವರು !

ನಿರ್ಲಕ್ಷ್ಯಕೆಡೆಯಾದ ಇತರ ವಿಜ್ಞಾನಿಗಳು
ಈ ನಾಟಕವ ತಿರಸ್ಕಾರದಿಂ ನಿಟ್ಟಿಪರು :
ಬೆದರುಗೊಂಬೆಗೆ ಬಣ್ಣ ಮೆತ್ತಿಹರು ತುಸುದಪ್ಪ-
ವೆನುತ ! ಇದು ನಿಜವಿರಲಿ ಸುಳ್ಳಿರಲಿ ಬದುಕಿನಲಿ
ಶಾಶ್ವತ ಸ್ಥಾನಮಂ ಪಡೆಯುವುದು ದಿವ್ಯ ಸ-
ತ್ಯದ ವಿನಾ ಬೇರಾವುದೂ ಅಲ್ಲ. ಆದರೂ
ವಂದಿಮಾಗಧ ಮಂದಿ ಮಿಗೆ ಹೊಗಳಿ ಮರುಹೊಗಳಿ
ಎಲ್ಲವನು ಗಗನಮಯ ಮಾಡಿ ಮರುಳಾಗುತಿದೆ !

*New York Times* ವರದಿಗಾರ ಐನ್‌ಸ್ಟೈನರ ಸಂದರ್ಶನ ಬಯಸಿ ಪಡೆದ. ಅವನ ಪ್ರಶ್ನೆ, "ಮಾನ್ಯರೇ ! ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತದ ಮೇಲೆ ಕೆಲಸವೆಸಗಲು ನಿಮಗೆ ಪ್ರೇರಣೆ ಹೇಗೆ ಬಂತು ?"

ಪ್ರಶ್ನಕಾರನ ಆಸಕ್ತಿ ಗಂಭೀರವಾದದ್ದೇನೂ ಆಗಿರಲಿಲ್ಲ. ಏನೋ ಮಂತ್ರ ಮೋಡಿಯಿಂದ ಅಥವಾ ತಂತ್ರ ಸಿದ್ಧಿಯಿಂದ ಐನ್‌ಸ್ಟೈನ್ ವಿಶ್ವರಹಸ್ಯಗಳನ್ನು ಪತ್ತೆಹಚ್ಚಿರಬಹುದೆಂಬುದು ಅಂತರ್ಗತ ಭಾವ. ಆ ದಿಢೀರ್ ಸೂತ್ರ ದೊರೆತರೆ ಎಷ್ಟು ಅನುಕೂಲ ! ಆತನ ಮಾತಿನ ಧ್ವನಿ ಈ ಭಾವನೆಯನ್ನು ಬಯಲುಮಾಡಿತ್ತು. ಹೀಗಾಗಿ ಐನ್‌ಸ್ಟೈನರ ಉತ್ತರ ತಥಾ ಧಾಟಿಯಲ್ಲೇ ಹೊರ ಹೊಮ್ಮಿತು. "ಓ ಅದೇ ? ಬಲು ಸರಳ. ಒಮ್ಮೆ ಬರ್ಲಿನ್ನಿನ ನನ್ನ ಕೊಠಡಿಯಲ್ಲಿ ಸುಖಾಸೀನನಾಗಿ ಮಂಡಿಸಿದ್ದೆ. ಹತ್ತಿರದಲ್ಲಿದ್ದ ಬಲು ಎತ್ತರದ ಸೂರಿನಿಂದ ಒಬ್ಬ ವ್ಯಕ್ತಿ ಬೀಳುತ್ತಿದ್ದುದನ್ನು ಕಂಡು ಗಾಬರಿಗೊಂಡೆ ಎಲ ಎಲ ! ಏನಾಗಿಹೋಯಿತು ಎನ್ನುತ್ತ ಅತ್ತ ಕಡೆಗೆ ಧಾವಿಸಿದೆ. ಅಲ್ಲಿಗೆ ತಲಪುವಷ್ಟರಲ್ಲೇ ಅವನು ನೆಲಮುಟ್ಟಿದ್ದ. ಆದರೆ ಪರಮಾಶ್ಚರ್ಯ ! ಅವನಿಗೇನೂ ಆಗಿರಲಿಲ್ಲ —ಕೂದಲು ಕೂಡ ಕೊಂಕಿರಲಿಲ್ಲ. ತನ್ನ ಮೇಲೆ ಗುರುತ್ವವೇನೂ ಪ್ರಭಾವ ಬೀರಲಿಲ್ಲವೆಂದ ಆತ. ಈ ಘಟನೆ ವಿಶ್ವದ ಬಗ್ಗೆ ಹೊಸ ರೀತಿಯಲ್ಲಿ ಚಿಂತಿಸಲು ನನಗೆ ಪ್ರೇರಣೆ ನೀಡಿತು."

ವರದಿಗಾರ ಗಹನ ಐತಿಹಾಸಿಕ ತಥ್ಯವನ್ನು ಆವಿಷ್ಕರಿಸಿದಾತನ ಸಂತೃಪ್ತಿಯಿಂದ ಮರಳಿದ.

ಈ ಸಬೂಬು ನೀಡಿದಾಗ ಖಂಡಿತವಾಗಿಯೂ ಐನ್‌ಸ್ಟೈನ್ 'ನ್ಯೂಟನ್ನನ ಸೇಬು' ಹಾಗೂ 'ಗೌಸನ ವ್ಯಾಖ್ಯಾನ' ಎರಡನ್ನೂ ನೆನಪಿಸಿಕೊಂಡಿರಲಾರರು ಎಂದು ಸಾಧಿಸುವಂತಿಲ್ಲ.

ಒಂದು ಸಂಜೆ ನ್ಯೂಟನ್ ತನ್ನ ಉದ್ಯಾನವನದಲ್ಲಿ ವಿರಮಿಸಿಕೊಂಡಿದ್ದಾಗ ಪಕ್ಕದಲ್ಲಿದ್ದ ಸೇಬಿನ ಮರದಿಂದ ಹಣ್ಣೊಂದು ತೊಟ್ಟು ಕಳಚಿ ನೆಲಕ್ಕೆ ಕೆಡೆಯಿತಂತೆ. ಅದು ಬುವಿಗೆ ಬೀಳಲು ಕಾರಣವೇನು ? ಬಾನ ಕಡೆಗೇಕೆ ನೆಗೆಯಲಿಲ್ಲ ? ಹೀಗೆ ಯೋಚಿಸಲು ಸೇಬು ನಿಮಿತ್ತವಾಯಿತಂತೆ. ಈ ಚಿಂತನೆಯ ಸೇಬುಫಲವೇ ನ್ಯೂಟನ್ನನ ಪ್ರಪಂಚವಿಖ್ಯಾತ ಸಾರ್ವತ್ರಿಕ ಗುರುತ್ವಾಕರ್ಷಣ ನಿಯಮ.

ಕಾರ್ಲ್ ಫ್ರೆಡರಿಶ್ ಗೌಸ್ (೧೭೭೭-೧೮೫೫, ಸುವಿಖ್ಯಾತ ಗಣಿತವಿದ)—ಈತನಿಗೆ ನ್ಯೂಟನ್ನನ ಬಗ್ಗೆ ಅತಿಶಯಾಭಿಮಾನ. 'ನ್ಯೂಟನ್ನನ ಸೇಬು' ಕತೆಯನ್ನು ಪ್ರಸ್ತಾವಿಸಿದಾಗ ಗೌಸ್ ಸೆಟೆದೆದ್ದು, "ಅಸಂಬದ್ಧಪ್ರಲಾಪ. ನೀವು ಬೇಕಾದರೆ ಆ ಕಟ್ಟುಕತೆಯನ್ನು ನಿಜವೆಂದು ನಂಬಿ. ಆದರೆ ನಿಜ ಸಂಗತಿ ಹೀಗಿದೆ : ಒಬ್ಬ ದಡ್ಡ ಸೇನಾಧಿಕಾರಿ ನ್ಯೂಟನ್ನನನ್ನು ಆತ ಹೇಗೆ ಗುರುತ್ವಾ

ಕರ್ಷಣ ನಿಯಮವನ್ನು ಶೋಧಿಸಿದ್ದು ಎಂಬುದಾಗಿ ಪ್ರಶ್ನಿಸಿದ. ಬೌದ್ಧಿಕವಾಗಿ ತಾನೊಂದು ಮಗುವಿನೊಡನೆ ವ್ಯವಹರಿಸುತ್ತಿದ್ದೇನೆಂದೂ ಈ ಬೋರನನ್ನು (bore) ತತ್‌ಕ್ಷಣವೇ ನಿವಾರಿಸಬೇಕೆಂದೂ ಮನಗಂಡ ನ್ಯೂಟನ್ ಮಹಾಶಯ ತೊಟ್ಟು ಕಳಚಿದ ಒಂದು ಸೇಬು ನೇರ ತನ್ನ ತುದಿಮೂಗಿನ ಮೇಲೆಯೇ ಬಿದ್ದಿತೆಂದ. ಆ ಅಧಿಕಾರಿ ಪೂರ್ಣಾರ್ಥ ಗ್ರಹಿಸಿದ ಸಂತೃಪ್ತಭಾವ ತುಂದಿಲನಾಗಿ ನಿರ್ಗಮಿಸಿದ !''

ನ್ಯೂಟನ್ನನ ನಾಡಿನಲ್ಲಿ ಐನ್‌ಸ್ಟೈನ್ ಬಗ್ಗೆ ಸಮಗ್ರವಾಗಿ ಹೇಗೆ ಶೀತಲ ಕುತೂಹಲವಿತ್ತು ಎನ್ನುವುದನ್ನು ನಿದರ್ಶಿಸಲು ಇನ್ನೊಂದು ಘಟನೆಯನ್ನು ಉಲ್ಲೇಖಿಸುವುದು ಅಗತ್ಯ.

ಅಂತಾರಾಷ್ಟ್ರೀಯ ಶಾಂತಿಸೌಹಾರ್ದಗಳ ಸ್ಥಾಪನೆಗಾಗಿ ಯಾವ ತ್ಯಾಗ ಬೇಕಾದರೂ ಮಾಡಲು ಸಿದ್ಧರಿದ್ದ ಐನ್‌ಸ್ಟೈನರನ್ನು ಹೇಗಾದರೂ ಮಾಡಿ ಇಂಗ್ಲೆಂಡಿಗೆ ಬರಮಾಡಿಕೊಳ್ಳಬೇಕು. ಜರ್ಮನಿ-ಇಂಗ್ಲೆಂಡ್ ಬಾಂಧವ್ಯವನ್ನು ಮತ್ತೆ ಬೆಸೆಯಲು ಮತ್ತು ಸಮರ ಗಾಯವನ್ನು ಶೀಘ್ರ ಮಾಯಿಸಲು ಐನ್‌ಸ್ಟೈನ್-ಆಗಮನವೊಂದೇ ಸಂಜೀವಿನಿ ಎಂಬುದಾಗಿ ಭಾವಿಸಿದ ಮಾನವತಾವಾದಿ ಹಾಗೂ ಸಮನ್ವಯದೃಷ್ಟಿ-ಆರಾಧಕ ಎಡಿಂಗ್ಟನ್ ಆ ದಿಶೆಯಲ್ಲಿ ಕಾರ್ಯೋದ್ಯುಕ್ತರಾದರು.

ಶತ್ರುರಾಷ್ಟ್ರ ಜರ್ಮನಿಯ ಪ್ರಜೆ ಐನ್‌ಸ್ಟೈನರ ಗುರುತ್ವಾಕರ್ಷಣ ಸಿದ್ಧಾಂತಕ್ಕೆ ಮಿತ್ರರಾಷ್ಟ್ರ ಇಂಗ್ಲೆಂಡಿನ ಪ್ರಜೆ ಎಡಿಂಗ್ಟನ್ನರ ವೈಜ್ಞಾನಿಕ ಪ್ರಯತ್ನದಿಂದ, ೧೯೧೯ರಲ್ಲಿ, ಭೌತಸ್ಥಿರೀಕರಣ ಲಭಿಸಿದ್ದು ಸರಿಯಷ್ಟೆ. ಸಹಜವಾಗಿ ಈ ವಿಜ್ಞಾನೈಕ್ಯಭಾವ ಐನ್‌ಸ್ಟೈನರಿಗೆ ಸಂತೋಷ ನೀಡಿತ್ತು. ಅದೇ ಡಿಸೆಂಬರಿನಲ್ಲಿ ಇಂಗ್ಲೆಂಡಿನ ರಾಯಲ್ ಆ್ಯಸ್ಟ್ರನಾಮಿಕಲ್ ಸೊಸೈಟಿಯ ವಾರ್ಷಿಕ ಸುವರ್ಣಪದಕ ಪ್ರದಾನಕ್ಕಾಗಿ ಮೂರು ಹೆಸರುಗಳನ್ನು ಸೂಚಿಸಲಾಗಿತ್ತು. ಅವುಗಳ ಪೈಕಿ ಐನ್‌ಸ್ಟೈನರದು ಒಂದು. ಅಧಿಕ ಬಹುಮತದಿಂದ (ಸರ್ವಾನುಮತದಿಂದ ಅಲ್ಲ) ಇವರ ಹೆಸರು ಆಯ್ಕೆಗೊಂಡಿತು. ಎಡಿಂಗ್ಟನ್ ಈ ಶುಭಸಮಾಚಾರವನ್ನು ಐನ್‌ಸ್ಟೈನರಿಗೆ ತಿಳಿಸಿ ಇವರನ್ನು ಹಾರ್ದಿಕವಾಗಿ ಅಭಿನಂದಿಸಿದರು.

೧೯೨೦ ಜನವರಿ ೨೭ರಂದು ಐನ್‌ಸ್ಟೈನ್ ಮ್ಯಾಕ್ಸ್ ಬಾರ್ನರಿಗೆ ಬರೆದ ಕಾಗದದಲ್ಲಿ ಇದನ್ನು ಉಲ್ಲೇಖಿಸಿದ್ದಾರೆ, ''ಅಂದಹಾಗೆ ಮುಂಬರುವ ವಸಂತದಲ್ಲಿ (spring) ನಾನು ಇಂಗ್ಲೆಂಡಿಗೆ ಹೋಗಲಿದ್ದೇನೆ—ನನ್ನ ಎದೆಗೆ ಒಂದು ಪದಕವನ್ನು ಒತ್ತಿಸಿ(ಕುತ್ತಿಸಿ)ಕೊಳ್ಳಲು ಮತ್ತು ಆ ಥಳಕು ಬೆಳಕಿನ ಇನ್ನೊಂದು ಮುಖವನ್ನು ಹತ್ತಿರದಿಂದ ನೋಡಲು, ಮತ್ತು ನೋಡಿ ಮೆರೆಯಲು !''

ಆದರೆ ಅಂಧ ದೇಶಾಭಿಮಾನಿಗಳೂ ಉಗ್ರ ಜರ್ಮನ್‌ದ್ವೇಷಿಗಳೂ ಸಂಚು ಹೂಡಿ ಇದು ಆಗಲಾರದಂತೆ ತಡೆಯೊಡ್ಡಿದರು. ರಾಯಲ್ ಸೊಸೈಟಿಯ ವರಿಷ್ಠ ಸಮಿತಿಯಲ್ಲಿ ಇವರದು ಮೇಲುಗೈಯಾಯಿತು. ಮೂರು ದಶಕಗಳಲ್ಲಿ ಮೊತ್ತಮೊದಲಿಗೆ ಈ ಪದಕ ಪ್ರದಾನವಾಗದೆ ಖಾಲಿ ಉಳಿದದ್ದು ಆ 'ಚರಿತ್ರಾರ್ಹ' ವರ್ಷ ಮಾತ್ರ (೧೯೨೦). ಎಡಿಂಗ್ಟನ್ನರ ಮನಃಸ್ಥಿತಿ ಹೇಗಾಗಿರಬಹುದು ? ಇಂಥ ದುರ್ಭರ ಸಂದಿಗ್ಧತೆಯಿಂದ ಪಾರಾಗಲು ಎಲ್ಲ ಪ್ರಾಮಾಣಿಕರಿಗೂ ಇರುವ ಹಾದಿ ಒಂದೇ : ಸತ್ಯವನ್ನು ನೇರವಾಗಿ ನುಡಿಯುವುದು. ಎಡಿಂಗ್ಟನ್ ಐನ್‌ಸ್ಟೈನರಿಗೆ ಕಾಗದ ಬರೆದು ತಮ್ಮ ಮನದುಮ್ಮಳ ತೋಡಿಕೊಂಡರು : ''ಇದರಿಂದ ನಿಮಗೊದಗುವ ಹತಾಶೆ ಯಾವುದೇ ರೀತಿಯಲ್ಲಿ ವೈಯಕ್ತಿಕವಾಗಿರಲಾರದೆಂಬ ದೃಢ ನಂಬಿಕೆ ನನಗಿದೆ. ಉಜ್ಜ್ವಲ ಅಂತಾರಾಷ್ಟ್ರೀಯ ಪ್ರಜ್ಞೆಯನ್ನು ಸಂವರ್ಧಿಸಲು ಇದೊಂದು ಸುಯೋಗ್ಯ ಅವಕಾಶವಾಗಿತ್ತು. ಪ್ರತಿಗಾಮಿ ಬಲಗಳಿಂದ ಇದಕ್ಕೆ ಒದಗಿದ ಮುಖಭಂಗ ನನಗೆ ತೀವ್ರ ಖೇದ ಉಂಟುಮಾಡಿದೆ. ನನ್ನ ಸಂತಾಪದಲ್ಲಿ ನೀವೂ ಸಹಭಾಗಿಗಳೆಂಬುದು ನನಗೆ ಗೊತ್ತು. ಏನೇ ಇರಲಿ. ಸುಸಂಸ್ಕೃತ

ಭಾವ ಅಭ್ಯುದಯಗೊಂಡೀತೆಂದು ನಂಬಿದ್ದೇನೆ."

ಹೌದು, ಸುಸಂಸ್ಕೃತ ಭಾವ ಅಭ್ಯುದಯಗೊಂಡಿತು. ಆದರೆ ಬಲುಮೆಲ್ಲನೆ. ಐನ್‌ಸ್ಟೈನರಿಗೆ ಇವರ ಹಕ್ಕಿನ ಪದಕ ದೊರೆತೇ ದೊರೆಯಿತು—೧೯೨೬ರಲ್ಲಿ.

## ಇಂಗ್ಲಿಷ್ ಜನರಿಂದ 'ಸ್ವಾಗತ'

> ಇಂದಿನಿಂದ ಶತಮಾನಗಳು ಉರುಳಿದ ತರುವಾಯ ಹಾದಿಹೋಕನೊಬ್ಬ ನಮ್ಮ ಕಾಲವನ್ನು (೨೦ನೆಯ ಶತಮಾನ) ಮೊದಲನೆಯ ಮಹಾಯುದ್ಧದ ಅವಧಿ ಎಂಬುದಾಗಿ ತಿಳಿದರೆ ಸುಶಿಕ್ಷಿತ ಜನ ನಮ್ಮ ಶತಮಾನದ ಪ್ರಥಮ ಪಾದವನ್ನು ನಿಮ್ಮ ಹೆಸರಿನೊಂದಿಗೆ ಹೊಂದಿಸುತ್ತಾರೆ—ಹದಿನೇಳನೆಯ ಶತಮಾನದ ಅಂತ್ಯವನ್ನು ಇಂದು ಕೆಲವರು ೧೪ನೆಯ ಲೂಯಿಯ ಕಾಳೆಗಗಳ ಕಾಲವೆಂದು ಭಾವಿಸಿದರೆ ಇತರರು ಅದನ್ನು ನ್ಯೂಟನ್ ಅವರ ಅವಧಿ ಎಂದು ಪರಿಗಣಿಸುವುದಿಲ್ಲವೇ, ಅಗೊ ಹಾಗೆ.
>
> **ಫಿಟ್ಸ್ ಹೇಬರ್** (ಐನ್‌ಸ್ಟೈನರಿಗೆ ಬರೆದ ಪತ್ರ)

ಇಪ್ಪತ್ತನೆಯ ಶತಮಾನದ ನ್ಯೂಟನ್ ಎಂದು ಖ್ಯಾತನಾಮರಾಗಿದ್ದ ಐನ್‌ಸ್ಟೈನರು ನ್ಯೂಟನ್ನನ ನಾಡಿಗೆ, ಅಮೆರಿಕದಿಂದ ಜರ್ಮನಿಗೆ ಹಿಂತಿರುಗುವ ಹಾದಿಯಲ್ಲಿ, ೧೯೨೧ ಜೂನ್ ಎರಡು, ಮೊದಲ ಬಾರಿಗೆ ಆಗಮಿಸಿದರು.

ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಇವರ ಪ್ರಥಮ ಭಾಷಣ. ಭಾಷೆ ಜರ್ಮನ್, ವಿಷಯ ಸಾಪೇಕ್ಷತಾಸಿದ್ಧಾಂತ—ಇಮ್ಮಡಿ ಕಾಠಿಣ್ಯ ! ಅರ್ಥವಾದದ್ದು ಬೆರಳೆಣಿಕೆಯ ಮಂದಿ ವಿಜ್ಞಾನಿಗಳಿಗೆ ಮಾತ್ರ. ಆದರೆ ಭಾಷಾತೀತವಾದ ಇವರ ಮೌಲ್ಯಪ್ರಜ್ಞೆ ಮಾತ್ರ ಸರ್ವಶ್ರೋತೃಗಳಿಗೂ ಸುವೇದ್ಯವಾಯಿತು. ಇವರ ಆಕರ್ಷಕ ವ್ಯಕ್ತಿತ್ವ, ಮಾತಿನಲ್ಲಿ ಹುದುಗಿದ್ದ ಖಚಿತತೆ, ಇಳಿಬಿದ್ದ ಅಳಕಗಳಲ್ಲಿ ಅಡಗಿದ್ದ ಮೋಡಿ, ಮತ್ತು ಕಂಗಳಲ್ಲಿ ಮಿನುಗುತ್ತಿದ್ದ ಅಪೂರ್ವಕಾಂತಿ ಇವನ್ನು ಗಮನಿಸಿದ ಅವರೆಲ್ಲರೂ ಮಂತ್ರಮುಗ್ಧರಾದಂತೆ ತೋರಿದರು.

ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯ ಐನ್‌ಸ್ಟೈನರಿಗೆ ವಿಜ್ಞಾನದ ಗೌರವ ಡಾಕ್ಟೊರೇಟ್ ಪದವಿ ಪ್ರದಾನಿಸಿ ತನ್ನ ಆದರ ಪ್ರದರ್ಶಿಸಿತು. ಯುದ್ಧಾರಂಭವಾದ ಬಳಿಕ ಸಂದ ಆ ಏಳು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಇಂಗ್ಲೆಂಡ್ ದೇಶ, ಶತ್ರುರಾಷ್ಟ್ರದ ವಿಜ್ಞಾನಿಯೊಬ್ಬನಿಗೆ ಗೌರವ ಪ್ರಶಸ್ತಿ ನೀಡಿದುದಾಗಿತ್ತು.

ಮುಂದಿನ ತಂಗುದಾಣ ಪ್ರಪಂಚದ ಮಹಾನಗರ ಲಂಡನ್.

ಅಲೆಕ್ಸಾಂಡರ್ ಪೋಪ್ (೧೬೮೮-೧೭೪೪) ಎಂಬ ಪ್ರಸಿದ್ಧ ಇಂಗ್ಲಿಷ್ ಕವಿ—ಈತ ನ್ಯೂಟನ್ನನ ಸಮಕಾಲೀನ—ನ್ಯೂಟನ್-ಮಹಾಶಯನ ಹಿರಿಮೆ ಸಾರುವ ಒಂದು ಕಗ್ಗ ಗೀಚಿದ್ದ. ಅದರ ಪ್ರಕಾರ ಪರಮಾತ್ಮನ ಆದೇಶಾನುಸಾರ ನ್ಯೂಟನ್ ಬಂದ, ನಿಸರ್ಗನಿಯಮಗಳನ್ನು ಆವಿಷ್ಕರಿಸಿದ, ಸುತ್ತಲೂ ಜ್ಞಾನಪ್ರಕಾಶದ ಪ್ರವಾಹವನ್ನೇ ಹರಿಸಿದ ಎಂದಿತ್ತು* :

ನಿಸರ್ಗನಿಯಮಗಳನಂತಕಾಲದ
ಅಖಂಡನಿದ್ರೆಯೊಳೊರಗಿರಲು
'ನ್ಯೂಟನ್ ಬರಲೆಂ'ದನ್ ದೇವನ್, ಅಗೊ !
ಬೆಳ್ಳಂಬೆಳಗು ಎಲ್ಲೆಲ್ಲು !

---

* ಇದಕ್ಕೆ ಸ್ಫೂರ್ತಿ *Genesis*ನಲ್ಲಿ ಲಿಖಿತವಾಗಿರುವ (I 3) And God said, Let there be light: and there was light. ನ್ಯೂಟನ್‌ರನ್ನು ಮೆಚ್ಚಿ ದೈವಾಪಿಸಿದ ಬಗೆ !

ಸರ್ ಜಾನ್ ಸ್ಕ್ವಯರ್ (೧೮೮೪-೧೯೫೮) ಇಂಗ್ಲೆಂಡಿನ ಸಾಹಿತಿ ಮತ್ತು ಅಣಕು ಕವಿ. ಐನ್‌ಸ್ಟೈನರ ಹಿರಿಮೆಯನ್ನು ಅರಿತು ಮೆಚ್ಚಿದವ. ಇಂಥ ಮಹಾವಿಜ್ಞಾನಿ ಇಂಗ್ಲೆಂಡಿಗೆ ಬರುವ ರೆಂದು ತಿಳಿದಾಗ ಸ್ಕ್ವಯರನ ಕಾವ್ಯಸ್ಫೂರ್ತಿ ಉಕ್ಕಿ ಬುದ್ಬುದಿಸಿತು : ನ್ಯೂಟನ್ ಏಸೂ ಬಂದ, ಬೆಳಕು ತಂದ, ನಾಲ್ದೆಸಗೆ ಹರಿಸಿದ. ಸರಿ ; ಆದರೆ ಪರಮಾತ್ಮ-ವೈರಿ ಸೈತಾನ್ ಸುಮ್ಮನೆ ಕುಳಿತಾನೇ? ಇಲ್ಲ ; ಐನ್‌ಸ್ಟೈನ್ ಬರುವಂತೆ ಮಾಡಿದ, ನ್ಯೂಟನ್-ಸೂತ್ರಗಳನ್ನು ಉಚ್ಚಾಟನೆ ಗೊಳಿಸಿದ. ಯಥಾಸ್ಥಿತಿ ಮರಳುವಂತೆ ವಿಧಿಸಿದ ! ಸ್ಕ್ವಯರ್ ತನ್ನ ಈ ನೂತನ ನಿಂದಾಸ್ತುತಿ ವಾಚಕ ಪಂಕ್ತಿಗಳನ್ನು ಪೋಪನ ಸಾಲುಗಳಿಗೆ ಪೋಣಿಸಿಯೇ ಬಿಟ್ಟ :

—ಆದರೆ
ಸುದೀರ್ಘಕಾಲವಿದುಳಿದಿರಲಿಲ್ಲ
ಬೊಬ್ಬೆಯನಿಡುತ್ತ ಬಂದನ್ ಸೈತಾನ್
'ಐನ್‌ಸ್ಟೈನ್ ಬರೆಲೆಂ'ದನ್ ಅಗೊ ! ಪೂರ್ವ
ಸ್ಥಿತಿಯನ್ ಕ್ಷಣದೊಳ್ ತಂದೇ ಬಿಟ್ಟನ್ !

ಲಂಡನ್ನಿನಲ್ಲಿ ಐನ್‌ಸ್ಟೈನ್ ದಂಪತಿಗಳ ಆತಿಥೇಯ ಲಾಡ್ ರಿಚರ್ಡ್ ಬರ್ಡನ್ ಹಾಲ್ಡೇನ್ (೧೮೫೬-೧೯೨೮, ಇವರು ಹಿರಿಯ ತತ್ತ್ವಶಾಸ್ತ್ರಜ್ಞ ಮತ್ತು ಮುತ್ಸದ್ದಿ ಜೆ. ಬಿ. ಎಸ್. ಹಾಲ್ಡೇನರ ದೊಡ್ಡಪ್ಪ). ಉದಾರವಾದಿ ಮತ್ತು ಶಾಂತಿಪ್ರಿಯ ಹಾಲ್ಡೇನ್ ಇಂಗ್ಲೆಂಡ್ ಮತ್ತು ಜರ್ಮನಿ ನಡುವೆ ಮಧುರಸಂಬಂಧ ಕುದುರಬೇಕೆಂದು ಪ್ರಾಮಾಣಿಕವಾಗಿ ಆಶಿಸಿ ಆ ದಿಶೆಯಲ್ಲಿ ಸಕ್ರಿಯ ಪಾತ್ರ ನಿರ್ವಹಿಸುತ್ತಿದ್ದ ಪ್ರಭಾವಶಾಲಿ. ಜರ್ಮನಿಯ ಗಟಿಂಗೆನ್ನಿನಲ್ಲಿ ಇವರು ವಿದ್ಯಾಭ್ಯಾಸ ಮಾಡಿದ್ದರು (ಐನ್‌ಸ್ಟೈನ್ ಹುಟ್ಟುವ ಮೊದಲೇ). ಹೀಗಾಗಿ ಇವರಿಗೆ ಜರ್ಮನಿಯ ಬಗ್ಗೆ ಅದೊಂದು ಪುಣ್ಯಕ್ಷೇತ್ರ ಎನ್ನುವಂಥ ಅಭಿಮಾನ ಬೆಳೆದಿತ್ತು. ಯುದ್ಧಪೂರ್ವ ದಿನಗಳಲ್ಲಿ ಬ್ರಿಟಿಷ್ ಸರ್ಕಾರದ ವರಿಷ್ಠ ಹುದ್ದೆಯಲ್ಲಿದ್ದ ಹಾಲ್ಡೇನ್ ಇಂಗ್ಲೆಂಡಿನ ಉನ್ನತ ವಲಯಗಳಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಿದ್ದರು.

ವಿಜ್ಞಾನದ ಊಹನಾಪ್ರಪಂಚದಲ್ಲಿ ವಿಹರಿಸುವುದು ಹಾಲ್ಡೇನರ ಪ್ರಿಯ ಹವ್ಯಾಸ. ಸಹಜವಾಗಿ ಸಾಪೇಕ್ಷತಾಸಿದ್ಧಾಂತದ ಮಾಯಾಲೋಕ ಇವರಿಗೆ ಅತ್ಯಾಕರ್ಷಕವಾಗಿ ಕಂಡು ಬಂದಿತು. ಆ ಸಿದ್ಧಾಂತದ ತಿರುಳನ್ನು ಚೆನ್ನಾಗಿ ಗ್ರಹಿಸಿ, ೧೯೨೧ರಲ್ಲಿ, ಐನ್‌ಸ್ಟೈನ್ ಇಂಗ್ಲೆಂಡಿಗೆ ಆಗಮಿಸಲಿದ್ದ ಅದೇ ಮೊದಲು, *The Reign of Relativity* ಎಂಬ ಹೆಸರಿನ ಜನಪ್ರಿಯ ಗ್ರಂಥವನ್ನು ಪ್ರಕಟಿಸಿದ್ದರು.

ಸತ್ಯವೆಂದರೇನು ? ಶುದ್ಧ ಅಥವಾ ಪರಿಪೂರ್ಣ ಸತ್ಯವೊಂದಿದ್ದರೆ ಅದು ನಮ್ಮ ಇಂದ್ರಿಯ ಗೋಚರ ಪದಾರ್ಥವಲ್ಲ. ಏಕೆಂದರೆ ಇಂದ್ರಿಯಗಳ ಸ್ವಾಭಾವಿಕ ಗ್ರಹಣ ಸೀಮಿತತೆ ಶುದ್ಧಸತ್ಯದ ಪರಿಪೂರ್ಣಗ್ರಹಣವನ್ನು ಅಸಾಧ್ಯವಾಗಿಸುತ್ತದೆ. 'ಈ ನಿಲವಿಗೆ ಈ ಸತ್ಯದರ್ಶನ' ಎನ್ನಬಹುದೇ ವಿನಾ ಸತ್ಯದ ಸಮ್ಯಗ್ದರ್ಶನ ಲಭಿಸಬಲ್ಲ ನಿಲವೊಂದಿದೆ ಎನ್ನುವಂತಿಲ್ಲ. ಹೀಗೆ ಚಿಂತಿಸಿದ ಹಾಲ್ಡೇನ್ ಬರೆದಿದ್ದಾರೆ, "ಯಾವುದೇ ವಿಷಯವನ್ನು ಕುರಿತ ಸಮರ್ಪಕತೆ ಇನ್ನಷ್ಟು ಪೂರ್ಣರೂಪದಲ್ಲಿರುವಂತೆ ಸತ್ಯಪರೀಕ್ಷಣೆ ಆಗಬೇಕಾದೀತು. ತ್ರಾಸಿನಿಂದ ಇಲ್ಲವೇ ಅಳತೆಪಟ್ಟಿಯಿಂದ ಪಡೆದ ಮಾಪನೆಯ ಫಲಿತಾಂಶ ವ್ಯಕ್ತಪಡಿಸುವ ರೂಪದ ಜೊತೆ ಹಾಗೆ ಮಾಪಿಸಲಾಗದ, ಆದರೆ ಚಿಂತನೆಯ ಇತರ ದರ್ಜೆಗಳನ್ನು ಅವಲಂಬಿಸಿರುವ, ಮೌಲ್ಯ ವ್ಯಕ್ತಪಡಿಸುವ ರೂಪವೂ ಸತ್ಯದಲ್ಲಿ ಅಡಕವಾಗಿದೆ. ಒಂದು ದೃಷ್ಟಿಕೋನದಿಂದ ಸತ್ಯವಾದದ್ದು ಇನ್ನೊಂದರಿಂದ ಸತ್ಯವಾಗ

ಬೇಕೆಂದೇನೂ ಇಲ್ಲ. ಬಳಸಿದ ಶಿಷ್ಟ [ಪ್ರಮಾಣ] ಅವಲಂಬಿಸಿ ಸಾಪೇಕ್ಷತೆ ಬಗೆಬಗೆಯ ರೂಪಗಳಲ್ಲಿ ಒಳನುಗ್ಗಬಹುದು. . . ಆದ್ದರಿಂದ ಒಂದು ಭಾವನೆ ಸಮರ್ಪಕವಾಗಿರುವಾಗ ಅದನ್ನು ಸಾಮಾನ್ಯವಾಗಿ ನಿಜವೆಂದು ಹೇಳಬಹುದು. ಆ ಭಾವನೆ ಪ್ರತಿಯೊಂದು ದೃಷ್ಟಿಕೋನದಿಂದಲೂ ನಿಜವಾಗಿರುವಾಗ ಮಾತ್ರ ಅದು ಸಂಪೂರ್ಣ ಸಮರ್ಪಕವಾಗಿದೆಯೆನ್ನಬಹುದು. ಪರಿಪೂರ್ಣ ಸಮರ್ಪಕತೆಯನ್ನು ಗ್ರಹಿಸುವಲ್ಲಿ ಅನ್ವಯವಾಗಬಲ್ಲ ಪ್ರತಿಯೊಂದು ರೂಪದ ಪರೀಕ್ಷಣೆಯೂ ತೃಪ್ತವಾಗಬೇಕು. ಇದಲ್ಲವಾದರೆ ನಿರ್ದಿಷ್ಟ ದೃಷ್ಟಿಕೋನಗಳಿಗೆ ಮಾತ್ರ ಸಾಪೇಕ್ಷವಾದ ಸತ್ಯ ನಮಗೆ ದೊರೆಯುವುದು, ಅಷ್ಟೆ."

ಜರ್ಮನಿಯ ಬಗ್ಗೆ ಮೃದುಭಾವ ಹೊಂದಿದ್ದ, ಇಂಗ್ಲೆಂಡ್-ಜರ್ಮನಿ ವೈರಭಾವ ಕೇವಲ ಕ್ಷಣಿಕ ಮಾನಸಿಕ ತುಮುಲದ ವಿಕೃತರೂಪವೇ ವಿನಾ ಅಂತರ್ಗತ ತಿರಸ್ಕಾರದ ಪ್ರಕಟಿತ ಪ್ರದರ್ಶನವಲ್ಲವೆಂದು ಪ್ರಾಮಾಣಿಕವಾಗಿ ನಂಬಿದ್ದ ಮತ್ತು ಈ ನಂಬಿಕೆಯ ಆಧಾರದ ಮೇಲೆ ಎರಡೂ ರಾಷ್ಟ್ರಗಳ ನಡುವೆ ಸ್ನೇಹಸೇತುವೆಯ ನಿರ್ಮಾಣಕ್ಕಾಗಿ ಶ್ರಮಿಸುತ್ತಿದ್ದ ಉದ್ದಾಮ ಪುರುಷ ಲಾರ್ಡ್ ಹಾಲ್ಡೇನ್. ಜರ್ಮನ್ ವಿಜ್ಞಾನಿಯಾದ ಐನ್‌ಸ್ಟೈನರನ್ನು ಇಂಗ್ಲೆಂಡಿಗೆ ಬರಮಾಡಿಕೊಳ್ಳುವುದರಲ್ಲಿ ಇವರದೂ ಪ್ರಮುಖ ಪಾತ್ರವಿತ್ತು.

ಅಂದಿನ ಲಂಡನ್ ಪರಿಸರ ಅತಿಥಿಗೂ (ಐನ್‌ಸ್ಟೈನ್) ಆತಿಥೇಯನಿಗೂ (ಹಾಲ್ಡೇನ್) ಸಮಾನವಾಗಿಯೇ ಅಹಿತಕರವಾಗಿತ್ತು.

ಇತ್ತ 'ದೇಶಪ್ರೇಮಿ' ಜರ್ಮನರು ಐನ್‌ಸ್ಟೈನರ ಪಾತ್ರದ ಬಗ್ಗೆ ಅಸಮಾಧಾನ ತಳೆದಿದ್ದರು. ತಮ್ಮ ಪವಿತ್ರ ನೆಲವನ್ನು ಹಾಳುಗೆಡಹಿದ ಆ ವೈರಿಬಣದ ಪರಿಸರಕ್ಕೆ, ಇಂಗ್ಲೆಂಡಿಗೆ, ಯಾವನೇ 'ದೇಶಪ್ರೇಮಿ' ಜರ್ಮನ್ ಪ್ರಜೆ ಹೋಗುವುದೆಂದರೇನು ? ಅಲ್ಲಿ ಭಾಷಣ ಮಾಡುವುದೆಂದರೇನು ? ಇಂಗ್ಲೆಂಡ್-ಭೇಟಿಯನ್ನು ರದ್ದುಗೊಳಿಸಬೇಕೆಂದು ಈ ಸ್ವಯಂಘೋಷಿತ ದೇಶಪ್ರೇಮಿಗಳು ಐನ್‌ಸ್ಟೈನರಿಗೆ ಕಾಗದ ಕೂಡ ಬರೆದಿದ್ದರು.

ಸ್ವಂತ ದೇಶ ಪ್ರೋತ್ಸಾಹಿಸದ್ದರಿಂದ ಆಗಲಿ ಆತಿಥೇಯ ದೇಶ ಸ್ವಾಗತಿಸದ್ದರಿಂದ ಆಗಲಿ ಐನ್‌ಸ್ಟೈನ್ ತುಸುವೂ ವಿಚಲಿತರಾಗಲಿಲ್ಲ. ತಾವು ನೆರೆ ನಂಬಿದ್ದ ಆದರ್ಶದ ಧ್ರುವನಕ್ಷತ್ರದೆಡೆಗೆ ಗಮಿಸುವುದೊಂದೇ ಇವರ ಉದ್ದೇಶವಾಗಿತ್ತು :

> ಜ್ಞಾನಗಜಗಮನದಲಿ ವೈಫಲ್ಯವಿಲ್ಲ, ನಡೆ
> ಮಾನಾಪಮಾನಗಳ ಲೆಕ್ಕಿಸದೆ, ಶೃಂಗಾಭಿ-
> ಯಾನ ನವದೃಶ್ಯಗಳ ಕಾಣಿಸುತ ನಿನ್ನನು ಸ-
> ದಾ ನೇವರಿಪುದು ಭರವಸೆಯಿರಲಿ ಅತ್ರಿಸೂನು

ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ಸಾರ್ವಜನಿಕ ಸಭೆ ಏರ್ಪಾಡಾಗಿದೆ. ಭಾಷಣ ಆರಂಭವಾಗುವ ಮೊದಲೇ ಎಲ್ಲ ಆಸನಗಳೂ ಭರ್ತಿ ಆಗಿಹೋಗಿವೆ. ಸಭಾಂಗಣ ತುಂಬಿ ತುಳುಕುವಂತೆ ಜನ, ನಡೆಗಳಲ್ಲೆಲ್ಲ ಒತ್ತೊತ್ತಾಗಿ ಆಂತುಕೊಂಡಿದ್ದಾರೆ. ಟಿಕೆಟ್ ಮೂಲಕ ಪ್ರವೇಶವೆಂದಿದ್ದುದರಿಂದ ಜನಸ್ತೋಮ ಜನಜಂಗುಳಿ ಆಗಿರಲಿಲ್ಲ. ಸ್ತೋಮದ ಮನೋಭಾವವೇನು ? ಖಚಿತವಾಗಿ ಹೇಳುವಂತಿರಲಿಲ್ಲ—ಪರವೂ ಅಲ್ಲ ವಿರೋಧವೂ ಅಲ್ಲ. ಅದೊಂದು ತೆರನಾದ ಆಸ್ಫೋಟಕ ಸನ್ನಿವೇಶ. ಕಿಡಿ ಸಿಡಿದು ಭುಗ್ಗನೆ ಹೊತ್ತಿ ಉರಿದು ವಿಧ್ವಂಸಕಾರಿಯಾಗಿ ಪರಿಣಮಿಸಬಹುದು. ಕ್ರಮೇಣ ಶಾಖ ನಷ್ಟವಾಗಿ ಸಹಜಸ್ಥಿತಿಗೆ ಇಳಿಯಬಹುದು. ಇಲ್ಲ, ಉದ್ರೇಕ ದಿಢೀರನೆ ಪಲ್ಲಿಹೊಡೆದು ಉತ್ಸಾಹಾತಿಶಯವಾಗಿ ಪ್ರಕಟವಾಗಲೂಬಹುದು. ಸ್ತೋಮಪ್ರಜ್ಞೆ ಮತ್ತು

ಸ್ತೋಮವರ್ತನೆ ತರ್ಕಭೂಯಿಷ್ಠವಲ್ಲ. ಹೀಗಾಗಿ ಕೊಂಡಹಾಯುವಾತನ (ಬೆಂಕಿಕೆಂಡಗಳ ಮೇಲೆ ಬರಿಗಾಲಿನಿಂದ ನಡೆದು ಅಡ್ಡ ದಾಟುವವ) ಹಾಗೆ, ಬಿಗಿಸರಿಗೆ ಮೇಲೆ ಸಮತೋಲಿಸು ವಾತನ ಹಾಗೆ, ತಿಳಿಯದ ಕಾಡಿನಲ್ಲಿ ನಟ್ಟಿರುಳ ಮೌನದಲ್ಲಿ ಪರಡಿ ನಡೆವಾತನ ಹಾಗೆ, ಸಂಘಟಕ ಎಚ್ಚರಿಕೆಯಿಂದ ಮುನ್ನಡಿ ಇಡಬೇಕಾಗುತ್ತದೆ.

ನಿಶ್ಚಿತ ಮುಹೂರ್ತ. ಪರಮ ಶೂನ್ಯ ಕ್ಷಣ. ಅಗೊ ! ಸ್ತೋಮನಿರೀಕ್ಷೆಯೇ ಮೈದಳೆದಂತೆ ಹಾಲ್ಡೇನ್, ಐನ್‌ಸ್ಟೈನ್ ಆಗಮನ. ಚಪ್ಪಾಳೆ-ಸ್ವಾಗತವಾಗಲಿ, ಹರ್ಷಧ್ವನಿಯ ಆದರವಾಗಲಿ, ಕೊನೆಗೆ ತಿರಸ್ಕಾರದ ಕೆನೆತವಾದರೂ ಆಗಲಿ ನಾಸ್ತಿ. ಅಷ್ಟೂ ಕಂಗಳು ಯುಗಪುರುಷನ ಹಿಡಿಗಾತ್ರದ ಕಬಳಿಕೆಗಾಗಿ ಅವನ ಮೇಲೆ ಕೇಂದ್ರೀಕೃತವಾಗಿದ್ದುವು. ಅವರು ಮುಂದೆ ನಡೆದರು, ವೇದಿಕೆ ಏರಿದರು, ಪೀಠಸ್ಥರಾದರು. ಆದರೂ ಎಲ್ಲೆಲ್ಲೂ ನಿಃಸ್ಪನ, ನಿಷ್ಪಂದ. ವಿದ್ಯುದಾವಿಷ್ಟ ಮೇಘ ಸಂಚಯನದಿಂದ ವಿನಾಶಕರ ಸೌದಾಮಿನಿ ಛಟೀರನೆ ಸೀಳೀತೇ ? ಅಥವಾ ಶ್ರೇಯಸ್ಕರ ಅಮೃತ ವರ್ಷ ಹಠಾತ್ತನೆ ಸುರಿದೀತೇ ?

ಹಾಲ್ಡೇನ್ ಪರಿಚಯ ಭಾಷಣ ಮಾಡಲು ನಿಂತರು. "ಸಾಕ್ಷಾತ್ ಆಲ್ಬರ್ಟ್ ಐನ್‌ಸ್ಟೈನ್ ಈಗ ನಿಮ್ಮ ಮುಂದೆ ಉಪಸ್ಥಿತರಾಗಿದ್ದಾರೆ. . ." ಸಭಾಸದರು ಗಂಭೀರ.

"ಹದಿನೆಂಟನೆಯ ಶತಮಾನಕ್ಕೆ ನಮ್ಮ ಐಸಾಕ್ ನ್ಯೂಟನ್ ಹೇಗೊ ಇಪ್ಪತ್ತನೆಯ ಶತಮಾನಕ್ಕೆ ಈ ಆಲ್ಬರ್ಟ್ ಐನ್‌ಸ್ಟೈನ್ ಹಾಗೆ . . ." ಇಂಗ್ಲಿಷರ ಅಭಿಮಾನಪ್ರಜ್ಞೆಗೆ ಪೋಷಣೆ. ಒಂದಿಗೇ ಐನ್‌ಸ್ಟೈನರ ಹುಟ್ಟೂರಿನ ಬಗೆಗೆ ಅಪ್ರಸ್ತಾಪ. ಪ್ರತಿಕ್ರಿಯೆ ಶೂನ್ಯ.

ಹಾಲ್ಡೇನ್ ಮುಂದುವರಿಸಿದರು. ವಿಜ್ಞಾನದ ದೇಶಕಾಲಾತೀತ ಗುಣದ ಬಗ್ಗೆ ಪ್ರಸ್ತಾವಿಸಿದರು. ಉನ್ನತ ಮಾನವಪ್ರಜ್ಞೆ ಹೇಗೆ ಸಂಕುಚಿತಭಾವವಿದೂರವಾಗಿರುತ್ತದೆ ಎಂಬುದನ್ನು ವಿವರಿಸಿದರು.

ಈಗ ಐನ್‌ಸ್ಟೈನರ ಸರದಿ. ಸಭಾಸದರ ಮೌನಗಾಂಭೀರ್ಯ ಕೂರಸಿಗಿಂತಲೂ ಕಠಿಣ. ಭಾಷಣ ತೊಡಗಿದರು. ಭಾಷೆ ಜರ್ಮನ್. ವಿಷಯ ಅದೇ—ಸಾಪೇಕ್ಷತಾಸಿದ್ಧಾಂತ, ಹೀಗಾಗಿ ಬಹು ಸಂಖ್ಯಾತ ಪ್ರೇಕ್ಷಕರಿಗೆ ಉಭಯ ಅಗ್ರಾಹ್ಯ !

ಐನ್‌ಸ್ಟೈನ್ ಮುರಲೀನಾದ ಹೊಮ್ಮಿತು. "ಈ ಸಿದ್ಧಾಂತದ ಪೂರ್ವಚರಿತ್ರೆ ಏನು ? ಮೂಲತಃ ಇದು ಊಹನಾತ್ಮಕವಲ್ಲ. ಭೌತಸಿದ್ಧಾಂತವನ್ನು ವೀಕ್ಷಿತ ಮಾಹಿತಿಗಳ ಜೊತೆ ಎಷ್ಟು ಸಾಧ್ಯವೊ ಅಷ್ಟುಚೆನ್ನಾಗಿ ಹೊಂದುವಂತೆ ಅಳವಡಿಸಬೇಕು ಎಂಬ ಅಭೀಪ್ಸೆಯ ಈಡೇರಿಕೆಗಾಗಿ ಇದರ ಉಪಜ್ಞೆ (invention) ಅನಿವಾರ್ಯವಾಯಿತು. ಇಲ್ಲಿ ಕ್ರಾಂತಿಕಾರಕಕ್ರಿಯೆಯೇನೂ ಇಲ್ಲ, ಬದಲು, ಶತಮಾನಗಳ ಉದ್ದಕ್ಕೂ ರೇಖಿಸಬಹುದಾದ ಒಂದು ಧಾರೆಯ ಸ್ವಾಭಾವಿಕ ಸಂಯೋಜನೆ ಮಾತ್ರ ಉಂಟು. ಈ ತನಕ ಮೂಲಭೂತ ಭಾವನೆಗಳೆಂದು ನಂಬಿದ್ದ ಆಕಾಶ, ಕಾಲ ಮತ್ತು ಚಲನೆ ಇವನ್ನು ಕುರಿತ ಕೆಲವು ಕಲ್ಪನೆಗಳನ್ನು ಇಲ್ಲಿ ಪೂರ್ತಿ ಕೈಬಿಟ್ಟಿರುವುದು ನಿಜ. ಆದರೆ ಇದು ಸ್ವೇಚ್ಛೆಯಂತೆ ಅಲ್ಲ, ವೀಕ್ಷಿತ ಸತ್ಯಾಂಶಗಳ ಅನುಸಾರ."

ಐಸಾಕ್ ನ್ಯೂಟನ್ನನ ಹಿರಿಮೆಗೆ ಐನ್‌ಸ್ಟೈನ್ ಗೌರವ ನಿವೇದಿಸಿದರು. ಇಂಗ್ಲೆಂಡಿನ ವರಿಷ್ಠ ವಿಜ್ಞಾನಿಗಳು ಕೈಗೊಂಡ ಪ್ರಿನ್ಸಿಪೀ ಸಾಹಸಪ್ರಗಾಥವನ್ನು ಕೃತಜ್ಞತೆಯಿಂದ ಸ್ಮರಿಸಿದರು, "ಅವರ ಈ ಮಹಾಕಾರ್ಯವಲ್ಲವಾಗಿದ್ದರೆ ನನ್ನ ಸಿದ್ಧಾಂತದ ಅತಿಮುಖ್ಯ ಅನ್ವಯ ಸ್ಥಿರೀಕೃತವಾಗುವು ದನ್ನು ನೋಡಲು ನಾನು ಬದುಕಿರುತ್ತಿರಲಿಲ್ಲ."

ಭಾಷಣದ ಪ್ರತಿಕ್ರಿಯೆ ಅದ್ಭುತ ಕರತಾಡನವಾಗಿ, ಹರ್ಷಘೋಷವಾಗಿ, ಉತ್ಸಾಹ ಪ್ರವಾಹ ವಾಗಿ ಪ್ರಕಟವಾಯಿತು. ಇಂಗ್ಲೆಂಡ್-ಜರ್ಮನಿ ನಡುವೆ ಮಧುರಬಂಧವೇರ್ಪಡಲು ಇದೊಂದು

ಪರ್ವಮುಹೂರ್ತವಾಯಿತು.

ಮಾನವಾಂತಃಕರಣ ಅದರ ಪರಿಶುದ್ಧ ಸ್ಥಿತಿಯಲ್ಲಿ ಪೂರ್ತಿ ನಿರ್ಮಲ. ಅದರ ಸುತ್ತ ಕವಿದು ಅದನ್ನು ಮಂಕುಗೊಳಿಸುವ ಪೊರೆಯನ್ನು ಕತ್ತರಿಸಿ ಹಾಕಲು ಇರುವ ಹಾದಿ ಒಂದೇ—ನೇರ ಬಗೆ, ನೇರ ನುಡಿ, ನೇರ ನಡೆ. ತ್ರಿಕರಣಶುದ್ಧತೆಯ ಮೂರ್ತರೂಪವಾಗಿದ್ದ ಐನ್‌ಸ್ಟೈನರಿಗೆ ಈ ಹಾದಿ ಸಹಜವಾಗಿ ಒಗ್ಗಿತ್ತು, ಒಲಿದಿತ್ತು.

ಇನ್ನು ಸ್ತೋಮಪ್ರಜ್ಞೆ ಹೇಗಿರುತ್ತದೆ ? ಅದರ ಜೀವನದೃಷ್ಟಿ ಏನು ? 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ ?' ಎಂದೇ ಐನ್‌ಸ್ಟೈನರ ಮೋಹನ ಮುರಲಿ ಈ ಜನರಿಗೆ ಆಪ್ಯಾಯಮಾನವಾಯಿತು.

ಅಂದು ಸಂಜೆ. ಕಿಂಗ್ಸ್ ಕಾಲೇಜಿನಲ್ಲಿ ಭರ್ಜರಿ ಭೋಜನ ಮಿಲನ. ಕೇಂದ್ರವ್ಯಕ್ತಿ ಇವರೇ. ಕುಲೀನರ ಸಮೂಹ. ಕಾಲೇಜಿನ ಪ್ರಾಂಶುಪಾಲರಿಂದ ಸ್ವಸ್ತಿಭಾಷಣವಾಯಿತು : "ನ್ಯೂಟನ್ನರನ್ನು ಕೊಟ್ಟುದಕ್ಕಾಗಿ ಬ್ರಿಟನ್ನಿಗೆ ಜರ್ಮನಿಯೂ ಐನ್‌ಸ್ಟೈನರನ್ನು ಕೊಟ್ಟುದಕ್ಕಾಗಿ ಜರ್ಮನಿಗೆ ಬ್ರಿಟನ್ನೂ ಋಣಿಗಳಾಗಿರುವುದು ಅಭಿಮಾನದ ಸಂಗತಿ. ಸಾಪೇಕ್ಷತಾಸಿದ್ಧಾಂತದಲ್ಲಿ ಇಬ್ಬರು ವೀಕ್ಷಕರ ಬಗ್ಗೆ ಪ್ರಸ್ತಾಪವಿದೆ. ಒಬ್ಬೊಬ್ಬ ಒಂದೊಂದು ನಿರ್ದೇಶಕ ಚೌಕಟ್ಟಿನಲ್ಲಿದ್ದುಕೊಂಡು ತನ್ನ ಚೌಕಟ್ಟಿಗೆ ಸಾಪೇಕ್ಷವಾಗಿ ವಿಶ್ವದ ಆಗುಹೋಗುಗಳನ್ನು ಗಮನಿಸಿ ಟಿಪ್ಪಣಿ ಬರೆಯುತ್ತಾನೆ. ಈಗ, ಈ ಇಬ್ಬರು ವೀಕ್ಷಕರ ಸ್ಥಾನಗಳಲ್ಲಿ ನಮ್ಮ ಎರಡು ಜನಾಂಗಗಳನ್ನು ಆದೇಶಿಸೋಣ. ಪ್ರತಿಯೊಂದು ಜನಾಂಗದ ಜೀವನ ಕ್ರಮ ಅದಕ್ಕೆ ವಿಶಿಷ್ಟವಾದದ್ದು. ಅಂದರೆ ಅದಕ್ಕೊಂದು ವಿಶಿಷ್ಟವಾದ ಆಕಾಶವಿದೆ (space), ನೀತಿಸಂಹಿತೆ ಇದೆ, ಶೀಲವಿದೆ. ನಾವು ಇವೆರಡು ಜನಾಂಗಗಳೂ ಒಂದೇ ಜೀವನದೃಷ್ಟಿಕೋನ ತಳೆಯುವಂತೆ ಮಾಡಲು ಯಾವುದೇ ವಿಧಾನಗಳನ್ನು ರೂಪಿಸುವುದರಲ್ಲಿ ಯಶಸ್ವಿಗಳಾದರೆ—ಉದಾಹರಣೆಗೆ ರಾಷ್ಟ್ರಗಳ ಕೂಟದ (ಲೀಗ್ ಆಫ್ ನೇಶನ್ಸ್) ಇಲ್ಲವೇ ಇತರ ವಿಧಾನಗಳ ಮೂಲಕ—ಆಗ ಪರಸ್ಪರ ಅಧಿಕವಿಶ್ವಾಸ ಮೂಡಲು ನವ ಸಾಧ್ಯತೆಗಳು ಒದಗುವುದು ದಿಟ. ಮಹಾಮಾನ್ಯರಾದ ಐನ್‌ಸ್ಟೈನ್ ಅವರೇ ! ನಿಮ್ಮ ಆಜ್ಞಾನುಸಾರ ವಿಶ್ವದಿಂದ ಸರಳರೇಖೆಗಳು ಉಚ್ಚಾಟನೆಗೊಂಡಿರುವುದು ನಿಜ. ಆದರೂ ಒಂದು ಸರಳರೇಖೆ ಮಾತ್ರ ಸದಾ ಉಳಿದೇ ಇರುತ್ತದೆ—ಋಜು ಮತ್ತು ನ್ಯಾಯದ ಸರಳರೇಖೆ. ನಮ್ಮೆರಡು ರಾಷ್ಟ್ರಗಳು ಈ ಸರಳರೇಖೆಗಳನ್ನು ಅಕ್ಕಪಕ್ಕದಲ್ಲಿ ಸಮಾಂತರವಾಗಿ ಅನುಸರಿಸುತ್ತ ಮುನ್ನಡೆವಂತಾಗಲಿ. ಯೂಕ್ಲಿಡ್ ಏನೇ ವಿಧಿಸಿದ್ದರೂ [=ಒಂದು ಜೊತೆ ಸಮಾಂತರರೇಖೆಗಳು ಅನಂತದಲ್ಲಿ ಸಂಧಿಸುತ್ತವೆ ; ಆದ್ದರಿಂದ ವ್ಯಾವಹಾರಿಕವಾಗಿ ಅವು ಎಲ್ಲಿಯೂ ಸಂಧಿಸವು] ಈ ಮುನ್ನಡೆ ಎರಡೂ ರಾಷ್ಟ್ರಗಳನ್ನು ಪರಸ್ಪರ ಸ್ನೇಹಭಾವದಲ್ಲಿ ಒಗ್ಗೂಡಿಸುವಂತಾಗಲಿ ಮತ್ತು ಪ್ರಪಂಚದ ಇತರ ರಾಷ್ಟ್ರಗಳೊಂದಿಗೆ ಬೆರೆಯುವಂತೆ ಮಾಡಲಿ."

ಇಂಗ್ಲೆಂಡ್ ಮತ್ತು ಜರ್ಮನಿ ದೇಶಗಳಲ್ಲಿ ಪ್ರಾಜ್ಞರು ಐನ್‌ಸ್ಟೈನರನ್ನು ಶಾಂತಿದೂತ ಮತ್ತು ಸ್ನೇಹಸಂದೇಶಕಾರ ಎಂಬುದಾಗಿ ಭಾವಿಸಿದ್ದು ತೀರ ಸಹಜ ಪ್ರತಿಕ್ರಿಯೆಯಾಗಿತ್ತು.

ಅವರು ಇಂಗ್ಲೆಂಡಿನಲ್ಲಿದ್ದಾಗ ನಡೆದ ಎರಡು ಘಟನೆಗಳು ಸ್ವಾರಸ್ಯಕರವಾಗಿವೆ.

ಮೊದಲನೆಯದು, ಸಾಪೇಕ್ಷತಾಸಿದ್ಧಾಂತ ಮತ್ತು ನಾಸ್ತಿಕತೆ. ಈ ಸಿದ್ಧಾಂತ ಭಗವಂತನ ಅಸ್ತಿತ್ವವನ್ನು ನಿರಾಕರಿಸುವುದರ ಮೂಲಕ ನಾಸ್ತಿಕತೆಗೆ ತಾತ್ತ್ವಿಕ ಬುನಾದಿ ಒದಗಿಸಿದೆ ಎಂಬ ಭಾವ ಅನೇಕ ಮಂದಿ ಆಸ್ತಿಕರಲ್ಲಿ ಪ್ರಚಲಿತವಾಗಿತ್ತು. ಅರಿಯಲಾಗದ್ದನ್ನು ಮತ್ತು ಅರಿಯಬಾರದ್ದನ್ನು ಅರಿಯಲು ಮಾಡುವ ಒಂದೊಂದು ಎತ್ತುಗಡೆಯೂ (ಏರ್ಪಾಡು) ನಾಸ್ತಿಕತೆಯಿಂದ

ಹೊಮ್ಮುತ್ತದೆ. ಸಾಪೇಕ್ಷತಾಸಿದ್ಧಾಂತ ಇಂಥ ಪ್ರಯತ್ನವಾದ್ದರಿಂದ ಇದರ ನೆಲೆ ನಾಸ್ತಿಕತೆ ಎಂಬುದಾಗಿ ಒಂದು ಪಂಗಡ 'ಪ್ರಾಮಾಣಿಕ'ವಾಗಿ ನಂಬಿದ್ದರೆ, ವಿಶ್ವನಿಯಮಗಳನ್ನು ಆವಿಷ್ಕರಿಸಿ ಭಗವಂತನ ಮೂಲವನ್ನೇ ಬಯಲುಗೊಳಿಸುವ ಪ್ರತಿಯೊಂದು ಕ್ರಿಯೆಯೂ ನಾಸ್ತಿಕತೆ ಬೆಳೆಯಲು ಪ್ರೇರಕವಾಗುತ್ತದೆ, ಸಾಪೇಕ್ಷತಾಸಿದ್ಧಾಂತ ಇಂಥ ಪ್ರಯತ್ನವಾದ್ದರಿಂದ ಇದು ನಾಸ್ತಿಕತೆಯನ್ನು ಪೋಷಿಸುವ ನೆಲೆ ಎಂಬುದಾಗಿ ಇನ್ನೊಂದು ಪಂಗಡ ಅಷ್ಟೇ 'ಪ್ರಾಮಾಣಿಕ'ವಾಗಿ ನಂಬಿತ್ತು. ಇವೆರಡು ಪ್ರಾಮಾಣಿಕ ಅತಿರೇಕಗಳ ಮೂಲ ನಿಜಕ್ಕೂ ಅಗಾಧ ಅಜ್ಞಾನ, ಗಾಢ ಅಂಧ ಶ್ರದ್ಧೆ, ಇದನ್ನೇ ನಿಜಜ್ಞಾನವೆಂಬುದಾಗಿ ಭ್ರಮಿಸಿರುವ ಹಠಮಾರಿತನ. ಮೊದಲು ಕೊಪರ್ನಿಕಸನ ಸುತ್ತ ಬಳಿಕ ಗೆಲಿಲಿಯೊನ[೩೫] ಸುತ್ತ—ಕೇವಲ ಎರಡು ಪ್ರತೀಕಾತ್ಮಕ ನಿದರ್ಶನಗಳನ್ನು ಮಾತ್ರ ಹೆಸರಿಸಿದೆ— ಅಪರಾಧವನ್ನು ಮೆತ್ತಿದ್ದು ಈ ಅಜ್ಞಾನ, ಈ ಮತಿವಿಕಲ್ಪ, ಈ ಮತಭ್ರಾಂತಿ.

ಕ್ಯಾಂಟರ್ಬರಿಯ ಆರ್ಚ್‌ಬಿಷಪ್ ಬ್ರಿಟಿಷ್ ಆಸ್ತಿಕ ಪ್ರಜ್ಞೆಯ ಮೂರ್ತರೂಪ ಮತ್ತು ರಕ್ಷಕ. ಸಭ್ಯಗೃಹಸ್ಥ, ಸಜ್ಜನ, ಸುಸಂಸ್ಕೃತ ವ್ಯಕ್ತಿ. ಇವರು ಸಾಪೇಕ್ಷತಾಸಿದ್ಧಾಂತದ ತಾತ್ತ್ವಿಕ ಛಾಯೆ ಪ್ರಭಾವಗಳೇನು, ಇವುಗಳಿಂದ ಮತಧರ್ಮಶಾಸ್ತ್ರದ ಮೇಲೆ ಏನು ಪರಿಣಾಮವಿದೆ, ಭಗವದಸ್ತಿತ್ವದ ಬಗ್ಗೆ ಈ ಸಿದ್ಧಾಂತ ಏನನ್ನು ಪ್ರತಿಪಾದಿಸುತ್ತದೆ ಎಂಬುದನ್ನು ಕರಾರುವಾಕ್ಕಾಗಿ ಅರಿಯಬೇಕೆಂದು ಬಯಸಿ ಪ್ರಯತ್ನಶೀಲರಾದರು. ಸಾಪೇಕ್ಷತಾಸಿದ್ಧಾಂತ ಕುರಿತ ಪುಸ್ತಕ, ಲೇಖನ ಮೊದಲಾದ ಪ್ರಕಟಣೆಗಳನ್ನು ಸಂಗ್ರಹಿಸಿ ಅಭ್ಯಸಿಸಿದರು. ಆದರೆ ವಿಜ್ಞಾನದ ಹಿನ್ನೆಲೆ ಇರದಿದ್ದ ಇವರಿಗೆ ಸಿದ್ಧಾಂತದ ತಲೆ ಬುಡ ಹತ್ತಲಿಲ್ಲ. ಕಂಪಕ್ಕೆ ಕಾಲಿಕ್ಕಿದ ಕೋಣದಂತಾಯಿತು ಇವರ ಸ್ಥಿತಿ—ಅಧಿಕ ಪ್ರಯತ್ನ ಇವರನ್ನು ಅಧಿಕ ಪಂಕದಲ್ಲಿ ಹುಗಿಸುತ್ತಿತ್ತೇ ವಿನಾ ಅದರಿಂದ ಪಾರಾಗುವ ಹಾದಿ ತೋರಿಸುತ್ತಿರಲಿಲ್ಲ, ಎಂದೇ ಆರ್ಚ್‌ಬಿಷಪ್‌ವರೇಣ್ಯರು ಒಂದು ವಿಧವಾದ ಧಾರ್ಮಿಕ-ಬೌದ್ಧಿಕ ಉದ್ವಿಗ್ನತೆಯಿಂದ ಕಂಪಿಸುತ್ತಿದ್ದರು.

ಆರ್ಚ್‌ಬಿಷಪರ ಈ ಪೇಚಾಟ ಪರದಾಟ ಹಾಲ್ಡೇನರಿಗೆ ತಿಳಿದಿದ್ದುವು. ಹೀಗಾಗಿ ಇವುಗಳ ಪರಿಹಾರಕ್ಕಾಗಿ ಒಂದು ಸಂದರ್ಭ ಕಲ್ಪಿಸಿದರು. ಐನ್‌ಸ್ಟೈನ್-ಮರ್ಯಾದಾರ್ಥ ಏರ್ಪಡಿಸಿದ್ದ ಭೋಜನಸಮಾರಂಭದಲ್ಲಿ ಈ ಇಬ್ಬರು ದೂತರ ನಡುವೆ—ದೇವದೂತ, 'ಅಂತಕ'ದೂತ ಅಥವಾ ಅವಧೂತ—ಖಾಸಗಿ ಮಾತುಕತೆಗೆ ಅವಕಾಶ ಮಾಡಿಕೊಟ್ಟರು. ಇದರ ಪೂರ್ವಭಾವಿ ಸೂಚನೆಯನ್ನೇನೂ ಐನ್‌ಸ್ಟೈನರಿಗೆ ನೀಡಿರಲಿಲ್ಲ. ಎಂದೇ ಇಲ್ಲಿ ಆತಂಕಕ್ಕೆ ಏನೂ ಅವಕಾಶವಿರಲಿಲ್ಲ.

ಆರ್ಚ್‌ಬಿಷಪ್ ಅನುಕೂಲ ಮುಹೂರ್ತ ಕಾದಿದ್ದು ತಮ್ಮ ಸಂದೇಹವನ್ನು ತುಂಬ ಎಚ್ಚರಿಕೆಯಿಂದ ಪ್ರಕಟಿಸಿದರು, "ಐನ್‌ಸ್ಟೈನ್ ಪ್ರಭೃತಿಗಳೇ ! ಸಾಪೇಕ್ಷತಾಸಿದ್ಧಾಂತದಿಂದ ನಮ್ಮ ಮತಧರ್ಮಶಾಸ್ತ್ರದ ಮೇಲೆ ತೀವ್ರಪರಿಣಾಮವಾಗಿದೆಯೆಂದು ಕೇಳಿದ್ದೇನೆ. ನಿಜ ಸಂಗತಿ ಏನು ? ಮಾನವನ ನೈತಿಕ ಹಾಗೂ ಆಸ್ತಿಕ ಪ್ರಜ್ಞೆಯ ಮೇಲೆ ಇದರ ಪ್ರಭಾವವೇನೆಂದು ವಿವರಿಸುವಿರಾ?"

"ಏನೂ ಪರಿಣಾಮವಿಲ್ಲ. ಅವರಿವರ ಮಾತು ನಂಬಬೇಡಿ. ಸಾಪೇಕ್ಷತಾಸಿದ್ಧಾಂತ ಶುದ್ಧ ಅಮೂರ್ತ ವಿಜ್ಞಾನ."

ಮತಧರ್ಮ, ಆಸ್ತಿಕತೆ, ನೈತಿಕತೆ ಮುಂತಾದ ನಂಬಿಕೆ ಮತ್ತು ಗುಣಗಳ ಮೇಲೆ ಸಾಪೇಕ್ಷತಾ ಸಿದ್ಧಾಂತದ ಪ್ರಭಾವವೇನೂ ಇರುವುದಿಲ್ಲವೆಂಬ ಆಶ್ವಾಸನೆ ಶಂಖದಿಂದ ಬಂದ ತೀರ್ಥದಂತೆ ಖುದ್ದು ಐನ್‌ಸ್ಟೈನರ ಮುಖಾರವಿಂದದಿಂದಲೇ ಉದ್ಭವಿಸಿದ್ದರಿಂದ ಆರ್ಚ್‌ಬಿಷಪರಿಗೆ ಪೂರ್ಣ ಸಮಾಧಾನವಾಯಿತು.

ಅಲ್ಲಿಗೆ ದೇವರು ಬದುಕಿದ ! ಕೊಪರ್ನಿಕಸ್ ಗೆಲಿಲಿಯೊ ಪ್ರಕರಣಗಳು ತದ್ರೂಪದಲ್ಲಿ ಮರುಕೊಳಿಸಲಿಲ್ಲ ?

ಆರ್ಚ್‌ಬಿಷಪರು ತಳೆದ ಆಸಕ್ತಿ ಸಹಜವಾದದ್ದೆಂದು ಐನ್‌ಸ್ಟೈನರಿಗೆ ಮನವರಿಕೆ ಆಗಿತ್ತು. ತತ್ತ್ವಶಾಸ್ತ್ರವಿದರು ಶುದ್ಧಭೌತವಿಜ್ಞಾನದ ಪರಿಕಲ್ಪನೆಗಳಾದ ಆಕಾಶ, ಕಾಲ, ಸಾಪೇಕ್ಷತೆ, ನಿರ್ದೇಶಕ ಚೌಕಟ್ಟು ಮುಂತಾದವುಗಳೊಡನೆ ಮಕ್ಕಳು ಆಟಿಕೆಗಳೊಂದಿಗೆ ಆಡುವಂತೆ ವ್ಯವಹರಿಸುವುದ ರಿಂದ—ಅಂದರೆ ಭೌತವಿಜ್ಞಾನದೊಡನೆ ಇನಿತೂ ಸಂಬಂಧವಿರದ ವಿದ್ಯಮಾನಗಳೊಂದಿಗೆ ಇವನ್ನು ಸಮೀಕರಿಸುವುದರಿಂದ—ಇಂಥ ಗೊಂದಲ ತಲೆದೋರುವುದೆಂದು ಐನ್‌ಸ್ಟೈನ್ ಭಾವಿಸಿದ್ದರು. ವಾಸ್ತವವಾಗಿ ಸಾಪೇಕ್ಷತಾಸಿದ್ಧಾಂತವನ್ನು ಕುರಿತಂತೆ ಭೌತವಿಜ್ಞಾನಿಗಳಿಗಿಂತ ಹೆಚ್ಚಿನ ಆಸಕ್ತಿ ಪುರೋಹಿತರಿಗಿತ್ತು (clergymen). ಇದು ಹೀಗೇಕೆ ? ಐನ್‌ಸ್ಟೈನ್ ವಿವರಿಸಿದ್ದಾರೆ : "ಪುರೋಹಿತರು ನಿಸರ್ಗದ ಸಾರ್ವತ್ರಿಕ ನಿಯಮಗಳ ಬಗ್ಗೆ ಆಸಕ್ತರು, ಭೌತವಿಜ್ಞಾನಿಗಳಾದರೊ ಬಹುತೇಕ ಅಲ್ಲ !" ಧರ್ಮದ ನೆಲೆ ಗೋಚರವಿಶ್ವ, ವಿಜ್ಞಾನದ ಗುರಿ ಅಗೋಚರ ಋತ. ಅನ್ವೇಷಕ ವಿಧಾನಗಳು ವಿಭಿನ್ನ, ಎಂದೇ ಧರ್ಮ-ವಿಜ್ಞಾನ[೩೬] ತಾತ್ತ್ವಿಕ ಸಂಘರ್ಷ. ವಾಸ್ತವವಾಗಿ ಇದು ಇರಬೇಕಾಗಿಲ್ಲ.

ಇತ್ತ ಶ್ರೀಮತಿಯರಿಬ್ಬರೂ (ಆರ್ಚ್‌ಬಿಷಪರ ಹೆಂಡತಿ ಮತ್ತು ಐನ್‌ಸ್ಟೈನರ ಹೆಂಡತಿ) ತಮ್ಮದೇ ಸಂಭಾಷಣೆಯಲ್ಲಿ ಮಗ್ನರಾಗಿದ್ದರು.

"ಎಲ್ಸಾರವರೇ, ನಮ್ಮ ಸ್ನೇಹಿತರೊಬ್ಬರು ಸಾಪೇಕ್ಷತಾಸಿದ್ಧಾಂತದ ಅತೀಂದ್ರಿಯ ಸ್ವರೂಪದ ಬಗ್ಗೆ ವಿವರಿಸುವುದನ್ನು ಕೇಳಿದ್ದೇನೆ."

ಇದರ ಹಿನ್ನೆಲೆ ಇಷ್ಟು. ಐನ್‌ಸ್ಟೈನ್ ವಿವರಿಸಿದ ನಾಲ್ಕನೆಯ ಆಯಾಮವಾದ ಕಾಲ, ಆಕಾಶ-ಕಾಲ ಸಾತತ್ಯ ಮುಂತಾದ ನಿಗೂಢ ಭಾವನೆಗಳನ್ನು ಅತೀಂದ್ರಿಯವಾದಿಗಳು ಅತಿಸರಳವಾಗಿ ಅತೀಂದ್ರಿಯಾನುಭವಗಳಿಗೆ ತಳಕುಹಾಕಿ ಈ ಸಿದ್ಧಾಂತದಲ್ಲಿ ಆ ಅನುಭವವನ್ನು ಗುರುತಿಸಿದ್ದರು. ನಿಜಕ್ಕೂ ಕಾಲದ ವಿರುದ್ಧ ಸಂಚಾರ, ಅತಿವೇಗದ ಮೂಲಕ ಪ್ರಾಯವೇರುವುದನ್ನು ತಡೆಹಿಡಿವುದು ಮುಂತಾದವು ಅತೀಂದ್ರಿಯಾನುಭವಗಳೇ ಸೈ (ನೋಡಿ ಲುಬ್ಧಕಯಾನ, ಪುಟ ೬೭). ಇತ್ತ ಐನ್‌ಸ್ಟೈನರ ಬಾಹ್ಯಲಕ್ಷಣ ವರ್ತನೆಗಳಾದರೂ ಅತೀಂದ್ರಿಯತೆಗೆ ಪೋಷಕವಾಗುವಂತೆ ಇದ್ದುವಷ್ಟೆ!

ಎಲ್ಸಾ ನಕ್ಕು ನುಡಿದು, "ಅತೀಂದ್ರಿಯತೆ ! ಅನುಭಾವ ! ನಮ್ಮ ಯಜಮಾನರು ಅನುಭಾವಿ! ಚೆನ್ನಾಗಿದೆ. ಅದೊಂದು ಅಪರಾಧಕ್ಕೆ ಅವರು ಈ ತನಕ ಗುರಿಯಾದದ್ದು ನನಗೆ ತಿಳಿದಿರಲಿಲ್ಲ !"

ಹಿಂದೊಮ್ಮೆ ಇಂಥದೇ ಸಂದರ್ಭ ಎದುರಾದಾಗ ಐನ್‌ಸ್ಟೈನ್ ಹೇಳಿದರು, "ನಿಜಕ್ಕೂ ನನ್ನ ಸಿದ್ಧಾಂತದ ಮೇಲೆ ಹೊರಿಸಲಾಗದ ಏಕೈಕ ಅಪರಾಧವೆಂದರೆ ಅತೀಂದ್ರಿಯತೆ."

ಎರಡನೆಯ ಘಟನೆ, ಹಾಲ್ಡೇನರ ಭವ್ಯ ಬಂಗ್ಲೆಯ ರಾಜವಾಸ್ತವ್ಯ ಐನ್‌ಸ್ಟೈನರಲ್ಲಿ ಉಂಟು ಮಾಡಿದ ಗೊಂದಲ. ಭೋಜನಾನಂತರ ತುಂಬ ತಡವಾಗಿ ಇವರು ಅಲ್ಲಿಗೆ ತಲಪಿದ್ದರು. ಅದು ಲಾರ್ಡ್ ಹಾಲ್ಡೇನರ ರಾಜನಿವಾಸ. ಅಲ್ಲಿ ಸಮವಸ್ತ್ರಧಾರಿ ವಿನಯಶೀಲ ಬಲು ಸುಟಿ ಸೇವಕನೊಬ್ಬ ಐನ್‌ಸ್ಟೈನ್ ದಂಪತಿಗಳ ಸೇವೆಗೆಂದೇ ನಿಯೋಜಿತನಾಗಿದ್ದ. ರಜತಕರಂಡಕದ ಮೇಲೆ ನೆಲೆಗೊಳಿಸ ಲಾಗಿದ್ದ ಮೇಣದ ಬತ್ತಿಯ ಬೆಳಕಿನಲ್ಲಿ ಈತ ಈ ಪ್ರತಿಷ್ಠಿತ ಅತಿಥಿಗಳನ್ನು ಇವರಿಗೋಸ್ಕರ ತೆರವು ಮಾಡಿರಿಸಿದ್ದ ಕೊಠಡಿಗೆ ಕರೆದೊಯ್ದ.

ಬಂಗ್ಲೆಯ ಶ್ರೀಮಂತಿಕೆ ಕಂಡ ಐನ್‌ಸ್ಟೈನ್ ಅಪ್ರತಿಭರಾಗಿದ್ದರು. ಇನ್ನು ಆ ಕೊಠಡಿಯನ್ನು ಪ್ರವೇಶಿಸಿದಾಗಲಂತೂ ಪೂರ್ತಿ ನಿರ್ವಿಣ್ಣರೇ ಆದರು. ಅದೊಂದು ಕೊಠಡಿಯೇ ಇವರ ಇಡೀ

ಬರ್ಲಿನ್ ಕುಟೀರಕ್ಕಿಂತಲೂ ದೊಡ್ಡದಾಗಿತ್ತು. ಮಹಾಗಾತ್ರದ ವಾತಾಯನಗಳು, ಕಿಟಕಿ ಗವಾಕ್ಷಗಳು, ಇವನ್ನು ನೆರಿನೆರಿಯಾಗಿ ಮುಚ್ಚಿಕೊಂಡು ಎರಡಾಳೆತ್ತರಕ್ಕೆ ನಿಂತಿದ್ದ ತೂಕದ ಪರದೆಗಳು, ನಿಲುಗನ್ನಡಿಗಳು, ಪೀಠೋಪಕರಣಗಳು, ಕಲಾಕೆತ್ತನೆಗಳು ನೆಲಕ್ಕೆ ಹಾಸಿದ್ದ ಕಿನ್‌ಕಾಪಿನ ಪತ್ತಲಗಳು ಒಂದೇ ಎರಡೇ ? ಅಲಕಾವತಿಯೂ ಅಮರಾವತಿಯೂ ಸೂರೆ ಹೋದಂತಿದ್ದ ಆ ಅರಮನೆಯಲ್ಲಿ ಈ ಕುಚೇಲನಿಗೆ ಉಸಿರು ಕಟ್ಟಿದಂತಾದದ್ದು ಆಶ್ಚರ್ಯವೇನೂ ಅಲ್ಲ.

ಆಜ್ಞಾಪಾಲನೆಗೋಸ್ಕರ ಹನುಮಂತಭಂಗಿಯಲ್ಲಿ ನಿಂತಿದ್ದ ಸೇವಕನಿಗೆ ಇವರ ಮುಜುಗರ ಅರ್ಥವಾಯಿತೋ ಏನೋ. ತಾನು ಅಲ್ಲೇ ಬಾಗಿಲಿಂದ ಆಚೆ ನಿಂತಿರುವುದಾಗಿಯೂ ಬೇಕಾ ದಾಗ ಕರೆಗಂಟೆ ಬಾರಿಸಿದರೆ ಒಡನೆ ಬರುವುದಾಗಿಯೂ ಹೇಳಿ ಮುಮ್ಮೊಗನಾಗಿ ಹಿಂದೆ ಸರಿದು ಮರೆಯಾದ.

"ಎಲ್ಸಾ ! ಇದು ಅಸಂಬದ್ಧವಾಗಿದೆ. ಇಲ್ಲಿಂದೀಗಲೇ ಈ ಅಪರಾತ್ರಿ ನಾವು ತಲೆಮರೆಸಿ ತಪ್ಪಿಸಿಕೊಂಡು ಪಲಾಯನಮಾಡಿದರೆ ಯಾರಿಗಾದರೂ ತಿಳಿದೀತೆಂದು ಭಾವಿಸಿರುವೆಯಾ ?"

"ಓಹೋ ! ಖಂಡಿತ. ನಾವಿಲ್ಲಿ ಮಹಾಘನತೆ ಪಡೆದ ಆಹ್ವಾನಿತರಲ್ಲವೇ ? ಆದ್ದರಿಂದ ಆ ಆಲೋಚನೆ ಸುತರಾಂ ಬೇಡ."

ವಿಶ್ವವಿಹಾರಿ, ಮುಕ್ತಾಕಾಶಕಾಲಸಂಚಾರಿ, ಸ್ವಚ್ಛಂದಚಿಂತನಶೀಲ ಐನ್‌ಸ್ಟೈನ್ ಆ ಕೊಠಡಿಯೊಳಗಿನ 'ಬಂಧಿತಾಕಾಶ'ದಲ್ಲಿ ಚಡಪಡಿಸುತ್ತ 'ಕಾಲ' ಕಳೆದರು. ನಸುಕಿನಲ್ಲಿ ಎದ್ದವರೇ ಕಿಟಕಿ ಮುಸುಕು ಸರಿಸಿ ನೇಸರ ಬೆಳಕು ಕಾಣಲು ತವಕಿಸಿದರು. ಆದರೆ ಆ ಕೈಲಾಸಪರದೆ ಜಗ್ಗುವುದೇ? ಇವರ ಒದ್ದಾಟ ನೋಡಿ ನಗು ತಡೆಯಲಾಗದೆ ಎಲ್ಸಾ ಸೂಚಿಸಿದರು, "ಅಲ್ಬರ್ಟ್ಲ್ ! ಆ ಜವಾನನನ್ನು ಕರೆದು ಹೇಳು ಪರದೆ ಸರಿಸಲು. ನಮಗೊಂದಿಷ್ಟು ಗರಂ ಚಹಾ ಕೂಡ ತರಿಸಬಹುದು."

"ಬೇಡ, ಬೇಡ. ಅವನ ಸಮವಸ್ತ್ರ ಕಂಡು ನಾನು ಹೌಹಾರಿದ್ದೇನೆ."

ಜವಾನನನ್ನು ಕರೆಯಲಿಲ್ಲ. ಪರದೆ ಸರಿಯಲಿಲ್ಲ. ಗರಂ ಚಹಾ ದೊರೆಯಲಿಲ್ಲ. 'ಪಡೆದಷ್ಟಲ್ಲದೆ ಬರ್ಪುದೇ ?'

## ಚಾಬಸಿಯಲ್ಲಿ ಚಂಡಮಾರುತ

ನಾನು ಉಸುರಿದ ಪ್ರತಿಯೊಂದು ಲಘು ನುಡಿಯೂ ಒಡನೆ ಸಂಗ್ರಹಿಸಲ್ಪಟ್ಟು ದಾಖಲು ಮಾಡಲ್ಪಟ್ಟೀತೆಂದು ಹಿಂದೆಂದೂ ನನಗೆ ಹೊಳೆದೇ ಇರಲಿಲ್ಲ. ಹಾಗೆ ಹೊಳೆದಿದ್ದರೆ ನಾನು ಇನ್ನಷ್ಟು ನನ್ನ ಚಿಪ್ಪೊಳಗೆ ಸೇರಿ ಮುದುರಿಕೊಂಡಿರುತ್ತಿದ್ದೆ.

ಐನ್‌ಸ್ಟೈನ್

ಅಂತಾರಾಷ್ಟ್ರೀಯ ವಿಜ್ಞಾನದ ಪ್ರತೀಕವಾಗಿ, ಜರ್ಮನ್ ಸೌಹಾರ್ದದ ಸಂಕೇತವಾಗಿ, ಮಾನವನ ಶಾಂತಿಪ್ರಜ್ಞೆಯ ಮೂರ್ತರೂಪವಾಗಿ ಪಶ್ಚಿಮಕ್ಕೆ ತೆರಳಿದ ಐನ್‌ಸ್ಟೈನ್, ಬಲಿಷ್ಠ ಮಿತ್ರ ರಾಷ್ಟ್ರಗಳಾದ ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಗ್ರೇಟ್ ಬ್ರಿಟನ್ನುಗಳಿಂದ, ಯುದ್ಧೋತ್ತರದಿನಗಳಲ್ಲಿ, ಸಿಂಹಾಪಿಸಲ್ಪಟ್ಟ ಪ್ರಥಮ ಜರ್ಮನ್ ರಾಷ್ಟ್ರಕನಾಗಿ ಜಯಭೇರಿ ಮೊಳಗಿಸಿ ಸ್ವದೇಶಕ್ಕೆ ಮರಳಿದರು (೧೯೨೧ ಜೂನ್ ದ್ವಿತೀಯಾರ್ಧ).

ಐನ್‌ಸ್ಟೈನರ ಶಾಂತಿದೌತ್ಯದ ಸಾರ್ಥಕ್ಯವನ್ನು ಮನಗಂಡ ಕೃತಜ್ಞ ಜರ್ಮನ್ ರೆಡ್‌ಕ್ರಾಸ್ ಸಂಸ್ಥೆ ಇವರನ್ನು ಸನ್ಮಾನಿಸಲು ಸಾರ್ವಜನಿಕ ಸಮಾರಂಭ ಏರ್ಪಡಿಸಿತು. ರಾಷ್ಟ್ರಾಧ್ಯಕ್ಷ ಈಬರ್ಟ್ ಮೊದಲಾದ ವರಿಷ್ಠರು ಈ ಸಭೆಯಲ್ಲಿ ಉಪಸ್ಥಿತರಿದ್ದರು.

ಐನ್‌ಸ್ಟೈನ್ ತಮ್ಮ ಅನುಭವವನ್ನು ಕ್ರೋಡೀಕರಿಸಿ ಹೇಳಿದರು: "ಖಂಡಿತವಾಗಿಯೂ ಅಮೆರಿಕದಲ್ಲಿ ಜರ್ಮನ್ ಎನ್ನುವ ಪ್ರತಿಯೊಂದರ ವಿರುದ್ಧವೂ ಸ್ಪಷ್ಟವಾದ ಅಸ್ನೇಹಪರಭಾವ ಎದ್ದು ನಿಂತಿತ್ತು. ಅಮೆರಿಕದ ಸಾರ್ವಜನಿಕ ಅಭಿಪ್ರಾಯ ಎಷ್ಟು ಉದ್ರಿಕ್ತವಾಗಿತ್ತೆಂದರೆ ಖುದ್ದು ಜರ್ಮನ್ ಭಾಷೆಯ ಬಳಕೆ ಕೂಡ ಅಲ್ಲಿ ದಮನಿಸಲ್ಪಟ್ಟಿತ್ತು. ಆದರೆ ಸದ್ಯ ಅಮೆರಿಕದಲ್ಲಿ ಗಮನಾರ್ಹ ಬದಲಾವಣೆ ಆಗುತ್ತಿರುವುದು ಕಂಡುಬರುತ್ತಿದೆ. ಅಮೆರಿಕದ ವಿದ್ವಜ್ಜನರೂ ವಿದ್ವತ್ಸಮೂಹ ಸದಸ್ಯರೂ ನನ್ನನ್ನು ಹಾರ್ದಿಕವಾಗಿ ಸ್ವಾಗತಿಸಿ ಬರಮಾಡಿಕೊಂಡರು. ಅವರೆಲ್ಲರೂ ಸಂತೋಷದಿಂದ ಜರ್ಮನ್ ಭಾಷೆ ಮಾತಾಡಿದರು. ಯುದ್ಧಪೂರ್ವದಿನಗಳಂದು ಅವರು ಜರ್ಮನ್ ವಿಜ್ಞಾನಿಗಳೊಡನೆ ಹಾಗೂ ಸಂಘಸಂಸ್ಥೆಗಳೊಡನೆ ಹೊಂದಿದ್ದ ನಿಕಟ ಸ್ನೇಹದ ಬಗ್ಗೆ ಎಲ್ಲೆಲ್ಲೂ ನಿರ್ವಿಕಾರ ಸಹಾನುಭೂತಿ ಇತ್ತು. ಇನ್ನು ಇಂಗ್ಲೆಂಡ್. ಅಲ್ಲಿ ರಾಜಕಾರಣಿಗಳು ಮತ್ತು ವಿದ್ವಾಂಸರು ಜರ್ಮನಿಯೊಡನೆ ಸ್ನೇಹಸಂಬಂಧ ಕುದುರಿಸಲು ಆಸಕ್ತರಾಗಿರುವರೆಂಬ ಭಾವ ನನ್ನಲ್ಲಿ ಮೂಡಿದೆ. ನಾನು ಆಲಿಸಿದ ಭಾಷಣಗಳ ಹಿನ್ನೆಲೆಯಲ್ಲಿದ್ದ ಆತ್ಮೀಯತೆ ಅಳತೆಗೆ ಮೀರಿದ್ದು. ಉತ್ತಮ ದಿನಗಳು ಆಗಮಿಸುತ್ತಿವೆ ಎಂಬ ಭರವಸೆ ತಳೆದಿದ್ದೇನೆ."

ಒಬ್ಬ ಪ್ರಾಮಾಣಿಕ ವ್ಯಕ್ತಿ ಸಾಧ್ಯವಾಗುವಷ್ಟೂ ಸಹಾನುಭೂತಿಯಿಂದ ಸನ್ನಿವೇಶಗಳನ್ನು ಜ್ಞೇಯನಿಷ್ಠವಾಗಿ (objectively) ಗಮನಿಸಿ ಕೃತಜ್ಞತೆಯ ಹಾಗೂ ಕೃತಕೃತ್ಯತೆಯ ಭಾವದಿಂದ ಎದೆ ತುಂಬಿ ಆಡಿದ ಮಾತುಗಳಿವು. ಇವುಗಳಲ್ಲಿ ಆಕ್ಷೇಪಾರ್ಹ ಅಂಶವೇನೂ ಕಂಡುಬರುತ್ತಿಲ್ಲ— ಅಮೆರಿಕನೇತ್ರಗಳಿಂದ ವೀಕ್ಷಿಸಿದರೂ ಅಷ್ಟೇ, ಇಂಗ್ಲೆಂಡ್‌ನೇತ್ರಗಳಿಂದ ಪರೀಕ್ಷಿಸಿದರೂ ಅಷ್ಟೆ. ಆದರೆ ಪತ್ರಿಕಾ ವರದಿಗಾರನ ಕ್ಷಕಿರಣಾಕ್ಷ ಕಂಡದ್ದು ಬೇರೆಯದನ್ನೆ. ಬರ್ಲಿನ್ನಿನಲ್ಲಿದ್ದ ಪತ್ರಿಕಾ ಪ್ರತಿನಿಧಿಯ ಮಾನಸಿಕ ಮೂಸೆಯಲ್ಲಿ ಐನ್‌ಸ್ಟೈನರ ಜರ್ಮನ್ ಭಾಷೆ ಇಂಗ್ಲಿಷ್ ಭಾಷೆಗೆ ಪರಿವರ್ತಿತವಾಗಿ ಹೊರಜಿ ಸಂದೇಶಗಳ (ಕೇಬಲ್) ಮೂಲಕ ಅಮೆರಿಕ ತಲಪಿ ಅಲ್ಲಿ ಸಂಪಾದಕನ ಕ್ವಥನ ಭಾಂಡದಲ್ಲಿ ಪಾಕಗೊಂಡು ಪತ್ರಿಕೆಯಲ್ಲಿ ಕಪ್ಪು ಬಿಳುಪು ಅಕ್ಷರಭಕ್ಷ್ಯಗಳಾಗಿ ಮೈದಳೆದಾಗ ಮೂಲ ಭಾವನೆಯ ಉದ್ದೇಶ ಧ್ವನಿ ಛಾಯೆ ಎಲ್ಲವೂ ಬೇರೆಯೇ ಆಗಿದ್ದುವು. ಉದ್ದಿಷ್ಟ ವಾಚಕರು ಹೇಗೂ ಪೂರ್ತಿ ವಿಭಿನ್ನ ದೃಷ್ಟಿಯವರು ತಾನೇ. ದುಷ್ಟಬುದ್ಧಿಯ ಲಿಖಿತ ಸಂದೇಶ 'ಚಂದ್ರಹಾಸಂ ಮಹಾಃಹಿತನೆಮಗೆ . . . ಮುಂದಕೆ ಸರ್ವಥಾಃಮಿತ್ರನಪ್ಪನ್ . . . ವಿಷವ ಮೋಹಿಸುವಂತೆ ಕುಡುವುದೀತಂಗೆ' ಎಂಬುದು ಆತನ ಮಗನ ಕೈ ತಲಪಿದಾಗ 'ಚಂದ್ರಹಾಸಂ ಮಹಾ ಹಿತನೆಮಗೆ . . . ಮುಂದಕೆ ಸರ್ವಥಾ ಮಿತ್ರನಪ್ಪನ್ . . . ವಿಷಯೆ ಮೋಹಿಸುವಂತೆ ಕುಡುವುದೀತಂಗೆ' ಎಂಬ ಸ್ಪಷ್ಟವಿರುದ್ಧಾರ್ಥ ಕೊಟ್ಟದ್ದುಂಟಷ್ಟೆ !

*New York Times* ಪತ್ರಿಕೆ ಉಗ್ರಟೀಕೆ ಬಿತ್ತರಿಸಿತು, "ಇವರು [ಐನ್‌ಸ್ಟೈನ್], ಪ್ರಾಯಶಃ ಅತ್ಯಂತ ನಿಶಿತಮತಿಯಾಗಿದ್ದರೂ ಇಂಗ್ಲೆಂಡ್ ತೀವ್ರ ಜರ್ಮನ್ ಪರ, ಅಮೆರಿಕ ತೀವ್ರ ಜರ್ಮನ್ ವಿರುದ್ಧ ಎಂದು ಹೇಳಿ ಏಕಕಾಲದಲ್ಲಿ ಎರಡು ತಪ್ಪೆಸಗಿದ್ದಾರೆ."

ಇಲ್ಲಿಗೇ ಮುಗಿಯಲಿಲ್ಲ ಈ ಕೀಟಲೆ (ಕೋಟಲೆ ಕೂಡ). ಐನ್‌ಸ್ಟೈನ್ ಯಾರೊಡನೆಯೊ ಏನನ್ನೊ ಲಘುವಾಗಿ ನುಡಿದರು ಎಂಬ ಮಾತು ಅಮೆರಿಕದಲ್ಲಿ ಮಹೋಪದ್ವ್ಯಾಪವಾಗಿ ರಾದ್ಧಾಂತಕ್ಕೆ ಕಾರಣವಾಯಿತು. ಇದರ ಪ್ರಕಾರ ಐನ್‌ಸ್ಟೈನ್ ಅಮೆರಿಕನ್ನರ ಬಗ್ಗೆ ಅಗೌರವಯುತ ಟೀಕೆ ಮಾಡಿದ್ದರು, "ಅಲ್ಲಿ ಪುರುಷರೇನೋ ಶ್ರಮವಹಿಸಿ ದುಡಿಯುತ್ತಾರೆ. ಆದರೆ ಅವರು ಸ್ತ್ರೀಯರ ದಾಸಾನುದಾಸರು—ಮುದ್ದುನಾಯಿಗಳಂತೆ. ಈ ಮಹಿಳೆಯರು ವಿಲಾಸಿನಿಯರು ಮತ್ತು ಗಾಡಿಕಾರ್ತಿಯರು—ದುಂದುವೆಚ್ಚವೊಂದೇ ಇವರ ಧ್ಯೇಯ."

ಅಮೆರಿಕದ ಪೌರುಷವನ್ನು ಮುದ್ದುನಾಯಿಯೆಂದು ಹೀಯಾಳಿಸಲು ಈ ದರಿದ್ರ ವಿಜ್ಞಾನಿಗೇನು ಹಕ್ಕು ? ಇವನಿಗೆ ನೀಡಿದ ಪ್ರೀತಿಯ ಆದರೋಪಚಾರದ ಕೃತಘ್ನ ದುರುಪಯೋಗವಿದು. ಈ ಧಾಟಿಯಲ್ಲಿ ಸಾರ್ವಜನಿಕ ಆಕ್ರೋಶ ಅಮೆರಿಕದ ಪತ್ರಿಕೆಗಳಲ್ಲಿ ಪ್ರಕಟವಾಯಿತು.

"ನಾನು ಹೇಳಿದ ಯಾವ ಮಾತೂ ಸಮರ್ಪಕವಾಗಿ ವರದಿ ಆಗಿಲ್ಲ. ಅಮೆರಿಕದ ಜನರನ್ನು ಕುರಿತಾಗಲಿ ಅವರ ಜೀವನಧರ್ಮವನ್ನು ಕುರಿತಾಗಲಿ ನಾನೆಂದೂ ನಿಂದಾತ್ಮಕ ನುಡಿಗಳನ್ನಾಡಿಲ್ಲ," ಎಂದು ಐನ್‌ಸ್ಟೈನ್ ಪತ್ರಿಕೆಗಳಲ್ಲಿ ಪ್ರಕಟಿಸಿದರು.

ಸ್ವಲ್ಪ ದಿನಗಳ ತರುವಾಯ ಅದೇ *New York Times* ಬರ್ಲಿನ್ನಿನಿಂದ ಸವಿವರ ವರದಿಗಳನ್ನು ತರಿಸಿಕೊಂಡು ದೀರ್ಘಲೇಖನವನ್ನು ತಯಾರಿಸಿ ಪ್ರಕಟಿಸಿ ಈ ದುರ್ಘಟನೆಗೆ ಮಂಗಳ ಹಾಡಿತು: "ಐನ್‌ಸ್ಟೈನರ ಟೀಕೆಗಳು ಹೊರಜಿ ಸಂದೇಶಗಳಲ್ಲಿ ಬಂದಷ್ಟು ಕಟುತರವಾಗಿ ಏನೂ ಇಲ್ಲ." ಇದೊಂದು ವಿಧದ ಖಾಜಿ ನ್ಯಾಯ.

ಜನರಿಗೆ ಒಳ್ಳೆಯದಾಗಬೇಕು. ದೇಶದೇಶಗಳ ನಡುವೆ ಸೌಹಾರ್ದ ಬೆಳೆಯಬೇಕು ಎಂಬ ಸದ್ಭಾವನೆಯಿಂದ ಸಾರ್ವಜನಿಕ ಸಂಪರ್ಕಕ್ಕೆ ಇಳಿದ ಏಕಾಂಗಿ ವಿಜ್ಞಾನಿ ಭೌತ ವಿಧಿನಿಯಮ ಸೂತ್ರಗಳ ಹಿಡಿತಕ್ಕೆ ಸಿಕ್ಕದ ಮಾನವ ಮನಸ್ಸಿನ ತುಮುಲ ಕ್ಷೋಭೆಗಳಿಗೆ ತುತ್ತಾಗಿ ಸಂಕಟಪಡಬೇಕಾಯಿತು.

ವಿಜ್ಞಾನಕ್ಕಿಂತ ಜೀವನ ಜಟಿಲ. ನಿಜ !

## ಫ್ರಾನ್ಸ್ ದೇಶಕ್ಕೆ ಭೇಟಿ

ನಮ್ಮ ಕಾಲದ ಮಹೋದಾತ್ತ ಪುರುಷ ಲೊರೆಂಟ್ಝ್. ಕ್ಲರ್ಕ್ ಮ್ಯಾಕ್ಸ್‌ವೆಲ್ ಅವರ ಸಿದ್ಧಾಂತಗಳಿಂದ ತೊಡಗಿ ಮುಂದೆ ಸಮಕಾಲೀನ ಭೌತವಿಜ್ಞಾನದವರೆಗೆ ಹಾದಿ ಬೆಳಗಿಸಲು ಹಿಲಾಲು ಹಿಡಿದದ್ದು ಇವರ ಪ್ರತಿಭೆ. ಭೌತವಿಜ್ಞಾನದ ನೇಯ್ಗೆಗೆ ಇವರು ಸ್ವತಃ ಅಮೂಲ್ಯ ದ್ರವ್ಯಗಳನ್ನೂ ವಿಧಾನಗಳನ್ನೂ ಒದಗಿಸಿದ್ದಾರೆ. ಇವರ ಬದುಕು ಕಲಾಕೃತಿಯಂತೆ—ಸೂಕ್ಷ್ಮತಮ ವಿವರಗಳವರೆಗೂ ಕ್ರಮಬದ್ಧ. ಅಂತರ್ಬೋಧಾತ್ಮಕವಾಗಿಯೇ ಜನ ಹಾಗೂ ವಿಷಯಗಳನ್ನು ಅರ್ಥಮಾಡಿಕೊಳ್ಳಬಲ್ಲ ಇವರ ಸಾಮರ್ಥ್ಯ, ಎಂದೂ ಹಿಂಗದ ಇವರ ಕರುಣೆ ಹಾಗೂ ನ್ಯಾಯದೃಷ್ಟಿಯ ಮಹೌದಾರ್ಯ ಇವುಗಳೊಂದಿಗೆ ಒಪ್ಪಗೊಂಡು ಇವರು ಪ್ರವೇಶಿಸಿದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಇವರನ್ನು ಸಹಜ ಧುರೀಣರನ್ನಾಗಿ ಮಾಡಿದುವು. ಪ್ರತಿಯೊಬ್ಬನೂ ಇವರನ್ನು ಉತ್ಸಾಹದಿಂದ ಹಿಂಬಾಲಿಸಿದ. ಏಕೆಂದರೆ ಇವರೆಂದೂ ತಮ್ಮನ್ನು ಮೆರೆಸಿಕೊಳ್ಳಲು ಪ್ರಯತ್ನಿಸಲಿಲ್ಲ, ಬದಲು ಸದಾ ಉಪಯುಕ್ತರಾಗಿರಲು ಹವಣಿಸಿದರು. ಇವರ ಕೃತಿ ಹಾಗೂ ನಿದರ್ಶನ ಭವಿಷ್ಯ ಪೀಳಿಗೆಗಳಿಗೆ ಸ್ಫೂರ್ತಿದಾಯಕ ಚಿಲುಮೆಗಳಾಗಿ ಉಳಿದಿರುತ್ತದೆ.

ಐನ್‌ಸ್ಟೈನ್

ಕಾಲೇಜ್ ಡ ಫ್ರಾನ್ಸಿನಲ್ಲಿ ಹೆಂಡ್ರಿಕ್ ಆಂಟೂನ್ ಲೊರೆಂಟ್ಝ್ (೧೮೫೩-೧೯೨೮, ಹಾಲೆಂಡಿನ ಭೌತವಿಜ್ಞಾನಿ) ತೆರವು ಮಾಡಿದ ಸ್ಥಾನಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಬರಬೇಕೆಂಬ ಆಮಂತ್ರಣವನ್ನು ಐನ್‌ಸ್ಟೈನರಿಗೆ ನೀಡಲಾಯಿತು (೧೯೧೩). ಇವರು ಇದನ್ನೊಪ್ಪಿಕೊಂಡರು. ಆದರೆ ವಾಸ್ತವ ಪ್ರಯಾಣ ತೊಡಗುವ ಮುನ್ನ ಒಂದನೆಯ ಮಹಾಯುದ್ಧ ಆಸ್ಫೋಟಿಸಿತು : ಜರ್ಮನಿ ಫ್ರಾನ್ಸಿನ ಎದುರು ತುಪಾಕಿ ಹೊಟ್ಟಿಸಿತು. ಹೀಗಾಗಿ ಈ ಎರಡು ನೆರೆ ದೇಶಗಳ ನಡುವೆ ಎಲ್ಲ ಸ್ನೇಹಸೇತುವೆ ಸಂಪರ್ಕಗಳೂ ಕುಸಿದುಹೋದುವು. ಐನ್‌ಸ್ಟೈನರ ಫ್ರಾನ್ಸ್ ಪ್ರಯಾಣ ಫಲಿಸಲಿಲ್ಲ.

ಯುದ್ಧವೇನೋ ಮುಗಿಯಿತು. ಪೆಟ್ಟು ತಿಂದ ಸಿಂಹವಾಗಿ ಜರ್ಮನಿ ಗುಹೆಯೊಳಗೆ ಹುದುಗಿಕೊಳ್ಳುವುದು ಅನಿವಾರ್ಯವಾಯಿತು. ಈ ಸಿಂಹದ ನೇರ ಹನನಕ್ಕೆ ಈಡಾದ ಫ್ರಾನ್ಸಿನಲ್ಲಿ ಜರ್ಮನಿಯ ವಿರುದ್ಧ ದ್ವೇಷ ಉಲ್ಬಣಸ್ಥಿತಿಯಲ್ಲಿತ್ತು. ಪ್ರತ್ಯಕ್ಷ ಆಹವದ ಅರಣ್ಯಾಗ್ನಿ ನಂದಿದಂತೆ ಕಂಡರೂ ಆಂತರಿಕ ದ್ವೇಷದ ದಾವಾನಲ ಎರಡೂ ದೇಶಗಳಲ್ಲಿ ಹೊಗೆಯಾಡುತ್ತಿತ್ತು : ವಿನಾ ಕಾರಣ ಆಕ್ರಮಣಕ್ಕೆ ಈಡಾದ ರಾಷ್ಟ್ರವಾಗಿ ಫ್ರಾನ್ಸ್, 'ಅನ್ಯಾಯ ಪಿತೂರಿ'ಗಳ ಪರಿಣಾಮವಾಗಿ ಸಮರಪತನ ಹೊಂದಿ ಅವಹೇಳನೆಗೂ 'ನಿಷ್ಕರುಣ' ಕೌಲಿಗೂ ಬಲಿಯಾದ ರಾಷ್ಟ್ರವಾಗಿ ಜರ್ಮನಿ.

೧೯೨೨ ಬಂದೇ ಬಂತು. ಯುದ್ಧ ಮುಗಿದು ನಾಲ್ಕು ವರ್ಷಗಳು ಸಂದಿದ್ದುವು. ಐನ್‌ಸ್ಟೈನರನ್ನು ಫ್ರಾನ್ಸಿಗೆ ಬರಮಾಡಿಕೊಳ್ಳುವುದರ ಮೂಲಕ ಫ್ರಾನ್ಸ್-ಜರ್ಮನಿ ಸ್ನೇಹ ಸಂವರ್ಧಿಸಲು ನೆರವಾಗೋಣ ಎಂಬುದಾಗಿ ಫ್ರಾನ್ಸಿನ ಕೆಲವು ಪ್ರಮುಖ ವಿಜ್ಞಾನಿಗಳು ಯೋಚಿಸಿದರು. ಇಂಥವರ ಪೈಕಿ ಪಾಲ್ ಲಾಂಜ್ವಾನ್ (೧೮೭೨-೧೯೪೬) ಅಗ್ರಗಣ್ಯ. ಇವರು ಪ್ಯಾರಿಸಿನ ಕಾಲೇಜ್ ಡ ಫ್ರಾನ್ಸಿನಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕರು. ಸಾಪೇಕ್ಷತಾಸಿದ್ಧಾಂತವನ್ನು ಫ್ರೆಂಚ್ ಭಾಷೆಯಲ್ಲಿ ಜನಪ್ರಿಯಗೊಳಿಸಿದ್ದರು. ಮೇಲಾಗಿ ಐನ್‌ಸ್ಟೈನರ ಮಿತ್ರ ಕೂಡ.

ಲಾಂಜ್ವಾನ್ ಐನ್‌ಸ್ಟೈನರಿಗೆ ಆಮಂತ್ರಣ ಕಳಿಸಿದರು. ಒಂದು ದೃಷ್ಟಿಯಲ್ಲಿ ಇದು ೧೯೧೩ರ ಆಮಂತ್ರಣದ ನವೀಕರಣ. ಆದರೆ ಈ ಹೆಜ್ಜೆ ಬಹುಮಂದಿ ಫ್ರೆಂಚ್ ವಿಜ್ಞಾನಿಗಳಿಗೆ ಒಪ್ಪಿಗೆ ಆಗಲಿಲ್ಲ. ಜರ್ಮನಿ ವಿರುದ್ಧ ತಮ್ಮ ದ್ವೇಷ ಮಸಳುತ್ತಿದೆ ಎಂಬ ಸೂಚನೆ ಕೂಡ ಇವರಿಗೆ ಅಪಥ್ಯವಾಗಿತ್ತು. ಈ ದ್ವೇಷಪಾಲಕರು ಮತ್ತು ರೋಷಪೋಷಕರು ಎದುರೊಡ್ಡಿದ ದಿಗ್ಬಂಧ ಯಶಸ್ವಿಯಾಗುತ್ತಿತ್ತೊ, ಏನೊ. ಆದರೆ ಲಾಂಜ್ವಾನರ ಕಾರ್ಯಕ್ರಮಕ್ಕೆ ಫ್ರೆಂಚ್ ಸರ್ಕಾರದ ಹಿರಿಯ ವಕ್ತಾರರೊಬ್ಬರ ಬೆಂಬಲವಿದ್ದುದರಿಂದ ಹಾಗಾಗಲಿಲ್ಲ.

ಪರಿಸ್ಥಿತಿಯ ಪರಿವೆ ಐನ್‌ಸ್ಟೈನರಿಗೂ ಇತ್ತು. ಫ್ರೆಂಚರಿಗೆ ಜರ್ಮನರ ಎದುರು ಹಗೆತನವಿರುವುದು ಸಹಜ. ಆದರೆ ಇದರ ವಿಲೋಮವೇಕೆ ಸಾಧುವಾಗಬೇಕು ? ತಾನು ಹೂಡಿದ ಕಾಳಗ ತನಗೆ ಸೋಲು ತಂದುದಕ್ಕಾಗಿ ? ಮಾನವ ಮನಸ್ಸಿನ ಮೊಡಕು ಮೂಲೆಗಳು ತರ್ಕಗಮ್ಯವಲ್ಲವಷ್ಟೆ ! ಜರ್ಮನಿಯ ಉಗ್ರರಾಷ್ಟ್ರೀಯವಾದಿಗಳ ದೃಷ್ಟಿಯಲ್ಲಿ ಐನ್‌ಸ್ಟೈನ್ ಆಗಲಿ ಬೇರೆ ಯಾರೇ ಆಗಲಿ ಫ್ರಾನ್ಸಿಗೆ ಸ್ನೇಹಸಂವರ್ಧನೆಗೋಸ್ಕರ ಭೇಟಿ ನೀಡುವುದು ಅಪರಾಧವೆಂದಿತ್ತು.

ಫ್ರಾನ್ಸಿಗೆ ಹೋಗಲು ಐನ್‌ಸ್ಟೈನ್ ಹಿಂಜರಿಯಲಿಲ್ಲ. ಆದರೆ ತಮ್ಮ ನಡತೆಯಿಂದ ನಿರಪರಾಧಿಗಳಿಗೆ ವೃಥಾ ಸಂಕಟವೊದಗಬಾರದು ಎಂದು ಇವರು ಆಶಿಸಿದ್ದರು. ಈ ಸಂದಿಗ್ಧತೆಯಿಂದ ಪಾರಾಗುವುದು ಹೇಗೆಂಬ ಪ್ರಶ್ನೆಯನ್ನು ಇವರು ತಮ್ಮ ಮಿತ್ರರೂ ಜರ್ಮನ್ ಗಣರಾಜ್ಯ ಸರ್ಕಾರದ ಸಚಿವರೂ ಆಗಿದ್ದ ರ್‍ಯಾತಿನೌರಿಗೆ ಹಾಕಿದರು.

ವಾಲ್ತರ್ ರ್‍ಯಾತಿನೌ (೧೮೬೭-೧೯೨೨) ಜರ್ಮನಿಯ ಪ್ರಸಿದ್ಧ ಉದ್ಯಮಪತಿ, ವರ್ಚಸ್ವೀಯೆಹೂದ್ಯ. ಸರ್ಕಾರದಲ್ಲಿ ಪ್ರಭಾವಶಾಲಿ ಮಂತ್ರಿಯಾಗಿ ಇವರು ಯುದ್ಧದಿನಗಳಲ್ಲೂ ತದನಂತರದ ರಾಷ್ಟ್ರಪುನಾರಚನಾದಿನಗಳಲ್ಲೂ ದಕ್ಷತೆ ದೂರದರ್ಶಿತ್ವ ಸಹೃದಯತೆಗಳಿಗೆ ಪ್ರಸಿದ್ಧರಾಗಿದ್ದರು. ಜರ್ಮನಿ ಮತ್ತು ಫ್ರಾನ್ಸ್ ರಾಷ್ಟ್ರಗಳ ನಡುವೆ ಸ್ನೇಹ ಬೆಳೆಯಬೇಕೆಂಬುದೇ ಇವರ ಸ್ಪಷ್ಟ ನಿಲವು. ಫ್ರಾನ್ಸಿನ ಆಮಂತ್ರಣವನ್ನು ಖಂಡಿತವಾಗಿಯೂ ಸ್ವೀಕರಿಸಬೇಕೆಂದು ರ್‍ಯಾತಿನೌ ಐನ್‌ಸ್ಟೈನರಿಗೆ ಸಲಹೆ ನೀಡಿದರು.

ಐನ್‌ಸ್ಟೈನ್ ಲಾಂಜ್ವಾನರಿಗೆ ಮಾರೋಲೆ ಬರೆದರು, "ನಿಮ್ಮ ಕರೆಯನ್ನು ಒಪ್ಪುವುದು ನನ್ನ ಕರ್ತವ್ಯವೆಂದು ರ್‍ಯಾತಿನೌ ಆದೇಶಿಸಿದ್ದಾರೆ."

೧೯೨೨ ಮಾರ್ಚ್ ೧೮. ಐನ್‌ಸ್ಟೈನ್ ಪ್ಯಾರಿಸ್ಸಿಗೆ ಆಗಮಿಸುವ ದಿನ. ಲಾಂಜ್ವಾನ್ ಮತ್ತು ಚಾರ್ಲ್ಸ್ ನಾರ್ಡ್‌ಮನ್ (ಪ್ಯಾರಿಸ್ ವೇಧಶಾಲೆಯಲ್ಲಿ ಖಗೋಳ ವಿಜ್ಞಾನಿ, *Einstein and the Universe*, ೧೯೨೧, ಎಂಬ ಪುಸ್ತಕದ ಲೇಖಕ) ಐನ್‌ಸ್ಟೈನರನ್ನು ಫ್ರಾನ್ಸ್-ಬೆಲ್ಜಿಯಮ್ ಗಡಿಯಲ್ಲಿ ಸ್ವಾಗತಿಸಲೋಸ್ಕರ ಪ್ಯಾರಿಸಿನಿಂದ ಸಾಕಷ್ಟು ಮುಂದಾಗಿ ನಿರ್ಗಮಿಸಿದರು. ಆದರೆ ಇವರ ರೈಲು ಆ ಗಡಿ ನಿಲ್ದಾಣವನ್ನು ಸ್ವಲ್ಪ ತಡವಾಗಿ ತಲಪಿತು. ಆ ಮೊದಲೇ ಐನ್‌ಸ್ಟೈನ್ ಅಲ್ಲಿಗೆ ಬರ್ಲಿನ್ನಿನಿಂದ ಬಂದಿರುವುದು ಸಾಧ್ಯ. ಸರಿ, ಮಹಾವಿಜ್ಞಾನಿಗಾಗಿ ಪ್ರಥಮದರ್ಜೆಯ ವಿಶೇಷ ತಂಗುಕೊಠಡಿಗಳೆಲ್ಲವನ್ನೂ ಇವರು ತಪಾಸಿಸಿದರು. ಆದರೆ ಅವರೆಲ್ಲಿದ್ದರು ? ದ್ವಿತೀಯ ದರ್ಜೆಯ ಪ್ರಯಾಣಿಕರ ಅಪ್ರಸಿದ್ಧ ಕೊಠಡಿಯ ಮೂಲೆಯಲ್ಲಿ ಸುಖವಾಗಿ ಮಂಡಿಸಿದ್ದ ಪ್ರಥಮ ದರ್ಜೆಯ ಈ ಪ್ರಸಿದ್ಧ ಪುರುಷನನ್ನು ಗುರುತಿಸುವುದು ಅವರಿಗೇನೂ ಕಷ್ಟವಾಗಲಿಲ್ಲ : ೧ ಮೀಟರ್ ೭೬ ಸೆಂಟಿಮೀಟರ್ ಎತ್ತರದ ಭವ್ಯಗಾತ್ರ, ಆಕರ್ಷಕ ತಾರುಣ್ಯ, ಗಂಭೀರವದನ, ಸ್ವಲ್ಪ ವಿಷಾದವೂ ಬೆರೆತಂತಿದ್ದ ಅನಂತಚಿಂತನೆಯಲ್ಲಿ ಮಗ್ನವಾಗಿದ್ದ ಕಣ್ಣುಗಳು, ಸಿಂಹಕೇಸರ ಕುಂಚಿತ ಶಿರಸ್ಸು—ಇವರೇ ಐನ್‌ಸ್ಟೈನ್.

ಮುಂದೆ ಪ್ಯಾರಿಸಿಗೆ ನಾಲ್ಕು ಗಂಟೆಗಳ ರೈಲು ಪ್ರಯಾಣ. ಸಹಜವಾಗಿ ಈ ವಿಜ್ಞಾನಿತ್ರಯರ ಮಾತು ವಿಜ್ಞಾನ ಚಟುವಟಿಕೆಗಳ ಸುತ್ತ ಹೆಣೆದುಕೊಂಡಿತು.

"ಶಕಲಸಿದ್ಧಾಂತದ ಸಮಸ್ಯೆಗಳೇನು ?"

ಐನ್‌ಸ್ಟೈನ್, "ಅದೊಂದು ಭದ್ರ ಭಿತ್ತಿ. ಪ್ರತಿಯೊಬ್ಬನೂ ಅದರ ಮುಂದೆ ಸ್ತಂಭೀಭೂತನಾಗುತ್ತಾನೆ. ಆತಂಕಗಳು ಭೀಕರವಾಗಿವೆ. ಅವನ್ನು ನಾನು ಪರಿಶೀಲಿಸುತ್ತಿದ್ದಾಗ ನನಗೆ ನಾನೇ ಕೊಟ್ಟುಕೊಂಡ ಒಂದು ತೆರನಾದ ಕಾಲಾವಕಾಶವೇ ಸಾಪೇಕ್ಷತಾಸಿದ್ಧಾಂತ. ಶಕಲ ಪ್ರಪಂಚದಲ್ಲಿ ಏನೊ ಒಂದು ಉನ್ಮತ್ತತೆ ಇದೆ. ಆದರೆ ಅಲ್ಲಿ ಭೌತವಿಜ್ಞಾನಿಗಳೂ ಉನ್ಮತ್ತರಂತೆ ವರ್ತಿಸುತ್ತಾರಲ್ಲವೇ ?"

"ಜರ್ಮನಿಯ ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದಲ್ಲಿ ವಾಮಪಂಥೀಯರ ಪ್ರಭಾವ ಎಷ್ಟರಮಟ್ಟಿಗಿದೆ ?"

"ಕೇವಲ ತೋಗಲನೋಟದಿಂದ ಯಾವುದನ್ನು ವಾಮಪಂಥವೆನ್ನುತ್ತೇವೋ ಅದು ವಾಸ್ತವವಾಗಿ ಬಹು ಆಯಾಮಗಳ ಸೌಧ." ಅಂದರೆ, ಬಲಕ್ಕೆ ಸಾಗುವ ಹಾದಿಗಳೇ ಆಗಲಿ ಎಡಕ್ಕೆ ಸಾಗುವ ಹಾದಿಗಳೇ ಆಗಲಿ ಅವು ಅಪರೂಪವಾಗಿ ಜನರನ್ನು ಒಂದೇ ಗುರಿಗೆ ಒಯ್ಯಬಹುದೆಂದು ಐನ್‌ಸ್ಟೈನ್ ಭಾವಿಸಿದ್ದರು.

ಪ್ರಯಾಣ ಕಾಲದಲ್ಲಿ ಲಾಂಜ್ವಾನರನ್ನು ಕಾಡುತ್ತಿದ್ದುದು ಒಂದೇ ಒಂದು ಚಿಂತೆ : ಐನ್‌ಸ್ಟೈನ್ ರೈಲಿನಿಂದಿಳಿಯುವಾಗ ಪ್ರತಿಭಟನಾತ್ಮಕ ಪ್ರದರ್ಶನಗಳೆದುರಾದರೆ ಅವನ್ನು ನಿಭಾಯಿಸುವುದು ಹೇಗೆ ? ಇತ್ತ ಪ್ಯಾರಿಸಿನಿಂದ ಪೋಲೀಸ್ ಮೂಲಗಳ ಮೂಲಕ ಬಂದಿದ್ದ ತಂತಿಸಂದೇಶ ಉಲ್ಲಾಸದಾಯಕವಾಗಿ ಏನೂ ಇರಲಿಲ್ಲ. ಉದ್ರಿಕ್ತ ಯುವಕರು ರೇಲ್ವೇ ನಿಲ್ದಾಣದ ಹೊರಗೆ ಕಲೆಯುತ್ತಿದ್ದಾರೆಂದು ಅವು ವರದಿ ಮಾಡಿದ್ದುವು.

ಮಧ್ಯರಾತ್ರಿ, ರೈಲು ಪ್ಯಾರಿಸ್ ನಿಲ್ದಾಣ ತಲಪಿತು. ಲಾಂಜ್ವಾನ್ ಮತ್ತು ನಾರ್ಡ್‌ಮನ್ ಒಂದು ಉಪಾಯ ಹೂಡಿದರು. ಇವರು ರೇಲ್ವೇ ಡಬ್ಬಿಯ ಪ್ಲಾಟ್‌ಫಾರಮ್ ಮಗ್ಗುಲಿನ ಬಾಗಿಲತ್ತ ಹೋಗದೆ ಅದರ ಎದುರು ದಿಕ್ಕಿನದರತ್ತ ಹೋಗಿ ಅದನ್ನು ತೆರೆದು ಗುಟ್ಟಾಗಿ ಹೊರಗಿಳಿದರು. ಹಾಗೆಯೇ ಸದ್ದಿಲ್ಲದೆ ಮುಂದೆ ಸಾಗಿ ಕತ್ತಲಲ್ಲಿ ಕರಗಿ ಹೋಗಿ ಅಮುಖ್ಯ ನಿರ್ಗಮದ್ವಾರ

ದಿಂದ ಹೊರತೆರಳಿದರು. ಈ 'ಗುಪ್ತಪಲಾಯನ' ವಿಧಾನದಿಂದ ಐನ್‌ಸ್ಟೈನ್ ಜನಜಂಗುಳಿಯ ಕೆಂಗಣ್ಣುಗಳಿಗೆ ಬೀಳದೆ ಪತ್ರಿಕಾಕರ್ತರ ಸೂಕ್ಷ್ಮಾವಲೋಕನೆಗೆ ಬಲಿಯಾಗದೆ ನೆಲೆ ತಲಪುವುದು ಸಾಧ್ಯವಾಯಿತು. ಏಕಾಂತಪ್ರಿಯರಾದ ಇವರಿಗೆ ಇದು ಹಿತವೆನ್ನಿಸಿತು.

ಆದರೆ ಮೊದಲಿನಿಂದಲೇ ಇಲ್ಲೊಂದು ತಪ್ಪು ನುಸುಳಿತ್ತು : ಆ ಉದ್ರಿಕ್ತಕಾರರೆಂಬವರು ನಿಜಕ್ಕೂ ಸ್ವಾಗತಕಾರರು ! ಲಾಂಜ್ವಾನರ ಮಗನ ಹಿರಿತನದಲ್ಲಿ ನೆರೆದಿದ್ದ ಉತ್ಸಾಹೀ ತರುಣರು! ಆರಕ್ಷಕ ಚಷ್ಮಗಳು ಮಾಮೂಲಿನಂತೆ ಇವರಲ್ಲಿ 'ಹಂತಕ'ರನ್ನು ಕಂಡಿದ್ದುವು, ಕಂಡು ಉತ್ಪ್ರೇಕ್ಷಿಸಿದ್ದುವು, ಅಷ್ಟೆ. ಮನಬಯಸಿದ್ದನ್ನು ಕಣ್ಣುಗಳು ಕಾಣುತ್ತವೆ.

ಕಾಲೇಜ್ ಡ ಫ್ರಾನ್ಸಿನಲ್ಲಿ ಐನ್‌ಸ್ಟೈನರ ಮೊದಲ ಭಾಷಣ ಕಾರ್ಯಕ್ರಮವಿತ್ತು (ಮಾರ್ಚ್ ೩೧). ಆ ಸಭೆಗೆ ಪ್ರವೇಶ ನಿಗದಿಗೊಳಿಸಲಾಗಿತ್ತು—ವಿಜ್ಞಾನದಲ್ಲಿ ಆಸಕ್ತರಲ್ಲದ ಅಂಧ ರಾಷ್ಟ್ರೀಯವಾದಿಗಳು ಅಲ್ಲಿ ತುಂಬಿಕೊಂಡು ಗಲಭೆಗೆ ಕಾರಣರಾಗಬಾರದೆಂಬ ಉದ್ದೇಶದಿಂದ. ಮದಾಮ್ ಕ್ಯೂರಿ, ಹೆನ್ರಿ ಬರ್ಗ್‌ಸನ್ (೧೮೫೯-೧೯೪೧, ಪ್ರಸಿದ್ಧ ಫ್ರೆಂಚ್ ತತ್ತ್ವಶಾಸ್ತ್ರವಿದ) ಮೊದಲಾದ ಪ್ರಭೃತಿಗಳು ಅಲ್ಲಿ ಉಪಸ್ಥಿತರಿದ್ದರು. ಐನ್‌ಸ್ಟೈನರ ಜರ್ಮನ್ ಒತ್ತಿನ ಮೆಲುನಡೆಯ ಫ್ರೆಂಚ್ ಭಾಷೆ, ಮಾತಿನ ಧಾಟಿ, ಮೇಲಾಗಿ ವಿಶಿಷ್ಟ ವ್ಯಕ್ತಿತ್ವ ಅಲ್ಲೆಲ್ಲ ಒಂದು ವಿಧವಾದ ಸಂಮೋಹಕಾಸ್ತ್ರ ಪ್ರಯೋಗಿಸಿದ್ದುವೋ ಎಂಬ ಅನುಭವವಾಗುತ್ತಿತ್ತು.

ಇದೇನೋ ಸರಿ. ಆದರೆ ಪ್ರಪಂಚಪ್ರಸಿದ್ಧ ಯುಗಪ್ರವರ್ತಕ ಮಹಾವಿಜ್ಞಾನಿ ತಮ್ಮ ನೆಲಕ್ಕೆ ಆಗಮಿಸಿದಾಗ ಆತನನ್ನು ಗೌರವಿಸುವ, ತನ್ಮೂಲಕ ತಮ್ಮನ್ನು ತಾವೇ ಗೌರವಿಸಿಕೊಳ್ಳುವ ಮೊದಲ ಹಕ್ಕು ಯಾರದು ? ಸ್ಪಷ್ಟವಾಗಿ, ಆ ನೆಲದ ಭೌತವಿಜ್ಞಾನ ಸಂಸ್ಥೆಯದು.

ಫ್ರೆಂಚ್ ಭೌತವಿಜ್ಞಾನಿಗಳ ಸಂಘದ ಮುಂದೆ ಇದು ಘೋರ ಸವಾಲಾಗಿ, ಜೀವನ್ಮರಣ ಪ್ರಶ್ನೆಯಾಗಿ ಎದ್ದು ನಿಂತಿತು : ಸಂಘದ ಸದಸ್ಯರಲ್ಲಿ ಒಮ್ಮತವಿರಲಿಲ್ಲ. ಅವರ ಪೈಕಿ ಅನೇಕರು ಖಾಸಗಿಯಾಗಿ ಐನ್‌ಸ್ಟೈನರನ್ನು ಭೇಟಿ ಮಾಡಿ ತಮ್ಮ ಗೌರವ ಸಲ್ಲಿಸಿದರು. ಆದರೆ ಸಂಘದ ಸಾಮೂಹಿಕಪ್ರಜ್ಞೆ ವಾದಿಸಿದ ಧಾಟಿ ಮಾತ್ರ ಬೇರೆ.

"ಎಲ್ಲಾದರೂ ಉಂಟೇ ? ವೈರಿಜನಾಂಗದ ಒಬ್ಬ ವಿಜ್ಞಾನಿಗೆ ಅವನೆಷ್ಟೇ ಹಿರಿಯನಾಗಿದ್ದರೂ ನಾವು ಪುರಸ್ಕಾರ ನೀಡಿ ಗೌರವಿಸುವುದುಂಟೇ ?"

"ಆದರೆ ಅವರು ಯುದ್ಧವನ್ನು ವಿರೋಧಿಸಿ ಪ್ರಣಾಳಿಕೆ ಪ್ರಕಟಿಸಲಿಲ್ಲವೇ ?"

"ನಿಜ, ಆದರೆ ಯುದ್ಧದಿನಗಳಂದು ಅವರು ಜರ್ಮನಿಯಲ್ಲೇ ಉಳಿದಿದ್ದರಷ್ಟೆ. ಆದ್ದರಿಂದ ಅದರ ಪಾಪಲೇಪ ಅವರಿಗೂ ತಟ್ಟದಿರದು."

"ಜರ್ಮನಿಯು, ರಾಷ್ಟ್ರಗಳ ಕೂಟದ (League of Nations) ಸದಸ್ಯ ಅಲ್ಲ, ಫ್ರಾನ್ಸ್ ಹೌದು. ಹೀಗಿರುವಾಗ ಜರ್ಮನಿಯ ಪ್ರಜೆಯನ್ನು ಫ್ರಾನ್ಸಿನಲ್ಲಿ ಸನ್ಮಾನಿಸುವುದು ಹೇಗೆ ?"

"ಅದು ರಾಜಕೀಯಕ್ಕೆ ಸಂಬಂಧಿಸಿದ್ದು. ಇದು ವಿಜ್ಞಾನ ಕುರಿತದ್ದು, ಎರಡನ್ನೂ ಸಮೀಕರಿಸುವುದು ತರವಲ್ಲ."

"ಅಯ್ಯೊ ! ರಾಜಕಾರಣವಿಲ್ಲದೆ ವಿಜ್ಞಾನಕ್ಕೆ ಉಳಿಗಾಲವೆಲ್ಲಿ ? ಮೊದಲು ನಾವು ಫ್ರೆಂಚರು, ಬಳಿಕ ವಿಜ್ಞಾನಿಗಳು. ಆದ್ದರಿಂದ ಫ್ರೆಂಚರ ವೈರಿಗಳೆಲ್ಲರೂ ನಮ್ಮ ವೈರಿಗಳೇ. ಇಂಥ ಒಬ್ಬ ವೈರಿಯನ್ನು ನಾವು ಪುರಸ್ಕರಿಸುವುದೇ ? ಶಾಂತಂ ಪಾಪಂ."

ವಾದವಿವಾದ ಹೀಗೆ ವರ್ತುಳಿಯ ಕಕ್ಷೆಯ ಮೇಲೆ ಒಂದನ್ನು ಬೆರಸುತ್ತ ಇನ್ನೊಂದು ಸರಿಯುತ್ತಿದ್ದಾಗ ಹೊಸ ಸಲಹೆಯನ್ನೊಬ್ಬ ವಿಜ್ಞಾನಿ ಮಂಡಿಸಿದ, "ಅವರನ್ನು ನಮ್ಮ ಸಭೆಗೆ

ಆಹ್ವಾನಿಸೋಣ. ಸನ್ಮಾನಿಸಲೆಂದಲ್ಲ, ಹಾಗೆಯೇ ಭಾಗವಹಿಸಲೆಂದು.''

"ಅವರಿಗೆಲ್ಲಿ ಸ್ಥಾನ ಕೊಡುವುದು ?"

"ಸಭಾಸದರ ನಡುವೆ ಕೂರಿಸುವುದು ಸರಿಯಲ್ಲ—ಅವರು ಬಲು ಹಿರಿಯ ವಿಜ್ಞಾನಿ. ವೇದಿಕೆಯ ಮೇಲೆ ಕೂರಿಸುವುದು ತರವಲ್ಲ—ಅದು ಪರೋಕ್ಷವಾಗಿ ಅವರಿಗೆ ನಾವು ಸನ್ಮಾನ ಮಾಡಿದಂತೆ.''

ಈ ವರ್ತುಳಿಯ ಕಕ್ಷಾಸಂಚಾರಕ್ಕೆ ಅಂತಿಮ ಅಸ್ತ್ರವೆಸೆದು ಇದನ್ನು ಮುಕ್ತಾಯಗೊಳಿಸಿದವರು ಮೂವತ್ತುಮಂದಿ ಉಗ್ರರಾಷ್ಟ್ರೀಯವಾದಿ ವಿಜ್ಞಾನಿಗಳು. "ನೀವೇನಾದರೂ ಹೇಳಿ. ಅವರು ಸಭೆಗೆ ಬಂದುದಾದರೆ ನಾವು ಮೂವತ್ತು ಮಂದಿಯೂ ಆ ಕ್ಷಣವೇ ಒಬ್ಬ ವ್ಯಕ್ತಿಯಂತೆ ಎದ್ದು ಹೊರಟು ಹೋಗುವುದು ದಿಟ.''

ಈ ಕಾರ್ಯಕಲಾಪಗಳ ತಮಾಷೆ ಐನ್‌ಸ್ಟೈನರಿಗೆ ತಿಳಿಯಿತು. ತಾನು ಸಂಘದ ಸಭೆಯಲ್ಲಿ ಭಾಗವಹಿಸಲು ಹೇಗೂ ಉತ್ಸುಕನಾಗಿಲ್ಲವೆಂದು ಮೊದಲಾಗಿಯೇ ಅವರಿಗೆ ತಿಳಿಸಿ ಸಕಾಲದಲ್ಲಿ ಎಲ್ಲರನ್ನೂ ಪೇಚಿನಿಂದ ಪಾರುಗಾಣಿಸಿದರು. ವೈಯಕ್ತಿಕ ರಾಗದ್ವೇಷಗಳ ಕರಾಟೆ ಹೊಡೆದಾಟದಲ್ಲಿ ಮೊದಲ ಬಲಿ ವೈಜ್ಞಾನಿಕ ಮನೋಧರ್ಮ.[೩೭] ಈರ್ಷ್ಯಾಸೂಯೆಗಳ ಸೌಧವನ್ನು ವಿಚಾರವಂತಿಕೆಯ ಬುನಾದಿ ಮೇಲೆ ಕಟ್ಟಿಲ್ಲ.

ಈ ಘಟನೆಯ ಬಗ್ಗೆ ಫ್ರೆಂಚ್ ಪತ್ರಿಕೆಯೊಂದು ಪ್ರಕಟಿಸಿದ ಟೀಕೆ ದಿಟ್ಟವಾಗಿದೆ, ದಿಟವೂ ಆಗಿದೆ : "ಜರ್ಮನಿಯ ಪ್ರಜೆಯೊಬ್ಬ ಏಡಿಗಂತಿಯನ್ನು ಇಲ್ಲವೇ ಕ್ಷಯರೋಗವನ್ನು ಗುಣಪಡಿಸ ಬಲ್ಲ ಔಷಧಿ ಶೋಧಿಸಿದ್ದಾದರೆ ಆಗ ಈ ಮೂವತ್ತು ಮಂದಿ ಪ್ರಭೃತಿಗಳು ಅದರ ಉಪಯೋಗ ಕ್ಕಾಗಿ ಜರ್ಮನಿಯು ರಾಷ್ಟ್ರಗಳ ಕೂಟ ಸೇರುವ ತನಕವೂ ಕಾದಿರುವರಲ್ಲವೇ ?"

ಅಂದು ಫ್ರಾನ್ಸಿನಲ್ಲಿ ಇಂಥ ವಿಚಾರಪೂರಿತ ಟೀಕೆ ಅಪರೂಪವಾಗಿತ್ತು. ಏಕೆಂದರೆ ಜರ್ಮನಿ ವೃಥಾ ಪ್ರವರ್ತಿಸಿದ ಮಾರಣಹೋಮದಲ್ಲಿ ಹದಿಮೂರೂವರೆ ಲಕ್ಷಕ್ಕಿಂತಲೂ ಹೆಚ್ಚು ಮಂದಿ ಯನ್ನು ಕಳೆದುಕೊಂಡ ಫ್ರಾನ್ಸಿನ ಸಾಮೂಹಿಕಪ್ರಜ್ಞೆ ತೀವ್ರ ಜರ್ಮನ್‌ವಿರೋಧಿ ಆಗಿತ್ತು. ಅಲ್ಲಿಯೂ ಐನ್‌ಸ್ಟೈನ್ ಮುಪ್ಪುರಿ ಹಗೆತನಕ್ಕೆ 'ಅರ್ಹತೆ'ಗಳಿಸಿದವರಾಗಿದ್ದರು : ಇವರು ವಿಜ್ಞಾನದ ಭವ್ಯ ಪರಂಪರೆಯನ್ನು, ತತ್ರಾಪಿ ವಿಜ್ಞಾನರಂಗದಲ್ಲಿ ಫ್ರಾನ್ಸಿನ ಧುರೀಣತ್ವವನ್ನು, ವಿಪೀಠಸ್ಥಗೊಳಿಸಿದ ಅಪರಾಧಿ ; ಶತ್ರುರಾಷ್ಟ್ರ ಜರ್ಮನಿಯ ಪ್ರಜೆಯಾಗಿ ಅಪರಾಧಿ ; ಯೆಹೂದ್ಯ ರಾಗಿ ಅಪರಾಧಿ. ಯೆಹೂದ್ಯದ್ವೇಷ ಸಾಧಾರಣವಾಗಿ ಯೂರೋಪ್ ಖಂಡವಿಡೀ ಅಲೆಯುತ್ತಿದ್ದ ಅಂತರಪಿಶಾಚಿ. ಜನರ ಈ ತಿರಸ್ಕಾರ ಜುಗುಪ್ಸೆ, ಆಕ್ರೋಶ, ಸಂತಾಪ ಐನ್‌ಸ್ಟೈನರಿಗೆ ತಿಳಿಯ ದ್ದಲ್ಲ. ಇವನ್ನು ಅವರು ಅನುಮೋದಿಸದಿದ್ದರೂ ಇವುಗಳ ತೀವ್ರತೆಯನ್ನು ಚೆನ್ನಾಗಿ ಅರ್ಥಮಾಡಿ ಕೊಳ್ಳಬಲ್ಲವರಾಗಿದ್ದರು. ಹೀಗಾಗಿ ತಮ್ಮಿಂದ ಸಾಧ್ಯವಾದಲ್ಲೆಲ್ಲ ಸಾವು ನೋವಿನ ಗಾಯಗಳನ್ನು ಶಮನಿಸಲು ಹೃತ್ಪೂರ್ವಕವಾಗಿ ಶ್ರಮಿಸುತ್ತಿದ್ದರು—ಬುದ್ಧ ಗಾಂಧಿಯರಂತೆ.

ರಣರಂಗದ ಭಗ್ನಾವಶೇಷಗಳನ್ನು ಕಣ್ಣಾರೆ ಕಾಣಬೇಕೆಂಬ ತಮ್ಮ ಬಯಕೆಯನ್ನು ಆತಿಥೇಯ ರಿಗೆ ವ್ಯಕ್ತಪಡಿಸಿದರು.

ಪ್ಯಾರಿಸಿನ ಬಳಿಯಿದ್ದ ಆ ಗುಂಡುನೆತ್ತರ ಸುಡುಗಾಡಿಗೆ ಇವರನ್ನು ಕರೆದೊಯ್ದರು. ಹಳ್ಳಿಕೇರಿ ಗಳು ಕಾಡುಮೇಡುಗಳು ಬೆಟ್ಟ ಕಣಿವೆಗಳು ಬಿಕೊ ಎಂದಳುತ್ತಿದ್ದುವು. ಸಮರ ರಾಕ್ಷಸನ ಸಂಹಾರಕೃತ್ಯವನ್ನು ಪ್ರತ್ಯಕ್ಷ ದರ್ಶಿಸಿದ ಐನ್‌ಸ್ಟೈನ್. "ಇದು ಕಲ್ಪನೆಯಲ್ಲ, ಸಾಹಿತ್ಯವಲ್ಲ, ಭೀಕರ, ಅತಿ ಭೀಕರ,'' ಎಂದು ಮಮ್ಮಲ ಮರುಗಿದರು. "ಜರ್ಮನಿಯ ಎಲ್ಲ ವಿದ್ಯಾರ್ಥಿಗಳನ್ನೂ ಇಲ್ಲಿಗೆ ಕರೆದುತರಲೇಬೇಕು. ಪ್ರಪಂಚದ ಎಲ್ಲ ವಿದ್ಯಾರ್ಥಿಗಳನ್ನು ಕೂಡ. ಯುದ್ಧ ಎಷ್ಟು ಘೋರ,

ವಿಕಾರ ಎನ್ನುವುದನ್ನು ಅವರಿಲ್ಲಿಗೆ ಬಂದು ನೋಡುವಂತಾಗಬೇಕು. ಜನರಿಗೆ ಸಾಮಾನ್ಯವಾಗಿ ಪುಸ್ತಕಗಳಿಂದ ಯುದ್ಧವಿವರಗಳು ಲಭಿಸುವುದಾಗಿದೆ. ಹೀಗಾಗಿ ಅವರಲ್ಲಿ ಬಹುತೇಕ ತಪ್ಪುಕಲ್ಪನೆಗಳಿರುತ್ತವೆ. ಎಂದೇ ಬಹುಮಂದಿ ಜರ್ಮನರಿಗೆ ಫ್ರೆಂಚರ ಬಗ್ಗೆ ಪುಸ್ತಕೀಯ ಕಲ್ಪನೆ ಮೂಡಿರುವುದಾಗಿದೆ. ಅದೇ ರೀತಿ ಹೆಚ್ಚಿನ ಜನರಿಗೆ ಯುದ್ಧ ಹಾಗೂ ಅದು ಎಸಗುವ ಅನಾಹುತಗಳ ಬಗ್ಗೆ ಕೂಡ ಅಷ್ಟೇ ಪುಸ್ತಕೀಯ ಕಲ್ಪನೆ ಇರುತ್ತದೆ. ಇವರೆಲ್ಲರೂ ಇಲ್ಲಿಗೆ ಬಂದು ಖುದ್ದು ನೋಡುವುದು ಎಷ್ಟೊಂದು ಅವಶ್ಯ."

## ೮. ಮಾನವೀಯತೆ ಕುಂಚಿಸಿದ ಜಾಡು

### ಶಾಂತಿ ಅನ್ವೇಷಕ ಐನ್‌ಸ್ಟೈನ್

> ಶಸ್ತ್ರಾಸ್ತ್ರಗಳ ನಿರ್ಮಾಣದಲ್ಲಿ ಉದ್ಯುಕ್ತವಾಗಿರುವ ಪ್ರಬಲ ಕೈಗಾರಿಕಾ ಕೂಟಗಳು, ಅಂತಾರಾಷ್ಟ್ರೀಯ ವಿವಾದಗಳ ಶಾಂತಿಯುತ ಪರಿಹಾರ ಸಿದ್ಧಿಸದಂತೆ ಮಾಡಲು, ಸಮಸ್ತ ದೇಶಗಳಲ್ಲಿಯೂ ತೀವ್ರ ಕಾರ್ಯಮಗ್ನವಾಗಿವೆ ಎಂಬುದನ್ನು ನಾವು ಅರಿತಿರಬೇಕು. ಇಂಥ ಸನ್ನಿವೇಶದಲ್ಲಿ, ಆಳುವ ಪ್ರಭುಗಳಿಗೆ ತಮ್ಮ ಬಹುಸಂಖ್ಯಾತ ಪ್ರಜೆಗಳು ತಮ್ಮನ್ನು ಉತ್ಸಾಹದಿಂದ ಬೆಂಬಲಿಸುತ್ತಿರುವರೆಂಬ ಭರವಸೆ ಮೂಡಿದಾಗ ಮಾತ್ರ, ಅವರು ಶಾಂತಿಯ ಈ ಪರಮಗುರಿಯನ್ನು ಸಾಧಿಸಿಯಾರು ಅಷ್ಟೆ. ಪ್ರಜಾಪ್ರಭುತ್ವಾತ್ಮಕ ಸರ್ಕಾರಗಳಿರುವ ಈ ದಿನಗಳಂದು ರಾಷ್ಟ್ರಗಳ ಅದೃಷ್ಟ ಸಾಕ್ಷಾತ್ ಜನಗಳನ್ನೇ ಅವಲಂಬಿಸಿ ನಿಂತಿದೆ.
>
> ಐನ್‌ಸ್ಟೈನ್

ಫ್ರಾನ್ಸ್ ಯಾತ್ರೆ ಮುಗಿಸಿ ಬರ್ಲಿನ್ನಿಗೆ ಮರಳಿದ ಐನ್‌ಸ್ಟೈನ್ ಈಗ ಎರಡು ವಿಭಿನ್ನ ಕ್ಷೇತ್ರಗಳಲ್ಲಿ ಪ್ರಪಂಚವ್ಯಕ್ತಿತ್ವ ಪಡೆದಿದ್ದರು : ವಿಜ್ಞಾನಕ್ಷೇತ್ರದಲ್ಲಿ ಪರಮಶ್ರೇಷ್ಠ ವಿಜ್ಞಾನಿಯಾಗಿ, ರಾಜಕೀಯ ಕ್ಷೇತ್ರದಲ್ಲಿ ಶಾಶ್ವತ ಶಾಂತಿ ಅನ್ವೇಷಕರಾಗಿ. ಅಂತಾರಾಷ್ಟ್ರೀಯ ಶಾಂತಿಸ್ಥಾಪನೆಯೊಂದೇ ಮಾನವ ಕುಟುಂಬದ ಭವಿಷ್ಯವಿಮೆ ಎಂಬುದು ಸ್ಪಷ್ಟವಾಗಿ ಇವರಿಗೆ ಮನವರಿಕೆ ಆಗಿತ್ತು.

ಇದೇ ಸುಮಾರಿಗೆ, ೧೭-೫-೧೯೨೨, ರಾಷ್ಟ್ರಗಳ ಕೂಟದ ಪ್ರಧಾನ ಕಾರ್ಯದರ್ಶಿ ಸರ್ ಎರಿಕ್ ಡ್ರಮ್ಮಂಡ್, ಐನ್‌ಸ್ಟೈನರಿಗೊಂದು ಕಾಗದ ಬರೆದರು : 'ಬೌದ್ಧಿಕ ಸಹಕಾರಕ್ಕಾಗಿ ಅಂತಾರಾಷ್ಟ್ರೀಯ ಸಮಿತಿ'ಯನ್ನು ರಾಷ್ಟ್ರಗಳ ಕೂಟದ ಆಶ್ರಯದಲ್ಲಿ ಸ್ಥಾಪಿಸಲು ಉದ್ದೇಶಿಸಿದೆಯೆಂದೂ ಈ ಸಮಿತಿಯ ಸದಸ್ಯರಾಗಲು ಐನ್‌ಸ್ಟೈನ್ ಒಪ್ಪಿಗೆ ನೀಡಬೇಕೆಂದೂ ಅದರಲ್ಲಿ ಕೋರಲಾಗಿತ್ತು. ರಾಷ್ಟ್ರಗಳ ಕೂಟದ ಮನಸ್ಸಾಕ್ಷಿಯಾಗಿ, ಅಂತರ್ವಾಣಿಯಾಗಿ ಈ ಸಮಿತಿ ಮೈದಳೆಯಬೇಕೆಂಬುದು ಕಾರ್ಯದರ್ಶಿಯವರ ಬಯಕೆ. ಇದರ ಸದಸ್ಯರು ಯಾರು ? ತಮ್ಮತಮ್ಮ ಕ್ಷೇತ್ರಗಳಲ್ಲಿ ಉಚ್ಚ ಸಿದ್ಧಿ ಸಾಧಿಸಿದವರು ಎಂಬ ಕಾರಣಕ್ಕಾಗಿ ಈ ಸದಸ್ಯರು ನಾಮಕರಿಸಲ್ಪಡುತ್ತಾರೆಯೇ ವಿನಾ ಯಾವುದೇ ರಾಷ್ಟ್ರದ ಪ್ರತಿನಿಧಿಗಳು ಎಂಬುದಕ್ಕಾಗಿ ಅಲ್ಲ. ಸಾಧ್ಯವಾಗುವಷ್ಟರ ಮಟ್ಟಿಗೆ ಪ್ರಪಂಚದ ಹಿರಿಯ ಮತ್ತು ವಿಭಿನ್ನ ಸಾಂಸ್ಕೃತಿಕ ಸಮುದಾಯಗಳು ಈ ಸಮಿತಿಯಲ್ಲಿ ಪ್ರಾತಿನಿಧ್ಯ ಪಡೆಯುವಂತೆ ಎಚ್ಚರ ವಹಿಸಲಾಗುತ್ತದೆ.

ಐನ್‌ಸ್ಟೈನ್ ಉತ್ತರ ಬರೆದರು, "ಸಮಿತಿ ಮಾಡಲಿರುವ ಕೆಲಸದ ಲಕ್ಷಣವೇನೆಂದು ನನಗೆ ಸ್ಪಷ್ಟವಾಗಿಲ್ಲದಿದ್ದರೂ ನಿಮ್ಮ ಆಮಂತ್ರಣವನ್ನು ಅಂಗೀಕರಿಸುವುದು ಕರ್ತವ್ಯವೆಂದು ಭಾವಿಸಿ

ದ್ದೇನೆ. ಈಗಿನಂಥ ಸನ್ನಿವೇಶದಲ್ಲಿ ಅಂತಾರಾಷ್ಟ್ರೀಯ ಸಹಕಾರವನ್ನು ಸ್ಥಾಪಿಸಲು ಮಾಡುವ ಯಾವುದೇ ಪ್ರಯತ್ನದಲ್ಲಿ ಯಾರೇ ಆಗಲಿ ಭಾಗಿಯಾಗಲು ಒಪ್ಪದಿರುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ."

ಇವರ ಸಮ್ಮತಿ ಸಮಿತಿಕಾರ್ಯಕರ್ತರಿಗೆ ಸಂತೃಪ್ತಿ ನೀಡಿತು. ಮದಾಮ್ ಕ್ಯೂರಿ, ಲೊರೆಂಟ್ಜ್, ಪಾಲ್ ಪೇಯ್ನ್ಲೆವ್ (೧೮೬೩-೧೯೩೩, ಫ್ರೆಂಚ್ ಗಣಿತವಿದ ಮತ್ತು ರಾಜಕಾರಣಿ) ಮತ್ತು ಗಿಲ್ಬರ್ಟ್ ಮರೇ (೧೮೬೬-೧೯೫೭, ಬ್ರಿಟಿಷ್ ವಿದ್ವಾಂಸ, ರಾಷ್ಟ್ರಗಳ ಕೂಟದ ಮುಂದಿನ ಅಧ್ಯಕ್ಷ) ಸಮಿತಿಯ ಇತರ ಸದಸ್ಯರು. ಈ ಕಮಾನಿನ ಕೀಲಿಕಲ್ಲು ಐನ್‌ಸ್ಟೈನ್ ಎಂಬುದು ಸರ್ವವೇದ್ಯ ಮತ್ತು ಸರ್ವಮಾನ್ಯ ಸಂಗತಿ ಆಗಿತ್ತು.

ಸಮಿತಿಗೆ ಐನ್‌ಸ್ಟೈನ್ ನಾಮಕರಿಸಲ್ಪಟ್ಟದ್ದು ಯಥಾಪ್ರಕಾರ ಫ್ರೆಂಚ್ ಮತ್ತು ಜರ್ಮನ್ ರಾಷ್ಟ್ರೀಯವಾದಿಗಳ ಟೀಕೆಗೆ ಉಣಿಸಾಯಿತು. ರಾಷ್ಟ್ರಗಳ ಕೂಟದ ಸದಸ್ಯ-ರಾಷ್ಟ್ರವಲ್ಲದ ಜರ್ಮನಿಯ ರಾಷ್ಟ್ರಕನೊಬ್ಬ ಸಮಿತಿಯ ಸದಸ್ಯನಾಗುವುದರಲ್ಲಿ ಕಾನೂನಿನ ಅಭ್ಯಂತರವನ್ನು ಫ್ರೆಂಚರು ಎದುರಿಟ್ಟರೆ, ಜರ್ಮನಿಯ ಪ್ರಜೆಯಲ್ಲದ ಸ್ವಿಸ್ ಯೆಹೂದ್ಯನೊಬ್ಬ ಸಮಿತಿಯ ಸದಸ್ಯನಾಗುವುದು ಯಾವ ನ್ಯಾಯವೆಂಬ ತಕರಾರನ್ನು ಜರ್ಮನರು ಮುಂದೊಡ್ಡಿದರು.

ಮಾನವವರ್ತನೆಯಂಥ ವಿಭಿನ್ನ ವರ್ಣಗಳ ವಿಚಿತ್ರ ಮೇಳಕ್ಕೆ ಐನ್‌ಸ್ಟೈನರಂಥ ಪರಿಶುದ್ಧ ಏಕವರ್ಣವನ್ನು ಆವಾಹಿಸಿದ್ದು ಅನತಿ ಕಾಲದಲ್ಲೇ ಸಮಿತಿಗೆ ತಲೆನೋವಿನ ಕಾರಣವಾಯಿತು. ಸಮಿತಿ ಅಧಿಕೃತವಾಗಿ ಹುಟ್ಟಿ ಎರಡು ತಿಂಗಳು ತುಂಬುವ ಮೊದಲೇ ಇವರು ಅದಕ್ಕೆ ರಾಜಿನಾಮೆ ಸಲ್ಲಿಸಿದರು. ಕಾರಣ ? ೧೯೨೨ ಜುಲೈ ಳರಂದು ಐನ್‌ಸ್ಟೈನ್ ಬರೆದರು, "ಜರ್ಮನಿಯಲ್ಲಿ ಯೆಹೂದ್ಯರ ಸ್ಥಾನಮಾನ ಅಪಾಯದ ಅಂಚಿನಲ್ಲಿರುವುದರಿಂದ ನಾನು ಸಂಯಮ ವಹಿಸಿ ಮೌನ ತಳೆಯುವುದು ಅಪೇಕ್ಷಣೀಯವೆಂದು ತೋರುತ್ತದೆ. ಯಾರು ಖಂಡಿತವಾಗಿಯೂ ನನ್ನನ್ನು ತಮ್ಮ ಪ್ರತಿನಿಧಿಯೆಂದು ಆಯಲಾರರೊ ಮತ್ತು ಇಲ್ಲಿ ಪರಿಶೀಲಿಸಬೇಕಾಗಿರುವ ವಿಷಯಗಳ ಬಗ್ಗೆ ಯಾರೊಂದಿಗೆ ನಾನು ಸಹಮತೀಯನಾಗಿಲ್ಲವೊ ಆ ಜನರನ್ನು ಪ್ರತಿನಿಧಿಸಲು ನನಗೆ ಇಷ್ಟವಿಲ್ಲ."

ಐನ್‌ಸ್ಟೈನರ ಈ ತೋರ್ಕೆ ಅಸಂಗತ ನಿರ್ಧಾರದ ತಳದಲ್ಲಿ ಅತಿ ದಾರುಣ ಮಾನವೀಯ ಸಮಸ್ಯೆ ಹುದುಗಿತ್ತು. ಜರ್ಮನಿಯ ಪ್ರಭಾವಶಾಲಿ ಯೆಹೂದ್ಯ ಸಚಿವ ರ್‍ಯಾತಿನೌ ಬಗ್ಗೆ ಹಿಂದೆ ಉಲ್ಲೇಖಿಸಿದೆ. ಇವರು ಅದೇ ಫೆಬ್ರುವರಿಯಲ್ಲಿ (೧೯೨೨) ಜರ್ಮನಿಯ ವಿದೇಶಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ೧೯೧೭ರ ಮಹಾಕ್ರಾಂತಿಯ ತರುವಾಯ ಪ್ರಬಲ ಸುಸಂಘಟಿತ ರಾಷ್ಟ್ರವಾಗಿ ಪ್ರವರ್ಧಿಸುತ್ತಿದ್ದ ಮತ್ತು ಆ ತನಕ ಜರ್ಮನಿಯ ಆಜನ್ಮವೈರಿಯೆಂದು ಪರಿಗಣಿಸಲಾಗಿದ್ದ ರಶ್ಯದೇಶದ ಜೊತೆ ಶಾಂತಿಸಂಧಾನಮಾಡಿ ಉಭಯರಾಷ್ಟ್ರಗಳ ನಡುವೆ ರಾಯಭಾರಿ ಸಂಬಂಧ ಏರ್ಪಡಿಸುವುದರಲ್ಲಿ ಇವರು ಯಶಸ್ವಿ ಆಗಿದ್ದರು. ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸ್ ರಾಷ್ಟ್ರಗಳಿಗೆ ಆಗ ರಶ್ಯ ಪರಮಶತ್ರು. ಆದ್ದರಿಂದ ಒಂದನೆಯ ಮಹಾಯುದ್ಧದ ಖಳನಾಯಕ ದೇಶವಾದ ಜರ್ಮನಿ ತಮಗೆ ತಿಳಿಯದಂತೆ ಹೊಸ ಸಂಚನ್ನೇನೊ ಹೊಂಚುತ್ತಿದೆಯೆಂದು ಈ ರಾಷ್ಟ್ರಗಳು ತರ್ಕಿಸಿದುವು. ರ್‍ಯಾತಿನೌರಲ್ಲಿ ಇವು ಕಮ್ಯೂನಿಸ್ಟ್ (=ರಶ್ಯ) ಒಲವಿರುವ ವಾಮಪಂಥೀಯ ಧೋರಣೆ ಗುರುತಿಸಿದುವು. (ಅಂದಹಾಗೆ ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸ್ ಬಲಪಂಥೀಯ ರಾಷ್ಟ್ರಗಳು.) ಇತ್ತ ಜರ್ಮನಿಯ ಒಳಗೆ ಉಗ್ರರಾಷ್ಟ್ರೀಯವಾದಿಗಳೆಲ್ಲರೂ ಅತಿಬಲಪಂಥೀಯರು. ಇವರು ಯೆಹೂದ್ಯವೈರಿಗಳೂ ಹೌದು. ಹೀಗಾಗಿ ಈ ಬಣದವರೆಲ್ಲರೂ ರ್‍ಯಾತಿನೌರಲ್ಲಿ ಮಹಾರಾಷ್ಟ್ರದ್ರೋಹಿ ಪರಮನೀಚ ಯೆಹೂದ್ಯನನ್ನು ಗುರುತಿಸಿದರು. ತಮ್ಮ ಪವಿತ್ರ ಪಿತೃಭೂಮಿ

ಯನ್ನು ರಶ್ಯದ ಖಳ ಕೆಂಪು ಮಂದಿಗೆ (=ವಾಮಪಂಥೀಯರಿಗೆ) ಮಾರುತ್ತಿರುವ ಮೋಸಗಾರ ಘಾತಕನನ್ನು ಭೂತಗನ್ನಡಿಸಿದರು. ಉಗ್ರರಾಷ್ಟ್ರೀಯತೆ ಭುಗಿಲೆದ್ದಿತು. ವ್ಯವಸ್ಥಿತವಾಗಿ ಜರ್ಮನ್ ವಾಮಪಂಥೀಯರನ್ನು, ತತ್ರಾಪಿ ಯೆಹೂದ್ಯರನ್ನು, ಸದೆಬಡಿಯಲು ಸಂಚು ಹೂಡಿತು.

೧೯೨೨ ಜೂನ್ ೨೪ರ ಕರಾಳದಿನದಂದು ರ್‍ಯಾತಿನೌ ಈ ಘೋರ ಹತ್ಯಾಕಾಂಡಕ್ಕೆ, ಜನಾಂಗ ದ್ವೇಷಕ್ಕೆ ಮತ್ತು ಅಂಧರಾಷ್ಟ್ರಕತ್ವಕ್ಕೆ ಯಜ್ಞಪಶುವಾಗಿ ಬಲಿಯಾಗಬೇಕಾಯಿತು—ಹಾಡಹಗಲಿನಲ್ಲೇ ವಿದ್ಯಾರ್ಥಿ ಬಂಡಾಯಗಾರರು ಇವರನ್ನು ಕೊಲೆಮಾಡಿದರು. ಈ ಯೋಜಿತ ದುರಂತವು ಜರ್ಮನಿ ಆದ್ಯಂತ ಮಾರಕ ಭೂಕಂಪನ ತರಂಗಗಳನ್ನು ಪ್ರಸರಿಸಿತು. 'ಬಲಗಡೆಯಿಂದ ಉತ್ಕ್ರಾಂತಿ' ಎಂಬ ಹೆಸರಿನ ಈ ಮಾರಣಹೋಮ ಮನುಕುಲದ ದುಷ್ಟಮುಖದ ಉಗ್ರದರ್ಶನವಾಗಿತ್ತು. ಇದರ ತಳದಲ್ಲಿ ಹೊಗೆಯುತ್ತಿದ್ದುದು ನಿಜಕ್ಕೂ ಯೆಹೂದ್ಯದ್ವೇಷಾನಲ. ಇದನ್ನು ಅತ್ಯಂತ ಸ್ಪಷ್ಟವಾಗಿ ಪ್ರವಾದಿಯ ಖಚಿತತೆಯಿಂದ ಅಭಿಗ್ರಹಿಸಿದವರು ಐನ್‌ಸ್ಟೈನ್. ರಾಷ್ಟ್ರದ ರಂಗು ಯೆಹೂದ್ಯರನ್ನು ಕುರಿತಂತೆ ರೋಹಿತದ ಕೆಂಪಿನಿಂದ (ಆರೋಹೀ ತೀವ್ರತಾನುಸಾರ : ಕೆಂಪು, ಕಿತ್ತಳೆ, ಹಳದಿ, ಹಸುರು, ನೀಲಿ, ಕಡುನೀಲಿ, ನೇರಿಳೆ) ನೀಲಿಗೂ ಮುಂದೆ ನೇರಿಳೆ ಮತ್ತು ಎತ್ತರಕ್ಕೂ ನೆಗೆದದ್ದನ್ನು ಇವರು ಊಹಿಸಿದ್ದರು : ಈ ವೇಳೆಗೆ ಯಾವ ಯೆಹೂದ್ಯನೂ ಜರ್ಮನಿಯಲ್ಲಿ ಉಳಿಯುವಂತಿಲ್ಲ ಎಂಬುದು ಇವರಿಗೆ ಅಂತಃಪ್ರಜ್ಞೆಯಿಂದ ಮನವರಿಕೆಯಾಗಿತ್ತು.

ರ್‍ಯಾತಿನೌ ಶ್ಮಶಾನ ಯಾತ್ರೆಯ ದಿನವನ್ನು ರಾಷ್ಟ್ರೀಯ ಶೋಕದಿನವೆಂದು ಸರ್ಕಾರ ಸಾರಿ ಶಿಕ್ಷಣ ಸಂಸ್ಥೆಗಳಿಗೂ ವಿನೋದಮಂದಿರಗಳಿಗೂ ಸಾರ್ವತ್ರಿಕ ರಜೆ ಘೋಷಿಸಿತು. ಆದರೆ ಯೆಹೂದ್ಯದ್ವೇಷಿಯೂ ಐನ್‌ಸ್ಟೈನರ ವೈಯಕ್ತಿಕ ವೈರಿಯೂ ಆಗಿದ್ದ ಲೆನಾರ್ಡ್ (ಲೆನಾರ್ಡ್ ಹೀಗೆ ಭಾವಿಸಿದ್ದ, ಐನ್‌ಸ್ಟೈನ್ ಹೀಗೆ ಭಾವಿಸಿರಲಿಲ್ಲ) ಈ ಹುಕುಮನ್ನು ಪಾಲಿಸದೆ ಎಂದಿಗಿಂತ ಹೆಚ್ಚಿನ ಹುಮ್ಮಸ್ಸಿನಿಂದ ಪಾಠಮಾಡತೊಡಗಿದ. ಸಾಕಷ್ಟು ಮಂದಿ ಬಲಪಂಥೀಯ ವಿದ್ಯಾರ್ಥಿಗಳು ತರಗತಿಯಲ್ಲಿ ಹಾಜರಿದ್ದರು. ಅಲ್ಲೇ ಸಾಗುತ್ತಿದ್ದ ಸಮಾಜವಾದಿ ಕಾರ್ಮಿಕರ ಶೋಕ ಯಾತ್ರೆ ಲೆನಾರ್ಡನ ತಾರಸ್ವರ ಪ್ರವಚನದಿಂದ ಕೆಣಕಲ್ಪಟ್ಟಿತು. ಮತ್ತೆ ಕೇಳಬೇಕೇ ? ಜನಜಂಗುಳಿ ಅವನನ್ನು ಹೊರಗೆಳೆದು ಚೆನ್ನಾಗಿ ಥಳಿಸಿತು. ಹತ್ತಿರದಲ್ಲಿ ಹರಿಯುತ್ತಿದ್ದ ಹೊಳೆಗೆ ಎಸೆದುಬಿಡಲೆಂದು ದರದರನೆ ಎಳೆದುಕೊಂಡು ಹೋಯಿತು. ಅಷ್ಟರಲ್ಲಿ, ಮೆರವಣಿಗೆಯಲ್ಲಿದ್ದ ಹಲವು ಮಂದಿ ಸಮಾಧಾನಿ ಮುಖಂಡರು ಮಧ್ಯೆ ಪ್ರವೇಶಿಸಿ ಈ ದುರ್ಘಟನೆಯನ್ನು ತಪ್ಪಿಸಿ ಲೆನಾರ್ಡನನ್ನು ಆರಕ್ಷಕರಿಗೆ ಒಪ್ಪಿಸಿದರು. ಮೆರವಣಿಗೆ ಅತ್ತ ಹರಿದಂತೆ ಲೆನಾರ್ಡ್ ಇತ್ತ ಬಿಡುಗಡೆಗೊಂಡ. ಫಲಿತಾಂಶ ? ಆತ ಕನಲಿ ಕುಪಿತನಾಗಿ ಇನ್ನಷ್ಟು ಯೆಹೂದ್ಯದ್ವೇಷಿಯಾದ. ಹಾವಿಗೆ ಹಾಲೆರೆದೇನು ಫಲ! ಹೊನಲಿನಿಂದ ಮೇಲೆತ್ತಿದ ಕೈಯನ್ನು ಕುಟುಕುವುದು ಚೇಳಿನ ಧರ್ಮ.

ಹಂತಕರ ಮೂಲವರಸಲು ಶೋಧ ಬಿರುಸಿನಿಂದ ಮುಂದೆ ಸಾಗಿತು. ಇದರಿಂದ ಯಾವ ಜಾಲ ಬಯಲಾಯಿತೋ ಅಧಿಕೃತವಾಗಿ ತಿಳಿಯಲಿಲ್ಲ. ಸರ್ವಸಾಧಾರಣವಾಗಿ ಸಮಸ್ತ ರಾಜಕಾರಣಿಗಳ ಮನೋದೀಪಿಕೆ ಸ್ವಾರ್ಥಮಯವಾಗಿರುವುದರಿಂದ ರಾಜಕೀಯ ಪಾತಕಗಳ ಸಂಚು ಎಂದೂ ಬಯಲಾಗದು. ಇಲ್ಲವಾದರೆ ಇವರಿಗೆ ಪರಸ್ಪರ ರಕ್ಷಣೆ ಒದಗುವುದು ಹೇಗೆ ? ಪಿತೂರಿಗಾರರ ಮುಂದಿನ ಮಾರಿದೃಷ್ಟಿ ಇದ್ದದ್ದು ಐನ್‌ಸ್ಟೈನರ ಮೇಲೆಂಬ ದಟ್ಟ ಸುದ್ದಿ ಎಲ್ಲ ಕಡೆಯೂ ಪಸರಿಸಿತು. ಇವರೇನೂ ಭಯಗ್ರಸ್ತರಾಗಲಿಲ್ಲ. ಆದರೆ ಒಂದಿಷ್ಟು ಕಾಲ ಚಿಪ್ಪಿನೊಳಗೆ ಮುದುರಿಕೊಂಡಿರುವುದು ಅಪೇಕ್ಷಣೀಯವೆಂಬ ನಿಲವು ತಳೆದರು.

ಅದೇ ಸೆಪ್ಟೆಂಬರಿನಲ್ಲಿ ಲೈಪ್ಸಿಗ್ ನಗರದಲ್ಲಿ ಸೇರಲಿದ್ದ ಜರ್ಮನ್ ವಿಜ್ಞಾನಿಗಳ ಹಾಗೂ ಭೌತ

ವಿಜ್ಞಾನಿಗಳ ವಾರ್ಷಿಕ ಅಧಿವೇಶನಕ್ಕೆ ಪ್ರಮುಖ ಭಾಷಣಕಾರರಾಗಿ ಬಂದು ಚರ್ಚೆಯನ್ನು ಪ್ರವರ್ತಿಸಲು ಐನ್‌ಸ್ಟೈನರನ್ನು ಆಮಂತ್ರಿಸಲಾಗಿತ್ತು. ಪ್ರಸಕ್ತ ಸನ್ನಿವೇಶದಲ್ಲಿ ತಾನು ಅಧಿವೇಶನಕ್ಕೆ ಬರುವುದು ಅನುಚಿತವೆಂದು ಇವರು ಕಾಗದ ಬರೆದು ತನ್ನನ್ನು ಮನ್ನಿಸಬೇಕೆಂದು ಕೋರಿದರು. ಪರಿಸ್ಥಿತಿಯ ಸ್ಫೋಟಕ ಸಾಧ್ಯತೆ ಗಮನಿಸಿದ್ದ ಮ್ಯಾಕ್ಸ್ ಪ್ಲ್ಯಾಂಕ್ ಆದಿ ಹಿರಿಯರು ಈ ವಿವರಣೆಯನ್ನು ಒಪ್ಪಿಕೊಂಡರು. ಆದರೆ ಸಾಪೇಕ್ಷತಾಸಿದ್ಧಾಂತದ ಬಗೆಗಿನ ಭಾಷಣ ಹಾಗೂ ಚರ್ಚೆಗಳನ್ನು ಕಾರ್ಯಕ್ರಮದಲ್ಲಿ ಅಳವಡಿಸದಿರಲಿಲ್ಲ. ವಿಜ್ಞಾನದಲ್ಲಿ ರಾಗದ್ವೇಷಗಳಿಗೆ ಪ್ರವೇಶವಿಲ್ಲ ?

ಈ ಏರ್ಪಾಡು ಆ್ಯಂಟಿರಿಲೆಟಿವಿಟಿ ಕಂಪೆನಿಗೆ ಹಿಡಿಸಲಿಲ್ಲ. ಜಾದೂಗಾರನೊಬ್ಬನ "ಇನ್ನೂ ಸಿಂಧುವಾಗದಿರುವ ಭೂಮಂತ್ರಗಾಳಿಗೆ ಜರ್ಮನ್ ವಿಜ್ಞಾನವೆಂಬ ಉನ್ನತ ಅಂತಸ್ತನ್ನು ಕೊಟ್ಟಿರುವುದು ಜರ್ಮನ್ ಸಂಸ್ಕೃತಿಗೆ ಮತ್ತು ಪೌರುಷಕ್ಕೆ ಬಗೆದ ಅಪರಾಧ" ಎಂಬುದಾಗಿ ಮತ್ಸರಿಗಳ ಈ ಸಂಘ ತನ್ನ ಪ್ರತಿಭಟನೆಯನ್ನು ಪ್ರಕಟಿಸಿತು—ಪತ್ರಿಕೆಗಳ, ಕರಪತ್ರಗಳ ಮತ್ತು ಭಾಷಣಗಳ ಮೂಲಕ. ಆದರ ಈ ಅವೈಜ್ಞಾನಿಕ ಪರಿದೃಷ್ಟಿಯಿಂದ ಜರ್ಮನಿಯ ಯಾವ ಸೃಜನಶೀಲ ವಿಜ್ಞಾನಿಯೂ ಪ್ರಭಾವಿತನಾಗಲಿಲ್ಲ. ಆ್ಯಂಟಿರಿಲೆಟಿವಿಟಿ ಕಂಪೆನಿಯ ಬಾಯಿ ವಟಗುಟ್ಟುತ್ತಿತ್ತು ; ಸರಭರ ಮೆರವಣಿಗೆ ಸರಿಯುತ್ತಲೇ ಇತ್ತು ; ಐನ್‌ಸ್ಟೈನ್ ಎಂಬ ತುಂಬುಪೆರೆಯಿಂದ ಜೊನ್ನ ಮಳೆ ಸುರಿಯುತ್ತಲೇ ಇತ್ತು.

'ಬೌದ್ಧಿಕ ಸಹಕಾರಕ್ಕಾಗಿ ಅಂತಾರಾಷ್ಟ್ರೀಯ ಸಮಿತಿ' ಸದಸ್ಯೆಯಾಗಿದ್ದ ಮದಾಮ್ ಕ್ಯೂರಿ, ಐನ್‌ಸ್ಟೈನರ ರಾಜೀನಾಮೆ ಪತ್ರವನ್ನು ಉಲ್ಲೇಖಿಸಿ ಅದು ಹೇಗೆ ಶುದ್ಧಾಂಗ ಅಸಮರ್ಥನೀಯ ಎಂಬುದಾಗಿ ಇವರಿಗೊಂದು ಕಾಗದ ಬರೆದರು, "ನಿಮ್ಮ [ರಾಜಿನಾಮೆ] ಪತ್ರದಿಂದ ನಾನು ತುಂಬ ಹತಾಶೆಗೊಂಡಿದ್ದೇನೆ. ಸಮಿತಿಯಿಂದ ದೂರವಾಗಲು ಮನವೊಪ್ಪಬಲ್ಲ ಕಾರಣವನ್ನು ನೀವು ಕೊಟ್ಟಿಲ್ಲವೆಂದೇ ನನಗನ್ನಿಸುತ್ತದೆ. ಅಪಾಯಕಾರಿಯೂ ದ್ವೇಷಕಾರಿಯೂ ಆದ ಮತಭೇದ ಪ್ರವಾಹಗಳು ಹರಿಯುತ್ತಿರುವ ಕಾರಣಕ್ಕಾಗಿಯೇ ಇಂದು ಅವನ್ನು [ಎಂದಿಗಿಂತ ಹೆಚ್ಚಾಗಿ] ಎದುರಿಸಿ ಕಾದಾಡುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ನೀವು ನಿಮ್ಮ ವೈಯಕ್ತಿಕ ಸ್ಥಾನಮಾನದ ಕಾರಣವಾಗಿ ಉತ್ಕೃಷ್ಟ ಪ್ರಭಾವ ಬೀರಿ ಸೈರಣೆ ಮತ್ತು ಸಮನ್ವಯ ಸಾಧಿಸಲು ಹೋರಾಟ ನಡೆಸಬಲ್ಲವರಾಗಿದ್ದೀರಿ. ಒಬ್ಬ ಪ್ರಾಮಾಣಿಕ ವ್ಯಕ್ತಿಯೆಂದು ನಾನು ಪರಿಗಣಿಸಿರುವ ನಿಮ್ಮ ಸ್ನೇಹಿತ ರ್‍ಯಾತಿನೌ ನಿಮ್ಮನ್ನು ಶಾಂತಿಯುತ ಬೌದ್ಧಿಕ ಅಂತಾರಾಷ್ಟ್ರೀಯ ಸಹಯೋಗ ಸಾಧಿಸುವುದರತ್ತ ಕನಿಷ್ಠಪಕ್ಷ ಒಂದು ಪ್ರಯತ್ನವನ್ನಾದರೂ ಮಾಡಲು ಖಂಡಿತ ಪ್ರೋತ್ಸಾಹಿಸಿರುತ್ತಿದ್ದರೆಂದು ಭಾವಿಸಿದ್ದೇನೆ. ಖಾತ್ರಿ ನೀವು ನಿಮ್ಮ ಮನಸ್ಸು ಬದಲಾಯಿಸಬಲ್ಲಿರಿ. ಇಲ್ಲಿರುವ ನಿಮ್ಮ ಮಿತ್ರರಿಗೆ ನಿಮ್ಮ ಬಗ್ಗೆ ಸಸ್ನೇಹ ಸ್ಮರಣೆಗಳಿವೆ."

ರಾಷ್ಟ್ರಗಳ ಕೂಟದ ಅಧಿಕಾರಿಗಳಾದರೂ ತೆಪ್ಪಗೆ ಕೂರಲಿಲ್ಲ. ತಮ್ಮ ಪ್ರಮುಖ ಪ್ರತಿನಿಧಿಯೊಬ್ಬನನ್ನು ಬರ್ಲಿನ್ನಿಗೆ ಕಳಿಸಿ ಐನ್‌ಸ್ಟೈನರ ಮನವೊಲಿಸಲು ಪ್ರಯತ್ನಿಸಿದರು. ಐನ್‌ಸ್ಟೈನ್-ರಹಿತ ಕೂಟ ನಡುಗೂಟ ಕಳೆದ ಡೇರೆಯೆಂದು ಅವರಿಗೆ ತಿಳಿದಿತ್ತು. ಕೊನೆಗೂ ಇವರು ರಾಜಿನಾಮೆ ಪತ್ರ ಹಿಂತೆಗೆದುಕೊಂಡರು. ಆದರೆ ಸದ್ಯದಲ್ಲಿಯೇ ಜಪಾನ್ ಪ್ರವಾಸ ತೆರಳಿದ್ದುದರಿಂದ ಸಮಿತಿಯ ಮೊದಲ ಸಭೆಯಲ್ಲಿ ಹಾಜರಿರಲಾಗಲಿಲ್ಲ.

ಜಪಾನ್ ಪ್ರವಾಸ ಮುಗಿಸಿ ಮರಳುತ್ತಿದ್ದಾಗ ಇವರಿಗೊಂದು ಆಘಾತ ಕಾದಿತ್ತು : ಬಲಿಷ್ಠ ಫ್ರಾನ್ಸ್ ದುರ್ಬಲ ಜರ್ಮನಿಯ ಗಡಿಪ್ರದೇಶಗಳ ಮೇಲೆ ದಾಳಿ ಹೂಡಿ ಅದನ್ನು ಆಕ್ರಮಿಸಿತ್ತು. ಜರ್ಮನಿ ಯುದ್ಧಪರಿಹಾರಧನವನ್ನು ಕ್ಲುಪ್ತವಾಗಿ ಪಾವತಿಸಲು ತಪ್ಪಿದ್ದರಿಂದ ಈ ಶಿಕ್ಷೆ.

ರಾಷ್ಟ್ರಗಳ ಕೂಟ (ಇದರಲ್ಲಿ ಫ್ರಾನ್ಸಿನದೇ ಮೇಲುಗೈ, ಜರ್ಮನಿ ಇದರ ಸದಸ್ಯ ಅಲ್ಲ) ಈ ದುರಾಕ್ರಮಣವನ್ನು ತಡೆಗಟ್ಟುವುದರಲ್ಲಿ, ಕೊನೆಯ ಪಕ್ಷ ಖಂಡಿಸುವುದಲ್ಲಾದರೂ, ವಿಫಲವಾಗಿತ್ತೆಂದು ಐನ್‌ಸ್ಟೈನ್ ಭಾವಿಸಿದರು. ೧೯೨೩ ಮಾರ್ಚ್ ೨೧ರಂದು ತಮ್ಮ (ಎರಡನೆಯ) ರಾಜಿನಾಮೆ ಪತ್ರವನ್ನು ರವಾನಿಸಿಯೇ ಬಿಟ್ಟರು. ಅದೇ ವೇಳೆ ಅದನ್ನು ಪತ್ರಿಕೆಗಳಿಗೂ ಪ್ರಕಟಣೆಗಾಗಿ ಬಿಡುಗಡೆ ಮಾಡಿದರು :

"ರಾಷ್ಟ್ರಗಳ ಕೂಟಕ್ಕೆ ತನ್ನ ಕಾರ್ಯಸಾಧನೆ ಮಾಡಲು ಬೇಕಾಗುವ ಸಾಮರ್ಥ್ಯವಾಗಲಿ ಸುನಾಮವಾಗಲಿ (goodwill) ಇಲ್ಲವೆಂದು ಈಚೆಗೆ ಖಚಿತವಾಗಿ ಕಂಡುಕೊಂಡಿದ್ದೇನೆ. ಪೂರ್ಣ ಶಾಂತಿವಾದಿಯಾದ ನಾನು ಈ ಕೂಟದೊಂದಿಗೆ ಯಾವುದೇ ಸಂಬಂಧ ಹೊಂದಿರುವುದು ಒಳ್ಳೆಯದಲ್ಲವೆಂದು ಭಾವಿಸುವುದರಿಂದ ನನ್ನ ಹೆಸರನ್ನು ಸಮಿತಿ ಸದಸ್ಯರ ಯಾದಿಯಿಂದ ತೊಡೆದುಹಾಕಬೇಕೆಂದು ಕೋರುತ್ತೇನೆ."

ಲಿಖಿತ ರಾಜಿನಾಮೆಪತ್ರ ಕರಗತವಾಗುವ ಮುನ್ನವೇ ಅದನ್ನು ದೈನಿಕಗಳಲ್ಲಿ ಕಂಡು ಓದಿದ ಸಮಿತಿಯ ಇತರ ಸದಸ್ಯರು ವಿಚಲಿತರಾದರು. ತನ್ನ ವ್ಯಸನವನ್ನು ಸಮಿತಿಯು ಐನ್‌ಸ್ಟೈನರಿಗೆ ಕಾಗದ ಬರೆದು ತೋಡಿಕೊಂಡಿತು. ಸಮಿತಿಯ ಒಂದು ಸಭೆಗೂ ಇವರು ಬರದೆ, ಅದರ ಸಾಮರ್ಥ್ಯ ದೌರ್ಬಲ್ಯಗಳೇನೆಂಬುದನ್ನು ಒಮ್ಮೆಯೂ ವಿಚಾರಿಸದೆ, ಅದು ಏನು ಮಾಡಬೇಕೆಂಬುದನ್ನು ಸೂಚಿಸದೆ, ಈಗ ಅದರ ಸಮಜಾಯಿಷಿಯನ್ನು ಕೇಳುವ ವ್ಯವಧಾನವನ್ನು ಕೂಡ ತೋರಿಸದೆ, ಏಕಪಕ್ಷೀಯವಾಗಿ, ರಾಜಿನಾಮೆ ಪತ್ರವನ್ನು ಸಾರ್ವಜನಿಕವಾಗಿ ಪ್ರಕಟಿಸಿದ್ದು ಸದಸ್ಯರಿಗೆ ತುಂಬ ನೋವು ಉಂಟುಮಾಡಿತ್ತು. ಯುದ್ಧಜರ್ಜರಿತ ಯೂರೋಪಿನ ಮಾನವೀಯ ಪ್ರಜ್ಞೆಯ ಅಂಕುರ ಪುನಃ ತಲೆ ಎತ್ತಲು ಹೆಣಗುತ್ತಿದ್ದ ಆ ಸಂದರ್ಭದಲ್ಲಿ ಅದಕ್ಕೆ ಯೋಗ್ಯವಾದ ಬೆಳಕು ನೀರು ಉಣಿಸು ಊಡಲು ಸಮರ್ಥರಾದ ಐನ್‌ಸ್ಟೈನ್ ಸಮಿತಿಯಿಂದ ಹೊರಹೊರಟದ್ದು ಎಲ್ಲ ಶಾಂತಿಪ್ರಿಯರಿಗೂ ಕುಠಾರಾಘಾತವಾಗಿ ಬಡಿದಿತ್ತು : "ಸಹೃದಯ ವ್ಯಕ್ತಿಗಳೆಲ್ಲರ ಬೆಂಬಲವಿಲ್ಲದೆ ರಾಷ್ಟ್ರಗಳ ಕೂಟದ ಕಾರ್ಯವನ್ನು ನೆರವೇರಿಸುವುದು ಅಸಾಧ್ಯವೆಂದು ತಿಳಿದಿರುವ ಅವರು [ಯೂರೋಪಿನಲ್ಲಿ ಶಾಂತಿ ನೆಲಸಬೇಕೆಂದು ಬಯಸುವವರು] ಈ ಸಮಿತಿಗೆ ನಿಮ್ಮಂಥ ಘನತೆ ಹೊಂದಿದ ಮಹಾನುಭಾವರು ತಮ್ಮ ವ್ಯಕ್ತಿತ್ವದ ಖ್ಯಾತಿ ಗೌರವಗಳನ್ನು ಧಾರೆ ಎರೆದಿರುವರೆಂದು ತಿಳಿದು ಉತ್ಸಾಹಿಗಳಾಗಿದ್ದರು. ಇಂದು ಅವರ ಸದಾಶಯಗಳಿಗೆ ನೀರ್ಗಲ್ಲನ್ನು ಎರಚಿದಂತಾಗಿದೆ. ಆದರೆ ಅವರ ಈ ಕಾರ್ಯದ ಬಗ್ಗೆ ಅವರಿಗಿರುವ ವಿಶ್ವಾಸ, ದೈನಂದಿನ ಹೋರಾಟದ ಪರಿಣಾಮವಾಗಿ ಸಾಕಷ್ಟು ದೃಢಗೊಂಡಿದೆ. ಸದ್ಯದ ಧಕ್ಕೆಯಿಂದ ಅದು ಶಿಥಿಲಗೊಂಡಿಲ್ಲ. ಮಾನ್ಯ ಐನ್‌ಸ್ಟೈನರೇ! ಇಂದು ನಿಮ್ಮನ್ನು ನಮ್ಮಿಂದ ಬೇರ್ಪಡಿಸಿರುವ ಹಾದಿ ಒಂದಲ್ಲ ಒಂದು ದಿನ ನಿಮ್ಮನ್ನು ನಮ್ಮಲ್ಲಿಗೆ ತಂದೇ ತರಲಿದೆ ಎಂಬ ಪ್ರಾಮಾಣಿಕ ನಂಬಿಕೆ, ಮತ್ತು ದೃಢ ಭರವಸೆಯಿಂದ ಈಗ ಪ್ರಾರಂಭವಾಗಿರುವ ಕಾರ್ಯವನ್ನು ನಾವು ಮುಂದುವರಿಸಿಕೊಂಡು ಹೋಗುತ್ತೇವೆ."

ಐನ್‌ಸ್ಟೈನ್ ಈ ಸಲ ತಮ್ಮ ನಿಲವನ್ನು ಬದಲಿಸಲಿಲ್ಲ. ಆದರೆ ತಾವು ರಾಜಿನಾಮೆ ಸಲ್ಲಿಸಿದ್ದು ಸ್ವಲ್ಪ ದುಡುಕಿನ ಹೆಜ್ಜೆಯಾಯಿತೊ ಎಂಬ ಸಂದೇಹ ಇವರಿಗೆ ಬರದಿರಲಿಲ್ಲ. ಕೆಲವು ತಿಂಗಳ ತರುವಾಯ ಇವರು ಮದಾಮ್ ಕ್ಯೂರಿಯವರಿಗೆ ಬರೆದ ಕಾಗದದಲ್ಲಿ ಇದರ ಬಗ್ಗೆ ಪ್ರಸ್ತಾವಿಸಿದ್ದರು : "ಪೂರ್ಣ ತೆರೆದ ಮನದಿಂದ ಅಭಿಪ್ರಾಯಗಳನ್ನು ವಿನಿಮಯಿಸಿಕೊಳ್ಳುವುದು [ರಾಷ್ಟ್ರಗಳ ಕೂಟದ] ಸಂಘಟನೆಗೆ ಗಾಸಿ ತರಲಾರದೆಂಬುದು ನನ್ನ ಭಾವನೆಯಾಗಿತ್ತು. ನಾನು ತಪ್ಪಿದೆನೊ, ಏನೊ. ಆದರೆ ಅದು ನನ್ನ ದೃಢ ನಂಬಿಕೆಯಾಗಿತ್ತು."

## ನೇಸರು ಮೂಡುವ ನಾಡಿಗೆ ಪಯಣ

ಐನ್‌ಸ್ಟೈನರಿಗೆ ಸಂಗೀತದ ಬಗ್ಗೆ ವಿಶೇಷ ಪ್ರೀತಿ. ಕಠಿಣ ಬೌದ್ಧಿಕ ಪರಿಶ್ರಮಾನಂತರ ಆವಶ್ಯಕವಾಗಿ ಬೇಕಾಗುವ ವಿರಾಮಭಾವವನ್ನು ಸಂಗೀತ ಇವರಿಗೆ ಒದಗಿಸುತ್ತಿತ್ತು. ಇಪ್ಪತ್ತರ ದಶಕದ ತರುಣದಲ್ಲಿ ಇವರು ಜಪಾನಿಗೆ ಭೇಟಿ ನೀಡಿದಾಗ ಅಲ್ಲಿ ಇವರಿಗೊಂದು ಅಸಾಧಾರಣ ಸುಶ್ರಾವ್ಯನಾದಭರಿತ ಪಿಟೀಲನ್ನು ಉಡುಗೊರೆ ಕೊಡಲಾಗಿತ್ತು. ಆದರೆ ದುರದೃಷ್ಟ ; ಇದನ್ನು ಜರ್ಮನಿಯ ಬದಲಾಗುತ್ತಿದ್ದ ತೇವಮಯ ಹವೆಗೆ ಕೊಂಡೊಯ್ದಾಗ ಇದರಲ್ಲಿ ಬಿರುಕು ಕಾಣಿಸಿಕೊಂಡಿತು. ದುರಸ್ತಿಗೊಳಿಸಲಾಯಿತು. ಆದರೆ ಪೂರ್ವದ ಮಧುರನಾದ ಮತ್ತೆಂದೂ ಇದರಿಂದ ಹೊಮ್ಮಲಿಲ್ಲ.

**ಕಾರ್ನೀಲಿಯಸ್ ಲ್ಯಾಂಕ್ಜೋಸ್**

ಜಪಾನಿನ ಒಬ್ಬ ಸ್ವಾರ್ಥಿ ಪ್ರಕಾಶಕ ಐನ್‌ಸ್ಟೈನರನ್ನು ತನ್ನ ನಾಡಿಗೆ ಆಮಂತ್ರಿಸಿದ—ಅಲ್ಲಿಯ ವಿಶೇಷ ವರ್ಣಮಯ ವೈವಿಧ್ಯ ನೋಡಲು, ಸೌಂದರ್ಯಾರಾಧಕ ಜನರೊಡನೆ ವ್ಯವಹರಿಸಲು ಮತ್ತು ಆ ಜನರಿಗೆ ಶಾಂತಿಯ ಹಾಗೂ ವಿಜ್ಞಾನದ ಸಂದೇಶ ನೀಡಲು. ಆರ್ಥಿಕವಾಗಿ ಕಷ್ಟಸ್ಥಿತಿಯಲ್ಲಿಯೇ ಇದ್ದ—ಅನುಕೂಲಸ್ಥಿತಿಯಲ್ಲಿ ಖಂಡಿತ ಇರದಿದ್ದ—ಐನ್‌ಸ್ಟೈನರಿಗೆ ಈ ಸುದೂರ ನೌಕಾಯಾತ್ರೆ ಶ್ರಮದಾಯಕವಾಯಿತು. ಆರ್ಥಿಕವಾಗಿ ಲಾಭದಾಯಕವಾಗಲಿಲ್ಲ. ಇವರ ಖ್ಯಾತಿಯ ಉಜ್ಜ್ವಲ ಪ್ರಕಾಶದಲ್ಲಿ ಪ್ರಕಾಶಕ ಮಹಾಶಯ ಲಾಭಗಿಟ್ಟಿಸಿಕೊಂಡ. ಎಂದೇ ಆತ ಸ್ವಾರ್ಥಿ.

೧೯೨೨ ಅಕ್ಟೋಬರಿನಲ್ಲಿ ಐನ್‌ಸ್ಟೈನ್ ಪತ್ನಿಸಮೇತ ಜಪಾನಿನತ್ತ ನೌಕಾಯಾನ ತೊಡಗಿದರು. ಹಾದಿಯಲ್ಲಿ ಕೊಲಂಬೊ ನಗರ. ಅಲ್ಲಿ ಒಂದಿಷ್ಟು ವಿಶ್ರಾಂತಿ. ಅತ್ತಿತ್ತ ಹೋಗಲು ವಾಹನವೆಂದರೆ ಮನುಷ್ಯ ಎಳೆವ ರಿಕ್ಷಾ. ಅನಿವಾರ್ಯವಾಗಿ ಈ ಅಮಾನುಷ ಸವಾರಿ ಮಾಡಲೇಬೇಕಾಗಿ ಬಂದ ಐನ್‌ಸ್ಟೈನ್ ತುಂಬ ನೊಂದರು, "ಸೋದರ ಮನುಷ್ಯನೊಬ್ಬನನ್ನು ಹೇರೆತ್ತಿನಂತೆ ನಡೆಸಿಕೊಂಡುದರಲ್ಲಿ ನನ್ನ ಹೊಣೆಯೂ ಸೇರಿತ್ತೆಂಬುದನ್ನು ಅತ್ಯಂತ ಕಳವಳದಿಂದ ಸ್ಮರಿಸುತ್ತೇನೆ. ಆದರೆ ಇದರ ಬಗ್ಗೆ ಆಗ ನಾನು ಏನೂ ಮಾಡಲಾರದವನಾಗಿದ್ದೆ."

ಅತಿ ಪೂರ್ವದೇಶವಾದ ಅಪೂರ್ವ ಜಪಾನನ್ನು ಇವರು ಶಾಂಘಾಯ್ ಮಾರ್ಗವಾಗಿ ತಲಪಿದರು (ನವಂಬರ್ ೨೦). ಜರ್ಮನಿಯ ಈ ಋಷಿಯನ್ನು, ವಿಜ್ಞಾನದ ಈ ಸಂತನನ್ನು ಜಪಾನೀಯರು ವಿಶೇಷ ಆದರ ಸಂತೋಷ ಸಂಭ್ರಗಳಿಂದ ಸ್ವಾಗತಿಸಿದರು. ಯಾಂತ್ರಿಕ ಬಿರುಸುತನಗಳಿಗೂ ವ್ಯಾವಹಾರಿಕ ಔಪಚಾರಿಕತೆಗಳಿಗೂ ಒಗ್ಗಿಹೋಗಿದ್ದ ಐರೋಪ್ಯಪ್ರಜ್ಞೆ, ಮಾನವನ ಅನಿರ್ಬಂಧಿತ ಉತ್ಸಾಹ ಪ್ರದರ್ಶನಕ್ಕೂ ನಿರಾಡಂಬರ ಸಹಜವರ್ತನೆಗೂ ಹೆಸರಾಂತಿದ್ದ ಪೌರಸ್ತ್ಯ ಪ್ರಜ್ಞೆಯ ಮುಂದೆ ಅಪ್ರತಿಭವಾಗದಿರಲಿಲ್ಲ. ಆದರೆ ಐನ್‌ಸ್ಟೈನರ ವಿಶಿಷ್ಟ ವ್ಯಕ್ತಿತ್ವಕ್ಕೆ—ಸರಳ ನಿರಾಡಂಬರತೆ ಮತ್ತು ಮುಗ್ಧ ವಿಸ್ಮಯ ಅದರ ಜೀವಸ್ವರಗಳಾದ್ದರಿಂದ—ಜಪಾನಿನ ಸ್ವಾಗತ ಅನಿರೀಕ್ಷಿತವೆಂದಾಗಲಿ ಊಹಾತೀತವೆಂದಾಗಲಿ ಅನ್ನಿಸಲಿಲ್ಲ.

ಸಾರ್ವಜನಿಕ ಭಾಷಣ. ಸಭಾಂಗಣ ಆಸಕ್ತ ಶ್ರೋತೃಗಳಿಂದ ತುಂಬಿ ಬಿರಿಯುತ್ತಿದೆ. ಆ ಜನರ ವಿಶಿಷ್ಟ ಆಕಾರ ರೂಪ ನಡವಳಿಕೆಗಳೂ ಬಣ್ಣದೋಕುಳಿ ಹುಚ್ಚು ಹೊಳೆ ಹರಿದಂತಿದ್ದ ಉಡುಗೆ ತೊಡಿಗೆಗಳೂ ಐನ್‌ಸ್ಟೈನರಿಗೆ ವಿಶೇಷ ಹುಮ್ಮಸ್ಸು ನೀಡಿವೆ. ಅಪರಾಹ್ನ ೧-೩೦ ಗಂಟೆಗೆ ಆರಂಭವಾದ ಭಾಷಣದ ಮೊದಲ ದೇಖಾವೆ ೪-೩೦ ಗಂಟೆಗೆ ಮುಗಿದಿದೆ. ಒಂದು ಗಂಟೆಯ ವಿರಾಮಾನಂತರ, ೫-೩೦ ಗಂಟೆಗೆ, ಮತ್ತೆ ಇವರು ವೇದಿಕೆ ಏರಿದ್ದಾರೆ. ಅದೇ ಜನ, ಅದೇ ಆಸಕ್ತಿ, ಅದೇ ಲವಲವಿಕೆ ! ಎರಡನೆಯ ದೇಖಾವೆ ರಾತ್ರಿ ೮-೩೦ ಗಂಟೆಗೆ ಮುಗಿದಿದೆ. ಆದರೂ ಜನರ ಸಂಭ್ರಮ

ಮೊದಲ ಬೈಠಕ್ಕಿನ ಆರಂಭದಲ್ಲಿದ್ದಷ್ಟೇ !

ಭಾಷಣದ ಭಾಷೆ ಜರ್ಮನ್, ವಿಷಯ ಸಾಪೇಕ್ಷತಾಸಿದ್ಧಾಂತ, ಸಮರ್ಥ ದ್ವಿಭಾಷಿಯೊಬ್ಬನಿಂದ ಜಪಾನೀಭಾಷೆಗೆ ಅನುವಾದ. ತಜ್ಞರಲ್ಲದ ಆ ಮಂದಿಗೆ—ತಜ್ಞರಲ್ಲಿಯೇ ಬಹುಸಂಖ್ಯಾತರಿಗೆ ಅಂದು ಸಾಪೇಕ್ಷತಾ ಸಿದ್ಧಾಂತ ಒಡೆಯಲಾಗದ ಕಲ್ಗಾಯಿ ಆಗಿತ್ತು—ಯಾವ ಭಾಷೆಯಾದರೂ ಒಂದೇ. ನಿಜಕ್ಕೂ ಅವರ ಜೀವನೋತ್ಸಾಹವೇ ಆ ಸಹನೆ ಸ್ಥೈರ್ಯಗಳ ಹಿಂದಿದ್ದ ರಹಸ್ಯ.

ಮುಂದಿನ ಭಾಷಣದ ಕಾಲಾವಧಿಯನ್ನು ಐನ್‌ಸ್ಟೈನ್ ಉದ್ದೇಶಪೂರ್ವಕವಾಗಿ ಮಿತಗೊಳಿಸಿದ್ದರು.

ಮರುದಿನ ರೈಲಿನಲ್ಲಿ ಇವರು ಪಯಣಿಸುತ್ತಿದ್ದಾಗ ಸಹಪ್ರಯಾಣಿಕರು ಹಲವರು ಇವರನ್ನು ಗುರುತಿಸಿ ಪಿಸಪಿಸ ಮಾತಾಡತೊಡಗಿದ್ದು ಇವರ ಗಮನಕ್ಕೆ ಬಂತು. ಅರ್ಥವಾಗಲಿಲ್ಲ. ತನ್ನನ್ನು ಕುರಿತೇ ಆ ಮಾತು ಇರಬೇಕೆಂಬುದಂತೂ ಖಾತ್ರಿ ಆಯಿತು :

"ಮಿತ್ರರೇ ! ನೀವು ನನ್ನ ಬಗ್ಗೆ ಮಾತಾಡುತ್ತಿರುವಿರೆಂದು ತೋರುತ್ತದೆ. ದಯಮಾಡಿ ನನಗೂ ಅದೇನೆಂದು ಆಲಿಸುವ ಒಂದಿಷ್ಟು ಸುಖ ಒದಗಿಸುವಿರಾ ? ಧೈರ್ಯವಾಗಿ ಹೇಳಿ."

ಕೊಂಚ ಹಿಂಜರಿಕೆ. ಕೊನೆಗೊಬ್ಬ ದಿಟ್ಟತನದಿಂದ ಮುಂಬಂದು ನಿಜಸಂಗತಿಯನ್ನು ಅರುಹಿಯೇಬಿಟ್ಟ, "ಅದನ್ನು ನೇರವಾಗಿ ನಿಮಗೆ ಹೇಳಲು ಅಳುಕಾಯಿತು. ನಿಮ್ಮ ಮೊದಲನೆಯ ಭಾಷಣಕ್ಕಿಂತ ಎರಡನೆಯ ಭಾಷಣ ಮೊಟಕಾದ್ದರಿಂದ ಈ ಎರಡನೆಯದನ್ನು ಏರ್ಪಡಿಸಿದವರಿಗೆ ಮುಖಭಂಗವಾಗಿದೆ. ತಮ್ಮನ್ನು ಲಘುವಾಗಿ ಕಾಣಲಾಗಿದೆ ಎಂದು ಇವರು ಭಾವಿಸಿದ್ದಾರೆ." ಜಪಾನೀಯರ ಸಹನೆ, ಕುತೂಹಲ, ಸೌಹಾರ್ದ ನಿಜಕ್ಕೂ ಅದ್ವಿತೀಯ, ಅಪೂರ್ವ, ಆಶ್ಚರ್ಯಕರ ಎಂದು ಇವರಿಗನ್ನಿಸಿತು.

"ಜಪಾನ್ ಅದ್ಭುತ. ಸುಂದರ ನಡವಳಿಕೆ. ಪ್ರತಿಯೊಂದರಲ್ಲೂ ಆಸಕ್ತಿ, ಕಲಾಭಿಜ್ಞತೆ ಲೋಕಪ್ರಜ್ಞೆಸಹಿತವಾದ ನಿಷ್ಕಾಪಟ್ಯ. ವರ್ಣಮಯ ದೇಶದಲ್ಲಿ ಸುಸಂಸ್ಕೃತ ಜನ." ಇದು ಜಪಾನನ್ನು ಕುರಿತು ಮಿತ್ರರೊಬ್ಬರಿಗೆ ಇವರು ಬರೆದ ಟಿಪ್ಪಣಿ.

೧೯೨೪ ಏಪ್ರಿಲ್ ೨೮ರಂದು ಬಾರ್ನ್ ದಂಪತಿಗಳಿಗೆ ಬರೆದ ಕಾಗದದಲ್ಲಿ ಜಪಾನ್ ಸಂಸ್ಕೃತಿ ಬಗ್ಗೆ ಉಲ್ಲೇಖಿಸಿದ್ದಾರೆ : "ಜಪಾನಿನಲ್ಲಿ ವ್ಯಕ್ತಿ ತನ್ನ ವಿಶಾಲ ಪರಿಸರದೊಡನೆ ಸುಸಂಗತವಾಗಿ ಮೇಳವಿಸಿಕೊಂಡಿದ್ದಾನೆ. ಹೀಗಾಗಿ ಆತ ತನ್ನ ಅನುಭವವನ್ನು ಸ್ವಂತದಿಂದ ಪಡೆಯುವುದಲ್ಲ. ಬದಲು, ಮುಖ್ಯವಾಗಿ ಸಮುದಾಯದಿಂದ ಪಡೆಯುತ್ತಾನೆ. ವ್ಯಕ್ತಿ ನೆಮ್ಮದಿಯಿಂದಿದ್ದಾನೆ ಎಂಬ ಪ್ರಜ್ಞೆಯನ್ನು ಜಪಾನಿನ ಸಮಾಜ ಹಾಗೂ ಕಲೆ ಸ್ಫೂರ್ತಿಗೊಳಿಸುವುದರ ಕಾರಣ ನಿಜಕ್ಕೂ ಇದು. ನಾವು ಎಳೆಯರಾಗಿದ್ದಾಗ ಪ್ರತಿಯೊಬ್ಬರೂ ಇಂಥ ನೆಮ್ಮದಿಗಾಗಿ ಹಾತೊರೆದೆವು. ಆದರೆ ಇದರ ಅಸಾಧ್ಯತೆಯನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು."

## ಪ್ಯಾಲೆಸ್ಟೈನಿನ ಪವಿತ್ರ ಪೀಠಾರೋಹಣ

ಝಿಯನಿಸ್ಟ್ ಸಂಘಗಳ ಪೈಕಿ "ಕಾರ್ಯಶೀಲ ಪ್ಯಾಲೆಸ್ಟೈನ್" ಎಂಬ ಸಂಘದ ಕಾರ್ಯ ಅಲ್ಲಿ ಬಾಳುತ್ತಿರುವ—ತಮ್ಮ ಕೈಗೆಲಸದಿಂದ ಮರುಭೂಮಿಯಲ್ಲಿ ನಂದನವನವನ್ನು ಸೃಷ್ಟಿಸುತ್ತಿರುವ—ಸೇವಾನಿರತ ಜನರಿಗೆ ಪ್ರತ್ಯಕ್ಷಲಾಭದಾಯಕವಾದದ್ದಾಗಿದೆ. ಸಮಗ್ರ ಯೆಹೂದ್ಯ ಜನಾಂಗದಿಂದ ಆಯಲಾದ ಸ್ವಯಂಪ್ರೇರಿತ ಕಾರ್ಯಧೀರರಿವರು—ದಷ್ಟಪುಷ್ಟ, ಆತ್ಮವಿಶ್ವಾಸಭರಿತ ಮತ್ತು ಸ್ವಾರ್ಥ

ರಹಿತ ಸೇವಾಪರಾಯಣರು. ಹೆಚ್ಚು ದುಡ್ಡು ಕೊಡುವಾತನಿಗೆ ತಮ್ಮ ದುಡಿಮೆಯನ್ನು ಮಾರುವ ಮೂಢ ಕಾರ್ಮಿಕರು ಇವರಲ್ಲ. ಇವರು ಸುಶಿಕ್ಷಿತರು. ಬೌದ್ಧಿಕವಾಗಿ ಸುಟಿ ಮಂದಿ. ಸ್ವತಂತ್ರ ಚಿಂತನಶೀಲರು. ಅಲಕ್ಷಿಸಲ್ಪಟ್ಟ ನೆಲದ ಮೇಲೆ ಇವರು ನಡೆಸುವ ಶಾಂತಿಯುತ ಹೋರಾಟದ ಲಾಭ ಸಮಸ್ತ ಯೆಹೂದ್ಯ ಜನಾಂಗಕ್ಕೆ ಒದಗುತ್ತದೆ. . . ಅಲ್ಲದೇ ಈ ಕಾರ್ಯಕಾರಿ ಜನರು—ಅಂದರೆ ಕಾರ್ಮಿಕವರ್ಗ—ಮಾತ್ರ ಅರಬ್ಬರ ಜೊತೆ ಮಧುರ ಸಂಬಂಧಗಳನ್ನು ಸ್ಥಾಪಿಸಿ ಬೆಳೆಸಬಲ್ಲರು. ಝಿಯನಿಸಮ್ಮಿನ ಅತಿಮುಖ್ಯ ರಾಜಕೀಯ ಕರ್ತವ್ಯವಿದು.

ಐನ್‌ಸ್ಟೈನ್

ಜಪಾನಿನಿಂದ ಜರ್ಮನಿಗೆ ಮರಳುವ ಹಾದಿಯಲ್ಲಿ ಐನ್‌ಸ್ಟೈನ್, ಯೆಹೂದ್ಯರ ಪುರಾತನ ಮತ್ತು ಪವಿತ್ರ ನೆಲೆಯಾದ ಪ್ಯಾಲೆಸ್ಟೈನಿಗೆ ಹೋದರು. ಪ್ರಮುಖ ನಗರ ಮತ್ತು ರೇವು ಟೆಲ್ ಅವೀವಿನಲ್ಲಿ, ೧೯೨೩ ಫೆಬ್ರುವರಿ ೨ರಂದು ಇಳಿದಾಗ, ಇವರು ತುಂಬ ದಣಿದಿದ್ದರು—ಇಡೀ ರಾತ್ರಿ ನಿದ್ರಿಸದೆ ಕುಳಿತಿದ್ದರೊ ಎಂಬಂತೆ. ನಿಜಕ್ಕೂ ಆದದ್ದಾದರೂ ಇದೇ. ಈ ಮಹಾರಾಯ ನಿಗಾಗಿ ಮೇಲುದರ್ಜೆಯ ಕ್ಯಾಬಿನ್ನನ್ನು ಕಾದಿರಿಸಲಾಗಿತ್ತು. ಆದರೆ ಅದರ ಶ್ರೀಮಂತಿಕೆ ಇವರಲ್ಲಿ ಒಗ್ಗದಿಕೆಗೆ ಕಾರಣವಾಗಿತ್ತು. ಹೀಗಾಗಿ ಸಾದಾದರ್ಜೆಯಲ್ಲಿ ಸಾಧಾರಣ ಪಯಣಿಗನಾಗಿ ಕುಳಿತು 'ಕಷ್ಟ' ಅನುಭವಿಸಿದ್ದರು—ಸ್ವಯಂಕೃತಾಪರಾಧ !

ಯೆಹೂದ್ಯರು ಅಖಂಡ ಜನಾಂಗವಾಗಿ ತಮ್ಮ ಜೀವನಮೌಲ್ಯಗಳನ್ನು ಸಂವರ್ಧಿಸಿಕೊಳ್ಳಬಲ್ಲ ಕೇಂದ್ರದೇವಾಲಯ ಪ್ಯಾಲೆಸ್ಟೈನ್ ಆಗಬೇಕೆಂಬುದು ಐನ್‌ಸ್ಟೈನರ ಆಶಯ, ಆದರ್ಶ. ಈ ಪ್ರಯತ್ನದಲ್ಲಿ ಯೆಹೂದ್ಯರು ಯಾವುದೇ ತೆರನಾದ ರಾಷ್ಟ್ರೀಯತೆಗೂ—ಇತರ ಜನಾಂಗಗಳಿಗಿಂತ ತಾವು ಶ್ರೇಷ್ಠರು ಎಂಬ ಅಹಂಭಾವ—ಬಲಿ ಆಗಬಾರದು ; ಹೀಗಾದದ್ದಾದರೆ ಸ್ಥಳೀಯ ಅರಬ್ಬರೊಡನೆ ಸಹಜೀವನ ಅಸಾಧ್ಯ ; ಅಲ್ಲಿಗೆ ಐರೋಪ್ಯ ದೇಶಗಳಲ್ಲಿಯ ವಿರುದ್ಧ ರಾಷ್ಟ್ರೀಯತೆ ಗಳ ತಾಡನೆಗೆದುರಾಗಿ ರಕ್ಷಣೆ ಪಡೆಯಲೆಂದು ಹೊರಟ ಯೆಹೂದ್ಯ ಜನಾಂಗವು ಆ ರಾಷ್ಟ್ರೀಯತೆ ಗಳ ಬದಲಾಗಿ ಬೇರೊಂದು ರಾಷ್ಟ್ರೀಯತೆಯನ್ನು ಸ್ಥಾಪಿಸಿದಂತಾಗುವುದೇ ವಿನಾ ಪ್ರೇಮ ಸೌಹಾರ್ದಮಯ ಪರಿಸರವನ್ನಲ್ಲ ; ಯಾವುದೇ ಛಾಪಿನ ರಾಷ್ಟ್ರೀಯತೆಯೂ ಪ್ರಪಂಚಶಾಂತಿಗೆ ಮಾರಕ—ಇವೇ ಮುಂತಾದ ಕನಸಿನ ಲೋಕದ, ಎಂದೂ ನೆಲಕ್ಕೆ ಇಳಿಯದ ಆದರ್ಶಗಳನ್ನು ಮೆಲುಕುಹಾಕುತ್ತಿದ್ದ ಐನ್‌ಸ್ಟೈನರ ನಿಷ್ಕಪಟ ಮತ್ತು ಋಜುವರ್ತನೆ ಅನೇಕ ವೇಳೆ ಇವರ ಆತಿಥೇಯರಿಗೆ ಮುಜಗರ ತಂದೊಡ್ಡಿದುದಿತ್ತು.

ಯೆಹೂದ್ಯರ ಪ್ರಾಚೀನ ನೆಲೆ ಪ್ಯಾಲೆಸ್ಟೈನಿನಲ್ಲಿ ಪರಮಶ್ರೇಷ್ಠ ಯೆಹೂದ್ಯ ಐನ್‌ಸ್ಟೈನರ ಪ್ರಥಮ ಸಾರ್ವಜನಿಕ ಭಾಷಣ. ಎಲ್ಲೆಲ್ಲೂ ಅಭಿಮಾನ, ಕುತೂಹಲ, ಉತ್ಸಾಹ, ಉಲ್ಲಾಸ, ಯಾವ ಬಂದೋಬಸ್ತಿಗೂ ಮಣಿಯದೆ ಜನ ಹುಚ್ಚುಹೊಳೆಯಂತೆ ಉಕ್ಕುತ್ತಿದ್ದಾರೆ—ಯೆಹೂದ್ಯ ಕುಲ ತಿಲಕನನ್ನು ನೋಡಲು, ಶಾಂತಿದೂತನ ಮಾತು ಕೇಳಲು, ಪವಾಡಪುರುಷನ ಸಾನ್ನಿಧ್ಯದಲ್ಲಿರಲು, ಮುಂದಿನ ತಿರುಗಾಸು ತೆರೆಯಲಿರುವ ಸುಂದರ ಹೊಂಗನಸನ್ನು ಈಗಲೇ ಕಾಣಲು !

ಭಾಷಣ ಆರಂಭವಾಯಿತು, "ಇಂದು ನನ್ನ ಬದುಕಿನ ಅತ್ಯಂತ ಮಹತ್ತ್ವದ ದಿನವೆಂದು ಭಾವಿಸಿದ್ದೇನೆ. ಈ ತನಕ ನಾನು ಯೆಹೂದ್ಯಜೀವನದಲ್ಲಿ ವ್ಯಸನಕರವಾದ ಒಂದು ಅಂಶ ಕಂಡಿದ್ದೇನೆ—ಸ್ವಂತ ಜನರನ್ನೇ ಮರೆತುಬಿಟ್ಟಿರುವುದು. ಇಂದು ಯೆಹೂದ್ಯ ಮಂದಿ ತಮ್ಮನ್ನು ತಾವು ಪರಿಗಣಿಸಿಕೊಳ್ಳುತ್ತಿರುವುದನ್ನೂ ಪ್ರಪಂಚದಲ್ಲಿ ತಾವೊಂದು 'ಜನ' ಎಂಬುದಾಗಿ ಇತರರು ತಮ್ಮನ್ನು ಪರಿಗಣಿಸುವಂತೆ ಮಾಡುತ್ತಿರುವುದನ್ನೂ ನೋಡಿ ನನಗೆ ಸಂತೋಷವಾಗಿದೆ.

ಇದೊಂದು ಮಹಾಯುಗ, ಯೆಹೂದ್ಯಜೀವವು ಮುಕ್ತವಾದ ಯುಗ. ಪ್ರಪಂಚದಲ್ಲಿ ಇದನ್ನು ಯಾರೂ ನಾಶಗೊಳಿಸಲಾಗದಂತೆ ಝಿಯನಿಸ್ಟ್ ಚಳವಳಿ ಇದನ್ನು ಸಾಧಿಸಿದೆ."

ಪ್ಯಾಲೆಸ್ಟೈನಿನಲ್ಲಿಯೇ ನೆಲಸಬೇಕೆಂದು ಸಲ್ಲಿಸಿದ ಪ್ರಾರ್ಥನೆಯನ್ನು ಐನ್‌ಸ್ಟೈನ್ ಅದು ಖಂಡಿತ ಸಾಧ್ಯವಾಗದೆಂದು ನಿರಾಕರಿಸಿದರು. ಯೂರೋಪಿನಲ್ಲಾದರೆ ತಾನು ಸ್ವೇಚ್ಛೆಯಂತೆ ಬಾಳಬಹುದು. ದುಡಿಯಬಹುದು. ಪ್ಯಾಲೆಸ್ಟೈನಿನ ಆರಾಧನಾಪರಿಸರದಲ್ಲಿ ತನ್ನ ಸ್ವಾತಂತ್ರ್ಯ ಮೊದಲು ಹರಣವಾಗುತ್ತದೆ. ಕೇವಲ ಆಭರಣವಾಗಿರುವುದು ತನ್ನ ಉದ್ದೇಶವಲ್ಲವೆಂದರು. ಆರಾಧ್ಯ ಪುರುಷ, ಜೀವರಹಿತ ಶಿಲೆಯೋ ಛಾಯಾಚಿತ್ರವೋ ಆಗಿರುವತನಕ, ಆರಾಧಕ-ಆರಾಧ್ಯ ಉಭಯರಿಗೂ ಶಾಂತಿ !

> ಆರಾಧನೆಯ ಮಾಡಿ ಕೊಲ್ಲಬೇಡಿರೊ ನನ್ನ
> ನಾ ಪಾಲಿಸಿದ ತತ್ತ್ವಗಳನರಿತು ಸಾಗಿರೋ
> ಹೊಸಜಾಡ ಕಡಿಯುತ್ತ ಹೊಸಬರೇ ಆಗಿರೋ
> ವರ್ತಮಾನದಿ ಬಾಳಿ ಸುಭವಿಷ್ಯ ರೂಪಿಸಿರೊ !

ಇನ್ನೊಂದು ಬೃಹತ್ಸಭೆ. ಝಿಯನಿಸ್ಟ್ ಧುರೀಣರಿಂದ ಏರ್ಪಾಡು. ಸಡಗರ, ಸಂಭ್ರಮ ಉಕ್ಕೇರಿವೆ. ಜನ ಕಿಕ್ಕಿರಿದು ನೆರೆದಿದ್ದಾರೆ. ಝಿಯನಿಸ್ಟರ ಪತಾಕೆಗಳಿಂದ ಅಲಂಕೃತವಾದ ಸಭಾಂಗಣ. "ಜ್ಯೋತಿ ಮತ್ತು ಜ್ಞಾನ" (Orah ve Torah, ನಹಿ ಜ್ಞಾನೇನ ಸದೃಶಂ) ಎಂಬ ಭವ್ಯ ಲಾಂಛನದಿಂದ ಮೆರೆಯುತ್ತಿದೆ.

ಐನ್‌ಸ್ಟೈನರನ್ನು ವೇದಿಕೆಗೆ ಆಹ್ವಾನಿಸುತ್ತ (ಆವಾಹಿಸುತ್ತ) ಝಿಯನಿಸ್ಟ್ ನಾಯಕ ಸ್ವಾಗತಿಸಿದರು, "ಇಂದು ನಾವು ನಿಂತಿರುವ ಈ ಪವಿತ್ರ ಸ್ಥಳದಲ್ಲಿ ೨,೦೦೦ ವರ್ಷಗಳ ಹಿಂದೆ ರೋಮನ್ ಸಾಮ್ರಾಟ ಟೈಟಸ್ [ಯೆಹೂದ್ಯರನ್ನು ಯುದ್ಧದಲ್ಲಿ ಸೋಲಿಸಿದವ] ಆತನ ಪ್ರತಿವೈರ ಸಾಧಕ ಸೈನ್ಯದೊಡನೆ ನಿಂತಿದ್ದ. ಆದರೆ ಇಂದು ನಾವು ಜ್ಞಾನದೇವಾಲಯವನ್ನು ಪ್ರವರ್ತಿಸುತ್ತಿದ್ದೇವೆ [ಹಗೆತನದ ಹೊಗೆಯನ್ನು ಉಗುಳುವ ಕಾಳ್ಗಿಚ್ಚನ್ನಲ್ಲ]. ಮಾನ್ಯ ಐನ್‌ಸ್ಟೈನರೇ ! ನಿಮಗಾಗಿ ೨,೦೦೦ ವರ್ಷಗಳಿಂದ ಕಾಯುತ್ತಿರುವ ಈ ಪೀಠವನ್ನು ಇಗೊ ಏರಿ ಪವಿತ್ರಗೊಳಿಸುವಂಥವರಾಗಿ."

ನವಮನ್ವಂತರ ಪ್ರವರ್ತಕ ಐನ್‌ಸ್ಟೈನ್ ಉಪಸ್ಥಿತರಾದರು. ಭಾಷಣ ತೊಡಗಿದರು : ಮೊದಲ ವಾಕ್ಯ ಹೀಬ್ರೂ ಭಾಷೆಯಲ್ಲಿ (ಇದು ಯೆಹೂದ್ಯ ಜನಾಂಗದವರ ಪ್ರಾಚೀನ ಭಾಷೆ—ನಮ್ಮ ಸಂಸ್ಕೃತದಂತೆ ; ಆದ್ದರಿಂದ ಭಗವಂತನ ದಿವ್ಯವಾಣಿಯ ಮಾಧ್ಯಮ—ನಮ್ಮ ಅಪೌರುಷೇಯ ವೇದಗಳು ಸಂಸ್ಕೃತದಲ್ಲಿ ಪ್ರಕಟವಾಗಿರುವಂತೆ) ; ಆದರೆ ಸ್ವಂತ ಮಾತೃಭಾಷೆಯಲ್ಲದ ಹೀಬ್ರೂವಿನಲ್ಲಿ ಇವರಿಗೆ ಮುಂದುವರಿಯಲಾಗಲಿಲ್ಲ ; ಹೀಗಾಗಿ ಭಾಷಣದ ಉಳಿದ ಅಂಶ ಭಾಗಶಃ ಫ್ರೆಂಚಿನಲ್ಲಿಯೂ ಭಾಗಶಃ ಜರ್ಮನ್‌ನಲ್ಲಿಯೂ ಸಾಗಿತು. ಇದು ಹೇಗೂ ಇರಲಿ. ಯೆಹೂದ್ಯ ಕುಲತಿಲಕ ಪವಾಡಪುರುಷ ಅನುಭಾವಿ ಐನ್‌ಸ್ಟೈನ್ ಈ ಪ್ರಾಚೀನ ಪವಿತ್ರ ಪೀಠದ (ದಿಬ್ಬದ)[೩೮] ಮೇಲೆ ನಿಂತು ಮೊದಲ ಪ್ರವಚನ ನೀಡಿದ್ದು ಹೇಗೂ ದೇವಭಾಷೆಯಲ್ಲಿ ತಾನೇ ಎಂಬುದಾಗಿ ಭಾವುಕರು ರೋಮಹರ್ಷಿತರಾದರು.

ಟೆಲ್ ಅವೀವ್ ನಗರದ ಮುಕ್ತನಾಗರಿಕತ್ವವನ್ನು ಇವರಿಗೆ ಪ್ರದಾನಿಸಲಾಯಿತು. "ಈಗಾಗಲೇ ನ್ಯೂಯಾರ್ಕ್ ನಗರದ ಗೌರವ ನಾಗರಿಕತ್ವ ಪಡೆದ ಸುಕೃತ ನನ್ನದು. ಆದರೆ ಈ ಸುಂದರ ಯೆಹೂದ್ಯ ನಗರದ ನಾಗರಿಕನಾಗುವುದು ನನಗೆ ಹತ್ತು ಮಡಿ ಆನಂದ ತಂದಿದೆ," ಎಂದರು.

ಉಪಮಾನಗಳನ್ನು ಬಳಸುವಾಗ ತೂಗಿ ಮಾತಾಡುವ ಚಾಣಾಕ್ಷತೆ ಎಂದೂ ಇವರ ಭದ್ರ ಆಸ್ತಿ ಆಗಿರಲಿಲ್ಲ !

ಪ್ಯಾಲೆಸ್ಟೈನಿನಲ್ಲಿ ಆ ತನಕ ಆಗಿದ್ದ ಪುನಾರಚನಾಕಾರ್ಯವನ್ನು ಇವರು ಮೆಚ್ಚಿದರು. ಮುಂದೆ ಅತಿ ಜರೂರಾಗಿ ಆಗಬೇಕಾದದ್ದನ್ನು ಕುರಿತು ತಮ್ಮ ಸಲಹೆ ನೀಡಿದರು. ಸ್ಥಳೀಯ ಅರಬ್ಬರೊಡನೆ ಶಾಂತಿಯುತ ಸಹಜೀವನ ನಡೆಸುವುದು ಅಗತ್ಯ, ಅನಿವಾರ್ಯ ಕೂಡ ಎಂಬುದನ್ನು ಒತ್ತಿ ಹೇಳಿದರು. ಅಧಿಕ ಧನಸಂಗ್ರಹ ಕಾರ್ಯ ಒಡನೆ ಆಗಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ನಿರ್ಮಲಾಂತಃಕರಣದಿಂದ ಹೊಮ್ಮಿದ ಇಂಥ ಪರಿಶುಭ್ರ ಭಾವನೆಗಳು ಅನೇಕ ಯೆಹೂದ್ಯರಿಗೆ ಪ್ರಿಯವಾಗಿರಲಿಲ್ಲ. ತಮ್ಮ ಹುಟ್ಟಾ ವೈರಿಗಳಾದ ಅರಬ್ಬರೊಡನೆ ಸಹಜೀವನ ಸಾಧ್ಯವೇ ? ತಮ್ಮ ಬೌದ್ಧಿಕ ಮುಖಂಡ ಈ ಅಪ್ರಾಯೋಗಿಕ ಮಾರ್ಗವನ್ನು ಸೂಚಿಸುವುದು ನ್ಯಾಯವೇ ? ಇತ್ತ ಕರ್ಮಠ ಸಂಪ್ರದಾಯಶರಣರು ಐನ್‌ಸ್ಟೈನರ ಅಸಾಂಪ್ರದಾಯಿಕ ವರ್ತನೆಯಲ್ಲಿ ದೋಷ ಕಂಡರು. ಇತರರ ಇಚ್ಛಾನುಸಾರ ನಿರ್ಮಿತರಾದ ವ್ಯಕ್ತಿ ಅಲ್ಲವಷ್ಟೆ ಐನ್‌ಸ್ಟೈನ್. ರಾಜಕೀಯ ನಿರಂಕುಶತೆಗಿಂತ ಧಾರ್ಮಿಕ ನಿರಂಕುಶತೆ ಅಧಿಕ ಅಪಾಯಕಾರಿ : ಮೊದಲಿನದು ಬುದ್ಧಿ ಸಂಬಂಧಿ. ಎರಡನೆಯದೋ ಹೃದಯ ಸಂಹಾರಿ.[೩೯]

ಪ್ಯಾಲೆಸ್ಟೈನಿನಲ್ಲಿ ಆಗ ಬ್ರಿಟಿಷ್ ಹೈಕಮಿಷನರ್ ಆಗಿದ್ದವರು ಸರ್ ಹರ್ಬರ್ಟ್ ಸ್ಯಾಮ್ಯುವೆಲ್. ಇವರು ಯೆಹೂದ್ಯ ರಕ್ತಜ ಬ್ರಿಟಿಷ್ ಮುತ್ಸದ್ದಿ. ಇವರನ್ನು ಈ ಹುದ್ದೆಗೆ ನಿಯೋಗಿಸುವುದರಲ್ಲಿ ಬ್ರಿಟಿಷ್ ಸರ್ಕಾರ ತುಂಬ ಜಾಣ್ಮೆ ಪ್ರದರ್ಶಿಸಿತ್ತು. ಅಂದ ಮಾತ್ರಕ್ಕೆ ಸ್ಯಾಮ್ಯುವೆಲ್ಲರ ಆಡಳಿತ ಮಾತ್ರ ಸುಸೂತ್ರವಾಗಿರಲಿಲ್ಲ. ತಾನು ಪೂರ್ಣ ನಿಷ್ಪಕ್ಷಪಾತಿಯಾಗಿರಬೇಕು ಎಂಬ ಪ್ರಾಮಾಣಿಕ ನಿಷ್ಠೆಯಿಂದ ಇವರು ವರ್ತಿಸುತ್ತಿದ್ದರು ನಿಜ. ಆದರೆ ಇವರು ಅರಬ್-ಪಕ್ಷಪಾತಿಯಾಗಿದ್ದಾರೆಂದು ಯೆಹೂದ್ಯರೂ ಯೆಹೂದ್ಯರಕ್ತಜ ಹೈಕಮಿಷನರ್ ಸಹಜವಾಗಿ ಯೆಹೂದ್ಯ-ಪಕ್ಷಪಾತಿಯಾಗಿದ್ದಾರೆಂದು ಅರಬ್ಬರೂ ಭಾವಿಸಿ ಇವರನ್ನು ಸಂದೇಹದೃಷ್ಟಿಯಿಂದ ನೋಡುತ್ತಿದ್ದರು. ಹೀಗೆ 'ಪ್ರತಿಪಕ್ಷ' ಸ್ವೀಕರಿಸದ 'ಸ್ವಪಕ್ಷ' ಒಪ್ಪದ ಒಂದು ತೆರನಾದ ತ್ರಿಶಂಕುತ್ವದಲ್ಲಿ ಸರ್ ಹರ್ಬರ್ಟ್ ನೇಲುತ್ತಿದ್ದರು. ಈ 'ಭಾರರಾಹಿತ್ಯ'ವನ್ನು ಇಲ್ಲಗೊಳಿಸಲು ಇವರಿಗಿದ್ದ ಮಾರ್ಗವೆಂದರೆ ಡೌಲು, ಜಬ್ಬು, ಅಂತಸ್ತು, ಪ್ರತಿಷ್ಠೆ ಮುಂತಾದವುಗಳ ಆಡಂಬರಸಹಿತ ಪ್ರದರ್ಶನ. ಎಂದೇ ಪ್ರತಿ ಸಲವೂ ಹೈಕಮಿಷನರ್ ಮಹೋನ್ನತರು ಅವರ ಭವ್ಯ ಬಂಗ್ಲೆಯಿಂದ ನಿರ್ಗಮಿಸುವಾಗ ಮತ್ತು ಅಲ್ಲಿಗೆ ಆಗಮಿಸುವಾಗ ಆ ಪರಮ ಗಣ್ಯ ಮತ್ತು ಅತಿ ಸನ್ಮಾನ್ಯ ಘಟನೆಗಳನ್ನು ಮದ್ದು ಗುಂಡುಗಳ ಸಿಡಿತದಿಂದ ಪ್ರಜೆಗಳಿಗೆ ಸಾರಿ ತಿಳಿಸಿ ಅವರನ್ನು ಚಕಿತಗೊಳಿಸಲಾಗುತ್ತಿತ್ತು. ಸಮವಸ್ತ್ರಧಾರಿ ಅಶ್ವಾರೋಹಿ ಸುಟಿಭಟರು ಸದಾ ಬ್ರಿಟಿಷ್ ಸಾರ್ವಭೌಮತ್ವದ ಈ ಜಂಗಮ ಪ್ರತೀಕವನ್ನು ಸಂರಕ್ಷಿಸುತ್ತಿದ್ದರು. ಬಂಗ್ಲೆಯ ಒಳಗೂ ಹೊರಗೂ 'ಸರ್ವಂ ಅಧಿಕಾರಮಯಂ ಜಗತ್, ಸರ್ವಂ ಬಾಹ್ಯ ಕರಣಮಯಂ ಜಗತ್.' ಹೂರಣವ ತೋರಣವು ನುಂಗಿತ್ತು, ನೋಡಾ !

ಸ್ಯಾಮ್ಯುವೆಲ್ಲರ ಘನ ಅತಿಥಿಯಾಗಿದ್ದ ಐನ್‌ಸ್ಟೈನ್ ಈ ಬಾಹ್ಯ ಔಪಚಾರಿಕತೆಗಳಿಂದ—ಈ ವೇಳೆಗೆ ಇವೆಲ್ಲವೂ ಇವರಿಗೆ ಅಭ್ಯಾಸವಾಗಿ ಹೋಗಿದ್ದುದರಿಂದ—ಇನಿತೂ ತಲೆ ಕೆಡಿಸಿಕೊಳ್ಳದೆ ಇವುಗಳಿಂದ ಒಂದಿಷ್ಟೂ ರಂಗುಬದಲಾವಣೆಗೆ ಒಳಪಡದೆ ಇವುಗಳೊಡನೆ ಶಾಂತಿಯುತ ಸಹಜೀವನ ನಡೆಸಲು ಕಲಿತಿದ್ದರು. ಇವರು ಏನು ಮಾಡಿದರೂ ಮಾಡದಿದ್ದರೂ ಅದು ಮಹಾಪುರುಷ ವರ್ತನೆಯಾಗಿದ್ದುದರಿಂದ ಜನರ ಮೆಚ್ಚುಗೆ ಗಳಿಸುತ್ತಿತ್ತು, ಆದರಣೀಯವಾಗುತ್ತಿತ್ತು. ಅನೆ ನಡೆದದ್ದೇ ಜಾಡು.

ನಿಜಕ್ಕೂ ಔಪಚಾರಿಕತೆಯ ಕೃತಕ ಪರಿಸರದಲ್ಲಿ ನೀರಿನಿಂದ ಹೊರಬಿದ್ದ ಮೀನಿನಂತೆ ಚಡಪಡಿಸುತ್ತಿದ್ದವರು ಶ್ರೀಮತಿ ಐನ್‌ಸ್ಟೈನ್. "ನಾನೊಬ್ಬಳು ಸರಳ ಜರ್ಮನ್ ಗೃಹಿಣಿ. ಎಲ್ಲವೂ ಅಚ್ಚುಕಟ್ಟಾಗಿ ಚೊಕ್ಕವಾಗಿರುವುದು ನನಗಿಷ್ಟ. ಇಲ್ಲಿ ಕಂಡು ಬರುವ ಔಪಚಾರಿಕ ಸನ್ನಿವೇಶದಲ್ಲಿ ನನಗೆ ಸಂಕೋಚವಾಗುತ್ತದೆ. ನಮ್ಮ ಯಜಮಾನರ ಪರಿಸ್ಥಿತಿ ಬೇರೆ. ಅವರು ಪ್ರಸಿದ್ಧ ವ್ಯಕ್ತಿಯಾದ್ದರಿಂದ ಅವರೇನಾದರೂ ಶಿಷ್ಟನಡವಳಿಕೆಯನ್ನು ಮುರಿದದ್ದಾದರೆ ಅದು ಫ್ಯಾಶನ್ ಆಗುತ್ತದೆ. ತೊಡಪೆಂದು ಪರಿಗಣಿಸಲಾಗುತ್ತದೆ. ನನ್ನ ವಿಷಯದಲ್ಲಾದರೋ ಅದು ತೊಡಕಾಗುತ್ತದೆ. ಸಂಸ್ಕೃತಿವಿಹೀನತೆಯ ಲಕ್ಷಣವೆಂದು ಟೀಕಿಸಲ್ಪಡುತ್ತದೆ." ಹೀಗಾಗಿ ಎಲ್ಸಾ, ಪ್ಯಾಲೆಸ್ಟೈನಿನ ಬಹುತೇಕ ಸಾರ್ವಜನಿಕ ಔಪಚಾರಿಕ ಸಮಾರಂಭಗಳಲ್ಲಿ ಭಾಗವಹಿಸದೆ ಹಿಂದೆ ಉಳಿದಿರುತ್ತಿದ್ದರು. ಅಂತಸ್ಸತ್ತ್ವರಹಿತ ವಿಧಿನಿಯಮಗಳು ಯಾಂತ್ರಿಕತೆಯ ವಿವಿಧ ಮುಖಗಳು ಮಾತ್ರ.[೪೦]

ಲಾರ್ಡ್ ಹಾಲ್ಡೇನರಂತೆ ಸರ್ ಹರ್ಬರ್ಟ್ ಸ್ಯಾಮ್ಯುವೆಲ್ ಕೂಡ ಹವ್ಯಾಸಿ ವಿಜ್ಞಾನಿ. ಸಾಪೇಕ್ಷತಾಸಿದ್ಧಾಂತವನ್ನು ಕುರಿತಂತೆ ಇವರ ಆಸಕ್ತಿ ಹವ್ಯಾಸಿಯದಕ್ಕಿಂತ ಹೆಚ್ಚಿನದಾಗಿತ್ತು. ಹೀಗಾಗಿ ಸ್ಯಾಮ್ಯುವೆಲ್ ಮತ್ತು ಐನ್‌ಸ್ಟೈನ್ ನಡುವಿನ ಮಾತುಕತೆ ಸರ್ವವ್ಯಾಪಿಯಾಗಿತ್ತು—ಮೈಲ್ಲೋಕದ ಯೆಹೂದ್ಯ ಸಮಸ್ಯೆ, ಪ್ರಪಂಚಶಾಂತಿಯಿಂದ ತೊಡಗಿ ಚಿಲ್ಲೋಕದ ಮನೋವಿಜ್ಞಾನ, ಸಾಪೇಕ್ಷತಾಸಿದ್ಧಾಂತದವರೆಗೆ. ಇವರ ಚರ್ಚೆಯ ನಡುವೆ ವಾಸ್ತವಾಂಶ (fact) ಮತ್ತು ನಿಗಮನ (deduction) ಇವುಗಳಲ್ಲಿರುವ ಸಂಬಂಧ, ಸ್ನೇಹ, ವೈರ ಪ್ರಸ್ತಾವಿಸಲ್ಪಟ್ಟವು.

ವರ್ತಮಾನಕಾಲದ ತನಕ ಸಂಗ್ರಹೀತವಾದ ವಾಸ್ತವಾಂಶಗಳನ್ನು ಆಧರಿಸಿ ಪ್ರತಿಭಾವಂತ ವಿಜ್ಞಾನಿ ಒಂದು ವಾದವನ್ನು ನಿಗಮಿಸುತ್ತಾನೆ. ಉದಾಹರಣೆಗೆ ಅರಿಸ್ಟಾಟಲ್ (ಕ್ರಿ. ಪೂ. ೩೮೪-೩೨೨) ಭೂಕೇಂದ್ರವಾದವನ್ನು ನಿಗಮಿಸಿದ. ಇದರ ಪ್ರಕಾರ ಭೂಮಿ ನಿಶ್ಚಲವಾಗಿ ಕೇಂದ್ರದಲ್ಲಿ ನೆಲಸಿದ್ದು ಸೂರ್ಯ, ಚಂದ್ರ, ಗ್ರಹ, ನಕ್ಷತ್ರ ಎಲ್ಲವೂ ಇದರ ಸುತ್ತ ಪರಿಭ್ರಮಿಸುತ್ತವೆ ಎಂದಿತ್ತು.

ಕಾಲಕ್ರಮೇಣ ಅಧಿಕ ವಾಸ್ತವಾಂಶಗಳು ಸಂಗ್ರಹೀತವಾದಂತೆ ಮೊದಲಿನ ನಿಗಮನ ಇವನ್ನು ಸಮರ್ಪಕವಾಗಿ ವಿವರಿಸುವಲ್ಲಿ ಸೋಲುತ್ತದೆ. ಹೀಗಾಗಿ ಹೊಸತೊಂದನ್ನು ಮಂಡಿಸುವುದು ಅಗತ್ಯವಾಗುತ್ತದೆ. ಉದಾಹರಣೆಗೆ ಭೂಕೇಂದ್ರವಾದವನ್ನೇ ಪರಿಶೀಲಿಸಿದ್ದಾದರೆ ಕೊಪರ್ನಿಕಸನ (ಕ್ರಿ. ಶ. ೧೪೭೩-೧೫೪೩) ವೇಳೆಗಾಗುವಾಗ ಇದು ಮೇಲೆ ಹೇಳಿದ ರೀತಿಯಲ್ಲಿ ಸೋತಿತ್ತು. ಆಗ ಕೊಪರ್ನಿಕಸ್ ಸೂರ್ಯಕೇಂದ್ರವಾದವನ್ನು ಮುಂದೊಡ್ಡಿ ಆ ತನಕ ಸಂಗ್ರಹೀತವಾಗಿದ್ದ ವಾಸ್ತವಾಂಶಗಳನ್ನು ತೃಪ್ತಿಕರವಾಗಿ ವಿವರಿಸಿದ.

ಹೀಗೆ ವಾಸ್ತವಾಂಶ ಮತ್ತು ನಿಗಮನ (ಅಥವಾ ವಾದ) ಕಾರ್ಯಕಾರಣ ಸಂಬಂಧವಿರುವ ಜೋಡಿಯಾಗಿ ಹೆಜ್ಜೆ ಇಡುವುದರ ಜೊತೆಗೆ ವರ್ತಮಾನ ವಾಸ್ತವಾಂಶ ತತ್ಪೂರ್ವ ನಿಗಮನಕ್ಕೆ ಮಾರಕಾಸ್ತ್ರವಾಗಿಯೂ ವರ್ತಿಸುವುದುಂಟು.

ಪ್ರಸಿದ್ಧ ಬ್ರಿಟಿಷ್ ಜೀವವಿಜ್ಞಾನಿ ಟಿ. ಎಚ್. ಹಕ್ಸ್ಲೀ (೧೮೨೫-೯೫) ಎಂಬವರ ಒಂದು ಉಕ್ತಿಯನ್ನು ಸ್ಯಾಮ್ಯುವೆಲ್ ಉಲ್ಲೇಖಿಸಿದರು, "ಹರ್ಬರ್ಟ್ ಸ್ಪೆನ್ಸರನ ಪ್ರಕಾರ ದುರಂತ ಎನ್ನುವುದು ವಾಸ್ತವಾಂಶದಿಂದ ನಿಗಮನದ ಕೊಲೆ." (ಇಂಗ್ಲೆಂಡಿನ ಸಮಾಜ ವಿಜ್ಞಾನಿ ಸ್ಪೆನ್ಸರ್, ೧೮೨೦-೧೯೦೩.)

ಐನ್‌ಸ್ಟೈನ್, "ಪ್ರತಿಯೊಂದು ಸಿದ್ಧಾಂತವೂ ಬೇಗನೆ ಇಲ್ಲವೇ ತಡವಾಗಿ ಇದೇ ರೀತಿಯಲ್ಲಿ ಕೊಲ್ಲಲ್ಪಡುವುದು. ಆದರೆ ಮೊದಲ ಸಿದ್ಧಾಂತದಲ್ಲಿ ಒಳಿತೇನಾದರೂ ಇದ್ದರೆ ಅದು ಮುಂದಿನ

ಸಿದ್ಧಾಂತದ ಅಂಗವಾಗಿ ಮೈದಳೆದು ಮುಂದೆ ಸಾಗಿರುತ್ತದೆ." (ಗೀತೆ : ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿಗೃಹ್ಣಾತಿ ನರೋ ಪರಾಣಿ ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿದೇಹೀ—ಮಾನವ ಉಟ್ಟ ಬಟ್ಟೆ ಹಳತಾದಾಗ ಅದನ್ನು ಬಿಟ್ಟು ಹೊಸತನ್ನು ತೊಡುತ್ತನೆ. ಹಾಗೆಯೇ ಜೀವವೂ ತನ್ನ ದೇಹ ಜೀರ್ಣವಾದಾಗ ಅದನ್ನು ತೊರೆದು ಇನ್ನೊಂದನ್ನು ಸೇರುತ್ತದೆ.)[೪೧]

ಪ್ಯಾಲೆಸ್ಟೈನ್ ಸಂದರ್ಶನವು ಐನ್‌ಸ್ಟೈನರ ಝಿಯನಿಸ್ಟ್ ಒಲವುಗಳನ್ನು ಭದ್ರಪಡಿಸಿತು. ಝಿಯನಿಸ್ಟ್ ಚಳವಳಿಯ ಯಶಸ್ಸಿಗೆ—ಅಂದರೆ ನಿರ್ಗತಿಕ ಯೆಹೂದ್ಯರಿಗೆ ಪ್ಯಾಲೆಸ್ಟೈನಿನಲ್ಲಿ ಸುಭದ್ರ ನಿವಾಸ ಒದಗಿಸುವ ಯೋಜನೆಗೆ—ತಾನು ಹಾರ್ದಿಕ ಬೆಂಬಲ ನೀಡುವುದಾಗಿ ಭರವಸೆ ಇತ್ತರು. ಆದರೆ ಇದಕ್ಕಾಗಿ ತನ್ನ ಕರ್ತವ್ಯಕ್ಷೇತ್ರದಿಂದ ಹೊರಕ್ಕೆ ಇನ್ನೊಮ್ಮೆ ಮಾತ್ರ ಪಯಣಿಸಲಾರೆ ಎಂದು ಖಚಿತವಾಗಿ ತಿಳಿಸಿದರು, "ನನ್ನ ಹೆಸರನ್ನು ಸಂತೋಷದಿಂದ ನೀಡುತ್ತೇನೆ. ಕಾಗದ ಬರೆಯುತ್ತೇನೆ ಮತ್ತು ಇಲ್ಲಿರುವ ಜನರೊಂದಿಗೆ ಮಾತಾಡುತ್ತೇನೆ. ಆದರೆ ಉಳಿದವನ್ನು ಕುರಿತಂತೆ ಹೇಳುವುದಾದರೆ ಒಬ್ಬ ಚಿಂತನಶೀಲ ವ್ಯಕ್ತಿಯಾಗಿ ನಾನು ನನ್ನ ಹಕ್ಕುಗಳನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ—ಇದಕ್ಕಾಗಿ ನಾನು ನೆಮ್ಮದಿಯಿಂದ ಕೆಲಸವೆಸಗುವುದು ಮುಖ್ಯ. ಯಾವಾತ ತನ್ನ ಬದುಕನ್ನು ಚಿಂತನೆಗಾಗಿ ಮುಡಿಪಿಡುವನೊ ಮತ್ತು ಚಿಂತನೆಯಲ್ಲಿ ಮಾತ್ರ ಉದ್ಯುಕ್ತನಾಗಿರಲು ಸಮರ್ಥನಾಗಿರುವನೊ ಆತ ಅದಕ್ಕೆ ಮಾತ್ರ ಅಂಟಿಕೊಳ್ಳಬೇಕು. 'ಲೌಕಿಕ' ಅಥವಾ 'ಪ್ರಾಪಂಚಿಕ' ವಿಷಯಗಳನ್ನಾದರೋ ಅವನ್ನು ಚೆನ್ನಾಗಿ ಅರಿಯಲು ಸಮರ್ಥರಾದ ಉತ್ತಮ ವ್ಯಕ್ತಿಗಳಿಗೆ ಬಿಟ್ಟುಕೊಡಬೇಕು."

ಹೀಗೆ ಇವರ ಅಂತಃಪ್ರಜ್ಞೆ ಇವರನ್ನು ಭೌತವಿಜ್ಞಾನಕ್ಕೆ ಅಂಟಿಕೊಳ್ಳಲು ವಿಧಿಸಿತ್ತು. ಆದರೆ ರಾಗಭಾವಾತ್ಮಕವಾಗಿ ಇವರು ಬಾಹ್ಯ ವಿಷಯಗಳತ್ತ ಆಕರ್ಷಿಸಲ್ಪಡುತ್ತಿದ್ದರು.

೧೯೨೩ರ ಫೆಬ್ರುವರಿ ತಿಂಗಳ ಮಧ್ಯಭಾಗದಲ್ಲಿ ಐನ್‌ಸ್ಟೈನ್ ದಂಪತಿಗಳು ಪ್ಯಾಲೆಸ್ಟೈನಿನಿಂದ ಯೂರೊಪಿನತ್ತ ಪಯಣಿಸಿದರು. ಸ್ಪೇನ್ ರಾಷ್ಟ್ರವನ್ನು ಸಂದರ್ಶಿಸಿ, ಅಲ್ಲಿಯೂ ಸಾಪೇಕ್ಷತಾ ಸಿದ್ಧಾಂತದ ರಾಗ ಹಾಡಿ (ಅಥವಾ ಶಿಳ್ಳೆ ಊದಿ). ಮುಂದೆ ಫ್ರಾನ್ಸ್ ಮಾರ್ಗವಾಗಿ ಬರ್ಲಿನ್ನಿಗೆ ಮರಳಿದರು.

# ೯. ಸಾಧನೆಯ ಹಿರಿಮೆ

## ನೊಬೆಲ್ ಪಾರಿತೋಷಿಕ

ವಿದ್ಯಾಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ
ಅವಿದ್ಯಯಾಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ

ಈಶೋಪನಿಷತ್ತು

ವಿದ್ಯೆ, ಅವಿದ್ಯೆ ಮತ್ತು ಇವೆರಡನ್ನೂ ಒಳಗೊಂಡಿರುವ ಅದನ್ನು (ಪರತತ್ತ್ವವನ್ನು) ತಿಳಿದವನು ಅವಿದ್ಯೆಯ ಬಲದಿಂದ (ವ್ಯಕ್ತಸೃಷ್ಟಿಯ ಜ್ಞಾನದಿಂದ) ಮೃತ್ಯುಲೋಕವನ್ನು ದಾಟಿ, ವಿದ್ಯೆಯ ಬಲದಿಂದ (ಅವ್ಯಕ್ತದ ಜ್ಞಾನದಿಂದ) ಅಮೃತತತ್ತ್ವವನ್ನು ಪಡೆಯುವನು.

(ಅನು : ರಂ. ರಾ. ದಿವಾಕರ)

ಸ್ವೀಡನ್ನಿನ ಉಪಜ್ಞೆಕಾರ (inventor) ಆಲ್ಫ್ರೆಡ್ ನೊಬೆಲ್ (೧೮೩೩-೯೬) ಸಿಡಿಮದ್ದು

ಆಫ್ ಸೈನ್ಸಸ್ಸಿನ ಭೌತವಿಜ್ಞಾನ ನೊಬೆಲ್ ಸಮಿತಿಯ ಅಧ್ಯಕ್ಷ ಮತ್ತು ೧೯೦೩ರ ರಸಾಯನವಿಜ್ಞಾನ ವಿಭಾಗದ ನೊಬೆಲ್ ಪ್ರಶಸ್ತಿಧರ ಪ್ರೊಫೆಸರ್ ಸ್ವಾಂಟೆ ಅರ್ರೇನೀಯಸ್(೧೮೫೯-೧೯೨೭, ಸ್ವೀಡನ್ನಿನ ರಸಾಯನವಿಜ್ಞಾನಿ) ಐನ್‌ಸ್ಟೈನರ ಅರ್ಹತೆಯನ್ನು ವಿವರಿಸಿದರು (ಜಪಾನ್ ಪ್ರಯಾಣದಲ್ಲಿದ್ದ ಐನ್‌ಸ್ಟೈನ್ ಆಗ ಈ ಸಮಾರಂಭದಲ್ಲಿ ಉಪಸ್ಥಿತರಿರಲಿಲ್ಲ) : "ಪ್ರಾಯಶಃ ಇಂದು ಬೇರೆ ಯಾವ ಜೀವಂತ ಭೌತವಿಜ್ಞಾನಿಯ ಹೆಸರೂ ಆಲ್ಬರ್ಟ್ ಐನ್‌ಸ್ಟೈನರ ಹೆಸರಿನಷ್ಟು ವ್ಯಾಪಕವಾಗಿ ಪರಿಚಿತವಾಗಿಲ್ಲ. ಇವರ ಸಾಪೇಕ್ಷತಾಸಿದ್ಧಾಂತದ ಸುತ್ತ ಸಾಕಷ್ಟು ವಿವಾದ ಹೆಣೆದುಕೊಂಡಿದೆ. ಸಾರಭೂತವಾಗಿ ಇದು ಜ್ಞಾನಮೀಮಾಂಸೆಯನ್ನು (epistemology) ಕುರಿತುದಾದ್ದರಿಂದ ತತ್ತ್ವಶಾಸ್ತ್ರ ವಲಯಗಳಲ್ಲಿ ಲವಲವಿಕೆಯ ವಾಗ್ವಾದವಸ್ತುವಾಗಿದೆ. ಪ್ಯಾರಿಸ್ಸಿನ ವಿಖ್ಯಾತ ತತ್ತ್ವಶಾಸ್ತ್ರಜ್ಞ ಬರ್ಗ್‌ಸನ್ ಈ ಸಿದ್ಧಾಂತವನ್ನು ಪ್ರತಿಭಟಿಸಿರುವರಾದರೆ ಇತರ ತತ್ತ್ವಶಾಸ್ತ್ರಜ್ಞರು ಇದನ್ನು ಪೂರ್ಣಮನಸ್ಸಿನಿಂದ ಪ್ರಶಂಸಿಸಿರುವರೆಂಬುದು ರಹಸ್ಯವೇನೂ ಅಲ್ಲ. ಪರಿಶೀಲನೆಯಲ್ಲಿರುವ ಈ ಸಿದ್ಧಾಂತಕ್ಕೆ ಖಭೌತ ನಿಬಂಧಿತಗಳೂ (astrophysical implications) ಇವೆ. ಸದ್ಯದಲ್ಲಿ ಇವನ್ನು ಕಟ್ಟುನಿಟ್ಟಾಗಿ ಪರಿಶೀಲಿಸಲಾಗುತ್ತಿದೆ."

ಹೀಗೆ ಸಾಪೇಕ್ಷತಾಸಿದ್ಧಾಂತವನ್ನು ಜಾಣ್ಮೆಯಿಂದ ಜಿಗಿದು ಮುಂದೆ ಬ್ರೌನಿಯನ್ ಚಲನೆಯನ್ನು ಕುರಿತು ಐನ್‌ಸ್ಟೈನ್ ಮಾಡಿದ ಸಂಶೋಧನೆಯನ್ನು ಉಲ್ಲೇಖಿಸಿದರು.

ಸ್ಕಾಟ್ಲೆಂಡಿನ ಸಸ್ಯವಿಜ್ಞಾನಿ ರಾಬರ್ಟ್ ಬ್ರೌನ್ (೧೭೭೩-೧೮೫೮) ತನ್ನ ಬಹುಮುಖ ಸಂಶೋಧನೆಗಳ ವೇಳೆ ತುಸು ವಿಚಿತ್ರವೂ ಬಲು ಹೊಸತೂ ಆದ ಒಂದು ವಿದ್ಯಮಾನವನ್ನು ಗುರುತಿಸಿದ. ನೀರಿನಲ್ಲಿ ತೇಲಿಬಿಟ್ಟಿದ್ದ ಪರಾಗರೇಣುವಿನ ವರ್ತನೆಯನ್ನು ಅವನು ಸೂಕ್ಷ್ಮದರ್ಶಕದ ಮೂಲಕ ಗಮನಿಸುತ್ತಿದ್ದ (೧೮೨೭). ಜಲ ಪೂರ್ತಿ ನಿಶ್ಚಲವಾಗಿತ್ತು. ಅದರ ಮೇಲೆ ಸೂಕ್ಷ್ಮ ವಾಯುಕಂಪನದ ಪ್ರಭಾವ ಕೂಡ ಇರಲಿಲ್ಲ. ಬೇರೆ ಯಾವ ಬಲಗಳಿಗೂ ಅಲ್ಲಿ ಅವಕಾಶ ನಾಸ್ತಿ. ಹಾಗಿದ್ದರೂ ರೇಣು ಮಾತ್ರ ಸ್ಥಗಿತವಾಗಿರಲಿಲ್ಲ—ಎಡ್ಡತಿಡ್ಡ ಬೇಕಾಬಿಟ್ಟಿ ಕುಣಿತ ನೆಗೆತಗಳಿಂದ ಬಾಧಿತವಾಗಿತ್ತು. ಇದರ ಕಾರಣವೇನು ? ಇನ್ನಷ್ಟು ಪರಿಷ್ಕೃತ ಹಾಗೂ ಆದರ್ಶ ಸನ್ನಿವೇಶ



ಚಿತ್ರ ೬. ಬ್ರೌನಿಯನ್ ಚಲನೆಯ ಪ್ರರೂಪೀ ಚಿತ್ರ. ಎಡ್ಡತಿಡ್ಡ ಸಾಗುವ ಅಥವಾ ಒದ್ದು ಎಸೆಯಲ್ಪಡುವ—ಕಣದ ಜಾಡನ್ನು ಬಾಣ ಗುರುತುಗಳು ತೋರಿಸುತ್ತವೆ.

ದಲ್ಲಿ ಬ್ರೌನ್ ಇದೇ ಪ್ರಯೋಗವನ್ನು, ಅಥವಾ ಸರಿಯಾಗಿ ಹೇಳುವುದಾದರೆ, ಸೂಕ್ಷ್ಮವೀಕ್ಷಣೆಯನ್ನು ಪುನರಾವರ್ತಿಸಿದ. ಆದರೆ ರೇಣುವಿನ ಹುಚ್ಚಾಬಟ್ಟೆ ರಿಂಗಣದಲ್ಲಿ ಬದಲಾವಣೆ ಕಂಡು ಬರಲಿಲ್ಲ. ಹೋಗಲಿ. ಅದರ ಜಾಡುಗಳಲ್ಲೇನಾದರೂ ಕ್ರಮವಿತ್ತೇ ? ಇಲ್ಲ. ಅವು ಬೇಕಾಬಿಟ್ಟಿ ಎಳೆದ ಸರಳರೇಖೆಗಳು, ನೀರನ್ನು ಹಿಡಿದಿಟ್ಟಿದ್ದ ಜಾಡಿಯ ಗೋಡೆಗಳಿಂದ ಮತ್ತು ನೀರಿನ ಮುಕ್ತ ಮೇಲ್ಮೈಯಿಂದ ಮಾತ್ರ ಸೀಮಿತವಾದಂಥವು. ಬ್ರೌನ್ ಏನು ತೀರ್ಮಾನಿಸಿದ ಗೊತ್ತೇ ? ರೇಣುವಿನಲ್ಲಿ ಹುದುಗಿದ್ದ ಅವ್ಯಕ್ತ ಜೀವದ ಕಾರಣವಾಗಿ ಅದು ನಿರ್ಜೀವ ನಿಶ್ಚಲ ನೀರಿನಲ್ಲಿ ಚಲಿಸುತ್ತದೆ ಎಂದು. ಅರ್ಥಾತ್ ರೇಣು ನೀರಿನಲ್ಲಿ ಸ್ವೇಚ್ಛೆಯಂತೆ ಸರಿದಾಡುವ ಮತ್ತು ಹರಿದೋಡುವ ಮೀನು ! ಇದು ನಿಜವಾದ ಪಕ್ಷ, ರೇಣುಗಾತ್ರದ ನಿರ್ಜೀವ ವಸ್ತುವೊಂದನ್ನು ನೀರಿನಲ್ಲಿ ತೇಲಿಬಿಟ್ಟಾಗ, ಅದು ಪೂರ್ಣಸ್ಥಿತವಾಗಿರಬೇಕಷ್ಟೆ ? ನೀರಿನಲ್ಲಿ ವಿಲೀನವಾಗದ ರಂಗಿನ ಸೂಕ್ಷ್ಮ ಕಣವನ್ನು ಬಳಸಿ ಅದರ ವರ್ತನೆಯನ್ನು ಬ್ರೌನ್ ಅವಲೋಕಿಸಿದ. ಎಲ, ಎಲ ! ಈ ನಿರ್ಜೀವ ವಸ್ತು ಕೂಡ ಜೀವಿಸಹಜ ನರ್ತನವನ್ನು ಅಷ್ಟೇ ಲಗುಬಗೆಯಿಂದ ಪ್ರದರ್ಶಿಸುತ್ತಿತ್ತು! ಅಲ್ಲಿಗೆ ಜೀವಿ ಅಜೀವಿ ಎನ್ನುವ ಭೇದಭಾವವಿಲ್ಲದ ಯಾದೃಚ್ಛಿಕ ಚಲನೆ ಇದೆಂದಾಯಿತು. ಈ ವಿಶೇಷ ವಿದ್ಯಮಾನಕ್ಕೆ ಬ್ರೌನಿಯನ್ ಚಲನೆ ಎಂಬ ಹೆಸರು ರೂಢಿಗೆ ಬಂತು.

ವಿಸ್ತಾರವಾದ ಬಯಲಿನಲ್ಲಿ ಅಮಾವಾಸ್ಯೆಯ ಕಾರಿರುಳಿನಲ್ಲಿ ಎರಡು ತಂಡಗಳು ಕಾಲ್ಚೆಂಡಾಟವನ್ನು ಆಡುತ್ತಿವೆಯೆಂದು ಭಾವಿಸೋಣ. ಚೆಂಡು ಸ್ವಯಂಪ್ರಭೆಯಿಂದ ಮಿನುಗುತ್ತಿರಲಿ. ದೂರದ ಎತ್ತರ ದಿಬ್ಬದ ಮೇಲೆ ಕುಳಿತು ಬಯಲನ್ನು ದಿಟ್ಟಿಸಿದೆವಾದರೆ ನಮಗೆ ಕಾಣುವ ನೋಟ ಹೇಗಿರುತ್ತದೆ ? ಚೆಂಡು ಆ ಬಯಲಿನಲ್ಲಿ ಯದ್ವಾತದ್ವಾ ನೆಗೆದಾಡುತ್ತಿರುವಂತೆ, ಅಲ್ಲವೇ ? ಚೆಂಡನ್ನು ಒದೆಯುತ್ತಿರುವ ಆಟಗಾರರು ಕಾಣಿಸರು. ಪರೋಕ್ಷವಾಗಿ ಅವರ ಇರವನ್ನು ನಾವು ಊಹಿಸಬೇಕು, ಅಷ್ಟೆ. ಜಾಡಿಯೊಳಗೆ ತುಂಬಿಸಿಟ್ಟ ನೀರಾದರೂ ಒದಗಿಸುವುದು ಇಂಥ ಒಂದು ಆಟದ ಬಯಲನ್ನು. ಆಟಗಾರರು, ಅಂದರೆ ನೀರಿನ ಅಸಂಖ್ಯಾತ ಸೂಕ್ಷ್ಮಾಣುಗಳು, ನಮಗೆ ಕಾಣಿಸರು. ಇವರ 'ಒತ್ತ'ಗಳಿಗೆ ತುತ್ತಾದ ಸೂಕ್ಷ್ಮಕಣದ ನೆಗೆದಾಟ, ಸುತ್ತಾಟ ಮಾತ್ರ ಕಾಣಿಸುತ್ತವೆ. ಆದರೆ, ನೀರು ಸೂಕ್ಷ್ಮಾತಿಸೂಕ್ಷ್ಮ ಅಣುಗಳ—ಅಂದರೆ ಬಿಡಿ ಕಣಗಳ—ಸಮುಚ್ಚಯವೆನ್ನಲು ಅಂದು ಯಾವ ಪ್ರಾಯೋಗಿಕ ಸಾಕ್ಷ್ಯಾಧಾರವೂ ಇರಲಿಲ್ಲ. ಹಾಗೆ ಊಹಿಸಲು ಅವಕಾಶವೂ ಇದ್ದಿರಲಿಲ್ಲ.

ಪೀಪಿದನಿಯು ಕೇಳದು
ಗೊಂಬೆ ಕುಣಿತ ಕಾಣ್ಬುದು !

ತರುವಾಯದ ವರ್ಷಗಳಲ್ಲಿ ಬ್ರೌನಿಯನ್ ಚಲನೆಯ ಅಧ್ಯಯನ ಭೌತವಿಜ್ಞಾನಿಗಳ ಕುತೂಹಲ ವಿಷಯವಾಯಿತು. ಬ್ರೌನಿಯನ್ ಚಲನೆಯ ವೇಗ ಹಾಗೂ ಯಾದೃಚ್ಛಿಕತೆಯೊಂದಿಗೆ (randomness) ಮಾಧ್ಯಮದ (ನೀರು) ಉಷ್ಣತೆ (temperature)[೪೨] ಏರುತ್ತದೆಂದು ಪ್ರಯೋಗಗಳು ಸ್ಪಷ್ಟಪಡಿಸಿದುವು. ಪಾತ್ರೆಯಲ್ಲಿ ನೀರು ತುಂಬಿಸಿ ಅದನ್ನು ಕಾಸಿದಾಗ ನೀರಿನ ಉಷ್ಣತೆ ಏರುವುದೆನ್ನುತ್ತೇವೆ. ಹೀಗೆಂದರೇನು ? ನೀರನ್ನು ಕಾಸುವಾಗ ಅದಕ್ಕೆ ಉಷ್ಣವೆಂಬ (heat) ಶಕ್ತಿಯನ್ನು (energy) ಊಡುತ್ತೇವೆ. ಇದು ನೀರಿನಲ್ಲಿ 'ಬೆರೆತು' ನೀರಿನ ಬಿಸಿತನದ ಮಟ್ಟವನ್ನು ಏರಿಸುತ್ತದೆ. ನಿಜಕ್ಕೂ ಉಷ್ಣದ ಶಕ್ತಿಸ್ವರೂಪ ಸ್ಪಷ್ಟವಾಗುವ ಮೊದಲು ಇದೊಂದು ತರಲ (fluid), ಇದು ಮಾಧ್ಯಮದೊಡನೆ ಬೆರೆತು ಮಾಧ್ಯಮದ ಉಷ್ಣತೆ ಏರುವಂತೆ ಮಾಡುವುದೆಂದು ಭಾವಿಸಲಾಗಿತ್ತು—ಸಕ್ಕರೆ ನೀರಿನಲ್ಲಿ ವಿಲೀನವಾಗಿ ನೀರಿನ ಸಿಹಿತನದಮಟ್ಟ ಏರಿಸುವಂತೆ. ಈ

ಬಿಸಿತನವನ್ನೇ ಉಷ್ಣತೆ ಎನ್ನುವುದು. ಆದ್ದರಿಂದ ನೀರಿನ ಉಷ್ಣತೆ ಏರುತ್ತಿದೆ ಎಂದರೆ ನೀರಿಗೆ ಉಷ್ಣಶಕ್ತಿಯನ್ನು ಊಡಲಾಗುತ್ತಿದೆ ಎಂದರ್ಥ ; ಅಂತೆಯೇ ನೀರಿನ ಉಷ್ಣತೆ ತಗ್ಗುತ್ತಿದೆ ಎಂದರೆ ನೀರಿನಿಂದ ಉಷ್ಣಶಕ್ತಿ ಸೋರುತ್ತಿದೆ ಎಂದರ್ಥ.

ಈ ದಿಶೆಯಲ್ಲಿ ಮೂಲಭೂತ ಚಿಂತನೆ ನಡೆಸಿದವರು ಸ್ಕಾಟ್ಲೆಂಡಿನ ಭೌತ ಹಾಗೂ ಗಣಿತ ವಿಜ್ಞಾನಿ ಜೇಮ್ಸ್ ಕ್ಲರ್ಕ್ ಮ್ಯಾಕ್ಸ್‌ವೆಲ್ (೧೮೩೧-೭೯) ಮತ್ತು, ಸ್ವತಂತ್ರವಾಗಿ, ಆಸ್ಟ್ರಿಯದ ಭೌತ ವಿಜ್ಞಾನಿ ಲಡ್ವಿಗ್ ಎಡ್ವರ್ಡ್ ಬೋಲ್ಟ್ಸ್‌ಮನ್ (೧೮೪೪-೧೯೦೬). ಇವರಿಬ್ಬರ ಹೆಸರಿನಿಂದ ಪ್ರಸಿದ್ಧವಾಗಿರುವ ಅನಿಲಗಳ ಚಲನ ಸಿದ್ಧಾಂತದ (kinetic theory of gases) ಪ್ರಕಾರ ಯಾವುದೇ ಅನಿಲವು ಅಣುಗಳ ಸಮುಚ್ಚಯ ; ಇವು ನಿರಂತರ ಯಾದೃಚ್ಛಿಕ ಚಲನೆಯಲ್ಲಿರುತ್ತವೆ ; ಒಂದೊಂದು ಬಿಡಿ ಅಣುವಿನ ಚಲನದಿಶೆಯನ್ನಾಗಲಿ ವೇಗವನ್ನಾಗಲಿ ಪ್ರತ್ಯೇಕವಾಗಿ ಗಣಿಸಿ ಹೇಳಲಾಗದಿದ್ದರೂ ಒಟ್ಟಾರೆ ಅನಿಲರಾಶಿಯಲ್ಲಿ ಅಣುಗಳ ಸರಾಸರಿ ವೇಗವನ್ನು ಗಣಿಸಿ ತಿಳಿಯುವುದು ಸಾಧ್ಯ ; ಈ ವೇಗವನ್ನು ಅವಲಂಬಿಸಿ ಅನಿಲರಾಶಿಯ ಚಲನಶಕ್ತಿ (kinetic energy) ನಿಹಿತವಾಗಿರುವುದು ಮತ್ತು ಇದೇ ಅದರ ಉಷ್ಣತೆಯ ಮಾನಕವಾಗಿರುವುದು. ಬಾನಿನ ಹಿರಿ ಎತ್ತರದಲ್ಲಿ ಸ್ವಚ್ಛಂದವಾಗಿ ಧಾವಿಸುವ ಮಿಡತೆ ದಂಡಿನಲ್ಲಿ ಅಥವಾ ಜೇನು ಹುಟ್ಟಿನಲ್ಲಿ ಬೇಕಾದಂತೆ ಅತ್ತ ಇತ್ತ ಸರಿಯುವ ಬಿಡಿ ಕೀಟದ ವೇಗವನ್ನು ಗಣಿಸುವುದು ಸಾಧ್ಯವಾಗದಿದ್ದರೂ ಒಟ್ಟಾರೆ ದಂಡಿನ ಸರಾಸರಿ ವೇಗವನ್ನು ಗಣಿಸಲು ಸಾಧ್ಯವಾಗುವುದಿಲ್ಲವೇ, ಹಾಗೆ.

ಅನಿಲರಾಶಿಯ ಒಟ್ಟು ಚಲನಶಕ್ತಿ ಅದರ ಉಷ್ಣತೆಯನ್ನು ನಿರ್ಧರಿಸುತ್ತದೆ. ಇದನ್ನು ಪರಿಮಾಣಾತ್ಮಕವಾಗಿ ಅಳೆದು ತಿಳಿಯುವುದು ಸಾಧ್ಯ. ಅನಿಲರಾಶಿಗೆ ಪರಿಸರದಿಂದ ಪೂರೈಕೆಯಾಗುವ ಉಷ್ಣಶಕ್ತಿಯಿಂದ ಚಲನಶಕ್ತಿ ಒದಗುತ್ತದೆ. ಆದ್ದರಿಂದ ಉಷ್ಣವೆಂಬ ಶಕ್ತಿರೂಪ ಅನಿಲರಾಶಿಯ ಬಿಡಿ ಅಣುಗಳಿಗೆ ತಾಗಿ ಅವುಗಳಿಗೆ ಅಧಿಕ ವೇಗವನ್ನೂಡಿ ಸಮಗ್ರ ರಾಶಿಯ ಚಲನಶಕ್ತಿಯನ್ನು ವೃದ್ಧಿಸುತ್ತದೆ. ಎಂದೇ ಆಗ ಅದರ ಉಷ್ಣತೆ ಕೂಡ ಹೆಚ್ಚುತ್ತದೆ.

ತುಂಬ ಸ್ವಾರಸ್ಯಕರವಾದ ಈ ಪರಿಕಲ್ಪನೆ ಮತ್ತು ಇದನ್ನು ಆಧರಿಸಿ ಮಾಡಿದ ಗಣಿತಗಣನೆಗಳು ಭೌತವಿಜ್ಞಾನದಲ್ಲಿ ಪ್ರಚಲಿತವಾಗಿದ್ದ ಹಲವು ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಿದುವು. ಆದರೆ ನಿಜಕ್ಕೂ ಅಣುಗಳಿರುವುವೇ ? ಎದುರಾದ ತೊಂದರೆಯನ್ನು ನಿವಾರಿಸಲೋಸ್ಕರ ಹೂಡಿದ ತಾತ್ಕಾಲಿಕ ಉಪಾಯ, ಹೂಟೆ ಅಥವಾ ಪರಿಕಲ್ಪನೆ ಅಣುಗಳಾಗಿರಬಹುದೇ ? ಈ ಪ್ರಶ್ನೆಗಳು ವಿಜ್ಞಾನಿಗಳನ್ನು ಬಾಧಿಸತೊಡಗಿದುವು. ಅಣುಗಳ ಅಸ್ತಿತ್ವದ ಬಗ್ಗೆ ಪ್ರತ್ಯಕ್ಷ ಪ್ರಮಾಣ ದೊರೆಯುವ ತನಕ ಅವು ನುಂಗಲೂ ಆಗದ ಉಗಿಯಲೂ ಆರದ ತುತ್ತಾಗಿದ್ದುವು. ಸರಿ. ಅನಿಲ (ವ್ಯಾಪಕವಾಗಿ ಯಾವುದೇ ವಸ್ತು) ಅಣುಗಳ ಸಮುಚ್ಚಯವೆಂದೇ ಒಪ್ಪಿಕೊಳ್ಳೋಣ. ಹಾಗಿದ್ದರೆ ದತ್ತ ಅನಿಲರಾಶಿಯಲ್ಲಿ ಅಥವಾ ದ್ರವವಸ್ತುವಿನಲ್ಲಿ ಇರುವ ಅಣುಗಳ ಸಂಖ್ಯೆ ಎಷ್ಟು ? (ಯಾವುದೇ ವಸ್ತುವಿನ ಅನಂತಾಲ್ಪ ರೂಪಕ್ಕೆ ಅದರ ಅಣುವೆಂದು ಹೆಸರು. ಅಣುವನ್ನು ಒಡೆದುದಾದರೆ ಆ ವಸ್ತುವಿನ ವ್ಯಕ್ತಿತ್ವ ನಾಶವಾಗುತ್ತದೆ. ಉದಾಹರಣೆಗೆ ನೀರಿನ ಅಣು. ಇದನ್ನು ಒಡೆದಾಗ ಆಕ್ಸಿಜನ್ ಮತ್ತು ಹೈಡ್ರೊಜನ್ ಅನಿಲಗಳು ದೊರೆಯುತ್ತವೆ. ಇವು ಒಂದೊಂದೂ ನೀರಿನ ಅಣುವಿಗಿಂತ ಭೌತವಾಗಿಯೂ ರಾಸಾಯನಿಕವಾಗಿಯೂ ಭಿನ್ನ ವಸ್ತುಗಳು ಎಂದೇ ವಸ್ತುವಿನ ಸಮಸ್ತ ಭೌತ ಹಾಗೂ ರಾಸಾಯನಿಕ ಗುಣಗಳನ್ನು ಒಳಗೊಂಡಿರುವ ಅತಿ ಸಂಕ್ಷಿಪ್ತ ರೂಪವೇ ಅದರ ಅಣು.)

೧೯೦೨ರಲ್ಲಿ ಐನ್‌ಸ್ಟೈನ್ (ವಯಸ್ಸು ೨೩, ಏಕಸ್ವ ಕಛೇರಿಯಲ್ಲಿ ಗುಮಾಸ್ತ) ಅಣುವಿನ

'ಮಹತೋಮಹೀಯಾನ್' ಗುಣಶೋಧನೆ ಮಾಡಲು ಕಳಕ್ಕಿಳಿದರು. ಕಾಣದ ಅಣುಗಳು ಕಾಣುವ ಸೂಕ್ಷ್ಮ ಕಣಕ್ಕೆ ಬಾರಿಸುವ ಗುದ್ದುಗಳ ಪರಿಣಾಮವಾಗಿ ಈ ಸೂಕ್ಷ್ಮಕಣ ಸಾಗುವ ಯಾದೃಚ್ಛಿಕ ಜಾಡನ್ನು (ಬ್ರೌನಿಯನ್ ಚಲನೆ) ಇವರು ಸಂಖ್ಯಾಕಲನಾತ್ಮಕವಾಗಿ (statistically) ಅಭ್ಯಸಿಸಿ ದರು. ಸೈದ್ಧಾಂತಿಕವಾಗಿ ಇವರು ೧೯೦೫ರ ವೇಳೆಗೆ ಒಂದು ಖಚಿತ ನಿರ್ಧಾರ ತಳೆದರು. ಕಾಣುವ ಸೂಕ್ಷ್ಮ ಕಣಗಳು ಚಲಿಸಿದ ದೂರಗಳನ್ನು ಅಳೆದು ಆ ಕಣಗಳ ಚಲನೆಗೆ ಕಾರಣವಾದ ಕಾಣದ ಅಣುಗಳ ಸಂಖ್ಯೆಯನ್ನು ನಿರ್ಧರಿಸುವುದು ಸಾಧ್ಯವೆಂದು ಸಾಧಿಸಿ ಗಣನೆಗೆ ಯೋಗ್ಯ ಸೂತ್ರ ನೀಡಿದರು. ಆಶ್ಚರ್ಯಕರವೆನಿಸುವಷ್ಟು ಸರಳವಾದ ಈ ಐನ್‌ಸ್ಟೈನ್-ಸೂತ್ರವನ್ನು (ಸುಸೂತ್ರ ವಿಧಾನವನ್ನು) ಪ್ರಪಂಚದ ವಿವಿಧ ವಿಜ್ಞಾನ ಪ್ರಯೋಗಮಂದಿರಗಳಲ್ಲಿ ತೀಕ್ಷ್ಣ ಪರೀಕ್ಷೆಗಳಿಗೆ ಒಳಪಡಿಸಿ ದೃಢೀಕರಿಸಲಾಯಿತು ಅಣುಪರಿಕಲ್ಪನೆ ಕೇವಲ ಗಣನೆಯ ಸೌಕರ್ಯಕ್ಕಾಗಿ ಆಯ್ದು ಕೊಂಡ ಬುದ್ಧಿವಂತಿಕೆಯ ಒಳದಾರಿ ಅಲ್ಲ, ನಿಸರ್ಗರಚನೆ ಅರಿಯುವೆಡೆಗಿನ ರಹದಾರಿ. ವಸ್ತು ಅಣುರೂಪಿ ಆಗಿರುವುದು ಖರೆ ಎಂಬುದನ್ನು ವಿಜ್ಞಾನ ಕರಾರುವಾಕ್ಕಾಗಿ ಸ್ವೀಕರಿಸಿತು. ಖುದ್ದು ಮ್ಯಾಕ್ಸ್ ಪ್ಲ್ಯಾಂಕರೇ ಸಂದೇಹಗ್ರಸ್ತರಾಗಿ ಕಲ್ಪಿಸಿಕೊಂಡಿದ್ದ ಅಣುರೂಪವನ್ನು ಐನ್‌ಸ್ಟೈನರ ನಿಶಿತಮತಿ ಸಂದೇಹಾತೀತವಾಗಿ ಕಂಡು ವಿವರಿಸಿತ್ತು.

ಅಣುವಿನಿಂದ ಕೆಳಗಿನ ಹಂತ ಪರಮಾಣು (atom). ನೀರು, ಕಾಗದ, ಎಲೆ, ಮರ, ಮಣ್ಣು, ದೇಹ ಮುಂತಾದ ಸಂಕೀರ್ಣ ವಸ್ತುಗಳಿಗೆ ರಾಸಾಯನಿಕವಾಗಿ ವಿವಿಧ ಸಂಯುಕ್ತಗಳೆಂದು (compounds) ಹೆಸರು. ಸಂಯುಕ್ತದ ಸಾಧ್ಯ ಸೂಕ್ಷ್ಮತಮ ರೂಪವೇ ಅದರ ಅಣು. ಈ ಅಣು ವನ್ನು ಒಡೆದಾಗ ಇದನ್ನು ರೂಪಿಸಿರುವ ರಾಸಾಯನಿಕ ಮೂಲ ವಸ್ತುಗಳು ದೊರೆಯುತ್ತವೆ. ಇವುಗಳಿಗೆ ಧಾತುಗಳೆಂದು (elements) ಹೆಸರು. ಧಾತುವಿನ ಸಾಧ್ಯ ಸೂಕ್ಷ್ಮತಮ ರೂಪವೇ ಅದರ ಪರಮಾಣು. ಧಾತುಗಳ ಪರಮಾಣುಗಳು ರಾಸಾಯನಿಕವಾಗಿ ಸಂಯೋಗಿಸಿ ಸಂಯುಕ್ತಗಳ ಅಣುಗಳು ಮೈದಳೆಯುತ್ತವೆ. ಒಂದು ಅರ್ಥದಲ್ಲಿ ಪರಮಾಣುಗಳೇ ವಿಶ್ವದ ಮೂಲ ಇಟ್ಟಿಗೆಗಳು. ನಿರ್ಮಾಣ ಘಟಕಗಳು (building blocks). ಇವುಗಳ ವಿವಿಧ ಜೋಡಣೆಗಳಿಂದ ವಿಶ್ವಕ್ಕೆ ಬಹುರೂಪತ್ವ ಒದಗಿದೆ.

'ಸರ್ವಂ ಅಣು ಪರಮಾಣುಮಯಂ ಜಗತ್' ಎಂಬ ತಾತ್ತ್ವಿಕ ನಿರೂಪಣೆಗೆ ಭದ್ರ ವೈಜ್ಞಾನಿಕ ಅಸ್ತಿಭಾರ ಕಟ್ಟಿದವರು ಐನ್‌ಸ್ಟೈನ್.

ಪ್ರೊಫೆಸರ್ ಅರ್ರೇನೀಯಸರ ಪರಿಚಯ ಭಾಷಣ ಮುಂದುವರಿಯಿತು. "ವಿಶಿಷ್ಟವಾಗಿ ಐನ್‌ಸ್ಟೈನ್ ಮಹಾಶಯರು ನೊಬೆಲ್ ಪ್ರಶಸ್ತಿ ಪಡೆದಿರುವ ಅಧ್ಯಯನಗಳ ಮೂರನೆಯ ವಿಷಯ ಶಕಲ ಸಿದ್ಧಾಂತದ [Quantum theory] ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿದೆ."

೧೯೦೦ರಲ್ಲಿ ಮ್ಯಾಕ್ಸ್ ಪ್ಲ್ಯಾಂಕ್ ಶಕಲ ಸಿದ್ಧಾಂತವನ್ನು ಮಂಡಿಸಿದ್ದರೆಂಬ ಸಂಗತಿಯನ್ನು ಹಿಂದೆ ಹೇಳಿದೆ (ಪುಟ ೨೩). ಪ್ರಯೋಗಗಳ ಮೂಲಕ ತಿಳಿಯಲಾದ ಬೆಳಕಿನ ಹಲವಾರು ವಿಚಿತ್ರ ವರ್ತನೆಗಳನ್ನು ಲಭ್ಯ ಭೌತವಿಜ್ಞಾನದ ಮುನ್ನೆಲೆಯಲ್ಲಿ ಸಮರ್ಪಕವಾಗಿ ವಿವರಿಸುವುದು ಕೈಗೂಡಿರ ಲಿಲ್ಲ. ಇಂಥ ಕುರುಡುಗಲ್ಲಿ (blind alley) ತಲಪು ಸನ್ನಿವೇಶದಲ್ಲಿ ಪ್ಲ್ಯಾಂಕ್ ಮಹಾಶಯ ಕ್ರಾಂತಿಕಾರಕ ಸೂಚನೆಯನ್ನು ಮುಂದಿಟ್ಟರು : ಹೇಗೆ ವಸ್ತುವು ಪರಮಾಣುಗಳ ಸಮುಚ್ಚಯವೋ ಹಾಗೆ ಬೆಳಕು ಶಕಲಗಳ (ಬಿಡಿಶಕ್ತಿ ಕಣಗಳ) ಸಮುಚ್ಚಯ. ಬೆಳಕು ಅವಿಚ್ಛಿನ್ನ ಪ್ರವಾಹವೆಂದು ನಂಬಿದ್ದವರಿಗೆ ಇದು ವಿವಿಕ್ತ ಶಕ್ತಿ ಪೊಟ್ಟಣಗಳ ಮೊತ್ತ ಎನ್ನುವ ವಿವರಣೆ ಪೂರ್ತಿ ಅಸಾಂಪ್ರದಾಯಿಕವಾಗಿ ಕಂಡದ್ದು ಆಶ್ಚರ್ಯವಲ್ಲ. ಸ್ವತಃ ಪ್ಲ್ಯಾಂಕರಿಗೇ ಈ ಪರಿಕಲ್ಪನೆ ಸಂತೃಪ್ತಿ

ನೀಡಿರದಿದ್ದರೂ ಬೆಳಕಿನ ವಿಚಿತ್ರ ವರ್ತನೆಗಳನ್ನು ಇದು ಸರಿಯಾಗಿ ವ್ಯಾಖ್ಯಾನಿಸಿ ಪ್ರಾಯೋಗಿಕ ಯಶಸ್ಸು ಗಳಿಸಿದ್ದರಿಂದ ಮತ್ತು ಇದನ್ನು ವಿಸ್ಥಾಪಿಸಬಲ್ಲ ಬೇರೆ ಯಾವ ವ್ಯಾಖ್ಯಾನಗಳೂ ಇರದ್ದರಿಂದ ಇದೊಂದು ಗಣನ ಸೌಕರ್ಯ ಪರಿಕಲ್ಪನೆ ಎಂಬುದಾಗಿ ಅಂಗೀಕೃತವಾಯಿತು.

ಆದರೆ ಐನ್‌ಸ್ಟೈನ್ ಹೀಗೆ ಭಾವಿಸಲಿಲ್ಲ. ದ್ರವ್ಯದಂತೆ ಶಕ್ತಿ ಕೂಡ ಕಣರೂಪಿಯಾಗಿರುವುದು ಶಕ್ಯವೆಂದು ನಂಬಿದರು. ಈ ದಿಶೆಯಲ್ಲಿ ತಮ್ಮ ಸಂಖ್ಯಾಕಲನಾತ್ಮಕ ವಿಧಾನವನ್ನು ಪ್ರಯೋಗಿಸಿ ವಿಕಿರಣಶಕ್ತಿ (radiant energy, ಉದಾಹರಣೆಗೆ ಬೆಳಕು) ಶಕಲರೂಪಿ ಹೌದು ಎಂಬುದಕ್ಕೆ ಸೈದ್ಧಾಂತಿಕ ಅಡಿಪಾಯ ಕಟ್ಟಿದರು. ಆಗ ಐನ್‌ಸ್ಟೈನ್ ಮಂಡಿಸಿದ ದ್ಯುತಿವೈದ್ಯುತ ಪರಿಣಾಮದ ನಿಯಮ (ಬೆಳಕು[೪೩] ಲೋಹದ ಮೇಲೆ ಪಾತವಾದಾಗ ಉದ್ಭವಿಸುವ ವಿದ್ಯುತ್ತಿನ ಅಧ್ಯಯನ—ಇದನ್ನು ಹಿಂದೆ ವಿವರಿಸಿದೆ) ಇವರನ್ನು ನವಸಾಧ್ಯತೆಗಳತ್ತ ಕೊಂಡೊಯ್ದಿತು.

"ಐನ್‌ಸ್ಟೈನ್ ಆವಿಷ್ಕರಿಸಿದ ದ್ಯುತಿವೈದ್ಯುತ ಪರಿಣಾಮದ (ನೋಡಿ ೩೦) ನಿಯಮವನ್ನು ಅಮೆರಿಕದ ಮಿಲ್ಲಿಕನ್ ಮತ್ತು ಅವರ ಶಿಷ್ಯರು ಕಡು ನಿಖರವಾಗಿ ತಪಾಸಿಸಿದ್ದಾರೆ. ಆ ಪರೀಕ್ಷೆಗಳಲ್ಲಿ ಇದು ಅತ್ಯುಜ್ಜ್ವಲವಾಗಿ ಉತ್ತೀರ್ಣವಾಗಿದೆ. ಐನ್‌ಸ್ಟೈನರ ಈ ಅಧ್ಯಯನಗಳ ದೆಸೆಯಿಂದ ಶಕಲ ಸಿದ್ಧಾಂತವನ್ನು ಉನ್ನತದರ್ಜೆಯವರೆಗೆ ಪರಿಷ್ಕರಿಸುವುದು ಸಾಧ್ಯವಾಗಿದೆ," ಎಂದರು ಅರ್ರೇನೀಯಸ್. (ರಾಬರ್ಟ್ ಆ್ಯಂಡ್ರೂಸ್ ಮಿಲ್ಲಿಕನ್, ೧೮೬೮-೧೯೫೩, ಅಮೆರಿಕದ ಭೌತ ವಿಜ್ಞಾನಿ, ೧೯೨೩ರ ಭೌತವಿಜ್ಞಾನ ವಿಭಾಗದ ನೊಬೆಲ್ ಪ್ರಶಸ್ತಿಧರ, ದ್ಯುತಿವೈದ್ಯುತ ಪರಿಣಾಮದ ಸೈದ್ಧಾಂತಿಕ ಸಮೀಕರಣಗಳನ್ನು ಅತ್ಯಾಶ್ಚರ್ಯಕರ ವಿಧಾನದಿಂದ ಪ್ರಾಯೋಗಿಕವಾಗಿ ತಪಾಸಿಸಿದ ಕೀರ್ತಿ ಇವರದು ; ಇವರಿಗೆ ನೊಬೆಲ್ ಪ್ರಶಸ್ತಿ ಪ್ರದಾನಿಸುವ ವೇಳೆ ಈ ಕೌತುಕವನ್ನು ಉಲ್ಲೇಖಿಸಲಾಗಿತ್ತು.)

ನೊಬೆಲ್ ಬಹುಮಾನವನ್ನು ಐನ್‌ಸ್ಟೈನ್ ಪ್ರತ್ಯಕ್ಷ ಹಾಜರಿದ್ದು ಸ್ವೀಕರಿಸುವುದು ಸಾಧ್ಯವಾಗಲಿಲ್ಲವೆಂದು ಹಿಂದೆ ಹೇಳಿದೆ. ಇವರ ಗೈರುಹಾಜರಿಯಲ್ಲಿ ಅದನ್ನು ಸ್ವೀಡನ್ನಿನಲ್ಲಿ 'ಇವರ ರಾಷ್ಟ್ರ'ವನ್ನು ಪ್ರತಿನಿಧಿಸುತ್ತಿದ್ದ ರಾಯಭಾರಿ ಸ್ವೀಕರಿಸಬೇಕಾಗಿತ್ತು. ಐನ್‌ಸ್ಟೈನ್ ತಮ್ಮ ಇಚ್ಛೆಯನ್ನು ಸ್ಪಷ್ಟಪಡಿಸಿದ್ದರು : ಸ್ವೀಡನ್ನಿನಲ್ಲಿದ್ದ ಸ್ವಿಟ್ಸರ್ಲೆಂಡಿನ ರಾಯಭಾರಿ ಈ ಕಾರ್ಯವನ್ನು ನಿರ್ವಹಿಸತಕ್ಕದ್ದು. ಆದರೆ ಸನ್ನಿವೇಶದ ಅಂತಾರಾಷ್ಟ್ರೀಯ ಮಹತ್ತ್ವವನ್ನು ಅರಿತಿದ್ದ ಜರ್ಮನಿ ತನಗೆ ನ್ಯಾಯವಾಗಿ (?) ಸಲ್ಲಬೇಕಾಗಿದ್ದ ಗೌರವವನ್ನು—ಐನ್‌ಸ್ಟೈನ್ ತನ್ನ ಅಮೂಲ್ಯ ಆಸ್ತಿಯಲ್ಲವೆ(?)—ಕಳೆದುಕೊಳ್ಳಲು ಸಿದ್ಧವಿರಲಿಲ್ಲ. ಸ್ವೀಡನ್ನಿನಲ್ಲಿದ್ದ ಜರ್ಮನ್ ಮತ್ತು ಸ್ವಿಸ್ ರಾಯಭಾರಿಗಳಿಬ್ಬರೂ ಐನ್‌ಸ್ಟೈನ್ ತಮ್ಮವರೆಂದು ಹಕ್ಕು ಸ್ಥಾಪಿಸಹೊರಟರು. ಸೊಲೊಮನ್ ರಾಜನಿಗೆ ಹೊಸ ಸವಾಲು !

ಜರ್ಮನ್ ರಾಯಭಾರಿ ಬರ್ಲಿನ್ನಿಗೆ, ಐನ್‌ಸ್ಟೈನರ ರಾಷ್ಟ್ರೀಯತೆ ಬಗ್ಗೆ ಅಧಿಕೃತ ಮಾಹಿತಿ ಕೋರಿ ತುರ್ತು ಸಂದೇಶ ರವಾನಿಸಿದ. ಇದಕ್ಕೆ ಜರ್ಮನಿಯ ವಿದೇಶಾಂಗ ಸಚಿವಾಲಯದಿಂದ ಬಂದ ಉತ್ತರ ಪ್ರಿಯವಾಗಿರಲಿಲ್ಲ—ಐನ್‌ಸ್ಟೈನ್ ಸ್ವಿಸ್ ಪಾಸ್‌ಪೋರ್ಟಿನಲ್ಲಿ ಪಯಣಿಸಿದ್ದರೆಂದು ತಿಳಿಯಿತು. ಇದರಿಂದ ತೃಪ್ತನಾಗದ ಅಥವಾ ಸುಮ್ಮನಾಗದ ಜರ್ಮನ್ ರಾಯಭಾರಿ ಒಡನೆ ಬರ್ಲಿನ್ ಅಕ್ಯಾಡಮಿ ಆಫ್ ಸೈನ್ಸಸ್ಸಿಗೆ ತಂತಿ ಸಂದೇಶ ಕಳಿಸಿದ. ಅಲ್ಲಿಂದ ಬಂದ ಮಾಹಿತಿ ಪ್ರಿಯವಾಗಿತ್ತು—ಐನ್‌ಸ್ಟೈನ್ ಜರ್ಮನ್ ಪ್ರಜೆ ಹೌದು ಎಂದಿತ್ತು. ಈ ಎರಡನೆಯ ತುರ್ಪನ್ನು ಈತ ಸ್ವಿಸ್ ರಾಯಭಾರಿಯ ಮುಂದೆ ಹೂಡಿ ಹೇಗೆ ತಾನು ಆ ಪ್ರಶಸ್ತಿಯನ್ನು ಸ್ವೀಕರಿಸುವುದು ಔಚಿತ್ಯಪೂರ್ಣವಾಗಿದೆ ಎಂಬುದನ್ನು ವಾದಿಸಿದ.

ಸ್ವಿಸ್ ರಾಯಭಾರಿ ಮೊದಲು ತಳಮಳಗೊಂಡರೂ ಕೊಂಚ ವಾದವಿವಾದಾನಂತರ, "ಐನ್‌ಸ್ಟೈನರನ್ನು ಜರ್ಮನ್ ಪ್ರಜೆಯೆಂದು ಪರಿಗಣಿಸುವುದು ವಾಡಿಕೆ. ಸರಿ, ನೀವೇ ಬಹುಮಾನ ಸ್ವೀಕರಿಸಿ," ಎಂದು ಸೌಜನ್ಯದಿಂದ ಸಮ್ಮತಿಸಿದ.

ಈ ನಯವಂತಿಕೆ ಜರ್ಮನ್ ರಾಯಭಾರಿಯ ಹೃದಯವನ್ನು ಗೆದ್ದಿತು. ಈತನ ಸೂಚನೆ ಮೇರೆಗೆ ಹೊಸತೊಂದು ಒಡಂಬಡಿಕೆಯನ್ನು ಇಬ್ಬರೂ ಒಪ್ಪಿದರು. ಇದರ ಪ್ರಕಾರ ಸ್ವೀಡನ್ನಿನಲ್ಲಿ ನೊಬೆಲ್ ಪ್ರಶಸ್ತಿಯನ್ನು ಜರ್ಮನ್ ರಾಯಭಾರಿ ಸ್ವೀಕರಿಸುವುದು, ಮತ್ತು ತರುವಾಯ, ಜರ್ಮನಿಯಲ್ಲಿ ಇದನ್ನು ಸ್ವಿಸ್ ರಾಯಭಾರಿ ಐನ್‌ಸ್ಟೈನರಿಗೆ ಒಪ್ಪಿಸುವುದು ಎಂದಾಯಿತು. ಸೌಜನ್ಯವು ಮಾರ್ದವತೆಗೆ ಪ್ರೇರಕ. (ನೊಬೆಲ್ ಸಮಿತಿಯ ದಾಖಲೆಗಳಲ್ಲಿ ಐನ್‌ಸ್ಟೈನರನ್ನು ಜರ್ಮನ್ ಪ್ರಜೆ ಎಂದೇ ದಾಖಲಿಸಲಾಗಿತ್ತು.) ಆದರೆ ವಾಸ್ತವವಾಗಿ ನಡೆದದ್ದು ಬೇರೆಯೇ ; ಜರ್ಮನಿಯಲ್ಲಿದ್ದ ಸ್ವೀಡಿಶ್ ರಾಯಭಾರಿ ಐನ್‌ಸ್ಟೈನರಿಗೆ ನೊಬೆಲ್ ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಮುಂದೊಂದು ಅನುಕೂಲ ದಿವಸ (೧೧-೭-೧೯೨೩) ಐನ್‌ಸ್ಟೈನ್ ಸ್ವೀಡನ್ನಿಗೆ ಹೋಗಿ ಅಲ್ಲಿ ನೊಬೆಲ್ ಭಾಷಣ ನೀಡಿದರು. ಪ್ರಶಸ್ತಿ ಪ್ರದಾನದ ವೇಳೆ ಯಾವ ಸಂಶೋಧನೆಗಳನ್ನು ಉಲ್ಲೇಖಿಸಲಾಗಿತ್ತೊ—ಬ್ರೌನಿಯನ್‌ಚಲನೆ ಹಾಗೂ ದ್ಯುತಿವೈದ್ಯುತ ಪರಿಣಾಮ—ಅವುಗಳ ಬಗ್ಗೆ ಈ ಭಾಷಣವಿರಬೇಕಾಗಿತ್ತು. ಆದರೆ ಐನ್‌ಸ್ಟೈನ್ ಈ ಮಾಮೂಲಿ ಸಂಪ್ರದಾಯ ಪಾಲಿಸಲಿಲ್ಲ. ಆಗ ಯಾವ ಸಂಶೋಧನೆಯನ್ನು ಉದ್ದೇಶಪೂರ್ವಕವಾಗಿ ಬುದ್ಧಿವಂತಿಕೆಯಿಂದ ಉಲ್ಲೇಖಿಸದೆ ಬಿಟ್ಟಿದ್ದರೊ—ಸಾಪೇಕ್ಷತಾಸಿದ್ಧಾಂತ—ಅದರ ಬಗೆಗೆ ಮಾತಾಡಿದರು.

ಐನ್‌ಸ್ಟೈನ್ ನೀಡಿದ ತಾಂತ್ರಿಕ ವಿವರಣೆಯ ಉದ್ಧೃತಾಂಶಗಳನ್ನು ಮಾದರಿಗಾಗಿ ಇಲ್ಲಿ ಉಲ್ಲೇಖಿಸಿದೆ :

"ಗುರುತ್ವಕ್ಷೇತ್ರವನ್ನು ಉಪಸಮತೆಯ ಇನ್ನೂ ಹೆಚ್ಚಿನ ಮಟ್ಟಕ್ಕೆ ಗಣಿಸಿದ್ದಾದರೆ, ಮತ್ತು ಅದರಂತೆ [*M*ಗೆ] ಸಾಪೇಕ್ಷವಾಗಿ ಅತ್ಯಂತ ಕಡಿಮೆ ದ್ರವ್ಯರಾಶಿಯುಳ್ಳ ಬಿಂದುವೊಂದರ ಕಕ್ಷಾಚಲನೆಯನ್ನು ಅಷ್ಟೇ ನಿಖರತೆಯಿಂದ ಗಣಿಸಿದ್ದಾದರೆ, ಗ್ರಹಚಲನೆಯ ಕೆಪ್ಲರ್-ನ್ಯೂಟನ್ ನಿಯಮಗಳಿಗೆ ಬರುವ ಈ ಮುಂದಿನ ವಿಚಲನೆಯನ್ನು ಗಮನಿಸುತ್ತೇವೆ. ಗ್ರಹದ ಕಕ್ಷಾದೀರ್ಘವೃತ್ತವು, ಚಲನೆಯ ದಿಕ್ಕಿನಲ್ಲಿ, ನಿಧಾನವಾಗಿ, ಅಂದರೆ ಒಂದು ಪರಿಭ್ರಮಣೆಯಲ್ಲಿ

$$\varepsilon = 24\pi^3 \frac{a^2}{T^2 c^2 (1 - e^2)}$$

ಎಂಬಷ್ಟು ಪರಿಭ್ರಮಿಸುತ್ತದೆ. ಈ ಸೂತ್ರದಲ್ಲಿ $a$ ದೀರ್ಘಾಕ್ಷಾರ್ಧವನ್ನೂ $c$ ಎಂದಿನ ಅಳತೆಯಲ್ಲಿ ಬೆಳಕಿನ ವೇಗವನ್ನೂ $e$ ಉತ್ಕೇಂದ್ರತೆಯನ್ನೂ $T$ ಸೆಕೆಂಡುಗಳಲ್ಲಿ ಪರಿಭ್ರಮಣಾವಧಿಯನ್ನೂ ಸೂಚಿಸುತ್ತವೆ.

"ಬುಧಗ್ರಹವನ್ನು ಕುರಿತಂತೆ ಮಾಡಲಾದ ಗಣನೆ ಅದರ ಕಕ್ಷೆಗೆ ಶತಮಾನದಲ್ಲಿ ೪೩"ಗಳಷ್ಟು ಪರಿಭ್ರಮಣೆಯನ್ನು ಕೊಡುತ್ತದೆ—ಇದು ಖಗೋಳವೈಜ್ಞಾನಿಕ ವೀಕ್ಷಣೆಗೆ ನಿಷ್ಕೃಷ್ಟವಾಗಿ ಹೊಂದಿಕೊಳ್ಳುತ್ತದೆ (ಲೆವೆರಿಯರ್); ಏಕೆಂದರೆ ಖಗೋಳವಿಜ್ಞಾನಿಗಳು ಈ ಗ್ರಹದ ಪುರರವಿಯ (perihelion) ಚಲನೆಯಲ್ಲಿ, ಇತರ ಗ್ರಹಗಳಿಂದಾಗುವ ಕ್ಷೋಭೆಗಳಿಗೆ ತಿದ್ದುಪಡಿಗಳನ್ನು ಮಾಡಿದ ಬಳಿಕವೂ, ವಿವರಿಸಲಾಗದ ಈ ಪರಿಮಾಣದ ಶೇಷವನ್ನು ಪತ್ತೆಮಾಡಿದ್ದಾರೆ."




ಚಿತ್ರ ೭. ಐನ್‌ಸ್ಟೈನರ ಒಂದು ಮುಖ್ಯ ಆವಿಷ್ಕಾರ ಬುಧಕಕ್ಷೆಯ ಪುರವಿಬಿಂದುವಿನ ನಿಧಾನಸರಿತಕ್ಕೆ ಕೊಟ್ಟ ಸಮರ್ಪಕ ವಿವರಣೆ. ಪುರವಿಬಿಂದು ಹೇಗೆ ಕಕ್ಷೆಯನ್ನು ಕಕ್ಷೆಗೆ ಬದಲಾಗುತ್ತದೆಯೆಂಬುದನ್ನು ತೋರಿಸುವ ಚಿತ್ರ *S* ಸೂರ್ಯ. ಬಾಣಗುರುತು ಬುಧ ಗ್ರಹದ ಪರಿಭ್ರಮಣ ದಿಶೆಯನ್ನು ಸೂಚಿಸುತ್ತದೆ.

ಇದು ಹೇಗೂ ಇರಲಿ. ಐನ್‌ಸ್ಟೈನರಿಗೆ ಈ ಮುಂದಿನ ಐದು ಸಂಶೋಧನೆಗಳ ಪೈಕಿ ಯಾವ ಒಂದಕ್ಕೂ ನೊಬೆಲ್ ಪ್ರಶಸ್ತಿ ಕೊಡಬಹುದಾಗಿತ್ತು : ಬ್ರೌನಿಯನ್‌ಚಲನೆ, ದ್ಯುತಿವೈದ್ಯುತ ಪರಿಣಾಮ, ವಿಶೇಷ ಸಾಪೇಕ್ಷತೆ, ಶಕ್ತಿ-ರಾಶಿ ಸಮಾನತಾ ಸಮೀಕರಣ $E=mc^2$, ಸಾರ್ವತ್ರಿಕ ಸಾಪೇಕ್ಷತೆ.

ನೊಬೆಲ್ ಪಾರಿತೋಷಿಕದ ಪೂರ್ತಿ ಮೊಬಲಗನ್ನೂ—ನಲವತ್ತು ಸಾವಿರ ಡಾಲರುಗಳು—ಐನ್‌ಸ್ಟೈನ್ ತಮ್ಮ ಮೊದಲನೆಯ ಹೆಂಡತಿ ಮಿಲೇವಾರಿಗೆ ಕಳಿಸಿಕೊಟ್ಟರು. ಇವರ ವಿವಾಹ ವಿಚ್ಛೇದನ ಪತ್ರದಲ್ಲಿ ಉಲ್ಲೇಖಿಸಲಾಗಿದ್ದ ಷರತ್ತುಗಳಲ್ಲಿ ಇದೂ ಒಂದು. ಐನ್‌ಸ್ಟೈನ್ ಸ್ವಸಂತೋಷದಿಂದ ಇದನ್ನು ಒಪ್ಪಿಕೊಂಡಿದ್ದರು. ನೊಬೆಲ್ ಪಾರಿತೋಷಿಕ ತಮಗೆ ಲಭಿಸುವುದರ ಬಗ್ಗೆ ಇವರಿಗೆ ಏನೂ ಸಂದೇಹವಿರಲಿಲ್ಲ.

ತಾಯಿಯ ಜೊತೆ ಇದ್ದ ಇವರ ಇಬ್ಬರು ಗಂಡು ಮಕ್ಕಳ ಪೈಕಿ ಕಿರಿಯನಾದ ಎಡುವರ್ಡನಿಗೆ ಇದೇ ಸುಮಾರಿಗೆ ತನ್ನ ವಿಖ್ಯಾತ ತಂದೆಯ ಪುನರ್ದರ್ಶನವಾಯಿತು. ಹನ್ನೊಂದರ ಹೈದ ತಂದೆಗೆ ಸವಾಲೆಸೆದ, "ಡ್ಯಾಡೀ ! ನೀನು ಇಷ್ಟೊಂದು ಪ್ರಸಿದ್ಧನಾಗಿರುವುದರ ಕಾರಣವೇನು ?"

ಸಾಪೇಕ್ಷತಾಸಿದ್ಧಾಂತದ ಆವಿಷ್ಕರ್ತೃ ಎರಡನೆಯ ಯೋಚನೆ ಇಲ್ಲದೆ ಆ ಗಳಿಗೆ, ವಾಯುಮಂಡಲಾತೀತ ಅಮೂರ್ತ ಔನ್ನತ್ಯದಿಂದ ಗಟ್ಟಿ ನೆಲಕ್ಕೆ ಥಟ್ಟನಿಳಿದು, ಜವಾಬು ನೀಡಿದರು, "ಮಗುವೇ ಕೇಳು ! ಕುರುಡು ಹುಳುವೊಂದು ಕಾಲ್ಚೆಂಡಿನ ಮೇಲೆ ಇದು ಗುಂಡಗಿದೆಯೆಂಬುದನ್ನು ಗಮನಿಸದೆ ತೆವಳುತ್ತಿತ್ತು. ಅದನ್ನು ಗಮನಿಸುವ ಅದೃಷ್ಟ ನನ್ನದಾಗಿತ್ತು."

# ೧೦. ಲೆತ್ತವಾಡದ ಭಗವಂತ

## ಏಕೀಕೃತ ಸಿದ್ಧಾಂತ

ಏಕೀಕೃತ ಕ್ಷೇತ್ರಸಿದ್ಧಾಂತವನ್ನು ವಿಶ್ರಾಂತಿಧಾಮಕ್ಕೆ ವರ್ಗಾಯಿಸಲಾಗಿದೆ. ಗಣಿತೀಯವಾಗಿ ಇದನ್ನು ಅನ್ವಯಿಸುವುದು ಕಡುಕಠಿಣ. ನಾನು ಎಷ್ಟು ಪ್ರಯತ್ನ ಹೂಡಿದರೂ ಯಾವುದೋ ಕಾರಣದಿಂದ ಇದನ್ನು ತಾಳೆ ನೋಡಲಾರದವನಾಗಿದ್ದೇನೆ. ಮುಖ್ಯವಾಗಿ, ಭೌತವಿಜ್ಞಾನಿಗಳಿಗೆ ತಾರ್ಕಿಕ-ತತ್ತ್ವಶಾಸ್ತ್ರೀಯ ವಾದಗಳ ಬಗ್ಗೆ ಇರುವ ಅರಿವು ಅತ್ಯಲ್ಪ ; ಎಂದೇ ಈ ಪರಿಸ್ಥಿತಿ ಹಲ ವರ್ಷ ಪರ್ಯಂತ ಮುಂದುವರಿಯುವುದರಲ್ಲಿ ಸಂದೇಹವಿಲ್ಲ (೧೯೫೧).

ಇದರ [ಏಕೀಕೃತ ಕ್ಷೇತ್ರಸಿದ್ಧಾಂತದ] ಸ್ಥಿರೀಕರಣ ಅಥವಾ ನಿರಾಕರಣ ಕುರಿತು ಯಾರೂ ಖಚಿತ ಹೇಳಿಕೆ ಮಂಡಿಸಲಾರರೆಂಬುದರ ಕಾರಣವಿದು. ಸಮೀಕರಣಗಳ ಇಂಥ ಜಟಿಲ ಅರೇಖೀಯ ವ್ಯವಸ್ಥೆಯ ವೈಚಿತ್ರ್ಯಗಳಿಗೆ ಮಣಿಯದ ಪರಿಹಾರಗಳು ಯಾವುವನ್ನೇ ಆಗಲಿ ದೃಢೀಕರಿಸಲು ವಿಧಾನಗಳಿಲ್ಲ. ಯಾರೂ ಎಂದೂ ಇವನ್ನು ಅರಿಯಲಾರರೆಂಬುದೂ ಸಾಧ್ಯವಿದೆ (೧೯೫೩).

ಐನ್‌ಸ್ಟೈನ್

ರಾಶಿರಹಿತ ಶಕ್ತಿ ಇಲ್ಲ ; ಶಕ್ತಿರಹಿತ ರಾಶಿ ಇಲ್ಲ : ಶಕ್ತಿ, ರಾಶಿ ಎರಡೂ $E = mc^{೨}$ ಎಂಬ ಐನ್‌ಸ್ಟೈನ್ ಸಮೀಕರಣದಿಂದ ಬಂಧಿತವಾಗಿವೆ ; ಇಲ್ಲಿ $E$ ಶಕ್ತಿ, $m$ ರಾಶಿ, $c$ ಬೆಳಕಿನ ವೇಗ : ರಾಶಿ ಮತ್ತು ಶಕ್ತಿ ಎಂಬವು ದ್ರವ್ಯದ ಎರಡು ಭಿನ್ನ ಮುಖಗಳು ಎಂದು ಮುಂತಾಗಿ ಅರಿತಿದ್ದೇವೆ.

ಸೂರ್ಯನ ರಾಶಿ ೧.೯೯ x ೧೦$^{೩೦}$ ಕೆಜಿ. ಭೂಮಿಯ ರಾಶಿ ೫.೯೭೬ x ೧೦$^{೨೪}$ ಕೆಜಿ. ಚಂದ್ರನ ರಾಶಿ ೭.೩೫ x ೧೦$^{೨೨}$ ಕೆಜಿ. ಸೂರ್ಯರಾಶಿ ಭೂಮಿ-ಚಂದ್ರರಾಶಿಯ ೩.೨೮ x ೧೦$^{೫}$ ಮಡಿ ದೊಡ್ಡದಿದೆ. ಭೂಮಿರಾಶಿ ಚಂದ್ರರಾಶಿಯ ೮೧.೩ ಮಡಿ ದೊಡ್ಡದಿದೆ. ಸೂರ್ಯ-ಭೂಮಿ ಸರಾಸರಿ ಅಂತರ ೧೪೯.೬ x ೧೦$^{೬}$ ಕಿಮೀ. ಭೂಮಿ-ಚಂದ್ರ ಸರಾಸರಿ ಅಂತರ ೩.೮೪ x ೧೦$^{೫}$ ಕಿ ಮೀ. ಚಂದ್ರವು ಭೂಮಿಯ ಸುತ್ತ ನಿಶ್ಚಿತ ಕಕ್ಷೆಯ ಮೇಲೆ ಕ್ಲುಪ್ತವೇಗದಿಂದ ನಿರ್ದಿಷ್ಟ ಅವಧಿಯಲ್ಲಿ ಪರಿಭ್ರಮಿಸುತ್ತದೆ.

ಈ ಶಿಸ್ತನ್ನು ವಿಧಿಸುವುದು ಯಾವುದು ? ಇದರ ಉತ್ತರವನ್ನು ನ್ಯೂಟನ್ ಪಡೆದರು : ಪ್ರತಿಯೊಂದು ಕಾಯವೂ (=ರಾಶಿ) ಇತರ ಎಲ್ಲ ಕಾಯಗಳನ್ನೂ ತನ್ನೆಡೆಗೆ ಆಕರ್ಷಿಸುವುದೆಂದು ಇವರು ಸಾಧಿಸಿದರು. ಆ ಆಕರ್ಷಣಬಲ ಅಳೆಯಲು $GMM'/R^{೨}$ ಎಂಬ ಸರಳ ಗಣಿತೋಕ್ತಿಯನ್ನು ನಿಗಮಿಸಿದರು. ಇಲ್ಲಿ $G$ ಒಂದು ಸ್ಥಿರಾಂಕ. ಇದರ ಬೆಲೆಯನ್ನು ಗಣಿಸಿ ನಿರ್ಧರಿಸಲಾಗಿದೆ. $M$ ಮತ್ತು $M'$ ಆಯಾ ಕಾಯದ ರಾಶಿ. $R$ ಕಾಯಗಳ ನಡುವಿನ ಅಂತರ.

ನ್ಯೂಟನ್ ಅವರ ಕಾಲದಲ್ಲಿ ತಿಳಿದಿದ್ದ ವಿಶ್ವಮಾಹಿತಿಗಳನ್ನು ಸಮರ್ಪಕವಾಗಿ ವಿವರಿಸುವಲ್ಲಿ $GMM' / R^{೨}$ ಅದ್ಭುತ ಯಶಸ್ಸು ಪಡೆಯಿತು. ಇಷ್ಟೇ ಅಲ್ಲ. ಹೊಸ ಹರವುಗಳತ್ತ ಹಾದಿ ತೋರಿಸುವ ಕೈಮರವೂ ಆಯಿತು. ಶತಮಾನಗಳುರುಳಿದುವು. ನವ ದತ್ತಾಂಶಗಳು ಸಂಗ್ರಹೀತವಾದುವು. ಇವನ್ನು ವಿವರಿಸುವಲ್ಲಿ $GMM'/R^{೨}$ ಸೋಲುವುದೆಂದು, ಅಥವಾ ಅಷ್ಟೇನೂ ಯಶಸ್ಸು ಗಳಿಸುವುದಿಲ್ಲವೆಂದು, ಕಂಡು ಬಂದಿತು. ಆ ಸನ್ನಿವೇಶದಲ್ಲಿ ಐನ್‌ಸ್ಟೈನ್ ಗುರುತ್ವಾಕರ್ಷಣೆಯ ಸಮಸ್ಯೆಯನ್ನು ಮೂಲಭೂತವಾಗಿ ಶೋಧಿಸಿದರು. ಇವರ ಚಿಂತನೆಯ ಫಲವಾಗಿ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತ ಮೈದಳೆಯಿತು (೧೯೧೫). ಆಗ ಇವರು ಪಡೆದ ಸಂಕೀರ್ಣ ಗಣಿತೋಕ್ತಿಯು ಗುರುತ್ವಾಕರ್ಷಣೆಗೆ ಬರೆದ ವಿನೂತನ ಭಾಷ್ಯವೆನಿಸಿತು. ಇದರ ವಿಶೇಷ ರೂಪವೇ ಅಥವಾ ಸ್ಥೂಲ

ರೂಪವೇ ನ್ಯೂಟನ್ ಗಣಿತೋಕ್ತಿ.

ಸಾರಾಂಶವಿಷ್ಟು. ದ್ರವ್ಯದ ಪರಿಣಾಮ ರಾಶಿ. ರಾಶಿಯ ಪರಿಣಾಮ (ಅಥವಾ ಪ್ರಕಟಿತ ಲಕ್ಷಣ) ಗುರುತ್ವಾಕರ್ಷಣೆ. ರಾಶಿಯನ್ನು ಆವರಿಸಿಕೊಂಡು ಗುರುತ್ವಾಕರ್ಷಣ ಕ್ಷೇತ್ರ ಉಂಟು. ಅಥವಾ ಗುರುತ್ವಾಕರ್ಷಣಕ್ಷೇತ್ರದ 'ಸಂಘನಿತ' ರೂಪವಾಗಿ ರಾಶಿ ಉಂಟು. ರಾಶಿಗಳ ಜೊತೆ ಗುರುತ್ವಾಕರ್ಷಣಕ್ಷೇತ್ರ ವರ್ತಿಸಿದಾಗ ಗುರುತ್ವಾಕರ್ಷಣ ಬಲಗಳು ಉದ್ಭವಿಸುತ್ತವೆ. ಉದಾಹರಣೆಗೆ ಸೂರ್ಯರಾಶಿಯ ಪರಿಣಾಮವಾಗಿ ಸೂರ್ಯನನ್ನು ಆವರಿಸಿಕೊಂಡು ಗುರುತ್ವಾಕರ್ಷಣ ಕ್ಷೇತ್ರವಿದೆ. ಇದು ಭೂಮಿರಾಶಿಯದರೊಂದಿಗೆ ವರ್ತಿಸಿದಾಗ ಗುರುತ್ವಾಕರ್ಷಣಬಲಗಳು ಉದ್ಭವಿಸಿ ಭೂಮಿಯನ್ನು ಸೂರ್ಯನ ಸುತ್ತ ಪರಿಭ್ರಮಿಸುವಂತೆ ವಿಧಿಸುತ್ತವೆ.

ಹೀಗೆ ದ್ರವ್ಯ ರಾಶಿ-ಗುರುತ್ವಾಕರ್ಷಣಕ್ಷೇತ್ರ-ಗುರುತ್ವಾಕರ್ಷಣಬಲ ಇವುಗಳ ನಡುವೆ ಅನ್ಯೋನ್ಯಸಂಬಂಧವನ್ನು ಗಣಿತೋಕ್ತಿಯಲ್ಲಿ ಸಂಸ್ಥಾಪಿಸಿ ಯಶಸ್ಸು ಗಳಿಸಿದ ಐನ್‌ಸ್ಟೈನರು, ವಿದ್ಯುತ್ಕಾಂತ ಕ್ಷೇತ್ರದತ್ತ ತಮ್ಮ ಗಮನವನ್ನೀಗ ಹರಿಸಿದರು.



ಚಿತ್ರ ೮. ಅತ್ಯಂತ ಸರಳಪರಮಾಣುವಿನ ಪ್ರರೂಪೀ ಚಿತ್ರ. + ಗುರುತು ಪ್ರೋಟಾನನ್ನೂ — ಗುರುತು ಎಲೆಕ್ಟ್ರಾನನ್ನೂ ಸೂಚಿಸುತ್ತವೆ. ಪ್ರೋಟಾನಿನ ಸುತ್ತ ಎಲೆಕ್ಟ್ರಾನ್ ಕಕ್ಷಿಸುತ್ತದೆ.

ವಿದ್ಯುತ್ತನ್ನು ಧರಿಸಿರುವ ಕಣಕ್ಕೆ ವಿದ್ಯುದಾವಿಷ್ಟ ಕಣವೆಂದೂ ಅದು ಹೊತ್ತಿರುವ ವಿದ್ಯುತ್ತಿಗೆ ಆವೇಶವೆಂದೂ (charge) ಹೆಸರು. ಆವೇಶದಲ್ಲಿ ಎರಡು ಬಗೆಗಳು—ಧನಾವೇಶ, ಋಣಾವೇಶ. ಪ್ರೋಟಾನುಗಳು ಧನಾವಿಷ್ಟ ಕಣಗಳು. ಎಲೆಕ್ಟ್ರಾನುಗಳು ಋಣಾವಿಷ್ಟಕಣಗಳು. ಪರಮಾಣುವೆಂದರೆ ಪ್ರೋಟಾನ್ ಮತ್ತು ಎಲೆಕ್ಟ್ರಾನ್ ಎಂಬ ಆವಿಷ್ಟ ಕಣಗಳ ಜೊತೆಗೆ ನ್ಯೂಟ್ರಾನ್ ಮುಂತಾದ ಆವೇಶರಹಿತ ಕಣಗಳು ಸೇರಿ ಆಗಿರುವ ಜಟಿಲ ಸುಭದ್ರ ಒಕ್ಕೂಟ: ಇದರ ಕೇಂದ್ರಕ್ಕೆ ನ್ಯೂಕ್ಲಿಯಸ್ ಎಂದು ಹೆಸರು. ಇಲ್ಲಿ ಪ್ರೋಟಾನ್ ಮತ್ತು ನ್ಯೂಟ್ರಾನ್ ಬಲವದ್ಬಂಧಿತವಾಗಿರುತ್ತವೆ. ಯಾವುದೇ ನ್ಯೂಕ್ಲಿಯಸ್ ಧನಾವಿಷ್ಟವಾಗಿರುವುದು. ಇದರಿಂದ ವಿವಿಧ ದೂರಗಳಲ್ಲಿ ಎಲೆಕ್ಟ್ರಾನುಗಳು ಇದನ್ನು ನಿರಂತರವಾಗಿ ಪರಿಭ್ರಮಿಸುತ್ತಿರುವುವು—ಬೇರೆ ಬೇರೆ ಚಿಪ್ಪುಗಳನ್ನೇ ನೇಯುತ್ತಿವೆಯೋ ಎಂಬಂತೆ. ಈ ಎಲ್ಲ ಎಲೆಕ್ಟ್ರಾನುಗಳ ಸಂಖ್ಯೆ ನ್ಯೂಕ್ಲಿಯಸ್ಸಿನಲ್ಲಿರುವ ಒಟ್ಟು ಪ್ರೋಟಾನುಗಳ ಸಂಖ್ಯೆಗೆ ಸಮವಾಗಿರುವುದು. ಅಲ್ಲಿಗೆ ಪರಸ್ಪರ ವಿರುದ್ಧಾವೇಶಗಳ ನಡುವೆ ಸಮತೋಲವೇರ್ಪಟ್ಟು ಒಟ್ಟಾರೆ ಪರಮಾಣು ವಿದ್ಯುತ್ತಟಸ್ಥವಾಗಿರುತ್ತದೆ. ಹೀಗಾಗಿ ಇದೊಂದು ಸ್ಥಿರ ಮತ್ತು ಸುಭದ್ರ ರಚನೆ ಅಥವಾ ಗಟ್ಟಿ ಇಟ್ಟಿಗೆ.



ಚಿತ್ರ ೯. ಸಂಕೀರ್ಣ ಪರಮಾಣುವೊಂದರ ನ್ಯೂಕ್ಲಿಯಸ್. + ಗುರುತುಗಳು ಪ್ರೋಟಾನುಗಳನ್ನೂ ಬಿಳಿ ವೃತ್ತಗಳು ನ್ಯೂಟ್ರಾನುಗಳನ್ನೂ ಸೂಚಿಸುತ್ತವೆ. ಇವು ಬಲವದ್ಬಂಧಿತವಾಗಿವೆ.

ತಂತಿಯಲ್ಲಿ ವಿದ್ಯುತ್ತು ಪ್ರವಹಿಸುತ್ತದೆ ಎಂದರೆ ಆ ತಂತಿಯನ್ನು ರೂಪಿಸಿರುವ ಪರಮಾಣುಗಳ ಆವರಣಗಳಲ್ಲಿರುವ ಎಲೆಕ್ಟ್ರಾನುಗಳು ಸಂಚರಿಸುತ್ತವೆ ಎಂದರ್ಥ. ಒಂದು ಪರಮಾಣುವಿನ ಎಲೆಕ್ಟ್ರಾನುಗಳು ಪಕ್ಕದ ಪರಮಾಣುವಿನ ಎಲೆಕ್ಟ್ರಾನುಗಳಿಗೆ ಕೊಕ್ಕೊಡುವುದರಿಂದ ಪ್ರವಾಹ



ಚಿತ್ರ ೧೦. ಸಂಕೀರ್ಣ ಪರಮಾಣುವೊಂದರ ನ್ಯೂಕ್ಲಿಯಸ್ಸಿನ ಸುತ್ತ ಎಲೆಕ್ಟ್ರಾನುಗಳು ಚಿಪ್ಪನ್ನು ನೇಯುವಂತೆ ಪರಿಭ್ರಮಿಸುತ್ತಿರುವುವು. – ಗುರುತಿನವು ಎಲೆಕ್ಟ್ರಾನುಗಳು.

ಸಾಗುತ್ತದೆ. ಈಗ, ಆವಿಷ್ಟ ಕಣಗಳ ನಡುವೆ ಬಲಗಳು ವರ್ತಿಸುತ್ತವೆ. ವಿದ್ಯುದಾವೇಶಗಳು ವಿದ್ಯುತ್ಕಾಂತಕ್ಷೇತ್ರವೆಂಬ (electromagnetic field) ವಿಶಿಷ್ಟ ಕ್ಷೇತ್ರವನ್ನು ರೂಪಿಸುತ್ತವೆಂದೂ ಈ ಕ್ಷೇತ್ರ ಇತರ ಆವಿಷ್ಟ ಕಣಗಳ ಮೇಲೆ ಬಲಗಳನ್ನು ಉತ್ಪಾದಿಸುವುದೆಂದೂ ಭಾವಿಸಬಹುದು. ಇವು ವಿದ್ಯುತ್ಕಾಂತ ಬಲಗಳು. ಈಗ ಕಣ-ಆವೇಶ-ವಿದ್ಯುತ್ಕಾಂತಬಲ-ವಿದ್ಯುತ್ಕಾಂತಕ್ಷೇತ್ರ ಇವುಗಳ ನಡುವಿನ ಅನ್ಯೋನ್ಯ ಸಂಬಂಧವನ್ನು ನಿರೂಪಿಸುವ ಗಣಿತೋಕ್ತಿ ಇದೆ.

ಅಲ್ಲಿಗೆ ವಿಶ್ವದ ಅತ್ಯಂತ ಪ್ರಮುಖ ವಿದ್ಯಮಾನಗಳಾದ ಗುರುತ್ವಾಕರ್ಷಣಕ್ಷೇತ್ರ-ಗುರುತ್ವಾಕರ್ಷಣಬಲ ಮತ್ತು ವಿದ್ಯುತ್ಕಾಂತಕ್ಷೇತ್ರ-ವಿದ್ಯುತ್ಕಾಂತಬಲ ಇವುಗಳ ನಡುವಿನ ಸಾದೃಶ್ಯ ವಿಜ್ಞಾನಿಗೆ ಸವಾಲಾಗಿ ಎದ್ದುಕಾಣುತ್ತದೆ. ಐನ್‌ಸ್ಟೈನ್ ಈ ಸವಾಲನ್ನು ಸ್ವೀಕರಿಸಿದರು.

ಸವಾಲಿನ ಸತ್ತ್ವವೇನು ? ಮೂಲಸಿದ್ಧಾಂತವೊಂದಿರಬೇಕು. ಅದು ನಮಗಿನ್ನೂ ತಿಳಿದಿಲ್ಲ. ಅದು ಮೇಲೆ ವಿವರಿಸಿದ ಎರಡು ವಿದ್ಯಮಾನಗಳನ್ನೂ ಒಳಗೊಂಡಿರಬೇಕು. ಅದರ ಒಂದು ಮುಖ ಅಥವಾ ವಿಶೇಷರೂಪ ಗುರುತ್ವಾಕರ್ಷಣಕ್ಷೇತ್ರವಾದರೆ ಇನ್ನೊಂದು ಮುಖ ಅಥವಾ ವಿಶೇಷ ರೂಪ ವಿದ್ಯುತ್ಕಾಂತಕ್ಷೇತ್ರ. ಈ ಏಕೀಕೃತ ಸಿದ್ಧಾಂತ (unified theory) ನಾಯಕಸೂತ್ರವಾಗಿರ ಬಹುದು. ಇದರ ಶೋಧನೆ ಐನ್‌ಸ್ಟೈನರ ಗೀಳಾಯಿತು : "ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತದ ಪರಿಕಲ್ಪನಾತ್ಮಕ ಅಸ್ತಿಭಾರಗಳಿಗೆ ವಿದ್ಯುತ್ಕಾಂತ ಕ್ಷೇತ್ರದೊಡನೆ ಯಾವ ಸಂಬಂಧಗಳೂ ಇಲ್ಲ. ಎಂದೇ ಈ ಅಂಶಗಳು ಮುಂದಿನ ಪ್ರಶ್ನೆಗೆ ಎಡೆ ಮಾಡಿಕೊಟ್ಟಿವೆ : ಸಿದ್ಧಾಂತದ ಗಣಿತಾತ್ಮಕ ಅಸ್ತಿಭಾರಗಳನ್ನು, ಅವುಗಳಿಂದ ಗುರುತ್ವಾಕರ್ಷಣಕ್ಷೇತ್ರದ ಗುಣಗಳನ್ನು ಮಾತ್ರವಲ್ಲ ವಿದ್ಯು ತ್ಕಾಂತ ಕ್ಷೇತ್ರದ ಗುಣಗಳನ್ನು ಕೂಡ ನಿಗಮಿಸಲು ಸಾಧ್ಯವಾಗುವ ತೆರನಾಗಿ, ಸಾರ್ವತ್ರೀಕರಿಸು ವುದು ಸಾಧ್ಯವಾಗದೇ ?" ಎಂಬುದಾಗಿ *Nature* ಪತ್ರಿಕೆಯಲ್ಲಿ ಬರೆದಿದ್ದರು.

ಭೌತವಿಜ್ಞಾನದ ಮುಂಚೂಣಿಯಲ್ಲಿದ್ದ ಪ್ರತಿಭಾನ್ವಿತರು ಐನ್‌ಸ್ಟೈನರ 'ಏಕೀಕೃತ ಸಿದ್ಧಾಂತ' ದೆಡೆಗಿನ ಒಂಟಿ ನಡೆಯನ್ನು ಆಶಾಭಾವನೆಯಿಂದೇನೂ ನೋಡಲಿಲ್ಲ. ನಕ್ಷತ್ರಗಳ ಬೃಹದ್ವಿಶ್ವವನ್ನು ವ್ಯಾಖ್ಯಾನಿಸುವ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತವನ್ನೂ ವಿದ್ಯುತ್ಕಣಗಳ ಪರಮಾಣು ವಿಶ್ವವನ್ನು ವ್ಯಾಖ್ಯಾನಿಸುವ ಶಕಲಸಿದ್ಧಾಂತವನ್ನೂ ಒಂದೇ ಗಣಿತ ಗಂಗೋತ್ರಿಯಿಂದ ಉದ್ಭವಿಸುವ ಎರಡು ತೊರೆಗಳೆಂದು ಭಾವಿಸುವಷ್ಟು ಸರಳವಲ್ಲ ವಿಶ್ವರಚನೆ ಎಂಬುದು ಅವರ ನಿಲವು. ವಾಸ್ತವವಾಗಿ ಭೌತವಿಜ್ಞಾನದ ಪ್ರವಾಹ ಈ ವೇಳೆಗೆ (೧೯೨೩-೨೪) ಐನ್‌ಸ್ಟೈನರನ್ನು ಹಿಂದೆ ಬಿಟ್ಟು ಬೇರೆ ದಿಶೆಯಲ್ಲಿ ಹರಿಯುತ್ತಿತ್ತು.

ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವ ಯಾವುದೇ ಗ್ರಹವನ್ನು ಪರಿಶೀಲಿಸೋಣ. ಅದು ಭವಿಷ್ಯದ ನಿರ್ದಿಷ್ಟ ಮುಹೂರ್ತದಲ್ಲಿ ಯಾವ ಸ್ಥಾನದಲ್ಲಿ ಇರುತ್ತದೆಂಬುದನ್ನು ಕರಾರುವಾಕ್ಕಾಗಿ ಗಣಿಸಿ ಕಣಿ ನುಡಿಯಬಹುದು. ಅಂದರೆ ಇಲ್ಲಿ ಕಾಲ-ಸ್ಥಾನ ಸಂಬಂಧ ನಿಸ್ಸಂದಿಗ್ಧವಾಗಿ ನಿರ್ಧರಿತವಾಗಿರುತ್ತದೆ. ಭವಿಷ್ಯದಲ್ಲಿ ಸಂಭವಿಸಲಿರುವ ಗ್ರಹಣಗಳನ್ನೂ ಸಂಕ್ರಮಗಳನ್ನೂ (ನಕ್ಷತ್ರಕ್ಕೂ ನಮಗೂ ನಡುವೆ ಆಕಾಶಕಾಯ ಅಡ್ಡಹಾಯುವ ವಿಶೇಷ ಘಟನೆ) ಮುಂದಾಗಿಯೇ ಹೇಳಲಾಗುವುದು ಈ ಕಾರಣದಿಂದ. ಈಗ, ಪರಮಾಣುಪ್ರಪಂಚಕ್ಕೆ ಇಳಿಯೋಣ. ಅಲ್ಲಿ ನ್ಯೂಕ್ಲಿಯಸ್ ಇದೆ. ಅದರ ಸುತ್ತ ಪರಿಭ್ರಮಿಸುತ್ತಿರುವ ಎಲೆಕ್ಟ್ರಾನುಗಳಿವೆ. ಯಾವುದೇ ಎಲೆಕ್ಟ್ರಾ ನಿನ ಭವಿಷ್ಯದ ಕಾಲ-ಸ್ಥಾನ (ನಿಷ್ಕೃಷ್ಟವಾಗಿ, ಸ್ಥಾನ-ಸಂವೇಗ) ಸಂಬಂಧವನ್ನು ಕರಾರುವಾಕ್ಕಾಗಿ ಗಣಿಸಿ ಕಣಿ ನುಡಿಯುವುದು ಸಾಧ್ಯವಾಗಿಲ್ಲ.[೪೪] ನಿರ್ದಿಷ್ಟ ಮುಹೂರ್ತಕ್ಕೆ ಎಲೆಕ್ಟ್ರಾನ್ ನಿರ್ದಿಷ್ಟ ಸ್ಥಾನಕ್ಕೆ ಬರಬಹುದು, ಬರದಿರಬಹುದು ; ನಿರ್ದಿಷ್ಟ ಸ್ಥಾನದಲ್ಲಿ ಎಲೆಕ್ಟ್ರಾನ್ ನಿರ್ದಿಷ್ಟ ಮುಹೂರ್ತದಲ್ಲಿ ಇರಬಹುದು. ಇಲ್ಲದಿರಬಹುದು. ಈ ಸಂದಿಗ್ಧತೆಯನ್ನು ನಿವಾರಿಸಲು ವಿಜ್ಞಾನಿ ಗಳು ಸಂಭಾವ್ಯತಾ ಸಿದ್ಧಾಂತವನ್ನು (Theory of Probability) ಆಶ್ರಯಿಸಿದ್ದಾರೆ.

ನಾಣ್ಯಕ್ಕೆ ಎರಡು ಪಾರ್ಶ್ವಗಳಿವೆ : ಲಾಂಛನಪಾರ್ಶ್ವ, ಮೌಲ್ಯಸೂಚಕಪಾರ್ಶ್ವ. ನಾಣ್ಯವನ್ನು ಗಿರಕಿಸಿ ಮೇಲೆಸೆಯಬೇಕು. ಅದು ನೆಲಕ್ಕೆ ಬಿದ್ದಾಗ ಯಾವ ಪಾರ್ಶ್ವ ನಮಗೆ ಕಾಣುತ್ತದೆ ? ಈ ಮುಂದಿನ ಸಾಧ್ಯತೆಗಳು ಎದುರಾಗಬಹುದು ಎಂಬುದಾಗಿ ಗಣಿತ ತಿಳಿಸುತ್ತದೆ :

| ಎಸೆತಗಳ ಸಂಖ್ಯೆ | ಲಾಂಛನ ಕಾಣುವುದು | ಮೌಲ್ಯ ಕಾಣುವುದು |
|---|---|---|
| ೧ | ೧ | ೦ |
| | ೦ | ೧ |
| ೨ | ೨ | ೦ |
| | ೦ | ೨ |
| | ೧ | ೧ |
| ೩ | ೩ | ೦ |
| | ೦ | ೩ |
| | ೨ | ೧ |
| | ೧ | ೨ |
| ಇತ್ಯಾದಿ | ಇತ್ಯಾದಿ | ಇತ್ಯಾದಿ |

ಆದರೆ ಪ್ರತ್ಯಕ್ಷ ಪ್ರಯೋಗ ಮಾಡಿ ನೋಡಿದರೆ ಎಸೆತಗಳ ಸಂಖ್ಯೆ ಹೆಚ್ಚು ಹೆಚ್ಚು ಆದಂತೆ ಎರಡು ಸಾಧ್ಯತೆಗಳೂ ಸಮವಾಗುವುದರತ್ತ ಒಲವನ್ನು ಪ್ರದರ್ಶಿಸುತ್ತವೆಂದು ತಿಳಿಯುತ್ತದೆ. ಅಂದರೆ ೧೦೦ ಸಲ ಎಸೆದಾಗ ಲಾಂಛನ-ಮೌಲ್ಯ ನಿಷ್ಪತ್ತಿ ಅನುಕ್ರಮವಾಗಿ ೬೦:೪೦ರಲ್ಲಿ ನಿಲ್ಲಬಹುದು ; ೫೦೦ ಸಲ ಎಸೆದಾಗ ೨೬೦:೨೪೦ ರಲ್ಲಿ ನಿಲ್ಲಬಹುದು ; ೧೦೦೦ ಸಲ ಎಸೆದಾಗ ೫೧೦:೪೯೦ರಲ್ಲಿ ನಿಲ್ಲಬಹುದು ; ಇತ್ಯಾದಿ. ಆದ್ದರಿಂದ ನಿಸರ್ಗ ಯಾವುದೇ ಸಾಧ್ಯತೆಯನ್ನು ಅಧಿಕ ಪ್ರಿಯವೆಂದು ಭಾವಿಸುವುದಿಲ್ಲ. ಅಂದರೆ ನಿಸರ್ಗದಲ್ಲಿ ಪಕ್ಷಪಾತ ಧೋರಣೆ ಇಲ್ಲ ಎಂದು ತಿಳಿಯುತ್ತದೆ. ಅಂದಮೇಲೆ ಲಾಂಛನ ಎಷ್ಟು ಸಲ ಕಾಣಬೇಕೋ ಮೌಲ್ಯವೂ ಅಷ್ಟು ಸಲ ಕಾಣಬೇಕು. ಎಸೆತಗಳ ಸಂಖ್ಯೆಯನ್ನು ಮಾತ್ರ ಸಾವಿರ, ಲಕ್ಷ, ಕೋಟಿಗಳನ್ನು ಮೀರಿ ಏರಿಸಬೇಕು. ನಿಸರ್ಗದ ಮಹಾಪ್ರಯೋಗ ಮಂದಿರದ ವಿವಿಧ ರಂಗಗಳಲ್ಲಿ ಕೋಟ್ಯಂತರ ವರ್ಷಗಳಿಂದ ಅತ್ಯಗಾಧ ಪ್ರಮಾಣದಲ್ಲಿ ನಡೆಯುತ್ತ ಬಂದಿರುವ ಪ್ರಯೋಗಗಳಲ್ಲಿ ಈ ಪ್ರವೃತ್ತಿ ಕಂಡು ಬಂದಿದೆ. ಎಂದೇ ಪ್ರಪಂಚದ ಜನಸಂಖ್ಯೆಯಲ್ಲಿ ಗಂಡುಗಳ ಸಂಖ್ಯೆ, ಹೆಣ್ಣುಗಳ ಸಂಖ್ಯೆ ಸರಿಸುಮಾರಾಗಿ ಸಮವಾಗಿರುತ್ತವೆ. ಪಗಡೆ ಆಟದಲ್ಲಿ ದಾಳಿ ಹೂಡುವಾಗ, ಇಸ್ಪೀಟು ಆಟದಲ್ಲಿ ಎಲೆಗಳು ಬರುವಾಗ, ಲಾಟರಿಯಲ್ಲಿ ಅದೃಷ್ಟ ಸಂಖ್ಯೆ ಎತ್ತುವಾಗ, ಕುದುರೆ ಪಂದ್ಯದಲ್ಲಿ 'ನಮ್ಮ ಕುದುರೆ' ಗೆಲ್ಲುವಾಗ, ಇತ್ಯಾದಿ, ಇದೇ 'ಆಟ' ಅಂದರೆ ಅದೃಷ್ಟದೊಂದಿಗಿನ ಚೆಲ್ಲಾಟ ನಡೆದಿರುತ್ತದೆ. ಈ ಆಟವನ್ನು ಶಾಸ್ತ್ರೀಯವಾಗಿ ಅಭ್ಯಸಿಸುವ ಗಣಿತವಿಭಾಗವೇ ಸಂಭಾವ್ಯತಾಸಿದ್ಧಾಂತ.

ಸಾವಿರ ಸಲ ಎಸೆದ ನಾಣ್ಯ ಬಿದ್ದಾಗ ಅಷ್ಟು ಸಲವೂ ಲಾಂಛನವೇ ಕಾಣುವ ಸಂಭಾವ್ಯತೆ ಏನು ? ಅತ್ಯಲ್ಪ. ಪ್ರಪಂಚದಲ್ಲಿ ಒಂದು ತಿಂಗಳು ಕೇವಲ ಗಂಡುಮಕ್ಕಳೇ ಹುಟ್ಟುವ ಸಂಭಾವ್ಯತೆ ಏನು ? ಅತ್ಯಲ್ಪ. ನಾನು ಕೊಂಡ ಲಾಟರಿ ಟಿಕೇಟಿಗೆ ಬಹುಮಾನ ಬರುವ ಸಂಭಾವ್ಯತೆ ಏನು? ಅತ್ಯಲ್ಪ. ಆದರೆ ಇದು ಯಾವುದೂ ಅಸಾಧ್ಯವಲ್ಲ. ಆದ್ದರಿಂದ ಎಲ್ಲಿ ನಿರ್ದಿಷ್ಟತೆ ವಿಫಲವಾಗುತ್ತದೋ ಅಲ್ಲಿ ಸಂಭಾವ್ಯತೆ ಪ್ರವೇಶಿಸುತ್ತದೆ ಎನ್ನುತ್ತೇವೆ.

ಪರಮಾಣುವಿನ ಕತೆಗೆ ಮರಳೋಣ. ಅಲ್ಲಿ ನಿರ್ದಿಷ್ಟವಾಗಿ ಎಲೆಕ್ಟ್ರಾನಿನ ಸ್ಥಾನ-ಸಂವೇಗ ಸಂಬಂಧ ಹೇಳಲಾಗದಿದ್ದುದರಿಂದ ಸಂಭಾವ್ಯತೆಯ ಪ್ರವೇಶ ಅನಿವಾರ್ಯವಾಯಿತು. ಪರಮಾಣುವಿನ ಅಗೋಚರ ಪ್ರಪಂಚದಲ್ಲಿ ನಿಸರ್ಗವು ವಿಜ್ಞಾನಿಯೊಡನೆ ಲೆತ್ತ ಹೂಡುವಂತೆ

ತೋರುತ್ತದೆ. ಆದರೆ ಐನ್‌ಸ್ಟೈನ್ ಈ 'ಅನುಕೂಲಸಿಂಧು' ಮಾರ್ಗವನ್ನು ಪುರಸ್ಕರಿಸಲಿಲ್ಲ. ಪರಮಾಣು ಪ್ರಪಂಚವನ್ನು ಕುರಿತಂತೆ ಪ್ರವರ್ಧಿಸಿದ್ದ ಸಂಖ್ಯಾಕಲನಾತ್ಮಕ ಗಣನೆಗಳನ್ನೂ ಸಂಭಾವ್ಯತಾಸಿದ್ಧಾಂತದ ಅನ್ವಯಗಳನ್ನೂ ಇವರು ಒಂದು ತೆರನಾದ ಸಂದೇಹ ದೃಷ್ಟಿಯಿಂದ ನೋಡುತ್ತಿದ್ದರು. "ಭಗವಂತ ಲೆತ್ತ ಹೂಡುವುದಿಲ್ಲ," "ದೇವರು ಗರ ಎಸೆಯುವುದಿಲ್ಲ," "ಪರಮಾತ್ಮ ಪಗಡೆಯಾಟ ಆಡುವುದಿಲ್ಲ" ಮುಂತಾದವು ಇವರ ಪ್ರಸಿದ್ಧ ಹೇಳಿಕೆಗಳು. ನಿಸರ್ಗದಲ್ಲಿ ಎಲ್ಲವೂ ವಿವಿಕ್ತ, ನಿರ್ದಿಷ್ಟ ಮತ್ತು ಖಚಿತವಾಗಿದ್ದು ಅದು ಪರಿಪೂರ್ಣ ಸೌಂದರ್ಯದಿಂದ ಕೂಡಿದೆ; ಆ ಸೌಂದರ್ಯಾನ್ವೇಷಣೆ ನಮ್ಮ ಕರ್ತವ್ಯವಾಗಬೇಕು; ಅದು ನಮಗೆ ಪೂರ್ಣ ಸಿದ್ಧಿಸಿಲ್ಲ ಎಂದ ಮಾತ್ರಕ್ಕೆ ಅದನ್ನು ಬೇರೆ ತೆರನಾಗಿ ಅರ್ಥವಿಸುವುದು ತರವಲ್ಲ ಎಂಬ ನಿಲವು ತಳೆದಿದ್ದ ಐನ್‌ಸ್ಟೈನ್ ಲೆತ್ತವೆಸೆಯದ ಪರಮಾತ್ಮನ ಅನ್ವೇಷಣೆಗಾಗಿ ಅಂದರೆ ಏಕೀಕೃತ ಸಿದ್ಧಾಂತದ ಆವಿಷ್ಕಾರಕ್ಕಾಗಿ ತಮ್ಮ ಶೇಷಾಯುಷ್ಯವನ್ನು ಮುಡಿಪಾಗಿಟ್ಟರು.

ತಾವು ಆಯ್ದುಕೊಂಡ ಹಾದಿಯ ಕಡು ತೊಡಕುಗಳ ಬಗೆಗೆ ಇವರಿಗೆ ಪೂರ್ಣ ಅರಿವಿತ್ತು. ಐನ್‌ಸ್ಟೈನರು 'ವೈಜ್ಞಾನಿಕ ಹರಾಕಿರಿಯ' ದುರಂತ ಮಾರ್ಗಗಾಮಿಯಾಗಿದ್ದಾರೆ ಎಂಬುದಾಗಿ ಪ್ರಪಂಚದ ಹಿರಿಯ ಭೌತವಿಜ್ಞಾನಿಗಳು ಪ್ರಾಮಾಣಿಕವಾಗಿ ನಂಬಿದ್ದಾಗ (೧೯೨೦) ಇವರು ಮಾತ್ರ ಆ ಮಾರ್ಗದಲ್ಲಿ ಏಕಾಂಗಿಯಾಗಿ ಮುನ್ನಡೆದರು. "ನಾನು ಯಶಸ್ಸು ಗಳಿಸುವ ಯೋಗ ಅತ್ಯಲ್ಪ. ಆದರೆ ಪ್ರಯತ್ನವನ್ನಂತೂ ಮಾಡಲೇಬೇಕು." ಈಗಾಗಲೇ ಇವರ ಖ್ಯಾತಿ ಸುಸ್ಥಾಪಿತವಾಗಿದ್ದುದರಿಂದ ಬಲುಮಟ್ಟಿಗೆ ವೈಫಲ್ಯ ಎದುರಾಗಬಹುದಾದ ಈ ಹಾದಿಯನ್ನು ಇವರು—ಇವರು ಮಾತ್ರ—ಹಿಡಿಯಬಹುದಾಗಿತ್ತು. ಬೇರೆ ಯಾವ ತರುಣ ವಿಜ್ಞಾನಿಯೂ ಈ ಸಂಶಯಾಸ್ಪದ ಮಾರ್ಗವನ್ನು ಅನುಸರಿಸಲಾರದವನಾಗಿದ್ದ—ಅವನ ವಿಜ್ಞಾನಜೀವನದ ಸಾಫಲ್ಯ ಅವನ ಸಂಶೋಧನೆಯ ಯಶಸ್ಸನ್ನೇ ಅವಲಂಬಿಸಿದ್ದುದರಿಂದ. ಒಂದು ರೀತಿಯಲ್ಲಿ ಇದು ವಿಜ್ಞಾನ ಪ್ರಪಂಚಕ್ಕೆ ತಾವು ಸಲ್ಲಿಸಬೇಕಾದ ಕರ್ತವ್ಯವೆಂಬ ನಿರ್ವಿಕಲ್ಪ ಭಾವದಿಂದ ಐನ್‌ಸ್ಟೈನ್ ಈ ಹಾದಿಯಲ್ಲಿ—ಏಕೀಕೃತ ಸಿದ್ಧಾಂತದ ಶೋಧದಲ್ಲಿ—ಮುಂದೆ ಸಾಗಿದರು.

"ಶಕಲಗಳನ್ನು [ಶಕ್ತಿ ಪೊಟ್ಟಣಗಳು, quanta] ಹೆಚ್ಚು ಹೆಚ್ಚು ಬೆಂಬತ್ತಿದಂತೆ ಅವು ಹೆಚ್ಚು ಹೆಚ್ಚು ಅವಿತುಕೊಳ್ಳುತ್ತವೆ," ಎಂದು ಇವರು ಏರೆನ್‌ಫೆಸ್ಟರಿಗೆ ೧೯೨೪ ಜುಲೈ ೧೨ರಂದು ಬರೆದು ತಮ್ಮ ಉದ್ವಿಗ್ನತೆಯನ್ನು ತೋಡಿಕೊಂಡಿದ್ದರು.

ಮ್ಯಾಕ್ಸ್ ಬಾರ್ನ್ ೧೯೨೫ ಜುಲೈ ೧೫ರಂದು ಐನ್‌ಸ್ಟೈನರಿಗೊಂದು ಕಾಗದ ಬರೆದರು. "ನಿಮ್ಮ ಹಾಗೂ ನೀಲ್ಸ್ ಬೋರ್ ಅವರ ಭಾವನೆಗಳೊಂದಿಗೆ ಹೋಲಿಸುವಾಗ ನಾನು ಮಾಡುತ್ತಿರುವುದು ತೀರ ಸಾಧಾರಣ ಕೆಲಸವೆಂದು ನನಗೆ ಗೊತ್ತಿದೆ. ನನ್ನ ಯೋಚನೆಯ ಪೆಟ್ಟಿಗೆ ಹಂದಾಡುತ್ತಿದೆ. ಅದರೊಳಗೆ ಹೆಚ್ಚಿಗೇನೂ ಇಲ್ಲ. ಇನ್ನು ಇರುವ ಅಲ್ಪವಾದರೂ ಹಿಂದೆ ಮುಂದೆ ಗಡಬಡಿಸುತ್ತಿದೆ ! ಅದಕ್ಕೆ ನಿರ್ದಿಷ್ಟ ಆಕಾರವೇನೂ ಇಲ್ಲ, ಮತ್ತು ಅದು ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಿದೆ. ನಿಮ್ಮ ಮಿದುಳಾದರೋ ದೇವರೇ ಬಲ್ಲ, ತುಂಬ ಅಚ್ಚುಕಟ್ಟಾಗಿರುವಂತೆ ಕಾಣುತ್ತದೆ. ಅದರ ಉತ್ಪನ್ನಗಳು ಸ್ವಚ್ಛ, ಸರಳ ಮತ್ತು ನಿಷ್ಕೃಷ್ಟ. ಅದೃಷ್ಟ ಕೂಡಿ ಬಂದರೆ ಮುಂದಿನ ಕೆಲವು ವರ್ಷಗಳಲ್ಲಿ ಇವನ್ನು ನಾವು ಅರಿತೇವು . . . ಗುರುತ್ವಾಕರ್ಷಣೆಯನ್ನು ವಿದ್ಯುದ್ಗತಿವಿಜ್ಞಾನದ ಜೊತೆ ಏಕೀಕರಿಸುವುದರಲ್ಲಿ ನೀವು ಕೊನೆಗೂ ವಿಜಯಿಗಳಾಗಿದ್ದೀರೆಂಬ ನಿಮ್ಮ ಅಭಿಪ್ರಾಯ ನನ್ನಲ್ಲಿ ಪರಮ ಸಂತೋಷ ಉಂಟುಮಾಡಿದೆ." ಆದರೆ ಈ ಅಭಿಪ್ರಾಯ ತಪ್ಪಾಗಿತ್ತು. ಐನ್‌ಸ್ಟೈನ್ ವಿಜಯಿಯಾಗಿರಲಿಲ್ಲ.

ಇವರ ಮರಣಾನಂತರ, ೧೯೬೦ರ ದಶಕದಲ್ಲಿ, ಮ್ಯಾರ್ಕ್ಸ್ ಬಾರ್ನ್ ಈ ಕಾಗದಕ್ಕೆ ಬರೆದ ಟಿಪ್ಪಣಿಯಲ್ಲಿ ಇದನ್ನು ಪ್ರಸ್ತಾವಿಸಿದ್ದಾರೆ, "ಐನ್‌ಸ್ಟೈನರ ಭಾವನೆಯ ಯಶಸ್ಸು ನನ್ನಲ್ಲಿ ಉತ್ಪಾದಿಸಿದ ಉತ್ಸಾಹ ನಿಜಕ್ಕೂ ಪ್ರಾಮಾಣಿಕವಾದದ್ದೆಂದು ನನ್ನ ನಂಬಿಕೆ. ಅವರ ಬದುಕಿನ ಕೊನೆ ಉಸಿರಿನ ತನಕವೂ ಅವರು ಬೆಂಬತ್ತಿದ ಲಕ್ಷ್ಯ ಗಮನೀಯವಾದದ್ದು ಮತ್ತು ಅತಿಮುಖ್ಯವಾದದ್ದು ಎಂಬುದಾಗಿ ಆ ದಿನಗಳಲ್ಲಿ ನಾವೆಲ್ಲರೂ ಭಾವಿಸಿದ್ದೆವು. ಆದರೆ ಈ ಕ್ಷೇತ್ರಗಳ [ಗುರುತ್ವಾಕರ್ಷಣೆ, ವಿದ್ಯುತ್ಕಾಂತತ್ವ] ಜೊತೆಗೆ ಬೇರೆ ಬಗೆಯ ಕ್ಷೇತ್ರಗಳೂ ಭೌತವಿಜ್ಞಾನದಲ್ಲಿ ಉದ್ಭವಿಸಿದಂತೆ ನಮ್ಮಲ್ಲಿ ಬಹುಮಂದಿ [ಏಕೀಕೃತ ಸಿದ್ಧಾಂತದ ಯಶಸ್ಸಿನ ಬಗ್ಗೆ] ಸಂದೇಹಗ್ರಸ್ತರಾದೆವು ... [ಆ ದಿಶೆಯಲ್ಲಿ] ಐನ್‌ಸ್ಟೈನರ ನಿರಂತರ ಪ್ರಯತ್ನವೊಂದು ದುರಂತ ದೋಷವೆಂದು ನಮಗೆ ಅನ್ನಿಸಿತು."

೧೯೩೨ರ ಸುಮಾರಿಗೆ ನಡೆದ ಘಟನೆ ಇದು. ಐನ್‌ಸ್ಟೈನರನ್ನು ನೋಡಲೆಂದು ಪಿಲಿಫ್ ಫ್ರ್ಯಾಂಕ್ ಬರ್ಲಿನ್ನಿಗೆ ಹೋಗಿದ್ದರು. 'ಪರಮಾತ್ಮ ಲೆತ್ತವೆಸೆಯುವುದಿಲ್ಲ'ವೆಂಬ ತಮ್ಮ ದೃಢ ನಂಬಿಕೆಯನ್ನು ರುಜುವಾತಿಸುವ ಹಾದಿಯಲ್ಲಿ ಐನ್‌ಸ್ಟೈನ್ ಒಬ್ಬಂಟಿಗರಾಗಿ ನಡೆಯುತ್ತಲೇ ಇದ್ದರು. ಪ್ರಪಂಚದ ಇತರ ಪ್ರಸಿದ್ಧ ಭೌತವಿಜ್ಞಾನಿಗಳಾದ ನೀಲ್ಸ್ ಬೋರ್, ಮ್ಯಾಕ್ಸ್ ಬಾರ್ನ್, ವರ್ನರ್ ಹೈಸನ್‌ಬರ್ಗ್ ಮೊದಲಾದವರು ಸಂಖ್ಯಾಕಲನವಿಜ್ಞಾನ ಹಾಗೂ ಸಂಭಾವ್ಯತಾ ಸಿದ್ಧಾಂತಗಳ ಪರಿಭಾಷೆಯಲ್ಲಿ ನಿರೂಪಿತವಾದ ಶಕಲಸಿದ್ಧಾಂತವನ್ನು ಆ ವೇಳೆಗೆ ಅಂಗೀಕರಿಸಿದ್ದರು. ೧೯೦೫ರಲ್ಲಿ ಐನ್‌ಸ್ಟೈನ್ ಮುಖಮಾರ್ಜನ ನೀಡಿದ್ದ ಶಕಲಸಿದ್ಧಾಂತವೀಗ ಪೂರ್ತಿ ಬೇರೆಯದೇ ಆದ ಮುಖ ಪಡೆದಿತ್ತು. ಇದಕ್ಕೆ ನೂತನ ಭೌತವಿಜ್ಞಾನವೆಂಬ ಹೆಸರು ಕೂಡ ಬಂದಿತ್ತು.

ಫ್ರ್ಯಾಂಕ್-ಐನ್‌ಸ್ಟೈನ್ ಸಂಭಾಷಣೆ ನೂತನ ಭೌತವಿಜ್ಞಾನದ ಸುತ್ತ ಲಾಸ್ಯವಾಡತೊಡಗಿತು. ಅರ್ಧ ವಿನೋದಾತ್ಮಕವಾಗಿ ಐನ್‌ಸ್ಟೈನ್ ಹೇಳಿದರು, "ಭೌತವಿಜ್ಞಾನದಲ್ಲಿ ಈಗ ಹೊಸತೊಂದು ನಾಜೂಕು ಆರಂಭವಾಗಿದೆ. ಮೊದಲು ವಿಶೇಷ ಬುದ್ಧಿವಂತಿಕೆಯನ್ನು ಪ್ರದರ್ಶಿಸಿ ಕೆಲವು ಸೈದ್ಧಾಂತಿಕ ಪ್ರಯೋಗಗಳನ್ನು ರೂಪಿಸುತ್ತಾರೆ. ಅವನ್ನು ಬಳಸಿಕೊಂಡು ಭೌತಪರಿಮಾಣಗಳು ಅಳತೆಗೆ ನಿಲುಕುವುದಿಲ್ಲ—ಅಂದರೆ ಅವನ್ನು ಅಳತೆ ಮಾಡಲು ಸಾಧ್ಯವಾಗದು—ಎಂದು ರುಜುವಾತಿಸುತ್ತಾರೆ. ಅಥವಾ ಇನ್ನೂ ನಿಷ್ಕೃಷ್ಟವಾಗಿ ಹೇಳುವುದಾದರೆ, ಸದ್ಯ ಅಂಗೀಕೃತವಾಗಿರುವ ನೈಸರ್ಗಿಕ ನಿಯಮಗಳ ಪ್ರಕಾರ, ಅನ್ವೇಷಿತ ವಸ್ತುಗಳು ಸಕಲ ಮಾಪನಪ್ರಯತ್ನಗಳನ್ನೂ ಭಗ್ನಗೊಳಿಸುವಂತೆ ವರ್ತಿಸುತ್ತವೆಂದು ತೋರಿಸುತ್ತಾರೆ. ಎಂದೇ ಭೌತವಿಜ್ಞಾನದ ಭಾಷೆಯಲ್ಲಿ ಈ ಪರಿಮಾಣಗಳನ್ನು ಉಳಿಸಿಕೊಳ್ಳುವುದು ಪೂರ್ತಿ ಅರ್ಥಹೀನವೆಂದು ತೀರ್ಮಾನಿಸುತ್ತಾರೆ. ಇವುಗಳ ಬಗೆಗೆ ಮಾತಾಡುವುದೆಂದರೆ ಭೌತಾತೀತಶಾಸ್ತ್ರ ಅಥವಾ ಅಧ್ಯಾತ್ಮಶಾಸ್ತ್ರ."

ಫ್ರ್ಯಾಂಕ್, "ಆದರೆ ಈ ನಾಜೂಕನ್ನು ಅಥವಾ ಚಮತ್ಕಾರವನ್ನು ಮೊದಲು ೧೯೦೫ರಲ್ಲಿ ತೊಡಗಿದವರು ನೀವೇ ಅಲ್ಲವೇ ?"

"ಒಳ್ಳೆಯ ಪರಿಹಾಸವನ್ನು ಪದೇ ಪದೇ ಪುನರಾವರ್ತಿಸಬಾರದು."[೪೫]

ತಮ್ಮ ಈ ಹೇಳಿಕೆಯನ್ನು ಇವರೇ ಮುಂದೊಂದು ದಿವಸ ವಿವರಿಸಿದರು, "ನಿಜ, ನಾನಿದನ್ನು ಪ್ರಾರಂಭಿಸಿರಬಹುದು. ಆದರೆ ಆ ಭಾವನೆಗಳು ಹಂಗಾಮಿ ಎಂದು ಎಣಿಸಿದ್ದೆ. ಇತರರು ಅವನ್ನು ಇಷ್ಟೊಂದು ಮಟ್ಟಿಗೆ ನನಗಿಂತ ಗಂಭೀರವಾಗಿ ನೆಚ್ಚಿಕೊಂಡಾರೆಂದು ಭಾವಿಸಿರಲಿಲ್ಲ."

೧೯೨೬ ಡಿಸೆಂಬರ್ ೪ರಂದು ಮ್ಯಾಕ್ಸ್ ಬಾರ್ನರಿಗೆ ಬರೆದ ಕಾಗದದಲ್ಲಿ ಐನ್‌ಸ್ಟೈನ್ ತಮ್ಮ

ಮನದ ಬೇಗುದಿಯನ್ನು ತೋಡಿಕೊಂಡಿದ್ದಾರೆ, "[ನೀವು ಕಟ್ಟಿರುವ] ಶಕಲಬಲವಿಜ್ಞಾನ ನಿಜಕ್ಕೂ ಭವ್ಯವಾಗಿದೆ. ಆದರೆ ಇದು ವಾಸ್ತವತೆ ಅಲ್ಲವೆಂಬುದಾಗಿ ನನ್ನ ಅಂತರ್ವಾಣಿ ನುಡಿಯುತ್ತದೆ. ಈ ಸಿದ್ಧಾಂತ ಸಾಕಷ್ಟು ವಿವರಣೆಯನ್ನೇನೊ ನೀಡುತ್ತದೆ. ಆದರೆ ಇದು ನಿಜಕ್ಕೂ ನಮ್ಮನ್ನು 'ಪುರಾತನ ವಸ್ತು'ವಿನ [ನಿಸರ್ಗ] ರಹಸ್ಯದ ಇನ್ನೊಂದಿಷ್ಟು ಹತ್ತಿರಕ್ಕೇನೂ ಒಯ್ಯುವುದಿಲ್ಲ. ಹೇಗೂ ಅವನು [ದೇವರು] ಪಗಡೆ ಆಡುವುದಿಲ್ಲ ಎಂಬುದರ ಬಗ್ಗೆ ನನಗೆ ಪೂರ್ಣ ಭರವಸೆ ಉಂಟು."

ಫೆಬ್ರುವರಿ ೧೪ರಂದು ಐನ್‌ಸ್ಟೈನ್, ಕಾರ್ನೀಲಿಯಸ್ ಲ್ಯಾಂಕ್ಷೋಸ್ ಅವರಿಗೆ ಬರೆದ ಕಾಗದದಲ್ಲಿ ಹೀಗೆ ವಿವರಿಸಿದರು, "ವಿದ್ಯುತ್ತಿನ ಈ ಮೂಲ ಸಮಸ್ಯೆಯೊಡನೆ ನಾನೀಗ ಇಪ್ಪತ್ತು ವರ್ಷಗಳಿಗೂ ಮಿಕ್ಕಿ ಹೋರಾಡುತ್ತ ಬಂದು ಪೂರ್ತಿ ಹತಾಶೆಗೊಂಡಿದ್ದೇನೆ. ಅದನ್ನು ತೊರೆದುಬಿಡಲಾರದವನೂ ಆಗಿದ್ದೇನೆ. ಸಂಪೂರ್ಣ ನೂತನ ಹಾಗೂ ಮಹಾ ಪ್ರತಿಭಾನ್ವಿತ ಪ್ರಸ್ಫುರಣ ಅವಶ್ಯವೆಂದು ನನಗೀಗ ದೃಢವಾಗಿದೆ. ಇದರ ಜೊತೆಯಲ್ಲೇ, ಸಂಖ್ಯಾಕಲನವಿಜ್ಞಾನವಿಧಾನಗಳಿಗೆ ಶರಣುಹೋಗುವುದು, ಮೂಲಭೂತ ವಿಚಾರಗಳನ್ನೇ ಅಡ್ಡಹಾಯುವ ತಾತ್ಕಾಲಿಕ ಅನುಕೂಲಸಿಂಧು ಮಾರ್ಗವೆಂದು ಕೂಡ ಭಾವಿಸಿದ್ದೇನೆ."

# ೧೧. ಐವತ್ತರ ಅಂಚಿನಿಂದಾಚೆಗೆ

## ಐನ್‌ಸ್ಟೈನ್ ಐವತ್ತು

ಐನ್‌ಸ್ಟೈನ್ ಪ್ರಪಂಚಪುರುಷರಾದುದು ಆಕಸ್ಮಿಕತೆಯ ಘಾತವಲ್ಲ, ಅನಿವಾರ್ಯತೆಯ ಪಕ್ವಫಲ. ವಿಜ್ಞಾನ ಸದಾ ಮಹಾ ಆವಿಷ್ಕೃತ್ಯಗಳಿಂದ ಪರಿಪ್ಲುತವಾಗಿದೆ. ಆದರೆ ಅವರ ಪೈಕಿ ಐನ್‌ಸ್ಟೈನ್ ಮಾತ್ರ ಐಕೈಕ ವ್ಯಕ್ತಿ. ಇವರು ಪ್ರದರ್ಶಿಸಿದ ತೀರ ಅಸಾಧಾರಣ ಸಾಹಸಕೃತ್ಯಗಳ ಪರಿಣಾಮವಾಗಿ ಇವರು ಪ್ರಪಂಚಪುರುಷರಾದರು. ನೂತನ ಪ್ರಪಂಚಚಿತ್ರವೊಂದನ್ನು ಕುಂಚಿಸುವುದರ ಮೂಲಕ ಇವರು ಮಾನವ ಚಿಂತನೆಯ ಇತಿಹಾಸದಲ್ಲಿ ಹೊಸತಾದ ಹಾಗೂ ತತ್ಪೂರ್ವ ಸಿದ್ಧಿಸಲಾಗದಿದ್ದ ಅಧ್ಯಾಯವನ್ನು ತೆರೆದರು. ನಿಸರ್ಗನಿಯಮಗಳು ಕೆಲವೊಂದು ಆಕಸ್ಮಿಕ ನಿಯಮಗಳೇನೂ ಅಲ್ಲ, ಬದಲು, ಅರ್ಥಪೂರ್ಣ ನಿಯಮಗಳು. ನವುರಾದ ಮತ್ತು ಅಮೂರ್ತವಾದ ಗಣಿತೀಯ ತರ್ಕವಿಧಾನದಿಂದ ಅವನ್ನು ಪತ್ತೆ ಹಚ್ಚಬಹುದೆಂದು ತೋರಿಸಿಕೊಟ್ಟರು.

ಕಾರ್ನೀಲಿಯಸ್ ಲ್ಯಾಂಕ್ಷೋಸ್

೧೪ ಮಾರ್ಚ್ ೧೯೨೯ 'ಕೈಗೆಟುಕುವ ದೂರ'ದಲ್ಲಿತ್ತು. ಅಂದು ಐನ್‌ಸ್ಟೈನ್ ತಮ್ಮ ಯಾವ 'ಅಪರಾಧ'ವೂ ಇಲ್ಲದೆ ಐವತ್ತರ ವಿಶೇಷ ಅಂತಸ್ತು ಏರುವುದರಲ್ಲಿದ್ದರು. ವೈಯಕ್ತಿಕವಾಗಿ ಇದು ಅವರಿಗೆ ಯಾವುದೇ ಮಹತ್ತ್ವದ ಘಟನೆ ಎನ್ನಿಸಿರಲಿಲ್ಲ. ಕಾರಣ ? ಭೂಮಿ ಯಾರ ಮರ್ಜಿಗೂ ಒಳಪಡದೆ ತನ್ನ ನಿರಂತರ ಯಾತ್ರೆಯನ್ನು ನಿರ್ವಹಿಸಿಯೇ ತೀರುತ್ತದೆ. ಹುಟ್ಟಿದ ಪ್ರತಿಯೊಬ್ಬನೂ ಸಾಯದೆ ಉಳಿದಿದ್ದರೆ ಐವತ್ತನ್ನು ತಲಪಿಯೇ ತಲಪುತ್ತಾನೆ. ಇದು ನಿಜ—ಸಾಮಾನ್ಯರ ಮಟ್ಟಿಗೆ. ಐನ್‌ಸ್ಟೈನರ ಮಟ್ಟಿಗೆ ? ಅವರ ವೈರಿಗಳು ಕೂಡ—ಅಭಿಮಾನಿಗಳು ಒತ್ತಟ್ಟಿಗಿರಲಿ—ಅದೊಂದು ವಿಶೇಷ ಘಟನೆ ಎಂದು ಸಹಜವಾಗಿಯೇ ನಂಬಿದ್ದರು. ಇಪ್ಪತ್ತನೆಯ ಶತಮಾನದಲ್ಲಿ ಭೌತವಿಜ್ಞಾನ ಹೇಗೆ ಪ್ರವರ್ಧಿಸಿದೆ ಎಂಬುದನ್ನು ನಿರಪೇಕ್ಷವಾಗಿ ಪರಿಶೀಲಿಸಲು ಅದೊಂದು ಅವಕಾಶ, ಜನ ಮಹಾವಿಜ್ಞಾನಿಗೆ ಕೃತಜ್ಞತೆ ಅರ್ಪಿಸಲು ಮತ್ತು ಗೌರವ ಸಲ್ಲಿಸಲು ಅದೊಂದು ಸುಸಂದರ್ಭ,

ಹೊಸ ಹರವಿನತ್ತ ದಿಟ್ಟಿ ಹಾಯಿಸಲು ಅದೊಂದು ಮಜಲು.

ಸರ್ವಾಂತರ್ಯಾಮಿ ಪತ್ರಿಕಾಕರ್ತರು ಐನ್‌ಸ್ಟೈನರ ಐವತ್ತನೆಯ ಹುಟ್ಟುಹಬ್ಬವನ್ನು ಪ್ರಪಂಚ ಘಟನೆಯಾಗಿ ಪ್ರಕ್ಷೇಪಿಸಲು ಸಾಕಷ್ಟು ಪೂರ್ವ ಸಿದ್ಧತೆ ಮಾಡಿಕೊಂಡಿದ್ದರು. ಈ ಜಾದೂಗಾರನ ಹಸನಾದ ಬುರುಡೆಯಿಂದ ಹೊಸತಾದ ಪವಾಡವೇನಾದರೂ ಪುಟಿದೇಳುವ ಸಾಧ್ಯತೆಯಿದೆಯೇ ಎಂದು ತಿಳಿಯಲು ಇವರು ಹೊಂಚುತ್ತಿದ್ದರು. *New York Herald Tribune, New York Times* ಮತ್ತು *Daily Chronicle* ಪತ್ರಿಕಾಪ್ರತಿನಿಧಿಗಳು ವಿಶೇಷ ಚಟುವಟಿಕೆ ಲವಲವಿಕೆಗಳಿಂದ ಆ ದಿನಗಳಂದು ಕ್ರಿಯೋದ್ಯುಕ್ತರಾಗಿದ್ದರು. ಪರಿಸ್ಥಿತಿ ಇವರಿಗೆ ಅನುಕೂಲವಾಗಿದ್ದಂತೆ ತೋರಿತು. ೧೯೨೮ರಲ್ಲಿ ಎಲ್ಸಾ ತಮ್ಮ ಮಿತ್ರರಿಗೆ ಬರೆದ ಒಂದು ಕಾಗದದಲ್ಲಿ ಹೇಗೆ ತಮ್ಮ ಯಜಮಾನರು ಅವರ ಬಾಳಿನ ಕನಸಾದ ಒಂದು ಸಮಸ್ಯೆಗೆ ಪರಿಹಾರ ಶೋಧಿಸಿದ್ದರು ಎಂಬುದರ ಬಗ್ಗೆ ಉಲ್ಲೇಖ ವಿತ್ತು. ಇದರ ಸುಳುಹು ಪತ್ರಿಕಾಕರ್ತರಿಗೆ ಸಿಕ್ಕಿತು. ಇತ್ತ ಪ್ರಶ್ಯನ್ ವಿಜ್ಞಾನ ಅಕ್ಯಾಡಮಿ ೧೯೨೯ ಜನವರಿ ೧೦ರಂದು ಪ್ರಕಟಿಸಿದ ವಾರ್ತೆಯ ಪ್ರಕಾರ ಅದಾಗ ತಾನೇ ಐನ್‌ಸ್ಟೈನ್ ಅಕ್ಯಾಡಮಿಗೆ ನೂತನ ಸಂಶೋಧನ ಪ್ರಬಂಧವೊಂದನ್ನು ಒಪ್ಪಿಸಿದ್ದರು. ಅದನ್ನು ತಿಂಗಳ ಕೊನೆಯಲ್ಲಿ ಪ್ರಕಟಿಸ ಲಾಗುವುದು ಎಂದಿತ್ತು. ಸರಿ ೧ಕ್ಕೆ ೧ ಕೂಡಿಸಿದರೆ ೨ ತಾನೇ ? ಬೆಳಕನ್ನು ಬಗ್ಗಿಸಿದ, ಕಾಲವನ್ನು ಕುಗ್ಗಿಸಿದ, ಆಕಾಶವನ್ನು ಜಗ್ಗಿಸಿದ ಮತ್ತು ವಸ್ತುವಿನಿಂದ ಶಕ್ತಿಯನ್ನು ಹಿಂಡಿದ ಯುಗಪುರುಷ ಈಗ ನೂತನ ಸಮೀಕರಣಗಳನ್ನೇನೋ ಪಡೆದಿರಬೇಕು. ಅವು ವಿಶ್ವದ ಒಗಟಿಗೆ ಶಾಶ್ವತ ಒಡಪುಗಳಾಗಿರಬೇಕು ಎಂಬುದಾಗಿ ಪತ್ರಿಕಾಕರ್ತರು ತಳಕುಹಾಕಿದರು.

ಸರ್ವಶಕ್ತ ಪತ್ರಿಕಾಕರ್ತರಿಗೆ ಆ ವಿಶೇಷ ಪ್ರಬಂಧದ ಮುದ್ರಣಪೂರ್ವ ಪ್ರತಿ ವಿಶ್ವಪ್ರಯತ್ನ ಮಾಡಿದಾಗ್ಯೂ ಲಭಿಸಲಿಲ್ಲ. ಇನ್ನೇನು ಮಾಡುವುದು ? ಅಕ್ಯಾಡಮಿಯ ಜರ್ನಲ್ ಪ್ರಕಟವಾದ ಕ್ಷಣ ಆ ಪ್ರಬಂಧದ ಪ್ರತಿಯೊಂದು ಅಕ್ಷರವನ್ನೂ ಹೊರಜಿ ಸಂದೇಶಗಳ ಮೂಲಕ ಅಮೆರಿಕಕ್ಕೆ ರವಾನಿಸುವುದು, ಅಲ್ಲಿ ತಜ್ಞ ಗಣಿತವಿದರ ನೆರವಿನಿಂದ ಅದನ್ನು ದೋಷರಹಿತವಾಗಿ ಸ್ವೀಕರಿಸಿ ಪ್ರಕಟಿಸುವುದು ಎಂಬ ಪ್ರಾಯೋಗಿಕ ಏರ್ಪಾಡನ್ನು *New York Herald Tribune* ಮಾಡಿತು. ಜನವರಿ ೩೦ರಂದು ಎಲ್ಲವೂ ಸುಸೂತ್ರವಾಗಿ ಜರಗಿದುವು. ಮೂವತ್ತು ಸಮೀಕರಣಗಳನ್ನು ಒಳಗೊಂಡಿದ್ದ ಜಟಿಲ ಗಣಿತ ಪರಿಭಾಷೆಯಲ್ಲಿ ನಿರೂಪಿತವಾಗಿದ್ದ ಮಹಾನಿಬಂಧ ಆ ಪತ್ರಿಕೆ ಯಲ್ಲಿ ಆರು ಪುಟಗಳ ಜಾಗವನ್ನು ಕಬಳಿಸಿತು. ಸಾಮಾನ್ಯರಿಗೆ ಅದು ಪೂರ್ತಿ ಹೊಸತಾಗಿದ್ದು ಅರಿಯಲಾಗದಿದ್ದುದರಿಂದ ನಿಜಕ್ಕೂ ಸವಾಲಾಗಿತ್ತು ! ನಿಜ, ವಿಶ್ವ ಅತ್ಯಂತ ಗೋಜುಗೋಜಾಗಿದೆ, ಇದರ ಸಿಕ್ಕು ಬಿಡಿಸುವುದು ಸಾಧಾರಣ ಸಾಹಸವಲ್ಲವೆಂದು ಎಲ್ಲರಿಗೂ ಸುವೇದ್ಯವಾಯಿತು !

ನೈಸರ್ಗಿಕ ನಿಯಮಗಳಲ್ಲಿ ಕಂಡುಬರುವ ದ್ವೈತತತ್ವವನ್ನು ಏಕೀಕರಿಸಲು ಮಾಡಿದ ಪ್ರಯತ್ನ ವದು. ಅದು ನಿಜವೆಂದು ಸ್ಥಾಪಿತವಾದರೆ ಭೂಮಿ ಸೂರ್ಯನ ಸುತ್ತ ವಾರ್ಷಿಕವಾಗಿ ಪರಿಭ್ರಮಿಸು ವಂತೆ ವಿಧಿಸುವ ಬಲವೂ (ಗುರುತ್ವಾಕರ್ಷಣೆ) ಎಲೆಕ್ಟ್ರಾನ್ ನ್ಯೂಕ್ಲಿಯಸ್ಸಿನ ಸುತ್ತ ಪರಿಭ್ರಮಿಸು ವಂತೆ ವಿಧಿಸುವ ಬಲವೂ (ವಿದ್ಯುತ್ಕಾಂತತ್ವ) ಒಂದೇ ಎಂದು ತಿಳಿಯುತ್ತದೆ ; ಇದೇ ಬೆಳಕಿನ ಹಾಗೂ ಉಷ್ಣದ ಕಿರಣಗಳನ್ನು ನಮ್ಮೆಡೆಗೆ ಒಯ್ದು ತರುವ ಬಲ ಎಂಬುದಾಗಿ ಐನ್‌ಸ್ಟೈನ್ ವಿವರಣೆ ನೀಡಿದ್ದರು.

ಇದು ಹೇಗೂ ಇರಲಿ. ಅನತಿ ಶೀಘ್ರದಲ್ಲೇ ಇವರು ತಮ್ಮ ಏಕೀಕೃತ ಸಿದ್ಧಾಂತದ ಬಗ್ಗೆ ಅಸಂತೃಪ್ತಿ ತಳೆದರು.

ಜನ್ಮದಿನೋತ್ಸವ ತಮಗೆ ಎಂಥೆಂಥ 'ಆಪತ್ತು'ಗಳನ್ನು ತಂದೊಡ್ಡೀತು ಎಂಬುದನ್ನು ಇವರು

ಸ್ಪಷ್ಟವಾಗಿ ಊಹಿಸಿದ್ದರು. ಹಿಂಡಾಗಿ ದಂಡಾಗಿ ಸಾಲಾಗಿ ಬಿಡಿಯಾಗಿ ಬಂದು ಮುತ್ತುವ ಜನ ಜಂಗುಳಿಯ ಪ್ರೀತಿಯ ಆರಾಧನೆಯ[೪೫೨] ಕುತೂಹಲದ ಉತ್ಸಾಹದ ಉಸಿರುಗಟ್ಟಿಸುವ ವಾತಾವರಣದಿಂದ ಪಾರಾಗಲು ಇವರಿಗಿದ್ದ ಒಂದೇ ಒಂದು ಉಪಾಯ ಎಂದರೆ ಪಲಾಯನ ! ೧೯೨೯ ಮಾರ್ಚ್ ೧೪ರಂದು ಐನ್‌ಸ್ಟೈನ್ 'ಭೂಗತ'ರಾಗಿದ್ದರು. ಬರ್ಲಿನ್ನಿನ ಅಧಿಕೃತ ನಿವಾಸ ದಲ್ಲಿ ಇವರು ನಾಪತ್ತೆ. "ಓ ಇಲ್ಲದ ದೇವರೇ ರಕ್ಷಿಸೆನ್ನನೀ ಆರಾಧಕರ, ಗಳಹಿಸುಕುವ ಪೂಜೆ ಯಿಂದ!"

ಅಭಿನಂದನ ತಂತಿ ಸಂದೇಶಗಳು, ಪತ್ರಗಳು, ಉಡುಗೊರೆಗಳು ಹೊರೆಹೊರೆಯಾಗಿ ಬಂದುವು. ಸಾಲುಸಾಲಾಗಿ ಜನ ಬಂದರು—ವಿಜ್ಞಾನಿಗಳು, ಮಿತ್ರರು, ವಿದ್ಯಾರ್ಥಿಗಳು, ಅಭಿಮಾನಿ ಗಳು, ಝಿಯನಿಸ್ಟರು ಕುತೂಹಲಿಗಳು ಎಲ್ಲರೂ ! ತೆರಿಗೆಸಂಗ್ರಾಹಕನೂ ಇವರಲ್ಲಿ ಸೇರಿದ್ದ. ಆದರೆ ಈತ ಬಂದದ್ದು ಕರ್ತವ್ಯಪಾಲನೆಗೆ, ವರಮಾನ ತೆರಿಗೆಯ ಬಗ್ಗೆ ಐನ್‌ಸ್ಟೈನರೊಡನೆ ಮಾತಾ ಡಲು. ಇವನಿಗೆ ದಿನದ ವಿಶೇಷ ಮಹತ್ತ್ವ ತಿಳಿದಾಗ ತನ್ನ ಹೆಡ್ಡತನಕ್ಕಾಗಿ ನಾಚಿಕೆ ಆಯಿತು—ಕೊಡಲು ಬಂದಿರಲಿಲ್ಲ, ತೆಗೆದುಕೊಂಡು ಹೋಗಲು ಬಂದಿದ್ದ! ಇನ್ನೇನು ಮಾಡುವುದು? ಇವ ನಾದರೂ ಅಲ್ಲಿ ಇರದಿದ್ದ ಐನ್‌ಸ್ಟೈನರಿಗೆ ಗೌರವ ಹಾಗೂ ಅಭಿನಂದನೆ ಅರ್ಪಿಸಿ ಹಿಂತಿರುಗಿದ.

ಐನ್‌ಸ್ಟೈನ್ ತಮ್ಮ ಜನ್ಮದಿನದ ಸವಿನೆನಪಿಗಾಗಿ ಒಂದು ಕಗ್ಗ ಗೀಚಿದರು ಇದನ್ನು ಮುದ್ರಿಸಿದ ಕಾರ್ಡುಗಳನ್ನು ಅಭಿಮಾನಿಗಳಿಗೆ ರವಾನಿಸಿದರು :

ಈದಿನವೆಲ್ಲರು ಪ್ರಸನ್ನ ವದನವ ಪ್ರದರ್ಶಿಸುತಿಹರು
ಸನಿಹದ ದೂರದ ಬಂಧು ಬಾಂಧವರು ಸುಂದರ ಸಂದೇ
ಶಗಳನು ಕಳಿಸುತಲೆನ್ನನು ಮೇಲುಪ್ಪರಿಗೆಗೆ ತಳ್ಳಿಹರು !
ಮುದುಕನಿಗಿವು ಹೊಸ ಟಾನಿಕ್, ಜೀವನಕಗತ್ಯ ಪೋಷಣೆ !
ಮಧುರ ಸ್ವನವನ್ನುಲಿಯುತ ಬರುತಿಹರೆಲ್ಲರು ದಿನವನು
ಸವಿ ಛವಿ ಮಾಡಲು ನಯವಿನಯದಿಂದ ಎರೆದಿಹರೊಲವನು
ತೆರಿಗೆಯ ನಕ್ಷತ್ರಕನೂ ಹಾಡಿ ಗೌರವಿಸಿ ತೆರಳಿದ !
ಗಗನಕ್ಕೆತ್ತಿದ ಜಟಾಯುವಂದದಿ ಸಂತಸ ತಳೆದಿಹೆ
ದಿನವೀಗ ಮುಚ್ಚುತಿದೆ ಕೊನೆಗಳಿಗೆ ನಿಮಗೆನ್ನ ಹಾರ್ದಿಕ ಶುಭಾಶಯಂ
ದಿನಪನದೊ ನಗುತಿಹಂ ಶಿರಬಾಗಿ ಸ್ವೀಕರಿಸಿಹೆಂ ನಿಮ್ಮ ಪ್ರೀತಿಯಂ !

Everyone shows their best face today
And from near and far have sweetly written,
Showering me with all things that one could wish for
That still matter to an old man.
Everyone approaches with nice voices
In order to make a better day of it,
And even the innumerable spongers have paid their tribute.
And so I feel lifted up like a noble eagle.
Now the day nears its close and I send you my compliments
Everything, that you did was good, and the sun smiles.

ಅಂದು ಐನ್‌ಸ್ಟೈನ್ ಹೆಂಡತಿ ಮಕ್ಕಳು ಅಳಿಯಂದಿರ ಸಮೇತ ಬರ್ಲಿನ್ ಸಮೀಪದಲ್ಲಿದ್ದ

ಖಾಸಗಿ ಬಂಗ್ಲೆಯೊಂದಕ್ಕೆ ತೆರಳಿದ್ದರು. ಅದರ ಮಾಲಿಕ ಇವರ ಮಿತ್ರ. ಆ ವಿಶಾಲ ಆವರಣದ ಹೊರ ಅಂಚಿನಲ್ಲಿದ್ದ ಸುಂದರ ಸರೋವರದಲ್ಲಿ ದೋಣಿ ನಡೆಸಿದರು. ವಿಸ್ತಾರವಾದ ಮರಗಾಡಿನಲ್ಲಿ ಅಲೆದಾಡಿದರು. ತಮಗೆ ಪ್ರಿಯವಾದ ಪಿಟೀಲುವಾದನ ಮಾಡಿದರು. ಕುಟುಂಬಸದಸ್ಯರೊಡನೆ ಲವಲವಿಕೆಯಿಂದ ದಿನ ಕಳೆದರು.

ಐನ್‌ಸ್ಟೈನ್ ಪೈಪ್‌ಪ್ರಿಯರು. ಪೈಪಿಗೆ 'ಇಂಧನ' ವಿಶೇಷ ತಂಬಾಕು. ಇದನ್ನು ಅರಿತಿದ್ದ ಇವರ ಅಭಿಮಾನಿ ನಿರುದ್ಯೋಗಿ ಅನಾಮಧೇಯನೊಬ್ಬ ಪೈಪ್‌ತಂಬಾಕಿನ ಪುಟ್ಟ ಪೊಟ್ಟಣವನ್ನು ತನ್ನ ಅಲ್ಪ ಕಾಣಿಕೆಯಾಗಿ ಇವರಿಗೆ ಕಳಿಸಿಕೊಟ್ಟ. ಅದರೊಂದಿಗಿಟ್ಟಿದ್ದ ಕಿರುಚೀಟಿಯಲ್ಲಿ "'ಸಾಪೇಕ್ಷ'ವಾಗಿ ಇದು ಬಲು ಕಡಿಮೆ ತಂಬಾಕು. ಆದರೆ ಇದನ್ನು ಉತ್ಕೃಷ್ಟ 'ಕ್ಷೇತ್ರ'ದಿಂದ ಆಯಲಾಗಿದೆ" ಎಂದು ಬರೆದಿದ್ದ. 'ಸಾಪೇಕ್ಷ' ಮತ್ತು 'ಕ್ಷೇತ್ರ' ಪದಗಳಲ್ಲಿ ಇಟ್ಟಿರುವ ಶ್ಲೇಷೆಯನ್ನು ಗಮನಿಸಬಹುದು.

## ದೊರೆಯದಿದ್ದ ಉಡುಗೊರೆ

ಆಶೆಯಾಮಿಷವಳಿದು
ಹುಸಿವಿಷಯಂಗಳೆಲ್ಲಾ ಹಿಂಗಿ
ಸಂಶಯ ಸಂಬಂಧ ವಿಸಂಬಂಧವಾಯಿತ್ತು ನೋಡಾ !
ಎನ್ನ ಮನದೊಳಗೆ ಘನಪರಿಣಾಮವ ಕಂಡು
ಮನ ಮಗ್ನವಾಯಿತ್ತಯ್ಯ !
ಚೆನ್ನಮಲ್ಲಿಕಾರ್ಜುನ,
ನಿಮ್ಮ ಶರಣ ಪ್ರಭುದೇವರ ಕರುಣದಿಂದ ಬದುಕಿದೆನಯ್ಯ

ಅಕ್ಕಮಹಾದೇವಿ

ಬರ್ಲಿನ್ನಿನ ಪುರಸಭೆ ಕೊಂಚ ತಡವಾಗಿ ಎಚ್ಚರಗೊಂಡಿತು. ೧೯೧೪ರಿಂದಲೂ ಬರ್ಲಿನ್ ನಿವಾಸಿಯಾಗಿದ್ದು ಆ ನಗರಕ್ಕೆ ವಿಶೇಷ ಕಳೆಯನ್ನೂ ಆಕರ್ಷಣೆಯನ್ನೂ ತಂದುಕೊಟ್ಟು ಅದನ್ನೊಂದು ಪ್ರಸಿದ್ಧ ಅಂತಾರಾಷ್ಟ್ರೀಯ ವಿಜ್ಞಾನಕೇಂದ್ರವಾಗಿ ಪರಿವರ್ತಿಸಿದ ವರ್ತಮಾನಯುಗದ ಮಹಾಚೇತನಕ್ಕೆ ಹುಟ್ಟುಹಬ್ಬದ ಉಡುಗೊರೆಯಾಗಿ ಆ ನಗರ ಏನನ್ನಾದರೂ ಪ್ರದಾನಿಸಬೇಡವೇ?

ಐನ್‌ಸ್ಟೈನ್ ಏಕಾಂತಪ್ರಿಯರು ಮತ್ತು ನೌಕಾವಿಹಾರಾಸಕ್ತರು ಎಂಬುದನ್ನು ಪುರಸಭೆ ಗಮನಿಸಿತು. ಬರ್ಲಿನ್ ನಗರದ ಹೊರವಲಯದಲ್ಲೊಂದು ವಿಶಾಲ ವನವಿಸ್ತಾರ. ಹೊಳೆದಂಡೆಯಲ್ಲಿದ್ದ ಆ ಪ್ರದೇಶದಲ್ಲಿ ಸಾಕಷ್ಟು ಮರ ಗಿಡಗಳೂ ಕುಟೀರವೂ ಇದ್ದುವು. ದಫ್ತರ ದಾಖಲೆಗಳ ಪ್ರಕಾರ ಅದು ಪುರಸಭೆಯ ಆಸ್ತಿ. ಅದಕ್ಕಿಂತ ಪ್ರಶಸ್ತವಾದ ಉಪಹಾರವಿನ್ನೇನು ಇದ್ದೀತು ! ಪುರಸಭೆ ಸರ್ವಾನುಮತದಿಂದ ಆ ವನಪ್ರದೇಶವನ್ನು ಐನ್‌ಸ್ಟೈನರಿಗೆ ಧಾರೆ ಎರೆದು ದಾನಮಾಡಿ ಕೃತಾರ್ಥವಾಯಿತು. ದಾನಪರಿಗ್ರಾಹಿ ಐನ್‌ಸ್ಟೈನರಿಗೂ ಸಂತೋಷವಾಯಿತು. ಪುರಸಭೆಯ ಈ ಸಾರ್ವಜನಿಕ ಸದ್ವರ್ತನೆಯನ್ನು ನಾಗರಿಕರು ಪ್ರಶಂಸಿಸಿದರು. ಪತ್ರಿಕೆಗಳು ಸುದ್ದಿ ಪ್ರಕಟಿಸಿ 'ಐನ್‌ಸ್ಟೈನ್ ಭವನ'ಕ್ಕೆ ಅಸ್ತಿತ್ವ ಒದಗಿಸಿದುವು.

ತಮಗೆ ದೊರೆತ ಅಮೂಲ್ಯ ಬಳುವಳಿಯನ್ನು—ಐನ್‌ಸ್ಟೈನ್ ಭವನ—ನೋಡಿ ಮುಂದಿನ ಏರ್ಪಾಡು ಮಾಡಲೆಂದು ಎಲ್ಲಾ ಅಲ್ಲಿಗೆ ಹೋದರು. ಆದರೆ ಅದು ಆ ಮೊದಲೇ ಪರಭಾರೆಯಾಗಿ

ದ್ದಂತೆ ಕಂಡಿತು—ಅದರಲ್ಲಿ ಜನವಸತಿ ಇತ್ತು ! ಇವರಿಗೆ ಆಶ್ಚರ್ಯ ! ಅವರಿಗೆ ? ಉದ್ವೇಗ—ಕಾನೂನುಬದ್ಧವಾದ ಹಕ್ಕುದಾರರಾಗಿ ತಾವಲ್ಲಿರುವಾಗ ಬೇರೆಯವರು, ಅವರು ಸಾಕ್ಷಾತ್ ಐನ್‌ಸ್ಟೈನರೇ ಇರಬಹುದು, ಅದನ್ನು ಆಕ್ರಮಿಸಲು ಬರುವುದೆಂದರೇನು ? ಇದೇನು ಹುಡುಗಾಟವೇ? ಅತಿಕ್ರಮ ಪ್ರವೇಶವಲ್ಲವೇ ?

ತಪ್ಪು ಪುರಸಭೆಯದು. ದಾಖಲೆ ದಫ್ತರದ ಅವ್ಯವಸ್ಥೆ ಪುರಸಭೆಯನ್ನು ಪೇಚಿಗೆ ಸಿಕ್ಕಿಸಿತು. ಹೇಗೂ ಆ ಪ್ರದೇಶ ಸಾಕಷ್ಟು ವಿಶಾಲವಾಗಿದೆ. ಅದರೊಳಗೆ ಹೊಳೆದಂಡೆಯಲ್ಲಿ ಖಾಲಿ ನಿವೇಶನ ಮಂಜೂರುಮಾಡುವುದೆಂದೂ ಅಲ್ಲಿ ಐನ್‌ಸ್ಟೈನ್ ಸ್ವಂತ ಖರ್ಚಿನಿಂದ ಬಂಗ್ಲೆ ಕಟ್ಟಿಕೊಳ್ಳಬಹುದೆಂದೂ ನಿರ್ಧರಿಸಲಾಯಿತು. ಐನ್‌ಸ್ಟೈನ್ ದಂಪತಿಗಳು ಈ ನಿರ್ಧಾರವನ್ನು ಮೊದಲಿನಷ್ಟೇ ತೃಪ್ತಿಯಿಂದ ಒಪ್ಪಿಕೊಂಡರು. ದಾನ ದೊರೆತ ದನದ ದಂತ ಎಣಿಸುವ ಪಿಸುಣ ಇವರಲ್ಲ ! ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಹೊಸತೊಂದು ತೊಡಕು ಕಂಡು ಬಂತು : ಆ ವನಪ್ರದೇಶದೊಳಗೆ ಬೇರೆ ಯಾವ ಮನೆ ಅಥವಾ ಕಟ್ಟಡವನ್ನು ಕಟ್ಟಲು ಅವಕಾಶವಿರದಂತೆ ಮೊದಲ ನಿವಾಸಿಗೆ ಇಡೀ ಪ್ರದೇಶವನ್ನು ಪರಭಾರೆ ಮಾಡಲಾಗಿತ್ತು—ಈತ ಅದರೊಳಗೆ ಏಕೈಕ ನಿವಾಸಿಯಾಗಿರಲು ಹಕ್ಕು ಪಡೆದವನಾಗಿದ್ದ. ಪುರಸಭೆಗೆ ಅದರ ಅದಕ್ಷತೆಯ ಪರಿಣಾಮವಾಗಿ ಆದ ಎರಡನೆಯ ಮುಖಭಂಗ !

ಮೂರನೆಯ ಸಲ ಪುರಸಭೆ ಸೂಕ್ಷ್ಮವಾಗಿಯೂ ಕೂಲಂಕಷವಾಗಿಯೂ ಪರ್ಯಾಲೋಚಿಸಿ ಸರೋವರದ ಸಮೀಪ ಒಂದು ಖಾಲಿ ನಿವೇಶನ ಆಯ್ದಿತು. ಅಲ್ಲಿಂದ ನೀರಿಗೆ ಹೋಗಲು ಹಾದಿ ಹಕ್ಕನ್ನು ಆಸುಪಾಸಿನ ಸ್ಥಳಗಳ ಮಾಲಿಕರಿಂದ ಪಡೆಯಿತು. ಪುರಸಭೆಗೆ ಮುಜಗರವಾಗಬಾರದು. ಅದರ ಸದಸ್ಯರ ಸದ್ಭಾವನೆಗೆ ತಾವು ಮನ್ನಣೆ ನೀಡಬೇಕು ಎಂಬ ಸೌಹಾರ್ದ ಭಾವದಿಂದ ಐನ್‌ಸ್ಟೈನ್ ಈ ಕೊಡುಗೆಯನ್ನೂ ಮೊದಲಿನಷ್ಟೇ ತೃಪ್ತಿಯಿಂದ ಒಪ್ಪಿಕೊಂಡರು. ಆದರೆ ಪುರಸಭೆಯ ಪುನರಾವರ್ತಿತ ದುರ್ದೈವ—ಅದಕ್ಕೆ ಈ ನಿವೇಶನವನ್ನು ಮಾರುವ ಯಾ ದಾನವೀಯುವ ಹಕ್ಕೇ ಇರಲಿಲ್ಲ !

ಪುರಸಭೆಯ ಅದಕ್ಷತೆ ಹಾದಿ ಮಾತಾಯಿತು. ಮಾನ ಬೀದಿ ಪಾಲಾಯಿತು. 'ಐನ್‌ಸ್ಟೈನ್-ಭವನ-ದಾನ' ನಗೆಪಾಟಲಾಯಿತು. ಪತ್ರಿಕೆಗಳಿಗೆ ಸುದ್ದಿಗಾರರಿಗೆ ಹರಟೆಗಾರರಿಗೆ ಮಾತಿಗೆ ವಿಪುಲ ಗ್ರಾಸವಾಯಿತು. ನಿರಪರಾಧಿ ನಿಃಸ್ವಾರ್ಥಿ ನಿರಪೇಕ್ಷಿ ನಿರ್ಮೋಹಿ ಐನ್‌ಸ್ಟೈನರ ಹೆಸರು ಈ ತುಮುಲಕ್ಕೆ ಸಿಕ್ಕಿಹಾಕಿಕೊಂಡದ್ದು ವಿಧಿಯ ಅಣಕ.

ಈಗ 'ಐನ್‌ಸ್ಟೈನ್ ಭವನ' ಪುರಸಭೆಯ ಪ್ರತಿಷ್ಠೆಯ ಪ್ರಶ್ನೆಯಾಯಿತು. ತಾವು ಐನ್‌ಸ್ಟೈನರಿಗೆ ಯೋಗ್ಯವಾದ ಒಂದು ಉಡುಗೊರೆ ಕೊಡಬೇಕೆಂದು ಸಂಕಲ್ಪಿಸಿರುವುದು ನಿಜ, ಅದನ್ನು ಈಡೇರಿಸಲು ಶತಪ್ರಯತ್ನ ಮಾಡಲೇಬೇಕೆಂದು ನಿರ್ಧರಿಸಿ ಸದಸ್ಯರು ಹೊಸಹಾದಿ ಹುಡುಕಿದರು. ಇವರ ಪ್ರತಿನಿಧಿ ಐನ್‌ಸ್ಟೈನರನ್ನು ಭೇಟಿಮಾಡಿ ವಿನಯ ಪೂರ್ವಕವಾಗಿ ನಿವೇದಿಸಿದ, "ಮಾರಾಟಕ್ಕೆ ಇರುವ ಮತ್ತು ನಿಮಗೆ ಒಪ್ಪಿಗೆ ಆಗುವ ಯಾವುದೇ ನಿವೇಶನವನ್ನು ನೀವು ದಯಮಾಡಿ ಆಯ್ದು ನಮಗೆ ತಿಳಿಸಬೇಕು. ನಾವದನ್ನು ಕೊಂಡು ನಿಮಗೆ ಉಡುಗೊರೆಯಾಗಿ ಕೊಡುತ್ತೇವೆ. ದಯಮಾಡಿ ನೀವದನ್ನು ಸ್ವೀಕರಿಸಿ ನಮ್ಮನ್ನು ಸಂತೋಷಪಡಿಸಬೇಕು." ಭುವನೈಕವೀರನಿಗೆ ಭವನವಿರದಿಹ ಬವಣೆ !

ಸರಿ, ಇದನ್ನೂ ಮುಗ್ಧ ಐನ್‌ಸ್ಟೈನ್ ತೃಪ್ತಭಾವನೆಯಿಂದ ಒಪ್ಪಿಕೊಂಡರು. ಬರ್ಲಿನ್ ನಗರದ ಹೊರಕ್ಕಿರುವ ಪಾಟ್ಸ್‌ಡ್ಯಾಮ್ ಪಕ್ಕದ ಕಾಪುತ್ ಗ್ರಾಮದಲ್ಲಿ ಒಂದು ಸುಂದರ ನಿವೇಶನ

ಆಯ್ದರು. ಪುರಸಭೆ ಇದನ್ನು ಒಡನೆ ಒಪ್ಪಿಕೊಂಡು ಔಪಚಾರಿಕ ಮಂಜೂರಾತಿಗಾಗಿ ಸಮಿತಿಯ ಮುಂದಿಟ್ಟಿತು. ಇಷ್ಟಾಗುವಾಗ ಸಮಿತಿಯಲ್ಲಿ ರಂಗು ಬದಲಾಗಿತ್ತು. ಉಗ್ರರಾಷ್ಟ್ರೀಯವಾದಿ ಸದಸ್ಯನೊಬ್ಬ ಮೂಲಭೂತ ಪ್ರಶ್ನೆಯನ್ನೇ ಎತ್ತಿದ : ಪುರಸಭೆಯಿಂದ ಈ ಮಟ್ಟದ ಇನಾಮು ಪಡೆಯಲು ಐನ್‌ಸ್ಟೈನರಿಗಿರುವ ವಿಶೇಷ ಅರ್ಹತೆ ಏನು ? ಸಾರ್ವಜನಿಕ ಭಂಡಾರದ ಭದ್ರರಕ್ಷಣೆಗಾಗಿ ಸದಾ ಸಿದ್ಧರಿರುವ ಸ್ವಪ್ರೇರಿತ ಹುರಿಯಾಳುಗಳು ಈ ಪ್ರಶ್ನೆಯನ್ನು ಅತಿಲಂಬಿಸಿ ನೀತಿಸಂಹಿತೆಯನ್ನೇ ಬೋಧಿಸಿದರು. ವಾದ-ವಿವಾದ ಚರ್ಚೆ-ಅನಿರ್ಧಾರ, ಮಾಮೂಲಿನಂತೆ ನಿರ್ಧಾರ ಮುಂದಿನ ಬೈಠಕ್ಕಿಗೆ ದೂಡಲ್ಪಟ್ಟಿತು. ಒಟ್ಟು ರೇಜಿಗೆ ಹೇಸಿಗೆ ನಾಚಿಗೆಗೇಡು ವ್ಯವಹಾರ.

ಮನನೊಂದು ಐನ್‌ಸ್ಟೈನ್ ಭ್ರಷ್ಟ ಹಾಗೂ ಅದಕ್ಷ ಪುರಸಭಾಧ್ಯಕ್ಷರಿಗೆ ತಮ್ಮ ಖಚಿತ ನಿರ್ಧಾರ ಬರೆದು ತಿಳಿಸಿ ಗುಂಡಿಗೆ ಮಣ್ಣು ತುಂಬಿದರು, "ಮಾನ್ಯ ಪುರಸಭಾಪತಿಯವರೇ ! ಮಾನವಜನ್ಮ ಅಲ್ಪಕಾಲಿಕವಾದದ್ದು. ಅಧಿಕಾರಿಗಳಾದರೋ ಅತಿ ಮಂದಗತಿಯಿಂದ ಕೆಲಸವೆಸಗುವವರು. ಇವರ ನಿಧಾನನೀತಿಗೆ ಹೊಂದಿಕೊಳ್ಳಬಲ್ಲಂಥ ಸುದೀರ್ಘ ಜೀವನ ನನ್ನದಲ್ಲ. ನಿಮ್ಮ ಸ್ನೇಹಯುತ ಉದ್ದೇಶವನ್ನು ನಾನು ಮನಸಾರೆ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಈಗ ಹೇಗೂ ನನ್ನ ಜನ್ಮದಿನ ಎಂದೂ ಮುಗಿದುಹೋಗಿರುವುದರಿಂದ ನೀವು ಕೊಡಬೇಕೆಂದಿರುವ ಇನಾಮನ್ನು ಸ್ವೀಕರಿಸಲು ನಿರಾಕರಿಸುತ್ತೇನೆ."

ಪುರಸಭೆಯ 'ಐನ್‌ಸ್ಟೈನ್ ಭವನ' ಹಗರಣ ಮುಗಿಯಿತಾದರೂ ಒಟ್ಟು ಪ್ರಕರಣ ಕೊನೆಗೊಳ್ಳಲಿಲ್ಲ. ತಾವು ಆಯ್ದಿದ್ದ ಕಾಪುತ್ ನಿವೇಶನವನ್ನು ಐನ್‌ಸ್ಟೈನ್ ಸ್ವಂತ ಹಣದಿಂದ ಕೊಂಡರು. ಅಲ್ಲಿ ಬಂಗ್ಲೆ ಕಟ್ಟಿಸಿದರು. ಅದರಲ್ಲಿ ನೆಲಸಿಯೇ ಬಿಟ್ಟರು. ಫಿಲಿಪ್ ಫ್ರ್ಯಾಂಕ್ ಅವರು ಐನ್‌ಸ್ಟೈನ್-ದಂಪತಿಗಳನ್ನು ಈ ಸ್ವಂತ ನಿವಾಸದಲ್ಲಿ ಸಂದರ್ಶಿಸಿ ಅಭಿನಂದಿಸಿದಾಗ ಎಲ್ಸಾ ಹೇಳಿದರು, "ಹೀಗೆ, ನಮಗೆ ಬೇಕೆಂಬ ಆಸೆ ಇಲ್ಲದಿದ್ದರೂ, ಈ ತಟಾಕ ಸಮೀಪದ ತರುಲತಾಚ್ಛಾದಿತ ನಿವೇಶನದಲ್ಲಿಯ ಸ್ವಂತ ಸುಂದರ ಸೌಧ ಹೊಂದಿದ್ದೇವೆ. ನಮ್ಮ ಉಳಿತಾಯದ ಅಧಿಕಾಂಶ ಇದರ ಮೇಲೆ ವಿನಿಯೋಗವಾಗಿದೆ. ಈಗ ನಮ್ಮ ಬಳಿ ವಿಶೇಷ ಹಣವೇನೂ ಇಲ್ಲ. ಆದರೆ ನಮ್ಮ ನೆಲ, ನಮ್ಮ ಆಸ್ತಿ ಇವೆಯಷ್ಟೆ. ಇವು ನಮಗೆ ಸುಭದ್ರತೆಯ ಹಾಗೂ ಸ್ವಾಸ್ಥ್ಯದ ಭಾವವನ್ನು ಒದಗಿಸಿವೆ."

ಜರ್ಮನಿ = ಸುವ್ಯವಸ್ಥೆ
ಬರ್ಲಿನ್ = ಸುದಕ್ಷತೆ
ಬರ್ಲಿನ್ ಪುರಸಭೆ = ಸುವ್ಯವಸ್ಥೆಯೊಳಗೆ ಸುದಕ್ಷತೆ

ಇಂಥ ಅಚ್ಚುಕಟ್ಟು ಕಟ್ಟುನಿಟ್ಟು ಪುರಸಭೆಯ ವ್ಯವಹಾರದಲ್ಲಿ 'ಐನ್‌ಸ್ಟೈನ್ ಭವನ'ದಂಥ ತಕರಾರು ಗೊಂದಲ ತಲೆದೋರಲು ಕಾರಣವೇನು ? ಪುರಸಭೆಯ ವರಿಷ್ಠರ ನಿರ್ಧಾರ ಕಾರ್ಯಗತವಾಗದಿದ್ದುದೇಕೆ ? ನಿಜ ಸಂಗತಿ ಏನೆಂದರೆ ಜರ್ಮನ್ ಗಣರಾಜ್ಯದ ಜಂಗು ಕುಂಬು ಮಾಡಿನ ಕೆಳಗೆ, ಹರಕುಮುರುಕು ಗೋಡೆಗಳ ಒಳಗೆ, ಬಿರುಕು ಕೊರಕಲು ನೆಲದ ಮೇಲೆ ಅತಿ ವಿಷಯುಕ್ತ ಪಿಡುಗು ಗೆದ್ದಲು ತೀವ್ರವಾಗಿ ವರ್ಧಿಸುತ್ತಿತ್ತು. ಉಗ್ರ ರಾಷ್ಟ್ರೀಯತೆಯ ವಿಷರಕ್ತ ರಾಷ್ಟ್ರದ ಪರಿಚಲನ ವ್ಯವಸ್ಥೆಯನ್ನು ಆಕ್ರಮಿಸಿತ್ತು. ಆಡಳಿತೆಯ ಮೇಲು ಮೇಲಿನ ಅಂತಸ್ತುಗಳನ್ನು 'ಅಲಂಕರಿಸಿ'ಕೊಂಡಿದ್ದು, ಕಲೆ ಸಂಸ್ಕೃತಿ ವಿಚಾರ ಮುಂತಾದವುಗಳ ಬಗ್ಗೆ ಸದ್ಭಾವನೆಗಳನ್ನು ವ್ಯಕ್ತಪಡಿಸುತ್ತ, ವೈಯಕ್ತಿಕ ಸ್ವಾರ್ಥವನ್ನು ದುರ್ಬಲವಾಗಿಯೂ ಅದಕ್ಷವಾಗಿಯೂ ಸಾಧಿಸಿಕೊಳ್ಳುತ್ತ, ಸ್ವಂತ ಹಿತವೇ ದೇಶಹಿತವೆಂದು ಭ್ರಮಿಸಿ ಸಂತೃಪ್ತ ಭಾವನೆಯಿಂದಿರುತ್ತಿದ್ದ

'ಮುಂದಾಳು' (ಮಂದಾಳು)ಗಳಿಗೆ ಆಡಳಿತಯಂತ್ರದ ಮೇಲೆ ಹಿಡಿತ ತಪ್ಪಿಹೋಗಿತ್ತು. ಬಹುತೇಕ ಉಗ್ರರಾಷ್ಟ್ರೀಯರ ಕರಗತವಾಗಿದ್ದ ಈ ಯಂತ್ರ ಮುಂದಾಳುಗಳ ನಿರ್ಧಾರಗಳನ್ನು ಚಾಕಚಕ್ಯ ದಿಂದ ವಿಫಲಗೊಳಿಸಿ ಅಥವಾ ನಿಷ್ಕ್ರಿಯಗೊಳಿಸಿ ಅವರನ್ನು ಇಕ್ಕಟ್ಟು ಆತಂಕಗಳಿಗೆ ಸಿಕ್ಕಿಸುವುದ ರಲ್ಲಿ ವಿಶೇಷ ಆಸ್ಥೆ ವಹಿಸುತ್ತಿತ್ತು. ಇಂಥ ಮಂದಿ 'ರಾಷ್ಟ್ರವೈರಿ ಅನಾಗರಿಕ ಯೆಹೂದ್ಯ' ಐನ್‌ಸ್ಟೈನರಿಗೆ ಉಡುಗೊರೆ ದಕ್ಕುವುದನ್ನು ಸಹಿಸಿಯಾರೇ ? ಮಿದುಳಿಗೂ ಕೈಕಾಲುಗಳಿಗೂ ಸಂಪರ್ಕ ಕಡಿದುಹೋಗಿ ರಾಷ್ಟ್ರಪುರುಷನ ದೇಹ ಪಾರ್ಶ್ವವಾಯುರೋಗಗ್ರಸ್ತವಾಗಿತ್ತು.

ಫ್ರ್ಯಾಂಕ್ ಬರೆಯುತ್ತಾರೆ, "ಇಡೀ ಜರ್ಮನ್ ಗಣರಾಜ್ಯದಲ್ಲಿ ಇದೇ ಪರಿಸ್ಥಿತಿ ಇತ್ತು. ಕಲೆ ಮತ್ತು ವಿಜ್ಞಾನ ಕುರಿತಂತೆ ಛಾನ್ಸಲರರಿಗೂ ಸರ್ಕಾರಕ್ಕೂ ಅಭಿಮಾನವಿತ್ತು. ಆದರೆ ಆ ವೇಳೆ ಗಾಗಲೇ ನಿಜ ಅಧಿಕಾರ ಛಾಯಾವ್ಯಕ್ತಿಗಳ ಕೈ ಸೇರಿತ್ತು."

ಸೋರುತಿಹುದು ಮನೆಯ ಮಾಳಿಗಿ ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಿಗಿ
ದಾರುಗಟ್ಟಿಮಾಳ್ಪರಿಲ್ಲದ
ಕಾಲಕತ್ತಲೆಯೊಳಗೆ ನಾನು
ಮೇಲಕೇರಿ ಮೆತ್ತಲಾರದ
ಮುರುಕು ಜಂತಿ ಹುಳುಕು ತೊಲೆಯ
ಮುರಿದುಕೊರಿದು ಕೀಲ ಸರಿದು
ಮುರಕಚಪ್ಪರ ಜೇರುಗಿಂಡಿ
ಮೇಲಕೇರಿ ಮೆಟ್ಟಲಾರೆ

ಶಿಶುನಾಳ ಶರೀಫರು

## ಐನ್‌ಸ್ಟೈನ್ ಆಶ್ರಮ

ನನ್ನ ಧಾರ್ಮಿಕ ಶ್ರದ್ಧೆ ಎಂಬುದು ನಮ್ಮ ಕ್ಷೀಣ ಹಾಗೂ ಅಲ್ಪಕಾಲಿಕ ಗ್ರಹಣ ಸಾಮರ್ಥ್ಯ ಅತ್ಯಲ್ಪವಾಗಿ ಮಾತ್ರ ಗ್ರಹಿಸಬಲ್ಲ ವಾಸ್ತವತೆಯ ರೂಪದಲ್ಲಿ ಪ್ರತ್ಯಕ್ಷವಾಗುವ ಆ ಮಹೋನ್ನತ ಮತ್ತು ಅನಂತ ಸತ್ತ್ವವನ್ನು ಕುರಿತ ವಿನೀತ ಗೌರವವಾಗಿದೆ. ನೈತಿಕತೆ ಅತಿ ಮುಖ್ಯವಾದದ್ದು—ಆದರೆ ನಮಗೆ, ದೇವರಿಗಲ್ಲ.

ಐನ್‌ಸ್ಟೈನ್

ಕಾಪುತ್ ಗ್ರಾಮದ ಸ್ವಂತ ಬಿಡಾರವನ್ನು ಐನ್‌ಸ್ಟೈನ್ ಕುಟುಂಬ ಅದೇ ವರ್ಷ (೧೯೨೯) ಪ್ರವೇಶಿಸಿತು. ಬರ್ಲಿನ್ನಿಗೂ (ಬಾಹ್ಯಜಗತ್ತಿಗೂ) ಈ ಆಶ್ರಮಕ್ಕೂ ನಡುವೆ ಇದ್ದ ಮುಖ್ಯ ಸಂಪರ್ಕ ಅಂಚೆ ಮಾತ್ರ. ದೂರವಾಣಿ ಸೌಲಭ್ಯವನ್ನು ಐನ್‌ಸ್ಟೈನ್ ಉಪಯೋಗಿಸಿಕೊಳ್ಳಲಿಲ್ಲ. ಹೀಗಾಗಿ ಇವರನ್ನು ನೋಡಬಯಸುವವರು ಮೂರು ಮಜಲಿನ ಯಾತ್ರೆ ಮಾಡಬೇಕಾಗುತ್ತಿತ್ತು : ಪಾಟ್ಸ್‌ಡ್ಯಾಮ್‌ವರೆಗೆ ರೈಲು ಪ್ರಯಾಣ, ಅಲ್ಲಿಂದ ಕಾಪುತ್‌ವರೆಗೆ ಬಸ್ ಪ್ರಯಾಣ, ಮುಂದೆ ಐನ್‌ಸ್ಟೈನ್ ಆಶ್ರಮಕ್ಕೆ ಕಾಲ್ನಡಿಗೆ.

ಸಂಪರ್ಕಬಂಧ ಪ್ರದೇಶದಲ್ಲಿ ವಿಜ್ಞಾನ ಪ್ರವರ್ಧಿಸಿತೇ ? ಸಹಚಿಂತನಶೀಲರ ಜೊತೆ ವಿಚಾರ ವಿನಿಮಯ, ಪ್ರಯೋಗಾಲಯದಲ್ಲಿ ನಿರ್ದಿಷ್ಟ ಪ್ರಯೋಗಗಳು, ಸಂಶೋಧನ ಪ್ರಬಂಧಗಳ ಅಧ್ಯಯನ, ತರುಣ ಸಂಶೋಧಕರ ಜೊತೆ ಸಹಯೋಗ ಮುಂತಾದವು ವಿಜ್ಞಾನಸಂಶೋಧನೆ

ಮುನ್ನಡೆಯುವ ಅಂಗೀಕೃತ ಹೆಜ್ಜೆಗಳು. ಐನ್‌ಸ್ಟೈನ್ ಇಂಥ ಯಾವ ಸಾಂಪ್ರದಾಯಿಕ ವಿಧಾನಕ್ಕೂ ಕಟ್ಟುಬಿದ್ದವರಲ್ಲ. "ನಾನು ಮಾಡುತ್ತಿರುವ ಬಗೆಯ ಕಾರ್ಯವನ್ನು ಎಲ್ಲಿ ಬೇಕಾದರೂ ಮಾಡ ಬಹುದು." "ನಿಮ್ಮ ಬರುವಿಕೆಯಿಂದ ನನ್ನ ಚಿಂತನೆಗೆ ಎಳ್ಳಷ್ಟೂ ಭಂಗವಾಗಿಲ್ಲ. ಏಕೆಂದರೆ ಚಿಂತನೆಯನ್ನು ನಾನು ಬೇಕಾದಾಗ ನಿಲ್ಲಿಸಬಲ್ಲೆ ಮತ್ತೆ ಬೇಕೆಂದಾಗ ಮೊದಲು ನಿಲ್ಲಿಸಿದಲ್ಲಿಂದ ಎತ್ತಿಕೊಂಡು ಮುಂದುವರಿಸಬಲ್ಲೆ." ಎಂಬ ನಿಲವನ್ನು ತಳೆದವರಿವರು. ಭಗವಂತನ ಅಖಂಡ ನಿಸರ್ಗಗ್ರಂಥ ಇವರ ಮುಂದೆ ಮುಕ್ತವಾಗಿಯೂ ಸಶಕ್ತವಾಗಿಯೂ ವಿಸ್ತಾರವಾಗಿಯೂ ತೆರೆದು ಕೊಂಡಿರುವ ತನಕ ಇವರು ಬರ್ಲಿನ್ನಿನ ವಿಜ್ಞಾನಮಂದಿರದಲ್ಲಿ ಏಕಾಂಗಿತ್ವವನ್ನೂ ಕಾಪುತ್ ಆಶ್ರಮದ ಏಕಾಕಿತ್ವದಲ್ಲಿ ವಿಜ್ಞಾನಮಂದಿರವನ್ನೂ ಒಬ್ಬಂಟಿಯಾಗಿ ಸೃಷ್ಟಿಸಬಲ್ಲವರಾಗಿದ್ದರು. ಸೈದ್ಧಾಂತಿಕ ಭೌತವಿಜ್ಞಾನಿಯಾಗಿದ್ದ ಐನ್‌ಸ್ಟೈನರ ಪ್ರಯೋಗ ಸಾಧನಗಳೆಂದರೆ ಕೇವಲ ಕಾಗದ, ಲೆಕ್ಕಣಿ ಅಷ್ಟೆ. (ಏಕಾಕಿ = ಜನವಿದೂರ ; ಏಕಾಂಗಿ = ಆಂತರಿಕವಾಗಿ ಒಂಟಿಗ)

ಜನಸ್ತೋಮದಿಂದ ದೂರವಾಗಿದ್ದ ಆಶ್ರಮ ಇವರಿಗೆ ಜನವಿದೂರತ್ವವನ್ನೇನೂ ಒದಗಿಸ ಲಿಲ್ಲ. ವಿಜ್ಞಾನಿಗಳು, ಮಿತ್ರರು, ಯೆಹೂದ್ಯರು, ಪ್ರವಾಸಿಗರು, ಪತ್ರಿಕಾಕರ್ತರು, ಬರ್ಲಿನ್ನಿಗೆ ಆಗಮಿಸುತ್ತಿದ್ದ ಅಂತಾರಾಷ್ಟ್ರೀಯ ಖ್ಯಾತಿವಂತರು, ಕುತೂಹಲಿಗಳು ಎಲ್ಲರಿಗೂ ಐನ್‌ಸ್ಟೈನ್ ಆಶ್ರಮ ಪವಿತ್ರ ಯಾತ್ರಾಸ್ಥಾನವಾಯಿತು. ತಿಳಿಸಿ, ತಿಳಿಸದೆ, ಅನುಮತಿ ಪಡೆದು, ಪಡೆಯದೆ, ವೇಳೆ ಅವೇಳೆ ಇಲ್ಲದೆ, ವಿಷಯ ಅವಿಷಯ ಎನ್ನದೆ ಜನ ಇವರನ್ನು ನೋಡಲು ಬರುತ್ತಿದ್ದರು. ಸೂರ್ಯನನ್ನು ಕರಡಿಗೆಯೊಳಗಡೆ ಮುಚ್ಚಿಡಲಾದೀತೆ ?

ವಿಶ್ವಕವಿ ರವೀಂದ್ರನಾಥ ಠಾಕೂರರು ೧೯೩೦ರಲ್ಲಿ ಐನ್‌ಸ್ಟೈನ್ ಆಶ್ರಮಕ್ಕೆ ಭೇಟಿ ನೀಡಿದ್ದರು. ಮಾನವಸಂವೇದನೆಯಿಂದ ಹೊರಗಿರುವ ಸತ್ಯ ಅಥವಾ ಸೌಂದರ್ಯ ಇಲ್ಲ ಎಂಬುದಾಗಿ ಠಾಕೂರ್ ವಾದಿಸಿದರು.

ಠಾಕೂರ್, "ಮಾನವನ ಅನಂತ ವ್ಯಕ್ತಿತ್ವ ವಿಶ್ವವನ್ನು ಗ್ರಹಿಸುತ್ತದೆ. ಮಾನವವ್ಯಕ್ತಿತ್ವ ಗ್ರಹಿಸ ಲಾಗದುದು ಏನೂ ಇರಲಾರದು. ಆದ್ದರಿಂದ ವಿಶ್ವಸತ್ಯವೆಂದರೆ ಮಾನವಸತ್ಯ ಎಂಬುದನ್ನಿದು ರುಜುವಾತಿಸುತ್ತದೆ."

ಐನ್‌ಸ್ಟೈನ್, "ಹಾಗಾದರೆ ಮಾನವಾವಲಂಬಿಯಲ್ಲದ ಸತ್ಯ ಅಥವಾ ಸೌಂದರ್ಯ ಇಲ್ಲ ?"

"ಇಲ್ಲ."

"ಮಾನವನೇ ಇಲ್ಲವಾಗಿದ್ದರೆ ಆಗ ಅಪೊಲೊ ಪ್ರತಿಮೆ ಸುಂದರವಾಗಿರುತ್ತಿರಲಿಲ್ಲ ?"

"ಸುಂದರವಾಗಿರುತ್ತಿರಲಿಲ್ಲ."

"ಸೌಂದರ್ಯದ ಈ ಪರಿಕಲ್ಪನೆಯನ್ನು ಒಪ್ಪುತ್ತೇನೆ. ಆದರೆ ಸತ್ಯವನ್ನು ಕುರಿತಂತೆ ಒಪ್ಪುವು ದಿಲ್ಲ."

"ಏಕೆ ಒಪ್ಪುವುದಿಲ್ಲ ? ಸತ್ಯ ಸಾಕ್ಷಾತ್ಕಾರವಾಗುವುದು ಮಾನವನ ಮೂಲಕ."

"ನನ್ನ ಪರಿಕಲ್ಪನೆ ಸರಿ ಎಂದು ನಾನು ಸಾಧಿಸಲಾರೆ. ಅದು ನನ್ನ ಮತಧರ್ಮ (religion)."

"ವಿಶ್ವವಸ್ತುಗಳಲ್ಲಿರುವ ಪರಿಪೂರ್ಣ ಸಾಂಗತ್ಯದ ಆದರ್ಶದಲ್ಲಿ ಸೌಂದರ್ಯವಿದೆ ಉಂಟು. ವಿಶ್ವಮನಸ್ಸಿನ ಪರಿಪೂರ್ಣ ಪರಿಗ್ರಹಣದಲ್ಲಿ ಸತ್ಯ ಉಂಟು. ಬಿಡಿವ್ಯಕ್ತಿಗಳಾದ ನಾವು ನಮ್ಮ ಲೋಪದೋಷಗಳ ಮೂಲಕ, ಸಂಚಿತಾನುಭವದ ಮೂಲಕ, ಉದ್ದೀಪಿತ ಪ್ರಜ್ಞೆಯ ಮೂಲಕ ಸತ್ಯವನ್ನು ಸಮೀಪಿಸುತ್ತೇವೆ—ಬೇರೆ ಯಾವ ತೆರನಾಗಿ ತಾನೇ ನಾವದನ್ನು ತಿಳಿಯಬಲ್ಲೆವು ?"

"ಸತ್ಯವನ್ನು ಮಾನವತ್ವದಿಂದ ಸ್ವತಂತ್ರವಾಗಿ ಸಾಧುವಾದ ಸತ್ಯವೆಂಬುದಾಗಿ ಪರಿಭಾವಿಸ



ಚಿತ್ರ ೧೧. ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ಚೌಕ ಉಳಿದೆರಡು ಭುಜಗಳ ಮೇಲಿನ ಚೌಕಗಳ ಮೊತ್ತಕ್ಕೆ ಸಮ

ಬೇಕೆಂಬುದನ್ನು ನಾನು ವೈಜ್ಞಾನಿಕವಾಗಿ ಸಾಧಿಸಲಾರೆ. ಆದರೆ ಅದರಲ್ಲಿ ನನಗೆ ದೃಢನಂಬಿಕೆ ಉಂಟು. ಉದಾಹರಣೆಗೆ, ಜ್ಯಾಮಿತಿಯಲ್ಲಿ ಬರುವ ಪೈಥಾಗೊರಸನ ಪ್ರಮೇಯ. [ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ಚೌಕ ಉಳಿದೆರಡು ಭುಜಗಳ ಮೇಲಿನ ಚೌಕಗಳ ಮೊತ್ತಕ್ಕೆ ಸಮ ; $c^2 = a^2+b^2$, ಉದಾಹರಣೆಗೆ ೫$^{೨}$=೩$^{೨}$ +೪$^{೨}$] ಇದು ಮಾನವಾಸ್ತಿತ್ವದಿಂದ ಸ್ವತಂತ್ರವಾದ ಮತ್ತು ಸನ್ನಿಹಿತವಾಗಿ ಸತ್ಯವಾದ ಏನೊ ಒಂದನ್ನು ತಿಳಿಸುತ್ತದೆ. ಇದು ಹೇಗೂ ಇರಲಿ. ಮಾನವನಿಂದ ಸ್ವತಂತ್ರವಾದ ವಾಸ್ತವತೆಯೊಂದಿರುವುದಾದಪಕ್ಷ ಈ ವಾಸ್ತವತೆಗೆ ಸಾಪೇಕ್ಷವಾದ ಒಂದು ಸತ್ಯವೂ ಇರುವುದು ; ಮತ್ತು ಇದೇ ರೀತಿ ಮೊದಲನೆಯದರ ನಿಷೇಧ ಎರಡನೆಯದರ ಅಸ್ತಿತ್ವದ ನಿಷೇಧವಾಗುತ್ತದೆ." (=ಮಾನವನಿಂದ ಸ್ವತಂತ್ರವಾದ ವಾಸ್ತವತೆಯೊಂದಿರುವುದಿಲ್ಲವಾದಪಕ್ಷ ಈ ವಾಸ್ತವತೆಗೆ ಸಾಪೇಕ್ಷವಾದ ಒಂದು ಸತ್ಯವೂ ಇರುವುದಿಲ್ಲ.)

ಸ್ಪಿನೋಝನ ದೇವರನ್ನು ನಂಬಿದ್ದ ಐನ್‌ಸ್ಟೈನ್ ಮಾನವಸಂವೇದನೆಗಳಿಗೆ ನಿಲುಕದ ಮತ್ತು ಅವುಗಳಿಂದ ಸ್ವತಂತ್ರವಾದ ಚಿರಂತನ ಸತ್ಯವೊಂದಿದೆಯೆಂದು ಭಾವಿಸಿದ್ದರು. "ಅದರ [ವಿಶಾಲ ವಿಶ್ವದ] ಬಗ್ಗೆ ನಮಗೇನೂ ತಿಳಿಯದು. ನಮ್ಮ ಸಮಸ್ತ ಜ್ಞಾನವೇನಿದ್ದರೂ ಅದು ಶಾಲಾಬಾಲಕರ ಜ್ಞಾನ ಮಾತ್ರ." ಎಂಬುದಾಗಿ ಒಬ್ಬ ಸಂದರ್ಶಕನಿಗೆ ಹೇಳಿದರು.

ಆತ ಪ್ರಶ್ನಿಸಿದ, "ಎಂದಾದರೂ ನಾವು ಈ ರಹಸ್ಯವನ್ನು ಶೋಧಿಸಿಯೇವೆಂದು ಭಾವಿಸಿರುವಿರಾ ?"

"ಪ್ರಾಯಶಃ ಈಗ ತಿಳಿದಿರುವುದಕ್ಕಿಂತ ಕೊಂಚ ಹೆಚ್ಚು ಮುಂದೊಂದು ದಿನ ತಿಳಿದೇವು. ಆದರೆ ವಸ್ತುಗಳ ನೈಜಸ್ವರೂಪವನ್ನು ಎಂದೆಂದೂ ತಿಳಿಯೆವು, ತಿಳಿಯಲಾರೆವು."

ಐನ್‌ಸ್ಟೈನರ ಮರಣಾನಂತರ ಮ್ಯಾಕ್ಸ್ ಬಾರ್ನ್ ಇವರ ವ್ಯಕ್ತಿತ್ವವನ್ನು ವರ್ಣಿಸಿದ್ದು ಹೀಗೆ, "ನಮಗೆ ಏನೂ ತಿಳಿದಿಲ್ಲವೆಂಬುದನ್ನು, ಸಾಕ್ರೆಟೀಸನ ಹಾಗೆ , ಇವರು ತಿಳಿದಿದ್ದರು."

ನಿಜ, ತಿಳಿದಿದೆಯೆಂದು ತಿಳಿದಾತ ತಿಳಿಯದಾತನಲ್ಲ, ತಿಳಿದಿಲ್ಲವೆಂದು ತಿಳಿದಾತ ತಿಳಿದಾತ.

## "ಅವರೇಕೆ ಯೆಹೂದ್ಯರನ್ನು ದ್ವೇಷಿಸುತ್ತಾರೆ ?"

ಪ್ರವಾದಿಗಳು ಪ್ರವರ್ತಿಸಿದ ಯೆಹೂದ್ಯಮತ ಮತ್ತು ಜೀಸಸ್ ಕ್ರೈಸ್ಟ್ ಬೋಧಿಸಿದ ಕ್ರಿಶ್ಚಿಯನ್ ಮತ ಇವುಗಳಿಂದ ತದನಂತರದ ಎಲ್ಲ ಪ್ರಕ್ಷಿಪ್ತಗಳನ್ನೂ—ವಿಶೇಷತಃ ಪುರೋಹಿತರು ಸೇರಿಸಿದಂಥವನ್ನು —ತೊಡೆದುಹಾಕಿದ್ದಾದರೆ ಉಳಿಯುವ ತಿರುಳು ಮಾನವಸಮುದಾಯದ ಸಕಲ ಸಾಮಾಜಿಕ ವ್ಯಾಧಿಗಳನ್ನೂ ಗುಣಪಡಿಸಬಲ್ಲದು.

ಐನ್‌ಸ್ಟೈನ್

ಜರ್ಮನಿಯ ಆಂತರಿಕ ಹವೆ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿತ್ತು. ಗಣರಾಜ್ಯದ ದುರ್ಬಲ ಹಂದರ ಯಾವುದೇ ಗಳಿಗೆ ಕುಸಿದು ಕುಕ್ಕರಿಸಲು ತಯಾರಾಗಿತ್ತು. ಒಳಗೆ ಹೊರಗೆ ಅಶಾಂತಿ ಅರಾಜಕತೆ ಅತೃಪ್ತಿ ತಾಂಡವವಾಡುತ್ತಿದ್ದುವು. ಜರ್ಮನಿ ಶುದ್ಧ ಜರ್ಮನರಿಗೆ ಮಾತ್ರ ಸಲ್ಲತಕ್ಕದ್ದು. ಮಿಶ್ರರಿಗೆ ಸಂಕರಿಗಳಿಗೆ ಅಶುದ್ಧರಿಗೆ ಅಯೋಗ್ಯರಿಗೆ ಅಲ್ಲ ಎಂಬ ಜನಾಂಗ ಶ್ರೇಷ್ಠತ್ವ ಪ್ರಜ್ಞೆ ಉಲ್ಬಣಸ್ಥಿತಿಗೇರುತ್ತಿತ್ತು.

ಶುದ್ಧ ಜರ್ಮನರು ಯಾರು ? ಯಾರಲ್ಲ ಎಂಬ ನೇತಿಮಾರ್ಗ ಇಲ್ಲಿ ವಿವರಣೆ ನೀಡಲು ಸಲೀಸು. ಈ ನೇತಿ ಯಾದಿಯಲ್ಲಿ ಯೆಹೂದ್ಯರಿಗೆ ಅಗ್ರಸ್ಥಾನ. ಶುದ್ಧ ಜರ್ಮನರ ಆಕ್ರೋಶದ ಪ್ರಾಥಮಿಕ ಲಕ್ಷ್ಯ ಯೆಹೂದ್ಯರ ಸಂತವಿಜ್ಞಾನಿ ಐನ್‌ಸ್ಟೈನ್. ಜನಾಂಗಕ್ರೋಧವನ್ನು ತಮ್ಮೆಡೆಗೆ ಆಕರ್ಷಿಸುವಲ್ಲಿ ಐನ್‌ಸ್ಟೈನರ ಪಾತ್ರವೇನೂ ಅಲ್ಪವಾಗಿರಲಿಲ್ಲ. ಇವರ ನಿಷ್ಕಾಪಟ್ಯ, ಜೀವನ ಧರ್ಮ, ರಾಜಕೀಯ ವ್ಯವಹಾರ, ಪ್ರಪಂಚ ಚಟುವಟಿಕೆ, ಮೇಲಾಗಿ ಸೀಮಾತೀತ ವ್ಯಕ್ತಿತ್ವ ಒಂದೊಂದೂ ಯೆಹೂದ್ಯವೈರಿ ಉಗ್ರ ರಾಷ್ಟ್ರೀಯವಾದಿ ಜರ್ಮನ್ ಆರ್ಯರ ಕರಡಿತನಕ್ಕೆ ಹೆಂಡವೆರೆಯುತ್ತಿತ್ತು, ಚೇಳು ಕುಟುಕುತ್ತಿತ್ತು.

"ಅವರೇಕೆ ಯೆಹೂದ್ಯರನ್ನು ದ್ವೇಷಿಸುತ್ತಾರೆ ?" ಈ ಪ್ರಶ್ನೆಗೆ ಐನ್‌ಸ್ಟೈನ್ ಉತ್ತರ ಬರೆದಿದ್ದಾರೆ (೧೯೩೮) :

ನಿಮಗೊಂದು ಪುರಾತನ ನೀತಿಕತೆ ಹೇಳುತ್ತೇನೆ. ಇದರಲ್ಲಿ ಅತ್ಯಲ್ಪ ಮಾರ್ಪಾಡು ಮಾಡಿದ್ದೇನೆ. ರಾಜಕೀಯ ಯೆಹೂದ್ಯದ್ವೇಷದ ಮುಖ್ಯ ಸೆಲೆಗಳು ಎದ್ದುಕಾಣುವಂತೆ ಮಾಡಲು ಈ ನೀತಿಕತೆ ನೆರವಾಗಬಲ್ಲದು.

ಕುರಿಗಾಹಿಯೊಮ್ಮೆ ಕುದುರೆಗೆ ಅಂದ, "ಈ ವಸುಂಧರೆಯಲ್ಲಿ ಪದವಿಡುತ್ತಿರುವ ಪರಮಶ್ರೇಷ್ಠ ಚತುಷ್ಪಾದಿ ನೀನು. ಖಂಡಿತವಾಗಿಯೂ ನೀನು ನಿರಾತಂಕವಾದ ಆನಂದ ಸ್ಥಿತಿಯಲ್ಲಿ ಜೀವಿಸಲು ಪೂರ್ಣ ಅರ್ಹತೆ ಪಡೆದಿರುವೆ. ಆ ವಿಶ್ವಾಸಘಾತಕ ಕಡವೆ ಅಲ್ಲದಿದ್ದರೆ ನಿಜಕ್ಕೂ ನಿನ್ನ ಹಿಗ್ಗು ಪರಿಪೂರ್ಣವಾಗಿರುತ್ತಿತ್ತು. ಆದರೆ ಬಾಲ್ಯದಿಂದಲೂ ಅವನು ಪದಗತಿಯ ಚಟುಲತೆಯಲ್ಲಿ ನಿನಗಿಂತ ಮುಂದಿರಲು ಅಭ್ಯಾಸ ಮಾಡಿದ್ದಾನೆ. ಈ ಚುರುಕು ನಡೆಯ ಪರಿಣಾಮವಾಗಿ ಅವನು ನಿನಗಿಂತ ಮೊದಲೇ ನೀರ್ಗಂಡಿಗಳನ್ನು ತಲಪುತ್ತಾನೆ. ಅವನೂ ಅವನ ಪರಿವಾರವೂ ಇಲ್ಲಿ ಅಲ್ಲಿ ಎಲ್ಲೆಲ್ಲೂ ನೀರು ಹೀರಿದ್ದೇ ಹೀರಿದ್ದು. ಇದರಿಂದಾಗಿ ನೀನೂ ನಿನ್ನ ಮರಿಗಳೂ ನೀರಡಕೆಯಿಂದ ಬೆಂದು ಬಳಲಿ ಬಸವಳಿಯಬೇಕಾಗಿದೆ. ಗೆಳೆಯ ! ನನ್ನೊಡನೆ ಉಳಿದಿರು. ನನ್ನ ಬುದ್ಧಿವಂತಿಕೆ ಮತ್ತು ಮಾರ್ಗದರ್ಶನ ನಿನ್ನನ್ನೂ ನಿನ್ನ ಪೀಳಿಗೆಯನ್ನೂ ಈ ಭೀಕರ ಮತ್ತು ಅಪಮಾನಕಾರಕ ಸನ್ನಿವೇಶದಿಂದ ಪಾರುಗಾಣಿಸುವುದು ಖಾತ್ರಿ."

ಕಡವೆಗೆದುರಾಗಿ ದ್ವೇಷ ಅಸೂಯೆಗಳಿಂದ ತಹತಹಿಸುತ್ತಿದ್ದ ಕುದುರೆಯು ಕುರಿಗಾಹಿಯ ನಲ್ನುಡಿಯಿಂದ ಹಿರಿ ಹಿಗ್ಗಿತು. ಆತನ ಜೀನಿಗೆ ತನ್ನನ್ನು ಒಪ್ಪಿಸಿಕೊಂಡಿತು. ಆ ಕ್ಷಣ ಅದರ ಸ್ವಾತಂತ್ರ್ಯ ಹರಣವಾಯಿತು. ಅದು ಕುರಿಗಾಹಿಯ ಗುಲಾಮಪ್ರಾಣಿಯಾಯಿತು.

ಈ ನೀತಿ ಕತೆಯಲ್ಲಿಯ ಕುದುರೆಯು ಜನರನ್ನು ಪ್ರತಿನಿಧಿಸುತ್ತದೆ ; ಕುರಿಗಾಹಿಹ್ಮದ ಜನರ ಮೇಲೆ ಪೂರ್ಣಾಧಿಕಾರ ಸ್ಥಾಪನೆ ಮಾಡಲು ಹೊಂಚುತ್ತಿರುವ ವರ್ಗ ಯಾ ದುಷ್ಟಕೂಟವನ್ನು ಪ್ರತಿನಿಧಿಸುತ್ತಾನೆ.

ಇನ್ನು ಕಡವೆ ? ಇದು ಯೆಹೂದ್ಯರನ್ನು ಪ್ರತಿನಿಧಿಸುತ್ತದೆ.

ನೀವು ಗೊಣಗುವುದು ನನಗೆ ಕೇಳುತ್ತಿದೆ, "ಅತ್ಯಂತ ಅಪ್ರಾಯಿಕ ಕತೆ ! ನಿಮ್ಮ ನೀತಿಕತೆಯಲ್ಲಿಯ ಕುದುರೆಯಂಥ ಮೂರ್ಖಜಂತು ಯಾವುದೂ ಇರುವುದಿಲ್ಲ." ಆದರೆ ಇದನ್ನು ಕೊಂಚ ಪರ್ಯಾಲೋಚಿಸೋಣ. ಕುದುರೆ ತೀವ್ರದಾಹದಿಂದ ದಣಿದಿದೆ. ಪಟುಗತಿಯ ಕಡವೆ ತನ್ನನ್ನು ಹಿಂದೆಹಾಕಿ ನೀರೆಡೆಗೆ ದೌಡಾಯಿಸಿರುವುದನ್ನು ಕಂಡು ಖತಿಗೊಂಡಿದೆ. ಇದರ ಜಂಬಕ್ಕೆ ಈ ಸೋಲು ಬರೆ ಕಾಸಿದೆ. ಇಂಥ ಯಾವುದೇ ವೇದನೆ ಯಾ ಹತಾಶೆ ಗೊತ್ತಿರದ ನೀವು, ನಿಜಕ್ಕೂ ಕುದುರೆಯನ್ನು ದ್ವೇಷ ಮತ್ತು ಅಂಧತೆ ಆ ತೆರನಾಗಿ, ಯೋಗ್ಯವಲ್ಲದ ಹಾಗೂ ಕಷ್ಟಕ್ಕೆ ಕೆಡೆಯಬಲ್ಲ ಹಾದಿಗೆ ತಳ್ಳಿರಬಹುದೆಂಬುದನ್ನು ಸುಲಭವಾಗಿ ಗ್ರಹಿಸಲಾರಿರಿ. ಕುದುರೆ ಏಕೆ ಅಷ್ಟು ಬುದ್ಧಿಶೂನ್ಯವಾಗಿ ಪ್ರಲೋಭನೆಯ ಕಂದಕಕ್ಕೆ ಬಿತ್ತು ? ಅದರ ಆ ಹಿಂದಿನ ಯಾತನೆ ಸಂಕಟಗಳು ಈ ಪ್ರಮಾದವನ್ನೆಸಗುವಂತೆ ಅದನ್ನು ಸಿದ್ಧಗೊಳಿಸಿದ್ದುವು. ಏಕೆಂದರೆ ನಿಷ್ಪಕ್ಷಪಾತ ಮತ್ತು ಪ್ರಾಜ್ಞ ಸಲಹೆ ಕೊಡುವುದು ಸುಲಭ—ಇತರರಿಗೆ ; ಆದರೆ ಸ್ವತಃ ನಿಷ್ಪಕ್ಷಪಾತವಾಗಿ ಮತ್ತು ಪ್ರಾಜ್ಞವಾಗಿ ವರ್ತಿಸುವುದು ಕಠಿಣವೆಂಬ ಹೇಳಿಕೆ ಸತ್ಯಗರ್ಭಿತವಾಗಿದೆ. ಪೂರ್ಣ ಭರವಸೆಯಿಂದ ನಿಮಗೆ ಹೇಳುತ್ತೇನೆ : ನಾವೆಲ್ಲರೂ ಅನೇಕ ವೇಳೆ ಕುದುರೆಯ ದುರಂತ ಪಾತ್ರ ನಿರ್ವಹಿಸಿದ್ದೇವೆ ; ಅಲ್ಲದೆ ಅದೇ ಪ್ರಲೋಭನೆಗೆ ಪುನಃ ಬಲಿಯಾಗುವ ಅಪಾಯಕ್ಕೆ ತುತ್ತಾಗುತ್ತಲೂ ಇದ್ದೇವೆ.

ಈ ನೀತಿಕತೆಯಲ್ಲಿ ನಿದರ್ಶಿಸಿರುವ ಸನ್ನಿವೇಶ ವ್ಯಕ್ತಿಗಳ ಮತ್ತು ರಾಷ್ಟ್ರಗಳ ಜೀವನದಲ್ಲಿ ಮತ್ತೆ ಮತ್ತೆ ಸಂಭವಿಸುತ್ತಿರುತ್ತದೆ. ಒಬ್ಬ ವ್ಯಕ್ತಿಯ ಯಾ ಒಂದು ಸಮುದಾಯದ ಬಗೆಗಿನ ತಿರಸ್ಕಾರದ್ವೇಷಗಳನ್ನು, ಪರಿಣಾಮಕಾರಿಯಾದ ರಕ್ಷಣೆ ಒದಗಿಸಿಕೊಳ್ಳಲಾರದ ಇನ್ನೊಬ್ಬ ವ್ಯಕ್ತಿ ಯಾ ಇನ್ನೊಂದು ಸಮುದಾಯದ ಕಡೆಗೆ ಹರಿಸುವ ಪ್ರಕ್ರಿಯೆ ಇದೆಂದು ಸಂಕ್ಷೇಪವಾಗಿ ಹೇಳಬಹುದು. ಆದರೆ ನೀತಿಕತೆಯಲ್ಲಿಯ ಕಡವೆಯ ಪಾತ್ರ ಅಷ್ಟೊಂದು ಬಾರಿ ಯೆಹೂದ್ಯರ ಪಾಲಿಗೇ ಏಕೆ ಬಂತು ? ಯೆಹೂದ್ಯರೇಕೆ ಅಷ್ಟೊಂದು ಸಲ ಜನಸ್ತೋಮಗಳ ಆಕ್ರೋಶವನ್ನು ತಮ್ಮೆಡೆಗೆ ಸೆಳೆಯುವಂತಾಯಿತು ? ಏಕೆಂದರೆ, ಪ್ರಧಾನತಃ ಹೆಚ್ಚು ಕಡಿಮೆ ಎಲ್ಲ ಜನಾಂಗಗಳಲ್ಲಿಯೂ ಯೆಹೂದ್ಯರಿದ್ದಾರೆ ; ಮತ್ತು ಎಲ್ಲ ಕಡೆಗಳಲ್ಲಿಯೂ ಅವರು ಬಲು ವಿರಳವಾಗಿ ಹರಡಿಹೋಗಿದ್ದು ಹಿಂಸಾಕೃತ್ಯಗಳೆದುರು ತಮ್ಮನ್ನು ತಾವು ರಕ್ಷಿಸಿಕೊಳ್ಳಲಾರದವರಾಗಿದ್ದಾರೆ.

ಸಮೀಪ ಭೂತಕಾಲದಿಂದ ಆಯ್ದ ಕೆಲವು ನಿದರ್ಶನಗಳು ಈ ಹೇಳಿಕೆಯ ತಥ್ಯವನ್ನು ಸ್ಥಾಪಿಸಬಲ್ಲವು. ಹತ್ತೊಂಬತ್ತನೆಯ ಶತಮಾನದ ಕೊನೆ ಹೊತ್ತಿಗೆ ರಷ್ಯದ ಜನ ತಮ್ಮ ಸರ್ಕಾರದ ದುರಾಡಳಿತೆಯಿಂದ ಅತಿಯಾಗಿ ಸಂಕಟಪಡುತ್ತಿದ್ದರು. ವಿದೇಶನೀತಿಯಲ್ಲಿ ಎಸಗಲಾದ ಮೂರ್ಖ ಪ್ರಮಾದಗಳು ಈ ಜನರ ಆಕ್ರೋಶವನ್ನು ಅತಿಯಾಗಿ ವರ್ಧಿಸಿ ಕಟ್ಟೆ ಬಿರಿವಸ್ಥಿತಿ ಬಂದಿತ್ತು. ಇಂಥ ಉತ್ಕಟ ಸನ್ನಿವೇಶದಲ್ಲಿ ರಷ್ಯದ ನಾಯಕರು ಜನಸ್ತೋಮದ ಅಶಾಂತಿಯನ್ನು ಯೆಹೂದ್ಯರ ಎದುರು ದ್ವೇಷ ಹಿಂಸಾಚಾರಗಳಿಗೆ ಪ್ರವರ್ತಿಸಿ ಅದರ ಹಾದಿ ತಿರುಗಿಸಲು ಪ್ರಯತ್ನಿಸಿದರು. ೧೯೦೫ರ ಅಪಾಯಕಾರಿ ಕ್ರಾಂತಿಯನ್ನು ರಷ್ಯ ಸರ್ಕಾರ ನೆತ್ತರಿನಿಂದ ಮುಳುಗಿಸಿದ ತರುವಾಯವೂ ಇವೇ ಚಮತ್ಕಾರಗಳನ್ನು ಪುನರಾವರ್ತಿಸಲಾಯಿತು. ಈ ದುಷ್ಟತಂತ್ರ ಆ ದ್ವೇಷಿತ ಆಡಳಿತೆಯನ್ನು ಹೆಚ್ಚು ಕಡಿಮೆ ಪ್ರಪಂಚಯುದ್ಧದ ಕೊನೆಯ ತನಕವೂ ಅಧಿಕಾರದಲ್ಲಿಡಲು ನೆರವಾಗಿರುವುದು ಸಾಧ್ಯ.

ಜರ್ಮನಿಯ ಆಡಳಿತವರ್ಗ ಸಂಚು ಹೂಡಿ ಆರಂಭಿಸಿದ ಪ್ರಪಂಚ ಯುದ್ಧದಲ್ಲಿ ಜರ್ಮನರು ಸೋಲಪ್ಪಿದಾಗ ಯೆಹೂದ್ಯರ ಮೇಲೆ ತಪ್ಪು ಹೊರಿಸಲು ಪ್ರಯತ್ನಿಸಲಾಯಿತು—ಮೊದಲು, ಯುದ್ಧವನ್ನು ಪ್ರವರ್ತಿಸಿದ್ದಕ್ಕಾಗಿ, ತರುವಾಯ, ಅದರಲ್ಲಿ ಸೋತದ್ದಕ್ಕಾಗಿ. ಕಾಲ ಸಂದಂತೆ ಈ ತೆರನಾದ ಪ್ರಯತ್ನಗಳಿಗೆ ಜಯ ಲಭಿಸಿತು. ಯೆಹೂದ್ಯರ ಎದುರಾಗಿ ಕಟ್ಟಲಾದ ದ್ವೇಷ ಪ್ರತಿಷ್ಠಿತವರ್ಗಗಳನ್ನು ಕಾಪಾಡಿತು ; ಮತ್ತು ನಿರ್ಲಜ್ಜ, ಅನೀತಿವಂತ ಮತ್ತು ದುರಂಹಕಾರಪೂರಿತ ಅಲ್ಪಕೂಟವೊಂದು ಇಡೀ ಜರ್ಮನ್ ಜನಾಂಗವನ್ನು ಸಂಪೂರ್ಣ ದಾಸ್ಯಸ್ಥಿತಿಯಲ್ಲಿಡಲು ಕಾರಣವೂ ಆಯಿತು.

'ಬಲಗಡೆಯಿಂದ ಕ್ರಾಂತಿ' ಎಂಬುದು ನಾಟ್ಸೀ ದುಷ್ಕೃತ್ಯಗಳ ಸಂಭಾವಿತ ನಾಮಧೇಯ.

ಯೆಹೂದ್ಯನಾಶ ಈ ಕ್ರಾಂತಿಯ ಪ್ರಥಮೋದ್ದೇಶ. ಇದಕ್ಕಾಗಿ ಸರ್ಕಾರದ ಆಡಳಿತ ಯಂತ್ರವನ್ನು ಸ್ವಾಧೀನ ತೆಗೆದುಕೊಳ್ಳುವುದು ಇದರ ನೀತಿ. ಯೆಹೂದ್ಯ ಜನಾಂಗದವರ ಅಂಗಡಿ ಉದ್ಯಮಗಳ ಲೂಟಿ, ಮನೆಮಠಗಳ ದರೋಡೆ, ಶಾಲೆ ಸಂಘಗಳ ನಾಶ ಮುಂತಾದ ಸಾರ್ವತ್ರಿಕ ಹನನಕ್ರಿಯೆ ಇದರ ಕಾರ್ಯವಿಧಾನ. ಸುವ್ಯವಸ್ಥಿತ ವಾದ್ಯಮೇಳದ ಧಾಟಿಯಲ್ಲಿ ನಿಧಾನ ಸಂಚಾರದಿಂದ ತೀವ್ರ ಸಂಚಾರದೆಡೆಗೆ ಈ ಕಾರ್ಯಕ್ರಮ ಮುಂದುವರಿಯುತ್ತಿತ್ತು.

ಈ ಪಾಶವೀಕೃತ್ಯಗಳ ಹಿನ್ನೆಲೆಯಲ್ಲಿದ್ದಾತ ಖಳನಾಯಕ ಅಡಾಲ್ಫ್ ಹಿಟ್ಲರ್ (೧೮೮೯-೧೯೪೫). ಜರ್ಮನಿ ಜರ್ಮನರಿಗೆ ಮಾತ್ರ, ಜರ್ಮನ್ ಸಂಸ್ಕೃತಿ ಎಂದರೆ ಪವಿತ್ರ ಮತ್ತು ಶುದ್ಧ ಆರ್ಯಸಂಸ್ಕೃತಿ. ಕಲಬೆರಕೆ ಖೋಟಾ ಸಂಸ್ಕೃತಿಗಳಿಂದ ಕೆಟ್ಟುಹೋಗಿರುವ ಇದನ್ನು ಶುದ್ಧೀಕರಿಸುವುದು ಆದ್ಯಕರ್ತವ್ಯ, ಜರ್ಮನ್ ಧೀಶಕ್ತಿ ಪ್ರಪಂಚದಲ್ಲಿ ಸಾರ್ವಕಾಲಿಕ ಸರ್ವಶ್ರೇಷ್ಠ ಬುದ್ಧಿವಂತಿಕೆ, ಇದಕ್ಕೆ ಬಡಿದಿರುವ ಕಲಬೆರಕೆ ಜಂಗನ್ನು ನಿವಾರಿಸುವುದು ಜರೂರಿನ ಆವಶ್ಯಕತೆ—ಇವೆಲ್ಲ ಕೈಗೂಡಬೇಕಾದರೆ ಮೊದಲು ಯೆಹೂದ್ಯರು ನಿರ್ನಾಮವಾಗಬೇಕು ಎಂಬ ಉಗ್ರ ಧೋರಣೆಯ ಮೂರ್ತರೂಪವೇ ಹಿಟ್ಲರ್.

ಉಗ್ರಧೋರಣೆ ಕಾರ್ಯಗತವಾಗಲು ವ್ಯಗ್ರ ಆಚರಣೆ ಅಗತ್ಯ. ಎಂದೇ ಈ ಹಾದಿಯನ್ನು ಅನುಸರಿಸುವವರು ಸರ್ವಾಧಿಕಾರಿಗಳಾಗುವುದಾಗಿದೆ. ಇವರ ಪ್ರಜಾಪ್ರಭುತ್ವಪೋಷಕ ಮಾತುಕತೆ ಏನಿದ್ದರೂ ತಮ್ಮ ಉದ್ದೇಶಸಾಧನೆಯ ದಿಶೆಯಲ್ಲಿಟ್ಟ ನಿಚ್ಚಣಿಕೆಯ ಸೋಪಾನಗಳು ಮಾತ್ರ. ಒಮ್ಮೆ ಗುರಿ ತಲಪಿದ್ದಾಯಿತೋ ಮತ್ತೆ ನಿಚ್ಚಣಿಕೆಯ ನೆನಪು ಕೂಡ ಇವರಿಗೆ ಸಹ್ಯವಾಗದು. ಹಿಟ್ಲರ್ ಹಿಡಿದದ್ದು ಈ ಹಾದಿಯನ್ನು.

ಸಕಲ ದಾಸ್ಯಗಳಲ್ಲಿ ಬೌದ್ಧಿಕ ದಾಸ್ಯವೇ ಅತ್ಯಂತ ಹೀನಾಯವಾದದ್ದು. ತಮ್ಮ ದಬ್ಬಾಳಿಕೆಗೆ ಯಾವುದೇ ವಿಧದ ಪ್ರತಿರೋಧವನ್ನು ಸ್ವಾಗತಿಸದ, ಮತ್ತು ಎಲ್ಲ ವಿಧದ ಸಮ್ಮತಿಯನ್ನು ಸದಾ ಅಪೇಕ್ಷಿಸುವ ನಿರಂಕುಶ ಪ್ರಭುಗಳ ಪ್ರಥಮ ಶತ್ರು ಬುದ್ಧಿಜೀವಿ. ಸರ್ವಾಧಿಕಾರಿಯ ಸ್ಟೀಮ್ ರೋಲರಿನ ಅಥವಾ ಮಾರಿಹಲುಬೆಯ ಸಮಕಾರಿ ನಡೆಯಲ್ಲಿ ಆತ ಸಂದರ್ಭಾನುಸಾರ ಬುದ್ಧಿಜೀವಿಗಳ ಸಾಮೂಹಿಕ ಕಗ್ಗೊಲೆಗೆ ಇಳಿದು ಅವರ 'ಅಪಸ್ವರ' ಮಿಡಿಯದಂತೆ ಮಾಡಬಹುದು; ಅಥವಾ ನಾನಾ ವಿಧವಾದ ಆಸೆ ಆಮಿಷ ಪ್ರಲೋಭನೆಗಳಿಂದ ಅವರಿಗೆ 'ಮಿದುಳುಮೀಹ' ನೀಡಿ ಅವರನ್ನು ಪೂರ್ತಿ ತನ್ನವರನ್ನಾಗಿ ಮಾರ್ಪಡಿಸಿಕೊಳ್ಳಬಹುದು. ಯೆಹೂದ್ಯ ಬುದ್ಧಿಜೀವಿಗಳನ್ನು ಹತಮಾಡುವುದು ಮತ್ತು ಆರ್ಯ ಬುದ್ಧಿಜೀವಿಗಳನ್ನು ಬೆಂಬಲಿಗರಾಗಿ ಪರಿವರ್ತಿಸಿಕೊಳ್ಳುವುದು—ಈ ತೆರನಾಗಿ ಹಿಟ್ಲರ್‌ಶಾಹಿ ಮುನ್ನಡಿಯಿಟ್ಟಿತು. ಮೊದಲನೆಯದರ ಲಕ್ಷ್ಯ ಐನ್‌ಸ್ಟೈನ್; ಎರಡನೆಯದರಲ್ಲಿ ಫಿಲಿಪ್ ಲೆನಾರ್ಡ್ ಮತ್ತು ಯೋಹಾನೆಸ್ ಸ್ಟಾರ್ಕ್ (೧೮೭೪-೧೯೫೭, ಜರ್ಮನ್ ಭೌತವಿಜ್ಞಾನಿ ಮತ್ತು ೧೯೧೯ರ ನೊಬೆಲ್ ಪ್ರಶಸ್ತಿಧರ) ಮುಂಚೂಣಿಯಲ್ಲಿದ್ದರು.

ಬೌದ್ಧಿಕ ಕ್ಷೇತ್ರದಲ್ಲಿ ಐನ್‌ಸ್ಟೈನರನ್ನು ಸದೆಬಡಿಯುವುದು ಹೇಗೆ ? ಲೆನಾರ್ಡ್ ಮತ್ತು ಸ್ಟಾರ್ಕ್ ಇವರಿಂದ ಪ್ರೇರಿತವಾಗಿ ಲೈಪ್ಜಿಗ್ಗಿನಿಂದ *Hundert Autoren Gegen Einstein* (ಐನ್‌ಸ್ಟೈನರ ವಿರುದ್ಧ ನೂರು ಲೇಖಕರು) ಎಂಬ 'ಮೇರು ವಿಜ್ಞಾನನಿಬಂಧ' ಪ್ರಕಟವಾಯಿತು. ಲೆನಾರ್ಡ್ ಮತ್ತು ಸ್ಟಾರ್ಕ್ ಇವರಿಬ್ಬರ ಹೊರತಾಗಿ ಉಳಿದ ತೊಂಬತ್ತೆಂಟು ಮಂದಿ 'ಸುಪ್ರಸಿದ್ಧ' ಐನ್‌ಸ್ಟೈನ್‌ವಿರೋಧಿ ವಿಜ್ಞಾನಿಗಳು ಯಾರು, ವಿಜ್ಞಾನಪ್ರಪಂಚದಲ್ಲಿ ಅವರ ಸ್ಥಾನಮಾನಗಳೇನು ಎಂಬ 'ಸೂಕ್ಷ್ಮ' ವಿಚಾರಗಳು ಎಂಥ ಪ್ರಬಲ ದೂರದರ್ಶಕಕ್ಕಾಗಲಿ ಸೂಕ್ಷ್ಮದರ್ಶಕಕ್ಕಾಗಲಿ ಗೋಚರವಾಗುವಂತಿರಲಿಲ್ಲ. ದ್ವೇಷ ಅಸೂಯೆಗಳ ಅಮೂರ್ತಲೋಕದ ಅನಂತಾಲ್ಪ ಪರಿಕಲ್ಪನೆಗಳೇ

ಹಾಗೆ—ಭಾವಬುದ್ಧಿಗಮ್ಯಾತೀತ, ಆದರೆ ರಾಗರೋಷಾತಿರಂಜಿತ ಹಾಗೂ ಲಂಬಿತ !

ಈ ಘನಗ್ರಂಥದ ಹೂರಣದ ವೈಖರಿ ಏನು ಗೊತ್ತೇ ?

ಒಂದು ಅಧ್ಯಾಯದ ಶೀರ್ಷಿಕೆ : *Die Unhaltbarkeit der Relativitastheorie* (ಸಾಪೇಕ್ಷತಾ ಸಿದ್ಧಾಂತದ ಅಸಮರ್ಥನೀಯತೆ)

ಇನ್ನೊಂದರದು : *Meine Haupteinwande Gegen der Relativitatstheorie* (ಸಾಪೇಕ್ಷತಾಸಿದ್ಧಾಂತವನ್ನು ಕುರಿತು ನನ್ನ ಮುಖ್ಯ ಅಭ್ಯಂತರಗಳು)

ಮಗದೊಂದರದು : *Der Bankrott der Relativitatstheorie* (ಸಾಪೇಕ್ಷತಾಸಿದ್ಧಾಂತದ ದಿವಾಳಿಖೋರತನ)

ಮತ್ತೊಂದರ ಶೀರ್ಷಿಕೆ : *Einsteinism : His deceitful conclusions and frauds* (ಐನ್‌ಸ್ಟೈನತ್ವ : ಅವರ ವಂಚಕ ತೀರ್ಮಾನಗಳು ಮತ್ತು ಮೋಸಗಾರಿಕೆಗಳು)

ಆಳಕಡಲಿನಲ್ಲಿ ಕಂತಿಕೊಂಡಿರುವ ಮಾರಿನೀರ್ಗಲ್ಲಬೆಟ್ಟದ ಕೊಡಿ ಮಾತ್ರ ಇದೆಂದು ಐನ್‌ಸ್ಟೈನರಿಗೆ ತಿಳಿಯದಿರಲಿಲ್ಲ. ದೇಶ ಬಿಟ್ಟೋಡುವುದೇ ? ಬರ್ಲಿನ್ನಿನ ಭೌತವಿಜ್ಞಾನ ಹವೆ ಇವರಿಗೆ ಅತಿಪ್ರಿಯವೂ ಉತ್ತೇಜಕವೂ ಆಗಿತ್ತು. ಮ್ಯಾಕ್ಸ್ ಪ್ಲ್ಯಾಂಕರಂಥ ಹಿರಿಯರ ಸಾನ್ನಿಧ್ಯ ಅಮೃತೋಪಮವಾಗಿತ್ತು. ನೈಜ ಜರ್ಮನ್ ಸಂಸ್ಕೃತಿ ಸಾಹಿತ್ಯ ಸಂಗೀತ ಇವರ ಬದುಕಿಗೆ ಅಗತ್ಯ ಪೋಷಕಗಳಾಗಿದ್ದುವು. ತಮ್ಮ ಮನದಳಲನ್ನು ಮ್ಯಾಕ್ಸ್ ಪ್ಲ್ಯಾಂಕರೊಡನೆ ತೋಡಿಕೊಳ್ಳೋಣ ಎಂದು ಬಗೆದು ೧೯೩೧ ಜುಲೈ ೧೭ರಂದು ಕರಡುಪತ್ರವನ್ನು ತಯಾರಿಸಿದರು, "ನನ್ನ ಹುದ್ದೆಯ ಷರತ್ತುಗಳಿಗೆ ನಿಕಟವಾಗಿ ಸಂಬಂಧಿತವಾಗಿರುವ ಒಂದು ವಿಷಯದತ್ತ ನಿಮ್ಮ ಗಮನ ಸೆಳೆಯುವುದು ಅನಿವಾರ್ಯವಾಗಿದೆ. ಯುದ್ಧಾನಂತರದಲ್ಲಿ ನಾನು ಸ್ವಿಸ್ ಪೌರತ್ವವನ್ನು ಉಳಿಸಿಕೊಂಡಿರುವುದರ ಜೊತೆಗೆ ಜರ್ಮನ್ ಪೌರತ್ವವನ್ನು ಕೂಡ ಪಡೆಯಲು ಒಪ್ಪಿದುದಾಗಿ ಘೋಷಿಸಿದ್ದು ಖಂಡಿತವಾಗಿಯೂ ನಿಮ್ಮ ನೆನಪಿನಲ್ಲಿರಬಹುದು. ಇಂಥ ನಿಲುಮೆಯನ್ನು ಕಾಪಾಡಿಕೊಳ್ಳುವುದು ಸಾಧ್ಯವಾಗದೆಂಬುದಾಗಿ ಈಚೆಗಿನ ದಿನಗಳ ಘಟನೆಗಳು ಸೂಚಿಸಿವೆ. ಆದ್ದರಿಂದ ನನ್ನ ಜರ್ಮನ್ ಪೌರತ್ವದ ರದ್ದಿಯಾತಿಯನ್ನು ನೀವು ಆಗಗೊಳಿಸಬೇಕು. ಮತ್ತು ಈ ಮಾರ್ಪಾಡಿನ ಪರಿಣಾಮವಾಗಿ ನಾನು ವಿಜ್ಞಾನ ಅಕ್ಯಾಡಮಿಯಲ್ಲಿ ನನ್ನ ಸ್ಥಾನವನ್ನು ಉಳಿಸಿಕೊಳ್ಳುವುದು ನಿಯಮಬದ್ಧವಾದೀತೇ (ಇದು ಸಾಧ್ಯವಾದೀತೆಂಬುದು ನನ್ನ ಪ್ರಾಮಾಣಿಕ ನಂಬಿಕೆ) ಎಂಬುದರ ಬಗ್ಗೆ ನನಗೆ ಸಲಹೆ ನೀಡಬೇಕು ಎಂಬುದಾಗಿ ಪ್ರಾರ್ಥಿಸುತ್ತೇನೆ. ಆರ್ಥಿಕವಾಗಿ ನನ್ನನ್ನು ಅವಲಂಬಿಸಿರುವ ಅನೇಕ ಮಂದಿಯ ಹಿತಚಿಂತನೆ ಹಾಗೂ ವೈಯಕ್ತಿಕ ಸ್ವಾತಂತ್ರ್ಯದ ಒಂದಿಷ್ಟು ಆವಶ್ಯಕತೆ ಇವು ನನ್ನನ್ನು ಈ ಹೆಜ್ಜೆ ಇಡುವಂತೆ ಒತ್ತಾಯಪಡಿಸಿವೆ. ನೀವು ನನ್ನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವಿರೆಂಬುದಾಗಿ ದೃಢನಂಬಿಕೆ ಹೊಂದಿದವನಾಗಿದ್ದೇನೆ. ನನ್ನ ಬದುಕಿನ ಪರಮೋಜ್ಜ್ವಲ ದಿನಗಳಂದು ಯಾರೂ ಕರುಬುವಂಥ ಜೀವನಸೌಕರ್ಯಗಳನ್ನೂ ಕಾರ್ಯಾನುಕೂಲತೆಗಳನ್ನೂ ಒದಗಿಸಿಕೊಟ್ಟ ದೇಶಕ್ಕೆ ಹಾಗೂ ಸಂಸ್ಥೆಗೆ ಪ್ರತಿಯಾಗಿ ನಾನು ಸಲ್ಲಿಸುವ ಕೃತಘ್ನಕೃತ್ಯ ಇದೆಂಬುದಾಗಿ ನೀವು ಪರಿಗಣಿಸಲಾರಿರಿ ಎಂದು ತುಂಬ ಕಳಕಳಿಯಿಂದ ಆಶಿಸುತ್ತೇನೆ. ನನ್ನ ಕಾರ್ಯರಂಗವನ್ನು ತೊರೆದು ಹೋಗಬೇಕಾಗಬಲ್ಲಂಥ ಎಲ್ಲ ವಿದೇಶೀ ಆಹ್ವಾನಗಳನ್ನೂ, ಅವೆಷ್ಟೇ ಆಕರ್ಷಕವಾಗಿದ್ದಾಗ್ಯೂ, ನಾನು ಈ ತನಕ ನಿರಾಕರಿಸಿಕೊಂಡೇ ಬಂದಿದ್ದೇನೆ. ಇದೇ ನಿಲುಮೆಯನ್ನು ಮುಂಬರುವ ದಿನಗಳಲ್ಲಿ ಕೂಡ ಕಾಪಾಡಿಕೊಂಡು ಹೋಗುವುದು ಸಾಧ್ಯವಾದೀತೆಂದು ನಂಬಿದ್ದೇನೆ."

ಆದರೆ ಕರಡುಪ್ರತಿ ಶುದ್ಧಪ್ರತಿಯಾಗಿ ನಕಲಾಗಲಿಲ್ಲ. ಅಂಚೆಪೆಟ್ಟಿಗೆಗೆ ಬೀಳಲಿಲ್ಲ, ಪ್ಲಾಂಕರ ಕೈಸೇರಲಿಲ್ಲ. ಏಕೆ ? ಆ ಮಹಾಶಯರ ಬಗ್ಗೆ ಐನ್‌ಸ್ಟೈರಿಗೆ ಅಪಾರ ಗೌರವ ಭಕ್ತಿ ಇದ್ದುವು. ಇವು ಯಾವ ಮಟ್ಟದವು ಎಂಬುದರ ಅರಿವಾಗಲು ಐನ್‌ಸ್ಟೈನ್ ಅಮೆರಿಕದ ರಾಷ್ಟ್ರೀಯ ವಿಜ್ಞಾನ ಅಕ್ಯಾಡಮಿಯ ಆಶ್ರಯದಲ್ಲಿ, ೧೯೪೮ರಲ್ಲಿ, ಮ್ಯಾಕ್ಸ್ ಪ್ಲ್ಯಾಂಕರ ಪುಣ್ಯಸ್ಮರಣೆಗೆ (ಮರಣ ೧೯೪೭) ಅರ್ಪಿಸಿದ ನುಡಿಕಾಣ್ಕೆ ಸಾಕ್ಷಿ : "ಉನ್ನತ ಸೃಜನಶೀಲ ಭಾವನೆಯಿಂದ ಪ್ರಪಂಚವನ್ನು ಅನುಗ್ರಹಿಸುವ ಯೋಗ ಒದಗಿದಂಥ ಮಹಾನುಭಾವನಿಗೆ ಭವಿಷ್ಯ ಪೀಳಿಗೆಯ ಪ್ರಶಂಸೆ ಅನಗತ್ಯ. ಅವನ ಪ್ರತ್ಯಕ್ಷಸಿದ್ಧಿಯೇ ಅಧಿಕತರ ವರವನ್ನು ಪ್ರದಾನಿಸಿರುತ್ತದೆ. ಹೀಗಿದ್ದರೂ ಸತ್ಯ ಮತ್ತು ಜ್ಞಾನಕ್ಕಾಗಿ ಹೆಣಗುವವರ ಸಕಲ ಪ್ರತಿನಿಧಿಗಳೂ ಇಂದು ಇಲ್ಲಿ ಭೂಮಂಡಲದ ನಾಲ್ಕು ಮೂಲೆಗಳಿಂದಲೂ ಬಂದು ನೆರೆದಿರುವರೆಂಬುದು ತುಂಬ ಒಳ್ಳೆಯ ಸಂಗತಿ. ನಿಜಕ್ಕೂ ಇದು ಹೀಗೆಯೇ ಆಗಬೇಕಾದದ್ದು. ಚಿಂತಾಕ್ರಾಂತ ಮತ್ತು ಭಯಪೀಡಿತ ಜನರ ತಲೆಗಳ ಮೇಲೆ ರಾಜಕೀಯ ಈರ್ಷ್ಯೆ ಮತ್ತು ಪಾಶವೀಬಲ ಕರವಾಲದಂತೆ ನೇಲುತ್ತಿರುವ ಈ ದಿನಗಳಲ್ಲಿಯೂ ಸತ್ಯದ ಆದರ್ಶಶೋಧನೆಯ ಮಟ್ಟವನ್ನು ಉನ್ನತವಾಗಿ ಒಂದಿಷ್ಟೂ ಮಸಕಾಗದಂತೆ ಎತ್ತಿಹಿಡಿಯಲಾಗಿದೆ ಎಂಬುದಕ್ಕೆ ಸಾಕ್ಷಿಯಾಗಿ ಅವರಿಲ್ಲಿದ್ದಾರೆ. ಎಲ್ಲ ನೆಲೆಗಳಲ್ಲಿಯೂ ಎಲ್ಲ ಕಾಲಗಳ ವಿಜ್ಞಾನಿಗಳನ್ನು ಸದಾ ಒಂದುಗೂಡಿಸುವ ಈ ಆದರ್ಶ ಮ್ಯಾಕ್ಸ್ ಪ್ಲ್ಯಾಂಕರಲ್ಲಿ ಅಪೂರ್ವ ಪರಿಪೂರ್ಣತೆಯಿಂದ ಮೂರ್ತೀಭವಿಸಿತ್ತು."

ಮಹಾನುಭಾವ ಪ್ಲ್ಯಾಂಕರಿಗೆ ಮುಜಗರ ಉಂಟುಮಾಡಬಲ್ಲ ಯಾವ ಹೆಜ್ಜೆಯನ್ನಿಡಲೂ ಐನ್‌ಸ್ಟೈನ್ ತಯಾರಿರಲಿಲ್ಲ. ಹೀಗಾಗಿ ಪ್ರಾಯಶಃ ಇವರು ಪ್ಲ್ಯಾಂಕರನ್ನು ಖುದ್ದು ಭೇಟಿಮಾಡಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿರಬೇಕು. ಪ್ಲ್ಯಾಂಕರ ಶುದ್ಧ ವೈಜ್ಞಾನಿಕ ದೃಷ್ಟಿಯಲ್ಲಿ ಆದರ್ಶ ಜರ್ಮನ್ ಪ್ರಜೆಯೊಬ್ಬ ವಿಜ್ಞಾನಕ್ಕೆ, ಜರ್ಮನ್ ರಾಷ್ಟ್ರೀಯ ಪ್ರಜ್ಞೆಗೆ ಮತ್ತು ಪರಂಪರೆಗೆ ನಿಷ್ಠಾವಂತನಾಗಿರುವುದು ಆದ್ಯ ಕರ್ತವ್ಯವಾಗಿತ್ತು. ಸದ್ಯ ಎದ್ದುಕಾಣುತ್ತಿದ್ದ ಅಶಾಂತಿ ಕೋಲಾಹಲಗಳು ವಿಕೃತ ಮನಸ್ಸಿನ ವಿಕಾರ ವರ್ತನೆಗಳು—ಆದರೆ ಇವು ಕೇವಲ ತಾತ್ಕಾಲಿಕ, ಇವುಗಳಿಂದ ಐನ್‌ಸ್ಟೈನ್ ವಿಚಲಿತರಾಗಬಾರದು. ಈ ತೆರನಾಗಿ ಪ್ಲ್ಯಾಂಕ್, ಐನ್‌ಸ್ಟೈನರಿಗೆ ಸಾಂತ್ವನತನಿರಸ ವೆರೆದು ಸಮಾಧಾನಪಡಿಸಿರಬೇಕು.

ಆದರೆ ಐನ್‌ಸ್ಟೈನ್ ಪೂರ್ಣ ಸ್ವಾಸ್ಥ್ಯಗಳಿಸಲಿಲ್ಲ. ವಿದೇಶೀ ಆಹ್ವಾನಗಳನ್ನು ಪ್ರಚಲಿತ ಚೌಕಟ್ಟಿನ ವಿಧಿನಿಯಮಗಳ ಒಳಗೆ ಅಂಗೀಕರಿಸಿ ಯೂರೋಪಿನ ಇತರ ದೇಶಗಳ ಹಾಗೂ ಇಂಗ್ಲೆಂಡ್ ಅಮೆರಿಕಗಳ ವಿವಿಧ ವಿಶ್ವವಿದ್ಯಾಲಯಗಳಿಗೆ ಸಂದರ್ಶಕ-ಪ್ರಾಧ್ಯಾಪಕರಾಗಿ ಹೋಗಿ ಬರುತ್ತಿದ್ದರು.

೧೯೩೨ ಶರತ್ಕಾಲ (ಸೆಪ್ಟೆಂಬರ್, ಅಕ್ಟೋಬರ್). ಐನ್‌ಸ್ಟೈನ್ ದಂಪತಿಗಳು ಕ್ಯಾಲಿಫೋರ್ನಿಯಾಕ್ಕೆ ಭೇಟಿ ನೀಡಲು ಹೊರಟು ತಯಾರಾಗಿದ್ದಾರೆ. ಆಶ್ರಮದ ಉತ್ತೇಜಕ ಪರಿಸರದಿಂದ ಇವರು ಉಲ್ಲಸಿತರಾಗಿದ್ದಾರೆ. ವಿದೇಶಯಾನ, ವಿವಿಧ ಜನ ಸಂಪರ್ಕ, ಯೆಹೂದ್ಯ ಸಮಸ್ಯೆ, ಧೀಮಂತರೊಡನೆ ವಿಜ್ಞಾನ ವಿಷಯಗಳನ್ನು ಕುರಿತ ವಿಚಾರವಿನಿಮಯ, ಪ್ರಪಂಚದ ಭವಿಷ್ಯ ಎಲ್ಲವೂ ಐನ್‌ಸ್ಟೈನರ ದೃಕ್ಪಟಲದಲ್ಲಿ ಮಿಂಚುತ್ತಿವೆ. ಮುಂದೊಂದು ದಿನ ಹಿಂದೆ ಬಂದು ಮತ್ತೆ ಈ ತಣ್ಪಿನ ಮಡಿಲಲ್ಲಿ ನಿಸರ್ಗದ ತೊಟ್ಟಿಲಲ್ಲಿ ಆಸರೆ ಪಡೆದು ಪವಡಿಸುವ ದೃಶ್ಯವನ್ನು ಎಲ್ಸಾ ಸವಿಯುತ್ತಿದ್ದಾರೆ.

ಇದ್ದಕ್ಕಿದ್ದಂತೆ ಐನ್‌ಸ್ಟೈನ್ ಉದ್ಗರಿಸುತ್ತಾರೆ. "ಎಲ್ಸಾ ! ಈ ಸಲ ಈ ಆಶ್ರಮವನ್ನು ತೊರೆ

ಯುವ ಮುನ್ನ ಚೆನ್ನಾಗಿ ಇನ್ನೊಮ್ಮೆ ನೋಡಿಕೊ.''

"ಅದೇಕೆ ?''

"ಇನ್ನೊಮ್ಮೆ ನೀನಿದನ್ನು ಎಂದೂ ನೋಡಲಾರೆ.''

ಇವರೇನೋ 'ಮರುಳು' ಎಂಬುದಾಗಿ ಆಕೆ ಯೋಚಿಸಿರಲೂಬಹುದು.

# ೧೨. ಜರ್ಮನಿಯಿಂದ ನಿರ್ಗಮನ

## ಜರ್ಮನಿಗೆ ಬಡಿದ ಝಂಝಾವಾತ

ಮಾರಿಗೌತಣವಾಯ್ತು ನಾಳಿನ
ಭಾರತವು

ಕುಮಾರವ್ಯಾಸ

೧೯೩೨ರಲ್ಲಿ ಜರ್ಮನ್ ಗಣರಾಜ್ಯದ ಅಧ್ಯಕ್ಷ ಚುನಾವಣೆ ನಡೆಯಲಿತ್ತು. ಕಳದಲಿದ್ದ ಹುರಿಯಾಳುಗಳಿಬ್ಬರು : ಫಾನ್ ಹಿಂಡನ್‌ಬರ್ಗ್ (೧೮೪೭-೧೯೩೪ ; ೧೯೨೫ರಿಂದ ಅಧ್ಯಕ್ಷ : ಫೀಲ್ಡ್ ಮಾರ್ಷಲ್ ದರ್ಜೆಯವ) ಮತ್ತು ಅಡಾಲ್ಫ್ ಹಿಟ್ಲರ್. ಪ್ರಜಾಪ್ರಭುತ್ವವಾದಿಗಳ ಮತ್ತು ಸಮಾಜವಾದಿಗಳ ಅಭ್ಯರ್ಥಿಯಾದ ಎಂಬತ್ತೈದರ ವೃದ್ಧ ಹಿಂಡನ್‌ಬರ್ಗ್ ತೀವ್ರಗಾಮಿ ಬಲ-ಕ್ರಾಂತಿಕಾರರ ಧುರೀಣನಾದ ನಲವತ್ತಮೂರರ ತರುಣ ಹಿಟ್ಲರನನ್ನು ಎದುರಿಸಬೇಕಾಗಿತ್ತು. ಚುನಾವಣೆ ಹಿಟ್ಲರನಿಗೆ ಚಿತಾವಣೆಯಾಯಿತು. ಛಾನ್ಸಲರ್ ಬ್ರೂನಿಂಗ್‌ನ ಪರಿಣಾಮಕಾರಿಯಾದ ಪ್ರಚಾರ ವೈಖರಿಯಿಂದ ಹಿಂಡನ್‌ಬರ್ಗ್ ಗೆದ್ದ. ಆದರೆ ಅಧಿಕಾರಸೂತ್ರ ಮಾತ್ರ ಇವನ ಕೈಗೆ ಸಿಕ್ಕಲಿಲ್ಲ. ಜರ್ಮನ್ ಚಕ್ರವರ್ತಿತ್ವಾನುಯಾಯಿಗಳು ಅದನ್ನು ಹಿಡಿದಿದ್ದರು. ಇವರ ನೇಪಥ್ಯ ನಿರ್ದೇಶನಾನುಸಾರ ನರ್ತಿಸಬೇಕಾಗಿದ್ದ ಅಧ್ಯಕ್ಷ ಹಿಂಡನ್‌ಬರ್ಗ್ ಸ್ವಸ್ಥಾನ ಭದ್ರತೆಗೋಸ್ಕರ ಸ್ವತಃ ತನ್ನ ಬೆಂಬಲಿಗ ಹಾಗೂ ಛಾನ್ಸಲರ್ ಬ್ರೂನಿಂಗನನ್ನೇ ಕೈಬಿಡಲು ನಿರ್ಧರಿಸಿದ. ಈತನಿಂದ ಕಡ್ಡಾಯ ರಾಜಿನಾಮೆಯನ್ನು ಪಡೆದು ತೆರವಾದ ಸ್ಥಾನಕ್ಕೆ ಪ್ಯಾಪೆನ್ ಎಂಬಾತನನ್ನು ನೇಮಿಸಿದ.

ಪ್ಯಾಪೆನ್ ಸೇನಾವಿಧಾನಗಳ ಮೇಲೆ ಅಪಾರ ವಿಶ್ವಾಸವಿದ್ದವ. ಈ ವಿಧಾನಗಳ ಸಾರವಿಷ್ಟು : ಒಂದು ಹುಕುಂ = ಒಂದು ಕ್ರಿಯೆ ; ಹುಕುಂ ನ್ಯಾಯವಾದದ್ದೇ ? ಅದನ್ನು ಚಾಲೂ ಮಾಡಲು ಅನುಸರಿಸುವ ಹಾದಿ ಕಾನೂನುಬದ್ಧವಾದದ್ದೇ ? ಮುಂತಾದ 'ಅಸಂಗತ, ಅಪರಗಾಮಿ' ಪ್ರಶ್ನಾವಳಿಗೆ ಇಲ್ಲಿ ಅವಕಾಶವಿಲ್ಲ ; ಹಾದಿ ಯಾವುದಾದರೂ ಅಡ್ಡಿ ಇಲ್ಲ, ಗುರಿ ತಲಪಿದರೆ ಸರಿ. ಹೆಚ್ಚಿನ ಬುದ್ಧಿಜೀವಿಗಳನ್ನೂ ಒಳಗೊಂಡಂತೆ ಬಹುಮಂದಿ ಪ್ಯಾಪೆನ್ನನ ಪೌಜಾಡಳಿತೆಯನ್ನು ಹಾರ್ದಿಕವಾಗಿ ಸ್ವಾಗತಿಸಿದರು. ಏಕೆಂದರೆ ಆ ಮೊದಲು ಆಡಳಿತವು, ನಾಗರಿಕ ಮಂದಿ ಎಂಬ ಹೆಸರಿನ ಕೆಲಸಗಳ್ಳರ ಮತ್ತೆ ಕಿಸೆಗಳ್ಳರ ಕೈಯಲ್ಲಿತ್ತು. ಅತಿಮಂದಗಾಮಿತ್ವ, ಬಹುತೇಕ ಶೂನ್ಯಗಾಮಿತ್ವ ಅದರ ಲಕ್ಷಣ. ಏನು ಮಾಡಬೇಕು ಏನು ಮಾಡಬಾರದು ಎಂಬ ಕೊನೆಯಿರದ ವಾದ ವಿವಾದ ಅನಿರ್ಧಾರ ಅಕ್ರಿಯೆಗಳಲ್ಲಿ ಆಡಳಿತ ಗಾಲಿಗಳು ಹೂತುಹೋಗಿದ್ದುವು. ಲಷ್ಕರಿವಿಧಾನಗಳ ಅನ್ವಯದಿಂದ ಬಂಡಿ ಒಡನೆ ಸರಿಯಲು ತೊಡಗಿತು. ಈ ಪವಾಡ ಕಂಡ ಜನ ಸಹಜವಾಗಿ ಸಂತುಷ್ಟರಾದರು.

ಹೀಗೆ ಆಗ (೧೯೩೨) ಜರ್ಮನಿಯಲ್ಲಿ ಎರಡು ಎದುರಾಳಿ ಬಲಗಳು ಕಾಳಗ ಮರ್ಜಿಯಲ್ಲಿ

ಇದ್ದುವು: ಬಲಪ್ರಯೋಗ-ಕ್ಷಿಪ್ರಕಾರ್ಯನಿರ್ವಹಣೆ ನೀತಿ ಅನುಸರಿಸುತ್ತಿದ್ದ ಹಿಂಡನ್‌ಬರ್ಗ್-ಪ್ಯಾಪೆನ್ ಸರ್ಕಾರ ಒಂದು ಕಡೆ. ಕ್ರಾಂತಿನೀತಿಯಲ್ಲಿ ಅಚಲ ಶ್ರದ್ಧೆಯಿದ್ದ ಮತ್ತು ಗಾಯಗೊಂಡಿದ್ದ ಹೆಬ್ಬುಲಿ ಹಿಟ್ಲರ್, ಮತ್ತು ಅವನ ನಾಟ್ಸೀ ಅನುಯಾಯಿಗಳು ಎದುರು ಕಡೆ.

ಐನ್‌ಸ್ಟೈನ್ ಆಶ್ರಮದಲ್ಲಿ ಅದೇ ಸುಮಾರಿಗೆ ನಡೆದ ಒಂದು ಸಂಭಾಷಣೆಯನ್ನು ಫ್ರ್ಯಾಂಕ್ ವರದಿ ಮಾಡಿದ್ದಾರೆ :

"ಏರುತ್ತಿರುವ ನಾಟ್ಸೀ ಪಿಡುಗನ್ನು ಬಹುಶಃ ಈಗಿರುವ ಸೇನಾಪ್ರಭುತ್ವ ತಡೆಹಿಡಿದಿಡಬಲ್ಲದು. ಏನನ್ನುತ್ತೀರಿ ಪ್ರೊಫೆಸರ್ ಐನ್‌ಸ್ಟೈನ್ ?"

"ಸದ್ಯವೇ ಖಾತ್ರಿ ಸಂಭವಿಸಲಿರುವ ರಾಷ್ಟ್ರೀಯ ಸಮಾಜವಾದಿ ಕ್ರಾಂತಿಯನ್ನು ಸೇನಾಪ್ರಭುತ್ವ ಪ್ರತಿಬಂಧಿಸಲಾರದೆಂದು ನಾನು ದೃಢವಾಗಿ ನಂಬಿದ್ದೇನೆ. ಸೇನಾಸರ್ವಾಧಿಕಾರ ಜನಾಭಿಪ್ರಾಯವನ್ನು ಹತ್ತಿಕ್ಕಲಿದೆ. ಆಗ ಜನರು ಜಂಕರುಗಳ [ಜರ್ಮನಿಯಲ್ಲಿಯ ಶ್ರೀಮಂತ ಜಮೀನುದಾರರು] ಹಾಗೂ ಸೇನಾಧಿಕಾರಿಗಳ ಈಗಿನ ಆಡಳಿತೆಯ ವಿರುದ್ಧ ರಕ್ಷಣೆಯನ್ನು ತೀವ್ರಗಾಮಿ ಬಲಕ್ರಾಂತಿಯಲ್ಲಿ ಬೇಡಲಿರುವರು."

ಇದರ ಮೊದಲೊಮ್ಮೆ, ೧೯೩೦ರಲ್ಲಿ, ಐನ್‌ಸ್ಟೈನ್ ಅಮೆರಿಕದ ವಿಶ್ವವಿದ್ಯಾಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಹೋಗಿದ್ದಾಗ ಪತ್ರಿಕಾ ಪ್ರತಿನಿಧಿಯೊಬ್ಬ ಎದುರು ಬಂದು ಒಂದು ಪ್ರಶ್ನೆ ಎಸೆದ, "ಮಾನ್ಯ ಐನ್‌ಸ್ಟೈನ್ ಅವರೇ ! ಹಿಟ್ಲರ್ ಬಗ್ಗೆ ತಮ್ಮ ಅಭಿಪ್ರಾಯವೇನು ?"

"ನಾನು ಶ್ರೀಮಾನ್ ಹಿಟ್ಲರರ ಪರಿಚಯಲಾಭ ಪಡೆದವನಲ್ಲ. ಅವರು ಜರ್ಮನಿಯ ಖಾಲಿ ಹೊಟ್ಟೆ ಮೇಲೆ ಜೀವಿಸುತ್ತಿದ್ದಾರೆ. ಜರ್ಮನಿಯಲ್ಲಿಯ ಆರ್ಥಿಕ ಪರಿಸ್ಥಿತಿ ಸುಧಾರಿಸಿದಂತೆ ಅವರ ಪ್ರಾಮುಖ್ಯ ಇಳಿಮೊಗವಾಗುತ್ತದೆ."

"ಜರ್ಮನ್ ಚುನಾವಣೆಯಲ್ಲಿ ಹಿಟ್ಲರ್ ಆಯ್ಕೆಗೊಳ್ಳಬಹುದೇ ?"

"ನನಗೆ ತಿಳಿಯದು. ಆದರೆ ಸೋಲು ಅವರ ನಶೀಬನ್ನು ಕುದುರಿಸೀತೆಂದು ಭಾವಿಸಿದ್ದೇನೆ."

"ಏಕೀಕೃತ ಸಿದ್ಧಾಂತದ ಅಧಿಕ ಅಭಿವರ್ಧನೆ ನಿಮ್ಮ ಉಳಿಕೆ ಆಯುಷ್ಯದ ಹೆಚ್ಚಿನ ಭಾಗವನ್ನು ತೆಗೆದುಕೊಂಡೀತೆಂದು ಭಾವಿಸಿರುವಿರಾ ?"

"ನನ್ನ ಶೇಷಾಯುಷ್ಯವನ್ನು ನಾನು ಅವರ ಮೇಲೆಯೇ ವಿನಿಯೋಗಿಸಬೇಕಾದೀತು."

"ಪತ್ರಿಕಾವರದಿಗಾರರೊಡನೆ ಗೋಷ್ಠಾರೆಯಾಗಿ ಹರಟೆ ಹೊಡೆಯುವುದು ನಿಮಗೆ ಸುಲಭವಾಗುತ್ತಿಲ್ಲವೇ?"

"ಯಾವನೂ ಗಲ್ಲಿಗೇರುವುದಕ್ಕೆ ಹೊಂದಿಕೊಳ್ಳಬಲ್ಲನೆಂಬ ಅರ್ಥದ ಜರ್ಮನ್ ಗಾದೆಯೊಂದುಂಟು."

ವರದಿಗಾರರು ನಕ್ಕರು.

ಶಿಲಾಪ್ರತಿಮೆಯ ಶಿರದ ಮೇಲೆ ಪಾತವಾದ ಹಿಮವು ಪಾದಗಳಿಗೆ ಜಗುಳಿ ಬರುವುದು ಖರೆ; ಹುಲ್ಲುಮುಂಡದ ತಳಕ್ಕಿಟ್ಟ ಕಿಚ್ಚು ಮೇಲಕ್ಕೆ ನೆಗೆದು ಎಲ್ಲವನ್ನೂ ಸೆಕ್ಕಿ ನಾಶಗೊಳಿಸುವುದು ಖಾತ್ರಿ; ಉಂಗುಷ್ಠವನ್ನು ಹಾವು ಕಡಿದರೆ ವಿಷ ಒಡನೆ ದೇಹವ್ಯಾಪಿಯಾಗಿ ಸಮಸ್ತ ಕ್ರಿಯೆಗಳನ್ನೂ ಸ್ಥಗಿತಗೊಳಿಸುವುದು ಖಂಡಿತ. ನಾಟ್ಸೀಹಿಮ, ನಾಟ್ಸೀಕಿಚ್ಚು, ನಾಟ್ಸೀವಿಷ ಈ ತೆರನಾಗಿ ಜರ್ಮನಿಯನ್ನು ಸ್ವಾಹಾಕರಿಸಿದುವು.

ಮುಂದಿನ ನಡೆ ಕೇವಲ ಯಾಂತ್ರಿಕ :

ಸೇನಾವಲಂಬಿ ಪ್ಯಾಪೆನ್ ಸರ್ಕಾರ ಪತನವಾಯಿತು.

'ಕಾರ್ಮಿಕ ಜನರಲ್' ಎಂಬುದಾಗಿ ಜನಪ್ರಿಯನಾಗಿದ್ದ ಸಮಾಜಪ್ರಜ್ಞೆಯ ಕುರ್ಟ್ ಫಾನ್ ಸ್ಕ್ಲೀಶರ್ ಎಂಬಾತ ಛಾನ್ಸಲರ್ ಆಗಿ ಸರ್ಕಾರ ರಚಿಸಿದ (ಡಿಸೆಂಬರ್ ೧೯೩೨). ಇವನಿಗೂ ಅಧ್ಯಕ್ಷ ಹಿಂಡನ್‌ಬರ್ಗನಿಗೂ ಮನ ಮತ್ತು ಮನೆ ಕೂಡಿ ಬರಲಿಲ್ಲ. ತುಂಬ ಅಳ್ಳಕವಾಗಿದ್ದ ಈ ಸರ್ಕಾರವೂ ಪತನವಾಯಿತು (ಜನವರಿ ೧೯೩೩).

ನೇಪಥ್ಯನಿರ್ದೇಶನದ (backseat driving) ಪ್ರಭಾವಕ್ಕೆ ಮುದುಕ ಹಿಂಡನ್‌ಬರ್ಗ್ ಬಲಿಯಾಗುವುದು ಅನಿವಾರ್ಯವಾಯಿತು. ಜರ್ಮನಿಯ ಮಾರಣ ಹೋಮದ ಅಂತಿಮ ಘಟ್ಟಕ್ಕೆ ಮುಹೂರ್ತ ಕೂಡಿ ಬಂದಿತು. ಜರ್ಮನ್ ಗಣರಾಜ್ಯದ ಅಧ್ಯಕ್ಷ ಫೀಲ್ಡ್ ಮಾರ್ಷಲ್ ಪಾಲ್ ಫಾನ್ ಹಿಂಡನ್‌ಬರ್ಗ್, ಆ ಮುನ್ನ ಚುನಾವಣಾ ಕಣದಲ್ಲಿ ತನ್ನ ಎದುರಾಳಿಯಾಗಿದ್ದು ಸೋತಿದ್ದ, ಫ್ಯೂರರ್ (ನಾಟ್ಸೀನಾಯಕ) ಅಡಾಲ್ಫ್ ಹಿಟ್ಲರನನ್ನು ಛಾನ್ಸಲರ್ ಪದವಿಗೆ 'ಆಹ್ವಾನಿಸಿ' ಸ್ಥಿರ ಸರ್ಕಾರ ರಚಿಸುವಂತೆ 'ಪ್ರಾರ್ಥಿಸಿದ' (೩೦-೧-೧೯೩೩). (ಗಾಂಧೀಜಿ ಹಂತಕನ ಗುಂಡೇಟಿಗೆ ಬಲಿ ಆದದ್ದು ೩೦-೧-೧೯೪೮).

ಅಲ್ಲಿಗೆ ಜರ್ಮನಿಯ ವಿಷಚಷಕ ಭರ್ತಿ ಆದಂತಾಯಿತು ; ಪೂರ್ಣಾಹುತಿಗೆ ಮೊದಲ ಬಟ್ಟಲು ತುಪ್ಪ ಎರೆದಂತಾಯಿತು; ಮಹಾಬಾಜಣೆಗೆ[೪೭] (Big Bang) ವೇದಿಕೆಯನ್ನು ಸನ್ನದ್ಧಗೊಳಿಸಿದಂತಾಯಿತು.

## ಯೆಹೂದ್ಯ ಬೇಟೆ

> ಹರಡಿ ಹಂಚಿ ಹೋಗಿರುವ ನಮ್ಮ ಯೆಹೂದ್ಯ ಮಂದಿಯ ಸ್ಥಾನಮಾನ ನಿಜಕ್ಕೂ ರಾಜಕೀಯ ಪ್ರಪಂಚದ 'ವಾಯುಭಾರಮಾಪಕ.' ಏಕೆಂದರೆ ಪ್ರಾಚೀನ ಸಾಂಸ್ಕೃತಿಕ ಸಂಪ್ರದಾಯವನ್ನು ಕಾಪಾಡಿಕೊಂಡು ಬರುವುದೇ ತಮ್ಮ ವೈಶಿಷ್ಟ್ಯವಾಗಿರುವ ಈ ಅಲ್ಪಸಂಖ್ಯಾತರ ಬಗೆಗೆ ರಾಷ್ಟ್ರಗಳ ನಿಲವು ಏನೆಂಬುದಕ್ಕಿಂತ ಹೆಚ್ಚು ಖಾತರಿಯಾಗಿ ರಾಜಕೀಯ ನೈತಿಕತೆ ಮತ್ತು ನ್ಯಾಯಪಕ್ಷಪಾತ ಇವುಗಳತ್ತ ಗುರಿಮಾಡುವ ಸೂಚಕ ಬೇರೆ ಯಾವುದು ತಾನೇ ಇದ್ದೀತು ?
>
> ಐನ್‌ಸ್ಟೈನ್

ವಿಶ್ವವಿದ್ಯಾಲಯಗಳು ಯಾವುದೇ ವಿಧವಾದ ರಾಜಕೀಯ ಆಸಕ್ತಿಗಳನ್ನು ಬೆಳೆಸಿಕೊಳ್ಳತಕ್ಕದ್ದಲ್ಲ, ಬೌದ್ಧಿಕ ಪ್ರಪಂಚದ ಸತ್ಯಾನ್ವೇಷಣೆಯ ಚಟುವಟಿಕೆಗಳಲ್ಲಿ ಲೌಕಿಕ ಪ್ರಪಂಚದ ವರ್ಗ ಕಲಹಗಳಿಗೆ ಪ್ರವೇಶವಿರತಕ್ಕದ್ದಲ್ಲ, ದೇಶವನ್ನು ಆಳುವ ಸರ್ಕಾರದಲ್ಲಿ ಮೂರ್ತೀಭವಿಸಿರುವ ದೇಶಪ್ರಜ್ಞೆಗೆ ನಿಷ್ಠಾವಂತವಾಗಿರುವುದೇ ಅವುಗಳ ಕರ್ತವ್ಯ ಮುಂತಾದ ಭವ್ಯ ಆದರ್ಶಗಳಿಂದ ಪ್ರಭಾವಿತವಾಗಿ ಆದಷ್ಟುಮಟ್ಟಿಗೆ ಇವನ್ನು ಆಚರಣೆಗೆ ತರಲು ಪ್ರಯತ್ನಿಸುತ್ತಿದ್ದ ವಿಶ್ವವಿದ್ಯಾಲಯಗಳು ಇನ್ನು ಮುಂದೆ ಜಲಬಂಧ ದಂತಗೋಪುರಗಳಾಗಿ ಉಳಿದಿರುವುದು ಅಸಾಧ್ಯವಾಯಿತು. ಅಂದರೆ ಅಶೈಕ್ಷಣಿಕ ಬಲಗಳಿಂದ ತಾಡಿತವಾಗದೆ, ಕೇವಲ ಶೈಕ್ಷಣಿಕ ವ್ಯವಹಾರಗಳಲ್ಲಿ ಮಾತ್ರ ನಿರತವಾಗಿರಬಹುದಾದ ಹವೆ ಇನ್ನು ಬರದು ಎಂಬ ಹೊಸ ಪರಿಸ್ಥಿತಿ ತಲೆಹಾಕಿತು.

ಆಳುವ ಸರ್ಕಾರದ ಹೊಸ ನೀತಿ ಏನು ? ಫಿಲಿಪ್ ಫ್ರ್ಯಾಂಕ್ ಬರೆಯುತ್ತಾರೆ, "ಜರ್ಮನಿಯ ಪ್ರಚಲಿತ ತಾತ್ತ್ವಿಕ ಧೋರಣೆಯ ಅನುಸಾರ ಯಾರನ್ನು ಜನಾಂಗಮೂಲಾಧಾರದ ಮೇಲೆ ತರುಣರಿಗೆ ಶಿಕ್ಷಣವೀಯಲು ಅಸಮರ್ಥರೆಂದು ಪರಿಗಣಿಸಲಾಗುವುದೊ ಅವರನ್ನು ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಂದಲೂ ಉಚ್ಚಾಟನೆಗೊಳಿಸಬೇಕು ಎಂದಿತ್ತು. ನವಸಿದ್ಧಾಂತಗಳ ಪ್ರಥಮ ಅನ್ವಯವಿದು. ಜರ್ಮ್ಯಾನಿಕ್ ಅಥವಾ ನಾರ್ಡಿಕ್ ಅಥವಾ (ಹೆಚ್ಚಿನ ಸಂದರ್ಭಗಳಲ್ಲಿ ಹೇಳಲಾಗು

ತ್ರಿದ್ದಂತೆ) ಆರ್ಯಜನಾಂಗದವರಲ್ಲದ ಎಲ್ಲರೂ ಈ ಗುಂಪಿಗೆ ಸೇರಿದ್ದರು. ಯೆಹೂದ್ಯರನ್ನು ಪ್ರತ್ಯೇಕಿಸಬೇಕೆಂಬ ನಿರ್ದಿಷ್ಟ ಉದ್ದೇಶದಿಂದ ಜರ್ಮನೀತರರನ್ನು ಅಥವಾ ಆರ್ಯೇತರರನ್ನು ಈ ತೆರನಾಗಿ ಗುಂಪುಗೂಡಿಸಿದುದಾಗಿತ್ತು. ಸ್ವಂತ ಇತಿಹಾಸ ಹಾಗೂ ಶಿಕ್ಷಣಗಳಿಂದಾಗಿ ಇವರೆಲ್ಲರೂ ಒಂದು ಗುಂಪಿನವರಾಗಿದ್ದರೆಂದೂ ಈ ಗುಂಪು ಹೊಸನಾಯಕರ ತಾತ್ತ್ವಿಕ ಧೋರಣೆಯನ್ನು ಪರಿಗ್ರಹಿಸಲಾರದೆಂದೂ ಹೀಗಾಗಿ ಶಿಕ್ಷಣರಂಗದಲ್ಲಿ ಇದು ಪ್ರಬಲ ಆತಂಕಕಾರಿ ಆಗಲಿದೆಯೆಂದೂ ಭಾವಿಸಲಾಗಿತ್ತು. 'ಯೆಹೂದ್ಯ' ಎನ್ನುವ ಪದ ಕೇವಲ ಯೆಹೂದ್ಯ ಮತಾವಲಂಬಿಗಳನ್ನು ಮಾತ್ರ ಒಳಗೊಂಡುದಾಗಿರಲಿಲ್ಲ. ಏಕೆಂದರೆ ಮತದ ಬಗ್ಗೆ ಹೊಸ ಸರ್ಕಾರದ ಧೋರಣೆ ಅತಿ ತಟಸ್ಥವಾಗಿತ್ತು. ಎಂದೇ ರಾಷ್ಟ್ರೀಯ ಸಮಾಜವಾದಿಗಳ ದೃಷ್ಟಿಯಲ್ಲಿ 'ಯೆಹೂದ್ಯ' ಎಂದರೆ ಯೆಹೂದ್ಯ ಮತಾನುಯಾಯಿಯೇ ಆಗಬೇಕಾಗಿರಲಿಲ್ಲ. ಯೆಹೂದ್ಯ ಜನಾಂಗದ ಸದಸ್ಯ ಎಂದಿತ್ತು. (ಮತದ ಮೇಲಿನ ಒತ್ತನ್ನು ಹೀಗೆ ಬಲು ನವುರಾಗಿ ನಿವಾರಿಸಲಾಗಿತ್ತು.) ಆದರೆ ಯೆಹೂದ್ಯ ಜನಾಂಗದ ಸದಸ್ಯತ್ವವನ್ನು ನಿರ್ಧರಿಸುವ ಮಾನಕ ಯಾವುದು ? ಇಂಥ ಮಾನಕವನ್ನು ವೈಜ್ಞಾನಿಕವಾಗಿ ವ್ಯಾಖ್ಯಿಸುವುದು ಕಷ್ಟವಾದ್ದರಿಂದ ಇದು ಸ್ವೇಚ್ಛೆಯಂತೆ ಇರಬೇಕಾಗುತ್ತದೆ. ಇದೆಂದೂ ಕೈಗೂಡದು. ಆದ್ದರಿಂದ ವಿಶ್ವವಿದ್ಯಾಲಯಗಳನ್ನು 'ಜನಾಂಗೀಯ ಶುದ್ಧೀಕರಣ'ಕ್ಕೆ ಒಳಪಡಿಸುವುದು ಎಂದೂ ಸಂಭವಿಸದೆಂಬುದಾಗಿ ಕರ್ತವ್ಯದಕ್ಷ ಮತ್ತು ನೀತಿನಿಷ್ಠ ಜರ್ಮನ್ ಪ್ರಾಧ್ಯಾಪಕರು (ಉದಾಹರಣೆಗೆ ಮ್ಯಾಕ್ಸ್ ಪ್ಲ್ಯಾಂಕರಂಥ ವರಿಷ್ಠರು) ಪ್ರಾಮಾಣಿಕವಾಗಿ ನಂಬಿದ್ದರು. ನಿಖರವಾದ ಮತ್ತು ಪರಿಪೂರ್ಣವಾದ ವ್ಯಾಖ್ಯೆ ಇಲ್ಲದೇ ಜರ್ಮನ್ ಸರ್ಕಾರಕ್ಕೆ ಏನೂ ಮಾಡಲಾಗದು."

ದುಷ್ಟಮನಸ್ಸಿನ ದುರ್ವ್ಯಾಪಾರಗಳು ಎಂದಾದರೂ ವ್ಯಾಖ್ಯೆ ತರ್ಕನೀತಿ ನಿಯಮಾವಲಂಬಿಗಳಾಗಿರುವುದುಂಟೇ ? ವಿಜ್ಞಾನಪ್ರಪಂಚದಲ್ಲಿ ಸಂದದ್ದು ರಾಜಕೀಯ ಪ್ರಪಂಚದಲ್ಲಿಯೂ ಸಲ್ಲಬೇಕೆಂದು ಭಾವಿಸಲು ಆಧಾರವೇನು ? ಚೌಕಟ್ಟುಗಳೇ ಬೇರೆ ಬೇರೆಯಲ್ಲವೇ ? ಅಪರಾಧದ ವ್ಯಾಖ್ಯೆ ನೀಡಿ ಅದರ ಅನುಸಾರ ಅಪರಾಧಿ ಆದವನನ್ನು ಶಿಕ್ಷಿಸಬೇಕೆಂಬುದೇನೂ ನಿಸರ್ಗನಿಯಮವಲ್ಲವಷ್ಟೆ.[೬೮] ಆದ್ದರಿಂದ ಅನುಕೂಲ ಮಾರ್ಗಾವಲಂಬನೆಯೇ ಶ್ರೇಯಸ್ಕರ : ಮೊದಲು ಶಿಕ್ಷೆ, ಬಳಿಕ ಇದಕ್ಕೆ ಒಪ್ಪುವಂಥ ಅಪರಾಧಾರೋಪಣೆ. ಅಂದರೆ ವ್ಯಕ್ತಿ ನೋಡಿ ಶಿಕ್ಷೆ. ಶಿಕ್ಷೆ ನೋಡಿ ಕಾನೂನು. ಇದು ಜರ್ಮನ್ ಆಡಳಿತೆಯಲ್ಲಿ ಹಬ್ಬಿದ್ದ ನೂತನ ತಾತ್ತ್ವಿಕ ಧೋರಣೆಯ ವ್ಯಾವಹಾರಿಕ ನೀತಿ. ಈ ಸರಳ ಸೂತ್ರವನ್ನು ತಿಳಿಯದ, ತಿಳಿದರೂ ನಂಬದ ಬೋಳೇ ಮಂದಿ ಪ್ರಾಧ್ಯಾಪಕರು ಜರ್ಮನ್ ವಿಶ್ವವಿದ್ಯಾಲಯಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಆಗ ವರಿಷ್ಠ ಸ್ಥಾನಗಳನ್ನು ಅಲಂಕರಿಸಿದ್ದರು! ಐನ್‌ಸ್ಟೈನ್ ಈ ಮಂದೆಯೊಳಗಿರಲಿಲ್ಲ.

ಯೆಹೂದ್ಯ ಜನಾಂಗದ್ವೇಷದ ದಾವಾನಲ ಸರ್ವವ್ಯಾಪಿಯಾಗಿ ದಹಿಸತೊಡಗಿತು. ಆ ಕ್ರೌರ್ಯ, ಆ ಹಿಂಸೆ, ಆ ಭಯಂಕರತೆ, ಆ ಅನಿಲಕೋಷ್ಠ ಚಿತೆ[೬೯], ಆ ಜನಹತ್ಯಾನರಕ ಶಿಬಿರ ಒಂದೊಂದೂ ಮಾನವೇತಿಹಾಸ ಎಂದೂ ಎಲ್ಲಿಯೂ ಕೇಳದ ಮತ್ತು ಕಾಣದ ತೀವ್ರತೆಯದಾಗಿತ್ತು. ಮಿಡತೆ ದಂಡುಗಳ ಸಾಮೂಹಿಕ ನಾಶಕಾರ್ಯದ ದಕ್ಷತೆಯಿಂದ ಯೆಹೂದ್ಯಜನಾಂಗದ ಕಗ್ಗೊಲೆ ಹಾಡಹಗಲಲ್ಲೇ ಸಾಗಿತು.

ಯೆಹೂದ್ಯರು ಯಾರು ? ಅದೇ ಜರ್ಮನಿಯ ಮೂಕನಿರಪರಾಧಿ ರಕ್ಷಣರಹಿತ ಪ್ರಜೆಗಳು. ಈ ಮಾರಣಹೋಮದಲ್ಲಿ ಪ್ರಜ್ವಲಿಸಿದ ಯಮಾಗ್ನಿಯ ಭೈರವ ಜ್ವಾಲೆಯಲ್ಲಿ ಚೆಂಗಿಸ್‌ಖಾನ್, ಕುಂಟ ತೈಮೂರ್ ಅಥವಾ ಕಳಿಂಗವಿಜೇತ ಅಶೋಕ ಮಸಕಾಗಿ ಮಾಸಿಹೋಗುವಂತಿದ್ದರು.

ಅಂತಕನ ದೂತರು ಕಿಂಚಿತ್ತು ದಯೆಯಿಲ್ಲದೆ ಹಂತಕ ಕ್ರಿಯೆಯಲ್ಲಿ ಮುಂದೆ ಮುಂದೆ ಕುಂಭಕರ್ಣ ಹೆಜ್ಜೆ ಇಡುತ್ತಿದ್ದಾಗ, ಕಬಂಧಬಾಹು ಚಾಚಿ ಚಾಚಿ ಧೃತರಾಷ್ಟ್ರಾಲಿಂಗನೆಯಲ್ಲಿ ಮಗ್ನರಾಗಿದ್ದಾಗ, ೧೯೩೩, ಅವರ ಪ್ರಮುಖ ಮತ್ತು ಪ್ರಥಮ ವೈರಿ ಐನ್‌ಸ್ಟೈನ್ ಎಲ್ಲಿದ್ದರು ? ಅದೃಷ್ಟವಶಾತ್ ಜರ್ಮನಿಯಲ್ಲಿರಲಿಲ್ಲ, ದೂರದ ಅಮೆರಿಕದಲ್ಲಿ ಸಂದರ್ಶಕ ಪ್ರಾಧ್ಯಾಪಕತ್ವದ ಹೊಣೆ ನಿರ್ವಹಿಸುತ್ತಿದ್ದರು.

ಆಳರಸರ ದೃಷ್ಟಿಯಲ್ಲಿ ಐನ್‌ಸ್ಟೈನ್ ಮಹಾ ಅಪರಾಧಿ, ಅಪರಾಧಪರಂಪರೆಗಳ ಮೂರ್ತರೂಪ. ಏಕೆ ?

ಸೃಷ್ಟಿಕರ್ತ ಬ್ರಹ್ಮನ ಮುಖಾರವಿಂದೋದ್ಭವ ಆರ್ಯರು ಮಾತ್ರ ಮನುಜ ಶ್ರೇಷ್ಠರು. ಇವರೇ ಸಕಲ ಸದ್ಗುಣಗಳ ನೆಲೆ. ಜ್ಞಾನ ವಿಜ್ಞಾನ ಕಲೆಗಳ ಸೆಲೆ. ಇವರು ಮಾತ್ರ ಸೃಷ್ಟಿಯನ್ನು ಸರಿಯಾಗಿ ಅರ್ಥವಿಸಿ ವ್ಯಾಖ್ಯಾನಿಸಲು ತಕ್ಕುದಾದ ಧೀಶಕ್ತಿಗಳಿಸಿರುವುದಾಗಿದೆ. ಎಂದೇ ಆರ್ಯರು ಪ್ರಪಂಚನಾಯಕರಾಗಲು ಸಕಲ ಅರ್ಹತೆ ಪಡೆದವರು. ಇವರೆದುರು ಉಳಿದೆಲ್ಲ ಮಾನವ ಜನಾಂಗಗಳೂ ತುಚ್ಛ ಮತ್ತು ಹೀನ—'ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರ' ವರ್ತನೆಯನ್ನು ಮಾತ್ರ ಪ್ರದರ್ಶಿಸಬಲ್ಲಂಥವು. ಈ ರಾಷ್ಟ್ರನಾಯಕಪ್ರಣೀತ ತೀರ್ಮಾನಗಳನ್ನು (ಅಪೌರುಷೇಯಗಳನ್ನು) ಹುಸಿಗೊಳಿಸಿದವರು ಯಾರು ? ಐನ್‌ಸ್ಟೈನ್.

ಇವರು ಅನಾರ್ಯ ಕುಲೋತ್ಪನ್ನರಾಗಿರುವುದು ಅಕ್ಷಮ್ಯ ಅಪರಾಧ. ಬೌದ್ಧಿಕವಾಗಿ ಬಡ ಮತ್ತು ಬರಡು ಜನಾಂಗವೆಂದು ಆರ್ಯರಿಂದ ನಿರ್ಧರಿತವಾಗಿರುವ ಯೆಹೂದ್ಯ ಜನಾಂಗದಲ್ಲಿ ಜನಿಸಿಯೂ ಇವರು ಸ್ವಂತ ಸೃಜನಶೀಲ ಪ್ರತಿಭೆ ಪ್ರದರ್ಶಿಸಿರುವುದು ಘೋರಪಾತಕ. ಇವರ ಸಿದ್ಧಾಂತಗಳೆಲ್ಲವೂ ಬುರುಡೆ ಬೊಗಳೆಗಳಾಗಿದ್ದರೂ—ಹಾಗೆಂದು ನೊಬೆಲ್ ಪ್ರಶಸ್ತಿವೀರ ಆರ್ಯವಿಜ್ಞಾನಿಗಳು ಲೆನಾರ್ಡ್ ಮತ್ತು ಸ್ಟಾರ್ಕ್ ಅಪ್ಪಣೆ ಕೊಡಿಸಿಲ್ಲವೇ ?—ಅವನ್ನು ಮೂಢ ಜನ ನಂಬಿ ಮರುಳಾಗಿ ಇವರನ್ನು ಆರಾಧಿಸುವಂತೆ ಮಾಡಿರುವುದು ಪರಮ ವಂಚನೆ. ಜರ್ಮನಿಯಲ್ಲಿ ಹುಟ್ಟಿ ಜರ್ಮನಿಯಲ್ಲಿ ಖ್ಯಾತಿ ಪಡೆದು ಜರ್ಮನಿಯ ಋಣ ತಿಂದು ಬದುಕುತ್ತಿರುವ ಇವರು ಕಾಯಾವಾಚಾಮನಸಾ ಜರ್ಮನಿಗೆ ದ್ರೋಹ ಬಗೆಯುತ್ತಿರುವುದು ಕೃತಘ್ನತೆಯ ಪರಾಕಾಷ್ಠೆ. ಒಂದನೆಯ ಮಹಾಯುದ್ಧ ಕಾಲದಲ್ಲಿ ಪ್ರತ್ಯಕ್ಷವಾಗಿಯೂ ಪ್ರಚ್ಛನ್ನವಾಗಿಯೂ ಶತ್ರು ಪಕ್ಷಕ್ಕೆ ಬೆಂಬಲ ನೀಡಿ ಯುದ್ಧಾನಂತರ ಉದರವ್ರಣದಂತೆ ದೇಶಕ್ಕೆ ಘಾತಕರಾಗಿರುವ ಇವರು ಸರ್ವಥಾ ಬದುಕಿರಲು ಅರ್ಹರಲ್ಲ. ಅಂತಾರಾಷ್ಟ್ರೀಯ ಯೆಹೂದ್ಯರ ಸಂಘಟನೆಯ ಪ್ರೇರಕ ಮತ್ತು ಚಾಲನಶಕ್ತಿಯಾಗಿದ್ದುಕೊಂಡು ಆರ್ಯ ಜರ್ಮನಿಯ ನಾಶವನ್ನೇ ಹಾರೈಸುತ್ತಿರುವ ಇವರೂ ಇವರ ಕುಲಜರೂ ನಶಿಸಿ ಹೇಳಹೆಸರಿಲ್ಲದಂತಾಗುವುದು ಅತ್ಯಗತ್ಯ. ಜರ್ಮನರ ಆಜನ್ಮ ಶತ್ರುಗಳಾದ ಬಾಲ್ಶೆವಿಕ್ಕರೊಡನೆ ಪಿತೂರಿ ನಡೆಸಿ ದೇಶಹಿತಕ್ಕೆ ಮಾರಕರಾಗಿರುವ ಈ ಹೇಯ ಬಾಲ್ಶೆವಿಕ್ ಐನ್‌ಸ್ಟೈನರ ಅಂತ್ಯವೊಂದೇ ಜರ್ಮನಿಗೆ ನಿಜ ಶಾಂತಿ ತರಬಲ್ಲದು.

ರಾಷ್ಟ್ರೀಯ ಸಮಾಜವಾದಿ (ನಾಟ್ಸೀ) ಪಕ್ಷದ ಮುಖವಾಣಿಯಾಗಿದ್ದ ಒಂದು ಪತ್ರಿಕೆಯಲ್ಲಿ ಲೆನಾರ್ಡನ ಲೇಖನ ಪ್ರಕಟವಾಯಿತು (ಮೇ ೧೯೩೩) : "ಒಂದಿಷ್ಟು ಪ್ರಾಚೀನ ಜ್ಞಾನಕ್ಕೆ ಕೆಲವೊಂದು ಸ್ವೇಚ್ಛಾಭಾವನೆಗಳನ್ನು ತಳಕುಹಾಕಿ ಗಣಿತೀಯವಾಗಿ ತೇಪೆ ಹೊಲಿದು ಮಂಡಿಸಲಾದ ಶ್ರೀಮಾನ್ ಐನ್‌ಸ್ಟೈನರ ಸಿದ್ಧಾಂತಗಳು ಹೇಗೆ ನಿಸರ್ಗ ಅಧ್ಯಯನದ ಮೇಲೆ ಯೆಹೂದ್ಯ ವೃತ್ತಗಳ ಪ್ರಭಾವ ಅಪಾಯಕಾರಿ ಆಗಬಲ್ಲದು ಎಂಬುದಕ್ಕೆ ಅತಿ ಮುಖ್ಯ ನಿದರ್ಶನಗಳನ್ನು ಒದಗಿಸುತ್ತವೆ. ನಿಸರ್ಗದಿಂದ ಬೇರ್ಪಟ್ಟ ಎಲ್ಲ ಚಿಂತನೆಗಳ ತೆರದಲ್ಲಿ ಈ ಸಿದ್ಧಾಂತ ಕೂಡ ಈಗ

ಕ್ರಮೇಣ ತುಂಡುತುಂಡಾಗಿ ಸಿಡಿದು ಹೋಗುತ್ತಿದೆ. ಅನ್ಯತ್ರ ಘನಕಾರ್ಯವೆಸಗಿರುವ ವಿಜ್ಞಾನಿಗಳಾದರೂ, ವಿಜ್ಞಾನಕ್ಷೇತ್ರದ ಹೊರಗೆ ಕೂಡ, ಈ ಯೆಹೂದ್ಯನನ್ನು ಒಬ್ಬ ಒಳ್ಳೆಯ ಜರ್ಮನ್ ಎಂಬುದಾಗಿ ಪರಿಗಣಿಸುತ್ತಿರುವುದು ಎಷ್ಟು ದೋಷಪೂರ್ಣವಾದದ್ದು ಎಂಬುದನ್ನು ತಿಳಿಯದೆ ಅಥವಾ ತಿಳಿಯಲು ಇಷ್ಟಪಡದೆ, ಸಾಪೇಕ್ಷತಾಸಿದ್ಧಾಂತಕ್ಕೆ ಜರ್ಮನಿಯಲ್ಲಿ ನೆಲೆಯೂರಲು ಅವಕಾಶವಿತ್ತುದಕ್ಕಾಗಿ ಆಕ್ಷೇಪಣೆಯಿಂದ ವಿಮುಕ್ತರಾಗಲಾರರು."

ಎರಡು ವರ್ಷಗಳ ತರುವಾಯ, ೧೯೩೫ರಲ್ಲಿ ನೂತನ ಭೌತವಿಜ್ಞಾನ ಸಂಸ್ಥೆಯೊಂದನ್ನು ಲೆನಾರ್ಡ್ ಉದ್ಘಾಟಿಸಿದ : "ವಿಜ್ಞಾನದಲ್ಲಿರುವ ಏಶ್ಯ ಪ್ರಜ್ಞೆಯ ವಿರುದ್ಧ ಈ ಸಂಸ್ಥೆ ಯುದ್ಧ ಪತಾಕೆಯಾಗಿ ನಿಂತೀತೆಂದು ಆಶಿಸುತ್ತೇನೆ. ರಾಜಕೀಯ ಹಾಗೂ ರಾಷ್ಟ್ರೀಯ ಆರ್ಥಿಕತೆಗಳಲ್ಲಿ ಮಾರ್ಕ್ಸಿಸಮ್ ಎಂಬ ಹೆಸರಿನಿಂದಿರುವ ಆ ಕುಪ್ರಜ್ಞೆಯನ್ನು ನಮ್ಮ ಫ್ಯೂರೆರ್ ಮಹಾಶಯರು ನಿವಾರಿಸಿದ್ದಾರೆ. ಆದರೆ ನೈಸರ್ಗಿಕ ವಿಜ್ಞಾನದಲ್ಲಿ ಐನ್‌ಸ್ಟೈನರ ಮೇಲೆ ಅತ್ಯವಧಾರಣೆ ಇದ್ದು ಆ ಕುಪ್ರಜ್ಞೆಯ ಹಿಡಿತವಿನ್ನೂ ಉಳಿದಿದೆ. ಒಬ್ಬ ಯೆಹೂದ್ಯನ ಬೌದ್ಧಿಕ ಅನುಯಾಯಿ ಆಗಿರುವುದು ಜರ್ಮನ್ ಪ್ರಜೆಯ ಘನತೆಗೆ ಒಪ್ಪದೆಂಬುದನ್ನು ನಾವು ತಿಳಿಯಬೇಕು. ನೈಸರ್ಗಿಕ ವಿಜ್ಞಾನ, ಅದರ ಹೆಸರೇ ತಿಳಿಸುವಂತೆ, ಪೂರ್ತಿ ಆರ್ಯಮೂಲವಾದದ್ದು. ಆದ್ದರಿಂದ ಜರ್ಮನರು ಇಂದು ಕೂಡ ಅಜ್ಞಾತದೆಡೆಗೆ ತಮ್ಮದೇ ಆದ ಹಾದಿಯನ್ನು ಅರಸಬೇಕು. ಹಿಟ್ಲರ್ ಚಿರಾಯುವಾಗಲಿ."

ಹೀಗೆ ಯೆಹೂದ್ಯರ, ಯೆಹೂದ್ಯವಿಜ್ಞಾನದ ಮತ್ತು ಯೆಹೂದ್ಯ ಸಂಸ್ಕೃತಿಯ ಗೋರಿಯ ಮೇಲೆ ಆರ್ಯ ಜರ್ಮನಿ ನಳನಳಿಸುತ್ತ ಅಭಿವರ್ಧಿಸುತ್ತಿತ್ತು. ಮಸೆಯಲಿ ಕಿಡಿಸಲಿ ಕ್ರೋಧ ಕುಠಾರಂ, ನೆಲಸಮವಾಗಲಿ ವೈರಿ ವಠಾರಂ, ಜನಜಂಗುಳಿಯಲಿ ನೆಲಸಲಿ ಕ್ರೌರ್ಯಂ, ಸುಡಲಿ ಯೆಹೂದ್ಯರನಾಮೂಲಾಗ್ರಂ !

## ಐನ್‌ಸ್ಟೈನರ ಬವಣೆಗಳು

> ಒಬ್ಬ ಕೇಳುತ್ತಾನೆ : ಜರ್ಮನ್ ಭೌತವಿಜ್ಞಾನ ಯಾವುದಯ್ಯಾ ? ನಾನಿದನ್ನೇ ಈ ತೆರನಾಗಿ ಹೇಳುತ್ತಿದ್ದೆ: ಆರ್ಯರ ಭೌತವಿಜ್ಞಾನ ಅಥವಾ ನಾರ್ಡಿಕ್ ಪ್ರಭೇದದ ಮಾನವನ ಭೌತವಿಜ್ಞಾನ; ವಾಸ್ತವತೆಯ ಆಳಗಳನ್ನು ಅಳೆದಿರುವವರ, ಸತ್ಯಾನ್ವೇಷಕರ, ಅಷ್ಟೇಕೆ, ವಿಜ್ಞಾನದ ಸಾಕ್ಷಾತ್ ಸಂಸ್ಥಾಪಕರ ಭೌತ ವಿಜ್ಞಾನ. ಆದರೆ ನನಗೆ ಜವಾಬು ಬರುತ್ತದೆ : ವಿಜ್ಞಾನ ಅಂತಾರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯವಾಗಿಯೇ ಇರುತ್ತದೆ. ಇದು ಹಸಿ ಸುಳ್ಳು, ವಿಜ್ಞಾನ, ಇತರ ಎಲ್ಲ ಮಾನವ ಫಲಗಳಂತೆ, ಜನಾಂಗಾವಲಂಬಿಯಾಗಿದ್ದು ಆಯಾ ಜನಾಂಗದ ರಕ್ತದಿಂದ ಪ್ರಭಾವಿತವಾಗಿ ಬೆಳೆಯುತ್ತದೆ.
>
> ಲೆನಾರ್ಡ್

ಜರ್ಮನಿಗೆ ಬಡಿದ ಝಂಝಾವಾತದ ಕಂಪನ ಆಗ ಅಮೆರಿಕದಲ್ಲಿದ್ದ ಐನ್‌ಸ್ಟೈನರಿಗೆ ಪ್ರಬಲ ಆಘಾತವಾಗಿ ತಟ್ಟಿತು. ಆದರೆ ಇದು ಅನಿರೀಕ್ಷಿತವಾಗಿರಲಿಲ್ಲವೆಂಬುದೊಂದು ಸಮಾಧಾನ.

ಮುಂದೇನು ?

ಐನ್‌ಸ್ಟೈನ್ ನ್ಯೂಯಾರ್ಕ್ ನಗರಕ್ಕೆ ತೆರಳಿ ಅಲ್ಲಿದ್ದ ಜರ್ಮನ್ ರಾಯಭಾರಿಯನ್ನು ಭೇಟಿಯಾದರು. ಆತ ಮಾಮೂಲಿ ಅಧಿಕೃತ ಆಶ್ವಾಸನೆ ನೀಡಿದ, "ನೀವೇನೂ ಚಿಂತೆ ಮಾಡಬೇಕಾಗಿಲ್ಲ ಪ್ರೊಫೆಸರ್ ಮಹಾಶಯ ! ನಿರ್ಭಯವಾಗಿ ನಿಶ್ಶಂಕೆಯಿಂದ ಜರ್ಮನಿಗೆ ಮರಳಬಹುದು. ಈಗ ಅಲ್ಲಿ ರಾಷ್ಟ್ರೀಯ ಸರ್ಕಾರ ಚುಕ್ಕಾಣಿಗಾಲಿ ಹಿಡಿದಿದೆ. ನ್ಯಾಯ ಪರಿಪಾಲನೆಯೊಂದೇ ಅದರ ದೃಷ್ಟಿ. ನಿರ್ದೋಷಿಗಳಿಗೆ ಅಲ್ಲಿ ಯಾವ ಭೀತಿಯೂ ಇರಬೇಕಾಗಿಲ್ಲ."

ಆದರೆ ಹಿಟ್ಲರ್ ದುರಾಡಳಿತದ ಜರ್ಮನಿಗೆ ತಾನು ಮರಳಲಾರೆನೆಂಬುದಾಗಿ ಐನ್‌ಸ್ಟೈನ್ ಆ ಮೊದಲೇ ತೀರ್ಮಾನಿಸಿದ್ದರು. ಯಾವ ಮುಚ್ಚುಮರೆಯೂ ಇಲ್ಲದೆ ಈ ವಿಷಯವನ್ನು ಅವರು ರಾಯಭಾರಿಗೆ ಅರುಹಿದರು.

ಅಧಿಕೃತ ಸಂಭಾಷಣಾನಂತರ ರಾಯಭಾರಿಯ ಸಹಾಯಕ ಐನ್‌ಸ್ಟೈನರಿಗೆ ಖಾಸಗಿಯಾಗಿ ಪಿಸುಗುಟ್ಟಿದ, "ಶ್ರೀಮಾನ್ ಐನ್‌ಸ್ಟೈನ್ ಅವರೇ ! ನಾವೀಗ ವ್ಯಕ್ತಿ-ವ್ಯಕ್ತಿ ನಡುವೆ ಮಾತಾಡುತ್ತಿದ್ದೇವೆ. ನಿಮ್ಮ ನಿರ್ಧಾರ ಸರಿಯಾದದ್ದೆಂದು ಮಾತ್ರ ಹೇಳಬಲ್ಲೆ."

೧೯೩೩ ಮಾರ್ಚ್ ೧೦ರಂದು ಅಮೆರಿಕದಲ್ಲಿ ಪತ್ರಿಕಾಪ್ರಕಟಣೆ ನೀಡುವುದರ ಮೂಲಕ ಐನ್‌ಸ್ಟೈನ್ ತಮ್ಮ ನಿಲವನ್ನು ಬಹಿರಂಗಗೊಳಿಸಿದರು : "ನನಗೆ ಆಯ್ಕೆಯ ಸ್ವಾತಂತ್ರ್ಯ ಇರುವ ತನಕವೂ ನಾನು, ಎಲ್ಲಿ ರಾಜಕೀಯ ಸ್ವಾತಂತ್ರ್ಯ, ಪರಧರ್ಮಸಹಿಷ್ಣುತೆ ಮತ್ತು ಕಾನೂನಿನ ಮುಂದೆ ಸರ್ವಪ್ರಜೆಗಳ ಸಮತೆ ವಿಧಿನಿಯಮಗಳಾಗಿರುವುವೊ ಆ ದೇಶದಲ್ಲಿ ಮಾತ್ರ ನೆಲಸ ಲಿಚ್ಛಿಸುತ್ತೇನೆ. ರಾಜಕೀಯ ಸ್ವಾತಂತ್ರ್ಯವೆಂದರೆ ಒಬ್ಬಾತನ ರಾಜಕೀಯ ಅಭಿಪ್ರಾಯಗಳನ್ನು ಮೌಖಿಕವಾಗಿಯೂ ಲಿಖಿತವಾಗಿಯೂ ಅಭಿವ್ಯಕ್ತಿಸಲು ಸ್ವಾತಂತ್ರ್ಯ, ಸಹಿಷ್ಣುತೆ, ಮತ್ತು ಯಾವುದೇ ಹಾಗೂ ಪ್ರತಿಯೊಂದು ಅಭಿಮತಕ್ಕೂ ಗೌರವ ಎಂಬವು ನಿಬಂಧಿತವಾಗುತ್ತವೆ. ಸದ್ಯದಲ್ಲಿ ಈ ಪರಿಸ್ಥಿತಿಗಳು ಜರ್ಮನಿಯಲ್ಲಿ ಕಂಡುಬರುತ್ತಿಲ್ಲ. ಅಂತಾರಾಷ್ಟ್ರೀಯ ಅರಿವಿನ ಕಾರಣಕ್ಕೆ ಅತ್ಯಧಿಕ ಸೇವೆ ಸಲ್ಲಿಸಿದವರನ್ನು—ಇವರಲ್ಲಿ ಹಲಮಂದಿ ಮುಂಚೂಣಿ ಕಲಾಭಿಜ್ಞರು ಸೇರಿದ್ದಾರೆ—ಈಗ ಅಲ್ಲಿ ಚಿತ್ರಹಿಂಸೆಗೆ ಒಳಪಡಿಸಲಾಗುತ್ತಿದೆ. ವ್ಯಕ್ತಿಯ ತೆರದಲ್ಲೇ ಯಾವುದೇ ಸಾಮಾಜಿಕ ವ್ಯವಸ್ಥೆ ಕೂಡ ಮನೋವಿಕಾರಗಳಿಗೆ, ಅದೂ ದುರ್ಧರ ಸನ್ನಿವೇಶಗಳಲ್ಲಿ, ಒಳಗಾಗುವುದುಂಟು. ಸಾಧಾರಣವಾಗಿ ರಾಷ್ಟ್ರಗಳು ಈ ಮನೋವಿಕಾರಗಳಿಂದ ಪಾರಾಗಿ ಹೊರಬರುತ್ತವೆ. ಆರೋಗ್ಯಕರ ಪರಿಸ್ಥಿತಿಗಳು ಜರ್ಮನಿಯಲ್ಲಿ ಮರುಪ್ರವೇಶಿಸುವುವೆಂದೂ, ಅಲ್ಲದೆ, ಜರ್ಮನಿಯ ಪುಣ್ಯಪುರುಷರಾದ ಕಾಂಟ್ ಮತ್ತು ಗ್ವಥೇ ಅವರ ಪವಿತ್ರನಾಮಗಳನ್ನು ಭವಿಷ್ಯದಲ್ಲಿ ಕಾಲದಿಂದ ಕಾಲಕ್ಕೆ ಸ್ಮರಿಸುವುದೊಂದೇ ಅಲ್ಲ, ಅವರು ಒಡಮೂಡಿಸಿದ ತತ್ತ್ವಗಳು ಸಾರ್ವಜನಿಕ ಜೀವನದಲ್ಲಿ ಮತ್ತು ಸಾರ್ವತ್ರಿಕ ಬೋಧೆಯಲ್ಲಿ ಉಳಿದಿರುವುದು ಸಾಧ್ಯವಾಗುವುದೆಂದೂ ಆಶಿಸುತ್ತೇನೆ."

ಅಮೆರಿಕದಲ್ಲಿ ಐನ್‌ಸ್ಟೈನ್ ಆಡಿದ ಮತ್ತು ಆಡದಿದ್ದ ಮಾತು, ನೀಡಿದ ಮತ್ತು ನೀಡದಿದ್ದ ಪತ್ರಿಕಾಪ್ರಕಟಣೆ ಎಲ್ಲವೂ ಯಥೋಚಿತವಾಗಿ ಜರ್ಮನಿಯಲ್ಲಿ ವಿಕೃತ ಮಸೂರದ ಮೂಲಕ ಉತ್ಪ್ರೇಕ್ಷಿತವಾಗಿ ವರದಿಗೊಂಡು ಪ್ರಕಟವಾಗುತ್ತಿದ್ದುವು. ಜರ್ಮನಿ-ಅಮೆರಿಕ ಬಾಂಧವ್ಯವನ್ನು 'ಕೆಡಿಸಲು' ಹೆಣಗುತ್ತಿದ್ದ ಈ 'ಯುದ್ಧಾತುರ' ವಿಜ್ಞಾನಿ ಜರ್ಮನಿಗೆ ಹಿಂತಿರುಗುವುದಿಲ್ಲವೆಂಬ ವಾರ್ತೆಯನ್ನು ಬರ್ಲಿನ್ನಿನ ಒಂದು ಪತ್ರಿಕೆ ಟೀಕೆ ಸಹಿತ ಮಿಂಚಿಸಿತು : "ಐನ್‌ಸ್ಟೈನರಿಂದ ಶುಭವಾರ್ತೆ : ಅವರು ಹಿಂತಿರುಗಿ ಬರುತ್ತಿಲ್ಲ . . . ನಮ್ಮಲ್ಲಿ ಸಾಪೇಕ್ಷತೆಗೆ ಈಗ ಬಲು ಕಡಿಮೆ ಬೇಡಿಕೆ. ಹೀಗಲ್ಲದೇ ಶ್ರೀಮಾನ್ ಐನ್‌ಸ್ಟೈನರು ನಾಶಪಡಿಸಲು ಪ್ರಯತ್ನಿಸಿದ ರಾಷ್ಟ್ರೀಯ ಗೌರವದ ಆದರ್ಶಗಳು ಮತ್ತು ದೇಶಪ್ರೇಮ ನಮಗೆ ಪರಿಶುದ್ಧ ಮೌಲ್ಯಗಳಾಗಿವೆ. ಆದ್ದರಿಂದ ಇಲ್ಲಿ ಐನ್‌ಸ್ಟೈನರಿಗೆ ಭವಿಷ್ಯ ಬಲು ಮಬ್ಬಾಗಿದೆ."

ಹೀಗೆ ಒಳಗೆ ಹೊರಗೆ ಎಲ್ಲೆಲ್ಲೂ ಗೊಂದಲ ತುಮುಲ ಕ್ಷೋಭೆ ಅರಾಜಕತೆ ತಾಂಡವವಾಡುತ್ತಿದ್ದಾಗ ಐನ್‌ಸ್ಟೈನ್ ದಂಪತಿಗಳು ಯೂರೊಪಿಗೆ ಮರಳಲು ಹಡಗೇರಿದರು. ಗುರಿ ಯಾವುದಯ್ಯಾ ? ಜರ್ಮನಿ ಅಲ್ಲ. ದಾರಿ ಎಲ್ಲಿಗಯ್ಯಾ ? ಗೊತ್ತಿಲ್ಲ. ಬಂದರು ಎಲ್ಲಿದೆಯಯ್ಯಾ ? ಲಂಗರು ಹೂಡಿದಲ್ಲಿ !

ಯಾನದ ವೇಳೆ ಐನ್‌ಸ್ಟೈನರಿಗೆ ಜರ್ಮನ್ ಹಿರಣ್ಯಕಶಿಪುವಿನ ಉಗ್ರ ಕೃತ್ಯಗಳ ವರದಿಗಳು ಅನುಸ್ಯೂತವಾಗಿ ಬರುತ್ತಿದ್ದುವು :

ಸರ್ಕಾರಿ ಸೇವೆಯಿಂದ ಎಲ್ಲ ಯೆಹೂದ್ಯ ನೌಕರರ ಹಠಾತ್ ವಜ ;

ವಿಶ್ವವಿದ್ಯಾಲಯಗಳಲ್ಲಿ ೧೬೦೦ ಮಂದಿ ಯೆಹೂದ್ಯ ಅಧ್ಯಾಪಕರ ಹುದ್ದೆ ರದ್ದು ;

ಎಲ್ಲ ಝಿಯನಿಸ್ಟ್ ಹಾಗೂ ಇತರ ಯೆಹೂದ್ಯ ಖಾಸಗಿ ಮತ್ತು ಅಧಿಕೃತ ಕಛೇರಿಗಳ ದರೋಡೆ ಮತ್ತು ನಾಶ ;

ಐನ್‌ಸ್ಟೈನರ ಕಾಪುತ್ ಆಶ್ರಮದ ತಪಾಸಣೆ ಮತ್ತು ಲೂಟಿ ;

ಯೆಹೂದ್ಯ ಲೇಖಕರು ಜರ್ಮನ್ ಭಾಷೆಯಲ್ಲಿ ಬರೆದು ಪ್ರಕಟಿಸಿದ ಪುಸ್ತಕಗಳ ಮೇಲೆ 'ಹೀಬ್ರೂವಿನಿಂದ ಅನುವಾದಿತ'ವೆಂಬ ಷರಾ ಬರಾಯಿಸಲು ಏರ್ಪಾಡು ;

ಸಾಪೇಕ್ಷತಾಸಿದ್ಧಾಂತ ಮತ್ತು ತತ್ಸಂಬಂಧ ನಿಗಮನಗಳು ಅನುಭವಾತೀತವಾದ್ದರಿಂದ ಮಹಾ ವಂಚನೆಗಳೆಂದು ಸಾರಲು ಕ್ರಮ ;

$E=mc^2$, ದ್ಯುತಿವೈದ್ಯುತ ಪರಿಣಾಮ ಮುಂತಾದ ಪ್ರಾಯೋಗಿಕ ಅನ್ವಯಗಳಿರುವ (ಆದ್ದರಿಂದ ಅನುಭವಗಮ್ಯವಾದ) ಐನ್‌ಸ್ಟೈನ್-ಸಾಧನೆಗಳ ಉಗಮ ನಿಜಕ್ಕೂ ಗತಯುಗದ ಆರ್ಯ-ಜರ್ಮನ್ ಸಂಶೋಧಕರಿಂದಾದವು ; ಐನ್‌ಸ್ಟೈನ್ ಅವನ್ನು ವಾಮಮಾರ್ಗದಿಂದ ಸಂಪಾದಿಸಿ ಆಧುನಿಕ ಪರಿಭಾಷೆಯ ಉಡುಪು ತೊಡಿಸಿ ತನ್ನ ಆವಿಷ್ಕಾರಗಳೆಂದು ಪ್ರತಿಪಾದಿಸಿದ ಮೋಸಗಾರ ಎಂದು ಘೋಷಿಸಲು ಸಿದ್ಧತೆ ;

ಸಾಪೇಕ್ಷತಾಸಿದ್ಧಾಂತವನ್ನು ಒಳಗೊಂಡಿರುವ ಪುಸ್ತಕಗಳ ಸಾರ್ವಜನಿಕ ಹೋಮ.

ಯೂರೋಪಿನಲ್ಲಿ ಯಾವುದೇ ಜರ್ಮನ್ ರೇವಿನಲ್ಲಿಳಿಯಬಾರದು, ಮತ್ತು ಮುಂದೆ ಬರ್ಲಿನ್ನಿಗೆ ಹೋಗಬಾರದು ಎಂಬುದಾಗಿ ಐನ್‌ಸ್ಟೈನರಿಗೆ ಮಿತ್ರರಿಂದ ಸಂದೇಶಗಳು ಪುಂಖಾನು ಪುಂಖವಾಗಿ ಬಂದುವು. ಮಾರ್ಚ್ ೨೮ರಂದು ಈ ನಿರಾಶ್ರಿತ ದಂಪತಿಗಳು ಬೆಲ್ಜಿಯಮ್ ದೇಶದ ಆ್ಯಂಟ್ವರ್ಪ್ ರೇವಿನಲ್ಲಿಳಿದು ಸ್ನೇಹಿತರೊಬ್ಬರ ನೆರಳಿನಲ್ಲಿ ಹಂಗಾಮಿ ಆಶ್ರಯ ಪಡೆದರು. ಮುಂದೆ, ಬ್ರುಸ್ಸೆಲ್ಸಿನಲ್ಲಿದ್ದ ಜರ್ಮನ್ ರಾಯಭಾರಿ ಕಛೇರಿಗೆ ಹೋಗಿ ತಮ್ಮ ಜರ್ಮನ್ ಪೌರತ್ವದ ಪೂರ್ಣ ಹಕ್ಕುಗಳನ್ನು ಹಿಂದೊಪ್ಪಿಸಿ ಜರ್ಮನ್ ಕೊಂಡಿ ಕಳಚಿಕೊಂಡು ಮರಳಿದರು —ಯುದ್ಧಾನಂತರ ಜರ್ಮನಿಯನ್ನು ಮೇಲೆತ್ತಲು ಅಷ್ಟೊಂದು ಉತ್ಸಾಹಪೂರ್ವಕವಾಗಿ ಸ್ವಂತೇಚ್ಛೆಯಿಂದ ಸ್ವೀಕರಿಸಿದ್ದ ಆ ಪೌರತ್ವ ಈ ತೆರನಾಗಿ ವಿಫಲಗೊಂಡಿತು. ಸ್ವಿಸ್ ಪೌರತ್ವವನ್ನು ಹೇಗೂ ಇಟ್ಟುಕೊಂಡಿದ್ದುದರಿಂದ ಈಗ ಅವರು ಮತ್ತೆ ಸ್ವಿಸ್ ಪ್ರಜೆಯಾಗಿ ಮಾತ್ರ ಉಳಿದರು.

ಪ್ರಶ್ಯನ್ ವಿಜ್ಞಾನ ಅಕ್ಯಾಡಮಿಯ ಸದಸ್ಯತ್ವವನ್ನೇನು ಮಾಡುವುದು ? ಸರ್ಕಾರದ ಹಸ್ತಕ್ಷೇಪ ಕ್ಕೊಳಗಾಗಿ ಇಂದಲ್ಲ ನಾಳೆ ಆಕ್ಯಾಡಮಿ ತನ್ನನ್ನು ಸದಸ್ಯತ್ವದಿಂದ ವಜಾಮಾಡುವ ಹುಕುಂ ಜಾರಿ ಮಾಡುವುದು ಇದ್ದದ್ದೇ. ಆದರೆ ಆ ಬಲವಂತದ ಮಾಘಸ್ನಾನ ಖಂಡಿತ ತನ್ನ ಪರಮ ಗೌರವಕ್ಕೆ ಪಾತ್ರರಾಗಿರುವ, ಅಕ್ಯಾಡಮಿಯ ಅಧ್ಯಕ್ಷ, ಸಹೃದಯ ಮ್ಯಾಕ್ಸ್ ಪ್ಲ್ಯಾಂಕರಿಗೆ ಪ್ರಿಯವಾಗದು. ಅವರನ್ನು ಈ ಮುಜಗರದಿಂದ ಪಾರುಮಾಡಲು ತಾನು ಅನುಸರಿಸಬಹುದಾದ ಹಾದಿ ಒಂದೇ: ಸದಸ್ಯತ್ವಕ್ಕೆ ರಾಜಿನಾಮೆ ನೀಡುವುದು. ಮಾರ್ಚ್ ೨೮ರಂದೇ—ಯೂರೋಪ್ ದಡವೇರಿದಂದೇ— ಪ್ರಶ್ಯನ್ ವಿಜ್ಞಾನ ಅಕ್ಯಾಡಮಿಯ ಸದಸ್ಯತ್ವಕ್ಕೆ ರಾಜಿನಾಮೆ ಕಾಗದ ಕಳಿಸಿದರು. ತಾನು ಪ್ರಶ್ಯನ್ ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಸಾಧ್ಯವಾಗದುದು ರಾಜಿನಾಮೆಯ ಕಾರಣವೆಂದು ತಿಳಿಸಿದರು.

ಆದರೆ ೧೯೩೩ ಏಪ್ರಿಲ್ ೧ರಂದು ಅಕ್ಯಾಡಮಿ ಐನ್‌ಸ್ಟೈನರ ವಿರುದ್ಧ ಪ್ರಕಟಿಸಿದ ಘೋಷಣೆ

ಇಂಥ ಯಾವ ಸದಭಿಪ್ರಾಯಕ್ಕೂ ಅವಕಾಶ ನೀಡದಂತೆ ಕಟುವಾಗಿತ್ತು :

"ಆಲ್ಬರ್ಟ್ ಐನ್‌ಸ್ಟೈನರು ಫ್ರಾನ್ಸ್ ಮತ್ತು ಅಮೆರಿಕ ದೇಶಗಳಲ್ಲಿ ಕೈತವಕೊಂಡೆಯವನ್ನು (atrocity-mongering) ಪ್ರಸರಿಸುವುದರಲ್ಲಿ ಉದ್ಯುಕ್ತರಾಗಿದ್ದರೆಂಬುದನ್ನು ಪ್ರಶ್ಯನ್ ವಿಜ್ಞಾನ ಅಕ್ಯಾಡಮಿ ತೀವ್ರ ಕಳವಳದಿಂದ ಗಮನಿಸಿದೆ. ಒಡನೆ ಅಕ್ಯಾಡಮಿ ಅವರಿಂದ ವಿವರಣೆಯನ್ನು ತಗಾದಿಸಿತು. ಅದೇ ವೇಳೆ ಐನ್‌ಸ್ಟೈನ್, ಸದ್ಯದ ಸರ್ಕಾರದ ಆಶ್ರಯದಲ್ಲಿ ಪ್ರಶ್ಯನ್ ಸರ್ಕಾರಕ್ಕೆ ತಾವು ಸೇವೆ ಸಲ್ಲಿಸುವುದು ಸಾಧ್ಯವಾಗದೆಂಬ ಕಾರಣ ನೀಡಿ, ಅಕ್ಯಾಡಮಿಯಿಂದ ತಮ್ಮ ವಾಪಸಾತಿಯನ್ನು ಪ್ರಕಟಿಸಿದ್ದಾರೆ. ಸ್ವಿಸ್ ಪೌರರಾದ ಇವರು, ೧೯೧೩ರಲ್ಲಿ ಕೇವಲ ಅಕ್ಯಾಡಮಿಯ ಪೂರ್ಣ ಸದಸ್ಯರಾಗುವ ಮೂಲಕ ಗಳಿಸಿದ ಪ್ರಶ್ಯನ್ ರಾಷ್ಟ್ರಕತ್ವವನ್ನು, ಈಗ ತೊರೆಯಲು ಹವಣಿಸುತ್ತಿರುವರೆಂದು ಕೂಡ ತಿಳಿದಿದೆ. ಪ್ರಶ್ಯನ್ ವಿಜ್ಞಾನ ಅಕ್ಯಾಡಮಿಯೂ ಇದರ ಸದಸ್ಯರೂ ಪ್ರಶ್ಯನ್ ರಾಜ್ಯಕ್ಕೆ ಅತ್ಯಂತ ನಿಕಟಬಂಧಗಳಿಂದ ಬೆಸುಗೆಗೊಂಡವರಾಗಿದ್ದು ಯಾವುದೇ ರಾಜಕೀಯ ಕಾರ್ಯಭಾಗಿತ್ವದಿಂದ ಕಟ್ಟುನಿಟ್ಟಾಗಿ ದೂರವಿರುತ್ತಿದ್ದಾಗ್ಯೂ ರಾಷ್ಟ್ರೀಯ ಭಾವನೆಗೆ ವಿಧೇಯವಾಗಿರುವುದನ್ನು ಸದಾ ಒತ್ತಿ ಹೇಳುತ್ತ ತದನುಗುಣವಾಗಿ ಇರುತ್ತಿದ್ದುದನ್ನು ಗಮನಿಸುವಾಗ ವಿದೇಶಗಳಲ್ಲಿ ಐನ್‌ಸ್ಟೈನ್ ಚಳವಳಿಗಾರರಾಗಿ ನಡೆಸಿರುವ ಚಟುವಟಿಕೆಗಳು ಪ್ರಶ್ಯನ್ ವಿಜ್ಞಾನ ಅಕ್ಯಾಡಮಿಗೆ ವಿಶೇಷ ಯಾತನೆಯನ್ನು ಉಂಟುಮಾಡುತ್ತವೆ. ಆದ್ದರಿಂದ ಅವರ ವಾಪಸಾತಿಯ ಬಗ್ಗೆ ಅಕ್ಯಾಡಮಿ ವಿಷಾದಿಸಲು ಕಾರಣವೇನೂ ಇಲ್ಲ."

ಏಪ್ರಿಲ್ ಐರಡು ಐನ್‌ಸ್ಟೈನ್ ಬರೆದ ಟೀಕೆ :

"'ಫ್ರಾನ್ಸ್ ಮತ್ತು ಅಮೆರಿಕ ದೇಶಗಳಲ್ಲಿ ಐನ್‌ಸ್ಟೈನರಿಂದ ಕೈತವಕೊಂಡೆಯ ಪ್ರಸಾರ ಭಾಗಿತ್ವ' ಎಂಬುದನ್ನು ಕುರಿತು ವಿಜ್ಞಾನ ಅಕ್ಯಾಡಮಿ ಅಧಿಕೃತ ಹೇಳಿಕೆಯೊಂದರಲ್ಲಿ ಪ್ರಸ್ತಾವಿಸಿದೆ ಎಂಬ ಮಾಹಿತಿ ನನಗೆ ಪೂರ್ತಿ ನಂಬಲರ್ಹವಾದ ಒಂದು ಮೂಲದಿಂದ ಬಂದಿದೆ. ನಾನು ಯಾವುದೇ ಕೈತವಕೊಂಡೆಯ ಪ್ರಸಾರದಲ್ಲಿ ಭಾಗವಹಿಸಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ. ಅಲ್ಲದೆ ಇಂಥ ಯಾವುದೇ ಪ್ರಸಾರವನ್ನು ನಾನು ಎಲ್ಲಿಯೂ ಕಂಡಿಲ್ಲವೆಂಬುದನ್ನು ಕೂಡ ಇಲ್ಲಿ ಸೇರಿಸುವುದು ಅಗತ್ಯ. ಒಟ್ಟಾರೆ ಹೇಳುವುದಾದರೆ ಅಕ್ಯಾಡಮಿಯ ಈ ಮಂದಿ, ಜರ್ಮನ್ ಸರ್ಕಾರದ ಜವಾಬ್ದಾರಿಯುತ ವಕ್ತಾರರ ಅಧಿಕೃತ ಹೇಳಿಕೆ ಮತ್ತು ಆಜ್ಞೆಗಳನ್ನು, ಆರ್ಥಿಕ ವಿಧಾನಗಳಿಂದ ಜರ್ಮನ್ ಯೆಹೂದ್ಯರನ್ನು ಸರ್ವನಾಶಗೊಳಿಸಲು ಹಮ್ಮಿಕೊಂಡಿರುವ ಯೋಜನೆಯ ಸಮೇತ, ಯಥಾವತ್ತಾಗಿ ಮರುಪ್ರಕಟಿಸುವುದರಲ್ಲಿ ಹಾಗೂ ಅವುಗಳ ಮೇಲೆ ಟಿಪ್ಪಣಿ ಬರೆಯುವುದರಲ್ಲಿ ತೃಪ್ತರಾಗಿದ್ದಾರೆ . . . ನನ್ನ ಬಗ್ಗೆ ಈ ತೆರನಾದ ಹೇಳಿಕೆ ಹೊರಡಿಸುವುದರ ಮೊದಲು ನನ್ನ ಮಾತಿನ ಖಚಿತರೂಪ ಪಡೆಯುವುದು ನಿಜಕ್ಕೂ ಅಕ್ಯಾಡಮಿಗೆ ಸುಲಭವಾಗಬಹುದಾಗಿತ್ತು. ಜರ್ಮನ್ ವೃತ್ತಪತ್ರಿಕೆಗಳು ಬೇಕೆಂದೇ ನನ್ನ ಮಾತಿನ ವಿಕೃತರೂಪವನ್ನು ಪ್ರಕಟಿಸಿವೆ. ಇಂದು ಬಾಯಿಗೆ ಕಲ್ಲಿ ಬಿಗಿಯಲಾದ ಮತ್ತು ಕಣ್ಣುಗಳಿಗೆ ಕಪ್ಪಡಿ ಕಟ್ಟಲಾದ ಈ ಪತ್ರಿಕೆಗಳಿಂದ ಬೇರೆ ಏನನ್ನು ತಾನೇ ನಿರೀಕ್ಷಿಸಲಾದೀತು ? ನಾನು ಪ್ರಕಟಿಸಿರುವ ಪ್ರತಿಯೊಂದು ಪದವನ್ನೂ ಸಮರ್ಥಿಸಲು ಸಿದ್ಧನಿದ್ದೇನೆ. ಇದಕ್ಕೆ ಜವಾಬಾಗಿ ಅಕ್ಯಾಡಮಿಯು ನನ್ನ ಈ ಹೇಳಿಕೆಯನ್ನು ಅದರ ಸದಸ್ಯರಿಗೆ ಮಾತ್ರವಲ್ಲ, ಯಾವ ಜರ್ಮನ್ ಸಾರ್ವಜನಿಕರ ಮುಂದೆ ನನ್ನ ಮೇಲೆ ಮಿಥ್ಯಾಪವಾದ ಹೇರುವಲ್ಲಿ ಇದೇ ಅಕ್ಯಾಡಮಿಯ ವಿಶೇಷ ಕೈವಾಡವಿತ್ತೊ ಆ ಸಾರ್ವಜನಿಕರಿಗೆ ಕೂಡ, ತದ್ವತ್ತಾಗಿ ಒಪ್ಪಿಸಬೇಕೆಂದು ಅಪೇಕ್ಷಿಸುತ್ತೇನೆ."

ಕೈತವಕೊಂಡೆಯ ಕೃತ್ಯಗಳಲ್ಲಿ ತಾವು ಭಾಗವಹಿಸಿಲ್ಲವೆಂಬ ಈ ಸ್ಪಷ್ಟ ನಿರಾಕರಣೆ ಮತ್ತು

ನಾಗರಿಕ ಮಂದಿಗೆ ಪ್ರಸಕ್ತ ಜರ್ಮನ್ ಸರ್ಕಾರದ ಆಶ್ರಯದಲ್ಲಿ ಬದುಕುವುದು ಅಸಾಧ್ಯವೆಂಬ ತಮ್ಮ ನಿಲವಿನ ಖಚಿತ ನಿರೂಪಣೆ ಅಕ್ಯಾಡಮಿಯ ಕೊರಳಿಗೆ ಮುಳ್ಳಾಗಿ ಕುತ್ತಿದುವು. ಇಕ್ಕುಳ ಹಿಡಿತದ ಮುಲುಮುಲುತನದಿಂದ ಪಾರಾಗಲು ಅದು ಚಮತ್ಕಾರ ಭಾಷೆಗೆ ಶರಣು ಹೋಯಿತು.

ಅಕ್ಯಾಡಮಿ ಏಪ್ರಿಲ್ ೧೧ರಂದು ಐನ್‌ಸ್ಟೈನರಿಗೆ ಬರೆದ ಉತ್ತರದಲ್ಲಿ ತನ್ನ ಸುದ್ದಿಮೂಲಗಳ ಪೈಕಿ ಪ್ರಧಾನತಃ ಫ್ರೆಂಚ್ ಹಾಗೂ ಬೆಲ್ಜಿಯನ್ ಪತ್ರಿಕೆಗಳು ಸೇರಿವೆ, ಕೇವಲ ಜರ್ಮನ್ ಪತ್ರಿಕೆಗಳು ಮಾತ್ರ ಅಲ್ಲವೆಂದು ತಿಳಿಸಿತು. ಐನ್‌ಸ್ಟೈನರ ಹೇಳಿಕೆಯಲ್ಲಿದ್ದ ನಿರಾಕರಣೆಯನ್ನು ಒಪ್ಪಿಕೊಳ್ಳಬಹುದಾದರೂ ಪರರಾಷ್ಟ್ರಗಳಲ್ಲಿ ವಿನಾ ಕಾರಣ ಜರ್ಮನಿಯ ವಿರುದ್ಧ ಅಪಪ್ರಚಾರ ಅವಹೇಳನೆ ಖಂಡನೆಗಳು ಸಾರೋದ್ಧಾರವಾಗಿ ಪ್ರಸಾರವಾಗುತ್ತಿದ್ದಾಗ ಅಕ್ಯಾಡಮಿಯ ಗಣ್ಯ ಸದಸ್ಯರಲ್ಲೊಬ್ಬರಾದ ಇವರು ಅವನ್ನು ಖಂಡಿಸದೆ ಕರ್ತವ್ಯಚ್ಯುತರಾಗಿದ್ದಾರೆ. ಇಷ್ಟೇ ಅಲ್ಲ, ಹೊರನಾಡುಗಳಲ್ಲಿ ಇವರು ಜರ್ಮನ್ ನೀತಿಯನ್ನು ಥಳಿಸಿದ್ದಾರೆ. ಇವರಂಥ ಪ್ರಪಂಚವಿಖ್ಯಾತ ಪುರುಷರ ಈ ಮಾತುಗಳನ್ನು ಜರ್ಮನಿಯ ಶತ್ರುಗಳು ಪ್ರಸಕ್ತ ಜರ್ಮನ್ ಸರ್ಕಾರದ ವಿರುದ್ಧ ವಾಗಿ ಮಾತ್ರವಲ್ಲ, ಸಮಗ್ರ ಜರ್ಮನ್ ಜನತೆಯ ವಿರುದ್ಧವಾಗಿ ಕೂಡ ದುರುಪಯೋಗಪಡಿಸಿ ಕೊಳ್ಳುವುದು ಖಂಡಿತ. ಈ ಧಾಟಿಯಲ್ಲಿ ಅಕ್ಯಾಡಮಿ ತನ್ನ ಅಸಂತೋಷ ಅಸಮ್ಮತಿಗಳನ್ನು ವ್ಯಕ್ತ ಪಡಿಸಿತು.

ಮಾರ್ಚ್ ೨೮ರಂದು ಐನ್‌ಸ್ಟೈನ್ ರವಾನಿಸಿದ ರಾಜಿನಾಮೆ ಕಾಗದಕ್ಕೆ ಅಕ್ಯಾಡಮಿ 'ಖಾರ' ವಾಗಿ ಜವಾಬು ನೀಡಿತು. ಏಪ್ರಿಲ್ ೭ರಂದು ಬರೆದ ಈ ಕಾಗದವನ್ನು ಐನ್‌ಸ್ಟೈನರ ಲೈಡನ್ (ಹಾಲೆಂಡ್) ವಿಳಾಸಕ್ಕೆ ರವಾನಿಸಲಾಯಿತು :

"ಘಟನೆಗಳ ವಿಪರ್ಯಾಸಗಳನ್ನು ಅಕ್ಯಾಡಮಿ ತೀವ್ರ ವಿಷಾದದಿಂದ ಗಮನಿಸಿದೆ. ಪರನಾಡು ಗಳಲ್ಲಿ ಜರ್ಮನಿಯ ಬಗೆಗೆ ದೋಷಸಹಿತ ಅಭಿಪ್ರಾಯಗಳನ್ನೂ ಆಧಾರರಹಿತ ಸಮಾಚಾರ ಗಳನ್ನೂ ಬಿತ್ತುತ್ತ ಜರ್ಮನ್ ಜನಾಂಗಕ್ಕೆ ಅಪಾರ ಹಾನಿ ಉಂಟುಮಾಡುತ್ತಿರುವ ದುಷ್ಟಕೂಟ ವೊಂದಿದೆ. ಇದರ ಕೃತ್ಯ ಜರ್ಮನಿಯಲ್ಲಿಯ ವಾಸ್ತವ ಪರಿಸ್ಥಿತಿಗಳ ಹಾಗೂ ಘಟನೆಗಳ ಅರಿವು ಇಲ್ಲದೆ, ಆಂಶಿಕವಾಗಿಯಾದರೂ, ನಡೆದಿದೆ ಎಂಬುದು ಸುಸ್ಪಷ್ಟ. ಜರ್ಮನ್ನರೊಡನೆ ಅನೇಕ ವರ್ಷಗಳ ಒಡನಾಟ ಮತ್ತು ಈ ಸಂಸ್ಥೆಯೊಂದಿಗೆ ಅನೇಕ ವರ್ಷಗಳ ಸದಸ್ಯತ್ವ ಯಾರನ್ನು ಜರ್ಮನ್ ಸಂಸ್ಕೃತಿ ಹಾಗೂ ಚಿಂತನ ವಿಧಾನಗಳ ಬಗ್ಗೆ ಸುಪರಿಚಿತರನ್ನಾಗಿ ಮಾಡಬೇಕಾಗಿತ್ತೋ ಆ ಅತ್ಯುನ್ನತ ವೈಜ್ಞಾನಿಕ ಪ್ರಭುತ್ವದ ವ್ಯಕ್ತಿಯೇ ಮೇಲೆ ಹೇಳಿರುವ ದುಷ್ಟಕೂಟದೊಡನೆ ಸಹವರ್ತಿ ಸಲು ಈ ಗಳಿಗೆಯನ್ನು ಆಯ್ದುಕೊಂಡರಲ್ಲ ಎಂಬುದು ಅಕ್ಯಾಡಮಿಯ ತೀವ್ರ ವಿಷಾದದ ಮುಖ್ಯ ಕಾರಣ . . ." ಕಾಗದ ಮುಂದುವರಿಯುತ್ತ, ಈ ಅಕ್ಯಾಡಮಿಯ ಬಳಗದವರಾದ ಐನ್‌ಸ್ಟೈನ್, ಅವರ ರಾಜಕೀಯ ಒಲವು ನಿಲವುಗಳೇನಿದ್ದರೂ, ಜರ್ಮನಿಯ ವೈರಿಗಳ ಎದುರು ಹೊರನಾಡು ಗಳಲ್ಲಿ ಸನೀನು ಹಿರಿದು ನಿಂತಾರೆಂದು ನಿರೀಕ್ಷಿಸಲಾಗಿತ್ತು. ರಾಡಿ ಎರಚಿಕೆಯ ಮತ್ತು ಚಾರಿತ್ರ್ಯ ವಧೆಯ ಈ ದುರ್ದಿನಗಳಂದು, "ಜರ್ಮನ್ ಜನತೆಯ ಬಗೆಗೆ ಒಂದು ಒಳ್ಳೆಯ ಮಾತು, ಅದೂ ನಿರ್ದಿಷ್ಟವಾಗಿ ನಿಮ್ಮಿಂದ, ಬಂದುದಾಗಿದ್ದರೆ, ಅದರಿಂದ ವಿದೇಶಗಳಲ್ಲಿ ಮಹತ್ಪರಿಣಾಮವಾಗಿರು ತ್ತಿತ್ತು. ಇದರ ಬದಲಾಗಿ ನಿಮ್ಮ ಸಾಕ್ಷ್ಯ, ಪ್ರಸಕ್ತ ಸರ್ಕಾರದ ಎದುರಾಗಿ ಮಾತ್ರವಲ್ಲ, ಸಮಗ್ರ ಜರ್ಮನ್ ಜನತೆಯ ಎದುರಾಗಿ ಕೂಡ, ಶತ್ರುಗಳು ಕತ್ತಿ ಮಸೆಯಲು ಎಡೆಮಾಡಿಕೊಟ್ಟಿದೆ."

ಐನ್‌ಸ್ಟೈನ್ ಏಪ್ರಿಲ್ ೧೨ರಂದು ಬರೆದ ಮೊನಚು ಕಿಡಿನುಡಿ ಈ ವ್ಯಥಾವಾಗ್ವಿಲಾಸ ಮತ್ತು ವಾಗ್ವಿಲಾಪಗಳನ್ನು ಕೊನೆಗೊಳಿಸಿತು : "ಇದೇ ೭ನೆಯ ತಾರೀಕಿನ ನಿಮ್ಮ ಕಾಗದ ಬಂದಿದೆ.

ಅದರಲ್ಲಿ ಪ್ರದರ್ಶಿತವಾಗಿರುವ ಮಾನಸಿಕ ಧೋರಣೆಗೆ ನಾನು ತೀವ್ರ ವಿಷಾದಪಡುತ್ತೇನೆ. ವಾಸ್ತವಾಂಶದ ಬಗ್ಗೆ ನಾನಿಷ್ಟು ಮಾತ್ರ ಉತ್ತರ ಬರೆಯಬಲ್ಲೆ : ನನ್ನ ವರ್ತನೆ ಕುರಿತು ನೀವು ಹೇಳಿರುವುದು, ಅದರ ತಳದಲ್ಲಿ, ಈ ಮೊದಲೇ ಪ್ರಕಟಿಸಿರುವುದರ ಇನ್ನೊಂದು ರೂಪ ಮಾತ್ರ. ಅದರಲ್ಲಿ ನನ್ನ ಮೇಲೆ ಜರ್ಮನ್ ಜನಾಂಗದ ವಿರುದ್ಧ ಕೈತವಕೊಂಡೆಯ ಪ್ರಸಾರ ಮಾಡಿರುವುದಾಗಿ ದೋಷಾರೋಪಣೆ ಮಾಡಿದ್ದೀರಿ. ಇದನ್ನು ಈಗಾಗಲೇ ನಾನು, ನನ್ನ ಹಿಂದಿನ ಕಾಗದದಲ್ಲಿ, ಮಿಥ್ಯಾಪವಾದವೆಂದು ತಿರಸ್ಕರಿಸಿದ್ದೇನೆ. ನನ್ನಿಂದ 'ಜರ್ಮನ್ ಜನತೆಯ ಬಗೆಗೆ ಒಂದು ಒಳ್ಳೆಯ ಮಾತು' ಬಂದಿದ್ದರೆ ಅದು ವಿದೇಶಗಳಲ್ಲಿ ಮಹತ್ಪರಿಣಾಮಕಾರಿಯಾಗಿರುತ್ತಿತ್ತು ಎಂಬುದಾಗಿ ಕೂಡ ನೀವು ಟೀಕಿಸಿದ್ದೀರಿ. ಇದಕ್ಕೆ ನನ್ನ ಉತ್ತರವಿದು : ನೀವು ಸೂಚಿಸಿದಂಥ ಆ ಸೂಕ್ಷ್ಮವು ನನ್ನ ಜೀವಮಾನಪರ್ಯಂತ ನಾನು ಎತ್ತಿಹಿಡಿದುಕೊಂಡು ಬಂದಿರುವ ನ್ಯಾಯದ ಹಾಗೂ ಸ್ವಾತಂತ್ರ್ಯದ ಎಲ್ಲ ಕಲ್ಪನೆಗಳ ನೇರ ನಿರಾಕರಣೆಗೆ ಸಮಾನವಾಗಿರುತ್ತಿತ್ತು. ಅಂಥ ಸಾಕ್ಷ್ಯ ನಿಮ್ಮ ಪ್ರಕಾರ ಜರ್ಮನ್ ಜನಾಂಗಕ್ಕೆ ಶುಭವೆಸಗಿರುತ್ತಿತ್ತು. ಆದರೆ ಇದು ಸರಿ ಅಲ್ಲ. ತದ್ವ್ಯತಿರಿಕ್ತವಾಗಿ ಜರ್ಮನ್ ಜನಾಂಗಕ್ಕೆ ನಾಗರಿಕ ಪ್ರಪಂಚದಲ್ಲಿ ಗೌರವಾನ್ವಿತ ಸ್ಥಾನವನ್ನು ಗೆದ್ದು ಕೊಟ್ಟಿರುವ ಭಾವನೆಗಳನ್ನೂ ತತ್ತ್ವಗಳನ್ನೂ ಹತ್ತಿಕ್ಕಲು ಕಾತರರಾಗಿರುವವರ ಉದ್ದೇಶಸಾಫಲ್ಯಕ್ಕೆ ಮಾತ್ರ ಆ ಸಾಕ್ಷ್ಯ ಸಹಾಯಕವಾಗಿರುತ್ತಿತ್ತು. ವರ್ತಮಾನ ಸನ್ನಿವೇಶಗಳಲ್ಲಿ ಅಂಥ ಸಾಕ್ಷ್ಯವನ್ನು ನೀಡಿದುದಾಗಿದ್ದರೆ ಆಗ ನಾನು ಪರೋಕ್ಷವಾಗಿಯಾದರೂ ಒಳ್ಳೆಯ ನಡವಳಿಕೆಗಳ ಪಾಶವೀಕರಣಕ್ಕೂ ಪ್ರಚಲಿತ ಸಾಂಸ್ಕೃತಿಕ ಮೌಲ್ಯವೆಲ್ಲವುಗಳ ನಾಶಕ್ಕೂ ಕಾರಣಕರ್ತನಾಗಿರುತ್ತಿದ್ದೆ. ಈ ಕಾರಣಕ್ಕಾಗಿಯೇ ನಾನು ಅಕ್ಯಾಡಮಿಯಿಂದ ಹೊರಬರಲು ಕಡ್ಡಾಯವಾಗಿ ನಿರ್ಧರಿಸಿದ್ದಾಗಿದೆ. ನಾನು ಅದೆಷ್ಟು ಯೋಗ್ಯ ಕಾರ್ಯ ಮಾಡಿದೆ ಎಂಬುದು ಈಗ ನಿಮ್ಮ ಕಾಗದದಿಂದ ಸುಸ್ಪಷ್ಟವಾಗಿದೆ."

ಬರ್ಲಿನ್ನಿನಲ್ಲಿ ಯೆಹೂದ್ಯಯಜ್ಞದ ಅಂಗವಾಗಿ ಐನ್‌ಸ್ಟೈನರ ಬ್ಯಾಂಕ್ ಖಾತೆಯನ್ನು ರದ್ದುಗೊಳಿಸಿ ಅವರ ಉಳಿತಾಯ ಮೊಬಲಗನ್ನು ಮುಟ್ಟುಗೋಲು ಹಾಕಲಾಯಿತು. ಕಾಪುತ್ ಆಶ್ರಮದ ಮೇಲೆ ದಾಳಿ ಇಟ್ಟು 'ಕಮ್ಯೂನಿಸ್ಟ್ ಪಿತೂರಿಗಾರರ' ರಹಸ್ಯಪತ್ರಗಳನ್ನೂ ಮಾರಕಾಸ್ತ್ರಗಳನ್ನೂ ವಶಪಡಿಸಿಕೊಳ್ಳಲಾಯಿತು. ಅವು ಏನು ? ಅರ್ಥವಾಗದ ಗಣಿತಪ್ರತೀಕಗಳು ಮತ್ತು ಬ್ರೆಡ್ ಕೊಯ್ಯಲು ಬಳಸುತ್ತಿದ್ದ ಬಾಕು !

ಸುದ್ದಿ ಕೇಳಿದ ಐನ್‌ಸ್ಟೈನ್, ವಿಷಾದದ ನಗುಬೀರಿ ನುಡಿದರು, "ನನ್ನ ಬೇಸಗೆ ನಿವಾಸಕ್ಕೆ ಗತ ವರ್ಷಗಳಲ್ಲಿ ದಾಳಿ ಇಡುತ್ತಿದ್ದವರು ಖಾಸಗಿ ಸಭ್ಯ ಮಂದಿ."

## ಯೂರೋಪಿನಲ್ಲಿ ಸಂಜೆ ನೇಸರು

ಸತ್ಯನಿಗೆ ಧರೆಯೆಲ್ಲ ಮಸ್ತಕವನೆರಗುವುದು
ಹೆತ್ತತಾಯಿ ಮಗನ ಕರೆವಂತೆ—ಸ್ವರ್ಗದವ-
ರಿತ್ತಬಾರೆಂಬರು, ಪರಮಾರ್ಥ

ಬೆಲ್ಜಿಯಮ್ಮಿನ ರಾಣಿ ಮತ್ತು ಐನ್‌ಸ್ಟೈನ್ ನಡುವೆ ಪರಸ್ಪರ ತುಂಬ ಆದರ, ಅಭಿಮಾನ ಮತ್ತು ಗೌರವ. ಅನೇಕ ಸಂಗೀತ ಹಾಗೂ ಸಾಹಿತ್ಯ ಕಾರ್ಯಕ್ರಮಗಳಲ್ಲಿ ಇವರು ಒಟ್ಟಾಗಿ ಭಾಗವಹಿಸಿ ಸಂತೋಷಿಸುತ್ತಿದ್ದರು. ಇದೊಂದು ಆಜನ್ಮಾಂತ ಸ್ನೇಹ ಸಂಬಂಧ, ಋಣಾನುಬಂಧ. ೧೯೩೩ರಲ್ಲಿ ಐನ್‌ಸ್ಟೈನ್ ಹಠಾತ್ತಾಗಿ ಯೂರೋಪಿನ ಮಧುರ ಬಾಂಧವ್ಯವನ್ನು ಕಳೆದುಕೊಂಡು ದೂರದ ಅಮೆರಿಕಕ್ಕೆ ವಲಸೆ ಹೋಗಿ ಅಲ್ಲಿ ನೆಲಸಬೇಕಾಯಿತು. ಆಗ ಇವರ ಮನಸ್ಸು ರಾಣಿಯ ಸುಸಂಸ್ಕೃತ ಹಾಗೂ

ಸ್ನೇಹಶೀಲ ಸಾಮೀಪ್ಯವನ್ನು ಎಂದಿಗಿಂತ ಹೆಚ್ಚಾಗಿ ಮೆಲುಕುಹಾಕತೊಡಗಿತು. ತಮ್ಮ ಸದ್ಭಾವನೆಗಳನ್ನು ಐನ್‌ಸ್ಟೈನ್ ಒಂದು ಕಗ್ಗದಲ್ಲಿ ಹೆಪ್ಪುಗಟ್ಟಿಸಿ ಅದನ್ನು ರಾಣಿಗೆ ಕಳಿಸಿದರು :

ವಿಕಸಿಸಿಹುದೀ ಪವಿತ್ರೋದ್ಯಾನದಲ್ಲೊಂದು
ಮರವಿದನು ಮುದದಿಂದ ನೆಟ್ಟವರು ನೀವೆಂದು
ಗೌರವವನರ್ಪಿಸಲು ನಿಮಗೆ ಕಳಿಸುತಿದೆ ಮರ
ಹಸುರು ಕುಡಿ, ಸ್ವೀಕರಿಸಿ—ಕೀಳಲಾಗದು ಬೇರ !

ರಾಣಿ ಇದೇ ಧಾಟಿಯಲ್ಲಿ ಉತ್ತರ ಬರೆದರು. Einstein ಪದವನ್ನು Ein Stein ಎಂದು ಒಡೆದರೆ ಅರ್ಥ 'ಏಕ ಶಿಲೆ' ಎಂದಾಗುತ್ತದೆ (ಜರ್ಮನ್ ಭಾಷೆಯಲ್ಲಿ) :

ನೆಲೆನಿಲ್ಲಬೇಕಾದ ಮರದ ಶುಭಸಂದೇಶ-
ವನು ಹಸುರು ಕುಡಿ ಸಲ್ಲಿಸಿಹುದು ಬಲು ಸಂತೋಷ !
ತುಂಬು ಹೃದಯದ ಮೆಚ್ಚು ನುಡಿಯ ನೇಹಿಗನಿಂದ
ಬಂದ ಕುಡಿ ತಂದಿಹುದು ಸವಿನೆನಪು ಆನಂದ
ಕೂಗಿ ಹೇಳುವೆ ನನ್ನ ಸಂತೃಪ್ತಭಾವವನು
ಬೆಟ್ಟಕೆ ಕಡಲ್ಗೆ ಮೇಣಾಗಸಕೆ ಹರ್ಷವನು
ಗಟ್ಟಿ ಕಲ್ಲುಗಳು ಕಂಪಿಸತೊಡಗುತಿವೆಯಿಂದು
ನಾ ಪ್ರಾರ್ಥಿಸುವೆ 'ಏಕ ಶಿಲೆ' ಗಟ್ಟಿ ನಿಲಲೆಂದು

ಬೆಲ್ಜಿಯಮ್ಮಿನ ರಾಜ ಮತ್ತು ರಾಣಿ ಐನ್‌ಸ್ಟೈನ್ ಕುಟುಂಬದ ಆತ್ಮೀಯ ಮಿತ್ರರು. ಬರ್ಲಿನ್ ದಿನಗಳಂದು ಇವರು ಒಮ್ಮೊಮ್ಮೆ ಬೆಲ್ಜಿಯಮ್ಮಿಗೆ ಹೋಗಿ ರಾಜದಂಪತಿಗಳೊಡನೆ ಸಂತೋಷ ವಾಗಿದ್ದು ಮರಳುತ್ತಿದ್ದುದು ವಾಡಿಕೆ. ಸಂಗೀತ ಸಾಹಿತ್ಯಗಳಲ್ಲಿ ಆಸಕ್ತರಾಗಿದ್ದ ತುಂಬು ಹೃದಯದ ಆತಿಥೇಯರ ಒಡನಾಟ ಸರಳ ಸ್ವಭಾವದ ಐನ್‌ಸ್ಟೈನರಿಗೆ ಪ್ರಿಯವಾಗಿತ್ತು. ಎಂದೇ ೧೯೩೩ರಲ್ಲಿ ಇವರ ಮೇಲೆ ಅನಾಥ ಪರಿಸ್ಥಿತಿ ಹಠಾತ್ತಾಗಿ ಎರಗಿದಾಗ ಇವರು ಬೆಲ್ಜಿಯಮ್ಮಿನಲ್ಲಿ ಆಶ್ರಯ ಪಡೆಯಲು ನಿರ್ಧರಿಸಿದರು. ರಾಜರಾಣಿಯರಿಗೆ ಇದು ಅಭಿಮಾನದ ಸಂಗತಿ. ಆದರೆ ಸನ್ನಿವೇಶ ಅತ್ಯಂತ ಸ್ಫೋಟಕವಾಗಿತ್ತು : ಮಹಾದೈತ್ಯರಾಷ್ಟ್ರ ಜರ್ಮನಿಯ ಪರಮವೈರಿಯಾದ ಐನ್‌ಸ್ಟೈನರ ಜೀವರಕ್ಷಣೆ. ಜರ್ಮನಿಯ ಮಗ್ಗುಲನಾಡು ಬೆಲ್ಜಿಯಮ್—ಆ ಪರ್ವತದೆದುರು ಇದೊಂದು ಗುಡ್ಡ. ನಾಟ್ಸೀ ಹಂತಕನೊಬ್ಬ ಸಲೀಸಾಗಿ ಬೆಲ್ಜಿಯಮ್ ಪ್ರವೇಶಮಾಡಿ ಐನ್‌ಸ್ಟೈನರನ್ನು ಕೊಂದು ಜರ್ಮನಿಗೆ ಓಡಿಹೋಗುವ ಸಂಭಾವ್ಯತೆಯನ್ನು ಖಂಡಿತ ನಿರೀಕ್ಷಿಸಬೇಕಾದದ್ದೇ. ಇಂಥ 'ಸಾಹಸ ಕ್ರಿಯೆ'ಗೆ ಜರ್ಮನಿಯಲ್ಲಿ ಅಧಿಕೃತ ಪುರಸ್ಕಾರ ಲಭಿಸುವುದು ಖಾತ್ರಿ.

ತಮ್ಮ ವಶದಲ್ಲಿದ್ದ ಅನರ್ಘ್ಯ ರತ್ನದ ಅಮೂಲ್ಯತೆಯ ಅರಿವು ರಾಜದಂಪತಿಗಳಿಗೆ ಚೆನ್ನಾಗಿತ್ತು. ಮೇಲಾಗಿ ಇದು ರಾಷ್ಟ್ರದ ಪ್ರತಿಷ್ಠೆಯ ಪ್ರಶ್ನೆ ಕೂಡ ; ಜರ್ಮನ್ ದೈತ್ಯನಿಗೆ ಅಂಜಿಕೊಂಡು ಬೆಲ್ಜಿಯನ್ ಅಣುಗನಿರಬೇಕೆ ? ದೂರದ ಮೂಲೆಯ ಹಳ್ಳಿಯೊಂದರಲ್ಲಿ ಐನ್‌ಸ್ಟೈನ್ ದಂಪತಿಗಳಿಗೆ ಅನುಕೂಲವಾದ ಕೋಟೆನಿವಾಸವನ್ನು ಒದಗಿಸಲಾಯಿತು : ಪಟುಭಟರಿಂದ ಕಾವಲು, ಜನವಿರಳವಾದ ಆ ಹಳ್ಳಿಗೆ ಬಂದುಹೋಗುವವರ ಮೇಲೆ ಎಚ್ಚರಿಕೆಯ ನಿಗಾ, ಹಳ್ಳಿಗರಿಗೆಲ್ಲ ಈ ರಾಜಾತಿಥಿಗಳ ಬಗ್ಗೆ ಯಾರಿಗೂ ಯಾವ ಸುಳುಹನ್ನೂ ಕೊಡಕೂಡದೆಂಬ ಕಟ್ಟಪ್ಪಣೆ ಇವೆಲ್ಲ ಚಾಲೂ ಆದುವು. ಐನ್‌ಸ್ಟೈನರ ಸ್ವತಂತ್ರ ಜೀವಕ್ಕೆ ಈ 'ಪ್ರೇಮತುರಂಗವಾಸ' ತುಂಬ ಅಸಹನೀಯವಾಯಿತು. ಇವರ ನಿಷ್ಕಪಟ ವರ್ತನೆ ಅನೇಕ ವೇಳೆ ಕಾವಲುಗಾರರ ಪೂರ್ಣ ಕೌಶಲಕ್ಕೆ

ಸವಾಲಾಗುವಂತಿತ್ತು.

ಫಿಲಿಪ್ ಫ್ರ್ಯಾಂಕ್ ಒಮ್ಮೆ ಬೆಲ್ಜಿಯಮ್ ಮೂಲಕ ಹೋಗುತ್ತಿದ್ದರು. ಅಲ್ಲೆಲ್ಲೊ ಸನಿಹದ ಹಳ್ಳಿಯಲ್ಲಿ ಐನ್‌ಸ್ಟೈನ್ ತಂಗಿರುವರೆಂದು ಇವರಿಗೆ ಗೊತ್ತಿತ್ತು. ಆದರೆ ಸರಿಯಾದ ವಿಳಾಸ ಇರಲಿಲ್ಲ. ನಗರದಲ್ಲಿ ಯಾರಿಂದಲೂ ಉಪಯುಕ್ತ ಸಲಹೆ ಸಿಕ್ಕಲಿಲ್ಲ. ಒಂದು 'ಕೈ' ನೋಡಿಯೇ ಬಿಡೋಣವೆಂದು ಅಂದಾಜಿಗೆ ಒಂದು ಹಳ್ಳಿಯತ್ತ ಹೋದರು. ಅಲ್ಲಿಯ ಕಾವಲುಬಿಗಿತನದ ಬಗ್ಗೆ ಇವರಿಗೇನೂ ಗೊತ್ತಿರದಿದ್ದುದರಿಂದ ನೇರವಾಗಿ ಕಂಡಕಂಡವರೊಡನೆ ಐನ್‌ಸ್ಟೈನರ ವಾಸ್ತವ್ಯವನ್ನು ಕುರಿತ ಮಾಹಿತಿ ಕೇಳಿದರು. ಸರಿ, ಎಂದಿನಂತೆ ಬೋಳೆ ಸ್ವಭಾವದವನೊಬ್ಬ ನಿಜ ಸಂಗತಿ ತಿಳಿಸಿಯೇಬಿಟ್ಟ.

ಅತ್ತ ಕಡೆಗೆ ಫ್ರ್ಯಾಂಕ್ ಚಿಗರೆಯಂತೆ ಎಗರಿದರು. ಅಗೊ ! ದೂರದಲ್ಲಿ ಆ ಭವ್ಯ ಮಂದಿರದ ದೊಡ್ಡ ಅಂಗಳದಲ್ಲಿ ಎಲ್ಸಾ ಕುಳಿತಿದ್ದಾರೆ. ಗುರಿ ತಲಪಿದೆನೆಂಬ ಅತಿಶಯೋತ್ಸಾಹದಿಂದ ಫ್ರ್ಯಾಂಕ್ ನಡೆಯನ್ನು ಚುರುಕುಗೊಳಿಸಿದ್ದಾರೆ. ಆದರೆ ಅಷ್ಟರಲ್ಲೇ ಯಮದೂತರು ಇವರ ಮೇಲೆ ದಿಢೀರ್ ದಾಳಿಯಿಟ್ಟು ಎರಡು ರಟ್ಟೆಗಳನ್ನೂ ಉಕ್ಕಿನ ಹಿಡಿತಗಳಿಂದ ಬಿಗಿಮಾಡಿದರು. ಏನು ಅಪಾಯ ಸಂಭವಿಸಲಿತ್ತೋ ಎಂದು ಹೆದರಿ ಅಳುಕಿ ಎಲ್ಸಾ ಎದ್ದರು. ಫ್ರಾಂಕ್ ತಮ್ಮ ಪ್ರವರನ್ನು ಬೊಬ್ಬೆ ಹೊಡೆದು ಅರುಹಬೇಕಾಯಿತು. ಆಗ ಮಾತ್ರ ಇವರು ಯಮಪಾಶದಿಂದ (ಕಬಂಧ ಬಾಹುಗಳಿಂದ) ವಿಮೋಚಿತರಾಗುವುದು ಸಾಧ್ಯವಾಯಿತು.

ಕೊಂಚ ಕ್ಷಣಗಳಲ್ಲೇ ಐನ್‌ಸ್ಟೈನ್ ಮಾಳಿಗೆ ಮೆಟ್ಟಿಲಿಳಿದು ಬಂದು ಎಂದಿನ ಪ್ರಸನ್ನವದನ ದಿಂದ ಫ್ರ್ಯಾಂಕರಿಗೆ ಹಾರ್ದಿಕ ಸ್ವಾಗತ ಬಯಸಿದರು. ಅಕ್ಯಾಡಮಿಯೊಡನೆ ಅದಾಗ ತಾನೇ ಮುಗಿ ಸಿದ್ದ ಪತ್ರವ್ಯವಹಾರವನ್ನು ತೋರಿಸಿದರು. ಸಹಜವಾಗಿಯೇ ಮಾತು ಅನೇಕ ಮುಖ್ಯ ವ್ಯಕ್ತಿಗಳ ಸುತ್ತ ಹರಿಯಿತು. ಮ್ಯಾಕ್ಸ್ ಪ್ಲ್ಯಾಂಕ್ ಕೇಂದ್ರ ಪುರುಷ ಇವರನ್ನು ಪ್ರಶಂಸಿಸಿದಷ್ಟೂ ತೃಪ್ತಿ ಇಲ್ಲ, ಐನ್‌ಸ್ಟೈನರಿಗೆ. ಆ ಸಂದರ್ಭದಲ್ಲಿ ಪ್ಲ್ಯಾಂಕ್ ಹೇಗಿದ್ದಿರಬಹುದು ?

'ಪ್ರಶ್ಯನ್ ಪ್ರಜ್ಞೆ' ಎಂಬುದಾಗಿ ಐನ್‌ಸ್ಟೈನ್ ಹೆಸರಿಸಿದ್ದ 'ವಿಜ್ಞಾನ ಬೇರೆ, ರಾಜಕೀಯ ಬೇರೆ' ಎಂಬ ಭಾವದಿಂದ ಜರ್ಮನ್ ವಿದ್ಯಾವಂತರು, ತತ್ರಾಪಿ ವಿಜ್ಞಾನಿಗಳು, ಆವೃತರಾಗಿದ್ದರು. ಮ್ಯಾಕ್ಸ್ ಪ್ಲ್ಯಾಂಕ್ ಆದರೂ ಈ ಪ್ರಜ್ಞೆಯಿಂದ ಮುಕ್ತರಾಗಿರಲಿಲ್ಲ. ಇದರಲ್ಲಿ ಮೇಲುನೋಟಕ್ಕೆ ತಪ್ಪೇನೂ ಕಾಣಿಸದು—ನಮ್ಮ ಗೊಡವೆ ನಮಗೆ, ನಿಮ್ಮ ಗೊಡವೆ ನಿಮಗೆ, ದೇಶಹಿತದ ಪ್ರಶ್ನೆ ಎದುರಾದಾಗ ನಾವಿಬ್ಬರೂ ಒಂದೇ ಎಂಬ ಆದರ್ಶ ಸಹಕಾರ ಮನೋಭಾವ. ಇದರ ಅಂಗವಾಗಿ ವಿಜ್ಞಾನಿಗಳು, ಪ್ರಜಾಪ್ರಭುತ್ವಾತ್ಮಕವಾಗಿ ಚುನಾಯಿತವಾಗುವ ಸರ್ಕಾರದೊಂದಿಗೆ, ಸಹವರ್ತಿಸು ವುದು ಕರ್ತವ್ಯವೆಂದು ಬಗೆದಿದ್ದರು. ಎಂದೇ ಹಿಟ್ಲರ್ ಕೊನೆಗೆ ಛಾನ್ಸಲರ್ ಗದ್ದುಗೆ ಏರಿದಾಗ ಅಕ್ಯಾಡಮಿ ಮ್ಯಾಕ್ಸ್ ಪ್ಲ್ಯಾಂಕರ ಅಧ್ಯಕ್ಷತೆಯಲ್ಲಿ ಶುಭಸಂದೇಶವನ್ನು ಅನುಮೋದಿಸಿ ಆತನಿಗೆ ರವಾನಿಸಿತು : "ವಿಜ್ಞಾನಗಳ ಪ್ರಗತಿಗೋಸ್ಕರ ಇರುವ ಕೈಸರ್ ವಿಲ್‌ಹೆಲ್ಮ್ ಸಂಸ್ಥೆ ತನ್ನ ಭಕ್ತಿ ಪೂರ್ವಕ ಸದಾಶಯಗಳನ್ನು ಛಾನ್ಸಲರ್ ಮಹೋದಯರಿಗೆ ಅರ್ಪಿಸಲು, ಮತ್ತು ನವರಾಷ್ಟ್ರ ನಿರ್ಮಾಣ ಪುನಾರಚನಾಕಾರ್ಯದಲ್ಲಿ ಜರ್ಮನ್ ವಿಜ್ಞಾನ ಕೂಡ ಅವರೊಡನೆ ಸಂತೋಷದಿಂದ ಸಹಕರಿಸಲು ಸಿದ್ಧವಾಗಿದೆ ಎಂಬ ಸಂಸ್ಥೆಯ ಗಂಭೀರ ಪ್ರತಿಜ್ಞೆಯನ್ನು ಆಶ್ವಾಸಿಸಲು ಅನುಮತಿ ಕೋರುತ್ತದೆ."

ಹಿಟ್ಲರನ ಕಾರಸ್ಥಾನದ ಯಾವ ಸುಳುಹೂ ಆಗ ಪ್ಲ್ಯಾಂಕರಿಗೆ ತಿಳಿದಿರಲಾರದು. 'ಕುಹಕಿ ಯಲ್ಲದ ದೇವರೊಡನೆ' (=ನಿಸರ್ಗ) ವ್ಯವಹರಿಸುತ್ತಿದ್ದ ಈ ವಿಜ್ಞಾನಮತಿಗೆ ಕುಹಕಿ ಹಿಟ್ಲರನ

ಕುಟಿಲಮತಿಯ ಕಪಟನೀತಿ ಹೇಗೆ ತಾನೇ ಅರ್ಥವಾದೀತು ? ಈ ಅತಿ ಘೋರ ದುರಂತ ನಾಟಕದ ದೃಶ್ಯಗಳು ತಾಳವಾದ್ಯ ಕಛೇರಿಯ ಖಚಿತ ಗತಿಯಿಂದ ಕ್ರಮೇಣ ಅನಾವರಣಗೊಳ್ಳುತ್ತಿದ್ದಂತೆ ನ್ಯಾಯಸ್ಥ ಮತ್ತು ಕರುಣಾಮಯಿ ಪ್ಲ್ಯಾಂಕ್ ತೀವ್ರ ಮೂಕಶೋಕದಿಂದ ನರಳಬೇಕಾಯಿತು. ಮುಕ್ತಾಯ (ಪೂರ್ಣಾಹುತಿ) ಹಂತವೆಂದು ? ಹೇಗೆ ?

ಆರ್ಯ-ಅನಾರ್ಯ ಎಂಬ ಅವೈಜ್ಞಾನಿಕ ವಿಭೇದೀಕರಣದ ಯಾಂತ್ರಿಕ ಅನ್ವಯದಿಂದ ಜರ್ಮನ್ ಪ್ರತಿಭೆ, ಶಿಕ್ಷಣ, ಸಂಶೋಧನೆ ಎಲ್ಲವೂ ಮುರುಟುವುದು ಖಂಡಿತವೆಂದು ಅವರು ನಂಬಿದ್ದರು. ವಿಜ್ಞಾನಿಗಳು ಸರ್ಕಾರದ ಆಂತರಿಕ ವ್ಯವಸ್ಥೆ ವ್ಯವಹಾರಗಳಲ್ಲಿ ಹಸ್ತಕ್ಷೇಪಿಸಬಾರದು; ಹಾಗೆಯೇ ರಾಜಕಾರಣಿಗಳು ವಿಶ್ವವಿದ್ಯಾಲಯದ ಆಂತರಿಕ ವ್ಯವಸ್ಥೆ ವ್ಯವಹಾರಗಳಲ್ಲಿ ಮೂಗು ತೂರಬಾರದು ಎಂಬುದಾಗಿ ಪ್ಲ್ಯಾಂಕ್ ಭಾವಿಸಿದ್ದರು. ಈ ಮಹಾನುಭಾವನಿಗೆ ಈಗ ತಾವು ನೆಚ್ಚಿ ಕಾಪಾಡಿಕೊಂಡು ಬಂದಿದ್ದ ಆದರ್ಶಗಳ ಬುಡ ತಮ್ಮೆದುರೇ ತೇದುಹೋಗುತ್ತಿರುವುದು ಕಂಡು ಬಲು ಸಂಕಟವಾಯಿತು. ಪ್ರಶ್ಯನ್ ವಿಜ್ಞಾನ ಅಕ್ಯಾಡಮಿಯ ಅಧ್ಯಕ್ಷ, ಐನ್‌ಸ್ಟೈನರಿಗೆ ಮಾತ್ರ ದ್ವಿತೀಯರಾದ, ಇಪ್ಪತ್ತನೆಯ ಶತಮಾನದ ವಿಜ್ಞಾನಮೇರು, ಎಪ್ಪತ್ತೈದರ ವೃದ್ಧ ಭೀಷ್ಮಾಚಾರ್ಯ ಮ್ಯಾಕ್ಸ್ ಪ್ಲ್ಯಾಂಕ್ ಸ್ವತಃ ಫ್ಯೂರೆರ್ ಅಡಾಲ್ಫ್ ಹಿಟ್ಲರನನ್ನು ಭೇಟಿ ಮಾಡಿ ತಮ್ಮ ಭಾವನೆಗಳನ್ನು ನಿವೇದಿಸಲು ಹೋದರು.

ಅಧಿಕಾರದ ಉಚ್ಛ್ರಾಯ ಪರ್ವ. ಸ್ವಾರ್ಥಸಾಧಕ ಕ್ರೂರಿಗಳ ಭದ್ರಕೋಟೆ. ಊರ್ಧ್ವಗಾಮಿ ಜರ್ಮನ್ ಪ್ರಜ್ಞೆಯ ಮೂರ್ತರೂಪ ತಾನೆಂಬ ಭ್ರಮೆ. ಯಾವುದೇ ಹಿತವಾಕ್ಯನ್ನು, ಎದುರುನುಡಿ ಅಂತಿರಲಿ, ಯಾರಿಂದಲೂ ಆಲಿಸಲಾರದಂಥ ವಿಕೃತ ಮನಸ್ಸು. ಇಂಥ ಮದೋನ್ಮತ್ತ ಹಿಟ್ಲರ್ ಸಾರ್ವಭೌಮ, ಸರ್ವಜ್ಞತ್ವದ ಮತ್ತು ಸರ್ವಶಕ್ತತ್ವದ ಶೃಂಗಸ್ಥಾನದಿಂದ, ವೃದ್ಧ ಮತ್ತು ರಾಜಕೀಯ ಅಧಿಕಾರರಹಿತ ವಿಜ್ಞಾನಿ ಪ್ಲ್ಯಾಂಕರಿಗೆ ಸಂದರ್ಶನ ಅನುಗ್ರಹಿಸಿದ್ದೇ ಒಂದು ಆಶ್ಚರ್ಯ.

ಅಟ್ಟಹಾಸದೆದುರು ಅಳಲ್ಲದ ಸೌಮ್ಯ ಪ್ಲ್ಯಾಂಕ್, ವೈಜ್ಞಾನಿಕವಾಗಿ ವಿಷಯವನ್ನು ವಿವರಿಸಿದರು. ಯೆಹೂದ್ಯರ ಅಥವಾ ಯಾವುದೇ ಜನವರ್ಗದ ಸಾರ್ವತ್ರಿಕ ನಿರ್ಮೂಲನ ಸರಿಯಲ್ಲವೆಂದು ವಾದಿಸಿದರು.

ಹಿಟ್ಲರ್, "ಎಲ್ಲ ಯೆಹೂದ್ಯರೂ ಬಾಲ್ಶೆವಿಕ್ಕರು. ಎಲ್ಲ ಬಾಲ್ಶೆವಿಕ್ಕರೂ ನಮ್ಮ ಆಜನ್ಮ ಪರಮ ವೈರಿಗಳು. ಆದ್ದರಿಂದ ಯಾವ ಯೆಹೂದ್ಯನೂ ಇಲ್ಲಿ ಸಲ್ಲಲಾರ."

"ಹೇಬರ್‌ನಂಥವರು ?" (ಫ್ರಿಟ್ಜ್ ಹೇಬರ್, ೧೮೬೮-೧೯೩೪, ನೊಬೆಲ್ ಪ್ರಶಸ್ತಿಧರ ಜರ್ಮನ್ ರಸಾಯನವಿಜ್ಞಾನಿ. ಜರ್ಮನ್ ರಾಷ್ಟ್ರಭಕ್ತ—ಉಗ್ರಭಕ್ತ ಕೂಡ. ಒಂದನೆಯ ಮಹಾ ಯುದ್ಧದ ವೇಳೆ ಈತನ ಪರಿಶ್ರಮಪೂರ್ವಕ ಸಂಶೋಧನೆಗಳಿಲ್ಲದಿದ್ದರೆ ಜರ್ಮನ್ ಸೇನಾಬಲ ಗಳಿಗೆ ಮದ್ದುಗುಂಡುಗಳ ಸರಬರಾಜೇ ಆಗುತ್ತಿರಲಿಲ್ಲ. ತರುವಾಯದ ದಿನಗಳಂದು ಜರ್ಮನಿಯ ಆರ್ಥಿಕತೆಯನ್ನು ಸುಧಾರಿಸಲು ರಸಾಯನವಿಜ್ಞಾನಕ್ಷೇತ್ರದಲ್ಲಿ ಕಳಕಳಿಯಿಂದ ದುಡಿದು ದೇಶಪ್ರಗತಿಗೆ ಕಾರಣನಾದ. ಜರ್ಮನ್ನರಲ್ಲಿ ಜರ್ಮನ್ನನಾಗಿದ್ದ ಹೇಬರನಾದರೂ ಯೆಹೂದ್ಯ ಮೂಲದವನಾಗಿದ್ದುದರಿಂದ ೧೯೩೩ರಲ್ಲಿ ಜರ್ಮನಿಯನ್ನು ತೊರೆಯಬೇಕಾಯಿತು —ಈತ ಆಗ ಅನಿಲಕೋಷ್ಠಗ್ರಾಸವಾಗದಿದ್ದುದು ಪುಣ್ಯ. ಪ್ಲ್ಯಾಂಕ್‌ರು ಹಿಟ್ಲರನೊಡನೆ ಮಾತಾ ಡಿದ್ದು ಹೇಬರ್-ನಿರ್ಗಮನ ಪೂರ್ವದಲ್ಲಿ).

ಹಿಟ್ಲರ್, "ನಾನು ಹೇಳುತ್ತೇನೆ : ಪ್ರಕಟಿತವಾಗಿ ಬಾಲ್ಶೆವಿಕ್ಕರಲ್ಲದ ಯೆಹೂದ್ಯರೆಲ್ಲರೂ ರಹಸ್ಯ

ವಾಗಿ ಬಾಲ್ಯವಿಕ್ಕರಾಗಿಯೇ ಇರುತ್ತಾರೆ." ಮುಂದುವರಿಯುತ್ತ ಪ್ಲ್ಯಾಂಕರಿಗೆ ಮಾತಾಡಲು ಅವಕಾಶವೀಯದಂತೆ ಹಿಟ್ಲರ್ ಗರ್ಜಿಸಿದ. "ಪ್ರಾಧ್ಯಾಪಕೋತ್ತಮರೇ ! ಇಂಥ ಕ್ಷುದ್ರ ಪರಿಗಣನೆಗಳಿಂದ ನನ್ನ ಹಿರಿ ಗುರಿ ಸಾಧನೆಯಲ್ಲಿ ವಿಚಲಿತನಾಗುವಂಥ ಅಳ್ಳೇಶಿ ಪುಟಗೋಶಿ ನಾನೆಂದು ಸರ್ವಥಾ ಭಾವಿಸಬೇಡಿ. ಪ್ರತಿಯೊಂದೂ, ಕೊನೆಯ ಅಕ್ಷರದವರೆಗೂ, ಕಟ್ಟುನಿಟ್ಟಾಗಿ ನಿರ್ವಹಿಸಲ್ಪಡುತ್ತದೆಂದು ತಿಳಿದಿರಿ."[೫೦]

ಅದೇ ಮೇ ೧೧ರಂದು (೧೯೩೩) ಅಕ್ಯಾಡಮಿಯ ಸದಸ್ಯರ ಮುಂದೆ ಪ್ಲ್ಯಾಂಕ್ ಮಾತಾಡುತ್ತಿದ್ದರು. "ಈ ಮುಂದಿನ ಮಾತುಗಳನ್ನು ನಾನು ಹೇಳುವಾಗ ಈ ಅಕ್ಯಾಡಮಿಯಲ್ಲಿರುವ ನನ್ನ ಎಲ್ಲ ಭೌತವಿಜ್ಞಾನಿ ಸಹೋದ್ಯೋಗಿಗಳ ಹಾಗೂ ಅಧಿಕ ಸಂಖ್ಯಾತ ಜರ್ಮನ್ ಭೌತವಿಜ್ಞಾನಿಗಳ ಅಭಿಪ್ರಾಯವನ್ನು ಪ್ರತಿಧ್ವನಿಸುತ್ತಿರುವೆನೆಂದು ಭಾವಿಸಿದ್ದೇನೆ : ಅತ್ಯಂತ ಉಜ್ಜ್ವಲ ಭೌತವಿಜ್ಞಾನಿಗಳ ಪೈಕಿ ಐನ್‌ಸ್ಟೈನ್ ಒಬ್ಬರು ಎಂದರೆ ಅದು ಪೂರ್ತಿ ಸತ್ಯವಲ್ಲ ; ನಿಜಸಂಗತಿ ಏನೆಂದರೆ ಐನ್‌ಸ್ಟೈನ್ ಒಬ್ಬರೇ ಭೌತವಿಜ್ಞಾನಿ. ನಮ್ಮ ಅಕ್ಯಾಡಮಿ ಪ್ರಕಟಿಸಿರುವ ಇವರ ಕೃತಿಗಳ ಮೂಲಕ ಭೌತವಿಜ್ಞಾನ ಇನ್ನಷ್ಟು ಆಳಕ್ಕೆ ಹೊಕ್ಕಂಥ ಅನುಭವ ಪಡೆದಿದೆ. ಈ ಅನುಭವಕ್ಕೆ ಸರಿಸಾಟಿಯಾಗಿ ನಿಲ್ಲಬಲ್ಲ ಇತರ ಸಿದ್ಧಿಗಳೆಂದರೆ ಯೋಹಾನೆಸ್ ಕೆಪ್ಲರ್ ಮತ್ತು ಐಸಾಕ್ ನ್ಯೂಟನ್ ಅವರುಗಳದು . . ."

ಯಾವ ದಿವಸ, ಎಲ್ಲಿ, ಯಾರ ಮುಂದೆ ಈ ಸತ್ಯ ಘೋಷಣೆ ? ಪ್ಲ್ಯಾಂಕ್ ಮಹಾಶಯರ ಎದೆಗಾರಿಕೆ ಎಣೆಯಿಲ್ಲದ ದಿಟ್ಟತನದ್ದು. ಹಿಟ್ಲರನ ಕರಾಳ ಆಡಳಿತಶಾಹಿಗೆ ಇವರೆಂದೂ ಬೆಂಬಲ ನೀಡಲಿಲ್ಲ. ಹಾಗೆಂದು ಜರ್ಮನಿಯಿಂದ ನಿಷ್ಕ್ರಮಿಸುವ ಇಚ್ಛೆಯನ್ನೂ ವ್ಯಕ್ತಪಡಿಸಲಿಲ್ಲ. ನೊಂದ ಜೀವಗಳಿಗೆ ನೆರಳು ಒದಗಿಸಲು ಸದಾ ಶ್ರಮಿಸುತ್ತಿದ್ದರು. ೧೯೩೭ರಲ್ಲಿ ಇವರು ಅಕ್ಯಾಡಮಿಯ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಡುವುದು ಅನಿವಾರ್ಯವಾಯಿತು. ಮುಂದೆ ಭುಗಿಲೆದ್ದ ಎರಡನೆಯ ಮಹಾಯುದ್ಧದ ದಿನಗಳಲ್ಲಿ ಉಬ್ಬರ ಕಡಲಿನ ನಡುವಿನ ದೀಪಸ್ತಂಭದಂತೆ ಶಾಂತಿ ದ್ವೀಪವಾಗಿ ಜರ್ಮನಿಯಲ್ಲೇ ಉಳಿದಿದ್ದರು. ಹಿರೇ ಮಗ ಬ್ರಿಟಿಷ್ ಬಾಂಬ್‌ದಾಳಿಗೆ ತುತ್ತಾಗಿ ಅಸುನೀಗಿದ. ಹಿಟ್ಲರನ ಕೊಲೆ ಸಂಚಿನಲ್ಲಿ ಸೇರಿದ್ದನೆಂಬ ಗುಮಾನಿ ಮೇರೆಗೆ ಪ್ಲ್ಯಾಂಕರ ಎರಡನೆಯ ಮಗನನ್ನು ಬಂಧಿಸಿ ಹತ ಮಾಡಿದರು (೧೯೪೪). ಇವೆಲ್ಲ ವೈಯಕ್ತಿಕ ದುರಂತಗಳನ್ನು ಮೀರಿ ಪ್ಲ್ಯಾಂಕರ ವ್ಯಕ್ತಿತ್ವ ಬೆಳೆಯಿತು. ೧೯೪೫ರಲ್ಲಿ ಜರ್ಮನಿ ಪತನವಾದಾಗ ಅಮೆರಿಕದ ಸೇನಾಬಲಗಳು ಈ ಮಹಾಮಾನವನನ್ನು (೮೭) ರಕ್ಷಿಸಿ ಸಕಲ ಗೌರವಾದರಪೂರ್ವಕವಾಗಿ ಸುರಕ್ಷಿತ ಸ್ಥಾನಕ್ಕೆ ಒಯ್ದುವು. ಮುಂದಿನ ಎರಡು ವರ್ಷಗಳ ಕಾಲ, ೧೯೪೭ರಲ್ಲಿ ಮಡಿಯುವ ತನಕ, ನೆಮ್ಮದಿಯ ಬಾಳು ಇವರದಾಗಿತ್ತು.[೫೧]

ಜರ್ಮನಿಯ ಮ್ಯಾಫಿಯಾದ (ದುಷ್ಟಕೂಟ) ದೃಷ್ಟಿಯಲ್ಲಿ ಐನ್‌ಸ್ಟೈನ್ ಒಬ್ಬ ರಾಜಕೀಯ ಖಳನಾಯಕ ಮತ್ತು ಜರ್ಮನಿಯನ್ನು ನಾಶಗೊಳಿಸಲು ಹೊಂಚುತ್ತಿದ್ದ ಪಾತಕಿಗಳ ಮುಖಂಡ ಎಂದಿತ್ತು. ಇದನ್ನು ಸಮರ್ಥಿಸಲು ಫ್ರ್ಯಾಂಕ್ ಒಂದು ಘಟನೆಯನ್ನು ಉಲ್ಲೇಖಿಸಿದ್ದಾರೆ.

ಬೆಲ್ಜಿಯಮ್ಮಿನ ಆ ಕುಗ್ರಾಮದಲ್ಲಿ ಐನ್‌ಸ್ಟೈನ್ ದಂಪತಿಗಳು ಜೀವಭಯವಿಲ್ಲದೆ ದಿನ ತಳ್ಳುತ್ತಿದ್ದರು. ಒಂದು ದಿನ ಅಜ್ಞಾತ ಜರ್ಮನ್ ಒಬ್ಬನಿಂದ ಐನ್‌ಸ್ಟೈನರಿಗೆ ತುರ್ತು ರಹಸ್ಯ ಪತ್ರ ಬಂದಿತು : ತನ್ನ ಪತ್ತೆಯನ್ನು ಸದ್ಯ ಬಯಲು ಮಾಡಲು ಸಾಧ್ಯವಾಗದು. ತನಗೆ ಒಡನೆ ಐನ್‌ಸ್ಟೈನರು ಭೇಟಿ ಕರುಣಿಸಬೇಕು. ಇವರಿಗೆ ಮಾತ್ರ ತಾನು ತಿಳಿಸಬಹುದಾದ ಅತಿ ಮಹತ್ತ್ವವಾದ ಮತ್ತು ಗೋಪ್ಯವಾದ ಮಾಹಿತಿ ತನ್ನಲ್ಲಿದೆ. ಇದಿಷ್ಟು ಆ ಪತ್ರದ ಸಾರ. ಇಂಥ ಯಾವ ಬೇಡಿಕೆಯೂ

ಐನ್‌ಸ್ಟೈನರಿಗೆ ಪರಿಗ್ರಾಹ್ಯವಲ್ಲ. ತೆರೆದ ಬಾಳಿನ ಇವರ ಮುಂದೆ ಗುಟ್ಟಿನ ಮಾತುಕತೆ ಎಲ್ಲಿ ಬರಬೇಕು ? ಪಿತೂರಿಗಾರರ ನವಸಂಚಿನ ಹೊಸ ಪರಿ ಇದಾಗಿರಬಹುದೆಂದು ಬಗೆದು ಎಲ್ಸಾ ಆ ಕಾಗದವನ್ನು ಕಸದ ಬುಟ್ಟಿಗೆಸೆದರು.

ಆದರೆ ಪತ್ರಪರಂಪರೆ ನಿಲ್ಲಲಿಲ್ಲ. ದುಂಬಾಲುಬಿದ್ದು ಆ ಅಜ್ಞಾತ ಬೇಡಿಕೊಂಡ : ಅತಿ ಮಹತ್ತ್ವಪೂರ್ಣವಾದದ್ದು, ಅತಿ ಗೋಪ್ಯವಾದದ್ದು, ಗೂಢಾದ್ಗೂಢತರವಾದದ್ದು, ಸತ್ಯಸ್ಯ ಸತ್ಯ ವಾದದ್ದು, ಖಂಡಿತ ಇದರಿಂದ ಐನ್‌ಸ್ಟೈನರಿಗೂ ಪ್ರಪಂಚಕ್ಕೂ ಪ್ರಯೋಜನ ಉಂಟು ಎಂಬು ದಾಗಿ ಕೂಡ ವಿವರಿಸಿದ. ಕೊನೆಗೆ ಎಲ್ಸಾ ಒಪ್ಪಿದರು : ತನ್ನೊಡನೆ ಆತ ಬಂದು ಮಾತಾಡತಕ್ಕದ್ದು, ತನ್ನೊಡನೆ ಹೇಳಲಾಗದ್ದು ಯಾವುದೂ ಐನ್‌ಸ್ಟೈನರಿಗೆ ಬೇಕಾಗಿಲ್ಲ, ತನ್ನ ನಿರ್ಧಾರದ ಮೇರೆಗೆ ಐನ್‌ಸ್ಟೈನ್ ಈ ಅಜ್ಞಾತನಿಗೆ ಭೇಟಿ ನೀಡಬಹುದು, ನೀಡದಿರಬಹುದು.

ಎಲ್ಸಾರ ಮುಂದೆ ಅಜ್ಞಾತ ಪ್ರತ್ಯಕ್ಷನಾದ. "ನಾನು ನಾಟ್ಸೀ ವಿಧ್ವಂಸಕಾರರ ಪಡೆಗಳಲ್ಲಿ ಸೈನಿಕ ನಾಗಿದ್ದವ. ಈಗ ಅವರಿಂದ ಸಿಡಿದು ಹೊರಕ್ಕೆ ಓಡಿ ಬಂದಿದ್ದೇನೆ. ನನ್ನ ವಶ ನಾಟ್ಸೀ ಪಕ್ಷದ ಸಮಸ್ತ ರಹಸ್ಯಗಳೂ ಭದ್ರವಾಗಿವೆ."

"ಅವುಗಳಿಂದ ನಮಗೇನಾಗಬೇಕು ?"

"ಚೆನ್ನಾಯಿತು ! ನಾಟ್ಸೀ ವೈರಿಗಳ ಪ್ರಪಂಚನಾಯಕರು ಪ್ರಾಧ್ಯಾಪಕ ಐನ್‌ಸ್ಟೈನರಲ್ಲವೇ ? ನಾಟ್ಸೀ ಪಕ್ಷದಲ್ಲಿ ಇವರನ್ನು ಹಾಗೆಂದೇ ತಿಳಿಯಲಾಗಿದೆ. ಈ ರಹಸ್ಯಗಳಿಂದ ತುಂಬ ಪ್ರಯೋಜನ ಉಂಟು. ಐವತ್ತು ಸಾವಿರ ಫ್ರ್ಯಾಂಕುಗಳ ವಿನಿಮಯಕ್ಕೆ ಇವನ್ನು ನಿಮಗೆ ಮಾರಲು ನಾನು ಸಿದ್ಧನಿದ್ದೇನೆ."

ಎಲ್ಸಾ ಮಾತು ಮುಗಿಸಿದರು, "ಐನ್‌ಸ್ಟೈನರಿಗೆ ಇಂಥ ವಿಷಯಗಳಲ್ಲಿ ಏನೂ ಆಸಕ್ತಿ ಇಲ್ಲ. ಬಂದ ದಾರಿಗೆ ಸುಂಕವಿಲ್ಲ—ನೀವು ಹಿಂತಿರುಗಬಹುದು."

ಇದೇ ಸುಮಾರಿಗೆ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳಲ್ಲಿ *The Brown Book of Hitler Terror* ಎಂಬ ಪುಸ್ತಕ ಪ್ರಕಟವಾಯಿತು. ಅದರ ರಟ್ಟಿನ ಮೇಲೆ ಎದ್ದು ಕಾಣುವಂತಿದ್ದ ಹೆಸರು: ಪ್ರೊಫೆಸರ್ ಆಲ್ಬರ್ಟ್ ಐನ್‌ಸ್ಟೈನ್. ಪ್ರಕಾಶನ ಸಮಿತಿಯ ಹೆಸರು : World Committee for the Victims of German Fascism. ಸಮಿತಿಯ ಅಧ್ಯಕ್ಷ ಪ್ರೊಫೆಸರ್ ಆಲ್ಬರ್ಟ್ ಐನ್‌ಸ್ಟೈನ್.

ಆಗಸ್ಟ್ ೩೧ರಂದು ಪುಸ್ತಕ ಮಾರುಕಟ್ಟೆಗೆ ಬಂದಿತು. ಅಂದೇ ನಾಟ್ಸೀ ಹಂತಕಾರಿಗಳು ಪ್ರೊಫೆಸರ್ ಥಿಯೊಡೊರ್ ಲೆಸ್ಸಿಂಗ್ ಎಂಬ ಜರ್ಮನ್ ಯೆಹೂದ್ಯನನ್ನು ಈತ ತಲೆಮರೆಸಿ ಕೊಂಡಿದ್ದ ಚೆಕೊಸ್ಲೊವಾಕಿಯಾ ರಾಷ್ಟ್ರದಲ್ಲಿ ಬೇಟೆಯಾಡಿ ವಧಿಸಿದ್ದರು. ಎಂದೇ ಪುಸ್ತಕದ ಪ್ರಕಟಣೆ ಅತಿ ಸಾಂಕೇತಿಕವಾಗಿತ್ತು. ಹಿಟ್ಲರನ ಹಾಗೂ ಅವನ ರಕ್ತ ಬೀಜಾಸುರಾನುಯಾಯಿಗಳ ನೆತ್ತರೋಕುಳಿಯ ಭೀಕರ ಚಿತ್ರವನ್ನು ಎಳೆಯೆಳೆಯಾಗಿ ಇದರಲ್ಲಿ ಬಿತ್ತರಿಸಲಾಗಿತ್ತು.

ನಾಟ್ಸೀಗೂಳಿಗೆ *Brown Book,* ಮುಖ್ಯವಾಗಿ ಐನ್‌ಸ್ಟೈನ್ ನಾಮ, ಕೆಂಪು ಪೂರ್ಣೇಸ್ ದರ್ಶನ ಮಾಡಿಸಿದಂತಾಯಿತು. ನಾಟ್ಸೀ ಕಾಪಾಲಿಕರ ಯೆಹೂದ್ಯದಹನಕುಂಡಕ್ಕೆ ಕೊಪ್ಪರಿಗೆ ತುಪ್ಪ ಸುರಿದಂತಾಯಿತು.

"ಐನ್‌ಸ್ಟೈನ್-ವಾಣಿಯನ್ನು ಸ್ತಬ್ಧಗೊಳಿಸಿದವರಿಗೆ ಸಾವಿರ ಪೌಂಡುಗಳ ಬಹುಮಾನ," ಎಂಬ ಆಕರ್ಷಕ ಜಾಹೀರಾತು ಪ್ರಕಟವಾಯಿತು. ಅಂದು ಇದೇನೂ ಸಾಮಾನ್ಯವಾದ ಪ್ರಲೋಭನೆ ಆಗಿರಲಿಲ್ಲ, ಬಲುದೊಡ್ಡ ಮೊತ್ತವೇ ಆಗಿತ್ತು. ಐನ್‌ಸ್ಟೈನರನ್ನು ಕೊಂದು ಸಾಕ್ಷ್ಯಾದಾರ ಒದಗಿಸಿ ದವನಿಗೆ ಈ ಬಹುಮಾನ ಸಲ್ಲುವುದೆಂದಿತ್ತು.

"ನನ್ನ ತಲೆಗೆ ಅದು ದುಬಾರಿ ಬೆಲೆ," ಎಂದು ಉದ್ಗರಿಸಿದರು ಐನ್‌ಸ್ಟೈನ್ !

ವಾಸ್ತವಸ್ಥಿತಿ ಏನೆಂದರೆ *Brown Book* ಲೇಖಕ ಐನ್‌ಸ್ಟೈನ್ ಆಗಿರಲಿಲ್ಲ. ಸಮಿತಿಯ ಅಧ್ಯಕ್ಷ ರಾಗಿರಲು (ನಾಮಕಾವಸ್ಥೆ) ಇವರು ಎಂದಿನ ಘನೋದ್ದೇಶಪೂರಿತ ಸರಳ ಮುಗ್ಧತೆಯಿಂದ ಒಪ್ಪಿಗೆ ನೀಡಿದ್ದರು. ಈಗ ಆದದ್ದೇನು ? ಅದರ ಲೇಖಕತ್ವದ ಆರೋಪವೇ ಇವರ ತಲೆಮೇಲೆ ಬಿದ್ದಿತ್ತು ! ತಾನು *Brown Book*ನ ಲೇಖಕನಲ್ಲ, ತಾನು ಇದರ ಒಂದು ಪದವನ್ನೂ ಬರೆದವ ನಲ್ಲ, ಈ ಪುಸ್ತಕದ ಪ್ರಕಟಣೆಯನ್ನು ಮಂಜೂರು ಮಾಡಿದ ಸಮಿತಿಯಲ್ಲಿ ತಾನಿದ್ದುದು ನಿಜ ವಾದರೂ ಇದರ ಯಾವುದೇ ಪದವೂ ತನ್ನ ಕೊಡುಗೆ ಅಲ್ಲ, ಆದರೆ ಪುಸ್ತಕದ ಒಟ್ಟು ಧೋರಣೆ ಯನ್ನು ಒಟ್ಟು ಸತ್ತ್ವವನ್ನು ತಾನೊಪ್ಪಿದ್ದೇನೆ ; ಇದು ಮುಖ್ಯ. "ಜರ್ಮನಿಯಲ್ಲಿರುವ ಪ್ರಭುಶಕ್ತಿ ದ್ವೇಷ ಸಾಧನೆಯದಾಗಿರುವುದೇ ಇದೆಲ್ಲದರ ಕಾರಣ. ಅದೀಗ ನನ್ನನ್ನು ಬಲಿಪಶುವಾಗಿ ಆಯ್ದಿದೆ." ಎಂಬುದಾಗಿ ಐನ್‌ಸ್ಟೈನ್ ಪ್ರಕಟಿಸಿದರು.

ಜರ್ಮನಿಯ ನೆರೆನಾಡಿನ ವಾಸ ಖಂಡಿತವಾಗಿಯೂ ಕ್ಷಿಪ್ರದುರಂತಕ್ಕೆ ಪಂಥಾಹ್ವಾನ ಎಂಬು ದೀಗ ಐನ್‌ಸ್ಟೈನರಿಗೆ ಶತಸ್ಸಿದ್ಧವಾಯಿತು (ಸಹಸ್ರಸಿದ್ಧವೂ ಆಯಿತೆನ್ನಿ !).

## ಅಮೆರಿಕದಲ್ಲಿ ಮುಂಜಾನೆ ನೇಸರು

ಆವಗಾಳಿಯದಾವ ಧೂಳ್ಕಣವ ಪೊತ್ತಿಹುದೊ
ಆವಧೂಳಿನೊಳಾವ ಚೈತನ್ಯ ಕಣವೊ
ಜೀವವಿಂತಜ್ಞಾತ ಸೂತ್ರದಾಟದ ಬೊಂಬೆ
ಭಾವಿಸಾ ಸೂತ್ರಗಳ ಮಂಕುತಿಮ್ಮ

ಹಡಗು ಸದ್ದುಗದ್ದಲವಿಲ್ಲದೆ ನ್ಯೂಯಾರ್ಕ್ ರೇವಿನಲ್ಲಿ ಲಂಗರು ಹಾಕಿತು. ಅದರಿಂದ ಸಾಲಾಗಿ ನಾವು ಹೊರ ಹೊರಟೆವು. ಬಾಗಿಲಿನಲ್ಲಿ ನಿಂತಿದ್ದ ಪರಿಚಾರಿಕೆಗೆ ಹಣ ತೆತ್ತು ಐಸ್‌ಕ್ರೀಮ್ ಶಂಕು ಕೊಂಡು ಅದನ್ನು ನಾನು ಚೀಪಿ ಚಪ್ಪರಿಸತೊಡಗಿದೆ. ಆ ಮಹಾಪುರುಷ [ಐನ್‌ಸ್ಟೈನ್] ನನ್ನ ಶಂಕುವನ್ನು ನೋಡಿ ಮುಗುಳ್ನಕ್ಕರು. ಆ ಹುಡುಗಿಯತ್ತ ದೃಷ್ಟಿಹರಿಸಿ ನನ್ನ ಶಂಕುವನ್ನೇ ತೋರಿಸುತ್ತ ಆಕೆಗೆ ಹಣ ಸಲ್ಲಿಸಿದರು. ಆಕೆ ಇವರಿಗೆ ಶಂಕುವನ್ನೂ ಚಿಲ್ಲರೆ ಬಾಕಿಯನ್ನೂ ವಿನಯಪೂರ್ವಕವಾಗಿ ಸಲ್ಲಿಸುತ್ತ, "ಇದು ನನ್ನ ಸ್ಮೃತಿಪಟಲದಲ್ಲಿ ಶಾಶ್ವತವಾಗಿ ಉಳಿಯುತ್ತದೆ." ಎಂದುಕೊಂಡುದನ್ನು ನಾನು ಆಲಿಸಿದೆ. ಮಗುವಿನ ಸಂಭ್ರಮ ಸಂತೃಪ್ತಿಗಳಿಂದ ಅವರು ಐಸ್‌ಕ್ರೀಮ್ ಶಂಕುವನ್ನು ನೆಕ್ಕುತ್ತ ನಲಿಯುತ್ತಿದ್ದು ದನ್ನು ಕಂಡೆ.

**ರೆವರೆಂಡ್ ಜಾನ್ ಲ್ಯಾಂಪೆ**

ಅಮೆರಿಕದ ಪ್ರಿನ್‌ಸ್ಟನ್ನಿನಲ್ಲಿ ಪ್ರಪಂಚವಿಖ್ಯಾತ 'ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್‌ಡ್ ಸ್ಟಡಿ' (ಉನ್ನತಾಧ್ಯಯನಕ್ಕೆ ಮೀಸಲಾದ ಸಂಸ್ಥೆ) ರಾರಾಜಿಸುತ್ತಿದೆ. ಇದು ಹೇಗೆ ಮೈದಳೆಯಿತೆಂಬುದಕ್ಕೆ ವಿಜ್ಞಾನಿಗಳ ವಲಯದಲ್ಲಿ ಸ್ವಾರಸ್ಯಕರವಾದ ಒಂದು ಐತಿಹ್ಯ ಪ್ರಚಲಿತವಾಗಿದೆ.

ಡಾ. ಅಬ್ರಾಹಾಮ್ ಫ್ಲೆಕ್ಸ್‌ನರ್ (೧೮೬೬-೧೯೫೯) ಅಮೆರಿಕದ ಒಂದು ಪ್ರೌಢಶಾಲೆಯಲ್ಲಿ ಉಪಾಧ್ಯಾಯ. ನಲವತ್ತರ 'ಎಳೆ'(ಇಳಿ ?) ವಯಸ್ಸಿನಲ್ಲಿ ಇವರು ಯೂರೊಪಿಗೆ ತೆರಳಿ ಜರ್ಮನ್ ಮತ್ತು ಇಂಗ್ಲಿಷ್ ವಿಶ್ವವಿದ್ಯಾಲಯಗಳ ಸಂಘಟನೆಗಳನ್ನು ಅಭ್ಯಸಿಸಿ ಮರಳಿದರು. ತತ್ಫಲವಾದ ನಿಬಂಧ ಸಿದ್ಧವಾಗುವ ಹೊತ್ತಿಗೆ ಅಮೆರಿಕದ ರಾಕಿಫೆಲ್ಲರ್ ಪ್ರತಿಷ್ಠಾನ ಫ್ಲೆಕ್ಸ್‌ನರರನ್ನು ಅಮೆರಿಕದ ವಿಶ್ವವಿದ್ಯಾಲಯಗಳ ಬಗೆಗೆ ಅಧ್ಯಯನ ಮಾಡಬೇಕೆಂದು ಪ್ರಾರ್ಥಿಸಿತು. ಇದರ

ಫಲವೇ ೧೯೩೦ರಲ್ಲಿ ಪ್ರಕಟವಾದ *Universities American, English, German* ಎಂಬ ಪುಸ್ತಕ.

ಶ್ರೀಮಂತರ ನಾಡೆಂದೂ ಪ್ರಗತಿಪರರ ಬೀಡೆಂದೂ ಬೀಗುತ್ತಿದ್ದ ಅಮೆರಿಕದ ಹಲವು ವಿಶ್ವವಿದ್ಯಾಲಯಗಳಲ್ಲಿಯ ಪೊಳ್ಳು ಡಬ್ಬು ಸಂಶೋಧನ ವೈಖರಿಯನ್ನು ಈ ಪುಸ್ತಕ ಕಣ್ಣು ಕುಕ್ಕುವಂತೆ ಬಯಲು ಮಾಡಿತು. ಎರಡು ನಿದರ್ಶನಗಳನ್ನು ಇಲ್ಲಿ ಉಲ್ಲೇಖಿಸಿದೆ.

ಒಂದು, ಮಾಸ್ಟರ್ ಆಫ್ ಆರ್ಟ್ಸ್ ಪದವಿಯ ಅಭ್ಯರ್ಥಿ ಶಿಕಾಗೊ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಸಂಶೋಧನ ನಿಬಂಧ. ವಿಷಯ : ಪಾತ್ರೆಮಾರ್ಜನೆಯ ಚತುರ್ವಿಧಗಳ ನಡುವೆ ಕಾಲ ಮತ್ತು ಚಲನೆಯ ತೌಲನಿಕ ಅಧ್ಯಯನ.

ಪೀಠಿಕೆ, ಪ್ರಚಲಿತ ಸಾಹಿತ್ಯದ ಪರಾಮರ್ಶೆ, ಉದ್ದೇಶ, ಪರಿಮಿತಿಗಳು, ಕ್ರಿಯಾವಿಧಾನ, ಫಲಿತಾಂಶಗಳು ಮತ್ತು ತುಲನೆಗಳು, ಉಪಸಂಹಾರಗಳು ಮತ್ತು ಶಿಫಾರಸುಗಳು, ಗ್ರಂಥ ಋಣ, ಮತ್ತು ವಿಷಯ-ಪುಟಸೂಚಿ.

ಚಾ ಬಸಿಯಲು ಎಸರಿಟ್ಟಲ್ಲಿಂದ ತೊಡಗಿ ಉಪಯೋಗಿಸಿದ ಸಮಸ್ತ ಪಾತ್ರೆಗಳನ್ನೂ ತೊಳೆದು ಶುಚಿಗೊಳಿಸಿ ಯಥಾಸ್ಥಾನಗಳಲ್ಲಿ ಪೇರಿಸುವವರೆಗಿನ ಎಲ್ಲ ಬಿಡಿಕ್ರಿಯೆಗಳನ್ನೂ ಸಂದ ಕಾಲದ ಮೇಲೆ ಕಣ್ಣಿಟ್ಟುಕೊಂಡು ಗಮನಿಸಲಾಯಿತು . . . ಚಾ ಸೇವನಾನಂತರ, ಲೋಟ, ಬಟ್ಟಲು, ಚಮಚ ಮುಂತಾದವನ್ನು ತೊಳೆತೊಟ್ಟಿಗೆ ಒಯ್ಯುವಾಗ ವಿವಿಧ ವಿಧಾನಗಳನ್ನು ಪ್ರಯೋಗಿಸಿ ತೌಲನಿಕವಾಗಿ ಅಭ್ಯಸಿಸಲಾಯಿತು. ಕಾಲದ ದೃಷ್ಟಿಯಿಂದ ಮಾತ್ರ ಹೇಳುವುದಾದರೆ ಕುಡಿತಮೇಜದಿಂದ ತೊಳೆತೊಟ್ಟಿಗೆ ಒಂದು ಸಲಕ್ಕೆ ಒಂದು ಪಾತ್ರೆಯಂತೆ ಒಯ್ಯುವುದಕ್ಕಿಂತ ಎಲ್ಲವನ್ನೂ ದೊಡ್ಡ ಹರಿವಾಣ ಇಲ್ಲವೇ ತಟ್ಟೆಯೊಳಗೆ ಇಟ್ಟು ಒಯ್ಯುವುದು ಅಪೇಕ್ಷಣೀಯ. ಆದರೆ ಈ ವಿಧಾನದಲ್ಲಿ ಅಧಿಕ ದೇಹತ್ರಾಣ ವ್ಯಯವಾಗುತ್ತದೆ. ಅಲ್ಲದೆ ಕಾಲುಜಾರಿ ಇಲ್ಲವೇ ಕೈಕೋಸಿ ಹರಿವಾಣ ಬಿದ್ದರೆ ಎಲ್ಲ ಪಾತ್ರೆಗಳೂ ಒಡೆದು ಹೋಗುವ ಅಪಾಯ ಉಂಟು . . .

ಎರಡು, ಕೊಲಂಬಿಯಾ ವಿಶ್ವವಿದ್ಯಾಲಯ ಹಿಂದುಳಿದೀತೇ ? ಅಲ್ಲಿಯ ಉಪಾಧ್ಯಾಯರ ಕಾಲೇಜು ಪಾಕಶಾಸ್ತ್ರದಲ್ಲಿ ಬಗೆಬಗೆಯ ಸಂಶೋಧನ ತರಗತಿಗಳನ್ನು ತೆರೆದಿತ್ತು : ಪ್ರಾಯೋಗಿಕ ಮತ್ತು ತೌಲನಿಕ ಪಾಕಶಾಸ್ತ್ರ ವಿಧಾನಗಳು, ಚಾ ತಯಾರಿಕೆಯ ಹತ್ತು ಬಗೆಗಳು, ಆಹಾರಶಿಷ್ಟತೆ ಮತ್ತು ಅತಿಥಿಸತ್ಕಾರ, ಪಾಕಶಾಸ್ತ್ರ, ಮತ್ತು ಸಂಬಂಧಿತ ಶಾಸ್ತ್ರಗಳಲ್ಲಿ ಈಚೆಗಿನ ಸಂಶೋಧನೆಗಳ ಗೋಷ್ಠಾರೆ . . .

ನಗ್ನಸತ್ಯವನ್ನು ಹೊರಗೆಡಹಿದ ಫ್ಲೆಕ್ಸ್‌ನರರ ಈ ಪುಸ್ತಕ ಪ್ರಕಟವಾದ ಬಳಿಕ ಒಂದು ದಿನ ಒಬ್ಬ ಅನಾಮಧೇಯ ವಾಚಕನಿಂದ ಇವರಿಗೆ ದೂರವಾಣಿ ಕರೆ ಬಂದಿತಂತೆ, "ಡಾಕ್ಟರ್ ಫ್ಲೆಕ್ಸ್‌ನರ್ ! ಅಮೆರಿಕನ್ ವಿಶ್ವವಿದ್ಯಾಲಯಗಳ ಬಗೆಗಿನ ನಿಮ್ಮ ಪುಸ್ತಕ ನನಗೆ ಇಷ್ಟವಾಯಿತು. ನಿಮಗೆ ಯೋಗ ಒದಗಿದ್ದಾದರೆ ನೀವು ಪ್ರಾಮಾಣಿಕವಾದ ಒಂದು ವಿಶ್ವವಿದ್ಯಾಲಯವನ್ನು ಕಟ್ಟಬಲ್ಲೆನೆಂದು ನಂಬಿರುವಿರಾ ?"

"ಪ್ರಯತ್ನ ಮಾಡಬಲ್ಲೆನೆಂಬ ಭರವಸೆ ಉಂಟು. ಆದರೆ ನಿಮಗೇಕೆ ಅದರ ಉಸಾಬರಿ ?"

"ಏಕೆಂದರೆ ಹೊಸತೊಂದು ಶಿಕ್ಷಣಸಂಸ್ಥೆಯನ್ನು ಕಟ್ಟುವ ಸಲುವಾಗಿ ನಾನು ನಿಮಗೆ ಕೆಲವು ಲಕ್ಷಗಳನ್ನು ಕೊಡಬೇಕೆಂದಿದ್ದೇನೆ."

ಇದು ನಿಜವಿರಲಿ, ಇಲ್ಲದಿರಲಿ, ಅಂತೂ ಹೇಗೆ ಅಮೆರಿಕನ್ನರ ವಿಚಾರಧಾರೆ ಫ್ಲೆಕ್ಸ್‌ನರರ ಪೌರೋಹಿತ್ಯದಲ್ಲಿ ಹೊಸ ಸಂಸ್ಥೆಯೊಂದರ ಸುತ್ತ ಘನೀಭವಿಸುತ್ತಿತ್ತು ಎಂಬುದನ್ನು ಇದು



ಫಿಲಿಪ್ ಫ್ರ್ಯಾಂಕ್ ಜೊತೆ (೧೯೨೮)



ರವೀಂದ್ರನಾಥ ಠಾಕೂರರ ಜೊತೆ (೧೯೩೦



ತಾಮಸ್. ಮಾನ್ ಜೊತೆ (೧೯೩೮)



ಪಂಡಿತ್ ಜವಾಹರಲಾಲ್
ನೆಹ್ರು ಜೊತೆ (ಸು. ೧೯೫೦)



ದತ್ತುಪುತ್ರಿ ಮಾರ್ಗಟ್
ಜೊತೆ (೧೯೩೮)



ಲೀಪಾಲ್ಡ್ ಇನ್‌ಫೆಲ್ಡ್ ಜೊತೆ (೧೯೩೮)



ಅಮೇರಿಕ ಪೌರತ್ವ ಸ್ವೀಕಾರ : ಹೆಲನ್ ಡೂಕಾಸ್, ಐನ್‌ಸ್ಟೈನ್, ಮಾರ್ಗಟ್ (೧೯೩೬)

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವಿಶೇಷ ಉಪನ್ಯಾಸ ನೀಡಿದಾಗ (೧೯೩೧)
ಕರಿಹಲಗೆಯ ಮೇಲೆ ಐನ್‌ಸ್ಟೈನ್ ಬರೆದ ಗಣಿತೋಕ್ತಿಗಳು



ಚೆನ್ನಾಗಿ ಪ್ರತೀಕಿಸುತ್ತದೆ.

ಪ್ರಿನ್ಸ್‌ಟನ್ ಇನ್‌ಸ್ಟಿಟ್ಯೂಟಿನ ಸ್ಥಾಪನೆಗೆ ಐವತ್ತು ಲಕ್ಷ ಡಾಲರುಗಳ ಮೂಲಧನವನ್ನು ಒದಗಿಸಿದವರು (೧೯೩೦) ಇಬ್ಬರು ಯೆಹೂದ್ಯದಾನಿಗಳು : ಲೂಯಿ ಬಾಂಬರ್ಗರ್ ಮತ್ತು ಇವರ ಸಹೋದರಿ ಫೆಲಿಕ್ಸ್ ಫಲ್ಡ್. ಫ್ಲೆಕ್ಸ್‌ನರ್ ಇದರ ಸಂಸ್ಥಾಪಕ ನಿರ್ದೇಶಕ.

ಇನ್‌ಸ್ಟಿಟ್ಯೂಟಿನ ಪ್ರಥಮ ವಿಶ್ವಸ್ತ ಮಂಡಳಿ ೧೯೩೧ ಜೂನ್ ೭ರಲ್ಲಿ ಪ್ರಕಟಿಸಿದ ಕಾರ್ಯ ಸಂಹಿತೆ ಗಮನಾರ್ಹವಾಗಿದೆ :

"ಉನ್ನತ ಅಧ್ಯಯನದ ಗಂಭೀರ ಅನ್ವೇಷಣೆಗೆ ಸದವಕಾಶ ಒದಗಿಸುವ ಈ ಸಂಸ್ಥೆಯ ಸಂಮೋಹಕತೆಯಿಂದಾಗಿ ಮತ್ತು ಬಾಹ್ಯ ಪೀಡನೆಗಳ ಎದುರು ಇದು ಒದಗಿಸಬಹುದೆಂದು ಆಶಿಸಲಾದ ನಿರ್ಲಿಪ್ತತೆಯ ಕಾರಣವಾಗಿ, ಅವರವರ ಅಧ್ಯಯನಕ್ಷೇತ್ರಗಳಲ್ಲಿ ಅತ್ಯುನ್ನತ ಸ್ಥಾನ ಗಳನ್ನೈದಿರುವ ಸ್ತ್ರೀ ಪುರುಷರು ಮಾತ್ರ ಇದರೆಡೆಗೆ ಆಕರ್ಷಿತರಾಗಿ ಇದರ ಅಧ್ಯಾಪಕಮಂಡಳಿ ಯನ್ನು ರೂಪಿಸುವರೆಂಬುದು ನಮ್ಮ ಆಶಯ. ಸಿಬ್ಬಂದಿ ವರ್ಗಕ್ಕೂ ಜ್ಞಾನವಿಭಾಗಕ್ಕೂ ನೇಮನ ಗಳನ್ನು ಮಾಡುವಾಗ, ಅಂತೆಯೇ ಕಾರ್ಯಕರ್ತರನ್ನೂ ವಿದ್ಯಾರ್ಥಿಗಳನ್ನೂ ಪ್ರವೇಶಗೊಳಿಸುವಾಗ ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ಜನಾಂಗ, ಮತ ಅಥವಾ ಲಿಂಗ ಇವನ್ನು ಗಮನಿಸ ತಕ್ಕದ್ದಲ್ಲ ಎಂಬುದು ನಮ್ಮ ಉದ್ದೇಶದಲ್ಲಿ ಮೂಲಭೂತವಾದದ್ದು, ಮತ್ತೆ [ಅದೇ ನಮ್ಮ] ಖಚಿತ ಅಪೇಕ್ಷೆ ಕೂಡ . . ."

ಸಾಹಸಕೆ ದೊರೆವುದಮೆರಿಕದಲ್ಲಿ ಅಮಿತ ಪ್ರೋ-
ತ್ಸಾಹ, ಸಾಧನೆಗಲ್ಲಿ ಮೊದಲ ಮಣೆ, ಕರುಬಿಲ್ಲ
ಸ್ನೇಹ ಸೌಹಾರ್ದಗಳೆ ನಾಣ್ಯಗಳು, ಕಾರ್ಯ ಸಂ-
ದೋಹವೆ ಯಶಸ್ಸಿನೆಡೆಗಿನ ಹಾದಿ ಅತ್ರಿಸೂನು

ಅಮೆರಿಕದ ಉದಾತ್ತ ನೀತಿಯ, ಸುಸಂಸ್ಕೃತ ಪ್ರಜ್ಞೆಯ ಮತ್ತು ಶುದ್ಧ ಜ್ಞಾನಪಕ್ಷಪಾತದ ಪ್ರತ್ಯಕ್ಷ ನಿದರ್ಶನ ಈ ಇನ್‌ಸ್ಟಿಟ್ಯೂಟ್ ಆಗಬೇಕೆಂಬುದು ವಿಶ್ವಸ್ತ ಮಂಡಳಿಯ ಖಚಿತೋದ್ದೇಶ ವಾಗಿತ್ತು. ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಿಗೆ ಪಾವತಿಯಾಗುತ್ತಿದ್ದ ಸಂಬಳವು ನೆಮ್ಮದಿಯ ಬಾಳನ್ನು ನಡೆಸುತ್ತ ಜ್ಞಾನಾನ್ವೇಷಣೆಯೊಂದರಲ್ಲೇ ಸಂಪೂರ್ಣ ಮಗ್ನರಾಗಿರಲು ಏನೇನೂ ಸಾಲದೆಂದು ಫ್ಲೆಕ್ಸ್‌ನರ್ ಭಾವಿಸಿದ್ದರು. ಆದ್ದರಿಂದ ಇನ್‌ಸ್ಟಿಟ್ಯೂಟಿಗೆ ಪ್ರಾಧ್ಯಾಪಕ ರನ್ನು ಆಹ್ವಾನಿಸುವ ದಿಶೆಯಲ್ಲಿ ಇವರು ಅನುಸರಿಸಿದ್ದು ಒಂದೇ ಒಂದು ನೀತಿ : ಅತ್ಯುತ್ಕೃಷ್ಟ ಪ್ರತಿಭೆಯನ್ನು ಅತ್ಯುನ್ನತ ಆರ್ಥಿಕ ಸಂಭಾವನೆ ಮತ್ತು ಕಾರ್ಯಸೌಕರ್ಯ ಒದಗಿಸಿ ಪ್ರಿನ್ಸ್‌ಟನ್ನಿಗೆ ಬರಮಾಡಿಕೊಳ್ಳಬೇಕು.

೧೯೩೩ ಅಕ್ಟೋಬರ್ ೨ರಂದು ಇನ್‌ಸ್ಟಿಟ್ಯೂಟ್, ಗಣಿತವಿಭಾಗದೊಂದಿಗೆ, ಫೈನ್‌ಹಾಲ್ ಎಂಬ ಸೌಧದಲ್ಲಿ ಕಾರ್ಯಪ್ರವೃತ್ತವಾಯಿತು.

ಪ್ರಿನ್ಸ್‌ಟನ್ ಹೇಗಿರಬೇಕು ? ಫ್ಲೆಕ್ಸ್‌ನರರ ಕಲ್ಪನೆ ಹೀಗಿತ್ತು : "ವಿದ್ವಾಂಸರೂ ವಿಜ್ಞಾನಿಗಳೂ ಸದ್ಯದ ಕಡಲಸುಳಿಯಿಂದ ಚೋಷಿಲ್ಪಡದೆ ಜಗತ್ತು ಮತ್ತು ಅದರ ವಿದ್ಯಮಾನಗಳನ್ನು ತಮ್ಮ ಪ್ರಯೋಗಾಲಯವೆಂಬುದಾಗಿ ಪರಿಗಣಿಸಬಹುದಾದ ರೇವು ಅದಾಗಿರಬೇಕು."

ಇಂಥ ಆದರ್ಶ ರೇವಿಗೆ ಆದರ್ಶ ವಿದ್ವಾಂಸರನ್ನು ಆಹ್ವಾನಿಸಲು ಆದರ್ಶದೀಪ್ತ ಫ್ಲೆಕ್ಸ್‌ನರ್ ಅಮೆರಿಕ, ಇಂಗ್ಲೆಂಡ್ ಮತ್ತು ಯೂರೋಪ್ ಪರ್ಯಟನೆಗೆ ಹೊರಟರು. ೧೯೩೧-೩೨ ಮಾಗಿ ಯಲ್ಲಿ ಇವರು ಅಮೆರಿಕದ ಪ್ಯಾಸಡೆನವನ್ನು ಸಂದರ್ಶಿಸಿ ಅಲ್ಲಿದ್ದ ಭೌತವಿಜ್ಞಾನಿ ಮಿಲ್ಲಿಕನ್[೨೨]

ಅವರಿಗೆ ತಮ್ಮ ಯೋಜನೆಯನ್ನು ವಿವರಿಸಿ ಅವರ ಸಲಹೆ ಕೇಳಿದರು. "ಸಂತೋಷ. ನೀವೇಕೆ ಐನ್‌ಸ್ಟೈನರೊಡನೆ ಈ ವಿಚಾರ ಪ್ರಸ್ತಾವಿಸಬಾರದು ? ಅವರು ಖಂಡಿತ ಅಮೂಲ್ಯ ಸಲಹೆ ನೀಡುತ್ತಾರೆ. ಅವರೀಗ ಇಲ್ಲೇ ನಮ್ಮ ಅತಿಥಿಯಾಗಿದ್ದಾರೆ." ಎಂದರು ಮಿಲ್ಲಿಕನ್.

ಮಿಲ್ಲಿಕನ್ನರ ಒತ್ತಾಯದ ಮೇರೆಗೆ ತುಂಬ ದಾಕ್ಷಿಣ್ಯದಿಂದ ಫ್ಲೆಕ್ಸ್‌ನರ್ ಐನ್‌ಸ್ಟೈನರನ್ನು ನೋಡಿದರು. ಅದೇ ಮೊದಲ ಭೇಟಿ. ಐನ್‌ಸ್ಟೈನರ ಸರಳತೆ ಮತ್ತು ಕುತೂಹಲ ಇವರ ಮೇಲೆ ವಿಶೇಷ ಪ್ರಭಾವ ಬೀರಿದುವು. ಒಟ್ಟಾರೆ ಯೋಜನೆಯನ್ನು ಅರಿತ ಐನ್‌ಸ್ಟೈನ್, "ನನಗೆ ಇದರ ಬಗ್ಗೆ ಆಸಕ್ತಿ ಮೊಳೆತಿದೆ. ಇನ್ನಷ್ಟು ಮಾತಾಡೋಣ," ಎಂದರು.

ಮುಂದಿನ ಭೈಠಕ್ಕು ಇಂಗ್ಲೆಂಡಿನ ಆಕ್ಸ್‌ಫರ್ಡಿನಲ್ಲಿ ಎಂದು ನಿರ್ಧರಿಸಿದರು. ಐನ್‌ಸ್ಟೈನರ ಕಾಂತತ್ವದಿಂದ ಆಕರ್ಷಿತರಾದ ಫ್ಲೆಕ್ಸ್‌ನರ್ ಈ ಭೇಟಿಯನ್ನು ಆದರದಿಂದ ಸ್ವಾಗತಿಸಿದರು. ಆಕ್ಸ್‌ಫರ್ಡ್ ಸಂದರ್ಶನದ ವೇಳೆ ತಾನೇಕೆ ಇವರನ್ನೇ ಪ್ರಿನ್‌ಸ್ಟನ್ನಿಗೆ ಬರುವಂತೆ ಒಂದು ಮಾತು ಕೇಳಬಾರದು ಎಂಬ ಭಾವನೆ ಸುಳಿಯಿತು : "ಪ್ರೊಫೆಸರ್ ಐನ್‌ಸ್ಟೈನ್ ! ಹೊಸ ಸಂಸ್ಥೆಯಲ್ಲಿಯ ಒಂದು ಸ್ಥಾನಕ್ಕೆ ನಿಮ್ಮನ್ನು ನಾನು ಆಹ್ವಾನಿಸುತ್ತೇನೆನ್ನುವುದು ಧಾರ್ಷ್ಟ್ಯದ ಮಾತಾದೀತು. ಅದನ್ನು ಕಲ್ಪಿಸಿಕೊಳ್ಳಲೂ ಆರೆ. ಆದರೆ ನೀವೇ ನಿಮ್ಮಷ್ಟಕ್ಕೆ ಯೋಚಿಸಿ ಅಲ್ಲಿಯ ಪರಿಸರ ನಿಮಗೆ ಪ್ರಿಯವಾದೀತೆಂದು ಭಾವಿಸುವಿರಾದ ಪಕ್ಷ ಆಗ ನಿಮ್ಮ ಷರತ್ತುಗಳ ಪ್ರಕಾರ ನೀವು ಅಲ್ಲಿಗೆ ಸ್ವಾಗತಿಸಲ್ಪಡುವಿರಿ ಎಂಬುದನ್ನು ತಿಳಿಸಲು ಮಾತ್ರ ಇಷ್ಟಪಡುತ್ತೇನೆ," ಎಂದರು ಫ್ಲೆಕ್ಸ್‌ನರ್.

"ನಿಮ್ಮ ಸೂಚನೆ ಕುತೂಹಲಕಾರಿಯಾಗಿದೆ. ಮುಂದೆ ಬರ್ಲಿನ್ನಿಗೆ ಬನ್ನಿ. ಮಾತಾಡೋಣ."

ಆಕ್ಸ್‌ಫರ್ಡ್ ಭೈಠಕ್ಕಿನ ಹೊಸ ತಿರುವು ಅಥವಾ-ಹೊಸ ಅಲೆಯಿಂದ ಉತ್ತೇಜಿತರಾದ ಫ್ಲೆಕ್ಸ್‌ನರ್ ಮುಂದಿನ ಸಲ ಸಿಂಹವನ್ನು ಅದರ ಗುಹೆಯಲ್ಲಿಯೇ ಸಂದರ್ಶಿಸಿದರು—ಕಾಪುತ್ ಆಶ್ರಮದಲ್ಲಿ. ೧೯೩೨ರ ಉತ್ತರಾರ್ಧ. ಪ್ಯಾಪೆನ್ ಸರ್ಕಾರ ತೂಗುಯ್ಯಾಲೆಯಲ್ಲಿ ತೊನೆಯುತ್ತಿದ್ದ ದಿನಗಳು. ಜರ್ಮನ್ ರಾಜಕೀಯಭವಿಷ್ಯದ ಸ್ಪಷ್ಟಚಿತ್ರ ಆ ವೇಳೆಗೆ ಐನ್‌ಸ್ಟೈನರಿಗೆ ಮೂಡಿತ್ತು. ಫ್ಲೆಕ್ಸ್‌ನರರ ಆಹ್ವಾನವನ್ನು ಐನ್‌ಸ್ಟೈನ್ ಅಂಗೀಕರಿಸಿದ್ದರು.

ಮಾಮೂಲು ಕ್ರಮದಂತೆ ಅತಿಥಿಯನ್ನು ಬೀಳ್ಕೊಡಲು ಅವರೊಡನೆ ಬಸ್ಸಿನವರೆಗೆ ಹೋಗುತ್ತಿದ್ದಾಗ ಐನ್‌ಸ್ಟೈನ್ ಹೇಳಿದರು, "ಈ ವಿಚಾರದಲ್ಲಿ ನಾನು ತುಂಬ ಉತ್ಸಾಹಿಯಾಗಿದ್ದೇನೆ."

"ತುಂಬ ಸಂತೋಷ. ನಿಮ್ಮ ಷರತ್ತುಗಳನ್ನು ದಯಮಾಡಿ ಬೇಗನೆ ತಿಳಿಸಿ."

"ಮುಂದಿನ ಕೆಲವೇ ದಿವಸಗಳಲ್ಲಿ."

ಮಳೆಯನ್ನು ಸೀಳಿಕೊಂಡು ಬಸ್‌ಧಾವಿಸಿತು. ಇತ್ತ ಮಳೆಯಲ್ಲಿ ತೋಯುತ್ತ ಐನ್‌ಸ್ಟೈನ್ ಮನೆ ಸೇರಿದರು.

ಗೊತ್ತಾದ ಗಡುವಿನಲ್ಲಿ ಐನ್‌ಸ್ಟೈನರ 'ಅಪ್ರಾಯೋಗಿಕ ಷರತ್ತುಗಳು' ಫ್ಲೆಕ್ಸ್‌ನರರ ಕೈಸೇರಿದುವು :

"ಒಡನೆ ಪ್ರಿನ್‌ಸ್ಟನ್ನಿಗೆ ಬರಲಾಗುವುದಿಲ್ಲ. ೧೯೩೩ರ ಸೆಪ್ಟೆಂಬರಿನಲ್ಲಿ ಮೊದಲ ಸಲ ಬರಲು ಸಾಧ್ಯವಾಗುತ್ತದೆ. ಸಂದರ್ಶಕ-ಪ್ರಾಧ್ಯಾಪಕನಾಗಿ ಮಾತ್ರ ಬರುವುದಾಗಿದೆ. ವಾರ್ಷಿಕವಾಗಿ ಐದು ತಿಂಗಳ ಕಾಲ, ಬರ್ಲಿನ್ನಿನಿಂದ ರಜೆ ಪಡೆದು, ಪ್ರಿನ್‌ಸ್ಟನ್ನಿನಲ್ಲಿ ಕಳೆಯಬಹುದು. ನನ್ನ ಸಹವರ್ತಿ ಡಾಕ್ಟರ್ ವಾಲ್ತರ್ ಮೇಯರರಿಗೂ (೧೮೮೭-೧೯೪೮) ಅಲ್ಲಿ ಯೋಗ್ಯಸ್ಥಾನ ದೊರೆಯಬೇಕು. ನನಗೆ ವಾರ್ಷಿಕ ತಲಬು ೩,೦೦೦ ಡಾಲರುಗಳಾದರೂ ಸಿಗಬೇಕು. ('ಇದಕ್ಕಿಂತ ಕಡಿಮೆ ಹಣದಲ್ಲಿ ಬದುಕುವುದು ಸಾಧ್ಯವಾದೀತೇ ?')"

ಬರ್ಲಿನ್ನನ್ನು ಶಾಶ್ವತವಾಗಿ ತೊರೆಯುವ ನಿರ್ಧಾರಕ್ಕೆ ಐನ್‌ಸ್ಟೈನ್ ಇನ್ನೂ ಬಂದಿರಲಿಲ್ಲ. ಆದರೆ ತೊರೆಯಲೇಬೇಕಾಗಿ ಬಂದರೆ ತನ್ನ ಶಾಶ್ವತ ನೆಲೆ ಅಮೆರಿಕದಲ್ಲಿ—ಜರ್ಮನಿಯಿಂದ ಅದಷ್ಟು ದೂರದಲ್ಲಿ—ಇರಬೇಕೆಂದು ಯೋಚಿಸಿರಬಹುದು.

ಫ್ಲೆಕ್ಸ್‌ನರರಿಗೆ ತೀವ್ರ ಹತಾಶೆಯಾಯಿತು. ಅಮೆರಿಕದಲ್ಲಿಯ ಜೀವನದ ಹಿರಿಮಟ್ಟ ಗಮನಿಸಿದಾಗ ಐನ್‌ಸ್ಟೈನ್ ಕೋರಿದ ತಲಬು ಬಲು ಬಲು ಕಡಿಮೆ ! ಇವರಿಗಿಂತ ಹೆಚ್ಚಿನ ಸಂಬಳ ಪಡೆಯುವ ಯಾವ ಪ್ರಾಧ್ಯಾಪಕನೂ ಪ್ರಿನ್‌ಸ್ಟನ್ನಿನಲ್ಲಿ ಇರತಕ್ಕದ್ದಲ್ಲ, ವಿಜ್ಞಾನಿಗಳ ರಾಜನಿಗಿಂತ ಎತ್ತರದಲ್ಲಿ ಬೇರೆ ಯಾರಾದರೂ ಇರುವುದು ಸಂದೀತೇ ಎಂಬುದು ಫ್ಲೆಕ್ಸ್‌ನರರ ಇಚ್ಛೆ. (ಸ್ವತಃ ಐನ್‌ಸ್ಟೈನ್ ಮಾತ್ರ ಇಂಥ ಯಾವ ಹಮ್ಮುಬಿಮ್ಮುಗಳಿಂದ ಬಾಧಿತರಾಗಿರಲಿಲ್ಲ ಎಂಬ ಸಂಗತಿ ಅಲಾಯಿದ). ಇಂಥ ಐನ್‌ಸ್ಟೈನರ ಮಟ್ಟವೇ (ಸ್ವಂತ ಆಯ್ಕೆಯಂತೆ) ಮೂರು ಸಾವಿರವಾದರೆ ಪ್ರಿನ್‌ಸ್ಟನ್, ಪ್ರತಿಭಾನ್ವಿತರನ್ನು ಆಕರ್ಷಿಸಬಲ್ಲ ಪ್ರಬಲ ಕಾಂತಕ್ಷೇತ್ರವಾಗಲಾರದೆಂದು ಫ್ಲೆಕ್ಸ್‌ನರ್ ಭಾವಿಸಿ, "ನೀವು ಮೂರು ಸಾವಿರದಲ್ಲಿ ಬಾಳಲಾರಿರಿ. ಈ ಲೌಕಿಕ ವ್ಯವಹಾರವನ್ನು ಎಲ್ಸಾರಿಗೆ ಬಿಡಿ," ಎಂಬುದಾಗಿ ಮಾರೋಲೆ ಬರೆದರು. ಮುಂದೆ ಆಕೆಯ ಪ್ರವೇಶದಿಂದ ವಾರ್ಷಿಕ ತಲಬು ೧೬,೦೦೦ ಡಾಲರುಗಳೆಂದು ನಿರ್ಧರಿತವಾದಾಗ ಈ ಜಟಿಲ ಪ್ರಶ್ನೆ ಪರಿಹಾರವಾದಂತಾಯಿತು.

ಹಿಟ್ಲರ್‌ಶಾಹಿಯ ಹಠಾತ್ ಸ್ಫೋಟದಿಂದಾಗಿ ಐನ್‌ಸ್ಟೈನರ ಕಾರ್ಯಕ್ರಮಗಳು ಹೇಗೆ ಬುಡಮೇಲಾದುವು ಎಂಬುದನ್ನು ಹಿಂದೆ ವಿವರಿಸಿದೆ. ಬೆಲ್ಜಿಯಮ್ಮಿನ ಅಜ್ಞಾತ ಗ್ರಾಮದಲ್ಲಿ ಭದ್ರರಕ್ಷಿತರಾಗಿ ಇವರು ನೆಲಸಿದರು. ಇದು ಹಂಗಾಮಿ ಏರ್ಪಾಡು. ಜರ್ಮನ್ ಸಾಮೀಪ್ಯ ಸುಖ—ತೋಳ ಕುರಿಮರಿ ಸಹವಾಸ ಸುಖ—ಅನಪೇಕ್ಷಣೀಯವಾಗಿತ್ತು, ಖಿದ್ದು ಕುರಿಮರಿಯ ದೃಷ್ಟಿಯಿಂದ. ಅದೇ ಅವಧಿಯಲ್ಲಿ ಇವರು ಒಂದೆರಡು ಬಾರಿ ಇಂಗ್ಲೆಂಡಿಗೆ ಹೋಗಿ ಬಂದರು.

ಕುಂಬಾರಮಣ್ಣು ಕಲಸಿ ಮುಗಿದಿತ್ತು. ಗಾಲಿ ತಿರುಗುತ್ತಿತ್ತು. ಮುಹೂರ್ತ ಕೂಡಿ ಬಂದಿತ್ತು. ಸಾವಿರ ಪೌಂಡುಗಳ ತಲೆಬೆಲೆ ಹೊತ್ತಿದ್ದ ಐನ್‌ಸ್ಟೈನ್ ಯೂರೋಪಿನ ಯಾವುದೇ ಮೂಲೆಯಲ್ಲಿ ಉಳಿದಿದ್ದರೂ ದಳ್ಳುರಿಗೆ ಉರುವಲಾಗುವುದು ಖಾತ್ರಿ ಎಂಬ ಪರಿಸ್ಥಿತಿ ಸ್ಪಷ್ಟವಾಗಿತ್ತು.

ಅತ್ಯಂತ ರಹಸ್ಯ ಸನ್ನಿವೇಶದಲ್ಲಿ, ಕತ್ತಲಿನ ಕರಿಮುಸುಕಿನಡಿಯಲ್ಲಿ ಐನ್‌ಸ್ಟೈನ್ ದಂಪತಿಗಳನ್ನು ಹಡಗಿಗೊಯ್ದರು. ಮೊದಲ ಗುರಿ ಲಂಡನ್, ತಲಪಿದ್ದು ಸೆಪ್ಟೆಂಬರ್ ೯ರಂದು (೧೯೩೩) ಗುಪ್ತ ಸೇವಾದಳದ ಆರಕ್ಷಕರೂ ಸಶಸ್ತ್ರ ಭಟರೂ ಅತಿ ಜತನದಿಂದ ಈ ಅಮೂಲ್ಯ ಆಸ್ತಿಯನ್ನು ರಕ್ಷಿಸುತ್ತಿದ್ದರು..

ಲಂಡನ್ನಿನ ಗುಪ್ತವಾಸ್ತವ್ಯದ ವೇಳೆ ಬಹಿರಂಗವಾಗಿಯೇ ಐನ್‌ಸ್ಟೈನ್ ಸಂಸತ್ತಿನ ಸಭೆಗೆ ಹೋಗಿ ಅಲ್ಲಿಯ ನಡವಳಿಕೆಗಳನ್ನು ಗಮನಿಸಿದರು. ಸಂದರ್ಶಕರ ಪುಸ್ತಕದಲ್ಲಿ ಇವರ ಹೆಸರನ್ನು ಲಿಖಿಸಲು ಕೋರಲಾಯಿತು : ಮೊದಲು ಹೆಸರು ಕಾಲಮ್, ಮತ್ತೆ ವಿಳಾಸ ಕಾಲಮ್. ಎರಡನೆಯದರ ಅಡಿಯಲ್ಲಿ ಏನು ಬರೆಯುವುದು ? ಮರುಯೋಚನೆ ಇಲ್ಲದೆ ಇವರು ಸಲೀಸಾಗಿ 'ನೆಲೆ ಇಲ್ಲದವ'ನೆಂದು ಬರೆದರು.

ಜೇಕಬ್ ಎಪ್‌ಸ್ಟೈನ್ (೧೮೮೦-೧೯೫೯) ಬ್ರಿಟಿಷ್‌ಶಿಲ್ಪಿ, ಗಟ್ರೂರ್ಡ್ ಸ್ಟೈನ್ (೧೮೭೪-೧೯೪೬) ಅಮೆರಿಕನ್ ಲೇಖಕಿ ಮತ್ತು ಕವಯಿತ್ರಿ, ಆಲ್ಬರ್ಟ್ ಐನ್‌ಸ್ಟೈನ್(೧೮೭೯-೧೯೫೫) ನೆಲೆ ಇರದಿದ್ದ ಭೌತವಿಜ್ಞಾನಿ. ಇವರೆಲ್ಲರೂ ಸ್ವಂತ ಕ್ಷೇತ್ರಗಳಲ್ಲಿ ಪ್ರಪಂಚವಿಖ್ಯಾತಿ ಗಳಿಸಿದ್ದ ವ್ಯಕ್ತಿಗಳಾಗಿದ್ದರು. ಐನ್‌ಸ್ಟೈನ್ ಲಂಡನ್ನಿನಲ್ಲಿದ್ದಾಗ ಸ್ನೇಹಿತರ ಅಪೇಕ್ಷೆ ಮತ್ತು ಒತ್ತಾಯದ ಮೇರೆಗೆ, ಎಪ್‌ಸ್ಟೈನರಿಗೆ ಶಿಲ್ಪಮಾದರಿಯಾಗಿ ಹಲವು ಭೈಠಕ್ಕುಗಳನ್ನು ಕೊಟ್ಟಿದ್ದರು. ಈ ಸ್ಟೈನ್‌ದ್ವಯ

ರಿಗೂ ಪ್ರಿಯಳಾದ ಕವಿ ಗಟ್ರೂಡ್. ಅಭಿಮಾನಿಮಿತ್ರರು ಈ ಮೂರು ಸ್ಟೈನರನ್ನೂ ಬಂಧಿಸುವ ಸೊಗಸಾದ ಕಗ್ಗ ಕಟ್ಟಿದರು :

ಇರುವರು ಮೂವರು ವಿಚಿತ್ರ ಸ್ಟೈನರು
ಗರ್ಟ್, ಎಪ್, ಐನ್ ಹೆಸರಿನ ಅತಿ ಚತುರರು
ಗರ್ಟ್ ಹೊಸೆಯುವಳರ್ಥರಹಿತ ಕಗ್ಗ
ಎಪ್ಪನ ಶಿಲ್ಪ ಕಣಾ ಬಲು ಅಗ್ಗ
ಐನ್ ಗೀಚಿಕೆ ಮಿಗೆ ಯಾರಿಗೂ ಜಗ್ಗ !

*ನೋಡಿ ಪುಟ ೧೯೫

ನೆಲೆಯಿರದ ವಿಳಾಸದಿಂದ ನೆಲೆಯಿರುವ ಪ್ರಿನ್ಸ್‌ಟನ್ನಿನ ಖಚಿತ ನಿವಾಸಕ್ಕೆ ತೆರಳುವ ಮುಹೂರ್ತವೂ ಕೂಡಿ ಬಂತು. ತುಪಾಕಿಪಡೆಗಳ ಗುಪ್ತಕಾವಲಿನಲ್ಲಿ ಐನ್‌ಸ್ಟೈನ್ ದಂಪತಿಗಳನ್ನು ರಹಸ್ಯವಾಗಿ ಅಮೆರಿಕಗಾಮಿ ನೌಕೆಗೆ ಒಯ್ಯಲಾಯಿತು. ಅಲ್ಲಿ ವಾಲ್ತರ್ ಮೇಯರ್ ಮತ್ತು ಐನ್‌ಸ್ಟೈನರ ಕಾರ್ಯದರ್ಶಿ ಕುಮಾರಿ ಹೆಲನ್ ಡ್ಯೂಕಾಸ್ (೧೮೯೬-೧೯೮೨) ಇವರನ್ನು ಕೂಡಿಕೊಂಡರು.

ಯೂರೋಪಿನ ವಿಜ್ಞಾನಪ್ರಜ್ಞೆ ಮತ್ತು 'ಪುರದ ಪುಣ್ಯ ಪುರುಷ ರೂಪಿ'ನಿಂದ ಅಮೆರಿಕದ ಹೊಸ ನಾಡಿಗೆ ತೇಲಿತು. ೧೯೩೩ ಅಕ್ಟೋಬರ್ ೧೭ರಂದು ಐನ್‌ಸ್ಟೈನ್ ಅಮೆರಿಕದ ದಡವೇರಿದರು. ವಿದ್ವಾಂಸರೂ ವಿಜ್ಞಾನಿಗಳೂ ಸದ್ಯದ ಕಡಲಸುಳಿಯಿಂದ ಚೋಷಿಸಲ್ಪಡದೆ ಜಗತ್ತು ಮತ್ತು ಅದರ ವಿದ್ಯಮಾನಗಳನ್ನು ತಮ್ಮ ಪ್ರಯೋಗಾಲಯವೆಂಬುದಾಗಿ ಪರಿಗಣಿಸಬಹುದಾದ ರೇವು ತಲಪಿದರು—ಸ್ವಾಸ್ಥ್ಯದಾಯಕ ಠಾವು.

ಅಮೆರಿಕದ ಅಧ್ಯಕ್ಷ ಫ್ರ್ಯಾಂಕ್ಲಿನ್ ರೂಸ್‌ವೆಲ್ಟ್ (೧೮೮೨-೧೯೪೫) ಖುದ್ದಾಗಿ ಈ ವಿಜ್ಞಾನ ಸೀಮಾಪುರುಷನನ್ನು ತಮ್ಮ ಗೌರವಾನ್ವಿತ ಅತಿಥಿಯಾಗಿ ಬರಮಾಡಿಕೊಂಡರು.

## ೧೩. ಪ್ರಿನ್ಸ್‌ಟನ್ನಿನಲ್ಲಿ ವಿಜ್ಞಾನಿಗಳ ಪ್ರಿನ್ಸ್

**ಬೈರಾಗಿ ಬೀಡು ಬಿಟ್ಟಲ್ಲೇ ಬಿಡಾರ**

ಬುದ್ಧಿವಂತ ಹುಡುಗರೆಲ್ಲ ಕಲಿಯುವರು ಗಣಿತ
ಅಲ್ಬಿ ಐನು ತೋರಿಸುವರು ನಲುಮೆಯಿಂದ ಪಥ
ಗಾಳಿ ಕುಡಿಯಲಿವರು ಹೊರಗೆ ಬರುವುದಪರೂಪ
ಕತ್ತರಿಸುತ ಕೂದಲನ್ನು ಪಡೆಯಲಿವರು ರೂಪ !

ಪ್ರಿನ್ಸ್‌ಟನ್ನಿನಲ್ಲಿ ಪ್ರಚಲಿತವಾಗಿದ್ದ ಕಗ್ಗ

ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್‌ಡ್ ಸ್ಟಡಿ, ಪ್ರಿನ್ಸ್‌ಟನ್ ಇದರ ಅಮೂಲ್ಯ ಮತ್ತು ಅದ್ವಿತೀಯ ಆಸ್ತಿಯಾಗಿ ಐನ್‌ಸ್ಟೈನ್ ಪ್ರತಿಷ್ಠಿತರಾದರು. ಕೆಲವು ತಿಂಗಳುಗಳ ಕಾಲ ಇಲ್ಲಿ ತಂಗಿದ್ದು ಬಳಿಕ ಇಂಗ್ಲೆಂಡ್ ಯೂರೋಪುಗಳಿಗೆ (ಆದರೆ ಜರ್ಮನಿಗೆ ಖಂಡಿತ ಅಲ್ಲ) ಹೋಗಿ ಮರಳುವುದೆಂದು ಮೊದಲು ಯೋಜಿಸಿದ್ದರು. ಆದರೆ ಪ್ರಪಂಚದ ರಾಜಕೀಯ ವಾತಾವರಣದಲ್ಲಿ ಬೀಸುತ್ತಿದ್ದ ಸುಂಟರಗಾಳಿ ಈ ಯೋಜನೆಗೆ ಪ್ರಬಲ ಅಡಚಣೆ ಎದುರೊಡ್ಡಿತು. ಹೀಗಾಗಿ ಇವರು ಶಾಶ್ವತ ಅಮೆರಿಕನ್ ಪೌರತ್ವ ಪಡೆಯಲು ನಿರ್ಧರಿಸಿ ಅರ್ಜಿ ಸಲ್ಲಿಸಿದರು. ಈ ಕೋರಿಕೆಯನ್ನು ಸರ್ಕಾರ ಸಂತೋಷದಿಂದ ಮನ್ನಿಸಿ ೧೯೩೬ ಮಾರ್ಚ್ ೨೮ರಂದು ಯುಕ್ತ ಆಜ್ಞೆ ಹೊರಡಿಸಿತು:

ವೈಜ್ಞಾನಿಕ ಪ್ರಪಂಚ ಪ್ರೊಫೆಸರ್ ಆಲ್ಬರ್ಟ್ ಐನ್‌ಸ್ಟೈನರನ್ನು ಮಹಾ ವಿದ್ವಾಂಸ ಮತ್ತು ಪ್ರತಿಭಾನ್ವಿತರೆಂದು ಸ್ವೀಕರಿಸುವುದಾಗಿ,

ಮತ್ತು ಮಾನವಹಿತಸಾಧಕರಾಗಿ ಇವರ ಚಟುವಟಿಕೆಗಳು ಇವರನ್ನು ಅಸಂಖ್ಯಾತ ಸಹಭಾಜನರ ದೃಷ್ಟಿಯಲ್ಲಿ ಉಚ್ಚಸ್ಥಾನದಲ್ಲಿಟ್ಟಿರುವುದಾಗಿ,

ಮತ್ತು ತಾವು ಸಂಯುಕ್ತ ಸಂಸ್ಥಾನಗಳನ್ನು ಪ್ರೀತಿಸುವಾತ ಮತ್ತು ಇದರ ಸಂವಿಧಾನದ ಅಭಿಮಾನಿ ಎಂಬುದಾಗಿ ಇವರು ಅನೇಕ ಸಂದರ್ಭಗಳಲ್ಲಿ ಘೋಷಿಸಿರುವರಾಗಿ,

ಮತ್ತು ಪ್ರಪಂಚದಲ್ಲಿ ಸಂಯುಕ್ತ ಸಂಸ್ಥಾನಗಳು ಸ್ವಾತಂತ್ರ್ಯದ ಹಾಗೂ ಉಚ್ಚ ನಾಗರಿಕತೆಯ ನೆಲೆಯೆಂದು ಪ್ರಸಿದ್ಧವಾಗಿರುವುದಾಗಿ—

ಆದ್ದರಿಂದ

೧. ಅಮೆರಿಕ ಸಂಯುಕ್ತ ಸಂಸ್ಥಾನಗಳ ಸೆನೆಟ್ ಮತ್ತು ಪ್ರತಿನಿಧಿಗಳ ಸಂಸತ್ತು,

೨. ಕಾಂಗ್ರೆಸ್ಸಿನಲ್ಲಿ ಸೇರಿ ಈ ಮುಂದಿನಂತೆ ಠರಾವನ್ನು ಮಂಜೂರು ಮಾಡುವುದಾಗಲಿ :

೩. ಈ ಮೂಲಕ ಆಲ್ಬರ್ಟ್ ಐನ್‌ಸ್ಟೈನರನ್ನು ಅನಿರ್ಬಂಧಿತವಾಗಿ,

೪. ಸಂಯುಕ್ತ ಸಂಸ್ಥಾನಗಳ ಪೌರನ ಅಂತಸ್ತಿಗೂ ಬಾಧ್ಯತೆಗಳಿಗೂ ಪ್ರವೇಶಗೊಳಿಸಲಾಗಿದೆ.

ಕಾಲರಾಯನ ವಿಚಿತ್ರ ಕೈಚಳಕ : ಅಮೆರಿಕ ಮುಕ್ತಮನಸ್ಸಿನಿಂದ ತನ್ನ ಪೌರತ್ವವನ್ನು ಐನ್‌ಸ್ಟೈನರಿಗೆ ಪ್ರದಾನಿಸಿ ಗೌರವಿಸಿದ ಮರುದಿವಸ ಜರ್ಮನಿ (ಇದರ ಅರಿವು ಇರದೆ) ಸಂಕುಚಿತ ಬುದ್ಧಿಯಿಂದ ಇವರ ಜರ್ಮನ್ ಪೌರತ್ವವನ್ನು ರದ್ದುಗೊಳಿಸಿದ ಆಜ್ಞೆಯನ್ನು ಪ್ರಕಟಿಸಿತು ! ಕಾನೂನಿನ ಈ ಮಾಮೂಲಿ ಹುಕುಂ ಚಲಾವಣೆಗೆ ಯಾವ ಅರ್ಥವೂ ಇರಲಿಲ್ಲ. ಎಂದೇ ಅನೇಕ ವರ್ಷಗಳ ಬಳಿಕ ಐನ್‌ಸ್ಟೈನ್ ಮಾಡಿದ ಟೀಕೆ ವಿಶಿಷ್ಟ ಧ್ವನಿಪೂರ್ಣವಾಗಿದೆ "ನನ್ನ [ಜರ್ಮನ್] ರಾಷ್ಟ್ರೀಯತೆಯನ್ನು ನಾನು ತ್ಯಜಿಸಿಯಾದ ಬಳಿಕ ಹಿಟ್ಲರ್‌ಶಾಹಿ ಅಟ್ಟಹಾಸಪೂರ್ವಕವಾಗಿ ನನ್ನನ್ನು ಹೊರಗೆಸೆಯಿತು. ಇದು ಮುಸ್ಸೊಲೀನೀ [೧೮೮೩-೧೯೪೫] ದೇಹವನ್ನು ಆತ ಸತ್ತಿರುವನೆಂದು ತಿಳಿದಿದ್ದಾಗಲೂ ಗಲ್ಲಿಗೇರಿಸಿದ ವರ್ತನೆಗೆ ಸದೃಶವಾಗಿದೆ."

ಪ್ರಿನ್ಸ್‌ಟನ್ನಿನಲ್ಲಿ ಐನ್‌ಸ್ಟೈನರ ಪಾವನ ಏಕಾಂತತೆಯನ್ನು ರಕ್ಷಿಸುವುದು ವ್ಯವಸ್ಥಾಪನೆಯ, ಅಂದರೆ ಫ್ಲೆಕ್ಸ್‌ನರರ, ಮುಖ್ಯ ಹೊಣೆ. ಇದರ ನಿರ್ವಹಣೆಯಲ್ಲಿ ಇವರು ಎರಡು ವಿಶಿಷ್ಟ ಅಂಶಗಳನ್ನು ಗಮನಿಸಬೇಕಾಗಿತ್ತು : ಪ್ರಾಗ್ವಸ್ತು ಭಂಡಾರದ ವಿಲಕ್ಷಣ ವೈಚಿತ್ರ್ಯ (museum curio) ಐನ್‌ಸ್ಟೈನ್ ಎಂಬುದಾಗಿ ಭಾವಿಸಿ ನೋಡಬರುವ ಕುತೂಹಲಿ ಜನರ ಸಂತೆಯಿಂದ ಇವರನ್ನು ಕಾಪಾಡುವುದು ; ಸ್ವತಃ ಯಾವುದೇ ಕಟ್ಟುಪಾಡುಗಳಿಗೂ ಒಳಪಡದ ಇವರಿಗೆ ಇನಿತೂ ಮುಜಗರವಾಗದಂತೆ ಇವರ ದಿನಚರಿಯನ್ನು ರೂಪಿಸಿ ನಿಯಂತ್ರಿಸುವುದು.

ಕರ್ತವ್ಯನಿರ್ವಹಣೆಯಲ್ಲಿ—ಅದೂ ಶಿಸ್ತು, ಸಂಯಮ, ಕಾಲನಿಷ್ಠೆ, ಕಛೇರಿ ಸಂಪ್ರದಾಯ, ಸಾರ್ವಜನಿಕ ನಡವಳಿಕೆ ಮುಂತಾದವನ್ನು ಪಾಲಿಸುವಲ್ಲಿ—ಫ್ಲೆಕ್ಸ್‌ನರ್ ಎತ್ತಿದ ಕೈ. ಆಡಳಿತಗಾರನಾಗಿ ತಾನು ಸಮರ್ಥರನ್ನು ಹೆಕ್ಕಿ ತರುವುದು, ಅವರಿಗೆ ಬೌದ್ಧಿಕ ಕಾರ್ಯವೆಸಗಲು ಯೋಗ್ಯ ಪರಿಸರ ಒದಗಿಸುವುದು, ಸಮಗ್ರವಾಗಿ ಸಂಸ್ಥೆಯ ಹಿತರಕ್ಷಿಸುವುದು—ಇಷ್ಟಾದರೆ ಪ್ರಿನ್ಸ್‌ಟನ್ ತಂತಾನೇ ಪ್ರವರ್ಧಿಸುತ್ತದೆಂದು ಇವರು ಪ್ರಾಮಾಣಿಕವಾಗಿ ನಂಬಿದ್ದರು. ಇವರ ಕಾರ್ಯದಕ್ಷತೆ, ಸ್ವಲ್ಪಮಟ್ಟಿಗೆ, ಖುದ್ದು ರಕ್ಷಿತನ ಬೇಕುಬೇಡಗಳನ್ನು ಲೆಕ್ಕಿಸದೆ ಕಾನೂನುಪಾಲನೆ ಮಾಡುವ ಉಗ್ರ ನಿಷ್ಠಾವಂತ ಸೇವಕನ ನಿಷ್ಠುರ 'ಜಂಬ'ದಂತಿತ್ತು.

ವಿಧಿನಿರ್ಬಂಧಗಳ ಎಲ್ಲ ದಕ್ಷ ಪಾಲಕನಿರ್ವಾಹಕರಂತೆ ಫ್ಲೆಕ್ಸ್‌ನರರೂ ಸ್ವಸಾಮರ್ಥ್ಯದ ಅರಿವಿ

ನಿಂದ ಅಹಮಿಕೆಯುಳ್ಳವರಾಗಿದ್ದರು. ಐನ್‌ಸ್ಟೈನರ ಲೌಕಿಕ ಅವ್ಯಾವಹಾರಿಕತೆ ಜೊತೆ ಈ ಅಹಮಿಕೆ ಹೇಗೆ ಅಂತರವರ್ತಿಸಿತೆಂಬುದನ್ನು ಮುಂದಿನ ಲಘು ನಿದರ್ಶನದಿಂದ ತಿಳಿಯಬಹುದು.

ಒಮ್ಮೆ ಅಧ್ಯಕ್ಷ ರೂಸ್‌ವೆಲ್ಟರು ಐನ್‌ಸ್ಟೈನ್-ದಂಪತಿಗಳನ್ನು ಶ್ವೇತಭವನದಲ್ಲಿ (ಅಧ್ಯಕ್ಷರ ಅಧಿಕೃತನಿವಾಸ) ತಮ್ಮ ಜ್ಜೊತೆ ಭೋಜನ ಸ್ವೀಕರಿಸಲು ಬರಬೇಕೆಂದು ಆಮಂತ್ರಿಸಿದರು. ವಾಡಿಕೆ ಯಂತೆ ಅಧ್ಯಕ್ಷರ ಕಾರ್ಯದರ್ಶಿ ಕರ್ನಲ್ ಮ್ಯಾಕಿನ್‌ಟೈರ್, ಐನ್‌ಸ್ಟೈನರ ಕಾರ್ಯದರ್ಶಿ ಕುಮಾರಿ ಹೆಲನ್ ಡ್ಯೂಕಾಸ್ ಅವರಿಗೆ ದೂರವಾಣಿ ಮೂಲಕ ಮಾತಾಡಿ ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಐನ್‌ಸ್ಟೈನರ ಪರವಾಗಿ, ಎಂದಿನಂತೆ ಡ್ಯೂಕಾಸ್ ಈ ಕರೆಯನ್ನು ಮನ್ನಿಸಿದ್ದರು. ಆದರೆ ಫ್ಲೆಕ್ಸ್‌ನರ್ ಇದು ಶಿಸ್ತಿನ ಉಲ್ಲಂಘನೆ ಎಂದು ಬಗೆದು ಒಡನೆ ಮ್ಯಾಕಿನ್‌ಟೈರರನ್ನು ದೂರವಾಣಿ ಮೇಲೆ ಕರೆದು, ಐನ್‌ಸ್ಟೈನರ ಯಾವುದೇ ಕಾರ್ಯಕ್ರಮವನ್ನು ತನ್ನ ಮೂಲಕವಲ್ಲದೇ ಬೇರೆ ತೆರನಾಗಿ ಏರ್ಪಡಿಸಿದ್ದಾದರೆ, ಅದು ಸಿಂಧುವಾಗದೆಂದು ನಿಷ್ಠುರವಾಗಿ ಗುಡುಗಿದರು. ಇಷ್ಟು ಸಾಲದೋ ಎಂಬಂತೆ ಸಾಕ್ಷಾತ್ ರೂಸ್‌ವೆಲ್ಟರಿಗೇ ಕಾಗದವನ್ನೂ ಬರೆದು ವಿಷಯವನ್ನು ವಿಶದೀಕರಿಸಿದರು : ಐನ್‌ಸ್ಟೈನ್ ಪ್ರಿನ್ಸ್‌ಟನ್ನಿಗೆ ಬಂದಿರುವುದು ಏಕಾಂತದಲ್ಲಿ ವೈಜ್ಞಾನಿಕ ಕಾರ್ಯ ನಿರ್ವಹಿಸಬೇಕೆಂಬ ಏಕೈಕ ಉದ್ದೇಶದಿಂದ ; ಸಾರ್ವಜನಿಕ ದೃಷ್ಟಿಗೆ ಬೀಳಬಲ್ಲ ಯಾವುದೇ ಕಾರ್ಯಕ್ರಮಕ್ಕೂ ಅವರು ಹೋಗಲಾರರು ; ಬೇಜವಾಬ್ದಾರಿಕೆಯ ನಾಟ್ಸೀ ಗುಂಪೊಂದು ನ್ಯೂಯಾರ್ಕಿನಲ್ಲಿ ಕಾರ್ಯಪಟುವಾಗಿರುವಾಗ ಮತ್ತು ಪತ್ರಿಕೆಗಳು ಐನ್‌ಸ್ಟೈನರ ಬಗ್ಗೆ ಯಾವುದೇ ಮಾಹಿತಿಯನ್ನು ಲಂಬಿಸಿ ಪ್ರಕಟಿಸಲು ಕಾತರವಾಗಿರುವಾಗ ಇವರು ಯಾವುದೇ ಆಮಂತ್ರಣವನ್ನು ಒಪ್ಪಿಕೊಂಡದ್ದಾದರೆ ಮುಂದೆ ಆಮಂತ್ರಣಗಳ ಪ್ರವಾಹವೇ ಬಂದು ಇವರನ್ನು ಕೊಚ್ಚಿಕೊಂಡು ಹೋಗುವುದು ದಿಟ ; ಆದ್ದರಿಂದ ಅಧ್ಯಕ್ಷರ ಆಮಂತ್ರಣಕ್ಕೆ ಕೂಡ ವಿನಾಯಿತಿ ತೋರಿಸುವುದು ಸಾಧ್ಯವಾಗದು ; "ಅವರು ನಿಜಕ್ಕೂ ಆಸಕ್ತರಾಗಿರುವ ಉಚ್ಚ ಅಧಿಕಾರಗಳಿಂದ ಹಾಗೂ ವೈಜ್ಞಾನಿಕ ಸಂಘಗಳಿಂದ ಬಂದ ಆಮಂತ್ರಣಗಳನ್ನಾದರೂ ನಾನು, ಅವರ ಒಪ್ಪಿಗೆ ಪಡೆದು, ಅವರ ಅಪೇಕ್ಷೆ ಮೇರೆಗೆ ಮತ್ತು ಅವರ ಪರವಾಗಿ ನಿರಾಕರಿಸಿದ್ದೇನೆ."

ಇಲ್ಲಿಯ ವಿಶೇಷ ಸಂಗತಿಯೇನೆಂದರೆ ಒಂದು ಕಡೆ ಫ್ಲೆಕ್ಸ್‌ನರ್ ತಮ್ಮ ಪಾಳೇಗಾರಿಕೆ ಮನೋಭಾವವನ್ನು ಬಲು ಒಡ್ಡೊಡ್ಡಾಗಿ ಪ್ರದರ್ಶಿಸುತ್ತಿದ್ದಾಗಲೇ, ಈ ಆಮಂತ್ರಣದ ಅಥವಾ ತದನಂತರದ ಅಪಸ್ವರದ ಬಗೆಗೆ ಯಾವ ಸುಳುಹೂ ಇರದಿದ್ದ ಐನ್‌ಸ್ಟೈನ್, ಅದೇ ಏಕಾಂತತೆಯನ್ನು ಕಳೆದುಕೊಳ್ಳಲು ಮತ್ತು ಅದೇ ಸಾರ್ವಜನಿಕ ದೃಷ್ಟಿಗೆ ಈಡಾಗಲು 'ಮುಖ್ಯೋಪಾಧ್ಯಾಯ'ರ ಅನುಮತಿ ಅಥವಾ ಕನಿಷ್ಠ ಪಕ್ಷ ತಿಳಿವಳಿಕೆ ಕೂಡ ಇಲ್ಲದೆ ಒಪ್ಪಿಕೊಳ್ಳುತ್ತಿದ್ದುದು ! ಇವರು ಸಾರ್ವಜನಿಕವಾಗಿ ಪಿಟೀಲು ಕಛೇರಿ ನೀಡಿದರು ; ರಾಜ್ಯದ ಗವರ್ನರ್ ಏರ್ಪಡಿಸಿದ ಸತ್ಕಾರ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಹೋದರು ; ನ್ಯೂಜೆರ್ಸಿಯ ನಿವಾಸಿ ಎಂಬುದಾಗಿ ಇವರನ್ನು ಸ್ವಾಗತಿಸಿದ ಸಮಾರಂಭದಲ್ಲಿ ಪಾಲ್ಗೊಂಡರು ; ಮತ್ತು ಹೊಸತೊಂದು ದೈನಿಕದ ವಿಸ್ತೃತ ಆವೃತ್ತಿಯ ಉದ್ಘಾಟನಾಸಮಾರಂಭದಲ್ಲಿ ಹಾಜರಾದರು.

ಅಧ್ಯಕ್ಷರ ಭೋಜನಾಮಂತ್ರಣ ಪ್ರಕರಣ ಅಲ್ಲಿಗೇ ತಣ್ಣಗಾಗಿ ಹೋಗುತ್ತಿತ್ತೊ ಏನೊ ! ಆದರೆ ಅದೇ ತರುಣದಲ್ಲಿ ಸರ್ಕಾರದ ಹಿರಿ ಅಧಿಕಾರಿಯೊಬ್ಬನಿಂದ ಐನ್‌ಸ್ಟೈನರಿಗೊಂದು ಖಾಸಗಿ ಕಾಗದ ಬಂತು. ಈತ ಇವರ ಮಿತ್ರನೂ ಆಗಿದ್ದುದರಿಂದ ಆ ಕಾಗದದಲ್ಲಿ ಒಂದೆಡೆ ಭೋಜನಾಮಂತ್ರಣ ನಿರಾಕರಣ ಪ್ರಸಂಗವನ್ನು ಆನುಷಂಗಿಕವಾಗಿ ಪ್ರಸ್ತಾವಿಸಿದ್ದ. ಐನ್‌ಸ್ಟೈನರಿಗೆ ತಲೆಬೇನೆ ! ಕಾರ್ಯದರ್ಶಿ ಡ್ಯೂಕಾಸ್ ತನಗೆ ಗೊತ್ತಿದ್ದುದನ್ನು ಹೇಳಿದರು : ಆಮಂತ್ರಣ ಬಂದದ್ದು

ಹೌದು, ಆದರೆ ಯಾವುದೊ ಕಾರಣಕ್ಕಾಗಿ ಅದು ಸ್ಥಿರೀಕೃತವಾಗಿರಲಿಲ್ಲ. ತಲೆಬೇನೆ ಏರಿತು !

ಇನ್ನೊಬ್ಬರ ಭಾವನೆಗಳಿಗೆ ತುಂಬ ಮರ್ಯಾದೆ ಸಲ್ಲಿಸುತ್ತಿದ್ದ ಮತ್ತು ಆತ್ಮೀಯತೆಯಿಂದ ಸ್ಪಂದಿಸುತ್ತಿದ್ದ ಐನ್‌ಸ್ಟೈನ್ ಒಡನೆ ಶ್ರೀಮತಿ ಎಲಿನಾರ್ ರೂಸ್‌ವೆಲ್ಟರಿಗೆ ಕಾಗದ ಬರೆದರು : ರಾಷ್ಟ್ರದ ಅಗಾಧ ಸಮಸ್ಯೆಯನ್ನು ಅಪಾರ ತ್ರಾಣದಿಂದ ಎದುರಿಸಿ ಪರಿಹರಿಸುತ್ತಿರುವ ಅಧ್ಯಕ್ಷರನ್ನು ಭೇಟಿಯಾಗುವುದು ನಿಜಕ್ಕೂ ತನಗೆ ಎಂಥ ಹಿಗ್ಗು ಕೊಟ್ಟಿರುತ್ತಿತ್ತು ; ಆದರೆ ಆ ಆಮಂತ್ರಣ ತನಗೆ ತಲಪಲೇ ಇಲ್ಲ ; "ಇಂಥ ಒಂದನ್ನು ನೀಡಬೇಕೆಂದು ಉದ್ದೇಶಿಸಲಾಗಿತ್ತೆಂದೂ ಆದರೆ ಆ ಯೋಜನೆಯನ್ನು ಕೈಬಿಡಲಾಯಿತೆಂದೂ ನಾನು ಕೇಳಿದೆ. ಈ ವಿಚಾರದಲ್ಲಿ ನಾನು ಉದಾಸೀನ ಮಾಡಿದೆನೆಂಬ ಅಥವಾ ಅಸಭ್ಯತೆಯಿಂದ ವರ್ತಿಸಿದೆನೆಂಬ ಭಾವ ಇತರರಲ್ಲಿ ಮೂಡಿದುದಾದರೆ ಅದು ನನಗೆ ಅತ್ಯಂತ ವೇದನೆ ಉಂಟುಮಾಡುವುದು. ಅದಕ್ಕಾಗಿ ಇಷ್ಟು ವಿವರವಾಗಿ ಬರೆಯ ಬೇಕಾಯಿತು."

ಶ್ರೀಮತಿ ರೂಸ್‌ವೆಲ್ಟರಿಗೆ ಬರೆದ ಕಾಗದ ಫ್ಲೆಕ್ಸ್‌ನರರ 'ಘನೋದ್ದೇಶ'ವನ್ನು ಪೂರ್ತಿಯಾಗಿ ಸೋಲಿಸಿತು : ಅಧ್ಯಕ್ಷರಿಂದ ಆಮಂತ್ರಣ ಬಂದಿತು. ಐನ್‌ಸ್ಟೈನ್ ದಂಪತಿಗಳು ಶ್ವೇತಭವನಕ್ಕೆ ಹೋಗಿ ಭೋಜನಸಮಾರಂಭದಲ್ಲಿ ಭಾಗವಹಿಸಿದರು. ಮಾತುಕತೆ ವೇಳೆ ಪ್ರಾಯಶಃ ಯೂರೋಪಿನಲ್ಲಿ ಉಲ್ಬಣಿಸುತ್ತಿದ್ದ ನಾಟ್ಸೀ ಕುಷ್ಠವ್ಯಾಧಿಯನ್ನು ಕೂಲಂಕಷವಾಗಿ ಚರ್ಚಿಸಿರಬಹುದು. ಅಜ್ಞಾತ ವಾಸದಲ್ಲಿದ್ದಾಗ ಐನ್‌ಸ್ಟೈನರಿಗೆ ಪ್ರೇಮಾಶ್ರಯ ನೀಡಿದ್ದ ಬೆಲ್ಜಿಯಮ್ಮಿನ ರಾಜ ರಾಣಿಯರ ಸೌಜನ್ಯ ಸಂಸ್ಕೃತಿಗಳ ಬಗ್ಗೆ ಮತ್ತು ಆ ಪುಟ್ಟರಾಷ್ಟ್ರಕ್ಕೆ ದುಷ್ಟ ಜರ್ಮನಿಯಿಂದ ಒದಗುತ್ತಿದ್ದ ವಿನಾಕಾರಣ ಹಿಂಸೆಯ ಬಗ್ಗೆ ಮಾತಾಡಿರಬಹುದು.

ಶ್ವೇತಭವನದಿಂದ ನಿರ್ಗಮಿಸುವ ಮುನ್ನ ಐನ್‌ಸ್ಟೈನ್ ತಮ್ಮ ಎಂದಿನ ಕ್ರಮದಂತೆ ಸೌಹಾರ್ದವನ್ನು ವ್ಯಕ್ತಪಡಿಸುವ ಕಿರುಕಗ್ಗ ಗೀಚಿ ಅಧ್ಯಕ್ಷರಿಗಿತ್ತು ಶುಭ ಕೋರಿದರು :

ರಾಜಧಾನಿಯ ಮಹೋಜ್ಜ್ವಲ ಭವನದಲಿ ಭವಿ-
ಷ್ಯವನು ಟಂಕಿಸುತಿಹ ಮಹಾತ್ರಾಣಿ ಹಿರಿ ಜೀವಿ
ಪರಿಹಾರವೀಯಲು ಸಮರ್ಥನಿವ. ಕಳೆದಿರುಳು
ನೆನೆದಿಹೆವು ನಿಮ್ಮನಿದೊ ನಿಮಗೆ ಸದ್ಭಾವಗಳು

ಜರ್ಮನ್ ಮೂಲದಿಂದ ಇಂಗ್ಲಿಷಿಗೆ ಅನುವಾದಿಸಲ್ಪಟ್ಟ ಪಾಠ :

In the Capital's proud magnificence
Where destiny is made
Cheerfully fights a proud man
Who can provide the solution.
In our conversation of last night
There were cordial thoughts of you
Which must be spoken
So I send this greeting.

ಇಲ್ಲಿ ಬರುವ 'ನಿಮ್ಮ' ಪದ ಬೆಲ್ಜಿಯಮ್ಮಿನ ರಾಜದಂಪತಿಗಳನ್ನು ಕುರಿತುದಾಗಿರಬೇಕೆಂದು ಊಹೆ.

ಫ್ಲೆಕ್ಸ್‌ನರ್ ಜೊತೆಗಿನ ಭಾವಕದನದ ಅಥವಾ ಶಿಸ್ತುಕಾಳಗದ ಬಗ್ಗೆ ಮುಂದೊಂದು ದಿವಸ

ಪ್ರಸ್ತಾವಿಸುತ್ತಿದ್ದಾಗ ಐನ್‌ಸ್ಟೈನ್ ಅದನ್ನು "ಮಧುಚಷಕದೊಳಗೆ ಚಂಡಮಾರುತ"ವೆಂದು ಸೂತ್ರೀಕರಿಸಿದರು.

ಐನ್‌ಸ್ಟೈನ್ ಪ್ರಿನ್‌ಸ್ಟನ್ನಿನಲ್ಲಿ ನೆಲಸಿದ ಹೊಸದರಲ್ಲಿ ನಡೆದ ಘಟನೆ ಈ ಮುಂದಿನದು. ಪ್ರಿನ್‌ಸ್ಟನ್ ವಿಶ್ವವಿದ್ಯಾಲಯದ ಗ್ರ್ಯಾಜುಯೇಟ್ ಸ್ಕೂಲಿನ ಡೀನ್ ಆಗಿದ್ದವರು ಐಸೆನ್‌ಹಾರ್ಟ್. ಇವರ ಮಗ ಚರ್ಚಿಲ್ ಐಸೆನ್‌ಹಾರ್ಟ್. ಒಮ್ಮೆ ಮಗ ತಂದೆಯ ಕಚೇರಿಗೆ ದೂರವಾಣಿ ಕರೆ ನೀಡಿದ :

ಮರುವಾಣಿ, "ನಮಸ್ಕಾರ, ಡೀನ್ ಕಚೇರಿ."

"ನಮಸ್ಕಾರ, ನಾನು ಚರ್ಚಿಲ್ ಐಸೆನ್‌ಹಾರ್ಟ್. ಡೀನ್ ಅವರೊಡನೆ ಕೊಂಚ ಮಾತಾಡಬಹುದೇ, ದಯವಿಟ್ಟು ?"

"ಡೀನ್ ಹೊರಗೆಲ್ಲೋ ಹೋಗಿದ್ದಾರೆ."

"ಹಾಗಾದರೆ ಪ್ರಾಯಶಃ ನೀವು ಹೇಳಬಲ್ಲಿರೆಂದು ತೋರುತ್ತದೆ, ಡಾಕ್ಟರ್ ಐನ್‌ಸ್ಟೈನ್ ಎಲ್ಲಿ ವಾಸಿಸುವರೆಂದು."

ಆದರೆ ಈ ರಹಸ್ಯವನ್ನು ಬಯಲುಮಾಡತಕ್ಕದ್ದಲ್ಲವೆಂದು ಮೊದಲೇ ಒಪ್ಪಲಾಗಿದ್ದುದರಿಂದ ಉತ್ತರವನ್ನು ವಿನಯಪೂರ್ವಕವಾಗಿ ನಿರಾಕರಿಸಲಾಯಿತು. ದೂರವಾಣಿಯ ಕೈಪಿಡಿಯನ್ನು ಸ್ವಸ್ಥಾನದಲ್ಲಿ ಇಡುವ ಮೊದಲು ಚರ್ಚಿಲ್ಲನಿಗೆ ಎದುರು ಪಕ್ಷದ ಪಿಸುನುಡಿ ಕೇಳಿಬಂತು. "ಯಾರಿಗೂ ಹೇಳಬೇಡಿ—ನಾನೇ ಡಾಕ್ಟರ್ ಐನ್‌ಸ್ಟೈನ್. ನಾನು ನನ್ನ ಮನೆಯೆಡೆಗೆ ಹೊರಟಿದ್ದೇನೆ. ಆದರೆ ಅದೆಲ್ಲಿದೆ ಎಂಬುದು ಮರೆತುಹೋಗಿದೆ."

ಬ್ರಹ್ಮಾಂಡವಿಸ್ತಾರದಲ್ಲಿ ಕೋನಸೆಕೆಂಡಿನ ಅತ್ಯಲ್ಪ ಪ್ರಮಾಣವನ್ನೂ ಅತಿ ನಿಖರವಾಗಿ ಗುರುತಿಸಿದ ಮಹಾವಿಜ್ಞಾನಿ, ಪ್ರಿನ್‌ಸ್ಟನ್ನಿನ ಅಂಗೈ ಬ್ರಹ್ಮಾಂಡದಲ್ಲಿ ದೂರವಾಣಿ ನಿರ್ವಾಹಕಿಯಿಂದ ತಮ್ಮ ನೆಲೆಯ ನಿರ್ದೇಶಕಗಳನ್ನು (coordinates) ಅರಿತುಕೊಳ್ಳಬೇಕಾಯಿತು !

ಪ್ರಿನ್‌ಸ್ಟನ್ನಿನಲ್ಲಿ ಇನ್‌ಸ್ಟಿಟ್ಯೂಟ್ ಪ್ರಾರಂಭವಾಗುವ ಮೊದಲೇ ಒಂದು ವಿಶ್ವವಿದ್ಯಾಲಯವಿತ್ತು. ತೋಟ ಸಾಲುಮರಗಳಿಂದ ಕೂಡಿದ್ದ ಪ್ರಶಾಂತ ಪರಿಸರ. ಅದನ್ನು ನಗರವೆನ್ನುವುದಕ್ಕಿಂತಲೂ ವಿಸ್ತೃತಗ್ರಾಮವೆನ್ನುವುದೇ ಹೆಚ್ಚು ಒಪ್ಪುವ ಮಾತು. ಬುದ್ಧಿಜೀವಿಗಳಿಗೆ ಭಾವನೆಯ ಬೆಂಬತ್ತಿ ಸಾಗಲು ಯೋಗ್ಯ ಅವಕಾಶ. ವಿಶ್ವವಿದ್ಯಾಲಯದ ಒತ್ತಿಗೆ ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡಿ ಅರಳುತ್ತಿತ್ತು. ಈ ವಲಯದಲ್ಲಿ ಸಿರಿವಂತರು ದೂರ ದೂರ ಮನೆಮಾಡಿಕೊಂಡಿದ್ದರು. ವಿಶ್ವವಿದ್ಯಾಲಯದ ಬುದ್ಧಿಶ್ರೀಮಂತರಿಗೂ ಸ್ಥಳೀಯ ವಿತ್ತಶ್ರೀಮಂತರಿಗೂ ನಡುವೆ ಕ್ರಮೇಣ ಹೊಂದಾಣಿಕೆ ಏರ್ಪಟ್ಟು ಅಲ್ಲಿ ಒಂದು ಬಗೆಯ ವಿಶಿಷ್ಟ ಸಂಸ್ಕೃತಿ ವಿಕಸಿಸಿತ್ತು. ಇದರ ಮುಖ್ಯಲಕ್ಷಣಗಳಿವು : ಕಾರ್ಯ ಕಲಾಪಗಳಲ್ಲಿ ಲವಲವಿಕೆ ಮತ್ತು ತಮ್ಮ ತಮ್ಮ ಸಿರಿವಂತಿಕೆಗಳ ಯಥೋಚಿತ ಪ್ರದರ್ಶನ. ಕುಪ್ರತಿಷ್ಠೆಯ ಒಂದು ಮುಖವಿದು. ಹೀಗಾಗಿ ಬಾಹ್ಯಾಚರಣೆಗಳ ಅಚ್ಚುಕಟ್ಟುತನದ ಮೇಲೆ ಸ್ವಲ್ಪ ಹೆಚ್ಚಿನ ಒಂದು ಒತ್ತು ಬಿತ್ತು : ಬಂಗ್ಲೆಯ ಮೆರುಗು, ಅಣಿಕಟ್ಟುಗಳ (furniture) ವೈಭವ, ಉಡುಪಿನ ನಾಜೂಕು, ಮಾತಿನಲ್ಲಿ ತೂಕ, ಆಸಕ್ತಿಗಳಲ್ಲಿ ಮಡಿವಂತಿಕೆ ಇತ್ಯಾದಿ. ಕುಲೀನವರ್ಗದ ವಿಚಿತ್ರ ಸಂಸ್ಕೃತಿ ಇದು.

ಐನ್‌ಸ್ಟೈನ್ ? ಇದರ ವಿರುದ್ಧ ಧ್ರುವ ಪುರುಷ. ಯಾವುದೇ ಬಾಹ್ಯ ಪ್ರತಿಬಂಧಕಗಳಿಗೂ ನಿಲುಕದ ಸರಳ ಜೀವಿ. ಗಂಭೀರ ಚಿಂತನಶೀಲ. ಉಡುಪು ನಡೆನುಡಿ ಒಂದೊಂದರಲ್ಲಿಯೂ ಇವರು ಆ ಕೃತ್ರಿಮ ಪರಿಸರದಲ್ಲಿ ಪೂರ್ತಿ ಬೇರೆಯವರೇ ಆಗಿ ಎದ್ದು ತೋರುತ್ತಿದ್ದರು. ಎಲ್ಲಾ?

ಉತ್ತಮ ಗೃಹಿಣಿ. ಖಂಡಿತ ಬೆಡಗಿನ ಗೊಂಬೆ ಅಲ್ಲ. ಇವರ ಮನೆ ? ಜರ್ಮನ್ ಸಂಸ್ಕೃತಿಯ ಸರಳ ಸುಂದರ ರೂಪ—ನಿಸರ್ಗದೊಡನೆ ಹೊಂದುವಂತೆ ಬಾಳಿಗೆ ಪೂರಕವೇ ಹೊರತು ಯಾವುದೇ ಡೌಲಿನ ಪ್ರದರ್ಶನಕ್ಕೆ ಹಿನ್ನೆಲೆ ಅಲ್ಲ. ಹೀಗಾಗಿ ಮೊದಮೊದಲು ಈ ಸಂಸಾರ ಪ್ರಿನ್‌ಸ್ಟನ್ನಿಗೆ ಒಗ್ಗದ ನಾಟಿಯಂತೆ ತೋರುತ್ತಿತ್ತು.

ಸ್ವರಕ್ಷಣೆಗೋಸ್ಕರ ಪ್ರತಿಯೊಂದು ಜೀವಿಯೂ ತನ್ನ ಸುತ್ತ ಕೋಟೆ ಕೊತ್ತಳ ಕಟ್ಟಿಕೊಳ್ಳುವುದು ನಿಸರ್ಗನಿಯಮ—ಗಡಿ ನಿರ್ಣಯ, ಗೂಡುಕಟ್ಟುವುದು ಮುಂತಾದವು ಮೂರ್ತರೂಪಗಳಾದರೆ ಬೌದ್ಧಿಕ ಅಂತಸ್ತು, ವರ್ಗಪ್ರಜ್ಞೆ ಮುಂತಾದವು ಅಮೂರ್ತ ರೂಪಗಳು. ಒಂದು ಪರಂಪರೆಯ ಜೀವಿ ಇನ್ನೊಂದು ಪರಂಪರೆಯದನ್ನು ತನ್ನ ಹತ್ತಿರ ಸೇರಿಸದಿರುವುದೇ ಮೊದಲ ಪ್ರತಿಕ್ರಿಯೆ. ಪರಸ್ಪರ ಅಪಾಯವಿಲ್ಲವೆಂದು ಖಾತ್ರಿ ಆದಾಗ ಕೋಟೆ ಕದಗಳು ತೆರೆಯಲ್ಪಟ್ಟು ಅನ್ಯೋನ್ಯತೆ ಬೆಳೆಯುತ್ತದೆ. ಪ್ರಿನ್‌ಸ್ಟನ್ ಪ್ರಜ್ಞೆ ಇಂಥ ಒಂದು ಭದ್ರಕೋಟೆ. ಆದರೆ ಐನ್‌ಸ್ಟೈನ್-ಪ್ರಜ್ಞೆಯ ಕೋಟೆ ಭಿತ್ತಿಗಳೆಲ್ಲಿದ್ದುವು ? ವಿಶ್ವಭಿತ್ತಿಗಳಲ್ಲಿ—ಅವು ಇದ್ದರೆ ! ಹೀಗಾಗಿ ಐನ್‌ಸ್ಟೈನ್ ಪ್ರಿನ್‌ಸ್ಟನ್ನಿಗೆ ಹೊಂದಿಕೊಳ್ಳುವ ಪ್ರಶ್ನೆ ಎದುರಾಗಲಿಲ್ಲ. ಕ್ರಮೇಣ ಪ್ರಿನ್‌ಸ್ಟನ್ ಐನ್‌ಸ್ಟೈನ್ ನಾಟಿಯನ್ನು ಒಪ್ಪಿ ಕೊಂಡಿತು. ಇವರ ವ್ಯಕ್ತಿತ್ವ ಅಲ್ಲಿಗೊಂದು ಹೊಸಪ್ರಭೆ ನೀಡಿತು. ಜನ ಇವರನ್ನು ಆತ್ಮೀಯವಾಗಿ ಪ್ರೀತಿಸತೊಡಗಿದರು. ಕಾಲ ಸಾಗಿದಂತೆ ಪ್ರಿನ್‌ಸ್ಟನ್ ಇನ್‌ಸ್ಟಿಟ್ಯೂಟ್ ಎಂಬುದು ಐನ್‌ಸ್ಟೈನ್ ಇನ್‌ಸ್ಟಿಟ್ಯೂಟ್ ಎಂದೇ ಪ್ರಸಿದ್ಧವಾಯಿತು.

ನೆರೆಮನೆಯ ಹತ್ತು ವರ್ಷದ ಚಿಕ್ಕ ಹುಡುಗಿ ಬಂದಳು, "ಅಜ್ಜಾ ! ಈ ಲೆಕ್ಕ ಹೇಳಿಕೊಡಿ."

ಪ್ರಾಥಮಿಕ ತರಗತಿಯ ಅಗಾಧ ಗಣಿತ ಸಮಸ್ಯೆ ಹಿಮಾಲಯ ಭಾರವಾಗಿ ಆ ಪುಟ್ಟ ತಲೆಯ ಮೇಲೆ ಕೂತಿತ್ತು. ಅಜ್ಜ ಪ್ರೀತಿಯಿಂದ ಲಾಲಿಸಿ ಹೇಳಿಕೊಟ್ಟರು. ಮಗು ಆಲಿಸಿ ಕಲಿತಿತು. ಹಿಮಾಲಯ ಅರಳಿ ಹೂವಾಗಿ ಹಗುರಾಯಿತು.

ತಾಯಿ ಗಮನಿಸಿದಳು, ತನ್ನ ಮಗಳು ಪದೇಪದೇ ಐನ್‌ಸ್ಟೈನ್-ನಿವಾಸಕ್ಕೆ ಹೋಗಿ ಬರುತ್ತಿದ್ದುದನ್ನು. ಮಗುವಿನ ವಿವರಣೆ ಸ್ಪಷ್ಟವಾಗಿತ್ತು, "ಲೆಕ್ಕದ ಮನೆಗೆಲಸದಲ್ಲಿ ಸ್ವಲ್ಪ ತೊಂದರೆ ಇತ್ತು. ಜನ ಹೇಳುತ್ತಾರೆ : ೧೧೨ ಸಂಖ್ಯೆಯ ಬಂಗ್ಲೆಯಲ್ಲಿ ಭಾರೀ ಗಣಿತವಿದ್ವಾಂಸರಿದ್ದಾರೆ, ಅವರು ತುಂಬ ಒಳ್ಳೆಯ ವ್ಯಕ್ತಿ ಎಂದು. ಹೀಗಾಗಿ ನಾನು ಸೀದಾ ಅವರಲ್ಲಿಗೆ ಹೋದೆ. ಅವರು ನಗುಮೊಗದಿಂದ ನನ್ನನ್ನು ಬರಮಾಡಿಕೊಂಡು, ತಲೆ ನೇವರಿಸಿ, ನನಗೇನು ಬೇಕೆಂದು ಕೇಳಿದರು. ಲೆಕ್ಕ ಪ್ರಶ್ನೆಗಳೆಲ್ಲವನ್ನೂ ಓದಿ ತುಂಬ ಚೆನ್ನಾಗಿ ವಿವರಿಸಿ ಹೇಳಿಕೊಟ್ಟರು. ಅವು ನನಗೆ ಪೂರ್ತಿ ಅರ್ಥವಾದುವು. ಶಾಲೆಯಲ್ಲಿ ಅಷ್ಟು ಹಿತವಾಗಿ ಹೇಳಿಕೊಡುವುದೇ ಇಲ್ಲ. ಯಾವಾಗ ಬೇಕಾದರೂ ಬಂದು ಹೋಗುತ್ತಿರು ಮಗೂ ಎಂದು ಹೇಳಿದ್ದಾರೆ. ಎಷ್ಟು ಒಳ್ಳೆಯವರು, ಎಷ್ಟು ಬುದ್ಧಿವಂತರು ಆ ಅಜ್ಜ, ನಿನಗೆ ಗೊತ್ತೇನಮ್ಮಾ ?"

ಮಗಳ ಧಾರ್ಷ್ಟ್ಯಕ್ಕೆ ತಾಯಿ ಗಾಬರಿಗೊಂಡಳು. ಎಲ್ಲಾದರೂ ಉಂಟೇ ಈ ಪೋರಿ ಹೋಗಿ ಆ ಹಿರಿಯರಿಗೆ ಹೀಗೆ ದಾಂದಲೆ ಕೊಡುವುದು ! ಕೂಡಲೇ ಐನ್‌ಸ್ಟೈನರ ಬಂಗ್ಲೆಗೆ ಧಾವಿಸಿದಳು. ಮಗುವಿನ ತಪ್ಪನ್ನು ಮನ್ನಿಸಬೇಕೆಂದು ಬಿನ್ನವಿಸಿದಳು.

ಐನ್‌ಸ್ಟೈನ್ ತೀರ ಸಹಜವಾಗಿ ಹೇಳಿದರು, "ತಾಯೀ ! ನೀವು ಕ್ಷಮಾಯಾಚನೆ ಮಾಡಬಾರದು, ಮಾಡಬೇಕಾಗಿಲ್ಲ. ಮಗು ನನ್ನಿಂದ ಕಲಿತದ್ದು ಅತ್ಯಲ್ಪ. ಆದರೆ ಅದರ ಜೊತೆಗಿನ ಒಡನಾಟದಿಂದ ಮತ್ತು ಮಾತುಕತೆಯಿಂದ ನಾನು ಕಲಿತದ್ದು ಜಾಸ್ತಿ."

ಅಲ್ಲಿ ಇವರಿಗೆ ನಿಗದಿಯಾದ ಕರ್ತವ್ಯವೇನೂ ಇರಲಿಲ್ಲ. ಇವರು ತರಗತಿ ಪಾಠ ಬೋಧಿಸ

ಬೇಕಾಗಿರಲಿಲ್ಲ. ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕಾಗಿರಲಿಲ್ಲ. ನಿಯತ ಕಾಲಿಕೋಪನ್ಯಾಸಗಳನ್ನು ಕೊಡಬೇಕಾಗಿರಲಿಲ್ಲ. ತಮ್ಮ ಕರ್ತವ್ಯದ ಹಾಗೂ ಕಾಲದ ಪೂರ್ಣಪ್ರಭು ತಾವೇ. ಭೌತವಿಜ್ಞಾನದ ವರ್ತಮಾನಪ್ರವಾಹ 'ಉಪಯುಕ್ತ ಕ್ಷೇತ್ರ'ಗಳನ್ನೊಳಗೊಂಡಿದ್ದುದ ರಿಂದ, ಐನ್‌ಸ್ಟೈನರ ಬಾಳಹಂಬಲವಾದ 'ಏಕೀಕೃತ ಸಿದ್ಧಾಂತಾನ್ವೇಷಣೆ' ಈ ಉಪಯುಕ್ತ ಕ್ಷೇತ್ರ ಗಳೊಳಗೆ ಬರದಿದ್ದುದರಿಂದ, ಮತ್ತು ಇವರೆಂದೂ ತಮ್ಮ ಭಾವನೆ ಅಭಿಪ್ರಾಯಗಳನ್ನು ಇತರರ ಮೇಲೆ ಹೇರಲು ಇಷ್ಟಪಡದಿದ್ದುದರಿಂದ, ಇವರು ಬಹುತೇಕ ಏಕಾಂತವಾಸಿಯಾಗಿ ತಮ್ಮ ಅಧ್ಯಯನ ಚಿಂತನೆಗಳಲ್ಲಿ ನಿರತರಾಗಿರುತ್ತಿದ್ದರು. ತಮ್ಮಲ್ಲಿಗೆ ಬರುತ್ತಿದ್ದ ಎಲ್ಲರನ್ನೂ ಆತ್ಮೀಯತೆಯಿಂದ ಸ್ವಾಗತಿಸಿ ಅವರ ಅಧ್ಯಯನಾಸಕ್ತಿಗಳನ್ನೂ ಸಮಸ್ಯೆ, ಪರಿಹಾರಗಳನ್ನೂ ಏಕಾಗ್ರಚಿತ್ತರಾಗಿ ಆಲಿಸುತ್ತಿದ್ದರು. ತಮ್ಮ ಪ್ರಶ್ನೆ ಸೂಚನೆಗಳಿಂದ ಹಳೆ ಸಿಕ್ಕುಗಳನ್ನು ಬಿಡಿಸಲು ಮತ್ತು ಹೊಸ ಹಾದಿಗಳನ್ನು ತೋರಿಸಲು ನೆರವಾಗುತ್ತಿದ್ದರು. ಇವರು ಸುಲಭಲಭ್ಯರಾಗಿದ್ದರೂ ಗಮ್ಯಾತೀತರಾಗಿದ್ದುದರಿಂದ, ಮೇಲಾಗಿ ಇವರ ಸ್ಪಷ್ಟ ಒಲವು ಪ್ರಚಲಿತ ಭೌತವಿಜ್ಞಾನದ ಮುಂಚೂಣಿ ವಿಷಯಗಳಲ್ಲಿ ಇಲ್ಲದಿದ್ದುದರಿಂದ, ಇವರೊಡನೆ ಸಹಯೋಗಕ್ಕೆ ಬರುತ್ತಿದ್ದ ಸಂಶೋಧನ ವಿದ್ಯಾರ್ಥಿಗಳು ಅಥವಾ ವಿದ್ವಾಂಸರು ಬಲು ಕಡಿಮೆ. ಋಷಿ ಸಹಯೋಗ ಸುಲಭ ಲಭ್ಯವಲ್ಲ :

ಹಳೆಯದನು ತೊರೆದು ಹೊಸ ಬೆಳಕನರಸುವವ ಋಷಿ
ಋಷಿ ಕಂಡ ಬೆಳಕನ್ನು ಬೀರುವವನಾಚಾರ್ಯ
ಆಚಾರ್ಯ ಕಾಣಿಸಿದ ಪಥದಿ ನಡೆವವ ಶಿಷ್ಯ
ಶಿಷ್ಯ ಋಷಿಯಾಗುವುದೆ ಋಜುವಿದ್ಯೆ ಅತ್ರಿಸೂನು

## ಅನ್ವೇಷಣೆ

ಇನ್‌ಫೆಲ್ಡ್ ತುಂಬ ಸಜ್ಜನ. ಒಟ್ಟಾಗಿ ನಾವು ಒಳ್ಳೆಯ ಕೆಲಸವೊಂದನ್ನು ಸಾಧಿಸಿದ್ದೇವೆ : ಖಗೋಳ ಕಾಯಗಳನ್ನು ಕ್ಷೇತ್ರದ ವೈಚಿತ್ರ್ಯಗಳೆಂದು ಪರಿಗಣಿಸುವುದರ ಮೂಲಕ ಖಗೋಳವೈಜ್ಞಾನಿಕ ಚಲನೆಯ ಸಮಸ್ಯೆ. ಇವರನ್ನು ಇನ್‌ಸ್ಟಿಟ್ಯೂಟ್ ನಿಷ್ಕರುಣೆಯಿಂದ ನಡೆಸಿಕೊಂಡಿದೆ. ಆದರೆ ನಾನಿವರನ್ನು ಬೇಗನೆ ಪಾರುಮಾಡುತ್ತೇನೆ.

ಐನ್‌ಸ್ಟೈನ್ (ಬಾರ್ನ್ ಅವರಿಗೆ ಬರೆದ ಕಾಗದದಲ್ಲಿ)

ಲೀಪಾಲ್ಡ್ ಇನ್‌ಫೆಲ್ಡ್ (೧೮೯೮-೧೯೬೮) ಎಂಬವರು ಐನ್‌ಸ್ಟೈನ್ ಜೊತೆ ಸಂಶೋಧನೆ ನಡೆಸಿ ಇವರ ಆತ್ಮೀಯತೆ ಗಳಿಸಿದ ಒಬ್ಬ ತರುಣ ಭೌತವಿಜ್ಞಾನಿ. ಇವರು ತಮ್ಮ ಅನುಭವಗಳನ್ನು *Quest—The Evolution of a Scientist* ಎನ್ನುವ ಪುಸ್ತಕದಲ್ಲಿ ನಿರೂಪಿಸಿದ್ದಾರೆ. ಐನ್‌ಸ್ಟೈನರ ಸಂಕೀರ್ಣ ಮತ್ತು ಆಕರ್ಷಕ ವ್ಯಕ್ತಿತ್ವ ಅರಿಯಲು ಇದು ತುಂಬ ಉಪಯುಕ್ತ ಗ್ರಂಥ.

ಪೋಲೆಂಡಿನ ಮಧ್ಯಮವರ್ಗದ ಯೆಹೂದ್ಯ ಕುಟುಂಬದಲ್ಲಿ ಜನಿಸಿದ ಇನ್‌ಫೆಲ್ಡ್ ಯೂರೋಪಿನ ಯೆಹೂದ್ಯದ್ವೇಷದ ಬೆಂಕಿಯಲ್ಲಿ ಬೆಂದರು. ತಿರಸ್ಕಾರದ ಕೋಟೆದಲ್ಲಿ ಮರಗಟ್ಟಿ ದರು. ಬಾಳಿನಲ್ಲಿ ಬಗೆಬಗೆಯ ಕಹಿಗಳನ್ನು ಉಂಡರು. ಆದರೂ ಜ್ಞಾನಾನ್ವೇಷಣೆಯ ಹಿಲಾಲನ್ನು ಎತ್ತಿ ಹಿಡಿದು ಅರಸಿ ಮುನ್ನಡೆದರು. ಭೌತವಿಜ್ಞಾನ ಇವರ ಆಸಕ್ತ ಕ್ಷೇತ್ರ. ಇವರ ಸಾಧನೆ ಹಾಗೂ ಅರ್ಹತೆ, ಗುಣ ಹಾಗೂ ನಡತೆ, ಸಂಸ್ಕೃತಿ ಹಾಗೂ ಸಭ್ಯತೆ ತಿಳಿದಿದ್ದ ಹಿರಿಯ ಪ್ರಾಧ್ಯಾಪಕರೇ ಇವರು ಯೆಹೂದ್ಯರೆಂಬ ಏಕೈಕ ಕಾರಣಕ್ಕಾಗಿ ಇವರಿಗೆ ಅನ್ಯಾಯ ಬಗೆದರು, ದ್ರೋಹವೆಸಗಿದರು.

ಇವರ ಸುತ್ತಲೂ ಕಂದಕ ತೋಡಿದರು. ಜರ್ಮನಿಯಲ್ಲಿ ಹಿಟ್ಲರ್‌ಶಾಹಿ ಮತ್ತು ಯೆಹೂದ್ಯ ಹೋಮ ಉತ್ಸರ್ಪಿಣೀ ಪರ್ವದಲ್ಲಿದ್ದಾಗ ಪೋಲೆಂಡ್ ಏನೂ ಹಿಂದೆ ಬೀಳಲಿಲ್ಲ. ಇದರ ಸುಪ್ತ ಯೆಹೂದ್ಯ ದ್ವೇಷಕ್ಕೆ ಆಗ ನಕ್ರ ಕ್ರೂರ ಮುಖ ಪ್ರಾಪ್ತವಾಯಿತು.

ಮೂಲತಃ ಜರ್ಮನಿ-ಪೋಲೆಂಡ್ ವೈರಿರಾಷ್ಟ್ರಗಳಾಗಿದ್ದರೂ ಇವೆರಡರ ಲಘುತಮ ಸಾಮಾನ್ಯ ಅಪರ್ವತನ ಯೆಹೂದ್ಯದ್ವೇಷ ! ಒಟ್ಟಾರೆ ಇನ್‌ಫೆಲ್ಡ್‌ರಂಥ ಸತ್ಯಾನ್ವೇಷಕ ಯೆಹೂದ್ಯ ಜೀವಿಯ ಬದುಕು ಅಲ್ಲಿ ಅಸಹನೀಯವಾಯಿತು. ಯೂರೊಪಿನಲ್ಲಿ ತನಗೆ ಭವಿಷ್ಯವಿಲ್ಲವೆಂಬುದು ಖಚಿತವಾದಾಗ ಮತ್ತು ಅಂತಾರಾಷ್ಟ್ರೀಯ ಮಾರಣಹೋಮದ ಲಯಬದ್ಧ ಆಗಮನವನ್ನು ಶಕುನಗಳು ಪ್ರಕಟವಾಗಿ ಸೂಚಿಸುತ್ತಿದ್ದಾಗ ಅನ್ಯಮಾರ್ಗ ತೋರದೆ ಇನ್‌ಫೆಲ್ಡ್, ಆ ವೇಳೆಗೆ ಪ್ರಿನ್‌ಸ್ಟನ್ನಿನಲ್ಲಿದ್ದ ಐನ್‌ಸ್ಟೈನರಿಗೆ ಪತ್ರ ಬರೆದು ಇವರ ಆಹ್ವಾನಬಲದಿಂದ, ಅಲ್ಲಿಗೆ ಹೋದರು (೧೯೩೬). ಮುಂದಿನ ಎರಡು ವರ್ಷ ಕಾಲ ಐನ್‌ಸ್ಟೈನರೊಡನೆ ಸಂಶೋಧನಸಹಾಯಕ ರಾಗಿದ್ದು, ಆತ್ಮೀಯಮಿತ್ರರಾಗಿ ಬಡ್ತಿ ಪಡೆದು, ಸಹಲೇಖಕ ಎಂಬ ಅಂತಸ್ತು ಗಳಿಸಿ ಹೆಸರು ಮಾಡಿದರು.

* * *

ಆ ಮೊದಲು, ೧೯೨೦ರಲ್ಲಿ, ಇಪ್ಪತ್ತೆರಡರ ಹರೆಯದ ವಿದ್ಯಾರ್ಥಿ ಇನ್‌ಫೆಲ್ಡ್ ಭೌತವಿಜ್ಞಾನ ದಲ್ಲಿ ಪ್ರೌಢ ಅಧ್ಯಯನ ಮಾಡಲು ಬರ್ಲಿನ್ನಿಗೆ ಹೋಗಲು ನಿರ್ಧರಿಸಿದ್ದರು. ಐನ್‌ಸ್ಟೈನ್, ಪ್ಲ್ಯಾಂಕ್ ಎಂಬ ದಿಗ್ಗಜಗಳ ಆಡುಂಬೊಲವಾಗಿ ಅಂದು ಬರ್ಲಿನ್, ಪ್ರಪಂಚದ ಬೌದ್ಧಿಕ ಕೇಂದ್ರ ವೆಂಬ ಖ್ಯಾತಿಪಡೆದಿತ್ತು. ತಕ್ಕಮಟ್ಟಿಗೆ ಅನುಕೂಲಸ್ಥರಾಗಿದ್ದ ತಂದೆಯಿಂದ ಹಣ ಪಡೆದು ಇನ್‌ಫೆಲ್ಡ್ ಬರ್ಲಿನ್ ಏನೋ ಸೇರಿದರು. ಆದರೆ ವಿಶ್ವವಿದ್ಯಾಲಯಕ್ಕೆ ಪ್ರವೇಶ ಗಿಟ್ಟಿಸಬೇಕಲ್ಲ? ಅಲ್ಲಿಯ ಜೆಂಟೈಲರಿಂದ ಸಹಾಯವೊದಗುವುದು ಅಸಾಧ್ಯವಾಗಿತ್ತು—ಈತ ಪೋಲೆಂಡಿನವ, ಮೇಲಾಗಿ ಯೆಹೂದ್ಯ. ಹೋಗಲಿ ಬರ್ಲಿನ್ ಯೆಹೂದ್ಯರಿಂದ ? ತಾವು ಪರಿಶುದ್ಧ ಮತ್ತು ಸರ್ವ ಶ್ರೇಷ್ಠ ಯೆಹೂದ್ಯರೆಂಬ ದುರಭಿಮಾನದಿಂದ ಬೀಗುತ್ತಿದ್ದ ಇವರು ಪೋಲೆಂಡಿನ ಈ ಯೆಹೂದ್ಯ ನನ್ನು ಅಸ್ಪೃಶ್ಯನೆಂದು ಕಡೆಗಣಿಸಿದ್ದರು. ಉಪಜಾತಿ, ಉಪೋಪಜಾತಿ, ಆ ನಡವಳಿಕೆ, ಈ ನಡವಳಿಕೆ ಮುಂತಾದ ಸೂಕ್ಷ್ಮ ಪ್ರಭೇದಗಳ ನಡುವೆ ಜಾತಿ, ಕೋಮು, ಕುಲ, ವರ್ಗ ಮುಂತಾದ ಬೃಹತ್ ಪ್ರಭೇದಗಳ ನಡುವೆ ಇರುವಷ್ಟೇ ಪ್ರಮಾಣದ ವಿಕರ್ಷಣೆ, ತಿರಸ್ಕಾರ, ಕುಪ್ರತಿಷ್ಠೆ ಮುಂತಾದವು ಇರುತ್ತವೆ. ನಿಜಕ್ಕೂ ಇಲ್ಲೊಂದು ಏಕೀಕೃತ ಸಿದ್ಧಾಂತವನ್ನು ಸಮಾಜಶಾಸ್ತ್ರಜ್ಞ ಪತ್ತೆಹಚ್ಚಬಹುದು. ಹೀಗೆ ಅವರು (ಜೆಂಟೈಲರು) ಪ್ರಕಟವಾಗಿ ತಿರಸ್ಕರಿಸಿದ, ಇವರು (ಬರ್ಲಿನ್ ಯೆಹೂದ್ಯರು) ಪ್ರಚ್ಛನ್ನವಾಗಿ ನಿರಾಕರಿಸಿದ ಇನ್‌ಫೆಲ್ಡ್ ಗತ್ಯಂತರವಿಲ್ಲದೆ ಸಾಕ್ಷಾತ್ ಐನ್‌ಸ್ಟೈನರನ್ನೇ ಕಂಡು ಮಾತಾಡಲು ಧೈರ್ಯ ತಳೆದರು.

ದೂರವಾಣಿ ಮೂಲಕ ಇನ್‌ಫೆಲ್ಡ್ ಐನ್‌ಸ್ಟೈನ್-ನಿವಾಸಕ್ಕೆ ಸಂಪರ್ಕ ಪಡೆದರು, "ಪ್ರೊಫೆಸರ್ ಐನ್‌ಸ್ಟೈನ್ ಅಲ್ಲಿದ್ದಾರೆಯೇ ?" (ಸ್ವಗತ—ಇಲ್ಲವೆಂದು ಉತ್ತರ ಬಂದರೆ ಬಚಾವ್).

"ಹೌದು ಇದ್ದಾರೆ," ಸ್ತ್ರೀ ವಾಣಿ.

"ನಾನು ಪೋಲೆಂಡಿನಿಂದ ಬಂದಿರುವ ಭೌತವಿಜ್ಞಾನ ವಿದ್ಯಾರ್ಥಿ. ಪ್ರೊಫೆಸರ್ ಐನ್‌ಸ್ಟೈನರನ್ನು ನೋಡಬಯಸುತ್ತೇನೆ. ಪ್ರೊಫೆಸರ್ ಐನ್‌ಸ್ಟೈನ್ ನನಗೊಂದು ಭೇಟಿ ಕರುಣಿಸಿಯಾರೇ ?" (ಸ್ವಗತ—ಇಲ್ಲವೆಂದರೆ ಬಚಾವ್).

"ಖಂಡಿತ. ಇದೀಗಲೇ. ನೇರ ಇಲ್ಲಿಗೆ ಬರುವುದೊಂದೇ ಸರಿಯಾದ ಕ್ರಮ."

ಅಳುಕು, ಅನುಗ್ರಹೀತಭಾವದಿಂದ ಒದಗಿದ ವಿನೀತತೆ, ಮಹೋನ್ನತ ಜೀವಂತ ಭೌತ

ವಿಜ್ಞಾನಿಯ ಪ್ರಥಮ ದರ್ಶನದ ಗಾಢ ನಿರೀಕ್ಷಣೆ, ಸಂತೋಷ ಭಯ ಉತ್ಸಾಹ ಉದ್ವೇಗ ಎಲ್ಲ ಒಮ್ಮೆಗೆ ಉಕ್ಕಿ ಹರಿದ ಕಂಪನಾನುಭವ—ಇವೆಲ್ಲ ಮೂರ್ತೀಭವಿಸಿದಂತಿದ್ದ ಇನ್‌ಫೆಲ್ಡ್ ಅಂಜಿ ಹಿಂಜರಿದು ಐನ್‌ಸ್ಟೈನ್-ನಿವಾಸದ ಕರೆಗಂಟೆ ಒತ್ತಿ, ಅದರ ಸ್ಪರ್ಶ ಮಾತ್ರದಿಂದಲೇ ವಿದ್ಯುದಾಘಾತ ಪಡೆದವರಂತೆ ಹೆದರಿ ಪುಳಕಿತರಾಗಿ ಕೈಹಿಂದೆಳೆದರು. ಆದರೆ ಆಗಲೇ ಗಂಟೆ ಟಿಣಿಟಿಣಿ ಮಿಡಿದಿತ್ತು. ಸಿಸೇಮೆ ತೆರೆದಿತ್ತು. ಶ್ರೀಮತಿ ಐನ್‌ಸ್ಟೈನ್ ಇವರನ್ನು ಮಂದಹಾಸಪೂರ್ವಕವಾಗಿ ಸ್ವಾಗತಿಸಿ ದಿವಾಣಖಾನೆಯಲ್ಲಿ ಕೂರಿಸಿದರು. ಸದ್ಯ ಪ್ರೊಫೆಸರರು ಬೇರೊಬ್ಬರೊಡನೆ ಮಾತಾಡುತ್ತಿರುವುದಾಗಿ ಇವರು ಕೊಂಚ ಕ್ಷಣ ಕಾಯುತ್ತಿರಬೇಕಾದೀತೆಂದು ತಿಳಿಸಿದರು. ಇನ್ನೊಬ್ಬ ಸಂದರ್ಶನಾಕಾಂಕ್ಷಿ ಆಗಂತುಕನೊಡನೆ ಇನ್‌ಫೆಲ್ಡ್ ಪಿಸುನುಡಿಯಲ್ಲಿ ಅಭಿಪ್ರಾಯ ವಿನಿಮಯಿಸುತ್ತಿದ್ದಂತೆಯೇ . . . ಐನ್‌ಸ್ಟೈನ್ ಪಡಿ ತೆರೆದರು, ಮೊದಲಿನವನಿಗೆ ಹೊರಹೋಗಲು ಅನುಮಾಡಿ ಕೊಟ್ಟರು, ಇನ್‌ಫೆಲ್ಡರಿಗೆ ಒಳಬರಲು ಪ್ರಸನ್ನವದನದಿಂದ ಕೈಕರಣ ಮಾಡಿದರು. ಈ ಮೊದಲ ಭೇಟಿಯನ್ನು ಇನ್‌ಫೆಲ್ಡ್ ವರ್ಣಿಸಿದ್ದಾರೆ, "ಐನ್‌ಸ್ಟೈನ್ ಆಗ ಮುಂಜಾನೆ ಮೇಲಂಗಿ ತೊಟ್ಟಿದ್ದರು. ಬರೆ-ಬರೆ ಷರಾಯಿಯನ್ನು ಎಳೆದುಕೊಂಡಿದ್ದರು. ಇದರಲ್ಲಿ ಮುಖ್ಯವಾದ ಒಂದು ಗುಂಡಿ ನಾಪತ್ತೆ. ಚಿತ್ರಗಳಲ್ಲೂ ಪತ್ರಿಕೆಗಳಲ್ಲೂ ಆ ದಿನಗಳಂದು ಪದೇಪದೇ ಪ್ರಕಟವಾಗುತ್ತಿದ್ದ ಅದೇ ಪರಿಚಿತ ಮುಖ. ಆದರೆ ಅವರ ಕಂಗಳಲ್ಲಿ ಮಿನುಗುತ್ತಿದ್ದ ಹೊಳಪನ್ನು ಯಾವ ಚಿತ್ರವೂ ಸೆರೆ ಹಿಡಿದಿರಲಿಲ್ಲ. ನಾನು ಜಾಗರೂಕತೆಯಿಂದ ತಯಾರಿಸಿಕೊಂಡಿದ್ದ ವಾಕ್ಯಸರಣಿ ಪೂರ್ತಿ ಮರೆತೇಹೋಯಿತು. ಐನ್‌ಸ್ಟೈನ್ ನಸುನಗುವಿನಿಂದ ನನ್ನನ್ನು ಉತ್ತೇಜಿಸುತ್ತ ಒಂದು ಸಿಗರೇಟನ್ನು ನೀಡಿದರು. ನಾನು ಬರ್ಲಿನ್ನಿಗೆ ಬಂದ ಬಳಿಕ ಅದೇ ನನ್ನತ್ತ ಬೀರಲಾದ ಕೆಳೆತನದ ಮೊದಲ ನಗು. ನನ್ನ ಸ್ಥಿತಿಯನ್ನು ಸಂಕ್ಷೇಪವಾಗಿ ವಿವರಿಸಿದೆ. ಐನ್‌ಸ್ಟೈನ್ ಎಚ್ಚರಿಕೆಯಿಂದ ಆಲಿಸಿದರು. ಇತರ ಎಲ್ಲೆಡೆಗಳಲ್ಲೂ ಭೇಟಿಯನ್ನು ಬೇಗ ಮುಗಿಸಬೇಕೆಂಬ ಅಸಹನೆ ನನಗೆದುರಾಗಿತ್ತು. ಆ ಯಾವ ತ್ವರಿತಭಾವನೆಯೂ ಇಲ್ಲಿರಲಿಲ್ಲ."

ಐನ್‌ಸ್ಟೈನ್, "ಶಿಕ್ಷಣ ಮಂತ್ರಾಲಯಕ್ಕೆ ನಿಮ್ಮ ಬಗ್ಗೆ ಒಂದು ಶಿಫಾರಸು ಕಾಗದ ಕೊಡಬೇಕೆಂಬುದು ನನ್ನಾಸೆ. ಆದರೆ ನನ್ನ ರುಜುವಿಗೆ ದಂಬಡಿ ಕಿಮ್ಮತ್ತೂ ನಾಸ್ತಿ !"

"ಏಕೆ !"

"ಏಕೆಂದರೆ ನಾನು ಯಥೇಚ್ಛ ಶಿಫಾರಸು ಕಾಗದಗಳನ್ನು ಕೊಟ್ಟುಬಿಟ್ಟಿದ್ದೇನೆ, ಮತ್ತು"—ಇಲ್ಲಿ ಅವರು ತಮ್ಮ ಧ್ವನಿಯನ್ನು ರಹಸ್ಯಶ್ರುತಿಗೆ ತಗ್ಗಿಸಿ—"ಅವರು ಯೆಹೂದ್ಯದ್ವೇಷಿಗಳು."

ಐನ್‌ಸ್ಟೈನರೊಡನೆ ಇದು ಇನ್‌ಫೆಲ್ಡರ ಪ್ರಥಮ, ಮತ್ತು ಮುಂದಿನ ಹದಿನಾರು ವರ್ಷಗಳ ತನಕ ಏಕೈಕ, ವೈಯಕ್ತಿಕ ಸಂಪರ್ಕವಾಗಿತ್ತು. "ಬರ್ಲಿನ್ನಿನಲ್ಲಾದ ನಮ್ಮ ಮೊದಲ ಭೇಟಿಯಲ್ಲಿ (ಮತ್ತು ತದನಂತರ ಅನೇಕ ಭೇಟಿಗಳಲ್ಲಿ ಕೂಡ), ಮಾನವ ಕಾರುಣ್ಯವೂ ನೈಜಮಹತ್ತ್ವವೂ ಒಗ್ಗೂಡಿಕೊಂಡೇ ಇರುತ್ತವೆಂಬ ಹಳೆಯ ಚಾಟೂಕ್ತಿ ಸ್ಥಿರೀಕೃತವಾದದ್ದು ಕಂಡೆ."

* * *

ಈ ಹಿಂದೆ ಹೇಳಿದಂತೆ ತನ್ನ ಮನವಿಗೆ ಐನ್‌ಸ್ಟೈನರಿಂದ ಮನ್ನಣೆ ಬಂದ ಬಳಿಕ ಇನ್‌ಫೆಲ್ಡ್ ಯೂರೊಪನ್ನು ತೊರೆದು ಪ್ರಿನ್ಸ್‌ಟನ್ ಸೇರಿದರು (ಅಕ್ಟೋಬರ್ ೧೯೩೬). ಐನ್‌ಸ್ಟೈನರ ಕಾರ್ಯದರ್ಶಿ ಜೊತೆ ದೂರವಾಣಿ ಮೂಲಕ ಮಾತಾಡಿ ಅವರನ್ನು ಎಂದು ಕಾಣಬಹುದೆಂದು ಕೇಳಿದಾಗ ಬಂದ ಉತ್ತರ, "ಇದೀಗಲೇ ಪ್ರೊಫೆಸರ್ ಐನ್‌ಸ್ಟೈನ್ ನಿಮ್ಮನ್ನು ನೋಡಲು ಅಪೇಕ್ಷಿಸುತ್ತಾರೆ."

ಇನ್‌ಫೆಲ್ಡ್ ಕದ ತಟ್ಟಿದರು.

"ಬನ್ನಿ."

ತೆರೆದು ಒಳಹೋದರು. ಉತ್ಸಾಹದಿಂದ ಶಕ್ತಿಯುತ ಸ್ವಾಗತಹಸ್ತ ಚಾಚಿದರು ಐನ್‌ಸ್ಟೈನ್.

"ನಾನವರನ್ನು ಬರ್ಲಿನ್ನಿನಲ್ಲಿ ನೋಡಿದ ತರುವಾಯ ಸಂದ ಹದಿನಾರು ವರ್ಷಗಳಲ್ಲಿ ಆಗಬೇಕಾದದ್ದಕ್ಕಿಂತ ಹೆಚ್ಚು ಪ್ರಾಯವಾಗಿದ್ದವರಂತೆ ತೋರಿದರು. ಅವರ ಉದ್ದವಾದ ಅಳಕ ಗುಚ್ಛ ಬೂದುಬಣ್ಣ ತಳೆದಿತ್ತು. ಆಯಾಸಗೊಂಡಿದ್ದ ಮುಖದ ಬಣ್ಣ ಹಳದಿ. ಆದರೆ ಅವರಿಗೆ ಅವೇ ಉಜ್ಜ್ವಲ ಗಭೀರನೇತ್ರಗಳಿದ್ದುವು. ಅನೇಕ ಛಾಯಾಚಿತ್ರಗಳಲ್ಲಿರುವಂತೆ ಅದೇ ಕಂದು ಚಕ್ಕಳದ ಕೋಟನ್ನು ಧರಿಸಿದ್ದರು. [ಹರಿಗೋಲು ಸವಾರಿ ವೇಳೆ ತೊಡಲೆಂದು ಯಾರೊ ಇದನ್ನು ಅವರಿಗೆ ಕೊಟ್ಟಿದ್ದರು. ಈ ಕೋಟ್ ಅವರಿಗೆ ತುಂಬ ಇಷ್ಟವಾದ್ದರಿಂದ ಸದಾ ಇದನ್ನೇ ತೊಡುತ್ತಿದ್ದರು.] ಅವರ ಶರಟಿಗೆ ಕಾಲರ್ ಇರಲಿಲ್ಲ. ಕಂದು ಶರಾಯಿ ನೆರಿಗಟ್ಟಿತ್ತು. ಕಾಲುಚೀಲ ಹಾಕದೆ ಶೂ ಮೆಟ್ಟಿದ್ದರು. ಸಂಕ್ಷೇಪವಾಗಿಯಾದರೂ ಖಾಸಗಿ ಮಾತುಕತೆಯನ್ನು ನಾನು ನಿರೀಕ್ಷಿಸಿದ್ದೆ ; ನನ್ನ ಸಮುದ್ರಯಾನ, ಯೂರೊಪ್, ಬಾರ್ನ್ ಇತ್ಯಾದಿ. ಆದರೆ ಹಾಗೇನೂ ಆಗಲಿಲ್ಲ."

ಪೂರ್ವಭಾಷಿ ಪ್ರಿಯಭಾಷಿ ಮೃದುಭಾಷಿ ಐನ್‌ಸ್ಟೈನ್ ಸಂಭಾಷಣೆ ಪ್ರಾರಂಭಿಸಿದರು, "ನೀವು ಜರ್ಮನ್ ಮಾತಾಡುವಿರೇ ?"

"ಹೌದು."

"ನಾನೀಗ ಯಾವ ಸಮಸ್ಯೆಯಲ್ಲಿ ಉದ್ಯುಕ್ತನಾಗಿರುವೆನೆಂಬುದನ್ನು ನಿಮಗೆ ಹೇಳಬಹುದೋ ಏನೋ."

ಇನ್‌ಫೆಲ್ಡ್ ಬರೆದಿದ್ದಾರೆ, "ಸದ್ದಿಲ್ಲದೆ ಸೀಮೆಸುಣ್ಣದ ತುಣುಕನ್ನೆತ್ತಿಕೊಂಡರು. ಕರಿಹಲಗೆಯತ್ತ ಹೋದರು. ಪರಿಪೂರ್ಣ ಉಪನ್ಯಾಸವನ್ನು ತೊಡಗಿದರು. ಅವರೆಷ್ಟು ನೆಮ್ಮದಿಯಿಂದ ಮಾತಾಡಿದರೆಂಬುದು ಆಶ್ಚರ್ಯಕರ. ವರ್ಷಗಟ್ಟಲೆ ತನ್ನ ಸಮಸ್ಯೆಗಳ ಜೊತೆ ಬಾಳಿರುವ ಒಬ್ಬ ವಿಜ್ಞಾನಿ, ಅವು ತನ್ನ ಶ್ರೋತೃವಿಗೂ ತನ್ನಷ್ಟೇ ಪರಿಚಿತವೆಂದು ಅಂಗೀಕರಿಸಿ ತನ್ನ ವಿವರಣೆಯನ್ನು ತ್ವರಿತ ಧಾಟಿಯಲ್ಲಿ ಹಾರಿಸುವಂಥ ಯಾವ ಉದ್ವೇಗ ಅಶಾಂತಿ ಉಡಾಫೆಯೂ ಅಲ್ಲಿ ಕಂಡು ಬರಲಿಲ್ಲ. ತಾವು ಉದ್ಯುಕ್ತರಾಗಿದ್ದ ಸಮಸ್ಯೆಗಳ ವಿವರಗಳಿಗೆ ಹೋಗುವ ಮುನ್ನ ಐನ್‌ಸ್ಟೈನ್ ಅವುಗಳ ತತ್ತ್ವಶಾಸ್ತ್ರೀಯ ಹಿನ್ನೆಲೆಯನ್ನು ಸ್ಥೂಲವಾಗಿ ಚಿತ್ರಿಸಿದರು. ಅವರು ಕೊಠಡಿಯ ಸುತ್ತ ನಿಧಾನವಾಗಿಯೂ ಗಂಭೀರವಾಗಿಯೂ ಅಡ್ಡಾಡುತ್ತ, ಗಣಿತಸಮೀಕರಣಗಳನ್ನು ಬರೆಯಲು ಆಗ ಈಗ ಕರಿಹಲಗೆಯೆಡೆಗೆ ಹೋಗುತ್ತಿದ್ದರು. ನಂದಿ ಹೋಗಿದ್ದ ತಂಬಾಕು ಕೊಳವೆಯನ್ನು ಬಾಯಿಯಲ್ಲಿ ಕಚ್ಚಿಕೊಂಡಿದ್ದರು. ವಾಕ್ಯಗಳನ್ನು ಬಲು ಅಚ್ಚುಕಟ್ಟಾಗಿ ರೂಪಿಸುತ್ತಿದ್ದರು. ಅವರು ಹೇಳಿದ ಪ್ರತಿಯೊಂದನ್ನೂ ತದ್ವತ್ತಾಗಿ ಮುದ್ರಿಸಬಹುದಿತ್ತು. ಪ್ರತಿಯೊಂದೂ ಅಷ್ಟು ಅರ್ಥಪೂರ್ಣವಾಗಿ ಇರುತ್ತಿತ್ತು. ಅದೊಂದು ಸರಳ, ಗಂಭೀರ ಮತ್ತು ಸ್ಪಷ್ಟ ಪ್ರವಚನ."

"ನಿಜಕ್ಕೂ ನಾನೊಬ್ಬ ಭೌತವಿಜ್ಞಾನಿ ಆಗಿರುವುದಕ್ಕಿಂತಲೂ ಹೆಚ್ಚಾಗಿ ತತ್ತ್ವಶಾಸ್ತ್ರಜ್ಞನಾಗಿದ್ದೇನೆ," ಎಂಬುದಾಗಿ ಒಮ್ಮೆ ಇನ್‌ಫೆಲ್ಡರಿಗೆ ಹೇಳಿದ್ದರು.

"ಈ ಹೇಳಿಕೆಯಲ್ಲಿ ವಿಚಿತ್ರವಾದದ್ದೇನೂ ಇಲ್ಲ," ಎನ್ನುತ್ತಾರೆ ಇನ್‌ಫೆಲ್ಡ್ : "ಪ್ರತಿಯೊಬ್ಬ [ಸೈದ್ಧಾಂತಿಕ] ಭೌತವಿಜ್ಞಾನಿ ಒಬ್ಬ ತತ್ತ್ವಶಾಸ್ತ್ರಜ್ಞನೂ ಹೌದು—ಒಳ್ಳೆಯ ಪ್ರಯೋಗಪಟು ಕೆಟ್ಟ ತತ್ತ್ವಶಾಸ್ತ್ರಜ್ಞನಾಗಿರುವುದು ಸಾಧ್ಯವಾದರೂ. ಆದರೆ ಒಬ್ಬಾತ ಭೌತವಿಜ್ಞಾನವನ್ನು ಗಂಭೀರವಾಗಿ ಪರಿಗಣಿಸಿದ್ದಾದರೆ ಆತ ಮೂಲಭೂತ ತತ್ತ್ವಶಾಸ್ತ್ರೀಯ ಪ್ರಶ್ನೆಗಳ ಸಂಪರ್ಕಕ್ಕೆ ಬರುವುದನ್ನು ತಪ್ಪಿಸಿಕೊಳ್ಳಲಾರ."

ಐನ್‌ಸ್ಟೈನ್ ಮತ್ತು ಇನ್‌ಫೆಲ್ಡ್ ಒಂದು ಬೈಠಕ್ಕಿನಲ್ಲಿ ಮಗ್ನರಾಗಿದ್ದರು. ಯಾರೊ ಕದ ತಟ್ಟಿ ಒಳಬಂದರು—ಇಟಲಿಯ ಪ್ರಸಿದ್ಧ ಗಣಿತವಿದ ಲೇವೀ-ಚೀವೀಟ (೧೮೭೩-೧೯೪೧). ಕೆಲವು ವರ್ಷಗಳ ಹಿಂದೆ ಇಟಲಿಯಲ್ಲಿ ವಿಶ್ವವಿದ್ಯಾಲಯ ಪ್ರಾಧ್ಯಾಪಕರೆಲ್ಲರೂ ಫ್ಯಾಸಿಸ್ಟ್ ಪ್ರಭುತ್ವಕ್ಕೆ ನಿಷ್ಠೆಯನ್ನು ಪ್ರಮಾಣಿಸಬೇಕೆಂದು ಹುಕುಂ ಬಂದಾಗ ಈ ಸಣಕಲ ಒಣಕಲ ವ್ಯಕ್ತಿ ಅದನ್ನು ನಿರಾಕರಿಸಿದ್ದರು. ಪುಟ್ಟ ಮೂರ್ತಿಯಾದರೂ ದಿಟ್ಟ ಆಸಾಮಿ, ಗಟ್ಟಿ ಕುಳ.

ಲೇವೀ-ಚೀವೀಟ ಐನ್‌ಸ್ಟೈನರ ಹಳೆಯ ಮಿತ್ರ. ಆಗ ತಾನೇ ಪ್ರಿನ್ಸ್‌ಟನ್ನಿಗೆ ಆಹ್ವಾನಿತರಾಗಿ ಆಗಮಿಸಿದ್ದರು. ಆದರೂ ಐನ್‌ಸ್ಟೈನ್ ಇವರನ್ನು ಸ್ವಾಗತಿಸಿದ್ದು ಅಪರಿಚಿತ ಇನ್‌ಫೆಲ್ಡರನ್ನು ಮೊದಲಿಗೆ ಸ್ವಾಗತಿಸಿದ ಅದೇ ನೆಮ್ಮದಿ ಮುಖಮುದ್ರೆಯಿಂದ—ಅತಿ ಸ್ನೇಹದ ಹಠಾತ್ ಉತ್ಸರ್ಜನೆ ಅಲ್ಲಿ ಕಾಣಲಿಲ್ಲ. ತಾನು ಈ ವಿದ್ವಾಂಸರ ಘನ ಚಿಂತನೆಗೆ ಭಂಗ ತಂದೆನೆಂದು ಲೇವೀ-ಚೀವೀಟರಿಗೆ ಮುಜಗರವಾಯಿತು. ಕೂಡಲೆ ಹೊರಟು ಹೋಗುವುದಾಗಿ ಬಾಗಿಲತ್ತ ಕಾಲಿಟ್ಟರು. ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡ ಇನ್‌ಫೆಲ್ಡ್ ಎದ್ದರು. "ಇಲ್ಲ, ಇಲ್ಲ. ನೀವು ಮಾತಾಡಿ. ನಾನು ಹೋಗುತ್ತೇನೆ. ಇದೇನೂ ಮಹಾ ಅಲ್ಲ. ಇನ್ನೊಂದು ಸಲ ಬರುತ್ತೇನೆ."

ಈ ಸ್ನೇಹಕಲಹಕ್ಕೆ ಐನ್‌ಸ್ಟೈನ್ ಮಂಗಳ ಹಾಡಿದರು, "ಇಲ್ಲ. ನಾವೆಲ್ಲರೂ ಒಟ್ಟಾಗಿ ಮಾತಾಡಬಹುದು. ಈ ತನಕ ನಾನು ಇನ್‌ಫೆಲ್ಡರಿಗೆ ಹೇಳಿದ್ದನ್ನು ಮರುನುಡಿಯುತ್ತೇನೆ. ನಾವೇನೂ ಬಹಳ ಮುಂದೆ ಹೋಗಿಲ್ಲ. ಉಳಿದ ಭಾಗವನ್ನು ಆ ಬಳಿಕ ಚರ್ಚಿಸೋಣ."

ಒಬ್ಬ ಜರ್ಮನ್, ಇನ್ನೊಬ್ಬ ಇಟಾಲಿಯನ್, ಮತ್ತೊಬ್ಬ ಪೋಲಿಷ್. ಈ ಮೂವರಲ್ಲಿಯೂ ಒಮ್ಮೆಗೇ ಸಂವಹನತೆ ಏರ್ಪಡಲು ಅನುಕೂಲಿಸುವಂತೆ ಐನ್‌ಸ್ಟೈನ್ ಇಂಗ್ಲಿಷ್ ಭಾಷೆಯಲ್ಲಿ ವಿವರಿಸತೊಡಗಿದರು. ಇಂಗ್ಲಿಷಿನಲ್ಲಿ ಇವರ ಪದಸಂಪತ್ತು ಅತ್ಯಲ್ಪವಾಗಿದ್ದರೂ—ಮುನ್ನೂರು ಪದಗಳನ್ನು ಮೀರಿರಲಾರದೆಂದು ಇನ್‌ಫೆಲ್ಡರ ಅಂದಾಜು—ನಿಧಾನ ಮತ್ತು ಖಚಿತ ಗತಿಯಿಂದಾಗಿ ಇವರು ಅರ್ಥಸ್ಪಷ್ಟತೆಯನ್ನು ಸಾಧಿಸಬಲ್ಲವರಾಗಿದ್ದರು. ಆದರೆ ಇವರ ಮಾತಿನ ಧಾಟಿ ಮತ್ತು ಉಚ್ಚಾರಣೆಯ ವೈಖರಿ, ಇಂಗ್ಲೆಂಡಿನಲ್ಲಿ ಅಭ್ಯಸಿಸಿ ಬಂದಿದ್ದ ಇನ್‌ಫೆಲ್ಡರಲ್ಲಿ, ವಿಚಿತ್ರ ವಿನೋದಮಯ ಭಾವನೆಗಳನ್ನು ಚಬಕಿಸುತ್ತಿದ್ದುವು. ಇನ್ನು ಲೇವೀ-ಚೀವೀಟರ ಮಾತು ಇಟಾಲಿಯನ್ ಸ್ವರ ವಿನ್ಯಾಸದಿಂದಲೂ ಮೈಕೈಗಳ ಪೂರ್ಣಭಾಗಿತ್ವದಿಂದಲೂ ಒಂದು ನೃತ್ಯ ನಾಟಕ ವಿಶೇಷವಾಗಿತ್ತು. ಅದನ್ನು ಕೇಳುತ್ತ ನೋಡುತ್ತ ನಗು ತಡೆದಿಡುವುದು ಸಾಧ್ಯವೇ ಆಗುತ್ತಿರಲಿಲ್ಲ. ಇಬ್ಬರೂ ಮಾತಾಡಿದ್ದು ರಾಜಭಾಷೆ ಇಂಗ್ಲಿಷ್ (King's English) ಖಂಡಿತ ಅಲ್ಲವಾಗಿದ್ದರೂ ಅವರು ಮಾತ್ರ ತಾವು ಅದನ್ನೇ ಮಾತಾಡುತ್ತಿರುವುದಾಗಿ ನಂಬಿದ್ದರು ! ಕೆಳಕ್ಕೆ ಜಾರುತ್ತಿದ್ದ ಅಳ್ಳಕ ಸುರಾಲನ್ನು ಐನ್‌ಸ್ಟೈನ್ ಮೇಲೆಳೆದುಕೊಳ್ಳುತ್ತಿದ್ದ ನೋಟ ಈ ರಸಮಯ ಸನ್ನಿವೇಶಕ್ಕೆ ಕಚಗುಳಿ ಇಡುತ್ತಿತ್ತು.

ಇನ್‌ಫೆಲ್ಡರ ಅಂತರ್ವಾಣಿ ಮಿಡಿಯುತ್ತಿತ್ತು, "ನೀನಿಲ್ಲಿ ಪ್ರಪಂಚದ ಅತಿ ವಿಖ್ಯಾತ ವಿಜ್ಞಾನಿಯೊಡನೆ ಭೌತವಿಜ್ಞಾನವನ್ನು ಪ್ರಸ್ತಾವಿಸುತ್ತ ಮತ್ತು ಚರ್ಚಿಸುತ್ತ ಇರುವೆಯಾದರೂ, ಆತ ಸಸ್ಪೆಂಡರುಗಳನ್ನು [ಸುರಾಲನ್ನು ಹಿಡಿದೆಳೆದು ಸ್ಥಾನದಲ್ಲಿ ನಿಲ್ಲುವಂತೆ ಮಾಡುವ ಸ್ಥಿತಿಸ್ಥಾಪಕ ಪಟ್ಟಿಗಳು] ತೊಟ್ಟಿಲ್ಲವೆಂಬುದಕ್ಕಾಗಿ ನಗಬೇಕೆಂದಿರುವೆಯಲ್ಲವೇ ?"

ಒಮ್ಮೆ ಐನ್‌ಸ್ಟೈನ್ ಇನ್‌ಫೆಲ್ಡರಿಗೆ ಹೇಳಿದರು, "ನಾನು ದೀರ್ಘಕಾಲ ಬದುಕಿರುವೆನೆಂದು ಭಾವಿಸಿಲ್ಲ. ಆದರೆ, ನಾನು ಮೂಲಭೂತ ಸತ್ಯಗಳೆಂದು ಪರಿಗಣಿಸಿರುವವುಗಳ ಮೇಲೆ ಮಾತ್ರವೇ ಶೇಷಾಯುಷ್ಯವನ್ನು ವಿನಿಯೋಗಿಸಬೇಕೆಂಬುದು ನನ್ನ ಆಶಯ."

ಇನ್‌ಫೆಲ್ಡ್ ಬರೆದಿದ್ದಾರೆ : "ಸಂಪೂರ್ಣ ನೆಮ್ಮದಿಯಿಂದ ಪ್ರದರ್ಶಿಸುತ್ತಿದ್ದ ಈ ವಿನ್ಯಾಸ ಇವರ ಮಾತುಕತೆಗಳಲ್ಲಿ ಮತ್ತೆ ಮತ್ತೆ ಪ್ರಕಟವಾಗುತ್ತಿತ್ತು. ಇವರಿಗೆ ಬದುಕು ಮತ್ತು ಸಾವು ಇವುಗಳ ನಡುವಿನ ವ್ಯತ್ಯಾಸ ಭೌತವಿಜ್ಞಾನದಲ್ಲಿ ಕ್ರಿಯೆ ನಡೆಸಲು ಸಾಧ್ಯವಾಗುವುದು ಮತ್ತು ಸಾಧ್ಯವಾಗದಿರುವುದು ಇವುಗಳ ನಡುವಿನ ವ್ಯತ್ಯಾಸ ಮಾತ್ರ ಆಗಿದ್ದಿತೆಂದು ತೋರುತ್ತದೆ. ಮೂಲ ಚಿಂತನೆ ಮತ್ತು ಗಹನ ಸಂಶೋಧನಕ್ರಿಯೆಗಳನ್ನು ಒಂದು ಮತ್ತು ಒಂದೇ ಒಂದು ನಾಲೆಯತ್ತ ಹರಿಯುವಂತೆ ನಿರ್ದೇಶಿಸಬಲ್ಲ ಅಗಾಧ ಸೃಷ್ಟಿ ಸಾಮರ್ಥ್ಯವೇ ಐನ್‌ಸ್ಟೈನರ ಬಗೆಗಿನ ಪರಮಾದ್ಭುತ ಸಂಗತಿ. ಇದರಲ್ಲೇ ಇವರ ಮಹತ್ತ್ವ ನೆಲಸಿದೆ ಎಂಬುದನ್ನು ನಿಧಾನವಾಗಿ ನಾನು ಅರಿಯತೊಡಗಿದೆ. ಭೌತವಿಜ್ಞಾನದಷ್ಟು ಮುಖ್ಯವಾದದ್ದು ಯಾವುದೂ ಅಲ್ಲ. 'ಭಗವಂತ ಹೇಗೆ ಜಗತ್ತನ್ನು ಸೃಷ್ಟಿಸಿದ' ಎಂಬುದನ್ನು ಕುರಿತ ಚಿಂತನೆ ಮತ್ತು ಪರಿಗ್ರಹಿಕೆಗಳ ಹೊರತಾಗಿ ಬೇರೆ ಯಾವ ಮಾನವ ಸಂಬಂಧಗಳೂ ವೈಯಕ್ತಿಕ ಜೀವನವೂ ಇವರಿಗಿರಲಿಲ್ಲ. ಐನ್‌ಸ್ಟೈನ್ ಆಗಾಗ ಅಲ್ಪಸ್ವಲ್ಪ ಬದಲಾವಣೆಗಳ ಸಮೇತ ಪುನರುಚ್ಚರಿಸುತ್ತಿದ್ದ ಈ ಹೇಳಿಕೆಯಲ್ಲಿ—ಭಗವಂತ ಹೇಗೆ ಜಗತ್ತನ್ನು ಸೃಷ್ಟಿಸಿದ—ನಿಸರ್ಗ ನಿಯಮಗಳನ್ನು ಸರಳವಾಗಿಯೂ ಸುಂದರವಾಗಿಯೂ ರೂಪಿಸಿ ನಿರೂಪಿಸಬಹುದೆಂಬ ಅವರ ವಿಶಿಷ್ಟ ಧಾರ್ಮಿಕಭಾವ ಹುದುಗಿತ್ತು. ಅವರಿಗೆ ಹೊಸತೊಂದು ಭಾವನೆ ಸ್ಫುರಿಸಿದಾಗ ಸ್ವಗತವಾಗಿ ಪ್ರಶ್ನಿಸಿಕೊಳ್ಳುತ್ತಿದ್ದರು, 'ಭಗವಂತ ಜಗತ್ತನ್ನು ಈ ತೆರನಾಗಿ ಸೃಷ್ಟಿಸಿರಬಹುದೇ?' ಅಥವಾ 'ಈ ಗಣಿತೀಯ ರಚನೆ ದೇವರಿಗೆ ಒಪ್ಪುವಂಥಾದ್ದೇ ?' ಸಾಧಾರಣ ಭಾಷೆಗೆ ಅನುವಾದಿಸಿದಾಗ ಇದರ ಅರ್ಥವಿಷ್ಟು, 'ಈ ಸಿದ್ಧಾಂತ ತಾರ್ಕಿಕವಾಗಿ ಸರಳವಾಗಿ ಇರುವುದೇ?"

ಭಗವಂತನ ನಿಕಷದಲ್ಲಿ ಚಮತ್ಕಾರ ದೊಂಬರಾಟಗಳು ಚಿನ್ನದ ಅಂತಸ್ತು ಪಡೆಯವು. ಸೌಂದರ್ಯ ಸಾಂಗತ್ಯಗಳು ಮಾತ್ರ ಪಡೆದಾವು ಎಂದು ಐನ್‌ಸ್ಟೈನ್ ನಂಬಿದ್ದರು.

ಗುರುತ್ವಾಕರ್ಷಣ ತರಂಗಗಳ ಬಗೆಗೆ ಆಗ ಇವರು ಆಸಕ್ತರಾಗಿದ್ದರು.

ವಿದ್ಯುತ್ತು ಪ್ರವಹಿಸುವಲ್ಲಿ ವಿದ್ಯುತ್ಕಾಂತ ಕ್ಷೇತ್ರವೂ ಇದರ ಪರಿಣಾಮವಾಗಿ ವಿದ್ಯುತ್ಕಾಂತ ತರಂಗಗಳೂ ಉದ್ಭವಿಸುತ್ತವೆ. ವ್ಯಾಪಕವಾಗಿ ಈ ತರಂಗಗಳಿಗೆ ವಿದ್ಯುತ್ಕಾಂತ ವಿಕಿರಣವೆಂದು (electromagnetic radiation) ಹೆಸರು. ನಮಗೆ ನಕ್ಷತ್ರಗಳು ಗೋಚರವಾಗುವುದರ ಕಾರಣ ಬೆಳಕು, ಸೂರ್ಯನ ಬಿಸಿತಟ್ಟುವುದರ ಕಾರಣ ಶಾಖ. ಇವು ವಿದ್ಯುತ್ಕಾಂತ ವಿಕಿರಣದ ಖಚಿತ ಅಸ್ತಿತ್ವಕ್ಕೆ ಸ್ಪಷ್ಟ ನಿದರ್ಶನಗಳು.

ದ್ರವ್ಯರಾಶಿ (mass) ಇರುವಲ್ಲಿ ಗುರುತ್ವಾಕರ್ಷಣ ಕ್ಷೇತ್ರ ಉದ್ಭವಿಸುತ್ತದೆ. ಈಗ, ವಿದ್ಯುತ್ಕಾಂತಕ್ಷೇತ್ರ-ವಿದ್ಯುತ್ಕಾಂತತರಂಗ-ವಿದ್ಯುತ್ಕಾಂತವಿಕಿರಣ ಸಾದೃಶ್ಯದಿಂದ ಗುರುತ್ವಾಕರ್ಷಣಕ್ಷೇತ್ರ-ಗುರುತ್ವಾಕರ್ಷಣತರಂಗ-ಗುರುತ್ವಾಕರ್ಷಣವಿಕಿರಣ ಸಂಬಂಧವಿರಬೇಕೆಂದು ನಿರೀಕ್ಷಿಸುವುದು ಸಮಂಜಸ. ಗುರುತ್ವಾಕರ್ಷಣೆಯ ಸಮೀಕರಣಗಳನ್ನು ಸ್ಥೂಲವಾಗಿ ಅವಲೋಕಿಸಿದಾಗ ಗುರುತ್ವಾಕರ್ಷಣತರಂಗಗಳ ಅಸ್ತಿತ್ವಕ್ಕೆ ಪುರಾವೆ ಲಭಿಸಿದಂತೆ ಅನ್ನಿಸಿತು. ಆಳವಾದ ಅಧ್ಯಯನ ಮತ್ತು ಪರಿಶೀಲನೆ ಸೈದ್ಧಾಂತಿಕ ಹಂತದಲ್ಲಿಯೂ ವ್ಯವಸ್ಥಿತ ವೀಕ್ಷಣೆ ಮತ್ತು ತಪಾಸಣೆ ಪ್ರಾಯೋಗಿಕ ಹಂತದಲ್ಲಿಯೂ ಆಗಬೇಕಾಗಿದ್ದ ಮುಂದಿನ ಕೆಲಸಗಳು. ಅಂತಿಮವಾಗಿ ಪ್ರಾಯೋಗಿಕ ಸಾಧನೆಯೊಂದೇ ಸೈದ್ಧಾಂತಿಕ ಊಹನೆಯನ್ನು ಸ್ಥಿರೀಕರಿಸಬಲ್ಲದು, ಬೇರೆ ಯಾವುದೂ ಅಲ್ಲ.

ಐನ್‌ಸ್ಟೈನ್ ಆಸಕ್ತರಾಗಿದ್ದುದು ಗುರುತ್ವಾಕರ್ಷಣವಿಕಿರಣದ ಸೈದ್ಧಾಂತಿಕಾನ್ವೇಷಣೆಯಲ್ಲಿ.

ಆದರೆ ಈ ಕ್ಷೇತ್ರದಲ್ಲಿ ಇತರ ವಿಜ್ಞಾನಿಗಳಿಗೆ ಕಡ್ಡಾಯವಾದ ಕುತೂಹಲವೇನೂ ಮೊಳೆತಿರಲಿಲ್ಲ; ಬೆಳಕಿನ ಅನಿವಾರ್ಯತೆ ಆಗಲಿ, ಕಾವಿನ ಆವಶ್ಯಕತೆ ಆಗಲಿ, ಮೊತ್ತವಾಗಿ, ಇವೆರಡರ ಉಜ್ಜ್ವಲತೆ ಆಗಲಿ ಇರದಿದ್ದ ಊಹನಾಪ್ರಪಂಚದ ಗುರುತ್ವಾಕರ್ಷಣವಿಕಿರಣ ಅವರಿಗೆ ಆಕರ್ಷಕವಾಗ ದಿದ್ದುದು ಆಶ್ಚರ್ಯವಲ್ಲ. ಸಮ್ಮತಿಯೇ ಸದಾ ಸಕಲ ವಾದವಿವಾದಮನಃಕಷಾಯನಿವಾರಕ ಸಿದ್ಧೌಷಧವಾದ್ದರಿಂದ ಹೆಚ್ಚಿನ ವಿಜ್ಞಾನಿಗಳು ಗುರುತ್ವಾಕರ್ಷಣತರಂಗಗಳ ಅಸ್ತಿತ್ವವನ್ನು ಒಪ್ಪಿ ಕೊಂಡಿದ್ದರು—ಪ್ರಾಯೋಗಿಕ ಸ್ಥಿರೀಕರಣ ಲಭಿಸದಿದ್ದರೇನಂತೆ !

ಆದರೆ ಐನ್‌ಸ್ಟೈನ್ ಒಂಟಿ ಪಯಣಿಗ. ಇವರಲ್ಲಿ ಮೂಲಭೂತ ಸಂದೇಹಗಳು ಮೂಡಿದುವು (ಅಂದಾಜು ೧೯೩೬). ಗುರುತ್ವಾಕರ್ಷಣ ಸಮೀಕರಣಗಳನ್ನು ಆಳವಾಗಿ ಅಧ್ಯಯನಮಾಡಿದಾಗ ಹಲವಾರು ಅಸಾಂಗತ್ಯಗಳು ತಲೆದೋರುವುವೆಂದೂ ಇವನ್ನು ಸಮರ್ಪಕವಾಗಿ ಅರ್ಥವಿಸಲು ಗುರುತ್ವಾಕರ್ಷಣವಿಕಿರಣದ ಅಸ್ತಿತ್ವವನ್ನು ನಿರಾಕರಿಸಬೇಕಾದೀತೆಂದೂ ಭಾವಿಸಿದರು.

Traveller ! There is no path. Paths are made by walking. (ಪಥವಿಲ್ಲ ಪಯಣಿಗಾ! ನೀ ನಡೆದು ಪಥಕಟ್ಟು.)[೫೨೭]

ಇನ್‌ಫೆಲ್ಡ್ ಈ ಅಧ್ಯಯನದಲ್ಲಿ ವಿಶೇಷಾಸಕ್ತಿ ತಳೆದಿದ್ದರು. ಹೊಸ ಹುರುಪಿನಿಂದ ಐನ್‌ಸ್ಟೈನರ ಜೊತೆ ರಂಗಕ್ಕೆ ಇಳಿದರು. ಆದರೆ ತನ್ನ ವ್ಯಕ್ತಿತ್ವ ಐನ್‌ಸ್ಟೈನರ ಪ್ರಖರ ಉಜ್ಜ್ವಲತೆಯಲ್ಲಿ ಮಾಸಿ ಹೋಗಬಾರದೆಂದು ಬಯಸಿ ಒಂದಿಗೇ ಸ್ವತಂತ್ರ ಚಿಂತನೆಯನ್ನೂ ಮಾಡತೊಡಗಿದರು. ಉತ್ಸಾಹ ಮಾರ್ಗದರ್ಶನ ಅವರವು, ದುಡಿಮೆ ಮಾರ್ಗಕ್ರಮಣ ತನ್ನವು—ಇವು ಇನ್‌ಫೆಲ್ಡರ ನೀತಿಯಾಯಿತು.

ಐನ್‌ಸ್ಟೈನರ 'ಗುರುತ್ವಾಕರ್ಷಣತರಂಗ ನಿರಾಕರಣ' ಪ್ರಬಂಧವನ್ನು ಕುಶಾಗ್ರಮತಿ ಇನ್‌ಫೆಲ್ಡ್ ಓದಿ ಪ್ರಭಾವಿತರಾದರು. ಇವರ ಪ್ರಥಮ ಪ್ರತಿಕ್ರಿಯೆ ತರಂಗದ ಅಸ್ತಿತ್ವವನ್ನು ಅಂಗೀಕರಿಸ ಬೇಕೆಂಬುದಾಗಿದ್ದರೂ ಐನ್‌ಸ್ಟೈನರ ಅಡಕ ಮತ್ತು ತರ್ಕಬದ್ಧ ಪ್ರಬಂಧ ಇವರನ್ನು ಮತಾಂತರಿಸಿತು. ಹೊಸ ಹುರುಪಿನಿಂದ ಈ ವಿಷಯವನ್ನು ರಾಬರ್ಟ್‌ಸನ್ ಎಂಬ ಭೌತವಿಜ್ಞಾನಿಯೊಡನೆ ಪ್ರಸ್ತಾವಿಸಿದರು. ಅವರೆಂದರು, "ಆ ಪ್ರಬಂಧಕರ್ತೃ ಐನ್‌ಸ್ಟೈನರೇ ಆಗಿದ್ದರೂ ನಾವದನ್ನು ತೀವ್ರ ತಪಾಸಣೆಗೆ ಒಳಪಡಿಸುವುದು ಅಗತ್ಯ. ವಿಜ್ಞಾನದ ಗೊಂಡಾರಣ್ಯದಲ್ಲಿ ಹಾದಿ ತಪ್ಪದ ಸಲಗಗಳೇ ಇಲ್ಲ."

ಈ ನಿಷೇಧಾತ್ಮಕ ವಾದ ಇನ್‌ಫೆಲ್ಡರನ್ನು ಕುಟುಕಿತು. ಪ್ರಬಂಧವನ್ನು ಆಳವಾಗಿ ಅಭ್ಯಸಿಸಿದರು. ಎಲ್ಲೂ ಏನೂ ಲೋಪದೋಷ ಪತ್ತೆ ಆಗಲಿಲ್ಲ. ಮಾತ್ರವಲ್ಲ ಆ ಸಾಧನೆಯಲ್ಲಿ ಕೆಲವೊಂದು ಸುಲಭೀಕರಣಗಳನ್ನು ಅಳವಡಿಸುವುದು ಸಾಧ್ಯವೆಂದೂ ಕಂಡು ಬಂದಿತು. ಸುಲಭೀಕರಣಗಳು ಇವರ ವಿಶಿಷ್ಟ ಕೊಡುಗೆ. ಖಾಸಾ ಸೊತ್ತು. ಈ ಹೊಸ ಯಶಸ್ಸಿನಿಂದ ಖುಷಿಗೊಂಡು ತಾನು ಸಾಧಿಸಿದ ಸುಲಭೀಕರಣಗಳನ್ನು ಐನ್‌ಸ್ಟೈನರಿಗೆ ತೋರಿಸಿದರು.

"ನಿಜ. ನಿಮ್ಮ ಒಳದಾರಿ ಸುಂದರವಾಗಿದೆ. ಕ್ರಮಬದ್ಧವಾಗಿ ಬರೆದು ಪ್ರಕಟಿಸಿ."

ಹೀಗೆ ದ್ವಿವಿಕ್ರಮಗಳಿಂದ—ಐನ್‌ಸ್ಟೈನ್ ಸಾಧನೆ ನಿಜವಾದದ್ದು, ತನ್ನ ಸುಲಭೀಕರಣ ಸಿಂಧು ವಾದದ್ದು—'ಶಸ್ತ್ರಸನ್ನದ್ಧ'ರಾದ ಇನ್‌ಫೆಲ್ಡ್ ನವೋತ್ಸಾಹದಿಂದ ರಾಬರ್ಟ್‌ಸನ್ನರನ್ನು 'ಎದುರಿಸಲು' ಪಟ್ಟು ಹಾಕಿದರು.

ಆದರೆ ರಾಬರ್ಟ್‌ಸನ್ನರ ನಿಲುಮೆ ಬದಲಾಗಲಿಲ್ಲ. "ನೀವು ಏನೇ ಹೇಳಿ, ಆ ತರಂಗಗಳು ಇದ್ದೇ ಇವೆ. ನಿಮ್ಮ ಸಾಧನೆಯಲ್ಲಿ ಏನಾದರೊಂದು ಅತಿ ಸೂಕ್ಷ್ಮ ದೋಷ ನುಸುಳಿರುವ ಸಾಧ್ಯತೆ

ಉಂಟು." ಎಂದು ಹೇಳಿ ಇನ್‌ಫೆಲ್ಡರ ಸುಲಭೀಕೃತ ಸಾಧನೆಯನ್ನು ಕೂಲಂಕಷವಾಗಿ ತಪಾಸಿಸಲು ತೊಡಗಿದರು.

ಮನೆ ಕಟ್ಟಿದವ ಒಬ್ಬ, ತಪ್ಪು ಹುಡುಕಬೇಕಾದವ ಇನ್ನೊಬ್ಬ—ಬಲು ತೊಡಕಿನ ಜಾಲವಿದು. ಆದರೆ ಪರಿಪೂರ್ಣತಾವಾದಿ ರಾಬರ್ಟ್‌ಸನ್ ಪರಿಷ್ಕಾರವಾಗಿ ಮುನ್ನಡೆದರು. ಇನ್ನೇನು ಕೊನೆಯ ಹಂತ ತಲಪಬೇಕು—ಒಂದು ಪದದ ಚಿಹ್ನೆಯಲ್ಲಿ ವ್ಯತ್ಯಾಸ ಕಂಡು ಬಂತು : ಇನ್‌ಫೆಲ್ಡರಿಗೆ ಋಣ ಚಿಹ್ನೆ(—)ಬಂದಿದ್ದಲ್ಲಿ ರಾಬರ್ಟ್‌ಸನ್ನರಿಗೆ ಧನ ಚಿಹ್ನೆ (+) ಬಂದಿತ್ತು ! ಇದೇನು ಸಾಮಾನ್ಯವೇ ? ನರಕ-ಸ್ವರ್ಗಾಂತರ, ಭಿಕ್ಷಾಧೀಶ-ಕೋಟ್ಯಧೀಶಾಂತರ, ತರಂಗವಿಲ್ಲ-ತರಂಗ ವುಂಟು ಅಂತರ ನಿಜ. ಇನ್‌ಫೆಲ್ಡ್ ಎಡವಿದ್ದರು. ಲಘುವಾಗಿ ಕ್ಷುದ್ರವಾಗಿ ಅವರಿಗೆ ತಿಳಿಯದಂತೆ ಎಡವಿದ್ದರು—ಇದೇ ಎಲ್ಲ ವ್ಯತ್ಯಾಸಕ್ಕೂ ಕಾರಣವಾಗಿತ್ತು. ಇವರ ಕುಸಿದ ಧೃತಿಗೆ ಸಾಂತ್ವನವೆರೆದರು ರಾಬರ್ಟ್‌ಸನ್, "ಇದು ಎಲ್ಲರಿಗೂ ಆಗುತ್ತದೆ. ಅತಿ ಕ್ಷುದ್ರ ಲೋಪವೇ ತಪಾಸಣೆಗೆ ಅತಿ ಕ್ಲಿಷ್ಟ ತಾಪ."

ಹಾಗಾದರೆ ಐನ್‌ಸ್ಟೈನರ ಮೂಲಸಾಧನೆಯೂ ತಪ್ಪು ? ಗುರುತ್ವಾಕರ್ಷಣತರಂಗಗಳಿರುವುದು ನಿಜ ?

ಮರುದಿನ ಇನ್‌ಫೆಲ್ಡ್ ಐನ್‌ಸ್ಟೈನರಿಗೆ ಹೇಳಿದರು, "ನನ್ನ ಫಲಿತಾಂಶ ತಪ್ಪು, ಗಣನೆಯಲ್ಲಿ ದೋಷ ನುಸುಳಿತ್ತು. ತರಂಗಗಳು ನಿಜಕ್ಕೂ ಇವೆ ಎಂದು ನಂಬಬೇಕಾಗಿದೆ."

ಐನ್‌ಸ್ಟೈನ್ ತಣ್ಣಗೆ ಮರುನುಡಿದರು, "ಆ ಪ್ರಬಂಧದಲ್ಲಿ ಒಂದು ದೋಷವನ್ನು ಹಿಂದಿನಿರುಳು ಹುಡುಕಿದೆ. ನನ್ನ ಸಾಧನೆಯೂ ತಪ್ಪು."

ಅದು ಇನ್ನೂ ಇನ್ನೂ ಸೂಕ್ಷ್ಮವಾಗಿತ್ತು. (ಮಹಾವಿಜ್ಞಾನಿಗೆ ಅಷ್ಟಾದರೂ 'ರಿಯಾಯತಿ' ಕೊಡಬೇಡವೇ ಭಗವಂತ !) ಇದು ಹೇಗೂ ಇರಲಿ. ಈ ರಂಧ್ರಾನ್ವೇಷಣೆಗೆ ಮೊದಲೇ ಪ್ರಿನ್‌ಸ್ಟನ್ನಿನ ಫೈನ್ ಹಾಲಿನ (ಗಣಿತ ಶಾಖೆ) ನೋಟಿಸ್ ಬೋರ್ಡಿನಲ್ಲಿ ಒಂದು ಕಾರ್ಯಕ್ರಮವನ್ನು ಪ್ರಕಟಿಸಲಾಗಿತ್ತು, "ಕೊಠಡಿ ಸಂಖ್ಯೆ ೧೧೩ರಲ್ಲಿ ಗಣಿತ ಗೋಷ್ಠಿ . . . ರಂದು ನಡೆಯಲಿದೆ." ಯಾರಿಂದ? ಹೆಸರಿಲ್ಲದ ಈ ಪ್ರಕಟಣೆಯ ಹಿಂದಿನ ಹಿರಿ ಹೆಸರೇನೆಂಬುದು ಬಲ್ಲವರಿಗೆ ಚೆನ್ನಾಗಿ ಗೊತ್ತು. ಉಳಿದವರಿಗೆ ಗೊತ್ತಾದರೆ ಅಲ್ಲಿ ಇಡೀ ನ್ಯೂಯಾರ್ಕೇ ನೆರೆದೀತು ! ಐನ್‌ಸ್ಟೈನ್ ಹೆಸರಿನ ಮಾಂತ್ರಿಕ ಸಂಮೋಹಕತೆ ಆ ಮಟ್ಟದ್ದು.

ಗೋಷ್ಠಿಯ ಸೂಚನೆ ನೀಡಿದಾಗ ಐನ್‌ಸ್ಟೈನ್ ತಮ್ಮ ಸಾಧನೆ ಬಗ್ಗೆ ವಿಶ್ವಾಸವುಳ್ಳವರಾಗಿದ್ದರು. ಆದರೆ ಇನ್ನೇನು ಅದಕ್ಕೆ ಒಂದು ದಿವಸವಿದೆ ಎನ್ನುವಾಗ ಆ ಸಾಧನೆ ನುಚ್ಚುನೂರಾಗಿ ಕುಸಿದಿತ್ತು. ಇಂಥ ದುರಂತ ಸನ್ನಿವೇಶದಲ್ಲಿ ಇವರು ಹೇಗೆ ವರ್ತಿಸಿಯಾರು ?

ಇನ್‌ಫೆಲ್ಡ್ ಬರೆದಿದ್ದಾರೆ, "ಅವರ ಫಲಿತಾಂಶ ನುಚ್ಚುನುರಿಯಾಗಿ ಇನ್ನೂ ಒಂದು ದಿವಸ ಸಂದಿರಲಿಲ್ಲ. ಇಂಥ ಘೋರಸನ್ನಿವೇಶದಲ್ಲಿ ಅವರು ಅದೇ ಫಲಿತಾಂಶದ ಬಗ್ಗೆ ನುಡಿದ ಮಾತು ಆಕರ್ಷಕತೆ, ಪ್ರಾಮಾಣಿಕತೆ ಮತ್ತು ಅಸಾಧಾರಣ ಪಾರದರ್ಶಕತೆಯಿಂದ ಕೂಡಿತ್ತು. ನಲವತ್ತೈದು ಮಿನಿಟುಗಳ ಕಾಲ ಭಾಷಣ. ವಿಷಯ, ಅದರ ಭಾವನೆ, ಸಾಧನೆ ಮತ್ತು ಅವರು ಮಾಡಿದ ತಪ್ಪು ಇವನ್ನು ವಿವರಿಸಿದರು. 'ಗುರುತ್ವಾಕರ್ಷಣ ತರಂಗಗಳಿವೆಯೇ ಅಥವಾ ಇಲ್ಲವೇ ಎಂದು ನೀವು ಪ್ರಶ್ನಿಸಿದ್ದಾದರೆ ನನಗೆ ಗೊತ್ತಿಲ್ಲವೆಂದೇ ನಾನು ಉತ್ತರ ಕೊಡಬೇಕಾಗುತ್ತದೆ. ಆದರೆ ಇದು ಅತ್ಯಂತ ಸ್ವಾರಸ್ಯಕರ ಸಮಸ್ಯೆ'. ಎಂದು ಸಮಾರೋಪಿಸಿದರು."

ಮುಂದೆ ಐನ್‌ಸ್ಟೈನ್ ಗುರುತ್ವಾಕರ್ಷಣ ತರಂಗಗಳು ಇವೆಯೆಂಬ ತೀರ್ಮಾನಕ್ಕೆ ಬಂದರು.

ಒಮ್ಮೆ ಇನ್‌ಫೆಲ್ಡ್ ಹೇಳಿದರು, "ನಾಳೆ ಆದಿತ್ಯವಾರ. ನಾನು ನಿಮ್ಮಲ್ಲಿಗೆ ಬರಬೇಕೆಂಬುದು ನಿಮ್ಮ ಅಪೇಕ್ಷೆಯೇ. ಕೆಲಸ ಮಾಡಲೆಂದು ?"

"ಏಕಾಗಬಾರದು ?"

"ಪ್ರಾಯಶಃ ಆದಿತ್ಯವಾರ ನೀವು ರಜೆ ತೆಗೆದುಕೊಳ್ಳಲು ಇಚ್ಛಿಸಿರಬಹುದೆಂದು ನಾನು ಭಾವಿಸಿದೆ."

ಐನ್‌ಸ್ಟೈನ್ ಗಹಗಹಿಸಿ ನಕ್ಕು ಪ್ರಶ್ನೆಯನ್ನು ಫೈಸಲ್ ಮಾಡಿದರು, "ಭಗವಂತ ವಿರಮಿಸುವುದಿಲ್ಲ ಭಾನುವಾರ ಕೂಡ !"

ಗಣಿತಶಾಖೆಯಲ್ಲಿ ಐನ್‌ಸ್ಟೈನರ ಪ್ರಸಿದ್ಧ ಮಂತ್ರವನ್ನು ಕೆತ್ತಿ ಶಾಶ್ವತಗೊಳಿಸಲಾಗಿದೆ : God is slick but He ain't mean (ದೇವರು ಚತುರ, ಆದರೆ ನೀಚನಲ್ಲ.)

ಸ್ವಂತಾರಣ್ಯದಲ್ಲಿಯೂ ಸಿಂಹ ಸಿಂಹವೇ, ಅಪೂರ್ವ ಮತ್ತು ವಿಶೇಷ ಮೃಗವೇ. ಎಂದೇ ಪ್ರಿನ್ಸ್‌ಟನ್-ನಿವಾಸಿಗಳಿಗೆ ಕೂಡ ಐನ್‌ಸ್ಟೈನ್ ವಿಲಕ್ಷಣಪುರುಷರಾಗಿ ತೋರುತ್ತಿದ್ದರು. ಹೀಗಾಗಿ ಸಾಯಂಕಾಲದ ಅಡ್ಡಾಟಕ್ಕೆ ಇವರು ಬಹುತೇಕ ಜನರಹಿತ ಪ್ರದೇಶವನ್ನು ಆಯ್ದುಕೊಳ್ಳುತ್ತಿದ್ದುದು ರೂಢಿಯಾಗಿತ್ತು. ಗದ್ದೆ ಬಯಲುಗಳು, ತೋಟ ಕಾಡುಗಳು, ಹೊಸತು ಹಾದಿಗಳು ಇವರ 'ಅನ್ವೇಷಣಕ್ಷೇತ್ರ'ಗಳಾಗಿದ್ದುವು. "ನಿಜಕ್ಕೂ ಒಬ್ಬ ಸರಳ ಕಾರ್ಮಿಕನ ಬಗ್ಗೆ ನನಗೆ 'ಅಸೂಯೆ' ಉಂಟು—ಅವನಿಗಿರುವ ಏಕಾಂತತೆ ನನಗಿಲ್ಲವಲ್ಲ ಎಂಬ ಕಾರಣಕ್ಕಾಗಿ."

ಒಂದು ಸಂಜೆ ಐನ್‌ಸ್ಟೈನ್ ಮತ್ತು ಇನ್‌ಫೆಲ್ಡ್ ಮಾಮೂಲಿ ಸವಾರಿ ಹೊರಟಿದ್ದಾರೆ. ಅಲ್ಲೆ ಬಳಿಸಾರಿದ ಕಾರಿನಿಂದ ಕೆಂಪುಟಿಯುತ್ತ ಒಬ್ಬ ಮಹಿಳೆ ಇಳಿದಿದ್ದಾಳೆ : ಐನ್‌ಸ್ಟೈನ್-ದರ್ಶನದಿಂದ ಪುಳಕಿತಳಾಗಿದ್ದಾಳೆಂಬುದು ಸ್ಪಷ್ಟ, "ಪ್ರೊಫೆಸರ್ ಐನ್‌ಸ್ಟೈನ್ ಅವರೇ ! ನಿಮ್ಮ ಛಾಯಾಚಿತ್ರ ಹಿಡಿಯಲು ದಯಮಾಡಿ ಒಪ್ಪುವಿರಾ ?"

"ಓಹೋ ಅಗತ್ಯವಾಗಿ."

ಕೆಮರಾ ಕ್ಲಿಕ್ಕಿದೆ. ಶುಕ್ರಿಯಾ ಸಲ್ಲಿಸಿ ಮಹಿಳೆ ಕಾರೇರಿದ್ದಾಳೆ. ಈ ಘಟನೆಯೇ ನಡೆಯಲಿಲ್ಲವೆನ್ನುವಂಥ ನಿರ್ಲಿಪ್ತತೆಯಿಂದ ಐನ್‌ಸ್ಟೈನ್ ಮುಂದೆ ಕಾಲು ಹಾಕಿದ್ದಾರೆ.

ಈ ಲೋಕದಲ್ಲಿ ಬಾಳುವ ಸುಖಸಂತೋಷಕ್ಕೆ ತಾನು ತೆರಬೇಕಾದ ಕಿರುಕುಳ ತೆರಿಗೆಗಳಿವು ಎಂಬಂಥ ಭಾವ ಅವರದು.

ಐನ್‌ಸ್ಟೈನ್ ಮತ್ತು ಇನ್‌ಫೆಲ್ಡ್ ಪ್ರಿನ್ಸ್‌ಟನ್ನಿನಲ್ಲಿದ್ದ ಸಿನಿಮ ಮಂದಿರಕ್ಕೆ ಹೋದರು. ಟಿಕೇಟುಗಳನ್ನು ದ್ವಾರಪಾಲಕನಿಗೆ ಒಪ್ಪಿಸಿ, ಜನ ಭರ್ತಿಯಾಗಿದ್ದ ತಂಗುಕೊಠಡಿಯ ಒಳಹೊಕ್ಕ ಬಳಿಕ ತಿಳಿಯಿತು ಸಿನೆಮ ಪ್ರಾರಂಭವಾಗಲು ಇನ್ನೂ ಹದಿನೈದು ಮಿನಿಟುಗಳಿವೆಯೆಂದು. ಹಾಗಾದರೆ ಸ್ವಲ್ಪ ಕಾಲಾಡಿಸಿ ಬರೋಣವೆಂದು ಹೊರಹೊರಟರು.

ಇನ್‌ಫೆಲ್ಡ್ ದ್ವಾರಪಾಲಕನಿಗೆ, "ನಾವು ಇನ್ನು ಕೆಲವೇ ಕ್ಷಣಗಳಲ್ಲಿ ಹಿಂತಿರುಗುತ್ತೇವೆ."

"ಸರಿ."

ಇಷ್ಟಾಗುವಾಗ ಐನ್‌ಸ್ಟೈನ್ ಥಕ್ಕನೆ ಅತಿ ಗಂಭೀರರಾದರು. ತುಂಬ ಮುಗ್ಧತೆಯಿಂದ ಅವನಿಗೆ ಹೇಳಿದರು, "ಅದು ಸರಿಯಪ್ಪ. ಆದರೆ ನಮ್ಮ ಬಳಿ ಈಗ ಟಿಕೇಟುಗಳಿಲ್ಲವಲ್ಲ ? ನೀವು ನಮ್ಮನ್ನು ಗುರುತಿಸಬಲ್ಲಿರಾ ?" ಇವರು ತಮಾಷೆ ಮಾಡುತ್ತಿದ್ದಾರೆಂದು ಅವನಿಗೆ ಅನ್ನಿಸಿರಬೇಕು. ನಗುತ್ತ ನುಡಿದ, "ಖಂಡಿತವಾಗಿಯೂ ಪ್ರೊಫೆಸರ್ ಐನ್‌ಸ್ಟೈನವರೇ ! ನಾನು ಖಚಿತವಾಗಿಯೂ ನಿಮ್ಮನ್ನು ಗುರುತಿಸಬಲ್ಲೆ." ಸ್ವಂತ ಮಹಿಮೆ ಖ್ಯಾತಿಗಳ ಬಗ್ಗೆ ಇವರದು ದಿವ್ಯ ನಿರ್ಲಕ್ಷ್ಯ. ಆದರೆ

ಇವರ ದೈನಂದಿನ ಕಾರ್ಯಕಲಾಪಗಳಿಗೆ ತೊಂದರೆ ಆಗುತ್ತಿದ್ದಾಗ ಮುನಿಸಿಗೇಳುತ್ತಿದ್ದುದಿತ್ತು. ಇವರು ಅನ್ನುತ್ತಿದ್ದರು :

"ಯಾವ ನಿಜ ಕಾರಣವೂ ಇಲ್ಲದೆ ನನಗೆ ಅತಿ ಪ್ರಚಾರ ದೊರೆತಿದೆ. ಆದ್ದರಿಂದ ನಾನೊಬ್ಬ ಶೋಷಕನೆಂದು ನನಗನ್ನಿಸುತ್ತದೆ."

"ನಾನು ಪ್ರತಿಯೊಬ್ಬನೊಡನೆಯೂ, ಆತ ತೋಟಿಯಾಗಿರಲಿ ವಿಶ್ವವಿದ್ಯಾಲಯದ ಅಧ್ಯಕ್ಷನಾಗಿರಲಿ, ಒಂದೇ ರೀತಿ ಮಾತಾಡುತ್ತೇನೆ."

"ಸ್ವಲ್ಪ ಮಟ್ಟಿಗೆ ನಾನೊಬ್ಬ ಯೆಹೂದ್ಯ ಸಂತನಂತೆ : ನಾನು ಸತ್ತ ಬಳಿಕ ಯೆಹೂದ್ಯರು ನನ್ನ ಮೂಳೆಗಳನ್ನು ಔತಣ ಸಮಾರಂಭಕ್ಕೆ ಒಯ್ದು ದುಡ್ಡು ಗಳಿಸುತ್ತಾರೆ."

ಇನ್‌ಫೆಲ್ಡ್ರ ಒಬ್ಬ ಮಿತ್ರ ಇವರನ್ನು ಕೇಳಿದ, "ಐನ್‌ಸ್ಟೈನರು ಖ್ಯಾತಿಯನ್ನು ಇಷ್ಟಪಡುವುದಿಲ್ಲವೆಂದಾದ ಪಕ್ಷ ಅವರೇಕೆ ಸಾಮಾನ್ಯ ಜನರಂತಿರಬಾರದು ? ಉದ್ದ ಕೂದಲು, ತಮಾಷೆಯಾಗಿ ಎದ್ದು ತೋರುವ ಚಕ್ಕಳದ ಜುಬ್ಬ, ಕಾಲುಚೀಲಗಳಿಲ್ಲ, ಸಸ್ಪೆಂಡರುಗಳಿಲ್ಲ, ಕಾಲರುಗಳಿಲ್ಲ, ಟೈಗಳಿಲ್ಲ ?"

ಈ ಪ್ರಶ್ನೆಗೆ ಇನ್‌ಫೆಲ್ಡ್ ವಿವರಣೆ ನೀಡಿದ್ದಾರೆ. ಬಾಹ್ಯ ಪ್ರಪಂಚದ ಬಂಧನದಿಂದ ಆದಷ್ಟು ವಿಮೋಚಿತನಾಗಿರಬೇಕೆಂಬುದೇ ಅವರ ಪ್ರವೃತ್ತಿ. ಮಿಥ್ಯಾಪ್ರಗತಿ, ಸಾಮಾಜಿಕ ಪ್ರತಿಷ್ಠೆ, ಕಾಲ ಉಳಿತಾಯ, ಜೀವನ ಸೌಕರ್ಯ ಮುಂತಾದ ಶುಷ್ಕ ಭಾವನೆಗಳ ಬೆಂಬತ್ತಿ ಮಾನವ ಅನಾವಶ್ಯಕ ಉಪಕರಣ ಹತ್ಯಾರುಗಳ ದಾಸಾನುದಾಸನಾಗಿ ತನ್ನ ಕಾಲವನ್ನೂ ಸ್ವಾತಂತ್ರ್ಯವನ್ನೂ ಕಳೆದುಕೊಂಡಿದ್ದಾನೆ. ಕಾರುಗಳ, ಶೀತಕಾರಿಗಳ, ಎಲೆಕ್ಟ್ರಾನಿಕ್ ಉಪಕರಣಗಳ ಮತ್ತು ಸ್ವಯಂಚಲಿ ಯಂತ್ರಗಳ ಗೊಂಡಾರಣ್ಯದಲ್ಲಿ ಹಿಂಡನಗಲಿದ ಹರಿಣದಂತಾಗಿದ್ದಾನೆ. ಉದ್ದ ಕೂದಲು ? ಕ್ಷೌರಿಕ ಸೇವೆಯಿಂದ ವಿಮುಕ್ತಿ. ಚಕ್ಕಳದ ಜುಬ್ಬ ? ಅನೇಕ ವರ್ಷಗಳ ತನಕ ಕೋಟಿನ ಸಮಸ್ಯೆಯ ಪರಿಹಾರ. ಕಾಲುಚೀಲಗಳು ? ಶೂ ತೊಡಲು ಇವು ಅನಗತ್ಯ. ಸಸ್ಪೆಂಡರುಗಳು ? ವೃಥಾ ಹೊರೆ. ಕಾಲರ್, ಟೈ ? ಒಣ ಜಂಬದ ಹೊರ ಅಂಚುಗಳು ! ಮರ್ಯಾದೆಯಿಂದ ಆರೋಗ್ಯದಲ್ಲಿ ಬಾಳಲು ಅವಶ್ಯವಾಗುವ ಕನಿಷ್ಠ ಪರಿಕರಗಳು ಸಾಕು—ಇದು ಅದರ ದೃಷ್ಟಿ.

ಐನ್‌ಸ್ಟೈನರ ಜೊತೆ ಸಂಶೋಧನಸಹಾಯಕರಾಗಿ ಇನ್‌ಫೆಲ್ಡ್ ಒಂದು ವರ್ಷ ಕೆಲಸ ಮಾಡಿದರು. ಆಗ ಇವರಿಗೆ ಅಧಿಕೃತ ವಿದ್ಯಾರ್ಥಿವೇತನ ದೊರೆಯುತ್ತಿತ್ತು. ಆದರೆ ಮರುವರ್ಷ ಸಾಕ್ಷಾತ್ ಐನ್‌ಸ್ಟೈನರ ಶಿಫಾರಸು ಇದ್ದಾಗ್ಯೂ ಆರ್ಥಿಕತೆ, ಉಳಿತಾಯ ಮುಂತಾದ ಅಮೂರ್ತ ಅಸ್ಪಷ್ಟ ಕಾರಣಗಳ ಹೆಸರಿನಲ್ಲಿ ಇವರ ವೇತನ ರದ್ದಾಯಿತು. ವಿಶ್ವವಿದ್ಯಾಲಯಗಳಲ್ಲಿ ಕೆಲಸ ದೊರೆಯುವುದು, ೧೯೩೭, ತುಂಬ ಕಠಿಣ ಸಮಸ್ಯೆ ಆಗಿತ್ತು. ಏಕೆಂದರೆ ಜರ್ಮನಿಯ ಸೇನಾನಡಿಗೆಯ ಗತಿ ತೀವ್ರವಾಗುತ್ತಿತ್ತು, ಪಕ್ಕದ ಯೂರೋಪಿಯನ್ ರಾಷ್ಟ್ರಗಳಲ್ಲಿ ಪರಿಸ್ಥಿತಿ ಹದಗೆಟ್ಟಿತ್ತು. ಸಮಗ್ರವಾಗಿ ಯೂರೋಪಿನಲ್ಲಿ ಬುದ್ಧಿಜೀವಿಗಳಿಗೆ, ತತ್ರಾಪಿ ಯೆಹೂದ್ಯಛಾಯೆಯವರಿಗೆ, ಉಳಿಗಾಲವಿಲ್ಲವಾಗಿತ್ತು. ಹೀಗಾಗಿ ಯೂರೋಪಿನಿಂದ ಅಮೆರಿಕಕ್ಕೆ ಪ್ರತಿಭಾಪ್ರವಾಹವೇ ಧುಮುಧುಮಿಸತೊಡಗಿತ್ತು. ಲಭ್ಯ ಅವಕಾಶಗಳಿಗೆ ಅಸಂಖ್ಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾದರೆ ಮಾರುಕಟ್ಟೆ ನಿಯಮಗಳ ಪ್ರಕಾರ ಸಂಬಳ ಸೌಕರ್ಯಗಳು ಕುಸಿಯಬೇಕು, ನಿರುದ್ಯೋಗ ಸಮಸ್ಯೆ ಉಲ್ಬಣಿಸಬೇಕು. ಅಂದಿನ ಅಮೆರಿಕ ಹೀಗಿತ್ತು.

ಪ್ರಿನ್‌ಸ್ಟನ್ನಿನಲ್ಲಿ ವೇತನ ಮುಂದುವರಿಯದೆ, ಹೊರಗೆ ಕೆಲಸ ದೊರೆಯದೆ, ಪೋಲೆಂಡಿಗೆ ಮರಳುವುದು ಸಾಧ್ಯವಾಗದೆ ಇನ್‌ಫೆಲ್ಡ್ ಚಡಪಡಿಸುತ್ತಿದ್ದರು.

ಐನ್‌ಸ್ಟೈನ್ ಹೇಳಿದರು. "ನನಗೆ ಪ್ರಿನ್ಸ್‌ಟನ್ನಿನ ಹೊರಗೆ ಹೆಸರಿದೆಯೆಂದು ತಿಳಿದಿದ್ದೇನೆ. ಯಾವುದಾದರೂ ವ್ಯವಸ್ಥಾಪನೆಯಿಂದ ನಿಮಗಾಗಿ ಒಂದಿಷ್ಟು ಮೊಬಲಗನ್ನು ಸಂಗ್ರಹಿಸಬಲ್ಲೆ. ಕೆಲವು ವರ್ಷಗಳ ಹಿಂದೆ, ಯೆಹೂದ್ಯ ನಿರಾಶ್ರಿತರ ಸಹಾಯಾರ್ಥ ಒಂದು ಕಚೇರಿ ಕೊಟ್ಟಿದ್ದೆ. ಆಗ ಆರುಸಾವಿರ ಡಾಲರುಗಳು ಕೂಡಿದ್ದುವು. ಆದ್ದರಿಂದ ಒಮ್ಮೊಮ್ಮೆ ನಾನು ಸಹ ಒಂದಿಷ್ಟು ಹಣ ಸೇರಿಸಬಲ್ಲೆನೆಂಬ ಭರವಸೆ ಇದೆ. ಚಿಂತೆ ಮಾಡದಿರಿ. ಇದು ಯಾವುದೂ ಕೈಗೂಡದಿದ್ದರೆ ನಿಮ್ಮನ್ನು ನನ್ನ ಖಾಸಗಿ ಸಹಾಯಕನಾಗಿ ಇಟ್ಟುಕೊಳ್ಳಬಲ್ಲೆ. ನನಗೆ ಅವಶ್ಯವಾದದ್ದಕ್ಕಿಂತ ಹೆಚ್ಚು ಹಣವನ್ನು ನಾನು ಗಳಿಸುತ್ತಿದ್ದೇನೆ. ನನ್ನ ಆದಾಯದಿಂದ ನಿಮಗೆ ನಿಮ್ಮ ವೇತನಸಮಾನ ಮೊಬಲಗನ್ನು ಕೊಡಬಲ್ಲೆ."

ಐನ್‌ಸ್ಟೈನರ ಔದಾರ್ಯ ಇನ್‌ಫೆಲ್ಡರ ಹೃದಯವನ್ನೇ ಕಲಕಿತು. ಆದರೆ ಇದು ಶಾಶ್ವತ ಪರಿಹಾರವಾಗದು. ಇದನ್ನೊಪ್ಪುವುದು ಇವರ ಘನತೆಗೂ ಒಗ್ಗದು. ಹಣಗಳಿಕೆಯ ಹೊಸ ಹಾದಿ ಯೋಚಿಸಿದರು. ತಾವೇಕೆ ಐನ್‌ಸ್ಟೈನರ ಹಿರಿತನದಲ್ಲಿ ಒಂದು ಜನಪ್ರಿಯ ವಿಜ್ಞಾನ ಪುಸ್ತಕ ಬರೆಯಬಾರದು ? ವಿಜ್ಞಾನವನ್ನು ಜನಪ್ರಿಯಗೊಳಿಸುವ[೫೩] ಎಲ್ಲ ಪ್ರಯತ್ನಗಳನ್ನೂ ಕಾರ್ಯನಿರತ ವಿಜ್ಞಾನಿಗಳು ಸಾಮಾನ್ಯವಾಗಿ ಸಂಶಯ ಮತ್ತು ತಿರಸ್ಕಾರ ದೃಷ್ಟಿಯಿಂದ ನೋಡುತ್ತಾರೆ. ವಿಜ್ಞಾನ ದೇವಿಯ ಪವಿತ್ರ ಗರ್ಭಗುಡಿಯನ್ನು ನಾಸ್ತಿಕ ಪಂಥದ ಅಸ್ಪೃಶ್ಯರಿಂದ ಮೈಲಿಗೆಗೊಳಿಸುವುದಕ್ಕಿಂತಲೂ ಹೇಯಕೃತ್ಯವಿದೆಂದು ಕಡೆಗಣಿಸುತ್ತಾರೆ. ಈ ಕೆಲಸದಲ್ಲಿ ಉದ್ಯುಕ್ತರಾಗಿರುವವರನ್ನು ತೀರ ನಿಕೃಷ್ಟವಾಗಿ ಕಾಣುತ್ತಾರೆ. ಇನ್‌ಫೆಲ್ಡರಿಗೆ ವೃತ್ತಿವಿಜ್ಞಾನಿಗಳ ಈ ಎಲ್ಲ ಗತ್ತು ಜಂಬಗಳ ವರಿಸೆ ಪರಿಚಯ ಚೆನ್ನಾಗಿತ್ತು. ಹೀಗಾಗಿ ಅಂಜಿ ಅಳುಕಿ ತನ್ನ ಹುಚ್ಚು ಯೋಜನೆಯನ್ನು ಐನ್‌ಸ್ಟೈನರಿಗೆ ವಿವರಿಸಿದರು.

"ಖಂಡಿತ ಇದು ಹುಚ್ಚು ಯೋಜನೆಯಲ್ಲ, ಅಲ್ಲ, ಅಲ್ಲ. ಇದನ್ನು ನಾವು ನಿರ್ವಹಿಸೋಣ," ಎಂಬುದಾಗಿ ಐನ್‌ಸ್ಟೈನ್ ಪ್ರೋತ್ಸಾಹಿಸಿದರು.

ಹೀಗೆ ಅಂಕುರವೊಡೆದ ಬೀಜ ಮುಂದೆ, ೧೯೩೮ರಲ್ಲಿ, *The Evolution of Physics* ಎಂಬ ಹೆಸರಿನ ಅಭಿಜಾತ ಗ್ರಂಥವಾಗಿ ಪ್ರಕಟವಾಯಿತು. ಇದರ ಲೇಖಕರು : ಆಲ್ಬರ್ಟ್ ಐನ್‌ಸ್ಟೈನ್ ಮತ್ತು ಲೀಪಾಲ್ಡ್ ಇನ್‌ಫೆಲ್ಡ್. ಭೌತವಿಜ್ಞಾನದ ಪರಿಕಲ್ಪನಾತ್ಮಕ ಅಭಿವರ್ಧನೆಯನ್ನು ಸ್ಪಷ್ಟವಾಗಿಯೂ ಆಕರ್ಷಕವಾಗಿಯೂ ಬಿಂಬಿಸುವ ಅಪೂರ್ವ ಗ್ರಂಥವಿದು. "[ಇಲ್ಲಿ] ನಾವು ಭೌತವಿಜ್ಞಾನದ ಪಠ್ಯಪುಸ್ತಕವನ್ನು ಬರೆದಿಲ್ಲ. ಇಲ್ಲಿ ಪ್ರಾಥಮಿಕ ಭೌತ ವಾಸ್ತವಾಂಶ ಮತ್ತು ಸಿದ್ಧಾಂತಗಳ ಪ್ರವಚನವನ್ನೇನೂ ಕಾಣುವಂತಿಲ್ಲ. ಬದಲಾಗಿ ಭಾವನೆಗಳ ಜಗತ್ತಿಗೂ ವಿದ್ಯಮಾನಗಳ ಜಗತ್ತಿಗೂ ನಡುವೆ ಸಂಯೋಜನೆ ಅರಸಲು ಮಾನವಬುದ್ಧಿ ಮಾಡಿದ ಪ್ರಯತ್ನಗಳ ವಿಶಾಲ ರೂಪರೇಖೆಯನ್ನು ಸ್ಥೂಲವಾಗಿ ಚಿತ್ರಿಸುವುದು ನಮ್ಮ ಉದ್ದೇಶ. ನಮ್ಮ ಜಗತ್ತಿನ ವಾಸ್ತವತೆಗೆ ಸಂವಾದಿಯಾಗುವಂಥ ಭಾವನೆಗಳನ್ನು ಉಪಜ್ಞಿಸುವಂತೆ [invent] ವಿಜ್ಞಾನವನ್ನು ಒತ್ತಾಯಿಸುವ ಪಟು ಬಲಗಳನ್ನು ಎತ್ತಿ ತೋರಿಸಲು ಪ್ರಯತ್ನಿಸಿದ್ದೇವೆ. ಆದರೆ ಇಲ್ಲೆಲ್ಲ ನಮ್ಮ ನಿರೂಪಣೆ ಸರಳವಾಗಿರತಕ್ಕದ್ದು. ಎಂದೇ ವಾಸ್ತವಾಂಶಗಳ ಮತ್ತು ನಿರ್ಬಂಧಗಳ ಗೋಜುಗೋಜಲುಗಳ ನಡುವೆ ಅತಿ ಲಾಕ್ಷಣಿಕ ಮತ್ತು ಗಮನಾರ್ಹವಾದದ್ದೆಂಬುದಾಗಿ ನಮಗನ್ನಿಸಿದ ಒಂದು ಹೆದ್ದಾರಿಯನ್ನು ಆಯಬೇಕಾಯಿತು."

ಇವರ ಬೈಠಕ್ಕಿನಲ್ಲಿ ದಿನವಹಿ ಭಾವನೆಗಳ ಬಗ್ಗೆ ಚರ್ಚೆ ಮುಗಿದ ಬಳಿಕ ಇನ್‌ಫೆಲ್ಡ್ ತಮ್ಮ ಕೊಠಡಿಯಲ್ಲಿ ಕುಳಿತು ವಿಷಯನಿರೂಪಣೆ ಮಾಡುತ್ತಿದ್ದರು. ಅಂದರೆ ಪಠ್ಯ ಭಾಗದ ಬರವಣಿಗೆ

ಇವರದು. ಇದನ್ನು ಮರುದಿನ ಓದಿ ತಿದ್ದಿದ ಬಳಿಕ ಮುಂದಿನ ಚರ್ಚೆ. ಐನ್‌ಸ್ಟೈನರ ಹಿರಿಹೆಸರು ಹೊತ್ತು ಪ್ರಕಟವಾಗಲಿದ್ದ ಈ ಪುಸ್ತಕ ಎಲ್ಲಿಯೂ ಇವರ ಹೆಸರಿಗೆ ಅಪಚಾರವೆಸಗತಕ್ಕದ್ದಲ್ಲ ಎಂಬುದರ ಅರಿವು ಇನ್‌ಫೆಲ್ಡ್‌ರಿಗೆ ಚೆನ್ನಾಗಿ ಇತ್ತು: "ನಾನೊಬ್ಬನೇ ಈ ಪುಸ್ತಕದ ಲೇಖಕನಾಗಿದ್ದರೆ ಇನ್ನಷ್ಟು ಸ್ವಾತಂತ್ರ್ಯ ಮತ್ತು ಕಡಿಮೆ ಎಚ್ಚರ ಉಳ್ಳವನಾಗಿರುತ್ತಿದ್ದೆ. ಆದರೆ ಪುಸ್ತಕ ನಿಮ್ಮ ಹೆಸರಿನಲ್ಲಿ ಪ್ರಕಟವಾಗಲಿದೆ ಎಂಬುದನ್ನು ಮರೆಯುವಂತಿಲ್ಲ."

"ನೀವೇನೂ ಅಂಥ ಕಾಳಜಿ ವಹಿಸಬೇಕಾಗಿಲ್ಲ. ತಪ್ಪು ಪ್ರಬಂಧಗಳು ನನ್ನ ಹೆಸರಿನಲ್ಲಿ ಕೂಡ ಪ್ರಕಟವಾಗಿವೆ."

ಐನ್‌ಸ್ಟೈನ್ ಸ್ವತಃ ಜನಪ್ರಿಯ ವಿಜ್ಞಾನಗ್ರಂಥವನ್ನು ಬರೆಯುತ್ತಿದ್ದಾರೆ ! ಪತ್ರಿಕೆಗಳಿಗೆ ಇದಕ್ಕಿಂತ ಅಧಿಕ ಪ್ರಿಯ ಗ್ರಾಸವಿನ್ನಾವುದು ? ಪುಸ್ತಕಕ್ಕೆ ಸಾಕಷ್ಟು ಪ್ರಚಾರ ಲಭಿಸಿತು. ಪ್ರಕಟಣೆಯ ಹಿಂದಿನ ರಾತ್ರಿ ಪತ್ರಿಕಾ ಕಛೇರಿಯಿಂದ ದೂರವಾಣಿ, "ಪ್ರೊಫೆಸರರೇ ! ಗ್ರಂಥದ ಬಗ್ಗೆ ತಾವೇನು ಹೇಳಬೇಕೆಂದಿರುವಿರಿ ?"

"ನಾನು ಪುಸ್ತಕದ ಬಗ್ಗೆ ಏನು ಹೇಳಬೇಕೆಂದಿರುವೆನೊ ಅದು ಅದರಲ್ಲೇ ಇದೆ."

ಪುಸ್ತಕದ ತಂತ್ರಾಂಶ (software ಅಂದರೆ ಅದರಲ್ಲಿ ನಿರೂಪಿತವಾಗಬೇಕಾದ ವಿಷಯ ಮತ್ತು ತತ್ಸಂಬಂಧ ವಿವರಗಳು, ಹೂರಣ) ಒಮ್ಮೆ ನಿರ್ಧರಿತವಾಯಿತೊ ಮತ್ತೆ ಅದರ ಯಂತ್ರಾಂಶದ (hardware ಅಂದರೆ ಅದರ ವಿನ್ಯಾಸ, ಮುದ್ರಣ, ಮಾರಾಟ, ಪ್ರಚಾರ ಮುಂತಾದವು, ತೋರಣ) ಬಗ್ಗೆ ಇವರಿಗೆ ಯಾವ ಆಸಕ್ತಿಯೂ ಇರಲಿಲ್ಲ.

*The Evolution of Physics* ತುಂಬ ಯಶಸ್ವಿಯಾಯಿತು—ಆರ್ಥಿಕವಾಗಿ ಕೂಡ. ಇಂದಾದರೂ (೨೦೦೦) ಭೌತವಿಜ್ಞಾನದ ಮೂಲಭೂತ ಭಾವನೆಗಳು[೫೪] ಹೇಗೆ ಎಲ್ಲಿಯೋ ಅವ್ಯಕ್ತ ಅಂತರಾಳದಲ್ಲಿ ಊಟೆಯೊಡೆದು ಒಸರಿ ಜಿನುಗಿ ಹರಿದು ಹೊಸ ನೀರು ಉಂಡು ಪುಷ್ಟಿಗೊಂಡು ತೊರೆಯಾಗಿ ಹೊಳೆಯಾಗಿ ನದಿಯಾಗಿ ಪ್ರವಹಿಸುತ್ತವೆ, ಹೇಗೆ ಇಂದಿನ ಮಹಾಪೂರ ಮತ್ತು ಅದರ ಬಹುಮುಖ ವೈವಿಧ್ಯಕ್ಕೂ ಅಂದಿನ ಕಿರು ಒರತೆ ಮತ್ತು ಅದರ ಏಕಮುಖ ಸರಳತೆಗೂ ನಡುವೆ ಅವಿಚ್ಛಿನ್ನ ಸಂಬಂಧ ಬೆಸೆದುಕೊಂಡಿದೆ ಎಂಬುದನ್ನು ತಿಳಿಯಬಯಸುವವರಿಗೆ ಇದೊಂದು ಉತ್ಕೃಷ್ಟ ಕೈಪಿಡಿ, ಮಾರ್ಗಬಂಧು.

## ಒಲವಿನಲ್ಲಿ ಬೆಳಿ ಒಲಿವಿನಲ್ಲಿ ಉಳಿ

> ನಾನಿಲ್ಲಿ ತೃಪ್ತಿಕರವಾಗಿ ನೆಲೆಗೊಂಡಿದ್ದೇನೆ. ಗುಹೆಯೊಳಗಿನ ಕರಡಿಯಂತೆ ಶಿಶಿರ ನಿದ್ರಾಮಗ್ನನಾಗಿದ್ದೇನೆ. ನಿಜಕ್ಕೂ ನನ್ನ ಈ ಹಿಂದಿನ ಬದುಕಿನ ಬಗೆಬಗೆಯ ಬವಣೆಗಳಿಗಿಂತ ಈಗಿನ ಬದುಕು ನನಗೆ ತುಂಬ ನೆಮ್ಮದಿ ತಂದಿದೆ. ಈ ಒಂಟಿಕರಡಿತನ [ಒರಟುತನ] ನನ್ನ ಬಾಳಸಂಗಾತಿಯ ಸಾವಿನಿಂದಾಗಿ ಇನ್ನಷ್ಟು ತೀವ್ರವಾಗಿದೆ. ಜನರನ್ನು ಆಕೆ ನನಗಿಂತ ಹೆಚ್ಚು ಹಚ್ಚಿಕೊಂಡಿದ್ದಳು.
>
> ಐನ್‌ಸ್ಟೈನ್ (ಬಾರ್ನ್ ಅವರಿಗೆ ಬರೆದ ಪತ್ರದಲ್ಲಿ)

ಐನ್‌ಸ್ಟೈನರ ಬಾಲ್ಯಮಿತ್ರ ಮಾರ್ಸೆಲ್ ಗ್ರಾಸ್‌ಮ್ಯಾನ್ ೧೯೩೬ರಲ್ಲಿ ತೀರಿಕೊಂಡರು. ಈ ಮಹಾನುಭಾವನ ವಿಶ್ವಾಸಪೂರ್ವಕ ಸಹಾಯ ಒದಗಿರದಿದ್ದರೆ ಇವರ ಬಾಳಬಟ್ಟೆ ಬೇರೆಯೇ ಆಗುತ್ತಿದ್ದಿತೊ ಏನೊ! ಗ್ರಾಸ್‌ಮ್ಯಾನರ ಮರಣ ಇವರಿಗೆ ತೀವ್ರ ಆಘಾತವಾಗಿ ಬಡಿಯಿತು. ಇವರ ವ್ಯಕ್ತಿತ್ವದ ಒಂದು ಅಂಶವೇ ಸಿಡಿದುಹೋದಂಥ ವೇದನೆಯಾಗಿ ದಹಿಸಿತು. ಸಹೃದಯ ಮತ್ತು ಉಪಕಾರಿ ಗ್ರಾಸ್‌ಮ್ಯಾನರ ಸಾಮಯಿಕ ಸಹಕಾರವನ್ನು ಇವರು ಶ್ರೀಮತಿ ಗ್ರಾಸ್‌ಮ್ಯಾನ

ರಿಗೆ ಬರೆದ ಸಾಂತ್ವನ ಪತ್ರದಲ್ಲಿ ಹೃದಯಂಗಮವಾಗಿ ಸ್ಮರಿಸಿಕೊಂಡಿದ್ದಾರೆ : "ಪಾಲಿಟೆಕ್ನಿಕ್ಕಿನಲ್ಲಿಯ ನಮ್ಮ ವಿದ್ಯಾರ್ಥಿ ದಿನಗಳು ನನ್ನ ನೆನಪಿಗೆ ಬರುತ್ತಿವೆ. ಅವರು ಆದರ್ಶ ವಿದ್ಯಾರ್ಥಿ. ನಾನೋ ಅಚ್ಚುಕಟ್ಟು ಇಲ್ಲದವ, ಹಗಲುಗನಸುಗಾರ. ಅವರಿಗೆ ಉಪಾಧ್ಯಾಯರ ಜೊತೆ ನಿಕಟ ಬಾಂಧವ್ಯವಿತ್ತು, ಮತ್ತು ಅವರು ಪ್ರತಿಯೊಂದನ್ನೂ ಸುಲಭವಾಗಿ ಗ್ರಹಿಸುತ್ತಿದ್ದರು. ನಾನೋ ಪೂರಾ ಬೇರೆಯೇ. ಅತೃಪ್ತ, ಜನಪ್ರಿಯತೆ ಗಳಿಸಿದ್ದಿಲ್ಲ. ಆದರೆ ನಾವು ಒಳ್ಳೆಯ ಸ್ನೇಹಿತರಾಗಿದ್ದೆವು. ಪ್ರತಿ ಕೆಲವೇ ವಾರಗಳಿಗೊಮ್ಮೆ ನಾವು ಮೆಟ್ರೊಪೊಲಿನಲ್ಲಿ ಬರ್ಫಶೀತಲಿತ ಕಾಫಿ ಹೀರುತ್ತ ನಡೆಸುತ್ತಿದ್ದ ಸಂಭಾಷಣೆಗಳು ನನ್ನ ಅತ್ಯಂತ ಸುಮಧುರ ಸ್ಮರಣೆಗಳ ಸಾಲಿಗೆ ಸೇರಿ ಹೋಗಿವೆ. ಮುಂದೆ ನಮ್ಮ ವಿದ್ಯಾಭ್ಯಾಸದ ಕೊನೆ ಬಂದಿತು. ಹಠಾತ್ತಾಗಿ ನಾನು ಎಲ್ಲರಿಂದಲೂ ಕೈ ಬಿಡಲ್ಪಟ್ಟೆ. ದಿಙ್ಮೂಢನಾದೆ. ಬದುಕನ್ನು ಹೇಗೆ ಎದುರಿಸಬೇಕೆಂದು ತಿಳಿಯಲಾರದವನಾದೆ. ಆದರೆ ಅವರು ಆಗ ನನ್ನ ಬೆಂಬಲಕ್ಕೆ ನಿಂತರು. ಅವರ ಹಾಗೂ ಅವರ ತಂದೆಯವರ ಮೂಲಕ ನಾನು ಹ್ಯಾಲರ್ ಅವರ ಏಕಸ್ವ ಕಛೇರಿಯನ್ನು ಸೇರಿಕೊಂಡೆ. ಒಂದು ರೀತಿಯಲ್ಲಿ ಇದು ನನ್ನ ಬದುಕನ್ನು ಉಳಿಸಿತು. ಇದಲ್ಲವಾಗಿದ್ದರೆ ನಾನು ಸತ್ತುಹೋಗುತ್ತಿದ್ದೆನೆಂದು ಅರ್ಥವಲ್ಲ. ಆದರೆ ಬೌದ್ಧಿಕವಾಗಿ ಕುಂಠಿತನಾಗುತ್ತಿದ್ದೆ."

ಯುಗದ ವಿಜ್ಞಾನಿಯ ಸಮರ್ಥ ಪತ್ನಿ ಎಲ್ಸಾ. ಇವರ ಒಲವಿನ ಸೇವೆಯೊದಗಿರದಿದ್ದರೆ ಐನ್‌ಸ್ಟೈನ್ ಜೀವನಪಥ ಬೇರೆಯೇ ಆಗಿರುತ್ತಿತ್ತು.

ಒಮ್ಮೆ ಐನ್‌ಸ್ಟೈನ್ ಹಾರ್ವರ್ಡಿಗೆ ಹೋಗಬೇಕಾಯಿತು. ಅಲ್ಲಿಯ ವಿಶ್ವವಿದ್ಯಾಲಯ ಇವರಿಗೆ ಗೌರವ ಪದವಿ ಪ್ರದಾನಿಸಲು ನಿರ್ಧರಿಸಿತ್ತು. ಸ್ನೇಹಿತರ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಇವರದನ್ನು ಸ್ವೀಕರಿಸಲು ಒಪ್ಪಿಕೊಂಡಿದ್ದರು. ಇಂಥ ಎಲ್ಲ 'ಅನ್ಯಕ್ಷೇತ್ರ ಗಮನ' ಸಂದರ್ಭಗಳಲ್ಲಿ ಎಲ್ಸಾ ತಪ್ಪದೆ ಗಂಡನ ಜೊತೆ ಹೋಗುತ್ತಿದ್ದರು. ಆದರೆ ಈ ಸಲ ಏನೊ ಕಾರಣ ಹೋಗಲಾಗಲಿಲ್ಲ. ಐನ್‌ಸ್ಟೈನರ ಸಂಗಡಿಗರಾಗಿ ಹೋದ ಮಿತ್ರರಿಗೆ ಎಲ್ಸಾ ಸೂಚನೆಗಳನ್ನು ಬರೆದಿತ್ತರು. "ಇವರು ಒಂದು ಕೋಮಲ ಸಸಿ. ಇವರು ಸಿಗಾರ್ ಸೇದಕೂಡದು. (ಪೈಪ್ ಅಥವಾ ಹೊಗೆ ಕೊಳವೆ ಇವರ ಆವಶ್ಯಕ ಒಡನಾಡಿ.) ಮುಂಜಾನೆ ಉಪಾಹಾರದಲ್ಲಿ ಇವರಿಗೆ ಕಾಫಿ ಕೊಡಬಹುದು. ಆದರೆ ಸಂಜೆ ಸಂಕ [sanka] ಅತ್ಯವಶ್ಯ—ಇಲ್ಲವಾದರೆ ಇವರಿಗೆ ಸುಖನಿದ್ರೆ ಬಾರದು."

ಹಾರ್ವರ್ಡಿನಲ್ಲಿ ಐನ್‌ಸ್ಟೈನ್ ಇವೆಲ್ಲ ನಿರ್ದೇಶನಗಳನ್ನೂ ಕಟ್ಟುನಿಟ್ಟಾಗಿ ಅನುಸರಿಸಿದರು. ಭೋಜನಸಮಾರಂಭಾನಂತರ ಎಲ್ಲರೂ ಎದ್ದು ಪಕ್ಕದ ಕೊಠಡಿಗೆ ಹೋಗಿ ಹರಟೆ ಹೊಡೆಯಲು ಕುಳಿತರು. ಅದೆಂಥ ಹರಟೆ ? ಐನ್‌ಸ್ಟೈನ್ ಹರಟೆ ! ಕಾಲವೇ ಕಾಲವಾಗಿ ಹೋಗುವಂಥ ಕಾವ್ಯದ ಭರಾಟೆ, ನಗು ಕೋಲಾಹಲಗಳ ಕರಾಟೆ !

ಸ್ನೇಹಿತ ಸಿಗಾರನ್ನು ನೀಡಿದ. ಅಮ್ಮಾವ್ರ ಗಂಡ. ಶಿಸ್ತಿನ ಸಿಪಾಯಿ ಐನ್‌ಸ್ಟೈನ್ ಬೇಡವೆಂದರು, ಕೈಕರಣದಿಂದ. ಕಣ್ನೋಟ ಇದನ್ನು ಬೆಂಬಲಿಸಿರಲಿಲ್ಲವೆಂದೆನ್ನಿಸಿತು ಸ್ನೇಹಿತನಿಗೆ. ಒತ್ತಾಯದಿಂದ ಮರುನೀಡಿಕೆ, "ಸದ್ಯ ಎಲ್ಸಾ ಇಲ್ಲಿಲ್ಲವಲ್ಲ !" ಐನ್‌ಸ್ಟೈನ್ ಸ್ವೀಕರಿಸಿದರು.

ಐನ್‌ಸ್ಟೈನ್-ಸಂಜೆ ಮುಗಿಯಿತು. ಗಂಟೆ ಹನ್ನೊಂದು. ವಾದ್ಯಮೇಳದ ಸಮವಸ್ತ್ರಧಾರಿಗಳು ಕ್ರಮಬದ್ಧವಾಗಿ ಹೊರ ಹೆಜ್ಜೆ ಇಡತೊಡಗಿದರು.

ಐನ್‌ಸ್ಟೈನ್, "ಅವರು ನನಗೆ ಕಾಲವನ್ನು ಸ್ಮರಣೆಗೆ ತರುತ್ತಾರೆ."

"ಆದರೆ ಈಗ ಇನ್ನೂ ಹನ್ನೊಂದು. ಅಷ್ಟೇನೂ ತಡವಾಗಿಲ್ಲ. ಕೆಲವೇ ನಿಮಿಷಗಳಲ್ಲಿ ಅವರು ಕರಗಿಹೋಗುತ್ತಾರೆ."

"ಆದರೆ ಅವರು ನನಗೆ ಕಾಲವನ್ನು ಸ್ಮರಣೆಗೆ ತರುತ್ತಾರೆ." ಐನ್‌ಸ್ಟೈನ್ ಸ್ವಲ್ಪ ಒತ್ತಿ ಹೇಳಿದರು.

"ಅದು ಹೇಗೆ ?"

"ಸದಾ ಹೋಗುತ್ತ—ಆದರೆ ಎಂದೂ ಹೋಗದ."

ಐನ್‌ಸ್ಟೈನ್ ದಂಪತಿಗಳ ಜೀವನದ ಪ್ರಧಾನ ಶ್ರುತಿ ಸರಳತೆ. ಗಂಡ 'ಭಗವಂತ ಜಗತ್ತನ್ನು ಹೇಗೆ ಸೃಷ್ಟಿಸಿದ' ಎನ್ನುವುದರ ಅನ್ವೇಷಣೆಯಲ್ಲಿ ಮಗ್ನರಾಗಿದ್ದರೆ ಹೆಂಡತಿ ಗೃಹಕೃತ್ಯದ ಲೌಕಿಕ ಆವಶ್ಯಕತೆಗಳನ್ನು ಕನಿಷ್ಠ ಮಿತಿಯಲ್ಲಿಡುವುದರಲ್ಲಿ ನಿರತರಾಗಿದ್ದರು. ಹೆಂಡತಿ ತನ್ನ ಸರ್ವಸ್ವವನ್ನೂ ಗಂಡನ ನೆಮ್ಮದಿಗೋಸ್ಕರ ತ್ಯಾಗಮಾಡಿದ್ದರು. ಗಂಧದಂತೆ ತೇದಿದ್ದರು. ಆದರೆ ಗಂಡ? ಆ 'ಕೋಮಲ ಸಸಿ'ಯಿಂದ ಎಲ್ಸಾ ಏನನ್ನೂ ನಿರೀಕ್ಷಿಸಲಿಲ್ಲ. ಋತದ ಪರಿಮುದ್ರೆ ಸರಳತೆ ! (ನೋಡಿ ಟಿಪ್ಪಣಿ ೪೬)

ಪ್ರತಿಷ್ಠಿತರೊಬ್ಬರ ಮನೆಯಲ್ಲಿ ನಡೆದ ಸತ್ಕಾರ ಸಮಾರಂಭ. ಐನ್‌ಸ್ಟೈನ್-ದಂಪತಿಗಳು ಮುಖ್ಯಾಹ್ವಾನಿತರು. ದಿವಾಣಖಾನೆಯಲ್ಲಿ ಹರಟೆ ಹೊಡೆಯುತ್ತಿದ್ದಾಗ ಆತಿಥೇಯ ಗೃಹಿಣಿ ತನ್ನ ಪತಿಯನ್ನು ಕರೆದು ಉಣ್ಣೆ ಮೇಲಂಗಿಯನ್ನು ತನಗೆ ತಂದುಕೊಡಬೇಕೆಂದು ಹೇಳಿದಳು. ಆತ ಹಾಗೆಯೇ ಮಾಡಿದ. ಇದನ್ನು ಕಂಡ ಎಲ್ಸಾ ಆಕೆಗೆ ಅಂದರು, "ನಾನೆಂದೂ ಪ್ರೊಫೆಸರರನ್ನು ಹೀಗೆ ಕೆಲಸ ಮಾಡಿಸಲಾರೆ."

ಭಾರತೀಯ ಪತಿವ್ರತೆಯಂತೆ ಎಲ್ಸಾ ಮತ್ತು ಭಾರತೀಯ ಋಷಿಯಂತೆ ಐನ್‌ಸ್ಟೈನ್ ಬಾಳಿದರು. ಪಾಶ್ಚಾತ್ಯ ಚೌಕಟ್ಟಿನಲ್ಲಿ ಈ ಪೌರಸ್ತ್ಯದಾಂಪತ್ಯ ವಿಚಿತ್ರವಾಗಿ ಎದ್ದುಕಾಣುತ್ತಿತ್ತು. ಸತ್ಯದ ಪ್ರಕಾಶ ಸೌಂದರ್ಯ ! (ನೋಡಿ ಟಿಪ್ಪಣಿ ೪೬)

"ನಿಮ್ಮ ಹೆಂಡತಿ ನಿಮಗಾಗಿ ಎಲ್ಲ ಕಾರ್ಯಗಳನ್ನೂ ಮಾಡಿಕೊಡುವುದು ಕಂಡು ಬರುತ್ತದೆ. ಸರಿ. ನೀವು ಆಕೆಗಾಗಿ ಏನು ಮಾಡುತ್ತೀರಿ ?"

ಐನ್‌ಸ್ಟೈನ್, "ಆಕೆಗೆ ನಾನು ನನ್ನ ಅರಿವನ್ನು ಕೊಡುತ್ತೇನೆ."

ಆದರೆ ಎಲ್ಸಾ ದೀರ್ಘಕಾಲ ಬಾಳಲಿಲ್ಲ. ೧೯೩೫ರ ಸುಮಾರಿಗೆ ಇವರ ಕಣ್ಣುಗಳು ಬಾತುಕೊಂಡುವು. ಹೃದಯ ಮತ್ತು ಮೂತ್ರಪಿಂಡಗಳ ಬಾಧೆಯ ಪರಿಣಾಮವಿದೆಂದು ತಜ್ಞರು ಅಭಿಪ್ರಾಯಪಟ್ಟರು. ಆಸ್ಪತ್ರೆಯಲ್ಲಿ ತಿಂಗಳುಗಟ್ಟಲೆ ಮಲಗಿ ನವೆಯಬೇಕಾಯಿತು. ಈ ಮಾನಸಿಕ ಯಾತನೆಯಿಂದ ವಿಮೋಚಿತರಾಗಲೊ ಏನೊ ಐನ್‌ಸ್ಟೈನ್ ಆ ದಿನಗಳಲ್ಲಿ ಉನ್ಮಾದತೀವ್ರತೆಯಿಂದ ಭೌತವಿಜ್ಞಾನ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು.

"ಈ ರೀತಿ ಅವರು ದುಡಿದದ್ದನ್ನು ನಾನೆಂದೂ ಕಾಣಲಿಲ್ಲ. ರಾತ್ರಿ ಕೂಡ ವಿಶ್ರಾಂತಿ ಪಡೆಯದೆ ತಮ್ಮನ್ನು ಕಾಡುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸುತ್ತಿದ್ದಾರೆ." ಎಂಬುದಾಗಿ ಎಲ್ಸಾ ಬರೆದಿದ್ದಾರೆ.

ಸ್ನೇಹಿತನೊಬ್ಬನ ಮೃತಪತ್ನಿಯ ಛಾಯಾಚಿತ್ರ ನೋಡುತ್ತ ಐನ್‌ಸ್ಟೈನ್ ಹೇಳಿದರು, "ವ್ಯಕ್ತಿಯ ಸ್ಥಾನವೇನು ? ಅತ್ಯಲ್ಪ. ಮಾನವನ ವೈಯಕ್ತಿಕ ತಾಪತ್ರಯಗಳು ಏನೂ ಗಮನಾರ್ಹವಾದವಲ್ಲ. ಬದುಕಿನ ಕ್ಷುಲ್ಲಕ ವಿಚಾರಗಳಿಗೆ ನಾವು ಅಧಿಕ ಮಹತ್ತ್ವ ನೀಡಿದ್ದೇವೆ." ನೊರೆಯ ಮೇಲೆ ಬರೆದ ಗೆರೆಗೆ ನೆಲೆಯುಂಟೇ ?

ಇದರ ಅರ್ಥ ಐನ್‌ಸ್ಟೈನ್ ತಮ್ಮ ಮಡದಿಯ ಅನಾರೋಗ್ಯವನ್ನು ಕಡೆಗಣಿಸಿದ್ದರೆಂದಲ್ಲ. ಆಕೆಯ ಭಾವಗಳನ್ನು ಅರಿತಿರಲಿಲ್ಲವೆಂದಲ್ಲ. ಆಕೆಯ ಆಶೋತ್ತರಗಳೊಡನೆ ಸಹಸ್ಪಂದಿಸಲಾರ

ದವರಾಗಿದ್ದರೆಂದಲ್ಲ. ಆಕೆಗಿಂತ ಹೆಚ್ಚುಹೆಚ್ಚಾಗಿ ಇವರನ್ನು ತಿಳಿದಿದ್ದವರು ಬೇರೆ ಯಾರು ತಾನೇ ಇರಬಲ್ಲರು ? ಎಲ್ಸಾ ಬರೆದಿದ್ದಾರೆ, "ಇಂಥ ಮಹಾಪ್ರತಿಭಾನ್ವಿತ ವ್ಯಕ್ತಿ ಪ್ರತಿಯೊಂದು ಅಂಶ ದಲ್ಲಿಯೂ ನಿರ್ದುಷ್ಟನಾಗಿರಬೇಕೆಂದು ನಿರೀಕ್ಷಿಸಿ ತದನುಗುಣವಾಗಿ ಇವರನ್ನು ವಿಶ್ಲೇಷಿಸ ಲಾಗದು. ಈ ಕ್ರಮ ತಪ್ಪು. ನಿಸರ್ಗ ಈ ರೀತಿ ವರ್ತಿಸದು. ಎಲ್ಲಿ ಅದು ಸಮೃದ್ಧವಾಗಿ ಕೊಡು ವುದೊ ಅಲ್ಲಿ ಅದು ಸಮೃದ್ಧವಾಗಿ ತೆಗೆದುಕೊಳ್ಳುವುದು. ಇವರನ್ನು ನೀವು ಒಂದೇ ಗಂಟಾಗಿ ನೋಡಬೇಕು. ಆ ಶೀರ್ಷಿಕೆ ಈ ಶೀರ್ಷಿಕೆ ಎಂಬುದಾಗಿ ವಿಂಗಡಿಸಿ ಅಷ್ಟಷ್ಟನ್ನು ಮಾತ್ರ ನೋಡ ಬಾರದು. ಇಲ್ಲವಾದರೆ ನಿಮಗೆ ಅಸಂತೋಷವಾದೀತು. ಇವರ ಜೊತೆ ಬದುಕು ಒಂದಲ್ಲ ಹಲವು ವಿಧಗಳಲ್ಲಿ ಸಾಕಷ್ಟು ಜಟಿಲ ಮತ್ತು ಶ್ರಮದಾಯಕವಾದದ್ದು. ಭಗವಂತ ಇವರಿಗೆ ಅಪರಿಮಿತ ಉದಾತ್ತತೆ ನೀಡಿದ್ದಾನೆ. ಇವರಲ್ಲಿ ನಾನೊಬ್ಬ ಅದ್ಭುತ ವ್ಯಕ್ತಿಯನ್ನು ಕಂಡಿದ್ದೇನೆ." ಬದುಕು ಎಂಬುದು ಕುರುಡರು 'ಕಂಡ' ಆನೆ ಆಗಬಾರದು !

ವ್ಯಾಧಿ ಯಮರಾಯನ ಖಚಿತಾಗಮನವನ್ನು ದಿನದಿಂದ ದಿನಕ್ಕೆ ತ್ವರೆಗೊಳಿಸುತ್ತಿತ್ತು. ಎಲ್ಸಾ ಬರೆದಿದ್ದಾರೆ, "ಅವರು ನನ್ನ ವ್ಯಾಧಿಯಿಂದ ಅತಿ ವಿಚಲಿತರಾಗಿದ್ದಾರೆ. ಕಳೆದು ಹೋದ ಜೀವದಂತೆ ಅವರೀಗ ಅಂಡಲೆಯುತ್ತಿದ್ದಾರೆ. ಅವರು ನನ್ನನ್ನು ಇಷ್ಟು ಪ್ರೀತಿಸುತ್ತಿದ್ದರೆಂದು ನಾನೆಂದೂ ಭಾವಿಸಿರಲಿಲ್ಲ."

೧೯೩೬ ಡಿಸೆಂಬರ್ ೨೧ರಂದು ಎಲ್ಸಾ ಇಲ್ಲವಾದರು—ಪಲ್ಸ್ ನಿಂತೇ ಹೋಯಿತು.

ಸಂಸಾರಸಾಗರದಾಗ, ಲೆಕ್ಕವಿರದಷ್ಟು ದುಃಖದ ಬಂಡಿ
ನಾ ಬಲ್ಲೆ ನನಗೆ ಗೊತ್ತಿಲ್ಲದಿದ್ದರೂ ಎಲ್ಲಿ ಆಚೆಯಾ ದಂಡಿ
ಮಲಗಿರುವ ಕೂಸು ಮಲಗಿರಲಿ ಅಲ್ಲಿ, ಮಂದಿನದು ದೇವರ ಚಿತ್ತ
ನಾ ತಡೀಲಾರೆ ಅದು, ಯಾಕ ನೋಡತೀ ಮತ್ತ ಮತ್ತ ನೀ ಇತ್ತ ?

ಅಂಬಿಕಾತನಯದತ್ತ

ಮುಂದಿನ ದಿನಗಳಲ್ಲಿ ಐನ್‌ಸ್ಟೈನರ ಮನೆವಾರ್ತೆ ಮುಖ್ಯವಾಗಿ ಮೂವರು ಸ್ತ್ರೀಯರ ಹೊಣೆ ಯಾಗಿತ್ತು. ಕಾರ್ಯದರ್ಶಿ ಹೆಲನ್ ಡ್ಯೂಕಾಸ್, ಬಲಮಗಳು ಮಾರ್ಗಟ್ ಮತ್ತು ತಂಗಿ ಮಾಜಾ. ೧೯೩೯ರಿಂದಲೂ ಮಾಜಾ ಅಣ್ಣನ ಜೊತೆ ಪ್ರಿನ್ಸ್‌ಟನ್ನಿನಲ್ಲಿ ನೆಲಸಿದ್ದರು. ರೂಪ, ಮಾತು, ನಿಲವು, ಭಂಗಿ ಒಂದೊಂದರಲ್ಲೂ ಐನ್‌ಸ್ಟೈನರ ದ್ವಿಪ್ರತಿಯಂತಿದ್ದ ಮಾಜಾ ತನ್ನ ಅಣ್ಣನಿಗೆ ವೃದ್ಧಾಪ್ಯ ದಲ್ಲಿ ತೀರ ಆವಶ್ಯಕವಾದ ಬೌದ್ಧಿಕ ಸಂಗಾತಿ ಆಗಿದ್ದರು. ಅಣ್ಣನ ಅದೇ ಕೇಶರಾಶಿ ಹೊತ್ತಿದ್ದ ಈ ತಂಗಿ ನಡೆಯುವುದು, ನಿಲ್ಲುವುದು, ಕೈಕರಣಮಾಡುವುದು ಮತ್ತು ಮಾತಾಡುವುದು ಒಂದೊಂದೂ ನೋಡುವವರಿಗೆ ಬಲು ಮಜಾ ನೋಟ—ಅವರಲ್ಲಿ ಅಂಥ ಸಾದೃಶ್ಯ, ಅಂಥ ಸಾಂಗತ್ಯ, ನಿಸರ್ಗದ ಚೋದ್ಯ !

೧೯೫೧ರಲ್ಲಿ ಮಾಜಾ ತೀರಿಹೋದಾಗ ಐನ್‌ಸ್ಟೈನ್ ತಬ್ಬಲಿಯಾದರು. ಆದರೆ ಬದುಕಿನಲ್ಲಿ ಪ್ರತಿಯೊಬ್ಬನೂ ಬರುವುದು ಒಂಟಿಯಾಗಿ, ಹೋಗುವುದೂ ಒಂಟಿಯಾಗಿ; ಇದ್ದಷ್ಟು ದಿನ ಸಂಗಾತಿಗಳೊಡನೆ ಜಂಟಿಯಾಗಿರುವುದು ಕ್ರಮ. ಇದನ್ನು ಇತರರಿಗಿಂತ ಚೆನ್ನಾಗಿ ಅರಿತಿದ್ದ ಐನ್‌ಸ್ಟೈನ್ ತಮಗೆದುರಾದ ಬಾಳದುರಂತಗಳನ್ನು ನಿರಪೇಕ್ಷ ವೀಕ್ಷಕನ ನಿರ್ಲಿಪ್ತಭಾವದಿಂದ ಸ್ವೀಕರಿಸಿದರು.

# ೧೪. ಬಾಂಬೋ ? ನಾಗರಿಕತೆಯ ಟೂಂಬೋ ?

## ಪರಮಾಣು ಭೇದನ

> ನಿಸರ್ಗದ ಕಗ್ಗತ್ತಲ ಗವಿಯ ಒಳಕ್ಕೆ ಬೆಳಕು ಚೆಲ್ಲುವ ಎಲ್ಲ ಆವಿಷ್ಕಾರಗಳೂ ಪ್ರಗತಿಯ ಹೆಸರಿನಲ್ಲಿ ಮುನ್ನೂರು ವರ್ಷಗಳಿಂದಲೂ ಸ್ವಾಗತಿಸಲ್ಪಟ್ಟಿವೆ. ಆದರೆ ಜನವರಿ ೧೯೩೯ರಲ್ಲಿ ಬಹುಮಂದಿ ವಿಜ್ಞಾನಿಗಳು ಅವ್ಯಕ್ತ ಭಯದಿಂದ ಗಾಬರಿಗೊಂಡು ಹಿಂಜರಿಯತೊಡಗಿದರು. ಯುದ್ಧಭೀತಿಯು ಕಾಳ ಮೇಘದಂತೆ ಪ್ರಪಂಚವನ್ನೇ ಆವರಿಸಿತ್ತು. ಪರಮಾಣುಯುಗದ ಹೊಸ್ತಿಲಲ್ಲಿ ಪ್ರಪಂಚ ನಿಂತಿತ್ತು.
>
> ರಾಬರ್ಟ್ ಯೂಂಕ್

ವರ್ತಮಾನಜ್ಞಾನ ಒದಗಿಸುವ ಉನ್ನತ ಮತ್ತು ಅನುಕೂಲ ಮಂಚಿಕೆಯ ಮೇಲೆ ನಿಂತು ಭೂತಕಾಲವನ್ನು ನಿರಪೇಕ್ಷವಾಗಿ ನಿಟ್ಟಿಸಲು ಪ್ರಯತ್ನಿಸೋಣ.

ಜರ್ಮನ್ ಭೌತವಿಜ್ಞಾನಿ ವಿಲ್‌ಹೆಲ್ಮ್ ಕೊನ್ರಾಡ್ ರಂಟ್ಜನ್ (೧೮೪೫-೧೯೨೩) ೧೮೯೫ರಲ್ಲಿ ಎಕ್ಸ್‌ಕಿರಣಗಳನ್ನು ಆವಿಷ್ಕರಿಸಿದರು. ಸಾಮಾನ್ಯ ಬೆಳಕಿಗೆ ಖಚಿತವಾಗಿ ಅಪಾರಕವಾಗಿದ್ದ ಹಲಗೆ ಗೋಡೆ ಮುಂತಾದವನ್ನು 'ಕತ್ತರಿಸಿ' ಸಾಗುತ್ತಿದ್ದ ಈ ಕಿರಣಗಳು ಕಣ್ಣಿಗೆ ಕಾಣದ (ದೃಗಗೋಚರ) ಸ್ಥೂಲ ಮತ್ತು ಸೂಕ್ಷ್ಮಜಗತ್ತಿನ ಬಗೆಗೆ ಹೊಸ ಸುಳುವು ನೀಡಿದುವು. ಒಟ್ಟಾರೆ ಬೆಳಕಿಗೆ ಅಪಾರಕವಾದ ಮಾನವದೇಹ ಎಕ್ಸ್‌ಕಿರಣಗಳಿಗೆ, ಒಳಗಿನ ಎಲುಬುಗಳ ಹೊರತಾಗಿ, ಪಾರಕವೆಂಬ ವೈದ್ಯಕೀಯ ಉಪಯೋಗ ಬೇಗನೆ ತಿಳಿದುಬಂತು. ದೃಗಗೋಚರ ಎಕ್ಸ್‌ಕಿರಣಗಳು ಛಾಯಾಗ್ರಾಹಕ ಪೊರೆಯ (photographic film) ಮೇಲೆ ರಾಸಾಯನಿಕವಾಗಿ ವರ್ತಿಸಿ ಅದನ್ನು ಮಬ್ಬು ಮಾಡಿ ತಮ್ಮ ಇರವಿಗೆ ಸಾಕ್ಷ್ಯ ಒದಗಿಸುತ್ತಿದ್ದುವು.

ಎಕ್ಸ್‌ಕಿರಣಗಳ ವಿಚಿತ್ರ ಲೋಕದಿಂದ ಆಕರ್ಷಿತರಾದ ಸಮಕಾಲೀನ ಭೌತವಿಜ್ಞಾನಿಗಳ ಪೈಕಿ ಫ್ರಾನ್ಸಿನ ಆ್ಯಂಟೋಯಿನ್ ಹೆನ್ರಿ ಬೆಕೆರಲ್ (೧೮೫೨-೧೯೦೮) ಒಬ್ಬರು. ಯಾವುದೋ ವಿಶಿಷ್ಟ ರಾಸಾಯನಿಕ ಪದಾರ್ಥವೊಂದು ತಂತಾನೇ ಎಕ್ಸ್‌ಕಿರಣಗಳನ್ನು, ಅಂದರೆ ವಸ್ತುಗಳನ್ನು ಕತ್ತರಿಸಿ ಸಾಗುವ ಶಕ್ತಿವಿಶೇಷವೊಂದನ್ನು, ಉತ್ಸರ್ಜಿಸುವುದಾಗಿರಲಾರದೆ ಎಂದು ಸಂದೇಹಿಸಿದರು. ಅಮಾವಾಸ್ಯೆಯ ಕಗ್ಗತ್ತಲಲ್ಲೂ ಸ್ವಯಂಪ್ರಭೆ ಬೀರುವ ನೈಸರ್ಗಿಕ ವಸ್ತುಗಳ ಪರಿಚಯ ವಿಜ್ಞಾನಿಗಳಿಗಿದ್ದುದರಿಂದ ಈ ಸಂದೇಹ ಸಕಾರಣವಾದುದಾಗಿತ್ತು. ಯುರೇನಿಯಮ್ ಅದುರನ್ನು ಒಳಗೊಂಡಿದ್ದ ರಾಸಾಯನಿಕ ಪದಾರ್ಥವನ್ನು ಬೆಕೆರಲ್ ಆಯ್ದು ಅದರ ಮೇಲೆ ನೇರ ಬಿಸಿಲಿನಲ್ಲಿ ಕೆಲವು ಪ್ರಯೋಗ ಮಾಡಿದರು. ಸಂದೇಹ ನಿರಾಧಾರವಾದದ್ದಲ್ಲವೆಂದು ವೇದ್ಯವಾದರೂ ನೂತನ ಆಧಾರವೇನೂ ಲಭಿಸಲಿಲ್ಲ. ಸರಿ, ಎಲ್ಲರೂ ಮಾಡುವಂತೆ, ಆ ರಾಸಾಯನಿಕ ಪದಾರ್ಥದ ಹರಳುಗಳನ್ನು ಮೇಜದ ಖಾನೆಯೊಳಗೆ ನಿರ್ಲಕ್ಷ್ಯ ಭಾವದಿಂದ ತುರುಕಿದರು, ಬಿಸಾಡಲು ಮನಸ್ಸು ಬಾರದ್ದರಿಂದ. ಅದೇ ಖಾನೆಯೊಳಗೆ ಒಂದಿಷ್ಟು ಛಾಯಾಗ್ರಾಹಕ ಫಲಕಗಳೂ ಇದ್ದುವು. ಇವನ್ನು ದಪ್ಪ ಕಾಗದದಿಂದ ಭದ್ರವಾಗಿ ಸುತ್ತಲಾಗಿತ್ತು. ಹೀಗಾಗಿ ತುಣುಕು ಬೆಳಕು ಕೂಡ ಇವುಗಳ ಒಳನುಸುಳುವಂತಿರಲಿಲ್ಲ. ಕೆಲವು ದಿವಸಗಳ ತರುವಾಯ ಬೆಕೆರಲ್ ಈ ಫಲಕಗಳನ್ನು ಉಪಯೋಗಿಸಲೆಂದು ಹೊರತೆಗೆದಾಗ ಇವು ವಿನಾ ಕಾರಣ ಮಬ್ಬಾಗಿದ್ದುದು ಕಂಡು ಚಕಿತರಾದರು. ದಪ್ಪ ಕಾಗದದ ಭದ್ರ ಕವಚ ಭೇದಿಸಿ ಒಳಹೊಕ್ಕ 'ತಕ್ಷಕ' ಯಾರು ? ಯುರೇನಿಯಮ್ ಅದುರು ಈ ತಕ್ಷಕನ ಆವಾಸಸ್ಥಾನವೆಂದು ಬೆಕೆರಲ್ ನಿರ್ಧರಿಸಿದರು. ಅದುರು ಒಡೆದು ಇಲ್ಲವೇ ಕುಸಿದು ಅದರಿಂದ ಅನಂತಾಲ್ಪ ಕಣಗಳು ಹೊರರಟ್ಟುತ್ತವೆ. ಇವು ಬೆಳಕಿಗೆ ಅಪಾರಕ ವಸ್ತುಗಳನ್ನು,

ಎಕ್ಸ್‌ಕಿರಣಗಳ ತೆರದಲ್ಲಿಯೇ, ಅಡ್ಡಹಾಯ್ದು ಛಾಯಾಗ್ರಾಹಕ ಫಲಕದ ಮೇಲೆ ವರ್ತಿಸಿ ತಮ್ಮ ಇರುವಿಕೆಗೆ ಸಾಕ್ಷ್ಯ ಒದಗಿಸುತ್ತವೆ ಎಂಬುದಾಗಿ ತರ್ಕಿಸಿದರು.

ಬೆಕೆರಲ್ ಆವಿಷ್ಕರಿಸಿದ ಈ ವಿಶಿಷ್ಟ ವಿದ್ಯಮಾನಕ್ಕೆ ಫ್ರಾನ್ಸಿನ ರಸಾಯನವಿಜ್ಞಾನಿ (ಮದಾಮ್) ಮೇರಿ ಕ್ಯೂರಿ (೧೮೬೭-೧೯೩೪) radio-activity (ವಿಕಿರಣಪಟುತ್ವ) ಎಂದು ಹೆಸರಿಟ್ಟರು. ಅದುರಿನಿಂದ ವಿಕಿರಣ (radiation), ಒಣಗಿದ ಔಡಲಕಾಯಿ ಬಿರಿದಾಗ ಬೀಜಗಳು ರಟ್ಟುವಂತೆ, ಸಿಡಿಯುವುದರ ರಹಸ್ಯಶೋಧನೆ ಈ ತ್ಯಾಗಮಯಿ ಮಹಿಳೆಯ ಬದುಕಿನ ಹಿರಿಗುರಿಯಾಯಿತು. ಟನ್ ತೂಕದ ರದ್ದಿ ಅದುರನ್ನು ಶುದ್ಧೀಕರಿಸಿ ಗ್ರಾಮ್ ತೂಕದ ತೀವ್ರ ವಿಕಿರಣಪಟು ಧಾತುವನ್ನು ಇವರು ಉದ್ಧರಿಸಿದರು (೧೮೯೮). ಇದೇ ರೇಡಿಯಮ್. ನಿಸರ್ಗದ ಅನರ್ಘ್ಯ ನಿಧಿಗೆ—ಪರಮಾಣುಗರ್ಭದಲ್ಲಿ ಬಲವದ್ಬಂಧಿತವಾಗಿ ಕುಳಿತಿರುವ ಅಗಾಧ ಶಕ್ತಿಗೆ—ಇಣುಕುನೋಟ ಹೀಗೆ ಲಭಿಸಿತು.

ಹತ್ತೊಂಬತ್ತನೆಯ ಶತಮಾನ ನೇಪಥ್ಯಕ್ಕೆ ನಿರ್ಗಮಿಸುವ ವೇಳೆಗೆ ಭೌತವಿಜ್ಞಾನಕ್ಕೆ ಅಜ್ಞಾತದ ಅವ್ಯಕ್ತದತ್ತ ನೆಗೆಯಲು ವೇದಿಕೆ ಸಿದ್ಧವಾಗಿತ್ತು. ಇದನ್ನು ಸದುಪಯೋಗ ಪಡಿಸಿಕೊಂಡು ಪರಮಾಣುಪ್ರಪಂಚವನ್ನು ಕುರಿತ ಕ್ರಾಂತಿಕಾರಿ ಸಿದ್ಧಾಂತಗಳನ್ನು ಮಂಡಿಸಿದವರು, ಈ ಹಿಂದೆ ಹೇಳಿದಂತೆ, ಮ್ಯಾಕ್ಸ್ ಪ್ಲ್ಯಾಂಕ್, ಮತ್ತು ಸ್ವತಂತ್ರವಾಗಿ, ಆಲ್ಬರ್ಟ್ ಐನ್‌ಸ್ಟೈನ್.

ಐನ್‌ಸ್ಟೈನ್ ೧೯೦೫ರಲ್ಲಿ ಮಂಡಿಸಿದ $E = mc^2$ ಸೂತ್ರ ಶಕ್ತಿ-ರಾಶಿ ಸಮಾನತೆಗೆ ಸ್ಪಷ್ಟ ಪರಿಮಾಣಾತ್ಮಕ ಅರ್ಥ ನೀಡಿತು. ಅಂದರೆ ಗೊತ್ತಿರುವ ಮೊತ್ತದ ರಾಶಿ ನಿರ್ನಾಮವಾದಾಗ ಎಷ್ಟು ಶಕ್ತಿ ಉತ್ಪಾದನೆಗೊಳ್ಳುತ್ತದೆ, ಮತ್ತು ಗೊತ್ತಿರುವ ಶಕ್ತಿ ಎಷ್ಟು ರಾಶಿಗೆ ಸಮಾನವಾಗುತ್ತದೆ ಎಂಬ ಸಂಬಂಧ ಇದರಿಂದ ತಿಳಿಯಿತು. ಇಲ್ಲಿ ನಿರ್ನಾಮ ಎಂದರೆ ಅಸ್ತಿತ್ವನಾಶ ಎಂದರ್ಥ: ಸೌದೆಯನ್ನು ಒಲೆಯಲ್ಲಿ ಇಲ್ಲವೇ ತೈಲವನ್ನು ದೀಪದಲ್ಲಿ ಸುಟ್ಟಾಗ (ಇದು ದಹನ) ಆಯಾ ಇಂಧನ ನಿರ್ನಾಮವಾಗುವುದಿಲ್ಲ, ರೂಪ ಪರಿವರ್ತಿತವಾಗುತ್ತದೆ ಮಾತ್ರ.

ಸಿದ್ಧಾಂತ ಅರುಹಿದ ಫಲಿತಾಂಶ $E = mc^2$. ಪ್ರಾಯೋಗಿಕವಾಗಿ ಇದನ್ನು ತಾಳೆ ನೋಡುವುದು ಹೇಗೆ ? ನಮಗೆ ಚಿರಪರಿಚಿತವಾಗಿರುವ ದಹನದಿಂದ ಅಥವಾ ಇತರ ಯಾವುದೇ ವಿಧವಾದ 'ನಾಶಕ್ರಿಯೆ'ಯಿಂದ ಇದು ಕೈಗೂಡದು. ಏಕೆಂದರೆ ಇವೆಲ್ಲವೂ ರಾಸಾಯನಿಕ ಕ್ರಿಯೆಗಳು, ವಿವಿಧ ವಸ್ತುಗಳು ಅನುಕೂಲ ಸನ್ನಿವೇಶಗಳಲ್ಲಿ ಒಂದುಗೂಡಿ ಇತರ ವಿವಿಧ ವಸ್ತುಗಳನ್ನೂ ಉಷ್ಣದಂಥ ಶಕ್ತಿರೂಪವನ್ನೂ ಒದಗಿಸುವ ಸರಳ ಸಾಮಾನ್ಯ ಕ್ರಿಯೆಗಳು ಮಾತ್ರ. $E = mc^2$ವನ್ನು ತಾಳೆನೋಡ ಬೇಕಾದರೆ ವಸ್ತುವನ್ನು ಪೂರ್ಣಾಹುತಿ ತೆಗೆದುಕೊಳ್ಳುವುದು ಸಾಧ್ಯವಾಗಬೇಕು—ಅದರಿಂದ ಪೂರ್ತಿ ಶಕ್ತಿಯೊಂದನ್ನೇ ಬಸಿಯುವುದು ಕೈಗೂಡಬೇಕು. ಆದ್ದರಿಂದ ಸಾಂಪ್ರದಾಯಿಕ ಒಲೆ, ಅಗ್ಗಿಷ್ಟಿಕೆ, ಕುಲುಮೆ ಮುಂತಾದವುಗಳಲ್ಲಿ ನಡೆಯುವ ಮಾಮೂಲಿ ಉರಿತಕ್ಕಿಂತ ಬೇರೆಯದೇ ಆದ 'ದಹನ'ದತ್ತ ದೃಷ್ಟಿ ಹರಿಸುವುದು ಅನಿವಾರ್ಯವಾಯಿತು.

ವಿಜ್ಞಾನಿಗಳು ಕೀಟಗಳಂತೆ. ಮೀಸೆ ಹೊಗಿಸಲು ಆಸರೆ ದೊರೆತಲ್ಲಿ ಒಡಲನ್ನೇ ಸಲೀಸಾಗಿ ತೂರುವ ಎದೆಗಾರಿಕೆ ಅವರದು. ವಿಕಿರಣಪಟು ಧಾತುಗಳಲ್ಲಿ (ಉದಾಹರಣೆಗೆ ಯುರೇನಿಯಮ್, ರೇಡಿಯಮ್) ಅವರು ಹೊಸ ಕುಲುಮೆಗೆ ಗ್ರಾಸವಾಗಬಲ್ಲ ವಿಶಿಷ್ಟ ಇಂಧನವನ್ನು ಗುರುತಿಸಿದರು. ಆದರೆ 'ದಹನ' ಏರ್ಪಡಿಸುವುದು ಹೇಗೆ ?

ಅನೇಕ ಏಕಕೇಂದ್ರೀಯ ಪೌಳಿಗಳಿಂದ ರಕ್ಷಿತವಾಗಿರುವ ಅರಮನೆಯನ್ನು ಕಲ್ಪಿಸಿಕೊಳ್ಳೋಣ. ಇದು ಪರಮಾಣುವಿನ ಅತಿಸ್ಥೂಲ ಚಿತ್ರ (ನೋಡಿ—ಪುಟ ೧೫೭). ಪೌಳಿಗಳಲ್ಲಿ ಎಲೆಕ್ಟ್ರಾನುಗಳು



ಪ್ರಿನ್ಸ್‌ಟನ್ನಿನಲ್ಲಿ ಕಾರ್ಯದರ್ಶಿ
ಡೂಕಾಸ್ ಜೊತೆ (ಸು. ೧೯೩೮)



ಅಧ್ಯಯನ ಕೊಠಡಿಯ
ಕಿಟಕಿ ಬಳಿ (೧೯೩೮)

ಹಂಟಿಂಗ್ಟನ್, ಲಾಂಗ್ ಐಲೆಂಡ್‌ನಲ್ಲಿ (೧೯೩೭)



ಝೀಲಾರ್ಡ್ ಜೊತೆ (೧೯೪೭)





ಎಚ್. ಎ. ಲೊರೆಂಟ್ಜ್ ಮತ್ತು ಆರ್ಥರ್ ಎಡಿಂಗ್ಟನ್ ಜೊತೆ ಪ್ರಾಯಶಃ ಲೀಡನ್‌ನಲ್ಲಿ (೧೯೨೩)



ಇಸ್ರೇಲೀ ಪ್ರಧಾನಮಂತ್ರಿ ಡೇವಿಡ್ ಬೆನ್ಗೂರಿಯನ್ ಜೊತೆ (ಪ್ರಿನ್ಸ್‌ಟನ್, ೧೯೫೧)



ರಾಬರ್ಟ್ ಓಪನ್‌ಹೀಮರ್ ಜೊತೆ



ಧ್ವನಿವರ್ಧಕಗಳ ಎದುರು (ಸು. ೧೯೫೦)

ಗಸ್ತು ಸುತ್ತುತ್ತ ಅರಮನೆಯನ್ನು ಕಾಪಾಡುತ್ತಿರುತ್ತವೆ. ಪೌಳಿಗಳಿಗೆ ಕಕ್ಷಾಚಿಪ್ಪುಗಳೆಂದು ಹೆಸರು. ಅರಮನೆ ಪರಮಾಣುವಿನ ಕೇಂದ್ರ. ಇದಕ್ಕೆ ನ್ಯೂಕ್ಲಿಯಸ್ ಎಂದು ಹೆಸರು. ಇದು ಪ್ರೋಟಾನ್, ನ್ಯೂಟ್ರಾನ್ ಮುಂತಾದ ಕಣಗಳ ಬಲವದ್ಬಂಧಿತ ಸಂಕೀರ್ಣ ಒಕ್ಕೂಟ. ಒಂದೊಂದು ಧಾತುವಿನ ಪರಮಾಣು ಒಂದೊಂದು ಬಗೆಯದು. ಅಂದರೆ ಹೈಡ್ರೊಜನ್ನಿನ ಪರಮಾಣು ಒಂದು ಬಗೆ, ಆಕ್ಸಿಜನ್ನಿನದು ಇನ್ನೊಂದು ಬಗೆ, ಇಂಗಾಲದ್ದು ಮಗುದೊಂದು ಬಗೆ, ಚಿನ್ನದ್ದು ಇವೆಲ್ಲವುಗಳಿಗಿಂತಲೂ ಬೇರೆಯದೇ ಆದ ಬಗೆ, ಇತ್ಯಾದಿ. ಒಂದೊಂದರ ರಚನಾವಿನ್ಯಾಸ ಒಂದೊಂದು—ಕಕ್ಷಾಚಿಪ್ಪುಗಳಲ್ಲಿರುವ ಎಲೆಕ್ಟ್ರಾನುಗಳ ಸಂಖ್ಯೆಯಲ್ಲಿ ಮತ್ತು ನ್ಯೂಕ್ಲಿಯಸ್ಸಿನಲ್ಲಿರುವ ಕಣಗಳ ಸಂಖ್ಯೆಯಲ್ಲಿ. ಇವು ನಿಸರ್ಗನಿರ್ಣೀತ ನಿಯಮಗಳು. ಇವನ್ನು ಮಾನವನ ಸಾಧಾರಣ ಕ್ರಿಯೆಗಳು ಯಾವುವೂ ಮುರಿಯಲಾರವು. ಎಂದೇ ಸೀಸ ಅಥವಾ ತಾಮ್ರದಂಥ 'ಅಶುದ್ಧ' ಲೋಹದಿಂದ ಚಿನ್ನದಂಥ 'ಶುದ್ಧ' ಲೋಹದ ನಿರ್ಮಾಣ ಮಾನವನಿಗೆ ಕೈಗೂಡಿರುವುದಿಲ್ಲ—ಜಂಗು ಬಂಗಾರವಾಗದು, ಇಲಿ ಹುಲಿಯಾಗದು ಹೇಗೊ ಹಾಗೆ.

ಸಾಧಾರಣವಾಗಿ ಪ್ರತಿಯೊಂದು ಧಾತುವಿನ ಪರಮಾಣುವೂ ಸ್ಥಿರ ಸ್ಥಿತಿಯಲ್ಲಿರುತ್ತದೆ. ಅಂದರೆ ಅದರ ಕಕ್ಷಾಚಿಪ್ಪುಗಳಲ್ಲಿರುವ ಎಲೆಕ್ಟ್ರಾನುಗಳು ಮತ್ತು ನ್ಯೂಕ್ಲಿಯಸ್ಸಿನಲ್ಲಿರುವ ಕಣಗಳ ಒಕ್ಕೂಟ ವ್ಯತ್ಯಾಸಗೊಳ್ಳುವುದಿಲ್ಲ. ಆದರೆ ವಿಕಿರಣಪಟುಧಾತುಗಳು—ಉದಾಹರಣೆಗೆ ಯುರೇನಿಯಮ್, ರೇಡಿಯಮ್—ಈ ನಿಯಮಕ್ಕೆ ಅಪವಾದಗಳು. ಇಂಥ ಒಂದು ವಿಕಿರಣಪಟುಧಾತುವಿನ ನ್ಯೂಕ್ಲಿಯಸ್ಸಿನಿಂದ ಕಣಗಳು (ವಸ್ತು) ಅಥವಾ ಕಿರಣಗಳು (ಶಕ್ತಿ) ಸಿಡಿದು—ಈ ಪ್ರಕ್ರಿಯೆಯೇ ವಿಕಿರಣಪಟುತ್ವ—ತತ್ಪರಿಣಾಮವಾಗಿ ಆ ಧಾತುವಿನ ಸ್ವರೂಪವೇ ಬದಲಾಗುತ್ತದೆ. ಉದಾಹರಣೆಗೆ, ವಿಕಿರಣಪಟು ಯುರೇನಿಯಮ್ ನೈಸರ್ಗಿಕ ವಸ್ತುನಷ್ಟದ ಹಾಗೂ ಶಕ್ತಿನಷ್ಟದ ಪರಿಣಾಮವಾಗಿ ಸ್ಥಿರ ಧಾತುವಾದ ಸೀಸವಾಗುತ್ತದೆ. ಇದು ಮುಂದೆ ಬದಲಾಗದು. ಅಲ್ಲಿಗೆ, ವಿಕಿರಣಪಟುಧಾತುಗಳ ಪರಮಾಣುಗಳು ಅಸ್ಥಿರ ಸ್ಥಿತಿಯಲ್ಲಿರುವುವೆಂದೂ ಇವು ಸ್ಥಿರಸ್ಥಿತಿಗೆ ಸಾಗುವ ಪ್ರವೃತ್ತಿ ಉಳ್ಳವೆಂದೂ ಹೀಗೆ ಸಾಗುವಾಗ ವಿಕಿರಣವನ್ನು ಉತ್ಸರ್ಜಿಸುತ್ತವೆಂದೂ ಹೇಳಬಹುದು. ಇದು ನಿಸರ್ಗದ ಪ್ರಯೋಗಮಂದಿರದಲ್ಲಿ ನಿರಂತರವಾಗಿ ಸಂಭವಿಸುತ್ತಿರುವ ಪ್ರಕ್ರಿಯೆ. ವಿಜ್ಞಾನಿಗೆ ಇದರ ಅರಿವು ಮೂಡಿದ್ದು ಬೆಕೆರಲ್ ಗೈದ ಆಕಸ್ಮಿಕ ಶೋಧದಲ್ಲಿ—ಎಚ್ಚೆತ್ತ ಮನಕ್ಕೆ ಮಾತ್ರ ಅದೃಷ್ಟ ಒಲಿಯುತ್ತದೆ ಎನ್ನುವುದಕ್ಕೆ ಇದೊಂದು ನಿದರ್ಶನ.

ಪರಮಾಣುಜಗತ್ತಿನ ಅನಾವರಣ ನಾಟಕದ ಮುಂದಿನ ದೃಶ್ಯ ಇಟಲಿಯ ಭೌತವಿಜ್ಞಾನಿ ಎನ್ರಿಕೊ ಫರ್ಮಿಯವರ (೧೯೦೧-೫೪) ಪ್ರಯೋಗಮಂದಿರದಲ್ಲಿ ಪ್ರದರ್ಶನಕ್ಕೆ ಅಣಿಯಾಯಿತು. ಇಸವಿ ೧೯೩೪. ಇವರ ಚಿಂತನೆ (ಇದು ನಿಜಕ್ಕೂ ಯುಗಪ್ರವರ್ತಕವಾಯಿತು) ಹರಿದ ಧಾಟಿ ಇದು : ಯುರೇನಿಯಮ್ಮಿನಂಥ ವಿಕಿರಣಪಟು ಧಾತುವಿನ ಪರಮಾಣು ತಂತಾನೇ ವಿಕಿರಣವನ್ನು ಉತ್ಸರ್ಜಿಸಿ (emit) ಬೇರೊಂದು ಧಾತುವಿನ ಪರಮಾಣುವಾಗುತ್ತದೆ ; ಯುರೇನಿಯಮ್ ಪರಮಾಣು ಆಭದ್ರಕೋಟೆಯಾದ್ದರಿಂದ ಹೀಗಾಗುತ್ತದೆ ; ಎಂದೇ ಆದರ ನ್ಯೂಕ್ಲಿಯಸ್ಸಿನಿಂದ ನ್ಯೂಟ್ರಾನಿನಂಥ ಕಣಗಳ ಕೂಟವು ವಿಕಿರಣರೂಪದಲ್ಲಿ ಹೊರಧಾವಿಸುತ್ತದೆ ; ಈಗ ಅದೇ ಯುರೇನಿಯಮ್ ಪರಮಾಣುವನ್ನು ನ್ಯೂಟ್ರಾನುಗಳಿಂದ ಕೃತಕವಾಗಿ ಬಂಬಾಯಿಸಿದರೇನಾದೀತು?

ಇಲ್ಲಿ ಒಂದು ಸಂಗತಿ ನೆನಪಿನಲ್ಲಿಡುವುದು ಅಗತ್ಯ. ಯಾವ ಪರಮಾಣುವೂ ದೃಗ್ಗೋಚರವಲ್ಲ. ಗುಂಡುಪಿನ್ನಿನ ಮೊನೆ ಮೇಲೆ ಕೋಟ್ಯಂತರ ಪರಮಾಣುಗಳು ನೆಲಸಿರಬಲ್ಲವು. ಇಂಥ

ಅನಂತಾಲ್ಪಗಾತ್ರದ ಪರಮಾಣುವಿಗೆ ಇನ್ನೂ ಅನಂತಾಲ್ಪಗಾತ್ರದ ನ್ಯೂಟ್ರಾನ್ 'ಗುಂಡು'ಗಳಿಂದ ತಾಡನೆ ಮಾಡುವುದು. ಪ್ರಾಯೋಗಿಕವಾಗಿ, ಕಡಲಕಿನಾರೆಯ ಪುಳಿನ ರಾಶಿಯಲ್ಲಿ ಅಡಗಿಕೊಂಡಿರುವ ಸಾಸಿವೆ ಕಾಳಿಗೆ ದೂರದ ಗಿರಿಶಿಖರದಿಂದ ಗುರಿಯಿಟ್ಟು (?) ಗುಂಡು ಹೊಡೆಯುವ ಸಾಹಸಕ್ಕೆ ಸಮಾನವಾಗುತ್ತದೆ. ಈ ನ್ಯೂಟ್ರಾನ್ ಗುಂಡುಗಳು ನ್ಯೂಕ್ಲಿಯಸ್-ಲಕ್ಷ್ಯವನ್ನು ತಾಗುವ ಸಂಭಾವ್ಯತೆ ಏನು ? ಹಕ್ಕಿಗಳು ಅತಿ ವಿರಳವಾಗಿರುವ ಪ್ರದೇಶದಲ್ಲಿ, ಕಾರಿರುಳ ನಡುವಿನಲ್ಲಿ, ತುಪಾಕಿ ಪರಂಪರೆಯನ್ನೇ ಹೊಟ್ಟಿಸಿದಾಗ ಹಕ್ಕಿಗಳಿಗೆ ಗುಂಡು ತಾಗುವ ಸಂಭಾವ್ಯತೆಯಷ್ಟು. ಗುಂಡಿನ ಮಳೆಯನ್ನು ನಿರಂತರವಾಗಿ ಸುರಿಸಿದ್ದಾದರೆ ಒಂದೊ ಎರಡೊ ಆಹುತಿಯಾದರೆ ಅದೃಷ್ಟ.

ಏರು ಕಡಿದಾದಷ್ಟೂ ಅಡಚಣೆ ಹಿರಿದಾದಷ್ಟೂ ಛಲ ವೃದ್ಧಿಸುವುದು ಮಾನವ ಸ್ವಭಾವ. ಹೀಗೆ ಛಲಾವಿಷ್ಟರಾದ ಫರ್ಮಿ ಯುಕ್ತ ಪ್ರಾಯೋಗಿಕ ವಿಧಾನ ರೂಪಿಸಿ ಯುರೇನಿಯಮ್ ನ್ಯೂಕ್ಲಿಯಸ್ಸಿಗೆ ನ್ಯೂಟ್ರಾನ್ ಗುಂಡುಗಳನ್ನು ಹೊಡೆದೇಬಿಟ್ಟರು. ಇವರ ಪ್ರಯೋಗ ಯಶಸ್ವಿಯಾಗಿತ್ತು: ಈಡಿಟ್ಟದ್ದು ಕಾಡುಹಂದಿಗೆ, ಬಲಿಯಾದದ್ದು ಹೆಬ್ಬುಲಿ. ಆದರೆ ಲಭ್ಯನಿಧಿ ಏನೆಂಬುದನ್ನು ಅರಿಯುವ ಸ್ಥಿತಿಯಲ್ಲಿ ಆಗ ಸಿದ್ಧಾಂತವಿರಲಿಲ್ಲ. ಪ್ರಯೋಗ ಅರುಹಿದ ಮಾಹಿತಿಯನ್ನು ಸೈದ್ಧಾಂತಿಕ ತಪಾಸಣೆಗೆ ಒಳಪಡಿಸಿ ಯುಕ್ತ ವ್ಯಾಖ್ಯಾನ ವಿವರಿಸುವುದು ಮುಂದಿನ ಹೆಜ್ಜೆ.

ಖ್ಯಾತ ಬ್ರಿಟಿಷ್ ನ್ಯೂಕ್ಲಿಯರ್ ಭೌತವಿಜ್ಞಾನಿ ಅರ್ನೆಸ್ಟ್ ರುದರ್ಫರ್ಡ್ (೧೮೭೧-೧೯೩೭) ಅದೇ ಏಪ್ರಿಲ್ ೨೩ರಂದು ಫರ್ಮಿಯವರಿಗೊಂದು ಅಭಿನಂದನ ಪತ್ರ ಬರೆದರು : "ನ್ಯೂಟ್ರಾನುಗಳ ನೆರವಿನಿಂದ ಅನೇಕ ಧಾತುಗಳಲ್ಲಿ ತಾತ್ಕಾಲಿಕ ವಿಕಿರಣಪಟುತ್ವವನ್ನು ಪ್ರೇರಿಸಿರುವ ನಿಮ್ಮ ಈಚಿನ ಪ್ರಯೋಗಗಳ ಗೋಷ್ವಾರೆಯನ್ನು ನನಗೆ ಕಳಿಸಿಕೊಡುವ ಸೌಜನ್ಯ ತೋರಿಸಿದ್ದೀರಿ. ಇದಕ್ಕಾಗಿ ನಿಮಗೆ ಆಭಾರಿ ಆಗಿದ್ದೇನೆ. ನಿಮಗೆ ದೊರೆತಿರುವ ಫಲಿತಾಂಶಗಳು ತುಂಬ ಕುತೂಹಲಕಾರಿ ಆಗಿವೆ. ಈ ತೆರನಾದ ಪರಿವರ್ತನೆಗಳ ವಾಸ್ತವಕ್ರಿಯಾತಂತ್ರ ಏನೆಂಬುದರ ಬಗ್ಗೆ ಹೆಚ್ಚಿನ ಮಾಹಿತಿ ಮುಂಬರುವ ದಿನಗಳಲ್ಲಿ ಲಭಿಸುವುದು ಖಾತ್ರಿ . . . ನೀವು ಸೈದ್ಧಾಂತಿಕ ಭೌತವಿಜ್ಞಾನದಿಂದ ಯಶಸ್ವಿಯಾಗಿ ತಪ್ಪಿಸಿಕೊಂಡಿದ್ದೀರಿ! ಹಾರ್ದಿಕ ಅಭಿನಂದನೆಗಳು. ಪ್ರಾರಂಭದಲ್ಲೇ ನೀವೊಂದು ಉತ್ಕೃಷ್ಟ ಮಾರ್ಗ ಹಿಡಿದಿರುವಂತೆ ತೋರುತ್ತದೆ. ಪ್ರೊಫೆಸರ್ ಡಿರಾಕ್ ಕೂಡ ಕೆಲವು ಪ್ರಯೋಗಗಳಲ್ಲಿ ನಿರತರಾಗಿರುವರೆಂಬ ಸುದ್ದಿ ನಿಮಗೆ ಪ್ರಿಯವಾದೀತು. ಸೈದ್ಧಾಂತಿಕ ಭೌತವಿಜ್ಞಾನದ ಭವಿಷ್ಯಕ್ಕೆ ಇದೊಂದು ಶುಭ ಲಕ್ಷಣವೆಂದು ತೋರುತ್ತದೆ."

ಈಗ ರಂಗಪ್ರವೇಶ ಮಾಡುವವರು ನ್ಯೂಕ್ಲಿಯಸ್ಸಿನಿಂದ ಶಕ್ತಿ ಬಸಿಯುವ ದಿಶೆಯಲ್ಲಿ ಮೂಲಭೂತ ಪ್ರಯೋಗ ನಡೆಸಿದ ಮೂವರು ಗಣ್ಯರು : ಭೌತವಿಜ್ಞಾನಿ ಲೈಸ್ ಮೈಟ್ನರ್ (೧೮೭೮-೧೯೬೮), ಭೌತರಸಾಯನವಿಜ್ಞಾನಿ ಆಟೊ ಹ್ಯಾನ್ (೧೮೭೯-೧೯೬೮) ಮತ್ತು ರಸಾಯನವಿಜ್ಞಾನಿ ಫ್ರಿಟ್ಸ್ ಸ್ಟ್ರಾಸ್‌ಮ್ಯಾನ್ (೧೯೦೨-೮೦ ).

ಮೈಟ್ನರ್ ಆಸ್ಟ್ರಿಯಾಸಂಜಾತ ಯೆಹೂದ್ಯ ಮಹಿಳೆ. ಪುರುಷ ಏಕಸ್ವಾಮ್ಯವಾಗಿದ್ದ ವಿಜ್ಞಾನರಂಗದಲ್ಲಿ ಈಕೆ ಅನೇಕ ಅಶೈಕ್ಷಣಿಕ ಅಡೆತಡೆಗಳನ್ನು ಎದುರಿಸಿ ತನ್ನ ಅರ್ಹತೆಯನ್ನು ಸ್ಥಾಪಿಸಬೇಕಾಯಿತು. ಈ ದಿಟ್ಟ ಮಹಿಳೆ ೧೯೦೭ರಲ್ಲಿ ಬರ್ಲಿನ್ನಿಗೆ ಹೋಗಿ ಹ್ಯಾನರ ಜೊತೆ ಸಂಶೋಧನ ಸಹವರ್ತಿಯಾಗಿ ಸೇರಿಕೊಂಡರು. ಜರ್ಮನಿಸಂಜಾತ (ಯೆಹೂದ್ಯೇತರ ಎಂಬುದು ಧ್ವನಿ) ಫ್ರಿಟ್ಸ್ ಸ್ಟ್ರಾಸ್‌ಮ್ಯಾನ್ ಕೆಲವು ವರ್ಷಾನಂತರ ಈ ಗುಂಪಿನ ಮೂರನೆಯ ಸದಸ್ಯರಾದರು.

ಜರ್ಮನಿಸಂಜಾತ ಹ್ಯಾನ್ ಶ್ರೇಷ್ಠ ವಿಜ್ಞಾನಿ ಮತ್ತು ಉದಾರಮಾನವತಾವಾದಿ. ಎರಡನೆಯ

ಮಹಾಯುದ್ಧದ ದಿನಗಳಂದು ಇವರು ಜರ್ಮನಿಯಲ್ಲೇ ಇದ್ದರು. ೧೯೩೮-೩೯ರ ವೇಳೆಗೆ ಇವರು ಪರಮಾಣುಬಾಂಬಿನ ತತ್ತ್ವವನ್ನು ಪ್ರಯೋಗಮಂದಿರದಲ್ಲಿ ಕಂಡುಕೊಂಡಿದ್ದರು. ಆದರೆ ಹಿಟ್ಲರ್‌ಶಾಹಿಯನ್ನು ಮನಸಾ ತಿರಸ್ಕರಿಸಿದ್ದ ಈ ಮಹಾನುಭಾವ ತನಗೆ ಸಿದ್ಧಿಸಿದ ತತ್ತ್ವವನ್ನು ಅಥವಾ ವರವನ್ನು ಪ್ರಕಟಿಸದೆ ಪ್ರಪಂಚವು ಹರಾಕಿರಿಯಿಂದ ನಾಶವಾಗುವುದನ್ನು ತಪ್ಪಿಸಿದರು. ಸ್ಟ್ರಾಸ್‌ಮ್ಯಾನ್ ಕೂಡ ಹಿಟ್ಲರ್‌ಶಾಹಿಗೆ ಸಹಕಾರ ನೀಡಲಿಲ್ಲ.

ಹ್ಯಾನ್ ಅವರ ಪರೀಕ್ಷಣ ಮಂದಿರದಲ್ಲಿ ಪ್ರಯೋಗಗಳು ಭರದಿಂದ ಮುನ್ನಡೆದುವು. ಫರ್ಮಿಯವರ ಹೆಬ್ಬುಲಿ ಪ್ರಕರಣವನ್ನು (೧೯೩೪) ಹ್ಯಾನ್ ವಿಶೇಷ ಆಸಕ್ತಿಯಿಂದ ಪುನರವಲೋಕಿಸಿದರು. ಮೈಟ್ನರರ ನೆರವಿನಿಂದ ಆ ಪ್ರಯೋಗವನ್ನು ಪುನರಾವರ್ತಿಸಿದರು. ಅವಶ್ಯವಾದ ಸುಧಾರಣೆಗಳನ್ನು ರೂಪಿಸಿಕೊಂಡರು. ಇವರು ಕಲೆಹಾಕಿದ ದತ್ತಾಂಶಗಳು ಅಮೂಲ್ಯವಾಗಿದ್ದುವು. ಪರಮಾಣು ಜಗತ್ತಿನ ಬಗ್ಗೆ ಅನೇಕ ಹೊಸ ಅಂಶಗಳು ಇವರಿಗೆ ಕರಗತವಾಗಿದ್ದುವು. ಇಷ್ಟಾಗುವಾಗ, ೧೯೩೮, ಯೆಹೂದ್ಯ ಮಹಿಳೆ ಮೈಟ್ನರ್ ಜರ್ಮನಿಯಿಂದ ಗುಪ್ತವಾಗಿ ಪಲಾಯನಿಸುವುದು ಅನಿವಾರ್ಯವಾಯಿತು. ಈಕೆ ಮೊದಲು ಹಾಲೆಂಡಿನಲ್ಲಿ ಆಸರೆ ಪಡೆದು ಬಳಿಕ ಸ್ವೀಡನ್ನಿಗೆ ತೆರಳಿದರು.

೧೯೩೮ರ ಡಿಸೆಂಬರಿನಲ್ಲಿ ಅನೇಕ ಘಟನೆಗಳು ನಾಟಕೀಯವಾಗಿ ಸಂಭವಿಸಿದುವು. ಆ ತಿಂಗಳ ಪೂರ್ವಾರ್ಧದಲ್ಲಿ ಹ್ಯಾನ್ ಯುರೇನಿಯಮ್ ನ್ಯೂಕ್ಲಿಯಸ್ಸನ್ನು ಒಡೆದಿದ್ದರು. ಈ ಪ್ರಕ್ರಿಯೆಗೆ ವಿದಲನ (fission) ಎಂದು ಹೆಸರು. ಫರ್ಮಿಯಾದರೂ ತತ್ಪೂರ್ವ ಸಾಧಿಸಿದ್ದು ವಿದಲನಕ್ಕೆ ಸಮಾನವಾದ ಒಂದು ಫಲಿತಾಂಶವನ್ನೇ. ಆದರೆ ಸಿದ್ಧಾಂತ ಈ ಅಸಾಧ್ಯ ಸಾಧನೆ ಸಾಧ್ಯವಾಯಿತೆಂದು ತೀರ್ಪು ನೀಡಲು ಕಾಲಾವಕಾಶ ಬೇಕಾಯಿತು. ನ್ಯೂಕ್ಲಿಯರ್ ವಿದಲನ ಸಿದ್ಧಿಸಿತೆಂಬುದರ ತಾತ್ತ್ವಿಕಾರ್ಥವಿಷ್ಟು : ಯುರೇನಿಯಮ್ ನ್ಯೂಕ್ಲಿಯಸ್ಸಿನಲ್ಲಿ ಬಲವದ್ಬಂಧಿತವಾಗಿರುವ ಕಣಗಳ ಒಕ್ಕೂಟವು ನ್ಯೂಟ್ರಾನ್-ವೃಷ್ಟಿ ಬಂಬಾಯಿಸಿಕೆಯಿಂದ ವಿದಲಿಸಲ್ಪಟ್ಟು ವಸ್ತುವು ನಷ್ಟಗೊಂಡು ತತ್ಸಮಾನ ಶಕ್ತಿಯು ($E=mc^2$ ಸಮೀಕರಣದ ಪ್ರಕಾರ) ಉತ್ಸರ್ಜಿತವಾಗುತ್ತದೆ. ಇದು ಐನ್‌ಸ್ಟೈನ್ ೧೯೦೫ರಲ್ಲಿ ಕೇವಲ ಗಣನೆಗಳನ್ನು ಆಧರಿಸಿ ಮುನ್ನುಡಿದುದಕ್ಕೆ ಅನುಗುಣವಾಗಿಯೇ ಇತ್ತು: Look, my lord, it comes ! (ಓ ನನ್ನರಸ ! ನೋಡಲ್ಲಿ—ಅದು ಬರುತ್ತಿದೆ ! *Hamlet*)

ತನ್ನ ಮಾಜಿ ಸಹವರ್ತಿ ಮೈಟ್ನರ್ ಬಗೆಗೆ ಹ್ಯಾನ್ ಅವರಿಗೆ ವಿಶೇಷ ಅಭಿಮಾನವಿತ್ತು. ಹೀಗಾಗಿ ತಾವು ಸಂಗ್ರಹಿಸಿದ ಹೊಸ ಮಾಹಿತಿಗಳನ್ನು ಆಕೆಗೆ, ಸ್ವೀಡನ್ ವಿಳಾಸಕ್ಕೆ, ಗುಟ್ಟಾಗಿ ರವಾನಿಸಿದರು (೨೨-೧೨-೧೯೩೮). ಈ ಪತ್ರ ಮೈಟ್ನರ್ ಕೈ ಸೇರುವ ಹೊತ್ತಿಗೆ ಆಕೆಯ ಸೋದರಳಿಯ ಆಟೋ ರಾಬರ್ಟ್ ಫ್ರಿಶ್ (೧೯೦೪-೭೯) ಕೆಲವು ದಿನ ಹಾಯಾಗಿ ತನ್ನ ಅತ್ತೆಯ ಜೊತೆಯಲ್ಲಿ ಕಳೆಯೋಣವೆಂದು ಅಲ್ಲಿಗೆ ಬಂದಿದ್ದರು. ಭೌತವಿಜ್ಞಾನಿ ಫ್ರಿಶ್ ೧೯೩೪ರಿಂದ ೧೯೩೯ರ ತನಕ ಕೂಪನ್‌ಹೇಗನ್ನಿನಲ್ಲಿ (ಡೆನ್ಮಾರ್ಕ್) ನೀಲ್ಸ್ ಬೋರರ ಸಂಶೋಧನ ಸಹಾಯಕರಾಗಿದ್ದರು. ಸಹಜವಾಗಿ ಇವರ ಕ್ಷೇತ್ರ ನ್ಯೂಕ್ಲಿಯರ್ ಭೌತವಿಜ್ಞಾನವೇ ಆಗಿತ್ತು.

ಸ್ಟಾಕ್‌ಹೋಮಿನ ಬಹಿರ್ವಲಯದ ಹಿಮಾಚ್ಛಾದಿತ ಅರಣ್ಯದ ಶಾಂತ ಪರಿಸರದಲ್ಲಿ ಅತ್ತೆ ಮತ್ತು ಅಳಿಯ, ಹ್ಯಾನ್‌ರಿಂದ ಬಂದಿದ್ದ ಮಾಹಿತಿಗಳನ್ನು ಕೂಲಂಕಷವಾಗಿ ಚರ್ಚಿಸಿದರು. ಹ್ಯಾನ್ ಸಾಧಿಸಿದ್ದು ಖಾತ್ರಿ ಯುರೇನಿಯಮ್ ವಿದಲನವನ್ನೇ ಎಂಬುದಾಗಿ ಇವರು ತೀರ್ಮಾನಿಸಿದರು. ತಮ್ಮ ತೀರ್ಪನ್ನು ತಾಂತ್ರಿಕ ನಿಬಂಧರೂಪಕ್ಕೆ ನೇರ್ಪುಗೊಳಿಸಿದರು(೧೯೩೯). ಇದೇನೂ ಸಾಮಾನ್ಯ ತೀರ್ಪಾಗಿರಲಿಲ್ಲ : ಪ್ರಪಂಚವನ್ನು ನ್ಯೂಕ್ಲಿಯರ್-ಯುಗಕ್ಕೆ ಆವಾಹಿಸಿದ ತೀರ್ಪು, ನ್ಯೂಕ್ಲಿಯರ್ ಶಕ್ತಿಯನ್ನು ಮಾನವ ಹಿಂಡಬಲ್ಲ ಎಂಬುದನ್ನು ಪ್ರಕಟಿಸಿದ ತೀರ್ಪು, ಊಹಾತೀತ

ಭವಿಷ್ಯಸಾಧ್ಯತೆಗಳನ್ನು ಒಳಗೊಂಡಿದ್ದ ತೀರ್ಪು. ಹಠಾತ್ತನೆ ಜ್ಞಾನಸೀಮೆಯನ್ನು ಅತಿಲಂಬನಗೊಳಿಸಿದ ತೀರ್ಪು—ಪರಮಾಣು ಅಂತರಂಗಕ್ಕೆ ಒದಗಿಸಿದ ನೇರ್ಪು.

ಕೆಲವು ದಿನಗಳ ತರುವಾಯ ಫ್ರಿಶ್ ಕೂಪನ್‌ಹೇಗನ್ನಿಗೆ ಮರಳಿದರು. ಅಳುಕು ಸಂಭ್ರಮ, ಭಯ, ಉತ್ಸಾಹ ಮುಂತಾದ ವಿರುದ್ಧ ಗುಣಗಳ ತಾಕಲಾಟದಿಂದ ಇವರು ಉದ್ವಿಗ್ನರಾಗಿದ್ದರು—ಒಳಗಿನ 'ಪರಮಾಣುಶಕ್ತಿ' ಸುಮ್ಮನೆ ಬಿಟ್ಟೀತೇ ? ನೇರ ಗುರುವಿನೆಡೆಗೆ ಧಾವಿಸಿದರು—ಸ್ಟಾಕ್‌ಹೋಮಿನ ಬರ್ಫಶೀತಲಿತ ಶಾಂತ ಪರಿಸರದಲ್ಲಿ ಮೈಟ್ನರ್ ಮತ್ತು ತಾನು ಕಂಡ 'ಉಷ್ಣ' ಸತ್ಯಾವಿಷ್ಕಾರದ ತಳಮಳದ ಸುದ್ದಿಯನ್ನು ಅರುಹೋಣವೆಂದು. ಆ ಸತ್ಯ ನಿಜಕ್ಕೂ ಹೇಗಿತ್ತು ? ಇನ್ನೂ ಊಹನೆಯ ಸರಹದ್ದನ್ನು ಹೊರದಾಟಿರಲಿಲ್ಲ.

ನೀಲ್ಸ್ ಬೋರ್ ಆಗ ಅಮೆರಿಕಕ್ಕೆ ತೆರಳುವ ತರಾತುರಿಯಲ್ಲಿದ್ದರು. ವಾಸ್ತವವಾಗಿ ಕೇವಲ ಕೆಲವೇ ಮಿನಿಟುಗಳಿಗಿಂತ ಹೆಚ್ಚು ಅವಕಾಶ ಉಳಿದಿರಲಿಲ್ಲ. ಅಷ್ಟರೊಳಗೇ ಫ್ರಿಶ್ ಸ್ಥೂಲವಾಗಿ ವಿಷಯ ಹೇಳಿದರು. ಪ್ರಚಂಡ ಪ್ರಖರಮತಿ ಬೋರ್ ಒಡನೆ ಸಮಗ್ರ ಚಿತ್ರ ಗ್ರಹಿಸಿ ನುಡಿದರು, "ಓ ! ನಾವೆಲ್ಲ ಎಂಥ ಮುಟ್ಠಾಳರಾಗಿದ್ದೆವು. ಆಹಾ ! ಇದು ಪರಮಾದ್ಭುತ ! ಅದು ಹೇಗೆ ಇರಬೇಕೋ ಹಾಗೆಯೇ ಇದೆ. ಅದರ ಬಗ್ಗೆ ನೀವೂ ಮೈಟ್ನರರೂ ಸಂಶೋಧನಪ್ರಬಂಧ ಬರೆದಿರುವಿರಷ್ಟೆ ?"

"ಇಲ್ಲ. ಆದರೆ ಒಡನೆ ಬರೆಯುತ್ತೇವೆ."

"ಸರಿ. ಹಾಗೆ ಮಾಡಿ. ಅದು ಪ್ರಕಟವಾಗುವ ತನಕ ಈ ವಿಷಯವನ್ನು ನಾನು ಎಲ್ಲಿಯೂ ಪ್ರಸ್ತಾವಿಸುವುದಿಲ್ಲ."

ಮುಂದಿನ ಕೆಲವೇ ಕ್ಷಣಗಳಲ್ಲಿ ಬೋರ್ ಅಮೆರಿಕಗಾಮಿ ಹಡಗೇರಿದ್ದರು.

"ಗೊಂಡಾರಣ್ಯದ ನಡುವೆ ನಡೆದುಕೊಂಡು ಹೋಗುತ್ತಿದ್ದಾಗ, ನಾನು ಯಾವ ಸ್ಪಷ್ಟ ಉದ್ದೇಶವೂ ಇಲ್ಲದೆ, ಒಂಟಿ ಸಲಗವೊಂದರ ಬಾಲ ಹಿಡಿದುಬಿಟ್ಟೆನೋ ಎನ್ನಿಸುತ್ತದೆ. ಈಗ ಏನು ಮಾಡಬೇಕೆಂಬುದು ನನಗೆ ತಿಳಿಯದಾಗಿದೆ." ಎಂಬುದಾಗಿ ಫ್ರಿಶ್ ತಮ್ಮ ತಾಯಿಗೆ ಕಾಗದ ಬರೆದಿದ್ದರು.

ಇತ್ತ ಫ್ರಿಶ್ ಮತ್ತು ಮೈಟ್ನರ್ ಸುದೂರ (ಅಂತರದೇಶ) ದೂರವಾಣಿ ಸಂಪರ್ಕವಿರಿಸಿಕೊಂಡು ತಮ್ಮ ಸಂಯುಕ್ತ ಸಂಶೋಧನ ಟಿಪ್ಪಣಿ ಬರೆದರು. ಯುರೇನಿಯಮ್-ಪರಮಾಣು-ಭೇದನೆಯ ಪ್ರಕ್ರಿಯೆಗೆ ಏನು ಹೆಸರಿಡಬೇಕು ? ಏಕಾಣುಜೀವಿಗಳು (ಬ್ಯಾಕ್ಟೀರಿಯಾ) ಒಡೆದು ಎರಡಾಗುವ ಪ್ರಕ್ರಿಯೆಗೆ fission (ವಿದಲನ) ಎಂಬ ಹೆಸರಿದೆಯೆಂದು (ಬೋರ್ ಇನ್‌ಸ್ಟಿಟ್ಯೂಟಿನಲ್ಲಿದ್ದ) ಅಮೆರಿಕನ್ ಜೀವವಿಜ್ಞಾನಿ ಜೇಮ್ಸ್ ಆರ್ನಾಲ್ಡ್ ಅವರಿಂದ ತಿಳಿಯಿತು. ಸರಿ, ಹಾಗಾದರೆ ಇದು nuclear fission (ನ್ಯೂಕ್ಲಿಯರ್ ವಿದಲನ). Nuclear fission ಎಂಬ ತಾಂತ್ರಿಕ ಪದಪುಂಜವನ್ನು ಹೊತ್ತ ಫ್ರಿಶ್-ಮೈಟ್ನರ್ ಸಂಶೋಧನಟಿಪ್ಪಣಿ ಲಂಡನ್ನಿನ *Nature* ಪತ್ರಿಕೆಯಲ್ಲಿ ಪ್ರಕಟವಾಗುವ ವೇಳೆಗೆ (ಫೆಬ್ರುವರಿ ೧೯೩೯) ಸುಮಾರು ಆರು ವಾರಗಳು ಸಂದುಹೋಗಿದ್ದುವು. ಆದರೆ ಆ ಮೊದಲೇ ನ್ಯೂಕ್ಲಿಯರ್‌ವಿದಲನದ ರಹಸ್ಯ ಪ್ರಪಂಚಕ್ಕೆ ಬಯಲಾಗಿ ಹೋಗಿತ್ತು. ಹೇಗೆ ?

ರಹಸ್ಯ ಬಯಲಾದದ್ದು ಹೀಗೆ. ಕಡಲಯಾನದ ವೇಳೆ ಬೋರ್ ಜೊತೆ ಅವರ ಶಿಷ್ಯ ಭೌತವಿಜ್ಞಾನಿ ಲಿಯಾನ್ ರೋಸೆನ್‌ಫೆಲ್ಡ್ (೧೯೦೪-೭೪) ಇದ್ದರು. ತಮ್ಮ ಎಂದಿನ ದಕ್ಷತೆ ಮತ್ತು ಪರಿಪೂರ್ಣತೆಯಿಂದ ಬೋರ್ ನ್ಯೂಕ್ಲಿಯರ್ ವಿದಲನವನ್ನು ಇವರೊಂದಿಗೆ ಚರ್ಚಿಸಿದರು. 'ಅದು ಬಂದದ್ದು' ನಿಜ ವೆಂದು ಇವರಿಗೆ ಖಚಿತವಾಗಿತ್ತು. ಆದರೆ ಈ ಚರ್ಚೆಯ ವೇಳೆ ಬೋರ್

ಒಂದು ಮುಖ್ಯ ಸಂಗತಿ ಮರೆತಿದ್ದರು : ಅದು ರಹಸ್ಯ ವಿಷಯ, ಫ್ರಿಶ್-ಮೈಟ್ನರ್ ಸಂಶೋಧನ ಟಿಪ್ಪಣಿ ಪ್ರಕಟವಾಗುವ ಮುನ್ನ ಪ್ರಪಂಚಕ್ಕೆ ಬಿತ್ತರಿಸಲ್ಪಡತಕ್ಕದ್ದಲ್ಲ ಎಂಬುದನ್ನು ರೋಸೆನ್ ಫೆಲ್ಡರಿಗೆ ಹೇಳಿರಲಿಲ್ಲ. ಇವರಾದರೂ ಯೋಚನೆ ಮಾಡಿದ್ದೇನು ? ಅದಾಗ ತಾನೇ ಪ್ರಕಟವಾದ ಆದರೆ ತಾನಿನ್ನೂ ನೋಡಿರದ ಬಿಸಿಬಿಸಿ ಸುದ್ದಿಯನ್ನು ಬೋರ್ ತನ್ನೊಡನೆ ಆತ್ಮೀಯವಾಗಿ ಚರ್ಚಿಸಿದ್ದರೆಂದು.

ಯಾನ ಮುಗಿಯಿತು. ಗುರುಶಿಷ್ಯರು ದಂಡೆ ಏರಿದರು. ಬೋರ್ ನ್ಯೂಯಾರ್ಕಿನಲ್ಲಿ ಉಳಿದರು. ರೋಸೆನ್‌ಫೆಲ್ಡ್ ಪ್ರಿನ್ಸ್‌ಟನ್ನಿಗೆ ತೆರಳಿದರು. ಅಲ್ಲಿಯ ಪಾಮರ್ ಲ್ಯಾಬೊರೇಟರಿಯ ಜರ್ನಲ್ ಕ್ಲಬ್ಬಿನ ಮಾಮೂಲೀ ಸಭೆಗೆ ಇವರನ್ನು ಆಹ್ವಾನಿಸಲಾಗಿತ್ತು. ಯೂರೋಪಿನಿಂದ ಆಗಮಿಸಿದ್ದ ಈ ಭೌತವಿಜ್ಞಾನಿಯನ್ನು ಆದರದಿಂದ ಸ್ವಾಗತಿಸುತ್ತ, "ಕಾಂಟಿನೆಂಟಿನಿಂದ ಏನಾದರೂ ಬಿಸಿ ಸುದ್ದಿ ತಂದಿರುವಿರೆ ?" ಎಂದು ಪ್ರಶ್ನಿಸಲಾಯಿತು.

ರೋಸೆನ್‌ಫೆಲ್ಡ್ ಅಧಿಕೋತ್ಸಾಹದಿಂದ ಉತ್ತರ ನೀಡಿದರು. ಬೋರ್ ಜೊತೆ ನಡೆದ ಅರ್ಥಪೂರ್ಣ ಚರ್ಚೆ ಹಾಗೂ ಬೋರ್ ನೀಡಿದ ಸುಲಭ ವಿವರಣೆಯನ್ನು ಕೂಡ ತಿಳಿಸಿದರು. ನ್ಯೂಕ್ಲಿಯರ್‌ವಿದಲನ-ನೀಲ್ಸ್‌ಬೋರ್ ಮುದ್ರೆ ! ಇನ್ನು ಕೇಳಬೇಕೆ ? ಅತೀತಾತೀತ ಪತ್ರಿಕಾ ಸಮಾಚಾರ ವಿದಾಯಿತು (ಜನವರಿ ೧೯೩೯). ಅಮೆರಿಕವಿಡೀ ಇದರಿಂದ ಮೈಕೊಡಹಿ ಏಳುವಂತಾಯಿತು. "ತೋರ ಮಾಣಿಕವೆಂದು ಪಿಡಿದೊಡೆ ಭೂರಿಕೆಂಡವಿದಾಯ್ತಲಾ" ಎಂಬಂತೆ ಅಲ್ಲಿಯ ಭೌತ ವಿಜ್ಞಾನಿಗಳ ಮನಃಸ್ಥಿತಿ ಕಂಪಿಸಿತು.

ಹೊಸತನ್ನು ಕೇಳಿದ ಉನ್ಮಾದ ಸ್ಥಿತಿಯಲ್ಲಿ ದೇಶ ಮುಳುಗಿದ್ದಾಗ, ಪರಮಾಣು ಶಕ್ತಿಯ ರಹಸ್ಯ ಮಾನವನ ವಶವಾಯಿತೆಂಬ ಉತ್ತೇಜಕ ಸುದ್ದಿಯಿಂದ ವಿಜ್ಞಾನಿಗಳು ಆನಂದತುಂದಿಲರಾಗಿದ್ದಾಗ, ನ್ಯೂಕ್ಲಿಯರ್ ಭೌತವಿಜ್ಞಾನಕ್ಷೇತ್ರದಲ್ಲಿ ಅನಂತ ಸಾಧ್ಯತೆಗಳನ್ನು ಕಂಡು ಭೌತವಿಜ್ಞಾನಿಗಳು ಉನ್ಮೀಲಿತ ಭಾವದಲ್ಲಿದ್ದಾಗ, ಭೌತವಿಜ್ಞಾನಿ ಝೀಲಾರ್ಡ್ ಎಂಬವರು ಮಾತ್ರ, ಭವಿಷ್ಯ ನೆನೆದು, ನಾಟ್ಸೀ ರಾಕ್ಷಸನಿಗೆ ಸಿದ್ಧಿಸಿರುವ ನವಹನನ ಸಾಮರ್ಥ್ಯ ಕಲ್ಪಿಸಿಕೊಂಡು, ಮುಕ್ತಪ್ರಪಂಚದ ನಾಳೆಯ ಬಗ್ಗೆ ಯೋಚಿಸುತ್ತ ಹೆದರಿ ನಡುಗಿದರು, ನಡುಗಿ ಮರಗಟ್ಟಿದರು.

ಹಂಗರಿಯಲ್ಲಿ ಹುಟ್ಟಿದ ಲಿಯೊ ಝೀಲಾರ್ಡ್ (೧೮೯೮-೧೯೬೪) ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಓದಿ ಭೌತವಿಜ್ಞಾನ ಡಾಕ್ಟೊರೇಟ್ ಗಳಿಸಿದರು. ಅದೇ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ವರ್ಗದಲ್ಲಿದ್ದ ಈ ಯೆಹೂದ್ಯ ಕುಲಜ, ಹಿಟ್ಲರ್‌ಶಾಹಿ ಅಧಿಕಾರಾರೂಢವಾದಾಗ, ಇನ್ನು ತನಗಲ್ಲಿ ಉಳಿಗಾಲವಿಲ್ಲವೆಂದು ಸಕಾರಣವಾಗಿ ಬಗೆದು, ಇಂಗ್ಲೆಂಡಿಗೆ ನಿರ್ಗಮಿಸಿದರು. ನ್ಯೂಕ್ಲಿಯಸ್ಸನ್ನು ವಿದಲಿಸಲು ಅತಿವೇಗದ ನ್ಯೂಟ್ರಾನುಗಳ ಸಂತತ ವೃಷ್ಟಿಯನ್ನು ಅದರ ಮೇಲೆ ಬಂಬಾಯಿಸಲು ಇವರೊಂದು ಹೊಸ ಹಂಚಿಕೆಯನ್ನು ಹೂಡಿದರು (೧೯೩೩-೩೪). ಇದರ ಪ್ರಕಾರ ಒಂದು ನ್ಯೂಟ್ರಾನ್ ಒಂದು ಪರಮಾಣುವನ್ನು ಒಡೆಯುವಂತೆ ಪ್ರೇರಿಸಿ ಅದರಿಂದ ಎರಡು ನ್ಯೂಟ್ರಾನುಗಳು ರಟ್ಟುವಂತೆ ಮಾಡಬೇಕು ; ಇವು ಸರದಿಯಲ್ಲಿ ಇನ್ನೆರಡು ಪರಮಾಣುಗಳನ್ನು ಒಡೆಯುವಂತೆ ಪ್ರೇರಿಸಿ ಅವುಗಳಿಂದ ತಲಾ ಎರಡು ನ್ಯೂಟ್ರಾನುಗಳು ಸಿಡಿಯುವಂತೆ ಮಾಡಬೇಕು ಇತ್ಯಾದಿ. ಇದೊಂದು ಶೃಂಖಲಾಕ್ರಿಯೆ (chain reaction). ಯುಕ್ತ ಧಾತುವಿನ ಹಿರಿ ಮುದ್ದೆಯೊಳಗೆ ಶೃಂಖಲಾಕ್ರಿಯೆ ನಡೆಯುವಂತೆ ಪ್ರೇರಿಸಿದ್ದಾದರೆ ಕಣ್ಣು ಮಿಟಕಿಸುವುದರೊಳಗೆ ಅಸಂಖ್ಯಾತ ನ್ಯೂಟ್ರಾನುಗಳ ತೀವ್ರ ತಾಡನೆಯಿಂದ ನ್ಯೂಕ್ಲಿಯರ್ ವಿದಲನೆ ಸಾಧ್ಯವಾಗುತ್ತದೆ. ಅಂದರೆ ಆಗ ನ್ಯೂಕ್ಲಿಯರ್ ಕುಲುಮೆ ಪ್ರಜ್ವಲಿಸಿರುತ್ತದೆ.

ಝಿಲಾರ್ಡ್ ಈ ಯೋಜನೆಯ ಏಕಸ್ವವನ್ನು ಬ್ರಿಟಿಷ್ ನೌಕಾಬಲಕ್ಕೆ ಒಪ್ಪಿಸಿದರು (೧೯೩೪). ಇದನ್ನು ಕಾರ್ಯರೂಪಕ್ಕೆ ತರುವಲ್ಲಿ 'ಕಡಲರಾಣಿ ಬ್ರಿಟಾನಿಯಾ'ಳ ಮಹೋಜ್ಜ್ವಲ ರತ್ನವಾದ ನೌಕಾಬಲ ಆಸಕ್ತಿವಹಿಸೀತೆಂಬುದು ಇವರ ನಿರೀಕ್ಷೆ. ಶತ್ರುರಾಷ್ಟ್ರಗಳು ಉದ್ಯಮಗಾತ್ರದಲ್ಲಿ ನ್ಯೂಕ್ಲಿಯರ್ ಶಕ್ತಿಯನ್ನು ಗಿಟ್ಟಿಸುವುದು ಸಾಧ್ಯವಾಗುವ ಮೊದಲೇ ಇಂಗ್ಲೆಂಡ್ ಈ ದಿಶೆಯಲ್ಲಿ ಮುನ್ನಡೆದಿರಬೇಕೆಂಬುದು ಇವರ ಹಂಬಲ. ಆದರೆ ನೌಕಾಬಲ ಆಸಕ್ತಿ ತಳೆಯಲಿಲ್ಲ. ಕೆಂಪು ಪಟ್ಟಿ ಸುತ್ತಿದ್ದ ಕಡತದೊಳಗೆ ಝಿಲಾರ್ಡ್-ಯೋಜನೆ ಸುಖನಿದ್ರೆಯಲ್ಲಿತ್ತು. ಮುಂದೆ ಝಿಲಾರ್ಡ್ ಅಮೆರಿಕಕ್ಕೆ ವಲಸೆಹೋದರು. ಇತ್ತ ಜರ್ಮನಿಯ ಹ್ಯಾನ್ ಮತ್ತು ಸ್ಟ್ರಾಸ್‌ಮ್ಯಾನ್ ದುಷ್ಟ ಆಳರಸರ ಬೆಂಬಲಿಗರಾಗಲಿಲ್ಲ.

ಅಮೆರಿಕದಲ್ಲಿ ಗಟ್ಟಿ ನೆಲೆ ಊರಿರದಿದ್ದ ನಿರಾಶ್ರಿತ ಝಿಲಾರ್ಡರಿಗೆ ಕೊಲಂಬಿಯಾ ವಿಶ್ವವಿದ್ಯಾಲಯದ ಭೌತವಿಜ್ಞಾನ ಪ್ರಯೋಗಮಂದಿರದಲ್ಲಿ ಪ್ರಯೋಗ ನಡೆಸಲು ಹಂಗಾಮಿ ಅನುಮತಿ ದೊರೆತಿತ್ತು. ಇವರ ವೈಜ್ಞಾನಿಕೋಪಕರಣಗಳು ಇನ್ನೂ ಇಂಗ್ಲೆಂಡಿನಿಂದ ಬಂದಿರ ಲಿಲ್ಲ. ನ್ಯೂಕ್ಲಿಯರ್‌ವಿದಲನ, ಶೃಂಖಲಾಕ್ರಿಯೆ ಮುಂತಾದ ವಿದ್ಯಮಾನಗಳ ತಥ್ಯವನ್ನು ಪ್ರಾಯೋಗಿಕವಾಗಿ ಪರಿಶೀಲಿಸಬೇಕೆಂಬ ಹಠಬದ್ಧರಾಗಿ, ಸ್ನೇಹಿತನೊಬ್ಬನ ಜಾಮೀನಿನ ಮೇರೆಗೆ, ಬ್ಯಾಂಕಿನಿಂದ ೨೦೦೦ ಡಾಲರುಗಳನ್ನು ಸಾಲಪಡೆದು, ಒಂದು ಗ್ರಾಮ್ ರೇಡಿಯಮ್ಮನ್ನು ದೊರಕಿಸಿಕೊಂಡರು. ಇವರು ಮಾಡಿ ನೋಡಿದ ಪ್ರಯೋಗ 'ಅದು ಬಂದುದನ್ನು' ಸ್ಥಿರೀಕರಿಸಿತ್ತು.

ಕಟ್ಟಾ ಫ್ಯಾಸಿಸ್ಟ್‌ವಿರೋಧಿ ಆಗಿದ್ದ ಫರ್ಮಿ, ೧೯೩೮ರಲ್ಲಿ ನೊಬೆಲ್ ಪಾರಿತೋಷಿಕ ಸ್ವೀಕರಿಸಿದ ಬಳಿಕ, ಇಟಲಿಗೆ ಹಿಂತಿರುಗದೆ, ಅಮೆರಿಕಕ್ಕೆ ಶಾಶ್ವತ ವಲಸೆ ಹೋಗಿದ್ದರು. ೧೯೩೯ರ ವೇಳೆಗೆ ಇವರು ಅದೇ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಇವರಾದರೂ ನ್ಯೂಕ್ಲಿಯರ್‌ವಿದಲನದ ಪ್ರಯೋಗದಲ್ಲಿಯೇ ಉದ್ಯುಕ್ತರಾಗಿದ್ದುದರಿಂದ ಝಿಲಾರ್ಡ್ ಪಡೆದ ಫಲಿತಾಂಶಗಳ ಪೂರ್ಣ ಅರ್ಥವನ್ನು ತತ್‌ಕ್ಷಣ ಗ್ರಹಿಸಿದರು. ಪರಮಾಣುಬಾಂಬ್-ನಿರ್ಮಾಣಕ್ಕೆ ರಾಜಮಾರ್ಗ, ಮುಕ್ತಮಾರ್ಗ ಸಿದ್ಧವಾಗಿದೆ ಎಂಬುದು ಇಬ್ಬರಿಗೂ ಸ್ಪಷ್ಟವಾಯಿತು.

ರೋಸೆನ್‌ಫೆಲ್ಡ್ ಸಾರಿದ ಘೋಷಣೆಯಿಂದ ಎಳೆಹಿಡಿದು ಸಾಗಿದ ಝಿಲಾರ್ಡ್ ತಮ್ಮ ನೂತನ ಸಿದ್ಧಿಯಿಂದ ಹರ್ಷಪೂರಿತರಾಗುವುದಕ್ಕಿಂತ ಹೆಚ್ಚಾಗಿ ವ್ಯಾಕುಲಗ್ರಸ್ತರಾದರು. ಇವರ ಯೋಚನೆ ಹರಿದದ್ದು ಹೀಗೆ : ಯುರೇನಿಯಮ್ ವಿದಲನವನ್ನು ಪ್ರಾಯೋಗಿಕವಾಗಿ ಸಾಧಿಸಿದ ಹ್ಯಾನ್ ಸಹಜವಾಗಿ ನ್ಯೂಕ್ಲಿಯರ್ ಬಾಂಬಿನ ನಿರ್ಮಾಣದತ್ತ ತಮ್ಮ ಸಂಶೋಧನೆಯನ್ನು ಮುಂದುವರಿಸುತ್ತಾರೆ ; ಆ ಹಾದಿಯಲ್ಲಿ ಇವರು ಅತಿ ಶೀಘ್ರವಾಗಿ ಯಶಸ್ಸು ಗಳಿಸುತ್ತಾರೆ ; ಬೆಲ್ಜಿಯನ್ ಕಾಂಗೊದಲ್ಲಿ ಸಮೃದ್ಧವಾಗಿ ಲಭಿಸುತ್ತಿರುವ ಯುರೇನಿಯಮ್ ಅದುರನ್ನು ಜರ್ಮನಿಯು ಸೇನಾಬಲದ ಬೆಂಬಲದಿಂದ ಮುಟ್ಟುಗೋಲು ಹಾಕಿ ವಶಪಡಿಸಿಕೊಳ್ಳುತ್ತದೆ ; ಜರ್ಮನಿಯ ಶಸ್ತ್ರಾಗಾರದಲ್ಲಿ ನ್ಯೂಕ್ಲಿಯರ್ ಬಾಂಬ್, "ನಾನಿದ್ದೇನೆ, ಇದ್ದೇ ಇದ್ದೇನೆ" ಎಂದು ಗಟ್ಟಿಯಾಗಿ ಅರಚಿ ಭದ್ರವಾಗಿ ಉಪಸ್ಥಿತವಾಗುತ್ತದೆ ; ಈ ಮಾರಕಾಸ್ತ್ರಸನ್ನದ್ಧ ಹಿಟ್ಲರ್ ಇಡೀ ಪ್ರಪಂಚವನ್ನು ತನ್ನ ತೊತ್ತಾಗಿ ವಶಪಡಿಸಿಕೊಳ್ಳುವುದು ಖಂಡಿತ. ನಾಗರಿಕತೆಯ tomb—ಗೋರಿ ನಿರ್ಮಾಣವಾಗುತ್ತಿದೆ !

## ಐನ್‌ಸ್ಟೈನ್ ಮತ್ತು ಪರಮಾಣುಬಾಂಬ್

ನಿಮ್ಮಲ್ಲಿ ಎಷ್ಟು ಮಂದಿಗೆ ಝೀಲಾರ್ಡ್ ಅವರ ಪರಿಚಯವಿದೆಯೋ ತಿಳಿಯೆ. ಹೆಚ್ಚು ಮಂದಿಗೆ ತಿಳಿದಿದೆ ಎಂಬುದಂತೂ ನಿಜ. ಖಂಡಿತವಾಗಿಯೂ ಅವರೊಬ್ಬ ವಿಚಿತ್ರ ವ್ಯಕ್ತಿ. ಅತ್ಯಂತ ಧೀಮಂತ. ಇಲ್ಲ, ಇದು ಅವನಿರೂಪಣೆ. ಅವರು ಅತ್ಯಂತ ಉಜ್ಜ್ವಲ, ಜನರು ಬೆಚ್ಚಿಬೀಳುವಂತೆ ಮಾಡುವುದರಲ್ಲಿ ಅವರೊಂದು ವಿಧವಾದ ಸಂತೃಪ್ತಿ ಪಡೆಯುವರೆಂದು ತೋರುತ್ತದೆ—ಅಂತೂ ಇಂಥ ಚಿತ್ರವನ್ನು ಅವರು ನನ್ನಲ್ಲಿ ಪಡಿಮೂಡಿಸಿದ್ದಾರೆ.

ಫರ್ಮಿ (ಒಂದು ಭಾಷಣದಲ್ಲಿ)

ಭವಿಷ್ಯದ ಸ್ಫೋಟಕಸಾಧ್ಯತೆಗಳನ್ನು ಅಮೆರಿಕ ಸರ್ಕಾರದ ಗಮನಕ್ಕೆ ತರುವುದು ವಿಜ್ಞಾನಿಗಳ ಕರ್ತವ್ಯವೆಂದು ಝೀಲಾರ್ಡ್ ಭಾವಿಸಿದರು. ಹಿಟ್ಲರನನ್ನು ಸದೆಬಡಿಯಲು ಅಮೆರಿಕವು ನ್ಯೂಕ್ಲಿಯರ್ ಬಾಂಬಿನ ನಿರ್ಮಾಣವನ್ನು ಒಡನೆ ಕೈಗೊಳ್ಳುವುದು ಅಗತ್ಯವಾಗಿತ್ತು. ಆದರೆ ಅಧ್ಯಕ್ಷ ರೂಸ್‌ವೆಲ್ಟರಿಗೆ ಸನ್ನಿವೇಶದ ತೀವ್ರತೆಯನ್ನು ತಿಳಿಯಪಡಿಸುವುದು ಹೇಗೆ ?

ನೀಲ್ಸ್ ಬೋರರರಂಥ ಮುಂಚೂಣಿ ವಿಜ್ಞಾನಿ ಕೂಡ, ನ್ಯೂಕ್ಲಿಯರ್‌ವಿದಲನದ ಸಾಧ್ಯತೆಯನ್ನು ಸ್ಪಷ್ಟವಾಗಿ ಅರಿತ ಮೇಲೆಯೂ, ನ್ಯೂಕ್ಲಿಯರ್ ಬಾಂಬಿನ ವಾಸ್ತವ ನಿರ್ಮಾಣದ ಬಗ್ಗೆ ಭರವಸೆ ಉಳ್ಳವರಾಗಿರಲಿಲ್ಲ. ಇನ್ನು ಆಲ್ಬರ್ಟ್ ಐನ್‌ಸ್ಟೈನ್ ? ಇವರ ಆಸಕ್ತ ಕ್ಷೇತ್ರ ಬೇರೆ. ಹೀಗಾಗಿ ನ್ಯೂಕ್ಲಿಯರ್ ಭೌತವಿಜ್ಞಾನದ ಪ್ರಚಲಿತ ಪರಿಸ್ಥಿತಿಯು ಇವರ ಪ್ರಪಂಚವನ್ನು ಹೊಕ್ಕೇ ಇರಲಿಲ್ಲ.

ಝೀಲಾರ್ಡ್ ಮತ್ತು ಅವರ ಬೆಂಬಲಿಗರು ಐನ್‌ಸ್ಟೈನರ ವ್ಯಕ್ತಿತ್ವವು ತಮ್ಮ ಯೋಜನೆಗೆ ತೂಕ ಮತ್ತು ವರ್ಚಸ್ಸು ನೀಡುವುದೆಂದು ಸಕಾರಣವಾಗಿ ತರ್ಕಿಸಿದರು. ದಕ್ಷ ಸಂಘಟನಕಾರ ಝೀಲಾರ್ಡ್ ದುಷ್ಟಜನ ಶಿಕ್ಷಾರ್ಥ ಮತಪ್ರಚಾರಕನ ನಿಷ್ಠೆಯಿಂದ ಒಡನೆ ಕಾರ್ಯೋದ್ಯುಕ್ತರಾದರು. ಐನ್‌ಸ್ಟೈನರನ್ನು ಭೇಟಿಯಾಗಿ[೨೫] ಪರಿಸ್ಥಿತಿಯ ಗಭೀರತೆಯನ್ನು ವಿವರಿಸಿದರು. ಝೀಲಾರ್ಡ್ ಟಿಪ್ಪಣಿ ಬರೆದಿದ್ದಾರೆ, "ಯುರೇನಿಯಮ್ಮಿನಲ್ಲಿ ಶೃಂಖಲಾಕ್ರಿಯೆ ಸಂಭವಿಸಬಹುದಾದ ಸಾಧ್ಯತೆಯನ್ನು ಐನ್‌ಸ್ಟೈನ್ ಯೋಚಿಸಿರಲಿಲ್ಲ. ಆದರೆ ಅದರ ಬಗ್ಗೆ ನಾನು ವಿವರಿಸಲು ತೊಡಗಿದ್ದೇ ತಡ ಭವಿಷ್ಯದಲ್ಲಿ ಪರಿಣಾಮಗಳು ಹೇಗೆ ರೂಪುಗೊಂಡಾವೆಂಬುದು ಅವರಿಗೆ ಮನವರಿಕೆ ಆದುವು. ನಮಗೆ ಬೆಂಬಲವೀಯಲು ತಾವು ಸಿದ್ಧರಿರುವುದಾಗಿ ಆಶ್ವಾಸಿಸಿದರು."

೧೯೩೯ ಆಗಸ್ಟ್ ೨ರಂದು ಐನ್‌ಸ್ಟೈನ್ 'ಪರಮಾಣುಬಾಂಬ್ ನಿರ್ಮಾಣಾರ್ಥ ಪ್ರಾರ್ಥನಾ ಪತ್ರ'ಕ್ಕೆ ರುಜುವಿಕ್ಕಿದರು. ಅಧ್ಯಕ್ಷ ರೂಸ್‌ವೆಲ್ಟರಿಗೆ ಇದನ್ನು ಉದ್ದೇಶಿಸಲಾಗಿತ್ತು :

**ಆಲ್ಬರ್ಟ್ ಐನ್‌ಸ್ಟೈನ್**
ಓಲ್ಡ್ ಗ್ರೂವ್ ರೋಡ್
ಪೆಕೋನಿಕ್, ಲಾಂಗ್ ಐಲೆಂಡ್
ಆಗಸ್ಟ್ ೨, ೧೯೩೯

**ಎಫ್. ಡಿ. ರೂಸ್‌ವೆಲ್ಟ್**
ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರು
ಶ್ವೇತಭವನ

ಮಾನ್ಯರೆ

ಇ. ಫರ್ಮಿ ಮತ್ತು ಎಲ್. ಝೀಲಾರ್ಡ್ ಇವರ ಸಂಶೋಧನೆಯ ಹಸ್ತಪ್ರತಿಯನ್ನು ನನಗೆ ಒಪ್ಪಿಸಲಾಗಿದೆ. ಇದರ ಪ್ರಕಾರ ಸನ್ನಿಕಟ ಭವಿಷ್ಯದಲ್ಲೇ ಯುರೇನಿಯಮ್ ಧಾತುವನ್ನು ಶಕ್ತಿಯ ನೂತನ ಮತ್ತು ಪ್ರಮುಖ

ಆಕರವಾಗಿ ಮಾರ್ಪಡಿಸುವುದು ಕೈಗೂಡೀತೆಂದು ನಿರೀಕ್ಷಿಸಬಹುದಾಗಿದೆ. ಈ ಸನ್ನಿವೇಶದ ಕೆಲವೊಂದು ಮುಖಗಳನ್ನು ಜಾಗರೂಕತೆಯಿಂದ ಪರಿಶೀಲಿಸುವುದೂ, ಮತ್ತು ಅವಶ್ಯವೆಂದು ತೋರಿದರೆ, ಈ ದಿಶೆಯಲ್ಲಿ ಆಡಳಿತ ವಿಭಾಗ ಒಡನೆ ಕಾರ್ಯೋದ್ಯುಕ್ತವಾಗುವುದೂ ಅಗತ್ಯವೆಂದು ಅನ್ನಿಸುತ್ತದೆ. ಆದ್ದರಿಂದ ಮುಂದೆ ಕಾಣಿಸಿರುವ ವಾಸ್ತವಾಂಶಗಳನ್ನೂ ಶಿಫಾರಸುಗಳನ್ನೂ ನಿಮ್ಮ ಗಮನಕ್ಕೆ ತರುವುದು ಅಗತ್ಯವೆಂದು ಭಾವಿಸಿದ್ದೇನೆ.

ಯುರೇನಿಯಮ್ಮಿನ ಭಾರೀ ಒಂದು ರಾಶಿಯಲ್ಲಿ ನ್ಯೂಕ್ಲಿಯರ್ ಕ್ರಿಯೆಗಳನ್ನು ಪ್ರವರ್ತಿಸುವುದು ಸಾಧ್ಯವಾಗಬಹುದು, ಮತ್ತು ಆ ಕ್ರಿಯೆಗಳಿಂದ ಭೂರಿ ಮೊತ್ತದ ಸಾಮರ್ಥ್ಯವೂ ರೇಡಿಯಮ್ಸದೃಶ ಧಾತುಗಳೂ ಸಂಜನಿಸಬಹುದು ಎಂಬ ಅಂಶ, ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ, ಫ್ರಾನ್ಸಿನಲ್ಲಿ ಜೂಲಿಯೋ, ಅಂತೆಯೇ ಅಮೆರಿಕದಲ್ಲಿ ಫರ್ಮಿ ಮತ್ತು ಝೀಲಾರ್ಡ್ ಇವರುಗಳು ಮಾಡಿರುವ ಕಾರ್ಯದಿಂದ ಸಂಭಾವ್ಯವಾಗಿದೆ. ಸದ್ಯೋ ಭವಿಷ್ಯದಲ್ಲಿ ಇದು ಸಿದ್ಧಿಸುವುದು ಖಾತ್ರಿ ಎಂದು ಈಗ ತಿಳಿದುಬರುತ್ತಿದೆ.

ಈ ಹೊಸ ವಿದ್ಯಮಾನವು ಬಾಂಬುಗಳ ನಿರ್ಮಾಣಕ್ಕೆ ಕೂಡ ಕಾರಣವಾಗಬಹುದು; ಮತ್ತು ಹೊಸ ಮಾದರಿಯ ಅತಿ ಸಾಮರ್ಥ್ಯಯುತ ಬಾಂಬುಗಳು ಈ ತೆರನಾಗಿ ನಿರ್ಮಿಸಲ್ಪಡುವುದನ್ನು—ಖಾತ್ರಿ ಹೀಗೆಯೇ ಆದೀತೆಂದು ಹೇಳಲಾಗದಿದ್ದರೂ—ನಾವು ಕಲ್ಪಿಸಿಕೊಳ್ಳಬಹುದು. ದೋಣಿಯಲ್ಲಿ ಒಯ್ದು ರೇವಿನಲ್ಲಿ ಸ್ಫೋಟಿಸಬಹುದಾದ ಈ ಮಾದರಿಯ ಕೇವಲ ಒಂದು ಬಾಂಬ್, ಆಸುಪಾಸಿನ ಒಂದಿಷ್ಟು ಪ್ರದೇಶವನ್ನೂ ಒಳಗೊಂಡಂತೆ ಇಡೀ ರೇವನ್ನೇ ನಾಶಗೊಳಿಸುವುದು ಸಾಧ್ಯವಿದೆ. ವಾಯುಸಾಗಣೆಗೆ ಇಂಥ ಬಾಂಬುಗಳು ಅತಿಭಾರದವೆನಿಸಬಹುದು.

ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಕೆಳದರ್ಜೆಯ ಯುರೇನಿಯಮ್ ಅದುರು ಮಿತಪ್ರಮಾಣದಲ್ಲಿ ಮಾತ್ರ ಲಭ್ಯವಿದೆ. ಕೆನಡದಲ್ಲಿಯೂ ಮೊದಲಿನ ಚೆಕೊಸ್ಲೊವಾಕಿಯಾದಲ್ಲಿಯೂ ಒಂದಿಷ್ಟು ಒಳ್ಳೆಯ ಅದುರುಂಟು. ಬೆಲ್ಜಿಯನ್ ಕಾಂಗೋವೇ ಯುರೇನಿಯಮ್ಮಿನ ಅತಿ ಪ್ರಮುಖ ಆಕರ.

ಸನ್ನಿವೇಶ ಹೀಗಿರುವಾಗ ಆಡಳಿತವಿಭಾಗಕ್ಕೂ ಅಮೆರಿಕದಲ್ಲಿ ಶೃಂಖಲಾಕ್ರಿಯೆ ಮೇಲೆ ಕಾರ್ಯವೆಸಗುತ್ತಿರುವ ಭೌತವಿಜ್ಞಾನಿಗಳ ತಂಡಕ್ಕೂ ನಡುವೆ ಒಂದು ವಿಧವಾದ ಶಾಶ್ವತ ಸಂಪರ್ಕ ಏರ್ಪಡಿಸುವುದರ ಬಗ್ಗೆ ನೀವು ಯೋಚಿಸಬಹುದೆಂದು ತೋರುತ್ತದೆ. ನಿಮ್ಮ ವಿಶ್ವಾಸಕ್ಕೆ ಪಾತ್ರನಾಗಿರುವ ಒಬ್ಬ ವ್ಯಕ್ತಿಗೆ ಈ ಹೊಣೆಯನ್ನು ವಹಿಸಿಕೊಡುವುದು ಇದನ್ನು ಸಾಧಿಸಬಹುದಾದ ಒಂದು ಮಾರ್ಗ. ಪ್ರಾಯಶಃ ಈತ ಖಾಸಗಿ ಅಧಿಕಾರಿಯಾಗಿ ವ್ಯವಹರಿಸಬೇಕಾದೀತು. ಈತನ ಹೊಣೆ ಈ ಮುಂದಿನವನ್ನು ಒಳಗೊಂಡಿರಬಹುದು:

೧. ಸರ್ಕಾರದ ಇಲಾಖೆಗಳೊಡನೆ ಸಂಪರ್ಕವಿರಿಸಿಕೊಳ್ಳುವುದು, ಮುಂದಿನ ಅಭಿವರ್ಧನೆಗಳನ್ನು ಕುರಿತ ಮಾಹಿತಿಯನ್ನು ಅವುಗಳಿಗೆ ಒದಗಿಸುವುದು, ಮತ್ತು ಸಂಯುಕ್ತ ಸಂಸ್ಥಾನಗಳು ಯುರೇನಿಯಮ್ ಅದುರಿನ ಸರಬರಾಜನ್ನು ಪಡೆಯುವ ಸಮಸ್ಯೆಯನ್ನು ಕುರಿತು ನಿರ್ದಿಷ್ಟ ಲಕ್ಷ್ಯ ಹರಿಸಿ ಯುಕ್ತ ಕಾರ್ಯವೆಸಗಲು ಸರ್ಕಾರಕ್ಕೆ ಶಿಫಾರಸುಗಳನ್ನು ಒಪ್ಪಿಸುವುದು.

೨. ಸದ್ಯದಲ್ಲಿ ವಿಶ್ವವಿದ್ಯಾಲಯಗಳ ಪ್ರಯೋಗಾಲಯಗಳಿಗೆ ಮೀಸಲಿಟ್ಟಿರುವ ಮೊಬಲಗಿನ ಮಿತಿಯೊಳಗೆ ನಿರ್ವಹಿಸಲಾಗುತ್ತಿರುವ ಪ್ರಾಯೋಗಿಕ ಕಾರ್ಯವನ್ನು, ಅವಶ್ಯವೆನ್ನಿಸಿದರೆ ಹೆಚ್ಚಿನ ಮೊಬಲಗನ್ನು ಒದಗಿಸುತ್ತ, ಮತ್ತು ಪ್ರಾಯಶಃ ಅಗತ್ಯ ಸಲಕರಣೆಗಳಿರುವ ಕೈಗಾರಿಕಾ ಪ್ರಯೋಗಾಲಯಗಳ ಸಹಕಾರವನ್ನು ಸ್ವಾಗತಿಸುತ್ತ, ತ್ವರೆಗೊಳಿಸುವುದು. ಹೆಚ್ಚಿಗೆ ಬೇಕಾಗುವ ಮೊಬಲಗನ್ನು ಈತ, ಇಂಥ ಕಾರ್ಯಗಳಿಗೆ ನೆರವು ನೀಡಲು ಸಿದ್ಧರಾಗಿರುವ ಖಾಸಗಿ ವ್ಯಕ್ತಿಗಳನ್ನು ಸಂಪರ್ಕಿಸಿ ಪಡೆಯಬಹುದು.

ಈಗ ಜರ್ಮನಿ ವಶಪಡಿಸಿಕೊಂಡಿರುವ ಚೆಕೊಸ್ಲೊವಾಕಿಯಾದ ಗಣಿಗಳಿಂದ ಅದು ಯುರೇನಿಯಮ್ ವಿಕ್ರಯವನ್ನು ರದ್ದುಗೊಳಿಸಿದೆಯೆಂಬುದು ನನ್ನ ಗಮನಕ್ಕೆ ಬಂದಿದೆ. ಜರ್ಮನ್ ಅಂಡರ್‌ಸೆಕ್ರೆಟರಿ ಆಫ್ ಸ್ಟೇಟ್ ಇವರ ಮಗ ಫಾನ್ ವೈಟ್‌ಸೇಕರ್ ಬರ್ಲಿನ್ನಿನ ಕೈಸರ್ ವಿಲ್‌ಹೆಲ್ಮ್ ಇನ್‌ಸ್ಟಿಟ್ಯೂಟಿಗೆ ಲಗತ್ತಾಗಿರುವುದರ, ಮತ್ತು ಯುರೇನಿಯಮ್ಮಿನ ಮೇಲೆ ಅಮೆರಿಕ ನಡೆಸುತ್ತಿರುವ ಕೆಲವೊಂದು ಪ್ರಯೋಗಗಳು ಅಲ್ಲಿ

ಪುನರಾವರ್ತಿಸಲಾಗುತ್ತಿರುವುದರ ಮುನ್ನೆಲೆಯಲ್ಲಿ ಜರ್ಮನಿ ಇಷ್ಟೊಂದು ಕ್ಷಿಪ್ರವಾಗಿ ಕಾರ್ಯಪ್ರವೃತ್ತವಾಗಿರುವುದೇಕೆಂಬುದನ್ನು ಅರ್ಥವಿಸುವುದು ಸಾಧ್ಯವಿದೆ.

ನಿಮ್ಮ ವಿಶ್ವಾಸಿ
ಎ. ಐನ್‌ಸ್ಟೈನ್

ಪತ್ರಲೇಖಕ ಸಾಕ್ಷಾತ್ ಐನ್‌ಸ್ಟೈನರೇ ಆಗಿದ್ದರೂ, ಇದು ಸರ್ಕಾರದ ನೀತಿ ಧೋರಣೆಗಳ ಮೇಲೆ ಗಹನ ಪರಿಣಾಮ ಬೀರಬಲ್ಲುದಾದ್ದರಿಂದ, ಇದನ್ನು ಅಧ್ಯಕ್ಷರ 'ಕಿವಿ ಮೇಲೆ ಹತೋಟಿ ಇರುವ' ಮಿತ್ರನೊಬ್ಬ ಯೋಗ್ಯ ಮುಹೂರ್ತದಲ್ಲಿ ಅವರ ಗಮನಕ್ಕೆ ತರುವುದು ಅಗತ್ಯವಾಗಿತ್ತು. ಹೀಗೆ ಮಾಡದಿದ್ದರೆ ಐನ್‌ಸ್ಟೈನರ ರುಜುನೋಡಿದ ಅಧ್ಯಕ್ಷರು, ಪ್ರಾಯಶಃ, ಕೆಂಪುಶಾಯಿಯಲ್ಲಿ "$x$ ಇಲಾಖೆಯ ತುರ್ತು ಗಮನಕ್ಕೆ" ಎಂಬ ಷರಾ ಗೀಚಿ ಇಡೀ ವಿಷಯವನ್ನೇ ಮರೆತುಬಿಡುವ ಅಪಾಯವಿತ್ತು. ಅಲ್ಲದೇ ಐನ್‌ಸ್ಟೈನ್-ಪತ್ರ ಕೆಲವೊಂದು ವಿಶಾಲ ತತ್ತ್ವಗಳನ್ನು ಉಲ್ಲೇಖಿಸಿತ್ತೇ ವಿನಾ ವಿವರಗಳನ್ನು ಒಳಗೊಂಡಿರಲಿಲ್ಲ.

ಇವೆರಡು ಅಡಚಣೆಗಳನ್ನು ಅಡ್ಡಹಾಯಲು ಝೀಲಾರ್ಡ್ ಮತ್ತೆ ಕಾರ್ಯೋದ್ಯುಕ್ತರಾದರು. ಐನ್‌ಸ್ಟೈನ್-ಪತ್ರಕ್ಕೆ ಸುದೀರ್ಘ ವಿವರಣಾತ್ಮಕ ಪರಿಪತ್ರ ಲಗತ್ತಿಸಿದರು. ಎರಡನೆಯ ಅಡಚಣೆ ಈ ತೆರನಾಗಿ ನಿವಾರಣೆಯಾಯಿತು. ಮೊದಲನೆಯದು ?

ಅಧ್ಯಕ್ಷರ 'ಕರ್ಣರಕ್ಷಕ' ಅಥವಾ 'ಕರ್ಣನ್ಯಾಸಧಾರಿ' ಅಲೆಕ್ಸಾಂಡರ್ ಸ್ಯಾಕ್ಸ್ (೧೮೯೩-೧೯೭೩) ಎಂಬ ರಹಸ್ಯವನ್ನು 'ಸಂಶೋಧಿಸಿದರು.' ಇವರು ಸರ್ಕಾರದ ಅಧಿಕಾರಿ ಅಲ್ಲ, ಎಂದೇ ರೂಸ್‌ವೆಲ್ಟರ ಆಪ್ತ ಬಳಗದವರು. ಬ್ಯಾಂಕರ್ ಮತ್ತು ವಿದ್ವಾಂಸ ಆಗಿದ್ದ ಸ್ಯಾಕ್ಸ್, ಅಧ್ಯಕ್ಷರ ಅತ್ಯಂತ ಪ್ರಭಾವಶಾಲಿ ಖಾಸಗಿ ಸಲಹೆಗಾರರ ಪೈಕಿ ಒಬ್ಬರಾಗಿದ್ದರು.

ಇಷ್ಟೆಲ್ಲ ಸನ್ನಾಹಗಳಾಗುವ ವೇಳೆಗೆ ೧೯೩೯ ಸೆಪ್ಟೆಂಬರ್ ೧ ಬಂದಿತ್ತು. ಹಿಟ್ಲರ್ ಪೋಲೆಂಡಿನ ಮೇಲೆ ದಂಡು ಹಾಯಿಸಿ ಎರಡನೆಯ ಮಹಾಯುದ್ಧವನ್ನು ಸಾರಿಯೇ ಬಿಟ್ಟಿದ್ದ. ಪ್ರಪಂಚವಿಡೀ ಯುದ್ಧಕಂಪನದಿಂದ ತತ್ತರಿಸಿಹೋಯಿತು. ರೂಸ್‌ವೆಲ್ಟ್ ವಿರಾಮರಹಿತರಾಗಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ವ್ಯವಹರಿಸಬೇಕಾಯಿತು.

ಸ್ಯಾಕ್ಸರಿಗೆ ಅನುಕೂಲ ಮುಹೂರ್ತ ಒದಗಿ ಬಂದದ್ದು ಅಕ್ಟೋಬರ್ ೧೧ರಂದು. ಅಧ್ಯಕ್ಷರಿಗೆ ಅಂದು ಕೊಂಚ ವಿರಾಮವಿತ್ತು. ಪರಿಸ್ಥಿತಿಯ ಗಹನತೆಯನ್ನು ರೂಸ್‌ವೆಲ್ಟರಿಗೆ ಚೆನ್ನಾಗಿ ಮಂದಟ್ಟು ಮಾಡಲೋಸ್ಕರ ಸ್ಯಾಕ್ಸ್ ತಾವೇ ದಾಖಲೆಗಳನ್ನು ಓದಿ ಹೇಳತೊಡಗಿದರು : ಮೊದಲು ಐನ್‌ಸ್ಟೈನ್ ಪತ್ರ, ಬಳಿಕ ಝೀಲಾರ್ಡ್ ಪರಿಪತ್ರ, ಕೊನೆಗೆ ಸ್ವಂತ ಸುದೀರ್ಘ ವಿವರಣೆ. ಈ ಅವ್ಯಾಹತ ವಾಗ್ಝರಿಯನ್ನು ಅಧ್ಯಕ್ಷರು ಉತ್ಸಾಹದಿಂದ ಸ್ವೀಕರಿಸಲಿಲ್ಲ. ಅವರಿಗೆ ಬಿಡಿಚಲು ಬಡಿದದ್ದು ಸ್ಪಷ್ಟವಾಗಿತ್ತು, "ವಿಷಯ ತುಂಬ ಕುತೂಹಲಕಾರಿಯಾಗಿದೆ. ಆದರೆ ಸರ್ಕಾರ ಹಸ್ತಕ್ಷೇಪ ಮಾಡಲು ಕಾಲವಿನ್ನೂ ಪಕ್ವವಾಗಿಲ್ಲ," ಎಂದು ಹೇಳಿ ಎದ್ದರು.

ಬರೆಯಂಚಿನಿಂದ ದರೆಗೆ ಕೆಡೆದಂತಾದರು ಸ್ಯಾಕ್ಸ್. ಅಧ್ಯಕ್ಷರೊಡನೆ ಇವರು ಕೂಡ ಏಳಬೇಕಾಯಿತು. ಆದರೆ ಮರುಹೊತ್ತಾರೆಯ ನಾಷ್ಟಾಕ್ಕೆ ಕರೆ ಗಿಟ್ಟಿಸಿಕೊಳ್ಳುವ ಮೊದಲು ಅಲ್ಲಿಂದ ಕಂಬಿ ಕೀಳಲಿಲ್ಲ.

ಮರುಮುಂಜಾನೆ ಅಧ್ಯಕ್ಷರನ್ನು ಪಳಗಿಸಿ ಒಲಿಸುವುದು ಹೇಗೆ ? ಸಮಸ್ಯೆಯ ತೀವ್ರತೆ ಅವರಿಗೆ ತಟ್ಟುವಂತೆ ವಿವರಿಸುವುದು ಹೇಗೆ ? ಸ್ಯಾಕ್ಸ್ ರಾತ್ರಿ ಇಡೀ ಚಿಂತಿಸಿದರು. ಹೂದೋಟದಲ್ಲಿ ಶತಪಥ ಅಡ್ಡಾಡಿದರು. ಅರಿಲುಗಳ ಅಡಿಯಲ್ಲಿ ಕಲ್ಲುಬೆಂಚಿನ ಮೇಲೆ ಕುಳಿತು ಮಾನವ

ಜನಾಂಗದ ಭವಿಷ್ಯದ ಬಗ್ಗೆ ಗಾಢ ಯೋಚನಾಮಗ್ನರಾದರು:

ಗುಡಿಕತ್ತಲೆಯೊಳು ಹಣತೆಗಳೆಸೆದಿವೆ
ತಮವೇ ಪುಷ್ಪಿತವಾದಂತೆ

ಪುತಿನ

ಹಠಾತ್ತಾಗಿ ಸ್ಫೂರ್ತಿ ಉಕ್ಕಿತು. ಹೊಸ ಹಾದಿ ಹೊಳೆಯಿತು. ಹಗುರಾದ ಒಡಲಿನಿಂದ ಮೇಲೆದ್ದರು.

ಚಿಂತಾಕ್ರಾಂತ ರೂಸ್‌ವೆಲ್ಟ್ ಉಪಾಹಾರ ಮೇಜದ ಎದುರು ಒಬ್ಬಂಟಿಗರಾಗಿ ಕುಳಿತಿದ್ದಾರೆ. ಅವರಿಗೆ ಶುಭ ಪ್ರಾತಃಕಾಲವನ್ನು ಕೋರುತ್ತ ಸ್ಯಾಕ್ಸ್ ಒಳಪ್ರವೇಶಿಸಿದ್ದಾರೆ.

ಅಧ್ಯಕ್ಷ, "ಈ ಶುಭ ಪ್ರಾತಃಕಾಲ ಹೊಸ ಉಜ್ಜ್ವಲ ಭಾವನೆ ಏನನ್ನು ಹೊತ್ತು ತಂದಿದ್ದೀರಿ? ಅದನ್ನು ಮಂಡಿಸಿ ವಿವರಿಸಲು ಕಾಲಾವಕಾಶವೆಷ್ಟು ಬೇಕಾದೀತು ?" ನುಡಿಯ ಕೊಂಕು ಸ್ಯಾಕ್ಸರನ್ನು ಕುಟುಕದಿರಲಿಲ್ಲ.

ಸ್ಯಾಕ್ಸ್, "ನಾನೇನೂ ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ಆದರೆ ನಿಮಗೊಂದು ಕತೆ ಹೇಳಬೇಕೆಂಬುದು ನನ್ನಾಸೆ. ನೆಪೋಲಿಯನ್ [೧೭೬೯-೧೮೨೧] ಹೂಡಿದ ಹಿರಿಕಾಳಗದ ದಿನಗಳು. ಅಮೆರಿಕದ ಉಪಜ್ಞೆಕಾರ ಮತ್ತು ಎಂಜಿನಿಯರ್ ರಾಬರ್ಟ್ ಫಲ್ಟನ್‌ನು [೧೭೬೫-೧೮೧೫] ಚಕ್ರವರ್ತಿ ಮಹಾಪ್ರತಾಪನ ಭೇಟಿ ಕೋರಿ ಪಡೆದ. ತಾನು ಚಕ್ರವರ್ತಿಗೆ ಉಗಿ ಹಡಗು ಪಡೆಯೊಂದನ್ನು ಕಟ್ಟಿ ಕೊಡುವುದಾಗಿಯೂ ಅದರ ನೆರವಿನಿಂದ ನೆಪೋಲಿಯನ್ ಎಂಥ ಪ್ರತಿಕೂಲ ಹವೆಯಲ್ಲಿ ಕೂಡ ಯಶಸ್ವಿಯಾಗಿ ಸಮುದ್ರಯಾನ ಮಾಡಿ ಇಂಗ್ಲೆಂಡಿನಲ್ಲಿ ಲಂಗರು ಹೂಡಬಹುದೆಂಬುದಾಗಿಯೂ ನಿವೇದಿಸಿದ. ಹಾಯಿಪಟಗಳಿಲ್ಲದ ಹಡಗುಗಳು ? ಎಲ್ಲಾದರೂ ಉಂಟೇ ! ಚಾಣಾಕ್ಷ ಮಹಾಪ್ರಭುವಿಗೆ ಇದೊಂದು ಹುಚ್ಚು ಯೋಜನೆಯೆಂದು ಖಚಿತವಾಗಿತ್ತು. ಫಲ್ಟನ್ನನ್ನು ಪುರಸ್ಕರಿಸದೆ ಹಿಂದೆ ಕಳಿಸಿದ. ವಿರೋಧಿಯ ಅದೂರದರ್ಶಿತ್ವ ಹೇಗೆ ಇಂಗ್ಲೆಂಡನ್ನು ಕಾಪಾಡಿತು ಎನ್ನುವುದಕ್ಕೆ ಇದೊಂದು ನಿದರ್ಶನವೆಂದು ಇಂಗ್ಲೆಂಡಿನ ಇತಿಹಾಸಕಾರ ಲಾರ್ಡ್ ಆ್ಯಕ್ಟನ್ [೧೮೩೪-೧೯೦೨] ಅಭಿಪ್ರಾಯಪಟ್ಟಿದ್ದಾರೆ. ಅಂದು ನೆಪೋಲಿಯನ್ ಏನಾದರೂ ಅಧಿಕ ಕಲ್ಪನಾಸಾಮರ್ಥ್ಯವನ್ನೂ ವಿನಯಸೌಜನ್ಯವನ್ನೂ ಪ್ರದರ್ಶಿಸಿದುದಾಗಿದ್ದರೆ ಹತ್ತೊಂಬತ್ತನೆಯ ಶತಮಾನದ ಚರಿತ್ರೆ ಪೂರ್ತಿ ಭಿನ್ನಮಾರ್ಗಗಾಮಿಯಾಗಿರುತ್ತಿತ್ತು."

ಸ್ಯಾಕ್ಸರ ವಾದವೈಖರಿಯು ಲಗಾಯಿಸಿದ ಚಬಕಿನ ಚುರುಕು ರೂಸ್‌ವೆಲ್ಟರನ್ನು ಒಡನೆ ಚುಚ್ಚಿತು. ಕೆಲವು ಕ್ಷಣ ನೀರವ ನಿಷ್ಪಂದ. ಚೂರು ಕಾಗದ ಎತ್ತಿಕೊಂಡರು. ಅದರ ಮೇಲೇನೋ ಗೀಚಿ ಆಳಿನ ಕೈಗಿತ್ತರು. ಆತ ಒಡನೆ ಹೊರನಡೆದ. ಭಯಭಕ್ತಿಸಹಿತ ದೊಡ್ಡದೊಂದು ಭಾಂಡ ಹೊತ್ತು ತಂದ. ಮೇಜದ ಮೇಲಿಟ್ಟ. ಸಾವಕಾಶವಾಗಿಯೂ ಮೃದುವಾಗಿಯೂ ಅದನ್ನು ಬಿಚ್ಚತೊಡಗಿದ. ಅದರ ಒಳಗೇನಿತ್ತು ? ಅನಾದಿಕಾಲದ ಅಮೂಲ್ಯ ಅಮೃತ ! ನೆಪೋಲಿಯನ್ ಯುಗದ ಶೀತಲ ಫ್ರೆಂಚ್ ಬ್ರ್ಯಾಂಡಿ. (ಹಳೆಯ ಬ್ರ್ಯಾಂಡಿಗೆ ಅಧಿಕ 'ಕಿಕ್ಕು.') ಅಧ್ಯಕ್ಷರ ಕೈಕರಣ ಸೂಚನೆ. ಆಳು ಎರಡು ಚಷಕ ಭರ್ತಿ ಮಾಡಿದ. ಇತಿಹಾಸನಿರ್ಮಾಪಕ ಪುರುಷರು ಬಟ್ಟಲುಗಳನ್ನೆತ್ತಿದರು. ಕರಚಾಚಿದರು, ಕ್ಲಿಕ್ಕಿಸಿದರು, ಉತ್ಸಾಹದಾಯಕ ಮಾರ್ಗದರ್ಶಕ ಅಮೃತಪಾನೋದ್ಯುಕ್ತರಾದರು.

ಅಧ್ಯಕ್ಷರೇ ಮೌನ ಮುರಿದರು. "ಅಲೆಕ್ಸ್! ನಾಟ್ಸಿಗಳು ನಮ್ಮನ್ನು ಸರ್ವನಾಶಗೊಳಿಸತಕ್ಕದಲ್ಲವೆಂಬುದು ತಾನೇ ನಿಮ್ಮ ಚಿಂತೆ ?"

"ಅದೇ."

ಅಧ್ಯಕ್ಷರು ತಮ್ಮ ಸೇನಾಸಲಹೆಗಾರ ಜನರಲ್ ಪಾ ವಾಟ್ಸನ್ ಅವರನ್ನು ಬುಲಾಯಿಸಿದರು. ಜನರಲ್ ಬಂದರು. ಅರ್ಥನೆ ನಿಂತರು. ಮಿಂಚು ಸೀಳಿದಂತೆ ಸಲಾಮು ಹೊಡೆದರು. ಅಪ್ಪಣೆ ಕಾದರು.

ಅಧ್ಯಕ್ಷ, "ಪಾ ! ಇದು ಕ್ರಿಯೆ ಬೇಡುತ್ತದೆ."

'ಇದು' ಸ್ಯಾಕ್ಸ್ ಒಪ್ಪಿಸಿದ ಐನ್‌ಸ್ಟೈನ್-ಪತ್ರವನ್ನೂ ಒಳಗೊಂಡಿದ್ದ ದಾಖಲೆಗಳು. ಪರ ಮಾಣುಬಾಂಬ್ ನಿರ್ಮಾಣಕ್ಕೆ ಅಸ್ತು ಮುದ್ರೆ ಒತ್ತಿದ ಬೀಜ ಮಂತ್ರ : ಪಾ ! ಇದು ಕ್ರಿಯೆ ಬೇಡುತ್ತದೆ.

ಕುಡಿದವನ ನಾಲಗೆಯ ತುದಿಯಲಿ ಸರಸತಿ
ನಲಿವಳು ; ಮಾತಿನಲಿ ವೇದಾಂತ ತುಂಬಿ
ತುಳುಕುವುದು.
ಬ್ರಹ್ಮನ ಬಾಯಿಂದ ವೇದಗಳು ಹೊರಬಿದ್ದುದು
ಆತ ಕುಡಿದಾಗ ಇರಬೇಕಲ್ಲವೆ, ಮಹಾಪ್ರಭು ?

ಎನ್. ಪ್ರಹ್ಲಾದರಾವ್

ಪರಮಾಣುಬಾಂಬಿಗೆ ಸಂಬಂಧಿಸಿದ ಪತ್ರಕ್ಕೆ ರುಜುವಿಕ್ಕಿದ ತರುವಾಯ ಐನ್‌ಸ್ಟೈನ್ ತೀವ್ರ ಪಶ್ಚಾತ್ತಾಪದಗ್ಧರಾದರು. ಅಮೆರಿಕ ಸರ್ಕಾರ ನ್ಯೂಕ್ಲಿಯರ್‌ವಿದಲನ ಕ್ರಿಯೆಯನ್ನು ಯುದ್ಧಾಸ್ತ್ರ ದಲ್ಲಿ ಬಳಸಬಾರದೆಂದು ಬಹುವಾಗಿ ಆಶಿಸಿದರು. ಬಳಸಲೇಬೇಕಾಗಿ ಬಂದರೆ ಅದು ಕೇವಲ ಆತ್ಮರಕ್ಷಕ ಗುರಾಣಿಯಾಗಿಯೇ ಹೊರತು ಶತ್ರುದಂಡಕ ಅಸ್ತ್ರವಾಗಿ ಅಲ್ಲವೆಂದು ಅಪೇಕ್ಷಿಸಿದರು. ಆದರೆ ಆದರ್ಶವಾದಿಗಳ ಹಗಲುಗನಸುಗಳಿಗೆ ರಾಜಕಾರಣಿಗಳ ನಿಘಂಟಿನಲ್ಲಿ ಸ್ಥಾನವೇ ಇಲ್ಲ. ಇತಿಹಾಸ ಹಿಡಿದ ಜಾಡು ಬೇರೆಯೇ ಆಗಿತ್ತು.

ಐನ್‌ಸ್ಟೈನ್ ಮುಂದೇನು ಮಾಡಬಹುದಾಗಿತ್ತು? ಪರಮಾಣುಬಾಂಬ್ ನಿರ್ಮಾಣ ಯೋಜನೆ ಯನ್ನು ಕುರಿತಂತೆ ಪೂರ್ಣ ಅಸಹಕಾರ ಪ್ರದರ್ಶನ; ಮತ್ತು ಸಾಂಪ್ರದಾಯಿಕ ಯುದ್ಧಾಚರಣೆ ಗಳಿಗೆ ಬೆಂಬಲ ನೀಡುವುದರ ಮೂಲಕ ಆದಷ್ಟು ಶೀಘ್ರವಾಗಿ ಶಾಂತಿ ಸ್ಥಾಪನೆಗೆ ಪ್ರಯತ್ನ. ಬಾಂಬ್ ಯೋಜನೆಗೆ ಸಂಬಂಧಿಸಿದ ಸಮಿತಿಗಳಿಗೆ ಐನ್‌ಸ್ಟೈನ್ ಹೋಗಲಿಲ್ಲ. ಅವುಗಳಿಗೆ ತಮ್ಮ ಹೆಸರನ್ನು ನೀಡಲು ನಿರಾಕರಿಸಿದರು.

ಸಾಂಪ್ರದಾಯಿಕ ವಿಧಾನಗಳಿಂದ ಯುದ್ಧ ಬೇಗನೆ ಮುಗಿದುದಾದರೆ ಪರಮಾಣುಬಾಂಬಿನ ತಯಾರಿಕೆ ಸ್ಥಗಿತಗೊಂಡೀತು. ಅಥವಾ ಕನಿಷ್ಠಪಕ್ಷ ಬಾಂಬಿನ ಪ್ರಯೋಗವಾದರೂ ಅನಾವಶ್ಯಕ ವಾದೀತು. ಆದ್ದರಿಂದ ಮಾನವಜನಾಂಗ ಅಜ್ಞಾತ ಭೀಕರತೆಯ ಹಠಾತ್ ತಾಡನೆಯಿಂದ ಪಾರಾ ದೀತು ಎಂಬುದಾಗಿ ಐನ್‌ಸ್ಟೈನ್ ಭಾವಿಸಿದರು. ಈ ದಿಶೆಯಲ್ಲಿ ಇವರು ಅಮೆರಿಕದ ನೌಕಾಪಡೆಗೆ ಗೌರವ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದುಂಟು.

ಯುದ್ಧ ನಿಧಿ ಸಂಗ್ರಹಕ್ಕೋಸ್ಕರ ೧೯೪೩ ನವಂಬರ್ ತಿಂಗಳಿನಲ್ಲಿ ಒಂದು ರ್‍ಯಾಲಿಯನ್ನು ಏರ್ಪಡಿಸಲಾಗಿತ್ತು. ಸಂಘಟನಕಾರರು ಐನ್‌ಸ್ಟೈನರನ್ನು ಇವರ ಎರಡು ನಿರ್ದಿಷ್ಟ ಸಂಶೋಧನ ಪ್ರಬಂಧಗಳ ಹಸ್ತಪ್ರತಿಗಳನ್ನು ತಮಗೆ ದಾನವೀಯಬೇಕೆಂದು ಪ್ರಾರ್ಥಿಸಿದರು. ಇವನ್ನು ಹರಾಜು ಹಾಕಿ ನಿಧಿಗೆ ಹಣ ಕೂಡಿಸುವುದು ಅವರ ಹಂಚಿಕೆ. ಅವರು ಯಾಚಿಸಿದ ಮೊದಲ ಹಸ್ತಪ್ರತಿ ೧೯೦೫ರ ಪ್ರಸಿದ್ಧ ಸಾಪೇಕ್ಷತಾಸಿದ್ಧಾಂತದ್ದು. ಆಗ (೧೯೦೫) ಐನ್‌ಸ್ಟೈನ್ ಬರ್ನ್ ನಗರದಲ್ಲಿ ದ್ದರು. ಆ ಪ್ರಬಂಧ ಮುದ್ರಣವಾದ ಬಳಿಕ ಹಸ್ತಪ್ರತಿಯನ್ನು ಎಸೆದುಬಿಟ್ಟಿದ್ದರು. ಈಗೇನು

ಮಾಡುವುದು? ಚಿಂತೆ ಇಲ್ಲ. ತಾನು ಸ್ವಹಸ್ತದಿಂದ ಅದೇ ಪ್ರಬಂಧದ ನಕಲು ತಯಾರಿಸಿ ಕೊಡುವುದಾಗಿ ಆಶ್ವಾಸಿಸಿದರು. ಸರಿ, ನಕಲು ಯಂತ್ರ (ನಕಲಿ ಯಂತ್ರ ಅಲ್ಲ !) ಚಾಲೂ ಆಯಿತು: ಕಾರ್ಯದರ್ಶಿ ಮುದ್ರಿತ ಪ್ರಬಂಧವನ್ನು ಓದಿ ಹೇಳುವುದು, ಐನ್‌ಸ್ಟೈನ್ ಲೆಕ್ಕಣಿ ಹಿಡಿದು ಅದನ್ನು ವಿದ್ಯಾರ್ಥಿಯ ವಿಧೇಯತೆಯಿಂದ ಬರೆಯುವುದು !

ಯಾವುದೋ ಒಂದು ಘಟ್ಟದಲ್ಲಿ ಐನ್‌ಸ್ಟೈನ್ ಸ್ವಲ್ಪ ಚಕಿತರಾಗಿ ಬರವಣಿಗೆ ನಿಲ್ಲಿಸಿ ಮೇಲೆ ನೋಡಿದರು, "ನಾನು ಹಾಗೆ ಹೇಳಿದ್ದೇನೆಯೇ ?"

"ಹೌದು ಪ್ರೊಫೆಸರ್ ! ಇಲ್ಲಿ ಹಾಗೆಯೇ ಇದೆ."

"ಛೇ ! ನಾನದನ್ನು ಇನ್ನಷ್ಟು ಸರಳವಾಗಿ ಹೇಳಬಹುದಿತ್ತು."

೧೯೪೪ ಫೆಬ್ರುವರಿ ೩ರಂದು ಈ ಹಸ್ತಪ್ರತಿಯನ್ನು ಕಾನ್ಸಾಸ್ ನಗರದಲ್ಲಿ ಲಿಲಾವು ಹಾಕಿದರು. ದೊರೆತ ಮೊಬಲಗು ಅರುವತ್ತು ಲಕ್ಷ ಡಾಲರುಗಳು. ಪ್ರಕಟಣೆಯ ಹಂತದಲ್ಲಿದ್ದ ಒಂದು ಪ್ರಬಂಧದ ಹಸ್ತಪ್ರತಿಯನ್ನು ಏಲಂ ಮಾಡಿದಾಗ ಅದು ಐವತ್ತೈದು ಲಕ್ಷ ಡಾಲರುಗಳನ್ನು ಸಂಪಾದಿಸಿಕೊಟ್ಟಿತು.

ಆಹವಾಗ್ನಿ ಸರ್ವಗ್ರಾಹ್ಯವಾಗಿ ವ್ಯಾಪಿಸುತ್ತಲೇ ಇತ್ತು. ಇತ್ತ ಪರಮಾಣುಬಾಂಬ್ ರೂಪದ ಯಮರಾಯನ ಮಹಿಷಸಂಚಾರಕ್ಕೆ ಇಂಥ ಯಾವ ಚಟುವಟಿಕೆಯೂ ವಿಘ್ನ ಒಡ್ಡಲಿಲ್ಲ. "ಪಾ ! ಇದು ಕ್ರಿಯೆ ಬೇಡುತ್ತದೆ" ಮಂದಗತಿಯಿಂದ, ಆದರೆ ಖಚಿತವಾಗಿ, ಕ್ರಿಯೆ ನಡೆಸುತ್ತಿತ್ತು. ಟಂಕಸಾಲೆಯಲ್ಲಿ ಎರಕ ಹುಯ್ದಾಗಿತ್ತು. ಠಸ್ಸೆ ಒತ್ತಲಾಗಿತ್ತು, ನಾಣ್ಯ ಚಲಾವಣೆಗೆ ಹೊರಡಲು ತಯಾರಾಗುತ್ತಿತ್ತು. ಸುರುಸುರು ಬತ್ತಿಯ ತೆರೆ ಕೊನೆಗೆ ಕಿಡಿಮುಟ್ಟಿಸಿ ಆಗಿತ್ತು. ಮುಂದೆ ನಡೆದದ್ದು ಸರ್ವವಿದಿತ. ಸಂಕ್ಷೇಪವಾಗಿ—

ಪರಮಾಣುಬಾಂಬಿನ ನಿರ್ಮಾಣಕ್ಕೆ ಅಮೆರಿಕ ಸರ್ಕಾರದ ಅಧಿಕೃತ ಒಪ್ಪಿಗೆ (೬-೮-೧೯೪೧) ;

ಪರಮಾಣುಬಾಂಬ್ ನಿರ್ಮಾಣದ ಸಾಧ್ಯತೆಯನ್ನು ರೂಪಿಸಲು ಸಮರ್ಥ ಹಾಗೂ ವಿಶ್ವಾ-ಸಾರ್ಹ ವಿಜ್ಞಾನಿಗಳ ಹಾಗೂ ಆಡಳಿತಗಾರರ ಶೋಧನೆ ;

DSM (Development of Substitue Materials) ಎಂಬ ಸಾಂಕೇತಿಕ ನಾಮ ಹೊತ್ತ ಮನಹಟ್ಟನ್ ಯೋಜನೆಯ ಸ್ಥಾಪನೆ (೧೩-೮-೧೯೪೨) ;

ಶೃಂಖಲಾಕ್ರಿಯೆಯಲ್ಲಿ ಪರಮಾಣುಬಾಂಬಿನ ಯಶಸ್ಸು—ಮಾನವ ಪ್ರಜ್ವಲಿಸಿದ ಪ್ರಥಮ ಪರಮಾಣವಿಕಾಗ್ನಿ[೫೬] (೧೨-೧೨-೧೯೪೨) ;

ನ್ಯೂ ಮೆಕ್ಸಿಕೊದ ನಿರ್ಜನ ಪ್ರದೇಶದಲ್ಲಿ ಪ್ರಥಮ ಪರಮಾಣು ಬಾಂಬಿನ ಯಶಸ್ವೀ ಸ್ಫೋಟನೆ ಮತ್ತು ಅಣಬೆರೂಪದ ವಿಕಿರಣಪಟು ಮೇಘದ ಉತ್ಪಾಟನೆ (ನಾಗರಿಕತೆಗೆ ತೊಡಿಸಿದ ಶವವಸ್ತ್ರ) (೧೬-೭-೧೯೪೫);

ಎಂದಿನಂತೆ ಅಂದು ಕೂಡ ಐನ್‌ಸ್ಟೈನ್ ಮಲಗುಕೊಠಡಿಯಿಂದ ಸಂಜೆ ಚಹಾ ಸೇವನೆಗಾಗಿ ಪಾವಟಿಗೆ ಇಳಿದು ಕೆಳಗೆ ಬಂದರು ; ಕಾರ್ಯದರ್ಶಿ ಡ್ಯೂಕಾಸ್ ತತ್ಪೂರ್ವ ಆಲಿಸಿದ್ದ ರೇಡಿಯೊ ದುರ್ವಾರ್ತೆಯನ್ನು ಇವರಿಗೆ ಅರುಹಿದರು: ಜಪಾನಿನ ಹಿರೋಶಿಮಾದ ಮೇಲೆ ಪರಮಾಣು ಬಾಂಬಿನ ತಾಡನ . . . ಇದನ್ನು ಕೇಳಿ ತೀವ್ರಾಘಾತಕ್ಕೆ ತುತ್ತಾದ ಈ ಶಾಂತಿದೂತ ಕೋಮಲ ಹೃದಯಿ ಬುದ್ಧ ಉದ್ಗರಿಸಿದ್ದು ಕೇವಲ ಎರಡೇ ಪದಗಳನ್ನು "Oh weh" (ಅಯ್ಯೋ . . . .) —ಮಾನವಾಂತಃಕರಣದ ಕರುಣಾಕ್ರಂದನ ಅದಾಗಿತ್ತು (೬-೮-೧೯೪೫);

'ದಿವಿಸೂರ್ಯ ಸಹಸ್ರಸ್ಯ' (*Brighter than a Thousand Suns*)[೫೭] ವಾಸ್ತವ ಘಟನೆ

ಯಾಗಿತ್ತು.

(ಅಧ್ಯಕ್ಷ ಫ್ರ್ಯಾಂಕ್ಲಿನ್ ರೂಸ್‌ವೆಲ್ಟ್ ೧೨-೪-೧೯೪೫ರಂದು ನಿಧನರಾದರು. ಮುಂದಿನ ಅಧ್ಯಕ್ಷ ಹ್ಯಾರಿ ಟ್ರೂಮನ್, ೧೮೮೪-೧೯೭೨, ಪರಮಾಣುಬಾಂಬ್ ತಾಡನೆಯನ್ನು ಆದೇಶಿಸಿದ್ದರು. ೧೯೪೫ ಆಗಸ್ಟ್ ೬ರಂದು ಹಿರೋಶಿಮಾ ಮತ್ತು ೯ರಂದು ನಾಗಸಾಕಿ ಪರಮಾಣವಿಕಾಗ್ನಿಗೆ ಆಹುತಿಯಾದುವು. ಜಪಾನ್ ಒಡನೆ ಬಾಲಮುದುಡಿ ಬೇಷರತ್ತಾಗಿ ಶರಣುಯಾಚಿಸಿತು, ೧೪-೮-೧೯೪೫. ಆ ಮೊದಲೇ ಜರ್ಮನಿ ಶರಣಾಗಿದ್ದುದರಿಂದ, ೭-೫-೧೯೪೫, ಸಾಂಪ್ರದಾಯಿಕ ಬಾಂಬುಗಳ ಅಗ್ನಿವರ್ಷದಿಂದ ತೊಡಗಿದ ಎರಡನೆಯ ಮಹಾಯುದ್ಧ ಪರಮಾಣವಿಕಾಗ್ನಿಯ ಪೂರ್ಣಾಹುತಿಯಿಂದ ಕೊನೆಗಂಡಂತಾಯಿತು.)

ಪರಮಾಣುಬಾಂಬ್ ನಿರ್ಮಾಣ ಪ್ರಕರಣದಲ್ಲಿ ಐನ್‌ಸ್ಟೈನರ ಪಾತ್ರವೇನು ? ನೈತಿಕಾಪರಾಧದಿಂದ ಅವರು ಮುಕ್ತರಾಗಲಾರರೆಂದು ವಾದಿಸುವವರ ಧಾಟಿ ಇದು : ಐನ್‌ಸ್ಟೈನ್—

$E = mc^2$ ಶಕ್ತಿ-ರಾಶಿ ಸಮಾನತಾಸಂಬಂಧವನ್ನು ಸೃಷ್ಟಿಸದೆ ಇದ್ದಿದ್ದರೆ,

ತಮ್ಮ ಸಂಶೋಧನೆಗಳಿಂದ ಭೌತವಿಜ್ಞಾನಕ್ಕೆ ಹೊಸ ತಿರುವು ಕೊಡದೆ ಇದ್ದಿದ್ದರೆ,

ಅಧ್ಯಕ್ಷ ರೂಸ್‌ವೆಲ್ಟರಿಗೆ ಆ ಇತಿಹಾಸಪ್ರವರ್ತಕ ಪತ್ರ ಬರೆಯದೆ ಇದ್ದಿದ್ದರೆ—ಪರಮಾಣು ಬಾಂಬ್ ನಿರ್ಮಾಣ ಅಸಾಧ್ಯವಾಗಿರುತ್ತಿತ್ತು. ಎಂದೇ ಹಿರೋಶಿಮಾ-ನಾಗಸಾಕಿ ಭೀಕರ ಜನಹತ್ಯೆ ಸಂಭವಿಸುತ್ತಿರಲಿಲ್ಲ.

ಸ್ಪಷ್ಟವಾಗಿ,ಇದು ಮೊಂಡುವಾದ. ಇದೇ ಧಾಟಿಯಲ್ಲಿ ಇನ್ನೂ ಹಿಂದೆ ಹೋಗಿ, "ಐನ್‌ಸ್ಟೈನ್ ಹುಟ್ಟದೆ ಇದ್ದಿದ್ದರೆ, ನ್ಯೂಟನ್ ಜನಿಸದೆ ಇದ್ದಿದ್ದರೆ, ಮಾನವಪೀಳಿಗೆ ವಿಕಸಿಸದೆ ಇದ್ದಿದ್ದರೆ" ಎಂಬ ಶೂನ್ಯವಾದವನ್ನು ಮಂಡಿಸುವುದು ಕಷ್ಟವಲ್ಲ. ಐನ್‌ಸ್ಟೈನ್-ವ್ಯಕ್ತಿತ್ವದ ಆಶೋತ್ತರ, ಜನಹಿತ ಕಾಳಜಿ, ಅಂತಾರಾಷ್ಟ್ರೀಯತೆ, ಮೂಲ ತತ್ತ್ವಗಳ ಬಗ್ಗೆ ನಿಲುಮೆ ಮುಂತಾದ ಮುಖಗಳ ಪರಿಚಯವಿರುವವರು ಯಾರೂ ಈ ತೆರನಾಗಿ ಯೋಚನೆ ಮಾಡಲಾರರು.

ಪುಟ್ಟನಾಡು ಜರ್ಮನಿ. ಉಗ್ರರಾಷ್ಟ್ರೀಯತೆಯ ಅಮಲಿನಿಂದಾಗಿ (ನಂಜಿನಿಂದಾಗಿ) ವಾಸ್ತವತೆಯ ಬಗ್ಗೆ ಕುರುಡಾಯಿತು. ಪ್ರಪಂಚ-ಸಾರ್ವಭೌಮತ್ವ ಗಳಿಸಲು ಸೇನಾಚರಣೆಗಳಿಗೆ ಶರಣು ಹೋಯಿತು. ಭೀಕರ ನರಮೇಧವನ್ನು ಉಜ್ಜುಗಿಸಿತು. ತುರ್ಪು, ನೇರ್ಪು ಮತ್ತು ತೀರ್ಪು ಅಸ್ತ್ರವಾಗಿ ಆ ರಾಷ್ಟ್ರ ಬೇಗನೆ ಪರಮಾಣುಬಾಂಬನ್ನು ಹೊಂದಲಿದ್ದುದು ಅಸಂಭಾವ್ಯವಾಗಿರಲಿಲ್ಲ. ಇಂಥ ಜರ್ಮನಿಯ ಎದುರು ಪ್ರಪಂಚದ ಇತರ ರಾಷ್ಟ್ರಗಳು, ತತ್ರಾಪಿ ಅಮೆರಿಕ, ತಳೆಯಬೇಕಾಗಿದ್ದ ನಿಲವೇನು ? ವಿಜ್ಞಾನಿಗಳೂ ರಾಜಕಾರಣಿಗಳೂ ಶಾಂತಿಪ್ರಿಯರೂ ಅನುಸರಿಸಬೇಕಾದ ಪಥವೇನು? ಶಾಠ್ಯಕ್ಕೆ ಪ್ರತಿಶಾಠ್ಯ, ಸರ್ಪಾಸ್ತ್ರಕ್ಕೆ ಗರುಡಾಸ್ತ್ರ, ಪರಮಾಣು ಬಾಂಬಿಗೆ ಅತಿ ಪರಮಾಣುಬಾಂಬ್—ಈ ಆಕ್ರಮಣಶೀಲ ಧೋರಣೆಯೊಂದೇ ಶರಣು.

"ನಿಜಕ್ಕೂ ನಾನು ಟಪ್ಪಾಲುಪೆಟ್ಟಿಗೆಯಂತೆ ವರ್ತಿಸಿದ್ದು ಮಾತ್ರ. ಪೂರ್ತಿಗೊಳಿಸಲಾಗಿದ್ದ ಪತ್ರವನ್ನು ಅವರು ತಂದರು. ನಾನದಕ್ಕೆ ಸುಮ್ಮನೆ ರುಜುವಿಕ್ಕಿದೆ." ಎರಡನೆಯ ಮಹಾಯುದ್ಧಾನಂತರ ಐನ್‌ಸ್ಟೈನ್ ಈ ಮಾತುಗಳಲ್ಲಿ ತಮ್ಮ ನೋವನ್ನು ತೋಡಿಕೊಂಡರು.

ವಿಜ್ಞಾನಿಯ ಸಾಮಾಜಿಕ ಜವಾಬ್ದಾರಿಕೆ ಹೊಣೆ ಏನು ಎಂಬುದೊಂದು ಸದಾ ಚರ್ಚಿತ, ಆದರೆ ಎಂದೂ ಪರಿಹಾರ ಲಭಿಸದ, ಪ್ರಶ್ನೆ. ಮಾನವಮತಿಯ ನಿರ್ಮಾಣವಾದ ವಿಜ್ಞಾನ ಮತ್ತು ಇದರ ಕೂಸು ತಂತ್ರವಿದ್ಯೆ ಇವೆರಡರ ದುಷ್ಪಪ್ರಭಾವ ನಿವಾರಿಸಲು ಅದೇ ಮಾನವಮತಿಗೆ ಇರುವ ಮಾರ್ಗ ಒಂದೇ : ವಿವೇಕ ಪ್ರದರ್ಶನ. ಈ ವಿವೇಕವು ಮತಧರ್ಮ (religion) ಬೋಧನೆ-

ಅನುಷ್ಠಾನಗಳಿಂದ ಬರಬೇಕು. ಎಂದೇ ಐನ್‌ಸ್ಟೈನ್-ಸೂಕ್ತಿ : "ಧರ್ಮರಹಿತ ವಿಜ್ಞಾನ ಕುಂಟು, ವಿಜ್ಞಾನರಹಿತ ಧರ್ಮ ಕುರುಡು." ನಮ್ಮ ಎಲ್ಲ ಶಿಕ್ಷಣ ವಿಧಾನಗಳೂ ಈ ವಿವೇಕ ಸಂವರ್ಧನೆ ಯತ್ತ ಅಭಿಗಮಿಸಿದಾಗ ಮಾತ್ರ ಇದು ಸಾಧ್ಯವಾದೀತು. ಇದು ಗಗನಕುಸುಮವೇ ?

## ಪರಮಾಣುಯುದ್ಧ ಅಥವಾ ಶಾಂತಿ

ತಾವು ನಿಜವೆಂದು ನಂಬಿದ್ದನ್ನು ಜೀವನಪರ್ಯಂತವೂ ನಿರ್ಭೀತಿಯಿಂದ
ಪ್ರತಿಪಾದಿಸುವ ಧೀರರು ಅವರಾಗಿದ್ದರು. ಅವರ ಅದಮ್ಯ ಮನಃ
ಶಕ್ತಿ ಎಂದೂ ದಬ್ಬಾಳಿಕೆಗೆ ಬಗ್ಗಲಿಲ್ಲ. ಅವರ ಜನಪ್ರೇಮ ಅನೇಕ
ವೇಳೆ ಕಹಿಸತ್ಯ ನುಡಿಯುವಂತೆ ಅವರನ್ನು ಪ್ರೇರಿಸುತ್ತಿತ್ತು.
ಇದರಿಂದಾಗಿ ಅವರು ಒಮ್ಮೊಮ್ಮೆ ಅಪಾರ್ಥಕ್ಕೆ ಗುರಿಯಾಗುತ್ತಿದ್ದರು.

**ಎಸ್. ಎನ್. ಬೋಸ್**

ಐನ್‌ಸ್ಟೈನ್ ಸದಾ ಕರ್ತವ್ಯಶಾಲಿ. ಭೂತಕಾಲದ ಬಗ್ಗೆ ಕಳವಳಿಸುತ್ತ, ವರ್ತಮಾನ ಕಾಲವನ್ನು ನಿರಾಶಾಮಯವಾಗಿಸುತ್ತ, ಭವಿಷ್ಯಕಾಲದ ಬಗ್ಗೆ ಉದ್ವಿಗ್ನರಾಗುವ ವ್ಯಕ್ತಿ ಅಲ್ಲ. ಭೂತದಿಂದ ಅನುಭವದ ಸಾರ ಹೀರಿ ವರ್ತಮಾನದಲ್ಲಿ ತೀವ್ರವಾಗಿ ಬಾಳಿ ಭವಿಷ್ಯಕ್ಕೆ ಟಿಸಿಲು ಚಾಚುವ ಅಶ್ವತ್ಥವೃಕ್ಷ. ಸುಖೀ ವ್ಯಕ್ತಿ ವರ್ತಮಾನದಲ್ಲಿ ಸಂತೃಪ್ತ, ಭೂತದ ಬಗ್ಗೆ ನಿರ್ಲಿಪ್ತ, ಭವಿಷ್ಯದ ಬಗ್ಗೆ ಅಲಿಪ್ತ. ಇಂಥ ಸುಖೀ ವ್ಯಕ್ತಿ ಐನ್‌ಸ್ಟೈನ್ ಆಗಿದ್ದರು.

ನ್ಯೂಕ್ಲಿಯರ್ ಶಕ್ತಿ ಮಾನವವಶವಾಗಿದೆ. ಅದರ ಸರ್ವನಾಶಾತ್ಮಕ ಸಾಧ್ಯತೆಯೂ ಪ್ರಕಟ ವಾಗಿದೆ. ಹಾಗಾದರೆ ಮುಂದೇನು ?

"ಪರಮಾಣುಯುದ್ಧ ಅಥವಾ ಶಾಂತಿ" ಎಂಬ ವಿಷಯದ ಮೇಲೆ ಇವರು ೧೯೪೫ರಲ್ಲಿ, ಮುಂದೆ ೧೯೪೭ರಲ್ಲಿ, ಹೀಗೆ ಎರಡು ಲೇಖನಗಳನ್ನು ಬರೆದಿದ್ದಾರೆ. ಅವುಗಳಿಂದ ಆಯ್ದ ಭಾಗಗಳನ್ನು ಇಲ್ಲಿ ಕೊಟ್ಟಿದೆ :

ಪರಮಾಣುಶಕ್ತಿಯ ಬಿಡುಗಡೆ ಹೊಸ ಸಮಸ್ಯೆ ಏನನ್ನೂ ಸೃಷ್ಟಿಸಿರುವುದಿಲ್ಲ. ಅದು ಸದ್ಯ ಅಸ್ತಿತ್ವದಲ್ಲಿರುವ ಒಂದು ಸಮಸ್ಯೆಯನ್ನು ಪರಿಹರಿಸುವುದು ಎಷ್ಟು ತುರ್ತಿನ ಆವಶ್ಯಕತೆ ಎಂಬುದನ್ನು ತೋರಿಸಿಕೊಟ್ಟಿದೆ, ಅಷ್ಟೆ. ಪರಮಾಣುಶಕ್ತಿಯ ಬಿಡುಗಡೆ ನಮ್ಮನ್ನು ಪರಿಮಾಣಾತ್ಮಕವಾಗಿ, ಗುಣಾತ್ಮಕವಾಗಿ ಅಲ್ಲ, ಪ್ರಭಾವಿಸಿದೆ ಎಂದು ಹೇಳಬಹುದು. ಅಧಿಕ ತ್ರಾಣಿಗಳಾಗಿರುವ ಸ್ವತಂತ್ರ ಜನಾಂಗಗಳು ಇರುವ ತನಕವೂ ಯುದ್ಧ ಅನಿವಾರ್ಯ. ಅಂದಮಾತ್ರಕ್ಕೆ ಯುದ್ಧ ಯಾವಾಗ ಬಂದೀತೆಂಬುದನ್ನು ನುಡಿಯುವ ಪ್ರಯತ್ನವಿದಲ್ಲ—ಆದರೆ ಅದು ಬರುವುದಂತೂ ಖಾತ್ರಿ. ಪರಮಾಣುಬಾಂಬನ್ನು ತಯಾರಿಸುವ ಮೊದಲು ಕೂಡ ಇದು ನಿಜವಾಗಿತ್ತು. ಬದಲಾಗಿರುವುದೇನೆಂದರೆ ಯುದ್ಧದ ವಿನಾಶಕ ಸಾಮರ್ಥ್ಯ.

ಪರಮಾಣುಬಾಂಬಿನ ಚಂಡಾಟದಿಂದ ನಡೆಯುವ ಕದನದಲ್ಲಿ ಮಾನವಕುಲ ನಿರ್ನಾಮವಾಗಿ ಹೋದೀತೆಂ ದೇನೂ ನಾನು ಭಾವಿಸಿಲ್ಲ. ಪ್ರಾಯಶಃ ಪ್ರಪಂಚದ ಜನಸಂಖ್ಯೆಯ ಮೂರರಲ್ಲಿ ಎರಡು ಭಾಗ ಅಳಿದು ಹೋಗಬಹುದು. ಆದರೆ ಬದುಕು ಮರುಚಿಗುರಲು ಅನುವಾಗುವಂತೆ ಸಾಕಷ್ಟು ಮಂದಿ ಚಿಂತನಶೀಲರು ಮತ್ತು ಸಾಕಷ್ಟು ಸಂಖ್ಯೆಯ ಪುಸ್ತಕಗಳು ಉಳಿದಿದ್ದು ನಾಗರಿಕತೆಯ ಪುನಸ್ಸ್ಥಾಪನೆ[೫೮] ಸಾಧ್ಯ.

ಬಾಂಬಿನ ರಹಸ್ಯವನ್ನು ವಿಶ್ವಸಂಸ್ಥೆಗೆ (United Nations Organization) ಒಪ್ಪಿಸಬೇಕೆಂಬುದು ನನ್ನ ಆಶಯವಲ್ಲ. ಅದನ್ನು ಸೋವಿಯತ್ ಒಕ್ಕೂಟಕ್ಕೆ ಕೊಡಬೇಕೆಂದೂ ನಾನು ಭಾವಿಸಿಲ್ಲ. ಈ ಒಂದೊಂದು ಹಾದಿಯೂ ಕೈಯಲ್ಲಿ ಬಂಡವಾಳವಿರುವ ಒಬ್ಬ ವ್ಯಕ್ತಿ, ಇನ್ನೊಬ್ಬ ತನ್ನ ಜೊತೆ ಒಂದು ಉದ್ಯಮದಲ್ಲಿ ಸಹಕರಿಸಬೇಕೆಂದು ಆಶಿಸಿ, ಆತನಿಗೆ ತನ್ನ ಬಂಡವಾಳದ ಅರ್ಧಾಂಶವನ್ನು ನೇರವಾಗಿ ಕೊಡುವುದಕ್ಕೆ

ಸದೃಶವಾಗಿದೆ. ಆ ಇನ್ನೊಬ್ಬ ವ್ಯಕ್ತಿ ಮೊದಲಿನವನಿಗೆದುರಾಗಿ ಪೈಪೋಟಿಗಿಳಿಯಬಹುದು. ನಿಜಕ್ಕೂ ಇಲ್ಲಿ ಬೇಕಾದದ್ದು ಆತನ ಸಹಕಾರ, ಪೈಪೋಟಿ ಅಲ್ಲ. ಬಾಂಬಿನ ರಹಸ್ಯವನ್ನು ಪ್ರಪಂಚಸರ್ಕಾರವೊಂದಕ್ಕೆ ಬದ್ಧಗೊಳಿಸಬೇಕು ; ಮತ್ತು ಹಾಗೆ ಮಾಡಲು ತಾನು ಸಿದ್ಧವಿರುವುದನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳು ಒಡನೆ ಸಾರಬೇಕು. ಅತ್ಯಧಿಕ ಸೇನಾತ್ರಾಣವಿರುವ ಮೂರು ರಾಷ್ಟ್ರಗಳಾದ ಸಂಯುಕ್ತ ಸಂಸ್ಥಾನಗಳು, ಸೋವಿಯತ್ ಒಕ್ಕೂಟ ಮತ್ತು ಗ್ರೇಟ್ ಬ್ರಿಟನ್ ಜೊತೆಗೂಡಿ ಪ್ರಪಂಚಸರ್ಕಾರವನ್ನು ಸ್ಥಾಪಿಸಬೇಕು. ಈ ಮೂರು ಸರ್ಕಾರಗಳೂ ಪ್ರಪಂಚಸರ್ಕಾರಕ್ಕೆ ತಮ್ಮ ಸಕಲ ತ್ರಾಣವನ್ನೂ ಬದ್ಧಗೊಳಿಸಬೇಕು. ಬಲಿಷ್ಠ ಸೇನೆಗಳಿರುವ ಜನಾಂಗಗಳು ಕೇವಲ ಮೂರು ಮಾತ್ರ ಇರುವುದರಿಂದ ಇಂಥ ಒಂದು ಸರ್ಕಾರದ ಸ್ಥಾಪನೆ ಸುಲಭವಾಗುತ್ತದೆ ; ಕಷ್ಟವಾಗದು.

ಪರಮಾಣುಬಾಂಬಿನ ರಹಸ್ಯವನ್ನು ಸೋವಿಯತ್ ಒಕ್ಕೂಟ ಹೊಂದದಿರುವುದರಿಂದ, ಆದರೆ ಸಂಯುಕ್ತ ಸಂಸ್ಥಾನಗಳು ಮತ್ತು ಗ್ರೇಟ್ ಬ್ರಿಟನ್ ಹೊಂದಿರುವುದರಿಂದ ಉದ್ದೇಶಿತ ಪ್ರಪಂಚಸರ್ಕಾರದ ಕರಡು ತಯಾರಿಸಲು ಈ ರಾಷ್ಟ್ರಗಳು ಸೋವಿಯತ್ ಒಕ್ಕೂಟವನ್ನು ಆಹ್ವಾನಿಸತಕ್ಕದ್ದು. ಬಾಂಬನ್ನು ತಮ್ಮಿಂದ ರಹಸ್ಯ ವಾಗಿಟ್ಟಿರುವುದು, ಮುಖ್ಯವಾಗಿ ತಾವದನ್ನು ಪಡೆಯಬಾರದೆಂಬ ಕಾರಣಕ್ಕಾಗಿ ಎಂಬ ಅವಿಶ್ವಾಸಭಾವನೆ ರಶ್ಯನರಿಗೆ ಈಗಾಗಲೇ ಇದೆ. ಈ ಮೇಲೆ ಹೇಳಿದ ಕ್ರಮ ಅವರ ಅವಿಶ್ವಾಸವನ್ನು ತೊಡೆದುಹಾಕದಿರದು. ಮೊದಲ ಕರಡು ಅಂತಿಮ ಸಂವಿಧಾನವಲ್ಲವೆಂಬುದು ಕಂಡಂತೆಯೇ ಇದೆ. ಆದರೆ ಪ್ರಪಂಚಸರ್ಕಾರ ತಮ್ಮ ಭದ್ರತೆಯ ಬಗೆಗೆ ಭರವಸೆ ನೀಡುತ್ತದೆಂಬ ಭಾವ ರಶ್ಯನರಿಗೆ ಮೂಡುವಂತೆ ಮಾಡಲೇಬೇಕು. . . ಮೂರು ಮಹಾ ರಾಷ್ಟ್ರಗಳ ಒಳಗೂ [ಅಮೆರಿಕ, ಗ್ರೇಟ್ ಬ್ರಿಟನ್, ರಶ್ಯ] ಒಂದೇ ತೆರನಾದ ಸ್ವಾತಂತ್ರ್ಯ ಪರಿಸ್ಥಿತಿಗಳು ನೆಲೆಗೊಳ್ಳುವತನಕ ಪ್ರಪಂಚಸರ್ಕಾರದ ಸ್ಥಾಪನೆಯನ್ನು ಮುಂದೂಡಬೇಕಾಗಿಲ್ಲ. ಸೋವಿಯತ್ ಒಕ್ಕೂಟ ದಲ್ಲಿ ಅಲ್ಪಸಂಖ್ಯಾತರು ಆಳುತ್ತಿರುವರೆಂಬುದು ನಿಜವಾದರೂ ಅಲ್ಲಿಯ ಆಂತರಿಕ ಪರಿಸ್ಥಿತಿಗಳು ಪ್ರಪಂಚ ಶಾಂತಿಗೆ ಬಾಧಕವಾಗಿವೆಯೆಂದೇನೂ ನಾನು ಪರಿಭಾವಿಸಿಲ್ಲ. ರಶ್ಯದ ಜನರಿಗೆ ಸುದೀರ್ಘಕಾಲ ರಾಜಕೀಯ ಶಿಕ್ಷಣ ಲಭಿಸಲಿಲ್ಲವೆಂಬುದನ್ನು ನೆನಪಿಗೆ ತಂದುಕೊಳ್ಳಬೇಕು. ಆ ದೇಶದ ಪರಿಸ್ಥಿತಿಗಳ ಸುಧಾರಣೆಗೋಸ್ಕರ ಬದಲಾವಣೆಗಳನ್ನು ಚಾಲ್ತಿಗೆ ತರಲು ಸಮರ್ಥವಾದಂಥ ಬಹುಸಂಖ್ಯಾತ ವರ್ಗ ಅಲ್ಲಿ ಇದ್ದಿಲ್ಲವಾದ ಕಾರಣ ಅಲ್ಪಸಂಖ್ಯಾತವರ್ಗ ಅವನ್ನು ತರಬೇಕಾಯಿತು. ನಾನೇನಾದರೂ ರಶ್ಯನ್ ಆಗಿ ಹುಟ್ಟಿದುದಾಗಿದ್ದರೆ ಈ ಪರಿಸ್ಥಿತಿಗೆ ಹೊಂದಿಕೊಳ್ಳುತ್ತಿದ್ದೆನೆಂಬುದಾಗಿ ಭಾವಿಸಿದ್ದೇನೆ. . .

[ಪರಮಾಣುಬಾಂಬ್ ನಿರ್ಮಾಣದ] ರಹಸ್ಯವನ್ನು ಹೆಚ್ಚು ಕಾಲ ನಾವು [ಅಮೆರಿಕ] ರಕ್ಷಿಸಿಡಲಾರೆವು. ಆ ಬಾಂಬಿನ ಅಭಿವರ್ಧನೆಯ (development) ಮೇಲೆ ಹೂಡಲು ಸಾಕಾಗುವಷ್ಟು ಬಂಡವಾಳ ಬೇರೆ ಯಾವ ರಾಷ್ಟ್ರದಲ್ಲಿಯೂ ಇರುವುದಿಲ್ಲವಾಗಿ ಈ ರಹಸ್ಯ ದೀರ್ಘಕಾಲ ನಮ್ಮ ಸೊತ್ತಾಗಿಯೇ ಉಳಿದೀತೆಂಬ ವಾದವಿರುವುದು ನನಗೆ ಗೊತ್ತುಂಟು. ವಸ್ತುಗಳ ತಯಾರಿಕೆಗೆ ತಾಗುವ ವೆಚ್ಚದಿಂದ ಅವುಗಳ ಯೋಗ್ಯತೆ ಅಳೆಯುವ ತಪ್ಪನ್ನು ಅನೇಕ ವೇಳೆ ಈ ರಾಷ್ಟ್ರದಲ್ಲಿ ಮಾಡುವುದಿದೆ. ಆದರೆ ಪದಾರ್ಥಗಳೂ ಪರಿಣತರೂ ಇರುವ ಇತರ ರಾಷ್ಟ್ರಗಳು ಅವನ್ನು ಪರಮಾಣುಸಾಮರ್ಥ್ಯ ಅಭಿವರ್ಧಿಸುವತ್ತ ಹೂಡಲು ಹವಣಿಸಿದ್ದಾದರೆ ಖಂಡಿತ ಆ ಉದ್ದೇಶದಲ್ಲಿ ಯಶಸ್ಸು ಗಳಿಸುತ್ತವೆ. ಏಕೆಂದರೆ ಬೇಕಾದದ್ದು ಮುಖ್ಯವಾಗಿ ಪದಾರ್ಥಗಳು ಮತ್ತು ಪರಿಣತರು, ಮತ್ತು ಅವನ್ನು ಉಪಯೋಗಿಸಲು ಯುಕ್ತ ನಿರ್ಧಾರ ; ಹಣವಲ್ಲ.

ಪರಮಾಣುಶಕ್ತಿ ಬಿಡುಗಡೆಯ ಮೂಲಪುರುಷ ನಾನೆಂಬ ಭಾವನೆ ನನಗಿಲ್ಲ. ಅದರಲ್ಲಿ ನನ್ನ ಪಾತ್ರ ತೀರ ಪರೋಕ್ಷ. ವಾಸ್ತವವಾಗಿ ನನ್ನ ಬದುಕಿನ ಅವಧಿಯಲ್ಲಿ ಈ ಬಿಡುಗಡೆ ಸಂಭವಿಸೀತೆಂಬುದನ್ನು ನಾನು ಮುಂಗಂಡಿರಲಿಲ್ಲ. ಸೈದ್ಧಾಂತಿಕವಾಗಿ ಮಾತ್ರ ಇದು ಸಾಧ್ಯವಾದೀತೆಂದು ನಂಬಿದ್ದೆ. ಶೃಂಖಲಾಕ್ರಿಯೆಯ ಆಕಸ್ಮಿಕ ಆವಿಷ್ಕಾರದಿಂದಾಗಿ ಇದು ಪ್ರಾಯೋಗಿಕವಾಯಿತು. ಖಂಡಿತವಾಗಿಯೂ ಇದನ್ನು ನಾನು ಮುನ್ನುಡಿ ಯಲಾರದವನಾಗಿದ್ದೆ. ಬರ್ಲಿನ್ನಿನಲ್ಲಿ ಹ್ಯಾನ್ ಇದನ್ನು ಆವಿಷ್ಕರಿಸಿದರು. ಖುದ್ದು ಅವರೇ ತಾವು ಆವಿಷ್ಕರಿಸಿ ದ್ದನ್ನು ಅಪವ್ಯಾಖ್ಯಾನಿಸಿದ್ದರು. ಸರಿಯಾದ ವ್ಯಾಖ್ಯಾನ ನೀಡಿದವರು ಲೈಸ್ ಮೈಟ್ನರ್. ಇವರು ಜರ್ಮನಿಯಿಂದ

ತಲೆಮರೆಸಿಕೊಂಡು ಓಡಿಹೋಗಿದ್ದಾಗ ಈ ಮಾಹಿತಿಯನ್ನು ನೀಲ್ಸ್ ಬೋರರಿಗೆ ಒಪ್ಪಿಸಲು ಕಾರಣರಾದರು...

ಸುದೀರ್ಘಕಾಲದ ತನಕ ಪರಮಾಣುಶಕ್ತಿ ಮಹಾ ವರವಾದೀತೆಂದೇನೂ ಮುಂಗಾಣಲಾರೆ. ಎಂದೇ ಸದ್ಯಕ್ಕೆ ಇದೊಂದು ಘೋರ ಆಪತ್ತೆಂದು ಭಾವಿಸಿದ್ದೇನೆ. ಬಹುಶಃ ಹೀಗಿರುವುದು ಒಳ್ಳೆಯದಕ್ಕೇ—ಏಕೆಂದರೆ ಮನುಕುಲ ತನ್ನ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಕ್ರಮವನ್ನು ತಂದುಕೊಳ್ಳಲೇಬೇಕೆಂಬ ಭಯಮೂಲ ಒತ್ತಡವನ್ನು ಇದು ಅದರ ಮೇಲೆ ಹೇರುತ್ತದೆ ; ಇಂಥ ಒತ್ತಡವಿಲ್ಲದಿದ್ದರೆ ಈ ಕ್ರಮ ಎಂದೂ ಬರದಿರುವುದು ನಿಸ್ಸಂಶಯ.

೧೯೪೫ರ ಅನಂತರ ಹೇಗೆ ಪ್ರಪಂಚದ ವಿವಿಧ ಬಣಗಳು ಪರಮಾಣುಶಕ್ತಿಯನ್ನು ಹಿಂಡುವುದರತ್ತ, ಮುಖ್ಯವಾಗಿ ಪರಮಾಣುಬಾಂಬ್, ಹೈಡ್ರೊಜನ್‌ಬಾಂಬ್ ಮುಂತಾದ ನ್ಯೂಕ್ಲಿಯರ್ ಮಾರಕಾಸ್ತ್ರಗಳ ನಿರ್ಮಾಣದತ್ತ, ತಮ್ಮ ಸಂಪನ್ಮೂಲಗಳನ್ನೂ ಜನಬಲವನ್ನೂ ಹೆಚ್ಚಿಸಿ ಕೊಂಡು ಬಂದಿವೆ, ಈ ಆತ್ಮವಿಘಾತಕ ಪೈಪೋಟಿಯಿಂದ ಹೇಗೆ ಪ್ರಪಂಚ ಅನೇಕ ವೇಳೆ ಪರಮಾಣು ಬಾಂಬ್ ಚೆಂಡಾಟದ ವಿನಾಶಕ ಅಂಚನ್ನು ತಲಪಿದೆ, ಇಂದಾದರೂ (೨೦೦೦) ಹೇಗೆ ಪ್ರಪಂಚ ನ್ಯೂಕ್ಲಿಯರ್ ಭೀತಿಯ ಮಡಿಲಲ್ಲೇ ಬಾಳುತ್ತಿರಬೇಕಾಗಿದೆ ಮುಂತಾದ ವಿವರಗಳು ಸರ್ವವೇದ್ಯ. ಈ ಭಾವನೆಗಳನ್ನು ಸೂತ್ರೀಕರಿಸುವ ಒಂದು ಜನಪ್ರಿಯ ಕಗ್ಗ ಇಂಗ್ಲಿಷಿನಲ್ಲಿದೆ. ಪುಟ್ಟ ಪರಮಾಣುವನ್ನು ನುಚ್ಚುನುರಿ ಮಾಡಲು ಮಾನವ ಶತ ಪ್ರಯತ್ನ ಮಾಡಿ ಸಿದ್ಧಿಗಳಿಸಿದ (ಭಸ್ಮಾಸುರ) ; ಈಗ ಅದು ತನ್ನ 'ಗೌರವ'ವನ್ನು ಮಾನವನಿಗೆ 'ಅರ್ಪಿಸಲು' ದಿನದಿನ ಬಂದು ಕದ ತಟ್ಟುತ್ತಿದೆ ಎಂಬುದು ಅದರ ಸಾರಾಂಶ (ಪುನರಾಯಾನ್ ಮಹಾಕಪಿಃ) :

ಪರಮಾಲ್ಪಗಾತ್ರದಾ ಪರಮಾಣು ಭೇದನೆ
ಮಾನವ ಜನಾಂಗದಾ ತೀವ್ರ ಪ್ರಲೋಭನೆ
ಪರಮಾಣು ಮನದಿ ಸ್ಪಂದಿಸಿದೆ ಸಂವೇದನೆ
ಮರಳಿಸಲು ಬರುತಿಹುದು ದಿನದಿನಂ ಗುರುವಂದನೆ !

# ೧೫. ಬಾಳಸಂಜೆಯಲ್ಲಿ ಬದುಕು

## ಐನ್‌ಸ್ಟೈನ್ ಎಪ್ಪತ್ತು

ದ್ರವ್ಯಕ್ಕೆ ಹೇಗೆ ಚಲಿಸಬೇಕೆಂದು ಆಕಾಶ ವಿಧಿಸುತ್ತದೆ.
ಆಕಾಶಕ್ಕೆ ಹೇಗೆ ವಕ್ರವಾಗಬೇಕೆಂದು ದ್ರವ್ಯ ಹೇಳುತ್ತದೆ.
ಜಾನ್ ಪೀಟರ್

"ಯುಗಯುಗಗಳ ಆರುನೂರು ಮಂದಿ ಮಹಾಪುರುಷರ—ಸಂತರ, ತತ್ತ್ವಜ್ಞಾನಿಗಳ, ರಾಜರ—ಆಕೃತಿಗಳು ನ್ಯೂಯಾರ್ಕ್ ರಿವರ್ಸೈಡ್ ಇಗರ್ಜಿಯ ಶ್ವೇತಭಿತ್ತಿಗಳ ಮೇಲೆ ಕಂಡರಿಸಲ್ಪಟ್ಟು ಸುಣ್ಣಗಲ್ಲಿನಲ್ಲಿ ಅಮರತ್ವ ಪಡೆದು ಶಾಶ್ವತ ಮೂಕ ನೇತ್ರಗಳಿಂದ ಕಾಲ ಮತ್ತು ಆಕಾಶವನ್ನು ಸರ್ವೇಕ್ಷಣೆ ಮಾಡುತ್ತಿವೆ. ಇಲ್ಲಿಯ ಒಂದು ಅಂಕಣ ಶತಮಾನಗಳ ಬೀಸಿನಿಂದ ಆಯ್ದ ಹದಿನಾಲ್ಕು ಮಂದಿ ವಿಜ್ಞಾನಸೀಮಾಪುರುಷರಿಂದ ಅಲಂಕೃತವಾಗಿದೆ—ಕ್ರಿಸ್ತಪೂರ್ವ ೩೭೦ರ ಸುಮಾರಿಗೆ ಗತಿಸಿದ ಹಿಪ್ಪೊಕ್ರೇಟಸನಿಂದ ತೊಡಗಿ ಮಾರ್ಚ್ ೧೯೪೯ರಲ್ಲಿ ಎಪ್ಪತ್ತು ವರ್ಷ ವಯಸ್ಸು ತುಂಬಲಿರುವ ಆಲ್ಬರ್ಟ್ ಐನ್‌ಸ್ಟೈನ್‌ವರೆಗೆ. ಈ ಚರಿತ್ರಾರ್ಹ ಪುಣ್ಯಶ್ಲೋಕರ ಶಿಲ್ಪ ಪ್ರದರ್ಶನದಲ್ಲಿ ಐನ್‌ಸ್ಟೈನ್ ಒಬ್ಬರೇ ಜೀವಂತ ವ್ಯಕ್ತಿ ಎಂಬುದು ಗಮನಿಸಬೇಕಾದ ಸಂಗತಿ.

"ಇಷ್ಟೇ ಗಮನಾರ್ಹವಾದ ಇನ್ನೊಂದು ಸಂಗತಿ ಎಂದರೆ ಮ್ಯಾನ್‌ಹ್ಯಾಟನ್ನಿನ ಅತ್ಯಂತ ಪ್ರೇಕ್ಷಣೀಯವಾದ ಪ್ರಾಟೆಸ್ಟೆಂಟ್ ಇಗರ್ಜಿಯಲ್ಲಿ ವಾರ ವಾರ ಪೂಜೆ ಸಲ್ಲಿಸುವ ಸಾವಿರಾರು ಭಕ್ತರ ಪೈಕಿ ಪ್ರಾಯಶಃ ಶೇಕಡಾ ತೊಂಬತ್ತೊಂಬತ್ತು ಮಂದಿಯೂ ಅಲ್ಲಿ ಐನ್‌ಸ್ಟೈನರ ಪ್ರತಿಮೆ ಏಕೆ ಇದೆ ಎನ್ನುವುದನ್ನು ವಿವರಿಸಲು ಶಕ್ತರಾಗರು ಎಂಬುದು ಕೂಡ. ಒಂದು ತಲೆ ಮಾರಿನ ಹಿಂದೆ ಆ ಇಗರ್ಜಿಯ ಪ್ರತಿಮಾಶಿಲ್ಪವನ್ನು ಯೋಜಿಸುತ್ತಿದ್ದಾಗ ಡಾ. ಹ್ಯಾರಿ ಎಮರ್ಸನ್ ಫಾಸ್ಡಿಕ್‌ಅವರು, ರಾಷ್ಟ್ರದ ಉಚ್ಚವಿಜ್ಞಾನಿಗಳ ತಂಡಕ್ಕೆ, ವಿಜ್ಞಾನೇತಿಹಾಸದಲ್ಲಿ ಎದ್ದುಕಾಣುವ ಹದಿನಾಲ್ಕು ಮಂದಿ ಸರ್ವಶ್ರೇಷ್ಠರ ಹೆಸರುಗಳನ್ನು ಒಳಗೊಂಡಿರುವ ಯಾದಿಗಳನ್ನು ತಯಾರಿಸಿ ತನಗೆ ಒಪ್ಪಿಸಬೇಕೆಂದು ಕೋರಿ, ಪತ್ರ ಬರೆದರು. ವಿಜ್ಞಾನಿಗಳಿಂದ ಬಂದ ಆಯ್ಕೆ ಪಟ್ಟಿಗಳಲ್ಲಿ ಒಮ್ಮತವಿರಲಿಲ್ಲ. ಹೆಚ್ಚಿನವುಗಳಲ್ಲಿ ಆರ್ಕಿಮಿಡೀಸ್, ಯೂಕ್ಲಿಡ್, ಗೆಲಿಲಿಯೊ ಮತ್ತು ನ್ಯೂಟನ್ ಹೆಸರುಗಳಿದ್ದುವು. ಆದರೆ ಪ್ರತಿಯೊಂದರಲ್ಲಿಯೂ ಆಲ್ಬರ್ಟ್ ಐನ್‌ಸ್ಟೈನ್ ಹೆಸರು ಮಾತ್ರ ಇದ್ದೇ ಇತ್ತು."

ಲಿಂಕನ್ ಬಾರ್ನೆಟ್ ೧೯೪೮ರಲ್ಲಿ ಬರೆದ *The Universe and Dr Einstein* ಎಂಬ ಗ್ರಂಥದ ಮೊದಲ ಎರಡು ಪರಿಚ್ಛೇದಗಳಿವು.

ಪವಾಡಗಳನ್ನು ಅಥವಾ ಅತೀಂದ್ರಿಯ ವಿಚಾರಗಳನ್ನು—ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಲೆತ್ತವನಾಡಿ ಮನುಜನ ಸೋಲಿಸುವ ಭಗವಂತನನ್ನು—ಎಂದೂ ನಂಬದ ಐನ್‌ಸ್ಟೈನ್ ಸಾಮಾನ್ಯ ಮಂದಿಗೆ ಮಾತ್ರ ಪವಾಡಪುರುಷನಂತೆಯೇ ಕಂಡರು. ಸಮಕಾಲೀನ ವಿಜ್ಞಾನಿಗಳಿಗೆ ಇವರ ಬಗ್ಗೆ ವಿಶೇಷ ಗೌರವವಿತ್ತು—ಇವರು ವರ್ತಮಾನಯುಗದ ವಿಜ್ಞಾನಪ್ರಜ್ಞೆ ಎಂಬ ಒಂದೇ ಕಾರಣಕ್ಕಾಗಿ ಅಲ್ಲ, ಅಭಿಜಾತ (classical) ಮತ್ತು ಆಧುನಿಕ (modern) ಭೌತವಿಜ್ಞಾನಗಳ ನಡುವಿನ ಸಂಕ ಮತ್ತು ಪರಿಪೂರ್ಣ ಮಾನವ ಎಂಬ ಕಾರಣಗಳಿಗಾಗಿ ಕೂಡ. ಎಂದೇ ಐನ್‌ಸ್ಟೈನರಿಗೆ ಎಪ್ಪತ್ತು ತುಂಬಲಿದೆ ಎಂಬ ಸುದ್ದಿ ಪ್ರಜ್ಞಾವಂತರೆಲ್ಲರಿಗೂ ಹರ್ಷದಾಯಕವಾಗಿತ್ತು. ಆ ಪರಮ ಶುಭ ಸಂದರ್ಭದಲ್ಲಿ ಈ ಹಿರಿವ್ಯಕ್ತಿಗೆ ತಮ್ಮ ಕೃತಜ್ಞತೆ ಸಲ್ಲಿಸುವುದರ ಜೊತೆಗೆ, ವರ್ತಮಾನ ಯುಗದ ವಿಜ್ಞಾನ ಅಭಿವರ್ಧನೆಗೆ ಇವರು ಸಲ್ಲಿಸಿದ ಕೊಡುಗೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ಲೇಣೆದೇಣೆ ತಖ್ತೆ (balance sheet) ಕೂಡ ತಯಾರಿಸಬೇಕೆಂದು ವಿಜ್ಞಾನಿಗಳು ಬಗೆದರು. ಭವಿಷ್ಯದತ್ತ ಇಣುಕುನೋಟ ಹಾಯಿಸಲು ಅದೊಂದು ಪರ್ವಕಾಲವೂ ಹೌದು.

ಪಾಲ್ ಆರ್ಥರ್ ಶಿಲ್ಪ್ (೧೮೯೭-?) ಎಂಬ ಅಮೆರಿಕನ್ ವಿದ್ವಾಂಸ *The Library of Living Philosophers* ಹೆಸರಿನ ಗ್ರಂಥಮಾಲೆಯನ್ನು ಪ್ರಾರಂಭಿಸಿ ಅದರಲ್ಲಿ ಜಾನ್ ಡ್ಯೂಯೀ (೧೮೫೯-೧೯೫೨, ಅಮೆರಿಕದ ತತ್ತ್ವಶಾಸ್ತ್ರಜ್ಞ, ಶಿಕ್ಷಣವಿದ), ಜಾರ್ಜ್ ಸಂತಾಯನ (೧೮೬೩-೧೯೫೨, ಸ್ಪೇನ್ ಸಂಜಾತ ಅಮೆರಿಕನ್ ಕವಿ, ಶಿಕ್ಷಣವಿದ), ಆಲ್‌ಫ್ರೆಡ್ ನಾರ್ತ್ ವೈಟ್‌ಹೆಡ್ (೧೮೬೧-೧೯೪೭, ಇಂಗ್ಲಿಷ್ ಗಣಿತವಿದ, ತತ್ತ್ವಶಾಸ್ತ್ರಜ್ಞ) ಮತ್ತು ಬರ್ಟ್ರೆಂಡ್ ಆರ್ಥರ್ ರಸಲ್ (೧೮೭೨-೧೯೭೦, ಇಂಗ್ಲಿಷ್ ಗಣಿತವಿದ, ತತ್ತ್ವಶಾಸ್ತ್ರಜ್ಞ) ಈ ಜೀವಂತ ತತ್ತ್ವಶಾಸ್ತ್ರಜ್ಞರ ಬಗ್ಗೆ ಉದ್ಗ್ರಂಥಗಳನ್ನು ಪ್ರಕಟಿಸಿದ್ದರು. ಈ ಮಾಲೆಯ ಪ್ರತಿಯೊಂದು ಪುಷ್ಪದ ಸಮಗ್ರ ವ್ಯಕ್ತಿತ್ವ ಕುರಿತಂತೆ ಶಿಲ್ಪ್ ವಿಧಿಸಿಕೊಂಡಿದ್ದ ವಿಶಾಲ ಸೂತ್ರಗಳಿವು :

ಉದ್ದಿಷ್ಟ ತತ್ತ್ವಶಾಸ್ತ್ರಜ್ಞನ ಸಮಗ್ರ ಚಿಂತನೆ ಕುರಿತಂತೆ ಆತನ ಅನುಯಾಯಿಗಳಿಂದಲೂ ವಿರೋಧಮತಿಗಳಿಂದಲೂ ಲೇಖನಗಳನ್ನು ಬರೆಸಿ ಸಂಕಲಿಸುವುದು ;

ಈ ಲೇಖನಗಳಲ್ಲಿ ಎತ್ತಲಾಗುವ ಟೀಕೆ ಸೂಚನೆಗಳಿಗೆ ಸ್ವತಃ ತತ್ತ್ವಶಾಸ್ತ್ರಜ್ಞನಿಂದಲೇ ಉತ್ತರ

ಬರೆಸಿ ಪ್ರಕಟಿಸುವುದು ;

ತತ್ತ್ವಶಾಸ್ತ್ರಜ್ಞನಿಂದ ಆತನ ಆತ್ಮಚರಿತ್ರೆ ಬರೆಸಿ, ಇದು ಸಾಧ್ಯವಾಗದಲ್ಲಿ, ಆತನ ಅಧಿಕೃತ ಜೀವನಚರಿತ್ರೆಯನ್ನು ತಜ್ಞರಿಂದ ಬರೆಸಿ ಪ್ರಕಟಿಸುವುದು ; ಮತ್ತು

ತತ್ತ್ವಶಾಸ್ತ್ರಜ್ಞನ ಸಮಸ್ತ ಕೃತಿಗಳ ವಿವರಗಳನ್ನು ಕೊಡುವ ಕೃತಿಸೂಚಿ ಪ್ರಕಟಿಸುವುದು.

ಆಲ್ಬರ್ಟ್ ಐನ್‌ಸ್ಟೈನರ ಹೆಸರು ತಮ್ಮ ಮಾಲೆಯ ಅಂತಸ್ತನ್ನು ವೃದ್ಧಿಸುವುದೆಂದು ಶಿಲ್ಪ್ ಸಹಜವಾಗಿ ಭಾವಿಸಿದರು. ೧೯೪೯ ಮಾರ್ಚ್ ೧೪ರಂದು, ಐನ್‌ಸ್ಟೈನರಿಗೆ ಎಪ್ಪತ್ತು ವರ್ಷ ವಯಸ್ಸು ತುಂಬುವ ಶುಭದಿನದಂದು, *Albert Einstein : Philosopher-Scientist* ಎಂಬ ಹೆಸರಿನ ಅಭಿನಂದನ ಗ್ರಂಥವನ್ನು ಅವರಿಗೆ ಅರ್ಪಿಸಬೇಕೆಂದು ಸಂಕಲ್ಪಿಸಿದರು.

ಶಿಲ್ಪ್ ತಮ್ಮ ಸಂಕಲ್ಪವನ್ನು ಸಿದ್ಧಿಗೊಳಿಸುವ ಹಾದಿಯಲ್ಲಿ ಐನ್‌ಸ್ಟೈನರ ಮೇಲೆ ಬಗೆ ಬಗೆಯ ಅಸ್ತ್ರಗಳನ್ನು ಪ್ರಯೋಗಿಸಬೇಕಾಯಿತು. ಮೂರ್ತಿಪೂಜೆಯ ಸಕಲ ಛಾಯೆಗಳನ್ನೂ ಮನಸಾರೆ ತಿರಸ್ಕರಿಸುತ್ತಿದ್ದ ಐನ್‌ಸ್ಟೈನರನ್ನು ಈ 'ಸಂಕಟ' ಅನುಭವಿಸಲು ಪುಸಲಾಯಿಸುವುದು ಮೊದಲ ಅಡಚಣೆ. ಇಂಥ ಒಂದು ಗ್ರಂಥದ ಉಪಯುಕ್ತತೆ ಜ್ಞಾನವರ್ಧನೆಯ ದೃಷ್ಟಿಯಿಂದ ಎಷ್ಟು ಅಗಾಧವಾದದ್ದೆಂಬುದನ್ನು ಐನ್‌ಸ್ಟೈನರಿಗೆ ಮನಂಬುಗಿಸುವಲ್ಲಿ ಶಿಲ್ಪ್ ಕೊನೆಗೂ ಜಯ ಗಳಿಸಿದರು.

ಅಭಿನಂದನ ಗ್ರಂಥದ ಸಿದ್ಧತೆಗೆ ಐನ್‌ಸ್ಟೈನರ ತಾತ್ತ್ವಿಕ ಸಮ್ಮತಿಯನ್ನು ಗಳಿಸಿದ ತರುವಾಯ ಆತ್ಮಚರಿತ್ರೆಯನ್ನು ಬರೆದು ಕೊಡುವಂತೆ ಅವರನ್ನು ಒಪ್ಪಿಸಬೇಕಾಯಿತು. ಅತ್ಯಂತ ಸಂಕೋಚ ಮತ್ತು ಋಜುಸ್ವಭಾವದವರಾದ ಅವರು ಆತ್ಮಚರಿತ್ರೆಯೆಂದರೆ ಆತ್ಮಪ್ರಶಂಸೆಯೆಂದು ಭಾವಿಸಿ ಆ ಕಾರಣದಿಂದಾಗಿ ಅದನ್ನು ಬರೆಯಲು ಉತ್ಸುಕತೆ ವ್ಯಕ್ತಪಡಿಸಲಿಲ್ಲ. ಏಕೆಂದರೆ ತಾನು ನಡೆದು ಬಂದ ಜಾಡನ್ನು ತಾನೇ ಸಿಂಹಾವಲೋಕಿಸುವಾಗ ತನಗೆ ಅನುಕೂಲವಾಗುವಂತೆ ಘಟನೆಗಳು ಹೊಂದಿಕೊಳ್ಳುವುದು ಸಹಜಪ್ರವೃತ್ತಿ ; ಹೀಗಾಗಿ ಆತ್ಮಚರಿತ್ರೆ ಆತ್ಮಪ್ರಶಂಸೆ ಆಗುತ್ತದೆ. ಆದರೆ ಶಿಲ್ಪ್‌ಅವರ ನಚಿಕೇತಪ್ರಯತ್ನದ ಮುಂದೆ ಈ ಯಮನೂ ಮಣಿಯಬೇಕಾಯಿತು. *The Library of Living Philosophers* ಮಾಲೆಯ ಅಪೂರ್ವ ವೈಶಿಷ್ಟ್ಯ ಹಾಗಿತ್ತು. ಈ ಮಾಲೆಯ ಪ್ರತಿಯೊಂದು ಗ್ರಂಥದಲ್ಲಿಯೂ ಆಯಾ ಗೌರವಿತ ವ್ಯಕ್ತಿಯ ಆತ್ಮಚರಿತ್ರೆ ವಿಶೇಷ ಅಂತಸ್ತು ಪಡೆದು ಕಂಗೊಳಿಸುತ್ತಿತ್ತು.

ಕೊನೆಗೂ ಐನ್‌ಸ್ಟೈನ್ ಬರೆದರು—ತಮ್ಮ ವಿಜ್ಞಾನ ಆತ್ಮಕಥನವನ್ನು, ಸಾಂಪ್ರದಾಯಿಕ ಆತ್ಮಚರಿತ್ರೆಯನ್ನಲ್ಲ. ಇದರಲ್ಲಿ ಅಲ್ಲಿ ಇಲ್ಲಿ ಯಥೋಚಿತವಾಗಿ ವೈಯಕ್ತಿಕ ಘಟನೆಗಳು ಆನುಷಂಗಿಕವಾಗಿ ಬಂದಿವೆ, ಅಷ್ಟೆ. ಈ ಬರವಣಿಗೆಗೆ ಇವರು *autobiographisches* (ಆತ್ಮಚರಿತ್ರೆಯ ಟಿಪ್ಪಣಿಗಳು) ಎಂಬ ಹೆಸರಿತ್ತಿದ್ದಾರೆ. ಇದರ ಒಂದನೆಯ ಪರಿಚ್ಛೇದವನ್ನು ಇಲ್ಲಿ ಮಾದರಿಗಾಗಿ ಉದ್ಧರಿಸಿದೆ :

"ಇಲ್ಲಿ ನಾನು ನನ್ನ ಅರುವತ್ತೇಳನೆಯ ವಯಸ್ಸಿನಲ್ಲಿ ನನ್ನದೇ ಮರಣವಾರ್ತೆಯಂಥ (obituary) ಒಂದು ಲೇಖನ ಬರೆಯಲು ಕುಳಿತಿದ್ದೇನೆ. ಡಾ. ಶಿಲ್ಪ್ ನನ್ನನ್ನು ಹೀಗೆ ಮಾಡಲು ಒಪ್ಪಿಸಿದರೆಂಬ ಒಂದೇ ಕಾರಣಕ್ಕಾಗಿ ಇದನ್ನು ಮಾಡುತ್ತಿರುವುದಲ್ಲ. ಒಬ್ಬಾತನ ಕಾರ್ಯ ಮತ್ತು ಶೋಧನೆಗಳನ್ನು ಸಿಂಹಾವಲೋಕಿಸಿದಾಗ ಅವು ಆತನಿಗೆ ಹೇಗೆ ಕಾಣುತ್ತವೆಂಬುದನ್ನು ಆತನೊಡನೆ ದುಡಿಯುತ್ತಿದ್ದವರಿಗೆ ತೋರಿಸಿಕೊಡುವುದು ಒಳ್ಳೆಯದೆಂಬ ಕಾರಣಕ್ಕಾಗಿಯೂ ಈ ಕೆಲಸಕ್ಕೆ ಕೈ ಹಾಕಿದ್ದೇನೆ. ಇಂಥ ಯಾವುದೇ ಪ್ರಯತ್ನ ಎಷ್ಟು ಅಪರಿಪೂರ್ಣವೆಂಬುದನ್ನು ಸ್ವಲ್ಪ ಆತ್ಮಶೋಧನಾನಂತರ ಅರಿತೆ. ಏಕೆಂದರೆ ಒಬ್ಬನ ಪ್ರವೃತ್ತ ಜೀವನ ಎಷ್ಟೇ ಸಂಕ್ಷೇಪ ಮತ್ತು

ಸೀಮಿತವಾಗಿದ್ದರೂ ದೋಷಮಾರ್ಗಗಳು ಎಷ್ಟೇ ಎದ್ದು ತೋರುವಂತಿದ್ದರೂ ನಿರೂಪಣಾರ್ಹವಾದ ಅಂಶ ಅಷ್ಟೇನೂ ಸಲೀಸಾಗಿ ಬರುವುದಂತೂ ಇಲ್ಲ—ಇಂದು ಅರುವತ್ತೇಳರಲ್ಲಿರುವ ವ್ಯಕ್ತಿ ಐವತ್ತರಲ್ಲಿ, ಮೂವತ್ತರಲ್ಲಿ ಅಥವಾ ಇಪ್ಪತ್ತರಲ್ಲಿ ಇದ್ದವನ ಹಾಗೆ ಖಂಡಿತ ಇರುವುದಿಲ್ಲ. ಒಂದೊಂದು ಹಳೆಯ ನೆನಪೂ ಇಂದಿನ ಪರಿಸ್ಥಿತಿಯಿಂದ ಬಣ್ಣ ಪಡೆದಿರುತ್ತದೆ. ಎಂದೇ ಇದೊಂದು ಮಿಥ್ಯಾದೃಷ್ಟಿಕೋನ. ಈ ಒಂದು ಪರಿಗಣನೆಯೇ ನಮ್ಮನ್ನು ಕಾರ್ಯವಿಮುಖರಾಗಿಸಬಹುದು. ಹೀಗಿದ್ದಾಗ್ಯೂ ಬೇರೆ ಒಂದು ಪ್ರಜ್ಞೆಗೆ ಗಮ್ಯವಾಗದ ಅನೇಕ ಅಂಶಗಳನ್ನು ಸ್ವಂತಾನುಭವದ ಮೂಸೆಯಿಂದ ಹೊರತೆಗೆಯುವುದು ಸಾಧ್ಯವಿದೆ."

ಈ ಮೇಲೆ ವಿವರಿಸಿದ ದೃಷ್ಟಿಕೋನದಿಂದ ಐನ್‌ಸ್ಟೈನರ ಸ್ವಘೋಷಿತ 'ಮರಣವಾರ್ತೆ' ವಿಜ್ಞಾನೇತಿಹಾಸದಲ್ಲಿ ಅಮೂಲ್ಯ ದಾಖಲೆಯಾಗಿದೆ.

ಇಪ್ಪತ್ತೈದು ಮಂದಿ ಹಿರಿಯ ವಿಜ್ಞಾನಿಗಳು—ಆ ಪೈಕಿ ಆರು ಮಂದಿ ನೊಬೆಲ್ ಪ್ರಶಸ್ತಿಧರರು (೧೯೪೯)—ಐನ್‌ಸ್ಟೈನರ ಸಾಧನೆ ಹಾಗೂ ಸಿದ್ಧಿಗಳನ್ನು ಕುರಿತು ಪ್ರೌಢತಾಂತ್ರಿಕ ಲೇಖನಗಳನ್ನು ಬರೆದು *Albert Einstein ; Philosopher-Scientist* ಎಂಬ ಹೆಸರಿನ ಈ ಆಚಾರ್ಯಕೃತಿಯ ಮೌಲ್ಯವನ್ನು ವರ್ಧಿಸಿದ್ದಾರೆ. ಈ ಮಹಾಶಯರು ಎತ್ತಿರುವ ಟೀಕೆಗಳಿಗೆ ಐನ್‌ಸ್ಟೈನ್ ಇದೇ ಗ್ರಂಥದ ಕೊನೆಯಲ್ಲಿ ತಮ್ಮ ಉತ್ತರ ಬರೆದಿದ್ದಾರೆ. ವರ್ತಮಾನ ಭೌತವಿಜ್ಞಾನವನ್ನು ಗಂಭೀರವಾಗಿ ಅಭ್ಯಸಿಸಬಯಸುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಈ ಕೃತಿಯನ್ನು ಪಠಿಸುವುದು ಅತ್ಯಗತ್ಯ. ಆಗ ಮಾತ್ರ ಆತನಿಗೆ ವಿಜ್ಞಾನದ ಜ್ಞೇಯನಿಷ್ಠ ಅಥವಾ ಪರಿಕಲ್ಪನಾನಿಷ್ಠ 'ಕೋಟ'ದ (ಶೈತ್ಯ) ಹಿಂದೆ ಎಂಥ ಮಾನವ ಹೃದಯಸ್ಪಂದದ ಕಾವು ಇದೆ ಎಂಬುದರ ಅರಿವು ಮೂಡೀತು. ಈ ಅರಿವೇ ಭವಿಷ್ಯ ಸಂಶೋಧನೆಗಳಿಗೆ ಪೋಷಣೆ ಒದಗಿಸುವ ಜೀವ ದ್ರವ್ಯ. ನಿಜಕ್ಕೂ ಇತಿಹಾಸವೆಂದರೆ ಪ್ರಾಕೃತಿಕಸನ್ನಿವೇಶಗಳಿಗೆ ಮನುಕುಲ ಕಾಲದಿಂದ ಕಾಲಕ್ಕೆ ವ್ಯಕ್ತ ಪಡಿಸಿದ ಪ್ರತಿಕ್ರಿಯೆಗಳು. ವಿಜ್ಞಾನ ಭಾವನೆಗಳಾದರೋ ಇತಿಹಾಸದ ಕೂಸುಗಳು. ಎಂದಮೇಲೆ ಹೆಸರಾಂತ ಸಂಶೋಧಕನಿಗೆ ಇತಿಹಾಸಪ್ರಜ್ಞೆ ಎಷ್ಟು ಅಗತ್ಯ ಎಂಬುದು ಸುಸ್ಪಷ್ಟ. ಈ ಪ್ರಜ್ಞೆಯನ್ನು ಐನ್‌ಸ್ಟೈನ್-ಅಭಿನಂದನ ಗ್ರಂಥ ಒದಗಿಸುತ್ತದೆ, ನಡೆದು ಬಂದ ಹಾದಿಯನ್ನು ಕಾಣಿಸುತ್ತದೆ.

ಈ ಗ್ರಂಥಕ್ಕೆ ಲೇಖನ ಬರೆದುಕೊಡಬೇಕೆಂದು ನೀಲ್ಸ್ ಬೋರರನ್ನು ಶಿಲ್ಪ್ ಪ್ರಾರ್ಥಿಸಿದ್ದರು. ಪರಮಾಣುಪ್ರಪಂಚದ ಕೆಲವು ಮೂಲಭೂತ ತತ್ತ್ವಗಳನ್ನು ಕುರಿತಂತೆ ಬೋರರು ಐನ್‌ಸ್ಟೈನರ ಎದುರಾಳಿ. "ಭಗವಂತ ಲೆತ್ತ ಹೂಡುವುದಿಲ್ಲ," ಎಂಬುದು ಐನ್‌ಸ್ಟೈನರ ಖಚಿತ ನಿಲವಾದರೆ, "ಭಗವಂತ ಲೆತ್ತ ಹೂಡುತ್ತಾನೆ" ಎಂಬುದು ನೀಲ್ಸ್ ಬೋರರ ಅಷ್ಟೇ ಖಚಿತ ನಿಲವು.

ಪರಮಾಣು ನೂಕ್ಲಿಯಸ್ಸಿನ ಸುತ್ತ ಯಾವುದೇ ಎಲೆಕ್ಟ್ರಾನ್ ಪರಿಭ್ರಮಿಸುತ್ತಿರುವಾಗ ಏಕಕಾಲದಲ್ಲಿ ಅದರ ಸ್ಥಾನ ಮತ್ತು ಸಂವೇಗ ನಿರ್ಧರಿಸುವುದು ಅಸಾಧ್ಯ (ನೋಡಿ ಟಿಪ್ಪಣಿ ೪೪). ಈ ಸಂದಿಗ್ಧತೆಯಿಂದ ಪಾರಾಗಲು ಜರ್ಮನ್ ಭೌತವಿಜ್ಞಾನಿ ವರ್ನರ್ ಹೈಸನ್‌ಬರ್ಗ್ (೧೯೦೧-೭೬) ಅನಿಶ್ಚಿತತಾ ತತ್ತ್ವವನ್ನು (Principle of Uncertainty) ಮಂಡಿಸಿದರು (೧೯೨೭). (ಅನಿಶ್ಚಿತತಾ ತತ್ತ್ವ : ಯಾವುದೇ ಕಣದ ಸ್ಥಾನನಿರ್ದೇಶಕವನ್ನೂ ಚಲನದಿಶೆಯಲ್ಲಿ ಅದರ ಸಂವೇಗವನ್ನೂ ಏಕಕಾಲದಲ್ಲಿ ಅತಿ ನಿಷ್ಕೃಷ್ಟವಾಗಿ ಅರಿಯುವುದು ಅಸಾಧ್ಯ—ನಿಸರ್ಗವೇ ಇಲ್ಲಿ ನಮ್ಮ ಅರಿವಿನೆದುರು, ಅಂದರೆ ನಿಷ್ಕೃಷ್ಟ ವಿವಿಕ್ತತೆಗೆ ವಿರುದ್ಧವಾಗಿ, ಅಡ್ಡಗೋಡೆ ಕಟ್ಟಿದೆಯೊ ಎಂಬಂತೆ.) ಅಂದರೆ, ಸ್ಥಾನ ನಿರ್ಧರಿತವಾದಾಗ ಸಂವೇಗ ನಿರ್ಧರಿತವಾಗಿರದೆ ಸಂಭಾವ್ಯವಾಗಿರುತ್ತದೆ (ಇಂತಿಷ್ಟು ಇರಬಹುದೆಂಬ ಅಂದಾಜು; ಇದನ್ನು ಸಂಖ್ಯಾಕಲನಾತ್ಮಕ ವಿಧಾನಗಳಿಂದ ಪರಿ

ಮಾಣಾತ್ಮಕವಾಗಿ ನಿರೂಪಿಸಬಹುದು). ಅಂತೆಯೇ ಸಂವೇಗ ನಿರ್ಧರಿತವಾದಾಗ ಸ್ಥಾನಸಂಭಾವ್ಯವಾಗಿರುತ್ತದೆ (ಒಂದು ವಿಧದ ಅನಿಶ್ಚಿತತೆ—ಇಂಥಲ್ಲಿ ಇರಬಹುದೆಂಬ ಅಂದಾಜು; ಇದನ್ನು ಕೂಡ ಸಂಖ್ಯಾಕಲನಾತ್ಮಕ ವಿಧಾನಗಳಿಂದ ಪರಿಮಾಣಾತ್ಮಕವಾಗಿ ನಿರೂಪಿಸಬಹುದು). ಗಣಿತದ ಪರಿಭಾಷೆಯಲ್ಲಿ ಇದೇ ಭಾವನೆಯ ನಿರೂಪಣೆ ಹೀಗೆ : ಸ್ಥಾನ ನಿರ್ಧರಿತವಾದಾಗ ಸಂವೇಗದ ಮತ್ತು ಸಂವೇಗ ನಿರ್ಧರಿತವಾದಾಗ ಸ್ಥಾನದ ಸಂಭಾವ್ಯತೆಯನ್ನು ಗಣಿಸಬಹುದು. ಸಂಭಾವ್ಯತಾ ಸಿದ್ಧಾಂತದ ಉಗಮ, ಈ ಹಿಂದೆ ಹೇಳಿರುವಂತೆ, ಲೆತ್ತವೆಸೆಯುವುದರಲ್ಲಿದೆ. ಇದರ ಭಾಷೆ ಸಂಖ್ಯಾಕಲನವಿಜ್ಞಾನ. ಹೀಗಾಗಿ ಅನಿಶ್ಚಿತಾತತ್ತ್ವವನ್ನು ಅಂಗೀಕರಿಸಿ ತದನುಸಾರವಾಗಿ ಪರಮಾಣು ಪ್ರಪಂಚವನ್ನು ವ್ಯಾಖ್ಯಾನಿಸುವ ಭೌತವಿಜ್ಞಾನಿಗಳು ಲೆತ್ತವೆಸೆಯುವ ಭಗವಂತಪಕ್ಷಪಾತಿಗಳಾದರು. ತಮ್ಮ ಶಿಷ್ಯ ಹೈಸನ್‌ಬರ್ಗರ ಕ್ರಾಂತಿಕಾರೀತತ್ತ್ವವನ್ನು ಬೋರ್ ಒಪ್ಪಿ ಅದು ತೋರಿಸಿದ ಹಾದಿ ತುಳಿದರು. ಭವ್ಯ ಪರಂಪರೆಯನ್ನೇ ಬೆಳೆಸಿದರು. ಲೆತ್ತಹೂಡುವ ಭಗವಂತಾನುಯಾಯಿಗಳೇ ಇವರಾದರು. ಐನ್‌ಸ್ಟೈನರ ಆಪ್ತಮಿತ್ರ ಮ್ಯಾಕ್ಸ್ ಬಾರ್ನ್ ಕೂಡ ಇದೇ ಪಕ್ಷದವರಾಗಿದ್ದರು.

ಐನ್‌ಸ್ಟೈನ್ ಮಾತ್ರ ಒಂಟಿಸಲಗ. ಗರವೆಸೆಯದ ಪರಮಾತ್ಮನ ಭಕ್ತಾಗ್ರಣಿ. ಸಂಭಾವ್ಯತಾ ಸಿದ್ಧಾಂತ ಮತ್ತು ಸಂಖ್ಯಾಕಲನಾತ್ಮಕ ವಿಧಾನಗಳು ದೇವರನ್ನು (ನಿಸರ್ಗ) ಅರ್ಥಮಾಡಿಕೊಳ್ಳಲು ನೆರವಾಗಬಹುದು. (ವಾಸ್ತವವಾಗಿ ಐನ್‌ಸ್ಟೈನ್ ೧೯೦೫ರ ದಿನಗಳಲ್ಲಿ ಈ ಉಪಯುಕ್ತ ಹತ್ಯಾರುಗಳನ್ನು ಬಳಸಿಕೊಂಡಿದ್ದರು.) ಅಂದಮಾತ್ರಕ್ಕೆ ಹತ್ಯಾರುಗಳ ಸಮುಚ್ಚಯ ದೇವರಾಗದು. ಈ ವಿಚಾರವನ್ನು ಕುರಿತು ಐನ್‌ಸ್ಟೈನ್ ಬರೆದಿದ್ದಾರೆ (೧೯೧೬): "ವಸ್ತುಗಳನ್ನು ಕ್ರಮೀಕರಿಸುವುದರಲ್ಲಿ ಉಪಯುಕ್ತವೆಂದು ಸಾಧಿತವಾದ ಪರಿಕಲ್ಪನೆಗಳು, ನಮ್ಮ ಮೇಲೆ ಎಂಥ ಪ್ರಭುತ್ವವನ್ನು ಸುಲಭವಾಗಿ ಸ್ಥಾಪಿಸುತ್ತವೆಂದರೆ, ನಾವು ಅವುಗಳ ಮಾನವ ಮೂಲವನ್ನೇ ಮರೆತುಬಿಡುತ್ತೇವೆ. ಹಾಗೂ ಅವು ಎಂದೂ ಬದಲಾಗುವುದಿಲ್ಲವೆಂದು ಅಂಗೀಕರಿಸುತ್ತೇವೆ. ಬಳಿಕ ಅವು 'ಚಿಂತನೆಯ ಆವಶ್ಯಕತೆಗಳು,' 'ಬುದ್ಧಿರೂಢವಾಗಿ ದತ್ತವಾದವು,' ಇತ್ಯಾದಿ, ಅಂತಸ್ತನ್ನು ಪಡೆಯುತ್ತವೆ. ಈ ತೆರನಾದ ದೋಷಗಳ ಪರಿಣಾಮವಾಗಿ ವೈಜ್ಞಾನಿಕ ಪ್ರಗತಿಯ ಪಥ ದೀರ್ಘಕಾಲದ ತನಕ ಬಂದಾಗಿ ಹೋಗಿರುತ್ತದೆ. ಆದ್ದರಿಂದ ಪ್ರಚಲಿತ ಭಾವನೆಗಳನ್ನು ವಿಶ್ಲೇಷಿಸುತ್ತ ಯಾವ ನಿರ್ಬಂಧಗಳ ಮೇಲೆ ಅವುಗಳ ಸಮರ್ಥನೆ ಹಾಗೂ ಉಪಯುಕ್ತತೆ ನೆಲಸಿವೆ ಮತ್ತು ಹೇಗೆ ಅವು ವಿಶೇಷವಾಗಿ ಅನುಭವದ ದತ್ತಾಂಶಗಳಿಂದ ವಿಕಸಿಸಿವೆ ಎಂಬುದನ್ನು ಗುರುತಿಸಲು ಪ್ರಯತ್ನಿಸಿದರೆ ಆ ಪ್ರಯತ್ನ ಅನುಪಯುಕ್ತ ಆಟವೇನೂ ಆಗದು. ಈ ರೀತಿಯಲ್ಲಿ ಅವುಗಳ ಉತ್ಪ್ರೇಕ್ಷಿತ ಪ್ರಭುತ್ವವನ್ನು ಮುರಿಯಲಾಗುತ್ತದೆ. ವಸ್ತುಸ್ಥಿತಿಗೆ ಅವು ಸಮರ್ಪಕವಾಗಿ ಹೊಂದಲಾರವೆಂದಾದರೆ ಅವನ್ನು ಉಚ್ಚಾಟಿಸಲಾಗುವುದು ; ದತ್ತ ವಸ್ತುಗಳನ್ನು ಕುರಿತಂತೆ ಅವುಗಳ ಸಂವಾದಿತ್ವ ತೀರ ಅಲಕ್ಷಣೀಯವಾಗಿ ಸ್ಥಾಪಿತವಾದುದಾಗಿದ್ದರೆ ಅವನ್ನು ತಿದ್ದಿ ಸರಿಪಡಿಸಲಾಗುವುದು; ಯೋಗ್ಯ ಕಾರಣಗಳಿಗಾಗಿ ನಾವು ಮೆಚ್ಚುವ ಹೊಸ ವ್ಯವಸ್ಥೆಯೊಂದನ್ನು ಅಭಿವರ್ಧಿಸಬಹುದಾದರೆ ಅವನ್ನು ಬೇರೆಯವುಗಳಿಂದ ಪ್ರತಿಸ್ಥಾಪಿಸಲಾಗುವುದು."

೧೯೪೪ ನವಂಬರ್ ೭ರಂದು ಐನ್‌ಸ್ಟೈನ್, ಮ್ಯಾಕ್ಸ್ ಬಾರ್ನರಿಗೆ ಬರೆದ ಕಾಗದದಲ್ಲಿ ತಮ್ಮ ನಿಲವನ್ನು ಖಚಿತಪಡಿಸಿದ್ದಾರೆ : "ನಮ್ಮ ವೈಜ್ಞಾನಿಕ ನಿರೀಕ್ಷಣೆಯಲ್ಲಿ ನಾವಿಬ್ಬರೂ ವ್ಯಾಸೀಯ ವಿರುದ್ಧ [diametrically opposite] ಬಿಂದುಗಳಾಗಿದ್ದೇವೆ [ಪರಸ್ಪರ ಎದುರಾಳಿಗಳಾಗಿದ್ದೇವೆ]. ನೀವು ಲೆತ್ತವಾಡುವ ದೇವರನ್ನು ನಂಬಿದ್ದೀರಿ. ನಾನೋ, ನೈಜ ಪದಾರ್ಥಗಳಾಗಿ ಅಸ್ತಿತ್ವದಲ್ಲಿರುವ ವಸ್ತುಗಳ ಪ್ರಪಂಚದಲ್ಲಿಯ ಪರಿಪೂರ್ಣ ನಿಯಮಗಳನ್ನು ನಂಬಿದ್ದೇನೆ. ಇವನ್ನು ನಾನು ವ್ಯಾಪಕ

ಊಹನಾತ್ಮಕ ವಿಧಾನದಿಂದ ಸೆರೆಹಿಡಿಯಲು ಪ್ರಯತ್ನಿಸುತ್ತೇನೆ."

ಲೆತ್ತವೆಸೆಯುವ ಭಗವಂತಪಕ್ಷಪಾತಿಗಳಾದ ನೀಲ್ಸ್ ಬೋರ್, ಮ್ಯಾಕ್ಸ್ ಬಾರ್ನ್ ಮೊದಲಾದವರೆಲ್ಲರಿಗೂ ಐನ್‌ಸ್ಟೈನರ ಬೌದ್ಧಿಕ ಉತ್ಕೃಷ್ಟತೆ ಪ್ರಾಮಾಣಿಕತೆಗಳ ಬಗ್ಗೆ ಅಂತೆಯೇ ಸೌಜನ್ಯ ಸಹೃದಯತೆಗಳ ಬಗ್ಗೆ ಅಪಾರ ಗೌರವವಿತ್ತು. ಪ್ರಾಯೋಗಿಕ ಸಾಕ್ಷ್ಯಾಧಾರ ಮತ್ತು ಸೈದ್ಧಾಂತಿಕ ಸಮರ್ಥನೆ ತಮ್ಮ ಪರವಾಗಿಯೇ ಇದ್ದರೂ ಈ ಹಿರಿಯರನ್ನು ಮಾತ್ರ ಒಲಿಸಲು ಇನ್ನೂ ಸಾಧ್ಯವಾಗಿಲ್ಲವಲ್ಲ ಎಂಬ ಕೊರಗು ಇವರನ್ನು ಬಾಧಿಸುತ್ತಿತ್ತು. ಆದರೆ ಐನ್‌ಸ್ಟೈನ್ ಮಾತ್ರ ಸುಂದರ, ಸರಳ, ವಿವಿಕ್ತ ಮತ್ತು ಗರಹೂಡದ ದೇವರ ಅಸ್ತಿತ್ವದಲ್ಲಿ ದೃಢವಿಶ್ವಾಸವುಳ್ಳವರಾಗಿದ್ದರು. ಹೀಗಾಗಿ ಬೋರ್ ಮತ್ತು ಐನ್‌ಸ್ಟೈನ್ ಒಂದೆಡೆ ಕಲೆತಾಗ ಅದೊಂದು ಸಮಬಲರ ಮಹಾವಾಗ್ಯುದ್ಧವೇ ಆಗುತ್ತಿತ್ತು. ಐನ್‌ಸ್ಟೈನರ ಮೂಲಭೂತ ನಂಬಿಕೆ ಮತ್ತು ತತ್ತ್ವಶಾಸ್ತ್ರೀಯ ಅಭ್ಯಂತರವನ್ನು ಯಾವುದೇ ವಿಧವಾದ ವಾದದಿಂದ ಇಲ್ಲವೇ ಪುರಾವೆಯಿಂದ ಬೋರರಿಗೆ ನಿವಾರಿಸಲು ಸಾಧ್ಯವಾಗುತ್ತಿರಲಿಲ್ಲ. "ಇಂದಿನ ಅಪರಿಪೂರ್ಣ ಜ್ಞಾನದ ದೃಷ್ಟಿಯಿಂದ ಭಗವಂತ ಲೆತ್ತಹೂಡುವಂತೆ ತೋರುವುದು ನಿಜ. ಆದರೆ ಇದರಿಂದಾಗಿ ವಿಶ್ವನಿಯಮವೇ ಇದೆಂದು ತೀರ್ಮಾನಿಸುವುದು ಸಂಗತವಾಗದು. ಮುಂದೊಂದು ದಿನ ಜ್ಞಾನ ಇನ್ನಷ್ಟು ವರ್ಧಿಸಿದಾಗ, ಹತ್ಯಾರುಗಳು ಅಧಿಕ ಸೂಕ್ಷ್ಮತರವಾದಾಗ ಲೆತ್ತವಾಡದ ಭಗವಂತನ ಸಾಕ್ಷಾತ್ಕಾರವಾಗುವುದು ದಿಟ," ಎಂಬುದಾಗಿ ಐನ್‌ಸ್ಟೈನ್ ಪ್ರತಿವಾದ ಮಂಡಿಸುತ್ತಿದ್ದರು.

ಒಮ್ಮೆ ಬ್ರುಸ್ಸೆಲ್ಸಿನಲ್ಲಿ ಹಿರಿಯ ವಿಜ್ಞಾನಿಗಳ—ಸಾಧಾರಣವಾಗಿ ಮೂರು ತಲೆಮಾರಿನ ವಿಜ್ಞಾನಿಗಳ—ಭಾರೀ ಸಮ್ಮೇಳನ ಸೇರಿತ್ತು. ಲೊರೆಂಟ್ಜ಼್, ಪ್ಲ್ಯಾಂಕ್ ಒಂದನೆಯ ತಲೆಮಾರಿನವರು; ಐನ್‌ಸ್ಟೈನ್, ಬೋರ್, ಬಾರ್ನ್, ಏರೆನ್‌ಫೆಸ್ಟ್ ಎರಡನೆಯ ತಲೆಮಾರಿನವರು; ಹೈಸನ್‌ಬರ್ಗ್, ಪೌಲಿ ಮೊದಲಾದವರು ಮೂರನೆಯ ತಲೆಮಾರಿನವರು. ಐನ್‌ಸ್ಟೈನ್-ಬೋರ್ ಜೋಡಿ ಎಂದಿನ 'ಕಾಳೆಗ'ಕ್ಕಿಳಿಯಿತು. ಪ್ರತಿಸಲವೂ ಐನ್‌ಸ್ಟೈನ್ ತಮ್ಮ ವಾದಸಮರ್ಥನೆಗೋಸ್ಕರ ಅತ್ಯದ್ಭುತ ಭಾವನಾತ್ಮಕ ಪ್ರತಿರೂಪಗಳನ್ನು ಮಂಡಿಸುತ್ತಿದ್ದರು. ಬೋರ್ ಇವನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಇವುಗಳ ಅಸಾಧುತ್ವವನ್ನು ತೋರಿಸಿ ಕೊಡುತ್ತಿದ್ದರು. ಹೀಗೆ ಗಂಟೆಗಟ್ಟಲೆ ವಾದವಿವಾದ ಮುಂದುವರಿದು ಕೊನೆಗೆ ಐನ್‌ಸ್ಟೈನರ ಬತ್ತಳಿಕೆಯಲ್ಲಿ ಅಸ್ತ್ರಗಳೇ ಇಲ್ಲದಂಥ ಶೂನ್ಯ ಪರಿಸ್ಥಿತಿ ತಲೆದೋರಿತು. ಆದರೆ ನಮ್ಮ "ಇಂದಿನ ಅಪರಿಪೂರ್ಣ ಜ್ಞಾನ"ವನ್ನೇ ಭಗವಂತ ಎಂದು ಖಂಡಿತ ಒಪ್ಪಲಿಲ್ಲ ಐನ್‌ಸ್ಟೈನ್. ಇಡೀ 'ಕಾಳೆಗ'ವನ್ನು ಗಮನಿಸಿದ ಏರೆನ್‌ಫೆಸ್ಟರಿಗೆ—ಇವರು ಐನ್‌ಸ್ಟೈನರ ಮಿತ್ರರು ಕೂಡ—ಸಾತ್ತ್ವಿಕ ರೋಷ ತಡೆಯಲಾಗಲಿಲ್ಲ. ಐನ್‌ಸ್ಟೈನ್ ಮೊಂಡುತನ ಪ್ರದರ್ಶಿಸುತ್ತಿದ್ದಾರೆಂದು ಅನ್ನಿಸಿರಬಹುದು.

ಏರೆನ್‌ಫೆಸ್ಟ್, "ಐನ್‌ಸ್ಟೈನ್ ! ನಿಮ್ಮ ಬಗ್ಗೆ ನನಗೆ ಕಡು ನಾಚಿಕೆ ಆಗುತ್ತಿದೆ. ನಿಮ್ಮ ಸಾಪೇಕ್ಷತಾಸಿದ್ಧಾಂತವನ್ನು ಅಲ್ಲಗಳೆಯಲು ನಿಮ್ಮ ವಿರೋಧಿಗಳು ಹಿಡಿಯುವ ಸ್ಥಾನವನ್ನು ನೀವಿಲ್ಲಿ ಹಿಡಿದಿದ್ದೀರಿ."

ಈ ಉದ್ಗಾರದಿಂದ ಐನ್‌ಸ್ಟೈನ್ ಏನೂ ಕುಪಿತರಾಗಲಿಲ್ಲ. ಇವರನ್ನು ಒಪ್ಪಿಸಲಾಗದಿದ್ದುದಕ್ಕಾಗಿ ಬೋರರಿಗೆ ವಿಷಾದವಾಗಿತ್ತು.

"ನನ್ನ ವೈಜ್ಞಾನಿಕ ಪ್ರಜ್ಞೆಗೆ ಇಷ್ಟೊಂದು ವ್ಯತಿರಿಕ್ತವಾಗಿರುವ ನಿಮ್ಮ ನಿಲವನ್ನು ಹೇಗೆ ಅಂಗೀಕರಿಸಲಿ ! ಇನ್ನಷ್ಟು ಪರಿಪೂರ್ಣವಾದ ಪರಿಕಲ್ಪನೆಯ ಅನ್ವೇಷಣೆಯೇ ನನ್ನ ಬಾಳಿನ ಗುರಿ." ಇದು ಐನ್‌ಸ್ಟೈನರ ತಾತ್ತ್ವಿಕ ದೃಷ್ಟಿ. ಗರಹೆಸೆಯುವ ದೇವರನ್ನು ಇವರು ಕೊನೆ ಉಸಿರಿನ ತನಕವೂ

ಒಪ್ಪಲಿಲ್ಲ. ಆದರೆ ಇವರ ತಾತ್ತ್ವಿಕ 'ಹಠಮಾರಿತನ'ದ ಪರಿಣಾಮವಾಗಿ ಗರವೆಸೆಯುವ ದೇವರ ಭಕ್ತರ ಹತ್ಯಾರುಗಳು ಮಾತ್ರ ತುಂಬ ಮೊನಚಾದುವು ಮತ್ತು ನಾಜೂಕಾದುವು.

ದಾಳವೆಸೆಯದ ಭಗವಂತನ ಗುಣಗಾನವನ್ನು ಮತ್ತೆಮತ್ತೆ ಐನ್‌ಸ್ಟೈನರ ಬಾಯಿಯಿಂದ ಕೇಳಿ ಕೇಳಿ ರೋಸಿಹೋಗಿದ್ದ ಬೋರ್ ಒಮ್ಮೆ ನೇರವಾಗಿ ಮುಖಕ್ಕೆ ಹೊಡೆದಂತೆ ಅಂದೇಬಿಟ್ಟಿದ್ದರು. "ಭಗವಂತನಿಗೆ ಆತ ಏನು ಮಾಡಬೇಕೆಂದು ವಿಧಿಸುವುದನ್ನು ನಿಲ್ಲಿಸಿ !"

ಅಲ್ಲಿ ನೆರೆದಿದ್ದ ಇತರ ಎಲ್ಲ ಭೌತವಿಜ್ಞಾನಿಗಳೂ ಬೋರ್-ಪಕ್ಷಪಾತಿಗಳು (ದಾಳವೆಸೆಯುವ ಭಗವಂತ). ಆದರೆ ಅದೇ ಭಗವಂತನ ಬಗೆಗೆ ಐನ್‌ಸ್ಟೈನರಿಗಿಂತ ಹೆಚ್ಚಿನ ತಿಳಿವಳಿಕೆ, ಸಾಕ್ಷಾತ್ ಬೋರರನ್ನೂ ಒಳಗೊಂಡಂತೆ, ಬೇರೆ ಯಾರಿಗೂ ಇಲ್ಲವೆಂದು ಅವರೆಲ್ಲರಿಗೂ ಗೊತ್ತಿತ್ತು.

ಬಿಚ್ಚಲಾಗದ ಮತ್ತು ತುಂಡರಿಸಲೂ ಆಗದ ಈ ಕಗ್ಗಂಟನ್ನು ಕುರಿತು ಮ್ಯಾಕ್ಸ್ ಬಾರ್ನ್ ಬರೆದಿರುವ ವಿವರಣೆ ಅರ್ಥಪೂರ್ಣವಾಗಿದೆ : "ಭಗವಂತ ಈ ಪ್ರಪಂಚವನ್ನು ಪರಿಪೂರ್ಣ ಯಂತ್ರವಾಗಿ ರಚಿಸಿರುವನಾದ ಪಕ್ಷ, ಇದರ ಸೂಕ್ಷ್ಮಭಾಗಗಳನ್ನು ಮುನ್ನುಡಿಯಲು ನಾವು ಅಸಂಖ್ಯಾತ ಅವಕಲ ಸಮೀಕರಣಗಳನ್ನು ಬಿಡಿಸದೆ, ಲೆತ್ತವನ್ನು ಉಪಯೋಗಿಸಿ ಸಾಕಷ್ಟು ಯಶಸ್ಸುಗಳಿಸಬಹುದಾದಷ್ಟು ಸಾಮರ್ಥ್ಯವನ್ನಾದರೂ, ನಮ್ಮ ಅಲ್ಪಮತಿಗೆ ಕರುಣಿಸಿದ್ದಾನೆ. ಸಾಕ್ಷಾತ್ ಐನ್‌ಸ್ಟೈನರಿಂದಲೇ ಈ ಸೂಕ್ಷ್ಮವನ್ನು ನಾನು (ನನ್ನ ಅನೇಕ ಸಹೋದ್ಯೋಗಿಗಳೂ ಸೇರಿದಂತೆ) ಕಲಿತದ್ದಾಗಿದೆ. ಶಕಲ ಸಂಖ್ಯಾಕಲನವಿಜ್ಞಾನದ ಪ್ರವೇಶದಿಂದ ಈ ಸನ್ನಿವೇಶದಲ್ಲಿ ವಿಶೇಷ ಬದಲಾವಣೆ ಉಂಟಾಗಿದೆ ಎಂದೇನೂ ನಾನು ಭಾವಿಸಿಲ್ಲ. ಇಲ್ಲಾದರೂ ಮರ್ತ್ಯರಾದ ನಾವು ಭವಿಷ್ಯವನ್ನು ಕಣಿ ನುಡಿಯುವ ನಮ್ಮ ಅಲ್ಪೋದ್ದೇಶದ ಈಡೇರಿಕೆಗಾಗಿ ಲೆತ್ತವನ್ನು ಎಸೆಯುತ್ತೇವೆ, ಅಷ್ಟೆ. ಭಗವಂತನ ಕ್ರಿಯೆಗಳು ಅಭಿಜಾತ ಬ್ರೌನಿಯನ್ ಚಲನೆಯಲ್ಲಿ ಹೇಗೆ ನಿಗೂಢವಾಗಿವೆಯೋ ಹಾಗೆ ವಿಕಿರಣಪಟುತ್ವದಲ್ಲಿ ಮತ್ತು ಶಕಲವಿಕಿರಣದಲ್ಲಿ ಅಥವಾ ವ್ಯಾಪಕ ವಾಗಿ ಜೀವನದಲ್ಲಿ ಕೂಡ ನಿಗೂಢವಾಗಿವೆ."

*Geometry and Expericnce* ಎನ್ನುವ ಉಪನ್ಯಾಸದಲ್ಲಿ (೧೯೨೧) ಐನ್‌ಸ್ಟೈನ್ ಹೇಳಿದ್ದಾರೆ: "ಗಣಿತೋಕ್ತಿಗಳು ವಾಸ್ತವತೆಯನ್ನು ಪ್ರತಿನಿಧಿಸುತ್ತಿರುವವರೆಗೆ ಖಚಿತವಲ್ಲ, ಖಚಿತವಾಗಿರುವ ವರೆಗೆ ವಾಸ್ತವತೆಯನ್ನು ಪ್ರತಿನಿಧಿಸುವುದಿಲ್ಲ." (As far as the propositions of mathematics refer to reality they are not certain ; as far as they are certain, they do not refer to reality.)

*Albert Einstein : Philosopher-Scientist* ಅಭಿನಂದನಗ್ರಂಥಕ್ಕೆ ಒಂದು ಲೇಖನ ಬರೆಯಬೇಕೆಂಬುದಾಗಿ ಶಿಲ್ಪ್ ಬೋರರಿಗೆ ಪ್ರಾರ್ಥನೆ ಸಲ್ಲಿಸಿದ್ದು ಸರಿಯಷ್ಟೆ. "ಐನ್‌ಸ್ಟೈನರ ಧೀಶಕ್ತಿ ನಮ್ಮ ಇಡೀ ತಲೆಮಾರಿಗೆ ನೀಡಿರುವ ಮಾರ್ಗದರ್ಶನವನ್ನು ಕೃತಜ್ಞತೆಯಿಂದ ಸ್ಮರಿಸುತ್ತ" ಈ ಪ್ರಿಯಕರ್ತವ್ಯವನ್ನು ನೆರವೇರಿಸಲು ಬೋರ್ ಒಪ್ಪಿಕೊಂಡರು. ಇವರ ಲೇಖನದ ಶೀರ್ಷಿಕೆ, Discussion with Einstein on Epistemological problems in atomic physics (ಪರ ಮಾಣು ಭೌತವಿಜ್ಞಾನದಲ್ಲಿ ಜ್ಞಾನಮೀಮಾಂಸೀಯ ಸಮಸ್ಯೆಗಳ ಬಗ್ಗೆ ಐನ್‌ಸ್ಟೈನರೊಡನೆ ಚರ್ಚೆ).

ಮಹಾಪುರುಷರಿಬ್ಬರ ನಡುವಿನ ಮೂಲಭೂತ ಮತಭೇದ ಈ ಪ್ರಬಂಧದಲ್ಲಿ ಅತ್ಯಂತ ಸಹೃದಯ ಮತ್ತು ಪ್ರಾಮಾಣಿಕ ಹಿನ್ನೆಲೆಯಲ್ಲಿ ಸುಸ್ಪಷ್ಟವಾಗಿ ಚರ್ಚಿಸಲ್ಪಟ್ಟಿದೆ. ಈ ಕಾರಣದಿಂದ ಪರಮಾಣುಭೌತವಿಜ್ಞಾನವಾಙ್ಮಯದಲ್ಲಿ ಇದಕ್ಕೊಂದು ವಿಶಿಷ್ಟಸ್ಥಾನ ಉಂಟು.

ಬೋರ್ ಆಗ (೧೯೪೮) ಪ್ರಿನ್‌ಸ್ಟನ್ನಿಗೆ ಗೌರವ ಸಂದರ್ಶಕ ಪ್ರಾಧ್ಯಾಪಕರಾಗಿ ಆಗಮಿಸಿದ್ದರು.

ಅಲ್ಲಿ ಕೆಲವು ತಿಂಗಳ ಕಾಲ ತಂಗುವ ಕಾರ್ಯಕ್ರಮವಿದ್ದುದರಿಂದ ಲೇಖನವನ್ನು ಈ ವಾಸ್ತವ್ಯದ ವೇಳೆ ಬರೆಯುವುದಾಗಿ ಹಮ್ಮಿಕೊಂಡಿದ್ದರು. ಪರಮಾಣು ಪ್ರಪಂಚದ ನಿರ್ವಿವಾದ ಪ್ರಭುವಾದ ಈ ಮಹಾಶಯನಿಗೆ ಲೇಖನ ಬರೆಯುವುದೆಂದರೆ ಅದೊಂದು ಅಧ್ವರ ನಿರ್ವಹಣೆಯಂಥ ಅಗಾಧ ಸಾಹಸವೆನಿಸುತ್ತಿತ್ತು. ಮಹಾಗಾತ್ರದಲ್ಲಿ ತೀವ್ರ ವೇಗದಿಂದ ಬುದ್ಬುದಿಸುತ್ತಿದ್ದ ಭಾವನೆಗಳಿಗೆ ರೂಪವಿತ್ತು, ಭಾಷೆಯ ಉಡುಪು ತೊಡಿಸಿ, ಲೆಕ್ಕಣಿಯ ಕಪ್ಪು ಶಾಯಿ ಮೂಲಕ ಕಾಗದಕ್ಕಿಳಿಸುವುದು ಇವರಿಗೆ ವಿಪರೀತ ತ್ರಾಸದ ಕಾರ್ಯವಾಗಿ ತೋರುತ್ತಿತ್ತು. ಈ ಸವಾಲನ್ನೆದುರಿಸಲು ಇವರೊಂದು ಸ್ವಂತ ವಿಧಾನವನ್ನು ರೂಪಿಸಿಕೊಂಡಿದ್ದರು. ಇದರ ಪ್ರಕಾರ ಬೋರ್ ಒಬ್ಬ ಲೆಕ್ಕಣಿಗನ ನೆರವು ಪಡೆಯುತ್ತಿದ್ದರು. ಅವರು ಧ್ಯಾನಸ್ಥರಾಗಿ ಇಲ್ಲವೇ ಅಂತರ್ಮುಖಿಗಳಾಗಿ ಕೊಠಡಿಯಲ್ಲಿ ಶತಪಥ ತಿರುಗುತ್ತ, ಆಗ ಈಗ ನಿಂತು, ಮೇಲೆ ಕೆಳಗೆ ನೋಡುತ್ತ, ಅಪರೂಪಕ್ಕೆ ಅತಿ ಪ್ರಯಾಸದಿಂದ ಒಂದೊ ಎರಡೊ ಪದಗಳನ್ನು ಉದುರಿಸಿದರೆ, ಲೆಕ್ಕಣಿಗ ಒಡನೆ ಆ ನುಡಿ ಮುತ್ತುಗಳನ್ನು ಹೆಕ್ಕಿ, ಅವು ಕೆಡೆದ ಕ್ರಮದಲ್ಲೇ ಅವನ್ನು ಕಡತದಲ್ಲಿ ದಾಖಲಿಸಬೇಕಾಗಿತ್ತು. ಪುನರಾವರ್ತಿತ ಪದಗಳ ಮತ್ತು ಪರಸ್ಪರ ಅರ್ಥಸಂಬಂಧವಿರದ ಪದಪುಂಜಗಳ ಈ ಸಂತೆಯಿಂದ ಒಟ್ಟಾರೆ ಯಾವ ಅರ್ಥವೂ ಹೊಮ್ಮುತ್ತಿರಲಿಲ್ಲ. ಅವು ಸಂಗತವಾಕ್ಯಗಳಾಗಿ ಕೋದುಕೊಂಡರೆ ತಾನೇ ಅರ್ಥಪೂರ್ತಿ ಆಗುವುದು ! ಕೆಲವು ಗಂಟೆಗಳ ತಪಸ್ಸು, ಪರ್ಯಟನೆ, ಉದ್ಗಾರ ಮುಂತಾದ ವಿವಿಧ ಲಾಸ್ಯ ಭಂಗಿಗಳ ಪರಿಣಾಮವಾಗಿ ಉತ್ಪನನಗೊಂಡ ಈ ಮೊದಲ ಕರಡು ಮುಂದಿನ ಪ್ರತಿಗೆ ಅಡಿಪಾಯವಾಗುತ್ತಿತ್ತು.

ಐನ್‌ಸ್ಟೈನ್-ಅಭಿನಂದನಗ್ರಂಥಕ್ಕೆ ಲೇಖನ ಬರೆಯಲು ಸಂಕಲ್ಪಿಸಿದ ಬೋರ್, ಆಗ ಪ್ರಿನ್ಸ್‌ಟನ್ನಿನಲ್ಲಿದ್ದ ತಮ್ಮ ಶಿಷ್ಯ ಅಬ್ರಾಹಾಮ್ ಪೇಯ್ಸ್ ಅವರನ್ನು ಲೆಕ್ಕಣಿಗನಾಗಿ ತನಗೆ ನೆರವು ನೀಡುವಂತೆ ಕೋರಿದರು. ಆ ವ್ಯಾಸನಿಗೆ ಈ ಗಣಪತಿ !

"ನನಗೊಂದು ಮೂಲಬಿಂದು ಬೇಕು ನೋಡಿ ನಿರ್ದೇಶಕ ವ್ಯವಸ್ಥೆಯನ್ನು ರೂಪಿಸಲು" ಎಂದರು ಬೋರ್ ಪೇಯ್ಸರಿಗೆ. ಆ ಮೂಲಬಿಂದುವೇ[೬೦] ಪೇಯ್ಸ್. (ನಗರದಲ್ಲಿ ನಮ್ಮ ಗುರಿ ಅರಸಿ ಹೋಗುವ ಮುನ್ನ ಬಸ್ ನಿಲ್ದಾಣವನ್ನೊ ರೇಲ್ವೆ ಠಾಣೆಯನ್ನೊ ಬೇರಾವುದೋ ಪ್ರಮುಖ ಸೌಧವನ್ನೊ ಮೂಲಬಿಂದುವಾಗಿ ಆಯುವುದು ವಾಡಿಕೆ ಅಲ್ಲವೇ ?)

ಪ್ರಿನ್ಸ್‌ಟನ್ನಿನ ಫೆಲ್ಡ್ ಹಾಲ್ ಎಂಬ ಕಟ್ಟಡ. ಅದರಲ್ಲಿ ಒಂದು ಕಿರುಕೊಠಡಿ ಐನ್‌ಸ್ಟೈನರ ಅಧಿಕೃತ ಕಛೇರಿ. ದೊಡ್ಡ ಕೊಠಡಿಯನ್ನು ಇವರು ಖಾಯಿಸು ಪಡುತ್ತಿರಲಿಲ್ಲ. ಇವರ ಕೊಠಡಿಯ ಪಕ್ಕದ ಕೊಠಡಿಯನ್ನು ಬೋರರಿಗೆ ಕೊಡಲಾಗಿತ್ತು. ಬೋರ್ ಮತ್ತು ಪೇಯ್ಸ್ ಇದರ ಒಳ ಹೊಕ್ಕರು. ಕದವನ್ನು ಮೆತ್ತಗೆ ತಳ್ಳಿ ಮುಚ್ಚಿದರು. ಬಾದಾಮಿ ಆಕಾರದ ದೊಡ್ಡ ಮೇಜದ ಒಂದು ಅಂಚಿನಲ್ಲಿ ಪೇಯ್ಸ್ ಕುಳಿತರು. ಇವರೆದುರಿಗಿದ್ದ ತೆರೆ ಜಾಗದಲ್ಲಿ ಕೊಠಡಿಯ ಉದ್ದಕ್ಕೂ ಬೋರ್ ಹಿಂದೆ ಮುಂದೆ ಭರದಿಂದ ಗಸ್ತು ತಿರುಗತೊಡಗಿದರು. ಒಂದು ಪದದ ಮೇಲೆ ಮಾನಸಿಕವಾಗಿ ಲಕ್ಷ್ಯ ಸಾಂದ್ರೀಕರಿಸಿದರು. ಅದನ್ನು ನೇವರಿಸಿದರು, ಪೋಷಿಸಿದರು, ಬೆಂಬಲಿಸಿದರು. ಇದ್ದಕ್ಕಿದ್ದಂತೆ ಇಕ್ಕುಳ ಹಾಕಿ ಹೊರಗೆಳೆದಂತೆ ಒಂದು ಪದ ಅವರ ಗಂಟಲಿನಂತರಾಳದಿಂದ ನೆಗೆದು ಬಿತ್ತು : "ಐನ್‌ಸ್ಟೈನ್ !"

ಮುಂದೇನು ! ಶತಪಥ, ತಕಪಕ, ತಕಧಿಮಿ, ತಕಜೊಣು ! ಮತ್ತೆ ಅದೇ ಪದ : "ಐನ್‌ಸ್ಟೈನ್!"

ನಿಂತರು. ಪದದ ಬೆನ್ನೇರಿ ನಡೆದರು. (ಭೃಂಗದ ಬೆನ್ನೇರಿ ಬರಲಿಲ್ಲ ಕಲ್ಪನಾವಿಲಾಸ !) ಮುಂದಿನ ಪದಕ್ಕೆ ಗಾಳ ಹಾಕಿದರು. ಹೊಂಚಿದರು. ಇಲ್ಲ, ಅದು ಕಚ್ಚಲಿಲ್ಲ. ಎರೆ ಸಾಕಾಗಲಿಲ್ಲವೊ

ಏನೊ ! ಮತ್ತೆ ಓಡಾಟ, ತೊಳಲಾಟ. ಅಗೊ ಬಂತು ಬಂತು, ಬನಿ ಬಂತು ಬಂತು, ದನಿ ಬಂತು, ಅದು ಎಂಥ ತಂತು ? "ಐನ್‌ಸ್ಟೈನ್ ! ಐನ್‌ಸ್ಟೈನ್ !"

ಈಗವರು ಸೋತಿದ್ದರು. ನಿಡುಸುಯ್ದು ಕೈಕೊಡಹಿ ಚತ್ತುವನ್ನು ನಿಟ್ಟಿಸಿದರು. ಬಾಗಿಲಿನ ಎದುರಿಗಿದ್ದ ಕಿಟಕಿಯೆಡೆಗೆ ಜಿಗಿದರು. ಕಂಬಿಗಳ ಮೇಲೆ ಒಡಲ ತೂಕ ಚೆಲ್ಲಿ ಹೊರಗಿನ ನೋಟದ ಮೇಲೆ ದಿಟ್ಟಿಹಾಯಿಸುತ್ತ ತಂಗಿದರು. ನವ ಸ್ಫೂರ್ತಿಯನ್ನು ನಿರೀಕ್ಷಿಸುತ್ತ ನಿಂತರು. ಆಚೆಗೆ ಚಾಚಿದರು ಚುಂಚಾ !

ತೀರ್ಥೋದ್ಭವವನ್ನು ಎದುರುನೋಡುವ ಭಕ್ತನಂತೆ ಪೇಯ್ಸ್ ಕಾದರು. ಅಷ್ಟರಲ್ಲೇ ಇವರ ಗಮನ ಬಾಗಿಲತ್ತ ಹರಿಯಿತು—ಹರಿಯುವುದು ಅನಿವಾರ್ಯವಾಯಿತು. ಅಲ್ಲೇನು ವಿಶೇಷ ? ಮೆತ್ತಗೆ ಪಡಿ ಸರಿಯುತ್ತಿತ್ತು—ಸದ್ದು ಇನಿತೂ ಸೂಸುತ್ತಿರಲಿಲ್ಲ. ಅರೆ ಇದೇನು ! ಯಾರು ಹೀಗೆ ಆಟವಾಡುತ್ತಿದ್ದಾರೆ ? ಇನ್ನಾರು ? ಅವರೇ—ಸಾಕ್ಷಾತ್ ಐನ್‌ಸ್ಟೈನರೇ ! ಅಂತು ಇಂತು ತಂತುವಿಗೆ ಬಂತು ಪ್ರಾಣಾ ! ಪೇಯ್ಸರಿಗೆ ಗಾಬರಿ. ಇವರೇಕೆ ಹೀಗೆ ಬರುತ್ತಿದ್ದಾರೆ ? ಬೋರ್ ಹೊಡೆದ ಬೊಬ್ಬೆ ಕೇಳಿ ತಮಾಷೆ ನೋಡಲೆಂದೇ ? ತುಂತುಂತುಂತುಂ ತುಂಬಿ ಬಂದಿತ್ತ !

ಕಣ್ಣುಗಳ ಅಂಚಿನಲ್ಲಿ ಕಿರುಚೇಷ್ಟೆ ಬೀರುವ ಹೂನಗು. ತೋರುಬೆಟ್ಟನ್ನು ತುಟಿಯ ಮೇಲಿಟ್ಟು ಮಾತನಾಡಕೂಡದೆಂಬ ಸಂಜ್ಞೆ, ಹಸ್ತವನ್ನು ಕೆಳಮೊಗವಾಗಿ ಕೆಳಕ್ಕೆ ಬೀಸಿ ಏಳಕೂಡದೆಂಬ ಹುಕುಂ. ಪೇಯ್ಸ್ ವಿಸ್ಮಿತರಾಗಿ ಮಾತಾಡದೆ ಆಸನಕ್ಕೆ ಅಂಟಿಕೊಂಡರು.

ಅವರು ಬಂದರು. ಕಳ್ಳಹೆಜ್ಜೆ ಇಡುತ್ತ ಬಂದರು. ಬೆಕ್ಕಿನಂತೆ ಮೆತ್ತಗೆ ನಡೆಯುತ್ತ ಬಂದರು. ಮೇಜದ ಅಂಚು ತಲಪಿದರು. ಅಲ್ಲಿದ್ದ ತಂಬಾಕದ ಕರಡಿಗೆಗೆ (ಐನ್‌ಸ್ಟೈನರಂತೆ ಬೋರ್ ಕೂಡ ಪೈಪ್ ಧೂಮಪಾನಪ್ರಿಯ; ಪೈಪಿಗೆ ತುಂಬಿಸಲು ಬೋರ್ ತಮ್ಮೊಡನೆ ಒಯ್ಯುತ್ತಿದ್ದ ತಂಬಾಕು-ಕರಡಿಗೆಯನ್ನು ಮೇಜದ ಮೇಲಿರಿಸಿದ್ದರು ; ಈ ಸೂಕ್ಷ್ಮ ಐನ್‌ಸ್ಟೈನರಿಗೆ ಯಾವುದೇ ಪೈಪ್‌ಪ್ರಿಯನಿಗೆ ತಿಳಿದಿರುವಂತೆ ಮೊದಲೇ ಗೊತ್ತಿತ್ತು) ಮೆತ್ತಗೆ ಬೆರಳಿಕ್ಕಿ ತಂಬಾಕು ಚಿಟಿಕೆಯನ್ನೆತ್ತಿ ಪೈಪಿಗೆ ಗಿಡಿದರು. ಮಾತಿಲ್ಲ. ತೃಪ್ತಭಾವ. ಇನ್ನೇನು ಹಿಂತಿರುಗಬೇಕು . . .

ಅಷ್ಟರಲ್ಲಿ ಬೋರ್ ನವೋತ್ಸಾಹೋನ್ಮೀಲಿತರಾಗಿ ಗರ್ಜಿಸಿದರು : "ಐನ್‌ಸ್ಟೈನ್ ! ಐನ್‌ಸ್ಟೈನ್!" ವಿದ್ಯುತ್ತಿನ ಚುರುಕಿನಿಂದ ೧೮೦° ಪೂರ್ತಿ ತಿರುಗಿದರು. ಇನ್ನೇನು ಎಡಗಾಲು ಮುಂದಿಡಬೇಕು . . . ಇಲ್ಲ, ಅರೆ ! ಐನ್‌ಸ್ಟೈನ್ ಮೂರ್ತಿ ಕಣ್ಣ ಮುಂದೆ ನಿಂತಿದ್ದಂತಿದೆ ? ಇಲ್ಲ, ನಿಂತೇ ಇದೆ ! ಅದೇ ಮುಗ್ಧ ಚೇಷ್ಟೆ ಭಂಗಿ, ತನ್ನ ಆರ್ಭಟೆಗೆ ಓಕೊಟ್ಟು ಬಂದು "ಏನಪ್ಪಣೆ ?" ಎಂದು ಕೇಳುತ್ತಿರುವರೋ ಎಂಬ ಹನುಮಂತ ದೃಷ್ಟಿ. ಆದರೆ ಅದು ಕಂಡು ಧನ್ಯನಾಗುವ ಸಂದರ್ಭ ಅಲ್ಲವಷ್ಟೆ !

ಈ ನಾಟಕದ ಮೂವರು ಪಾತ್ರಧಾರಿಗಳೂ ಗರಬಡಿದವರಂತೆ ಸ್ತಂಭೀಭೂತರಾದರು—ಬೋರ್, ಅರಿಯದೆ ಮಾಡಿದ ಅಪಚಾರಕ್ಕಾಗಿ; ಐನ್‌ಸ್ಟೈನ್, ಲೆತ್ತವೆಸೆಯುವ ಭಗವಂತನ (=ಬೋರ್) ನವಲೀಲೆಯ ಸಾಕ್ಷಾತ್ಕಾರಕ್ಕಾಗಿ; ಪೇಯ್ಸ್, ಲೆತ್ತವೆಸೆಯದ ಮತ್ತು ಲೆತ್ತವೆಸೆಯುವ ಭಗವಂತರುಗಳ ಹಠಾತ್ ಸಂಘಟ್ಟನೆಗಾಗಿ.

ಇದೊಂದು ಅತ್ಯುಚ್ಚ ವಿದ್ಯುದಾವಿಷ್ಟ ಸನ್ನಿವೇಶ. ಐನ್‌ಸ್ಟೈನರೇ ಮೊದಲು ಮಾತಾಡಿ ಇದನ್ನು ಪುಸ್‌ಗೊಳಿಸಿದರು ('ಡೀಫ್ಯೂಸ್' ಮಾಡಿದರು): "ನೋಡಿ ! ನನ್ನ ಆರೋಗ್ಯವನ್ನು ಗಮನಿಸಿದ ವೈದ್ಯ ನಾನು ತಂಬಾಕು ಕೊಳ್ಳುವುದನ್ನು ಪೂರ್ತಿ ನಿಷೇಧಿಸಿದ್ದಾನೆ. ಆದರೆ ಕದಿಯಬಾರದೆಂದು ವಿಧಿಸಿಲ್ಲವಷ್ಟೆ ? ಅದಕ್ಕಾಗಿಯೇ ನಾನಿಲ್ಲಿಗೆ ಬಂದದ್ದು."

ಹುಚ್ಚು ನಗು ಕಟ್ಟೆಯೊಡೆದು ಅನುರಣಿಸಿತು.

'ಐನ್‌ಸ್ಟೈನ್ ಎಪ್ಪತ್ತು' ಅಭಿನಂದನ ಸಮಾರಂಭ ಅದ್ದೂರಿಯಿಂದ ಜರಗಿತು. ಐನ್‌ಸ್ಟೈನರ ಸಾಧನೆಗಳನ್ನು ಕುರಿತ ಆಹ್ವಾನಿತ ಪ್ರೌಢ ತಾಂತ್ರಿಕ ಪ್ರಬಂಧಗಳ ಮಂಡನೆಯೇ ಪ್ರಧಾನ ಕಾರ್ಯಕ್ರಮ. ಸ್ನೇಹಿತರ ಹಾಗೂ ಅಭಿಮಾನಿಗಳ ಈ 'ನ್ಯಾಯಾಲಯ'ದಲ್ಲಿ ಐನ್‌ಸ್ಟೈನ್ 'ಅಪರಾಧಿ' ಸ್ಥಾನದಲ್ಲಿ ನಿಂತು ತಮ್ಮ ಮೇಲಿನ 'ಆರೋಪ'ಗಳನ್ನು ಏಕಾಗ್ರಚಿತ್ತರಾಗಿ ಆಲಿಸುತ್ತ ಇಡೀ ದಿನ ಕಳೆದರು.

ಸಮಾರಂಭ ಕೊನೆಗೂ ಮುಗಿದಿದೆ. ಸ್ನೇಹಿತನೊಬ್ಬ ಕಳಕಳಿಯಿಂದ ಐನ್‌ಸ್ಟೈನರನ್ನು ವಿಚಾರಿಸಿದ್ದಾನೆ. "ತಮಗೆ ಈ ಪ್ರಬಂಧಗಳ ಶ್ರವಣ ತುಂಬ ಆಯಾಸ ತಂದಿರಬೇಕಲ್ಲವೇ ?"

"ಹೌದು—ಅವು ನನಗೆ ಅರ್ಥವಾಗಿದ್ದರೆ ತಾನೇ !"

## ಮೆಕಾರ್ಥಿತ್ವದ ದಳ್ಳುರಿ

ಮಾನವನಾಗರಿಕತೆಯ ಅಭಿವರ್ಧನೆಗೆ ಭೀಕರ ರಾಜಕೀಯ ದುರಂತದಿಂದ [ಒಂದನೆಯ ಮಹಾಯುದ್ಧ] ತಟ್ಟಿರುವ ಹಾನಿಯನ್ನು ಒಬ್ಬ ಅಂದಾಜುಮಾಡುವುದಾದಲ್ಲಿ ಆತ, ಸಂಸ್ಕೃತಿಯು ತನ್ನ ಉನ್ನತ ರೂಪಗಳಲ್ಲಿ ಒಂದು ಕೋಮಲ ಸಸ್ಯ, ಜಟಿಲ ಸನ್ನಿವೇಶಗಳ ಮೇಲೆ ಅವಲಂಬಿತವಾಗಿರುವ ಇದು ಗೊತ್ತಾದ ಯಾವುದೇ ಕಾಲಾವಧಿಯಲ್ಲಿ ಕೇವಲ ಕೆಲವೇ ಸ್ಥಳಗಳಲ್ಲಿ ಮಾತ್ರ ವಿಕಸಿಸಬಲ್ಲದು ಎಂಬುದನ್ನು ನೆನಪಿನಲ್ಲಿಡದಿರಲಾರ. ಈ ಸಸ್ಯ ಅರಳಲು, ಎಲ್ಲದಕ್ಕಿಂತಲೂ ಮೊದಲನೆಯದಾಗಿ, ದೇಶವು ಪ್ರಗತಿಯ ಒಂದು ಮಜಲನ್ನು ಐದಿರುವುದು ಅಗತ್ಯ. ಇದರ ಫಲವಾಗಿ ಜನಸಮಷ್ಟಿಯ ಒಂದು ಅಂಶ, ಜೀವನಪಾಲನೆಗೆ ನೇರವಾಗಿ ಅವಶ್ಯವಾಗದಂಥ ಕಾರ್ಯಗಳಲ್ಲಿ ಉದ್ಯುಕ್ತವಾಗಿರುವುದು ಸಾಧ್ಯವಾಗುತ್ತದೆ. ಎರಡನೆಯದಾಗಿ, ಸಾಂಸ್ಕೃತಿಕ ಮೌಲ್ಯಗಳಿಗೂ ಸಿದ್ಧಿಗಳಿಗೂ ಗೌರವ ಸಲ್ಲಿಸುವಂಥ ನೈತಿಕತೆಯ ಒಂದು ಪರಂಪರೆ ಬೆಳೆದುಬಂದು ಈ ಮೇಲಿನ ವರ್ಗಕ್ಕೆ, ಬದುಕಿನ ಅಗತ್ಯಗಳನ್ನು ಪೂರೈಸುವ ಇತರ ವರ್ಗಗಳು ಜೀವನಾವಶ್ಯಕತೆಗಳನ್ನು ಒದಗಿಸುವಂತಾಗುತ್ತದೆ.

ಐನ್‌ಸ್ಟೈನ್

ಪ್ರಪಂಚಕ್ಕೆ ಬಡಿದ ಮಹಾ ಉಲ್ಕಾಪಿಂಡಪ್ರಹಾರ ಎರಡನೆಯ ಮಹಾಯುದ್ಧ, ೧೯೩೯-೪೫. ಇದು ಐನ್‌ಸ್ಟೈನರ ಅಸ್ತಿತ್ವವನ್ನೇ ಜರ್ಜರಿಸಿತು. ಪರಮಾಣುಬಾಂಬ್ ಆಸ್ಫೋಟನೆಯೊಂದಿಗೆ ನಂದಿದ ಯುದ್ಧಾನಲ ಇವರ ಮುಂದೆ ಹಲವಾರು ಮೂಲಭೂತ ಪ್ರಶ್ನೆಗಳನ್ನು ಎತ್ತಿಹಿಡಿಯಿತು. ವಿಜ್ಞಾನಿಗಳು ಆಳರಸರಿಗೆ ಅಧೀನರಾಗಿ, ಯುದ್ಧಪ್ರಯತ್ನಗಳಿಗೆ ಶಾಮೀಲಾಗಿ, ವಿಜ್ಞಾನದ ಪಾವಿತ್ರ್ಯ ನಾಶಕ್ಕೆ ಕಾರಣರಾದದ್ದನ್ನು ನೋಡಿ ಮನುಕುಲದ ಭವಿಷ್ಯಕ್ಷೇಮದ ಚಿಂತೆ ಇವರ ಮುಂದೆ ಹಿರಿ ಸವಾಲಾಗಿ ಎದ್ದುನಿಂತಿತು.

ಯುದ್ಧ ಮುಗಿದ ತರುಣದಲ್ಲಿ, ೧೯೪೫, ಐನ್‌ಸ್ಟೈನ್ ಒಂದು ಸಾರ್ವಜನಿಕ ಭಾಷಣ ಮಾಡಿದರು. ಅದರ ಸಾರಾಂಶವಿಷ್ಟು. ನಿಸರ್ಗದ ಗುಹ್ಯತಮ ರಹಸ್ಯವನ್ನು—ನ್ಯೂಕ್ಲಿಯರ್ ಶಕ್ತಿ—ಶೋಧಿಸಿದ ವಿಜ್ಞಾನಿಗಳು ಪರಮಾಣುಬಾಂಬ್ ಮಾರಕಾಸ್ತ್ರದ ನಿರ್ಮಾಣಕ್ಕೆ ನೆರವಾದರು. ಇತರ ಜನಾಂಗದ್ವೇಷಿಗಳಾದ ನಾಟ್ಸೀ ದುರಾತ್ಮರಿಗೆ ಇದು ಮೊದಲೇ ಸಿದ್ಧಿಸಿದ್ದಾದರೆ ಅವರು ಇಡೀ ಪ್ರಪಂಚವನ್ನೇ ಕಬಳಿಸಿ ತಮ್ಮ ತೊತ್ತಾಗಿ ಕೆಡಿಸಿರುತ್ತಿದ್ದುದು ದಿಟ. ಹೀಗಾಗಗೊಡಬಾರದು ಎಂದು ಬಗೆದ ವಿಜ್ಞಾನಿಗಳು, ಸ್ವಾತಂತ್ರ್ಯ ಮತ್ತು ಶಾಂತಿ ಕಾಪಾಡಲು ಹೋರಾಡಿದ ಬ್ರಿಟನ್ ಮತ್ತು ಅಮೆರಿಕ ದೇಶಗಳು, ಈ ಮೃದ್ರಹಸ್ಯವನ್ನು ನ್ಯಾಸಧಾರಿಗಳಾಗಿ ಜತನಮಾಡಬೇಕೆಂದು ಆಶಿಸಿ ಅವುಗಳಿಗೆ ಒಪ್ಪಿಸಿದರು. ಆದರೆ ಆ ನಿರೀಕ್ಷೆ ಫಲಿಸಿರುವುದಿಲ್ಲ. ಶಾಂತಿಯನ್ನು ಅಥವಾ

ಅಟ್ಲಾಂಟಿಕ್ ಘೋಷಣೆಯಲ್ಲಿ ರಾಷ್ಟ್ರಗಳಿಗೆ ವಾಗ್ದಾನ ನೀಡಲಾದ ಯಾವುದೇ ಸ್ವಾತಂತ್ರ್ಯವನ್ನು ಕುರಿತಂತೆ ಈತನಕ ಏನೂ ಭರವಸೆ ಒದಗಿರುವುದು ಕಂಡುಬರುವುದಿಲ್ಲ. "ಯುದ್ಧ ಗೆದ್ದಾಯಿತು. ಆದರೆ ಶಾಂತಿಯನ್ನಲ್ಲ," ಎಂದರು ಐನ್‌ಸ್ಟೈನ್.

ಮುಂದುವರಿಯುತ್ತ, ಯೆಹೂದ್ಯರು ಪಟ್ಟ ಬವಣೆಗಳನ್ನು ಚಿತ್ರಿಸಿದರು. ಈ ಮೂಕ ನಿರಪರಾಧಿಗಳ ಮೇಲೆ ನಾಟ್ಸೀ ಅನಿಲಕೋಷ್ಠ ನರಕಾಗ್ನಿಯನ್ನೇ ಮೊಗೆದಾಗ, ನಿಲ್ಲಲು ನೆಲೆ ಇಲ್ಲದಂತೆ ಇವರನ್ನು ಬೇಟೆಯಾಡಿ ಕೊಂದಾಗ, ಅಥವಾ ಇವರು ಬದುಕಿ ಬಾಳಿದ ನೆಲದಿಂದ ಇವರನ್ನು ಹೊರಗಟ್ಟಿದಾಗ ಪ್ರಪಂಚದ ಇತರ ರಾಷ್ಟ್ರಗಳೇನು ಮಾಡುತ್ತಿದ್ದುವು? ಇದು ತಮ್ಮ ಗೊಡವೆ ಅಲ್ಲವೆಂಬ, ನೆಮ್ಮದಿಯ ಎನ್ನಲಾಗದಿದ್ದರೂ, ಖಂಡಿತ ಉದಾಸೀನ ಭಾವದಿಂದ ನಿಷ್ಕ್ರಿಯಾವಂತವಾಗಿದ್ದುದಂತೂ ನಿಜ. ಇವು ಎಚ್ಚರಗೊಂಡದ್ದು ಹಿಟ್ಲರನ ಅಗ್ನಿಜಿಹ್ವೆ ರುಮೇನಿಯ ಮತ್ತು ಹಂಗೇರಿ ದೇಶಗಳನ್ನು ನೆಕ್ಕಿ ಬೂದಿಗೊಳಿಸಿದಾಗ ಮಾತ್ರ. ಆ ವೇಳೆಗೆ ಲಕ್ಷಾಂತರ ಯೆಹೂದ್ಯರು ಬಲಾತ್ಕಾರದಿಂದ ಚಿತಾಭಸ್ಮವಾಗಿ ನಿಶ್ಶೇಷರಾಗಿದ್ದರು. ಅಳಿಯದೆ ಉಳಿದವರು ಕಾಪು ನೆಲೆಯರಸಿ ಉಂಬರ ಜಿಗಿದು (ಹೊಸ್ತಿಲು ದಾಟಿ) ದಿಗಂಬರರಾಗಿ ದಿಕ್ಕಾಪಾಲು ಚದರಿ ಓಡಿ ಹೋಗಿದ್ದರು. ಆದರೆ ಅದೇ ವೇಳೆಗೆ ಬ್ರಿಟನ್, ಇವರ ಮುಖಕ್ಕೆ ಹೊಡೆವಂತೆ, ಪ್ಯಾಲೆಸ್ಟೈನಿನ ದಿಡ್ಡಿಬಾಗಿಲನ್ನು ಭದ್ರವಾಗಿ ಬಡಿದು ಮುಚ್ಚಿ ನಿರಾಶ್ರಿತರಿಗೆ ಪ್ರವೇಶ ನಿರಾಕರಿಸಿತು. ಅತ್ತ ಉರಿಯುತ್ತಿದ್ದ ಅನಿಲ ಕೋಷ್ಠ, ಇತ್ತ ಮುಚ್ಚಿದ್ದ ದಿಡ್ಡಿಬಾಗಿಲು, ನಡುವೆ ಭೀಕರ ನರಬೇಟೆ—ಇನ್ನೆಲ್ಲಿಗೆ ಹೋಗಬೇಕು ಈ ಹತಭಾಗ್ಯರು? ಪುಟ್ಟ ದೇಶಗಳಾದ ನಾರ್ವೆ, ಸ್ವೀಡನ್, ಹಾಲೆಂಡ್ ಮತ್ತು ಸ್ವಿಟ್ಸರ್ಲೆಂಡ್ ಯೆಹೂದ್ಯರಿಗೆ ಶಕ್ತಿ ಮೀರಿ ಸಾಂತ್ವನದ ತನಿರಸವನ್ನು ಎರೆದುವು. ನಾಟ್ಸೀ ಸೈನ್ಯಗಳು ಪೋಲೆಂಡಿನ ಮೇಲೆ ಹೊಸ ಹನನ ನಡೆಸಿದಾಗ ಅಲ್ಲಿಯ ನಿರಾಶ್ರಿತ ಯೆಹೂದ್ಯರಿಗೆ ಸೋವಿಯತ್ ಒಕ್ಕೂಟ ನೆಲೆ ಕರುಣಿಸಿ ಅವರ ಕೃತಜ್ಞತೆಗೆ ಪಾತ್ರವಾಯಿತು. ಈಗ ಯುದ್ಧವೇನೋ ಮುಗಿದಿದೆ. ಆದರೆ ಶಾಂತಿ ಮಾತ್ರ ಪ್ರಸನ್ನವಾಗಿಲ್ಲ. ಯುದ್ಧದ ಗಳಿಕೆಗಳನ್ನು ಸ್ವಾರ್ಥಪ್ರಧಾನವಾಗಿ ಹಂಚಿಕೊಳ್ಳಲು ಪ್ರಯತ್ನಿಸುತ್ತಿರುವ ರಾಜಕಾರಣಿಗಳು ಒಂದು ವಿಷಯವನ್ನಂತೂ ಗಮನಿಸಲೇಬೇಕು : ವಿಶ್ವಾಸ ಮತ್ತು ಸೌಹಾರ್ದ, ಭ್ರಾತೃತ್ವ ಮತ್ತು ಔದಾರ್ಯ, ಸಹಕಾರ ಮತ್ತು ಸದಾಚಾರ ಇವುಗಳ ಮುನ್ನೆಲೆಯಲ್ಲಿ ಪರಿಹರಿಸಲಾಗುವ ಮಾನವ ಸಮಸ್ಯೆಗಳು ಮಾತ್ರ ಚಿರಶಾಂತಿಗೆ ಎಡೆಮಾಡಿ ಕೊಡುತ್ತವೆ ಮತ್ತು ಮನುಕುಲದ ಸರ್ವತೋಮುಖ ವಿಕಾಸಕ್ಕೆ ಕಾರಣವಾಗುತ್ತವೆ; ಇಲ್ಲವಾದರೆ ಮಾನವ ನಾಗರಿಕತೆ ಅಪಪಥಗಾಮಿಯಾಗುತ್ತದೆ, ಅವಸರ್ಪಿಣಿ ಸ್ಥಿತಿಯಲ್ಲಿರುತ್ತದೆ ಮತ್ತು ಅಂತಃಕಲಹಗಳಿಂದ ಹರಿಹಂಚಾಗಿ ಹೋಗುತ್ತದೆ.

ಕುಂಭೀಪಾಕವಾಗಲಿರುವ ನಾಳಿನ ಪ್ರಪಂಚವನ್ನು ಕುರಿತ ಐನ್‌ಸ್ಟೈನರ ಭಾಷಣ ಪೆಟ್ಟೊಂದು ತುಂಡೆರಡು ಎಂಬಂತೆ ಖಚಿತವಾಗಿತ್ತು, ಮೊನಚಾಗಿತ್ತು, ಕಡುನೋವಿನಿಂದ ಹೊಮ್ಮಿದ ಗುಂಡಿಗೆ ಮಿಡಿತವಾಗಿತ್ತು.

ಅಧಿಕಾರಾರೂಢರು ಇತರರ, ಅದೂ ವ್ಯವಹಾರಕುಶಲಿಗಳಲ್ಲವೆಂದು ಪ್ರಸಿದ್ಧರಾದ ವಿಜ್ಞಾನಿಗಳ, ಬುದ್ಧಿವಾದವನ್ನು ಎಂದಾದರೂ ಆಲಿಸಿಯಾರೇ ? ಯುದ್ಧೋತ್ತರ ಅಮೆರಿಕ ಅನೇಕ ಬಗೆಯ ಆಂತರಿಕ ವ್ಯಾಘಾತಗಳಿಂದ ತತ್ತರಿಸಿಹೋಗಿತ್ತು : ತನ್ನ ಮಕ್ಕಳ ಸಾವು, ಪರಮಾಣುಬಾಂಬ್ ತಾಡನೆಯ ಪರಿಣಾಮವಾಗಿ ಕವಿದ ಪಾಪಪ್ರಜ್ಞೆ, ಸುದೀರ್ಘ ಶಿಶಿರ ನಿದ್ರೆಯಿಂದೆದ್ದ ಸೋವಿಯತ್ 'ಕರಡಿ' ಬೇಗನೆ ನ್ಯೂಕ್ಲಿಯರ್ ಶಕ್ತಿರಹಸ್ಯ ಗಳಿಸಿ ತನಗೆ ಸಕತ್ತು ಸವಾಲಾಗದಿರದು ಎಂಬ ಭೀತಿಭಾವ, ಯುದ್ಧವಿರಾಮ ಒಡ್ಡಿದ್ದ ಹೊಸ ರಾಜಕೀಯ ಹಾಗೂ ಮಾನವೀಯ ಸಮಸ್ಯೆಗಳು,

ಔದ್ಯಮಿಕ ಮತ್ತು ಆರ್ಥಿಕ ವಲಯಗಳಲ್ಲಿಯ ತೀವ್ರ ಕ್ಷೋಭೆ,ಇತ್ಯಾದಿ. ಮುಖ್ಯವಾಗಿ ಇಡೀ ದೇಶ ಕಮ್ಯೂನಿಸ್ಟ್ ಪೆಡಂಭೂತದ (ಭಲ್ಲೂಕದ) ತೆಕ್ಕೆಗೆ ಸಿಕ್ಕಿಹಾಕಿಕೊಂಡು ಉದ್ವೇಗೋನ್ಮಾದ ಸ್ಥಿತಿಯಲ್ಲಿತ್ತು. ಕಮ್ಯೂನಿಸ್ಟರೆಲ್ಲರೂ ಅಮೆರಿಕವೈರಿಗಳು ಮತ್ತು ಸೋವಿಯತ್ ಪಕ್ಷಪಾತಿಗಳು ; ಎಂದೇ ಅಲ್ಪ ಕಮ್ಯೂನಿಸ್ಟ್‌ಮೂರಿ ಇರುವಾತ ಕೂಡ ಯಾವುದೇ ಹೊಣೆಗಾರಿಕೆಯ ಸ್ಥಾನದಲ್ಲಿ ಇರತಕ್ಕದ್ದಲ್ಲ ; ಅದೂ ನ್ಯೂಕ್ಲಿಯರ್ ಶಕ್ತ್ಯುತ್ಪಾದನೆ, ರಾಷ್ಟ್ರ ರಕ್ಷಣೆ, ಭಾರೀ ಉದ್ಯಮ, ಆಡಳಿತ ಮುಂತಾದ ಕೀಲಿ ಜಾಗಗಳಲ್ಲಿ ಇವರು ಸುತರಾಂ ಸಲ್ಲತಕ್ಕವರಲ್ಲ ಎಂಬ ಧೋರಣೆ ರಾಷ್ಟ್ರವ್ಯಾಪಿಯಾಗಿತ್ತು. ಅಮೆರಿಕದ ಆ ಭೀತ ಮನೋಭಾವಕ್ಕೆ ಕಾಂಗ್ರೆಸ್ಸಿನ ಸೆನೆಟರ್ ಜೋಸೆಫ್ ರೇಮಂಡ್ ಮೆಕಾರ್ಥಿ (೧೯೦೮-೫೭) ಎಂಬಾತನಲ್ಲಿ ಸ್ಪಷ್ಟ ಮೂರ್ತರೂಪ ಪ್ರಾಪ್ತವಾಯಿತು—ಹಿಟ್ಲರನ ಬೇರೊಂದು ರೂಪ.

ರಾಷ್ಟ್ರೀಯ ನರಕೇಂದ್ರಗಳಾದ ಸೈನ್ಯ, ವಿಜ್ಞಾನ ಪ್ರಯೋಗಮಂದಿರ, ಆಡಳಿತೆಯ ಕೀಲಿಜಾಗಗಳು ಮುಂತಾದೆಡೆಗಳಿಗೆ ಕಮ್ಯೂನಿಸ್ಟರು ಅಧಿಕ ಸಂಖ್ಯೆಯಲ್ಲಿ ನುಸುಳಿದ್ದಾರೆ, ರಾಷ್ಟ್ರರಹಸ್ಯಗಳನ್ನು ಇವರು ರಶ್ಯಕ್ಕೆ ಸಾಗಹಾಕುತ್ತಿದ್ದಾರೆ, ಈ ದ್ರೋಹಿಗಳನ್ನು ಸರ್ಕಾರ ಹಾಗೂ ಜನ ಬೇಗನೆ ಬಯಲಿಗೆಳೆದು ಬಲಿ ಹಾಕದಿದ್ದರೆ ದೇಶವು ದುರಂತಗಳನ್ನು ಎದುರಿಸಬೇಕಾದೀತು ಎಂಬ ದೆವ್ವದ ಹುಯಿಲನ್ನೇ ಮೆಕಾರ್ಥಿ ಎಬ್ಬಿಸಿದ. ಪ್ರತ್ಯಕ್ಷ ಯುದ್ಧಭಯಕ್ಕಿಂತಲೂ ಹೆಚ್ಚಿನ ಪ್ರಚ್ಛನ್ನ ಕಮ್ಯೂನಿಸ್ಟ್ ಭೀತಿಯಿಂದ ಅಮೆರಿಕ ಕಂಪಿಸಿತು. ಅಧಿಕಾರಿಗಳ ದೇಶಪ್ರೇಮ (ಪಾತಿವ್ರತ್ಯ ?) ಪರೀಕ್ಷೆಗೋಸ್ಕರ ಸರ್ಕಾರ ಅಗ್ನಿಕುಂಡವನ್ನು ನಿರ್ಮಿಸಿತು; ಅದೇ, ಮೆಕಾರ್ಥಿಯ ಅಧ್ಯಕ್ಷತೆಯಲ್ಲಿ ನೇಮನಗೊಂಡ ಶೋಧಕ ಸಮಿತಿ.

ಖುದ್ದು ಐನ್‌ಸ್ಟೈನ್ ಕೂಡ ಮೆಕಾರ್ಥಿತ್ವದ ತಾಡನೆಯಿಂದ ಪಾರಾಗಲಿಲ್ಲ. ಇವರ ಪೂರ್ವ ಚರಿತ್ರೆ, ಸಾರ್ವಜನಿಕ ಭಾಷಣ (೧೯೪೫), ತದನಂತರದ ನಿಲವು ಮುಂತಾದವು ಕಮ್ಯೂನಿಸಮ್ಮಿನ ವೈರಿಗಳಿಗೆ ವಿಪುಲಗ್ರಾಸ ಒದಗಿಸಿದ್ದುವು. ಇನ್ನು, ಮೆಕಾರ್ಥಿ ಮಸೂರದ ಮೂಲಕ ನೋಡಿದವರಿಗೆ ಇವರಲ್ಲಿ ಮೂರ್ತೀಭವಿತ ರಶ್ಯವೇ ಕಂಡಿದ್ದರೆ ಅಚ್ಚರಿ ಏನೂ ಇಲ್ಲ. ಉಗ್ರ ರಾಷ್ಟ್ರೀಯತೆಯ ಹೆಗ್ಗಡಲಲೆಗಳ ಬಡಿತದ ಎದುರು ಯಾರೂ ಯಾವ ಜ್ಞಾನ ವಿಜ್ಞಾನವೂ ಎಂದೂ ಅಪವಾದವಾಗಲಾರವೆಂಬುದು ಆ ಹಿಂದೆ ಜರ್ಮನಿಯಲ್ಲಿ ರುಜುವಾತಾಗಿತ್ತು. ಈಗ ನಡೆದದ್ದಾದರೂ ಅದೇ ವಿದ್ಯಮಾನದ ಪುನರಾವರ್ತನೆ—ರಂಗ ಮಾತ್ರ ಬೇರೆ. ಅಮೆರಿಕ ಎಲ್ಲೆಲ್ಲೂ ಗುಮ್ಮ ಕಾಣುತ್ತಿದ್ದ ಮೆಕಾರ್ಥಿಮನೋಭಾವ, ಐನ್‌ಸ್ಟೈನರ ದೃಷ್ಟಿಯಲ್ಲಿ, ನಾಟ್ಸೀ ಉತ್ಸರ್ಪಿಣಿ ದಿವಸಗಳಲ್ಲಿಯ ಜರ್ಮನ್ ಮನೋಭಾವಕ್ಕೆ ಸಮಾನವಾಗಿತ್ತು.

ವಿಶ್ವವಿದ್ಯಾಲಯಗಳ ಹಲವಾರು ಮಂದಿ ಸಂದೇಹಾರೋಪಿತ ಪ್ರಾಧ್ಯಾಪಕರು ಮೆಕಾರ್ಥಿ-ಸಮಿತಿ (ಮತ್ತು ಉಪಸಮಿತಿಗಳ) ಮುಂದೆ ಹಾಜರಾಗಿ ನಜರೊಪ್ಪಿಸಿ ತಮ್ಮ ಅಕಮ್ಯೂನಿಸ್ಟ್-ತನವನ್ನು, ಅಂದರೆ ಅಮೆರಿಕನ್ ರಾಷ್ಟ್ರನಿಷ್ಠೆಯನ್ನು, ಸಾಬೀತುಗೊಳಿಸಬೇಕಾಗಿತ್ತು. ಇಲ್ಲವಾದರೆ ಅವರ ಹುದ್ದೆಗಳಿಗೆ ಅರ್ಧಚಂದ್ರಪ್ರಹಾರ ಬೀಳುತ್ತಿದ್ದುದು ಖಾತ್ರಿ. ಐನ್‌ಸ್ಟೈನರ ಆತ್ಮಪ್ರತ್ಯಯ ಈ ಅವಹೇಳನಕರ ವರ್ತನೆಯ ಎದುರು ಸೆಟೆದೆದ್ದಿತು. ಅನಾರೋಗ್ಯದಿಂದ ಪೀಡಿತವಾಗಿ ಹಾಸಿಗೆ ಹಿಡಿದಿದ್ದ ಈ ಯುಗಪ್ರಜ್ಞೆ ಅನ್ಯಾಯದ ವಿರುದ್ಧ ಹೋರಾಡಲು ನಿರ್ಧರಿಸಿತು. ಆದರೆ ಇವರೇನು ಮಾಡಬಹುದಾಗಿತ್ತು ? ಸ್ನೇಹಿತರಿಗೆ ಯೋಗ್ಯ ಮಾರ್ಗದರ್ಶನ ನೀಡುವುದು ಮಾತ್ರ. ೧೯೫೩ ಮೇ ೧೬ರಂದು ಇವರು ಅಧ್ಯಾಪಕನೊಬ್ಬನಿಗೆ ಬರೆದ ವಿವರಣಪತ್ರ ಇವರ ಮಾನಸಿಕ ಸಂಕ್ಷೋಭೆಯ ಪ್ರಕಟಿತ ರೂಪವಾಗಿತ್ತು. *New York Times* ದೈನಿಕದ ೧೨-೬-೧೯೫೩ರ

ಸಂಚಿಕೆಯಲ್ಲಿ ಇದು ಪ್ರಕಟವಾಯಿತು :

"ಈ ರಾಷ್ಟ್ರದ ಬುದ್ಧಿಜೀವಿಗಳೆದುರು ಮಾರಾಂತು ನಿಂತಿರುವ ಸಮಸ್ಯೆ ಅತಿ ಘೋರವಾದದ್ದು. ಪ್ರಗತಿವೈರಿ ರಾಜಕಾರಣಿಗಳು ಸಕಲ ಬೌದ್ಧಿಕ ಪ್ರಯತ್ನಗಳ ಬಗೆಗೂ ಸಾರ್ವಜನಿಕರ ಕಣ್ಣೆದುರು, ಹೊರಗಿನಿಂದ ಒದಗಲಿರುವ ಒಂದು ವಿಪತ್ತನ್ನು ಎತ್ತಿ ಹಿಡಿದು, ಅವರಲ್ಲಿ ಸಂದೇಹ ಬಿತ್ತುವು ದರಲ್ಲಿ ಸಫಲರಾಗಿದ್ದಾರೆ. ಇದರಲ್ಲಿ ಯಶಸ್ಸು ಗಳಿಸಿದ ಈ ರಾಜಕಾರಣಿಗಳು ವಿದ್ಯಾಬೋಧನ ಸ್ವಾತಂತ್ರ್ಯವನ್ನು ಹತ್ತಿಕ್ಕುವುದರತ್ತ ಮತ್ತು ಯಾರು ಯಾರು ತಾವು ಮೂಕವಶವರ್ತಿಗಳೆಂಬು ದನ್ನು ಸಾಬೀತುಗೊಳಿಸುವುದಿಲ್ಲವೊ ಅವರನ್ನು ಹುದ್ದೆಗಳಿಂದ ಉತ್ಪಾಟಿಸುವುದರತ್ತ (ಅಂದರೆ ಅವರ ಹೊಟ್ಟೆ ಮೇಲೆ ಹೊಡೆಯುವುದರತ್ತ) ಸಾಗುತ್ತಿದ್ದಾರೆ. ದೌಷ್ಟ್ಯದೆದುರು ಅಲ್ಪಸಂಖ್ಯಾತ ಬುದ್ಧಿಜೀವಿಗಳ ವರ್ತನೆ ಹೇಗಿರತಕ್ಕದ್ದು ? ಖಚಿತವಾಗಿ ಹೇಳುವುದಾದರೆ, ಗಾಂಧೀ ರೀತಿಯ ಅಸಹಕಾರದ ಕ್ರಾಂತಿಕಾರಿ ಪಥವೊಂದೇ ನನಗೆ ಹೊಳೆಯುತ್ತಿರುವುದಾಗಿದೆ. ಯಾವುದೇ ಸಮಿತಿಯ ಅಥವಾ ಉಪಸಮಿತಿಯ ಎದುರು ಬರಬೇಕೆಂದು ಆಜ್ಞಾಪಿಸಲ್ಪಟ್ಟ ಪ್ರತಿಯೊಬ್ಬ ವ್ಯಕ್ತಿಯೂ ಅಲ್ಲಿ ಸಾಕ್ಷ್ಯ ನೀಡಲು ಸ್ಪಷ್ಟವಾಗಿ ನಿರಾಕರಿಸತಕ್ಕದ್ದು. ಇದರ ಅರ್ಥ ಕಂಡಂತೆಯೇ ಇದೆ : ಆತ ತುರಂಗವಾಸಕ್ಕೆ ಮತ್ತು ಆರ್ಥಿಕ ಸರ್ವನಾಶಕ್ಕೆ ಸಿದ್ಧನಾಗಿ ಇರತಕ್ಕದ್ದು, ಸಂಕ್ಷೇಪವಾಗಿ ಹೇಳುವುದಾದರೆ ಆತ ರಾಷ್ಟ್ರದ ಸಾಂಸ್ಕೃತಿಕ ಸ್ವಾಸ್ಥ್ಯಕ್ಕಾಗಿ ಸ್ವಂತ ಸೌಖ್ಯವನ್ನು ತ್ಯಾಗ ಮಾಡಲು ತಯಾರಾಗಿರತಕ್ಕದ್ದು . . . ನಿರ್ದೋಷಿ ಪ್ರಜೆಯೊಬ್ಬನನ್ನು ಈ ತೆರನಾದ ತನಿಖೆಗೆ ಗುರಿಪಡಿಸು ವುದು ನಾಚಿಕೆಗೇಡಿನ ಸಂಗತಿ, ಮತ್ತು ಇದು ಸಂವಿಧಾನದ ಉದ್ದೇಶವನ್ನು ಭಗ್ನಗೊಳಿಸುವ ಕ್ರಮ ಎಂಬ ದೃಢಪ್ರತ್ಯಯ ಆಧರಿಸಿ ಈ ನಿರಾಕರಣೆ ಇರತಕ್ಕದ್ದು. ಅತಿ ಗಂಭೀರವಾದ ಈ ಹೆಜ್ಜೆ ಇಡಲು ಸಾಕಷ್ಟು ಮಂದಿ ಮುಂಬಂದುದಾದರೆ ಅವರು ಯಶಸ್ವಿ ಆಗುವುದು ದಿಟ. ಇದಲ್ಲದಿದ್ದರೆ ಈ ರಾಷ್ಟ್ರದ ಬುದ್ಧಿಜೀವಿಗಳು ಅವರಿಗೆ ಮೀಸಲಾಗಿಟ್ಟಿರುವ ದಾಸ್ಯಕ್ಕಿಂತ ಮಿಗಿಲಾದ, ಬೇರೆ ಯಾವುದಕ್ಕೂ ಅರ್ಹರಲ್ಲವೆಂಬುದು ದೃಢಪಡುತ್ತದೆ."

ಅಮೆರಿಕದ ಪ್ರಸಿದ್ಧ ದೈನಿಕ *New York Times* (ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸು ವಲ್ಲಿ ಇದಕ್ಕೂ ಇದರಂಥ ದೈನಿಕಗಳಿಗೂ ಅಮೆರಿಕದಲ್ಲಿ ಅಗ್ರಸ್ಥಾನ ಉಂಟು) ಐನ್‌ಸ್ಟೈನರ ಎದುರು ಕರವಾಲ ಝುಳಪಿಸಿತು. ಇವರ ಧೋರಣೆಯನ್ನು ಪೂರ್ಣವಾಗಿ ಖಂಡಿಸುವ ಅಗ್ರ ಲೇಖನ ಪ್ರಕಟಿಸಿತು. ಅಂದರೆ ಮೆಕಾರ್ಥಿತ್ವಾಗ್ನಿಗೆ ಆಜ್ಯಾಹುತಿ ಸಮರ್ಪಣೆ! ಇದನ್ನು ಗಮನಿಸಿದ ಬರ್ಟ್ರೆಂಡ್ ರಸಲ್, ಇಂಗ್ಲೆಂಡಿನಿಂದ, *New York Times*ಗೆ ಒಂದು ಖಂಡನ ಲೇಖನ ಕಳಿಸಿದರು. ಇದರ ಒಂದು ಪ್ರತಿಯನ್ನು ಐನ್‌ಸ್ಟೈನರಿಗೆ ಕಳಿಸುತ್ತ (೨೦-೬-೧೯೫೩), "ಮೆಕಾರ್ಥಿ-ತನಿಖೆದಾರರ ಮುಂದೆ ಕರೆಯಲ್ಪಟ್ಟ ಉಪಾಧ್ಯಾಯರು ಸಾಕ್ಷ್ಯ ನೀಡಲು ನಿರಾಕರಿಸಬೇಕು ಎಂಬ ನಿಮ್ಮ ನಿಲವನ್ನು ನಾನು ಪೂರ್ಣಮನಸ್ಸಿನಿಂದ ಒಪ್ಪುತ್ತೇನೆ," ಎಂದು ಬರೆದರು.

*New York Times* ರಸಲ್ಲರ ಪತ್ರವನ್ನು ಪ್ರಕಟಿಸಿತು. ಐನ್‌ಸ್ಟೈನರು ರಸಲ್ಲರಿಗೆ ಮಾರೋಲೆ ಬರೆದು (೨೮-೬-೧೯೫೩) ಶಾಂತಿಸಂವರ್ಧನೆಗಾಗಿ ಇವರು ನೀಡಿದ ಮಹತ್ತರ ಕೊಡುಗೆಯನ್ನು ಕೃತಜ್ಞತೆಯಿಂದ ಸ್ಮರಿಸಿದರು, "ತೀರ ಎಳೆಯ ವಿದ್ಯಾರ್ಥಿವರೆಗೂ ಈ ರಾಷ್ಟ್ರದ ಎಲ್ಲ ಬುದ್ಧಿಜೀವಿ ಗಳೂ ಪೂರ್ಣವಾಗಿ ಭಯವಿಹ್ವಲರಾಗಿದ್ದಾರೆ. ರಾಜಕಾರಣಿಗಳ ಆಡುಂಬೊಲವಾಗಿರುವ ಅಸಂಬದ್ಧತೆಗಳನ್ನು ನಿಮ್ಮ ಹೊರತಾಗಿ ಬೇರೆ ಯಾವ 'ಗಣ್ಯ ಪುರುಷ'ನೂ ಪ್ರತಿಭಟಿಸಿದ್ದಿಲ್ಲ. ರಶ್ಯನರೂ ಅಮೆರಿಕದ ಕಮ್ಯೂನಿಸ್ಟರೂ ಒಂದಾಗಿ ಈ ದೇಶದ ನೆಮ್ಮದಿಗೆ ಭಂಗ ತರುವುದು ನಿಜವೆಂಬ ಅಂಶವನ್ನು ಭೂರಿ ಜನರಿಗೆ ಮಂದಟ್ಟುಗೊಳಿಸುವುದರಲ್ಲಿ ಇವರು ಯಶಸ್ವಿಗಳಾಗಿ

ದ್ದಾರೆ. ಹೀಗಾಗಿ ತಾವು ಅತಿ ಬಲಿಷ್ಠರೆಂಬ ಹಮ್ಮು ಇವರಲ್ಲಿ ಬಾತಿದೆ. ಇವರು ಬಿತ್ತುವ ಕಟ್ಟು ಕತೆಗಳು ಎಷ್ಟೆಷ್ಟು ಒರಟು ಕುರುಡಾಗಿರುವುವೊ ಈ ಅಡ್ಡಹಾದಿಗಳೆಯಲ್ಪಟ್ಟ ಮಂದಿಯಿಂದ ಇವರು ಪುನರಾಯ್ಕೆಗೊಳ್ಳುವ ಸಂಭವ ಅಷ್ಟಷ್ಟು ಖಚಿತ ಖಂಡಿತವಾಗಿರುವುದೆಂಬ ಭರವಸೆ ಇವರಲ್ಲಿ ಮೂಡಿದೆ."

೧೯೪೦ರಲ್ಲಿ ಐನ್‌ಸ್ಟೈನ್ ರಸಲ್ ಅವರನ್ನು ಕುರಿತು ಬರೆದ ಕಗ್ಗ ಈ ಸನ್ನಿವೇಶದಲ್ಲಿ ಉಲ್ಲೇಖಾರ್ಹವಾಗಿದೆ :

> ಅದು,
> ಮರುಕೊಳಿಸುತ್ತಿಹುದೀ ಸುಂದರ ಋಜು ಜಗದಲಿ ;
> ಜನಜಂಗುಳಿಯಲಿ ಭುಗಿಲೆಬ್ಬಿಸುವನು ಪೂಜಾರಿ
> ಜನರಾಕ್ರೋಶಕೆ ಬಲಿಯಾಗುವನದೊ ಮೇಧಾವಿ ?

ಕಮ್ಯೂನಿಸ್ಟ್ ಭೂತದ, ಅಂದರೆ ಮೆಕಾರ್ಥಿತ್ವದ, ಹಿಡಿತ ಅಮೆರಿಕದಲ್ಲಿ ೧೯೫೦ರಿಂದ ೧೯೫೪ರ ತನಕ ತೀವ್ರವಾಗಿತ್ತು. ಆ ದುರ್ದಿನಗಳಲ್ಲಿ ಸಾಕಷ್ಟು ಮಂದಿ ದೇಶಪ್ರೇಮಿ ವಿಜ್ಞಾನಿಗಳು ಹಾಗೂ ಅಧಿಕಾರಿಗಳು ಮಾನಸಿಕ ಚಿತ್ರಹಿಂಸೆಗೆ ಪಕ್ಕಾಗಬೇಕಾಯಿತು. ಕೊನೆಗೂ ಭೂತದ ಪತ್ತೆ ಆಗಲಿಲ್ಲ—ಅದು ಇದ್ದರಲ್ಲವೇ ? ಅಮೆರಿಕದ ಉದಾತ್ತ ನೀತಿಯನ್ನು ಅಪಮೌಲ್ಯೀಕರಿಸಿದ ಮೆಕಾರ್ಥಿಗೆ ಸೆನೆಟ್ ಛೀಮಾರಿ ಹಾಕಿ (೧೯೫೪) ಈ ಕರಾಳ ಅಧ್ಯಾಯವನ್ನು ಕೊನೆಗೊಳಿಸಿತು.

ನಾಟ್ಸೀ ಮೂರಿಯಂತೆ ಮೆಕಾರ್ಥಿತ್ವದ[೯] ಮೂರಿ ಕೂಡ ಪ್ರಪಂಚದಿಂದ ಇನ್ನೂ ಮಾಸದೆ, ಪ್ರಾಯಶಃ ಎಂದೂ ಮಾಸದೆ, ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ನಾಮರೂಪಗಳಿಂದ ಆಗಾಗ ತಲೆ ಎತ್ತುತ್ತಿರುವುದೊಂದು ಐತಿಹಾಸಿಕ ವಿಪರ್ಯಾಸ—ಸಂಭವಾಮಿ ಯುಗೇ ಯುಗೇ !

## ಇಸ್ರೇಲಿನ ಅಧ್ಯಕ್ಷತೆ ?

> ಹೀಗಾಗಿ ಹತ್ತು ಹಲವು ಮನಸ್ಸುಗಳೂ ಹಲವಾರು ಶಕ್ತಿಮೂಲಗಳೂ ನನ್ನ ಈ ವಿಚಾರಧಾರೆಯ ಮೇಲೆ ಒಲವು ಬೀರಿ ಹರಸಿದ್ದು ನಿಜ. ಇದು ಹೀಗಿರಬೇಕೆಂದು ಬಯಸಿ, ಇದರ ಅಸ್ತಿತ್ವಕ್ಕಾಗಿ ದುಡಿದ ನಾನು, ಇದು ನನ್ನದು ಎಂದು ಸಂತಸಗೊಂಡಿರುವುದು ನಿಜವಾದರೂ, ಇದು ಪೂರ್ತಿ ನನ್ನದಲ್ಲ ವೆಂದೂ, ನನ್ನ ಅಸ್ತಿತ್ವವಿಲ್ಲದೆಯೂ ತನ್ನದೇ ಸ್ಥಿರತೆ ಹಾಗೂ ಗುಣ ಸ್ವಭಾವಗಳಿಂದ ಇದೊಂದು ಸ್ವಯಂಚಾಲಿತ ಶಕ್ತಿಯಾಗಿರಬಲ್ಲದೆಂದೂ ತಿಳಿಯಲು ನನಗೆ ಅಷ್ಟೇ ಸಂತಸವಾಗಿದೆ.
>
> **ಯೆಹೂದಿ ಮೆನೂಹಿನ್ (ಅನು : ಕುಶಿ)**

ಅಲೆಮಾರಿ ಯೆಹೂದ್ಯರಿಗೊಂದು ನೆಲೆ—ಇದು ಐನ್‌ಸ್ಟೈನರ ಕನಸು. ಮೇ ೧೯೪೮ರಲ್ಲಿ ಇಸ್ರೇಲ್ ರಾಷ್ಟ್ರ ಅಧಿಕೃತವಾಗಿ ಘೋಷಿಸಲ್ಪಟ್ಟಾಗ ಇದು ನನಸಾಯಿತು. ವೈಝ್‌ಮನ್ ಇದರ ಪ್ರಥಮ ಅಧ್ಯಕ್ಷ. ೧೯೫೨ ನವಂಬರ್ ೯ರಂದು ಇವರು ಮಡಿದರು. ದೇವರ ಈ ರಾಜ್ಯದ ಸಾರಥ್ಯ ವಹಿಸಲು ದೇವದೂತ ಐನ್‌ಸ್ಟೈನ್ ಅಲ್ಲದೆ ಇನ್ನಾರು ತಾನೇ ಸಮರ್ಥರು ! ಇದು ಇಸ್ರೇಲಿಗರ ಮತ್ತು ಅವರ ಪ್ರಧಾನಮಂತ್ರಿ ಡೇವಿಡ್ ಬೆನ್‌ಗೂರಿಯನ್ (೧೮೮೬-೧೯೭೩) ಅವರ ಚಿಂತನೆ, ಆಸೆ. ಬೆನ್‌ಗೂರಿಯನ್ ಐನ್‌ಸ್ಟೈನರಿಗೆ ತಮ್ಮ ಒಲವಿನ ಆಹ್ವಾನವನ್ನು ಕಳಿಸಿ ದರು ; ಅಮೆರಿಕದಲ್ಲಿದ್ದ ತಮ್ಮ ರಾಯಭಾರಿಯನ್ನು ಇವರ ಸಂದರ್ಶನಾರ್ಥ ನಿಯೋಗಿಸಿದರು.

ರಾಯಭಾರಿ ತುಂಬ ವಿನಯದಿಂದ ವಿಷಯವನ್ನು ನಿವೇದಿಸಿದ, "ಇಸ್ರೇಲಿನ ಅಧ್ಯಕ್ಷತೆಯನ್ನು ನೀವು ದಯಮಾಡಿ ಸ್ವೀಕರಿಸಬೇಕು. ಜಾಗೃತ ಯೆಹೂದ್ಯಾಭೀಪ್ಸೆಯ ಮತ್ತು ಮಾನವಪ್ರಜ್ಞೆಯ

ಮೂರ್ತರೂಪರಾದ ನೀವು ಹಿರಿಯ ಸ್ಥಾನವನ್ನು ಅಲಂಕರಿಸುವುದರಿಂದ ನಮ್ಮ ಪ್ರಿಯ ರಾಷ್ಟ್ರಕ್ಕೆ ಅಧಿಕ ಅಂತಸ್ತು ಪ್ರಾಪ್ತವಾಗುತ್ತದೆ. ನಿಮ್ಮ ಸಕಲ ವೈಜ್ಞಾನಿಕ ಕಾರ್ಯಕಲಾಪಗಳಿಗೂ ಅಲ್ಲಿ ಪೂರ್ಣ ಅವಕಾಶವಿರುತ್ತದೆ. ಅಧಿಕಾರದ ಹೊಣೆ ನಿಮ್ಮನ್ನು ಇನಿತೂ ಬಾಧಿಸದಂತೆ ಎಚ್ಚರ ವಹಿಸುತ್ತೇವೆ. ನೀವು ಇಸ್ರೇಲಿಗೆ ಬಂದು ನೆಲಸಿ ಅಧ್ಯಕ್ಷ ಪದವಿಯನ್ನು ಸ್ವೀಕರಿಸಿ ನಮ್ಮನ್ನು ಅನುಗ್ರಹಿಸಬೇಕು."

ನಿರಾಕರಿಸಲಾಗದ ಸೌಜನ್ಯ ಮತ್ತು ಲಘುಗೊಳಿಸಲಾಗದ ಸಂಸ್ಕೃತಿ ಈ ರಾಯಭಾರಿಯ ರಹಸ್ಯ. ಸರಳ ಸ್ವಭಾವದ ಐನ್‌ಸ್ಟೈನ್ ಸಹಜವಾಗಿ ತುಂಬ ಪ್ರಭಾವಿತರಾದರು. ಆದರೆ ಮೂಲ ಭೂತ ತತ್ತ್ವಗಳನ್ನು ಕುರಿತಂತೆ—ವೈಜ್ಞಾನಿಕ ವಿಚಾರಗಳಾಗಲಿ ಮಾನವೀಯ ಸಮಸ್ಯೆಗಳಾಗಲಿ—ಸ್ಪಷ್ಟ ಸ್ವಂತಾಭಿಪ್ರಾಯ ಹೊಂದಿದ್ದ ಇವರು ಸಕಾರಣವಾಗಿ ಈ ಆಹ್ವಾನವನ್ನು ನಿರಾಕರಿಸಿದರು. "ನಮ್ಮ ಇಸ್ರೇಲ್ ರಾಷ್ಟ್ರ ಕಳಿಸಿರುವ ಆಹ್ವಾನ ನನ್ನ ಹೃದಯವನ್ನು ತಟ್ಟಿದೆ. ಆದರೆ ಅದೇ ವೇಳೆ ಈ ಆಹ್ವಾನವನ್ನು ಒಪ್ಪುವುದು ನನಗೆ ಶಕ್ಯವಾಗಲಾರದಲ್ಲ ಎಂಬುದನ್ನು ನೆನೆಸಿಕೊಂಡಾಗ ತೀವ್ರ ಖೇದ ಮತ್ತು ಸಂಕಟ ಆಗುತ್ತವೆ. ಜೀವಮಾನವಿಡೀ ನಾನು ವಸ್ತುಸಂಬಂಧವಾದ ವಿಷಯ ಗಳೊಡನೆ ವ್ಯವಹರಿಸಿದವನು. ಎಂದೇ ಜನರೊಡನೆ ಸಮರ್ಪಕವಾಗಿ ವ್ಯವಹರಿಸುತ್ತ ಅಧಿಕೃತ ಜವಾಬ್ದಾರಿಕೆಗಳನ್ನು ಯೋಗ್ಯವಾಗಿ ನಿರ್ವಹಿಸಲು ಅವಶ್ಯವಾಗುವ ಸಹಜ ಪ್ರವೃತ್ತಿಯಾಗಲಿ ಅನು ಭವವಾಗಲಿ ನನಗಿರುವುದಿಲ್ಲ. ಈ ಕಾರಣಗಳಿಗಾಗಿಯೇ—ಏರುತ್ತಿರುವ ವಯಸ್ಸು ನನ್ನ ಪರಿಮಿತ ದೇಹ ತ್ರಾಣದ ಮೇಲೆ ಅಧಿಕ ಭಾರ ಹೇರಲು ಬಿಡಲಾರದೆಂಬ ಕಾರಣವನ್ನು ಮರೆತರೂ—ನಾನು ಆ ಉಚ್ಚ ಅಧಿಕಾರಸ್ಥಾನದ ಕರ್ತವ್ಯನಿರ್ವಹಣೆಗೆ ಅನರ್ಹನಾಗುತ್ತೇನೆ."

ಇಸ್ರೇಲ್ ಅಧ್ಯಕ್ಷ ಪದವಿಯನ್ನು ಐನ್‌ಸ್ಟೈನ್ ಸ್ವೀಕರಿಸಲಿಲ್ಲ.

## ಜೀವನದೃಷ್ಟಿ

> ನಮ್ಮ ಶಾಲಾಪುಸ್ತಕಗಳು ಯುದ್ಧವನ್ನು ಉದಾತ್ತೀಕರಿಸಿ ಅದರ ಕ್ರೌರ್ಯವನ್ನು ಮರೆಮಾಡುತ್ತವೆ. ಮಕ್ಕಳ ಧಮನಿಗಳಲ್ಲಿ ದ್ವೇಷವನ್ನು ಹೊಗಿಸುತ್ತವೆ. ನಾನು ಯುದ್ಧದ ಬದಲಾಗಿ ಶಾಂತಿ ಬೋಧಿಸಿ ಯೇನು. ದ್ವೇಷದ ಬದಲಾಗಿ ಪ್ರೇಮ ಬೆಳೆಸಿಯೇನು.
>
> ಐನ್‌ಸ್ಟೈನ್

ನ್ಯೂಕ್ಲಿಯಸ್ಸಿನ ವಿದಲನದಿಂದ ಉದ್ಭವಿಸಿದ ಶಕ್ತಿಯು, ಪ್ರಪಂಚವನ್ನು ಹಲವಾರು ಬಣ ಗಳಾಗಿ ವಿದಲಿಸುತ್ತಿದ್ದುದನ್ನು ಕಂಡ ಐನ್‌ಸ್ಟೈನ್ ತಮ್ಮ ಆ 'ಪಾಪಪೂರಿತ ಪತ್ರ' ಈ ದುರಂತ ವನ್ನು ಕುದುರಿಸಿದ್ದಲ್ಲವೇ ಎಂಬುದಾಗಿ ಪರಿತಪಿಸುತ್ತಿದ್ದರು. ೧೯೫೪ ನವಂಬರ್ ೧೧ರಂದು ಬರೆದ ಒಂದು ಕಾಗದದಲ್ಲಿ ತಮ್ಮ ಒಳಗುದಿಯನ್ನು ತೋಡಿಕೊಂಡಿದ್ದಾರೆ. "ನಾನು ಅಧ್ಯಕ್ಷ ರೂಸ್‌ವೆಲ್ಟರಿಗೆ ಪರಮಾಣು ಬಾಂಬುಗಳನ್ನು ತಯಾರಿಸಬೇಕೆಂಬ ಶಿಫಾರಸು ಕಾಗದಕ್ಕೆ ರುಜು ಹಾಕಿದಾಗ ನನ್ನ ಬದುಕಿನ ಬಲು ದೊಡ್ಡತಪ್ಪು ಮಾಡಿಬಿಟ್ಟೆ. ಆದರೆ ಅಲ್ಲೊಂದು ಅಲ್ಪ ಸಮರ್ಥನೆಯೂ ಇತ್ತು—ಜರ್ಮನರು ಅವನ್ನು ತಯಾರಿಸಬಹುದಾಗಿದ್ದ ಅಪಾಯ."

ಐನ್‌ಸ್ಟೈನರನ್ನು ಸಂದರ್ಶಿಸುತ್ತಿದ್ದವರು ಬಹುಮಂದಿ—ವಿವಿಧ ಆಸಕ್ತಿಗಳವರು, ವಿವಿಧ ದೃಷ್ಟಿಕೋನಗಳವರು. ಇವರ ಪೈಕಿ ಅನೇಕ ಮಂದಿ ತಾವು ಐನ್‌ಸ್ಟೈನರೊಡನೆ ನಡೆಸಿದ ಸಂಭಾಷಣೆ ಗಳನ್ನು ಯಥಾವತ್ತಾಗಿ ಬರೆದು ಪ್ರಕಟಿಸಿದ್ದಾರೆ. ಆಯ್ದ ಕೆಲವು ಮಾದರಿಗಳನ್ನು ಇಲ್ಲಿ ಬರೆದಿದೆ.

"ಹೊಗಳಿಕೆ ಸಂತೋಷ ನೀಡಲಾರದೇ ?"

ಐನ್‌ಸ್ಟೈನ್. "ಅದನ್ನು ಆಲಿಸುತ್ತ ನಿಲ್ಲೋಣವೆಂಬ ಮತ್ತು ಮೂಡಿಸುತ್ತದೆ ಅದು. ಕಬ್ಬಿಣಕ್ಕೆ ತುಕ್ಕು ಇದ್ದಂತೆ ವ್ಯಕ್ತಿಗೆ ಹೊಗಳಿಕೆ. ಅದು ಅವನನ್ನು ಕೆಡಿಸುತ್ತದೆ. ಇದರಿಂದ ಪಾರಾಗಲಿರುವ ಉಪಾಯ ಒಂದೇ ಒಂದು—ಸತತ ಕಾರ್ಯಮಗ್ನತೆ."

"ಎಡಿಂಗ್ಟನ್ ಬರೆದಿರುವ *The Mathematical Theory of Ralativity* ಬಗ್ಗೆ ನಿಮ್ಮ ಅಭಿಪ್ರಾಯವೇನು ?"

"ಸಾಹಿತ್ಯ ಸೌಂದರ್ಯದಿಂದ ಕೂಡಿರುವ ಉಜ್ಜ್ವಲ ಬರವಣಿಗೆ ಅದು. ಬುದ್ಧಿವಂತ ಓದುಗನಿಗೆ ಅದು ನೂತನ ವೈಜ್ಞಾನಿಕ ಭಾವನೆಗಳ ಬಗ್ಗೆ ಕೊಂಚ ತಿಳಿವಳಿಕೆಯನ್ನಾದರೂ ಕೊಡಬಲ್ಲದು. ಅಂದಮಾತ್ರಕ್ಕೆ ಸಾಧಾರಣ ಓದುಗ ಸಂಕೀರ್ಣ ವೈಜ್ಞಾನಿಕ ಪರಿಕಲ್ಪನೆಗಳನ್ನು ಜನಪ್ರಿಯ ಗ್ರಂಥಗಳ ವಾಚನದಿಂದ ಗ್ರಹಿಸಿಯಾನೆಂದು ಭಾವಿಸುವುದು ಮಾತ್ರ ತಪ್ಪು. ವಿಜ್ಞಾನಿಯಾದವ ತನ್ನ ಸಿದ್ಧಾಂತಗಳನ್ನು ಜನಪ್ರಿಯಗೊಳಿಸಲು ಇಳಿಯಬಾರದು. ಅವನೇನಾದರೂ ಹೀಗೆ ಮಾಡಿದ್ದಾದರೆ ಅವನೊಬ್ಬ ಫಕೀರ [ಚಮತ್ಕಾರವೆಸಗುವಾತ] ಆಗುತ್ತಾನೆ. ಪ್ರಕಾಶವನ್ನು ಬಯಸದೆ ನೇಪಥ್ಯದಲ್ಲಿ ಉಳಿದಿರುವುದು ವಿಜ್ಞಾನಿಯ ಕರ್ತವ್ಯ."

ಒಂದು ಕಾಲದಲ್ಲಿ ಐನ್‌ಸ್ಟೈನ್ ವಿಜ್ಞಾನವನ್ನು ಜನಪ್ರಿಯಗೊಳಿಸಲು ಉತ್ಸಾಹಿ ಆಗಿದ್ದು ಆ ಕಾರ್ಯದಲ್ಲಿ ಭಾಗಿ ಆಗಿದ್ದರೂ ಕೊನೆಗಾಲದಲ್ಲಿ, ಪ್ರಾಯಶಃ ಮಾನವಸಮುದಾಯ ಅಧಿಕ ವಿಜ್ಞಾನದಿಂದ ಅಧಿಕ ವಿನಾಶಸಾಮರ್ಥ್ಯವನ್ನು ಮಾತ್ರ ಗಳಿಸಿಕೊಂಡದ್ದನ್ನು ಕಂಡು ಭ್ರಮನಿರಸನರಾಗಿ, ಈ ನಿಷೇಧಾತ್ಮಕ ನಿಲವನ್ನು ತಳೆದುದಾಗಿರಬೇಕು.

"ನಮ್ಮ ಯುಗದ ಪರಮೋತ್ಕೃಷ್ಟ ವ್ಯಕ್ತಿ ಗಾಂಧಿ," ಎಂದರು ಐನ್‌ಸ್ಟೈನ್.

"ಡಾಕ್ಟರ್ ಶ್ವೈಟ್ಝರ್ ?" (ಆಲ್ಬರ್ಟ್ ಶ್ವೈಟ್ಝರ್, ೧೮೭೫-೧೯೬೫, ಫ್ರೆಂಚ್ ಪ್ರೊಟೆಸ್ಟೆಂಟ್ ಪುರೋಹಿತ, ತತ್ತ್ವಜ್ಞಾನಿ, ವೈದ್ಯ ಹಾಗೂ ಸಂಗೀತವಿದ ; ಮಿಗಿಲಾಗಿ ಮಹಾಮಾನವ)

"ಖಂಡಿತ, ಅವರು ಕೂಡ ಮಹಾಪುರುಷರೇ."

"ನೀವು ಹೆಸರಿಸಬಹುದಾದ ನಿಮಗೆ ತಿಳಿದಿರುವ ಮಹಾಚಿಂತನಶೀಲ ಹಾಗೂ ಸಮರ್ಥ ವ್ಯಕ್ತಿ ಯಾರು ?"

ಥಟಕ್ಕನೆ ಹೊರಟಿತು ಐನ್‌ಸ್ಟೈನರ ಉತ್ತರ, "ಲೊರೆಂಟ್ಸ್." ಬೇರೆ ಒಂದು ಸಂದರ್ಭದಲ್ಲಿ ಇವರು ಲೊರೆಂಟ್ಸ್ ಬಗ್ಗೆ ಹೀಗೆ ಬರೆದಿದ್ದರು, "ಅವರ ಪರಮೋಚ್ಚ ಮನದಿಂದ ಪ್ರವಹಿಸಿದ ಪ್ರತಿಯೊಂದೂ ಉತ್ಕೃಷ್ಟ ಕಲಾಕೃತ್ತನೆಯಂತೆ ಸ್ಪಷ್ಟವೂ ಸುಂದರವೂ ಆಗಿತ್ತು. ಹಾಸ್ಯ, ನಗು, ಭೌತ ಹಾಗೂ ಗಣಿತ ವಿಜ್ಞಾನಗಳ ಮೇಲಿನ ಪ್ರಭುತ್ವ ಎಲ್ಲವೂ ಅವರಲ್ಲಿ ನಿಕಟವಾಗಿ ಹೆಣೆದುಕೊಂಡಿರುತ್ತಿದ್ದುವು. ಇಷ್ಟಿದ್ದರೂ ಲೊರೆಂಟ್ಸರಿಗೆ ಒಂದು ವಿಷಯ ಚೆನ್ನಾಗಿ ಗೊತ್ತಿತ್ತು ; ಮಾನವಬುದ್ಧಿ ಬಲು ಆಳವಾಗಿ ಏನೂ ವಸ್ತುಗಳ ಸಾರಭೂತ ತಿರುಳಿನ ಒಳಹೊಗಲಾರದು ಎಂದು. ಈ ಅರ್ಧನಿರಾಶಾಭಾವನೆಯ ಮತ್ತು ಅರ್ಧವಿನೀತತೆಯ ನಿಲವು ನನಗೆ ಅರ್ಥವಾದದ್ದು ನನ್ನ ಬದುಕಿನ ಈಚೆಗಿನ ವರ್ಷಗಳಲ್ಲಿ ಮಾತ್ರ."

"ಲೊರೆಂಟ್ಸ್ ಸರಿ. ಮಿಂಕೊವ್ಸ್ಕೀ ?"

"ಅವರು ಝೂರಿಕ್ಕಿನಲ್ಲಿ ನನಗೆ ಗಣಿತ ಬೋಧಿಸಿದ ಮಹೋಪಾಧ್ಯಾಯರು. ಆದರೆ ಅವರನ್ನು ಎಲ್ಲಿ ನೆಲೆಗೊಳಿಸಬೇಕೆನ್ನುವುದನ್ನು ನಿರ್ಧರಿಸುವಷ್ಟು ಗಣಿತಜ್ಞಾನ ನನಗಿಲ್ಲ."

ಲೊರೆಂಟ್ಸ್ ವಿನಾ ಇತರ ಎಲ್ಲ ಭೌತವಿಜ್ಞಾನಿಗಳೂ ಐನ್‌ಸ್ಟೈನರ ದೃಷ್ಟಿಯಲ್ಲಿ ಒಂದಲ್ಲ ಒಂದು ಕಾರಣಕ್ಕಾಗಿ ಆ ಓರಿಮಟ್ಟಕ್ಕೆ ಬಂದಿರಲಿಲ್ಲ.

"ನಿಮ್ಮ ಮತಧಾರ್ಮಿಕ ನಂಬಿಕೆಗಳೇನು ?"

"ನಾನು ಯೆಹೂದ್ಯನಾಗಿ ಜನಿಸಿರದಿದ್ದರೆ ಕ್ವೇಕರ್ ಅಂತೂ ಆಗಿರುತ್ತಿದ್ದೆ. ಶಾಂತಿ ಮತಾವಲಂಬಿ ನಾನು."

"ದೇವರು ?"

"ಜೀವನದ ಬಗೆಗಿನ ವ್ಯಕ್ತ ಭಯದಿಂದ ಅಥವಾ ಮರಣದ ಬಗೆಗಿನ ಅವ್ಯಕ್ತ ಭೀತಿಯಿಂದ ಅಥವಾ ಅಂಧಶ್ರದ್ಧೆಯಿಂದ ಉದ್ಭವಿಸುವ ಭಗವಂತನ ಪರಿಕಲ್ಪನೆಯನ್ನು ನಾನೆಂದೂ ಒಪ್ಪಲಾರೆ. ವೈಯಕ್ತಿಕ ದೇವರಿಲ್ಲವೆಂಬುದನ್ನು ರುಜುವಾತಿಸಲಾರೆನಾದರೂ ಇಂಥ ದೇವರ[೬೩] ಬಗ್ಗೆ ಮಾತಾಡಿದ್ದಾದರೆ ನಾನು ಸುಳ್ಳುಗಾರ ಎನಿಸಿಯೇನು."

"ಮಾನವ ಭ್ರಾತೃತ್ವ ?"

"ಮಾನವ ಭ್ರಾತೃತ್ವ ಮತ್ತು ವ್ಯಕ್ತಿಯ ವಿಶಿಷ್ಟತೆ ಕುರಿತು ನನಗೆ ಪೂರ್ತಿ ವಿಶ್ವಾಸ ಉಂಟು. ಆದರೆ ನಾನು ನಂಬಿದ್ದನ್ನು ರುಜುವಾತಿಸಿ ತೋರಿಸಬೇಕೆಂದು ನೀವು ಹೇಳಿದ್ದಾದರೆ ಅದು ಸಾಧ್ಯವಾಗದು. ಅವು ನಿಜವೆಂದು ನಿಮಗೆ ಗೊತ್ತಿದೆ. ಆದರೆ ಬದುಕಿಡೀ ಪ್ರಯತ್ನಿಸಿದ್ದಾದರೂ ಅವನ್ನು ನೀವು ಸಾಧಿಸಲಾರಿರಿ. ಒಂದು ಮಿತಿವರೆಗೆ ಮಾತ್ರ ಮನಸ್ಸು ತೆವಳಿ ಸಾಧನೆಯನ್ನು ಒದಗಿಸಬಲ್ಲದು. ಆ ಮಿತಿಬಿಂದುವಿನಲ್ಲಿ ಮನಸ್ಸು ಉನ್ನತ ಸಮತಲಕ್ಕೆ ನೆಗೆದಿರುತ್ತದೆ. ಈ ನೆಗೆತ ಹೇಗೆ ಕೈಗೂಡಿತೆಂಬುದನ್ನು ಅದು ವಿವರಿಸಿ ಹೇಳಲಾರದು. ಸಮಸ್ತ ಮಹಾ ಆವಿಷ್ಕಾರಗಳೂ ಈ ತೆರನಾದ ನೆಗೆತವನ್ನು ಅವಲಂಬಿಸಿವೆ."

"ಅಂದಮಾತ್ರಕ್ಕೆ ಪ್ರಶ್ನೆ ಕೇಳುವುದು ತಪ್ಪೇ ?"

"ಅಲ್ಲ, ಅಲ್ಲ. ಪ್ರಶ್ನೆ ಕೇಳುವುದನ್ನು ಎಂದೂ ನಿಲ್ಲಿಸದಿರುವುದು ಅತಿ ಮುಖ್ಯ ಸಂಗತಿ. ಸರಿಯಾದ ಪ್ರಶ್ನೆಯನ್ನು ರೂಪಿಸುವುದೊಂದು ಸೃಜನಾತ್ಮಕ ಕ್ರಿಯೆ. ಕುತೂಹಲವೇ ಪ್ರಶ್ನೆಯ ಮೂಲ. ಕುತೂಹಲಕ್ಕೆ ಅಸ್ತಿತ್ವದಲ್ಲಿರಲು ಅದರದೇ ಕಾರಣ ಉಂಟು. ಅನಂತ, ಜೀವನ, ವಾಸ್ತವತೆಯ ಅಗಾಧ ರಚನೆ ಮುಂತಾದವುಗಳ ಗಹನತೆ ನಿಗೂಢತೆಗಳನ್ನು ಗಮನಿಸುವಾಗ ವ್ಯಕ್ತಿ ಭಾವಾವಿಷ್ಟನಾಗದಿರುವುದು ಅಸಾಧ್ಯ. ಪ್ರತಿನಿತ್ಯ ವ್ಯಕ್ತಿ ಈ ನಿಗೂಢತೆಯ ಅತ್ಯಲ್ಪ ಅಂಶವನ್ನಾದರೂ ಅರಿಯಲು ಪ್ರಯತ್ನಿಸಬೇಕು. ಪವಿತ್ರ ಕುತೂಹಲವೆಂದೂ ಹಿಂಗಬಾರದು."

ಕಲ್ಪನೆಯ ಕಷ್ಟಗಳು ವಾಸ್ತವವ ಮೀರಿ ನಿ-
ನ್ನಲ್ಪತೆಯ ಕಾಣಿಪವು ನಿನಗೆತ್ತಿ, ತಳೆ ಧೈರ್ಯ
ಕಲ್ಪಣೆಯೊ ಕ್ರಕಚವೊ ನಡೆ ಮುಂದೆ ಕಾದಿಹುದು
ತಲ್ಪ ನಿನ್ನನು ಸ್ವಾಗತಿಸಲೆಂದು ಅತ್ರಿಸೂನು

ಹಗುರಾಗಿ ಒಂಟಿಯಾಗಿ ಸಾಗುವಾತ ಚುರುಕಾಗಿ ಬಲುದೂರ ಸಾಗುವಾತನೂ ಹೌದು. ಇಂಥ ವಿರಳರ ಸಾಲಿಗೆ ಸೇರಿದವರು ಐನ್‌ಸ್ಟೈನ್. ಸಾರ್ಥಕ ಜೀವನದ, ಅಂತೆಯೇ ಮಹತ್ತರ ಸಾಧನೆಗಳ, ಶಿಖರಾಗ್ರದಲ್ಲಿದ್ದ ಇವರು ಸ್ವಂತದ ಬಗ್ಗೆ ಏನು ಅಭಿಪ್ರಾಯ ಹೊಂದಿದ್ದರು ? ೧೯೫೫ರ ತರುಣದಲ್ಲಿ ಇವರಿಗೊಂದು ಆಮಂತ್ರಣ ಬಂದಿತು ; ವಿಶೇಷ ಸಾಪೇಕ್ಷತಾಸಿದ್ಧಾಂತದ (೧೯೦೫) ಸುವರ್ಣ ಮಹೋತ್ಸವವನ್ನು ಅದರ ತಾಯಿನೆಲವಾದ ಬರ್ನ್ ನಗರದಲ್ಲಿ ಅದ್ಧೂರಿಯಿಂದ ಆಚರಿಸಲಾಗುವುದು. ದ್ರಷ್ಟಾರ ಐನ್‌ಸ್ಟೈನ್ ಈ ಸಮಾರಂಭಕ್ಕೆ ಬರಬೇಕು ಎಂದು.

ಆ ಪತ್ರಕ್ಕೆ ಇವರು ಬರೆದ ಉತ್ತರ, "ವೃದ್ಧಾಪ್ಯ ಮತ್ತು ಅನಾರೋಗ್ಯ ಕಾರಣಗಳಿಂದಾಗಿ ಈ ಯಾತ್ರೆ ಕೈಗೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ. ಇದರಿಂದ ನನಗೆ ವ್ಯಥೆ ಆಗುತ್ತಿಲ್ಲವೆಂದು

ತಿಳಿಸಬಯಸುತ್ತೇನೆ. ವ್ಯಕ್ತಿಪಂಥ ಅಥವಾ ವ್ಯಕ್ತಿಪೂಜೆ ಎಂದೂ ನನಗೆ ರುಚಿಸಿದ್ದಿಲ್ಲ."

೧೯೫೪ರಲ್ಲಿ ಒಮ್ಮೆ ಐನ್‌ಸ್ಟೈನ್ ಖಾಯಿಲೆ ಬಿದ್ದರು. ತಾವಿನ್ನು ಹೆಚ್ಚು ವರ್ಷ ಬದುಕಲಾರೆನೆಂದು ಇವರಿಗೆ ದೃಢವಾಗಿತ್ತು. ಮರಣವೆಂಬುದೊಂದು ಬಿಡುಗಡೆ ಎಂಬುದಾಗಿ ಇವರು ಪದೇ ಪದೇ ಹೇಳುತ್ತಿದ್ದರು : "ಸಾವು ಒಂದು ಹಳೆಬಾಕಿಯೆಂದು ನೋಡಲು ಕಲಿತಿದ್ದೇನೆ. ಎಂದಾದರೊಂದು ದಿನ ಅದನ್ನು ಮರುಪಾವತಿ ಮಾಡಲೇಬೇಕು." ಎಂಬುದಾಗಿ ೧೯೫೫ ಫೆಬ್ರುವರಿ ೫ರಂದು ಕಾಗದ ಬರೆದರು. ಇವರ ದುರ್ದೈವ, ಈ 'ಮರುಪಾವತಿ'ಯನ್ನು ಇವರು ಸಲ್ಲಿಸುವ ಮೊದಲು ಇನ್ನೂ ಒಂದು ದುಃಖವನ್ನು ಅನುಭವಿಸಬೇಕಾಯಿತು. ಝೂರಿಕ್ಕಿನಲ್ಲಿ ಇವರ ವಿದ್ಯಾರ್ಥಿ ದಿನಗಳಂದು ಸಹಪಾಠಿ ಆಗಿದ್ದ ಆತ್ಮೀಯ ಮಿತ್ರ ಮೈಕೇಲ್ ಬೆಸ್ಸೊ (೧೮೭೩-೧೯೫೫) ಅದೇ ಮಾರ್ಚ್ ತಿಂಗಳಲ್ಲಿ ಅಸುನೀಗಿದರು. ಬೆಸ್ಸೊರ ಮಗ ಮತ್ತು ಸೋದರಿಗೆ ಐನ್‌ಸ್ಟೈನ್ ೨೧ರಂದು ಸಾಂತ್ವನಪತ್ರ ಬರೆದರು. "ನಮ್ಮ ಸ್ನೇಹದ ಅಡಿಪಾಯವನ್ನು ಝೂರಿಕ್ಕಿನಲ್ಲಿ ಕಟ್ಟಿದೆವು. ಅಲ್ಲಿ ನಾವು ದಿನ ದಿನ ಎಂಬಂತೆ ಸಂಗೀತ ಸಂಜೆಗಳಲ್ಲಿ ಸೇರುತ್ತಿದ್ದೆವು . . . ಮುಂದೆ ಏಕಸ್ವ ಕಛೇರಿ ನಮ್ಮನ್ನು ಒಟ್ಟುಗೂಡಿಸಿತು. ನಮ್ಮ ನಮ್ಮ ಬಿಡಾರಗಳಿಗೆ ಮರಳುತ್ತಿದ್ದಾಗ ನಾವು ನಡೆಸುತ್ತಿದ್ದ ಮಾತುಕತೆಗಳ ಬೆಡಗಿಗೆ ಎಣೆಯೇ ಇಲ್ಲ . . . ಈಗ ಅವರು ಈ ವಿಚಿತ್ರ ಪ್ರಪಂಚಕ್ಕೆ ನಮಸ್ಕಾರ ಹೇಳಿ ನನಗಿಂತ ಕೊಂಚ ಮೊದಲಾಗಿ ಹೊರಟುಹೋಗಿದ್ದಾರೆ. ಇದಕ್ಕೆ ವಿಶೇಷ ಅರ್ಥವೇನೂ ಇಲ್ಲ. ಭೌತವಿಜ್ಞಾನದಲ್ಲಿ ನಂಬಿಕೆ ಇಟ್ಟಿರುವ ನಮ್ಮಂಥವರಿಗೆ ಭೂತ, ವರ್ತಮಾನ ಮತ್ತು ಭವಿಷ್ಯ ಇವುಗಳ ನಡುವಿನ ವಿಭೇದೀಕರಣ, ಇದೊಂದು ಕಠಿಣ ಸಂಗತಿಯಾಗಿದ್ದರೂ, ಕೇವಲ ಮಾಯೆ."

ಮಾನವನ ಹಕ್ಕುಬಾಧ್ಯತೆಗಳನ್ನು ಕಾಪಾಡುವುದರಲ್ಲಿ ಅಪಾರ ಆಸ್ಥೆ ವಹಿಸಿದವರು ಎಂಬ ಕಾರಣಕ್ಕಾಗಿ ಇವರನ್ನು ೧೯೫೪ರಲ್ಲಿ ಸಾರ್ವಜನಿಕವಾಗಿ ಸನ್ಮಾನಿಸಲಾಯಿತು. ಆಗ ಇವರಾಡಿದ ಮಾತು, "ಸುದೀರ್ಘ ಜೀವನದ ಅವಧಿಯಲ್ಲಿ ನಾನು ನನ್ನ ಸಮಸ್ತ ಶಕ್ತಿಸಾಮರ್ಥ್ಯವನ್ನೂ ಭೌತವಾಸ್ತವತೆಯ ರಚನೆಯನ್ನು ಆಳವಾಗಿ ಅರಿಯುವತ್ತ ವಿನಿಯೋಗಿಸಿದ್ದೇನೆ. ನಾನೆಂದೂ ವ್ಯವಸ್ಥಿತವಾಗಿ ಅನ್ಯಾಯ ಮತ್ತು ದಬ್ಬಾಳಿಕೆಯನ್ನು ಎದುರಿಸಲು, ಭೂರಿ ಜನರ ಸ್ಥಿತಿಗತಿಗಳನ್ನು ಒಳಿತುಗೊಳಿಸಲು, ಇಲ್ಲವೇ ಮಾನವ ಸಂಬಂಧಗಳ ಸಾಂಪ್ರದಾಯಿಕ ವಿಧಿಗಳನ್ನು ಸುಧಾರಿಸಲು ಪ್ರಯತ್ನಿಸಿರುವುದಿಲ್ಲ. ನಾನು ನಿರ್ವಹಿಸಿರುವ ಒಂದೇ ಒಂದು ಪಾತ್ರವಿದು : ಸಾರ್ವಜನಿಕ ವಿವಾದಗಳು ಅತ್ಯಂತ ಪ್ರಕೋಪ ಮತ್ತು ಶೋಚನೀಯಸ್ಥಿತಿಗೆ ಹೋಗಿದ್ದು ಆಗ ನಾನು ಮೌನ ತಳೆದಿದ್ದರೆ ಅದು ಸಮ್ಮತಿಸೂಚಕವೆನ್ನಿಸಿ ದೋಷಿ ಆಗುತ್ತಿದ್ದೆನೆಂದು ಕಂಡು ಬಂದಾಗಲೆಲ್ಲ, ದೀರ್ಘ ಕಾಲಾಂತರಗಳಲ್ಲಿ, ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ."

ಹೂಬಿಡುವ ಹೊಸತೊಂದು ಕಳ್ಳಿಯ ಪ್ರಭೇದವನ್ನು ಸಸ್ಯವಿಜ್ಞಾನಿ ಎ. ವಿ. ಫ್ರಿಕ್ ಎಂಬವರು ಪರ್ವತಶಿಖರದ ವಿರಳ ವಾತಾವರಣದಲ್ಲಿ ಪತ್ತೆ ಹಚ್ಚಿದರು. ತಮಗೆ ಐನ್‌ಸ್ಟೈನ್ ಬಗ್ಗೆ ಇದ್ದ ಅಪಾರ ಅಭಿಮಾನದ ಪ್ರತೀಕವಾಗಿ ಈ ಪ್ರಭೇದಕ್ಕೆ ಐನ್‌ಸ್ಟೈನಿಯ ಎಂಬುದಾಗಿ ಹೆಸರಿಟ್ಟು ಇಡೀ ವರದಿಯನ್ನು ಅವರಿಗೆ ಗೌರವಪೂರ್ವಕವಾಗಿ ನಿವೇದಿಸಿ ಪತ್ರ ಬರೆದರು. ಐನ್‌ಸ್ಟೈನ್ ಬರೆದ ಮಾರೋಲೆ ಹೀಗಿದೆ, "ಮಾನ್ಯರೇ ! ನಿಮ್ಮ ಗಂಭೀರ ಚಿಂತಶೀಲ ಕ್ರಿಯೆ ನನಗೆ ತುಂಬ ಸಂತೋಷಕೊಟ್ಟಿದೆ. ನೀವು ಮಾಡಿರುವ ನಾಮಕರಣ ಯುಕ್ತ ಹಾಗೂ ಸಮರ್ಪಕವಾಗಿದೆ—ಇನ್ನು ಮುಂದೆ ಈ ಪುಟ್ಟ ಸಸ್ಯ ಮಾತ್ರವಲ್ಲ ಖುದ್ದು ನಾನು ಕೂಡ ಆ ಸ್ವರ್ಗೀಯ ಔನ್ನತ್ಯದಲ್ಲಿಯೂ ಶಾಂತಿಯಿಂದ ಉಳಿಯುವುದು ಸಾಧ್ಯವಾಗದು !"

ಐನ್‌ಸ್ಟೈನ್ ಒಂದು ತರಹದ ಜೀವನ್ಮುಕ್ತ. ಜನರ ಹಿತಾಸಕ್ತಿಗಳ ಬಗ್ಗೆ ಹೆಚ್ಚಿನ ಆಸ್ಥೆ ವಹಿಸುತ್ತ, ಅವುಗಳ ರಕ್ಷಣೆಗಾಗಿ ಶ್ರಮಿಸುತ್ತ, ಇವರಿಗಿಂತ ಅಧಿಕ ಮಾನವಾಂತಃಕರಣಯುಕ್ತ ವ್ಯಕ್ತಿ ಇರಲಾರರು ಎಂಬ ಚಿತ್ರವನ್ನು ಪ್ರದರ್ಶಿಸುತ್ತಿದ್ದಾಗಲೇ ಇವರು ಯಾವನೇ ವ್ಯಕ್ತಿಯನ್ನು ಅಥವಾ ಯಾವುದೇ ವ್ಯಕ್ತಿ ಸಮುದಾಯವನ್ನು ವಿಶೇಷವಾಗಿ ಹಚ್ಚಿಕೊಳ್ಳದೆ ಜನವಿದೂರರಾಗಿಯೂ ಇರಬಲ್ಲವರಾಗಿದ್ದರು.

ಹುಟ್ಟಿನಿಂದ ಐನ್‌ಸ್ಟೈನ್ ಜರ್ಮನ್ ಆಗಿದ್ದರೂ ಆ ರಾಷ್ಟ್ರದ ಉಗ್ರ ಮಿಲಿಟರಿತನದಿಂದ ರೋಸಿಹೋಗಿ ತಮ್ಮ ಹದಿನೈದನೆಯ ವಯಸ್ಸಿನಲ್ಲಿಯೇ ಜರ್ಮನ್ ಪೌರತ್ವವನ್ನು ಕಳಚಿ ಬಿಸುಟದ್ದು ಸರಿಯಷ್ಟೆ. ಪ್ರಪಂಚಮಾನವತೆ, ಪ್ರಪಂಚಭ್ರಾತೃತ್ವ, ಪ್ರಪಂಚ ವ್ಯಕ್ತಿತ್ವ ಇವರ ಜೀವನದ ಪ್ರಧಾನ ಶ್ರುತಿಗಳು. ಇವರು ಜರ್ಮನಿಯಲ್ಲಿ ಉಚ್ಚಸ್ಥಾನದಲ್ಲಿದ್ದಾಗ ಹಿಟ್ಲರ್-ಶಾಹಿಯ ದಬ್ಬಾಳಿಕೆಯನ್ನು ಸಹಿಸಲಾಗದೆ ಅಮೆರಿಕಕ್ಕೆ ವಲಸೆ ಹೋಗಿ ಅಲ್ಲಿಯೇ ಶಾಶ್ವತವಾಗಿ ನೆಲಸಿದುದರಲ್ಲಿ ಒಂದು ತೆರನಾದ ಅಸಾಂಗತ್ಯವನ್ನು—ಅಂದರೆ ಹೇಳುವುದು ಒಂದು ಮಾಡುವುದು ಇನ್ನೊಂದು ಎಂಬ ವಿರೋಧಾಭಾಸವನ್ನು—ಗುರುತಿಸಿದ ಒಬ್ಬ ವ್ಯಕ್ತಿ ೧೯೫೪ರಲ್ಲಿ ಇವರಿಗೊಂದು ಕಾಗದ ಬರೆದ. ವಾಕ್‌ಸ್ವಾತಂತ್ರ್ಯವನ್ನು ಕಾಪಾಡಲು ಮತ್ತು ಯುದ್ಧವನ್ನು ವಿರೋಧಿಸಲು, ಅವಶ್ಯವಾದರೆ, ಜನ ಬಂದೀಖಾನೆಗಳಿಗೆ ಹೋಗಲು ಕೂಡ ಸಿದ್ಧರಿರಬೇಕು, ವ್ಯವಸ್ಥೆಯ ಒಳಗಿದ್ದು ಅದನ್ನು ಅಸಹಕಾರ ಮಾರ್ಗದಿಂದ ಸರಿಪಡಿಸಲು ಪ್ರಯತ್ನಿಸಬೇಕು ಎಂದು ಮುಂತಾಗಿ ಬೋಧಿಸಿದ ಐನ್‌ಸ್ಟೈನ್, ನಾಟ್ಸೀಗಳು ಜರ್ಮನಿಯಲ್ಲಿ ಅಧಿಕಾರಾರೂಢರಾಗುತ್ತಿದ್ದಂತೆ ಒಂದು ಕ್ಷಣವನ್ನೂ ಅಪವ್ಯಯಗೊಳಿಸದೆ ಪರದೇಶಕ್ಕೆ ಓಡಿಹೋದದ್ದು ಖಂಡಿತ ತಪ್ಪು; ಇವರು ಜರ್ಮನಿಯಲ್ಲೇ ಉಳಿದಿದ್ದು ಯೆಹೂದ್ಯರ ಮತ್ತು ಇತರ ಶೋಷಿತರ ರಕ್ಷಣೆಯ ಹೊಣೆಗಾರಿಕೆಯನ್ನು ವಹಿಸಿಕೊಳ್ಳಬೇಕಾಗಿತ್ತು; ಇವರ ವರ್ಚಸ್ಸಿನ ಪ್ರಭಾವದಿಂದ ಆ ಹತಭಾಗ್ಯರಿಗೆ ಹೆಚ್ಚಿನ ಸಾಂತ್ವನ ಒದಗಬಹುದಾಗಿತ್ತು ; ಇಂಥದೇ ಒಂದು ಸಂದರ್ಭ ಕ್ರಿಸ್ತಪೂರ್ವ ದಿನಗಳಂದು ಗ್ರೀಸಿನಲ್ಲಿ ತಲೆದೋರಿದಾಗ ಸಾಕ್ರೆಟೀಸ್ ಅಥೆನ್ಸಿನಲ್ಲೇ ಉಳಿದಿದ್ದು ಅಸತ್ಯದ, ಅನ್ಯಾಯದ ಮತ್ತು ಅತಿರೇಕದ ಎದುರು ಹೋರಾಡಿ ಅಸುತೆತ್ತ—ಎಂಬುದಾಗಿ ಈ ಪತ್ರಕರ್ತ ವಾದ ಮಂಡಿಸಿದ್ದ.

ಈ 'ಆರೋಪಣೆ'ಗೆ ಐನ್‌ಸ್ಟೈನ್ ಉತ್ತರ ಬರೆದರು, "ಸ್ವಲ್ಪ ಜನಪ್ರಿಯತೆ ಗಳಿಸಿರುವ ಒಬ್ಬ ವ್ಯಕ್ತಿ, ಸಾರ್ವಜನಿಕರಿಗೆ ಅಜ್ಞಾತನಾಗಿರುವ ಒಬ್ಬಾತನಿಗಿಂತ ಕಡಿಮೆ ಅಪಾಯದ ಸನ್ನಿವೇಶದಲ್ಲಿರುತ್ತಾನೆ ಎನ್ನುವುದು ನಿಜ. ಆದರೆ ಇಂಥ ವ್ಯಕ್ತಿ ಆಗಿಂದಾಗ್ಯೆ ತನಗೆ ಅವಶ್ಯವೆಂದು ತೋರಿದಾಗಲೆಲ್ಲ ಸಾರ್ವಜನಿಕವಾಗಿ ಮಾತಾಡಿ ತನ್ನ ನಾಮದ ಬಲವನ್ನು ಉಪಯೋಗ ಮಾಡುವುದಕ್ಕಿಂತ ಹೆಚ್ಚಿಗೆ ಬೇರೇನನ್ನು ತಾನೇ ಮಾಡಬಲ್ಲ ? ಸಾಕ್ರೆಟೀಸನ ಜೊತೆ ಹೋಲಿಕೆ ಪ್ರಸಕ್ತ ಸನ್ನಿವೇಶದಲ್ಲಿ ಸಮರ್ಪಕವಲ್ಲ. ಆತನಿಗೆ ಪ್ರಪಂಚವೆಂದರೆ ಅಥೆನ್ಸ್ ನಗರವಾಗಿತ್ತು. ನಾನಾದರೋ ಯಾವುದೇ ನಿರ್ದಿಷ್ಟ ರಾಷ್ಟ್ರದೊಡನೆ ನನ್ನನ್ನು ಸಮೀಕರಿಸಿಕೊಳ್ಳಲಿಲ್ಲ—ಅದೂ ಜರ್ಮನಿ ರಾಷ್ಟ್ರದೊಡನೆ. ಜರ್ಮನ್‌ಭಾಷೆಯನ್ನು ನಾನು ಎಳೆ ಅಣುಗನಾಗಿ ಕಲಿತೆನಾದರೂ ಪ್ರಷ್ಯನ್ ವಿಜ್ಞಾನ ಅಕ್ಯಾಡಮಿಯೊಡನೆ ನಿಕಟಸಂಬಂಧ ಹೊಂದಿದ್ದೆನಾದರೂ, ನಾನೆಂದೂ ಸಹಮತನಾಗಲಿಲ್ಲ."

ಜಾನ್ ಎಲ್. ಸಿಂಗ್ ಎನ್ನುವವರು ಈಗ (೧೯೮೦) ಎಂಬತ್ತಮೂರರ ಸನಿಹದಲ್ಲಿರುವ ವಿಖ್ಯಾತ ಭೌತವಿಜ್ಞಾನಿ. ಡಬ್ಲಿನ್ ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್‌ಡ್ ಸ್ಟಡೀಸ್, ಐರ್ಲೆಂಡಿನಲ್ಲಿ ಎಮೆರಿಟಸ್ ಪ್ರೊಫೆಸರ್ ಆಗಿರುವ ಸಿಂಗ್, ಸಾಪೇಕ್ಷತಾಸಿದ್ಧಾಂತದಲ್ಲಿ ವಿಶೇಷ ಸಂಶೋಧನೆ ಮಾಡಿ ಹಲವು ಉದ್ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇವರು ಸಾಪೇಕ್ಷತಾ ಸಿದ್ಧಾಂತವನ್ನು ಕುರಿತು

ಬರೆದಿರುವ (೧೯೭೯) ಮಾತನ್ನು ಅನುಬಂಧ ೧ರಲ್ಲಿ ನೋಡಬಹುದು.

ಸಿಂಗರು ಐನ್‌ಸ್ಟೈನರನ್ನು ಪ್ರಿನ್‌ಸ್ಟನ್ನಿನಲ್ಲಿ ಭೇಟಿ ಆಗಿದ್ದರು. ಆ ಸನ್ನಿವೇಶವನ್ನು ಸ್ಮರಿಸುತ್ತ ಹೀಗೆ ಬರೆದಿದ್ದಾರೆ (೨-೮-೧೯೭೯) :

"ಪ್ರಿನ್‌ಸ್ಟನ್ನಿನಲ್ಲಿ ಹಲವು ತಿಂಗಳ ಕಾಲ ಉಪನ್ಯಾಸವೀಯಲು ನಾನು ಆಹ್ವಾನಿತನಾದಾಗ, ೧೯೩೯, ತುಂಬ ಸಡಗರದಿಂದ ಆ ಅವಕಾಶವನ್ನು ಸ್ವಾಗತಿಸಿದೆ. ಅಲ್ಲಿಯ ಅಧ್ಯಾಪಕವರ್ಗದವರು ಪ್ರತಿ ಅಪರಾಹ್ನವೂ ಅನೌಪಚಾರಿಕ ಚಹಾಕೂಟದಲ್ಲಿ ಕಲೆಯುತ್ತಿದ್ದರು. ಆ ಸಂದರ್ಭದಲ್ಲಿ ಈ ಮಹಾಪುರುಷನ ಒಡನಾಟದ ಭಾಗ್ಯ ಲಭಿಸೀತೆಂದು ಭಾವಿಸಿದ್ದೆ. ಆದರೆ ದುರದೃಷ್ಟ, ನಾನು ಪ್ರಿನ್‌ಸ್ಟನ್ನನ್ನು ಸೇರಿದಾಗ ತಿಳಿದೆ, ಐನ್‌ಸ್ಟೈನ್ ಈ ಕೂಟಗಳಿಗೆ ಎಂದೂ ಬರುತ್ತಿರಲಿಲ್ಲವೆಂದು! ನಿಜಕ್ಕೂ ಅವರು ಬರಲೇ ಇಲ್ಲ. ನಾನವರ ಕಛೇರಿಗೆ ಹೋದ ಹೊರತು ಅವರ ಭೇಟಿ ದೊರೆಯುವ ಬೇರಾವ ಅವಕಾಶವೂ ಇರಲಿಲ್ಲ. ಕೊನೆಗೂ ಹೋದೆ, ಪ್ರಿನ್‌ಸ್ಟನ್ನಿನಿಂದ ನಿರ್ಗಮಿಸುವ ಅದೇ ಮೊದಲು. ಆದರೆ ನನಗೆ ತುಂಬ ಅಳುಕಾಗಿತ್ತು. ಅವರಿಗೂ ಅಷ್ಟೆ. ಹೀಗಾಗಿ ನಮ್ಮ ನಡುವೆ ಯಾವುದೇ ಸರಸ ಸಂಭಾಷಣೆ ಜರಗಲಿಲ್ಲ."

ಹುಟ್ಟಿನಿಂದಲೇ ಐನ್‌ಸ್ಟೈನ್ ಸಂಗೀತಪ್ರೇಮಿ ಎಂಬುದನ್ನು ಹಿಂದೆ ಹೇಳಿದೆ. ವಿಶ್ವಗಾನದ ಸೂಕ್ಷ್ಮರೂಪವನ್ನು ಅಭಿಜಾತ ಸಂಗೀತದಲ್ಲಿಯೂ ಅಭಿಜಾತಸಂಗೀತದ ಬೃಹದ್ರೂಪವನ್ನು ವಿಶ್ವಗಾನದಲ್ಲಿಯೂ ಕಂಡು ಮೈಮರೆಯುತ್ತಿದ್ದ ಮಹಾಕಲಾವಿದ ಇವರು. ವಿಖ್ಯಾತ ಸ್ವಿಸ್ ಗಣಿತವಿದ ಜೇಕಬ್ ಬರ್ನೂಲಿಯ (೧೬೫೪-೧೭೦೫) ಭಾವವೇ ಇವರದು ಕೂಡ :

ಸಾಂತ ಅನಂತ ಶ್ರೇಣಿಯನಾವರಿಸಿದಂತೆ
ಅನಂತದೊಳ್ ಪರಿಮಿತಿಗಳ್ ಹಣಿಕಿಣುಕುವಂತೆ
ಮಹತ್ತಿನಾ ಅಸು ಸೂಕ್ಷ್ಮದೊಳಡಗಿದೆ :
ಅತಿ ಸಂಕೋಚಿತ ಪರಿಮಿತಿಗಳೊಳಗೆ ಪರಿಮಿತಿಗಳಿಲ್ಲ.
ಸೂಕ್ಷ್ಮವನನಂತದೊಳು ಮಿಗೆ ಕಾಣ್ಬುದುಮೇನಾನಂದವೊ !
ವಿಸ್ತಾರವನತ್ಯಲ್ಪದಿ ಗುರತಿಸುವುದದೇಂ ದೈವವಿಚಿತ್ರವೊ !

ಪ್ರಪಂಚವಿಖ್ಯಾತ ಪಿಟೀಲುವಾದನಕಾರ ಯೆಹೂದಿ ಮೆನೂಹಿನ್ (೧೯೧೬-೯೯), ಬರ್ಲಿನ್ನಿನ ಫಿಲ್ ಹಾರ್ಮೋನಿಕ್ ಸಭಾಂಗಣದಲ್ಲಿ ಒಂದು ಕಛೇರಿ ನೀಡಿದರು (೧೯೨೯). ಆಗ ಇವರು ಬಾಲಬೃಹಸ್ಪತಿ, ಪ್ರಪಂಚದ ವಿಸ್ಮಯ ತರುಣ, ಬೇಟೋವನ್ನನ ಜಂಗಮರೂಪ ! ಜಗತ್ತಿನ ಸಂಗೀತರಾಜಧಾನಿ ಎಂದು ಖ್ಯಾತವಾಗಿದ್ದ ಬರ್ಲಿನ್ ಆಗ ಶ್ರೇಷ್ಠ ಸಂಗೀತವಿದರ, ಗಾಯಕರ ಹಾಗೂ ವಿಮರ್ಶಕರ ಸಂಗಮಕ್ಷೇತ್ರವಾಗಿತ್ತು. ಕಿಕ್ಕಿರಿದ ಸಭೆಯಲ್ಲಿ ಮಹಾವಿದ್ವಾಂಸರ ಸಮ್ಮುಖದಲ್ಲಿ ಪ್ರದರ್ಶಿತವಾದ ಮೆನೂಹಿನ್ ಕಛೇರಿ ಪೂರ್ಣ ಯಶಸ್ಸು ಗಳಿಸಿತು. ಸಂತೃಪ್ತ ಶ್ರೋತೃಗಳು ಬಹುಸಂಖ್ಯೆಯಲ್ಲಿ, ಸಭಾನಂತರ, ನೇಪಥ್ಯದ್ವಾರದ ಮೂಲಕ ವೇದಿಕೆಗೆ ಧಾವಿಸಿದರು ಕಲಾವಿದ ಮೆನೂಹಿನರಿಗೆ ತಮ್ಮ ಅಭಿನಂದನೆ, ಕೃತಜ್ಞತೆ ಸಲ್ಲಿಸಲು.

ಮೆನೂಹಿನ್ ಬರೆದಿದ್ದಾರೆ (೧೯೭೬), "ನನಗೆ ಸ್ಪಷ್ಟವಾಗಿ ನೆನಪಿದೆ : ಆಲ್ಬರ್ಟ್ ಐನ್‌ಸ್ಟೈನ್ ನೇರವಾಗಿ ವೇದಿಕೆಗೆ ಜಿಗಿದುಬಂದರು. ನೇಪಥ್ಯದ ಮೂಲಕ ಬರುವ ಬಳಸುಹಾದಿ ಹಿಡಿವ ಗೊಡವೆಯೇ ಅವರಿಗಿರಲಿಲ್ಲ, ನನ್ನನ್ನು ಗಾಢವಾಗಿ ಆಲಿಂಗಿಸಿ ಪ್ರಮಾಣಾತೀತ ಜಗದ್ಭವ್ಯ ಪ್ರಶಂಸೆಯ ನುಡಿಗರೆದರು 'ಈಗ ನನಗೆ ತಿಳಿಯಿತು ದೇವನಿದ್ದಾನೆ ವೈಕುಂಠದಲ್ಲೆಂದು !'"

## ಐನ್‌ಸ್ಟೈನರ ದೃಷ್ಟಿಯಲ್ಲಿ ಗಾಂಧೀಜಿ

ಮಾನವನ ಅತ್ಯಂತ ಪ್ರೀತಿಪಾತ್ರ ಆಸ್ತಿ ಎಂದರೆ ಬದುಕು. ಇದನ್ನು ಒಮ್ಮೆ ಮಾತ್ರ ಅವನು ಬಾಳಬಲ್ಲ. ಎಂದೇ ಸಂದ ದಿನಗಳಲ್ಲಿ ಬಾಳಿದ ಅಂಜುಕುಳಿ ಮತ್ತು ತಿರುಕುಳಿ ಬದುಕಿನ ಎಗ್ಗು ಅವನನ್ನು ನುಚ್ಚು ನುರಿಗೊಳಿಸದಂತೆ, ಉದ್ದೇಶರಹಿತ ಜೀವನ ಅವನನ್ನು ವರ್ಷಗಳ ಕಾಲ ಹಿಂಸೆ ಪಡಿಸದಂತೆ, ಮರಣಶಯ್ಯೆಯಲ್ಲಿ, "ನನ್ನ ಸಮಸ್ತ ಜೀವನವನ್ನೂ ಪ್ರಾಣವನ್ನೂ ಪ್ರಪಂಚದಲ್ಲಿಯ ಪ್ರಥಮ ಕರ್ತವ್ಯದ ನಿರ್ವಹಣೆಗಾಗಿ—ಮನುಕುಲದ ವಿಮೋಚನೆ—ನಿವೇದಿಸಿಕೊಂಡಿದ್ದೇನೆ," ಎಂಬುದಾಗಿ ಹೇಳಲಾಗುವಂತೆ ಅವನು ಬಾಳುವುದು ಅಗತ್ಯ.

ಲೆನಿನ್

ಐನ್‌ಸ್ಟೈನರ ಕೊಠಡಿಯಲ್ಲಿ ಮಾಮೂಲಾಗಿ ಇರುತ್ತಿದ್ದುದು ಇಬ್ಬರು ವಿಜ್ಞಾನ ಸೀಮಾ ಪುರುಷರ ಚಿತ್ರಗಳು : ಐಸಾಕ್ ನ್ಯೂಟನ್ (೧೬೪೨-೧೭೨೭) ಮತ್ತು ಜೇಮ್ಸ್ ಕ್ಲರ್ಕ್ ಮ್ಯಾಕ್ಸ್‌ವೆಲ್ (೧೮೩೧-೭೯). ಆದರೆ ಬಾಳಸಂಜೆ ಕವಿಯುತ್ತಿದ್ದಂತೆ ಈ ಚಿತ್ರಗಳ ಸ್ಥಾನಗಳಲ್ಲಿ ಮಹಾತ್ಮ ಗಾಂಧಿ (೧೮೬೯-೧೯೪೮) ಮತ್ತು ಒಬ್ಬ ಜರ್ಮನ್ ಸಂಗೀತವಿದ ಇವರ ಚಿತ್ರಗಳು ಒಪ್ಪುತ್ತಿದ್ದುವು.

"ನಮ್ಮ ಯುಗದ ಪರಮೋತ್ಕೃಷ್ಟ ವ್ಯಕ್ತಿ ಗಾಂಧಿ," ಎಂಬುದಾಗಿ ಐನ್‌ಸ್ಟೈನ್ ಪದೇಪದೇ ಹೇಳುತ್ತಿದ್ದರು.

೨೭-೯-೧೯೩೧ರಂದು ಐನ್‌ಸ್ಟೈನ್ ಗಾಂಧೀಜಿಗೆ ಒಂದು ಪತ್ರ ಬರೆದರು. "ಹಿಂಸೆಯನ್ನು ಪ್ರಯೋಗಿಸದೆಯೂ ನಾವು ಗುರಿ ಸಾಧಿಸಬಲ್ಲೆವು ಎಂಬುದನ್ನು ನಿಮ್ಮ ಸಮಸ್ತ ಪ್ರಯೋಗದಿಂದ ನೀವು ತೋರಿಸಿಕೊಟ್ಟಿರುವಿರಿ. ಹಿಂಸೆಯ ಆರಾಧಕರನ್ನು ನಾವು ಅಹಿಂಸಾತ್ಮಕ ವಿಧಾನದಿಂದ ಗೆಲ್ಲಬಲ್ಲೆವು. ಹಿಂಸಾಧಾರಿತ ಘರ್ಷಣೆಯನ್ನು ಹತ್ತಿಕ್ಕಲು ಮತ್ತು ಅಂತಾರಾಷ್ಟ್ರೀಯ ಸಹಾಯ ಮತ್ತು ಸಹಕಾರದೊಡನೆ ಪ್ರಪಂಚಶಾಂತಿಯನ್ನು ಖಾತರಿಗೊಳಿಸಲು ನಿಮ್ಮ ನಿದರ್ಶನ ಸ್ಫೂರ್ತಿದಾಯಕವಾಗಿದೆ ಮತ್ತು ಸಹಾಯಕವಾಗಿದೆ.

"ನಿಮ್ಮ ಬಗೆಗಿನ ನನ್ನ ನಿಷ್ಠೆ ಮತ್ತು ಗೌರವವನ್ನು ಹೀಗೆ ವ್ಯಕ್ತಪಡಿಸುತ್ತ ನಿಮ್ಮನ್ನು ಮುಖತಃ ಭೇಟಿ ಆಗುವುದು ಸಾಧ್ಯವಾದೀತೆಂದು ಆಶಿಸುತ್ತೇನೆ."

ಗಾಂಧೀಜಿ ಲಂಡನ್ನಿನಿಂದ ೧೮-೧೦-೧೯೩೧ರಂದು ಐನ್‌ಸ್ಟೈನರಿಗೆ ಮಾರೋಲೆ ಬರೆದರು, "ಸುಂದರಮ್ ಮೂಲಕ ಕಳಿಸಿಕೊಟ್ಟ ನಿಮ್ಮ ಸುಂದರ ಪತ್ರದಿಂದ ಹರ್ಷಿತನಾಗಿದ್ದೇನೆ. ನಾನು ಮಾಡುತ್ತಿರುವ ಕಾರ್ಯ ನಿಮ್ಮ ದೃಷ್ಟಿಯಲ್ಲಿ ಮೆಚ್ಚುಗೆ ಗಳಿಸಿದೆ ಎಂಬುದು ತುಂಬ ಸಮಾಧಾನದ ಸಂಗತಿ. ನಾವು ಮುಖತಃ ಭೇಟಿ ಆದೇವು, ಅದೂ ಭಾರತದಲ್ಲಿಯ ನನ್ನ ಆಶ್ರಮದಲ್ಲಿ, ಎಂಬುದಾಗಿ ಖಾತರಿ ನಂಬಿದ್ದೇನೆ."

ಗಾಂಧೀಜಿಯ ಚಿಂತನಧಾಟಿಯನ್ನೂ ಕಾರ್ಯವಿಧಾನವನ್ನೂ ಐನ್‌ಸ್ಟೈನ್ ತುಂಬ ಮೆಚ್ಚಿಕೊಂಡಿದ್ದರು. ಈ ಮೇರುಪುರುಷರು ಎಂದೂ ಭೇಟಿ ಆಗದಿದ್ದುದು ದುರ್ದೈವ.

ಗಾಂಧೀಜಿ ಸ್ವಿಟ್ಸರ್ಲೆಂಡಿನ ಲೋಸಾನಿನಲ್ಲಿದ್ದಾಗ, ೮-೧೨-೧೯೩೧, ಒಬ್ಬ ಪತ್ರಿಕಾ ಪ್ರತಿನಿಧಿ ಇವರನ್ನು ಒಂದು ಪ್ರಶ್ನೆ ಕೇಳಿದ, "ಯುದ್ಧದಲ್ಲಿ ಭಾಗಿಗಳಾಗಬಾರದೆಂಬುದಾಗಿ ಜನತೆಗೆ ಐನ್‌ಸ್ಟೈನ್ ಕರೆಕೊಟ್ಟುದರ ಬಗ್ಗೆ ನೀವೇನೆನ್ನುವಿರಿ ?"

ಗಾಂಧೀಜಿ, "ನನ್ನ ಜವಾಬು ಸದಾ ಒಂದೇ. ಯೂರೋಪ್ ಆ ಹಾದಿಯನ್ನು ನನ್ನ ಹಾಗೆ ಉತ್ಸಾಹದಿಂದ ಹಿಡಿಯುವುದಾದ ಪಕ್ಷ ಐನ್‌ಸ್ಟೈನ್ ಆ ವಿಧಾನವನ್ನು ನನ್ನಿಂದ 'ಅಪಹರಿಸಿ'ರುವ

ರೆಂದು ಮಾತ್ರ ಹೇಳಬಲ್ಲೆ. ನನ್ನ ಚಿಂತನೆಯನ್ನು ಸ್ವಲ್ಪ ವಿಸ್ತರಿಸಿ ವಿವರಿಸಬೇಕೆಂದು ನೀವು ಅಪೇಕ್ಷಿಸಿದಲ್ಲಿ ಆ ವಿಧಾನವೇನೆಂಬುದನ್ನು ಕೊಂಚ ಆಳವಾಗಿ ವಿಶದೀಕರಿಸುತ್ತೇನೆ. ಸೇನಾಸೇವೆ ಸಲ್ಲಿಸಲು ವ್ಯಕ್ತಿಯ ಸರದಿ ಬಂದಾಗ ಅದನ್ನು ನಿರಾಕರಿಸುವುದು ಹೆಚ್ಚುಕಡಿಮೆ, ದೌಷ್ಟ್ಯವನ್ನು ವಿರೋಧಿಸಲು ದೊರೆತಿದ್ದ ಎಲ್ಲ ವೇಳೆಯೂ ಮುಗಿದುಹೋದ ಬಳಿಕ ಎಚ್ಚರಗೊಂಡುದಕ್ಕೆ ಸಮಾನವಾಗುತ್ತದೆ. ವ್ಯಾಧಿ ಇನ್ನೂ ತೀವ್ರವಾದದ್ದು. ಜನಾಂಗಹತ್ಯಾಕ್ರಿಯೆಯನ್ನು ಕುರಿತು ಹೇಳುವುದಾದರೆ ಸೇನಾಸೇವೆಯ ನೋಂದಣಿ ಪುಸ್ತಕದಲ್ಲಿ ದಾಖಲುಗೊಳ್ಳದವರು ಕೂಡ ದಾಖಲುಗೊಂಡವರಷ್ಟೇ ಅಪರಾಧಭಾಗಿಗಳು ಎನ್ನಬೇಕಾಗುತ್ತದೆ. ಎಂದೇ ಹತ್ಯಾಕಾಂಡದ ಉದ್ದೇಶವಿರಿಸಿಕೊಂಡಿರುವ ಸುಸಂಘಟಿತ ರಾಷ್ಟ್ರವೊಂದನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆಂಬಲಿಸುವ ಯಾರೇ ಆಗಲಿ ಈ ಪಾಪಕಾರ್ಯದಲ್ಲಿ ಸ್ವತಃ ಉದ್ಯುಕ್ತನಾದವನೇ ಆಗಿರುತ್ತಾನೆ. ಘೋರ ಅಪಾಯದಿಂದ ಕೂಡಿರುವ ಸನ್ನಿವೇಶವಿದು. ರಾಷ್ಟ್ರಕ್ಕೆ ತನ್ನ ದೇಣಿಗೆ ಸಲ್ಲಿಸುವುದರ ಮೂಲಕ, ಅಂದರೆ ತೆರಿಗೆ ಪಾವತಿ ಮಾಡುವುದರ ಮೂಲಕ, ಪ್ರತಿಯೊಬ್ಬನೂ—ಆತ ಕಿರಿಯನೇ ಇರಲಿ ಹಿರಿಯನೇ ಇರಲಿ—ಈ ಪಾಪಕಾರ್ಯದಲ್ಲಿ ಭಾಗಿ ಆಗುತ್ತಿರುವನೆಂಬುದನ್ನು ಗಮನಿಸಿದ ನಾನು, ಎಲ್ಲಿಯತನಕ ನೌಕಾಬಲ ಒದಗಿಸುವ ಗೋದಿಯನ್ನು ನಾನು ತಿನ್ನುತ್ತಿರುವೆನೋ ಅಲ್ಲಿಯ ತನಕ ಪ್ರತ್ಯಕ್ಷ ಸೈನಿಕನಂತಲ್ಲದಿದ್ದರೂ ಬೇರೆ ಎಲ್ಲ ರೀತಿಯಲ್ಲಿಯೂ ಯುದ್ಧಭಾಗಿಯಾಗಿರುವುದಂತೂ ದಿಟ. ಇಂಥ ಸನ್ನಿವೇಶದಲ್ಲಿ ಗುಂಡೇಟಿನಿಂದ ವಧಿಸಲ್ಪಡುವುದೇ ನನಗೆ ತಕ್ಕುದಾದ ಶಿಕ್ಷೆ ಎಂದು ಹೇಳಿದ್ದುಂಟು. ಇಲ್ಲವಾದಲ್ಲಿ ನಾನು ಗುಡ್ಡಬೆಟ್ಟಗಳಿಗೆ ನಿರ್ಗಮಿಸಿ ನಿಸರ್ಗವೊದಗಿಸುವ ಆಹಾರಪದಾರ್ಥಗಳನ್ನು ಮಾತ್ರ ಸೇವಿಸುತ್ತಿರಬೇಕು. ಇದು ಹೇಗೂ ಹಾಗೆ, ಸೇನಾಸೇವೆಯನ್ನು ನಿಲ್ಲಿಸಬೇಕೆಂದು ಬಯಸುವ ಎಲ್ಲರೂ ಸಮಸ್ತ ಸೇನಾಸಹಕಾರವನ್ನು ಹಿಂತೆಗೆದುಕೊಂಡು ತಮ್ಮ ಅಭೀಪ್ಸೆಯನ್ನು ಕಾರ್ಯರೂಪಕ್ಕೆ ಇಳಿಸುವುದು ಸಾಧ್ಯ. ಸೇನಾಸೇವೆಯನ್ನು ನಿರಾಕರಿಸುವುದು ರಾಷ್ಟ್ರವನ್ನು ಬೆಂಬಲಿಸುವ ಸಮಗ್ರ ವ್ಯವಸ್ಥೆಯೊಡನೆ ಅಸಹಕಾರವನ್ನು ಪ್ರದರ್ಶಿಸುವುದಕ್ಕಿಂತ ಅದೆಷ್ಟೋ ಪಾಲು ಹೆಚ್ಚು ಲಘುವಾದದ್ದು, ತೆಳುವಾದದ್ದು, ತೀರ ಮೇಲುಪದರದ್ದು. ಆದರೆ ಅಸಹಕಾರವನ್ನು ಪ್ರದರ್ಶಿಸಿದಾಗ ನಿಮಗೆ ಒದಗುವ ಅವಕಾಶ ಎಷ್ಟು ಕ್ಷಿಪ್ರವಾದದ್ದು ಮತ್ತು ಪರಿಣಾಮಕಾರಿಯಾದದ್ದು ಎಂದರೆ ನೀವು ಒಡನೆ ತುರಂಗಕ್ಕೆ ತಳ್ಳಲ್ಪಡುವ ಮಾತ್ರವಲ್ಲ ಬೀದಿ ಪಾಲಾಗುವ ಅಪಾಯವನ್ನು ಕೂಡ ಎದುರಿಸುತ್ತೀರಿ. ಇದು ಟಾಲ್‌ಸ್ಟಾಯಿಯವರ ಸ್ಥಿತಿ ಆಗಿತ್ತು."

ಗಾಂಧೀಜಿಗೆ ಎಪ್ಪತ್ತು ತುಂಬಿದಾಗ (೧೯೩೯) ಐನ್‌ಸ್ಟೈನ್ ಒಂದು ಹೇಳಿಕೆ ನೀಡಿದರು, "ತನ್ನ ಜನತೆಯ ನಾಯಕ, ಯಾವುದೇ ಬಾಹ್ಯ ಬಲದ ಬೆಂಬಲವಿರದಾತ : ಈ ರಾಜಕಾರಣಿಯ ಯಶಸ್ಸು ಚಮತ್ಕಾರವನ್ನಾಗಲಿ ತಾಂತ್ರಿಕ ಕೌಶಲಗಳಲ್ಲಿ ಗಳಿಸಿರುವ ಪ್ರಾವೀಣ್ಯವನ್ನಾಗಲಿ ಅವಲಂಬಿಸಿಲ್ಲ, ಬದಲು, ಮನವೊಲಿಸಬಲ್ಲ ಸ್ವಂತ ವ್ಯಕ್ತಿತ್ವದ ಸಾಮರ್ಥ್ಯವನ್ನು ಮಾತ್ರ ಅವಲಂಬಿಸಿದೆ ; ಬಲ ಪ್ರಯೋಗವನ್ನು ಸದಾ ತಿರಸ್ಕರಿಸಿದ ಯಶಸ್ವೀ ಹೋರಾಟಗಾರ ; ವಿವೇಕ ವಿನೀತತೆಗಳಿಂದ ಕೂಡಿದ ಪುರುಷ ; ದೃಢನಿರ್ಧಾರ ಮತ್ತು ಅಚಲ ಸ್ಥೈರ್ಯದಿಂದ ಸಜ್ಜುಗೊಂಡು ಸಕಲ ತ್ರಾಣವನ್ನೂ ತನ್ನ ಜನರ ಉದ್ಧಾರ ಹಾಗೂ ಸ್ಥಿತಿಗತಿಗಳ ಸುಧಾರಣೆಗಾಗಿ ಅರ್ಪಿಸಿದಾತ ; ಯೂರೋಪಿನ ಅಮಾನುಷ ಕ್ರೌರ್ಯವನ್ನು ಸರಳ ವ್ಯಕ್ತಿಯ ಗಾಂಭೀರ್ಯದಿಂದ ಎದುರಿಸಿ ಎಲ್ಲ ಸಂದರ್ಭಗಳಲ್ಲಿಯೂ ಶ್ರೇಷ್ಠತೆಯಿಂದ ಕಂಗೊಳಿಸಿದಾತ.

"ಇಂಥವನೊಬ್ಬ ಎಂದಾದರೂ ಈ ನೆಲದ ಮೇಲೆ ರಕ್ತಮಾಂಸಭರಿತನಾಗಿ ಅಡ್ಡಾಡಿದುದು ನಿಜವಿರಬಹುದೇ ಎಂದು ಮುಂಬರಲಿರುವ ಪೀಳಿಗೆಗಳು ಸಂದೇಹಿಸುವುದು ಸಾಧ್ಯ."

A leader of his people, unsupported by any outward authority : a politician whose success rests not on craft nor the mastery of technical devices, but simply on the convincing power of his personality ; a victorious fighter who has always scorned the use of force ; a man of wisdom and humility, armed with resolve and inflexible consistency, who has devoted all his strength to the uplifting of his people and the betterment of their lot ; a man who has confronted the brutality of Europe with the dignity of the simple human being, and thus at all times risen superior.

Generations to come, it may be, will scarce believe that such a one as this ever in flesh and blood walked upon this earth.

ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಅವರು ಸಂಪಾದಿಸಿ ಗಾಂಧೀಜಿಗೆ ೨-೧೦-೧೯೩೯ರಂದು (ಎಪ್ಪತ್ತನೆಯ ಹುಟ್ಟುಹಬ್ಬ) ಒಪ್ಪಿಸಿದ ಅಭಿನಂದನಗ್ರಂಥದಲ್ಲಿ ಐನ್‌ಸ್ಟೈನರ ಈ ಮುಂದಿನ ಲೇಖನ ಪ್ರಕಟವಾಗಿದೆ :

“ರಾಜಕೀಯ ಇತಿಹಾಸದಲ್ಲಿ ಗಾಂಧಿ ಅದ್ವಿತೀಯ. ದಬ್ಬಾಳಿಕೆಗೆ ಈಡಾದ ಜನಸಮೂಹದ ಬಿಡುಗಡೆಯ ಹೋರಾಟಕ್ಕೆ ಅವರೊಂದು ಪೂರ್ಣ ನೂತನ ತಂತ್ರವನ್ನು ಸೃಷ್ಟಿಸಿ ಅದನ್ನು ಅಧಿಕ ಶಕ್ತಿ ಶ್ರದ್ಧೆಯಿಂದ ಕಾರ್ಯರೂಪಕ್ಕೆ ಇಳಿಸಿದ್ದಾರೆ. ಪಾಶವೀಬಲದ ಮೇಲೆ ಅವಧಾರಣೆ ಹೇರಿರುವ ವರ್ತಮಾನ ಯುಗದಲ್ಲಿ ನಾಗರಿಕ ಪ್ರಪಂಚದ ಮೂಲಕ ಚಿಂತನಶೀಲ ವ್ಯಕ್ತಿಗಳ ಮೇಲೆ ಗಾಂಧಿ ಬೀರಿರುವ ವರ್ಚಸ್ಸು ಮೇಲುನೋಟಕ್ಕೆ ಕಂಡುಬರುವುದಕ್ಕಿಂತ ಅದೆಷ್ಟೋ ಹೆಚ್ಚು ಮಡಿ ಪರಿಣಾಮಕಾರಿಯಾದದ್ದು. ಏಕೆಂದರೆ ರಾಜನೀತಿಜ್ಞರ ಕಾರ್ಯ ಅವರು ತಮ್ಮ ವೈಯಕ್ತಿಕ ನಿದರ್ಶನ ಮತ್ತು ಬೋಧಕ ಪ್ರಭಾವಗಳಿಂದ ತಮ್ಮ ಜನರ ನೈತಿಕ ಬಲಗಳನ್ನು ಬಡಿದೆಬ್ಬಿಸು ವಷ್ಟರ ಮಟ್ಟಿಗೆ ಮಾತ್ರ ಶಾಶ್ವತ.

“ನಾವು ಭಾಗ್ಯವಂತರು. ಮುಂಬರಲಿರುವ ಪೀಳಿಗೆಗಳಿಗೆ ದಾರಿದೀಪವಾಗಿರುವ ಈ ಸಮ ಕಾಲೀನ ದಿವ್ಯಜ್ಯೋತಿಯನ್ನು ವಿಧಿ ನಮಗೆ ಅನುಗ್ರಹಿಸಿರುವುದಕ್ಕೆ ನಾವು ಕೃತಜ್ಞರಾಗಿರಬೇಕು.”

ಯುದ್ಧಪ್ರಯತ್ನಗಳನ್ನೂ ಯುದ್ಧಾಚರಣೆಗಳನ್ನೂ ಐನ್‌ಸ್ಟೈನ್ ತೀವ್ರವಾಗಿ ವಿರೋಧಿಸಿದ್ದರು. ‘ಯುದ್ಧಭೀತಿಯನ್ನು ನಿವಾರಿಸುವುದರ ಅಗತ್ಯ’ ಎಂಬುದರ ಮೇಲೆ ಇವರು ೨೦-೯-೧೯೫೨ರಂದು ಬರೆದ ಲೇಖನ ಜಪಾನಿನ ಒಂದು ನಿಯತಕಾಲಿಕೆಯಲ್ಲಿ ಅದೇ ವರ್ಷ ಪ್ರಕಟವಾಯಿತು. ಅದರ ಉದ್ಧೃತಾಂಶಗಳು :

“ಯುದ್ಧದಲ್ಲಿ ಜನಹತ್ಯೆ ಮಾಡುವುದು, ನನ್ನ ದೃಷ್ಟಿಯಲ್ಲಿ ಸಾಧಾರಣ ಕೊಲೆಗಾರಿಕೆಗಿಂತ ಇನಿತು ಕೂಡ ಲೇಸಾದುದಲ್ಲ. ಎಲ್ಲಿಯ ತನಕ ಜನಾಂಗಗಳು ಸರ್ವಸಮ್ಮತವಾದ ಏರ್ಪಾಡು ಗಳಿಂದ ಯುದ್ಧವನ್ನು ವರ್ಜಿಸಲು ನಿರ್ಣಯಿಸುವುದಿಲ್ಲವೊ ಮತ್ತು ಕಾನೂನನ್ನು ಆಧರಿಸಿ ಶಾಂತಿ ಯುತ ನಿರ್ಧಾರಗಳ ಮೂಲಕ ತಮ್ಮ ಘರ್ಷಣೆಗಳನ್ನು ಪರಿಹರಿಸಲು ಹಾಗೂ ಆಸಕ್ತಿಗಳನ್ನು ಕಾಪಾಡಲು ಮುಂಬರುವುದಿಲ್ಲವೊ ಅಲ್ಲಿಯ ತನಕ ಯುದ್ಧಪ್ರಯತ್ನಗಳು ಕಡ್ಡಾಯವೆಂದೇ ಅವುಗಳಿಗೆ ಭಾಸವಾಗುವುದು ಸಹಜ. ಸಾರ್ವತ್ರಿಕ ಅಸ್ತ್ರಸನ್ನದ್ಧತೆಯ ಪಂದ್ಯದಲ್ಲಿ ಹಿಂದೆ ಬೀಳದಂತೆ ಸಕಲ ಸಾಧ್ಯ ವಿಧಾನಗಳನ್ನೂ—ಅತ್ಯಂತ ಹೇಯವಾದವನ್ನೂ ಒಳಗೊಂಡಂತೆ—

ಅನುಸರಿಸುವುದು ಅನಿವಾರ್ಯವೆಂದು ಅವು ಭಾವಿಸುತ್ತವೆ. ನಿಜಕ್ಕೂ ಇದು ಕದನದೆಡೆಗೆ ಕಡ್ಡಾಯವಾಗಿ ಕೊಂಡೊಯ್ಯುವ ಹಾದಿ. ವರ್ತಮಾನ ಪರಿಸ್ಥಿತಿಗಳಲ್ಲಿ ಇಂಥ ಒಂದು ಯುದ್ಧದ ಅರ್ಥ, ಸ್ಪಷ್ಟವಾಗಿ, ಸರ್ವನಾಶ.

"ಸನ್ನಿವೇಶಗಳು ಹೀಗಿರುವಾಗ 'ಸಾಧನ'ಗಳ ಎದುರು ಹೂಡುವ ಸಮರಕ್ಕೆ ಜಯ ಲಭಿಸದು. ಯುದ್ಧವನ್ನು ಪೂರ್ಣವಾಗಿ ರದ್ದುಗೊಳಿಸಿ ಯುದ್ಧಬೀತಿಯನ್ನು ನಿವಾರಿಸುವುದೊಂದೇ ಸಹಾಯಕವಾಗಬಲ್ಲದು. ಪ್ರತಿಯೊಬ್ಬನೂ ಈ ಉದ್ದೇಶಕ್ಕಾಗಿಯೇ ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ವಿರುದ್ಧವಾದ ಯಾವುದೇ ಕ್ರಿಯೆಯನ್ನು ಎಸಗಲು ಆತ ಬಲಾತ್ಕರಿಸಲ್ಪಡದಂತೆ ವ್ಯಕ್ತಿ ದೃಢನಿರ್ಧಾರ ತಳೆದವನಾಗಿರಬೇಕು. ತಾನು ಸಮಾಜಾವಲಂಬಿಯಾಗಿರುವೆನೆಂದು ಅರಿತಿರುವಾತನ ಎದುರು ಇದೊಂದು ಕಠಿಣ ಸವಾಲೇ ಸರಿ. ಆದರೆ ಇದೇನೂ ಅಸಾಧ್ಯ ಸವಾಲಲ್ಲ.

"ನಮ್ಮ ಕಾಲದ ಅತ್ಯಂತ ಮಹಿಮಾನ್ವಿತ ರಾಜಕಾರಣಿ ಗಾಂಧಿ ಹಾದಿ ಸೂಚಿಸಿದ್ದಾರೆ. ಒಮ್ಮೆ ಸರಿದಾರಿ ಕಂಡುಕೊಂಡದ್ದಾದರೆ ಜನ ಎಂಥ ಬಲಿದಾನಗಳಿಗೂ ಹೇಗೆ ಸಿದ್ಧರಿರುತ್ತಾರೆ ಎನ್ನುವುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಭಾರತದ ದಾಸ್ಯವಿಮೋಚನೆಗಾಗಿ ಅವರು ಪಟ್ಟಶ್ರಮ, ಹೇಗೆ ದೃಢ ಸಂಕಲ್ಪಯುತ ಮನ, ತೋರ್ಕೆಗೆ ಅಸಾಧ್ಯವೆಂದು ಭಾಸವಾಗುವ ಲೌಕಿಕ ಸಾಮರ್ಥ್ಯಕ್ಕಿಂತ ಪ್ರಬಲತರವಾದದ್ದು ಎಂಬುದಕ್ಕೆ ಜೀವಂತ ಸಾಕ್ಷಿ."

## ಐನ್‌ಸ್ಟೈನ್-ರಸಲ್ ಘೋಷಣೆ

> ಪ್ರಿಯ ಭವಿಷ್ಯವೇ ! ನೀನು ನಮಗಿಂತ (ಅಥವಾ ನಾವಿದ್ದುದಕ್ಕಿಂತ) ಅಧಿಕ ನ್ಯಾಯವಂತ, ಅಧಿಕ ಶಾಂತಿಯುತ ಮತ್ತು ಸಾಧಾರಣವಾಗಿ ಅಧಿಕ ತರ್ಕಶೀಲ ಆಗದಿದ್ದರೆ, ಬರೆದಿಟ್ಟುಕೊ, ಖಾತ್ರಿ ನೀನು ಮಸಣ ಕಾಳಿಗೆ ಕೂಳಾಗಿ ಹಾಳಾಗಿ ಹೋಗುವೆ.
>
> ಐನ್‌ಸ್ಟೈನ್

ಒಂದನೆಯ ಮಹಾಯುದ್ಧವನ್ನು ರಸಲ್ ಮತ್ತು ಐನ್‌ಸ್ಟೈನ್ ಇಬ್ಬರೂ ವಿರೋಧಿಸಿದ್ದರು. ಎರಡನೆಯ ಮಹಾಯುದ್ಧವನ್ನು ಅನಿವಾರ್ಯವೆಂದು ಭಾವಿಸಿದ್ದರು. ಮೂರನೆಯ ಮಹಾಯುದ್ಧ ಸಂಭವಿಸಿದ್ದಾದರೆ ? ಫಿರಂಗಿ ಗುಂಡುಗಳ ತಾಕಲಾಟ ಒಂದನೆಯ ಮಹಾಯುದ್ಧ. ವಾಯುಬಾಂಬುಗಳ ಎರಚಾಟ ಎರಡನೆಯ ಮಹಾಯುದ್ಧ. ಮೂರನೆಯದು ? ಸ್ಪಷ್ಟವಾಗಿ, ನ್ಯೂಕ್ಲಿಯರ್ ಶಿರಹೊತ್ತ ಸ್ವಯಂಚಲಿ ಹಾಗೂ ದಿಗ್ದರ್ಶಿತ ಖಂಡಾಂತರ ಕ್ಷಿಪಣಿಗಳ ಚಂಡಾಟ. ಏಕೆಂದರೆ ನ್ಯೂಕ್ಲಿಯರ್ ಶಕ್ತಿ ಅಭಿವರ್ಧನೆಯ ಗೆಲ್ಲಂಕ ಹಲಗೆ ನಿಸ್ಸಂದಿಗ್ಧವಾಗಿ ಈ ದಿಶೆಯತ್ತ ಕೈ ತೋರಿಸುತ್ತಿತ್ತು :

೧೯೪೫ರಲ್ಲಿ ವಿದಲನ ಬಾಂಬ್ (fission bomb ಅಥವಾ ಪರಮಾಣು ಬಾಂಬ್) ನಿರ್ಮಾಣ ಮತ್ತು ಪ್ರಯೋಗ ;

೧೯೫೩ರಲ್ಲಿ ಸಂಲಯನ ಬಾಂಬ್ (fusion bomb ಅಥವಾ ಹೈಡ್ರೊಜನ್ ಬಾಂಬ್) ನಿರ್ಮಾಣ ಮತ್ತು ಪ್ರಯೋಗ ;

ತರುವಾಯದ ವರ್ಷಗಳಲ್ಲಿ ಸಂಲಯನ ಬಾಂಬುಗಳ ಪರಿಷ್ಕರಣದಲ್ಲಿ (=ಮಾರಕ ಪರಿಣಾಮಗಳನ್ನು ಅಧಿಕಗೊಳಿಸುವ ದಿಶೆಯಲ್ಲಿ) ತ್ವರಿತಗತಿಯ ಮುನ್ನಡೆ ಮತ್ತು ದಿಗ್ದರ್ಶಿತ ಸ್ವಯಂಚಲಿ ಕ್ಷಿಪಣಿಗಳ ಅಭಿವರ್ಧನೆ.

ಹಾಗಾದರೆ ಉಳಿದದ್ದೇನು ? ಗುಂಡಿ ಒತ್ತಿ ನ್ಯೂಕ್ಲಿಯರ್ ಶಿರ ಹೊತ್ತ ಕ್ಷಿಪಣಿಯನ್ನು ಉದ್ದಿಷ್ಟ

ಗುರಿಯೆಡೆಗೆ ಉಡಾಯಿಸುವುದು ಮಾತ್ರ—ಮರುಕ್ಷಣ ಅಲ್ಲಿ ಕೋಟಿ ಸೂರ್ಯಾಸ್ಫೋಟನೆ, ಸರ್ವನಾಶ. ಇದೊಂದು ಮತ್ತೇರಿಸುವ, ದಿಕ್ಕೆಡಿಸುವ ಹುಚ್ಚು ಪಂದ್ಯ, ಕೋಳಿ ಕಟ್ಟ. ಇಲ್ಲಿ ಪ್ರಬಲ ರಾಷ್ಟ್ರಗಳೆಲ್ಲವೂ ಕಣಕ್ಕಿಳಿದಿವೆ. ಇದರಲ್ಲಿ ಗೆದ್ದವನು ಸೋತಿರುತ್ತಾನೆ. ಸೋತವನು ಸತ್ತಿರುತ್ತಾನೆ. ಇಂಥ ವಿನಾಶಮಾರ್ಗಕ್ರಮಣ ಸರ್ವಥಾಸಲ್ಲದು ಎಂದು ಭಾವಿಸಿದ ಪ್ರಪಂಚಮುಖಂಡರ ಪೈಕಿ ಅಗ್ರಗಣ್ಯರು ರಸಲ್ ಮಹಾಶಯ. ರಾಜಕಾರಣಿಗಳಿಗೆ ಮತ್ತು ಅವರ 'ಅನುನಾಯಿ'ಗಳಾದ ವೃತ್ತಿ ವಿಜ್ಞಾನಿಗಳಿಗೆ ಬಿಡುವಂಥ ಅಲ್ಪ ವಿಷಯವಿದಲ್ಲ. ಪ್ರಪಂಚದ ಸಕಲ ನಾಗರಿಕರೂ ಖುದ್ದು ಎದ್ದು ತಮ್ಮ ಹಕ್ಕುಬಾಧ್ಯತೆಗಳನ್ನು ಚಲಾಯಿಸಬೇಕಾದ ಪ್ರಗಲ್ಭ ವಿಷಯವಿದೆಂದು ರಸಲ್ ಬಗೆದರು. ರಾಜಕಾರಣಿಗಳಿಗೆ ಕಡಿವಾಣ ತೊಡಿಸಿ ಲಗಾಮು ಜಗ್ಗುವುದೊಂದೇ ಇದನ್ನು ಸಾಧಿಸಲಿರುವ ಹಾದಿ. ಇದಕ್ಕಾಗಿ ಸಾರ್ವಜನಿಕ ಪ್ರಜ್ಞೆಯನ್ನು ಬಡಿದೆಬ್ಬಿಸಬೇಕೆಂದು ಹಂಚಿಕೆ ಹೂಡಿದರು.

ಬ್ರಿಟಿಷ್ ಬ್ರಾಡ್‌ಕ್ಯಾಸ್ಟಿಂಗ್ ಕಾರ್ಪೊರೇಶನ್ ಮೂಲಕ ರಸಲ್ ಬಿತ್ತರಿಸಿದ ಭಾಷಣದಲ್ಲಿ (೧೯೫೪) 'ಮಾನವನ ಗಂಡಾಂತರ'ವನ್ನು ಕುರಿತು ಈ ಮಾತು ಹೇಳಿದರು : "ನಾವು ವರಿಸಲು ಇಚ್ಛಿಸಿದುದಾದರೆ ನಮ್ಮ ಮುಂದೆ ಸುಖ, ಜ್ಞಾನ ಮತ್ತು ತಿಳಿವಳಿಕೆ ಇವುಗಳಲ್ಲಿಯ ನಿರಂತರ ಪ್ರಗತಿ ಕಾದುನಿಂತಿದೆ. ಇದರ ಬದಲು, ನಮ್ಮ ಜಗಳಗಳನ್ನು ಮರೆಯಲಾರದವರಾಗಿ, ಸಾವನ್ನು ಆಯೋಣವೇ ? ಮಾನವನಾಗಿ ನಾನು ಮಾನವ ಬಾಂಧವರಿಗೆ ಮನವಿ ಸಲ್ಲಿಸುತ್ತಿದ್ದೇನೆ : ನಿಮ್ಮ ಮಾನವೀಯತೆಯನ್ನು ನೆನಪಿಡಿ. ಉಳಿದುದನ್ನು ಮರೆತುಬಿಡಿ. ಹೀಗೆ ಮಾಡಬಲ್ಲಿರಾದರೆ ನವ ಸ್ವರ್ಗಕ್ಕೆ ಕೊಂಡೊಯ್ಯುವ ಹಾದಿ ನಿಮ್ಮೆದುರು ತೆರೆದುಕೊಂಡಿರುತ್ತದೆ ; ಇಲ್ಲವಾದರೆ ಸಾರ್ವತ್ರಿಕ ಮರಣದ ಹೊರತಾಗಿ ಬೇರೇನೂ ನಿಮ್ಮೆದುರು ಇರುವುದಿಲ್ಲ."

ರಸಲರ ಯೋಜನೆ ಇದ್ದುದು ಹೀಗೆ : ನ್ಯೂಕ್ಲಿಯರ್ ಪಂದ್ಯ ಮತ್ತು ನ್ಯೂಕ್ಲಿಯರ್ ಯುದ್ಧದ ಭೀಕರ ಅನಾಹುತಗಳನ್ನು ಜನರಿಗೆ ತಿಳಿಯಪಡಿಸುವ ಪ್ರಣಾಳಿಕೆಯನ್ನು ಸಿದ್ಧಪಡಿಸಬೇಕು ; ಇದಕ್ಕೆ ಪ್ರಪಂಚದ—ಪೂರ್ವ ಪಶ್ಚಿಮ ದೇಶಗಳೆಂಬ ಭೇದವಿಲ್ಲದೆ, ಬಲ ವಾಮ ಪಂಥಗಳೆಂಬ ವ್ಯತ್ಯಾಸ ವಿಲ್ಲದೆ—ಶ್ರೇಷ್ಠ ನ್ಯೂಕ್ಲಿಯರ್ ಹಾಗೂ ತಳಿವಿಜ್ಞಾನಿಗಳ ರುಜುಗಳನ್ನು ಪಡೆಯಬೇಕು ; ಈ ಸರ್ವೋಚ್ಚ ಪ್ರಣಾಳಿಕೆಯನ್ನು—ಮಾನವ ಭವಿಷ್ಯನಿರ್ಣಾಯಕ ಘೋಷಣೆಯನ್ನು—ಬಹಿರಂಗ ವಾಗಿ ಸಾರ್ವಜನಿಕ ಸಂಪರ್ಕ ಮಾಧ್ಯಮಗಳ ಮೂಲಕ ಪ್ರಪಂಚಕ್ಕೆ ಪ್ರಕಟಿಸಬೇಕು. ಈ ಪ್ರಣಾಳಿಕೆಗೆ ಖಚಿತ ರೂಪ ಹಾಗೂ ಯೋಗ್ಯ ಅಂತಸ್ತು ಪ್ರಾಪ್ತವಾಗಬೇಕಾದರೆ ಇದಕ್ಕೆ ಐನ್‌ಸ್ಟೈನ್-ಮುದ್ರೆ ಮೊದಲು ಬೀಳುವುದು ಅಗತ್ಯವೆಂದು ರಸಲ್ ಸಕಾರಣವಾಗಿ ಭಾವಿಸಿದರು.

೧೯೫೫ರ ಫೆಬ್ರುವರಿಯಲ್ಲಿ ರಸಲ್ ತಮ್ಮ ಚಿಂತನ ಲಹರಿಗಳನ್ನು ವಿವರವಾಗಿ ನಿರೂಪಿಸಿ ಐನ್‌ಸ್ಟೈನರಿಗೊಂದು ಪತ್ರ ಬರೆದರು, ಮತ್ತು ತಮ್ಮ ಯೋಜನೆಗೆ ಇವರ ಸಲಹೆ ಸಹಕಾರಗಳನ್ನು ಕೋರಿದರು. ಈ ಹೊಸ ಸವಾಲಿನಿಂದ ಉತ್ತೇಜಿತರಾದ ಐನ್‌ಸ್ಟೈನ್ ಒಡನೆ, ೧೬ರಂದು, ಮಾರೋಲೆ ಬರೆದರು. ನೀಲ್ಸ್ ಬೋರ್, ಜೂಲ್ಯೋ ಕ್ಯೂರಿ (ಫ್ರಾನ್ಸಿನ ನ್ಯೂಕ್ಲಿಯರ್ ಭೌತ ವಿಜ್ಞಾನಿ, ನೊಬೆಲ್ ಪ್ರಶಸ್ತಿ ಪುರಸ್ಕೃತ, ಮೇಲಾಗಿ ಕಮ್ಯೂನಿಸ್ಟ್ ಪಕ್ಷಾನುಯಾಯಿ) ಮೊದಲಾದ ಶ್ರೇಷ್ಠರ ಒಪ್ಪಿಗೆ ಪಡೆಯಬೇಕೆಂದು ಸೂಚಿಸಿದರು : "ಇಂಥ ವಿಚಾರಗಳನ್ನು ನೀವು ಚೆನ್ನಾಗಿ ತಿಳಿದುಕೊಂಡಿದ್ದೀರಿ. ನೀವು ದಂಡನಾಯಕ, ನಾನು ಪದಾತಿ ಮಾತ್ರ. ಹುಕುಂ ಚಾಲೂ ಮಾಡಿ, ಅಸ್ಸಲ್ ಹಿಂದೆ ನಾನಿದ್ದೇನೆ !"

ಇಲ್ಲಿಗೇ ಬಿಡಲಿಲ್ಲ ಐನ್‌ಸ್ಟೈನ್. ಜವಾಹರಲಾಲ್ ನೆಹ್ರು ಅವರಿಗೆ ಕಾಗದ ಬರೆದರು. ಭಾರತ ಈ ವಿಷಯದಲ್ಲಿ ಸಕ್ರಿಯ ಪಾತ್ರ ವಹಿಸಬೇಕೆಂದು ಕೋರಿದರು.

ಎಂಬತ್ತಮೂರರ ವೃದ್ಧ ರಸಲ್ ಸಾಕಷ್ಟು ಮಾತುಕತೆ, ಪತ್ರವ್ಯವಹಾರ ಮತ್ತು ತಿರುಗಾಟ ಮಾಡಬೇಕಾಯಿತು. ವಾರಗಳುರುಳಿದುವು. ಕೊನೆಗೂ ಪ್ರಣಾಳಿಕೆಯ ಕರಡನ್ನು ಐನ್‌ಸ್ಟೈನರಿಗೆ ಓದಲು, ತಿದ್ದುಪಡಿ ಸೂಚಿಸಲು ಹಾಗೂ ಹೊಸತೇನಾದರೂ ಇದ್ದರೆ ಸೇರಿಸಲು ಕಳಿಸಿದರು.

ಐನ್‌ಸ್ಟೈನ್ ಏಪ್ರಿಲ್ ೧೧ರಂದು ಮಾರೋಲೆ ಬರೆದರು, "ನಿಮ್ಮ ಉತ್ಕೃಷ್ಟ ನಿರೂಪಣೆಗೆ ಸಹಿ ಹಾಕಲು ಸಂತೋಷದಿಂದ ಸಮ್ಮತಿಸಿದ್ದೇನೆ. ಅಲ್ಲದೆ ಈ ಪ್ರಣಾಳಿಕೆಗೆ ರುಜುವಿಕ್ಕಲು ನೀವು ಪ್ರಾರ್ಥಿಸಬೇಕೆಂದಿರುವ ಇತರ ವಿಜ್ಞಾನಿಗಳ ಹೆಸರಿನ ಯಾದಿಯನ್ನು ಒಪ್ಪಿದ್ದೇನೆ."

ಮುಂದೆ, ಐನ್‌ಸ್ಟೈನ್-ತರುವಾಯದ ದಿನಗಳಲ್ಲಿ, ಇವರ ಆಶೀರ್ವಾದ ಪಡೆದಿದ್ದ ಆ ಶಾಂತಿ ಪತ್ರ ಐನ್‌ಸ್ಟೈನ್-ರಸಲ್ ಘೋಷಣೆ ಎಂಬ ಅಭಿಧಾನದಿಂದ ಪ್ರಕಟವಾಯಿತು, ಪ್ರಸಿದ್ಧ ವಾಯಿತು, ನ್ಯೂಕ್ಲಿಯರ್ ಪಂದ್ಯಕ್ಕೆ ತಾತ್ಕಾಲಿಕ ಬಿರಿ ಹಾಕುವುದರಲ್ಲಿ ಯಶಸ್ವಿಯಾಯಿತು.

## ಸೂತ್ರ ಭೇದನೆ

ವಿಸ್ತಾರದಲಿ ಬಾಳು, ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೆ ನೂತ್ನಜೀವನಸತ್ತ್ವ
ಮೃತ್ಯುನಿನಗಲ್ಪತೆಯೊ ಮಂಕುತಿಮ್ಮ

ಉತ್ಸಾಹವನು ಹೀರು ಉಲ್ಲಾಸವನು ಬೀರು
ಮತ್ಸರ ತಿರಸ್ಕರಿಸು ಸದ್ಗುಣ ಪುರಸ್ಕರಿಸು
ನಿತ್ಯೋತ್ಸವವು ಜೀವನವೆನುತ್ತ ಸತ್ಕಾರ್ಯ
ಭೃತ್ಯನಾಗೆಲೋ ಸಾವಿರದ ಠಾವು ನಿನ್ನ ರೇವು ಅತ್ರಿಸೂನು

'ಹಸಿಮಡಕೆಯಲ್ಲಿ ಹಿಡಿದಿಟ್ಟ ನೀರು ತುಸು ತುಸುವೆ ಒಸರಿ ತಳಸೇರುವಂತೆ' ಐನ್‌ಸ್ಟೈನರ ಜೀವದ್ರವ್ಯ ಕ್ರಮೇಣ ಇಂಗುತ್ತಿತ್ತು. ಜನಜಂಗುಳಿಯ ನಡುವೆಯೂ ಒಬ್ಬಂಟಿಗರಾಗಿದ್ದ, ಪರಮ ಸಿದ್ಧಿಗಳ ನಡುವೆಯೂ ನಿರ್ಲಿಪ್ತಪ್ರೇಕ್ಷಕರಾಗಿದ್ದ, ಕೀರ್ತಿವೈಭವಗಳ ನಡುವೆಯೂ ಅಬಾಧಿತ ಪ್ರಯಾಣಿಕರಾಗಿದ್ದ ಈ ಸೀಮಾಪುರುಷನ ವರ್ಣಮಯ ಜೀವನನಾಟಕದ ಅಂತಿಮಾಂಕ ಅನಾವರಣಗೊಳ್ಳಲು ಮುಹೂರ್ತ ಸನ್ನಿಹಿತವಾಗುತ್ತಿತ್ತು.

ಏಪ್ರಿಲ್ ೧೧, ಸೋಮವಾರ, ಐನ್‌ಸ್ಟೈನ್ ಎರಡು ಮುಖ್ಯ ಕರ್ತವ್ಯಗಳಲ್ಲಿ ಮಗ್ನರಾಗಿದ್ದರು:

ಮೊದಲನೆಯದು, ರಸಲರಿಂದ ಬಂದಿದ್ದ ಪ್ರಣಾಳಿಕೆಯ ಕರಡನ್ನು ಒಪ್ಪಿ ಹಿಂತಿರುಗಿಸುವುದು. ತುಂಬ ಆಸಕ್ತಿ ನಿಷ್ಠೆಗಳಿಂದ ಅವರು ಈ ಕರ್ತವ್ಯವನ್ನು ನಿರ್ವಹಿಸಿದರು.

ಎರಡನೆಯದು, ಇಸ್ರೇಲಿನ ಸ್ವಾತಂತ್ರ್ಯ ದಿನಕ್ಕಾಗಿ (ಮೇ ೧೯೫೫) ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂದೇಶ ನೀಡುವುದು.

ಇಸ್ರೇಲ್ ! ಯೆಹೂದ್ಯ ದುಃಖಸಂತಾಪಗಳ ಅಂತೆಯೇ ಆಶೆ ಸಂತೋಷಗಳ ಪ್ರತೀಕ, ಪೂರ್ವ ಪಶ್ಚಿಮ ಕೋಣಗಳೆರಡರ ಹೋರಾಟದ ನಡುವೆ ಸಿಕ್ಕಿಹಾಕಿಕೊಂಡಿದ್ದರೂ ನೆಟ್ಟಗೆ ನಿಂತಿದ್ದ ತುಂಬೆ ಗಿಡ. ಐನ್‌ಸ್ಟೈನ್ ಇಸ್ರೇಲೀ ಅಧಿಕಾರಿಗಳೊಡನೆ ಸಂದೇಶದ ರೂಪರೇಖೆ ಬಗ್ಗೆ ಸಮಾಲೋಚಿಸಿದರು. ದೈಹಿಕ ವೇದನೆ ಜಾಸ್ತಿ ಆಗುತ್ತಿತ್ತು. ಮಾನಸಿಕ ಸಂಕ್ಷೋಭೆಯಂತೂ ಇದ್ದದ್ದೇ. ಕಾರ್ಯದರ್ಶಿ ಡ್ಯೂಕಾಸ್ ಒಬ್ಬರೇ ಅಲ್ಲಿದ್ದ ಆತ್ಮೀಯ ಬಂಧು. ಬಲಮಗಳು ಮಾರ್ಗಟ್ ವ್ಯಾಧಿಗ್ರಸ್ತರಾಗಿ ರುಗ್ಣಾಲಯದಲ್ಲಿ ಮಲಗಿದ್ದರು.

ಏಪ್ರಿಲ್ ೧೨, ಮಂಗಳವಾರ. ಹಸಿ ಮಡಕೆಯಿಂದ ನೀರೊಸರಿ ಹೋಗಿ ತಳದ ಏಣು ಕಣ್ಣನ್ನು ಇರಿವಂತೆ ಕಾಣುತ್ತಿತ್ತು. ತೀವ್ರವೇದನೆ, ಒಡಲು ನುಲಿಯಿತು. ಮುಖ ಬಿಳಿಚಿತು. ವೈದ್ಯರನ್ನು ಕರೆಸಲು ಇವರು ಒಪ್ಪಿಗೆ ನೀಡಲಿಲ್ಲ. ಇನ್ನು ಆಸ್ಪತ್ರೆಗೆ ಸಾಗಿಸುವುದಂತೂ ಸಾಧ್ಯವೇ ಇರಲಿಲ್ಲವಷ್ಟೆ. ಮನೆಯೇ ಚಿಕಿತ್ಸಾಲಯ.

ಏಪ್ರಿಲ್ ೧೩, ಬುಧವಾರ. ವೇದನೆ ಉಲ್ಬಣಿಸಿತು. ಇಸ್ರೇಲೀ ಅಧಿಕಾರಿಗಳ ಜೊತೆ ನಡೆಸುತ್ತಿದ್ದ ವಿಚಾರವಿನಿಮಯ ಪ್ರಾಯಶಃ ಅಂತಿಮ ಹಂತವೈದಿತು. ಇದೇ ಇವರ ಕೊನೆಯ ಸಾರ್ವಜನಿಕ ಕಾರ್ಯ. ಅಪರಾಹ್ನ ತೀವ್ರ ಆಯಾಸ. ಅತಿ ವೇದನೆ. ಹಸಿವಿಲ್ಲ. ಆದರೂ ಅಲ್ಪಾಹಾರ ಸೇವನೆ—ಒಡಲ ಬಂಡಿಗೆ ಉರುವಲು. ಸಂಜೆ ಮುಸುಕಿತು. ನಿಶ್ಶಕ್ತಿ ಮತ್ತು ವೇದನೆ. ಕರಾಳ ಛಾಯೆ ಕವಿಯಿತು. ಇವರು ಕುಸಿದರು. ಡ್ಯೂಕಾಸ್ ಒಡನೆ ವೈದ್ಯರಿಗೆ ಸಂದೇಶ ಕಳಿಸಿದರು. ಅವರು ಧಾವಿಸಿ ಬಂದರು. ಎಲೆಕ್ಟ್ರೊಕಾರ್ಡಿಯೊಗ್ರಾಮ್ ಚಿತ್ರ ರೇಖಿಸಿದರು. ಮಾರ್ಫಿಯಾ ಚುಚ್ಚು ಮದ್ದು ಹೊಗಿಸಿ ನಿದ್ರೆ ಬರುವಂತೆ ಮಾಡಿ ತಾತ್ಕಾಲಿಕವಾಗಿ ವೇದನೆಯನ್ನು ನಿವಾರಿಸಿದರು.

ಏಪ್ರಿಲ್ ೧೪, ಗುರುವಾರ, ಹೃದಯತಜ್ಞರು, ಧಮನಿತಜ್ಞರು ಮೊದಲಾದ ತಜ್ಞವಿಶೇಷಜ್ಞರು ಬಂದು ಇವರನ್ನು ಕೂಲಂಕಷವಾಗಿ ತಪಾಸಿಸಿದರು. ಮಹಾಪಧಮನಿಯಲ್ಲಿ (ಎಡ ಹೃತ್ಕುಕ್ಷಿ ಯಿಂದ ಹೊರಡುವ ಪ್ರಥಮ ಶುದ್ಧ ರಕ್ತನಾಳ, ದೇಹದ ಮೂಲೆ ಮೂಲೆಗೆ ಅತ್ಯಾವಶ್ಯಕ ಆಮ್ಲ ಜನಕವನ್ನೂ ಪೋಷಕಗಳನ್ನೂ ರಕ್ತದೂತ ಒಯ್ದು ಸಾಗಲು ಇರುವ ರಾಜಮಾರ್ಗ) ಬಿರುಕು ತಲೆದೋರಿ ಅದರಿಂದ ರಕ್ತ ಒಸರುತ್ತಿತ್ತು. ದಿಢೀರ್ ಶಸ್ತ್ರಕ್ರಿಯೆಯೊಂದೇ ರೋಗಿಯನ್ನು ಉಳಿಸಬಹುದಾಗಿದ್ದ ಸಂಭಾವ್ಯ ಮಾರ್ಗ. ಅಲ್ಲಿಯೂ ಬದುಕು ಸಾವು. ಅರ್ಧ ಅರ್ಧ. ಆದರೆ ಐನ್‌ಸ್ಟೈನ್ ಶಸ್ತ್ರಚಿಕಿತ್ಸೆಯ ತೀವ್ರ ವಿರೋಧಿ.

ವಾಸ್ತವವಾಗಿ ಹಲವು ವರ್ಷಗಳ ಹಿಂದೆಯೇ ಇವರಿಗೆ ಈ ಅಪಾಯದ ಮುನ್ಸೂಚನೆ ನೀಡಿ ಎಚ್ಚರಿಸಲಾಗಿತ್ತು. ಆದರೆ ಇವರು ಅದನ್ನೇನೂ ಗಂಭೀರವಾಗಿ ಪರಿಗಣಿಸಿರಲಿಲ್ಲ. "ಅದು [ಮಹಾಪಧಮನಿ] ಒಡೆದರೆ ಒಡೆಯಲಿ," ಎಂದು ಅಸಡ್ಡೆಯಿಂದ ನುಡಿದಿದ್ದರು.

"ಮುದುಕತನದೆಡೆಗಿನ ನಡಿಗೆಯಲ್ಲಿ ಕಂಡುಬರುವ ವಿಚಿತ್ರ ಸಂಗತಿ ಎಂದರೆ, 'ಇಲ್ಲಿ, ಈಗ' ಎಂಬವುಗಳ ಜೊತೆಗಿನ ನಿಕಟಸಂಬಂಧ ಕ್ರಮೇಣ ತೇದುಹೋಗುತ್ತಿರುವುದು. ಅನಂತದತ್ತ ಹೆಚ್ಚು ಕಡಿಮೆ ಒಬ್ಬಂಟಿಗನಾಗಿ ಸ್ಥಳಾಂತರಣವಾಗುತ್ತಿರುವ ಭಾವವಿದು—ಆಶೆ, ಭಯ ಅಲ್ಲಿಲ್ಲ, ವೀಕ್ಷಣೆ ಮಾತ್ರ . . .ಬದುಕಿನ ಕೊನೆಯನ್ನು ಕುರಿತಂತೆ ಹೆದರಿಕೆಯಿಂದ ಚಿಂತಿಸುವುದು ಮಾನವನ ಸಾಧಾರಣ ನಡವಳಿಕೆ. ಪ್ರಭೇದದ ಉಳಿವನ್ನು ಕಾಪಾಡಲು ನಿಸರ್ಗ ಹೂಡಿರುವ ಬಗೆ ಬಗೆಯ ಹೂಟೆಗಳ ಪೈಕಿ ಇದೊಂದು. ವೈಚಾರಿಕವಾಗಿ ಗಮನಿಸಿದ್ದಾದರೆ ಎಲ್ಲ ಹೆದರಿಕೆಗಳ ಪೈಕಿ ಈ ಹೆದರಿಕೆ ಅತ್ಯಂತ ಅಸಮರ್ಥನೀಯವಾದದ್ದು. ಏಕೆಂದರೆ ಸತ್ತವನನ್ನು ಅಥವಾ ಹುಟ್ಟದಿರು ವವನನ್ನು ಯಾವ ಅಪಘಾತವೂ ಬಾಧಿಸುವ ಅಪಾಯವಿಲ್ಲ. ಸಂಕ್ಷೇಪವಾಗಿ ಹೇಳುವುದಾದರೆ ಈ ಹೆದರಿಕೆ ಮುಟ್ಠಾಳತನದ್ದು. ಆದರೆ ಇದು ಇರುವುದನ್ನು ಕಡೆಗಣಿಸುವಂತಿಲ್ಲ." ಸಾವಿನೆಡೆಗಿನ ಬದುಕಿನ ನಡಿಗೆಯನ್ನು ಐನ್‌ಸ್ಟೈನ್ ಬಣ್ಣಿಸಿದ ಬಗೆ ಇದು.

ಐನ್‌ಸ್ಟೈನ್ ಈ ಭಯವನ್ನು ಗೆದ್ದಿದ್ದರು. ಹೀಗಾಗಿ ಮುನ್ನೆಚ್ಚರಿಕೆಯ ಬಗೆಗೆ ಮುತುವರ್ಜಿ ವಹಿಸಲಿಲ್ಲ, "ಕೊನೆ ಬರುವುದಂತೂ ಖರೆ. ಎಂದು ಬಂದರೇನು ?" ಎಂಬುದಾಗಿ ಡ್ಯೂಕಾಸ್ ಜೊತೆ ಒಮ್ಮೆ ವಾದಿಸಿದ್ದರು.

ರವಿಗಿಲ್ಲದ ಭಯ, ಶಶಿಗಿಲ್ಲದ ಭಯ
ತಾರಾನಿವಹಕೆ ಇರದ ಭಯ,
ನಿನಗೇತಕೆ ಬಿಡು, ಅಣು ! ಶ್ರದ್ಧೆಯನಿಡು
ನಿನ್ನನೆ ನೈವೇದ್ಯವ ನೀಡು ! ಕುವೆಂಪು

ಏಪ್ರಿಲ್ ೧೫, ಶುಕ್ರವಾರ. ವಿಶೇಷ ವ್ಯತ್ಯಾಸವೇನೂ ಇಲ್ಲ. ಹೆಚ್ಚು ಕಡಿಮೆ ಶಾಂತವಾಗಿ ಹಗಲುರುಳಿತು. ಇರುಳೂ ಅಷ್ಟೆ.

ಏಪ್ರಿಲ್ ೧೬, ಶನಿವಾರ. ಮುಂಜಾನೆ ನೆಮ್ಮದಿ. ಹಗಲೇರಿದಂತೆ ನೋವು ಮರುಕೊಳಿಸಿತು ಈ ಸಲ ಬಲು ಕಡಿದಾಗಿ. ಒಡನೆ ಧಾವಿಸಿ ಬಂದ ವೈದ್ಯ ಇವರನ್ನು ಆಸ್ಪತ್ರೆಗೆ ಸಾಗಿಸುವ ಸಲಹೆ ನೀಡಿದ. ಇವರು ಒಪ್ಪಲಿಲ್ಲ. ಆದರೆ ಡ್ಯೂಕಾಸ್ ಒಬ್ಬರೇ ಮನೆಯಲ್ಲಿ. ಇವರ ಶುಶ್ರೂಷೆ ಹೇಗೆ ನಿಭಾಯಿಸುವುದು ? ಈ 'ಮಾನವೀಯ' ವಾದದ ಮುಂದೆ ಐನ್‌ಸ್ಟೈನ್ ಮಣಿದು ತಮ್ಮನ್ನು 'ಅಮಾನವೀಯ' ಆಸ್ಪತ್ರೆಗೆ ಸಾಗಿಸಲು ಒಪ್ಪಿಗೆ ನೀಡಿದರು. ಅಲ್ಲಿ ಇವರ ಪರಿಸ್ಥಿತಿ ಕೊಂಚ ಸುಧಾರಿಸಿತು. ಹಾಗಾದರೆ ಏಕೀಕೃತ ಸಿದ್ಧಾಂತವನ್ನು ಕುರಿತ ಗಣನೆಗಳನ್ನು ಮುಂದುವರಿಸ ಬಹುದು? ಕಾಲಹರಣ ಮಾಡತಕ್ಕದ್ದಲ್ಲವಷ್ಟೆ! ಮನೆಯಿಂದ ಚಷ್ಮ ಮತ್ತು ಬರವಣಿಗೆ ಸಾಮಗ್ರಿ ಗಳನ್ನು ತರಿಸಿಕೊಂಡು ಕರ್ತವ್ಯಮಗ್ನರಾದರು.

ಏಪ್ರಿಲ್ ೧೭, ಆದಿತ್ಯವಾರ. ಅದೇ ಆಸ್ಪತ್ರೆಯಲ್ಲಿದ್ದ ಮಗಳನ್ನು ಗಾಲಿ ಕುರ್ಚಿಯಲ್ಲಿ ಕುಳ್ಳಿರಿಸಿ ಇವರ ಕೋಣೆಗೆ ತಳ್ಳಿ ತಂದರು. ಆದರೆ ಆಕೆಗೆ ಇವರ ಗುರುತೇ ಹತ್ತಲಿಲ್ಲ. ನೋವು ನರಳಿಕೆ ಗಳಿಂದ ನವೆದು ಹಿಂಡಿ ಹಿಪ್ಪೆಯಾಗಿ ಹೋಗಿದ್ದರು ಐನ್‌ಸ್ಟೈನ್. ಅಲ್ಲಿ ಉಳಿದಿದ್ದುದೇನು? ಇವರ ನೆರಳು ಮಾತ್ರ. ಮಾರ್ಗಟ್ ಈ ರೀತಿ ಬರೆದಿದ್ದಾರೆ, "ರಕ್ತಹೀನತೆಯಿಂದ ಆ ಮುಖ ಅದೆಷ್ಟು ಬಿಳಿಚಿ ಹೋಗಿತ್ತೆಂದರೆ ಅವರ ಗುರುತೇ ನನಗೆ ಸಿಗಲಿಲ್ಲ. ಆದರೆ ಅವರ ರೀತಿರಿವಾಜು ಮಾತ್ರ ಹಿಂದಿನವೇ ಆಗಿದ್ದುವು. ನನ್ನ ಆರೋಗ್ಯ ಕೊಂಚ ಸುಧಾರಿಸಿದ್ದು ಕಂಡು ಅವರಿಗೆ ನೆಮ್ಮದಿ ಅನ್ನಿಸಿತು. ನನ್ನನ್ನು ಪರಿಹಾಸ ಮಾಡಿದರು. ತಮ್ಮ ಸ್ಥಿತಿಯನ್ನು ಅವರು ಸಂಪೂರ್ಣ ವಿಶ್ವಾಸದಿಂದ ಸ್ವೀಕರಿಸಿದ್ದರು. ಪರಿಪೂರ್ಣ ಶಾಂತಮನಸ್ಸಿನಿಂದ ಮಾತಾಡಿದರು. ವೈದ್ಯರನ್ನು ಕುರಿತ ಒಂದೆರಡು ಚಟಾಕಿಗಳನ್ನೂ ಹಾರಿಸದಿರಲಿಲ್ಲ. ಅವರು ತಮ್ಮ ಅಂತ್ಯವನ್ನು ಅದೊಂದು ನಿರೀಕ್ಷಿತ 'ನೈಸರ್ಗಿಕ ವಿದ್ಯಮಾನ'ವೆಂಬ ಸಂತೃಪ್ತಭಾವದಿಂದ ಎದುರು ನೋಡುತ್ತಿದ್ದಂತೆ ಅನ್ನಿಸಿತು."

ಮಗ ಹ್ಯಾನ್ಸ್ ಆಲ್ಬರ್ಟ್ ಮತ್ತು ಮಿತ್ರ ಆಟೋ ನಾಥನ್ (೧೮೯೩-?) ಪ್ರಿನ್ಸ್‌ಟನ್ ಆಸ್ಪತ್ರೆಗೆ ಧಾವಿಸಿ ಬಂದರು. ಮಗನ ಜೊತೆ ಭೌತವಿಜ್ಞಾನವನ್ನು ಚರ್ಚಿಸಿದರು. ಮಿತ್ರನ ಸಂಗಡ ಪ್ರಪಂಚ ರಾಜಕೀಯವನ್ನೂ ಜರ್ಮನ್ ಪುನಸ್ಸೇನೀಕರಣದ ಅಪಾಯವನ್ನೂ ಪ್ರಸ್ತಾವಿಸಿದರು. ಪ್ರಪಂಚ ದಲ್ಲಿ ಶಾಂತಿಸ್ಥಾಪನೆ ಸದ್ಯ ಆಗಲಾರದಲ್ಲ ಎಂಬ ಕಳವಳ ಇವರನ್ನು ಬಾಧಿಸುತ್ತಿತ್ತು.

ಐನ್‌ಸ್ಟೈನ್ ಸ್ವಸ್ಥಚಿತ್ತರಾಗಿದ್ದಂತೆ ಕಂಡರು. ಪ್ರಶಾಂತಭಾವವನ್ನು ಸೂಸುತ್ತಿದ್ದಂತೆ ತೋರಿ ದರು. ಅಪಧಮನಿಯ ಬಿರುಕು ಮತ್ತು ಊತ ತಾವಾಗಿಯೇ ಮಾಯುತ್ತಿರಬಹುದು. ಒಳ್ಳೆಯದೇ ಆಯಿತೆಂಬುದಾಗಿ ವೈದ್ಯ ಭಾವಿಸಿದ. ಆದರೆ ಇದು ಕ್ಷಣಿಕ ಭರವಸೆ. ಸಂಜೆ ಮತ್ತೆ ನೋವು ಇರಿದಾಗ ಚುಚ್ಚುಮದ್ದು ಕುತ್ತಿದರು. ತಾತ್ಕಾಲಿಕ ಉಪಶಮನ ಒದಗಿತು.

ರಾತ್ರಿ ೧೧ ಗಂಟೆ. ಪಾಳಿ ಮೇಲೆ ವೈದ್ಯ ಬಂದ. ರೋಗಿ ಸುಖನಿದ್ರೆಯಲ್ಲಿದ್ದುದರಿಂದ ದಾದಿಗೆ ಯುಕ್ತ ಸಲಹೆ ನೀಡಿ ಮುಂದೆ ನಡೆದ. ತಸ್ಮಾಜ್ಜಾಗ್ರತ, ಜಾಗ್ರತ !

ಏಪ್ರಿಲ್ ೧೮, ಸೋಮವಾರ. ಮಧ್ಯರಾತ್ರಿ ಕಳೆದಿತ್ತಷ್ಟೆ. ರೋಗಿಯ ಉಸಿರಾಟದಲ್ಲಿ ಕಡಿದಾದ

ಏರುಪೇರನ್ನು ದಾದಿ ಗಮನಿಸಿದಳು. ಒಡನೆ ವೈದ್ಯನಿಗೆ ತುರ್ತು ಸುದ್ದಿ ಕಳಿಸಿದಳು. ಐನ್‌ಸ್ಟೈನ್ ಮಾತೃಭಾಷೆಯಲ್ಲಿ (ಜರ್ಮನ್) ಏನನ್ನೋ ಗಡಿಬಡಿಸುತ್ತಿದ್ದರು. ದಾದಿಗೆ ಅದು ಅರ್ಥವಾಗಲಿಲ್ಲ. ವೈದ್ಯ ದೌಡಾಯಿಸಿ ಬರುವ ವೇಳೆಗೆ ಅಪಧಮನಿ ಬಿರಿದಿತ್ತು. ಕಾಲ ಮಿಂಚಿತ್ತು. ಹಸಿ ಮಡಕೆಯಲ್ಲಿ ನೀರಿನ ಕೊನೆಪಸೆ ಆರಿಯೇ ಹೋಗಿತ್ತು.

ರಸಲ್ ಅಂದು ರೋಮ್‌ನಿಂದ ಪ್ಯಾರಿಸ್ಸಿಗೆ ವಿಮಾನಯಾನ ಮಾಡುತ್ತಿದ್ದಾಗ ಹಠಾತ್ತಾಗಿ ವಿಮಾನಚಾಲಕ ದುರ್ವಾರ್ತೆಯನ್ನು ಬಿರಿದ : ಐನ್‌ಸ್ಟೈನ್ ಅಂದೇ ಮಡಿದಿದ್ದರು. ಮಂಕು ಕವಿದ ರಸಲ್ ಯಾಂತ್ರಿಕವಾಗಿ ತಮ್ಮ ಪ್ಯಾರಿಸ್ ಹೊಟೇಲನ್ನು ಪ್ರವೇಶಿಸಿದರು : ಅಗೊ ! ಅಲ್ಲಿ ಕಾದಿತ್ತು ಐನ್‌ಸ್ಟೈನರ ಒಪ್ಪಿಗೆ ಉಯಿಲು, ಮುಂದಿನ ನಡೆಗೆ ಎತ್ತಿ ಹಿಡಿದಿದ್ದ ಹಸುರು ಕಂದೀಲು.

ಬನೆಶ್ ಹಾಫ್‌ಮನ್ (೧೯೦೬-?) ಬರೆದಿದ್ದಾರೆ : "ಎರಡು ಶತಮಾನಗಳಿಗಿಂತಲೂ ಹಿಂದೆ ನ್ಯೂಟನ್ ಮಡಿದಾಗ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕ ಗೌರವಾರ್ಪಣೆಗೋಸ್ಕರವಾಗಿ ಅಲಂಕರಿಸಿ ಪ್ರದರ್ಶಿಸಲಾಗಿತ್ತು. ಸಮಸ್ತ ಪ್ರಪಂಚವೂ ಅವರಿಗೆ ದುಃಖಾಶ್ರುತರ್ಪಣವೀಯಿತು. ಅವರ ಚಿತಾಭಸ್ಮವನ್ನು ಲಂಡನ್ನಿನ ಹೃದಯಭಾಗದಲ್ಲಿರುವ ವೆಸ್ಟ್‌ಮಿನ್‌ಸ್ಟರ್ ಅಬ್ಬೀಯಲ್ಲಿ ಇಂಗ್ಲೆಂಡಿನ ಪರಮೋತ್ತುಂಗ ಪುರುಷರ ಚಿತಾಭಸ್ಮಕರಂಡಗಳ ಒತ್ತಿಗೆ ಸಕಲ ರಾಜಗೌರವ ಸಮೇತ ಸಮಾಧಿಗೊಳಿಸಲಾಯಿತು. ಐನ್‌ಸ್ಟೈನ್ ಗತಿಸಿದಾಗಲೂ ಪ್ರಪಂಚಾದ್ಯಂತ ದುಃಖಾವಕುಂಠನ ಮುಸುಕಿತು ನಿಜ. ಆದರೆ ಇವರು ತಮ್ಮ ಮೇಲೆ ಯಾವುದೇ ತೆರನಾದ ಶ್ಮಶಾನಸಂಸ್ಕಾರವನ್ನಾಗಲಿ ಸಮಾಧಿಯನ್ನಾಗಲಿ ಹೇರತಕ್ಕದ್ದಲ್ಲವೆಂದು ಕಡ್ಡಾಯವಾಗಿ ವಿಧಿಸಿದ್ದರು. ಇವರಿಗೆ ತೀರ ನಿಕಟವರ್ತಿಗಳಾಗಿದ್ದ ಕೇವಲ ಕೆಲವೇ ಆಪ್ತರ ಸಮ್ಮುಖದಲ್ಲಿ ಇವರ ದೇಹವನ್ನು ನ್ಯೂಜರ್ಸಿಯ ಟ್ರೆನ್‌ಟನ್ ಸಮೀಪ ದಹಿಸಲಾಯಿತು. ಇವರ ಇಚ್ಛಾನುಸಾರ ಚಿತಾಭಸ್ಮ ವಿಸರ್ಜನೆಯ ವಿಧಾನ ಪ್ರಪಂಚಕ್ಕೆ ತಿಳಿಯದಂತೆ ಪೂರ್ಣ ರಹಸ್ಯವಾಗಿ ಕಾಪಾಡಲಾಯಿತು. ಏಕೆಂದರೆ ಯಾವುದೇ ನೆಲೆ ಅದೆಷ್ಟೇ ಕ್ಷುದ್ರ ಸ್ಥಳವಾಗಿದ್ದರೂ ತಮ್ಮ ಹೆಸರಿನಲ್ಲಿ ಗುಡಿ ಆಗಕೂಡದೆಂಬುದು ಇವರ ಖಚಿತ ಅಭಿಪ್ರಾಯವಾಗಿತ್ತು. ಆದರೆ ಚಿತಾಭಸ್ಮದ ಕಣಗಳು ಎಲ್ಲಿಯೇ ಹರಡಿಹೋಗಿದ್ದರೂ ಕಾಲಪ್ರವಾಹ ಅವನ್ನು ಧರಿಸಿ ಜುಳಜುಳನೆ ಹರಿದು ನ್ಯೂಟನ್ ಮಹಾಶಯ ಕಿರಿಹೈದನಾಗಿ ಆಟವಾಡಿದ್ದ[೬೪] ಕಿನಾರೆಗೆದುರಾಗಿ ಚೆಲ್ಲಿಕೊಂಡಿರುವ ನನ್ನಿಯ ಹೆಗ್ಗಡಲಿಗೆ ಕೊಂಡೊಯ್ದಿತು."

ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು ?
ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು ?
ಸಪ್ತಸಾಗರದಾಚೆಯೆಲ್ಲೋ ಸುಪ್ತಸಾಗರ ಕಾದಿದೆ,
ಮೊಳೆಯದಲೆಗಳ ಮೂಕ ಮರ್ಮರ ಇಂದು ಇಲ್ಲಿಗು ಹಾಯಿತೆ ?
ವಿವಶವಾಯಿತು ಪ್ರಾಣ ; ಹಾ ! ಪರವಶವು ನಿನ್ನೀ ಚೇತನ ;
ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ ?

ಗೋಪಾಲಕೃಷ್ಣ ಅಡಿಗ[೬೫]

ಇಂಥ ಒಬ್ಬ ವ್ಯಕ್ತಿ [ಐನ್‌ಸ್ಟೈನ್] ಚಿರಂಜೀವಿ ಎಂದು ಅನ್ನಿಸುತ್ತದೆ—ಬೇಟೋವನ್ನನಂಥ ಒಬ್ಬ ವ್ಯಕ್ತಿ ಹೇಗೆ ಎಂದೂ ಮೃತನಾಗನೊ ಹಾಗೆ. ಆದರೆ ಶಾಶ್ವತವಾಗಿ ನಷ್ಟವಾಗಿ ಹೋದ ಬೇರೇನೋ ಒಂದಿದೆ : ಬಾಳುವುದರ ಬಗೆಗೆ ಅವರಿಗಿದ್ದ ಪರಿಪೂರ್ಣಾನಂದ. ಇದು ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿತ್ತು. ಊಹೆಗೂ ನಿಲುಕದಷ್ಟು ವಿನಯವಂತರೂ ನಿರಾಡಂಬರ ಸ್ವಭಾವದವರೂ ಆಗಿದ್ದ ಈ ಮಹಾಪುರುಷ

ನಮ್ಮೊಡನೆ ಉಳಿದಿಲ್ಲವೆಂಬುದನ್ನು ಒಪ್ಪುವುದು ಅತಿ ಕಷ್ಟ. ವಿಧಿ ಅವರಿಗೆ ಅನುಗ್ರಹಿಸಿದ್ದ ಅವರ ಏಕಮೇವಾದ್ವಿತೀಯ ಪಾತ್ರದ ಪೂರ್ಣ ಅರಿವು ಅವರಿಗಿತ್ತು ; ಇದರೊಂದಿಗೆ ಸ್ವಂತ ಹಿರಿಮೆಯ ಅರಿವು ಕೂಡ. ಆದರೆ ಈ ಹಿರಿಮೆ ಹಿಮಾಲಯಭವ್ಯವಾಗಿದ್ದುದರಿಂದಲೇ—ಆಂತರಿಕ ಆವಶ್ಯಕತೆಯಾಗಿ, ತೋರ್ಕೆ ವರ್ತನೆಯಾಗಿ ಅಲ್ಲ—ಅವರು ನಮ್ರರೂ ವಿನೀತರೂ ಆಗಿದ್ದರು.

**ಕಾರ್ನೀಲಿಯಸ್ ಲ್ಯಾಂಕ್ಜೋಸ್** (೨೬-೪-೧೯೫೫)

ಸಾವು ? ಜೀವನಯಾನವ್ಯೆದಲಿಹ ಕಟ್ಟಕಡೆ
ರೇವು ! ಸುಂದರ ಸುಖದ ಸಂತೃಪ್ತ ಸಮೃದ್ಧ
ಠಾವು ! ಪೀಳಿಗೆ ವರ್ಧಿಸಲು ವ್ಯಕ್ತಿ ಮುಡಿಪಿಡುವ
ಠೇವು ! ತಿಳಿ ಜೀವಸಾಪತ್ಯವಿದು ಅತ್ರಿಸೂನು

ಏನನಾಡಿದೆ, ಧರ್ಮ ? ಬಂದಬಟ್ಟೆಯ ಹಿನ್ನಡೆದು
ನೋಡುವರೆ ? ನಡೆವುದಧಿಕವಾಗಿದೆ ದೊರೆಗೆ. ಧರ್ಮದಲಿ
ನಡೆದಿರೆ, ಕಾಡಸಂಚರಿಸಿ ನಾಡೆ ಸೇರಿಹಿರಿ.
ಕೃಷ್ಣಸಾರಥ್ಯದಲಿ ಯುದ್ಧ ನಡೆಸಿದಿರಿ, ಕಡೆಗೆ
ಗೆದ್ದುದು ಧರ್ಮ, ಅಡ್ಡಿ ಬಂದೆಲ್ಲವನು ದಮಿಸಿ.
ಗೆದ್ದು ಯುದ್ಧವ ಮುಗಿಸಿದರು, ನಿತ್ಯನಡೆವುದು ಸಮರ
ಅಂತರ್ಲೋಕದಲಿ ; ಸಜ್ಜುಗೊಳ್ಳದಕೆ, ಧರ್ಮಸುತ !

ಯುಗಸಂಧ್ಯಾದಲ್ಲಿ ಸುಜನಾ

### ಅನುಬಂಧ ೧

# ಕಲ್ಪನೆಯಿಂದ ಕತ್ತರಿಸಿ ತೆಗೆದ ಅಮೃತಶಿಲೆ

ಐನ್‌ಸ್ಟೈನ್ ಶತಮಾನೋತ್ಸವವನ್ನು ಕುರಿತ ನಿಮ್ಮ* ನವಂಬರ್ ೨೧ರ [೧೯೭೮] ಕಾಗದಕ್ಕೆ ಮಾರೋಲೆ ಬರೆಯಲು ವಿಳಂಬವಾದದ್ದಕ್ಕೆ ಕ್ಷಮೆ ಯಾಚಿಸುತ್ತೇನೆ. ಸದ್ಯ ಈ ಪತ್ರವನ್ನು ನಿಮಗೆ ಬರೆಯುವುದೇ ನಾನು ಮಾಡಬಹುದಾದ ಯೋಗ್ಯಕಾರ್ಯವೆಂದು ಭಾವಿಸಿದ್ದೇನೆ. ಇದನ್ನು ನೀವು ಪೂರ್ತಿ, ಇಲ್ಲವೇ ಭಾಗಶಃ, ನಿಮಗೆ ಸರಿಕಂಡಂತೆ ಪ್ರಕಟಿಸಬಹುದು.

ನನ್ನ ವಯಸ್ಸೀಗ ಎಂಬತ್ತೆರಡರ ಸನಿಹದಲ್ಲಿದೆ. ಹೀಗಾಗಿ ಸಾಪೇಕ್ಷತಾಸಿದ್ಧಾಂತದಲ್ಲಿ ಆಗಿರುವ ಅತ್ಯಾಧುನಿಕ ಅಭಿವರ್ಧನೆಗಳನ್ನು ಗಮನಿಸಿ ಅರಿಯಲು ಯುಕ್ತಪ್ರಯತ್ನ ಕೈಗೊಳ್ಳುವಷ್ಟು ತ್ರಾಣ ಉಳಿದಿಲ್ಲ. ಎಂದೇ ಈ ಸಿದ್ಧಾಂತ ಇಂದು ಹೇಗಿದೆ ಎಂಬುದನ್ನು ಕ್ರೋಡೀಕರಿಸಲು ನಾನು ಸಮರ್ಥನಲ್ಲ. [ಇದು ಹಾಗಿರಲಿ]. ಇಂದಿಗಾದರೂ [೧೯೭೯] ಈ ಸಿದ್ಧಾಂತದ ಮೂಲ ಭೂತ ಭಾವನೆಗಳು ಬದಲಾಗಿವೆ ಎಂದೇನೂ ನಾನು ಭಾವಿಸಿಲ್ಲ. ನನ್ನ ಬೌದ್ಧಿಕ ಜೀವನದ ಹೆಚ್ಚಿನ ಅಂಶವನ್ನು ಇವುಗಳ ವ್ಯಾಸಂಗದಲ್ಲಿಯೇ ಕಳೆದಿರುವೆನಾದ್ದರಿಂದ ಈಗಲೂ ಇವು ನನಗೆ ಪರಿಚಿತವಾಗಿವೆ.

ಅನೇಕ ವೀಕ್ಷಣೆಗಳಿಂದ ದೃಢಪಟ್ಟಿರುವಂತೆ ಇಂದು ವಿಶೇಷ ಸಾಪೇಕ್ಷತಾಸಿದ್ಧಾಂತವನ್ನು ಗುರುತ್ವ ಯಾವುದೇ ಪಾತ್ರ ವಹಿಸದ ವಿದ್ಯಮಾನಗಳಿಗೆ ಅನ್ವಯವಾಗುವ ಸಾಧು ಸಿದ್ಧಾಂತವಾಗಿ ಅಂಗೀಕರಿಸಲಾಗಿದೆಯೆಂದು ಧೈರ್ಯವಾಗಿ ಹೇಳಬಹುದು. ಇದನ್ನು ಅಭಿವರ್ಧಿಸಲು ಹಾಗೂ ಇದು ವ್ಯಾಪಕವಾಗಿ ಪ್ರಸಾರವಾಗಲು ಐನ್‌ಸ್ಟೈನ್ ಸಾಕಷ್ಟು ಶ್ರಮಿಸಿದ್ದರಾದ್ದರಿಂದ ಸಾಪೇಕ್ಷತಾ ಸಿದ್ಧಾಂತವನ್ನು ಮಾಮೂಲಾಗಿ ಇವರ ಹೆಸರಿನೊಂದಿಗೆ ಹೊಂದಿಸುವುದು ವಾಡಿಕೆ. ಇದು ಸರಿಯಾದದ್ದು ಮತ್ತು ಯುಕ್ತವಾದದ್ದು. ಆದರೆ ಇವರನ್ನು ಸಾಪೇಕ್ಷತಾಸಿದ್ಧಾಂತದ ಆವಿಷ್ಕರ್ತೃ ಎಂಬುದಾಗಿ ಪರಿಗಣಿಸಬೇಕೇ ಎನ್ನುವುದು ಚರ್ಚಾಸ್ಪದ ವಿಷಯ. ಈ ವಿಚಾರದಲ್ಲಿ ಸರ್ ಎಡ್ಮಂಡ್ ವಿಟ್ಟೇಕರ್ (೧೮೭೩-೧೯೫೬) ಮತ್ತು ಪ್ರೊಫೆಸರ್ ಕಾರ್ನೀಲಿಯಸ್ ಲ್ಯಾಂಕ್ರೋಸ್ (೧೮೯೩-೧೯೭೪) ಎಂಬ ನನ್ನ ಇಬ್ಬರು ಹಳೆಯ ಗೆಳೆಯರು ಭಿನ್ನಾಭಿಪ್ರಾಯ ಹೊಂದಿದ್ದರು. ಲೊರೆಂಟ್ಝ್ ಮತ್ತು ಪ್ವಾನ್‌ಕ್ವಾರೇ ಈ ಸಿದ್ಧಾಂತದ ನಿಜ ಮೂಲಪುರುಷರೆಂದು ವಿಟ್ಟೇಕರ್ ತಮ್ಮ ಗ್ರಂಥ *Histories of the Theories of Aether and Electricity* (Volume 2, London, 1953) ಎಂಬುದರಲ್ಲಿ ಪ್ರತಿಪಾದಿಸಿದರೆ ಈ ಅಭಿಪ್ರಾಯವನ್ನು ಲ್ಯಾಂಕ್ರೋಸ್ ತಮ್ಮ ಗ್ರಂಥ *Einstein Decade* (೧೯೦೫-೧೫), (London, ೧೯೭೪) ಎಂಬುದರಲ್ಲಿ ಪ್ರಬಲವಾಗಿ ವಿರೋಧಿಸಿದರು.

ಭಾವವಿಕಾರಾಧೀನರಾಗದೆ ಈ ಪ್ರಶ್ನೆಯನ್ನು ಎದುರಿಸುವುದು ಹೆಚ್ಚುಕಡಿಮೆ ಅಸಾಧ್ಯವೆಂದೇ ತೋರುತ್ತದೆ. ವಿಟ್ಟೇಕರರ ಗ್ರಂಥದಲ್ಲಿ ಉದ್ಧೃತ ಉಲ್ಲೇಖಗಳು ಸಮೃದ್ಧವಾಗಿವೆ. ಎಂದೇ ಪ್ರಸಕ್ತ ಶತಮಾನದ ಮೊದಲ ವರ್ಷಗಳಲ್ಲಿ ಭೌತವಿಜ್ಞಾನಿಗಳು ಪ್ರದರ್ಶಿಸಿದ ಅಸಾಧಾರಣ ಚಟುವಟಿಕೆಗಳನ್ನು ಇದರಿಂದ ಅರಿಯುವುದು ಸುಲಭ. ೧೯೦೩ರಲ್ಲಿ ಲೊರೆಂಟ್ಝ್ ಅವರು 'ಪರಿವರ್ತನೆ'ಗಳನ್ನು (ಟ್ರಾನ್ಸ್‌ಫಾರ್ಮೇಶನ್ಸ್) ಆವಿಷ್ಕರಿಸಿದರು. ಮ್ಯಾಕ್ಸ್‌ವೆಲ್ಲರ ವಿದ್ಯುತ್ಕಾಂತ

* 'ವಿಜ್ಞಾನ ಕರ್ಣಾಟಕ'ದ ಸಂಪಾದಕರು ಬರೆದ ಕಾಗದ

ಸಮೀಕರಣಗಳು (ಎಲೆಕ್ಟ್ರೊಮ್ಯಾಗ್ನೆಟಿಕ್ ಇಕ್ವೇಶನ್ಸ್) ಈ ಪರಿವರ್ತನೆಗಳಲ್ಲಿ ರೂಪವ್ಯತ್ಯಾಸಗೊಳ್ಳದೆ ಹಾಗೆಯೇ ಉಳಿದಿರುತ್ತವೆ. ಪ್ವಾನ್‌ಕ್ವಾರೇ ಇವನ್ನು ಲೊರೆಂಟ್ಝ್ ಪರಿವರ್ತನೆಗಳೆಂದು ಹೆಸರಿಸಿದರು. ಈ ಹೆಸರು ಉಳಿದುಕೊಂಡಿದೆ. ಮುಂದೆ ೧೯೦೪ರಲ್ಲಿ ಪ್ವಾನ್‌ಕ್ವಾರೇ ಸಾಪೇಕ್ಷತಾ ತತ್ತ್ವವನ್ನು (ಪ್ರಿನ್ಸಿಪಲ್ ಆಫ್ ರಿಲೆಟಿವಿಟಿ) ನಿರೂಪಿಸಿದರು. ಅಲ್ಲದೇ ಯಾವ ವೇಗವೂ ಬೆಳಕಿನ ವೇಗವನ್ನು ಮೀರಲಾರದಂಥ ಹೊಸ ಬಗೆಯ ಗತಿವಿಜ್ಞಾನವನ್ನು (ಡೈನಮಿಕ್ಸ್) ಅಭಿವರ್ಧಿಸಬೇಕೆಂದು ಮುನ್ನುಡಿದರು. 'ಚಲಿಸುವ ಕಾಯಗಳ ವಿದ್ಯುದ್ಗತಿವಿಜ್ಞಾನ'ದ (ಎಲೆಕ್ಟ್ರೊಡೈನಮಿಕ್ಸ್ ಆಫ್ ಮೂವಿಂಗ್ ಬಾಡೀಸ್) ಮೇಲಿನ ತಮ್ಮ ಸುಪ್ರಸಿದ್ಧ ಪ್ರಬಂಧವನ್ನು ಐನ್‌ಸ್ಟೈನ್ ೧೯೦೫ರಲ್ಲಿ ಪ್ರಕಟಿಸಿದರು. ಇದು ಸಾಪೇಕ್ಷತಾತತ್ತ್ವದ ಮೇಲೆ ಆಧಾರಿತವಾಗಿತ್ತು. ಇದರಲ್ಲಿ ಪ್ವಾನ್‌ಕ್ವಾರೇ ಹೆಸರು ಪ್ರಸ್ತಾವಿಸಲ್ಪಟ್ಟಿರಲಿಲ್ಲ. ೧೯೦೬ರಲ್ಲಿ ಪ್ಲ್ಯಾಂಕರು ಕಣಚಲನೆಯ ಗತಿವೈಜ್ಞಾನಿಕ ಸಮೀಕರಣಗಳನ್ನು ಶೋಧಿಸಿದರು. ಪ್ವಾನ್‌ಕ್ವಾರೇ ಇವನ್ನು ಮುನ್ನುಡಿದಿದ್ದರು.

ಇದೊಂದು ಗೋಜುಗೋಜಲು ಚಿತ್ರ. ವಿಶೇಷ ಸಾಪೇಕ್ಷತೆಯ ಬೆನ್ನೆಲುಬಾದ ಪರಿವರ್ತನ ನಿಯಮವನ್ನು ಮೊದಲಿಗೆ ಪಡೆದ ಲೊರೆಂಟ್ಝ್ ಇದನ್ನೇನೂ ಸಡಿಲಗೊಳಿಸಲಿಲ್ಲ. ಏಕೆಂದರೆ ಈ ಸಿದ್ಧಾಂತಕ್ಕೆ ಭೌತ ಅಸ್ತಿತ್ವವಿದೆ ಎಂಬುದನ್ನು ಅವರೆಂದೂ ಅಂಗೀಕರಿಸಲಿಲ್ಲ. ಒಬ್ಬ ಮಹಾ ಪುರುಷನ ಜನ್ಮಶತಮಾನೋತ್ಸವವನ್ನು ಆಚರಿಸುವ ವೇಳೆ ಆತನ ಸಿದ್ಧಿಗಳನ್ನು, ಪ್ರಾಯಶಃ, ನಾವು ಉತ್ಪ್ರೇಕ್ಷಿಸುವ ಅಪಾಯ ಉಂಟು. ಐನ್‌ಸ್ಟೈನ್ ಒಬ್ಬರೇ ವಿಶೇಷ ಸಾಪೇಕ್ಷತಾಸಿದ್ಧಾಂತವನ್ನು ಸೃಷ್ಟಿಸಿದರೆಂದು ಹೇಳುವುದು ಅತಿಯಾದೀತೆಂದು ಭಾವಿಸಿದ್ದೇನೆ. ಅವರು ಪ್ರಚಲಿತ ಭಾವನೆಗಳನ್ನು ಹೀರಿಕೊಂಡು ತುಂಬ ಕೌಶಲದಿಂದ ಅವನ್ನು ಅಭಿವರ್ಧಿಸಿದರು. ಹೀಗಾಗಿ ಅವುಗಳ ಅರ್ಥ ಚೆನ್ನಾಗಿ ತಿಳಿಯುವಂತಾಯಿತು. ಈಥರಿನ ವಿಚಿತ್ರ ಗುಣಗಳಿಂದ ದಿಗ್ಭ್ರಾಂತರಾಗಿದ್ದ ಯಾರೇ ಆಗಲಿ, ಅಸ್ತಿತ್ವವೇ ಇಲ್ಲದ ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದು ಅನಾವಶ್ಯಕವೆಂದು ಐನ್‌ಸ್ಟೈನರಿಂದ ತಿಳಿದಾಗ ಮಹದಾನಂದಪಟ್ಟಿರಬೇಕು.

ಆನ್ರೀ ಪ್ವಾನ್‌ಕ್ವಾರೇಯವರ (೧೮೫೪-೧೯೧೨) ಜನ್ಮಶತಮಾನೋತ್ಸವವನ್ನು ೧೯೫೪ರಲ್ಲಿ ಆಚರಿಸಿದಾಗ ಸುಂದರ [ಸಂಸ್ಮರಣ] ಗ್ರಂಥವೊಂದನ್ನು ಪ್ರಕಟಿಸಲಾಯಿತು. ಅದರಲ್ಲಿ ಐನ್‌ಸ್ಟೈನರನ್ನು ಕುರಿತ ಕೆಲವು ಉಲ್ಲೇಖಗಳನ್ನು ಗಮನಿಸಿದ್ದೇನೆ : "ಅವರು [ಪ್ವಾನ್‌ಕ್ವಾರೇ] ಐನ್‌ಸ್ಟೈನರ ಕೃತಿಗಳ ಪೂರ್ವಕರ್ತೃ. ಭೂರಿಜನ ಐನ್‌ಸ್ಟೈನರ ಸಿದ್ಧಾಂತವೆಂದು ಒಟ್ಟಾರೆ ಭಾವಿಸಿರುವ ಆಕಾಶ ಮತ್ತು ಕಾಲದ ಸಾಪೇಕ್ಷತೆಯನ್ನು (ರಿಲೆಟಿವಿಟಿ ಆಫ್ ಸ್ಪೇಸ್ ಅಂಡ್ ಟೈಮ್) ಕುರಿತ ಎಲ್ಲ ಪರಿಗಣನೆಗಳು ನಿಜಕ್ಕೂ ಪ್ವಾನ್‌ಕ್ವಾರೆಯವರವೇ ಆಗಿವೆ (ಪುಟ ೧೮೧)." ಇದನ್ನು ಅಸಂಬದ್ಧ ಪ್ರಲಾಪವೆಂದು ಒಡನೆ ತಿರಸ್ಕರಿಸಬಹುದು. ಆದರೆ ಪ್ವಾನ್‌ಕ್ವಾರೇ-ಐನ್‌ಸ್ಟೈನ್ [ಬೌದ್ಧಿಕ]ಸಂಬಂಧದ ಬಗ್ಗೆ ಪ್ರಿನ್ಸ್ ಲೂಯಿ ಡೀ ಬ್ರಾಗ್ಲಿ ಒಂದು ಕುತೂಹಲಕಾರಿ ವಿಶ್ಲೇಷಣೆ ಮಾಡಿದ್ದಾರೆ (ಪುಟ ೬೫). ಐನ್‌ಸ್ಟೈನರ ನಿರ್ಧಾರಯುತ ಪ್ರಬಂಧ ಪ್ರಕಟವಾಗುವ ಅದೇ ಮೊದಲು, ೧೯೦೪ರಲ್ಲಿ, ಸಾಪೇಕ್ಷತಾಸಿದ್ಧಾಂತದ ಸಮಸ್ತ ಘಟಕಗಳೂ ಪ್ವಾನ್‌ಕ್ವಾರೇಯವರ ವಶದಲ್ಲಿ ಇದ್ದುವೆಂದು ಡೀ ಬ್ರಾಗ್ಲಿ ಹೇಳಿದ್ದಾರೆ. ಹಾಗಾದರೆ ಪ್ವಾನ್‌ಕ್ವಾರೇ ಸಾಪೇಕ್ಷತೆಯನ್ನು ಅಭಿವರ್ಧಿಸುವ ಕಾರ್ಯವನ್ನು ಐನ್‌ಸ್ಟೈನರಿಗೆ ಬಿಟ್ಟುಕೊಟ್ಟುದರ ರಹಸ್ಯವೇನು ? ಅವರು [ಪ್ವಾನ್‌ಕ್ವಾರೇ] ಅತಿಯಾದ ಶುದ್ಧಗಣಿತವಿದರಾಗಿದ್ದು ಭೌತಸಿದ್ಧಾಂತಗಳ (ಫಿಸಿಕಲ್ ತೀಯೊರೀಸ್) ಬಗೆಗೆ ಸಂದೇಹಸ್ವಭಾವದವರಾಗಿದ್ದುದರಿಂದ ವಿರುದ್ಧ ವಿಧಾನಗಳ ನಡುವೆ ಯಾವುದನ್ನು ಅರಿಯಬೇಕು ಎಂಬುದನ್ನು ನಿರ್ಧರಿಸಲು ಅಸಮರ್ಥರಾಗಿದ್ದರು. ಇದೇ ಈ ರಹಸ್ಯದ ಕಾರಣ.

"ಹೀಗಾಗಿ ಆ ಫ್ರೆಂಚ್ ಮಹಾ ಪ್ರತಿಭಾನ್ವಿತ ಪ್ವಾನ್‌ಕ್ವಾರೇಯವರ ಪ್ರಗಲ್ಭಗಣಿತಜ್ಞಾನದೊಡನೆ ಹೋಲಿಸಿದಾಗ ತೀರ ಅಪ್ರಬುದ್ಧ ಸ್ಥಿತಿಯಲ್ಲಿದ್ದ, ಆಗ ಕೇವಲ ಇಪ್ಪತ್ತೈದು ವರ್ಷ ವಯಸ್ಸಿನವರಾಗಿದ್ದ, ತರುಣ ಆಲ್ಬರ್ಟ್ ಐನ್‌ಸ್ಟೈನ್ ಪ್ವಾನ್‌ಕ್ವಾರೇಯವರಿಗಿಂತ ಮೊದಲೇ ಒಂದು ಸಂಶ್ಲೇಷಣೆಯನ್ನು (ಸಿಂತೆಸಿಸ್) ತಲಪುವುದು ಸಾಧ್ಯವಾಯಿತು. ಈ ಸಂಶ್ಲೇಷಣೆ ಇವರ ಪೂರ್ವಜರ ಸಮಸ್ತ ಆಂಶಿಕ ಪ್ರಯತ್ನಗಳನ್ನೂ ಉಪಯೋಗಿಸುತ್ತ ಮತ್ತು ಸಮರ್ಥಿಸುತ್ತ ಎಲ್ಲ ತೊಡಕುಗಳನ್ನೂ ಒಮ್ಮೆಗೇ ಗುಡಿಸಿ ಬಿಸಾಡಿತು. ಭೌತವಾಸ್ತವತೆಯ ಬಗೆಗಿನ ಪ್ರಗಲ್ಭ ಅಂತಬೋಧೆಯಿಂದ ಮಾರ್ಗದರ್ಶಿತವಾದ ತೀವ್ರ ಚಟುವಟಿಕೆಯ ಮಹಾಸಿದ್ಧಿ ಇದು !"

ಈ ಕೊನೆಯ ವಾಕ್ಯ ನಿಜವೆಂದು ತೋರುತ್ತದೆ. ತಮ್ಮ ಸಮಸ್ತ ಕೃತಿಗಳಲ್ಲಿಯೂ ಐನ್‌ಸ್ಟೈನ್ ಅಸಾಧಾರಣ ಭೌತ ಅಂತರ್ಬೋಧೆಯನ್ನು ಪ್ರದರ್ಶಿಸಿರುವುದು ಕಂಡುಬರುತ್ತದೆ.

ಒಬ್ಬ ಇತಿಹಾಸಕಾರ ಆದಿಪರಿಶೋಧಕರು ನವಪ್ರಾಂತಗಳಿಗೆ ಹಾದಿ ಅರಸಿ ನಡೆದ ವಿಧಾನಗಳನ್ನು ಎತ್ತಿ ತೋರಿಸುವ ಪ್ರಕಟಣೆಗಳನ್ನು—ಇವು ಮೂಲ ಆಕರಗಳು—ಗಮನಿಸಬೇಕಾಗುತ್ತದೆ. ಸುಸ್ಥಾಪಿತ ಸಿದ್ಧಾಂತವೊಂದರ ಸಾರಭೂತ ಲಕ್ಷಣಗಳನ್ನು ಗೊಂದಲವಿಲ್ಲದೆ ಚುರುಕಾಗಿ ಗ್ರಹಿಸುವುದು ಉದ್ದೇಶವಾಗಿರುವ ಒಬ್ಬ ಆಧುನಿಕ ವಿದ್ಯಾರ್ಥಿಯಾದರೋ ಈ ಸಿದ್ಧಾಂತವನ್ನು ಇದರ ಆಧುನಿಕ ರೂಪದಲ್ಲಿ ಅಭ್ಯಸಿಸುವುದು ಅಪೇಕ್ಷಣೀಯ. ವಿಶೇಷ ಸಾಪೇಕ್ಷತಾಸಿದ್ಧಾಂತದ ಆಧುನಿಕ ರೂಪ ಪ್ರಾರಂಭವಾದದ್ದು ಐನ್‌ಸ್ಟೈನರಿಂದಲ್ಲ, ಬದಲು, ಇವರಿಗೆ ಆ ಮೊದಲು ಉಪಾಧ್ಯಾಯರಾಗಿದ್ದ ಹರ್ಮನ್ ಮಿಂಕೊವ್ಸ್ಕೀಯವರಿಂದ. ಇವರಿಗೆ ಅವರ [ಐನ್‌ಸ್ಟೈನ್]* ಬಗೆಗೆ ಅಂಥ ಸದಭಿಪ್ರಾಯವೇನೂ ಇದ್ದಂತಿರಲಿಲ್ಲ [ಇದು ಹಾಗಿರಲಿ]. ಮಿಂಕೊವ್ಸ್ಕೀಯವರನ್ನು ಸ್ಮರಿಸದ ಯಾವ ಐನ್‌ಸ್ಟೈನ್-ಸಮಾರಂಭವೂ ಪೂರ್ತಿ ಎನಿಸದು. ಹೀಗೆ ಹೇಳಲು ಮುಖ್ಯವಾಗಿ ಎರಡು ಕಾರಣಗಳಿವೆ. ಮೊದಲನೆಯದು ಆಕಾಶ-ಕಾಲ (ಸ್ಪೇಸ್-ಟೈಮ್) ನಾಲ್ಕು ಆಯಾಮಗಳ ಪ್ರಾಂತ (ಫೋರ್ ಡೈಮೆನ್ಶನಲ್ ಡೊಮೇನ್), ಇದರಲ್ಲಿ ಘಟನೆಗಳು (ಈವೆಂಟ್ಸ್) ಬಿಂದುಗಳಿಂದ ಸೂಚಿಸಲ್ಪಡುತ್ತವೆ ಎಂಬ ಪರಿಕಲ್ಪನೆಯನ್ನು ಸೃಷ್ಟಿಸಿ ಮಿಂಕೊವ್ಸ್ಕೀ ವಿಶೇಷ ಸಾಪೇಕ್ಷತಾ ಸಿದ್ಧಾಂತಕ್ಕೆ ಇದರಲ್ಲಿ ತತ್ಪೂರ್ವ ಇರದಿದ್ದ ನೂತನ ಜ್ಯಾಮಿತೀಯ ಸೌಂದರ್ಯವನ್ನೂ ಸರಳತೆಯನ್ನೂ ಒದಗಿಸಿದರು—ಐನ್‌ಸ್ಟೈನ್ ಕಲ್ಪಣೆಯಿಂದ ಅಮೃತಶಿಲೆಯನ್ನು ಕತ್ತರಿಸಿ ತೆಗೆದರೆ ಮಿಂಕೊವ್ಸ್ಕೀ ಅದೇ ಅಮೃತಶಿಲೆಯನ್ನು ಉಪಯೋಗಿಸಿ ವಿಗ್ರಹವನ್ನು ಕಂಡರಿಸಿದರು. ಸಮುಚಿತ ಕಾಲದ (ಪ್ರಾಪರ್ ಟೈಮ್) ಪರಿಕಲ್ಪನೆಯನ್ನು ಸೃಷ್ಟಿಸುತ್ತ ಮಿಂಕೊವ್ಸ್ಕೀ ವಿಶೇಷ ಸಾಪೇಕ್ಷತೆಯಲ್ಲಿಯ ಸಾರಭೂತ ಮಾಪನೆಯೆಂದರೆ ಈ ಸಮುಚಿತ ಕಾಲದ ಮಾಪನೆ ಎಂದರು. ಆದರೆ, ಎರಡನೆಯದಾಗಿ—ಮತ್ತು ಇಲ್ಲಿ ಐನ್‌ಸ್ಟೈನ್ ಮುಂದೆ ಮಿಂಕೊವ್ಸ್ಕೀಯವರಿಗೆ ಆಭಾರ ಮನ್ನಣೆ ಸಲ್ಲಿಸಿದ್ದಾರೆ—ಆಕಾಶ-ಕಾಲವು ಗಣಿತೀಯ ಅರ್ಥದಲ್ಲಿ ಒಂದು ಚಪ್ಪಟೆ ಬಹುಸಂಚಯ (ಫ್ಲ್ಯಾಟ್ ಮ್ಯಾನಿಫೋಲ್ಡ್) ಎಂಬ ಮಿಂಕೊವ್ಸ್ಕೀಯವರ ಜ್ಯಾಮಿತೀಯ ಪರಿಕಲ್ಪನೆ ಐನ್‌ಸ್ಟೈನರಿಗೆ ತಮ್ಮ ಗುರುತ್ವಸಿದ್ಧಾಂತವನ್ನು ಅಭಿವರ್ಧಿಸಲು ಆ ಬಹುಸಂಚಯವನ್ನು ವಕ್ರಗೊಳಿಸುವಂತೆ (ಕರ್ವ್ಡ್) ಪ್ರೇರಣೆ ನೀಡಿತು.

ನ್ಯೂಟನ್ನರ ಶುದ್ಧ ಕಾಲದ (ಅಬ್ಸೊಲ್ಯೂಟ್ ಟೈಮ್) ಪರಿಕಲ್ಪನೆ ಯಾವಾಗ ವಿಶೇಷ ಸಾಪೇಕ್ಷತಾಸಿದ್ಧಾಂತದಿಂದ ನಾಶಗೊಳಿಸಲ್ಪಟ್ಟಿತೊ ಆಗ ಅವರ ಗುರುತ್ವ ಸಿದ್ಧಾಂತ ಕೂಡ ಪುನಃ-

---

* ನೋಡಿ ಟಿಪ್ಪಣಿ ೬೨

ಪರಿಶೀಲನೆಗೆ ಒಳಪಡಬೇಕಾಯಿತೆಂಬುದು ಸುವಿದಿತ. ಈ ನಿಟ್ಟಿನಲ್ಲಿ ಇತರ ಅನೇಕರು ಪ್ರಯತ್ನ ನಡೆಸಿದಾಗ್ಯೂ ಜಯ ಗಳಿಸಿದವರು ಐನ್‌ಸ್ಟೈನ್ ಮಾತ್ರ. ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತ (ಜನರಲ್ ತೀಯೊರಿ ಆಫ್ ರಿಲೆಟಿವಿಟಿ) ಎಂಬುದಾಗಿ ಇವರು ಹೆಸರಿಸಿರುವ ಸಿದ್ಧಾಂತದಲ್ಲಿ ಇದನ್ನು ಸಾಧಿಸಿದರು. 'ರಿಲೆಟಿವಿಟಿ' (ಸಾಪೇಕ್ಷತೆ) ಎಂಬ ಪದವನ್ನು ಭವಿಷ್ಯ ಪೀಳಿಗೆಗಳ ಮೇಲೆ ಹೇರುವಲ್ಲಿ ಪ್ವಾನ್‌ಕ್ವಾರೇ ಯಶಸ್ವಿಯಾದರೆಂಬುದೊಂದು ವಿಚಿತ್ರ ಸಂಗತಿಯೇ ಸರಿ. ಈ ಪದಕ್ಕೆ ಯಾರೂ ಒಂದು ಅರ್ಥವನ್ನು ನೀಡಿಲ್ಲವೆಂಬುದಾಗಿ ತೋರುತ್ತದೆ. ಆದರೆ ಇಲ್ಲಿ ಈ ಪದದ ಉಪಯೋಗವೊಂದರ ಹೊರತಾಗಿ ತಮ್ಮ ಗುರುತ್ವಸಿದ್ಧಾಂತದ ನಿಜ ಸಂಸ್ಥಾಪಕ ಸಾಕ್ಷಾತ್ ಐನ್‌ಸ್ಟೈನರೇ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಇದನ್ನು ಸೃಷ್ಟಿಸಲು ಇವರು ಸಾಕಷ್ಟು ಕಠಿಣವಾಗಿದ್ದ ಗಣಿತತಂತ್ರಗಳನ್ನು ಕಲಿಯಬೇಕಾಯಿತು. ಈ ಕಲಿಕೆಯ ವೇಳೆ ಅವನ್ನು ಇವರು ಸುಧಾರಿಸಿದರು ಮತ್ತು ಸರಳೀಕರಿಸಿದರು. ತತ್ಪರಿಣಾಮವಾಗಿ ಅವು ಸಾಪೇಕ್ಷತೆಯೊಡನೆ ಏನೂ ಸಂಬಂಧವಿರದ ಕಾರ್ಯದಲ್ಲಿ ಉದ್ಯುಕ್ತರಾಗಿದ್ದ ಹಲವು ಭೌತವಿಜ್ಞಾನಿಗಳಿಗೆ ಸುಲಭಲಭ್ಯ ಸಲಕರಣೆಗಳಾದುವು.

ಗಣಿತೀಯವಾಗಿ ವಿಶೇಷ ಸಾಪೇಕ್ಷತಾಸಿದ್ಧಾಂತ ಕಠಿಣವಿಷಯವೇನೂ ಅಲ್ಲ. ಸಾರ್ವತ್ರಿಕ ಸಿದ್ಧಾಂತ ಗಣನೀಯವಾಗಿ ಕಷ್ಟತರವಾದದ್ದು. ಆದರೆ ಒಮ್ಮೆ ಟೆನ್ಸರ್ ಕಲನಶಾಸ್ತ್ರದ (ಟೆನ್ಸರ್ ಕ್ಯಾಲ್ಕ್ಯುಲಸ್) ಮೇಲೆ ಪ್ರಭುತ್ವ ಸಿದ್ಧಿಸಿತೋ ಮತ್ತೆ ಸೂತ್ರಗಳ ಮೇಲೆ ಕೈಯಾಡಿಸುವುದು ಸುಲಭ. ಭೌತಸಮಸ್ಯೆಗಳಿಗೆ ಸಾಪೇಕ್ಷತೆಯನ್ನು ಅನ್ವಯಿಸಬೇಕಾಗುವಾಗ ವಿಶೇಷ ಮತ್ತು ಸಾರ್ವತ್ರಿಕ ಸಿದ್ಧಾಂತಗಳೆರಡೂ ಹಳೆಯ ವಿಧಾನಗಳಿಗಿಂತ ಕಡಿಮೆ ಪ್ರಯೋಜನಕಾರಿ. ವಿಶೇಷ ವಾಗಿ ಸಾರ್ವತ್ರಿಕ ಸಿದ್ಧಾಂತವನ್ನು ಕುರಿತಂತೆ ಇದು ಇನ್ನಷ್ಟು ನಿಜ. ಖಗೋಳೀಯ ಬಲವಿಜ್ಞಾನ ದಲ್ಲಿ (ಸೆಲೆಸ್ಟಿಯಲ್ ಮೆಕ್ಯಾನಿಕ್ಸ್) ಕಾರ್ಯವೆಸಗುತ್ತಿರುವವರು ಇಂದಿಗೂ ನ್ಯೂಟೋನಿಯನ್ ಪರಿಕಲ್ಪನೆಗಳನ್ನೇ ಬಳಸುತ್ತಿದ್ದು, ನ್ಯೂಟೋನಿಯನ್ ವಿಧಾನದ ಪ್ರಕಾರ ಲಭಿಸುವ ತೀರ್ಮಾನ ಗಳಿಗೂ ವೀಕ್ಷಣೆಗೂ ನಡುವೆ ಅಲ್ಪ ವ್ಯತ್ಯಾಸ ಕಂಡಾಗ ಮಾತ್ರ—ಉದಾಹರಣೆಗೆ ಬುಧಗ್ರಹದ ಪುರರವಿಬಿಂದುವಿನ ಪರಿಭ್ರಮಣೆ (ರಿವೊಲ್ಯೂಶನ್ ಆಫ್ ದಿ ಪೆರಿಹೀಲಿಯನ್ ಆಫ್ ಮರ್ಕ್ಯುರಿ) —ಸಾರ್ವತ್ರಿಕ ಸಾಪೇಕ್ಷತೆಗೆ ಶರಣು ಹೋಗುತ್ತಾರೆ. ನಿಸರ್ಗದ ಎರಡು ವಾಸ್ತವಾಂಶಗಳಲ್ಲಿ ಈ ನಿಲವಿಗೆ ಸಮರ್ಥನೆಯನ್ನು ಕಾಣಬಹುದು: ಮೊದಲನೆಯದು, ಬೆಳಕಿನ ವೇಗದೊಡನೆ ಹೋಲಿಸು ವಾಗ ಗ್ರಹಗಳ ಸಾಪೇಕ್ಷವೇಗಗಳು ಅಲ್ಪವಾಗಿವೆ ; ಮತ್ತು ಎರಡನೆಯದು, ಸೂರ್ಯ ಮತ್ತು ಗ್ರಹಗಳ ಗುರುತ್ವಕ್ಷೇತ್ರಗಳು ದುರ್ಬಲವಾಗಿವೆ—ಅಂದರೆ ಇವು ಆಕಾಶ-ಕಾಲದಲ್ಲಿ ಅತ್ಯಲ್ಪ ವಕ್ರತೆಯನ್ನು ಮಾತ್ರ ಉಂಟುಮಾಡುತ್ತವೆ.

೧೯೨೦ರಲ್ಲಿ ನಾನು ಸಾಪೇಕ್ಷತೆಯನ್ನು ವ್ಯಾಸಂಗಿಸಲು ಪ್ರಾರಂಭಿಸಿದಾಗ ಮುಂದಿನ ಅರ್ಧ ಶತಮಾನದಲ್ಲಿ ಎಲ್ಲ ನ್ಯೂಟೋನಿಯನ್ ವಾದಗಳೂ ಸಾಪೇಕ್ಷತಾವಾದಗಳಿಂದ ಪ್ರತಿಸ್ಥಾಪಿಸಲ್ಪ ಡುತ್ತವೆಂಬುದಾಗಿ ಊಹಿಸಿದ್ದೆ. ಆದರೆ ಈಗ [೧೯೭೯] ಹಾಗೇನೂ ಅನ್ನಿಸುತ್ತಿಲ್ಲ. ನಮ್ಮಲ್ಲಿ ಹತ್ಯಾರುಗಳು ಏನೇ ಇದ್ದರೂ ಆಯಾ ಉದ್ದೇಶಕ್ಕೆ ಉತ್ಕೃಷ್ಟವಾದದ್ದನ್ನು ಮಾತ್ರ ಉಪಯೋಗಿ ಸಲು ಸಿದ್ಧರಿರಬೇಕು—ಮರಕೊಯ್ಯಲು ಗರಗಸ (ಸಾ), ಮುಖಕ್ಷೌರಕ್ಕೆ ಬಾಳು (ರೇಝರ್). ಆದ್ದ ರಿಂದ ಮೂರನೆಯ ಮಹಾಪ್ರತಿಭಾನ್ವಿತನೊಬ್ಬ ಸರ್ವೋದ್ದೇಶಸಾಧಕ ಹತ್ಯಾರನ್ನು ಒದಗಿಸುವ ತನಕ ನ್ಯೂಟನರ ಗರಗಸವನ್ನೂ ಐನ್‌ಸ್ಟೈನರ ಬಾಳುವನ್ನೂ ಗೌರವಿಸೋಣ.

* * *

ಈ ಲೇಖನವು ಜಾನ್ ಎಲ್. ಸಿಂಗ್ ಅವರು 'ವಿಜ್ಞಾನ ಕರ್ಣಾಟಕ'ದ ಸಂಪಾದಕರಿಗೆ ಬರೆದ (ಡಬ್ಲಿನ್ ೩೧-೧-೧೯೭೯) ಇಂಗ್ಲಿಷ್ ಪತ್ರದ ಕನ್ನಡಾನುವಾದ. ಇವರು ಡಬ್ಲಿನ್ ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್‌ಡ್ ಸ್ಟಡೀಸ್, ಡಬ್ಲಿನ್, ಐರ್ಲೆಂಡ್ ಇಲ್ಲಿಯ ಸ್ಕೂಲ್ ಆಫ್ ಥಿಯೊರೆಟಿಕಲ್ ಫಿಸಿಕ್ಸ್ ನಲ್ಲಿ ಎಮೆರಿಟಸ್ ಪ್ರೊಫೆಸರ್ ; ಸಾಪೇಕ್ಷತಾಸಿದ್ಧಾಂತದಲ್ಲಿ ಮೂಲಭೂತ ಸಂಶೋಧನೆ ನೀಡಿ ಗ್ರಂಥಗಳನ್ನು ಬರೆದಿದ್ದಾರೆ ; ಗ್ರಿಫಿತ್ ಎಂಬವರ ಜೊತೆ ಇವರು ಬರೆದಿರುವ *Principles of Mechanics* ಒಂದು ಅಮೂಲ್ಯ ಆಕರ ಗ್ರಂಥ. ಇದರ ಕನ್ನಡ ಅನುವಾದ 'ಬಲವಿಜ್ಞಾನದ ತತ್ತ್ವಗಳು' ಲಭ್ಯವಿದೆ (ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ). ಪ್ರಸ್ತುತ ಲೇಖಕನೇ ಈ ಕೃತಿಯ ಅನುವಾದಕ.

*   *   *

ನ್ಯೂಟೋನಿಯನ್ ಬಲವಿಜ್ಞಾನದ ಪ್ರರೂಪವನ್ನು ತುಂಡರಿಸಿ ಸಾಪೇಕ್ಷತೆಯ ಹೊಸ ಪ್ರರೂಪಕ್ಕೆ ಹಾದಿ ಮಾಡಿಕೊಡುವ ಕಾರ್ಯ ಈಗ ನಮ್ಮೆದುರು ಉಂಟು. ಸಾಪೇಕ್ಷತೆ ನಮಗೆ ಐನ್‌ಸ್ಟೈನರಿಂದ ದೊರೆತ ಬಳುವಳಿ. ನಾವು ಈ ತನಕ ಅಭ್ಯಸಿಸಿರುವ ವಿಷಯದ ಉತ್ತರ ಹಾಗೂ ಸವಿವರ ಭಾಗಗಳಲ್ಲಿ ಕೇವಲ ವ್ಯತ್ಯಯಗಳನ್ನು ಮಾಡುವ ಪ್ರಶ್ನೆ ಇದಾಗಿದ್ದರೆ ಹೋಲಿಕೆಯಿಂದ ಈ ಕಾರ್ಯ ಅತಿ ಸುಲಭವಾಗುತ್ತಿತ್ತು. ಆದರೆ ಪರಿಸ್ಥಿತಿ ಹೀಗಿಲ್ಲ. ಸಾಕ್ಷಾತ್ ಅಡಿಪಾಯಗಳಲ್ಲೇ— ಕಾಲವನ್ನು ಕುರಿತ ನಮ್ಮ ಪರಿಕಲ್ಪನೆಯಲ್ಲೇ—ವ್ಯತ್ಯಯವನ್ನು ಮಾಡ ಬೇಕಾಗಿದೆ.

ಸಿಂಗ್ ಮತ್ತು ಗ್ರಿಫಿತ್

## ಅನುಬಂಧ ೨

# ವೈಜ್ಞಾನಿಕ ಮನೋಧರ್ಮ

ಇಂದು ವ್ಯಾಪಕ ದುರುಪಯೋಗಕ್ಕೆ ಪಕ್ಕಾಗಿ ಸವಕಲು ನಾಣ್ಯಗಳಾಗಿರುವ ಪದಗಳ ಸಾಲಿನಲ್ಲಿ 'ವೈಜ್ಞಾನಿಕ ಮನೋಧರ್ಮ'ಕ್ಕೆ ಅಗ್ರಸ್ಥಾನವಿದೆ ! ಏಕೆಂದರೆ ಈ ಪದದ ಬಳಕೆಯು ವಿಷಯಕ್ಕೆ ಗಾಂಭೀರ್ಯ ಮತ್ತು ಖಚಿತತೆ ತರುತ್ತದೆಂದು ಜನ ಭಾವಿಸಿದ್ದಾರೆ. ರಾಜಕಾರಣಿ ಜನರನ್ನು ವ್ಯವಸ್ಥಿತವಾಗಿ ಸುಲಿಯುವ ವಾಮತಂತ್ರಕ್ಕೆ ತತ್ತ್ವದ ತೂಕ ಲೇಪಿಸಲು 'ವೈಜ್ಞಾನಿಕ ಮನೋಧರ್ಮ' ಬಳಸದೆ ಇರಲಾರ. ಸರ್ಕಾರದ ಹೊಣೆಗೇಡಿ ದುಂದುವೆಚ್ಚಗಳನ್ನು ಸರಿದೂಗಿಸಲು ಅಧಿಕ ತೆರಿಗೆ ವಿಧಿಸುವ ವಿತ್ತ ಮಂತ್ರಾಲಯ 'ವೈಜ್ಞಾನಿಕ ಮನೋಧರ್ಮ'ಕ್ಕೆ ಶರಣುಹೋಗದೆ ವಿಧಿ ಇಲ್ಲ. ಫಲಜ್ಯೋತಿಷಿ (astrologer) ತನ್ನ ಪ್ರಚ್ಛನ್ನ ವಂಚಕ ವ್ಯವಹಾರಕ್ಕೆ 'ವೈಜ್ಞಾನಿಕ ಮನೋಧರ್ಮ'ದ ಗವಸು ತೊಡಿಸಿಯೇ ಕಳಕ್ಕೆ ಇಳಿಯುವುದಾಗಿದೆ. ಧರ್ಮದ ಹೆಸರಿನಲ್ಲಿ ಮುಗ್ಧ ಜನತೆಯನ್ನು ತಪ್ಪು ಹಾದಿಗೆ ಎಳೆದು ಅವರ ಅಜ್ಞಾನವನ್ನು ಇಲ್ಲವೇ ಅಂಧವಿನೀತತೆಯನ್ನು ತಮ್ಮ ಬಂಡವಾಳವಾಗಿ ಮಾಡಿಕೊಂಡು ಸ್ವಾರ್ಥಸಾಧಿಸಿಕೊಳ್ಳುವ ಧಾರ್ಮಿಕ ಮುಖಂಡರೇ 'ವೈಜ್ಞಾನಿಕ ಮನೋಧರ್ಮ'ದ ಮೊದಲ ಚಲಾವಣೆಕಾರರು. ಸ್ವಂತೋತ್ಕರ್ಷಗಾಗಿ ವೈಜ್ಞಾನಿಕ ಅಂಕೆ ಅಂಶಗಳನ್ನು ಬೇಕಾದಂತೆ ಹಿಂಜಿ ರಾಜಕಾರಣಿಗಳು ಊದುವ ಪೀಪಿಗೆ ಅನುಗುಣವಾಗಿ ತಾಳಹಾಕುತ್ತ ದಾಖಲೆಗಳನ್ನು ತಿದ್ದುವ ಶಿಕ್ಷಕ-ರಾಜಕಾರಣಿಗಳ ಗುರಾಣಿಕಾಪು 'ವೈಜ್ಞಾನಿಕ ಮನೋಧರ್ಮ.'

ಹಾಗಾದರೆ 'ವೈಜ್ಞಾನಿಕ ಮನೋಧರ್ಮ'ದ ನಿಜ ಅರ್ಥವೇನು ?

ಬದುಕಿನ ಅಥವಾ ನಿಸರ್ಗದ ಸಮಸ್ತ ವಿದ್ಯಮಾನಗಳನ್ನೂ ಕಾರ್ಯ-ಕಾರಣಸಂಬಂಧ ದೃಷ್ಟಿ

ಯಿಂದ ಪರಿಶೀಲಿಸಿ ಯುಕ್ತ ನಿರ್ಧಾರ ತಳೆಯುವ ಮಾನಸಿಕ ಧೋರಣೆಯೇ ವೈಜ್ಞಾನಿಕ ಮನೋಧರ್ಮ. ಒಂದು ಉದಾಹರಣೆ : ನೇಸರು ಮುಂಜಾನೆ ಪೂರ್ವದಿಶೆಯಲ್ಲಿ ಮೂಡಿ ಬಾನಿನಲ್ಲಿ ಸರಿದು ಸಂಜೆ ಪಶ್ಚಿಮ ದಿಶೆಯಲ್ಲಿ ಕಂತುವುದನ್ನು ಕಾಣುತ್ತೇವೆ. ಈ ಬೆಳಕಿನ ಕುಂಭ ಗಗನದಲ್ಲಿ ಇದ್ದಷ್ಟು ಹೊತ್ತು ಹಗಲು (ದಿವಾ), ಇರದಷ್ಟು ಹೊತ್ತು ಇರುಳು (ರಾತ್ರಿ) ಎನ್ನುತ್ತೇವೆ. ಆದ್ದರಿಂದ ಹಗಲಿಗೂ ಸೂರ್ಯನಿಗೂ ಕಾರ್ಯ-ಕಾರಣ ಸಂಬಂಧವಿದೆ. ಹಗಲು ಕಾರ್ಯ, ಸೂರ್ಯ ಕಾರಣ. ಇದನ್ನು ಅರಿತು ತದನುಗುಣವಾಗಿ ಬಾಳುವ ಮಾನಸಿಕ ಧೋರಣೆಯೇ 'ವೈಜ್ಞಾನಿಕ ಮನೋಧರ್ಮ.' ಇನ್ನೂ ಮುಂದೆ ಹೋಗಿ, ಸೂರ್ಯನ ಆಕಾಶ ಪರ್ಯಟನೆ ಕೇವಲ ತೋರ್ಕೆ ಚಲನೆ, ವಾಸ್ತವವಾಗಿ ಭೂಮ್ಯಾವರ್ತನೆಯ 'ಕಾರಣ'ವಾಗಿ ಸೂರ್ಯನ ಸಂಚಾರ 'ಕಾರ್ಯ' ಭಾಸವಾಗುವುದೆಂದು ತಿಳಿಯುವ ಮನಃಸ್ಥಿತಿಯೇ 'ವೈಜ್ಞಾನಿಕ ಮನೋಧರ್ಮ.'

ಹೀಗಲ್ಲದೆ ಭಗವಂತನ ಶ್ರೇಷ್ಠತಮ ಸೃಷ್ಟಿಯಾದ ಮಾನವನ ಸುಖಸಂತೋಷಾರ್ಥ ಅದೇ ಭಗವಂತ ಆಕಾಶದಲ್ಲಿಟ್ಟಿರುವ ದೀಪ ಸೂರ್ಯ, ಇದನ್ನು ಮಾನವನ ಪ್ರೀತ್ಯರ್ಥ ನಭೋಮಂಡಲದ ಅಡ್ಡ ದಿನ ದಿನ ಒಯ್ಯಲಾಗುತ್ತಿದೆ ಎಂದು ಪ್ರಾಮಾಣಿಕವಾಗಿ—ಕಾವ್ಯಾತ್ಮಕವಾಗಿ ಅಲ್ಲ—ನಂಬಿದ್ದಾದರೆ ಅಂಥ ಧೋರಣೆ ವೈಜ್ಞಾನಿಕ ಮನೋಧರ್ಮ ಎನ್ನಿಸದು.

ವೈಜ್ಞಾನಿಕ ಮನೋಧರ್ಮದ ವಿಕಾಸವನ್ನು ಸ್ಥೂಲವಾಗಿ ಪರಿಶೀಲಿಸೋಣ.

ನೈಸರ್ಗಿಕ ಬಲಗಳಾದ ಗುರುತ್ವ, ವಾಯುಮಂಡಲ ಸಂಮರ್ದ, ಹವಾವ್ಯತ್ಯಾಸಗಳು ಮುಂತಾದವು ಮಾನವನನ್ನೂ ಒಳಗೊಂಡಂತೆ ಎಲ್ಲ ಜೀವಿ ಅಜೀವಿಗಳ ಮೇಲೆ ಆಯಾ ಬಲಗಳ ಗುಣಧರ್ಮಾನುಸಾರ ವರ್ತಿಸುತ್ತವೆ. ನಾವೆಲ್ಲರೂ ಈ ಬಲಗಳ ಶಿಶುಗಳು. ಇವುಗಳಿಗೆ ಅನುವರ್ತಿಗಳಾಗಿ ಬಾಳಿದ್ದಾದರೆ ನಮ್ಮ ಬದುಕು ಹಸನಾದೀತು. ಇಲ್ಲವಾದರೆ ಒಂದಲ್ಲ ಒಂದು ದಿನ ನಾವು ಅವುಗಳಿಗೆ ಕೂಳಾಗಿ ನಶಿಸಿಹೋಗುವುದು ಖರೆ. ನೈಸರ್ಗಿಕ ಬಲಗಳು ಮಾನವಾವಲಂಬಿಗಳಲ್ಲ.

ಈಗ, ವ್ಯಕ್ತಿಯ ಜೀವನವನ್ನು ಜನನದಿಂದ ಮರಣದ ತನಕ ಪ್ರಭಾವಿಸಿ ಪರಿವರ್ತಿಸಿ ನಿಯಂತ್ರಿಸಿ ರೂಪಿಸುವ ಮೂರು ಮುಖ್ಯ ಮಾನವಜನ್ಯ ಬಲಗಳಿವೆ : ಪ್ರಭುತ್ವ (authority), ಧರ್ಮ (religion), ವಿಜ್ಞಾನ (science).

ಮೊದಲು ತಂದೆತಾಯಿ, ಮುಂದೆ ಅಧ್ಯಾಪಕರು, ವೃತ್ತಿ ಒದಗಿಸಿದ ಸಂಸ್ಥೆ, ಸರ್ಕಾರ ಹೀಗೆ ಪ್ರಭುತ್ವದ ನಾನಾ ಮುಖಗಳು ಆತನನ್ನು ನಿರ್ದೇಶಿಸುತ್ತಲೇ ಇರುವುವು. ವ್ಯಕ್ತಿ-ವ್ಯಕ್ತಿ ನಡುವಿನ ಅಂತರಕ್ರಿಯೆಯೇ ಪ್ರಭುತ್ವದ ಮೂಲ.

ನಿಸರ್ಗದ ಶಿಶುವಾದ ಮಾನವ ಅದೇ ನಿಸರ್ಗವನ್ನು ಅವಲೋಕಿಸುವಾಗ ಅವನಲ್ಲಿ ಸ್ಫುರಿಸುವ ಭಾವನೆಗಳೇನು ? ತನಗಿಂತ ಅಧಿಕತ್ರಾಣಿಯಾದ ದೈತ್ಯ ಮತ್ತು ದಿವ್ಯ ಚೇತನ ಈ ವಿಶ್ವವನ್ನು ನಿಯಂತ್ರಿಸುತ್ತಿದೆ. ಅದು ಅಗೋಚರ, ಆದರೂ ಸರ್ವಾಂತರ್ಯಾಮಿಯಾಗಿದ್ದು ನೈಸರ್ಗಿಕ ಘಟನೆಗಳ ಮೂಲಕ ತನ್ನ ಸಂದೇಶಗಳನ್ನು ಬಿತ್ತರಿಸುತ್ತಿದೆ. ಇಂಥ ರಾಕ್ಷಸ ಬಲದೆದುರು ಸೆಣಸಿ ತಾನು ಉಳಿಯಲಾರೆ, ಅದಕ್ಕೆ ಶರಣಾಗಿ ಮಾತ್ರ ಬಾಳಬಲ್ಲೆ. ಹೀಗೆ ಭಯಕೃತ್ ಭಯನಾಶನಂ ಭಗವಂತನ ಕಲ್ಪನೆ ಕ್ರಮೇಣ ಮೈದಳೆಯಿತು. ಇದೊಂದು ಮನೋದೈಹಿಕನೈಸರ್ಗಿಕ ಸಂಬಂಧ. ಇದೇ ಧರ್ಮದ ಮೂಲ, ವ್ಯಕ್ತಿ-ಅಜ್ಞಾತ ನಡುವಿನ ಅಂತರಕ್ರಿಯೆಯ ಫಲ.

ವ್ಯಕ್ತಿ-ನಿಸರ್ಗ ನಡುವಿನ ಪ್ರತ್ಯಕ್ಷ ಅಂತರಕ್ರಿಯೆಯೇ ವಿಜ್ಞಾನದ ಸೆಲೆಗೆ ಕಾರಣ. ಹೊಟ್ಟೆ ಹಸಿವಿಗೆ ಶಮನವೇನು ? ಆದಿಮಾನವ ಕಂಡುಕೊಂಡ ಉಪಾಯ ಮರದಿಂದ ಹಣ್ಣು ಬೀಳಿಸಿದ್ದು, ಇಲ್ಲವೇ ಓಡುತ್ತಿದ್ದ ಪ್ರಾಣಿಯನ್ನು ಕೊಂದದ್ದು, ಇತ್ಯಾದಿ. ಈ ಎಲ್ಲ ಕ್ರಿಯೆಗಳಲ್ಲಿಯೂ ಆತ

ನಿಸರ್ಗದ ವಿಧಿನಿಯಮಗಳ ಅನುಸಾರ—ತನ್ನ ಇಷ್ಟಾನಿಷ್ಟ ಪ್ರಕಾರ ಅಲ್ಲ—ವರ್ತಿಸಬೇಕಾಯಿತು. ಪ್ರಭುತ್ವದ ಹುಕುಮ್ಮಿಗೆ ಮಣಿದು ನಿಸರ್ಗ ಅನ್ನ ಉದುರಿಸಲಿಲ್ಲ, ಅಥವಾ ಧರ್ಮದ ಫರ್ಮಾನಿಗೆ ಅಂಜಿ ಹಣ್ಣು ಕೆಡಹಲಿಲ್ಲ; ಅಥವಾ ಮಂತ್ರದಿಂದ ಮಾವಿನಕಾಯಿ ದೊರೆಯಲಿಲ್ಲ.

ಹೀಗೆ, ಸಮಷ್ಟಿಯಾಗಿ ಮಾನವಕುಟುಂಬ ಮತ್ತು ವ್ಯಷ್ಟಿಯಾಗಿ ವ್ಯಕ್ತಿ, ಈ ತ್ರಿಬಲಗಳ ಸೃಷ್ಟಿ ಅಥವ ಸೆರೆಯಾಳುಗಳು : ಪ್ರಭುತ್ವ, ಧರ್ಮ, ವಿಜ್ಞಾನ.

ಪ್ರಭುತ್ವ ಸಾಧಾರಣವಾಗಿ ನಿರಂಕುಶಾಧಿಕಾರದತ್ತ ವಾಲುವುದೇ ನಿಯಮ. ಇತಿಹಾಸದ ಸುದೀರ್ಘ ವ್ಯಾಪ್ತಿಯಲ್ಲಿ ಇದಕ್ಕೆ ಸಮೃದ್ಧ ನಿದರ್ಶನಗಳು ಲಭಿಸುತ್ತವೆ.

ಧರ್ಮದ ತಳಹದಿ ನಂಬಿಕೆ (belief) ಅಥವಾ ಶ್ರದ್ಧೆ : ಋಷಿ, ಸಂತ, ಪ್ರವಾದಿ, ದೇವಮಾನವ, ಪವಾಡಿಗ ಮೊದಲಾದವರಲ್ಲಿ ಅಚಲ ಶ್ರದ್ಧೆ, ಪ್ರಾಚೀನ ಧರ್ಮಗ್ರಂಥಗಳಲ್ಲಿ ಅಪಾರ ನಂಬಿಕೆ, ಪರಂಪರೆ ಒಯ್ದು ತಂದಿರುವ ವಿಧಿ ನಿಷೇಧಗಳಲ್ಲಿ ಅಂಧಶ್ರದ್ಧೆ ಮುಂತಾದವು ಇದರಲ್ಲಿ ನಿಹಿತವಾಗಿವೆ.

ವಿಜ್ಞಾನದ ಬುನಾದಿಯಾದರೋ ವಿಶ್ವಾಸ (faith) ಅಥವಾ ಭರವಸೆ. ಇದು ಕೂಡ ಒಂದು ತೆರನಾದ ಶ್ರದ್ಧೆಯೇ. ಆದರೆ ಇದರ ಮೂಲ ಯಾವ ವ್ಯಕ್ತಿಯೂ ಅಲ್ಲ, ಗ್ರಂಥ ಅಲ್ಲ, ಪಂಥವಂತೂ ಅಲ್ಲವೇ ಅಲ್ಲ—ಸಾಕ್ಷಾತ್ ನಿಸರ್ಗವೇ. ನಿಸರ್ಗದ ವ್ಯವಸ್ಥಿತ ಅಧ್ಯಯನ ಮಾಡಲು ತನ್ನಲ್ಲಿ ಸಾಮರ್ಥ್ಯವಿದೆ ಮತ್ತು ಈ ಅಧ್ಯಯನಫಲವನ್ನು ಪುನಃ ನಿಸರ್ಗಕ್ಕೆ ಅನ್ವಯಿಸಿ ಅದರ ರಹಸ್ಯಗಳನ್ನು ಅರಿಯಬಲ್ಲೆ, ಹಾಗೂ ನಿಸರ್ಗವನ್ನು ಅನುಕರಿಸಿ ನವನಿರ್ಮಾಣಗೈಯಬಲ್ಲೆ ಎಂಬ ಆತ್ಮವಿಶ್ವಾಸ ಇದರ ಘಟಕಗಳು.

ಪ್ರಭುತ್ವ ಮತ್ತು ಧರ್ಮ ಎರಡೂ ಜ್ಞಾತೃನಿಷ್ಠ (subjective) ಬಲಗಳು. ವಿಜ್ಞಾನ ಹೀಗಲ್ಲ, ಇದು ಜ್ಞೇಯನಿಷ್ಠ (objective). ಹೀಗೆ ಮೂಲದಲ್ಲಿಯೇ ಪ್ರಭುತ್ವ ಮತ್ತು ಧರ್ಮ ಒಂದೇ ಗುಂಪಿಗೆ ಸೇರಿದಂಥವು. ವಿಜ್ಞಾನವಾದರೋ ಭಿನ್ನ ಗುಂಪಿನದು. ಈ ಕಾರಣದಿಂದಲೇ ಸರ್ವ ಸಾಧಾರಣವಾಗಿ ಪ್ರಪಂಚಾದ್ಯಂತ ಪ್ರಭುತ್ವ ಮತ್ತು ಧರ್ಮ ಒಂದಾಗಿ ವಿಜ್ಞಾನವನ್ನು ತೊತ್ತಾಗಿ ದುಡಿಸುತ್ತ ಬಂದಿರುವುದು ಕಂಡುಬರುತ್ತದೆ. ನಮ್ಮ ಧರ್ಮನಿರಪೇಕ್ಷ (secular) ಪ್ರಜಾ ಪ್ರಭುತ್ವಾತ್ಮಕ ಸ್ವತಂತ್ರ ಭಾರತದ ಇತಿಹಾಸ ಈ ಹೇಳಿಕೆಗೆ ಒಂದು ಜ್ವಲಂತ ನಿದರ್ಶನ.

ಮೂಲ ಪ್ರೇರಣೆಗಳು ಬೇರೆ ಬೇರೆ ಆದಾಗ ಅನ್ವೇಷಣಮಾರ್ಗಗಳು ಬೇರೆ ಬೇರೆ ಆಗುವುದು ಸಹಜ. ಪ್ರಭುತ್ವವಾಗಲಿ ಧರ್ಮವಾಗಲಿ ತಳದಲ್ಲಿ ಜ್ಞಾತೃನಿಷ್ಠವಾಗಿರುವುದರಿಂದ ಅವುಗಳ ವಿಕಾಸಪಥಗಳಿಗಿಂತ ತೀರ ಬೇರೆಯದೇ ಆದ ವಿಕಾಸಪಥವನ್ನು ವಿಜ್ಞಾನ ರೂಪಿಸಿದೆ. ಇದರಲ್ಲಿ—ಅಂದರೆ, ಮಾನವಮತಿ-ನಿಸರ್ಗನಡುವಿನ ಅಂತರಕ್ರಿಯೆಯ ವಿಕಾಸದಲ್ಲಿ—ನಾವು ಗುರುತಿಸ ಬಹುದಾದ ಮುಖ್ಯ ಸೋಪಾನಗಳಿವು : ನೈಸರ್ಗಿಕ ವಿದ್ಯಮಾನದ ವೀಕ್ಷಣೆ, ಅದರ ಬಗ್ಗೆ ಪ್ರಾಯೋಗಿಕ ಮಾಹಿತಿಗಳ ಸಂಗ್ರಹಣೆ, ಈ ಸಂಗ್ರಹಣೆಯನ್ನು ಆಧರಿಸಿ ಮೂಲ ವಿದ್ಯಮಾನಕ್ಕೆ ಒಪ್ಪುವ ಒಂದು ಬೌದ್ಧಿಕ ಪ್ರತಿರೂಪದ (model) ಮಂಡನೆ, ವಿದ್ಯಮಾನದ ಜೊತೆ ಈ ಪ್ರತಿರೂಪವನ್ನು ಹೋಲಿಸಿ ಇದರ ಸಿಂಧುತ್ವ-ಅಸಿಂಧುತ್ವ ನಿರ್ಧರಣೆ, ಸಿಂಧುವಾದಾಗ ಯುಕ್ತ ಸಿದ್ಧಾಂತದ (theory) ಪ್ರತಿಪಾದನೆ, ಸಿಂಧುವಾಗದಾಗ ಇದೇ ವಿಧಾನ ಅನುಸರಿಸಿ ನವ ಸಿದ್ಧಾಂತದ ಶೋಧನೆ. ಸತ್ಯಾನ್ವೇಷಣೆಗೆ' ವಿಜ್ಞಾನ ಅನುಸರಿಸುವ ಈ ಋಜುಪಥಕ್ಕೆ ವೈಜ್ಞಾನಿಕ ವಿಧಾನವೆಂದು ಹೆಸರು.

ನೈಸರ್ಗಿಕ ವಿದ್ಯಮಾನದ ತಳದಲ್ಲಿರುವ ಕಾರಣ-ಶೋಧನೆ ಇಲ್ಲಿಯ ಉದ್ದೇಶ. ವಿದ್ಯಮಾನ

ವೆಂಬುದು 'ಕಾರ್ಯ.' ಇದು ಪ್ರಕಟವಾಗುತ್ತದೆ. ಇಂದ್ರಿಯಗಮ್ಯವಾಗುತ್ತದೆ. ಮತ್ತು ವೀಕ್ಷಣೆ ಹಾಗೂ ಪ್ರಯೋಗಗಳಿಗೆ ಒದಗುತ್ತದೆ. ಇದರ ಹಿನ್ನೆಲೆಯಲ್ಲಿರುವ 'ಕಾರಣ' ಏನು ? ಇದು ವಿಜ್ಞಾನಿಯ ಎದುರಿರುವ ಸವಾಲು. ಎಂದೇ ಆತ ಅನುಸರಿಸುವ ಮಾರ್ಗವನ್ನು—ವೈಜ್ಞಾನಿಕ ವಿಧಾನವನ್ನು— 'ಕಾರ್ಯ-ಕಾರಣಸಂಬಂಧಾನ್ವೇಷಣೆ' ಎನ್ನುತ್ತೇವೆ.

ಆದ್ದರಿಂದ, ಈ ಹಿಂದೆ ಹೇಳಿದಂತೆ, ಕಾರ್ಯ-ಕಾರಣ ಮಾರ್ಗದಲ್ಲಿ ಸಾಗುವ ವ್ಯಕ್ತಿಯ ಮನಸ್ಸು ತಳೆಯುವ ಸಂತುಲತೆಯೇ (balance) ವೈಜ್ಞಾನಿಕ ಮನೋಧರ್ಮ, ಜ್ಞೇಯನಿಷ್ಠತೆ ಇದರ ಆಧಾರ ಶ್ರುತಿ. ನಮ್ಮ ವ್ಯಾಖ್ಯಾನವನ್ನು ನಿಸರ್ಗ ಒಪ್ಪುವುದೇ ಇಲ್ಲವೇ ಎಂಬುದು ಮಾತ್ರ ಇಲ್ಲಿಯ ನಿರ್ಣಾಯಕ. ಅವರಿವರು ಏನೆಂದರು ಎಂಬುದಲ್ಲ—ಧರ್ಮಗ್ರಂಥವಂತೂ ಇಲ್ಲಿ ಪೂರ್ತಿ ಅಪ್ರಸ್ತುತ.

ವೈಜ್ಞಾನಿಕ ಮನೋಧರ್ಮವು ವೃತ್ತಿವಿಜ್ಞಾನಿಗಳ ಸೊತ್ತಲ್ಲ, ವೃತ್ತಿವಿಜ್ಞಾನಿಗಳಲ್ಲದವರ ಗಗನ ಕುಸುಮವೂ ಅಲ್ಲ. ಬದುಕಿನ ಯಾವುದೇ ಚಟುವಟಿಕೆಯ ತಳದಲ್ಲಿರುವ ಕಾರಣಶೋಧನೆಗೆ ವೈಜ್ಞಾನಿಕವಿಧಾನ ಅನುಸರಿಸುವಾತ ಮತ್ತು ಸತ್ಯಶೋಧನೆಗೆ ಕಾರ್ಯಕಾರಣ ವಿಧಾನವೊಂದೇ ಋಜುಮಾರ್ಗವೆಂದು ಅಂಗೀಕರಿಸಿ ಹಾಗೆ ವರ್ತಿಸುವಾತ ಖಂಡಿತವಾಗಿಯೂ ವೈಜ್ಞಾನಿಕ ಮನೋಧರ್ಮವನ್ನು ರೂಢಿಸಿಕೊಂಡಿರುತ್ತಾನೆ. ಅಂದಮೇಲೆ ತತ್ತ್ವಶಃ, ವೈಜ್ಞಾನಿಕ ಮನೋಧರ್ಮದ ಪರಿಧಿಯಿಂದ ಹೊರಗೆ ಯಾರೂ ಇರಬೇಕಾಗಿಲ್ಲ. ಧಾರ್ಮಿಕ ಮುಖಂಡರೂ ಉದ್ದಾಮ ಪ್ರಭುಗಳೂ ಇದರ ಸೀಮೆಯೊಳಗೆ ಬರುವುದು ಸಾಧ್ಯವಿದೆ. ಆದರೆ ಬರುವರೇ ?

ನಿಸರ್ಗಕ್ಕೆ ಈ ಮಾನವನನ್ನು ಸೃಷ್ಟಿಸುವುದರಲ್ಲಿ ಏನಾದರೂ ಉದ್ದೇಶವಿದ್ದರೆ ಅದು ಆತ ತನ್ನ ಸಕಲ ಸಾಮರ್ಥ್ಯಗಳನ್ನೂ ನೈಸರ್ಗಿಕ ಬಲಗಳಿಗೆ ಅನುವರ್ತಿಯಾಗಿ ಮತ್ತು ಸಾಮಾಜಿಕ ಹಿತಗಳಿಗೆ ಪೋಷಕವಾಗಿ ಬಳಸುತ್ತ ಪೂರ್ಣ ಜೀವನ ನಡೆಸಬೇಕೆಂಬುದು ಮಾತ್ರ. ಇತರ ಜೀವಿಗಳ ಬದುಕನ್ನು ಗಮನಿಸಿದರೆ ಈ ಸಂಗತಿ ಸ್ಪಷ್ಟವಾಗುತ್ತದೆ. ಇಂಥ ಪರಿಪೂರ್ಣ ಜೀವನ ನಡೆಸಲು ಮಾನವನಿಗೆ ಸದಾ ಸಹಕಾರಿಯಾಗಿರುವ ಏಕೈಕ ಉಪಕರಣವೆಂದರೆ ವೈಜ್ಞಾನಿಕ ಮನೋಧರ್ಮ.

ವೇದೋಪನಿಷತ್ ಕಾಲದಲ್ಲಿ ಪ್ರಚಲಿತವಿದ್ದ ನಿಸರ್ಗಬಲಗಳ ಅರ್ಥಪೂರ್ಣ ಉಪಾಸನೆ, ಕರ್ತವ್ಯನಿರ್ವಹಣೆ ಕುರಿತ ಅವಧಾರಣೆ, ಕರ್ಮದಿಂದಲೇ ಶ್ರೇಯಸ್ಸು ಎಂದು ಕ್ರಿಯೆಗೆ ನೀಡಲಾಗಿದ್ದ ಪ್ರಾಧಾನ್ಯ, ಧರ್ಮದ ವ್ಯಾಖ್ಯೆಯಲ್ಲಿ ಅಡಕವಾಗಿದ್ದ ಉದಾರನೀತಿ ಎಲ್ಲವೂ ಮರೆಯಾಗಿ ತದನಂತರದ ಬಲಾಧಿಪತ್ಯ ಕಾಲದ ಪವಾಡಗಳ ಬೆರಗು, ಕರ್ತವ್ಯ ನಿರ್ವಹಿಸದೆಯೂ ಜೀವನ ಫಲಗಳನ್ನು ಗಿಟ್ಟಿಸಬಲ್ಲ ತಂತ್ರ, ಜನರ ಒಳಿತು ಕೆಡಕುಗಳಿಗೆ ಕಾರಣನಾದ ದೇವರು, ಈ ದೇವಾನುಗ್ರಹ ಸಂಪಾದಿಸಲು ಸಲ್ಲಿಸಬೇಕಾದ ಕೈಂಕರ್ಯ ಮುಂತಾದವು ರಂಗಪ್ರವೇಶಿಸಿ ವರ್ತಮಾನ ಜೀವನವನ್ನು ಬಂದಿಳಿಕೆಗಳಂತೆ ಬಿಗಿದಪ್ಪಿಕೊಂಡು ಶೋಷಿಸುತ್ತಿವೆ. ಇಂಥಲ್ಲಿ ವೈಜ್ಞಾನಿಕ ಮನೋಧರ್ಮ ವಿಕಸಿಸುವುದು ಹೇಗೆ ತಾನೇ ಸಾಧ್ಯ ?

ವೈಜ್ಞಾನಿಕ ಮನೋಧರ್ಮದ ಪ್ರಥಮ ಹಾಗೂ ಪ್ರಬಲ ಶತ್ರು ಜನರಿಂದ ಲಂಚ ಪಡೆದು ಅವರಿಗೆ ಕೋರಿದ ವರಗಳನ್ನು ಕರುಣಿಸುವ 'ದೇವರು.' ಮಾನವಸೃಷ್ಟಿಯಾದ ಮತ್ತು ಸ್ವಾರ್ಥಾತೀತನಲ್ಲದ ಈ 'ದೇವರ' ಸುತ್ತ ಗುರು, ಮಠ, ಮಂದಿರ, ಜಾತಿ, ಮತ, ಅಂಧಶ್ರದ್ಧೆ ಮುಂತಾದ ವಿಗತಿಗಾಮಿ ಬಲಗಳೆಲ್ಲವೂ ನೇಯ್ದುಕೊಂಡು ಬದುಕನ್ನು ಕಳ್ಳಹಾದಿಯಲ್ಲಿ ತಳ್ಳಿಕೊಂಡು ಹೋಗುತ್ತಿವೆ. ವೈಜ್ಞಾನಿಕ ಮನೋಧರ್ಮದ ತಾಯಿ ಬೇರಿಗೆ ಹಿಡಿದಿರುವ ಗೆದ್ದಲು ಈ 'ದೇವರು.' ರೂಪ, ಗುಣ, ಭಾವನೆ, ಲಹರಿ, ಸಂತೋಷ, ದುಃಖ, ಕೋಪ, ಮತ್ಸರ ಕಾಮ ಮುಂತಾದ ಸಕಲ

ಮಾನವೀಯ ಸದ್ಗುಣ ದುರ್ಗುಣಗಳಿಂದ ಬಾಧಿತನಾಗಿರುವ, ಜನರ ಅದೃಷ್ಟದ ಜೊತೆ ಚಕ್ಕಂದ ವಾಡುತ್ತಿರುವ, ಮತ್ತು ಅವರಲ್ಲಿ ನಿಷ್ಕ್ರಿಯತೆ ಪ್ರಚೋದಿಸುತ್ತಿರುವ ಈ ವಿಕರ್ಷಕ 'ದೇವರ'ನ್ನು ನಿವಾರಿಸಿದ ವಿನಾ ವೈಜ್ಞಾನಿಕ ಮನೋಧರ್ಮ ಅಭಿವರ್ಧಿಸದು.

ಅದು ಅಭಿವರ್ಧಿಸದಿದ್ದರೇನು ನಷ್ಟ ?

ಆಗ ವ್ಯಕ್ತಿಯ ಜೀವನ ನಿಷ್ಕ್ರಿಯವಾಗುತ್ತದೆ; ಸಾಮರ್ಥ್ಯವು ಪೂರ್ಣವಾಗಿ ವಿಕಸಿಸುವುದಿಲ್ಲ ; ವ್ಯಕ್ತಿತ್ವ ಅದು ಏರಬಲ್ಲ ಮಟ್ಟಕ್ಕೆ ಏರುವುದಿಲ್ಲ ; ಮಿಗಿಲಾಗಿ ನಿಸರ್ಗದ ಉದ್ದೇಶಕ್ಕೆ ಅನುಗುಣ ವಾಗಿ ಆತ ಬಾಳಿರುವುದಿಲ್ಲ ; ಆದ್ದರಿಂದ ಜೀವನದ ಸುಖ ಸ್ಫೂರ್ತಿ ಸಂತೋಷಗಳಿಂದ ವಂಚಿತ ನಾಗಿರುತ್ತಾನೆ. ಮನುಷ್ಯನ ಬದುಕು ಬಾಳೇಮರದ ಅಕಶೇರುಕ ಸೊಪ್ಪು ಬಾಳ್ವೆ ಆಗಬಾರದು !

ಬದುಕಿಗೊಂದು ನಂಬಿಕೆ ಬೇಕು, ಶ್ರದ್ಧೆ ಬೇಕು ನಿಜ. ಆದರೆ ಈ ನಂಬಿಕೆ ಶ್ರದ್ಧೆಗಳು, ಬದುಕು ರೂಪುಗೊಳ್ಳಲು ಕಾರಣವಾಗಿರುವ ವಿಶ್ವವನ್ನು ಕುರಿತದ್ದಾಗಿರಬೇಕೇ ವಿನಾ ಒಳದಾರಿ ಸೂಚಿಸುವ ಪವಾಡಪುರುಷ ದೇವರನ್ನು ಕುರಿತದ್ದಾಗಿರಬಾರದು. ದೇವರ ಬಗ್ಗೆ ಐನ್‌ಸ್ಟೈನ್ ಹೇಳಿರುವ ಈ ಮುಂದಿನ ಮಾತು ಮನನೀಯವಾಗಿದೆ :"ವೈಯಕ್ತಿಕ ದೇವರ ಬಗೆಗಿನ ಭಾವನೆ ಮಾನವಶಾಸ್ತ್ರೀಯ ವೆಂದು ನನಗನ್ನಿಸುತ್ತದೆ. ನಾನೇನೂ ಇದನ್ನು ಗಂಭೀರವಾಗಿ ಸ್ವೀಕರಿಸಲಾರೆ. ಮಾನವಪ್ರಜ್ಞೆಯ ಹೊರಗೆ ಯಾವುದೋ ಮನಸ್ಸು ಅಥವಾ ಉದ್ದೇಶ ಇದೆಯೆಂದು ಊಹಿಸುವುದು ಕೂಡ ನನಗೆ ಸಾಧ್ಯವಾಗದು. ನನ್ನ ಅಭಿಪ್ರಾಯ ಸ್ಪಿನೋಝನ ಅಭಿಪ್ರಾಯಕ್ಕೆ ಸಮೀಪವಾದದ್ದು : ನಾವು ನಿವೇದಿತರಾಗಿ, ಅಲ್ಲಿಯೂ ಅಪರಿಪೂರ್ಣವಾಗಿ ಮಾತ್ರ, ಗ್ರಹಿಸಬಹುದಾದ ಕ್ರಮ ಮತ್ತು ಸುಸಾಂಗತ್ಯದಲ್ಲಿ ನಂಬಿಕೆ, ಮತ್ತು ಇದರ ಸೌಂದರ್ಯದ ಬಗ್ಗೆ ಮೆಚ್ಚುಗೆ. ನಮ್ಮ ಅಪರಿಪೂರ್ಣ ಜ್ಞಾನ ಮತ್ತು ಅಪಕ್ವ ತಿಳಿವಳಿಕೆಯಿಂದಲೇ ನಾವು ತೃಪ್ತರಾಗಿದ್ದುಕೊಂಡು ಮೌಲ್ಯಗಳನ್ನೂ ನೈತಿಕ ಹೊಣೆಗಳನ್ನೂ ಕೇವಲ ಮಾನವಸಮಸ್ಯೆ ಎಂಬುದಾಗಿ ಪರಿಗಣಿಸಬೇಕೆಂದು ಭಾವಿಸಿದ್ದೇನೆ. ಈ ಸಮಸ್ಯೆ ಎಲ್ಲ ಮಾನವಸಮಸ್ಯೆಗಳ ಪೈಕಿ ಅತಿ ಮುಖ್ಯವಾದದ್ದು. ವಿಶ್ವದ ನಿಗೂಢತೆ ಒದಗಿಸುವ ರಸಾನುಭವವೇ ಅತ್ಯಂತ ಸುಂದರವಾದದ್ದು. ಇದೇ ನಿಜವಾದ ಎಲ್ಲ ಕಲೆ ಮತ್ತು ವಿಜ್ಞಾನಗಳ ಆಕರ. ಯಾರಿಗೆ ಈ ಅನುಭವ ಪರಕೀಯ ಎನ್ನಿಸುವುದೋ ಯಾರು ನಿಗೂಢತೆಯ ಎದುರು ಮೂಕವಿಸ್ಮಯದಿಂದ ಬೆಕ್ಕಸಬೆರಗಾಗಿ ನಿಂತು ಕಣ್ಣರಳಿಸಲಾರರೋ ಅವರು ಇದ್ದೂ ಸತ್ತಂತೆಯೇ—ಅವರ ಕಂಗಳು ಇಂಗಿಹೋಗಿರುತ್ತವೆ. ಅತ್ಯುತ್ಕೃಷ್ಟ ಜ್ಞಾನವಾಗಿಯೂ ಪರಮೋಜ್ಜ್ವಲ ಸೌಂದರ್ಯವಾಗಿಯೂ ಪ್ರಕಟವಾಗುವ ಗಮ್ಯಾತೀತ ಪದಾರ್ಥವೊಂದುಂಟು. ನಮ್ಮ ಮಂದಸಂವೇದನೆಗಳು ಇದನ್ನು ಇದರ ಅತ್ಯಂತ ಆದಿಮರೂಪಗಳಲ್ಲಿ ಮಾತ್ರ ಗ್ರಹಿಸಬಲ್ಲವು ಎಂಬುದನ್ನು ಅರಿಯುವುದೇ—ಈ ತಿಳಿವಳಿಕೆ, ಈ ಭಾವನೆ ನಿಜವಾದ ಧಾರ್ಮಿಕತೆಯ ತಿರುಳು. ಈ ಅರ್ಥದಲ್ಲಿ, ಈ ಅರ್ಥದಲ್ಲಿ ಮಾತ್ರ, ನಾನು ಶ್ರದ್ಧಾವಂತ ಧಾರ್ಮಿಕ ವ್ಯಕ್ತಿಗಳ ಸಾಲಿಗೆ ಸೇರಿದವನಾಗಿದ್ದೇನೆ."

ಸ್ವಾಮಿ ವಿವೇಕಾನಂದರು (೧೮೬೩-೧೯೦೨) ದೇವರ ಬಗ್ಗೆ ಹೇಳಿರುವ ಮಾತು ಗಮನಾರ್ಹ ವಾಗಿದೆ : "'ವೇದಾಂತ' ಎನ್ನುವ ಪದ 'ವೇದ'ದಿಂದ ಬರುತ್ತದೆ. ವೇದವೆಂದರೆ ಜ್ಞಾನ. ಎಲ್ಲ ಜ್ಞಾನವೂ ವೇದ. ಇದು ಅನಂತ, ದೇವರಂತೆ. ನಮ್ಮ ದೇಶದಲ್ಲಿ ವೇದ ಪಠಿಸುವಾತನ ಮುಂದೆ ಮೊಣಕಾಲು ಬಗ್ಗಿಸಿ ತಗ್ಗಿ ನಡೆಯುತ್ತೇವೆ. ಈ ವರ್ತನೆ ಕುರುಡು ನಂಬಿಕೆ. ಇದು ಎಂದೂ ವೇದಾಂತವಾಗದು. ಬದಲು ಶುದ್ಧಾಂಗ ಐಹಿಕಲಾಲಸೆ. ದೇವರಲ್ಲಿ ಪ್ರತಿಯೊಂದು ಜ್ಞಾನವೂ ಪವಿತ್ರ, ಜ್ಞಾನವೇ ದೇವರು."

ಇನ್ನೊಂದು ಉದಾಹರಣೆ ಬುದ್ಧನನ್ನು ಕುರಿತದ್ದು.

ಒಬ್ಬ ಪಂಡಿತ ಬುದ್ಧನಿಗೆ ಹೇಳಿದ, "ಗುರುವೇ ! ನೀನು ಬೋಧಿಸುತ್ತಿರುವ ಸೂಕ್ತಿಗಳು ಧರ್ಮಗ್ರಂಥಗಳಲ್ಲಿಲ್ಲ."

ಬುದ್ಧ ನುಡಿದ, "ಹಾಗಾದರೆ ಅವನ್ನು ಅಲ್ಲಿ ಅಳವಡಿಸು."

ಪಂಡಿತನಿಗೆ ತುಂಬ ಮುಜಗರವಾಯಿತು. ತುಸುಕಾಲ ತಡೆದು ಅಳುಕಿನಿಂದ ಹೇಳಿದ, "ಗುರುವೇ ! ನಾನೊಂದು ಅರಿಕೆ ಸಲ್ಲಿಸಲೇ ? ನೀನು ಬೋಧಿಸುತ್ತಿರುವ ಕೆಲವೊಂದು ಸೂಕ್ತಿಗಳು ಧರ್ಮಗ್ರಂಥಗಳಲ್ಲಿ ಉಕ್ತವಾಗಿರುವವನ್ನು ವಿರೋಧಿಸುತ್ತವೆ."

ಬುದ್ಧ ಸಮಾರೋಪಿಸಿದ, "ಹಾಗಾದರೆ ಧರ್ಮಗ್ರಂಥಗಳಿಗೆ ತಿದ್ದುಪಡಿ ಅಗತ್ಯ."

ಜೀಸಸ್ ಕ್ರೈಸ್ತನ ಸುತ್ತ ಹೆಣೆದಿರುವ ಉದಾಹರಣೆ :

ಪ್ರಪಂಚದ ಸಕಲ ಮತಧರ್ಮಗಳ ಸಮಸ್ತ ಧರ್ಮಗ್ರಂಥಗಳನ್ನೂ ಪುನಾರೂಪಿಸಬೇಕೆಂಬ ಸಲಹೆಯನ್ನು ವಿಶ್ವಸಂಸ್ಥೆಯಲ್ಲಿ (United Nations) ಮಂಡಿಸಲಾಯಿತು. ಪರಧರ್ಮ ಅಸಹಿಷ್ಣುತೆಗೆ ಅಥವಾ ಕ್ರೌರ್ಯಕ್ಕೆ ಇಂಬುಗೊಡುವ ಎಲ್ಲವನ್ನೂ ಅವುಗಳಿಂದ ನಿವಾರಿಸಬೇಕು; ವ್ಯಕ್ತಿಯ ಘನತೆಗೆ ಮಾರಕವಾಗುವ ಸಮಸ್ತವನ್ನೂ ನಾಶಗೊಳಿಸಬೇಕು.

ಈ ಸಲಹೆಯ ಮಂಡನಕಾರ ಜೀಸಸ್ ಕ್ರೈಸ್ಟ್ ಎಂದು ತಿಳಿದುಬಂದಾಗ ವರದಿಗಾರರು ಆತನ ನಿವಾಸಕ್ಕೆ ಧಾವಿಸಿದರು. ಆತನ ವಿವರಣೆ ತೀರ ಸರಳವಾಗಿತ್ತು, "ವ್ರತದಂತೆ ಧರ್ಮಗ್ರಂಥವೂ ಮಾನವನಿಗಾಗಿ ಇರುವಂಥದು, ಧರ್ಮಗ್ರಂಥಕ್ಕಾಗಿ ಮಾನವ ಅಲ್ಲ."

ಇವೆರಡು ಉದಾಹರಣೆಗಳನ್ನು Rev Anthony de Mello, SJ ಬರೆದಿರುವ *The Song of the Bird* ಪುಸ್ತಕದಿಂದ ಉದ್ಧರಿಸಲಾಗಿದೆ.

ಇಲ್ಲಿಯವರೆಗಿನ ವಿವರಣೆ ವ್ಯಾಖ್ಯಾನಗಳಿಂದ ಅನುಗತವಾಗುವ ಸಂಗತಿಗಳು ಮೂರು :

ದೇವರೆಂದರೆ ವಿಶ್ವ. ಅದು ನಿಸರ್ಗ, ವಿಶ್ವಾಂತರ್ಗತ ಸೌಂದರ್ಯ. ವಿಶ್ವದ ಬಗೆಗಿನ ಜ್ಞಾನ ಅಥವಾ ವೇದವೇ ದೇವರು. ಮಾನವನ, ಅಥವಾ ವ್ಯಾಪಕವಾಗಿ ವಿಶ್ವದ, ಸ್ಥಿತಿಗತಿಗಳನ್ನು ಸ್ವಂತೇಚ್ಛಾನುಸಾರ ನಡೆಸುವ ಅತಿ ಬೃಹತ್ ಪ್ರಾಣಿ ಅಲ್ಲ ದೇವರು.

ವಿಶ್ವದ ಬಗೆಗಿನ ಅರಿವು ಮಾನವನಿಗೆ ಬರಲು ಆತ ಅನುಸರಿಸಬಹುದಾದ ಏಕೈಕ, ಮಾರ್ಗವೆಂದರೆ ವೈಜ್ಞಾನಿಕ ವಿಧಾನ. ಮಾನವನ ಎಲ್ಲ ಚಟುವಟಿಕೆಗಳನ್ನೂ—ಕೇವಲ ನಿಸರ್ಗದೊಂದಿಗಿನ ಅಂತರಕ್ರಿಯೆಯೊಂದರಲ್ಲಿ ಅಲ್ಲ, ಇಲ್ಲಿ ಹೇಗೂ ಇದು ಕಡ್ಡಾಯ—ವೈಜ್ಞಾನಿಕ ವಿಧಾನ ರೀತ್ಯ ವಿಶ್ಲೇಷಿಸಿ ತಿಳಿಯುವುದು ಅಥವಾ ನಿಯಂತ್ರಿಸುವುದು ಸಾಧ್ಯ. ವೈಜ್ಞಾನಿಕ ವಿಧಾನದ ಹೊರಗೆ ಯಾವ ವಿಧಾನವೂ ಇರಬೇಕಾಗಿಲ್ಲ; ಇದ್ದರೆ ಅದು ಬುದ್ಧಿ ಮೌಢ್ಯಕ್ಕೆ ಕುರುಡುನಂಬಿಕೆಗೆ ವಾಮಮಾರ್ಗಕ್ಕೆ ಇತ್ಯಾದಿ ಕಾರಣವಾಗುತ್ತದೆ. ಎಂದೇ ಅದು ಸರ್ವಥಾ ವರ್ಜ್ಯ.

ವೈಜ್ಞಾನಿಕ ವಿಧಾನ ಮಾನವ ಮನಸ್ಸಿಗೆ ನೀಡುವ ಹದ ಅಥವಾ ಸ್ಥಿತಪ್ರಜ್ಞೆಯೇ ವೈಜ್ಞಾನಿಕ ಮನೋಧರ್ಮ. ವಿವೇಚನಸಾಮರ್ಥ್ಯವಿರುವ ಪ್ರತಿಯೊಬ್ಬ ವ್ಯಕ್ತಿಯೂ ಇದನ್ನು ತನ್ನ ಬಾಳ ಉಸಿರಾಗಿ ಮಾಡಿಕೊಳ್ಳುವುದು ಸಾಧ್ಯ. ಹಾಗೆ ಮಾಡಿಕೊಂಡಾಗ ಮಾತ್ರ ಆತ ಮನಃಸ್ವಾಸ್ಥ್ಯ ಒದಗಿಸುವ ಆನಂದ ಗಳಿಸಿರುತ್ತಾನೆ.

ಧರ್ಮರಹಿತ ಪ್ರಭುತ್ವ ಪಾಶವೀಯತೆ
ಧರ್ಮರಹಿತ ವಿಜ್ಞಾನ ಅಮಾನವೀಯತೆ
ಪ್ರಭುತ್ವರಹಿತ ವಿಜ್ಞಾನ ನಿರಂಕುಶತೆ

ಪ್ರಭುತ್ವರಹಿತ ಧರ್ಮ ಭ್ರಷ್ಟತೆ
ವಿಜ್ಞಾನರಹಿತ ಧರ್ಮ ಅಂಧತೆ
ವಿಜ್ಞಾನರಹಿತ ಪ್ರಭುತ್ವ ಅರಾಜಕತೆ

ಐನ್‌ಸ್ಟೈನರ ಪ್ರಸಿದ್ಧ ಹೇಳಿಕೆ : ಧರ್ಮರಹಿತ ವಿಜ್ಞಾನ ಪಂಗು, ವಿಜ್ಞಾನರಹಿತ ಧರ್ಮ ಅಂಧ. ಧರ್ಮ-ಪ್ರಭುತ್ವ-ವಿಜ್ಞಾನ ಸಮನ್ವಯವೇ ವೈಜ್ಞಾನಿಕ ಮನೋಧರ್ಮ, ಪ್ರೀತಿನೀತಿಗಳ ಮಧುರ ಸಂಬಂಧ ಹಾಗೂ ಮಾನವ ಕಲ್ಯಾಣದ ಭದ್ರ ಬುನಾದಿ.

ವೈಜ್ಞಾನಿಕ ಮನೋಧರ್ಮ ನಿರ್ವಹಿಸುವ ಯಾವುದೇ ಉದ್ಯಮದಲ್ಲಿ ಪಂಚಶೀಲಗಳು ಸದಾ ಪರಸ್ಪರ ಪೂರಕ ಪೋಷಕವಾಗಿ ಕ್ರಿಯಾಶೀಲವಾಗಿರುತ್ತವೆ : ನೈತಿಕತೆ (ethics), ಮಗ್ನತೆ (involvement), ಪಾರದರ್ಶಕತೆ (transparency), ಉತ್ಕೃಷ್ಟತೆ (excellence), ಮತ್ತು ಉತ್ತರದಾಯಿತ್ವ (accountability).

ನೈತಿಕತೆ ತಳದಲ್ಲಿ ಸಾವಧಾನತೆ ಪಾರದರ್ಶಕತೆ
ಉತ್ಕೃಷ್ಟತಾನುಶೀಲನೆ ನಡುವೆ ಮತ್ತೆ ಉ-
ತ್ತರದಾಯಿತೆಯನನುಸರಿಸುವವನ ಬದುಕು ಬಂ-
ಗಾರ ನುಡಿ ಸಿಂಗಾರ ಪರಮಸುಖಿ ಅತ್ರಿಸೂನು

## ಅನುಬಂಧ ೩

# ವಿಜ್ಞಾನ ಮತ್ತು ಧರ್ಮ

ಆಲ್ಬರ್ಟ್ ಐನ್‌ಸ್ಟೈನ್ ಬರೆದಿರುವ ಎರಡು ಲೇಖನಗಳು. ಮೊದಲನೆಯದನ್ನು ೧೯೩೯ ರಲ್ಲೂ ಎರಡನೆಯದನ್ನು ೧೯೫೦ರಲ್ಲೂ ಪ್ರಕಟಿಸಲಾಯಿತು.

೧

ಅರಿವು ಮತ್ತು ನಂಬಿಕೆ ನಡುವೆ ರಾಜಿ ಏರ್ಪಡದಂಥ ಸಂಘರ್ಷವಿದೆಯೆಂಬ ಭಾವನೆ ಹಿಂದಿನ ಮತ್ತು ಭಾಗಶಃ ಅದರ ಹಿಂದಿನ ಶತಮಾನದಲ್ಲಿ ಪ್ರಚಲಿತವಾಗಿತ್ತು. ನಂಬಿಕೆಯ ಸ್ಥಾನದಲ್ಲಿ ಅರಿವನ್ನು ಹೆಚ್ಚುಹೆಚ್ಚಾಗಿ ಪ್ರತಿಸ್ಥಾಪಿಸಬೇಕಾದ ಕಾಲ ಬಂದಿದೆ. ಅರಿವಿನ ಮೇಲೆ ನಿಂತಿರದ ನಂಬಿಕೆ ಅಂಧಶ್ರದ್ಧೆ. ಎಂದೇ ಇದನ್ನು ವಿರೋಧಿಸತಕ್ಕದ್ದು ಎಂಬ ಅಭಿಪ್ರಾಯ ಪ್ರಬುದ್ಧಮತಿಗಳಲ್ಲಿ ರೂಢವಾಗಿತ್ತು. ಈ ಪರಿಕಲ್ಪನೆಯ ಪ್ರಕಾರ ಶಿಕ್ಷಣದ ಏಕೈಕ ಉದ್ದೇಶ ಯೋಚನೆ ಮಾಡುವುದರ ಮತ್ತು ಅರಿವು ಗಳಿಸುವುದರ ಕಡೆಗೆ ಹಾದಿ ತೋರಿಸುವುದು ಮಾತ್ರ ; ಮತ್ತು ಜನಶಿಕ್ಷಣದ ಪ್ರಮುಖೋಪಕರಣವಾದ ಶಾಲೆ ಈ ಉದ್ದೇಶವೊಂದನ್ನೇ ಈಡೇರಿಸಬೇಕು. (ಅರಿವೇ ಬೆಳಕು, ಗುರು, ಮಾರ್ಗ.)

ವೈಚಾರಿಕ ನಿಲವು ಇಷ್ಟು ಒಡ್ಡೊಡ್ಡಾಗಿ ಪ್ರಕಟವಾಗಿದ್ದರೆ ಅದು ವಿರಳಾತಿವಿರಳ. ಏಕೆಂದರೆ ಈ ನಿಲವನ್ನು ಕುರಿತ ಇಂಥ ಹೇಳಿಕೆ ಎಷ್ಟು ಏಕಪಕ್ಷೀಯವಾಗಿದೆಯೆಂಬುದು ಸೂಕ್ಷ್ಮಮತಿ ಯಾರಿಗೂ ಥಟ್ಟನೆ ಹೊಳೆಯದಿರದು. ಆದರೆ ತನ್ನ ವಾದದ ಸ್ವರೂಪ ಕುರಿತಂತೆ ಮನವನ್ನು ತಿಳಿಯಾಗಿಡಲು ಬಳಸುವಾತ ಅದನ್ನು (ವಾದ) ಇಷ್ಟು ನಿರ್ದುಷ್ಟವಾಗಿಯೂ ಪಾರಕವಾಗಿಯೂ (transparent) ನಿರೂಪಿಸುವುದು ತೀರ ಅಗತ್ಯ.

ಅನುಭವ ಮತ್ತು ಖಚಿತ ಚಿಂತನೆ ನಿಶ್ಚಿತಾಭಿಪ್ರಾಯಗಳಿಗೆ ಭದ್ರ ಬುನಾದಿ ಒದಗಿಸುವುದು ನಿಜ. ಈ ಅಂಶ ಕುರಿತಂತೆ ನಾವು ಉಗ್ರ ವಿಚಾರವಾದಿಯೊಂದಿಗೆ ನಿಸ್ಸಂದಿಗ್ಧವಾಗಿ ಸಹಮತ ರಾಗಲೇಬೇಕಾಗುತ್ತದೆ. ಆದರೆ ನಮ್ಮ ನಡವಳಿಕೆ ಮತ್ತು ವಿವೇಚನೆ ಕುರಿತಂತೆ ಅವಶ್ಯವೂ ನಿರ್ಣಾಯಕವೂ ಆಗುವ ನಿಶ್ಚಿತಾಭಿಪ್ರಾಯಗಳನ್ನು ಈ ಭದ್ರ ವೈಜ್ಞಾನಿಕ ಮಾರ್ಗವೊಂದರಲ್ಲಿಯೇ ಕಾಣಲಾಗುವುದಿಲ್ಲವೆಂಬುದು ಆತನ ಪರಿಕಲ್ಪನೆಯಲ್ಲಿಯ ದುರ್ಬಲ ಅಂಶ.

ಏಕೆಂದರೆ, ಸಂಗತಿಗಳು ಪರಸ್ಪರ ಹೇಗೆ ಸಂಬಂಧಿತವಾಗಿವೆ, ಮತ್ತು ಒಂದು ಇನ್ನೊಂದರಿಂದ ಪ್ರಭಾವಿತವಾಗಿದೆ ಎನ್ನುವುದಕ್ಕಿಂತ ಆಚೆಗೆ ಏನನ್ನೂ ವೈಜ್ಞಾನಿಕ ವಿಧಾನ ಕಲಿಸದು. ಇಂಥ ಒಂದು ಜ್ಞೇಯನಿಷ್ಠ ಜ್ಞಾನದೆಡೆಗಿನ ವಾಂಛೆ ಮಾನವಸಾಧ್ಯ ಪರಮೋನ್ನತಮತಿಗಳಿಗೆ ಮಾತ್ರ ಮೀಸಲು. ಅಂದಮಾತ್ರಕ್ಕೆ ಈ ವಲಯದಲ್ಲಿ ಮಾನವನ ಸಾಧನೆಗಳನ್ನೂ ಧೀರ ಪ್ರಯತ್ನಗಳನ್ನೂ ಕಿರಿದು ಗೊಳಿಸಲು ಪ್ರಯತ್ನಿಸುತ್ತಿರುವೆನೆಂದೇನೂ ಸಂದೇಹಿಸಬೇಕಾಗಿಲ್ಲ. ಇಂತಿದ್ದರೂ ಏನು ಇದೆ ಎನ್ನುವುದರ ಅರಿವು ಏನು ಇರತಕ್ಕದ್ದು ಎನ್ನುವುದರೆಡೆಗೆ ನೇರವಾಗಿ ಕದ ತೆರೆಯದು ಎನ್ನುವುದು ಕೂಡ ಅಷ್ಟೇ ಸ್ಪಷ್ಟ. ಏನು ಇದೆ ಕುರಿತು ಒಬ್ಬನಿಗೆ ಸ್ಫುಟ ಮತ್ತು ಪರಿಪೂರ್ಣ ಜ್ಞಾನವಿರುವುದು ಶಕ್ಯ. ಆದರೂ ಮಾನವ ವಾಂಛೆಗಳ ಗಮ್ಯ ಏನಿರತಕ್ಕದ್ದು ಎನ್ನುವುದನ್ನು ಇದರಿಂದ ಆತ ಊಹಿಸಲಾರ. ಆದರೆ ಸ್ವತಃ ಪರಮಾಂತಿಮ ಗಮ್ಯ ಮತ್ತು ಅದನ್ನು ಐದಬೇಕೆಂಬ ಹಂಬಲ ಬೇರೆ ಒಂದು ಆಕರದಿಂದ ಬರತಕ್ಕದ್ದು. ನಮ್ಮ ಅಸ್ತಿತ್ವ ಮತ್ತು ಚಟುವಟಿಕೆ ಇಂಥ ಒಂದು ಗಮ್ಯ ಮತ್ತು ಸಂವಾದೀ ಮೌಲ್ಯಗಳ ಮಂಡನೆಯಿಂದ ಮಾತ್ರ ಅರ್ಥ ಪಡೆಯುತ್ತವೆಂಬ ನಿಲವನ್ನು ಪ್ರತಿಪಾದಿಸುವ ಅಗತ್ಯವಿಲ್ಲವೆಂದು ಕಾಣುತ್ತದೆ. ಸತ್ಯದ ಜ್ಞಾನ ಅದರಷ್ಟಕ್ಕೆ ಅದ್ಭುತ ನಿಜ. ಆದರೆ ಈ ದಿಶೆಯಲ್ಲಿ ಸ್ವತಃ ಅದೇ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಲು ಎಷ್ಟು ಅಸಮರ್ಥವಾಗಿದೆಯೆಂದರೆ ಖುದ್ದು ಸತ್ಯದ ಜ್ಞಾನದೆಡೆಗಿನ ವಾಂಛೆ ನ್ಯಾಯಸಮ್ಮತವಾಗಿದೆ ಮತ್ತು ಮೌಲ್ಯಯುತವಾಗಿದೆ ಎಂದು ಕೂಡ ಅದಕ್ಕೆ ರುಜುವಾತಿಸಲಾಗುವುದಿಲ್ಲ. ಹೀಗೆ ಇಲ್ಲಿ ನಾವು ನಮ್ಮ ಅಸ್ತಿತ್ವ ಕುರಿತಂತೆ ಶುದ್ಧ ವೈಚಾರಿಕ ಪರಿಕಲ್ಪನೆಯ ಪರಿಮಿತಿಗಳನ್ನೇ ಕಾಣುತ್ತೇವೆ.

ಅಂದಮಾತ್ರಕ್ಕೆ ಗಮ್ಯವನ್ನೂ ನೈತಿಕ ವಿವೇಚನೆಗಳನ್ನೂ ರೂಪಿಸುವುದರಲ್ಲಿ ಧೀಮಂತ ಚಿಂತನೆ ವಹಿಸಬಲ್ಲ ಪಾತ್ರ ಏನೂ ಇಲ್ಲವೆಂದು ತಿಳಿಯಬಾರದು. ನಿರ್ದಿಷ್ಟ ಗುರಿಸಾಧನೆಗೆ ನಿರ್ದಿಷ್ಟ ದಾರಿ ಉಪಯುಕ್ತವೆಂದು ಒಬ್ಬಾತನಿಗೆ ಹೊಳೆದಾಗ, ಆ ಕಾರಣದಿಂದ ಸ್ವತಃ ಆ ದಾರಿಯೇ ಒಂದು ಗುರಿ ಆಗುತ್ತದೆ. ದಾರಿ-ಗುರಿ ಅಂತರಸಂಬಂಧವನ್ನು ಧೀಮಂತಿಕೆ ನಮಗೆ ಸ್ಪಷ್ಟಪಡಿಸುತ್ತದೆ. ಆದರೆ ಚಿಂತನೆಯೊಂದರಿಂದಲೇ ನಮಗೆ ಪರಮಾಂತಿಮ ಮತ್ತು ಮೂಲ ಭೂತ ಗುರಿಗಳ ಅರಿವು ಲಭಿಸದು. ಈ ಮೂಲಭೂತ ಗುರಿಗಳನ್ನೂ ಮೌಲ್ಯಮಾಪನೆಗಳನ್ನೂ ಖಚಿತಗೊಳಿಸಿ ಅವನ್ನು ವ್ಯಕ್ತಿಯ ಭಾವನಾತ್ಮಕ ಜೀವನದಲ್ಲಿ ಸ್ಥಾಪಿಸುವುದೇ ಧರ್ಮ ನಿಜಕ್ಕೂ ಮಾನವನ ಸಾಮಾಜಿಕ ಜೀವನದಲ್ಲಿ ನಿರ್ವಹಿಸಬೇಕಾದ ಅತ್ಯಂತ ಪ್ರಮುಖ ಪಾತ್ರವೆಂದು ನನಗನ್ನಿಸುತ್ತದೆ. ಇಂಥ ಗುರಿಗಳನ್ನು ತರ್ಕವೊಂದರಿಂದಲೇ ನಿರೂಪಿಸುವುದು ಇಲ್ಲವೇ ಸಮರ್ಥಿಸುವುದು ಸಾಧ್ಯವಾಗದ್ದರಿಂದ ಅವುಗಳಿಗೆ ಅಧಿಕಾರವೆಲ್ಲಿಂದ ಪ್ರಾಪ್ತವಾಗುವುದೆಂದು ಒಬ್ಬಾತ ಪ್ರಶ್ನಿಸಿದರೆ ಉತ್ತರ ಕೊಡಬಹುದು, ಅಷ್ಟೆ : ಅವು ಆರೋಗ್ಯವಂತ ಸಮಾಜದಲ್ಲಿ ವ್ಯಕ್ತಿಗಳ ನಡತೆ, ವಾಂಛೆ ಮತ್ತು ವಿವೇಚನೆಗಳನ್ನು ಪ್ರಭಾವಿಸುವ ಬಲಿಷ್ಠ ಪರಂಪರೆಗಳಾಗಿ ಮತ್ತು ಅವುಗಳ ಇರವಿಗೆ ಸಮರ್ಥನೆ ಕೊಡುವ ಅಗತ್ಯವಿರದಂತೆ ಜೀವಂತವಾಗಿ ವರ್ತಿಸುತ್ತಿರುವುವು—ಪ್ರತ್ಯಕ್ಷ ಪ್ರದರ್ಶನದ ಮೂಲಕ ಅವು ಮೈದಳೆಯುವುದಿಲ್ಲ. ಬದಲು, ಸಮರ್ಥ ವ್ಯಕ್ತಿತ್ವಗಳನ್ನು

ಮಾಧ್ಯಮಗಳಾಗಿ ಬಳಸಿಕೊಂಡು ಸಾಕ್ಷಾತ್ಕಾರದ ಮೂಲಕ ಮೈದಳೆಯುವುವು. ಅವನ್ನು ಸಮರ್ಥಿಸಲು ಬೇಕಾಗಿಲ್ಲ ಪ್ರಯತ್ನ. ಆದರೆ ಅವುಗಳ ಸ್ವರೂಪವನ್ನು ಸರಳವಾಗಿಯೂ ಸ್ಪಷ್ಟವಾಗಿಯೂ ಸಂವೇದಿಸಲು ಅದು ಬೇಕು.

ನಮ್ಮ ವಾಂಛೆಗಳಿಗೂ ವಿವೇಚನೆಗಳಿಗೂ ನೆಲಗಟ್ಟಾಗಿ ನಮಗೆ ಯೆಹೂದ್ಯ-ಕ್ರಿಶ್ಚಿಯನ್ ಧಾರ್ಮಿಕ ಪರಂಪರೆಯಲ್ಲಿ ಅತ್ಯುನ್ನತ ತತ್ತ್ವಗಳು ದೊರೆಯುತ್ತವೆ. ಇದೊಂದು ಬಲು ಎತ್ತರದ ಗುರಿ. ದುರ್ಬಲ ಪ್ರಾಣಿಗಳಾದ ನಾವು ತೀರ ಅಸಮರ್ಪಕವಾಗಿ ಇದನ್ನು ಐದಬಹುದು ಅಷ್ಟೆ. ಆದರೆ ಇದು ನಮ್ಮ ವಾಂಛೆಗಳಿಗೂ ಮೌಲ್ಯಮಾಪನೆಗಳಿಗೂ ಭದ್ರ ಅಸ್ತಿಭಾರ ಒದಗಿಸುತ್ತದೆ. ಈ ಗುರಿಯ ಧಾರ್ಮಿಕಸ್ವರೂಪವನ್ನು ಪ್ರತ್ಯೇಕಗೊಳಿಸಿ ಇದರ ಶುದ್ಧ ಮಾನವೀಯ ಪಾರ್ಶ್ವವೊಂದನ್ನೇ ನೋಡಿದ್ದಾದರೆ ಪ್ರಾಯಶಃ ಇದನ್ನು ಈ ತೆರನಾಗಿ ನಿರೂಪಿಸಬಹುದು : ವ್ಯಕ್ತಿ ತನ್ನ ಸಾಮರ್ಥ್ಯಸರ್ವಸ್ವವನ್ನೂ ಮಾನವ ಸಮಷ್ಟಿಯ ಸೇವೆಗೆ ಸ್ವಸಂತೋಷದಿಂದ ಮುಡಿಪಿಡಲು ಅನುಕೂಲಿಸುವಂತೆ ಆತನ ಅನಿರ್ಬಂಧಿತ ಮತ್ತು ಜವಾಬ್ದಾರಿಯುಕ್ತ ಅಭಿವರ್ಧನೆ.

ಇದರಲ್ಲಿ ಯಾವನೇ ವ್ಯಕ್ತಿಯ ದೈವಾಪನೆ ಹಾಗಿರಲಿ, ಜನಾಂಗದ ಅಥವಾ ವರ್ಗದ ದೈವಾಪನೆಗೆ ಕೂಡ ಎಳ್ಳಷ್ಟು ಅವಕಾಶವೂ ಇಲ್ಲ. ಧಾರ್ಮಿಕ ಪರಿಭಾಷೆಯಲ್ಲಿ ನಿರೂಪಿಸಿರುವಂತೆ ನಾವೆಲ್ಲರೂ ಒಬ್ಬ ತಂದೆಯ ಮಕ್ಕಳೇ ಅಲ್ಲವೇ ? ನಿಜಕ್ಕೂ ಮನುಕುಲವನ್ನು ಒಂದು ಅಮೂರ್ತ ಸಮಗ್ರತೆಯೆಂದು ಪರಿಭಾವಿಸಿ ದೈವಾಪಿಸುವುದು ಸಹ ಆ ಆದರ್ಶದ ನೈಜ ಅರ್ಥದ ಜೊತೆ ಹೊಂದಲಾರದು. ಜೀವವಿರುವುದು ವ್ಯಕ್ತಿಗೆ ಮಾತ್ರ. ಸೇವೆ ಸಲ್ಲಿಸುವುದೊಂದರಲ್ಲೇ ಆತನ ಉಜ್ಜ್ವಲ ಭವಿಷ್ಯವಿದೆಯೇ ವಿನಾ ಯಾವುದೇ ರೀತಿ ಇತರರ ಮೇಲೆ ತನ್ನನ್ನು ಹೇರುವುದರಲ್ಲಿ ಅಲ್ಲ.

ರೂಪದ [=ಕಣಿಕ ಅಥವಾ ಬಹಿರಂಗ] ಬದಲು ತಿರುಳಿನತ್ತ [=ಹೂರಣ ಅಥವಾ ಅಂತರಂಗ] ಒಬ್ಬಾತ ದೃಷ್ಟಿಹರಿಸಿದ್ದಾದರೆ ಈ ಮಾತು ಮೂಲಭೂತ ಪ್ರಜಾಪ್ರಭುತ್ವಾತ್ಮಕ ನಿಲವನ್ನು ಕೂಡ ಅಭಿವ್ಯಕ್ತಿಸುವುದೆಂದು ಭಾವಿಸಬಹುದು. ಪ್ರಜಾಪ್ರಭುತ್ವ ಪದವನ್ನು ಈ ತೆರನಾಗಿ ಅರ್ಥವಿಸಿದಾಗ ಒಬ್ಬ ಋಜು ಪ್ರಜಾಪ್ರಭುತ್ವವಾದಿ ತನ್ನ ಜನಾಂಗವನ್ನು ಒಬ್ಬ ಧಾರ್ಮಿಕ ವ್ಯಕ್ತಿಯಷ್ಟೇ ಅತ್ಯಲ್ಪ ಪ್ರಮಾಣದಲ್ಲಿ ಆರಾಧಿಸಬಲ್ಲ ಎಂದು ತಿಳಿಯುತ್ತದೆ.

ಅಂದಮೇಲೆ ಈ ಎಲ್ಲದರಲ್ಲಿ ಶಿಕ್ಷಣ ಮತ್ತು ಶಾಲೆ ನಿರ್ವಹಿಸಬೇಕಾದ ಪಾತ್ರಗಳೇನು ? ಯುವಕನಿಗೆ ಆತ ಶ್ವಸನಿಸುವ ವಾಯು ಹೇಗೋ ಹಾಗೆ ಈ ಮೂಲಭೂತ ತತ್ತ್ವಗಳೂ ಇರುವಂಥ ಪರಿಸರದಲ್ಲಿ ಆತನ ಪ್ರತಿಭೆ ಅರಳಲು ಶಿಕ್ಷಣ ಮತ್ತು ಶಾಲೆ ನೆರವಾಗಬೇಕು. ಬೋಧನೆಯೊಂದೇ ಇದನ್ನು ಸಾಧಿಸಲಾರದು.

ಒಬ್ಬಾತ ಈ ಉನ್ನತ ತತ್ತ್ವಗಳನ್ನು ತನ್ನೆದುರು ಸ್ಪಷ್ಟವಾಗಿ ಎತ್ತಿಹಿಡಿದು ಅವನ್ನು ನಮ್ಮ ಕಾಲದ ಜೀವನ ಮತ್ತು ಪ್ರಜ್ಞೆ ಜೊತೆ ಹೋಲಿಸಿ ನೋಡಿದ್ದಾದರೆ ಆತನಿಗೆ ನಾಗರಿಕ ಪ್ರಪಂಚವಿಂದು ತೀವ್ರ ಅಪಾಯದ ಅಂಚಿನಲ್ಲಿದೆಯೆಂದು ಹೊಳೆಯದಿರದು. ವಾಸ್ತವವಾಗಿ ಸರ್ವಾಧಿಕಾರೀ ರಾಷ್ಟ್ರಗಳಲ್ಲಿ ಸ್ವತಃ ಪ್ರಭುಗಳೇ ಮನುಕುಲದ ಈ ಪ್ರಜ್ಞೆಯನ್ನು ನಾಶಗೊಳಿಸಲು ಹೆಣಗುವರು. ಇಷ್ಟು ಉತ್ಕಟವಲ್ಲದ ಸನ್ನಿವೇಶಗಳಲ್ಲಿ ರಾಷ್ಟ್ರೀಯತೆ ಮತ್ತು ಅಸಹಿಷ್ಣುತೆ, ಅಲ್ಲದೇ ಆರ್ಥಿಕ ವಿಧಾನಗಳ ಮೂಲಕ ವ್ಯಕ್ತಿಪೀಡನೆ ಕೂಡ, ಈ ಅಮೂಲ್ಯ ಪರಂಪರೆಗಳ ಕತ್ತು ಹಿಸುಕುವ ಭಯ ಒಡ್ಡುತ್ತಿವೆ.

ಈ ಅಪಾಯ ಎಷ್ಟು ಭೀಕರವಾಗಿದೆ ಎಂಬ ಪರಿಜ್ಞಾನ ಈಗ ಹೇಗೂ ಚಿಂತನಶೀಲ ವ್ಯಕ್ತಿಗಳಲ್ಲಿ

ಹಬ್ಬುತ್ತಿದೆ. ಇದನ್ನು ಎದುರಿಸುವ ಬಗೆ ಏನು ಎಂಬುದರ ಬಗ್ಗೆ ಗಹನ ಶೋಧ ನಡೆದಿದೆ—ಸಾರ್ವತ್ರಿಕವಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ರಾಜಕಾರಣ ಕ್ಷೇತ್ರಗಳಲ್ಲಿಯೂ ಶಾಸನ ಸಭೆ ಅಥವಾ ವ್ಯವಸ್ಥಾಪನೆಗಳಲ್ಲಿಯೂ ವಿಧಾನಗಳ ಶೋಧನೆ. ಇಂಥ ಪ್ರಯತ್ನಗಳು ಅತ್ಯಂತ ಆವಶ್ಯಕ ಎನ್ನುವುದರಲ್ಲಿ ಸಂದೇಹವಿಲ್ಲ. ಇಂತಿದ್ದರೂ ನಮಗೆ ಮರೆತೇ ಹೋಗಿರುವ ಯಾವುದೋ ಸಂಗತಿ ಪ್ರಾಚೀನರಿಗೆ ತಿಳಿದಿತ್ತು. ವಿಧಾನಗಳು ಯಾವುವೇ ಇರಲಿ, ಅವುಗಳ ಹಿನ್ನೆಲೆಯಲ್ಲಿ ಜೀವಂತ ಪ್ರಜ್ಞೆಯೊಂದು ಲಕಲಕಿಸದೇ ಇದ್ದರೆ ಅವು ಬೊಡ್ಡು ಹತ್ಯಾರುಗಳಾಗುವುದು ಕಂಡಂತೆಯೇ ಇದೆ. ಹೀಗಲ್ಲದೇ ಗುರಿಸಾಧನೆಯ ಬಯಕೆ ನಮ್ಮೊಳಗೆ ತೀವ್ರವಾಗಿರುವುದು ನಿಜವಾದಲ್ಲಿ ಆಗ ಆ ಗುರಿ ತಲಪಲು ಬೇಕಾಗುವ ವಿಧಾನ ಅರಸಿ ಅದನ್ನು ಕೃತಿಗೆ ಇಳಿಸಲು ಬೇಕಾಗುವ ಸಾಮರ್ಥ್ಯದಲ್ಲಿ ಎಂದೂ ಕೊರತೆ ಕಂಡುಬರದು.

೨

ವಿಜ್ಞಾನವೆಂದರೆ ನಮಗೇನು ಅರ್ಥವಾಗುವುದೆಂಬ ವಿಚಾರದಲ್ಲಿ ಒಂದು ಅಭಿಪ್ರಾಯಕ್ಕೆ ಬರುವುದು ಕಷ್ಟವಾಗದು. ಈ ಪ್ರಪಂಚದ ಸಂವೇದ್ಯ ವಿದ್ಯಮಾನಗಳನ್ನು ವ್ಯವಸ್ಥಿತ ಚಿಂತನೆಯ ಮೂಲಕ ಸಾಧ್ಯವಾಗುವಷ್ಟು ಪರಿಪೂರ್ಣ ಸಂಯೋಜನೆಯಾಗಿ ಸಂಕಲಿಸಲು ಶತಮಾನಗಳಿಂದಲೂ ಮಾಡಲಾಗುತ್ತಿರುವ ಸಾಹಸವಿದು. ಇನ್ನಷ್ಟು ಸ್ಫುಟವಾಗಿ ಹೇಳುವುದಾದರೆ : ಪರಿಕಲ್ಪನೀಕರಣ ಪ್ರಕ್ರಿಯೆಯ (process of conceptualization) ಮೂಲಕ ಅಸ್ತಿತ್ವದ ಉತ್ತರಕಾಲೀನ ಪುನಾರಚನೆಯ ಪ್ರಯತ್ನವೇ ವಿಜ್ಞಾನ. ಆದರೆ ನನಗೆ ನಾನೇ ಧರ್ಮವೆಂದರೆ ಏನೆಂಬ ಪ್ರಶ್ನೆ ಹಾಕಿಕೊಂಡಾಗ ಇಷ್ಟು ಸುಲಭವಾಗಿ ಉತ್ತರ ಯೋಚಿಸಲಾರೆ. ಅಲ್ಲದೇ ಸಂದೇಹಾತೀತವಾಗಿ ಇನ್ನೊಂದು ಸಂಗತಿ ನನಗೆ ಗೊತ್ತಿದೆ : ಈ ನಿರ್ದಿಷ್ಟ ಗಳಿಗೆಯಲ್ಲಿ ನನಗೆ ಸಮಾಧಾನ ನೀಡಬಲ್ಲ ಉತ್ತರ ಪಡೆದ ಬಳಿಕವೂ, ಈ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಿರುವವರೆಲ್ಲರ ಚಿಂತನೆಗಳನ್ನು, ಅತ್ಯಲ್ಪ ಪ್ರಮಾಣದಲ್ಲಾದರೂ, ಯಾವ ಸಂದರ್ಭದಲ್ಲಿಯೂ ಸಂಕಲಿಸಿ ಹೇಳಲಾರೆ.

ಅಂದ ಮೇಲೆ, ಮೊದಲಿಗೆ ಧರ್ಮವೆಂದರೇನೆಂದು ಪ್ರಶ್ನಿಸುವ ಬದಲು, ನನ್ನಲ್ಲಿ ಧಾರ್ಮಿಕನೆಂಬ ಅಭಿಪ್ರಾಯ ಮೂಡಿಸುವ ವ್ಯಕ್ತಿಯ ವಾಂಛೆಗಳ ಲಕ್ಷಣಗಳೇನೆಂದು ಮರುಪ್ರಶ್ನಿಸಲು ಇಷ್ಟಪಡುತ್ತೇನೆ : ಧಾರ್ಮಿಕವಾಗಿ ದೀಪ್ತನಾದ ವ್ಯಕ್ತಿ, ಈತನ ಗರಿಷ್ಠ ಸಾಧ್ಯಪರಿಮಿತಿಯವರೆಗೂ, ಸ್ವಾರ್ಥಲಾಲಸೆಗಳ ಸಂಕೋಲೆಗಳಿಂದ ಸ್ವತಃ ವಿಮೋಚಿತನಾಗಿ, ಚಿಂತನೆ ಸಂವೇದನೆ ಮತ್ತು ವಾಂಛೆಗಳಿಗೆ ಇವುಗಳ ವ್ಯಕ್ತ್ಯತೀತ ಮೌಲ್ಯದ (superpersonal value) ಕಾರಣವಾಗಿ ಗಟ್ಟಿ ಅಂಟಿಕೊಂಡಿರುವನೆಂದು ನನಗೆ ಅನ್ನಿಸುತ್ತದೆ. ಈ ಆಧ್ಯಾತ್ಮಿಕ ತಿರುಳಿನ ಪ್ರಖರತೆ ಮತ್ತು ಇದರ ಸರ್ವಜಿತ ಅರ್ಥಪೂರ್ಣತೆ ಅತಿ ಮುಖ್ಯವೆಂದು ತಿಳಿದಿದ್ದೇನೆ. ಇದನ್ನು [ತಿರುಳು] ಪರಾತ್ಪರ ವಸ್ತುವೊಂದರ ಜೊತೆ ಸಂಯೋಜಿಸಲು ಮಾಡಿರಬಹುದಾದ ಪ್ರಯತ್ನವನ್ನು ಇಲ್ಲಿ ಪರಿಗಣಿಸಬೇಕಾಗಿಲ್ಲ. ಹೀಗಲ್ಲವಾಗಿದ್ದರೆ ಬುದ್ಧ ಮತ್ತು ಸ್ಪಿನೋಝರನ್ನು ಧಾರ್ಮಿಕ ಪುರುಷರೆಂದು ಪರಿಗಣಿಸುವುದು ಸಾಧ್ಯವಾಗುತ್ತಿರಲಿಲ್ಲ. ಎಂದೇ, ಒಬ್ಬ ಧಾರ್ಮಿಕ ವ್ಯಕ್ತಿ ಈ ಮುಂದಿನ ಅರ್ಥದಲ್ಲಿ ಭಕ್ತಿಸಂಪನ್ನನಾಗಿರುವನು : ಈ ವ್ಯಕ್ತ್ಯತೀತ ವಸ್ತುಗಳ ಹಾಗೂ ಗುರಿಗಳ ಮಹತ್ತ್ವ ಮತ್ತು ಔನ್ನತ್ಯ ಕುರಿತು ಆತನಿಗೆ ಯಾವ ಸಂದೇಹವೂ ಇರುವುದಿಲ್ಲ. ಅವುಗಳಿಗೆ ವೈಚಾರಿಕ ಬುನಾದಿ ಅನಾವಶ್ಯಕ. ಅದನ್ನು ಒದಗಿಸುವುದು ಕೂಡ ಅಸಾಧ್ಯ. ಈತನ ಅಸ್ತಿತ್ವ ಹೇಗೆ ಅವಶ್ಯವೋ ವಾಸ್ತವವೋ ಹಾಗೆ ಅವುಗಳದು ಸಹ. ಈ ಮೌಲ್ಯಗಳ ಮತ್ತು ಗುರಿಗಳ ಬಗ್ಗೆ ಸ್ಪಷ್ಟವಾಗಿಯೂ

ಪೂರ್ಣವಾಗಿಯೂ ಪ್ರಜ್ಞಾವಂತರಾಗಿದ್ದು ಇವುಗಳ ಪರಿಣಾಮವನ್ನು ಸತತವಾಗಿ ಭದ್ರಗೊಳಿಸಿ ವಿಸ್ತರಿಸುವ ದಿಶೆಯಲ್ಲಿ ಮನುಕುಲ ಯುಗಯುಗಗಳಿಂದ ನಡೆಸುತ್ತಿರುವ ಪ್ರಯತ್ನವೇ ಧರ್ಮವೆಂದು, ಈ ಮೇಲಿನ ಅರ್ಥದಲ್ಲಿ, ನಾನು ತಿಳಿಯುತ್ತೇನೆ. ಧರ್ಮವನ್ನೂ ವಿಜ್ಞಾನವನ್ನೂ ಒಬ್ಬ ಈ ವ್ಯಾಖ್ಯೆಗಳ ಅನುಸಾರ ಪರಿಭಾವಿಸಿದ್ದಾದರೆ ಆಗ ಇವುಗಳ ನಡುವೆ ಘರ್ಷಣೆ ಹಣುಕುವುದು ಅಸಾಧ್ಯ. ಏಕೆಂದರೆ ವಿಜ್ಞಾನ ಏನು ಇದೆ ಎಂಬುದನ್ನು ಮಾತ್ರ ಪರಿಶೀಲಿಸಬಲ್ಲದು,ಇರತಕ್ಕದ್ದು ಎಂಬುದನ್ನಲ್ಲ. ಈಗ, ವಿಜ್ಞಾನದ ಪ್ರಾಂತದಿಂದ ಹೊರಕ್ಕೆ ಕೂಡ ಎಲ್ಲ ಬಗೆಯ ಮೌಲ್ಯ ವಿವೇಚನೆಗಳೂ ನಡೆಯುವುದು ಅಗತ್ಯ. ಇತ್ತ ಧರ್ಮವಾದರೋ ಮಾನವಚಿಂತನೆ ಮತ್ತು ಕ್ರಿಯೆಗಳ ಮೌಲ್ಯಮಾಪನೆ ಜೊತೆ ಮಾತ್ರ ವ್ಯವಹರಿಸುತ್ತದೆ ; ಸಂಗತಿಗಳನ್ನಾಗಲೀ ಇವುಗಳ ನಡುವಿನ ಸಂಬಂಧಗಳನ್ನಾಗಲೀ ಕುರಿತು ಅದು ಸಮರ್ಪಕವಾಗಿ ಪ್ರಸ್ತಾವಿಸಲಾರದು. ಆದ್ದರಿಂದ ಗತಕಾಲದಲ್ಲಿ ಧರ್ಮ ಮತ್ತು ವಿಜ್ಞಾನಗಳ ನಡುವೆ ಸಂಭವಿಸಿದ ಸುಪರಿಚಿತ ಘರ್ಷಣೆಗಳೆಲ್ಲವುಗಳ ಕಾರಣವನ್ನು ಆಯಾ ಪರಿಸ್ಥಿತಿಯನ್ನು ಸರಿಯಾಗಿ ಗ್ರಹಿಸದಿದ್ದುದರಲ್ಲಿ—ಅಂದರೆ ಅಪಾರ್ಥ ಮಾಡಿಕೊಂಡುದರಲ್ಲಿ—ಕಾಣಬೇಕೆಂಬುದು ಈ ಮೇಲಿನ ವ್ಯಾಖ್ಯಾನದಿಂದ ಸ್ಪಷ್ಟವಾಗುವುದು.

ಉದಾಹರಣೆಗೆ, ಬೈಬಲಿನಲ್ಲಿ ದಾಖಲಾಗಿರುವ ಎಲ್ಲ ಹೇಳಿಕೆಗಳೂ ಶುದ್ಧ ಸತ್ಯವೆಂದು ಯಾವುದೇ ಧಾರ್ಮಿಕ ಸಮುದಾಯ ಹಠತೊಟ್ಟರೆ ಅಲ್ಲೊಂದು ಸಂಘರ್ಷ ಹೆಡೆ ಎತ್ತುತ್ತದೆ. ವಿಜ್ಞಾನ ವಲಯಕ್ಕೆ ಧರ್ಮ ಹಸ್ತಕ್ಷೇಪಿಸಿತೆಂದು ಇದರ ಅರ್ಥ. ಗೆಲಿಲಿಯೋ ಮತ್ತು ಡಾರ್ವಿನ್ ತತ್ತ್ವಗಳ ವಿರುದ್ಧ ಇಗರ್ಜಿ ಸಾರಿದ ಸಮರ ಇದಕ್ಕೆ ಒಂದು ನಿದರ್ಶನ. ಇತ್ತ ವಿಜ್ಞಾನದ ಪ್ರತಿನಿಧಿಗಳು ಮೌಲ್ಯಗಳನ್ನೂ ಗುರಿಗಳನ್ನೂ ಕುರಿತಂತೆ, ವೈಜ್ಞಾನಿಕ ವಿಧಾನ ಆಧರಿಸಿ, ಮೂಲಭೂತ ತೀರ್ಮಾನಗಳನ್ನು ಪಡೆಯಲು ಅನೇಕ ಬಾರಿ ಪ್ರಯತ್ನಿಸಿರುವರು, ಮತ್ತು ಆ ಮೂಲಕ ತಮ್ಮನ್ನು ಧರ್ಮದ ವಿರುದ್ಧ ಸ್ಥಾಪಿಸಿಕೊಂಡಿರುವರು. ಈ ಎಲ್ಲ ಘರ್ಷಣೆಗಳೂ ಮಾರಕ ದೋಷಗಳ ಕಾರಣವಾಗಿ ಉದ್ಭವಿಸಿವೆ.

ಈಗ, ಧರ್ಮದ ಮತ್ತು ವಿಜ್ಞಾನದ ವಲಯಗಳು ಒಂದರಿಂದ ಇನ್ನೊಂದು ವಿಭಿನ್ನವಾಗಿ ಗುರುತಿಸಲ್ಪಟ್ಟಿದ್ದರೂ ಇವೆರಡರ ನಡುವೆ ಪ್ರಬಲ ಅನ್ಯೋನ್ಯ ಸಂಬಂಧಗಳೂ ಅವಲಂಬನೆಗಳೂ ಇದ್ದೇ ಇವೆ. ಗುರಿ ನಿರ್ಧರಿಸುವುದು ಧರ್ಮ ನಿಜ. ಆದರೆ ಈ ಗುರಿಗಳನ್ನು ಐದಲು ಯಾವ ಹಾದಿಗಳು ನೆರವಾಗಬಲ್ಲವೆಂಬ ಸಂಗತಿಯನ್ನು ಅದು, ವಿಶಾಲಾರ್ಥದಲ್ಲಿ, ವಿಜ್ಞಾನದಿಂದ ಕಲಿತಿದೆ. ಇನ್ನು ಸತ್ಯದೆಡೆಗಿನ ವಾಂಛೆಯಿಂದಲೂ ತಿಳಿವಳಿಕೆಯಿಂದಲೂ ಪ್ರೇರಿತರಾದವರು ಮಾತ್ರ ವಿಜ್ಞಾನವನ್ನು ಸೃಷ್ಟಿಸಬಲ್ಲರು. ಆದರೆ ಈ ಪ್ರೇರಣೆಯ ಆಕರ ಮಾತ್ರ ಧರ್ಮದ ವಲಯಕ್ಕೆ ಸೇರಿದೆ. ಅಸ್ತಿತ್ವದಲ್ಲಿರುವ ಅಂದರೆ ವಾಸ್ತವವಾದ ಈ ಪ್ರಪಂಚದಲ್ಲಿ ಸಾಧುವಾಗುವ ವಿಧಿನಿರ್ಬಂಧಗಳು ವೈಚಾರಿಕವಾದವು, ಅಂದರೆ ತರ್ಕಗ್ರಾಹ್ಯವಾದವು ಎಂಬ ಭಾವನೆಯ ಸಾಧ್ಯತೆ ಕುರಿತ ನಂಬಿಕೆ ಕೂಡ ಧರ್ಮದ ವಲಯಕ್ಕೆ ಸೇರಿದೆ. ಇಂಥ ಒಂದು ಪ್ರಗಲ್ಭ ನಂಬಿಕೆ ಅಥವಾ ಭರವಸೆ ಇರದ ಒಬ್ಬ ಋಜು ವಿಜ್ಞಾನಿಯನ್ನೂ ನಾನು ಊಹಿಸಲಾರೆ. ಒಂದು ರೂಪಕದಿಂದ ಈ ಸನ್ನಿವೇಶವನ್ನು ವಿವರಿಸಬಹುದು : ಧರ್ಮರಹಿತ ವಿಜ್ಞಾನ ಕುಂಟು (ಪಂಗು), ವಿಜ್ಞಾನರಹಿತ ಧರ್ಮ ಕುರುಡು (ಅಂಧ).

ನಿಜಕ್ಕೂ ಧರ್ಮ ಮತ್ತು ವಿಜ್ಞಾನ ನಡುವೆ ಯಾವುದೇ ಸಂಘರ್ಷಕ್ಕೆ ಅವಕಾಶವಿಲ್ಲವೆಂದು ಈ ಮೇಲೆ ಒತ್ತಿ ಹೇಳಿರುವೆನಾದರೂ, ಈ ಪ್ರತಿಪಾದನೆಯನ್ನು ಪುನಃ ಇನ್ನೊಂದು ಸಾರಭೂತಾಂಶದಲ್ಲಿ, ಐತಿಹಾಸಿಕ ಧರ್ಮಗಳ ವಾಸ್ತವ ಹೂರಣ ಕುರಿತಂತೆ, ವಿಶೇಷೀಕರಿಸಲೇಬೇಕು. ಈ

ವಿಶೇಷಣ ದೇವರ ಪರಿಕಲ್ಪನೆ ಬಗ್ಗೆ ಇದೆ. ಮನುಕುಲದ ಆಧ್ಯಾತ್ಮಿಕ ವಿಕಾಸದ ಆರಂಭ ದಿನಗಳಲ್ಲಿ ಮಾನವನ ಭ್ರಾಂತಚಿತ್ತವು ದೇವತೆಗಳನ್ನು ಸ್ವಂತ (ಅಂದರೆ ಮಾನವ) ಪ್ರತಿಬಿಂಬಗಳಾಗಿ ಸೃಷ್ಟಿಸಿತು. ಈ ದೇವತೆಗಳು ಸ್ವ-ಇಚ್ಛಾನುಸಾರ ನಮ್ಮ ಈ ಪ್ರಪಂಚದ ವಿದ್ಯಮಾನಗಳನ್ನು ನಿರ್ಧರಿಸುವರು, ಅಥವಾ ಕನಿಷ್ಠಪಕ್ಷ ಪ್ರಭಾವಿಸುವರು ಎಂದು ಮಾನವ ಭಾವಿಸಿದ. ವಾಮತಂತ್ರಗಳಿಂದಲೂ ಹರಕೆ ಹಾಡುಗಳಿಂದಲೂ ಮಾನವ ಈ ದೇವತೆಗಳ ಮನಸ್ಸು ತನ್ನತ್ತ ಸುಪ್ರಸನ್ನವಾಗುವಂತೆ ಪರಿವರ್ತಿಸಲು ಪ್ರಯತ್ನಿಸಿದ. ಇಂದಿನ ಧರ್ಮಗಳಲ್ಲಿ ಪರಮಾತ್ಮನ ಬಗೆಗೆ ನೀಡುವ ಚಿತ್ರ ಅಥವಾ ಬೋಧನೆ ಆ ದೇವತೆಗಳನ್ನು ಕುರಿತ ಪರಿಕಲ್ಪನೆಯ ಉನ್ನತೀಕರಣ. ಇದರ ಮಾನುಷರೂಪೀಯ ಲಕ್ಷಣವನ್ನು, ಉದಾಹರಣೆಗೆ, ಮನುಷ್ಯರು ದೈವಿಕ ಚೇತನಕ್ಕೆ ತಮ್ಮ ಬಯಕೆಗಳ ಈಡೇರಿಕೆಗಾಗಿ ಸಲ್ಲಿಸುವ ಪ್ರಾರ್ಥನೆಗಳಲ್ಲಿ ಕಾಣಬಹುದು.

ಸರ್ವಶಕ್ತ, ನ್ಯಾಯಪರ ಮತ್ತು ಸರ್ವೋಪಕಾರಿ ವೈಯಕ್ತಿಕ ದೇವರ ಅಸ್ತಿತ್ವ ಕುರಿತ ಭಾವನೆ ಮಾನವನಿಗೆ ಸ್ವಾಸ್ಥ್ಯ, ಸಹಾಯ ಮತ್ತು ಮಾರ್ಗದರ್ಶನವೀಯಬಲ್ಲದು ಎಂಬುದನ್ನು ಯಾರೂ ನಿರಾಕರಿಸಲಾರರು, ನಿಜ. ಅಲ್ಲದೇ ಇದರ ಸರಳತೆಯ ಕಾರಣವಾಗಿ ಇದು ಅತ್ಯಂತ ಅನಭಿವರ್ಧಿತ ಮತಿಗೂ ಗ್ರಾಹ್ಯವಾಗಿದೆ. ಆದರೆ ತದ್ವಿರುದ್ಧವಾಗಿ ಸ್ವತಃ ಈ ಭಾವನೆಯಲ್ಲಿಯೇ ಅಂತಃಸ್ಥವಾಗಿರುವ ಕೆಲವು ನಿರ್ಣಾಯಕ ದೌರ್ಬಲ್ಯಗಳಿವೆ : ಇತಿಹಾಸಾರಂಭಕಾಲದಿಂದಲೂ ಇವು ಸಾಕಷ್ಟು ವೇದನಾಸಹಿತ ಮಾನವನ ಅರಿವಿಗೆ ಬಂದಿವೆ. ಈಗ, ಈ ಪರಾತ್ಪರವಸ್ತು ಸರ್ವಶಕ್ತವಾದುದಾದರೆ, ಆಗ ಮಾನವನ ಪ್ರತಿಯೊಂದು ಕ್ರಿಯೆ, ಚಿಂತನೆ, ಸಂವೇದನೆ, ಮತ್ತು ವಾಂಛೆಯನ್ನೂ ಒಳಗೊಂಡಂತೆ ಒಂದೊಂದು ಘಟನೆಯೂ ಆ ಸರ್ವಶಕ್ತನ ಕೃತಿ ; ಇಂಥ ಸರ್ವಪೋಶಕ ಚೇತನದ ಸಮ್ಮುಖದಲ್ಲಿ ವ್ಯಕ್ತಿಗಳನ್ನು ಅವರ ಕೃತ್ಯಗಳಿಗೆ ಮತ್ತು ಚಿಂತನೆಗಳಿಗೆ ಹೊಣೆಗಾರರೆಂದು ಆರೋಪಿಸಿ ನಿಲ್ಲಿಸುವುದು ಹೇಗೆ ತಾನೇ ಸಾಧ್ಯ ? ಇವರಿಗೆ ಶಿಕ್ಷೆ ವಿಧಿಸುವಾಗ ಅಥವಾ ಬಹುಮಾನ ಪ್ರದಾನಿಸುವಾಗ ಆತ, ಸ್ವಲ್ಪ ಮಟ್ಟಿಗಾದರೂ, ತನ್ನನ್ನು ಕುರಿತು ತಾನೇ ತೀರ್ಪು ನೀಡಿದಂತಾಗುವುದಿಲ್ಲವೇ ? ಇದನ್ನು ನಾವು ಆತನಲ್ಲಿ ನಿಹಿತವಾಗಿದೆಯೆಂದು ಭಾವಿಸುವ ಸದ್ಗುಣ ಮತ್ತು ಋಜುತ್ವದ ಜೊತೆ ಸಂಯೋಜಿಸುವುದು ಹೇಗೆ ?

ವೈಯಕ್ತಿಕ ದೇವರ ಬಗೆಗಿನ ಪರಿಕಲ್ಪನೆಯೇ ವರ್ತಮಾನ ದಿನಗಳಲ್ಲಿ ಧರ್ಮ ಮತ್ತು ವಿಜ್ಞಾನ ವಲಯಗಳ ನಡುವೆ ಭುಗಿಲೇಳುವ ಸಂಘರ್ಷಗಳ ಪ್ರಮುಖ ಮೂಲ. ಕಾಲ ಮತ್ತು ಆಕಾಶದಲ್ಲಿ (time and space) ವಸ್ತುಗಳ ಮತ್ತು ಘಟನೆಗಳ ಅನ್ಯೋನ್ಯ ಸಂಬಂಧ ನಿರ್ಧರಿಸುವ ಸಾರ್ವತ್ರಿಕ ನಿಯಮಗಳ ಪ್ರತಿಪಾದನೆ ವಿಜ್ಞಾನದ ಗುರಿ. ಈ ವಿಧಿಗಳಿಗೆ (rules), ಅಥವಾ ನಿಸರ್ಗದ ನಿಯಮಗಳಿಗೆ (laws) ಪರಿಪೂರ್ಣ ಸಾರ್ವತ್ರಿಕ ಸಿಂಧುತ್ವ ಅತ್ಯಗತ್ಯ—ರುಜುವಾತಿಸಲಾದವುಗಳ ನಿದರ್ಶನ ಮಾತ್ರವಲ್ಲ. ಮುಖ್ಯವಾಗಿ ಇದೊಂದು ಕ್ರಮವಿಧಿ (program), ಮತ್ತು ಇದನ್ನು ತಾತ್ತ್ವಿಕವಾಗಿ ಸಿದ್ಧಿಸಬಹುದಾದ ಸಾಧ್ಯತೆ ಕುರಿತ ನಂಬಿಕೆ. ಇದು ಕೇವಲ ಆಂಶಿಕ ಯಶಸ್ಸುಗಳ ಮೇಲೆ ನಿಂತಿದೆ. ಇವನ್ನು ನಿರಾಕರಿಸಿ, ಇವುಗಳ ಕಾರಣವನ್ನು ವ್ಯಕ್ತಿಯ ಭ್ರಾಂತಮನದಲ್ಲಿ ಅಥವಾ ಆತ್ಮವಂಚನೆಯಲ್ಲಿ ಕಾಣುವವರು ಪ್ರಾಯಶಃ ಯಾರೂ ಇಲ್ಲ. ಈಗ, ಈ ಸಾರ್ವತ್ರಿಕ ನಿಯಮಗಳ ಅತ್ಯಲ್ಪಾಂಶವನ್ನು ಮಾತ್ರ ಆಧುನಿಕ ಮಾನವ ಗ್ರಹಿಸಿರಬಹುದಾದರೂ ಇದನ್ನೇ ಆಧರಿಸಿ ತಾನು ಕೆಲವು ವಲಯಗಳಲ್ಲಿ ವಿದ್ಯಮಾನಗಳ ಕಾಲಿಕ ವರ್ತನೆಯನ್ನು ಅತ್ಯಂತ ನಿಷ್ಕೃಷ್ಟವಾಗಿಯೂ ಖಚಿತವಾಗಿಯೂ ಮುನ್ನುಡಿಯಬಲ್ಲೆನೆಂಬ ಭರವಸೆ ಆತನ ಮನದಲ್ಲಿ ಅಥವಾ ಪ್ರಜ್ಞೆಯಲ್ಲಿ ಆಳವಾಗಿ ಬೇರೂರಿದೆ. ಉದಾಹರಣೆಗೆ, ಗ್ರಹಗಳು ಸೌರವ್ಯೂಹದೊಳಗೆ ಸಾಗುವ ಕಕ್ಷೆಗಳನ್ನು

ಪರಿಮಿತ ಸಂಖ್ಯೆಯ ಸರಳ ನಿಯಮಗಳ ಆಧಾರದಿಂದ ಮುಂದಾಗಿಯೇ, ಅತಿ ನಿಷ್ಕೃಷ್ಟವಾಗಿ, ಗಣಿಸಬಹುದೆಂಬ ಭರವಸೆ. ಇಷ್ಟು ನಿಖರವಾಗಿ ಅಲ್ಲದಿದ್ದರೂ ಇದೇ ರೀತಿಯಲ್ಲಿ ವಿದ್ಯುತ್ ಮೋಟರ್, ಪ್ರೇಷಣವ್ಯವಸ್ಥೆ, ಅಥವಾ ನಿಸ್ತಂತು ಉಪಕರಣ ಇವುಗಳ ಪರಿಕರ್ಮವಿಧಾನವನ್ನು ಪೂರ್ವಭಾವಿಯಾಗಿ ಗಣಿಸುವುದು ಸಾಧ್ಯ. ಇವುಗಳಿಗೆ ಸಂಬಂಧಿಸಿದ ಯಾವುದೇ ನೂತನ ಪ್ರಯೋಗ ಮಾಡುವಾಗ ಕೂಡ ಇದು ನಿಜ.

ನಿಜ ಸಂಗತಿ ಏನೆಂದರೆ ವಿದ್ಯಮಾನವೈಜ್ಞಾನಿಕಸಂಕೀರ್ಣವೊಂದರಲ್ಲಿ (phenomenological complex) ಕ್ರಿಯಾಶೀಲವಾಗಿರುವ ಕಾರಕಗಳ ಸಂಖ್ಯೆ ತೀರ ಹಿರಿದಾಗಿರುವಾಗ ಹೆಚ್ಚಿನ ಸನ್ನಿವೇಶ ಗಳಲ್ಲಿ ವೈಜ್ಞಾನಿಕ ವಿಧಾನ ಸೋಲುತ್ತದೆ. ಹವೆಯ ವಿಚಾರವನ್ನೇ ಪರಿಶೀಲಿಸೋಣ. ಕೆಲವೇ ದಿವಸ ಗಳ ಬಳಿಕ ಇದರ ಸ್ಥಿತಿಗತಿ ಏನು ಎನ್ನುವುದನ್ನು ಇಂದು ಮುನ್ನುಡಿಯುವುದು ಅಸಾಧ್ಯ. ಇಂತಿ ದ್ದರೂ ಇಲ್ಲಿ ನಾವೊಂದು ಕಾರಣಾತ್ಮಕ ಸಂಯೋಜನೆಯ (causal connection) ಎದುರು ನಿಂತಿದ್ದೇವೆ, ಮತ್ತು ಇದರ ಪ್ರಧಾನ ಕಾರಣಾತ್ಮಕ ಘಟಕಗಳು (causal components) ನಮಗೆ ತಿಳಿದಿವೆ ಎಂಬ ವಿಚಾರದಲ್ಲಿ ಯಾರೂ ಸಂದೇಹ ತಳೆಯಲಾರರು. ಈ ಪ್ರಾಂತದಲ್ಲಿಯ ಘಟನೆಗಳು ಕರಾರುವಾಕ್ಕು ಭವಿಷ್ಯವಾಣಿಗೆ ನಿಲುಕದಂಥವು. ನಿಸರ್ಗದಲ್ಲಿ ಕ್ರಮರಾಹಿತ್ಯ ಅಥವಾ ಗೊಂದಲ ಅಲ್ಲ ಇದರ ಕಾರಣ. ಬದಲು, ಪರಿಕರ್ಮದಲ್ಲಿ ವಿವಿಧ ಕಾರಕಗಳು ನಿರತ ಅಥವಾ ನಿಹಿತ ಆಗಿರುವುದೇ ನಿಜ ಕಾರಣ.

ಜೀವಂತವಸ್ತುಗಳ ಪ್ರಪಂಚದೊಳಗೆ ಪ್ರಕಟವಾಗುವ ಕ್ರಮಬದ್ಧತೆಗಳನ್ನು ಕುರಿತಂತೆ ನಾವು ಸಾಕಷ್ಟು ಆಳ ಹೊಕ್ಕಿರುವುದಿಲ್ಲ. ಆದರೆ ಅನಿವಾರ್ಯ ಆವಶ್ಯಕತೆಯಾಗಿ ಏನೋ ಒಂದು ವಿಧಿ ವರ್ತಿಸುತ್ತಿದೆಯೆಂಬುದು ಅರಿವಿಗೆ ಬರುವಷ್ಟರ ಮಟ್ಟಿಗೆ ಪ್ರವೇಶಿಸಿದ್ದೇವೆ. ಆನುವಂಶಿಕತೆಯಲ್ಲಿ, ಅಂತೆಯೇ ಜೀವಿಗಳ ಮೇಲೆ ವಿಷಪದಾರ್ಥಗಳ (ಉದಾಹರಣೆಗೆ ಆಲ್ಕೊಹಾಲ್) ಪರಿಣಾಮದಲ್ಲಿ, ಕಂಡುಬರುವ ವ್ಯವಸ್ಥಿತ ಕ್ರಮದ ಬಗ್ಗೆ ನೆನಪು ಮಾಡಿಕೊಂಡರೆ ಸಾಕು. ಸ್ವತಃ ಈ ಕ್ರಮವನ್ನು ಕುರಿತ ತಿಳಿವಳಿಕೆಯ ಅಭಾವವಲ್ಲ ಇಲ್ಲಿಯ ಕೊರತೆ. ಬದಲು, ಪ್ರಗಲ್ಭ ಸಾರ್ವತ್ರಿಕತೆಯ ಸಂಯೋಜನೆಗಳ ಬಗ್ಗೆ ಅರಿವಿಲ್ಲದಿರುವುದು [ಇಲ್ಲಿಯ ಕೊರತೆ].

ಸರ್ವಘಟನೆಗಳ ನಿರ್ದೇಶಿತ ಕ್ರಮಬದ್ಧತೆ ಕುರಿತಂತೆ ಒಬ್ಬಾತನ ವಿಶ್ವಾಸ ತೀವ್ರವಾಗಿ ವರ್ಧಿಸಿದಂತೆ ಈ ನಿರ್ದೇಶಿತ ಕ್ರಮಬದ್ಧತೆಯ ಜೊತೆಯಲ್ಲಿ ವಿಭಿನ್ನಸ್ವರೂಪದ ಕಾರಣಗಳು ವರ್ತಿಸಲು ಯಾವ ತೆರನಾದ ಅವಕಾಶವೂ ಇರುವುದಿಲ್ಲ ಎಂಬ ನಿಶ್ಚಿತಾಭಿಪ್ರಾಯ ಅಧಿಕಾಧಿಕ ದೃಢವಾಗಿ ನೆಲೆಗೊಳ್ಳುತ್ತದೆ. ಈತನ ಚಿಂತನೆಯ ಪ್ರಕಾರ ನೈಸರ್ಗಿಕ ಘಟನೆಗಳ ಹಿನ್ನೆಲೆಯಲ್ಲಿ ಸ್ವತಂತ್ರ ಕಾರಣವಾಗಿ ಮಾನವ ಮತಿಯ ಇಚ್ಛೆಯಾಗಲೀ ದೈವಿಕ ಸಂಕಲ್ಪದ ಆದೇಶವಾಗಲೀ ವರ್ತಿಸುವುದಿಲ್ಲ. ನೈಸರ್ಗಿಕ ಘಟನೆಗಳಲ್ಲಿ ಹಸ್ತಕ್ಷೇಪಿಸುವ ವೈಯಕ್ತಿಕ ದೇವರ ಬಗೆಗಿನ ಧರ್ಮ ತತ್ತ್ವವನ್ನು (doctrine) ವಿಜ್ಞಾನವೆಂದೂ ನಿಜ ಅರ್ಥದಲ್ಲಿ ನಿರಾಕರಿಸಲಾರದು. ಏಕೆಂದರೆ ಈ ಧರ್ಮತತ್ತ್ವ ವೈಜ್ಞಾನಿಕ ಜ್ಞಾನವಿನ್ನೂ ಕಾಲಿಡಲು ಸಾಧ್ಯವಾಗಿರದ ಪ್ರಾಂತಗಳಲ್ಲಿ ಸದಾ ಆಸರೆ ಅರಸಬಹುದು.

ಆದರೆ ಧರ್ಮವನ್ನು ಪ್ರತಿನಿಧಿಸುವವರು ಈ ಹಾದಿ [ಪಲಾಯನ ನೀತಿ] ಹಿಡಿಯುವುದು ಅಯುಕ್ತವೊಂದೇ ಅಲ್ಲ ಮಾರಕವೂ ಹೌದು ಎಂಬುದರ ಬಗ್ಗೆ ನನಗೆ ಸಂದೇಹವಿಲ್ಲ. ಏಕೆಂದರೆ ಯಾವ ಧರ್ಮತತ್ತ್ವ ಸ್ವತಃ ತನ್ನನ್ನು ತಾನು ಬೆಳಕಿನಲ್ಲಿ ರಕ್ಷಿಸಿಕೊಳ್ಳಲಾರದೋ ಕತ್ತಲೆಯಲ್ಲಿ ಮಾತ್ರ ರಕ್ಷಿಸಿಕೊಳ್ಳಬಲ್ಲದೋ ಅದು ಮನುಕುಲದ ಮೇಲೆ ತನ್ನ ಪ್ರಭಾವ ಪರಿಣಾಮಗಳನ್ನು

ಅನಿವಾರ್ಯವಾಗಿ ಕಳೆದುಕೊಂಡೇಬಿಡುತ್ತದೆ. ಇದರೊಂದಿಗೆ ಮಾನವನ ಪ್ರಗತಿಗೆ ಊಹಾತೀತ ಹಾನಿಯೂ ತಟ್ಟಿರುತ್ತದೆ. ನೈತಿಕ ಉಚ್ಛ್ರಾಯ ಸಾಧಿಸುವ ಸಲುವಾಗಿ ಹೋರಾಡುವ ಧರ್ಮ ಗುರುಗಳು ವೈಯಕ್ತಿಕ ದೇವರ ಬಗೆಗಿನ ಧರ್ಮತತ್ತ್ವವನ್ನು ತೊರೆದೇಬಿಡುವ ಹಿರಿಮೆ ಗಳಿಸಿರ ತಕ್ಕದ್ದು. ಇದರ ಅರ್ಥ : ಧರ್ಮಗುರುಗಳ ಕರಗಳಲ್ಲಿ ಅಗಾಧ ಅಧಿಕಾರ ಸಾಂದ್ರೀಕರಿಸಲು ಕಾರಣವಾಗಿದ್ದ ಭಯ ಮತ್ತು ಆಶಯಗಳ ಆಕರವನ್ನೇ ಅವರು ತ್ಯಜಿಸಿಬಿಡತಕ್ಕದ್ದು. ಮನುಷ್ಯ-ಸಮಷ್ಟಿಯಲ್ಲಿ ಕಲ್ಯಾಣ [the Good], ಋತ [the True] ಮತ್ತು ಸುಂದರತೆ [the Beautiful]ಇವನ್ನು ಉತ್ಪಾದಿಸುವ ಬಲಗಳನ್ನು ಈ ಧರ್ಮಗುರುಗಳು ತಮ್ಮ ಕಾರ್ಯಕಲಾಪ ಗಳಲ್ಲಿ ಅನುಷ್ಠಾನಿಸುವುದೊಂದೇ ಋಜು ಮಾರ್ಗ. ನಿಜಕ್ಕೂ ಇದೊಂದು ಅಧಿಕ ಕಷ್ಟಕರ ಆದರೆ ಉಪಮಾತೀತವಾಗಿ ಪರಮಯೋಗ್ಯಸಾಹಸ. (Herbert Samuel ಅವರ *Belief and Action* ಪುಸ್ತಕದಲ್ಲಿ ಈ ಭಾವ ಅತಿ ಸ್ಫುಟವಾಗಿ ಬಿತ್ತರಗೊಂಡಿದೆ.) ಈ ಮೇಲೆ ಸೂಚಿಸಿರುವ ಸಂಸ್ಕರಣ ಪ್ರಕ್ರಿಯೆಯನ್ನು ಧಾರ್ಮಿಕ ಗುರುಗಳು ಉಪಕ್ರಮಿಸಿದಾಗ ವೈಜ್ಞಾನಿಕ ಜ್ಞಾನದಿಂದ ಹೇಗೆ ನೈಜಧರ್ಮ ಉದಾತ್ತೀಕರಣಗೊಳ್ಳುವುದು ಮತ್ತು ಅಧಿಕ ಪ್ರಗಲ್ಭವಾಗುವುದು ಎಂಬ ಸಂಗತಿ ಅವರಿಗೆ ತಿಳಿದು ಸಂತಸವಾಗದಿರದು.

ಮನುಕುಲವನ್ನು ಅಹಂಕಾರಕೇಂದ್ರಿತ ದುರಾಶೆ, ಬಯಕೆ ಮತ್ತು ಭೀತಿಗಳ ಬಂಧನದಿಂದ ಸಾಧ್ಯವಾಗುವಷ್ಟರ ಮಟ್ಟಿಗೆ ವಿಮೋಚನೆಗೊಳಿಸುವುದು ಧರ್ಮದ ಗುರಿಗಳ ಪೈಕಿ ಒಂದೆಂಬುದು ನಿಜವಾದರೆ ಅದೇ ಧರ್ಮಕ್ಕೆ ವೈಜ್ಞಾನಿಕ ತರ್ಕ ಇನ್ನೂ ಒಂದು ಅರ್ಥದಲ್ಲಿ ನೆರವಾಗಬಲ್ಲದು. ಸಂಗತಿಗಳ ಸಾಹಚರ್ಯ ಮತ್ತು ಭವಿಷ್ಯವಾಚನ ಇವನ್ನು ಸಾಧ್ಯವಾಗಿಸುವ ವಿಧಿಗಳ ಆವಿಷ್ಕಾರ ವಿಜ್ಞಾನದ ಗಮ್ಯ ಎಂಬುದು ನಿಜವಾದರೂ ಅದರ ಗುರಿ ಇದೊಂದೇ ಅಲ್ಲ. ಹೀಗೆ ಆವಿಷ್ಕರಿಸ ಲಾದ ಸಂಬಂಧಗಳನ್ನು ಅದು ಆದಷ್ಟು ಕಡಿಮೆ ಸಂಖ್ಯೆಯ ಪರಸ್ಪರ ಸ್ವತಂತ್ರ ಪರಿಕಲ್ಪನಾತ್ಮಕ ಧಾತುಗಳಾಗಿ ಸಂಕ್ಷೇಪಿಸಲು ಕೂಡ ಪ್ರಯತ್ನಿಸುತ್ತದೆ. ಈ ತೆರನಾಗಿ ವಿಶ್ವದ ಬಹುಪದರಗಳನ್ನು ವೈಚಾರಿಕ ಏಕೀಕರಣಕ್ಕೆ ಸಂಯೋಗಿಸುವ ಸಾಹಸದಲ್ಲಿ ವಿಜ್ಞಾನ ತನ್ನ ಪ್ರಚಂಡ ವಿಜಯಗಳನ್ನು ಸ್ಥಾಪಿಸುತ್ತದೆ. ಜೊತೆಯಲ್ಲಿಯೇ ಈ ಪ್ರಯತ್ನ ವಿಜ್ಞಾನವನ್ನು ಅನೇಕ ಭ್ರಮೆ ಅಥವಾ ಮಾಯಾ ಕಲ್ಪನೆಗಳ ಮಡುವಿಗೆ ಕೆಡೆಯುವ ಅಪಾಯವೂ ಉಂಟು. ಈ ಪ್ರಾಂತದಲ್ಲಿ ಯಶಸ್ವಿಯಾಗಿ ಸಾಧಿಸಲಾದ ಪ್ರಗತಿಪರಂಪರೆಯ ಗಾಢ ಅನುಭವ ಗಳಿಸಿದ ಪ್ರತಿಯೊಬ್ಬನೂ ಅಸ್ತಿತ್ವದಲ್ಲಿ ಪ್ರಕಟವಾಗುವ ವೈಚಾರಿಕತೆ ಬಗ್ಗೆ ಪ್ರಗಲ್ಭ ಭಕ್ತಿಭಾವದಿಂದ ಉದ್ದೀಪಿತನಾಗಿಯೇ ಆಗುತ್ತಾನೆ. ಇದರಿಂದ ಮೂಡುವ ತಿಳಿವಿನ ಫಲವಾಗಿ ದೀರ್ಘಾವಧಿಯಲ್ಲಿ ಆತ ವೈಯಕ್ತಿಕ ಆಶಯಗಳ ಮತ್ತು ಬಯಕೆಗಳ ಸರಪಳಿಗಳಿಂದ ವಿಮುಕ್ತನಾಗಿ, ತನ್ಮೂಲಕ, ಅಸ್ತಿತ್ವದಲ್ಲಿ ಮೂರ್ತೀಭವಿಸಿ ರುವ ಕಾರಣದ (reason) ಭವ್ಯತೆಯತ್ತ ವಿನೀತದೃಷ್ಟಿ ತಳೆಯುತ್ತಾನೆ. ಕಾರಣದ ಈ ಭವ್ಯತೆ, ಇದರ ಪ್ರಗಲ್ಭತಮ ಆಳಗಳಲ್ಲಿ, ಮಾನವನಿಗೆ ಅಪ್ರವೇಶ್ಯ. ಎಂದೇ ಈ ದೃಷ್ಟಿ, ಧಾರ್ಮಿಕ ಪದದ ಪರಮೋತ್ಕೃಷ್ಟ ಅರ್ಥದಲ್ಲಿ, ಧಾರ್ಮಿಕವೆಂದು ನನಗೆ ತೋರುತ್ತದೆ. ಆದ್ದರಿಂದ, ನಮ್ಮ ಅನುಭವದ ತೀರ ಕೆಳಪದರಗಳಲ್ಲಿಯ ಕಚ್ಚಾಭಾವಗಳ ಸುತ್ತ ಹೆಣೆದುಕೊಂಡಿರುವ ಮಾನವ-ರೂಪೀ ಧಾರ್ಮಿಕ ಆವೇಗವನ್ನು ವಿಜ್ಞಾನಶುದ್ಧೀಕರಿಸುತ್ತದೆ ಮಾತ್ರವಲ್ಲ, ಬದುಕಿನ ಬಗ್ಗೆ ನಾವು ಗಳಿಸಿರುವ ತಿಳಿವಳಿಕೆಯ ಧಾರ್ಮಿಕ ಆಧ್ಯಾತ್ಮೀಕರಣವನ್ನೂ ಆಗಗೊಳಿಸುವುದೆಂದು ನನಗೆ ತೋರುತ್ತದೆ.

ಮನುಕುಲದ ಆಧ್ಯಾತ್ಮಿಕ ವಿಕಾಸ ಮುನ್ನಡೆದಂತೆ ನನಗೆ ಒಂದು ಸಂಗತಿ ಹೆಚ್ಚು ಹೆಚ್ಚಾಗಿ

ಕಾಣತೊಡಗಿದೆ : ಋಜು ಧಾರ್ಮಿಕತೆಯೆಡೆಗಿನ ಮಾರ್ಗ ಜೀವನಭಯದ, ಮರಣಭಯದ ಅಥವಾ ಅಂಧಶ್ರದ್ಧೆಯ ಮೂಲಕ ಸಾಗಿಲ್ಲ, ಬದಲು, ವೈಚಾರಿಕ ಅರಿವಿಗಾಗಿ ಶ್ರಮಿಸುವುದರ ಮೂಲಕ ಸಾಗುತ್ತದೆ. ಧರ್ಮಗುರು ತನ್ನ ಘನೋದ್ದಿಷ್ಟ ಶೈಕ್ಷಣಿಕ ರಾಯಭಾರಕ್ಕೆ ಪೂರ್ಣ ನ್ಯಾಯ ಸಲ್ಲಿಸಲು ಇಚ್ಛಿಸುವುದಾದರೆ ಆತ ಒಬ್ಬ ಶಿಕ್ಷಕನಾಗಬೇಕೆಂದು ಈ ಅರ್ಥದಲ್ಲಿ ನಂಬುತ್ತೇನೆ.

**ಅನುಬಂಧ ೪**

## ಧರ್ಮ ಮತ್ತು ವಿಜ್ಞಾನ

ಐನ್‌ಸ್ಟೈನ್ ೧೯೩೦ರಲ್ಲಿ ಬರೆದ ಲೇಖನದ ಭಾವಾನುವಾದ

ಮನುಕುಲದ ಸಮಸ್ತ ಚಟುವಟಿಕೆ ಚಿಂತನೆಗಳೂ ಅದಮ್ಯ ಅಗತ್ಯಗಳ ಪೂರೈಕೆ ಮತ್ತು ನೋವಿನ ಉಪಶಮನ ಕುರಿತೇ ಇರುವಂಥವು. ಆಧ್ಯಾತ್ಮಿಕ ಆಂದೋಲನಗಳನ್ನೂ ಅಭಿವರ್ಧನೆಯನ್ನೂ ತಿಳಿಯಬಯಸುವಾತ ಈ ಸಂಗತಿಯನ್ನು ಸದಾ ನೆನಪಿನಲ್ಲಿಟ್ಟುಕೊಂಡಿರಬೇಕು. ಮಾನವನ ಸಕಲ ಉದ್ಯಮ ಮತ್ತು ನಿರ್ಮಿತಿಗಳನ್ನು ಪ್ರೇರಿಸುವ ಚಾಲನಬಲಗಳು, ಅವು ಎಂಥ ವೇಷಭೂಷಣಗಳಲ್ಲೇ ಅವತರಿಸಲಿ, ಅಂತಿಮವಾಗಿ ಎರಡು ಮಾತ್ರ : ಸಂವೇದನೆ [feeling] ಮತ್ತು ಅಗತ್ಯತೆ [longing]. ಹಾಗಾದರೆ ವ್ಯಕ್ತಿಗಳನ್ನು ಧಾರ್ಮಿಕ ಭಾವನೆ ಮತ್ತು ನಂಬಿಕೆಗಳತ್ತ —ಈ ಪದಗಳ ಅತ್ಯಂತ ವ್ಯಾಪಕಾರ್ಥದಲ್ಲಿ—ಸಾಗುವಂತೆ ಮಾಡುವ ಸಂವೇದನೆಗಳು ಮತ್ತು ಅಗತ್ಯತೆಗಳು ಯಾವುವು ? ವ್ಯಾಪಕ ವೈವಿಧ್ಯಪೂರಿತ ರಾಗಭಾವಗಳು ಧಾರ್ಮಿಕ ಭಾವನೆ ಹಾಗೂ ಅನುಭವಗಳ ಉದ್ಭವಕ್ಕೆ ಕಾರಣವಾಗುತ್ತವೆಂಬ ಸಂಗತಿ ಅತ್ಯಲ್ಪ ಪರಿಶೀಲನೆಗೂ ತಿಳಿಯಬರುತ್ತದೆ. ಆದಿಮಾನವನಲ್ಲಿ ಧಾರ್ಮಿಕ ಭಾವನೆಯನ್ನು ಪ್ರೇರಿಸಿದ ಬಲವೆಂದರೆ—ಎಲ್ಲಕ್ಕಿಂತಲೂ ಮಿಗಿಲಾಗಿ—ಹಸಿವಿನ, ಹಿಂಸ್ರಪಶುಗಳ, ಅನಾರೋಗ್ಯದ ಮತ್ತು ಮರಣದ ಭಯ. ನಾಗರಿಕತೆಯ ಆ ಆದಿಮ ಹಂತದಲ್ಲಿ ಕಾರ್ಯ-ಕಾರಣ ಸಂಬಂಧ ಕುರಿತಂತೆ ಮಾನವನ ಜ್ಞಾನ ಸಾಧಾರಣವಾಗಿ ತೀರ ಕೆಳಮಟ್ಟದ್ದಾಗಿದ್ದುದರಿಂದ, ಆತನ ಮನಸ್ಸು ಹೆಚ್ಚು ಕಡಿಮೆ ತನಗೆ ಸದೃಶವಾದ ಭ್ರಾಮಕ ಬಲಗಳನ್ನು ಸೃಷ್ಟಿಸಿತು ; ಮತ್ತು ಇವುಗಳ ಇಚ್ಛೆ ಹಾಗೂ ಕ್ರಿಯೆ ಅನುಸರಿಸಿ ಈ ಭಯಕಾರಕ ಘಟನೆಗಳು ಸಂಭವಿಸುವುವೆಂದು ಭಾವಿಸಿತು. ಹೀಗೆ ವ್ಯಕ್ತಿ ಈ ಬಲಗಳ ಅನುಗ್ರಹ ಸಂಪಾದನೆಗೋಸ್ಕರ, ಪೀಳಿಗೆಯಿಂದ ಪೀಳಿಗೆಗೆ ಅನೂಚಾನವಾಗಿ ಹರಿದುಬಂದ ಪ್ರಕಾರ, ಅವನ್ನು ಪ್ರಸನ್ನಗೊಳಿಸಲು ಅಥವಾ ಅವು ತನ್ನ ಬಗ್ಗೆ ಸುಪ್ರೀತವಾಗುವಂತೆ ಮಾಡಲು, ಅವುಗಳಿಗೆ ಪೂಜೆ ಸಲ್ಲಿಸಿದ ಮತ್ತು ಬಲಿ ನೀಡಿದ. ಈ ಅರ್ಥದಲ್ಲಿ ನಾನು ಭಯಾಧಾರಿತ ಧರ್ಮದ ಬಗ್ಗೆ ಪ್ರಸ್ತಾವಿಸುತ್ತಿದ್ದೇನೆ. ಇದು ಸೃಷ್ಟಿಸಲ್ಪಡುವುದಿಲ್ಲ ; ಬದಲು, ಜನರಿಗೂ ಅವರು ಹೆದರುವ ಬಲಗಳಿಗೂ ನಡುವೆ ತನ್ನನ್ನು ತಾನೇ ಸ್ಥಾಪಿಸಿಕೊಂಡು, ಆ ಆಧಾರದ ಮೇಲೆ ಅಧಿನಾಯಕತ್ವ ವಹಿಸಿಕೊಂಡ ಪುರೋಹಿತ ವರ್ಗವೊಂದರ ರೂಪಣೆಯಿಂದ ಬಲು ಮುಖ್ಯವಾದ ಮಟ್ಟದಲ್ಲಿ ಭದ್ರವಾಗಿ ನೆಲೆಗೊಳ್ಳುವುದು. ಹಲವಾರು ಸಂದರ್ಭಗಳಲ್ಲಿ ಒಬ್ಬ ಮುಂದಾಳು ಇಲ್ಲವೇ ಅರಸ, ಅಥವಾ ಇತರ ಕಾರಣಗಳಿಗಾಗಿ ಸ್ಥಾನ ಸುಭದ್ರವಾಗಿದ್ದು ಸವಲತ್ತು ಪಡೆದಿರುವ ಒಂದು ವರ್ಗದವನು, ತನ್ನ ಐಹಿಕ ಅಧಿಕಾರವನ್ನು ಅಧಿಕ ಭದ್ರಗೊಳಿಸುವ ಈ ಧರ್ಮದ ಜೊತೆಗೆ ಪುರೋಹಿತನ ಕ್ರಿಯೆಗಳನ್ನೂ ಸಂಯೋಗಿಸುತ್ತಾನೆ ; ಅಥವಾ ತಮ್ಮ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಸಲುವಾಗಿ ರಾಜಕೀಯ ನಾಯಕರೂ ಪುರೋಹಿತ ವರ್ಗದವರೂ ಉಭಯಸಾಮಾನ್ಯ ವೇದಿಕೆ

ಯಲ್ಲಿ ಸಹಕರಿಸುತ್ತಾರೆ.

ಧರ್ಮದ ಎಳೆಗಳು ಪರಸ್ಪರ ಹೆಣೆದುಕೊಂಡು ವಸ್ತ್ರವಾಗಿ ನೇಯ್ದುಕೊಳ್ಳಲು ಕಾರಣವಾಗುವ ಇನ್ನೊಂದು ಆಕರವೆಂದರೆ ಸಾಮಾಜಿಕ ಪ್ರೇರಣೆಗಳು. ತಂದೆತಾಯಿಯರು ಅಂತೆಯೇ ಮಾನವ ಸಮುದಾಯಗಳ ನಾಯಕರು ಯಾರೂ ಅಮರರಲ್ಲ, ಅಜೇಯರೂ ಅಲ್ಲ. ಎಂದೇ ದಿಗ್ದರ್ಶನ, ಪ್ರೀತಿ ಮತ್ತು ಅವಲಂಬನೆ ಬಯಸುವ ಜನರು ದೇವರ ಬಗೆಗಿನ ಸಾಮಾಜಿಕ ಅಥವಾ ನೈತಿಕ ಕಲ್ಪನೆ ರೂಪಿಸಲು ಪ್ರೇರಣೆ ಬಯಸುತ್ತಾರೆ. ಈತನೇ ಸರ್ವನಿಯಾಮಕ ಭಗವಂತ : ಶಿಷ್ಟ ಸಂರಕ್ಷಕ, ದುಷ್ಟ ನಿಗ್ರಾಹಕ, ಅಭೀಷ್ಟವರದಾಯಕ ಮತ್ತು ಶಿಕ್ಷಾಪ್ರದಾಯಕ. ಈತ ತನ್ನನ್ನು ನಂಬಿದಾತನ ಜೀವನ ದೃಷ್ಟಿಯ ಸೀಮಿತಗಳ ಅನುಸಾರ ಸಮುದಾಯದ ಇಲ್ಲವೇ ಮನುಕುಲದ ಬದುಕನ್ನು ಅಥವಾ ಸ್ವತಃ ಜೀವನವನ್ನೇ ಪ್ರೀತಿಸಿ ಪೋಷಿಸುತ್ತಾನೆ ; ಶೋಕಪರಿಹಾರದಲ್ಲಿಯೂ ಅತೃಪ್ತ ಬಯಕೆಗಳ ಪೂರೈಕೆಯಲ್ಲಿಯೂ ಸಾಂತ್ವನ ನೀಡುತ್ತಾನೆ ; ಸತ್ತವರ ಜೀವಗಳನ್ನು ಜೋಪಾನವಾಗಿ ಕಾಪಾಡುತ್ತಾನೆ. ದೇವರನ್ನು ಕುರಿತ ಸಾಮಾಜಿಕ ಅಥವಾ ನೈತಿಕ ಕಲ್ಪನೆ ಇದು.

ಭಯಾಧಾರಿತ ಧರ್ಮ ಹೇಗೆ ನೀತ್ಯಾಧಾರಿತ ಧರ್ಮಕ್ಕೆ ಅಭಿವರ್ಧಿಸುತ್ತದೆ ಎನ್ನುವುದಕ್ಕೆ ಯೆಹೂದ್ಯ ಧರ್ಮಗ್ರಂಥಗಳಲ್ಲಿ ಪ್ರಶಸ್ತ ನಿದರ್ಶನ ದೊರೆಯುತ್ತದೆ. ಈ ಅಭಿವರ್ಧನೆ ಹೊಸ ಒಡಂಬಡಿಕೆಯಲ್ಲಿಯೂ ಮುಂದುವರಿದಿದೆ. ಎಲ್ಲ ನಾಗರಿಕ ಜನಾಂಗಗಳ, ತತ್ರಾಪಿ ಪೌರಸ್ತ್ಯ ಜನಾಂಗಗಳ, ಧರ್ಮಗಳೂ ಪ್ರಧಾನವಾಗಿ ನೀತ್ಯಾಧಾರಿತವಾದವು. ಭಯಾಧಾರಿತ ಧರ್ಮದಿಂದ ನೀತ್ಯಾಧಾರಿತ ಧರ್ಮಕ್ಕೆ ಆದ ಅಭಿವರ್ಧನೆ ಜನಜೀವನದಲ್ಲಿ ಸಂಭವಿಸಿದ ಒಂದು ಮಹತ್ತ್ವ ಪೂರ್ಣ ಘಟನೆ. ಇಂತಿದ್ದರೂ ಆದಿಮ ಧರ್ಮಗಳು ಪೂರ್ತಿ ಭಯಾಧಾರಿತವಾದವು, ನಾಗರಿಕ ಜನಾಂಗಗಳವಾದರೋ ಶುದ್ಧ ನೀತ್ಯಾಧಾರಿತವಾದವು ಎಂಬ ಗ್ರಹಿಕೆ ಸಮರ್ಥನೀಯವಲ್ಲ. ಈ ಪೂರ್ವಗ್ರಹದ ವಿರುದ್ಧ ನಾವು ಜಾಗರೂಕರಾಗಿರುವುದು ಅಗತ್ಯ. ನಿಜಸಂಗತಿ ಏನೆಂದರೆ ಎಲ್ಲ ಧರ್ಮಗಳೂ, ಈ ಒಂದು ವ್ಯತ್ಯಾಸದ ಹೊರತಾಗಿ, ವಿವಿಧ ಬಗೆಯ ಒಂದಿಕೆಗಳು (blends) ಮಾತ್ರ : ಸಾಮಾಜಿಕ ಜೀವನದ ಉನ್ನತ ಸ್ತರಗಳಲ್ಲಿ ನೀತ್ಯಾಧಾರಿತ ಧರ್ಮದ ಪ್ರಾಬಲ್ಯ ಅಧಿಕ.

ದೇವರ ಬಗೆಗಿನ ಕಲ್ಪನೆಯಲ್ಲಿ ಮಾನವಕೇಂದ್ರೀಯ ಲಕ್ಷಣವಿರುವುದು ಎಲ್ಲ ಬಗೆಗಳಿಗೂ ಸಾಮಾನ್ಯವಾದ ಗುಣ. ವ್ಯಾಪಕವಾಗಿ ಹೇಳುವುದಾದರೆ ಅಸಾಧಾರಣ ಸಾಮರ್ಥ್ಯವಿರುವ ವ್ಯಕ್ತಿಗಳು ಮತ್ತು ಅಸಾಧಾರಣ ಉನ್ನತ ಮಾನಸಿಕ ಸ್ಥಿತಿಯ ಸಮುದಾಯಗಳು ಮಾತ್ರ ಈ ಮಟ್ಟಕ್ಕಿಂತ ಯಾವುದೇ ಗಮನಾರ್ಹ ಎತ್ತರ ಏರಿರುತ್ತವೆ, ಅಷ್ಟೆ. ಈಗ, ಇವೆಲ್ಲವುಗಳಲ್ಲಿಯೂ ಇರುವ ಆದರೆ ತೀರ ವಿರಳವಾಗಿ ಮಾತ್ರ ಶುದ್ಧ ರೂಪದಲ್ಲಿ ಕಂಡುಬರುವ ಮೂರನೆಯ ಹಂತದ ಧಾರ್ಮಿಕಾನುಭವವೊಂದುಂಟು. ಇದನ್ನು ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆ (Cosmic religious feeling) ಎಂದು ಕರೆಯುತ್ತೇನೆ. ಮುಖ್ಯವಾಗಿ ಇದಕ್ಕೆ ಸಂವಾದಿಯಾದ ಮಾನವ ಕೇಂದ್ರೀಯ ದೇವರ ಕಲ್ಪನೆ ಇಲ್ಲವಾದ್ದರಿಂದ ಈ ಸಂವೇದನೆ ಒಂದಿಷ್ಟೂ ಇಲ್ಲದವರಿಗೆ ಇದನ್ನು ವಿವರಿಸಿ ಹೇಳುವುದು ಕಡು ಕಷ್ಟ.

ಮಾನವ-ಅಭೀಪ್ಸೆ ಹಾಗೂ ಉದ್ದೇಶಗಳ ಅರ್ಥಹೀನತೆಯನ್ನೂ, ಅದೇ ವೇಳೆ ನಿಸರ್ಗ ದಲ್ಲಿಯೂ ಭಾವನಾಪ್ರಪಂಚದಲ್ಲಿಯೂ ಪ್ರಕಟವಾಗುವ ಪರಮಭವ್ಯತೆ ಹಾಗೂ ಅದ್ಭುತ ಕ್ರಮ ಬದ್ಧತೆಯನ್ನೂ ವ್ಯಕ್ತಿ ಚೆನ್ನಾಗಿ ಮನಗಾಣುತ್ತಾನೆ. ಅವನಿಗೆ ವೈಯಕ್ತಿಕ ಅಸ್ತಿತ್ವ ಒಂದು ತೆರನಾದ ತುರಂಗಬಂಧನವೆಂದು ಮನವರಿಕೆಯಾಗಿ ಇಡೀ ವಿಶ್ವವನ್ನು ಅಖಂಡವಾದ ಒಂದೇ ಘಟಕವಾಗಿ ಅನುಭವಿಸಬೇಕೆಂದು ಹವಣಿಸುತ್ತಾನೆ. ನಾಗರಿಕತೆಯ ವಿಕಾಸದ ಆರಂಭ ಘಟ್ಟದಲ್ಲಿಯೇ

ಡೇವಿಡ್ನನ ಹಲವಾರು ಭಕ್ತಿಗೀತೆಗಳಲ್ಲಿ ಮತ್ತು ಪ್ರವಾದಿಗಳ ಕೆಲವು ಸೂಕ್ತಿಗಳಲ್ಲಿ, ಈ ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆಯ ಮೊದಲ ಸುಳುಹುಗಳು ಮೈದೋರಿರುವುದನ್ನು ಕಾಣುತ್ತೇವೆ. ವಿಶೇಷವಾಗಿ ಶೋಪೆನ್‌ಹೌರನ ಅದ್ಭುತ ಬರೆಹಗಳು ಶ್ರುತಪಡಿಸಿರುವ ಬೌದ್ಧ ಧರ್ಮದಲ್ಲಿ ಈ ಅಂಶ ಸಾಕಷ್ಟು ಸ್ಫುಟವಾಗಿ ಪ್ರಕಟವಾಗಿದೆ.

ಎಲ್ಲ ಕಾಲಗಳ ಧಾರ್ಮಿಕ ಸೀಮಾವ್ಯಕ್ತಿಗಳಲ್ಲಿಯೂ ಈ ತೆರನಾದ ಧಾರ್ಮಿಕ ಸಂವೇದನೆ ಎದ್ದು ಕಾಣುತ್ತದೆ. ಯಾವುದೇ ಅಂಧ ಸಿದ್ಧಾಂತವಾಗಲೀ ಮಾನವಪ್ರತಿಬಿಂಬವಾಗಿ ರೂಪಿತವಾದ ದೇವರಾಗಲೀ ಇದಕ್ಕೆ ಗ್ರಾಹ್ಯವಲ್ಲ. ಎಂದೇ ಇದನ್ನು ಆಧರಿಸಿ ತನ್ನ ಕೇಂದ್ರ ಬೋಧನೆಗಳನ್ನು ಪ್ರಚುರಪಡಿಸುವ ಮಠವಿರುವುದು ಸಾಧ್ಯವಿಲ್ಲ. ಪ್ರತಿಯೊಂದು ಯುಗದಲ್ಲಿಯೂ ಈ ತೆರನಾದ ಧಾರ್ಮಿಕ ಸಂವೇದನೆ ಇರುವ ವ್ಯಕ್ತಿಗಳನ್ನು 'ಪಾಷಂಡಿ'ಗಳಲ್ಲಿಯೇ ಕಾಣುವುದು ಈ ಕಾರಣ ದಿಂದ. ಸಮಕಾಲೀನರಿಗೆ ಇವರ ಪೈಕಿ ಅನೇಕರು ನಾಸ್ತಿಕರಾಗಿ ಕಂಡಿರಬಹುದು. ಒಮ್ಮೊಮ್ಮೆ ಸಂತರಾಗಿಯೂ ಕಂಡಿರಬಹುದು. ಈ ನೆಲೆಯಲ್ಲಿ ನೋಡುವಾಗ ಡೆಮಾಕ್ರಿಟಸ್, ಅಸ್ಸೀಸಿಯ ಫ್ರಾನ್ಸಿಸ್ ಮತ್ತು ಸ್ಪಿನೋಜ಼ ಪರಸ್ಪರ ನಿಕಟಸಂಬಂಧಿತರಾಗುತ್ತಾರೆ.

ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆ ಮತಧರ್ಮಶಾಸ್ತ್ರದ ಉಗಮಕ್ಕೂ ದೇವರ ಬಗೆಗೆ ನಿರ್ದಿಷ್ಟ ಭಾವನೆಯ ಉದ್ಭವಕ್ಕೂ ಎಡೆಮಾಡಿಕೊಡದಿದ್ದರೆ ಆ ಸಂವೇದನೆಯನ್ನು ವ್ಯಕ್ತಿಯಿಂದ ವ್ಯಕ್ತಿಗೆ ಸಂವಹನಿಸುವುದು ಹೇಗೆ ತಾನೇ ಸಾಧ್ಯ ? ಈ ಸಂವೇದನೆಯನ್ನು ಗ್ರಹಿಸಬಲ್ಲವರಲ್ಲಿ ಇದನ್ನು ಉದ್ದೀಪಿಸುವುದೂ ಜೀವಂತವಾಗಿಡುವುದೂ ಕಲೆ ಮತ್ತು ವಿಜ್ಞಾನದ ಅತಿಮುಖ್ಯ ಪಾತ್ರ ಎಂಬುದು ನನ್ನ ಅಭಿಪ್ರಾಯ.

ಹೀಗೆ ಧರ್ಮದ ಜೊತೆ ವಿಜ್ಞಾನದ ಸಂಬಂಧ ಕುರಿತಂತೆ ಮಾಮೂಲು ಭಾವನೆಗಿಂತ ತೀರ ಬೇರೆಯದೇ ಆದ ಒಂದು ಪರಿಕಲ್ಪನೆ ತಲಪುತ್ತೇವೆ. ಇದೇ ವಿಷಯವನ್ನು ಐತಿಹಾಸಿಕವಾಗಿ ಪರಿಶೀಲಿಸುವಾತನಿಗೆ ವಿಜ್ಞಾನ ಮತ್ತು ಧರ್ಮ ಎಂದೂ ರಾಜಿ ಆಗದ ಬದ್ಧ ವೈರಿಗಳಾಗಿ ಕಾಣು ವುದು ಸಾಧ್ಯವಿದೆ : ಇದರ ಕಾರಣ ಸುಸ್ಪಷ್ಟ. ವಿಶ್ವದ ಸಮಸ್ತ ಕ್ರಿಯೆಗಳೂ ಕಾರ್ಯ-ಕಾರಣ ಸಂಬಂಧದಿಂದ ನೇಯ್ಗೆಗೊಂಡಿವೆ. ಕಾರಣತಾನಿಯಮದ ಸರ್ವತ್ರ ಚಲಾವಣೆ ಕುರಿತು ವಿಶ್ವಾಸ ವಿರುವಾತ, ಈತ ಕಾರಣತಾವಾದವನ್ನು ಗಂಭೀರವಾಗಿ ಪರಿಗಣಿಸಿದ್ದೇ ಆದರೆ, ಘಟನೆಗಳ ಪರಂಪರೆಯನ್ನು ಪ್ರಭಾವಿಸಬಲ್ಲ ಯಾವುದೇ ಶಕ್ತಿಯ ಬಗ್ಗೆ ಇನಿತೂ ವಿಶ್ವಾಸ ತಳೆಯಲಾರ. ಈತನಿಗೆ ಭಯಾಧಾರಿತ ಧರ್ಮ ಪೂರ್ತಿ ನಿಷ್ಪ್ರಯೋಜಕ. ಅದೇ ರೀತಿ ಸಮಾಜಾಧಾರಿತ ಅಥವಾ ನೀತ್ಯಾಧಾರಿತ ಧರ್ಮ ಕೂಡ. ಸತ್ಕಾರ್ಯಕ್ಕೆ ಪಾರಿತೋಷಿಕ ಪ್ರದಾನಿಸುವ ಮತ್ತು ದುಷ್ಕಾರ್ಯಕ್ಕೆ ಶಿಕ್ಷೆ ವಿಧಿಸುವ ದೇವರು ಈತನಿಗೆ ಅಗ್ರಾಹ್ಯ. ಏಕೆಂದರೆ ವಸ್ತುತಃ ವ್ಯಕ್ತಿಯ ಎಲ್ಲ ಚಟುವಟಿಕೆ ಗಳನ್ನು ನಿರ್ಣಯಿಸುವುದು ಬಾಹ್ಯ ಮತ್ತು ಆಂತರಿಕ ಆವಶ್ಯಕತೆಗಳು ಮಾತ್ರ. ಎಂದೇ ದೇವರ ದೃಷ್ಟಿಯಲ್ಲಿ ನಿರ್ಜೀವ ವಸ್ತುಗಳು ಹೇಗೆ ತಮ್ಮಲ್ಲಿ ಕಂಡುಬರುವ ಚಲನೆಗಳಿಗೆ ತಾವು ಹೊಣೆ ಆಗಲಾರವೋ ಹಾಗೆ ವ್ಯಕ್ತಿ ಕೂಡ. ಈ ತೆರನಾಗಿ ಚಿಂತನೆಗೈಯುವ ವಿಜ್ಞಾನವು, ನೈತಿಕತೆಯನ್ನು ಸಡಿಲಗೊಳಿಸುವುದೆಂದು ಅದನ್ನು ದೂಷಿಸುವುದುಂಟು. ಆದರೆ ಇದು ನಿರಾಧಾರ ಆರೋಪ. ವ್ಯಕ್ತಿಯ ನೈತಿಕ ವರ್ತನೆ ಮುಖ್ಯವಾಗಿ ಅನುಕಂಪ, ಶಿಕ್ಷಣ ಮತ್ತು ಸಾಮಾಜಿಕ ಬಂಧ ಹಾಗೂ ಅಗತ್ಯಗಳನ್ನು ಅವಲಂಬಿಸಿರಬೇಕು. ಇದಕ್ಕೆ ಧಾರ್ಮಿಕ ಆಧಾರ ಅನಗತ್ಯ. ಈ ವರ್ತನೆಯನ್ನು ಮರಣಾನಂತರದಲ್ಲಿ ಒದಗಬಹುದಾದ ಶಿಕ್ಷೆಯ ಭಯ ಮತ್ತು ಬಹುಮಾನದ ಭರವಸೆ ಎಂಬ ಆಮಿಷಗಳಿಂದ ನಿಯಂತ್ರಿಸಬೇಕಾದಲ್ಲಿ ಬದುಕು ಅಪ್ಪಟರಮಟ್ಟಿಗೆ ಬಡವಾಗುವುದು ದಿಟ.

ಅಂದಮೇಲೆ ಇಗರ್ಜಿಗಳು ಸದಾ ವಿಜ್ಞಾನದ ವಿರುದ್ಧ ಹೋರಾಡಿರುವುದೇಕೆ ಮತ್ತು ಅದರ ಅನುಯಾಯಿಗಳನ್ನು ಹಿಂಸಿಸಿರುವುದೇಕೆ ಎನ್ನುವುದನ್ನು ತಿಳಿಯುವುದು ಸುಲಭ. ವಾಸ್ತವವಾಗಿ ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆಯೇ ವೈಜ್ಞಾನಿಕ ಸಂಶೋಧನೆಗೆ ಒದಗುವ ಅತ್ಯಂತ ಬಲಿಷ್ಠ ಹಾಗೂ ಉದಾತ್ತ ಪ್ರೇರಕಬಲವೆಂದು ಹೇಳಬಯಸುತ್ತೇನೆ. ವಿಜ್ಞಾನಿ ತನ್ನ ಕಾರ್ಯದಲ್ಲಿ ಪ್ರವರ್ತಿಸುವ ಅಮಿತ ಪ್ರಯತ್ನಗಳನ್ನೂ, ಎಲ್ಲಕ್ಕೂ ಮಿಗಿಲಾಗಿ, ಯಾವುದರ ಅಭಾವದಲ್ಲಿ ಸೈದ್ಧಾಂತಿಕ ವಿಜ್ಞಾನದಲ್ಲಿ ಹೊಸ ಹಾದಿ ಕಡಿವ ಕೆಲಸ ಸಾಧ್ಯವೇ ಆಗದೋ ಆ ಶ್ರದ್ಧೆಯನ್ನೂ ಅರಿಯಬಲ್ಲವರು ಮಾತ್ರ, ಜೀವನದ ತತ್ಕಾಲೀನ ವಾಸ್ತವತೆಗಳಿಂದ ದೂರವಾದ ವೈಜ್ಞಾನಿಕ ಕೃತಿ ಉದ್ಭವಿಸಲು ಏಕೈಕ ಕಾರಣವಾಗಿರುವ ರಾಗಭಾವದ ತೀವ್ರತೆಯನ್ನು ಗ್ರಹಿಸಲು ಸಮರ್ಥರಾಗುವರು. ಕೆಪ್ಲರ್ ಮತ್ತು ನ್ಯೂಟನ್ ಮಹಾಶಯರಿಗೆ ವಿಶ್ವದ ಕ್ರಮಬದ್ಧತೆಯ ಬಗ್ಗೆ ದೃಢ ಭರವಸೆಯೂ ಅದನ್ನು ಅರಿಯಬೇಕೆನ್ನುವುದರ ಬಗ್ಗೆ ತೀವ್ರ ಪಿಪಾಸೆಯೂ ಇಲ್ಲವಾಗಿದ್ದರೆ, ಅಥವಾ ಅವರು ಸಾಮಾನ್ಯ ವ್ಯಕ್ತಿಗಳಂತೆ ದುರ್ಬಲಮನಸ್ಕರಾಗಿದ್ದರೆ, ವಿಶ್ವದ ಗೋಜುಗೋಜಲಿನಿಂದ ಖಗೋಳೀಯ ಸಂಯಂತ್ರದ ಸೂತ್ರಗಳನ್ನು ಎಳೆಬಿಡಿಸಿ ವಿವರಿಸಲು ಅಷ್ಟು ದೀರ್ಘಕಾಲ ಏಕಾಂಗಿಗಳಾಗಿ ಶ್ರಮಿಸುತ್ತಿರಲಿಲ್ಲ. ಯುಗಯುಗಗಳಲ್ಲಿ ಅವತರಿಸಿ, ಪ್ರಪಂಚಾದ್ಯಂತ ಹರಡಿ ಹೋಗಿದ್ದು, ಸಂದೇಹಗ್ರಸ್ತ ಜನರಿಂದ ಸುತ್ತುವರಿಯಲ್ಪಟ್ಟಿದ್ದರೂ ತಮ್ಮ ಪ್ರಗಲ್ಭ ಸಾಧನೆ ಸಿದ್ಧಿಗಳ ಮೂಲಕ ಜ್ಞಾತಿಬಂಧುಗಳಿಗೆ ಸದಾಕಾಲ ಸರಿದಾರಿ ತೋರಿಸಿರುವ ವಿಜ್ಞಾನಸೀಮಾಪುರುಷರ ಮನೋಧರ್ಮದ ಬಗ್ಗೆ, ಮುಖ್ಯವಾಗಿ ವೈಜ್ಞಾನಿಕ ಸಂಶೋಧನೆಯ ವ್ಯಾವಹಾರಿಕ ಫಲಿತಾಂಶಗಳಿಂದ ಅವರನ್ನು ಅಳೆಯುವ ವ್ಯಕ್ತಿಗಳು, ತೀರ ಸುಲಭವಾಗಿ ಮಿಥ್ಯಾಭಾವನೆ ತಳೆಯುವುದುಂಟು. ಈ ಸೀಮಾಪುರುಷರಿಗೆ ಸ್ಫೂರ್ತಿಪ್ರೇರಕವಾದದ್ದು ಯಾವುದು, ಅಸಂಖ್ಯಾತ ವೈಫಲ್ಯಗಳನ್ನು ಎದುರಿಸಿಯೂ ತಮ್ಮ ಉದ್ದೇಶಕ್ಕೆ ಬದ್ಧರಾಗಿ ನಡೆಯಲು ತ್ರಾಣ ನೀಡಿದ್ದು ಯಾವುದು ಎಂಬ ಸಂಗತಿಗಳನ್ನು ಅವೇ ಪರಮಗಮ್ಯ ಉದ್ದೇಶಗಳ ಸಿದ್ಧಿಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟ ಒಬ್ಬ ವ್ಯಕ್ತಿ ಮಾತ್ರ ತಿಳಿಯಬಲ್ಲ. ವ್ಯಕ್ತಿಗೆ ಇಂಥ ತ್ರಾಣವೀಯುವ ಆ ಪರಮ ಚೈತನ್ಯವೇ ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆ. ಐಹಿಕ ಭೋಗಲಾಲಸೆಗಳು ಪ್ರಧಾನ ಆಕರ್ಷಣೆಗಳಾಗಿರುವ ಪ್ರಸಕ್ತ ಯುಗದಲ್ಲಿ ಗಂಭೀರ ಚಿಂತನಶೀಲ ವೈಜ್ಞಾನಿಕ ಕಾರ್ಯಕರ್ತರು ಮಾತ್ರ ನಿಜವಾದ ಧಾರ್ಮಿಕ ವ್ಯಕ್ತಿಗಳೆಂಬುದಾಗಿ ಸಮಕಾಲೀನ ಲೇಖಕನೊಬ್ಬ, ಹೇಳಿರುವುದು ಸರಿಯಾಗಿಯೇ ಇದೆ.

ಪ್ರಗಲ್ಭ ವಿಜ್ಞಾನಮತಿಗಳ ಶ್ರೇಣಿಯಿಂದ ಸ್ವಂತ ಧಾರ್ಮಿಕ ಸಂವೇದನೆ ಇರದ ಒಬ್ಬನನ್ನೂ ಆಯ್ದು ಗುರುತಿಸುವುದು ಅತಿ ಕಠಿಣ. ಆದರೆ ಈ ಸಂವೇದನೆ ಮುಗ್ಧನೊಬ್ಬನ ನಿಷ್ಕಪಟ ಧಾರ್ಮಿಕತೆಗಿಂತ ತೀರ ಬೇರೆಯೇ. ಈತ (ಮುಗ್ಧವ್ಯಕ್ತಿ) ದೇವರ ಕೃಪೆಯಿಂದ ತನಗೆ ಒಳಿತಾಗುವುದೆಂದು ಹರ್ಷಿಸುತ್ತಾನೆ ; ಅವಕೃಪೆಯಿಂದ ಕೆಡುಕಾಗುವುದೆಂದು ಹೆದರುತ್ತಾನೆ. ತಂದೆಯ ಬಗೆಗೆ ಮಗುವಿನ ಮನದಲ್ಲಿರುವ ಭಾವನೆಯ ಭವ್ಯರೂಪವಿದು : ದೇವರ ಜೊತೆ ತನಗೊಂದು ವೈಯಕ್ತಿಕ ಸಂಬಂಧವಿದೆ, ಅದು ಎಷ್ಟೇ ರುದ್ರ ಗಂಭೀರ ಸ್ವರೂಪದ್ದೇ ಆಗಿರಲಿ ಎನ್ನುವ ಪರಿಸ್ಥಿತಿ.

ವಿಜ್ಞಾನಿ ಹೀಗಲ್ಲ. ಈತ ವಿಶ್ವರೂಪಿ ಕಾರಣತೆಯ ಪ್ರಜ್ಞೆಯಿಂದ ದೀಪ್ತನಾಗಿರುವನು. ಈತನ ದೃಷ್ಟಿಯಲ್ಲಿ ಭವಿಷ್ಯಕಾಲದ ಪ್ರತಿಯೊಂದು ತುಣುಕೂ ಭೂತಕಾಲದ್ದರಂತೆಯೇ ಅಗತ್ಯ ಹಾಗೂ ನಿರ್ಧಾರಿತ. ನೈತಿಕತೆ ಕುರಿತಂತೆ ದೈವಿಕವಾದದ್ದು ಏನೂ ಇಲ್ಲ; ಇದೊಂದು ಶುದ್ಧ ಮಾನವ

ವ್ಯವಹಾರ. ಈತನ ಧಾರ್ಮಿಕ ಸಂವೇದನೆ ನೈಸರ್ಗಿಕ ನಿಯಮದಲ್ಲಿ ಪ್ರಕಟವಾಗುವ ಅದ್ಭುತ ಸುಸಾಂಗತ್ಯ ಕುರಿತು ದಿವ್ಯ ಮೂಕವಿಸ್ಮಯವಾಗಿ ಮೈದಳೆಯುತ್ತದೆ. ಈ ಸುಸಾಂಗತ್ಯದ ಅಂತರಾಳದಲ್ಲಿ ಪರಮಶ್ರೇಷ್ಠ ಧೀಮಂತಿಕೆ ಹುದುಗಿದೆ. ಇದರ ಜೊತೆ ಹೋಲಿಸುವಾಗ ಮನುಕುಲದ ವ್ಯವಸ್ಥಿತ ಚಿಂತನೆ ವರ್ತನೆಗಳೆಲ್ಲವೂ ತೀರ ಕ್ಷುದ್ರ ಅಲೆ ಎನ್ನಿಸುತ್ತವೆ. ಸ್ವಾರ್ಥಮೂಲ ಪ್ರಲೋಭನೆಯ ಬಂಧನದಿಂದ ಮುಕ್ತನಾಗಿರುವುದರಲ್ಲಿ ಈತ ಯಶಸ್ವಿಯಾಗಿ ಉಳಿದಿರುವ ತನಕ ಈ ಸಂವೇದನೆ ಈತನ ಜೀವನದ ಮಾರ್ಗದರ್ಶಕ ಸೂತ್ರವಾಗಿರುತ್ತದೆ. ಎಲ್ಲ ಯುಗಗಳ ಧಾರ್ಮಿಕ ಸೀಮಾಪುರುಷರನ್ನೂ ಉದ್ದೀಪಿತರನ್ನಾಗಿ ಹಿಡಿದಿಟ್ಟಿದ್ದ ಆ ವಿಶಿಷ್ಟ ಚೇತನಕ್ಕೆ ಇದು ಸನ್ನಿಕಟವಾಗಿ ಸಂಬಂಧಿತವಾಗಿದೆ ಎಂಬುದು ಪ್ರಶ್ನಾತೀತ.

* * *

ವಿಗ್ರಹದೊಳಿಲ್ಲ ನಾಮ ಬೂದಿಗಂಧದೊಳಿಲ್ಲ
ಉಗ್ರವಿಧಿ ತತ್ವನಿಧಿ ವೇದಮತಗಳೊಳಿಲ್ಲ
ಆಗ್ರಹಂ ಬೇಡ ರಾಷ್ಟ್ರನಿಷ್ಠೆಯೇ ದೇವಮ-
ತ್ಯುಗ್ರ ಬಾಗವಗತ್ಯಸತ್ಯ ಮಗಳೆ ದೇಜಗೌ

ದೇವರೆಂಬುವುದೇನು ? ಸೃಷ್ಟಿಸಾಂಗತ್ಯದಲಿ
ಜೀವಿವೈವಿಧ್ಯದಲಿ ಮಿಡಿವ ಸಂಗೀತವದು
ಭಾವಶುದ್ಧತೆಯ ಬಾಹ್ಯಪ್ರತೀಕವದು ತಿಳಿ
ಸಾವಧಾನದಿ, ನೀನೆಪರಮಾತ್ಮ ಅತ್ರಿಸೂನು

ಪ್ರೀತಿ : ತಪ್ಪನು ತಿದ್ದಿ ಸರಿದಾರಿ ಕಾಣಿಪುದು
ನೀತಿ : ತಪ್ಪನು ತೋರಿ ಋಜುಪಥಕ್ಕೊಯ್ಯುವುದು
ಪ್ರೀತಿ-ನೀತಿಗಳೆರಡು ಸಂಗಳಿಸೆ ಬಾಳಿನಲಿ
ಮಾತುಕೃತಿಗಳಭಿನ್ನವೆನಿಸುವುವು ಅತ್ರಿಸೂನು

ವಿಜ್ಞಾನಮೂಲವನು ಕಾಣ್ ತತ್ತ್ವಶಾಸ್ತ್ರದಲಿ
ತತ್ತ್ವಶಾಸ್ತ್ರದ ಸೆಲೆಯನರಸು ವಿಜ್ಞಾನದಲಿ
ಸೃಷ್ಟಿವೈಚಿತ್ರ್ಯವೀ ದ್ವಂದ್ವ, ಪರಿಕಿಪೊಡೆ ಅಂ-
ತರ್ಬೋಧೆಗಿದು ಗೋಚರಿಸುವುದೈ ಅತ್ರಿಸೂನು

ಸಂಕಲ್ಪ-ನಿರ್ವಹಣೆ ಬ್ರಹ್ಮಗಿರಿ-ಕಾವೇರಿ
ಶಂಕರತೆ-ಕಾಳಿತ್ವ ಸಂತುಲತೆಯಲ್ಲಿರಲು
ಪಂಕದಿಂಚಿಗುರುವುದು ಸೌಗಂಧ್ಯ ಜಡತಾತ್ರಿ—
ಶಂಕುತ್ವಕ್ರತುಶಕ್ತಿಯಾಗುವುದು ಅತ್ರಿಸೂನು

## ಅನುಬಂಧ ೫

# ಐನ್‌ಸ್ಟೈನ್ ಸೂಕ್ತಿ

ಪ್ರಿನ್‌ಸ್ಟನ್ನಿನಲ್ಲಿದ್ದ ಐನ್‌ಸ್ಟೈನ್, ೧೯೩೫ರಲ್ಲಿ, ಈ ಮುಂದಿನ ಬಾಬನ್ನು ಬರೆದರು. ಹಸ್ತ ಪ್ರತಿಯ ಮೇಲೆ "ಪ್ರಕಾಶಿಸಲಿಲ್ಲ" ಎಂಬ ಷರಾ ಇದೆ. ಐನ್‌ಸ್ಟೈನರ ಮರಣಾನಂತರ ಇದನ್ನು ಅಟೊ ನಾಥನ್ ಮತ್ತು ಹೈನ್ಝ್ ನಾರ್ಡನ್ *Einstein on Peace* ಎಂಬ ತಮ್ಮ ಪುಸ್ತಕದಲ್ಲಿ ಪ್ರಕಾಶಿಸಿದರು. ಈ ಬರೆಹ ಅಸಾಧಾರಣವಾಗಿ ಅತಿ ಕಟುವಾಗಿರುವುದರಿಂದ ಪ್ರಾಯಶಃ ಐನ್‌ಸ್ಟೈನ್ ಇದನ್ನು ಪ್ರಕಾಶಿಸದಿದ್ದುದಾಗಿರಬಹುದು. ಇದನ್ನು ಬರೆದುದರಿಂದ ಅವರಿಗೆ ಮಾನಸಿಕ ಸ್ವಾಸ್ಥ್ಯ ಒದಗಿರಬೇಕು :

ಯೂರೋಪಿನ ಹೃದಯ ಭಾಗದಲ್ಲಿ ಅನಾವರಣಗೊಳ್ಳುತ್ತಿರುವ ರುದ್ರದೃಶ್ಯ ಜರ್ಮನಿಗೆ ಶಾಶ್ವತ ಕಳಂಕ ಬಡಿಯುವಂತೆ ಅತಿ ಭೀಕರವಾಗಿದೆ ಮತ್ತು ಅಮಾನುಷವಾಗಿದೆ. ತನ್ನನ್ನು ನಾಗರಿಕವೆಂದು ಕರೆದುಕೊಳ್ಳುತ್ತಿರುವ ಜನಾಂಗಗಳ ಸಮುದಾಯಕ್ಕೆ ಇದು ಖಂಡಿತವಾಗಿಯೂ ಭೂಷಣಪ್ರಾಯವಾದುದಲ್ಲ !

ಶಾಲಾಧ್ಯಾಪಕರ ಹಾಗೂ ಕವಾಯತಿ ಸಾರ್ಜೆಂಟುಗಳ ಅನುಸ್ಯೂತ ಪೀಳಿಗೆ ಜರ್ಮನ್ ಮಂದಿಗೆ ಶತಮಾನಗಳಿಂದಲೂ ಮತಿಭ್ರಾಂತಿಯನ್ನು ಊಡುತ್ತ ಬಂದಿದೆ. ಕಠಿಣ ಪರಿಶ್ರಮದ ಶಿಕ್ಷಣ ಇವರಿಗೆ ದೊರೆತಿದೆ. ಅನೇಕ ವಿಷಯಗಳಲ್ಲಿ ಇವರು ಪರಿಣತರೂ ಆಗಿದ್ದಾರೆ. ಆದರೆ ಇವುಗಳ ಜೊತೆಯಲ್ಲೇ ಇವರನ್ನು ಗುಲಾಮಗಿರಿಯ ಕುರ್ನಿಸಾತು ಮನೋಭಾವಕ್ಕೂ ದಂಡಿನ ಮಾಮೂಲೀ ಚರ್ವಿತ ಚರ್ವಣ ಮತ್ತು ಪಾಶವೀಯತೆಗಳಿಗೂ ಪಳಗಿಸಿ ಹೊಂದಿಸಲಾಗಿದೆ. ವೈಮರ್ ಗಣರಾಜ್ಯದ ಯುದ್ಧೋತ್ತರ ಪ್ರಜಾಪ್ರಭುತ್ವಾತ್ಮಕ ಸಂವಿಧಾನ ಜರ್ಮನರಿಗೆ ದೈತ್ಯನ ಉಡುಗೆಗಳು ಉಂಗುಷ್ಠ ಮಹಾರಾಜನಿಗೆ ಪೊರ್ದುವಷ್ಟು ಅಡಕವಾಗಿ ಹೊಂದಿಕೊಂಡಿತು ! ಆಗ ಹಣದುಬ್ಬರ ಮತ್ತು ಮುಗ್ಗಟ್ಟು ಕವಿದು ಪ್ರತಿಯೊಬ್ಬನೂ ಭೀತ ಮತ್ತು ಉದ್ರಿಕ್ತ ವಾತಾವರಣದಲ್ಲಿ ನವೆಯುವಂತೆ ಮಾಡಿದುವು.

ಹಿಟ್ಲರ್ ರಂಗಪ್ರವೇಶಮಾಡಿದ. ಸನ್ನಿವೇಶ ಹಾಗೂ ನಿಸರ್ಗ ಇವುಗಳ ಕೂಡಿಕೆಯ ಪರಿಣಾಮವಾಗಿ ತನಗಿಂತ ಮೇಲು ಮಜಲಿನಲ್ಲಿದ್ದ ಎಲ್ಲವರ ಎದುರೂ ಇವನು ಅಸೂಯೆ ಮತ್ತು ಹಾಲಾಹಲ ಕಾರುತ್ತಿದ್ದ. ಬೌದ್ಧಿಕವಾಗಿ ಇವನದು ಮಿತಸಾಮರ್ಥ್ಯ. ಯಾವುದೇ ಕೆಲಸಕ್ಕೂ ನಾಲಾಯಕ್. ನಿಮ್ನಮಧ್ಯಮವರ್ಗದಿಂದ ಮೇಲಕ್ಕೆ ಜಿಗಿದ ಹಿಟ್ಲರ್, ಜೀವನ ಮಟ್ಟಗಳಲ್ಲಿ ಅಧಿಕಸಮತೆ ಗಳಿಸಲು ಹೋರಾಡುತ್ತಿದ್ದ ಕಾರ್ಮಿಕ ವರ್ಗವನ್ನು ಕೂಡ ದ್ವೇಷಿಸುವಷ್ಟು ವರ್ಗಪ್ರತಿಷ್ಠೆಯನ್ನು ತನ್ನಲ್ಲಿ ತುಂಬಿಕೊಂಡಿದ್ದ. ಅಧಿಕಾರ ಕಬಳಿಸಬೇಕೆಂಬ ತನ್ನ ಉಗ್ರಹಂಬಲವನ್ನು ಈಡೇರಿಸಿಕೊಳ್ಳುವ ಹಾದಿಯಲ್ಲಿ ಇವನು ಗುಡುಗುತ್ತಿದ್ದ ಭಾಷಣಗಳು—ಇವು ಹಗೆತನದ ಕಟ್ಟೆಬಿರಿವ ಕಾವಿನಿಂದ ಅರ್ಥರಹಿತವಾಗಿದ್ದುವಾದರೂ—ಇವನು ಜೀವನ ಮತ್ತು ದೃಷ್ಟಿಗಳೊಡನೆ ಸಹಮತರಾಗಿದ್ದವರಿಗೆ ಆಪ್ಯಾಯಮಾನವಾಗಿದ್ದುವೆಂದು ಇವನಿಗೆ ತಿಳಿಯಿತು. ಓಣಿ ಮತ್ತು

ಗಡಂಗುಗಳಿಂದ ಈ ತಿರುಕುಳಿ ಮಂದೆಯನ್ನು ಹೆಕ್ಕಿ ತನ್ನ ಸುತ್ತ ವ್ಯವಸ್ಥಿತವಾಗಿ ನೇಯ್ದುಕೊಂಡ. ಹಿಟ್ಲರ್ ತನ್ನ ರಾಜಕೀಯ ಜೀವನ ಆರಂಭಿಸಿದ್ದು ಹೀಗೆ.

ಆದರೆ ವಾಸ್ತವವಾಗಿ ಹಿಟ್ಲರನಿಗೆ ಧುರೀಣತ್ವದ ಅರ್ಹತೆ ಗಳಿಸಿಕೊಟ್ಟದ್ದೆಂದರೆ ವಿದೇಶೀಯವಾದ ಪ್ರತಿಯೊಂದರ ಎದುರೂ ಅವನಲ್ಲಿ ತಹತಹಿಸುತ್ತಿದ್ದ ಕಟುದ್ವೇಷ—ಅದರಲ್ಲೂ, ರಕ್ಷಣರಹಿತ ಅಲ್ಪ ಸಂಖ್ಯಾತ ಯೆಹೂದ್ಯರ ಬಗೆಗಿನ ತಿರಸ್ಕಾರ. ಇವರ ಬೌದ್ಧಿಕ ಸಂವೇದನಶೀಲತೆ ಅವನಲ್ಲಿ ಒಂದು ವಿಧದ ಅಸಹನೆಯನ್ನು ಪ್ರೇರಿಸಿತ್ತು. ಈ ಸಂವೇದನಶೀಲತೆಯನ್ನು ಅವನು—ಸ್ವಲ್ಪ ಮಟ್ಟಿಗೆ ಸಕಾರಣೀಯವಾಗಿಯೇ—ಅಜರ್ಮನ್ ಎಂಬುದಾಗಿ ಪರಿಗಣಿಸಿದ್ದ.

ಈ ಎರಡು "ಶತ್ರುಗಳ" ಎದುರು ಹಿಟ್ಲರ್ ಹೂಡಿದ ಉದ್ರೇಕಕಾರಿ ವಾಗ್ಸಮರಗಳು ಅವನಿಗೆ ಜನಜಂಗುಳಿಯ ಬೆಂಬಲ ಒದಗಿಸಿಕೊಟ್ಟವು. ಆ ಮಂದಿಗೆ ಆತ ಅದ್ಭುತ ವೈಭವಗಳನ್ನೂ ಸುವರ್ಣಯುಗವನ್ನೂ ಆಶ್ವಾಸಿಸಿದ. ಕವಾಯತಿ, ಆಜ್ಞೆ, ಅಂಧವಿನೀತತೆ ಮತ್ತು ಕ್ರೌರ್ಯ ಇವುಗಳ ಬಗೆಗೆ ಜರ್ಮನಿಯಲ್ಲಿ ಶತಮಾನಗಳ ಕಾಲದಿಂದ ಬೆಳೆದು ಬಂದಿದ್ದ ಆಸಕ್ತಿ ಅಭಿರುಚಿಗಳನ್ನು ಆತ ಸ್ವಂತೋದ್ದೇಶಗಳ ಈಡೇರಿಕೆಗೆ ತುಂಬ ಮುತ್ಸದ್ದಿತನದಿಂದ ಬಳಸಿಕೊಂಡ. ಹೀಗೆ ಹಿಟ್ಲರ್ ಫ್ಯೂಹ್ರರ್ ಆದ.

ಅವನ ಬೊಕ್ಕಸಗಳಿಗೆ ಹಣದ ಹೊಳೆಯೇ ಹರಿದು ಬಂದಿತು. ಆಸ್ತಿವಂತ ವರ್ಗಗಳು ಇದಕ್ಕೆ ಸಲ್ಲಿಸಿದ ದೇಣಿಗೆ ಕಡಿಮೆ ಏನೂ ಆಗಿರಲಿಲ್ಲ. ಜನರ ಸಾಮಾಜಿಕ ಹಾಗೂ ಆರ್ಥಿಕ ವಿಮೋಚನೆಗಾಗಿ ವೈಮರ್ ಗಣರಾಜ್ಯ ಪ್ರವರ್ತಿಸಿದ್ದ ಕ್ರಮಗಳನ್ನು ರದ್ದುಗೊಳಿಸಲು ಉಪಯುಕ್ತವಾಗಬಲ್ಲ ಒಂದು ಹತ್ಯಾರನ್ನು ಈ ವರ್ಗಗಳು ಅವನಲ್ಲಿ ಕಂಡವು. ಪ್ರಪಂಚಯುದ್ಧಕ್ಕೆ ಮೊದಲು ಜನರಿಗೆ ಅಭ್ಯಾಸವಾಗಿ ಹೋಗಿದ್ದ ಒಂದು ಬಗೆಯ ರಮ್ಯ ಮತ್ತು ಕಪಟ ಸ್ವದೇಶಾಭಿಮಾನಪೂರ್ವಕ ಶಬ್ದಜಾಲ, ಮತ್ತು ಯೆಹೂದ್ಯ ವೈರಿಗಳು ತಮ್ಮ ಕುಟಿಲೋದ್ದೇಶಗಳ ಈಡೇರಿಕೆಗೆಂದೇ ಉಪಜ್ಞಿಸಿದ "ಆರ್ಯ" ಅಥವಾ "ನಾರ್ಡಿಕ್" ಜನಾಂಗದ ಆರೋಪಿತ ಶ್ರೇಷ್ಠತ್ವದ ಬಗೆಗಿನ ಕಟ್ಟುಕತೆ—ಇವನ್ನು ಹಿಟ್ಲರ್ ಜನರ ಮುಂದೆ ಯಶಸ್ವಿಯಾಗಿ ಬಿತ್ತರಿಸಿದ. ಅವನು ಎಡೆಬಿಡದೆ ಗಳಹುತ್ತಿದ್ದ ಈ ಬೊಂತೆಯನ್ನು ಖುದ್ದು ಅವನೇ ಎಷ್ಟರಮಟ್ಟಿಗೆ ನಂಬಿರಬಹುದೆಂಬುದನ್ನು ಅರಿಯುವುದು ಅವನ ಎಡ್ಡತಿಡ್ಡ ವ್ಯಕ್ತಿತ್ವದ ಕಾರಣವಾಗಿ ಅಸಾಧ್ಯವೇ ಸೈ. ಆದರೆ ಒಂದಂತೂ ಖರೆ. ಅವನ ಸುತ್ತಮುತ್ತ ಜಮಾಯಿಸಿಕೊಂಡಿದ್ದವರ ಪೈಕಿ, ಅಥವಾ ನಾಟ್ಸೀ ಅಲೆಯ ಪರಿಣಾಮವಾಗಿ ಮೇಲಕ್ಕೇರಿದವರ ಪೈಕಿ, ಹೆಚ್ಚಿನವರು ತಮ್ಮ ಅನೈತಿಕ ವಿಧಾನಗಳ ಅಸತ್ಯವನ್ನು ಪೂರ್ಣವಾಗಿ ಅರಿತಿದ್ದ ಕಠಿಣಮನಸ್ಕ ಶೂನ್ಯವಾದಿಗಳಾಗಿದ್ದರು.

# ಟಿಪ್ಪಣಿಗಳು

೧. ಪುಟ ೯. ಬೀಜಗಣಿತದ (algebra) ಮೂಲಪಾಠಗಳಲ್ಲಿ "ತಸ್ಕರ ಶೋಧನೆ" ಒಂದು ಉಲ್ಲಾಸದಾಯಕ ಆಟ. ಉದಾಹರಣೆ : ಏಕವೇಗದಿಂದ ಮೇಲಕ್ಕೆ ಅಥವಾ ಕೆಳಕ್ಕೆ ಸರಿಯುತ್ತಿರುವ ಮೆಟ್ಟಿಲುಗಳ ಸರಪಳಿಗೆ ಚರಸೋಪಾನ (escalator) ಎಂದು ಹೆಸರು. ಕೆಳಕ್ಕೆ ಸರಿಯುತ್ತಿರುವ ಚರಸೋಪಾನದಲ್ಲಿ ಮೆಟ್ಟಿಲುಗಳು ಕೊಡಿಯಿಂದ ಬುಡಕ್ಕೆ ಇಳಿದು ಕಣ್ಮರೆಯಾಗುವಂತೆಯೂ ಮೇಲಕ್ಕೆ ಸರಿಯುತ್ತಿರುವುದರಲ್ಲಿ ಬುಡದಿಂದ ಕೊಡಿಗೆ ಏರಿ ಕಣ್ಮರೆಯಾಗುವಂತೆಯೂ ಕಾಣುತ್ತವೆ. ಕೆಳಕ್ಕೆ ಸರಿಯುತ್ತಿರುವ ಚರಸೋಪಾನದಲ್ಲಿ ಕೊಡಿಯಿಂದ ತೊಡಗಿ ಸೆಕೆಂಡಿಗೆ ಒಂದು ಮೆಟ್ಟಿಲಿನಂತೆ ಇಳಿಯುತ್ತ ಹೋದೆ. ೫೦ ಮೆಟ್ಟಿಲು ಇಳಿದಾಗ ಬುಡ ತಲಪಿದೆ. ಅದೇ ಚರಸೋಪಾನದಲ್ಲಿ ಮೊದಲಿನದರ ಐದು ಪಟ್ಟು ವೇಗದಿಂದ ಒಮ್ಮೆಗೆ ಒಂದು ಮೆಟ್ಟಿಲಿನಂತೆ ಹತ್ತುತ್ತ ಹೋದೆ. ೧೨೫ ಮೆಟ್ಟಿಲು ಹತ್ತಿದಾಗ ಕೊಡಿ ತಲಪಿದೆ. ಹಾಗಾದರೆ ಈ ಚರಸೋಪಾನ ನಿಶ್ಚಲವಾಗಿರುವಾಗ ಕಾಣುವ ಮೆಟ್ಟಿಲುಗಳ ಸಂಖ್ಯೆ ಎಷ್ಟು ?

ಇಲ್ಲಿ "ಕಾಣುವ ಮೆಟ್ಟಿಲುಗಳ ಸಂಖ್ಯೆ"ಯೇ ತಸ್ಕರ. ಅದು $x$ ಆಗಿರಲಿ. ನಿರೂಪಣೆಯಲ್ಲಿ ಉಕ್ತವಾಗಿರುವ ವಿವರಗಳಿಂದ ಈ ತಸ್ಕರ $x$ನ್ನು ಬಂಧಿಸೋಣ. ೫೦ ಮೆಟ್ಟಿಲುಗಳನ್ನು ೫೦ ಸೆಕೆಂಡುಗಳಲ್ಲಿ ಇಳಿದದ್ದರಿಂದ ಈ ಅವಧಿಯಲ್ಲಿ ಕಣ್ಮರೆಯಾದ ಮೆಟ್ಟಿಲುಗಳ ಸಂಖ್ಯೆ $x$–೫೦. ಅದೇ ಚರಸೋಪಾನದಲ್ಲಿ ಹತ್ತುವಾಗಲಾದರೋ $[-(x-೧೨೫)] = ೧೨೫ - x$ ಮೆಟ್ಟಿಲುಗಳು, ೧೨೫ / ೫ = ೨೫ ಸೆಕೆಂಡುಗಳಲ್ಲಿ ಕಣ್ಮರೆಯಾಗುತ್ತವೆ. ಚರಸೋಪಾನದ ವೇಗ ಸ್ಥಿರವಾಗಿರುವುದರಿಂದ

$$\frac{x-50}{50} = \frac{125-x}{25}$$

$$\therefore x = ೧೦೦$$

೨. ಪುಟ ೯. ಸ್ವಯಂಪ್ರಭೆಯ ಮಾಯಾಲೋಕ. ಸೀತಾನ್ವೇಷಣಾರ್ಥ ದಕ್ಷಿಣಾಭಿಮುಖವಾಗಿ ತೆರಳಿದ್ದ ಸುಗ್ರೀವಾನುಚರರು ಮುಂಗಾಣದೇ ತೀರ ಹತಾಶರಾಗಿದ್ದಾಗ ಸ್ವಯಂಪ್ರಭೆಯ ಮಾಯಾಲೋಕದತ್ತ ಆಕರ್ಷಿತರಾದರು. ಅಲ್ಲಿಯ ನಿಯಮದಂತೆ ಇವರು ಕಣ್ಣು ಮುಚ್ಚಿಕೊಳ್ಳಬೇಕಾಯಿತು. ಮರುಕ್ಷಣ ಮುಂದಿನ ಹಾದಿ ಹೊಳೆಯಿತು—ಸೀತಾನ್ವೇಷಣೆಯ ಸಾಫಲ್ಯಕ್ಕೆ ಋಜುಮಾರ್ಗ.

೩. ಪುಟ ೧೦. ಮೊಝಾರ್ಟ್ ವೂಲ್ಫ್‌ಗಾಂಗ್ ಅಮಡ್ಯೂಸ್, ೧೭೫೬-೯೧, ಆಸ್ಟ್ರಿಯಾಸಂಜಾತ, ಅಭಿಜಾತ ಪಾಶ್ಚಾತ್ಯ ಸಂಗೀತ ಕೃತಿಕಾರ. ಐನ್‌ಸ್ಟೈನ್ ಬರೆದಿದ್ದಾರೆ : "ಸಂಗೀತದಲ್ಲಿ ಬಾಕ್, ಮೊಝಾರ್ಟ್, ಮತ್ತು ಇಟಲಿಯ ಹಾಗೂ ಇಂಗ್ಲೆಂಡಿನ ಕೆಲವು ಕೃತಿಕಾರರು ನನಗೆ ಅಚ್ಚುಮೆಚ್ಚಿನವರು . . . ಬಾಕ್ ಅಥವಾ ಮೊಝಾರ್ಟ್ ಇವರಿಬ್ಬರ ಪೈಕಿ ಯಾರು ನನಗೆ ಹೆಚ್ಚು ಅರ್ಥವೀಯುತ್ತಾರೆಂದು ಹೇಳುವುದು ಕಷ್ಟ."

೪. ಪುಟ ೧೧. ಕಾರ್ಯಕಾರಣ ಸಂಬಂಧ. ಯಾವುದೇ 'ಕಾರ್ಯ'ದ (ಅಥವಾ 'ಪರಿಣಾಮ') ಹಿನ್ನೆಲೆಯಲ್ಲಿ ಯಾವುದೋ 'ಕಾರಣ' (ಅಥವಾ 'ಕಾರಕ') ವರ್ತಿಸುತ್ತಿದೆ ಎಂಬ ಮೂಲಭೂತ ನಂಬಿಕೆ. ಕಾರಣರಹಿತ ಕಾರ್ಯವಿಲ್ಲ, ಕಾರ್ಯಶೂನ್ಯ ಕಾರಣವಿಲ್ಲ ಎಂಬ ಈ ನಂಬಿಕೆಯೇ ಸಕಲ ಜ್ಞಾನ ವಿಜ್ಞಾನಗಳ ಮೂಲ. ಪ್ರಕಟಿತ ಕಾರ್ಯದ ಹಿನ್ನೆಲೆಯಲ್ಲಿರಬಹುದಾದ ಅಜ್ಞಾತ ಕಾರಣದ ಶೋಧನೆಗೆ 'ಅನ್ವೇಷಣೆ' ಎಂದು ಹೆಸರು. ಅನ್ವೇಷಣೆಗೆ—ಆದ್ದರಿಂದ ನಾಗರಿಕತೆಯ ಪುರೋಗಮನಕ್ಕೆ—ಚಾಲನೆ ಒದಗುವುದು ಈ ನಂಬಿಕೆಯಿಂದ. ಇದಲ್ಲವಾಗಿದ್ದರೆ ಪವಾಡಗಳು, ಕುರುಡುನಂಬಿಕೆಗಳು, ಮತಿವೈಕಲ್ಯಗಳು ಮುಂತಾದವು ಮಾನವನ ಚಿಂತನ ಸಾಮರ್ಥ್ಯವನ್ನೇ ಶೋಷಿಸಿಬಿಟ್ಟಿರುತ್ತಿದ್ದುವು.

೫. ಪುಟ ೧೧. ಚಿಂತನೆಯನ್ನು ಹರಿತಗೊಳಿಸುವುದೆಂದರೇನು ? ಒಂದು ವಿದ್ಯಮಾನ ಅಥವಾ ಘಟನೆ ನಮ್ಮ ಲಕ್ಷ್ಯಕ್ಕೆ ಬರುತ್ತದೆ—ಅಂದರೆ ಇಂದ್ರಿಯಗ್ರಾಹ್ಯವಾಗುತ್ತದೆ. ಅದರ ಕಾರಣ ತಿಳಿಯದು. ಆದರೆ ಕಾರಣರಹಿತ ಕಾರ್ಯವಿಲ್ಲವೆಂಬ ದೃಢನಂಬಿಕೆ ನಮಗುಂಟು. ಆದ್ದರಿಂದ ಕಾರಣವನ್ನು ಶೋಧಿಸಲೇಬೇಕು.

ಹೇಗೆ ? ಚಿಂತನೆ ಹರಿತಗೊಳ್ಳುತ್ತ ಹೋಗುವ ಕ್ರಮವಿದು— ವೈಜ್ಞಾನಿಕ ವಿಧಾನದ ಪಥ.

೬. ಪುಟ ೧೧. ಯೂಕ್ಲಿಡ್ ಜ್ಯಾಮಿತಿ. ಗ್ರೀಕ್ ಗಣಿತವಿದ ಯೂಕ್ಲಿಡ್ (ಕ್ರಿಪೂಸು ೩೨೫) ಅನುಭವಜನ್ಯ ಸಂಗತಿಗಳನ್ನು ಕ್ರೋಡೀಕರಿಸಿ ಐದು ಮುಖ್ಯ ಆಧಾರಭಾವನೆಗಳನ್ನು ಅಂಗೀಕರಿಸಿ ತಾರ್ಕಿಕವಾಗಿ ನಿರ್ಮಿಸಿದ ಗಣಿತವಿಭಾಗ : ೧. ಯಾವುದೇ ಬಿಂದುವಿನಿಂದ ಇನ್ನೊಂದು ಬಿಂದುವಿಗೆ ಒಂದು, ಮತ್ತು ಒಂದೇ ಒಂದು, ಸರಳರೇಖೆಯನ್ನು ಎಳೆಯಬಹುದು. ೨. ಸಾಂತ ಸರಳರೇಖೆಯನ್ನು ಉಭಯ ದಿಶೆಗಳಲ್ಲಿಯೂ ಅನಿರ್ದಿಷ್ಟ ಸರಳರೇಖೆಯಾಗಿ ವಿಸ್ತರಿಸಬಹುದು. ೩. ದತ್ತ ಬಿಂದುವು ಕೇಂದ್ರವೂ ದತ್ತ ಸರಳರೇಖೆಯು ತ್ರಿಜ್ಯವೂ ಆಗಿರುವಂತೆ ಒಂದು ವೃತ್ತವನ್ನು ರಚಿಸಬಹುದು. ೪. ಎಲ್ಲ ಲಂಬಕೋನಗಳೂ ಸಮವಾಗಿರುವುವು. ೫. ಎರಡು ಸರಳರೇಖೆಗಳನ್ನು ಸಂಧಿಸುವ ಮೂರನೆಯ ಸರಳರೇಖೆಯ ಅದೇ ಪಾರ್ಶ್ವದಲ್ಲಿ ಏರ್ಪಡುವ ಎರಡು ಆಂತರಿಕ ಕೋನಗಳ ಮೊತ್ತ ಎರಡು ಲಂಬಕೋನಗಳಿಗಿಂತ ಕಡಿಮೆ ಆಗಿದ್ದರೆ ಆ ಸರಳರೇಖೆಗಳನ್ನು ಅದೇ ಪಾರ್ಶ್ವದಲ್ಲಿ ಅನಿರ್ದಿಷ್ಟವಾಗಿ ವಿಸ್ತರಿಸಿದಾಗ ಅವು ಸಂಧಿಸುತ್ತವೆ. ಐದನೆಯ ಆಧಾರಭಾವನೆಗೆ 'ಸಮಾಂತರ ಅಭಿಗೃಹೀತ'ವೆಂದು ಹೆಸರು. ಇದರ ಸಾಧುತ್ವ ಕುರಿತು ನಡೆದ ಗಣಿತ ಚಿಂತನ ಮಂಥನಗಳ ಫಲವಾಗಿ ಯೂಕ್ಲಿಡ್ ಜ್ಯಾಮಿತಿ ಪರಿಷ್ಕೃತವಾದುದರ ಜೊತೆಗೆ ಅಯೂಕ್ಲಿಡ್ ಜ್ಯಾಮಿತಿ ಎಂಬ ನೂತನ ವಿಭಾಗವೂ ಜನಿಸಿತು. ಇದು ಮುಂದೊಂದು ದಿನ ಐನ್‌ಸ್ಟೈನ್-ಪ್ರಣೀತ ಸಾಪೇಕ್ಷತಾಸಿದ್ಧಾಂತಕ್ಕೆ ಅವಶ್ಯವಾಗುವ ವಿಶೇಷ ಗಣಿತ ಭಾಷೆಯ ಉಗಮಕ್ಕೆ ಕಾರಣವಾಯಿತು.

೭. ಪುಟ ೧೧. ಇಂದ್ರಿಯಗಮ್ಯಪ್ರಪಂಚದ ಗಣಿತೀಯ ಗುಣಲಕ್ಷಣಗಳು ಸರಿ. ಇಂದ್ರಿಯಗಮ್ಯವಲ್ಲದ ಪ್ರಪಂಚವಿದೆಯೇ ? ಅದರ ಗಣಿತೀಯ ಅಥವಾ ಇತರ ಯಾವುವೇ ಗುಣಲಕ್ಷಣಗಳೆಂದರೇನು ? ಈ ಕಾಗದದಲ್ಲಿ (ಇದೊಂದು ಸಮತಲ) ತ್ರಿಜ್ಯ ೩ ಇರುವ ವೃತ್ತ ಎಳೆಯಬೇಕು ; ಮತ್ತು ಇದನ್ನು ಸಂಧಿಸದ (ಅಂದರೆ ವೃತ್ತದ ಹೊರಗಿರುವ) ಒಂದು ಸರಳರೇಖೆಯನ್ನೂ ಬಿಡಿಸಬೇಕು. ಇಂದ್ರಿಯಗಮ್ಯ ಪ್ರಪಂಚದ ಪ್ರಕಾರ (ಮತ್ತು ಅವಶ್ಯವಾದರೆ ವಾಸ್ತವ ರಚನೆಯ ಪ್ರಕಾರ ಕೂಡ) ವೃತ್ತ ಮತ್ತು ಸರಳರೇಖೆ ಎಲ್ಲಿಯೂ ಎಂದೂ ಸಂಧಿಸವು. ಸರಿ. ಈಗ, ವೃತ್ತಕೇಂದ್ರವನ್ನು ಮೂಲ ಬಿಂದುವಾಗಿಯೂ ಇದರ ಮೂಲಕ ಹೋಗುವ ಒಂದು ಜೊತೆ ಲಂಬ ವ್ಯಾಸಗಳನ್ನು $x$ ಮತ್ತು $y$ ಅಕ್ಷಗಳಾಗಿಯೂ ಆಯ್ದು ವೃತ್ತದ ಸಮೀಕರಣ ಬರೆಯಬಹುದು: $x^2 + y^2 =$ ೯. ಇದೇ ಭಾಷೆಯಲ್ಲಿ ಸರಳರೇಖೆಯ ಸಮೀಕರಣ ೪$x$–೫$y$ = ೨೦ ಎಂದಿರಲಿ. ಇವೆರಡರ ನಡುವೆ $y$ಯನ್ನು ವಿಸರ್ಜಿಸಿದರೆ ೪೧$x^2$–೧೬೦$x$ +೧೭೫ =೦ ಎಂಬ $x$ನಲ್ಲಿ ದ್ವಿಘಾತೀಯ ಸಮೀಕರಣ ದೊರೆಯುತ್ತದೆ. ಇದರ ಎರಡು ಮೂಲಗಳು

$$\frac{80+5\sqrt{-31}}{41} \text{ ಮತ್ತು } \frac{80-5\sqrt{-31}}{41}$$

ಇವು ಸರಳರೇಖೆ ಮತ್ತು ವೃತ್ತ 'ಸಂಧಿಸುವ' ಎರಡು ಬಿಂದುಗಳ $x$ ನಿರ್ದೇಶಕಗಳು. ಹಾಗಾದರೆ ನಮ್ಮ ಮೂಲ ರಚನೆ ತಪ್ಪೇ ? ಇಲ್ಲ, ಅದೂ ಸರಿ, ಇದೂ ಸರಿ. ಈ ಸಂಧಿಬಿಂದುಗಳು ಇಂದ್ರಿಯಗಮ್ಯವಲ್ಲ ಎಂಬುದನ್ನು $\sqrt{-}$೩೧ ಎದ್ದು ಸಾರುತ್ತಿದೆ. ಋಣ ಸಂಖ್ಯೆಯ ವರ್ಗಮೂಲ ಇಂದ್ರಿಯಗಮ್ಯವಲ್ಲ. ಆದರೆ ಖಂಡಿತವಾಗಿಯೂ ಬುದ್ಧಿಗಮ್ಯ $\sqrt{-1} = i$ ಅಥವಾ $i^2$=–೧ ಎಂದು ಅಂಗೀಕರಿಸಿ ಈ $i$–ಲೋಕದ ಗಣಿತ ಬೆಳೆಸುವುದು ಸಾಧ್ಯ :

$$x^2 + y^2 = (x+iy)\,(x-iy), \text{ ಇತ್ಯಾದಿ.}$$

೮. ಪುಟ ೧೩. ಕನಕದಾಸರು ಹಾಡಿದ್ದಾರೆ :

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ !
ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರ ?

೯. ಪುಟ ೧೪. ಅನಂತಾಲ್ಪ ಅಥವಾ ಅನಂತಸೂಕ್ಷ್ಮ ಪರಿಮಾಣಗಳ ಜೊತೆ ವ್ಯವಹರಿಸಿ ವಾಸ್ತವ ಪ್ರಪಂಚದ ಬಗೆಗೆ ವ್ಯಾಖ್ಯಾನ ನೀಡುವ ಗಣಿತ ವಿಭಾಗ. ೦.೦೦೦೧ ÷ ೦.೦೦೦೧ =೧ ; ೦.೦೦೦೦೦೦೦೦೦೦೧ ÷ ೦.೦೦೦೦೦೦೦೦೦೦೧ = ೧ ; ಇತ್ಯಾದಿ. ಯಾವುದೇ ಸಂಖ್ಯೆಯನ್ನು ಅದೇ ಸಂಖ್ಯೆಯಿಂದ—ಇದು ಎಷ್ಟೇ ಸೂಕ್ಷ್ಮ ಸಂಖ್ಯೆ ಆಗಿದ್ದರೂ—ಭಾಗಿಸಿದಾಗ ದೊರೆಯುವ ಲಬ್ಧ ಸದಾ ೧. ಹಾಗಾದರೆ ೦ ÷ ೦ = ೧ ನಿಜವೇ? ಗೊತ್ತಿಲ್ಲ. ಇದನ್ನು ಗಣಿತದಲ್ಲಿ ಅನಿರ್ಧರಣೀಯ (indeterminate) ಎನ್ನುತ್ತೇವೆ. ಇಲ್ಲಿ ರೂಢಿಯ ಭಾಗಾಹಾರ ಸೋಲುತ್ತದೆ—ಅರ್ಥಾತ್ ನೂತನ ಚಿಂತನೆಯತ್ತ ಕೈ ತೋರಿಸುತ್ತದೆ. ಇದೇ ಕಲನಶಾಸ್ತ್ರದ ಉಗಮ. ಆಧುನಿಕ ವಿಜ್ಞಾನದ 'ಮಾತು' ಕಲನಶಾಸ್ತ್ರ. 'ಧಾತು' ವಿದ್ಯುಚ್ಛಕ್ತಿ. (ಇದೇ ಲೇಖಕ ಬರೆದಿರುವ 'ಐವರು ವಿಜ್ಞಾನಿಗಳು' ಪುಸ್ತಕದಲ್ಲಿ ಕಲನಶಾಸ್ತ್ರದ ಕತೆ ಇದೆ.)

೧೦. ಪುಟ ೧೬. ವಿಜ್ಞಾನ, ಮಾನವನ ಕುತೂಹಲಭರಿತ ಮತಿ ನೈಸರ್ಗಿಕ ವಿದ್ಯಮಾನಗಳ ಜೊತೆ ವೀಕ್ಷಣೆ-ಊಹೆ-ಪ್ರಯೋಗ-ತರ್ಕ ಧಾಟಿಯಲ್ಲಿ ವರ್ತಿಸಿದಾಗ ನಿಸರ್ಗದ ಹಲವಾರು ರಹಸ್ಯಗಳು ಅವನಿಗೆ ಕರಗತವಾಗುತ್ತವೆ. ಈ ಸಮಷ್ಟಿ ಜ್ಞಾನವೇ ವಿಜ್ಞಾನ. ಸ್ಥೂಲವಾಗಿ ಮಾನವಮತಿ-ನಿಸರ್ಗ ಅಂತರಕ್ರಿಯೆ ಶಿಶುವೇ ವಿಜ್ಞಾನ. (ಇದೇ ಲೇಖಕ ಬರೆದಿರುವ 'ವೈಜ್ಞಾನಿಕ ಮನೋಧರ್ಮ'ದಲ್ಲಿ ವಿವರಗಳಿವೆ.)

೧೧. ಪುಟ ೧೭. Helmholtz, Herman Ludwig Ferdinand Von, 1821-94, German Physiologist and Physicist ; Kirchoff, Gustav Robert, 1824-87, German Physicist; Hertz, Heinrich Rudolf, 1857-94, German Physicist.

ಈ ಮೂವರು ಮಹಾವಿಜ್ಞಾನಿಗಳು ಅವರ ದಿನಗಳಂದು ಭೌತವಿಜ್ಞಾನದ ಕ್ಷಿತಿಜವನ್ನು ವಿಸ್ತರಿಸಿದ ಯುಗ ಪ್ರವರ್ತಕ ಸಂಶೋಧಕರು. ಐನ್‌ಸ್ಟೈನ್ ಬರೆದಿದ್ದಾರೆ : "ಬಲವಿಜ್ಞಾನದ ಎಲ್ಲ ಶಾಖೆಗಳಲ್ಲಿಯೂ ಆದ ಮಹಾ ಸಾಧನೆಗಳು, ಖಗೋಳವಿಜ್ಞಾನದ ಅಭಿವರ್ಧನೆಯಲ್ಲಿ ಅದು ಗಳಿಸಿದ ಉಜ್ಜ್ವಲ ಯಶಸ್ಸು, ಪ್ರತ್ಯಕ್ಷವಾಗಿ ಆಗಲಿ ಲಾಕ್ಷಣಿಕವಾಗಿ ಆಗಲಿ ಬಲವಿಜ್ಞಾನಕ್ಕೆ ಸಂಬಂಧಿಸದ ಸಮಸ್ಯೆಗಳಿಗೆ ಕೂಡ ಅದರ ಭಾವನೆಗಳ ಅನ್ವಯ—ಇವು ಸಮಸ್ತ ನೈಸರ್ಗಿಕ ವಿದ್ಯಮಾನಗಳನ್ನೂ ಅವ್ಯತ್ಯಯಶೀಲ ವಸ್ತುಗಳ ನಡುವಿನ ಸರಳ ಬಲಗಳ ಮೂಲಕ ವಿವರಿಸುವುದು ಸಾಧ್ಯವೆಂಬ ನಂಬಿಕೆಗೆ ಇಂಬುಕೊಟ್ಟವು. ಗೆಲಿಲಿಯೊ ತರುವಾಯ ಸಂದ ಎರಡು ಶತಮಾನಗಳಲ್ಲಿ ಇಂಥ ಒಂದು ಪ್ರಯತ್ನ, ಪ್ರಜ್ಞಾಪೂರ್ವಕವಾಗಿ ಅಥವಾ ಪ್ರಜ್ಞಾರಹಿತವಾಗಿ, ವಿಜ್ಞಾನದ ಸಮಸ್ತ ಸೃಷ್ಟಿಯಲ್ಲಿಯೂ ಅಂತರ್ಗತವಾಗಿದೆ. ಸುಮಾರು ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಈ ಭಾವನೆಯನ್ನು ಹೆಲ್ಮ್‌ಹೋಲ್ಟ್ಸ್ ಸ್ಪಷ್ಟವಾಗಿ ಬಿಂಬಿಸಿದರು : 'ಆದ್ದರಿಂದ ಅಂತಿಮವಾಗಿ ಭೌತವಸ್ತು ವಿಜ್ಞಾನದ ಸಮಸ್ಯೆ ಎಂದರೆ ನೈಸರ್ಗಿಕ ವಿದ್ಯಮಾನಗಳನ್ನು ವ್ಯತ್ಯಯಶೀಲವಲ್ಲದ ಆಕರ್ಷಕ ಮತ್ತು ವಿಕರ್ಷಕ ಬಲಗಳೆಂಬುದಾಗಿ ಪರಿಗಣಿಸುವ ಸಮಸ್ಯೆಯೆಂದು ತಿಳಿಯುತ್ತೇವೆ. ಇಲ್ಲಿ ಬಲಗಳ ತೀವ್ರತೆ ಸಂಪೂರ್ಣವಾಗಿ ದೂರವನ್ನು ಅವಲಂಬಿಸಿದೆ. ಎಂದೇ ಈ ಸಮಸ್ಯೆಯ ಪರಿಹಾರ್ಯತೆಯೇ ನಿಸರ್ಗವನ್ನು ಪರಿಪೂರ್ಣವಾಗಿ ಗ್ರಹಿಸಲು ಅವಶ್ಯವಿರುವ ನಿಬಂಧನೆ.'

"ಹೀಗೆ ಹೆಲ್ಮ್‌ಹೋಲ್ಟ್ಸ್ ಪ್ರಕಾರ ವಿಜ್ಞಾನದ ಅಭಿವರ್ಧನೆ ನಿರ್ಧರಿತವಾಗಿದ್ದು ಕರಾರುವಾಕ್ಕಾಗಿ ಸ್ಥಿರ ಪಥಗಾಮಿಯಾಗಿದೆ. 'ನೈಸರ್ಗಿಕ ಬಲಗಳನ್ನು ಸರಳಬಲಗಳಿಗೆ ಸಂಕ್ಷೇಪಿಸುವುದು ಪೂರ್ತಿಯಾದಾಗ ಮತ್ತು ಆ ವಿದ್ಯಮಾನಗಳಿಗೆ ಒಪ್ಪುವ ಸಂಕ್ಷೇಪನ ಇದೊಂದೇ ಎಂಬ ಸಾಧನೆ ನೀಡಿದಾಗ ವಿಜ್ಞಾನದ ಸಹಜ ಪ್ರವೃತ್ತಿ ಕೊನೆಗೊಳ್ಳುತ್ತದೆ.'

"ಇಪ್ಪತ್ತನೆಯ ಶತಮಾನದ ಭೌತವಿಜ್ಞಾನಿಗೆ ಈ ನಿಲವು ಜಡ ಮತ್ತು ರಸಹೀನ ಎನ್ನಿಸುತ್ತದೆ. ಸಂಶೋಧನೆ ಎಂಬ ಪರಮ ಸಾಹಸವನ್ನು ಅಷ್ಟು ಬೇಗನೆ ಕೊನೆಗೊಳಿಸಬಹುದು ಮತ್ತು ವಿಶ್ವದ ಉದ್ದೀಪನರಹಿತ ಹಾಗೂ ಎಂದೂ ವಿಫಲವಾಗದ ಚಿತ್ರವನ್ನು ಸ್ಥಾಪಿಸಬಹುದು ಎಂಬ ಕಲ್ಪನೆಯೇ ಆತನನ್ನು ದಿಗಿಲುಗೊಳಿಸದಿರದು."

ಕ್ರಿಸ್ತಶಕ ಒಂದನೆಯ ಶತಮಾನದಲ್ಲಿ ಬಾಳಿದ ರೋಮನ್ ರಾಜಕಾರಣಿ ಮತ್ತು ತತ್ತ್ವಶಾಸ್ತ್ರವಿದ ಸೆನೆಕಾ ಎಂಬಾತ ವಿಶ್ವವೈಚಿತ್ರ್ಯವನ್ನು ವರ್ಣಿಸಿರುವ ಪರಿ :

"ಈಗ ನಮ್ಮಿಂದ ಮರೆಯಾಗಿರುವ ಅನೇಕ ಸಂಗತಿಗಳು, ಸಾಕಷ್ಟು ದೀರ್ಘಕಾಲ ಮಾಡುವ ಸಂಶೋಧನೆಗಳ ಫಲವಾಗಿ, ಬೆಳಕು ಕಾಣುವ ದಿನ ಬಂದೇ ಬರುತ್ತದೆ. ಆಕಾಶದಂಥ ಅತ್ಯಗಾಧ ವ್ಯಾಪ್ತಿಯನ್ನು ಅನ್ವೇಷಿಸಲು ಒಂದು ತಲೆಮಾರಿನ ಆಯುಷ್ಯವನ್ನು ಪೂರ್ತಿ ಮೀಸಲಿಟ್ಟರೂ ಸಾಲದು . . . ಇಂತಿದ್ದರೂ ಆಕಾಶದ ಬಗೆಗಿನ ಜ್ಞಾನ ಉತ್ತರೋತ್ತರ ಯುಗಗಳ ದೀರ್ಘಾವಧಿಗಳಲ್ಲಿ ಕ್ರಮೇಣ ಅನಾವರಣಗೊಳ್ಳಲಿದೆ. ನಮ್ಮ ಕುಲಸಂಜಾತರಾಗಿ ಬರಲಿರುವ ಮುಂದಿನ ಯಾವುದೋ ಪೀಳಿಗೆಯ ಜನರು, ತಮಗೆ ಅಷ್ಟು ಸುಲಭವಾಗಿಯೂ ಸುಂದರವಾಗಿಯೂ ಮನವರಿಕೆಯಾಗಿರುವ ಸಂಗತಿಗಳು, ತಮ್ಮ ಪೂರ್ವಜರಾದ ನಮಗೆ ತಿಳಿದೇ ಇರಲಿಲ್ಲವಲ್ಲ ಎಂದು ಅಚ್ಚರಿಪಡುವ ದಿನ ಖಂಡಿತ ಬರಲಿದೆ. ಅನೇಕ ಆವಿಷ್ಕಾರಗಳು ಭವಿಷ್ಯದ ಯುಗಗಳಾಗಿ ಕಾಯ್ದಿರಿಸಲ್ಪಟ್ಟಿವೆ. ಆದರೆ ಆ ವೇಳೆಗೆ ನಮ್ಮ ಬಗೆಗಿನ ನೆನಪು ಮಾಸಿಹೋಗಿರುತ್ತದೆ. ಪ್ರತಿಯೊಂದು ಯುಗದಲ್ಲಿಯೂ ಅನ್ವೇಷಣೆಗೆ ನೂತನ ವಿಷಯ ಒದಗದಿದ್ದರೆ ಈ ವಿಶ್ವವೊಂದು ಅಲ್ಪ ಮತ್ತು ರಿಕ್ತಯಂತ್ರವಾಗಿರುತ್ತಿತ್ತು. ನಿಸರ್ಗವೆಂದೂ ತನ್ನ ನಿಗೂಢ ರಹಸ್ಯಗಳನ್ನು ಒಮ್ಮೆಗೇ ಆಗಲಿ ಎಲ್ಲರಿಗೂ ಆಗಲಿ ಬಿಟ್ಟುಕೊಡುವುದಿಲ್ಲ."

ಹೆಲ್ಮ್‌ಹೋಲ್ಟ್ಸ್ ಮತ್ತು ಕಿರ್ಖಫ್ ತಮ್ಮ ದಿನಗಳಂದು ಭೌತವಿಜ್ಞಾನಕ್ಷಿತಿಜವನ್ನು ವಿಸ್ತರಿಸಿದ ಶ್ರೇಷ್ಠ ಸಂಶೋಧಕರು. ಆದರೆ ಉಪನ್ಯಾಸಕರಾಗಿ ಇವರಿಂದ ಶಿಷ್ಯರಿಗೆ ತರಗತಿಗಳಲ್ಲಿ ದೊರೆತದ್ದು ಅತ್ಯಲ್ಪ. ಹೆಲ್ಮ್‌ಹೋಲ್ಟ್ಸ್ ಎಂದೂ ಪೂರ್ವಸಿದ್ಧತೆ ಮಾಡಿಕೊಂಡು ತರಗತಿಗೆ ಹೋಗಲಿಲ್ಲ. ಮಾತು ಅಸ್ಖಲಿತವಲ್ಲ. ಪ್ರಸ್ಫುಟವೂ ಅಲ್ಲ. ಇನ್ನು ಕಿರ್ಖಫ್ ? ಬಾಯಿಪಾಠಮಾಡಿದ್ದನ್ನು ನೀರಸ ಏಕತಾನ ವಿತಾನದಲ್ಲಿ ಬೋಧನೆ. ಮೊದಲನೆಯವರು ಅವರ ಅವ್ಯವಸ್ಥೆಯ ಕಾರಣವಾಗಿ ವಿದ್ಯಾರ್ಥಿಗಳಿಗೆ ಅಪ್ರಿಯರಾದರು. ಎರಡನೆಯವರಾದರೋ ಇವರ ಅತಿವ್ಯವಸ್ಥೆಯ ಕಾರಣವಾಗಿ ಅದೇ ರೀತಿ ಆದರು ! ಈ 'ಮಹಾ' ಗುರುದ್ವಯರ ಮಹಾ ಶಿಷ್ಯರಲ್ಲಿ ಹರ್ಟ್ಸ್ ಮತ್ತು ಪ್ಲ್ಯಾಂಕ್ ಸೇರಿದ್ದಾರೆ.

೧೨. ಪುಟ ೧೭. ಬ್ಯೂರಿಡನ್ನನ ಕತ್ತೆ. ಫ್ರೆಂಚ್ ತತ್ತ್ವಜ್ಞಾನಿ ಜೀನ್ ಬ್ಯೂರಿಡನ್, ಕ್ರಿಶಸು ೧೩೦೦-ಸು ೫೮, ಪ್ಯಾರಿಸ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ. ಚಲನೆ ಕುರಿತಂತೆ ಅರಿಸ್ಟಾಟಲ್ (ಕ್ರಿಪೂ ೪ನೆಯ ಶತಮಾನ) ಮಂಡಿಸಿದ ತತ್ತ್ವಗಳನ್ನು ನಿರಾಕರಿಸಿ, ಚಿಂತನೆಗೆ ಹೊಸ ದಿಶೆ ಒದಗಿಸಿದ. ಮೂರು ಶತಮಾನಾನಂತರ ಐಸಾಕ್ ನ್ಯೂಟನ್(೧೬೪೨-೧೭೨೭) ಮಂಡಿಸಿದ 'ಚಲನೆಯ ಪ್ರಥಮ ನಿಯಮ'ದ ಅಂಕುರವನ್ನು ಬ್ಯೂರಿಡನ್ನನ ಚಿಂತನೆಯಲ್ಲಿ ಕಾಣುವುದುಂಟು (ನೋಡಿ ೧೪.) ಎರಡು ವಿರುದ್ಧ ಆದರೆ ತದ್ವತ್ತಾಗಿ ಸಮದೂಗಿಸಿರುವ ಆಕರ್ಷಣೆ ಅಥವಾ ಪ್ರಲೋಭನೆಗಳ ನಡುವೆ ಯಾವುದನ್ನು ಆಯಬೇಕು ಎಂಬ ಮುಕ್ತ ಚಿಂತನೆ ಅಸಾಧ್ಯ ಎಂಬ ವಾದವನ್ನು ಬ್ಯೂರಿಡನ್ ಮಂಡಿಸಿದನೆಂದು ಪ್ರತೀತಿ. ಈತ ನೀಡಿರುವನೆಂದು ಭಾವಿಸಲಾದ ಉದಾಹರಣೆ : ನಿಂತಿರುವ ಕತ್ತೆಯ ಎದುರು ಸಮ ಅಂತರಗಳಲ್ಲಿ ಮತ್ತು ಎತ್ತರಗಳಲ್ಲಿ ಅದಕ್ಕೆ ಕಾಣುವಂತೆ ಎರಡು ತದ್ವತ್ತು ಹುಲ್ಲುಕಂತೆಗಳನ್ನು ತೂಗಲಾಗಿದೆ ; ಯಾವುದನ್ನು ಆಯಬೇಕು ಎಂಬುದನ್ನು ನಿರ್ಧರಿಸಲಾಗದೇ ಆ ಕತ್ತೆ ಉಪವಾಸ ಬಿದ್ದು ಸತ್ತು ಹೋಗುತ್ತದೆ ! ಕಿಂಕರ್ಮಕಿಮ ಕರ್ಮೇತಿ ಕವಯೋಪ್ಯತ್ರ ಮೋಹಿತಾಃ ! ಆದರೆ ಬ್ಯೂರಿಡನ್ನನ ಬರೆಹಗಳಲ್ಲಿ ಎಲ್ಲಿಯೂ ಈ ಕತ್ತೆಯ ಪ್ರಸ್ತಾಪ ಬರುವುದಿಲ್ಲ.

೧೩. ಪುಟ ೨೦. ಜರ್ಮನ್ ಖಗೋಳ ವಿಜ್ಞಾನಿ ಯೋಹನ್ ಕೆಪ್ಲರ್, ೧೫೭೧-೧೬೩೦, ಆವಿಷ್ಕರಿಸಿದ ಗ್ರಹಚಲನ ನಿಯಮಗಳು ಮೂರು : ೧. ಪ್ರತಿಯೊಂದು ಗ್ರಹವೂ ಸೂರ್ಯನನ್ನು ದೀರ್ಘವೃತ್ತ ಕಕ್ಷೆಯಲ್ಲಿ ಪರಿಭ್ರಮಿಸುತ್ತದೆ. ದೀರ್ಘವೃತ್ತದ ಒಂದು ನಾಭಿಯಲ್ಲಿ ಸೂರ್ಯ ನೆಲಸಿದೆ. ೨. ಗ್ರಹದ ಸಲೆವೇಗ ನಿಯತವಾಗಿದೆ. ಅಂದರೆ ಸೂರ್ಯ-ಗ್ರಹ ಅರೀಯ ರೇಖೆ ಸಮ ಕಾಲಾವಧಿಗಳಲ್ಲಿ ಸಮ ಸಲೆಗಳನ್ನು ರೇಖಿಸುತ್ತದೆ. ೩. ಗ್ರಹದ ಪರಿಭ್ರಮಣಾವಧಿಯ ವರ್ಗ ಕಕ್ಷಾದೀರ್ಘವೃತ್ತದ ಪ್ರಧಾನಾಕ್ಷಾರ್ಧದ ಘನಕ್ಕೆ ಅನುಪಾತೀಯವಾಗಿದೆ.

೧೪. ಪುಟ ೨೦. ವಿಶ್ವಗುರುತ್ವಾಕರ್ಷಣನಿಯಮ. ಎರಡು ಆಕಾಶಕಾಯಗಳ ರಾಶಿಗಳು $M$ ಮತ್ತು $M'$ ಆಗಿದ್ದು ಅವುಗಳ ನಡುವಿನ ಅಂತರ $R$ ಆಗಿದ್ದರೆ ಅವು ಪರಸ್ಪರ ಆಕರ್ಷಿಸುವ ಬಲ $GMM'/R^2$. ಇಲ್ಲಿ $G$ಗೆ ವಿಶ್ವಗುರುತ್ವಾಕರ್ಷಣ ನಿಯತಾಂಕವೆಂದು ಹೆಸರು. ಬ್ಯೂರಿಡನ್ನನ (೧೨) ಚಿಂತನೆ ಪ್ರಕಾರ ಭಗವಂತ

ಆಕಾಶಕಾಯಗಳನ್ನು ಸೃಷ್ಟಿಸಿ ಎಸೆದುಬಿಟ್ಟ ; ಆ ಮೂಲಬಲದ ಕಾರಣವಾಗಿ ಅವು ನಿರಂತರ ಚಲನೆಯಲ್ಲಿವೆ! ಕೆಪ್ಲರನ (೧೩) ಸಾಧನೆ ಪ್ರಕಾರ ಗ್ರಹಗಳು ಸೂರ್ಯನ ಸುತ್ತ ನಿರ್ದಿಷ್ಟ ಕಕ್ಷೆಗಳಲ್ಲಿ ನಿರ್ದಿಷ್ಟ ವೇಗಗಳಿಂದ ಪರಿಭ್ರಮಿಸುತ್ತಿವೆ. ಮತ್ತು ಈ ಪರಿಭ್ರಮಣಾವಧಿಗಳಿಗೂ ಆಯಾ ಕಕ್ಷಾಪ್ರಧಾನಾಕ್ಷಗಳಿಗೂ ನೇರ ಗಣಿತ ಸಂಬಂಧ ಉಂಟು. ನ್ಯೂಟನ್ ಆವಿಷ್ಕರಿಸಿದ ವಿಶ್ವಗುರುತ್ವಾಕರ್ಷಣನಿಯಮವು ಮುಕ್ತಚಲನೆಯ ರಹಸ್ಯಕ್ಕೂ ಕೆಪ್ಲರ್‌ಪ್ರಣೀತನಿಯಮಾನುಸಾರ ಇರುವ ವಾಸ್ತವತೆಗೂ ಗಣಿತ ವಿವರಣೆ ನೀಡಿ ಖಗೋಳವಿಜ್ಞಾನದ ವೈಜ್ಞಾನಿಕ (ಊಹನಾತ್ಮಕ ಅಲ್ಲ) ಪ್ರಗತಿಗೆ ಹೆದ್ದಾರಿ ಕಡಿಯಿತು.

೧೫. ಪುಟ ೨೨. ಮೈಕಲ್‌ಸನ್-ಮಾರ್ಲೀ ಪ್ರಯೋಗ. ಪ್ರೌಢಶಾಲೆಯಲ್ಲಿ bell jar experiment ಮಾಡಿ ತೋರಿಸುವುದುಂಟು. ಗಾಜಿನ ಪಾರಕ ನಿರ್ದ್ರವ್ಯ ಜಾಡಿಯೊಳಗೆ ಇಟ್ಟಿರುವ ಗಡಿಯಾರದ ಅಲಾರಾಮ್ ಗಂಟೆ ಬಜಾವಣೆ ಕಾಣುತ್ತದೆ. ಆದರೆ ಆ ಸದ್ದು ಮಾತ್ರ ಕೇಳುವುದಿಲ್ಲ ! ಅರ್ಥ ? ಶೂನ್ಯದಲ್ಲಿ (ನಿರ್ದ್ರವ್ಯತೆಯಲ್ಲಿ) ಶಬ್ದ ಚಲಿಸದು. ಹಾಗಾದರೆ ಬೆಳಕು ? ನಿರ್ದ್ರವ್ಯತೆಯಲ್ಲಿ ಇದು ಚಲಿಸುತ್ತದೆ ನಿಜ. ಆದರೆ ಶಬ್ದವನ್ನು 'ಒಯ್ಯಲು' ಮಾಧ್ಯಮವಾಗಿ ವಾಯು ಹೇಗೋ ಹಾಗೆ ಬೆಳಕನ್ನು 'ಸಾಗಿಸಲು' ಇನ್ನೇನೋ ಒಂದು ಮಾಧ್ಯಮ ಬೇಕಲ್ಲ ? ಮಾನವಮತಿ ಊಹಿಸುವ ಧಾಟಿ ಇದು : ಜ್ಞಾತದಿಂದ ಅಜ್ಞಾತದೆಡೆಗೆ. ಆ ಅವ್ಯಕ್ತ ಮಾಧ್ಯಮವನ್ನು ಈಥರ್ ಎಂದು ಹೆಸರಿಸಿ ಇದರ ಅನ್ವೇಷಣೆಗೈಯಲು ವಿಜ್ಞಾನಿಗಳು ಮುಂದಾದರು. ಆಲ್ಬರ್ಟ್ ಅಬ್ರಹಾಮ್ ಮೈಕಲ್‌ಸನ್, ೧೮೫೨-೧೯೩೧, ಜರ್ಮನ್-ಅಮೆರಿಕನ್ ಭೌತವಿಜ್ಞಾನಿ, ಮತ್ತು ಎಡ್ವರ್ಡ್ ವಿಲಿಯಮ್ಸ್ ಮಾರ್ಲೀ, ೧೮೩೮-೧೯೨೩, ಅಮೆರಿಕನ್ ರಸಾಯನವಿಜ್ಞಾನಿ, ಬೆಳಕಿನ ವೇಗ ನಿರ್ಧರಿಸಲು (ಪರೋಕ್ಷವಾಗಿ ಈಥರಿನ ಪಾತ್ರ ಅಥವಾ ಅಸ್ತಿತ್ವ ಅರಿಯಲು) ೧೮೮೭ರಲ್ಲಿ ಮಾಡಿದ ಸಂಶೋಧನೆ ಮೈಕಲ್‌ಸನ್-ಮಾರ್ಲೀ ಪ್ರಯೋಗವೆಂದು ಪ್ರಸಿದ್ಧವಾಗಿದೆ. ಕೆಪ್ಲರ್-ನಿಯಮಗಳು ನ್ಯೂಟನ್-ಗುರುತ್ವಾಕರ್ಷಣ ನಿಯಮದ ಆವಿಷ್ಕಾರಕ್ಕೆ ಹೇಗೊ ಹಾಗೆ ಮೈಕಲ್‌ಸನ್-ಮಾರ್ಲೀ ಪ್ರಯೋಗ ಐನ್‌ಸ್ಟೈನ್-ವಿಶೇಷಸಾಪೇಕ್ಷತಾಸಿದ್ಧಾಂತದ ಮಂಡನೆಗೆ ಭದ್ರ ಬುನಾದಿ ಹಾಕಿದುವು. (ನೋಡಿ ೧೭ ಮತ್ತು ೪೩)

೧೬. ಪುಟ ೨೩. ಮ್ಯಾಕ್ಸ್ ಪ್ಲ್ಯಾಂಕ್, ೧೮೫೮-೧೯೪೭, ಜರ್ಮನ್ ಭೌತವಿಜ್ಞಾನಿ, ಶಕಲ ಸಿದ್ಧಾಂತದ ಮಂಡನಕಾರ, ನವ ಅಥವಾ ಆಧುನಿಕ ಭೌತವಿಜ್ಞಾನದ ಹರಿಕಾರ. ಈ ಮಹಾನುಭಾವ ಮಡಿದಾಗ ಐನ್‌ಸ್ಟೈನ್ ಒಪ್ಪಿಸಿದ ನುಡಿಕಾಣ್ಕೆ (೧೯೪೮) : "ಉನ್ನತ ಸೃಜನಶೀಲ ಚಿಂತನೆಯಿಂದ ಪ್ರಪಂಚವನ್ನು ಅನುಗ್ರಹಿಸುವ ಯೋಗ ಒದಗಿದಂಥ ಮಹಾನುಭಾವನಿಗೆ ಭವಿಷ್ಯ ಪೀಳಿಗೆಯ ಪ್ರಶಂಸೆ ಅನಗತ್ಯ. ಆತನ ಪ್ರತ್ಯಕ್ಷಸಿದ್ಧಿಯೇ ಆತನಿಗೆ ಅಧಿಕತರ ವರವನ್ನು ಪ್ರದಾನಿಸಿರುತ್ತದೆ. ಹೀಗಿದ್ದರೂ ಸತ್ಯ ಮತ್ತು ಜ್ಞಾನಗಳಿಗಾಗಿ ಹೆಣಗುವವರ ಎಲ್ಲ ಪ್ರತಿನಿಧಿಗಳೂ ಇಂದು ಇಲ್ಲಿ ಭೂಮಂಡಲದ ನಾಲ್ಕು ಮೂಲೆಗಳಿಂದಲೂ ಬಂದು ನೆರೆದಿರುವರೆಂಬುದು ಅಭಿಮಾನದ ಸಂಗತಿ. ನಿಜಕ್ಕೂ ಇದು ಹೀಗೆಯೇ ಆಗಬೇಕಾದದ್ದು. ಚಿಂತಾಕ್ರಾಂತ ಮತ್ತು ಭಯಗ್ರಸ್ತ ಜನರ ಶಿರಗಳ ಮೇಲೆ ರಾಜಕೀಯ ಈರ್ಷ್ಯೆ ಮತ್ತು ಪಾಶವೀಬಲ ಕರವಾಲಗಳಂತೆ ನೇಲುತ್ತಿರುವ ಈ ದಿನಗಳಲ್ಲಿಯೂ ಸತ್ಯದ ಆದರ್ಶಶೋಧನೆಯ ಮಟ್ಟವನ್ನು ಒಂದಿಷ್ಟೂ ಮಸುಳದಂತೆ ಎತ್ತರಕ್ಕೆ ಎತ್ತಿ ಹಿಡಿಯಲಾಗಿದೆ ಎಂಬುದಕ್ಕೆ ಸಾಕ್ಷಿಯಾಗಿ ಈ ಪ್ರತಿನಿಧಿಗಳು ಇಲ್ಲಿ ಸೇರಿದ್ದಾರೆ. ಎಲ್ಲ ಕಾಲಗಳಲ್ಲಿ ಎಲ್ಲ ನೆಲೆಗಳಲ್ಲಿಯ ವಿಜ್ಞಾನಿಗಳನ್ನು ಹೀಗೆ ಸದಾ ಒಂದುಗೂಡಿಸುವ ಈ ಆದರ್ಶ ಮ್ಯಾಕ್ಸ್ ಪ್ಲ್ಯಾಂಕರಲ್ಲಿ ಅತ್ಯಪೂರ್ವ ಪರಿಪೂರ್ಣತೆ ಸಹಿತ ಮೂರ್ತೀಭವಿಸಿತ್ತು. ದ್ರವ್ಯದ ಪರಮಾಣವಿಕ ಸ್ವರೂಪವನ್ನು ಗ್ರೀಕರ ಕಾಲದಷ್ಟು ಹಿಂದೆಯೇ ಪರಿಕಲ್ಪನಾತ್ಮಕವಾಗಿ ಗ್ರಹಿಸಲಾಗಿತ್ತು. ಹತ್ತೊಂಬತ್ತನೆಯ ಶತಮಾನದ ವಿಜ್ಞಾನಿಗಳು ಈ ಪರಿಕಲ್ಪನೆಯನ್ನು ಉನ್ನತ ದರ್ಜೆಯ ಸಂಭಾವ್ಯತೆಗೆ—ಅಂದರೆ ನಿಸರ್ಗದ ವಸ್ತುಸ್ಥಿತಿ ಪರಮಾಣವಿಕವಾಗಿಯೇ ಇರಬೇಕು ಎಂಬ ಮಟ್ಟಕ್ಕೆ—ಏರಿಸಿದ್ದರು. ಆದರೆ, ಇತರ ಅಭಿಗೃಹೀತಗಳನ್ನು ಆಧರಿಸದೇ, ಸ್ವತಂತ್ರವಾಗಿ, ಮೊತ್ತಮೊದಲಿಗೆ ಪರಮಾಣುಗಳ ನಿಷ್ಕೃಷ್ಟ ನಿರ್ಧರಣೆ ಸಾಧಿಸಿದ್ದು ಪ್ಲ್ಯಾಂಕ್-ವಿಕಿರಣ ನಿಯಮ. ಇಷ್ಟೂ ಅಲ್ಲದೆ, ದ್ರವ್ಯದ ಪರಮಾಣವಿಕ ರಚನೆಯ ಜೊತೆಗೆ ಶಕ್ತಿಗೆ ಸಹ ಒಂದು ತೆರನಾದ ಪರಮಾಣವಿಕ ರಚನೆ ಇದೆ, ಇದು ವಿಶ್ವನಿಯತಾಂಕ *h*ನಿಂದ ನಿಯಂತ್ರಿತವಾಗಿದೆ ಎಂದು ಇವರು

ಸಕಾರಣವಾಗಿ ರುಜುವಾತಿಸಿದರು. *h*ನ್ನು ಪ್ರವೇಶಗೊಳಿಸಿದವರೇ ಪ್ಲ್ಯಾಂಕ್. ಈ ಆವಿಷ್ಕಾರ ಇಪ್ಪತ್ತನೆಯ ಶತಮಾನದಲ್ಲಿ ಭೌತವಿಜ್ಞಾನದ ಸಂಶೋಧನೆಗೆ ಭದ್ರ ಬುನಾದಿ ನಿರ್ಮಿಸಿದುದರ ಜೊತೆಗೆ ಅಂದಿನಿಂದಲೂ ಇದರ ಅಭಿವರ್ಧನೆಯನ್ನು ಹೆಚ್ಚು ಕಡಿಮೆ ಪೂರ್ತಿಯಾಗಿ ಪ್ರಭಾವಿಸುತ್ತ ಬಂದಿದೆ. ಈ ಶೋಧ ಆಗಿರದಿದ್ದರೆ ಅಣುಪರಮಾಣುಗಳ ಒಂದು ಕಾರ್ಯಶೀಲ ಸಿದ್ಧಾಂತವನ್ನು ಮಂಡಿಸಲಾಗುತ್ತಿರಲಿಲ್ಲ. ಅಂತೆಯೇ ಅವುಗಳ ಪರಿವರ್ತನೆಗಳನ್ನು ನಿಯಂತ್ರಿಸುವ ಶಕ್ತಿಪ್ರಕ್ರಿಯೆಗಳನ್ನು ಕೂಡ. ಅಲ್ಲದೇ, ಇದು ಅಭಿಜಾತ ಬಲ- ಮತ್ತು ವಿದ್ಯುದ್ಗತಿ-ವಿಜ್ಞಾನಗಳ ಸಮಗ್ರ ಚೌಕಟ್ಟನ್ನೇ ಛಿನ್ನವಿಚ್ಛಿನ್ನಗೊಳಿಸಿ ವಿಜ್ಞಾನಕ್ಕೆ ಹೊಸ ಹೊಣೆಯನ್ನು ವಿಧಿಸಿದೆ: ಸಮಸ್ತ ಭೌತವಿಜ್ಞಾನಕ್ಕೂ ನೂತನ ಪರಿಕಲ್ಪನಾತ್ಮಕ ಆಧಾರದ ಶೋಧನೆ. ಅತ್ಯಂತ ಗಮನಾರ್ಹ ಆಂಶಿಕ ಲಾಭಗಳೇನೋ ಗಳಿಕೆಯಾಗಿವೆ. ಆದರೆ ಸಮಸ್ಯೆಗೆ ತೃಪ್ತಿಕರ ಪರಿಹಾರವಿನ್ನೂ ಒದಗಿಲ್ಲ. ಅಮೆರಿಕನ್ ನ್ಯಾಶನಲ್ ಅಕ್ಯಾಡೆಮಿ ಆಫ್ ಸೈನ್ಸಸ್ ಈ ಮಹಾಮಾನವನಿಗೆ ಗೌರವಾಂಜಲಿ ಅರ್ಪಿಸುತ್ತ, ಶುದ್ಧಜ್ಞಾನದ ಸಲುವಾಗಿ ಮುಕ್ತ ಸಂಶೋಧನೆ ಸದಾ ಅಬಾಧಿತವಾಗಿಯೂ ಅಪೀಡಿತವಾಗಿಯೂ ನಡೆಯುವುದೆಂಬ ತನ್ನ ಆಶಯವನ್ನು ವ್ಯಕ್ತಪಡಿಸುತ್ತದೆ."

ಆರ್ನಾಲ್ಡ್ ಸೊಮ್ಮರ್‌ಫೆಲ್ಡ್, ೧೮೬೮-೧೯೫೧, ಜರ್ಮನ್ ಭೌತವಿಜ್ಞಾನಿ, ಮತ್ತು ಪ್ಲ್ಯಾಂಕ್ ನಡುವೆ ಸಾಕಷ್ಟು ಪತ್ರವ್ಯವಹಾರ ಮತ್ತು ಚರ್ಚೆ ನಡೆದಿದ್ದುವು—ಎಲ್ಲವೂ ಶಕಲಸಿದ್ಧಾಂತದ ಸುತ್ತ. ಫಲವಾಗಿ ವಿಷಯ ಅಧಿಕ ಸ್ಫುಟವಾಯಿತು, ನವಕುಹರಾನ್ವೇಷಣೆಗಳು ನಡೆದುವು, ರಂಗ ವಿಸ್ತಾರಗೊಂಡಿತು. ಈ ಹೊಸ ಶೋಧಗಳಿಂದ ಕೃತಾರ್ಥರೂ ಉದ್ದೀಪಿತರೂ ಆದ ಸೊಮ್ಮರ್‌ಫೆಲ್ಡ್ ಒಂದು ನುಡಿಗಬ್ಬ ಕಟ್ಟಿ ಪ್ಲ್ಯಾಂಕರಿಗೆ ಕಾಣಿಕೆಯಾಗಿ ಅರ್ಪಿಸಿದರು :

ಹಸನುಗೊಳಿಸಿದಿರಯ್ಯ ನೀವಂದು ಹೊಸ ನೆಲವ
ನಾನೊ ? ಹೆಕ್ಕಿದೆನಷ್ಟೆ ತೋಟದಿಂ ಕೆಲ ಹೂವ !

ಇದರ ಧ್ವನ್ಯರ್ಥ ಗ್ರಹಿಸಿದ ಪ್ಲ್ಯಾಂಕ್, [ಸೊಮ್ಮರ್‌ಫೆಲ್ಡ್] ತಮ್ಮ ಅಗಾಧ ವಿಕ್ರಮಗಳನ್ನು ವಿನಯದಿಂದ ನೇಪಥ್ಯಕ್ಕೆ ಸರಿಸಿ ತಮಗೆ [ಪ್ಲ್ಯಾಂಕ್] ಗೌರವ ಸಲ್ಲಿಸಿದ್ದಾರೆ ಎಂದು ಸಹಜವಾಗಿಯೇ ತರ್ಕಿಸಿ ತಾವೂ ಒಂದು ನುಡಿಗಬ್ಬ ಕಟ್ಟಿ ಸೊಮ್ಮರ್‌ಫೆಲ್ಡರಿಗೆ ತಮ್ಮ ಕೃತಜ್ಞತೆ ಹಾಗೂ ಮೆಚ್ಚುಗೆ ಸೂಚಿಸಿದರು :

ನೀವು ಹೂ ಹೆಕ್ಕಿದಿರಿ, ಸರಿ—ನಾನು ಸಹ ಅಂತೆ
ಹೂಗಳೆಲ್ಲವ ನಾವು ಕಲೆಹಾಕಿ ಕೆಲೆಯೋಣ
ನಮ್ಮ ಹೂರಾಶಿಗಳ ಬನ್ನಿ ವಿನಿಮಯಿಸೋಣ
ಕೋವೋಣ ಮಾಲೆಯನು ಸೌಂದರ್ಯ ಮೆರೆವಂತೆ !

೧೭. ಪುಟ ೨೮. ಆಕರದ ವೇಗ ಚರವಸ್ತುವಿನ ಮೇಲೆ ಏನು ಪರಿಣಾಮ ಬೀರುತ್ತದೆ ? ಡಾಪ್ಲರ್ ಪರಿಣಾಮ ಇಲ್ಲಿ ಪ್ರಸ್ತುತವಾಗುತ್ತದೆ. ನೇರ ರೇಲ್ವೇ ಹಳಿಯ ಬದಿಯಲ್ಲಿ ನಿಂತು ಕಣ್ಣಿಗೆ ಕಾಣುವ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಏಕರೀತಿ ವೇಗದಿಂದ ಧಾವಿಸುತ್ತಿರುವ ರೇಲ್ವೇ ಎಂಜಿನ್ನಿನ ಚಲನೆಯನ್ನು ಗಮನಿಸುತ್ತಿರುವೆವೆಂದು ಭಾವಿಸೋಣ. ನಮಗೆ ಕಾಣುವಷ್ಟು ದೂರವೂ ಎಂಜಿನ್ ಅದರ ಶಿಳ್ಳನ್ನು ಒಂದೇ ಶ್ರುತಿಯಲ್ಲಿ ಮೊಳಗಿಸುತ್ತ ಸಾಗಲಿ. ಅಂದರೆ ಚಾಲಕನ ಕಿವಿಗೆ ಅದರ ಶ್ರುತಿ ಏಕಸ್ಥಾಯಿಯಲ್ಲಿದೆ ಎಂದು ಅನ್ನಿಸುತ್ತದೆ. ಆದರೆ ನಮಗೆ ಮಾತ್ರ ಎಂಜಿನ್ ಹತ್ತಿರಹತ್ತಿರ ಬಂದಂತೆ ಶ್ರುತಿ ಕ್ರಮೇಣ ತಾರಕ್ಕೆ ಏರಿದಂತೆಯೂ ದೂರ ದೂರ ಹೋದಂತೆ ಮಂದ್ರಕ್ಕೆ ಇಳಿದಂತೆಯೂ ಭಾಸವಾಗುತ್ತದೆ. ಎಂಜಿನ್ನಿನ ಚಲನವೇಗ ಶಬ್ದದ ಸಹಜ ವೇಗದ ಜೊತೆ ಏರಕಗೊಳ್ಳುವುದರ ಪರಿಣಾಮವಿದು. ಆದ್ದರಿಂದ ಶಿಳ್ಳಿನ ಶ್ರುತಿ ಏರುತ್ತಿರುವಾಗ ಎಂಜಿನ್ ನಮ್ಮ ಕಡೆ ಬರುತ್ತಿದೆಯೆಂದೂ ಇಳಿಯುತ್ತಿರುವಾಗ ನಮ್ಮಿಂದ ದೂರ ಸರಿಯುತ್ತಿದೆಯೆಂದೂ ತರ್ಕಿಸಬಹುದು. ಇಷ್ಟೇ ಅಲ್ಲ, ಈ ಏರಿಳಿತಗಳನ್ನು ಯುಕ್ತ ಉಪಕರಣಗಳ ನೆರವಿನಿಂದ ಅಳೆದು ಎಂಜಿನ್ನಿನ ವೇಗವನ್ನು ಗಣಿಸಬಹುದು ಕೂಡ.

ಎಂಜಿನ್ನಿನ ವೇಗದ ಕಾರಣವಾಗಿ ಶಿಳ್ಳಿನ ಶ್ರುತಿಯಲ್ಲಿ ಕೇಳಿಬರುವ ಬದಲಾವಣೆಗೆ ಶಬ್ದದ ಡಾಪ್ಲರ್

ಪರಿಣಾಮವೆಂದು ಹೆಸರು. ಆಸ್ಟ್ರಿಯಾದ ಭೌತವಿಜ್ಞಾನಿ ಕ್ರಿಶ್ಚಿಯನ್ ಯೋಹನ್ ಡಾಪ್ಲರ್, ೧೮೦೩-೫೩, ಈ ಪರಿಣಾಮದ ಆವಿಷ್ಕರ್ತೃ. ಬೆಳಕನ್ನು ಕುರಿತಂತೆ ಕೂಡ ಡಾಪ್ಲರ್ ಪರಿಣಾಮವಿದೆ. ಇಲ್ಲಿ ಕಿವಿ ಅಲ್ಲ ನಿರ್ಣಾಯಕ, ಕಣ್ಣು. ಬೆಳಕಿನ ಆಕರ ನಮ್ಮ ಕಡೆಗೆ ಬರುತ್ತಿರುವಾಗ ಅದರ 'ಶ್ರುತಿ' ಏರುವುದೆಂದೂ ನಮ್ಮಿಂದ ದೂರ ಸರಿಯುತ್ತಿರುವಾಗ ಇಳಿಯುವುದೆಂದೂ ನಿರೀಕ್ಷಿಸಬಹುದು. ಆದರೆ ಬೆಳಕಿನ 'ಶ್ರುತಿ'ಯ ಏರಿಳಿತಗಳನ್ನು ಅಳೆಯುವುದು ಹೇಗೆ ! ರೋಹಿತದಲ್ಲಿ ಮೂಡುವ ಕರಿ ಗೆರೆಗಳು ಅವುಗಳಿಗೆ ನಿಗದಿಯಾದ ನೆಲೆಗಳಲ್ಲಿರದ ಎಲ್ಲವೂ ರೋಹಿತದ ನೀಲಿ ಕೊನೆಗೆ ಅಥವಾ ಕೆಂಪು ಕೊನೆಗೆ ಸರಿದಿರುತ್ತವೆ : ಪ್ರತಿಯೊಂದು ನಕ್ಷತ್ರದ ರೋಹಿತ ಕುರಿತಂತೆಯೂ ಇದು ನಿಜ. ನೀಲಿಕೊನೆಯಡೆಗಿನ ಸರಿತಕ್ಕೆ ನೀಲಿಪಲ್ಲಟವೆಂದೂ (blue shift) ಕೆಂಪು ಕೊನೆಯೆಡೆಗಿನದಕ್ಕೆ ರಕ್ತಪಲ್ಲಟವೆಂದೂ (red shift) ಹೆಸರು. ನೀಲಿಪಲ್ಲಟ ಆ ನಕ್ಷತ್ರ ನಮ್ಮೆಡೆಗೆ ಬರುತ್ತಿರುವುದನ್ನೂ (ಶ್ರುತಿ ಏರಿಕೆ) ರಕ್ತಪಲ್ಲಟ ಅದು ನಮ್ಮಿಂದ ದೂರ ಸರಿಯುತ್ತಿರುವುದನ್ನೂ (ಶ್ರುತಿ ಇಳಿಕೆ) ಸೂಚಿಸುತ್ತವೆ. (ನೋಡಿ ೧೫ ಮತ್ತು ೪೩)

೧೮. ಪುಟ ೨೯. ವಿಜ್ಞಾನ ಮತ್ತು ತಂತ್ರವಿದ್ಯೆ. ಮಾನವಮತಿ-ನಿಸರ್ಗ ಅಂತರಕ್ರಿಯೆಯ ಫಲವೇ ವಿಜ್ಞಾನ. ವೀಕ್ಷಣೆ-ಮಾಹಿತಿಸಂಗ್ರಹಣೆ-ವಿಶ್ಲೇಷಣೆ-ಊಹನೆ-ಪ್ರಾಯೋಗಿಕ ತಪಾಸಣೆ ಈ ಮುಂತಾದ ವ್ಯವಸ್ಥಿತ ಹಂತ ಗಳ ಮೂಲಕ ಮಾನವಮತಿಯು ನೈಸರ್ಗಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿಯ ಕಾರಣವನ್ನು ಶೋಧಿಸುತ್ತದೆ. ಇಂಥ ಅಂತಿಮ ವಿವರಣೆಯನ್ನು ನಿಸರ್ಗ 'ಒಪ್ಪಿ'ಕೊಂಡರೆ, ಹಾಗೆ ಒಪ್ಪಿಕೊಂಡಷ್ಟು ಕಾಲ, ಅದು ಸಿದ್ಧಾಂತ ವೆನ್ನಿಸುತ್ತದೆ. ಹೀಗೆ ವೈಜ್ಞಾನಿಕ ಸಿದ್ಧಾಂತ ಮಾನವನಿಗೆ ನಿಸರ್ಗದ ಕೆಲವು ವಿಧಿನಿಯಮಸೂತ್ರಗಳಿಗೆ ಪ್ರವೇಶ ನೀಡುತ್ತದೆ. ಇವನ್ನು ಮತ್ತೆ ನಿಸರ್ಗಕ್ಕೆ, ಅದು ಅಂಗೀಕರಿಸುವ ರೀತಿಯಲ್ಲಿ ಅನ್ವಯಿಸಿ, ಸಾಧನ ಸಲಕರಣೆ ಸರಂಜಾಮುಗಳನ್ನು ತಯಾರಿಸಬಹುದು. ಇಂಥ ಮಾನವಕೃತ ರಚನೆಗೆ ಕಾರಣವಾಗುವ ಜ್ಞಾನಸಮಷ್ಟಿಗೆ ತಂತ್ರವಿದ್ಯೆ ಎಂದು ಹೆಸರು. ಆದ್ದರಿಂದ ತಂತ್ರವಿದ್ಯೆ ಎಂದರೆ ಅನ್ವಿತ ವಿಜ್ಞಾನ. ತಂತ್ರವಿದ್ಯೆಯ ಸೈದ್ಧಾಂತಿಕ ಆಧಾರ ವಿಜ್ಞಾನ. ವಿಜ್ಞಾನ ಮತ್ತು ತಂತ್ರವಿದ್ಯೆ ಪೂರ್ತಿ ಮಾನವಸೃಷ್ಟಿ—ನಿಸರ್ಗಜನ್ಯ ಬಲಗಳಲ್ಲ (ಗುರುತ್ವಾಕರ್ಷಣೆ, ವಾಯುಸಂಮರ್ದ, ವಿಕಿರಣ ಮುಂತಾದವು ನಿಸರ್ಗಜನ್ಯ ಬಲಗಳು).

೧೯. ಪುಟ ೩೨. ಪ್ರಾಯಶಃ ಕ್ರಿಪೂ ೩ನೆಯ ಶತಮಾನದಲ್ಲಿ ಶೂನ್ಯದ (= ಸೊನ್ನೆ = 0) ಪರಿಕಲ್ಪನೆ ಹೆಪ್ಪುಗಟ್ಟಿತು : ಬೇಸಾಯಗಾರನ ಸಂಪತ್ತು, ಜಾನುವಾರಗಳ ಮೊತ್ತ ಎಲ್ಲವೂ ಯಾವುದೋ ನೈಸರ್ಗಿಕ ಪ್ರಕೋಪದಿಂದ ನಿರ್ನಾಮವಾಗಿ ಹೋದರೆ ಆತನಲ್ಲಿ ಉಳಿದಿರುವುದೇನು ? ಹೀಗೆ 'ನೆಲಮಟ್ಟ'ವಾಗಿ, 'ಆರಂಭಬಿಂದು'ವಾಗಿ ಅಥವಾ 'ವರ್ತಮಾನ ಮುಹೂರ್ತ'ವಾಗಿ ಸೊನ್ನೆಯ ಅಸ್ತಿತ್ವ ಅನಿವಾರ್ಯವಾಗುತ್ತದೆ. ಹಾಗಾದರೆ, 'ನೆಲಮಟ್ಟದಿಂದ ಕೆಳಕ್ಕೆ?' 'ಆರಂಭ ಬಿಂದುವಿಗಿಂತ ಹಿಂದಕ್ಕೆ ?' ಅಥವಾ 'ಭೂತಕಾಲ?' ಇಂಥ ತಾರ್ಕಿಕ ಚಿಂತನೆ ಹಾಗೂ ವಾಸ್ತವ ಚಿತ್ರಗಳ ಫಲವಾಗಿ ಋಣದಿಶೆ ಮತ್ತು ಋಣಸಂಖ್ಯೆ ರಂಗ ಪ್ರವೇಶಿಸುವುದು ಅಗತ್ಯವಾಯಿತು. ಋಣದಿಶೆಗೂ ಧನದಿಶೆಗೂ ನಡುವಿನ ನಿರಪೇಕ್ಷ ನೆಲೆಯೇ ಸೊನ್ನೆ. ಋಣಸಂಖ್ಯೆಗಳಿಗೂ ಧನಸಂಖ್ಯೆಗಳಿಗೂ ನಡುವಿನ ನಿರಪೇಕ್ಷ ಸಂಖ್ಯೆ ಇದು. ಸಂಕಲನ ವ್ಯವಕಲನ ಮತ್ತು ಗುಣಾಕಾರ ಎಂಬ ಮೂರು ಗಣಿತ ಪರಿಕರ್ಮಗಳಲ್ಲಿ 0ಯ ಪಾತ್ರ ಸೊನ್ನೆ—ಅಂದರೆ ಏನೂ ಇಲ್ಲ. ಅಥವಾ, ಗುಣಾಕಾರದಲ್ಲಿ ಇದೆ : [ಯಾವುದೇ ಸಂಖ್ಯೆ] x [0]=0. ಆದರೆ ನಾಲ್ಕನೆಯ ಪರಿಕರ್ಮದಲ್ಲಿ ಪರಿಸ್ಥಿತಿ ಬಿಗಡಾಯಿಸುತ್ತದೆ. ಸೊನ್ನೆಯೊಂದಿಗಿನ ವ್ಯವಹಾರ ಸುಲಭವಲ್ಲ, ಪರಮಕುತೂಹಲಕಾರಿ ಗಣಿತಕ್ರೀಡೆ. (ನೋಡಿ ೯)

೨೦. ಪುಟ ೩೨. ವಿಶ್ವಗುರುತ್ವಾಕರ್ಷಣನಿಯಮ (ನೋಡಿ ೧೪). ನ್ಯೂಟನ್ , ಸೇಬುಹಣ್ಣಿನ ಪತನ ಮತ್ತು ವಿಶ್ವಗುರುತ್ವಾಕರ್ಷಣನಿಯಮದ ಆವಿಷ್ಕಾರ—ಇವನ್ನು ಬೆಸೆಯುವ ಒಂದು ಕಾಲ್ಪನಿಕ ಕಥೆ ಇದೆ. ಒಂದು ದಿನ ನ್ಯೂಟನ್ ತನ್ನ ಉದ್ಯಾನವನದಲ್ಲಿ ವಿರಮಿಸಿ ಗಣಿತಚಿಂತನೆಯಲ್ಲಿ ಮಗ್ನನಾಗಿದ್ದಾಗ ಪಕ್ಕದಲ್ಲೇ ಇದ್ದ ಸೇಬಿನಮರದಿಂದ ಹಣ್ಣೊಂದು ತೊಟ್ಟು ಕಳಚಿ ನೆಲಕ್ಕೆ ಕೆಡೆಯಿತು. ಹಣ್ಣು ನೆಲಕ್ಕೆ ಬೀಳಲು ಕಾರಣವೇನು ! ಗಗನಕ್ಕೆ ನೆಗೆಯಲಿಲ್ಲವೇಕೆ ? ಈ ಧಾಟಿಯಲ್ಲಿ ಚಿಂತಿಸಿದಾಗ ವಿಶ್ವಗುರುತ್ವಾಕರ್ಷಣ ನಿಯಮದ ಸಾಕ್ಷಾತ್ಕಾರ

ವಾಯಿತಂತೆ ! ಅರಿಸ್ಟಾಟಲ್-ಕಾಲದಿಂದ ನ್ಯೂಟನ್‌ಯುಗದ ತನಕ ಸಂದ ಸುಮಾರು ಇಪ್ಪತ್ತು ಶತಮಾನ ಪರ್ಯಂತ ಪ್ರಚಲಿತವಿದ್ದ ಊಹೆ ಇದು : ಭೌಮಿಕ ನಿಯಮಗಳು (terrestrial laws) ಭೂಮಿ ಮತ್ತು ಇದರ ಆಸುಪಾಸಿನ ಪ್ರದೇಶಗಳಲ್ಲಿಯ ಚಲನವಲನಗಳನ್ನು ನಿಯಂತ್ರಿಸುತ್ತವೆ—ತೊಟ್ಟು ಕಳಚಿದ ಹಣ್ಣು ಬೀಳುವುದು ಅಥವಾ ಮೋಡಗಳು ತೇಲುವುದು ಭೌಮಿಕ ನಿಯಮಗಳಿಗೆ ಅನುಗುಣವಾಗಿವೆ ; ಖಗೋಳೀಯ ನಿಯಮಗಳು (celestial laws) ಬೇರೆಯೇ—ಇವು ಖಗೋಳೀಯ ಕಾಯಗಳಿಗೆ ಮಾತ್ರ ಅನ್ವಯ ವಾಗುತ್ತವೆ. ಎಂದೇ ಚಂದ್ರ, ಸೂರ್ಯ, ನಕ್ಷತ್ರಗಳನ್ನು ಹಿಡಿದಿಟ್ಟಿರುವ ತೊಟ್ಟುಗಳಿರದಿದ್ದರೂ, ಖಗೋಳೀಯ ನಿಯಮಾನುಸಾರ, ಅವು ಅಲ್ಲಿಯೇ ನೆಲಸಿರುವುವು, ಭೂಮಿಗೆ ಬೀಳುವುದಿಲ್ಲ ! ನ್ಯೂಟನ್ ಮಾಡಿದ ಯುಗ ಪ್ರವರ್ತಕ ಆವಿಷ್ಕಾರ ಈ ಎಲ್ಲ ಬೌದ್ಧಿಕ ಅತಿರೇಕಗಳನ್ನೂ ಶಾಶ್ವತವಾಗಿ ನಿವಾರಿಸಿ ವಿಶ್ವಸಂಯಂತ್ರದ ಕೀಲಿ ಸೂತ್ರವನ್ನು ಖಚಿತ ಗಣಿತ ಪರಿಭಾಷೆಯಲ್ಲಿ ವಿವರಿಸಿತು.

೨೧. ಪುಟ ೩೬. ಪ್ರೌಢಗಣಿತ. ನಿಸರ್ಗದ ವ್ಯಾಖ್ಯಾನ ವಿಜ್ಞಾನ. ವಿಜ್ಞಾನದ ಭಾಷೆ ಗಣಿತ. ಈಗ, ನಿಸರ್ಗದ ಸಂಕೀರ್ಣಾತಿ ಸಂಕೀರ್ಣ ಹಾಗೂ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಗುರುತಿಸುತ್ತ ಇವುಗಳಿಗೆ ವ್ಯಾಖ್ಯಾನ ಬರೆಯುತ್ತ ಹೋದಂತೆ ಗಣಿತವನ್ನು ಯುಕ್ತವಾಗಿ ಮಾರ್ಪಡಿಸುವುದೂ ನೂತನ ಗಣಿತಾಭಿವ್ಯಕ್ತಿಯನ್ನು ಶೋಧಿಸುವುದೂ ಅನಿವಾರ್ಯವಾಗುತ್ತದೆ : ಪಥಕ್ಕೆ ಅನುಗುಣವಾಗಿ ವಾಹನ ; ಇಲ್ಲವಾದರೆ ಪಥಗಮನ ಅಸಾಧ್ಯ. ಎತ್ತಿನಬಂಡಿಯ ನೆರವಿನಿಂದ ಕಡಲಿನ ಬಿತ್ತರವನ್ನು ದಾಟಲಾಗದು. ಅದಕ್ಕೆ ಹಡಗಿನ ನಿರ್ಮಾಣ ಅಗತ್ಯ. ಸಾಪೇಕ್ಷತಾಸಿದ್ಧಾಂತವನ್ನು ಐನ್‌ಸ್ಟೈನರ ಭೌತವಿಜ್ಞಾನಿಯ ಅಂತರ್ಬೋಧೆ, ಜೀನಿಯಸ್ಸಿನ ಧಾರ್ಷ್ಟ್ಯ, ಸ್ವಂತ ಚಿಂತನೆ ಬಗೆಗಿನ ಸಂಪೂರ್ಣ ಭರವಸೆ ಮುಂತಾದವುಗಳ ಸಂಲಗ್ನತೆಯಿಂದ ಮಂಡಿಸಿದರು. ಇದನ್ನು ಗಣಿತದ ಪರಿಭಾಷೆಗೂ ಶಿಸ್ತಿಗೂ ಅಳವಡಿಸಿ ಇದರ ಭವಿಷ್ಯಾಭಿವರ್ಧನೆಗೆ ರಾಜಮಾರ್ಗ ನಿರ್ಮಿಸಿದವರು ವಿಖ್ಯಾತ ಗಣಿತವಿದ ಮಿಂಕೊವ್ಸ್ಕೀ. Traveller ! There is no path. Paths are made by walking.

ಓ ಗೆಳೆಯ ! ನೀ ಸದಾ ಪಥಕಡಿದು ಮುಂದೆ ನಡೆ
ಸಾಗರವಿಶಾಲತೆ ಹಿಮಾಲಯಮಹೋನ್ನತಿಯು
ಬಾಗುವುವು ನಿನ್ನ ಪದತಲದಲ್ಲಿ. ಗುರಿಕುರಿತ
ಜಾಗರಣೆ ನಿಜಯಶಸ್ಸಿನ ಮೂಲ ಅತ್ರಿಸೂನು

೨೨. ಪುಟ ೪೯. ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿಯಃ
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ

|| ಗೀತೆ ೫-೧೦ ||

ಯಾರು ಬ್ರಹ್ಮನಲ್ಲಿ ಕರ್ಮಗಳನ್ನು ಇಟ್ಟು, ಕರ್ಮವನ್ನು ಮಾಡುತ್ತಿರುವನೋ ಅವನಿಗೆ ತಾವರೆಯ ಎಲೆಗೆ ನೀರಿನ ಲೇಪವಿಲ್ಲದಿರುವಂತೆ ಪಾಪದ ಲೇಪವಿರುವುದಿಲ್ಲ. (ಅನು ಸೋಮನಾಥಾನಂದ)

ಫಲದಾಸೆಯನ್ನಿಡದೆ, ಪರಮಾತ್ಮಗರ್ಪಿಸಿರೆ
ಕರ್ಮಗಳ ಹೊರೆಯ, ಲವಲೇಶವಿರದಂತೆ
ತಟ್ಟದಾನರಗೆ ಪಾಪದ ಲೇಪ, ನೈದಿಲೆಯ
ಎಲೆ ನೀರೊಳದ್ದಿದರು ಪಸೆ ಹೀರದಂತೆ

ವಿಜಯನಾಥಭಟ್ಟ 'ವಿಜಯಿನಿ'

೨೩. ಪುಟ ೫೩. ಶುದ್ಧಕಾಲ : ನ್ಯೂಟನ್-ಚಿಂತನೆ-ಗಣನೆಗಳ ಪ್ರಕಾರ ವಿಶ್ವಾದ್ಯಂತ ಸಾಧುವಾಗುವ ಮತ್ತು ಸ್ಥಿರ ವೇಗದಿಂದ ಪ್ರವಹಿಸುವ ವಿದ್ಯಮಾನ ಕಾಲ. ಇದು ನಿರಪೇಕ್ಷ (absolute). ಐನ್‌ಸ್ಟೈನ್ ಇಂಥ ಒಂದು ಪರಿಕಲ್ಪನೆ ಅಸಾಧು ಎಂದು ಸಾಧಿಸಿದರು.

೨೪. ಪುಟ ೫೬. ಎಲ್ಸಾ-ಐನ್‌ಸ್ಟೈನ್ ದಂಪತಿಗಳಿಗೆ ಸದೃಶವಾದ ದಂಪತಿಗಳು ಲಲಿತ-ಚಂದ್ರಶೇಖರ್.

ಲಲಿತ (೧೯೧೧)ಸ್ವತಃ ಭೌತವಿಜ್ಞಾನ ಪದವೀಧರೆಯಾದರೂ ವಿವಾಹಾನಂತರ ಭಾರತೀಯ ಆದರ್ಶ ಗೃಹಿಣಿಯಂತೆ ತಮ್ಮನ್ನು ತಾವು ಪೂರ್ತಿ ಪತಿಸೇವೆಗೆ ಸಮರ್ಪಿಸಿಕೊಂಡರು. ಇವರ ಆತಿಥ್ಯ ಸವಿಯುವ ಸುಯೋಗ ನನ್ನದಾಗಿತ್ತು (೨೨, ೨೩ ಜೂನ್ ೧೯೯೫, ಶಿಕಾಗೋ). *ಸಪ್ತಸಾಗರದಾಚೆಯೆಲ್ಲೋ* ... ಕೃತಿಯಲ್ಲಿ ಪೂರ್ತಿ ವಿವರಣೆ ಇದೆ.

೨೫. ಪುಟ ೫೯. ವ್ಯಕ್ತಿಗೆ ಒಪ್ಪುವ ಪೋಷಾಕು ಹೊಲಿಯುವುದು ಅರ್ಥವಾಗುತ್ತದೆ. ಆದರೆ ಪೋಷಾಕಿಗೆ ಒಪ್ಪುವ ವ್ಯಕ್ತಿಯನ್ನು ಅರಸುವುದು ! ಸೈದ್ಧಾಂತಿಕ ಗಣನೆಗಳಲ್ಲಿರುವ ಸ್ವಾರಸ್ಯವೇ ಇದು—ಅದೂ ಗಣಿತ ಮಾರ್ಗದಲ್ಲಿ. ಆಧುನಿಕ ಭೌತವಿಜ್ಞಾನದ (=ಶಕಲ ಸಿದ್ಧಾಂತ, ಸಾಪೇಕ್ಷತಾಸಿದ್ಧಾಂತ ಮುಂತಾದ ನ್ಯೂಟನ್-ಪ್ರಣೀತ ಅಭಿಜಾತ ಭೌತವಿಜ್ಞಾನಕ್ಕಿಂತ ವಿಭಿನ್ನವಾದ, ಭೌತಸಿದ್ಧಾಂತಗಳ ಸಮುಚ್ಚಯ; ೨೦ನೆಯ ಶತಮಾನದ ಕೊಡುಗೆ) ಇಬ್ಬರು ಸೀಮಾಪುರುಷರಾದ ವರ್ನರ್ ಹೈಸನ್‌ಬರ್ಗ್ (೧೯೦೧-೭೬) ಮತ್ತು ಆಲ್ಬರ್ಟ್ ಐನ್‌ಸ್ಟೈನ್ ಒಮ್ಮೆ ಸಂಭಾಷಿಸುತ್ತಿದ್ದರು. ಆಗ ಹೈಸನ್‌ಬರ್ಗ್ ನುಡಿದರು : "ನಿಸರ್ಗ ನಮ್ಮನ್ನು ಪರಮ ಸರಳತೆ ಮತ್ತು ಅಸೀಮ ಸೌಂದರ್ಯಭರಿತವಾಗಿರುವ ಗಣಿತೀಯ ರೂಪಗಳತ್ತ (mathematical forms) ಮುನ್ನಡೆಸಿದರೆ—ವಾದಗಳು (hypothesis), ಆದ್ಯುಕ್ತಿಗಳು (axioms) ಮುಂತಾದವುಗಳ ಸುಸಂಬದ್ಧ ವ್ಯವಸ್ಥೆಗಳನ್ನು (coherent systems) ಇಲ್ಲಿ ನಾನು 'ರೂಪಗಳು' ಎಂದು ಉಲ್ಲೇಖಿಸಿದ್ದೇನೆ—ಮತ್ತು ಇಂಥ ರೂಪಗಳನ್ನು ಹಿಂದೆ ಯಾರೂ ಸಂಧಿಸಿರದಿದ್ದರೆ ಇವನ್ನು 'ಋತ'ವೆಂದೂ [=the true, ಅಂತರ್ಗತ ಶಾಶ್ವತ ಸತ್ಯದ, truth, ಬಾಹ್ಯಮುಖಿ] ಇವು ನಿಸರ್ಗದ ಒಂದು ನೈಜ ಲಕ್ಷಣವನ್ನು ಪ್ರದರ್ಶಿಸುತ್ತವೆಂದೂ ನಂಬದೆ ವಿಧಿ ಇಲ್ಲ . . . ನಿಮಗೂ ಈ ಭಾವನೆ ಸ್ಫುರಿಸಿರಬೇಕು ; ನಿಸರ್ಗ ನಮ್ಮೆದುರು, ನಾವು ಒಂದಿಷ್ಟೂ ಸಿದ್ಧರಾಗಿರದಾಗ, ತೀರ ಹಠಾತ್ತನೆ ಹರಡಿಹಾಕುವ ಸಂಬಂಧಗಳ ಆ ಹೆಚ್ಚು ಕಡಿಮೆ ಭಯಕಾರಕ ಸರಳತೆ ಮತ್ತು ಸಂಪೂರ್ಣತೆ [=the almost frightening simplicity and wholeness of the relationship which nature suddenly spreads before us and for which none of us was in the least prepared.]"

ಇದರ ಮಥಿತಾರ್ಥವಿದು : ಬೌದ್ಧಿಕ ಒಡಪು ತಯಾರಿದೆ ; ಇದಕ್ಕೆ ಒಪ್ಪುವ ನೈಸರ್ಗಿಕ ಒಗಟಿನ ಶೋಧನೆ ಆಗಬೇಕಾಗಿದೆ. ಮಾಲೆ ಸೂಡಿದೆ—ಧರಿಸುವವರಾರ್ ?

ಪೋಷಾಕು ಸಿದ್ಧವಿದೆ ಧರಿಸುವವನೆಲ್ಲಿಹನು ?
ವಾಸಗೃಹ ತೆರೆದಿಹುದು ಬರುವನೆಂದೊಡೆಕಾರ ?
ಮೂಷಿಕಾಧಿಪ ಲೆಕ್ಕಣಿಕೆ ಪಿಡಿದಿಹನು ವೇದ
ವ್ಯಾಸನಾಗಮನಕ್ಕೆ—ಇದು ವಿಶ್ವ ಅತ್ರಿಸೂನು

ಪ್ರಾಚೀನ ಗ್ರೀಕರು ಕೇವಲ ಬೌದ್ಧಿಕ ಕ್ರೀಡೆಯಾಗಿ ಶಂಕುಜಗಳ ಗಣಿತವನ್ನು (mathematics of conics or conic sections) ಅಭ್ಯಸಿಸಿದರು [ನೋಡಿ—ಇದೇ ಲೇಖಕ ಬರೆದಿರುವ 'ಐವರು ವಿಜ್ಞಾನಿಗಳು']. ಪುಟ ೫೪ರಲ್ಲಿ ಕಾಣಿಸಿರುವ ದೀರ್ಘವೃತ್ತ ಮೂರು ಶಂಕುಜಗಳ ಪೈಕಿ-ಒಂದು (ಪರವಲಯ ಮತ್ತು ಅತಿಪರವಲಯ ಉಳಿದ ಎರಡು). ಹಲವು ನೂರು ವರ್ಷಗಳ ತರುವಾಯ ಕೆಪ್ಲರ್ ಗಣಿತಮಾರ್ಗದಲ್ಲಿ ಕುಜ ಗ್ರಹದ ಕಕ್ಷೆಯನ್ನು ಲಭ್ಯ ಮಾಹಿತಿಗಳ ನೆರವಿನಿಂದ ರೇಖಿಸಿದ (೧೬೦೫). ಇದು ಸುಪರಿಚಿತ ದೀರ್ಘವೃತ್ತ ಎಂಬ ಸತ್ಯ ಪ್ರತ್ಯಕ್ಷವಾದಾಗ ಆತನ ಮನಃಸ್ಥಿತಿ ಹೇಗಿದ್ದಿರಬೇಡ : "ಭಯಕಾರಕ ಸರಳತೆ ಮತ್ತು ಸಂಪೂರ್ಣತೆ."

ಜಾರ್ಜ್ ಫ್ರೀಡ್‌ರಿಶ್ ರೀಮಾನ್, ೧೮೨೬-೬೬, ಜರ್ಮನ್ ಗಣಿತವಿದ, ಯೂಕ್ಲಿಡ್ ಜ್ಯಾಮಿತಿಗಿಂತ ವಿಭಿನ್ನವಾದ ಅಯೂಕ್ಲಿಡ್ ಜ್ಯಾಮಿತಿಯನ್ನು (non-Euclidean geometry), ಬೌದ್ಧಿಕಕ್ರೀಡೆಯಾಗಿ, ಸೃಷ್ಟಿಸಿದ (ನೋಡಿ ೬). ತತ್ಪೂರ್ವ ನಿಕೊಲಾಯ್ ಐವನೋವಿಚ್ ಲೂಬೂಚೇವ್ಸ್ಕೀ, ೧೭೯೩-೧೮೫೬, ರಶ್ಯನ್ ಗಣಿತವಿದ ಮತ್ತು ಸ್ವತಂತ್ರವಾಗಿ ಜೇನೋಸ್ ಬೊಲ್ಯಾಯ್, ೧೮೦೨-೬೦, ಹಂಗೇರಿಯನ್

ಗಣಿತವಿದ, ಸೃಷ್ಟಿಸಿದ ಅಯೂಕ್ಲಿಡ್ ಜ್ಯಾಮಿತಿಗಿಂತ ಇದು ಬೇರೆಯೇ ಆಗಿತ್ತು. ಅರ್ಧ ಶತಮಾನಾನಂತರ ಐನ್‌ಸ್ಟೈನ್ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತವನ್ನು ವಿಶ್ವದ ಯಥಾ ಭಾಷ್ಯವಾಗಿ ಮಂಡಿಸಿದಾಗ, ೧೯೧೫, ಇವರ ಯುಗನಿರ್ಮಾಪಕ ವಿನೂತನ ಅಭಿವ್ಯಕ್ತಿಗೆ ಸಿದ್ಧವಾಗಿ ಬಂದದ್ದು ಈ ರೀಮಾನಿಯನ್ ಜ್ಯಾಮಿತಿ !

೨೬. ಪುಟ ೬೭. ಜ್ಯೋತಿರ್ವರ್ಷ. light-year ನಿರ್ದ್ರವ್ಯತೆಯಲ್ಲಿ ಬೆಳಕಿನ ವೇಗ ಸೆಕೆಂಡಿಗೆ ಸುಮಾರು ೩೦೦,೦೦೦ ಕಿಮೀ. ಒಂದು ವರ್ಷಾವಧಿಯಲ್ಲಿ ಬೆಳಕು ಕ್ರಮಿಸುವ 'ದೂರ'ಕ್ಕೆ ಜ್ಯೋತಿರ್ವರ್ಷವೆಂದು ಹೆಸರು. ೧ ಜ್ಯೋತಿರ್ವರ್ಷ =೩೦೦,೦೦೦ x ೩೬೫.೨೪೨೨ x ೨೪ x ೬೦ x ೬೦ ಕಿಮೀ = ಸುಮಾರು ೯.೫ ಟ್ರಿಲಿಯನ್ ಕಿಮೀ = ೯.೫ x ೧೦$^{೧೨}$ ಕಿಮೀ.

೨೭. ಪುಟ ೬೯. ಸಮಕಾಲೀನವಾಗಿ ಪ್ರಕಟವಾಗುವ ಯಾವುದೇ ಸಿದ್ಧಾಂತದ ಉಗಮ ಭೂತದ ಗರ್ಭ ದಲ್ಲೆಲ್ಲೋ ಹುದುಗಿ ಅಂತರಗಂಗೆಯಾಗಿ ಪ್ರವಹಿಸುತ್ತಿದ್ದು ಯುಕ್ತ ವೇಳೆಯಲ್ಲಿ ಪ್ರಕಾಶಕ್ಕೆ ಬರುವುದು. ಐನ್‌ಸ್ಟೈನ್ ಬರೆದಿದ್ದಾರೆ : "ಕಲ್ಪನಾ ಲೋಕದಲ್ಲೊಂದು ಪರಿಪೂರ್ಣ ನಿಗೂಢ ಕಥೆ ಉಂಟು. ಅದು ತನ್ನ ಬಗ್ಗೆ ಅಗತ್ಯ ಸುಳುಹುಗಳೆಲ್ಲವನ್ನೂ ಒದಗಿಸಿ ಆ ಪರಿಸ್ಥಿತಿ ಕುರಿತಂತೆ ಓದುಗ ಸ್ವಂತ ಸಿದ್ಧಾಂತ ರೂಪಿಸಲು ಒತ್ತಾಯ ಹೇರುತ್ತದೆ. ಕಥಾವಸ್ತುವನ್ನು ವಾಚಕ ಎಚ್ಚರಿಕೆಯಿಂದ ಅನುಸರಿಸಿದ್ದಾದರೆ, ಲೇಖಕ ಆ ಗುಟ್ಟನ್ನು ರಟ್ಟುಮಾಡುವ ಅದೇ ಮೊದಲು ಸ್ವತಃ ಓದುಗನೇ ಆ ಪರಿಹಾರ ಪಡೆದಿರುತ್ತಾನೆ. ಇನ್ನು ಆ ಪರಿಹಾರ ವಾದರೋ ಅಗ್ಗದ ಕಟ್ಟುಕತೆಗಳಿಗೆ ವ್ಯತಿರಿಕ್ತವಾಗಿ ನಮ್ಮನ್ನು ಹತಾಶೆಗೊಳಿಸುವುದಿಲ್ಲ. ಅಲ್ಲದೆ ನಾವದನ್ನು ಯಾವ ಗಳಿಗೆ ನಿರೀಕ್ಷಿಸುತ್ತೇವೋ ಆಗಲೇ ಅದು ಪ್ರಕಟವೂ ಆಗುತ್ತದೆ. ಇಂಥ ಒಂದು ಗ್ರಂಥದ ವಾಚಕನನ್ನು ವಿಜ್ಞಾನಿಗಳ ಜೊತೆ ಹೋಲಿಸಬಹುದೇ ? ಏಕೆಂದರೆ ಇವರ ಉತ್ತರೋತ್ತರ ಪೀಳಿಗೆಗಳು ನಿಸರ್ಗಗ್ರಂಥದ ಚಿದಂಬರ ರಹಸ್ಯಗಳಿಗೆ ಪರಿಹಾರಾನ್ವೇಷಣೆಮಾಡಲು ಕ್ರಿಯಾಶೀಲವಾಗಿರುತ್ತವೆ. ಈ ಹೋಲಿಕೆ ತಪ್ಪು. ಇದನ್ನು ಮುಂದೆ ಕೈಬಿಡಬೇಕಾಗುತ್ತದೆ. ಆದರೆ ಇದಕ್ಕೆ ಕಿಂಚಿತ್ತು ಸಮರ್ಥನೆ ಉಂಟು : ವಿಶ್ವನಿಗೂಢತೆಯನ್ನು ಪರಿಹರಿಸುವ ದಿಶೆಯಲ್ಲಿ ವಿಜ್ಞಾನದ ಪ್ರಯತ್ನ ಕುರಿತಂತೆ ಇದು ಅಧಿಕ ಉಪಯುಕ್ತವಾಗುವಂತೆ ಇದನ್ನು ವಿಸ್ತರಿಸಬಹುದು ಮತ್ತು ಮಾರ್ಪಡಿಸಬಹುದು. ಈ ಅತಿನಿಗೂಢ ಕಥೆ ಇಂದಿಗೂ ಅಪರಿಹಾರ್ಯವಾಗಿಯೇ ಇದೆ. ಇದಕ್ಕೊಂದು ಅಂತಿಮ ಪರಿಹಾರವಾದರೂ ಇದೆಯೇ ? ಖಾತ್ರಿ ಏನನ್ನೂ ಹೇಳಲಾಗುತ್ತಿಲ್ಲ."

ಕೊಪರ್ನಿಕಸನ ಸೂರ್ಯಕೇಂದ್ರವಾದ ಹಾಗೂ ನ್ಯೂಟನ್ನನ ವಿಶ್ವಗುರುತ್ವಾಕರ್ಷಣ ನಿಯಮದ ಆವಿಷ್ಕಾರ —ಇವುಗಳ ಉಗಮ ಮಾನವನ ಚಿಕಿತ್ಸಕ ನೇತ್ರಗಳು ಆಕಾಶ ವಿದ್ಯಮಾನಗಳನ್ನು ಬೆರಗುಗಣ್ಣಿನಿಂದ ದಿಟ್ಟಿಸಿದಾಗಲೇ ಆಗಿದೆ. ಚಾರ್ಲ್ಸ್ ರಾಬರ್ಟ್ ಡಾರ್ವಿನ್, ೧೮೦೯-೮೨, ಇಂಗ್ಲಿಷ್ ನಿಸರ್ಗವಿಜ್ಞಾನಿ. ಮಂಡಿಸಿದ ವಿಕಾಸವಾದ ಕೂಡ ಹಾಗೆ : ಜೀವಿವೈವಿಧ್ಯದ ತಳದಲ್ಲಿ ಏಕರೂಪತೆ ಇದೆಯೇ ? ಜೀವಿಗಳ ನಡುವಿನ ಸಂಬಂಧಗಳೇನು ? ಇತ್ಯಾದಿ.

೨೮. ಪುಟ ೭೦. ಬೆನೆಡಿಕ್ಟ್ ಡ ಸ್ಪಿನೋಝ, ೧೬೩೨-೭೭, ಡಚ್ ತತ್ತ್ವಶಾಸ್ತ್ರವಿದ. ಐನ್‌ಸ್ಟೈನರ ಅಭಿಪ್ರಾಯದ ಪ್ರಕಾರ ಯೆಹೂದ್ಯ ಜನಾಂಗದಲ್ಲಿ ಅರಳಿದ ಅತ್ಯಂತ ಪರಿಶುದ್ಧ ಹಾಗೂ ಪ್ರಭಾವಶಾಲಿ ಪುರುಷ. ಆದರೆ ಯೆಹೂದ್ಯರು ಈತನನ್ನು ಧರ್ಮಬಾಹಿರನೆಂದು ಬಹಿಷ್ಕರಿಸಿದ್ದರು ! ನಾಗರಿಕತೆಯ ಪ್ರವಾಹ ದಲ್ಲಿ ಬದುಕು ಕೊಳಚೆಗುಂಡಿಯಾದಾಗ ಅದರಿಂದಲೇ ಸಿಡಿದೆದ್ದು ಬರುತ್ತಾನೆ ಒಬ್ಬ ಯುಗಪುರುಷ. ವರ್ತಮಾನ ಜೀವನ ಸುಧಾರಣೆಗೆ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಾನೆ. ಇಲ್ಲೆಲ್ಲ ಹೃದಯ ಮೊದಲು, ವಿಧಿನಿಷೇಧ ಬಳಿಕ. ಕಾಲಾಂತರದಲ್ಲಿ ಬರುವ ಅನುಯಾಯಿಗಳು ಹೃದಯಶೂನ್ಯರಾಗಿ ವಿಧಿನಿಷೇಧಗಳ ದಾಸರಾಗಿ ಮತ್ತೆ ಸಮ್ಮಾಜವನ್ನು ತಿಪ್ಪೆ ರಾಶಿಗೆ ಎಸೆಯುತ್ತಾರೆ !

ವಿಚಾರವೆಂಬೋ ಸಸಿಯನು ನೆಟ್ಟು
ಆಚಾರವೆಂಬೋ ಬೇಲಿಯ ಕಟ್ಟಿ
ಪ್ರಚಾರವೆಂಬೋ ಗೊಬ್ಬರ ಕೊಟ್ಟು
ಕಾದೆನು ನಾನು ಫಲಕಾಗಿ

ಬೇಲಿಯು ಬೆಳೆಯಿತು ಸಸಿಯನು ನುಂಗಿತು
"ಅಹಂ ವೈಶ್ವಾ ನರೋ ಭೂತ್ವಾ ಪ್ರಾಣಿನಾಂ ದೇಹ ಮಾಶ್ರಿತಃ"
ಎನ್ನುತ ಗರ್ಜಿಸಿತು !

೨೯. ಪುಟ ೭೬. ಫಿಲಿಪ್ ಎಡೂವರ್ಡ್ ಆ್ಯಂಟನ್ ಫಾನ್ ಲೆನಾರ್ಡ್, ೧೮೬೨-೧೯೪೭, ಹಂಗೇರಿಯನ್-ಜರ್ಮನ್ ಭೌತವಿಜ್ಞಾನಿ, ನಾಟ್ಸೀ ತತ್ತ್ವವನ್ನು ಮನಃಪೂರ್ವಕವಾಗಿಯೂ ಪರಿಪೂರ್ಣವಾಗಿಯೂ ಸಮರ್ಥಿಸಿದ ಏಕೈಕ ನೊಬೆಲ್ ಪ್ರಶಸ್ತಿಧರ (೧೯೦೫) ವಿಜ್ಞಾನಿ. ಪ್ಲ್ಯಾಂಕ್-ಲೆನಾರ್ಡ್ ವಿರುದ್ಧ ಧ್ರುವಗಳು. ಇಬ್ಬರೂ ಯೆಹೂದ್ಯೇತರ ಜರ್ಮನ್ನರು, ನಾಟ್ಸೀ-ಹಿಟ್ಲರ್ ಉಚ್ಛ್ರಾಯ ದಿನಗಳಂದು ಅಗ್ರಸ್ಥಾನಗಳಲ್ಲಿದ್ದವರು. ಹಿಟ್ಲರನ ಅವಸಾನವನ್ನೂ ನಾಟ್ಸೀ ತತ್ತ್ವದ ಪತನವನ್ನೂ ತಮ್ಮ ಜೀವಿತಾವಧಿಗಳಲ್ಲಿಯೇ ನೋಡಿದವರು ಕೂಡ.

೩೦. ಪುಟ ೭೬. ದ್ಯುತಿವೈದ್ಯುತ ಪರಿಣಾಮ (photoelectric effect). ವಿದ್ಯುತ್ತನ್ನು ಒಯ್ಯುವ ವಾಹಕಗಳಿಗೆ ಎಲೆಕ್ಟ್ರಾನುಗಳೆಂದು ಹೆಸರು. ವಿದ್ಯುತ್ತಿನ ಪೊಟ್ಟಣಗಳಿವು. ದ್ಯುತಿ ಎಂದರೆ ಬೆಳಕು. ಇದು ಫೋಟಾನ್‌ಕಣಗಳ ಸಂತತ ಧಾರೆ. ಇದು ಲೋಹದ ಮೇಲೆ ಪಾತವಾದಾಗ ಆ ಲೋಹದಲ್ಲಿಯ ಪರಮಾಣುಗಳಿಂದ ಎಲೆಕ್ಟ್ರಾನುಗಳು ವಿಮೋಚನೆಗೊಂಡು ಚಲಿಸುವುದುಂಟು. ಆದ್ದರಿಂದ ಆಗ ತತ್ತ್ವಶಃ ವಿದ್ಯುದುತ್ಪಾದನೆ ಆಗಿರುತ್ತದೆ. ಇದೇ ದ್ಯುತಿವೈದ್ಯುತ ಪರಿಣಾಮ.

೩೧. ಪುಟ ೮೬. ವೀಕ್ಷಣೆ : ನಮ್ಮ ಇಂದ್ರಿಯಗಳೂ ಉಪಕರಣಗಳೂ ನಮಗೆ ಊಡುವ ಮಾಹಿತಿಗಳು. ವಾಸ್ತವತೆ : ನಮ್ಮಿಂದ ಪ್ರತ್ಯೇಕವಾಗಿ ನಮ್ಮನ್ನು ಅವಲಂಬಿಸದೇ ಇರುವ ವಸ್ತು ಮತ್ತು ವಿದ್ಯಮಾನ. ನಕ್ಷತ್ರ ಖಚಿತ ಗಗನವು ವಾಸ್ತವತೆ ; ಇದನ್ನು ಕುರಿತು ನಾವು ಸಂಗ್ರಹಿಸುವ ಮಾಹಿತಿಗಳು ವೀಕ್ಷಣೆ. ವೀಕ್ಷಣೆ-ವಾಸ್ತವತೆ ದ್ವಂದ್ವದಲ್ಲಿ ವೀಕ್ಷಣೆಯು ವಾಸ್ತವತೆ ಕುರಿತಂತೆ ಸಾಲೋಕ್ಯ, ಸಾರೋಪ್ಯ, ಸಾಮೀಪ್ಯ ಸಾಧಿಸಬಹುದು ; ಸಾಯುಜ್ಯ ಎಂದೂ ಐದಲಾಗದ ಆದರ್ಶ.

೩೨. ಪುಟ ೯೦. ಡಾ. ಎಚ್. ಜಿ. ವೆಂಕಟೇಶ್ ಬರೆದಿದ್ದಾರೆ ('ವಿಜ್ಞಾನ ಕರ್ನಾಟಕ' ಸಂಪುಟ ೧೧ ಸಂಚಿಕೆ ೧, ೧೯೭೯) "೧೯೫೫ರಷ್ಟು ಹಿಂದಕ್ಕೆ ನನ್ನ ಮನಸ್ಸು ಹರಿಯುತ್ತದೆ. ಆಲ್ಬರ್ಟ್ ಐನ್‌ಸ್ಟೈನ್ ಆಗ ಇನ್ನೂ ಜೀವಂತವಾಗಿದ್ದರು. ಅವರಿದ್ದದ್ದು ಅಮೆರಿಕದ ಪ್ರಿನ್‌ಸ್ಟನ್ ನಗರದಲ್ಲಿ. ಅಲ್ಲಿಂದ ಕೇವಲ ೨೦೦ ಮೈಲುಗಳಷ್ಟು ದೂರದಲ್ಲಿ ನಾನು ವಿದ್ಯಾರ್ಥಿ ಆಗಿದ್ದೆ. ಆಗತಾನೇ ನನ್ನ ಪರೀಕ್ಷೆ ಮುಗಿದಿತ್ತು. ಉಸಿರೆಳೆದುಕೊಂಡು ಚೇತನ ಪಡೆಯುತ್ತಿದ್ದೆ. ವಿರಾಮವಾಗಿ ಪ್ರಿನ್‌ಸ್ಟನ್ನಿಗೆ ಹೋಗಿ ಆ ಮಹಾವಿಜ್ಞಾನಿಯ ದರ್ಶನ ಪಡೆಯಬೇಕೆಂಬುದು ನನ್ನಾಸೆ. ಇನ್ನು ಮಾತಾಡಲು ಸಾಧ್ಯವಾದರೆ ಅದು ಪರಮಭಾಗ್ಯವೆಂದು ಎಣಿಸಿದ್ದೆ. ಆದರೆ ದುರ್ದೈವ : ಅವರಾಗಲೇ ಕೊನೆ ಉಸಿರೆಳೆದಿದ್ದರು. ಇದು ನಡೆದದ್ದು ೧೯೫೫ ಏಪ್ರಿಲ್ ೧೮ರಂದು.

"ನಾಲ್ಕು ತಿಂಗಳ ದೀರ್ಘರಜೆ ಇತ್ತು. ಅಷ್ಟೂ ಪೂರ್ತಿ ನನ್ನ ಪಾಲಿಗೇ ! ಹೀಗಾಗಿ ನನ್ನ ಹುರುಪಿಗೆ ಎಣೆ ಇರಲಿಲ್ಲ. ಆ ಒಂದು ಸಂಜೆ, ಪಕ್ಕದ ಹಾರ್ವರ್ಡಿಗೆ ಹೋದೆ—ಅಲ್ಲಿ ಪ್ರೊಫೆಸರ್ ಫಿಲಿಪ್ ಫ್ರ್ಯಾಂಕ್ ಎಂಬವರು ಐನ್‌ಸ್ಟೈನರ ಬಗ್ಗೆ ನೀಡಲಿದ್ದ ಉಪನ್ಯಾಸ ಕೇಳಲೆಂದು. ಇವರು ಐನ್‌ಸ್ಟೈನರ ನಿಕಟ ಸ್ನೇಹಿತ, ಅನುಯಾಯಿ, ಭಕ್ತ ಕೂಡ. ಕೆಲವು ದಶಕಗಳ ಹಿಂದೆ ಪ್ರಾಹಾದಲ್ಲಿ ಐನ್‌ಸ್ಟೈನ್ ತೆರವು ಮಾಡಿದ ಪ್ರಾಧ್ಯಾಪಕ ಪೀಠವನ್ನು ಭರ್ತಿಮಾಡಿದವರೇ ಇವರು.

"ಭಾಷಣ ಆರಂಭವಾಗುವ ಮುನ್ನ ಮಹಿಳೆಯೊಬ್ಬಳು ನನ್ನೆಡೆಗೆ ಬಂದು ನನ್ನನ್ನು ಸ್ವಾಗತಿಸಿ ತಾನು ಶ್ರೀಮತಿ ಫ್ರ್ಯಾಂಕ್ ಎಂಬುದಾಗಿ ಪ್ರವರ ಹೇಳಿದರು. ನಾನು ಭಾರತದಿಂದ ಬಂದವನೇ ಎಂದು ಆತ್ಮೀಯವಾಗಿ ಕೇಳಿದರು. ಹೌದೆಂದು ತಲೆಯಾಡಿಸಿ, 'ತಾಯೀ ! ಐನ್‌ಸ್ಟೈನರು ಕರುವಿನ ಕಲಿಜ ಬೇಯಿಸುವ ವಿಧಾನ ಹೇಳಿಕೊಟ್ಟದ್ದು ನಿಮಗೇ ಅಲ್ಲವೇ ?' ಎಂದು ಪ್ರಶ್ನಿಸಿದೆ. ಅವರಿಗೆ ಆಶ್ಚರ್ಯ. ಪತಿಯನ್ನು ಕುರಿತು ಹೇಳಿದರು: 'ಇಲ್ಲೊಬ್ಬ ಯುವ ಭಾರತೀಯ ಇದ್ದಾರೆ, ನೋಡಿ ! ಇವರಿಗೆ ನಮ್ಮ ಬಾಳಿನ ರಹಸ್ಯಗಳು ತಿಳಿದಿವೆ !' ಫ್ರ್ಯಾಂಕರು ನನಗೆ ಸ್ವಾಗತ ಹಸ್ತ ನೀಡುತ್ತ ವಿವರಿಸಿದರು : 'ಇವರು ನನ್ನ ಪುಸ್ತಕ ಓದಿರಬೇಕು.'

"ಹೌದು, ಫಿಲಿಪ್ ಫ್ರ್ಯಾಂಕ್ ಬರೆದು ಪ್ರಕಟಿಸಿದ್ದ *Einstein, His Life and Times* ಎಂಬ ಅನುಪಮ, ಅದ್ವಿತೀಯ, ಅತಿ ಸುಂದರ ಜೀವನ ಚರಿತ್ರೆಯನ್ನು ಅದೇ ಕೆಲವು ದಿವಸಗಳ ಹಿಂದೆ ಓದಿ ಬೆರಗಾಗಿದ್ದೆ. ಐನ್‌ಸ್ಟೈನ್ ಮಹಾಚೇತನಕ್ಕೆ ಎಂತೊ ಅಂತೆ ಫ್ರ್ಯಾಂಕರ ಆತ್ಮೀಯ ಹಾಗೂ ನಿಷ್ಕೃಷ್ಟ ಲೇಖನಿಗೂ ಮಾರುಹೋಗಿದ್ದೆ." (ನೋಡಿ ಪುಟ ೯೦)

೩೩. ೧೧೯. ಪುಟ ಐನ್‌ಸ್ಟೈನರ ಪರಮ ಮಿತ್ರ ಮ್ಯಾಕ್ಸ್ ಬಾರ್ನ್, ೧೮೮೨-೧೯೭೦, ಜರ್ಮನ್-ಬ್ರಿಟಿಷ್ ಭೌತವಿಜ್ಞಾನಿ, ಜರ್ಮನಿಯ ಗಟಿಂಗೆನ್ನಿನಿಂದ ೬-೮-೧೯೨೨ರಂದು, ಆಗ ಅಮೆರಿಕ-ಪ್ರವಾಸದಲ್ಲಿದ್ದ, ಐನ್‌ಸ್ಟೈನರಿಗೆ ಬರೆದ ಆತ್ಮೀಯ ಪತ್ರದಲ್ಲಿ ಈ ವಿಚಾರ ಉಲ್ಲೇಖಿತವಾಗಿದೆ.

*The Born-Einstein Letters* ಮಹಾವಿಜ್ಞಾನಿಗಳ ವೈಜ್ಞಾನಿಕ ಸಮಸ್ಯೆಗಳ ತಳದಲ್ಲಿರುವ ಮಾನವೀಯ ರಾಗ ಭಾವ ಪ್ರೀತಿ ದ್ವೇಷಗಳನ್ನು ಅತ್ಯಂತ ಪ್ರಾಮಾಣಿಕ ನಿಷ್ಠುರ ನೆಲೆಯಲ್ಲಿ ಪ್ರತಿಬಿಂಬಿಸುತ್ತದೆ. ಈ ಉದ್ಗ್ರಂಥಕ್ಕೆ ಮುನ್ನುಡಿ ಬರೆಯುತ್ತ ಬರ್ಟ್ರೆಂಡ್ ರಸಲ್ ಹೇಳಿದ್ದಾರೆ : "ಅವರ [ಐನ್‌ಸ್ಟೈನ್ ಮತ್ತು ಬಾರ್ನ್] ಜೀವನಗಳಲ್ಲಿದ್ದ ಘನತೆಯ ಅಂಶ ಕೂಡ ಇಲ್ಲಿ ಪ್ರಕಟವಾಗಿದೆ. ಹಲವಾರು ವರ್ಷಗಳಿಂದ ನನಗೆ ಉಭಯರ ಸ್ನೇಹಲಾಭ ಒದಗಿದೆ. ಇದಕ್ಕೆ ನಾನು ಮಹತ್ತರ ಬೆಲೆ ಕೊಡುತ್ತೇನೆ. ಇಬ್ಬರೂ ಪರಮೋಜ್ಜ್ವಲರು. ವಿನಯಶಾಲಿಗಳು ಮತ್ತು ತಮ್ಮ ಸಾರ್ವಜನಿಕ ನುಡಿಗಳಲ್ಲಿ ಪೂರ್ಣ ಭಯವಿದೂರರು. ರಿಕ್ತಯೋಗ್ಯತೆ ಮತ್ತು ಕುಬ್ಜನೈತಿಕತೆ ತಾಂಡವವಾಡುತ್ತಿರುವ ಯುಗದಲ್ಲಿ ಅವರ ಬದುಕುಗಳು ಪರಮಸೌಂದರ್ಯದಿಂದ ಮಿನುಗುತ್ತಿವೆ. ಇದರ ಹೊಳಹಿನ ಒಂದು ಅಂಶ ಅವರ ಪತ್ರವ್ಯವಹಾರದಲ್ಲಿ ಪ್ರತಿಬಿಂಬಿತವಾಗಿದೆ. ಈ ಪ್ರಕಟಣೆಯಿಂದ ಪ್ರಪಂಚ ಶ್ರೀಮಂತವಾಗಿದೆ." (೧-೧೨-೧೯೬೮)

೩೪. ಪುಟ ೧೧೭. ಮೊದಲ ಅಷ್ಟಪದಿಯ ಇಂಗ್ಲಿಷ್ ರೂಪ :

Scientists so unbelieving
Have completely changed their ways ;
Now they humbly sing to Einstein
Everlasting hymns of praise
Journalists in search of copy
First request an interview ;
Then they boost him, boost him, boost him,
Boost him until all is blue.

೩೫. ಪುಟ ೧೨೫. ಮತಭ್ರಾಂತಿ ಮತಿವಿಕಲ್ಪ. ಮತಧಾರ್ಮಿಕ ಮೂಲಭೂತತ್ವ ಮತ್ತು ಮತಧಾರ್ಮಿಕ ಅಂಧತ್ವ (religious fundamentalism and religious fanaticism) ಎಂಬ ಎರಡು ಬಗೆಯ ಮಾನಸಿಕ ಜಾಡ್ಯಗಳಿವೆ. ಇವುಗಳ ಮೂಲ ಮನುಕುಲದ ಆದಿಯಲ್ಲೇ ಅಡಗಿದೆ. ಅಜ್ಞಾತ ಅವ್ಯಕ್ತದತ್ತ ವ್ಯಕ್ತಿಯ ಸೃಜನಶೀಲ ಮತಿ ಹರಿದಾಗ ಆತನಲ್ಲಿ ಬುದ್ಬುದಿಸುವ ಭಾವನೆಗಳ ಸಮಷ್ಟಿಗೆ ಆಧ್ಯಾತ್ಮಿಕತೆ (spirituality) ಎಂದು ಹೆಸರು. ಮತಧರ್ಮದ(religion) ಮೂಲವಿದು. ಇದನ್ನು cosmic religious feeling (ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆ) ಎನ್ನುವುದುಂಟು. ಮಹತ್ತಿನ ಎದುರು ಮಾನವಮತಿಯಲ್ಲಿ ಉದ್ಭವಿಸುವ ಭಾವವಿಶೇಷವೇ ಮತಧಾರ್ಮಿಕ ಸಂವೇದನೆ. ಯಾವುದೇ ಭಾವ, ಭಾವನೆ, ಸಂವೇದನೆ, ರಾಗ ಮುಂತಾದುದಕ್ಕೆ ಯುಕ್ತ ಅಭಿವ್ಯಕ್ತಿ ಮುಂದಿನ ಹೆಜ್ಜೆ. ಸಂತೋಷವಾದಾಗ ಗಹಗಹಿಸಿ ನಗುವುದು, ಭಯವಾದಾಗ ಹೆದರಿ ಓಡುವುದು ಮುಂತಾದವು ಭಾವನೆ-ಅಭಿವ್ಯಕ್ತಿ ಸಂಬಂಧಕ್ಕೆ ಉದಾಹರಣೆಗಳು. ಮತಧಾರ್ಮಿಕ ಸಂವೇದನೆಯ ಅಭಿವ್ಯಕ್ತಿಗೆ ಒಟ್ಟಾಗಿ ವಿಧಿನಿರ್ಬಂಧಗಳೆಂದು ಹೆಸರು—rituals. ಇವು ಆ ಭಾವನೆಗೆ ಪ್ರಕಟವಾಗುವ ಕ್ರಿಯೆಗಳು. ಈಗ, ಪ್ರೇರಣೆಯ ಆಕರ ಒಂದೇ, ಪ್ರೇರಿತ ವಸ್ತುವೂ ಒಂದೇ—ಕ್ರಮವಾಗಿ ವಿಶ್ವ ಮತ್ತು ಮಾನವಮತಿ. ಆದರೆ ಅಭಿವ್ಯಕ್ತಿ ವಿಧಿನಿರ್ಬಂಧಗಳು ಕಾಲದೇಶ ಅನುಭವ ನಾಗರಿಕತೆ ಮುಂತಾದ

ವನ್ನು ಅನುಸರಿಸಿ ವಿವಿಧವಾಗುತ್ತವೆ. ಎಂದೇ ಹಿಂದೂ ಸಂಪ್ರದಾಯಗಳು, ಇಸ್ಲಾಮ್ ಸಂಪ್ರದಾಯಗಳು, ಕ್ರಿಶ್ಚಿಯನ್ ಸಂಪ್ರದಾಯಗಳು ಇತ್ಯಾದಿ. ಇವು ಮಾನವಕೃತ ಆಚರಣೆಗಳು, ಮೂಲ ಪ್ರೇರಣೆಯ ಬಾಹ್ಯರೂಪಗಳು—ನಿಸರ್ಗದಲ್ಲಿ ಇವುಗಳಿಗೆ ಅರ್ಥವಿಲ್ಲ. ಎಲ್ಲಿಯತನಕ ಸಂವೇದನೆಯ ಅನುಯಾಯಿಯಾಗಿ ವಿಧಿ ನಿರ್ಬಂಧಗಳು ಇರುವುವೋ ಎಲ್ಲಿಯತನಕ ಸಂವೇದನೆಯಲ್ಲಿ (ಅನುಭವದ ಕಾರಣವಾಗಿ) ಸಂಭವಿಸುವ ವ್ಯತ್ಯಯಗಳಿಗೆ ಅನುಗುಣವಾಗಿ ವಿಧಿನಿರ್ಬಂಧಗಳು ಮಾರ್ಪಡುವುವೋ ಎಲ್ಲಿಯ ತನಕ ಸಂವೇದನೆಯ ತಾಯಿ ಬೇರಿನಿಂದ ವಿಧಿನಿರ್ಬಂಧಗಳು ಬೇರ್ಪಡುವುದಿಲ್ಲವೋ ಅಲ್ಲಿಯತನಕ ಸಾಮಾಜಿಕ ಜೀವನದಲ್ಲಿ ಸಾಮರಸ್ಯವಿರುವುದು : ದೇವ ಒಬ್ಬ ನಾಮ ಹಲವು, ಆನಂದ ಒಂದು ಪಥ ಹಲವು, ಗಮ್ಯ ಒಂದು ಮಾರ್ಗ ಹಲವು—ಎಲ್ಲಿಯೂ ವ್ಯಾಘಾತಕ್ಕಾಗಲೀ (contradiction) ಘರ್ಷಣೆಗಾಗಲೀ ಅವಕಾಶವಿರದು. ಆದರೆ ನಾಗರಿಕತೆಯ ದೀರ್ಘಪಥಕ್ರಮಣದಲ್ಲಿ ಕ್ರಮೇಣ 'ದೇವ,' 'ಆನಂದ,' ಅಥವಾ 'ಗಮ್ಯ' ಎಂಬವು ಅಮೂರ್ತ ಪಾರಲೌಕಿಕ ಗುಣಗಳಾದುವು. ಹೀಗಾಗಿ ಮಾನವ-ದೂರವಾದುವು, ಅಸ್ತಿತ್ವರಹಿತವಾದುವು. ಬದಲು ಬಾಹಿರಂಗಿಕ ವಿಧಿ ನಿರ್ಬಂಧಗಳು ಆ ಮಧುರ ಸ್ಥಾನಗಳನ್ನು ಅತಿಕ್ರಮಿಸಿದುವು. ಮತಧರ್ಮ ಹೀಗೆ ಲೋಕಧರ್ಮವಾಯಿತು, ಲೋಕನೀತಿಯಾಯಿತು. ಮತಧರ್ಮಾಧೀನವಾಗಿಯೇ (=ವಿಧಿನಿರ್ಬಂಧಗಳಿಗೆ ಅನುಗುಣವಾಗಿಯೇ) ಜೀವನದ ಸಮಸ್ತ ಚಟುವಟಿಕೆಗಳೂ ಇರತಕ್ಕದ್ದು ಎಂಬ ಮೂಲಭೂತವಾದ ಹೆಪ್ಪುಗಟ್ಟಿತು. ಆದ್ದರಿಂದ 'ಮತಧಾರ್ಮಿಕ ಮೂಲಭೂತತ್ವ' ಎಂದರೆ ಮತಧರ್ಮದ ಸರ್ವಾಧಿಪತ್ಯ—ಸಮಾಜ, ಶಿಕ್ಷಣ, ರಾಜಕಾರಣ, ನ್ಯಾಯವ್ಯವಸ್ಥೆ ಎಲ್ಲವೂ ಇದರ ಅಧೀನವಾಗಿರುವ ಸ್ಥಿತಿ. ಇದು ಮನುಕುಲವನ್ನೇ ವ್ಯಾಪಿಸಲು ಬಯಸುವ ಒಂದು ಜಾಡ್ಯ. ಏಕೆಂದರೆ ನಿಸರ್ಗ ಇಂಥ ವಿರೂಪಿತ ಚಿಂತನೆಗೆ ಎಡೆ ಕೊಡದು. ನಿಸರ್ಗ-ಮಾನ್ಯವಾಗದ ಯಾವ ಮಾನವ ಚಿಂತನೆ ಸಿದ್ಧಾಂತವೂ ಮಾನವಹಿತಸಾಧಕವಾಗದು. ಕ್ರಮೇಣ ಮತಧರ್ಮಗಳು ಒಡೆದು ಬೇರೆ ಬೇರೆ ಆದುವು—ಒಂದು ಇನ್ನೊಂದರ ಶತ್ರು ಎನ್ನುವವರೆಗೆ ಈ ಬಿರುಕುಗಳು ಹಿರಿದಾದುವು. ಇಂಥ ಒಂದು ಮತಧರ್ಮದ ಒಬ್ಬ ಉಗ್ರ ಅನುಯಾಯಿ ತನ್ನ ಮತಧರ್ಮವೇ ಭಗವಂತನ ಮುಖಪದ್ಮದಿಂದ ಉದ್ಭವಿಸಿದ ಋಜು ಧರ್ಮ, ಉಳಿದವೆಲ್ಲವೂ ಬಂದಿಳಿಕೆಗಳು, ಕಳೆಗಳು, ಮಾನವವೈರಿಗಳು ಎಂದು (ಕು-) ತರ್ಕಿಸುವುದು ಸಾಧ್ಯವಿದೆ. ಈತನ ಜ್ಞಾನನೇತ್ರಗಳು ನೈಸರ್ಗಿಕ ವಾಸ್ತವತೆಗೆ ಅಂಧವಾಗುತ್ತವೆ. ಮತಧರ್ಮಾಂಧತೆಯಿಂದ ಈತ ಗ್ರಸ್ತನಾಗುತ್ತಾನೆ ; ಮತ್ತು ತದನುಗುಣವಾಗಿ ಇತರ ಮತಧರ್ಮಗಳನ್ನು ಹನನಗೈಯುವುದು ಪವಿತ್ರ ದೈವಿಕ ಕಾರ್ಯವೆಂಬ ಉನ್ಮಾದಪೀಡಿತನಾಗುತ್ತಾನೆ. ಮತಧಾರ್ಮಿಕ ಮೂಲಭೂತತ್ವಕ್ಕಿಂತ ಮತಧಾರ್ಮಿಕ ಅಂಧತೆ ಅಧಿಕ ಅಪಾಯಕಾರಿ, ಕ್ರೂರಿ ಮತ್ತು ಮಾನವ ಸಂಹಾರಿ. ಮತಧಾರ್ಮಿಕ ಮೂಲಭೂತತ್ವಕ್ಕೆ ಕೊಪರ್ನಿಕಸ್ ಜೀವನ ಒಂದು ನಿದರ್ಶನ. ಈತ ವೃತ್ತಿಯಿಂದ ಪಾದ್ರಿ, ಪ್ರವೃತ್ತಿಯಿಂದ ಖಗೋಳವಿಜ್ಞಾನಿ. ಇವೆರಡು ನಿಲವುಗಳ ನಡುವೆ ತೀವ್ರ ವೈರುದ್ಧ್ಯ ಎದ್ದು ಕಂಡಿತು ಈತನಿಗೆ. ಹೀಗಾಗಿ ತಾನು ಕಂಡ ವಿಶ್ವಸತ್ಯವನ್ನು ಈತ ಪ್ರಕಟಿಸಲಿಲ್ಲ—ಮರಣೋತ್ತರವಾಗಿ ಅದು ಪ್ರಕಟವಾಯಿತು. ವಿಜ್ಞಾನಿ ಗೆಲಿಲಿಯೋನಿಗೆ ಮತಧಾರ್ಮಿಕಕೇಂದ್ರವಾದ ಇಗರ್ಜಿ ವಿಧಿಸಿದ 'ತಪ್ಪೊಪ್ಪಿಗೆ' ಶಿಕ್ಷೆ ಇನ್ನೊಂದು ಉದಾಹರಣೆ. ಬ್ರೂನೋ ಹತ್ಯೆ ಮತಧಾರ್ಮಿಕಾಂಧತೆಗೆ ನಿದರ್ಶನ.

೩೬. ಪುಟ ೧೨೬. ಧರ್ಮ-ವಿಜ್ಞಾನ ತಾತ್ತ್ವಿಕ ಸಂಘರ್ಷ. ಅನುಬಂಧ ೧ ನೋಡಿ.

೩೭. ಪುಟ ೧೩೩. ವೈಜ್ಞಾನಿಕ ಮನೋಧರ್ಮ, ಅನುಬಂಧ ೨ ನೋಡಿ.

೩೮. ಪುಟ ೧೪೨. ದಿಬ್ಬದಲ್ಲಿ ನಿಂತು ನೀಡಿದ ಪ್ರವಚನ. *The Sermon on the Mount : The New Teastament*ನ *St Matthew* ೫. ಈ 'ಉಪದೇಶ'ದಲ್ಲಿಯ ಕೆಲವು ಸೂತ್ರವಾಕ್ಯಗಳು:

3. Blessed *are* the poor in spirit : for theirs is the kingdom of heaven.

8. Blessed *are* the pure in heart : for they shall see God.

13. Ye are the salt of the earth : but if the salt have lost his savour, wherewith shall it be salted ? . . .

44. But I say unto you, Love your enemies, bless them that curse you, do good to them that hate you, and pray for them which despitefully use you, and persecute you ;

45. That ye may be the children of your Father which is in heaven : for he maketh the sun to rise on the evil and on the good, and sendeth rain on the just and on the unjust.

ಸಭ್ಯ ಸುಸಂಸ್ಕೃತ ಸ್ವಸ್ಥ ಜೀವನದ ಆಧಾರ ಭಾವನೆಗಳು ಈ ಉಪದೇಶದಲ್ಲಿ ಎತ್ತಿಹಿಡಿದಿರುವ ಮೌಲ್ಯಗಳು.

ಆರಾಧನೆಯ ಮಾಡಿದರೆ ಅಮೃತದ ಬೆಳಸು
ವಿರೋಧಿಸಿದರೆ ವಿಷದ ಬೆಳಸು
ಇದು ಕಾರಣ,
ಲಿಂಗಜಂಗಮಕ್ಕಂಜಲೇಬೇಕು
ಸ್ಥಾವರ ಜಂಗಮ ಒಂದೆಂದರಿದರೆ
ಕೂಡಲ ಸಂಗಮದೇವ ಶರಣ ಸನ್ನಿಹಿತನು

೩೯. ಪುಟ ೧೪೩. ಧಾರ್ಮಿಕ ನಿರಂಕುಶತೆ. ನೋಡಿ ೩೫ರಲ್ಲಿ ವಿವರಿಸಿರುವ ಮತಧಾರ್ಮಿಕ ಮೂಲಭೂತತ್ವ ಮತ್ತು ಮತಧಾರ್ಮಿಕ ಅಂಧತೆ.

೪೦. ಪುಟ ೧೪೪. ಶ್ರೀ ಪುರಂದರದಾಸರು ಹಾಡಿದ್ದಾರೆ :

ಕೇಳನೋ ಹರಿ ತಾಳನೋ
ತಾಳ ಮೇಳಗಳಿದ್ದು ಪ್ರೇಮವಿಲ್ಲದ ಗಾನ
ತಂಬೂರಿ ಮೊದಲಾದ ಅಖಿಳ ವಾದ್ಯಗಳಿದ್ದು
ಕೊಂಬುಕೊಳಲು ಧ್ವನಿ ಸ್ವರಗಳಿದ್ದು
ತುಂಬುರು ನಾರದರ ಗಾನ ಕೇಳುವ ಹರಿ
ನಂಬಲಾರ ಈ ಡಂಬಕದ ಕೂಗಾಟ !

If there is no love in the kitchen there is no taste on the table ! ಪ್ರೇಮವಿಲ್ಲದ ಪಾಕ ಪರಮ ಘಾತಕ ನರಕ !

೪೧. ಪುಟ ೧೪೫. ಭಾವನೆಗಳಲ್ಲಿಯ ಈ ಸಾದೃಶ್ಯ ಅಥವಾ ಇಂಥ ಸಾಮ್ಯ ಪುನಃ ಪುನಃ ಒತ್ತಿ ಹೇಳುವುದು ಒಂದೇ ಸಂಗತಿಯನ್ನು : ಸದೃಶ ಸನ್ನಿವೇಶಗಳಲ್ಲಿ ಸದೃಶ ವರ್ತನೆಗಳು ಮಾನವಮತಿಯ ಕಾಲದೇಶಾತೀತ ಗುಣ. ಆದ್ದರಿಂದ ಆಧುನಿಕ ವಿಜ್ಞಾನಿಯ ಉದ್ಗಾರವನ್ನು ಅಥವಾ ವಿಜ್ಞಾನದ ಸಿದ್ಧಾಂತವನ್ನು ಪ್ರಾಚೀನ ಋಷಿಯ ವಾಕ್ಕಿಗೆ ಅಥವಾ ಚಿಂತನೆಯ ಫಲಿತಾಂಶಕ್ಕೆ ಹೋಲಿಸಿ ಚಿಂತನೆ-ಪ್ರಯೋಗ-ತೀರ್ಮಾನಗಳ ಸಕಲ ಪ್ರಕ್ರಿಯೆಗಳೂ ಪ್ರಾಚೀನ ಕಾಲದಲ್ಲೇ ಮುಗಿದು ಹೋಗಿವೆ, ಆಧುನಿಕರು ಮಾಡುವುದೇನಿದ್ದರೂ ಅವುಗಳ ಪುನರಾವಿಷ್ಕಾರ ಎಂದು ತೀರ್ಮಾನಿಸುವವರು ಪ್ರಾಚೀನಾರ್ವಾಚೀನ ಜ್ಞಾನಗಳೆರಡರ ಬಗೆಗೂ ಸಮಾನ ಅಜ್ಞಾನಿಗಳು ! ಭಾವನೆಗಳು ಸಾರ್ವತ್ರಿಕ, ಅಭಿವ್ಯಕ್ತಿಗಳು ಸ್ಥಳೀಯ.

ಸಂದೇಹವೀಕ್ಷಿತಿಯೊಳಿನ್ನಿಲ್ಲವೆಂದಲ್ಲ
ಇಂದುನಂಬಿಹುದೆ ಮುಂದೆಂದುಮೆಂದಲ್ಲ
ಕುಂದು ತೋರ್ದಂದದನು ತಿದ್ದಿಕೊಳೆಮನಸುಂಟು
ಇಂದಿಗೀಮತವುಚಿತ ಮಂಕುತಿಮ್ಮ

೪೨ ಪುಟ ೧೪೯. ಉಷ್ಣ = heat. ಇದು ಶಕ್ತಿಯ (energy) ಒಂದು ಬಗೆ. ಶಕ್ತಿಯಿಂದ ಕಾರ್ಯ (work) ಮಾಡಬಹುದು : ವಸ್ತು ಒಂದೆಡೆಯಿಂದ ಇನ್ನೊಂದೆಡೆಗೆ ಸ್ಥಾನಾಂತರಣಗೊಂಡಾಗ, ಭೌತವೈಜ್ಞಾನಿಕವಾಗಿ, ಬಲ (force) ಅದರ (ವಸ್ತು) ಮೇಲೆ ವರ್ತಿಸಿ ಈ 'ಕಾರ್ಯ' ಸಂಭವಿಸಿತೆಂದರ್ಥ. ಇವೆಲ್ಲವನ್ನೂ ಪರಿಮಾಣ ಅಥವಾ ರಾಶಿಗಳಲ್ಲಿ (quantities) ಅಳೆಯಬಹುದು. ಆದ್ದರಿಂದ ಕಾರ್ಯ ಮಾಡಬಲ್ಲದ್ದೇ ಶಕ್ತಿ. ಬಲಕ್ಕೂ ($F$) ಶಕ್ತಿಗೂ ($E$) ಸರಳ ಸಂಬಂಧ ಉಂಟು. ಭೌತವಿಜ್ಞಾನದ ಪರಿಭಾಷೆಯಲ್ಲಿ $E=(೧/೨) \times mv^{೨}=(೧/೨) \times m(u^{೨}+೨as)$, $F=ma$. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಇದು : ಉಷ್ಣವನ್ನು (ಶಕ್ತಿ) ವಸ್ತುವಿಗೆ ಊಡಿದಾಗ ಇದರ ಅಣುಪರಮಾಣುಗಳು ಉದ್ರಿಕ್ತವಾಗಿ ಚಲಿಸತೊಡಗುತ್ತವೆ. ಅಂದರೆ ಅಣು ಪರಮಾಣುಗಳ ಸಮಗ್ರ ಚಲನಶಕ್ತಿ $(= {}^{೧}/_{೨}\, mv^{೨})$ ವರ್ಧಿಸುತ್ತದೆ ; ಇದರ (ಚಲನಶಕ್ತಿ) ಮಾನಕವೇ ವಸ್ತುವಿನ ಉಷ್ಣತೆ (temperature).

೪೩. ಪುಟ ೧೫೨. (೧೫, ೧೭ ಕೂಡ ನೋಡಿ). ಬೆಳಕಿನ ವೇಗ ? ಈ ಪ್ರಶ್ನೆಗೆ ಪ್ರಾಯೋಗಿಕ ಉತ್ತರ ಅರಸಲು ಗೆಲಿಲಿಯೊ ಸಜ್ಜಾದ (೧೬೩೮). ಅಲ್ಲಿಯ ತನಕ ಜನ ತಪ್ಪಾಗಿ ನಂಬಿದ್ದರು: ಬೆಳಕಿಗೆ ತಾತ್‌ಕ್ಷಣಿಕ ಸರ್ವವ್ಯಾಪಿ ವೇಗವಿದೆ ! ಅರ್ಥಾತ್, ಇಲ್ಲಿ ಈಗ ನೀವು ನಿಮ್ಮ ಟಾರ್ಚ್ ಲೈಟಿನ ಸ್ವಿಚ್ ಒತ್ತಿ ಬೆಳಕು ಬೀರಿದರೆ ಅದು ಈ ಕ್ಷಣವೇ ಸರಳರೇಖೆಯಲ್ಲಿ ವಿಶ್ವಪೂರ್ತಿ ತೆರಳಿರುತ್ತದೆ ! ಆದರೆ ಗೆಲಿಲಿಯೋನ ಮಾನಸಿಕ ಸಂರಚನೆ ವಿಭಿನ್ನವಾದದ್ದು : ಪ್ರಚಲಿತ ನಂಬಿಕೆ ಯುಗಯುಗಗಳ ಅನುಭವ ಸಾರವೇ ಇರಬಹುದು, ಅಂದಮಾತ್ರಕ್ಕೆ ಅದನ್ನು ಮೂಕಾಂಧಬಧಿರತ್ವಸಹಿತ ಸ್ವಾಂಗೀಕರಿಸಬೇಕಾಗಿಲ್ಲ !

ಕತ್ತಲೆಯ ಮೊತ್ತ ಮಯಮಯವೆಂದು ಮೆತ್ತಿದ್ದ ಮತ್ತು ಮುತ್ತಿದ್ದ ರಾತ್ರಿ. ಗೆಲಿಲಿಯೊ ಶಿಷ್ಯಸಹಿತ ಊರ ಹೊರಗಿನ ಗುಡ್ಡಗಳೆಡೆಗೆ ನಡೆದ. ಇಬ್ಬರ ಕೈಗಳಲ್ಲಿಯೂ ಮುಚ್ಚಿಗೆ (ಮುಸುಕು ಕವಚ) ಇರುವ ಒಂದೊಂದು ಲಾಂದ್ರ (lantern). ಗುರು ಒಂದು ಗುಡ್ಡದ ನೆತ್ತಿಗೇರಿದ, ಶಿಷ್ಯ ದೂರದ ಇನ್ನೊಂದರ ಕೊಡಿಗೆ ಅಡರಿದ. ಪೂರ್ವನಿರ್ಧರಿತ ಮುಹೂರ್ತದಲ್ಲಿ (ನಕ್ಷತ್ರಗಳ ನೆರವಿನಿಂದ ಇದು ಸಾಧ್ಯ—ಗಡಿಯಾರ ಇನ್ನೂ ರಂಗ ಪ್ರವೇಶಿಸಿರಲಿಲ್ಲ) ಗೆಲಿಲಿಯೊ ತನ್ನ ಲಾಂದ್ರದ ಮುಸುಕು ಸರಿಸಿದ. ಬೆಳಕು ಶಿಷ್ಯನೆಡೆಗೆ ಚಿಮ್ಮಿತು. ಇದನ್ನು ಗುರುತಿಸಿದ ಶಿಷ್ಯ ಒಡನೆ ತನ್ನ ಲಾಂದ್ರದ ಪಡಿ ತೆರೆದ. ಈ ಬೆಳಕು ಕಂಡ ಕ್ಷಣವನ್ನು ಗೆಲಿಲಿಯೊ ಗುರುತಿಸಿದ. ಬೆಳಕಿನ ಕಿರಣದ ಈ ಲಾಳಿ 'ಆಟ'ವನ್ನು ಹಲವು ನೂರು ಸಲ ಪುನರಾವರ್ತಿಸಿ ಯುಕ್ತ ದಾಖಲೆ ಸಹಿತ ಪ್ರಯೋಗ ಮಂದಿರಕ್ಕೆ ಮರಳಿ ಗಣನೆ ಮಾಡಿದ ಗೆಲಿಲಿಯೊ : ಕೊಡಿಗಳ ನಡುವಿನ ಅಂತರ ತಿಳಿದಿದೆ ($d$ ಆಗಿರಲಿ) ; ಬೆಳಕು ಒಂದು ಅಗ್ರದಿಂದ ನೆರೆ ಅಗ್ರಕ್ಕೆ ತಲಪಲು ತೆಗೆದುಕೊಂಡ ಅವಧಿಗಳ ಸರಾಸರಿ ಗಣಿಸಲಾಯಿತು ($t$ ಆಗಿರಲಿ.) ಆದ್ದರಿಂದ ಬೆಳಕಿನ ವೇಗ $d \div t$. ಶಸ್ತ್ರಕ್ರಿಯೆಯೇನೋ ತಾತ್ತ್ವಿಕವಾಗಿ ಸರಿ ; ಆದರೆ ವ್ಯಕ್ತಿ ಮಾತ್ರ ಮೃತನಾಗಿದ್ದ ! ಗೆಲಿಲಿಯೋನ ಪ್ರತಿಭೆ ಈ ಬೆಲೆಯನ್ನು—ಸೆಕೆಂಡಿಗೆ ಕೆಲವು ನೂರು ಕಿಲೊಮೀಟರುಗಳು—ಒಪ್ಪಲೇ ಇಲ್ಲ. ಆತನಿಗೆ ಗೊತ್ತಿತ್ತು, ಅಂತರ್ಬೋಧಾತ್ಮಕವಾಗಿ, ಬೆಳಕಿನ ವೇಗ ಅನಂತವಲ್ಲ, ಅದೊಂದು ಬೃಹತ್ಸಂಖ್ಯೆ ಎಂದು. ಆದರೆ ಅದು ಆತನ ಹಿಡಿತಕ್ಕೆ ದಕ್ಕಲಿಲ್ಲ. ಕಾಲ ಪಕ್ವವಾಗಿರಲಿಲ್ಲ, ಮನ ಮಾಗಿದ್ದರೂ! ಮುಂದೆ ೧೬೭೬ನೆಯ ಇಸವಿ ಬಂದಿತು. ಎದುರಾದ ಸಮಸ್ಯೆ ಕ್ಷುದ್ರ, ಲಭ್ಯ ಪರಿಹಾರ ಅದ್ಭುತ. ಅಂದು ಫ್ರಾನ್ಸ್ ದೇಶ ಪ್ರಬಲ ನೌಕಾಬಲವಾಗಿತ್ತು. ಫ್ರೆಂಚ್ ನಾವಿಕರು ಸಾಗರಯಾನ ಗೈಯುವಾಗ ಪ್ಯಾರಿಸ್-ಕಾಲವನ್ನು ನಿಖರವಾಗಿ ತಿಳಿಯುವುದು ಹೇಗೆ ? ಇದು ಸಮಸ್ಯೆ. ಮಧ್ಯಾಹ್ನ ಹಾಗೂ ಮಧ್ಯರಾತ್ರಿ ವೇಳೆ, ಪ್ರಬಲ ಫಿರಂಗಿ ಹೊಟ್ಟಿಸಿ ಕಾಲಸೂಚನೆ ನೀಡಿದರೆ ಹೇಗೆ ? ಆದರೆ ದೂರದ ಅತಿದೂರದ, ಕಡಲಿನ ತೆರೆಗಳ ನಿನಾದ ಭೇದಿಸಿ ಈ 'ಗುಡುಗು' ದನಿ ಸಾಗದು. ಸೂರ್ಯ, ಚಂದ್ರ, ನಕ್ಷತ್ರಗಳ ಸಹಾಯದಿಂದ ಕಾಲಗಣನೆ ಗೈಯುವುದು ನಾವಿಕರ 'ಮಂದಮತಿ'ಗಳಿಗೆ ಎಟುಕದ ಗಗನ ಕುಸುಮ. ಅಂದ ಮೇಲೆ ಎಲ್ಲ ಚಿಂತನೆಗಳೂ ಸಂಗಮಿಸಿದ್ದು ಒಂದೇ ಒಂದು ಪರಿಹಾರದತ್ತ : ನೌಕೆ-ಪ್ಯಾರಿಸ್ ಅಂತರ ಎಷ್ಟೇ ಇದ್ದರೂ ಉಭಯ ನೆಲೆಗಳಿಂದಲೂ ಏಕಕಾಲದಲ್ಲಿ ಕಾಣುವಂಥ ವಿಶೇಷ ಘಟನೆಯ ವೀಕ್ಷಣೆಯಿಂದ ಪರಸ್ಪರ ವೇಳೆ ಹೊಂದಾಣಿಕೆ ಸಾಧ್ಯ. ಅಂದ ಮೇಲೆ ಇಂಥ ಒಂದು ವಿದ್ಯಮಾನ ಗಗನದಲ್ಲಿ ಸಂಭವಿಸಬೇಕು;

ಮತ್ತು ಅದು ಸುಪರಿಚಿತ ಆಕಾಶಕಾಯಗಳಿಗೆ ಸಂಬಂಧಿಸಿದ್ದಾಗಿರಬಾರದು. ಈ ಹಾದಿಯಲ್ಲಿ ಮುನ್ನಡೆದಂತೆ ಗೆಲಿಲಿಯೋನ ಹೆಸರು ಇನ್ನೊಂದು ಕಾರಣಕ್ಕಾಗಿ ಮುಂದೆ ಬಂತು. ಸೌರವ್ಯೂಹದ ಅತಿ ದೊಡ್ಡ ಗ್ರಹವಾದ ಗುರುವಿನ ಅತಿಸಮೀಪ ಉಪಗ್ರಹವನ್ನು ಅವನು ೧೬೦೯ರಲ್ಲಿ ಗುರುತಿಸಿದ್ದ. ಭೂಮಿ, ಗುರು ಮತ್ತು ಇವುಗಳ ಉಪಗ್ರಹಗಳು ಎಲ್ಲವುಗಳಿಗೂ ಬೆಳಕು ಬೀರುವ ಆಕರ ಸೂರ್ಯ. ಉಪಗ್ರಹವು ಮೂಲ ಗ್ರಹದ ನೆರಳು ಹುಗುವಾಗ ಅದರ (ಉಪಗ್ರಹ) ಗ್ರಹಣಾರಂಭವಾಗುತ್ತದೆ, ನೆರಳಿನಿಂದ ಹೊರಟಾಗ ಗ್ರಹಣಮೋಕ್ಷ ತೊಡಗುತ್ತದೆ. ಗುರುವಿನ ಸಮೀಪತಮ ಉಪಗ್ರಹದ ಪರಿಭ್ರಮಣಾವಧಿ ೪೨.೫ ಗಂಟೆಗಳೆಂದು ಗಣನೆಯಿಂದ ತಿಳಿದಿತ್ತು. ಆದ್ದರಿಂದ ಗುರುಛಾಯೆಯ ಪರಿಣಾಮವಾದ ಈ ಉಪಗ್ರಹ-ಗ್ರಹಣ ಒಂದು ವಿರಳ ಆದರೂ ಕ್ಷಿಪ್ರವಾಗಿ ಪುನರಾವರ್ತಿಸುವ ಗಗನ ಘಟನೆ. ಇದನ್ನು ಪ್ಯಾರಿಸಿಗರೂ ನಾವಿಕರೂ ಏಕಕಾಲದಲ್ಲಿ ನೋಡಬಹುದು—ದೂರದರ್ಶಕಗಳ ನೆರವಿನಿಂದ. ಈ ಮುಹೂರ್ತವನ್ನು ಮೊದಲೇ ಗಣಿಸಿ ನಿರ್ಣಯಿಸಿರುವುದರಿಂದ ನಾವಿಕರು ಪ್ಯಾರಿಸ್-ಕಾಲ ಅರಿಯುವುದು ಬಲು ಸುಲಭ. ಈ ತತ್ತ್ವ, ತರ್ಕ, ತತ್ಸಂಬಂಧ ಗಣನೆಗಳೆಲ್ಲವೂ ಸರಿಯಾದವೇ. ಆದರೆ ನಾವಿಕರಿಗೆ ಇವುಗಳಿಂದ ಉದ್ದಿಷ್ಟ ಫಲ ಮಾತ್ರ ಲಭಿಸಲಿಲ್ಲ. ಬದಲು ಹೊಸತೊಂದು ಸಮಸ್ಯೆ ಹಣುಕಿತು : ಗಣನೆ ಮತ್ತು ಘಟನೆ ನಡುವೆ ಕಾಲ ಅಸಾಮರಸ್ಯ ! ಗಣನೆ ಪೂರ್ವನಿರ್ಧರಿಸಿದ ವೇಳೆಯಲ್ಲಿ ಘಟನೆ ಸಂಭವಿಸುತ್ತಿರಲಿಲ್ಲ. ಇವುಗಳ ನಡುವಿನ ವ್ಯತ್ಯಾಸ ೨೨ ಮಿನಿಟುಗಳವರೆಗೂ ಏರುತ್ತಿತ್ತು ! ಗುರೂಪಗ್ರಹದ ಈ "ಅಶಿಷ್ಟ" ಅಥವಾ "ಅಸಭ್ಯ" ವರ್ತನೆಯ ಅರ್ಥ ಏನು? ಈ ಪ್ರಶ್ನೆಯನ್ನು ಎತ್ತಿ ಕೊಂಡಾತ ಓಲಾಸ್ ರ್‍ಯೋಮರ್, ೧೬೪೪-೧೭೧೦, ಡೇನಿಶ್ ಖಗೋಳವಿಜ್ಞಾನಿ. ಗ್ರಹಣ ನಮಗೆ ಕಾಣುವುದೆಂದರೇನು ? ಮೋಕ್ಷಾನಂತರ ಆ ಕಾಯ ಪುನರ್ದರ್ಶನವೀಯುವುದೆಂದರೇನು ? ಉಪಗ್ರಹದ ಮೇಲೆ ಪಾತವಾಗುತ್ತಿದ್ದ ಸೂರ್ಯಪ್ರಕಾಶ ಗ್ರಹಣಾರಂಭದಲ್ಲಿ ಕೈದಾಯಿತು. ಎಂದೇ ಆ ಉಪಗ್ರಹದಿಂದ ನಮ್ಮತ್ತ ಬರುತ್ತಿದ್ದ ಪ್ರತಿಫಲಿತ ಪ್ರಕಾಶ ಇಲ್ಲದಾಯಿತು. ಆದ್ದರಿಂದ ಪ್ರತಿಫಲಿತ ಬೆಳಕು ನಿಂತಾಗ ಗ್ರಹಣಾರಂಭ, ಹರಿಯತೊಡಗಿದಾಗ ಗ್ರಹಣಮೋಕ್ಷ : ಗುಂಡಿ ತೆಗೆದಾಗ (off) ಬಲ್ಬ್ ನಂದುತ್ತದೆ, ಹಾಕಿದಾಗ (on) ಹೊತ್ತುತ್ತದೆ., ಹೇಗೋ ಹಾಗೆ. ಗಣನೆ ಅರುಹಿದ ಕ್ಷಣ ಮತ್ತು ಘಟನೆ (ನಮಗೆ) ಕಂಡಕ್ಷಣ ಇವುಗಳ ನಡುವಿನ ಕಾಲಾವಧಿ ಬೆಳಕಿಗೆ ಗುರೂಪಗ್ರಹದಿಂದ ಭೂಮಿಗೆ ಪಯಣಿಸಲು ಬೇಕಾಗುವ ವೇಳೆ ($t$) ಎಂದು ರ್‍ಯೋಮರ್ ತರ್ಕಿಸಿದ, ಭೂಮಿ-ಗುರೂಪಗ್ರಹ ಅಂತರ ($d$) ಗೊತ್ತಿದೆ. ಆದ್ದರಿಂದ ಬೆಳಕಿನ ವೇಗ $= d \div t$ ಎಂದು (ಗೆಲಿಲಿಯೋ ತೆರದಲ್ಲೇ) ರ್‍ಯೋಮರ್ ತೀರ್ಮಾನಿಸಿದ. ಈ ಗಣನೆಯಿಂದ ಆತನಿಗೆ ದೊರೆತ ಬೆಲೆ (ಬೆಳಕಿನ ವೇಗ) ಸೆಕೆಂಡಿಗೆ ೨೨೭,೦೦೦ ಕಿಮೀ (ಆಧುನಿಕ ಶಿಷ್ಟ ಬೆಲೆ ೨೯೯,೭೯೮ ಕಿಮೀ/ಸೆ). ಇದನ್ನು ಆತ ೧೬೭೬ರಲ್ಲಿ ವಿದ್ವತ್ಪ್ರಪಂಚಕ್ಕೆ ಪ್ರಕಟಪಡಿಸಿದ. ಗೆಲಿಲಿಯೋ-ದಿಬ್ಬಗಳು ಇಲ್ಲಿ ಗುರೂಪಗ್ರಹ ಹಾಗೂ ಭೂಮಿ ಎಂಬುದನ್ನು ಗಮನಿಸಬಹುದು. (ಭೂಪರಿಧಿ ೪೦,೦೦೦ ಕಿಮೀ. ಆದ್ದರಿಂದ ಬೆಳಕು ೧ ಸೆಕೆಂಡಿನಲ್ಲಿ ಏಳಕ್ಕಿಂತಲೂ ಅಧಿಕ ಭೂಪರಿಧಿ ದೂರ ಜಿಗಿದಿರುತ್ತದೆ. ಅಂದ ಮೇಲೆ ಗೆಲಿಲಿಯೋನ ಲಾಂದ್ರ ಪ್ರಯೋಗ ವಿಫಲವಾದದ್ದರಲ್ಲಿ ಆಶ್ಚರ್ಯವೇನೂ ಇಲ್ಲ.)

೪೪. ಪುಟ ೧೫೮. Uncertainty principle. ಅನಿಶ್ಚಿತತಾ ತತ್ತ್ವ. ಪರಮಾಣು ಪ್ರಪಂಚದ ಅಂತರಂಗ ಸಂರಚನೆ ಕುರಿತಂತೆ ವರ್ನರ್ ಕಾರ್ಲ್ ಹೈಸನ್‌ಬರ್ಗ್, ೧೯೦೧-೭೬, ಜರ್ಮನ್ ಭೌತವಿಜ್ಞಾನಿ, ೧೯೨೭ರಲ್ಲಿ ಮಂಡಿಸಿದ ವ್ಯಾಖ್ಯಾನ : ಏಕಕಾಲದಲ್ಲಿ ಎಲೆಕ್ಟ್ರಾನಿನ ಸ್ಥಾನ ಮತ್ತು ಸಂವೇಗ ನಿರ್ಧರಿಸುವುದು ಅಸಾಧ್ಯ. ಅಂದರೆ, ದತ್ತಕ್ಷಣದಲ್ಲಿ ಎಲೆಕ್ಟ್ರಾನ್ ಎಲ್ಲಿರಬಹುದು ಮತ್ತು ಆಗ ಅದರ ಸಂವೇಗ ಎಷ್ಟಿರಬಹುದು ಎಂಬ ವಿವರಗಳನ್ನು ನೀಡಬಲ್ಲ ಸೂತ್ರಗಳಿಲ್ಲ— ನಿಸರ್ಗವೇ ಇಂಥ ಸಾಧ್ಯತೆಯನ್ನು ಪ್ರತಿಬಂಧಿಸುವುದೋ ಎಂಬಂತೆ. ಸ್ಥಾನವನ್ನು (position), $(x, y, z)$ ನಿರ್ದೇಶಕಗಳು ಕರಾರುವಾಕ್ಕಾಗಿ ಸೂಚಿಸುತ್ತವೆ. [ಸಂವೇಗ] = [ದ್ರವ್ಯರಾಶಿ] X [ವೇಗ]. ಪ್ರತೀಕಗಳಲ್ಲಿ ಸಂವೇಗ $= mv$ . ಅತಿಶಯವೇಗದಿಂದ ಬಡಿಯುವ ಪುಟ್ಟ ತುಪಾಕಿಗೋಲಿ ಆನೆಯ ಒಡಲನ್ನೇ ಛಿದ್ರಿಸುವುದರ ಕಾರಣವಿದು : ಗೋಲಿಯ ಸಂವೇಗ ಅತ್ಯಧಿಕವಾಗಿರುವುದು ವೇಗ ($v$) ಅತ್ಯಧಿಕವಾಗಿರುವುದರಿಂದ. $mv$ಯಲ್ಲಿ $m$ ಹಿರಿದಾಗಿದ್ದಾಗ ಅಥವಾ $v$ ಹಿರಿದಾಗಿದ್ದಾಗ ಅಥವಾ

ಎರಡೂ ಹಿರಿದಾಗಿದ್ದಾಗ *mv*ಯ ಬೆಲೆ ಹಿರಿದಾಗಿರುತ್ತದೆ.

೪೫. ಪುಟ ೧೬೧. ಇಲ್ಲಿಯ ಅಂತರ್ಗತ ಧ್ವನಿ ಇದು : ನೂತನ ಸಂಶೋಧನೆಯ ಮಾರ್ಗದಲ್ಲಿ ಎದುರಾಗುವ ಒಂದು ತೊಡಕನ್ನು ನಿವಾರಿಸಲು ಆ ಕ್ಷಣ ವಿಜ್ಞಾನಿ ಏನೋ ಒಂದು ತಂತ್ರ ಅಥವಾ ಉಪಾಯ ಹೂಡಬಹುದು. ಇದರಿಂದ ಹಾದಿ ಸುಗಮವಾಗಿ ಸಮಂಜಸ ಫಲಿತಾಂಶ ಒದಗಬಹುದು. ಈ ಫಲಿತಾಂಶವನ್ನು ನಿಸರ್ಗ (ಪ್ರಯೋಗ) ಅಂಗೀಕರಿಸಿ ವಿಜ್ಞಾನಿ ನಡೆದ ದಾರಿ—ಅಂದರೆ ನಿಸರ್ಗವನ್ನು ಅರ್ಥವಿಸಿದ ಪರಿ—ಸರಿ ಎಂಬ "ಮುದ್ರೆ"ಯನ್ನೂ ಒತ್ತಬಹುದು. ದೊರೆತ ಫಲ ಸರಿ ಎಂಬ ಏಕೈಕ ಕಾರಣಕ್ಕಾಗಿ ಮಾರ್ಗಮಧ್ಯೆ ಪ್ರವೇಶಗೊಳಿಸಿದ "ತಂತ್ರ ಅಥವಾ ಉಪಾಯ" ಸಾಧು ಅಥವಾ ಸಿಂಧು ಆಗಬೇಕಾಗಿಲ್ಲ. ನಮ್ಮ ಅಸಹಾಯಕತೆಯ ಪ್ರತೀಕವಾದ ತಂತ್ರವು ನಿಸರ್ಗದ ಯಥಾ ವ್ಯಾಖ್ಯಾನವಾಗಿರಬೇಕಾಗಿಲ್ಲ ಎಂಬುದು ಇಂಗಿತ.

೪೫೨. ಪುಟ ೧೬೪.

ಆರಾಧಕಾರಾಧ್ಯ ಸಂಬಂಧ ವ್ಯಕ್ತಿ-ಶಿಲೆ
ಯುಗ್ಮ: ಆರಾಧಕಂ ಸ್ವಂತ ಕಲ್ಪನೆಗಳನು
ಆರಾಧ್ಯದೊಳು ಕಂಡು ಸುಖಿಸುವಂ ವಾಸ್ತವದಿ
ಆರಾಧಕನ ಸೃಷ್ಟಿ ಆರಾಧ್ಯ ಅತ್ರಿಸೂನು

ಆರಾಧನೆಯ ಮಾಡಿ ಗಳಹಿಸುಕಬೇಡಿರೋ !
ನಾ ನಡೆದ ಹಾದಿಯಲಿ ನಿಮ್ಮ ಬಗೆ ಕಾಣಿಸುವ
ರೀತಿಯಲಿ ರಚಿಸಿರೋ ಹೊಸ ಜಾಡ ! ವರ್ತಮಾ
ನದ ಬಾಳಿನಲಿ ಮಗ್ನರಾಗಿರೋ ಅತ್ರಿಸೂನು

೪೬. ಪುಟ ೧೬೯. ಆನ್ರೀ ಪ್ವಾನ್‌ಕ್ವಾರೆ, ೧೮೫೪-೧೯೧೨. ಫ್ರೆಂಚ್ ಗಣಿತ ಪ್ರಭೃತಿ ಬರೆದಿದ್ದಾರೆ: "ನಿಸರ್ಗವು ಪ್ರಯೋಜನಕಾರಿ ಎಂಬುದಕ್ಕಾಗಿ ವಿಜ್ಞಾನಿ ಅದನ್ನು ಅಧ್ಯಯನಗೈಯುವುದಿಲ್ಲ ; ಅವನು ಅದನ್ನು ಅಧ್ಯಯನಗೈಯುವುದು ಅದರಲ್ಲಿ ಅವನಿಗೆ ಆನಂದ ಲಭಿಸುವುದರಿಂದ ; ಅದರಲ್ಲಿ ಅವನಿಗೆ ಆನಂದ ಲಭಿಸುವುದು ಅದು ಸುಂದರವಾಗಿರುವುದರಿಂದ. ನಿಸರ್ಗವು ಸುಂದರವಾಗಿರದಿದ್ದರೆ ಅದನ್ನು ತಿಳಿಯುವುದು ನಿಷ್ಪ್ರಯೋಜಕವಾಗಿರುತ್ತಿತ್ತು; ನಿಸರ್ಗವನ್ನು ತಿಳಿಯುವುದು ನಿಷ್ಪ್ರಯೋಜಕವಾಗಿದ್ದರೆ ಬದುಕು ಅರ್ಥಹೀನ ವಾಗಿರುತ್ತಿತ್ತು. ಇಂದ್ರಿಯಗಳಿಗೆ ಎದ್ದುಕಾಣುವ ಸುಂದರತೆಯನ್ನು—ಅಂದರೆ ಗುಣಗಳ ಮತ್ತು ತೋರಿಕೆಗಳ ಬಾಹ್ಯ ಸುಂದರತೆಯನ್ನು—ನಾನಿಲ್ಲಿ ಪ್ರಸ್ತಾವಿಸುತ್ತಿಲ್ಲವೆಂಬುದು ಸ್ಪಷ್ಟ ; ಆ ಸುಂದರತೆಯನ್ನು ಕಡೆಗಣಿಸುವೆ ನೆಂದಲ್ಲ, ಅದೆಂದೂ ನನ್ನ ಉದ್ದೇಶವಲ್ಲ ಆದರೆ ಅದಕ್ಕೆ ವಿಜ್ಞಾನದ ಜೊತೆ ಏನೂ ವ್ಯವಹಾರವಿಲ್ಲ ; ಬದಲು, ನನ್ನ ಮನಸ್ಸಿನಲ್ಲಿರುವುದು ಭಾಗಗಳ ಸುಸಂಗತ ಮೇಳನದಿಂದ ಲಭಿಸುವ ಮತ್ತು ಪರಿಶುದ್ಧ ಪ್ರತಿಭೆಗೆ ಗ್ರಾಹ್ಯವಾಗುವ ಆ ಗಹನತರ ಸೌಂದರ್ಯ." (I mean that profounder beauty which comes from the homogeneous order of the parts, and which a pure intelligence can grasp.)

ವಿಜ್ಞಾನಿಯ ಈ ಸೌಂದರ್ಯಾನ್ವೇಷಕ ದೃಷ್ಟಿಯನ್ನು ವಿವರಿಸುವ ಸಲುವಾಗಿ ರಿಚರ್ಡ್ ಪಿ. ಫೈನ್‌ಮಾನ್, ೧೯೧೮-೮೮, ಅಮೆರಿಕನ್ ಭೌತವಿಜ್ಞಾನಿ, ಒಂದು ನಿದರ್ಶನ ನೀಡುತ್ತಾರೆ : "ನನಗೊಬ್ಬ ಕಲಾವಿದ ಸ್ನೇಹಿತ ನಿದ್ದಾನೆ. ಅನೇಕ ಸಂದರ್ಭಗಳಲ್ಲಿ ಈತ ತಳೆಯುವ ಒಂದು ನಿಲವನ್ನು ಮಾತ್ರ ನಾನು ಒಪ್ಪಲಾರೆ. ಸುಂದರ ಪುಷ್ಪವೊಂದನ್ನು ಈ ಕಲಾವಿದ ಮಿತ್ರ ಕೈಯಲ್ಲಿ ಹಿಡಿದುಕೊಂಡು 'ನೋಡು ! ಇದೆಷ್ಟು ಚೆಲುವಾಗಿದೆ !' ಎನ್ನುತ್ತಾನೆ. ನಾನು ಒಪ್ಪುತ್ತೇನೆ. ಅಲ್ಲಿಗೇ ಮಾತು ನಿಲ್ಲಿಸದೇ ಆತ ಮುಂದುವರಿದು ನನ್ನನ್ನು ಕುಟುಕುತ್ತಾನೆ: 'ಒಬ್ಬ ಕಲಾವಿದನಾಗಿ ನಾನಿದರ ಸುಂದರತೆಯನ್ನು ಆಸ್ವಾದಿಸಿ ಆನಂದಿಸಬಲ್ಲೆ. ಆದರೆ ಒಬ್ಬ ವಿಜ್ಞಾನಿಯಾಗಿ ನೀನು ಮಾಡುವುದೇನು ? ಇದರ ಅಂಗೋಪಾಂಗಗಳನ್ನು ಛಿದ್ರಿಸಿ ಛೇದಿಸಿ ಸುಂದರತೆಯನ್ನು ಸಂಹರಿಸಿ ಇಡೀ ಚೆಲುವನ್ನು ವಿರೂಪಗೊಳಿಸುವುದು !' ಕಲಾವಿದನ ಮಾತು ಕುತರ್ಕ ಎಂಬುದು ಸುಸ್ಪಷ್ಟ. ಏಕೆಂದರೆ ಆತ

ಕಾಣುವ ಸುಂದರತೆ ಇತರ ಎಲ್ಲ ವ್ಯಕ್ತಿಗಳಿಗೂ ಲಭ್ಯವಿದೆ. ಆತನಷ್ಟು ಪರಿಷ್ಕೃತ ಸಂವೇದನೆ ನನಗಿಲ್ಲದಿದ್ದರೂ ನಾನು ಕೂಡ ಆತನಂತೆಯೇ ಆ ಹೂವನ್ನು ನೋಡಿ ಸಂತೋಷಿಸಬಲ್ಲೆ. ಆದರೆ ಅದೇ ವೇಳೆ ನಾನು ಹೂವಿನಲ್ಲಿ ಆತ ಕಾಣುವುದಕ್ಕಿಂತ ಅದೆಷ್ಟೋ ಅಧಿಕ ವಿವರಗಳನ್ನು ಗುರುತಿಸಿ ಸಂತೋಷಿಸಲೂ ಬಲ್ಲೆ : ಹೂವಿನ ಎಸಳುಗಳನ್ನು ನೇಯ್ದಿರುವ ಕೋಶಗಳು (cells), ವರ್ಣಕಗಳ (pigments) ವಿನ್ಯಾಸ, ತಳದಲ್ಲಿಯ ಅಣುಪರಮಾಣುಗಳ ಅಳವಡಿಕೆ, ಇತ್ಯಾದಿ. ನಿಸರ್ಗಶಿಲ್ಪಿಯ ಕೃತಿ ಬಹಿರಂಗದಲ್ಲಿ ಮಾತ್ರವಲ್ಲ, ಅಂತರಂಗದ ಸೂಕ್ಷ್ಮಾತಿಸೂಕ್ಷ್ಮ ವಿವರಗಳಲ್ಲಿಯೂ ಸೌಂದರ್ಯಭರಿತವಾಗಿದೆ." (ನೋಡಿ ೨೫ )

"ಸುಂದರತೆಯ ತಳರೂಪಿಕೆ ಗಣಿತ" ಎಂದು ಕೆಪ್ಲರ್ (ನೋಡಿ ೧೩) ಬರೆದಿದ್ದಾನೆ (ಗ್ರಹಗಳ ತೋರ್ಕೆ ಎಡ್ಡತಿಡ್ಡ ಚಲನೆಗಳ ತಳರೂಪಿಕೆಯಾದ ಗಣಿತವನ್ನು—ಅಂದರೆ ಗ್ರಹಚಲನನಿಯಮಗಳನ್ನು—ಆವಿಷ್ಕರಿಸಿದ ಮಹಾಪ್ರಖರಗಣಿತಮತಿ ಈತ), Mathematics is the archetype of the beautiful. ಸುಂದರತೆ = the beautiful ; ಸೌಂದರ್ಯ = beauty.

ಸುಂದರತೆಯೆನ್ನುವುದೇಂ ? ಜನಕೆ ಮೈಮರೆಯಿಪಾ-
ನಂದದೊಳಮರುಮವೇಂ ? ವಿಶ್ವಚೇತನದಾ
ಸ್ಪಂದನವೆ ಸೌಂದರ್ಯಮದುವೆ ಜೀವನಮೂಲ
ಬಂಧುರತೆ ಬೊಮ್ಮನದು ಮಂಕುತಿಮ್ಮ

ಆಂತರಂಗಿಕ ಸೌಂದರ್ಯದ ಬಾಹಿರಂಗಿಕ ಮುಖವೇ "ಸುಂದರತೆ." ಅದೇ ರೀತಿ ಆಂತರಂಗಿಕ ಶಾಶ್ವತ "ಸತ್ಯ"ದ ಬಾಹಿರಂಗಿಕ ಚರಪ್ರಕಟಣೆಯೇ "ಋತ." ಅದು ಭಾವಗಮ್ಯ, ತರ್ಕಸಾಧು ; ಇದು ಇಂದ್ರಿಯ ಗೋಚರ, ಪ್ರಯೋಗಲಭ್ಯ. ಸತ್ಯ = truth, ಋತ = the true.

ಹಿರಣ್ಮಯೇನ ಪಾತ್ರೇಣ
ಸತ್ಯಸ್ಯಾಪಿಹಿತಂ ಮುಖಂ
ತತ್ತ್ವಪೂಷನ್ನ ಪಾವೃಣು
ಸತ್ಯಧರ್ಮಾಯ ದೃಷ್ಟಯೇ
ಹೊನ್ನ ತಟ್ಟೆಯು ಕವಿದು, ಪೋಷಕನೆ, ಓ ಸೂರ್ಯ
ನಿನ್ನೊಳಿಹ ಸತ್ಯದಾನನವ ಮರೆಯಿಸಿಹೆ
ನನ್ನಿಯಿಂ ತೆಗೆಯದನು ಸತ್ಯದೊಳ್ ಮನವೆನಗೆ
ಎನ್ನ ಕಣ್ಣಿದ ತೋರು, ಧರ್ಮಬೀಜವದು

ಡಿವಿಜಿಯವರ ಈ ಅನುವಾದದಲ್ಲಿ "ಮೇಲೆ ಕವಿದಿರುವ ಹೊನ್ನ ತಟ್ಟೆಯೇ ಋತ," ಮತ್ತು "ಸೂರ್ಯ ನೊಳಿಹ ಸತ್ಯದಾನನ"ವೇ ಸತ್ಯ.

"ನನ್ನ ಕೃತಿ ಯಾವಾಗಲೂ ಋತವನ್ನು (the true) ಸುಂದರತೆ (the beautiful) ಜೊತೆ ಸಂಯೋಜಿ ಸಲು ಪ್ರಯತ್ನಿಸಿದೆ. ಆದರೆ ಒಂದು ಅಥವಾ ಇನ್ನೊಂದನ್ನು ಆಯುವುದು ಅನಿವಾರ್ಯವೆಂದಾದಾಗ ನಾನು ಸಾಧಾರಣವಾಗಿ ಸುಂದರತೆಯನ್ನೇ ಆಯುತ್ತೇನೆ," ಎಂದರು ಗಣಿತವಿದ ಹರ್ಮನ್ ವೈಲ್.

ಸಿದ್ಧಾಂತ ಮತ್ತು ಪ್ರಯೋಗ ಕುರಿತಂತೆ ಹೈಸನಬರ್ಗ್ ಅವರಿಗೂ ಎನ್ರಿಕೋ ಫರ್ಮಿ, ೧೯೦೧-೫೪, ಇಟಾಲಿಯನ್-ಅಮೆರಿಕನ್ ಭೌತವಿಜ್ಞಾನಿ, ಅವರಿಗೂ ನಡುವೆ ನಡೆದ ಒಂದು ಸಂಭಾಷಣೆ : "ಯುದ್ಧ (೧೯೩೯-೪೫) ಮುಗಿದ ಬಳಿಕ ಒಂದು ದಿನ ಎನ್ರಿಕೊ ಫರ್ಮಿಯವರೊಂದಿಗೆ ನಡೆಸಿದ ಸಂಭಾಷಣೆ ನನ್ನ ನೆನಪಿನಲ್ಲಿದೆ. ಮೊದಲ ಹೈಡ್ರೋಜನ್ ಬಾಂಬಿನ ಪ್ರಾಯೋಗಿಕ ಪರೀಕ್ಷೆ ಪೆಸಿಫಿಕಿನಲ್ಲಿ ನಡೆಯಲು ಕೆಲವೇ ದಿನಗಳು ಉಳಿದಿದ್ದುವು. ಅದರ ಯೋಜನೆಯನ್ನು ನಾವು ಚರ್ಚಿಸಿದೆವು. ಈ ಪ್ರಯೋಗದ ಜೀವವೈಜ್ಞಾನಿಕ ಮತ್ತು ರಾಜಕೀಯ ದುಷ್ಪರಿಣಾಮಗಳನ್ನು ಗಮನಿಸಿ ಇದನ್ನು ಕೈಬಿಡುವುದು ಪ್ರಾಯಶಃ ಅಪೇಕ್ಷಣೀಯ ವಾದುದೆಂದು ನಾನು ಸೂಚಿಸಿದೆ. 'ಆದರೆ ಇದು ಎಷ್ಟು ಸುಂದರ ಪ್ರಯೋಗ !' ಎಂದು ಫರ್ಮಿ ಮರು

ನುಡಿದರು. ವಿಜ್ಞಾನದ ಅನ್ವಯಗಳ ಹಿನ್ನೆಲೆಯಲ್ಲಿ ಅತ್ಯಂತ ಪ್ರಬಲ ಪ್ರೇರಣೆ ಬಹುಶಃ ಇದೇ : ವಿಜ್ಞಾನಿಗೆ ನಿಷ್ಪಕ್ಷಪಾತಿ ನ್ಯಾಯಮೂರ್ತಿಯೊಬ್ಬನಿಂದ—ಸಾಕ್ಷಾತ್ ನಿಸರ್ಗದಿಂದಲೇ—ತಾನು ನಿಸರ್ಗದ ಸಂರಚನೆಯನ್ನು ಸರಿಯಾಗಿ ಅರ್ಥವಿಸಿದ್ದೇನೆಂಬುದರ ಸ್ಥಿರೀಕರಣ ಬೇಕಾಗಿದೆ. ಅಲ್ಲದೇ ತನ್ನ ಪ್ರಯತ್ನದ ಪರಿಣಾಮ ತಿಳಿಯಬೇಕೆಂಬುದು ಆತನ ಸಹಜ ಬಯಕೆ ಕೂಡ ಹೌದು."

ಎಸ್. ಚಂದ್ರಶೇಖರ್, ೧೯೧೦-೯೫ ಭಾರತೀಯ-ಅಮೆರಿಕನ್ ಭೌತವಿಜ್ಞಾನಿ, "ಶೇಕ್ಸ್‌ಪಿಯರ್, ನ್ಯೂಟನ್, ಮತ್ತು ಬೇತೋವನ್" ಅಥವಾ "ಸೃಜನಶೀಲತೆಯ ಪ್ರರೂಪಗಳು" (*Shakespeare, Newton and Beethoven, or, Patterns of Creativity*) ಎಂಬ ವಿಶೇಷೋಪನ್ಯಾಸ ಮಾಡುತ್ತ (೧೯೭೫) ಹೇಳಿದರು:

"ಐನ್‌ಸ್ಟೈನರ ಸಾರ್ವತ್ರಿಕಸಾಪೇಕ್ಷತಾಸಮೀಕರಣಗಳಿಗೆ ನ್ಯೂಝಿಲೆಂಡಿನ ಗಣಿತವಿದ ರಾಯ್ ಕೆರ್ ಆವಿಷ್ಕರಿಸಿದ ನಿಷ್ಕೃಷ್ಟ ಪರಿಹಾರ, ವಿಶ್ವಾದ್ಯಂತ ಹಬ್ಬಿರುವ ಅಗಣನೀಯ ದೈತ್ಯ ಕೃಷ್ಣ ವಿವರಗಳ (Black Holes) ಬಗ್ಗೆ 'ನಿರಪೇಕ್ಷವಾಗಿ ನಿಷ್ಕೃಷ್ಟವಾದ ನಿರೂಪಣೆ' ಒದಗಿಸುವುದೆಂಬ ಸತ್ಯಸಾಕ್ಷಾತ್ಕಾರ, ನಲವತ್ತೈದು ವರ್ಷಗಳಿಗೂ ಮಿಕ್ಕಿದ ನನ್ನ ವೈಜ್ಞಾನಿಕ ಜೀವನದಲ್ಲಿ ಪರಮ ಭಗ್ನಕಾರಕ (most shattering) ಅನುಭವ. 'ಸುಂದರತೆಯ ಸಾನ್ನಿಧ್ಯದಲ್ಲಿ ಈ ಕಂಪನಾನುಭವ' (shuddering before the beautiful)— ಗಣಿತದಲ್ಲಿ ಸುಂದರತೆಯ ಶೋಧನೆಗೋಸ್ಕರ ಪ್ರವರ್ತಿತವಾದ ಒಂದು ಆವಿಷ್ಕಾರ ನಿಸರ್ಗದಲ್ಲಿ ಅದರ ನಿಷ್ಕೃಷ್ಟ ಪ್ರತಿರೂಪವನ್ನು ಕಂಡುಕೊಂಡೀತೆಂಬ ಈ ಊಹಾತೀತ ಸಂಗತಿ—ಮಾನವಮತಿಯು, ಇದರ ತೀರ ತಳದಲ್ಲಿ ಮತ್ತು ಪರಮ ಪ್ರಗಲ್ಭತೆಯಲ್ಲಿ, ಸೌಂದರ್ಯಕ್ಕೆ ಸಂವೇದನಶೀಲವಾಗಿದೆ [ತಹತಹಿಸುತ್ತದೆ] ಎನ್ನಲು ನನ್ನನ್ನು ಪ್ರೇರಿಸುತ್ತದೆ. ವಾಸ್ತವವಾಗಿ, ನಾನಿಲ್ಲಿ ಈ ವಿಚಾರದ ಬಗ್ಗೆ ಏನು ಹೇಳಲು ಪ್ರಯತ್ನಿಸಿರುವೆನೋ ಅದು ಈ ಮುಂದಿನ ಲ್ಯಾಟಿನ್ ಧ್ಯೇಯವಾಕ್ಯಗಳಲ್ಲಿ ಬಲು ಅಡಕವಾಗಿ ಉಕ್ತವಾಗಿದೆ.

"Simplex sigillum veri—The simple is the seal of the true,
and, Pulchritudo splendor veritatis—Beauty is the splendour of truth."
ಈ ಧ್ಯೇಯ ವಾಕ್ಯಗಳ ಕನ್ನಡಾನುವಾದ :

ಋತದ ಪರಿಮುದ್ರೆ ಸರಳತೆ
ಸತ್ಯದ ಪ್ರಕಾಶ ಸೌಂದರ್ಯ

ಅನಿಶ್ಚಿತತಾತತ್ತ್ವದ ಪ್ರತಿಪಾದಕ ಹೈಸನ್‌ಬರ್ಗ್ ತಮ್ಮ ಆವಿಷ್ಕಾರದ ಸಾಕ್ಷಾತ್ಕಾರ ಕುರಿತಂತೆ ಒಂದು ವಿವರಣೆ ನೀಡಿದ್ದಾರೆ. ೧೯೨೫ ಮೇ ತಿಂಗಳ ಕೊನೆಯ ಪಾದ. ಪರಾಗಜ್ವರಪೀಡಿತ (hay fever) ಹೈಸನ್‌ಬರ್ಗ್ ಸ್ವಸ್ಥಳದಿಂದ (ಹೂ, ಹುಲ್ಲು, ದೂಳು, ಪರಾಗ ಮುಂತಾದ ಜ್ವರಕಾರಕ ವಸ್ತುಗಳಿದ್ದ ಪ್ರದೇಶ) ದೂರದ ಕಡಲಕಿನಾರೆಗೆ ವಿಶ್ರಾಂತಿ ಪಡೆಯುವ—ಮುಖ್ಯವಾಗಿ ಪರಾಗರೇಣುಗಳಿಂದ ದೂರವಾಗುವ— ಸಲುವಾಗಿ ತೆರಳಿದರು. ಅಲ್ಲಿ ಕಡಲತಡಿಯಲ್ಲಿ, ಚೇತರಿಸಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಅವರಿಗಾಯಿತು ದರ್ಶನ :

"[ನಾನು ಸಾಗಿದ ಗಣಿತ ಪಥದಲ್ಲಿ ನನಗೆ ಲಭಿಸಿದ] ಮೊದಲ ಪದಗಳು ಶಕ್ತಿತತ್ತ್ವದೊಂದಿಗೆ ಸಮರ್ಪಕವಾಗಿ ಹೊಂದಿಕೊಂಡಿರುವಂತೆ ಭಾಸವಾದುವು [ಅಂದರೆ ಗಣಿತ ಗಣನೆಗಳು ವಾಸ್ತವತೆಯನ್ನು ಯಥಾವತ್ತಾಗಿ ಪ್ರತಿಬಿಂಬಿಸುತ್ತವೆಂಬ ಅನುಭವ.] ನಾನು ಅತಿಶಯ ಭಾವೋದ್ರಿಕ್ತನಾದೆ. ಫಲವಾಗಿ ಅಂಕೆ ಸಂಖ್ಯೆಗಳ ಬಿಡಿ ಎಣಿಕೆಗಳಲ್ಲಿ ಅಸಂಖ್ಯ ದೋಷಗಳು ನುಸುಳಿದುವು. ಇವನ್ನೆಲ್ಲ ಸಾವಧಾನವಾಗಿ ನಿವಾರಿಸಿ ಸ್ಫುಟಗಣನೆಗಳ ಅಂತಿಮ ಫಲಿತಾಂಶ ತಲಪಿದಾಗ—ಅಥವಾ ಅದು ನನ್ನೆದುರು ಅನಾವರಣಗೊಂಡಾಗ—ಮುಂಜಾನೆ ಮೂರು ಗಂಟೆ ಆಗಿತ್ತು. ಶಕ್ತಿತತ್ತ್ವವು ಸರ್ವಪದಗಳಿಗೂ ಸಮರ್ಪಕವಾಗಿ ಎರಕಗೊಂಡಿತ್ತು. ಎಂದೇ ನನ್ನ ಗಣನೆಗಳು ಮುನ್ನಡೆಸಿದ ಆ ಶಕಲಬಲವಿಜ್ಞಾನ ಬಗೆಯ (kind of quantum mechanics) ಗಣಿತೀಯ ಸುಸಾಂಗತ್ಯ

ಹಾಗೂ ಸುಸಂಬದ್ಧತೆ ಕುರಿತು ನನಗೆ ಇನಿತೂ ಸಂದೇಹ ಉಳಿಯಲಿಲ್ಲ. ಮೊದಲಿಗೆ ನಾನು ತುಂಬ ಗಾಬರಿಗೊಂಡೆ. ಪರಮಾಣು ವಿದ್ಯಮಾನಗಳ ಮೂಲಕ ನಾನು ವಿಚಿತ್ರವೂ ಸುಂದರವೂ ಆಗಿದ್ದ ಆಂತರ್ಯ ವನ್ನು ಸಮೀಕ್ಷಿಸುತ್ತಿದ್ದೇನೆಂಬ ಭಾವನೆ ಸುಳಿಯಿತು. ನಿಸರ್ಗ ನನ್ನೆದುರು ಇಷ್ಟೊಂದು ಸಮೃದ್ಧವಾಗಿ ಬಿತ್ತರಿಸಿದ ಗಣಿತೀಯ ಸಂರಚನೆಯ ಸಂಪತ್ತನ್ನು ನಾನು ಶೋಧಿಸಬೇಕೆಂಬ ಯೋಚನೆಯೇ ನನಗೆ ಬವಳಿ ಬರುವಂತೆ ಮಾಡಿತು. ನಿದ್ರಿಸಲಾಗದಷ್ಟು ಉದ್ದೀಪಿತನಾಗಿದ್ದೆ. ಹೀಗಾಗಿ ಹೊಸ ನಸುಕು ಹರಿದಂತೆ ನಾನು ಆ ದ್ವೀಪದ ದಕ್ಷಿಣ ತುದಿಗೆ ಹೋದೆ. ಅಲ್ಲಿ ಕಡಲಿನೆಡೆಗೆ ಚಾಚಿಕೊಂಡಿದ್ದ ಕಲ್ಲುಬಂಡೆ ಏರಬೇಕೆಂಬುದು ನನ್ನ ಬಹುದಿನಗಳ ಆಶಯವಾಗಿತ್ತು. ಈಗ ನಾನದನ್ನು ಯಾವ ತೊಂದರೆಯೂ ಇಲ್ಲದೆ ಈಡೇರಿಸಿದೆ, ಮತ್ತು ಸೂರ್ಯೋದಯವನ್ನು ಪ್ರತೀಕ್ಷಿಸಿದೆ." ಬಂಡೆಯ ಮಂಡೆ ಏರಿದಾಗ ಅವರು ಕಂಡ ನೇಸರ ಕೆಂಡವೇ ಅನಿಶ್ಚಿತತಾತತ್ತ್ವ !

೪೭. ಪುಟ ೧೭೮. Big Bang. ಸುಮಾರು ೧೫,೦೦೦,೦೦೦,೦೦೦ ವರ್ಷಗಳ ಹಿಂದಿನ ಕಥೆ. ಇಂದಿನ ವಿಶ್ವ (universe) ಅಂದು ಮೂಲಕಣಗಳ (ಎಲೆಕ್ಟ್ರಾನ್, ನ್ಯೂಟ್ರಾನ್, ಪ್ರೋಟಾನ್ ಮುಂತಾದವು) ಅತಿಸಾಂದ್ರ ಅತಿಸಂಮರ್ದಿತ ಅತಿತಪ್ತ ಅಖಂಡ ಗೋಳವಾಗಿತ್ತು. ಪರಮಾದಿ ಪರಮಾಣುವೆಂದು ಅದರ ಹೆಸರು. ರಾಶಿ (mass) ಇರುವಲ್ಲಿ ಗುರುತ್ವ (gravity) ಇರುವುದು, ಮತ್ತು ವಿಲೋಮವಾಗಿ, ಗುರುತ್ವ ಇರುವಲ್ಲಿ ರಾಶಿ ಇರುವುದು. ಗುರುತ್ವವೊಂದು ಸಂಕೋಚನಶೀಲ ಬಲ. ವಿಕಿರಣವಾದರೋ (ಬೆಳಕು ಶಾಖ ಮುಂತಾದ ವಿದ್ಯುತ್ಕಾಂತ ಬಲಗಳ ಮೊತ್ತ, radiation) ವ್ಯಾಕೋಚನಶೀಲ ಬಲ. ಹೀಗೆ ಪರಮಾದಿ ಪರಮಾಣುವಿನಲ್ಲಿ ಅತಿವಿಕಿರಣದ ವ್ಯಾಕೋಚನಶೀಲ ಬಲಕ್ಕೂ ಅತಿರಾಶಿಯ ಗುರುತ್ವಬಲಕ್ಕೂ (ಸಂಕೋಚನಶೀಲ) ಕದನರಂಗವೇರ್ಪಟ್ಟಿತು. ಒಂದು ಹಂತದಲ್ಲಿ ವಿಕಿರಣದ ಕೈ ಮೇಲಾಯಿತು. ಗುರುತ್ವದ ಪ್ರಾಬಲ್ಯ ಕುಸಿಯಿತು. ಆ ಗಳಿಗೆ ಪರಮಾದಿ ಪರಮಾಣು ಭೀಕರ ಆಸ್ಫೋಟನೆಗೆ ಬಲಿಯಾಗಿ ನುಚ್ಚುನೂರಾಗಿ ಎಲ್ಲ ದಿಶೆಗಳಿಗೂ ಸಿಡಿದು ಹೋಯಿತು. ಈ ಆದಿ ಆಸ್ಫೋಟನೆಯೇ ಮಹಾಬಾಜಣೆ—ವಿಶ್ವದ, ಅಂದರೆ ಕಾಲ ದೇಶಗಳ, ಆರಂಭ.

೪೮. ಪುಟ ೧೭೯. ಅಪರಾಧದ ವ್ಯಾಖ್ಯೆ ನೀಡಲೇಬೇಕಾದಲ್ಲಿ ತೋಳ-ಕುರಿಮರಿ ನ್ಯಾಯ ಹೇಗೂ ಇದೆಯಷ್ಟೆ.

೪೯. ಪುಟ ೧೭೯. ವಾಷಿಂಗ್ಟನ್ ನಗರದಲ್ಲಿ (ಅಮೆರಿಕ) Holocaust (= ಸರ್ವನಾಶ, ನರಮೇಧ, ಜನದಹನಕೋಷ್ಠ) ಎಂಬ ವಸ್ತು ಸಂಗ್ರಹಾಲಯವಿದೆ. ಜರ್ಮನಿಯ ಹಿಟ್ಲರ್‌ಶಾಹಿಯ ವೇಳೆ ಹೇಗೆ ಸಾವಿರ ಸಾವಿರ ಸಂಖ್ಯೆಗಳಲ್ಲಿ ಯೆಹೂದ್ಯ ಕುಲಜರನ್ನು ಅನಿಲಕೋಷ್ಠಕ್ಕೆ (gas chamber) ವ್ಯವಸ್ಥಿತವಾಗಿ ಆಹುತಿಸಲಾಯಿತು ಎಂಬುದರ ತ್ರಿ-ಆಯಾಮ ಸ್ತಬ್ಧ ದೃಶ್ಯಗಳು ಇಲ್ಲಿ ಮಾನವನ ವಿಕರಾಳ ಪ್ರವೃತ್ತಿಗೆ ಮೂಕಸಾಕ್ಷಿಯಾಗಿ ನಿಂತು ರೋದಿಸುತ್ತಿವೆ. ಪ್ಲಾಸ್ಟರ್ ಆಫ್ ಪ್ಯಾರಿಸಿನಿಂದ ತಯಾರಿಸಿರುವ ನರಗೊಂಬೆಗಳ ಸಾಲುಗಳು, ಒಂದು ದೃಶ್ಯದಿಂದ ಮುಂದಿನದರಲ್ಲಿ ವ್ಯಕ್ತಿಗಳನ್ನು ವಿವಸ್ತ್ರರಾಗಿಸಿ ಅವರಲ್ಲಿದ್ದ ನಗನಾಣ್ಯಗಳನ್ನು ದೋಚಿರುವುದು, ಹಲ್ಲಿನ ತೂತುಗಳಿಗೆ ತುಂಬಿಸಿದ್ದ ಚಿನ್ನ ಅಥವಾ ಬೆಳ್ಳಿ ಲೋಹಗಳನ್ನು ಬಲಾತ್ಕಾರವಾಗಿ ಕಿತ್ತಿರುವುದು, ಪಾದರಕ್ಷೆ ಪಾತ್ರೆ ಪಗಡಿ ಪುಸ್ತಕ ಮುಂತಾದವನ್ನು ರಾಶಿ ರಾಶಿ ಒಟ್ಟಿರುವುದು ಎಲ್ಲವನ್ನೂ ನೋಡಬಹುದು—ಧರ್ಮರಾಯ ನರಕ ನೋಡಿದಂತೆ. ಆದರೆ ಹೀಗೆ ನೋಡಿ ಮರುಗಿ ಮ್ಲಾನರಾಗುವ ನಾವು ನಮ್ಮ ವೈಯಕ್ತಿಕ ಜೀವನದಲ್ಲಿ ಧರ್ಮರಾಯನಂತೆ ಬಾಳಲು ಪ್ರಯತ್ನಿಸುವೆವೇ ? ( ನೋಡಿ ಟಿಪ್ಪಣಿ ೨೮)

೫೦. ಪುಟ ೧೯೦. ಪ್ಲ್ಯಾಂಕ್-ಹಿಟ್ಲರ್ ಮನುಕುಲದಅಂತಃಕರಣ-ಮನುಕುಲದದೌರ್ಜನ್ಯ. ಈ ಮುಖಾಮುಖಿಯನ್ನು ಶ್ರೀಕೃಷ್ಣ-ದುರ್ಯೋಧನ ಭೇಟಿಯ ಜೊತೆ (ಉದ್ಯೋಗಪರ್ವ) ಹೋಲಿಸುವುದೊಂದು ಕುತೂಹಲಕಾರಿ ಅನುಭವ. ಇದರ ಫಲಶ್ರುತಿಯನ್ನು ಕುಮಾರವ್ಯಾಸ ಬಣ್ಣಿಸಿರುವ ಪರಿ :

ನೆಲದೊಳರ್ಧವನೀವುದಿಲ್ಲಾ
ಸ್ಥಳವನ್ನೆದನು ಮುನ್ನ ಕೊಡೆನೆ-
ನ್ನಿಳೆಯ ಭಾಗವನೀಸಕೊಟ್ಟಡೆ ನಿನ್ನ ಮೇಲಾಣೆ
ನೆಲನ ಕಡೆಯಲಿ ಮುಳ್ಳು ಮೊನೆಯು-
ಚ್ಚಳಿಪ ಧರಣಿಯನಿತ್ತೆನಾದೊಡೆ
ಬಳಿಕ ನೀನಗುಹೋಗು ಕದನವ ಕೊಂಡು ಬಾಯೆಂದ

೫೧. ಪುಟ ೧೯೦. ಪ್ಲ್ಯಾಂಕ್ ವ್ಯಕ್ತಿತ್ವ. 'ಆರ್ಯ' ಕುಲೋತ್ಪನ್ನ ಪ್ಲ್ಯಾಂಕ್, ನಾಟ್ಸೀ ಪ್ರಭುಗಳ ನಿರೀಕ್ಷೆ ಅಪೇಕ್ಷೆ ಮತ್ತು ಆದೇಶಪ್ರಕಾರ, ಅನಾರ್ಯ(=ಯೆಹೂದ್ಯ)ದ್ವೇಷಿಯಾಗಿ ಪಿತೃಭೂಮಿಗೆ (=ಜರ್ಮನಿ) ಅವೈಜ್ಞಾನಿಕ ಹಾಗೂ ಅಮಾನುಷ ಸೇವೆ ಸಲ್ಲಿಸಬೇಕಾಗಿತ್ತು. ಮನಸ್ಸಾಕ್ಷಿ ಇದನ್ನು ಒಪ್ಪದಿದ್ದರೆ ಜರ್ಮನಿ ಯಿಂದ ಗುಪ್ತವಾಗಿ ಪಲಾಯನಗೈಯಬಹುದಾಗಿತ್ತು. ಆದರೆ ಪ್ಲ್ಯಾಂಕ್ ಮಹಾನುಭಾವ, ಈ ಅವಿದ್ಯೆ, ಅವಿಜ್ಞಾನ ಮತ್ತು ಅಜ್ಞಾನವೆಂಬ ಹಿಮಾಶ್ಮಪ್ರವಾಹದೆದುರು ಮಾನವೀಯತೆಯ ಒಂಟಿ ದನಿಯಾಗಿ, ಸಂಸ್ಕೃತಿಯ ಮುಖವಾಣಿಯಾಗಿ ಮತ್ತು ಸಭ್ಯತೆಯ ಮೂರ್ತರೂಪವಾಗಿ ಚಂಡಮಾರುತಕ್ಷೋಭಿತ ಸಾಗರದ ನಡುವಿನ ದೀಪಸ್ತಂಭದಂತೆ ನಿಂತರು. ದುಷ್ಟ ಪ್ರಭುಗಳ ಘಾತ್ಸಾಗಳಿಗೆ ಮಣಿಯಲಿಲ್ಲ. ಅಷ್ಟೇ ಅಲ್ಲ. ಮುಖ್ಯ ವಾಗಿ ವಿಜ್ಞಾನಿಗಳಿಗೆ ಆಶ್ರಯ ಒದಗಿಸುವುದರಲ್ಲಿ ಅಥವಾ ಅವರು ವಿದೇಶಯಾನ ಮಾಡಲು ಸಹಾಯ ನೀಡುವು ದರಲ್ಲಿ ಜೀವದ ಹಂಗು ತೊರೆದು ಶ್ರಮಿಸಿದರು. ಫಲ ? ಬೇಹುಗಾರರ ಕ್ರೂರ ವಕ್ರದೃಷ್ಟಿಗೆ ಎರೆ. ಮ್ಯಾಕ್ಸ್ ಪ್ಲ್ಯಾಂಕ್ ಸೊಸೈಟಿಯ ಅಧ್ಯಕ್ಷತೆಯಿಂದ ವಜಾ (೧೯೩೭). ಸ್ವಂತ ನೆಲೆಯಲ್ಲಿ ಪರಕೀಯ ಪ್ರಜ್ಞೆಯಿಂದ ತೊಳಲಾಟ. ಗರಳಶಿಲೆಗಳೇ ದ್ವೇಷಮಂದಿರದ ನಿರ್ಮಾಣ ಘಟಕಗಳು.

ಎರಡನೆಯ ಮಹಾಯುದ್ಧ ಭುಗಿಲೆದ್ದಿತು (೧೯೩೯). ಹಿರಿಮಗ ಶತ್ರು ಬಾಂಬಿಗೆ ಬಲಿಯಾಗಿ ಮಡಿದ. ಇನ್ನೊಬ್ಬ ಮಗನನ್ನು ಹಿಟ್ಲರ್-ವಿರೋಧಿ ಕಾರಸ್ಥಾನದಲ್ಲಿ ಭಾಗಿಯಾಗಿದ್ದಾನೆಂಬ ಮಿಥ್ಯಾಕಾರಣಕ್ಕಾಗಿ ಸೆರೆ ಹಿಡಿದರು. ಈತನನ್ನು ಒತ್ತೆಯಾಳಾಗಿಟ್ಟುಕೊಂಡು ಪ್ಲ್ಯಾಂಕರಿಗೆ ಮಾನಸಿಕ ಹಿಂಸೆನೀಡಿ ಅವರನ್ನು ಅಗ್ನಿ ಪರೀಕ್ಷೆಗೆ ಒಳಪಡಿಸಿದರು. "ಹಿಟ್ಲರ್ ಪ್ರಭುವಿಗೆ ಸಂಪೂರ್ಣ ವಿಧೇಯತೆಯನ್ನು ಒಪ್ಪಿಕೊಳ್ಳಿ. ಆಗ ನಿಮ್ಮ ಮಗನಿಗೆ ಕ್ಷಮೆ ನೀಡಿ ಜೀವದಾನ ಅನುಗ್ರಹಿಸುತ್ತೇವೆ." ಪ್ಲ್ಯಾಂಕ್ ವಿಚಲಿತಮನಸ್ಕರಾಗಲಿಲ್ಲ. ಮೌಲ್ಯಚ್ಯುತ ರಾಗಲಿಲ್ಲ ; ಸಾಕ್ರಟೀಸನಂತೆ ವಿಷಚಷಕಪಾನಮಾಡಿಯೇಬಿಟ್ಟರು. ನಾಟ್ಸಿಗಳು ಅವರ ಮಗನನ್ನು ಕೊಲೆಗೈದರು. ಎಂದರೋ ಮಹಾನುಭಾವುಲು ಅಂದರಿಕಿವಂದನಮು.

೫೨. ಪುಟ ೧೯೬. ರಾಬರ್ಟ್ ಆ್ಯಂಡ್ರೂಸ್ ಮಿಲ್ಲಿಕನ್, ೧೮೬೮-೧೯೫೩, ಅಮೆರಿಕನ್ ಭೌತವಿಜ್ಞಾನಿ. ಮೈಕೇಲ್ ಫ್ಯಾರಡೇ, ೧೭೯೧-೧೮೬೭, ಇಂಗ್ಲಿಷ್ ಭೌತ ಮತ್ತು ರಸಾಯನವಿಜ್ಞಾನಿ ಒಂದು ಶತಮಾನದ ಹಿಂದೆ ಮಂಡಿಸಿದ ಊಹನೆಗೆ—ವಿದ್ಯುದಾವೇಶ ಇದರ ಪೂರ್ಣಾಂಕ ಏಕಮಾನಗಳಲ್ಲಿ ಮಾತ್ರ ಇರಬಲ್ಲದು—ಮಿಲ್ಲಿಕನ್-ಪ್ರಯೋಗಗಳು ಸಾಧನೆ ನೀಡಿದುವು. ಒಂಟಿ ಎಲೆಕ್ಟ್ರಾನಿನ (ಋಣವಿದ್ಯುದಾವೇಶ) ಆವೇಶವನ್ನು ಮಿಲ್ಲಿಕನ್ ಗಣನೆಮಾಡಿದರು. ವಿಶ್ವಕಿರಣಗಳ ಬಗ್ಗೆ ವಿಜ್ಞಾನಿಗಳ ಚಿಂತನೆ ಊಹನೆಯ ಹಂತ ದಾಟಿರದಾಗ ಅವು ಕೂಡ ವಿಕಿರಣದ ಬಗೆಗಳೆಂಬ ಸ್ಪಷ್ಟ ವಾದವನ್ನು ಮಂಡಿಸಿದರು—ನಕ್ಷತ್ರಗಳ ಮರಣಾಕ್ರಂದನ ಎಂದು ಭಾವಿಸಿದರು. ಅವುಗಳಿಗೆ cosmic rays ಎಂಬ ಹೆಸರಿತ್ತವರೇ ಮಿಲ್ಲಿಕನ್. ಮತಧರ್ಮ-ವಿಜ್ಞಾನ ಸಮನ್ವಯ ದೃಷ್ಟಿ ಇವರದು.

೫೨ಎ. ಪುಟ ೨೧೧.

ದಾರಿಗಾ ! ಪಥದತ್ತವಾಗಿಲ್ಲ ನೀನಡೆದು
ದೂರ ಕ್ರಮಿಸಬೇಕು ಗುರಿ-ನಡಿಗೆ ನೇರವಿರೆ
ಬಾರಿಬಾರಿಗು ಪೀಡಿಸುವ ಕಂಟಕಗಳ ನಿ-
ವಾರಿಸುತ ಸಾಗುವೆಯೊ ಸುಲಭದಲಿ ಅತ್ರಿಸೂನು

೫೩. ಪುಟ ೨೦೫. ಜನಪ್ರಿಯವಿಜ್ಞಾನವಾಙ್ಮಯ ಕುರಿತಂತೆ ಐನ್‌ಸ್ಟೈನ್ ಬರೆದ ಪತ್ರ (೩-೪-೧೯೪೮) : "ಸಾಮಾನ್ಯ ವ್ಯಕ್ತಿಗಾಗಿ ಬರೆಯಲಾದವು ಎನ್ನಲಾದ ಹೆಚ್ಚಿನ ವಿಜ್ಞಾನ ಪುಸ್ತಕಗಳು ಉದ್ದೇಶಿಸುವುದು ಓದುಗನ ಮೇಲೆ ವಿಶೇಷ ಪ್ರಭಾವವನ್ನು—'ಪರಮಾದ್ಭುತ !' 'ನಾವೆಂಥ ಗಹನ ಪ್ರಗತಿ ಸಾಧಿಸಿದ್ದೇವೆ !' ಇತ್ಯಾದಿ—ಅಚ್ಚೊತ್ತುವುದೇ ವಿನಾ ಆತನಿಗೆ ವಿಜ್ಞಾನದ ಪ್ರಾಥಮಿಕ ಗುರಿ ಹಾಗೂ ವಿಧಾನಗಳನ್ನು ಸ್ಪಷ್ಟವಾಗಿಯೂ ಸರಾಗವಾಗಿಯೂ ವಿವರಿಸುವುದನ್ನಲ್ಲ. ಬುದ್ಧಿಶಾಲಿಯಾದ ಸಾಮಾನ್ಯ ವ್ಯಕ್ತಿಯೊಬ್ಬ ಇಂಥ ಕೆಲವು ಪುಸ್ತಕಗಳನ್ನು ಓದಲು ಪ್ರಯತ್ನಿಸಿದಾಗ ಆತನಿಗೆ ಪೂರ್ತಿಭ್ರಮನಿರಸನವಾಗುತ್ತದೆ. ಆತನ ತೀರ್ಮಾನವಿದು : ನಾನು ಅತಿ ದುರ್ಬಲಮನಸ್ಕ, ಎಂದೇ ಈ ಪ್ರಯತ್ನವನ್ನು ತೊರೆದುಬಿಡುವುದು ಕ್ಷೇಮ. ಇದರ ಜೊತೆಗೆ, ಒಟ್ಟು ವಿವರಣೆ ಬಹುತೇಕ ಭಾವೋದ್ರೇಕಕಾರಿ ಧಾಟಿಯಲ್ಲಿರುವುದಾಗಿ ಇದು ಕೂಡ ಒಬ್ಬ ಸಂವೇದನಶೀಲ ಸಾಮಾನ್ಯ ವ್ಯಕ್ತಿಯಲ್ಲಿ ಜುಗುಪ್ಸೆ ಹುಟ್ಟಿಸುತ್ತದೆ. ಒಂದು ಮಾತಿನಲ್ಲಿ ಹೇಳುವುದಾದರೆ ತಪ್ಪು ಓದುಗರದಲ್ಲ, ಬದಲು ಲೇಖಕರದು ಮತ್ತು ಪ್ರಕಾಶಕರದು. ನನ್ನ ಸೂಚನೆ ಇದು : ಬುದ್ಧಿಶಾಲಿ ಹಾಗೂ ವಿವೇಚನ ಸಾಮರ್ಥ್ಯಯುತ ಸಾಮಾನ್ಯ ವಾಚಕನೊಬ್ಬ ವಿಜ್ಞಾನ ಕುರಿತ ಯಾವುದೇ 'ಜನಪ್ರಿಯ' ಪುಸ್ತಕವನ್ನು ಓದಿ ಮೆಚ್ಚಬಲ್ಲ ಎಂದು ಸ್ಥಾಪನೆ ಆಗುವ ತನಕವೂ ಅದನ್ನು ಪ್ರಕಟಿಸಬಾರದು." ಇನ್ನೊಮ್ಮೆ ಬರೆದರು (೨೮-೧-೧೯೫೨) : "ನನ್ನ ಪ್ರಯತ್ನಗಳ ಸಾಧನೆ ಬಗ್ಗೆ ಸಾಮಾನ್ಯ ವಾಚಕರಲ್ಲಿ ಉತ್ಪ್ರೇಕ್ಷಿತ ಚಿತ್ರ ಮೂಡಿದರೆ ತಪ್ಪು ನನ್ನದಲ್ಲ. ನಿಜಕ್ಕೂ ಇದು ಜನಪ್ರಿಯ ವಿಜ್ಞಾನ ವಾಙ್ಮಯವನ್ನು ರಚಿಸುವ ಲೇಖಕರ ಕೊಡುಗೆ. ಇವರು ಪ್ರತಿಯೊಂದನ್ನೂ ಎಷ್ಟು ಸಾಧ್ಯವೊ ಅಷ್ಟು ಉದ್ರೇಕಪ್ರೇರಕ ರೀತಿಯಲ್ಲಿ ಪ್ರಕಟಿಸುತ್ತಾರೆ."

೫೪ ಪುಟ ೨೧೫. *The Evolution of Physics*ನ ಮಾದರಿ ಪಾಠ : ಶೀರ್ಷಿಕೆ "ಚಲನೆಯ ಒಗಟು." "ಸರಳರೇಖೆಯ ನೇರ ಸಂಭವಿಸುವ ಚಲನೆಯನ್ನು ಮಾತ್ರ ನಾವು ಪರಿಶೀಲಿಸುತ್ತಿರುವ ತನಕ ನಿಸರ್ಗದಲ್ಲಿ ಕಂಡುಬರುವ ಚಲನೆಗಳ ಅರ್ಥ ಗ್ರಹಿಸುವುದು ಅತಿ ಕಠಿಣ. ವಕ್ರರೇಖೆಗಳ ಗುಂಟ ಸಂಭವಿಸುವ ಚಲನೆಗಳನ್ನು ಪರಿಶೀಲಿಸಲೇಬೇಕು. ಇಂಥ ಚಲನೆಗಳನ್ನು ನಿಯಂತ್ರಿಸುವ ನಿಯಮಗಳ ನಿರ್ಧರಣೆ ಮುಂದಿನ ಹೆಜ್ಜೆ. ಇದೇನೂ ಸುಲಭ ಕಾರ್ಯವಲ್ಲ. ಸರಳರೇಖೀಯ ಚಲನೆಯ ಸಂದರ್ಭದಲ್ಲಿ ವೇಗ, ವೇಗದಲ್ಲಿ ವ್ಯತ್ಯಯ, ಮತ್ತು ಬಲ ಕುರಿತ ನಮ್ಮ ಪರಿಕಲ್ಪನೆಗಳು ಬಲು ಉಪಯುಕ್ತವೆನಿಸಿದುವು. ಆದರೆ ಅವನ್ನು ವಕ್ರರೇಖೀಯ ಚಲನೆಗೆ ಹೇಗೆ ಅನ್ವಯಿಸಬಹುದು ಎಂಬ ಸಂಗತಿ ಒಡನೆ ನಮಗೆ ಹೊಳೆಯದು. ಸಾರ್ವತ್ರಿಕ ಚಲನೆಯನ್ನು ವಿವರಿಸುವಲ್ಲಿ ಹಳೆಯ ಪರಿಕಲ್ಪನೆಗಳು ಹೊಂದುವುದಿಲ್ಲ, ಮತ್ತು ಹೊಸವನ್ನು ಸೃಷ್ಟಿಸಬೇಕು ಎಂದು ಚಿಂತಿಸುವುದು ನಿಜಕ್ಕೂ ಸಾಧ್ಯವಿದೆ. ನಾವು ನಮ್ಮ ಹಳೆಯ ಜಾಡನ್ನೇ ತುಳಿಯಲು ಪ್ರಯತ್ನಿಸಬೇಕೇ ? ಅಥವಾ ಹೊಸತನ್ನು ಹುಡುಕಬೇಕೇ ? . . ." ಗೊತ್ತಿರುವ (=ಅನುಭವಗಮ್ಯವಾಗಿರುವ) "ಇಲ್ಲಿ"ಂದ ಗೊತ್ತಿರದ "ಅಲ್ಲಿ"ಗೆ ಹಲವಾರು ಸುಲಭ ತಂತ್ರಗಳ ಮೂಲಕ ಸಾಗುವ ಸುಲಭ ಮತ್ತು ಸರ್ವಗ್ರಾಹ್ಯ ವಿಧಾನ. ಭೌತ ವಿಜ್ಞಾನ ಕುರಿತ 'ಕಾದಂಬರಿ'ಯಂತೆ ಈ ಪುಸ್ತಕವನ್ನು ಓದಿ ಆನಂದಿಸಬಹುದು.

೫೫ ಪುಟ ೨೩೦. ಐನ್‌ಸ್ಟೈನರ ಮಿತ್ರ ಬಾರ್ನ್ ದಿನಾಂಕ ೧೫-೭-೧೯೪೪ರಂದು (ಎಡಿನ್‌ಬರೋ, ಬ್ರಿಟನ್‌ನಿಂದ) ಅವರಿಗೊಂದು ಪತ್ರ ಬರೆದರು : ". . . ಆಕ್ರಮಣಕಾರಿ ಯುದ್ಧಗಳು ಹೊಸತಾಗಿ ಆರಂಭವಾಗದಿರುವಂತೆ ಮಾಡಲು ಮತ್ತು ಅವುಗಳ ಎದುರು ಜನರಿಗೆ ರಕ್ಷಣೆ ಒದಗಿಸಲು ಪ್ರಪಂಚದ ಚಿಂತನಶೀಲರೆಲ್ಲರೂ ಸಹಕರಿಸಿ ರಾಜಕೀಯ ಕ್ಷೇತ್ರದಲ್ಲಿ ತಮ್ಮ ವರ್ಚಸ್ಸು ಪ್ರಭಾವಶಾಲಿಯಾಗುವಂತೆ ದುಡಿಯಬೇಕೆಂದು ನೀವು ನೀಡಿರುವ ಕರೆಯನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಉತ್ಸಾಹ ತಳೆದಿದ್ದೇನೆ. ಈ ದಿಶೆಯಲ್ಲಿ ತೂಕವಾದದ್ದೇನನ್ನಾದರೂ ಸಾಧಿಸಬಲ್ಲವರು ನೀವೊಬ್ಬರೇ—ನಿಮ್ಮ ಹೆಸರು ಎಲ್ಲರಿಗೂ ಸುಪರಿಚಿತವಾಗಿದೆ . . ." ಆದರೆ ಈ ವೇಳೆಗಾಗಲೇ (೧೯೪೪ರ ಉತ್ತರಾರ್ಧ) ಪರಮಾಣುಬಾಂಬಿನ ಮೂರಿ ತೀಕ್ಷ್ಣವಾಗಿ ವ್ಯಾಪಿಸಿತ್ತು, ಮುಂದಿನ ವರ್ಷ (೬-೮-೧೯೪೫, ೯-೮-೧೯೪೫) ಅದು ತನ್ನ 'ರಂಗಪ್ರವೇಶ'ವನ್ನು ಭೀಕರವಾಗಿ ಪ್ರದರ್ಶಿಸಲಿತ್ತು, ಖುದ್ದು ಐನ್‌ಸ್ಟೈನರಿಗೆ ಇದರ ಮಾರಕತೆಯ ಅರಿವು ಆ ಮೊದಲು ಇರಲಿಲ್ಲ, ಆದರೆ ಇವರ ಪತ್ರವೇ (೨-೮-೧೯೩೯) ಈ 'ಶೃಂಖಲಾಕ್ರಿಯೆ'ಗೆ ಕಾರಣವಾಗಿತ್ತು—ಮುಂತಾದ ನಿಗೂಢಾತಿನಿಗೂಢ ವಿಚಾರಗಳು

ಇನ್ನೂ ಬಾರ್ನರ ಪ್ರಪಂಚ ಪ್ರವೇಶಿಸಿರಲಿಲ್ಲ. ಈ ಬಗ್ಗೆ ಯುದ್ಧಾನಂತರದ ಅ-ಸಹ್ಯ ಶಾಂತಿ ಕವಿದಿದ್ದ ಪರಿಸರದಲ್ಲಿ ಬಾರ್ನ್ ಟಿಪ್ಪಣಿ ಬರೆಯುತ್ತ ಮಾರ್ಮಿಕ ಅಪಥ್ಯ ಸತ್ಯವನ್ನು ನುಡಿದಿದ್ದಾರೆ (೧೯೬೫): "ಅವರು [ಐನ್‌ಸ್ಟೈನ್] ಬಲಪ್ರಹಾರವನ್ನು, ಅಲ್ಲಿಯೂ ಯುದ್ಧನಿರತರಲ್ಲದ ಮತ್ತು ರಕ್ಷಣಾರಹಿತರಾದ ಜನರ ಎದುರು ಅದರ ತಾಡನೆಯನ್ನು, ತೀವ್ರವಾಗಿ ವಿರೋಧಿಸಿದರು. ಜನಕೋಟಿಯ ಜೀವಹತ್ಯಾಸಮಸ್ಯೆ ಎದ್ದಾಗ ಅವರು ಯಾವುದೇ ರಾಜಕೀಯ ಅಥವಾ ಆರ್ಥಿಕ ಸಿದ್ಧಾಂತ, ರಾಷ್ಟ್ರ ಅಥವಾ ಸಂವಿಧಾನ ಪರಿಗಣನಾರ್ಹವಲ್ಲ ಎಂದು ದೃಢವಾಗಿ ನಂಬಿದ್ದರು—ಜೀವರಕ್ಷಣೆಯೊಂದಕ್ಕೇ ಆದ್ಯತೆ ಸಲ್ಲತಕ್ಕದ್ದು. ಆದರೆ ನಮ್ಮ ಜೀವಿತಾವಧಿಯಲ್ಲೇ ಸಂಭವಿಸಿದ ಘಟನೆಗಳು ಅವರಿಗೂ ನನಗೂ ಒಂದು ಪಾಠ ಕಲಿಸಿದುವು : ಮಾನವನ ಅಸ್ತಿತ್ವ ನಿಂತಿರುವ ಪರಮಾಂತಿಮ ನೈತಿಕ ಮೌಲ್ಯಗಳ ರಕ್ಷಣೆಗೆ, ಕೊನೆಯ ಅಸ್ತ್ರವಾಗಿ ಬಲಪ್ರಹಾರ ಮಾಡದೇ ಮತ್ತು ಹಲವು ಮಂದಿಯ ಹತ್ಯೆ ಗೈಯದೇ, ಅನ್ಯಮಾರ್ಗವಿಲ್ಲ."

೫೬ ಪುಟ ೨೩೫. ಪರಮಾಣವಿಕಾಗ್ನಿ ಅಂದರೆ ಅಲ್ಪವಸ್ತು ಸಂಹಾರ(ನಾಶ)ದಿಂದ ಅಗಾಧ ಶಕ್ತ್ಯುತ್ಪಾದನೆ ($E=mc^2$). ಮೊದಲ ಬಾಂಬುಗಳು ವಿದಲನ (fission ಅಂದರೆ ಪರಮಾಣುಭೇದನೆ) ಪ್ರಕ್ರಿಯೆಯ ಫಲಗಳು. ಮುಂದೆ ನಿರ್ಮಿತವಾದದ್ದು ಸಂಲಯನ (fusion ಅಂದರೆ ಪರಮಾಣುಬೆಸೆತ) ಪ್ರಕ್ರಿಯೆಯಿಂದ ಲಭಿಸುವ ಹೈಡ್ರೊಜನ್ ಬಾಂಬ್. ನಾಕ್ಷತ್ರಿಕಶಕ್ತಿಯು ಸಂಲಯನಪ್ರಕ್ರಿಯೆಯಿಂದ ಉತ್ಪಾದನೆ ಆಗುತ್ತದೆ. ಉಭಯ ಪ್ರಕ್ರಿಯೆಗಳಲ್ಲಿಯೂ—ವಿದಲನ ಅಥವಾ ಸಂಲಯನ—ತತ್ತ್ವ ಅದೇ $E = mc^2$. ಆದರೂ ಎರಡನೆಯದರಲ್ಲಿಯ ಶಕ್ತ್ಯುತ್ಪಾದನೆ ಮೊದಲನೆಯದರಲ್ಲಿಯದಕ್ಕಿಂತ ಅಧಿಕ. ಆದ್ದರಿಂದ, ವಾಸ್ತವವಾಗಿ ಕೋಟಿಸೂರ್ಯಸಮಪ್ರಭಾ ಅಥವಾ ದಿವಿಸೂರ್ಯ ಸಹಸ್ರಸ್ಯ ಎಂಬ (ನೋಡಿ ೫೭) ಉದ್ಗಾರ ಎರಡನೆಯದಕ್ಕೆ ಹೆಚ್ಚು ಪ್ರಸ್ತುತವಾಗುತ್ತದೆ.

೫೭ ಪುಟ ೨೩೫. *Brighter Than A Thousand Suns* ಎಂಬ ಪುಸ್ತಕ (ಲೇಖಕ Robert Jungk), ಪ್ರಕಟಣೆ ೧೯೫೬, ಪ್ರಥಮ ಪರಮಾಣು ಬಾಂಬ್ (ವಿದಲನ ಬಾಂಬ್) ನಿರ್ಮಾಣದ ಹಿನ್ನೆಲೆ ಕಥೆಯನ್ನು ವಿವರಿಸುವುದು : ವ್ಯಕ್ತಿಗಳ ಗುಣಾವಗುಣಗಳು, ರಾಗದ್ವೇಷಗಳು, ರಹಸ್ಯ ರಕ್ಷಣೆ, ಸಂಶಯಭೀತಿ, ಅರಿಯದ ದೈತ್ಯಬಲದೊಂದಿಗೆ ವ್ಯವಹರಿಸುವಾಗ ಎದುರಾಗುವ ವಿವಿಧ ಸಮಸ್ಯೆಗಳು ಇತ್ಯಾದಿ. ಈ ನಾಟಕದ ಸೂತ್ರಧಾರಿ ರಾಬರ್ಟ್ ಓಪನ್‌ಹೀಮರ್, ೧೯೦೪-೬೭, ಅಮೆರಿಕನ್ ಭೌತವಿಜ್ಞಾನಿ. ಮೊದಲ ಪ್ರಾಯೋಗಿಕ ಬಾಂಬ್ ಆಸ್ಫೋಟಿಸಿದಾಗ ಅದು—ವಿಲಯರುದ್ರನ ಪ್ರಳಯ ತಾಂಡವದರ್ಶನ—ಓಪನ್‌ಹೀಮರರನ್ನೂ ಒಳಗೊಂಡಂತೆ ಅಲ್ಲಿ ಭಾಗಿಗಳಾಗಿದ್ದ ಸಮಸ್ತ ಮಹಾವಿಜ್ಞಾನಿಗಳಿಗೂ ಊಹಾತೀತ ಅರ್ಥಾತೀತ ದೃಶ್ಯವಾಗಿತ್ತು, ಭಗವದ್ಗೀತೆಯ ಅಸೀಮ ಆರಾಧಕರಾಗಿದ್ದ ಓಪನ್‌ಹೀಮರ್ ಉದ್ಗರಿಸಿದ ಶ್ಲೋಕ :

ದಿವಿಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ
ಯದಿಭಾಃ ಸದೃಶೀ ಸಾ ಸ್ಯಾದ್ಭಾಸಸ್ತಸ್ಯ ಮಹಾತ್ಮನಃ ॥ ೧೧-೧೨ ॥
ಯುಗದಂತದಲಿ ಪ್ರಳಯ ನಿಕಟ ಬರೆ ಸಾಸಿರದ
ಸೂರ್ಯರೊಮ್ಮೆಲೆಮೂಡಿಪ್ರಜ್ವಲಿಸೆ ಪ್ರಖರ
ಆ ಮಹಾತೇಜಸ್ಸು ಸರಿಗಟ್ಟಲರಿಯದೀ
ದೈವಪ್ರಭೆ ಪಸರಿಸಲು ಭೂವ್ಯೋಮಶಿಖರ

ವಿಜಯನಾಥ ಭಟ್ಟ 'ವಿಜಯಿನಿ'

೫೮ ಪುಟ ೨೩೭. ನಾಗರಿಕತೆಯ ಪುನಸ್ಸ್ಥಾಪನೆ ಕುರಿತು ಫೈನ್‌ಮಾನ್ ಬರೆದಿದ್ದಾರೆ : "ಯಾವುದೋ ಒಂದು ಮಹಾಪ್ರಳಯದಲ್ಲಿ ವೈಜ್ಞಾನಿಕಜ್ಞಾನಸಮಸ್ತವೂ ನಾಶಗೊಂಡು, ತರುವಾಯದ ಜೀವಿಪೀಳಿಗೆಗಳಿಗೆ ಒಂದೇ ಒಂದು ವಾಕ್ಯ ಮಾತ್ರ ಸಂವಹನಿಸಲ್ಪಡುವುದಾದರೆ ಅತ್ಯಂತ ಕಡಿಮೆ ಪದಗಳಲ್ಲಿ ಗರಿಷ್ಠ ಮಾಹಿತಿಯನ್ನು ಒದಗಿಸಬಲ್ಲ ಹೇಳಿಕೆ ಯಾವುದು ? ಅದು 'ಪರಮಾಣುವಾದ' (ಅಥವಾ ನೀವು ಇಷ್ಟಪಟ್ಟುದಾದರೆ, ಪರಮಾಣು 'ಸಂಗತಿ') ಎಂದು ನನ್ನ ನಂಬಿಕೆ. ಇದರ ನಿರೂಪಣೆ : 'ಎಲ್ಲ ವಸ್ತುಗಳೂ ಪರಮಾಣುಗಳಿಂದ

ನಿರ್ಮಿತವಾಗಿವೆ. ತುಸು ಅಂತರಗಳಲ್ಲಿರುವಾಗ ಪರಸ್ಪರ ಆಕರ್ಷಿಸುತ್ತ, ಆದರೆ ಒಂದನ್ನು ಇನ್ನೊಂದರೊಳಕ್ಕೆ ನುರಿದಾಗ ಪರಸ್ಪರ ವಿಕರ್ಷಿಸುತ್ತ ಸದಾ ಚಲಿಸುತ್ತಿರುವ ಸೂಕ್ಷ್ಮಕಣಗಳಿವು.' ನೀವು ಕೊಂಚ ಕಲ್ಪನೆ ಮತ್ತು ಚಿಂತನೆ ಹರಿಸಿದ್ದಾದರೆ ಈ ವಾಕ್ಯದಲ್ಲಿ ವಿಶ್ವ ಕುರಿತಂತೆ 'ಸಮೃದ್ಧ' ಮಾಹಿತಿ ಅಡಕವಾಗಿದೆಯೆಂಬುದು ಮನವರಿಕೆ ಆಗದಿರದು."

೫೯ ಪುಟ ೨೪೩. ಗರವೆಸೆಯದ ಪರಮಾತ್ಮ. ಗರವೆಸೆಯುವುದೆಂದರೆ, ಐನ್‌ಸ್ಟೈನರ ಪರಿಭಾಷೆಯಲ್ಲಿ, ಸಂಖ್ಯಾಕಲನವಿಜ್ಞಾನದಲ್ಲಿ (statistics) ವಿಶ್ಲೇಷಿಸುವ ಸಂಭಾವ್ಯತೆಗೆ (probability) ಶರಣಾಗುವುದೆಂದರ್ಥ. ಪರಮಾತ್ಮ ಎಂದರೆ ನಿಸರ್ಗ. Subtle but not malicious ಈ ನುಡಿಕಟ್ಟನ್ನು ಮತ್ತೆ ಮತ್ತೆ ಅವರು ಬಳಸುತ್ತಿದ್ದರು—ಸೂಕ್ಷ್ಮಾತಿಸೂಕ್ಷ್ಮ ಆದರೆ ಕಾಪಟ್ಯರಹಿತ. ನಿಸರ್ಗದ ಸಂರಚನೆಯಲ್ಲಾಗಲೀ ವಿದ್ಯಮಾನಗಳಲ್ಲಾಗಲೀ ಮಾನವಚಿಂತನೆ ಗ್ರಹಿಕೆ ಅರಿವುಗಳಿಗೆ ನಿಲುಕದ ಬಲು ನವುರು ಸಂಗತಿಗಳಿರಬಹುದು. ಆದರೆ ಅವು ಮಾನವನ ಅರಿವಿಗೆ ಬರತಕ್ಕದ್ದಲ್ಲ ಎಂಬ ಕುಹಕತೆ, ವಂಚನೆ ಅಥವಾ ಮೋಸ ಭಾವನೆ ನಿಸರ್ಗಕ್ಕಿಲ್ಲ. ಅರ್ಥಾತ್, ನಿಸರ್ಗ ಸ್ವಂತ ನಿಯಮಾನುಸಾರ (ಮಾನವನಿಗೆ ಯಾವುದೇ ರೀತಿ ಶರಣಾಗದೇ ಅಥವಾ ಆತನನ್ನು ಅವಲಂಬಿಸದೆ) ವರ್ತಿಸುತ್ತಿರುವುದು. ಸಂಭಾವ್ಯತೆ ಬಗ್ಗೆ ನೋಡಿ ಪುಟ ೧೫೧ ಮತ್ತು ೧೫೯. ಅನುಬಂಧ ೨ನ್ನೂ ನೋಡಬಹುದು.

೬೦. ಪುಟ ೨೪೬. ಮೂಲಬಿಂದು = origin. ಪ್ರೀಯೂನಿವರ್ಸಿಟಿ ವಿದ್ಯಾರ್ಥಿಗಳು analytical or coordinate geometry ಅಂದರೆ ಬೈಜಿಕ ಜ್ಯಾಮಿತಿ ಕಲಿಯುತ್ತಾರೆ. ಒಂದು ಆಯಾಮದ (dimension) ಸರಳರೇಖೆಯಲ್ಲಿ, ಎರಡು ಆಯಾಮಗಳ ಸಮತಲದಲ್ಲಿ (plane) ಅಥವಾ ಮೂರು ಆಯಾಮಗಳ ಆಕಾಶದಲ್ಲಿ (space) ಬಿಂದುಗಳನ್ನು ನಿರ್ದೇಶಿಸುವ ಸಲುವಾಗಿ ಸ್ವೇಚ್ಛೆಯಂತೆ (ಅಂದರೆ ಅನುಕೂಲವಾದಲ್ಲಿ) ಮೂಲಬಿಂದುವನ್ನು ಆಯ್ದು ಇದರಲ್ಲಿ ಸಂಧಿಸುವ ಮತ್ತು ಪರಸ್ಪರ ಲಂಬವಾಗಿರುವ (ಸಮತಲವನ್ನು ಪರಿಶೀಲಿಸುವಾಗ) ಎರಡು ಅಥವಾ (ಆಕಾಶವನ್ನು ಪರಿಶೀಲಿಸುವಾಗ) ಮೂರು ಸರಳರೇಖೆಗಳನ್ನು ನಿರ್ಧರಿಸಲಾಗುವುದು. ಇವು ಅಕ್ಷಗಳು. ಬಿಂದುವಿನ address (ವಿಳಾಸ) ತಿಳಿಸಲು ಈ ಏರ್ಪಾಡು ಅಗತ್ಯ.

೬೧ ಪುಟ ೨೫೨. ರಾಜಕಾರಣಿ-ಆಡಳಿತ-ವಿಜ್ಞಾನಿ ಸಂಬಂಧದಲ್ಲಿ ಯಾವುದೇ ಕಾರಣಕ್ಕೆ ಬಿರುಕು ತಲೆದೋರಿದರೆ ವಿಜ್ಞಾನಿ ಹೇಗೆ ಮೂಕ ಬಲಿಪಶು ಆಗುತ್ತಾನೆ ಎಂಬುದಕ್ಕೆ ಓಪನ್‌ಹೀಮರ್ ಪ್ರಕರಣ ಇನ್ನೂ ಒಂದು ನಿದರ್ಶನ. ಮೆಕಾರ್ಥಿತ್ವ ಇದನ್ನು ಪ್ರತೀಕಿಸುತ್ತದೆ : ವಿಜ್ಞಾನಿಗಳ ಆರ್ಜವ ಕುರಿತ ವಿನಾಕಾರಣ ಸಂದೇಹ ಮತ್ತು ಈ ಸಂದೇಹದ ವಿಸ್ತರಣೆಯಾಗಿ ಅವರ ಮೇಲೆ ಗೂಬೆ ಕೂರಿಸುವುದು. *Brighter than A Thousand Suns* ಪುಸ್ತಕದಲ್ಲಿಯೂ *The Oppenheimer Case* (ಲೇಖಕ Philip M. Stern—Harper and Row Publishers) ಪುಸ್ತಕದಲ್ಲಿಯೂ ಈ ಬಗ್ಗೆ ವಿವರಣೆ ಉಂಟು. ನಿಜ, ರಾಜಕಾರಣದ ಇಸ್ಪೀಟ್-ಎಲೆ-ನಿಲಯವನ್ನು ವಿಜ್ಞಾನದ ನಿರಪೇಕ್ಷ ನಿರ್ಮಾಣ ಘಟಕಗಳಿಂದ ಕಟ್ಟಿಲ್ಲ. ವಿಜ್ಞಾನದಲ್ಲಿ ಸಲ್ಲುವ ನಿಯಮಗಳು ರಾಜಕಾರಣದಲ್ಲಿ ಸಲ್ಲುವುದಿಲ್ಲ. ಮನಹಟ್ಟನ್ ಯೋಜನೆಯ ಆರಂಭದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನೀಲ್ಸ್ ಬೋರ್ ಕೂಡ ಐನ್‌ಸ್ಟೈನರಷ್ಟೇ ಶಾಂತಿಪ್ರಿಯರು. ಮಾನವಪ್ರೇಮಿಗಳು, ಸಹೃದಯರು. ಆ ದಿನಗಳಲ್ಲಿ (೧೯೪೦ರ ದಶಕದ ಆರಂಭದಲ್ಲಿ) ಇವರ ಚಿಂತನೆ ಹರಿದದ್ದು ಹೀಗೆ: ಇಂದಲ್ಲ ನಾಳೆ ಮಾನವನ ವಶವಾಗಲಿರುವ ಪರಮಾಣುಶಕ್ತಿಯನ್ನು ಹನನಕಾರ್ಯಕ್ಕೆ ದುರ್ವಿನಿಯೋಗಿಸದೆ ಉದ್ಧಾರಕಾರ್ಯಕ್ಕೆ ಸದ್ವಿನಿಯೋಗಿಸುವುದು ಹೇಗೆ ? ಪ್ರಪಂಚದ ಮೂರು ಮುಖ್ಯ ಶಕ್ತಿಶಾಲಿ ರಾಷ್ಟ್ರಗಳಾದ ಅಮೆರಿಕ, ಇಂಗ್ಲೆಂಡ್ ಮತ್ತು ರಶ್ಯ ಸದ್ಯ ಯುದ್ಧದಲ್ಲಿ ಜಯಗಳಿಸಬೇಕು ಎಂಬ ಸೀಮಿತೋದ್ದೇಶದ ಸಿದ್ಧಿಗಾಗಿ ಸಹಕರಿಸುತ್ತಿವೆ. ಆದರೆ ಯುದ್ಧಾನಂತರ ಪ್ರಪಂಚ ಎರಡು ವಿರುದ್ಧ ಶಕ್ತಿ ಬಣಗಳಾಗಿ ಒಡೆದುಹೋಗುವುದು ಖಂಡಿತ. ಆಗ ಪ್ರತಿಯೊಂದು ಬಣವೂ ತನ್ನ ಹಿತಾಸಕ್ತಿಯ ಮೂಗಿನ ನೇರವೇ ವರ್ತಿಸುತ್ತಿರುವುದು. ಇಂಥ ಅಹಿತಕರ ಪೈಪೋಟಿ ಸನ್ನಿವೇಶದಲ್ಲಿ ಪರಮಾಣುಶಕ್ತಿ ಯಾವುದೇ ಒಂದು ಬಣದ ಸೀಮಿತ ಸೊತ್ತು ಆಗಬಾರದು, ಮಾನವಕೋಟಿಯ ಸಾರ್ವಜನಿಕ ನ್ಯಾಸವಾಗಬೇಕು. ಆಗ ಮಾತ್ರ ಪ್ರಪಂಚಕಲ್ಯಾಣ ಸಾಧ್ಯವಾದೀತು. ಸದ್ಯ

ಪರಮಾಣುಶಕ್ತಿ ಬಸಿತ ಕುರಿತಂತೆ ಯಶಸ್ಸಿನ ತುತ್ತತುದಿಯ ಮಜಲಿನಲ್ಲಿರುವ ಅಮೆರಿಕ ಮತ್ತು ಇಂಗ್ಲೆಂಡ್ ಸ್ವಪ್ರೇರಣೆಯಿಂದ ಮುಂಬಂದು ತಮ್ಮ ರಹಸ್ಯಜ್ಞಾನವನ್ನು ರಶ್ಯದ ಜೊತೆ ಹಂಚಿಕೊಳ್ಳುವುದೊಂದೇ ಆ ದೇಶದ ವಿಶ್ವಾಸ ಗಳಿಸಲು ಇರುವ ಹಾದಿ. ಈ ತೆರನಾಗಿ ಬೋರ್ ಯೋಚಿಸಿದರು. ಎಂದೂ ರಾಜಕಾರಣಿ ಆಗಿರದಿದ್ದ ಬೋರ್ ಈ ಉದ್ದೇಶಸಾಧನೆಗಾಗಿ ರಾಜಕಾರಣಕ್ಕೆ ಇಳಿಯಬೇಕಾಯಿತು. ಅಮೆರಿಕಾಧ್ಯಕ್ಷ ರೂಸ್‌ವೆಲ್ಟ್ ಏನೋ ಬೋರರ ಪ್ರಾಮಾಣಿಕ ಚಿಂತನೆಯ (ಮನುಕುಲದ ಮನಸ್ಸಾಕ್ಷಿಯ ಸೂಕ್ಷ್ಮ ಸ್ಪಂದನದ) ಪ್ರಖರತೆಯಿಂದ ಪ್ರಭಾವಿತರಾಗಿ ಇಂಗ್ಲೆಂಡಿನ ಪ್ರಧಾನಿ ಚರ್ಚಿಲ್ ಜೊತೆ ಈ ವಿಷಯ ಚರ್ಚಿಸಲು ಸೂಚಿಸಿದರು, ಮತ್ತು ಅವರಿಗೆ ತಲಪಿಸಲು ಒಂದು ಸಂದೇಶವನ್ನೂ ನೀಡಿದರು. ಬೋರರಿಗೆ ಚರ್ಚಿಲ್ಲರ ಭೇಟಿ ತುಂಬ ಪ್ರಯಾಸದಿಂದ ಒದಗಿತು (ಮೇ ೧೯೪೪). ಆದರೆ ಪರಿಸ್ಥಿತಿ ತೀರ ಪ್ರತಿಕೂಲವಾಗಿ ಹದಗೆಟ್ಟಿತು. ಆರಂಭದಲ್ಲೇ ವಿಷಯಾಂತರವಾಗಿ ಬೋಳೆ ಸ್ವಭಾವದ ಬೋರರಿಗೆ ವಾದ ಮಂಡಿಸಲು ಅವಕಾಶವೇ ದೊರೆಯಲಿಲ್ಲ. ಇತ್ತ ಪ್ರಚಂಡ ರಾಜಕಾರಣಿ-ಮುತ್ಸದ್ದಿ ಚರ್ಚಿಲ್ಲರಿಗೆ ಈ ಮುಗ್ಧ ವಿಜ್ಞಾನಿಯ ಆತ್ಮ ನಿವೇದನೆ ಆಲಿಸುವ ತಾಳ್ಮೆ ಇರಲಿಲ್ಲ. ಈ ವಿಫಲ ಸಂದರ್ಶನದ ಕೊನೆಯಲ್ಲಿ ಹತಾಶ ಬೋರ್ ಒಂದು ಮಾತು ಹೇಳಿದರು : "ನಾನು ಹೇಳಬೇಕಾದುದೆಲ್ಲವನ್ನೂ ಕಾಗದದಲ್ಲಿ ಬರೆದು ನಿಮಗೆ ಕಳಿಸಬಹುದೇ ?" ಚರ್ಚಿಲ್ ಮಾರ್ನುಡಿದರು : "ನಿಮ್ಮಿಂದ ಪತ್ರ ಬರುವುದು ನನಗೆ ಸಲ್ಲುವ ಗೌರವವೆಂದು ಭಾವಿಸಿದ್ದೇನೆ. ಆದರೆ ರಾಜಕಾರಣದ ವಿಚಾರವಾಗಿ ಮಾತ್ರ ಅಲ್ಲ." ವಿಜ್ಞಾನಿಯ ಪರಿಶ್ರಮದ ಪಕ್ವ ಫಲ ನಮಗೆ ಬೇಕೇಬೇಕು. ಆದರೆ ಆತನ ಜೀವನಧರ್ಮದ ಸಾರವಾಣಿ ಮಾತ್ರ ಬೇಡವೇ ಬೇಡ—ಇದು ಸಾಧಾರಣವಾಗಿ ಎಲ್ಲ ಕಾಲಗಳಲ್ಲಿ ರಾಜಕಾರಣಿಗಳ ನಿಲವು. ಬೋರರನ್ನು ದಸ್ತಗಿರಿ ಮಾಡಿಸಬೇಕೆಂದು ಚರ್ಚಿಲ್ ಒಮ್ಮೆ ಯೋಚಿಸಿದ್ದಿತ್ತು. ಬುದ್ಧ, ಸಾಕ್ರಟೀಸ್, ಐನ್‌ಸ್ಟೈನ್ ಅಥವಾ ಬೋರ್ ಎಂದೂ ಸಮಕಾಲೀನವಾಗಿ ಪ್ರಸ್ತುತರಾಗಲಿಲ್ಲ.

೬೨ ಪುಟ ೨೫೪. ಜಾನ್ ಎಲ್. ಸಿಂಗ್ ಅವರ ಮೂಲ ಪತ್ರದಲ್ಲಿಯ ಒಂದು ಇಂಗ್ಲಿಷ್ ವಾಕ್ಯ ವಿಶೇಷವಾಗಿ ಉಲ್ಲೇಖಾರ್ಹವಾಗಿದೆ : "The modern theory of special relativity began, not with Einstein, but with Hermann Minkowski, a former teacher of Einstein, of whom he held a rather poor opinion." ಇಲ್ಲಿ ಯಾರು (ಮಿಂಕೋವ್ಸ್ಕೀ ಅಥವಾ ಐನ್‌ಸ್ಟೈನ್) ಯಾರ ಬಗೆಗೆ (ಐನ್‌ಸ್ಟೈನ್ ಅಥವಾ ಮಿಂಕೋವ್ಸ್ಕೀ) ರಿಕ್ತ ಅಭಿಪ್ರಾಯ ತಳೆದಿದ್ದರು ? ಇಂಗ್ಲಿಷ್ ಭಾಷೆಯ ಜಾಯಮಾನ, ನುಡಿಕಟ್ಟು ಮುಂತಾದವು ಭಾರತೀಯರಿಗೆ (ನನಗಂತೂ) ಗ್ರಂಥಗಳಿಂದ ಕಲಿತು ಬಂದಂಥವು. ವ್ಯಾಕರಣಾತೀತ ಧ್ವನಿ ಅರಿಯಲು ಮೂಲ ಲೇಖಕನ ಭಾವ ತಿಳಿಯುವುದೊಂದೇ ಮಾರ್ಗ. ಇತರ ಲಿಖಿತ ಸಾಕ್ಷ್ಯಾಧಾರಗಳಿಂದ 'ಐನ್‌ಸ್ಟೈನ್ ಬಗೆಗೆ ಮಿಂಕೋವ್ಸ್ಕೀಯವರಿಗೆ ಸದಭಿಪ್ರಾಯವಿರಲಿಲ್ಲ' ಎಂದು ತೀರ್ಮಾನಿಸಿ (ನೋಡಿ ಪುಟ ೨೫) ಖುದ್ದು ಸಿಂಗ್ ಅವರಿಗೇ ಪತ್ರ ಬರೆದು (೧೪-೬-೧೯೭೯) ಈ ತೀರ್ಮಾನ ಸರಿ ಎಂದು ಸ್ಥಿರೀಕರಣ ಪಡೆದಿದ್ದೇನೆ. (ನೋಡಿ ಅನುಬಂಧ ೧)

೬೩. ಪುಟ ೨೫೫. ದೇವರ ಬಗ್ಗೆ ಐನ್‌ಸ್ಟೈನ್ ಏನು ಅಭಿಪ್ರಾಯ ತಳೆದಿದ್ದರು ? "ಪ್ರತಿಯೊಂದು ಘಟನೆಯೂ ನಿಸರ್ಗನಿಯಮಗಳಿಂದ ನಿರ್ಧರಿತವಾಗಿರುವುದೆಂಬ ಆಧಾರಭಾವನೆಯ ಮೇಲೆ ವೈಜ್ಞಾನಿಕ ಸಂಶೋಧನೆ ನಿಂತಿದೆ. ಎಂದೇ ಇದು ಮನುಷ್ಯ ವರ್ತನೆಗಳನ್ನು ಕುರಿತು ಕೂಡ ಅಷ್ಟೇ ನಿಜವಾಗಿದೆ. ಪರಿಸ್ಥಿತಿ ಹೀಗಿರುವಾಗ, ಪ್ರಾರ್ಥನೆ ಸಲ್ಲಿಸಿ ಪರಾತ್ಪರ ವಸ್ತುವೊಂದಕ್ಕೆ ನಮ್ಮ ಇಚ್ಛೆಯನ್ನು ನಿವೇದಿಸಿ—ಘಟನೆಗಳ ಮೇಲೆ ಪ್ರಭಾವ ಬೀರಬಹುದೆಂಬುದನ್ನು ಸಂಶೋಧಕ-ವಿಜ್ಞಾನಿ ಗಂಭೀರವಾಗಿ ಏನೂ ಪರಿಗಣಿಸಲಾರ" ಎಂದು ಐನ್‌ಸ್ಟೈನ್ ಬರೆದರು(೧೯೩೬). ಇದೇ ಪತ್ರವನ್ನು ಮುಂದುವರಿಸುತ್ತ ವಿವರಣೆ ಕೂಡ ನೀಡಿದರು: "ಆದರೆ ಈ ನಿಯಮಗಳನ್ನು ಕುರಿತ ನಮ್ಮ ವಾಸ್ತವಜ್ಞಾನ ಕೇವಲ ಅಪರಿಪೂರ್ಣ ಮತ್ತು ಆಂಶಿಕ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಹೀಗಾಗಿ, ವಸ್ತುತಃ ಮೂಲಾಧಾರವಾದ ಸರ್ವಪರಿಗ್ರಾಹಿ ನಿಸರ್ಗನಿಯಮಗಳ ಅಸ್ತಿತ್ವದ ಬಗೆಗಿನ ವಿಶ್ವಾಸವಾದರೂ ಒಂದು ತರಹದ ಭರವಸೆಯ ಮೇಲೆಯೇ ನೆಲಸಿರುವುದಾಗಿದೆ. ಇಂತಿದ್ದರೂ ವೈಜ್ಞಾನಿಕ ಸಂಶೋಧನೆಗೆ ಈ ತನಕ ಒದಗಿರುವ ಯಶಸ್ಸು ಈ ಭರವಸೆಯನ್ನು ಬಲುಮಟ್ಟಿಗೆ ಸಮರ್ಥಿಸಿದೆ.

ಇತ್ತ ವಿಜ್ಞಾನದ ಅನ್ವೇಷಣೆಯಲ್ಲಿ ಗಾಢವಾಗಿ ಮಗ್ನನಾಗಿರುವ ಪ್ರತಿಯೊಬ್ಬನಿಗೂ ವಿಶ್ವದ ನಿಯಮಗಳ ಹಿಂದೆ ಒಂದು ಚೇತನ ಸ್ಪಂದಿಸುತ್ತಿದೆಯೆಂಬ ಭಾವ ದೃಢಪಡುತ್ತದೆ. ಅದೆಂಥ ಚೇತನ ? ಮಾನವನದಕ್ಕಿಂತ ಅದೆಷ್ಟೋ ಅಧಿಕ ತ್ರಾಣಿ ಚೇತನ ! ತೀರ ಪರಿಮಿತ ಸಾಮರ್ಥ್ಯವಂತರಾದ ನಾವು ಮನುಷ್ಯರು ಅದರ ಸಾನ್ನಿಧ್ಯದಲ್ಲಿ ವಿನೀತರಾಗುವುದೊಂದೇ ಶರಣು. ಹೀಗೆ ವಿಜ್ಞಾನದ ಅನ್ವೇಷಣೆ ವಿಶಿಷ್ಟ ಬಗೆಯ ಒಂದು ಧಾರ್ಮಿಕ ಭಾವನೆಯತ್ತ ನಮ್ಮನ್ನು ಒಯ್ಯುತ್ತದೆ. ಈ ಭಾವನೆ ಮುಗ್ಧ ವ್ಯಕ್ತಿಯೊಬ್ಬನ ಧಾರ್ಮಿಕ ಶ್ರದ್ಧೆಗಿಂತ ಪೂರ್ತಿ ಬೇರೆಯೇ ಆದದ್ದು."

೬೪. ಪುಟ ೨೬೮. ನ್ಯೂಟನ್ ಬರೆದಿದ್ದಾರೆ : "ಪ್ರಪಂಚಕ್ಕೆ ನಾನು ಹೇಗೆ ಕಾಣುತ್ತೇನೋ ಅರಿಯಲಾರೆ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ ನಾನು ಕಡಲ ಕಿನಾರೆಯಲ್ಲಿ ಆಟವಾಡುತ್ತಿದ್ದು, ಆಗ ಈಗ ತುಸು ಅಡ್ಡಾಡಿ, ಸಾಧಾರಣ ಹರಳಿಗಿಂತ ಅಥವಾ ಚಿಪ್ಪಿಗಿಂತ ಕೊಂಚ ನುಣುಪಾದ ಅಥವಾ ಚೆಲುವಾದ ಒಂದನ್ನು ಹೆಕ್ಕುತ್ತಿರುವ ಕಿರಿಹೈದ ಮಾತ್ರ. ಇತ್ತ ನನ್ನಿಯ ಹೆಗ್ಗಡಲಾದರೋ ಪೂರ್ತಿ ಅನಾವಿಷ್ಕೃತವಾಗಿ ನನ್ನೆದುರು ಚೆಲ್ಲಿಕೊಂಡಿದೆ."

೬೫ ಪುಟ ೨೬೮. ಇಲ್ಲಿ ಅಡಿಗರ ಸುಪರಿಚಿತ ಕವನಪಂಕ್ತಿಗಳನ್ನು ಉಲ್ಲೇಖಿಸುವುದರ ಔಚಿತ್ಯವನ್ನು (ಅಥವಾ ಲೇಖಕನಾದ ನನ್ನ ರಸಪ್ರಜ್ಞೆಯನ್ನು) ಸಾಹಿತ್ಯ ವಿಮರ್ಶಕರು ಟೀಕಿಸಿದ್ದುಂಟು (ಈ ಪುಸ್ತಕದ ಮೊದಲ ಆವೃತ್ತಿ ಪ್ರಕಟವಾದ ಬಳಿಕ). "ಕವಿ ಅಡಿಗರು ಈ ಪದ್ಯವನ್ನು ಬರೆದ ಸಂದರ್ಭಕ್ಕೆ ವಿರುದ್ಧವಾಗಿದೆ ಇಲ್ಲಿಯ ಸಂದರ್ಭ: ಅಲ್ಲಿ ಉಲ್ಲಾಸ, ಇಲ್ಲಿ ಶೋಕ." ಇದು ಅವರ ವಾದದ ಸಾರ. ಅವರ ಅಭಿಪ್ರಾಯ ಅವರಿಗೆ. ಆದರೆ ಯಾವುದೇ ಪದ್ಯವನ್ನು ಕವಿ ಬರೆದ ಸಂದರ್ಭ ಅಥವಾ ಆಗಿನ ಅವನ ಮಾನಸಿಕ ಸ್ಥಿತಿ ಅದನ್ನು ಓದಿ ಆನಂದಿಸುವ ರಸಿಕನಿಗೆ ಅಪ್ರಸ್ತುತವಾಗುತ್ತದೆ. ಈ ಪದ್ಯ 'ಮೋಹನ ಮುರಲಿ' ನನಗೆ ತೀರ ಪರಿಚಿತವೂ ಆತ್ಮೀಯವೂ ಆಗಿತ್ತು. ಆಗಿದೆ ನಿಜ. ಆದರೆ ಪ್ರಸಕ್ತ ಸಂದರ್ಭದಲ್ಲಿ ಅದನ್ನು ಉಲ್ಲೇಖಿಸಲು ಪ್ರೇರಣೆ ಒದಗಿದ್ದು ತರ್ಕಾತೀತವಾದ (ಅಥವಾ ನನಗೆ ತಿಳಿಯದ) ಒಂದು ಕಾರಣದಿಂದ. ಐನ್‌ಸ್ಟೈನ್ ಜೀವನದ ಅಂತಿಮಾಂಕವನ್ನು ಹೇಗೆ ಬರೆಯಬೇಕು ? ಇದು ಕೇವಲ ಒಬ್ಬ ವ್ಯಕ್ತಿಯ ಮರಣವಲ್ಲ—ಒಂದು ಯುಗಪ್ರಜ್ಞೆಯ ಮಹಾನಿರ್ಯಾಣ. ವಿವಿಧ ವಿಧಾನಗಳನ್ನು ತಂತ್ರಗಳನ್ನು ಪ್ರಯೋಗಿಸಿದ್ದಾಯಿತು. ಹಲವು ವಾರಗಳ ಚಿಂತನ ಲೇಖನ ಪ್ರಕ್ರಿಯೆ ಸಾಗಿ ನನಗೆ ತೃಪ್ತಿಕೊಟ್ಟ ಪ್ರಸಕ್ತ (ಹಸಿ ಮಡಕೆ-ನೀರು ಬಸಿತ) ನಿರೂಪಣೆ ಸಿದ್ಧಿಸಿತು—ಬನೇಶ್ ಹಾಫ್‌ಮನ್ ಉಲ್ಲೇಖಿದವರೆಗೆ. ಆದರೆ ಚರಮಗೀತೆ ? ಎಂದೋ ಒಂದು ನಸು ಮುಂಜಾನೆಯ ಗಾಢ ನಿದ್ರೆಯ ವೇಳೆ ಈ ಹಾಡು ಸ್ಪಷ್ಟವಾಗಿ 'ಕೇಳಿಸಿತು.' ಅಲ್ಲಿಗೆ ನನ್ನ 'ಗಣಪತಿ ಕೈಂಕರ್ಯ' ಅಥವಾ 'ಕುಮಾರವ್ಯಾಸ ಸೇವೆ' ನನಗೆ ತೃಪ್ತಿ ಕೊಡುವಂತೆ ಮುಗಿಯಿತು.

# ವಿಷಯ-ಪುಟಸೂಚಿ


ಅಂತರ್ಬೋಧೆ, ಪ್ರತಿಭಾನ intuition ೧೭, ೪೩, ೪೪, ೮೮, ೨೭೧
ಅಂತೋಣಿ ಡಿ ಮೆಲ್ಲೊ ೨೭೮
ಅಂಧಶ್ರದ್ಧೆ, ಮೂಢನಂಬಿಕೆ superstition ೨೭೯
ಅಂಬಿಕಾತನಯದತ್ತ, ದ. ರಾ. ಬೇಂದ್ರೆ ೧೮, ೨೫, ೬೬, ೨೧೯
ಅಕ್ಕಮಹಾದೇವಿ ೧೬೫
ಅಗತ್ಯತೆ longing ೨೮೭
ಅಚೋಷಿತ untasted ೧೧೨
ಅಣು molecule ೧೫೦, ೧೫೧
ಅತೀಂದ್ರಿಯತೆ extrasensory perception ೧೨೬
ಅತ್ರಿಸೂನು ೧೫, ೨೧, ೨೬, ೪೪, ೯೧, ೧೦೧, ೧೯೬, ೨೦೫, ೨೫೫, ೨೬೪, ೨೬೮, ೨೭೯, ೨೯೧, ೨೯೯, ೩೦೦, ೩೦೮, ೩೧೨, ೩೩೨
ಅಧೋರಚನೆ infrastructure ೭೨
ಅಧ್ಯಾತ್ಮ spirituality ೨೮೬
ಅನಂತಾಲ್ಪ, ಅನಂತಸೂಕ್ಷ್ಮ infinitesimal ೨೯೪
ಅನಿರ್ಧರಣೀಯ indeterminate ೨೯೪
ಅನಿಲಕೋಷ್ಠ gas chamber ೧೭೯
ಅನಿಲಗಳ ಚಲನಸಿದ್ಧಾಂತ kinetic theory of gases ೧೫೦
ಅನಿಶ್ಚಿತತಾ ತತ್ತ್ವ Principle of Uncertainty ೨೪೨, ೨೪೩, ೩೦೭, ೩೧೦
ಅನುಭವ experience ೩೧
ಅನುಭವಜನ್ಯನಿಯಮ empirical law ೨೯೩
ಅನುಭಾವ mysticism ೧೨೬
ಅನ್ವಿತ ವಿಜ್ಞಾನ applied science ೨೯೮
ಅನ್ವಿತ ವಿಜ್ಞಾನಿ applied scientist ೧೧೧
ಅನ್ವೇಷಣೆ exploration ೨೯೨
ಅಪರವಿ aphelion ೫೪
ಅಭಿಜಾತ classical ೨೪೦
ಅಭಿಜಾತ ಬಲವಿಜ್ಞಾನ classical mechanics ೩೭
ಅಭಿವರ್ಧನೆ development ೨೩೮
ಅಮೂರ್ತ abstract ೧೪
ಅಯೂಕ್ಲಿಡ್ ಜ್ಯಾಮಿತಿ non-Euclidean geometry ೨೯೩, ೩೦೧
ಅರಿವು, ಜ್ಞಾನ, ತಿಳಿವು knowledge ೨೭೯
ಅರಿಸ್ಟಾಟಲ್ (ಕ್ರಿಪೂ ೩೮೪-೩೨೨) ೧೪೪, ೨೯೫, ೨೯೯
ಅರೇಖೀಯ ವ್ಯವಸ್ಥೆ nonlinear system ೧೫೫
ಅರ್ರೇನಿಯಸ್, ಸ್ವಾಂಟೆ (೧೮೫೯-೧೯೨೭) ೧೪೮, ೧೫೧
ಅವಧಿ period ೧೫೩
ಅಷ್ಟಪೈಲು, ಬಹುಮುಖಿ x
ಅಸಾಂಪ್ರದಾಯಿಕ unconventional ೩೬
ಆಕಾಶ, ದೇಶ space ೨೫, ೧೨೪, ೩೧೫
ಆಕಾಶ ಮತ್ತು ಕಾಲ, ದೇಶ ಮತ್ತು ಕಾಲ space and time ೧೦೪
ಆಕಾಶ-ಕಾಲ, ದೇಶ-ಕಾಲ spacetime ೨೭೧
ಆಕಾಶಕಾಲ/ದೇಶಕಾಲ ಸಾತತ್ಯ spacetime continuum ೨೯, ೩೬
ಆರ್ಕಿಮಿಡೀಸ್ (ಕ್ರಿಪೂ ೨೮೭?-೨೧೨) ೩೨, ೫೧
ಆಕ್ಸಿಜನ್ oxygen ೧೫೦
ಆದ್ಯುಕ್ತಿ axiom ೩೦೦
ಆಧುನಿಕ modern ೨೪೦
ಆಧ್ಯಾತ್ಮಿಕತೆ/ಅಧ್ಯಾತ್ಮ spirituality ೩೦೩
ಆನುವಂಶಿಕತೆ heredity ೬೯, ೭೧
ಆರ್ನಾಲ್ಡ್, ಜೇಮ್ಸ್ ೨೨೭
ಆಯಾಮ dimension ೧೧
ಆಲೇಖ graph
ಆಲೇಖ್ಯ design
ಆವಿಷ್ಕರ್ತೃ discoverer ೧೦೮
ಆವಿಷ್ಕಾರ discovery ೧೪೬, ೨೫೫
ಆವಿಷ್ಟ charged ೧೫೭
ಆವೇಶ charge ೧೫೬, ೩೧೨
ಆಸ್ಟ್‌ವಾಲ್ಡ್, ವಿಲ್‌ಹೆಲ್ಮ್ (೧೮೫೩-೧೯೩೨) ೧೯, ೨೦

ಆ್ಯಂಟಿರಿಲೆಟಿವಿಟಿ ಕಂಪೆನಿ ೭೬-೭೯, ೮೫, ೮೭, ೧೩೭
ಆ್ಯಕ್ಟನ್, ಜಾನ್ ಎಮರಿಚ್ ಎಡ್ವರ್ಡ್ (೧೮೩೪-೧೯೦೨) ೨೩೩
ಆ್ಯಡ್ಲರ್, ಫ್ರೀಡರಿಷ್ (೧೮೭೯-೧೯೬೦) ೧೮, ೩೪
ಇನ್‌ಫೆಲ್ಡ್, ಲೀಪಾಲ್ಡ್ (೧೮೯೩-೧೯೬೮) ೭೧, ೧೯೫, ೨೦೫-೨೦೮, ೨೧೧-೨೧೬
ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್‌ಡ್ ಸ್ಟಡಿ ೧೯೨, ೧೯೯
ಈಥರ್ ೮೬, ೧೦೮, ೨೭೦
ಈಥರ್ ಮತ್ತು ಸಾಪೇಕ್ಷತಾಸಿದ್ಧಾಂತ ೮೯
ಈಥರ್ ಸಮಸ್ಯೆ ೨೧, ೨೨
ಈಬರ್ಟ್, ಕಾರ್ಲ್ ಫ್ರೀಡ್ರಿಚ್ (೧೮೭೧-೧೯೨೫) ೬೪, ೬೫, ೧೨೭
ಈಶೋಪನಿಷತ್ತು ೧೪೫
ಉತ್ತರದಾಯಿತ್ವ accountability ೨೭೯
ಉತ್ಕೃಷ್ಟತೆ excellence ೨೭೯
ಉತ್ಕೇಂದ್ರತೆ eccentricity ೧೫೩
ಉತ್ಸರ್ಜನೆ emission ೧೧೫, ೨೨೦, ೨೨೪
ಉಪಜ್ಞೆ invention ೨೧, ೧೨೩, ೨೧೫
ಉಪಜ್ಞೆಕಾರ inventor ೧೦೭, ೧೧೧, ೧೪೫
ಉಪಪರಮಾಣವಿಕ subatomic ೬೧, ೧೧೪, ೧೧೫
ಉಪಸಮತೆ approximation ೧೫೩
ಉಮರ್ ಖಯ್ಯಾಮ್ (೧೧-೧೨ನೆಯ ಶತಮಾನ) ೬೦
ಉಷ್ಣ, ಶಾಖ heat ೨೭, ೩೦, ೧೫೦, ೩೦೬
ಉಷ್ಣತೆ, ತಾಪ temperature ೩೦, ೧೪೯, ೩೦೬
ಊಹನಾಪ್ರತಿಭೆ speculative genius ೩೨
ಊಹನೆ speculation ೨೦, ೬೧
ಋಗ್ವೇದ ೭೦
ಋತ the true ೨೮೬, ೩೦೯
ಎಕ್ಸ್‌ಕಿರಣಗಳು X-rays ೮೦, ೨೨೦, ೨೨೧
ಎಡಿಂಗ್ಟನ್, ಆರ್ಥರ್ (೧೮೮೨-೧೯೪೪) ೫೯, ೬೦, ೧೧೩, ೧೧೬, ೧೧೯, ೨೫೪
ಎಡಿಸನ್, ತಾಮಸ್ ಆಲ್ವ (೧೮೪೭-೧೯೩೧) ೧೧೧, ೧೧೨
ಎಪ್‌ಸ್ಟೈನ್, ಜೇಕಬ್ (೧೮೮೦-೧೯೫೯) ೧೯೮
ಎಲಿಝಬೆತ್, ಬೆಲ್ಜಿಯಮ್ಮಿನ ರಾಣಿ (೧೮೭೬-೧೯೬೫) ೨೦೨
ಎಲೆಕ್ಟ್ರಾನ್ electron ೬೧, ೭೭, ೧೧೪, ೧೧೫, ೨೪೨, ೩೦೨, ೩೧೨
ಎಲ್ಸಾ-ಐನ್‌ಸ್ಟೈನ್ ಮತ್ತು ಲಲಿತ-ಚಂದ್ರಶೇಖರ್ ಸಾದೃಶ್ಯ ೨೯೯, ೩೦೦
ಏಕಸ್ವ patent ೨೧
ಏಕಸ್ವ ಕಛೇರಿ ೧೫೦, ೨೧೭
ಏಕಾಂಗಿತ್ವ=ಮಾನಸಿಕವಾಗಿ ಒಂಟಿತನ, ಅಮೂರ್ತ ಗುಣ aloneness ೧೬೯
ಏಕಾಕಿತ್ವ=ದೈಹಿಕವಾಗಿ ಜನವಿದೂರ, ಮೂರ್ತ ಲಕ್ಷಣ loneliness ೧೬೯
ಏಕಾಣು ಜೀವಿಗಳು bacteria ೨೨೭
ಏಕೀಕೃತ ಕ್ಷೇತ್ರಸಿದ್ಧಾಂತ unified field theory ೧೫೫
ಏಕೀಕೃತ ಸಿದ್ಧಾಂತ, unified theory ೧೫೮, ೧೬೧, ೧೭೭, ೨೦೬, ೨೨೫
ಏರೆನ್‌ಫೆಸ್ಟ್, ಪಾಲ್ (೧೮೮೦-೧೯೩೩) ೨೪೪
ಏರೆನ್‌ಹಾಫ್ಟ್, ಫೆಲಿಕ್ಸ್ (೧೮೭೯-೧೯೫೨) ೯೦
ಐನ್‌ಸ್ಟೈನ್ ಆಕಾಶ Einstein space ೧೧೬
ಐನ್‌ಸ್ಟೈನ್, ಆಲ್ಬರ್ಟ್ (೧೮೭೯-೧೯೫೫)
ಅಮೆರಿಕದಲ್ಲಿ ೧೦೨-೧೧೩
"ಅವರೇಕೆ ಯೆಹೂದ್ಯರನ್ನು ದ್ವೇಷಿಸುತ್ತಾರೆ?" ೧೭೧, ೧೭೨
"ಆತ್ಮಚರಿತ್ರೆಯ ಟಿಪ್ಪಣಿಗಳು" ೨, ೩, ೧೬, ೧೭, ೨೪೧
ಇಂಗ್ಲೆಂಡಿನಲ್ಲಿ ೧೧೩-೧೨೦
ಇನ್‌ಫೆಲ್ಡ್ ಭೇಟಿ ೨೦೬-೨೧೧
ಇಸ್ರೇಲಿನ ಅಧ್ಯಕ್ಷತೆ ? ೨೫೨, ೨೫೩
ಉಡುಪು ೩೭
ಉನ್ನತ ಶಿಕ್ಷಣ ೧೩-೧೬
ಎಡಿಸನ್-ಮಾಯಾಲೋಕದಲ್ಲಿ ೧೧೧, ೧೧೨
ಏಕಸ್ವ ಕಛೇರಿ ೨೦, ೩೪, ೩೫
ಏಕೀಕೃತ ಸಿದ್ಧಾಂತಾನ್ವೇಷಣೆ ೧೬೦-೧೬೨
ಐವತ್ತು ೧೬೪
ಕಲೆ ಮತ್ತು ವಿಜ್ಞಾನ ಕುರಿತು ೪೪
'ಕಶೇರುರಜ್ಜು' (instinct) ಪಾತ್ರ ಕುರಿತು ೬೪-೬೬
ಕುರಿತ ಕಗ್ಗ ೧೧೭, ೧೧೮

ಗಣಿತ ಕುರಿತು ೧೬, ೧೭
ಗಾಂಧಿ ಬಗ್ಗೆ xvi, ೨೫೯-೨೬೨
ಜನನ ೧
ಜನಪ್ರಿಯ ವಿಜ್ಞಾನ ಕುರಿತು ೩೧೩
ಜಪಾನಿನಲ್ಲಿ ೧೩೪, ೧೪೦
ಜರ್ಮನಿ ಕುರಿತ ಪತ್ರಿಕಾ ಪ್ರಕಟಣೆ ೧೮೨
ಜೀನಿಯಸ್ ಬಗ್ಗೆ ೬೯, ೭೦
ಜೀವನಚರಿತ್ರೆ ೧೫
ಟೆಲ್ ಅವೀವ್‌ನಲ್ಲಿ ೪೭
ಡಾಕ್ಟೊರೇಟ್ ಪದವಿ ೩೧
ದೇವರಬಗ್ಗೆ ೧೫, ೧೬, ೪೦, ೪೫, ೬೧, ೬೯, ೭೦, ೧೬೨, ೨೧೩, ೨೪೩-೨೪೫, ೨೫೫, ೨೭೭, ೩೧೬, ೩೧೭
ಧರ್ಮ, ವಿಜ್ಞಾನ ಕುರಿತು ೨೭೯, ೨೮೩
ಧಾರ್ಮಿಕ ಶ್ರದ್ಧೆ ೧೧, ೧೬೮
ನಾಟ್ಸೀ ಪಿಡುಗು ೧೭೭
ನೊಬೆಲ್ ಪಾರಿತೋಷಿಕ ೧೪೫-೧೪೭
ನೊಬೆಲ್ ಪ್ರಶಸ್ತಿ ಸ್ವೀಕಾರ ೧೫೨, ೧೫೩
ನ್ಯೂಟನ್ ಬಗ್ಗೆ ೬೨-೬೪
ನ್ಯೂಯಾರ್ಕ್‌ನಗರದ ಸ್ವಾತಂತ್ರ್ಯಪ್ರದಾನ ೧೦೬
ಪರಕೀಯ ಪ್ರಜ್ಞೆ ೪೯
ಪರಮಾಣು ಬಾಂಬ್ ಪ್ರಕರಣ ೨೩೦, ೨೩೪, ೨೩೬-೨೩೮
ಪೌರತ್ವ ೧೩, ೧೫, ೧೮, ೭೩, ೮೭, ೮೮, ೧೭೪, ೧೮೩, ೧೮೪, ೧೯೯-೨೦೧
ಪ್ಯಾಲೆಸ್ಟೈನಿನಲ್ಲಿ ೧೪೦-೧೪೫
ಪ್ರಭುಶಕ್ತಿ ಕುರಿತು ೧೧
ಪ್ರಶಂಸೆ ಕುರಿತು ೨೫೩, ೨೫೪, ೨೫೬
ಪ್ರಶ್ಯನ್ ವಿಜ್ಞಾನ ಅಕ್ಯಾಡೆಮಿ ೧೮೩-೧೮೬
ಪ್ರಾಧ್ಯಾಪಕರಾಗಿ ೩೯
ಪ್ರಾಹಾವಿಶ್ವವಿದ್ಯಾಲಯದಲ್ಲಿ ೪೦
ಪ್ಲ್ಯಾಂಕ್ ಬಗ್ಗೆ ೩೭
ಪ್ಲ್ಯಾಂಕರಿಗೆ ಅಶ್ರುತರ್ಪಣ ೧೭೫
ಫ್ರಾನ್ಸಿನಲ್ಲಿ ೧೨೯-೧೩೪
ಬಾಲ್ಯ ೨, ೩, ೫
ಬೆಲ್ಜಿಯಮ್‌ರಾಜ ಮತ್ತು ರಾಣಿ (ನೋಡಿ : ಎಲಿಝಬೆತ್) ೧೮೬, ೧೮೭, ೧೯೦
ಬೋಧಿಸಿದ ಪಾಕವಿಧಿ ೯೦
ಬೌದ್ಧಿಕ ಸಹಕಾರಕ್ಕಾಗಿ ಅಂತಾರಾಷ್ಟ್ರೀಯ ಸಮಿತಿ ೧೩೪, ೧೩೫, ೧೩೭, ೧೩೮
ಭವಿಷ್ಯದ ಬಗೆಗೆ ಚಿಂತನೆ ೧೪, ೧೫
ಭೌತವಿಜ್ಞಾನ ಕುರಿತು ೧೭
ಮತಧಾರ್ಮಿಕ ನಂಬಿಕೆ ೨೫೫
ಮದುವೆ ೧೮, ೨೪
ಮರಣ ೨೬೭
ಮರಣ ಕುರಿತು ೨೫೬, ೨೬೫
ಮರುಮದುವೆ ೫೫
ಮಾನವನ ಹಕ್ಕು ಬಾಧ್ಯತೆ ೭೨
ಮೆಕಾರ್ಥಿತ್ವ ಕುರಿತು ೨೫೧
ಯೂರೋಪಿನಿಂದ ನಿಷ್ಕ್ರಮಣ ೧೯೯
ಯೆಹೂದ್ಯತ್ವದ ಅರಿವು ೯೩, ೯೫-೯೯, ೧೭೧
ರವೀಂದ್ರನಾಥ ಠಾಕೂರರ ಜೊತೆ ಸಂವಾದ ೧೬೯, ೧೭೦
-ರಸಲ್ ಘೋಷಣೆ ೨೬೪
ರೂಸ್‌ವೆಲ್ಟರಿಗೆ ಪತ್ರ ೨೩೦-೨೩೨, ೨೩೪, ೨೫೩
ವಂಶಾವಳಿ ೪
ವಿದ್ಯಾರ್ಥಿನಿಗೆ ಪತ್ರ ೧೧೦, ೧೧೧
ವಿವಾಹವಿಚ್ಛೇದನೆ ೫೬
ವಿಶೇಷ ಸಾಪೇಕ್ಷತಾ ಸಿದ್ಧಾಂತ Special theory of Relativity ೨೮
ವಿಶ್ವದ ನಿಗೂಢತೆ ೭೦
ಸಂಗೀತ ಕುರಿತು ೧೩೯
ಸಂಶೋಧನಪ್ರಬಂಧ ೧೯, ೨೪, ೨೫
ಸಾಪೇಕ್ಷತಾ ಸಿದ್ಧಾಂತ ಕುರಿತು ೧೫೩, ೧೫೪
ಸುಹಾಸ ಪ್ರಜ್ಞೆ ೬೮, ೭೧, ೮೨, ೮೬, ೮೯-೯೧, ೧೦೪, ೧೦೫, ೧೧೮, ೧೧೯, ೧೨೪-೧೨೭, ೧೭೭, ೧೯೨, ೧೯೮, ೨೦೦-೨೦೪, ೨೪೮, ೨೫೬, ೨೫೭
"ಸ್ವಮರಣವಾರ್ತೆ" ೨೪೧, ೨೪೨
ಶಾಂತಿ ಕುರಿತು ೫೧, ೧೩೪, ೧೩೮
ಶಿಕ್ಷಕ ೩೧-೩೪
ಶಿಕ್ಷಣ ೩, ೬-೧೦, ೧೨
ಹಸ್ತಪ್ರತಿಗಳ ಲಿಲಾವು ೨೩೪, ೨೩೫
ಐನ್‌ಸ್ಟೈನ್ (ಸಂಬಂಧಿಕರು)

ಇಲ್ಸೆ (೧೮೯೭-೧೯೩೪) ಬಲಮಗಳು
ಎಡುವರ್ಡ್ (೧೯೧೦-೬೫) ಮಗ ೪೬,೪೮, ೧೫೪
ಎಲ್ಸಾ (೧೮೭೬-೧೯೩೬) ಹೆಂಡತಿ ೪೫, ೪೭, ೫೬, ೮೯, ೯೧, ೧೦೫, ೧೨೬, ೧೪೪, ೧೬೩, ೧೭೬, ೧೯೧, ೨೦೩, ೨೦೭-೨೦೯
ಜೇಕಬ್ (೧೮೫೦-೧೯೧೦) ಚಿಕ್ಕಪ್ಪ ೧, ೯
ಪೌಲೀನ್ (೧೮೫೮-೧೯೨೦) ತಾಯಿ ೧, ೫-೭, ೧೦
ಮಾಜಾ (೧೮೮೧-೧೯೫೧) ತಂಗಿ, ೩, ೫, ೧೪, ೩೩, ೨೧೯
ಮಾರ್ಗಟ್ (೧೮೯೯-೧೯೮೬) ಬಲಮಗಳು ೧೯೪, ೧೯೫, ೨೦೯, ೨೬೪, ೨೬೬
ಮಿಲೇವಾ, ಮ್ಯಾರಿಕ್ (೧೮೭೫-೧೯೪೮) ಹೆಂಡತಿ ೧೮, ೩೯, ೪೫, ೪೬, ೪೮, ೫೬, ೧೫೪
ರೂಡಾಲ್ಫ್ (೧೮೪೩-೧೯೨೮) ೪೫, ೫೫
ಹರ್ಮನ್ (೧೮೪೭-೧೯೦೨) ತಂದೆ ೧, ೫, ೬, ೮, ೧೦, ೧೧, ೧೩
ಹ್ಯಾನ್ಸ್ ಆಲ್ಬರ್ಟ್ (೧೯೦೪-೭೩) ಮಗ xvi, ೪೬, ೪೮, ೨೬೬
'ಐನ್‌ಸ್ಟೈನ್ ಭವನ' ೧೬೫-೧೬೭
ಐನ್‌ಸ್ಟೈನ್ ಮತ್ತು ಇನ್‌ಫೆಲ್ಡ್ *Evolution of Physics* ಕೃತಿಯ ಆರಂಭ ಪರಿಚ್ಛೇದ ೩೦೧
'ಐನ್‌ಸ್ಟೈನತ್ವ : ಅವರ ವಂಚಕ ತೀರ್ಮಾನಗಳು ಮತ್ತು ಮೋಸಗಾರಿಕೆಗಳು' ೧೭೪
'ಐನ್‌ಸ್ಟೈನರ ವಿರುದ್ಧ ನೂರು ಲೇಖಕರು' ೧೭೩
*ಐವರು ವಿಜ್ಞಾನಿಗಳು* ೨೯೪, ೩೦೦
ಐಸೆನ್‌ಹಾರ್ಟ್, ಚರ್ಚಿಲ್ ೨೦೩
ಒಂದನೆಯ ಮಹಾಯುದ್ಧ ೫೦, ೭೨, ೯೪
ಓಪನ್‌ಹೀಮರ್, ರಾಬರ್ಟ್ (೧೯೦೪-೬೭) ೩೧೪, ೩೧೫
ಕಕ್ಷಾ ಚಿಪ್ಪು orbital shell ೨೨೪
ಕಕ್ಷೆ orbit ೫೪, ೨೮೪, ೨೯೫
ಕನಕದಾಸರು ೨೯೩
ಕಲನಶಾಸ್ತ್ರ calculus ೧೪, ೨೯೪
ಕಲ್ಪಣೆ quarry ೩೫
ಕಲ್ಯಾಣ the good ೨೮೬
ಕಾರ್ಯ work ೨೭
ಕಾರ್ಯಕಾರಣಸಂಬಂಧ cause-effect relation ೧೧, ೧೪೪, ೨೭೬, ೨೯೨
ಕಾರಕ agent ೨
ಕಾರಕ factor ೨೯೨
ಕಾರಣ cause ೨೮೫, ೨೯೨
ಕಾಲ time ೨೯
ಕಿಂಗ್ಸ್ಲೀ, ಚಾರ್ಲ್ಸ್ (೧೯೦೬ -?) ೯೪
ಕಿರ್ಖಾಫ್, ಗುಸ್ತಾವ್ ರಾಬರ್ಟ್ (೧೮೨೪-೮೭) ೧೭, ೨೯೪
ಕುತೂಹಲ curiosity ೨೫೫
ಕುಮಾರವ್ಯಾಸ ೧೭೬, ೩೧೧
ಕುವೆಂಪು ೧೩, ೨೩, ೨೬೬
ಕೃತ್ತಿಕಾ Pleiades ೬೦
ಕೃಷ್ಣವಿವರ black hole ೩೧೦
ಕೆಪ್ಲರ್, ಗ್ರಹಚಲನ ನಿಯಮಗಳು Kepler's laws of planetary motion ೨೯೫, ೨೯೬
ಕೆಪ್ಲರ್ ಯೋಹನ್ (೧೫೭೧-೧೬೩೦) ೨೦, ೧೯೦, ೨೯೦, ೨೯೫, ೨೯೬, ೩೦೦, ೩೦೯
ಕೆರ್, ರಾಯ್, ೩೧೦
ಕೇಂದ್ರ, centre ೫೪
ಕೈಸರ್, ರೂಡಾಲ್ಫ್ (೧೮೮೯-೧೯೬೪) ಐನ್‌ಸ್ಟೈನರ ಅಳಿಯ, ೧೩
ಕೈಸರ್ ವಿಲ್‌ಹೆಲ್ಮ್ ಇನ್‌ಸ್ಟಿಟ್ಯೂಟ್ ೪೫
ಕೈಸರ್, ವಿಲ್‌ಹೆಲ್ಮ್ (ಎರಡನೆಯ) (೧೮೫೯-೧೯೪೧) ೫೦, ೬೪
ಕೊಪರ್ನಿಕಸ್, ನಿಕೊಲಾಸ್ (೧೪೭೩-೧೫೪೩) ೬೯, ೭೫, ೧೦೨, ೧೨೫, ೧೪೪, ೩೦೧, ೩೦೪
ಕೊಲಂಬಸ್, ಕ್ರಿಸ್ಟೋಫರ್ (೧೪೫೧-೧೫೦೬) ೧೦೨, ೧೦೮
ಕೋಶ cell ೩೦೯
ಕ್ರಮವಿಧಿ programme ೨೮೪
ಕ್ಯಾಂಟರ್ಬರಿಯ ಆರ್ಚ್‌ಬಿಷಪ್ ೧೨೫, ೧೨೬
ಕ್ಯೂರಿ, ಜೂಲ್ಯೋ (೧೯೦೦-೫೮) ೨೬೩
ಕ್ಯೂರಿ, ಮೇರಿ (೧೮೬೭-೧೯೩೪) ೪೩, ೫೧, ೧೩೨, ೧೩೫, ೧೩೭, ೧೩೮, ೨೨೧
ಕ್ಲಾರ್ಕ್, ರೊನಾಲ್ಡ್ ೪೪
ಕ್ಲೈನರ್, ಆಲ್ಫ್ರೆಡ್ (೧೮೪೯-೧೯೧೬) ೩೧, ೩೩

ಕ್ಷೇತ್ರ field ೨೧೦
ಖಗೋಳವಿಜ್ಞಾನ astronomy ೧೧
ಖಗೋಳೀಯ ನಿಯಮಗಳು celestial laws ೨೯೯
ಖಗೋಳೀಯ ಬಲವಿಜ್ಞಾನ celestial mechanics ೨೭೨
ಖಭೌತವಿಜ್ಞಾನ astrophysics ೧೪೮
ಗಣಕ computer ೬೧
ಗಣಿತೀಯ ರೂಪ mathematical form ೩೦೦
ಗತಿವಿಜ್ಞಾನ dynamics ೨೭೦
ಗಾಂಧಿ, ಮಹಾತ್ಮ (೧೮೬೯-೧೯೪೮) ೬೭, ೧೭೮, ೨೫೪, ೨೫೯
ಗೀತೆ ೧೪೫, ೨೯೯
ಗುಣಕ (ಗುಣನಕಾರಿ) calculator ೬೧
ಗುರು Jupiter ೩೦೭
ಗುರುತ್ವ gravity ೩೧೧
ಗುರುತ್ವಾಕರ್ಷಣಕ್ಷೇತ್ರ gravitational field ೫೪, ೫೯, ೬೧, ೧೫೬
ಗುರುತ್ವಾಕರ್ಷಣ ತರಂಗ gravitational wave ೨೧೦-೨೧೩
ಗುರುತ್ವಾಕರ್ಷಣ ವಿಕಿರಣ gravitational radiation ೨೧೦, ೨೧೧
ಗುರುತ್ವಾಕರ್ಷಣ ಸಿದ್ಧಾಂತ gravitational theory ೫೩, ೨೭೧
ಗುರುತ್ವಾಕರ್ಷಣೆ gravitation ೧೬೩
ಗೆರ್ಕೀ, ಅರ್ನ್ಸ್ಟ್ (೧೮೭೮-೧೯೬೦) ೭೬, ೭೮, ೭೯
ಗೆಲಿಲಿಯನ್ ಬಲವಿಜ್ಞಾನ Galilean mechanics ೮೬
ಗೆಲಿಲಿಯೊ, ಗೆಲಿಲೀ (೧೫೬೪-೧೬೪೨) ೧೨೫, ೨೯೪, ೩೦೪, ೩೦೬, ೩೦೭
ಗೋಪಾಲಕೃಷ್ಣ ಅಡಿಗ ೬೭, ೨೬೭, ೩೦೭
ಗೌಸ್, ಕಾರ್ಲ್ ಫ್ರೆಡ್ರಿಚ್ (೧೭೭೭-೧೮೫೫) ೧೧೮
ಗ್ರಹ planet ೩೭
ಗ್ರಹಚಲನ ನಿಯಮಗಳು laws of planetary motion ೨೦, ೧೫೩
ಗ್ರಾಸ್‌ಮ್ಯಾನ್, ಮಾರ್ಸೆಲ್ (೧೮೭೮-೧೯೩೬) ೧೮, ೨೦, ೩೨, ೩೭, ೪೩, ೨೧೬, ೨೧೭
ಗ್ರಿಫಿತ್, ಬೈರನ್ ಎ. ೨೭೩
ಗ್ಯೊಥೇ, ಜಾನ್ ವೂಲ್ಫ್‌ಗಾಂಗ್ ಫಾನ್ (೧೭೪೯-೧೮೩೨) ೫೧
ಘನಾಕೃತಿ solid ೧೧
ಚಂದ್ರಶೇಖರ್, ಸುಬ್ರಹ್ಮಣ್ಯನ್ (೧೯೧೦-೯೫) ೩೧೦
ಚರ್ಚಿಲ್, ವಿನ್‌ಸ್ಟನ್ (೧೮೭೪-೧೯೬೫) ೩೧೬
ಚಪ್ಪಟೆ ಬಹುಸಂಚಯ flat manifold ೨೭೧
ಚರಸೋಪಾನ escalator ೨೯೨
ಚಲನಶಕ್ತಿ kinetic energy ೧೫೦
ಚಲನೆ motion ೨೬
ಚಲನೆಯ ಪ್ರಥಮ ನಿಯಮ first law of motion ೨೯೫
ಚಲಿಸುವ ಕಾಯಗಳ ವಿದ್ಯುದ್ಗತಿವಿಜ್ಞಾನ electrodynamics of moving bodies ೨೭೦
ಚಾಪ್ಲಿನ್, ಚಾರ್ಲಿ (೧೮೮೯-೧೯೭೭) ೧೦೩
ಚಿಹ್ನೆ sign
ಚೆಂಗಿಸ್ ಖಾನ್ ೧೭೯
ಚೌಕಟ್ಟು frame ೨೬, ೩೨, ೩೭
ಛಾಯಾಗ್ರಾಹಕ ಪೊರೆ photographic film ೨೨೦
ಜನಪ್ರಿಯ ವಿಜ್ಞಾನ ೨೧೫, ೨೫೪
ಜರ್ಮನ್ ನೈಸರ್ಗಿಕ ತತ್ತ್ವಜ್ಞಾನಿಗಳ ಅಧ್ಯಯನ ಕೂಟ Study Group of German Natural Philosophers ೭೪
ಜವಾಹರಲಾಲ್ ನೆಹ್ರು (೧೮೮೯-೧೯೬೪) ೧೯೪, ೨೬೭
ಜೀನ್ಸ್, ಜೇಮ್ಸ್ (೧೮೫೭-೧೯೪೬) ೧೧೪
ಜೀಸಸ್ ಕ್ರೈಸ್ಟ್ ೭, ೧೭೧, ೨೭೮
ಜೋಫ್ ಎ. ಎಫ್. (೧೮೮೦-೧೯೬೫) ೮೪
ಜ್ಞಾತೃನಿಷ್ಠ, ವ್ಯಕ್ತಿನಿಷ್ಠ subjective ೨೭೫
ಜ್ಞಾನಮೀಮಾಂಸೆ epistemology ೧೪೮, ೨೪೫
ಜ್ಞೇಯನಿಷ್ಠ, ವಸ್ತುನಿಷ್ಠ objective ೧೨೮, ೨೭೫
ಜ್ಯಾಮಿತಿ geometry ೯
ಜ್ಯೋತಿರ್ವರ್ಷ light-year ೬೭, ೩೦೧
ಝಿಯನಿಸಮ್ Zionism ೯೫-೧೦೦, ೧೦೨
ಝಿಯನಿಸ್ಟ್ ಚಳವಳಿ ೯೧-೯೪
ಝೀಲಾರ್ಡ್, ಲಿಯೊ (೧೮೯೮-೧೯೬೪) ೨೨೮-೨೩೨

ಟ್ರೈಟಸ್ (೪೦?-೮೧) ೧೪೨
ಟ್ರೂಮನ್, ಹ್ಯಾರಿ (೧೮೮೪-೧೯೭೨) ೨೩೬
ಡ ಸಿಟರ್ ಆಕಾಶ ೧೧೬
ಡಾಪ್ಲರ್, ಕ್ರಿಶ್ಚಿಯನ್ ಯೋಹನ್ (೧೮೦೮-೫೩) ೨೯೮
ಡಾಪ್ಲರ್ ಪರಿಣಾಮ ೨೯೭, ೨೯೮
ಡಾರ್ವಿನ್, ಚಾರ್ಲ್ಸ್ (೧೮೦೯-೧೮೮೨) ೬೯, ೩೦೧
ಡಿರಾಕ್, ಪಾಲ್ ಏಡ್ರಿಯನ್ ಮಾರಿಸ್ (೧೯೦೨-೮೭) ೨೨೫
ಡಿವಿಜಿ (ಡಿ. ವಿ. ಗುಂಡಪ್ಪ, ಮಂಕುತಿಮ್ಮ) ೩೦೯
ಡೀ ಬ್ರಾಗ್ಲೀ, ಲೂಯಿ ವಿಕ್ಟರ್ ಪಿಯರೆ ರೇಮಂಡ್ (೧೮೯೨-೧೯೮೭) ೫೭, ೨೭೦
ಡೆಮಾಕ್ರಿಟಸ್ (ಕ್ರಿಪೂಸು ೪೬೦ರಲ್ಲಿ ಬಾಳಿದವ) ೨೮೯
ಡೇವಿಡ್ ೪೦, ೨೮೮
ಡ್ರಮ್ಮಂಡ್, ಎರಿಕ್ ೧೩೪
ಡ್ಯೂಕಾಸ್, ಹೆಲನ್ (೧೮೯೬-೧೯೮೨) ೧೯೫, ೧೯೯, ೨೦೧, ೨೧೯, ೨೩೫, ೨೬೪, ೨೬೫, ೨೬೬
ಡ್ಯೂಯೀ, ಜಾನ್ (೧೮೫೯-೧೯೫೨) ೨೪೦
ತಂತ್ರವಿದ್ಯೆ technology ೧೧೩
ತಂತ್ರಾಂಶ, ಹೂರಣ, software ೨೧೬
ತರಲ fluid ೧೪೯
ತಳರೂಪಿಕೆ archetype ೩೦೯
ತಾಮ್ಸನ್ ಜೆ. ಜೆ. (೧೮೫೬-೧೯೪೦) ೬೧, ೧೧೪-೧೧೬
ತೂಕ weight ೨೭
ತೈಮೂರ್ ೧೮೦
ತ್ಯಾಗರಾಜರು ೩೮
ದಹನ combustion ೨೩೧
ದಾನಿನಾನುತನ, ಮೇಲರಿಮೆ superiority complex ೪೦, ೪೮
ದಿಕ್ಸೂಚಿ compass ೨
ದಿಬ್ಬ mount ೧೪೨
ದಿವಾಕರ ರಂ. ರಾ. ೧೪೫
ದಿವಿ ಸೂರ್ಯಸಹಸ್ರಸ್ಯ *Brighter than a Thousand Suns* ೨೩೫, ೩೧೪
ದೀರ್ಘತೆ length ೨೯
ದೀರ್ಘವೃತ್ತ ellipse ೫೪, ೧೫೩, ೨೯೫, ೩೦೦
ದೀರ್ಘಾಕ್ಷ major axis ೧೫೩
ದೀನನಾನುತನ, ಕೀಳರಿಮೆ inferiority complex ೪೦
ದುರ್ಯೋಧನ ೩೧೧
ದೂರದರ್ಶಕ telescope
ದೇಜಗೌ ೨೯೧
ದೇವರು ೨೭೪, ೨೭೬-೨೭೮, ೨೮೫, ೨೮೮, ೨೮೯
"ದೇವರು ಚತುರ ಆದರೆ ನೀಚನಲ್ಲ" ೨೧೩
"ದೇವರು ನಿಗೂಢ ಆದರೆ ಕುಹಕಿಯಲ್ಲ" God is subtle but not malicious ೧೦೯
ದೈವಾಪನೆ deification, divination ೨೮೧
ದ್ರವ್ಯ matter ೧೦೪, ೧೫೨
ದ್ರವ್ಯರಾಶಿ, ರಾಶಿ mass
ದ್ಯುತಿವೈದ್ಯುತ ನಿಯಮ photoelectric law ೧೪೭
ದ್ಯುತಿವೈದ್ಯುತ ಪರಿಣಾಮ photoelectric effect ೭೬, ೭೭, ೧೫೨-೧೫೪, ೧೮೩, ೩೦೨
ದ್ವೈತತತ್ತ್ವ duality ೧೬೩
ಧರ್ಮ, ಮತಧರ್ಮ religion ೨೭೪, ೨೭೫, ೨೮೩
ಧರ್ಮತತ್ತ್ವ doctrine ೨೮೫
ಧರ್ಮರಹಿತ ವಿಜ್ಞಾನ ಕುಂಟು, ವಿಜ್ಞಾನರಹಿತ ಧರ್ಮ ಕುರುಡು Science without religion is lame, religion without science is blind ೨೩೭
ಧರ್ಮ-ವಿಜ್ಞಾನ ೧೨೬
ಧಾತು element ೧೧೫, ೧೫೧, ೨೨೪, ೨೨೫
ನಂಬಿಕೆ belief ೨೭೫, ೨೭೯
ನಕ್ಷತ್ರ star ೩೭, ೧೧೩
ನರಮೇಧ Holocaust ೩೧೧
ನರ್ನ್ಸ್ಟ್, ವಾಲ್ಟರ್ (೧೮೬೪-೧೯೪೧) ೨೯
ನಾಕ್ಷತ್ರಿಕ ಶಕ್ತಿ stellar energy ೩೧೪
"ನಾಗರಿಕ ಪ್ರಪಂಚಕ್ಕೆ ಪ್ರಣಾಳಿಕೆ" ೫೦, ೭೨
ನಾಟ್ರೀ ಪಕ್ಷ ೧೦೨
ನಾರ್ಡ್‌ಮನ್, ಚಾರ್ಲ್ಸ್ ೧೩೧
ನಾಥನ್, ಆಟೋ (೧೮೯೩-?)
ನಾಭಿ focus ೫೪
ನಾಲ್ಕು ಆಯಾಮಗಳ ಪ್ರಾಂತ four-

dimensional domain ೨೭೧
ನಿಕೊಲಾಯ್, ಜಾರ್ಜ್ ಫ್ರೆಡ್ರಿಚ್ (೧೮೭೪-೧೯೬೪) ೫೧, ೭೬
ನಿಗಮನ deduction ೧೪೪
ನಿಗೂಢತೆ mystery ೨೫೫
ನಿರ್ದ್ರವ್ಯತೆ vacuum ೨೮
ನಿರ್ದೇಶಕಗಳು coordinates ೨೦೩
ನಿರ್ದೇಶಕ ಚೌಕಟ್ಟು, reference frame ೧೨೪
ನಿರ್ನಾಮ annihilation ೨೨೧
ನಿಬಂಧಿತ implication ೧೪೮
ನಿರ್ಬಂಧ condition ೩೦೪
ನಿರ್ಮಾಣ ಘಟಕ building block ೧೫೧
ನಿರ್ಮೋಚನ moulting ೨೬
ನಿಯಮ law ೨೮೪
ನಿರಪೇಕ್ಷ, ಶುದ್ಧ absolute ೨೪
ನೀತ್ಯಾಧಾರಿತ ಧರ್ಮ ೨೮೮
ನೀಲಿಪಲ್ಲಟ blueshift ೨೯೮
ನೆಪೊಲಿಯನ್, ಬೊನಾಪಾರ್ಟ್ (೧೭೬೯-೧೮೨೧) ೨೩೩
ನೇಪಥ್ಯ ನಿರ್ದೇಶನ backseat driving ೧೭೮
ನೈತಿಕತೆ ethics ೨೭೯
ನೈಸರ್ಗಿಕ ಬಲಗಳು natural forces ೨೭೪
ನೊಬೆಲ್, ಆಲ್‌ಫ್ರೆಡ್ (೧೮೩೩-೯೬) ೫೧, ೧೪೫
ನೊಬೆಲ್ ಪಾರಿತೋಷಿಕ ೧೪೬
ನೋವಾ nova ೩೭
ನ್ಯೂಕ್ಲಿಯರ್ ಯುಗ, ಬೈಜಿಕ ಯುಗ nuclear age ೨೨೬
ನ್ಯೂಕ್ಲಿಯರ್ ವಿದಲನ, ಬೈಜಿಕ ವಿದಲನ nuclear fission ೨೨೮
ನ್ಯೂಕ್ಲಿಯಸ್, ಬೀಜ nucleus ೧೧೫, ೧೫೭, ೨೨೪-೨೨೬, ೨೨೮
ನ್ಯೂಟನ್, ಐಸಾಕ್ (೧೬೪೨-೧೭೨೭) ೨೧, ೩೨, ೫೧, ೫೩, ೫೮, ೬೨, ೬೪, ೬೬, ೭೩, ೧೦೨, ೧೧೩, ೧೧೮-೧೨೦, ೧೨೩, ೧೨೪, ೧೫೫, ೧೯೦, ೨೩೬, ೨೫೯, ೨೬೭, ೨೭೨, ೨೯೦, ೨೯೫, ೨೯೮, ೨೯೯, ೩೦೧, ೩೧೭
ನ್ಯೂಟನ್-ಬಲವಿಜ್ಞಾನ Newtonian mechanics ೨೩
ನ್ಯೂಟನ್ನನ ಸೇಬು ಹಾಗೂ ಗೌಸನ ವ್ಯಾಖ್ಯಾನ ೧೧೮
ನ್ಯೂಟ್ರಾನ್ neutron ೧೧೫, ೨೨೪-೨೨೬
ಪರಮಭಗ್ನಕಾರಕ most shattering ೩೧೦
ಪರಮಾಣು atom ೩೦, ೧೧೫, ೧೫೧, ೧೫೬, ೨೨೧, ೨೨೪, ೨೨೫
ಪರಮಾಣುಬಾಂಬ್ atom bomb ೨೨೬, ೨೨೯, ೨೩೧, ೨೩೫-೨೩೯, ೩೧೩
"ಪರಮಾಣುಯುದ್ಧ ಅಥವಾ ಶಾಂತಿ" ೨೩೭-೨೩೯
ಪರಮಾಣುವಾದ ೩೧೪
ಪರಮಾಣುಶಕ್ತಿ atomic energy ೩೦, ೨೩೮, ೩೧೫
ಪರಮಾರ್ಥ ೧೮೬
ಪರಮಾದಿ ಪರಮಾಣು primordial atom ೩೧೧
ಪರಮೇಶ್ವರ ಭಟ್ಟ, ಎಸ್. ವಿ. ೩, ೫೭
ಪರಿಕಲ್ಪನೀಕರಣ ಪ್ರಕ್ರಿಯೆ process of conceptualization ೨೮೨
ಪರಿಕಲ್ಪನೆ concept ೩೧, ೨೪೩
ಪರಿಭ್ರಮಣೆ revolution ೧೫೩
ಪರಿವರ್ತನೆಗಳು transformations ೨೬೯
"ಪಾ ! ಇದು ಕ್ರಿಯೆ ಬೇಡುತ್ತದೆ !" ೨೩೪, ೨೩೫
ಪಾರಕತೆ, ಪಾರದರ್ಶಕತೆ transparency ೨೭೯
ಪಾರಕ, ಪಾರದರ್ಶಕ transparent ೨೭೯
ಪಾ ವಾಟ್ಸನ್, ಜನರಲ್ ೨೩೪
ಪೀಟರ್, ಜಾನ್ ೨೩೯
ಪುತಿನ ೨೩, ೨೩೩
ಪುನರುಜ್ಜೀವನ renaissance ೪೮, ೯೭
ಪುರಂದರದಾಸರು ೬೮, ೩೦೫
ಪುರರವಿ perihelion ೫೪, ೫೫, ೧೫೩, ೧೫೪
ಪುರರವಿಯ ಪರಿಭ್ರಮಣೆ revolution of the perihelion ೨೭೨
ಪುರರವಿಯ ಮುನ್ನಡೆ/ಪುರೋಗಮನ advance of the perihelion ೫೫
ಪೇಯ್ನ್ಲೆವ್, ಪಾಲ್ (೧೮೬೩-೧೯೩೩) ೧೩೫
ಪೇಯ್ಸ್, ಅಬ್ರಾಹಾಮ್ (೧೯೧೮) ೬೮, ೨೪೬, ೨೪೭
ಪೈಥಾಗೊರಸನ ಪ್ರಮೇಯ ೧೭೦
ಪೈಲು face, angle x
ಪೋಪ್, ಅಲೆಕ್ಸಾಂಡರ್ (೧೬೮೮-೧೭೪೪) ೧೨೦

ಪೌಲಿ, ವೂಲ್ಫ್‌ಗಾಂಗ್ (೧೯೦೦-೫೮) ೨೪೪
ಪ್ರತಿರೂಪ, ಮಾದರಿ model ೨೦, ೨೭೫
ಪ್ರತೀಕ symbol
ಪ್ರಥಮ ಪರಮಾಣುವಿಕಾಗ್ನಿ ೨೩೫
ಪ್ರಭುತ್ವ authority ೨೭೪, ೨೭೫
ಪ್ರಯೋಗಪಟು experimentalist ೧೦೭
ಪ್ರರೂಪ pattern, type ೧೫೬
ಪ್ರರೂಪೀ typical
ಪ್ರಹ್ಲಾದರಾವ್ ಎನ್. ೨೩೪
ಪ್ಯಾಪೆನ್, ಫಾನ್ ಫ್ರಾನ್ಝ್ (೧೮೭೯-?) ೧೭೬-೧೭೮, ೧೯೭
ಪ್ಯೂಪಿನ್, ಮೈಕಲ್ (೧೮೫೮-೧೯೩೫) ೧೦೭, ೧೦೮
ಪ್ಲ್ಯಾಂಕ್, ಮ್ಯಾಕ್ಸ್ (೧೮೫೮-೧೯೪೭) ೨೩, ೩೭, ೩೮, ೪೫, ೪೭, ೪೯, ೫೦, ೭೯, ೮೧, ೮೩-೮೬, ೧೩೭, ೧೫೧, ೧೭೪, ೧೭೫, ೧೭೯, ೧೮೮, ೧೮೯, ೨೦೬, ೨೪೪, ೨೭೦, ೨೯೫-೨೯೭, ೩೦೨
ಪ್ಲ್ಯಾಂಕ್ ವ್ಯಕ್ತಿತ್ವ ೩೧೨
ಪ್ಲ್ಯಾಂಕ್-ಹಿಟ್ಲರ್ ಭೇಟಿ ೧೮೯, ೧೯೦
ಪ್ರಾಂತ domain ೩೫
ಪ್ರಾಕೃತಿಕ ವಿಜ್ಞಾನ natural science ೧೦
ಪ್ರಾಗ್ವಸ್ತು ಭಂಡಾರದ ವಿಲಕ್ಷಣ ವೈಚಿತ್ರ್ಯ museum curio ೨೦೦
ಪ್ರಿನ್ಸ್‌ಟನ್ ಪ್ರಜ್ಞೆ ೨೦೩, ೨೦೪
ಪ್ರೋಟಾನ್ proton ೧೧೫, ೨೨೪
ಪ್ರೌಢಗಣಿತ ೩೬
ಪ್ವಾನ್‌ಕ್ವಾರೇ, ಆನ್ರೀ (೧೮೫೪-೧೯೧೨) ೪೨, ೪೩, ೨೭೦-೨೭೨, ೩೦೮
ಫರ್ಮಿ, ಎನ್ರಿಕೊ (೧೯೦೧-೫೪) ೨೨೪-೨೨೬, ೨೨೯-೨೩೧, ೩೦೯, ೩೧೦
ಫಲಜ್ಯೋತಿಷಿ astrologer ೨೭೩
ಫಲ್ಟನ್, ರಾಬರ್ಟ್ (೧೭೬೫-೧೮೧೫) ೨೩೩
ಫಾನ್-ಮ್ಯೂಲರ್ ೮೧
ಫಾಸ್ಡಿಕ್, ಹ್ಯಾರಿ ಎಮರ್ಸನ್ ೨೪೦
ಫಾರ್ಸ್ಟರ್, ವಿಲ್‌ಹೆಲ್ಮ್, ಜೂಲಿಯಸ್ (೧೮೩೨-೧೯೨೧) ೫೧
ಫೈನ್‌ಮಾನ್, ರಿಚರ್ಡ್ ಪಿ. (೧೯೧೮-೮೮) ೩೦೮, ೩೧೪
ಫ್ರಾನ್ಸಿಸ್, ಅಸ್ಸಿಸಿ (ನಗರದ) (೧೧೮೨-೧೨೨೬) ೨೮೯
ಫ್ರಿಕ್ ಎ. ವಿ. ೨೫೬
ಫ್ರಿಶ್, ರಾಬರ್ಟ್ (೧೯೦೪-೭೯) ೨೨೬-೨೨೮
ಫ್ಲೆಕ್ಸ್‌ನರ್, ಅಬ್ರಾಹಾಮ್ (೧೮೬೬-೧೯೫೯) ೧೯೨, ೧೯೩, ೧೯೬-೧೯೮, ೨೦೦-೨೦೨
ಫೋಟಾನ್ photon ೨೩, ೩೦೨
ಫ್ರ್ಯಾಂಕ್, ಫಿಲಿಪ್ ೩೯, ೫೫, ೫೯, ೮೪, ೮೯, ೯೦, ೧೦೨, ೧೧೨, ೧೬೧, ೧೭೭, ೧೭೮, ೧೯೪, ೩೦೨, ೩೦೩
ಫ್ಯಾರಡೇ, ಮೈಕೇಲ್ (೧೭೯೧-೧೮೬೭) ೫೧
ಬಂಬಾಯಿಸಿಕೆ bombardment ೨೨೬
ಬರ್ಗ್‌ಸನ್, ಹೆನ್ರಿ (೧೮೫೯-೧೯೪೧) ೧೩೨
ಬರ್ನೂಲಿ, ಜೇಕಬ್ (೧೬೫೪-೧೭೦೫) ೨೫೮
ಬಲ force ೨೬, ೧೫೭
ಬಲಗಡೆಯಿಂದ ಉತ್ಕ್ರಾಂತಿ ೧೩೬, ೧೭೨
ಬಲಪಂಥೀಯರು ೭೪
ಬಲವಿಜ್ಞಾನ mechanics ೨೯೪
ಬಸವಣ್ಣನವರು ೭೬, ೩೦೫
ಬಾಂಬೆರ್ಗರ್, ಲೂಯಿ ಮತ್ತು ಫೆಲಿಕ್ಸ್ ಫಲ್ಡ್ ೧೯೬
ಬಾಕ್, ಯೋಹನ್ ಸೆಬಾಸ್ಟಿಯನ್ (೧೬೮೫-೧೭೫೦) ೮೮, ೨೯೨
ಬಾರ್ನ್, ಮ್ಯಾಕ್ಸ್ (೧೮೮೨-೧೯೭೦) ೫೭, ೬೪, ೭೫, ೮೨, ೮೭, ೧೦೯, ೧೧೦, ೧೧೯, ೧೪೦, ೧೪೭, ೧೬೦-೧೬೨, ೧೭೦, ೨೦೫, ೨೧೬, ೨೪೩-೨೪೫, ೩೦೩, ೩೧೩, ೩೧೪
ಬಾರ್ನ್, ಹೆಡ್ವಿಗ್ ೮೦
ಬಾರ್ನೆಟ್, ಲಿಂಕನ್ ೨೪೦
ಬಾಲ್ಫರ್ ಘೋಷಣೆ ೯೫
ಬಿಂದು point ೧೧
ಬಿಸ್ಮಾರ್ಕ್, ಫಾನ್ ಆಟ್ಟೊ ಎಡೂವರ್ಡ್ ಲೀಪಾಲ್ಡ್ (೧೮೧೫-೯೮) ೭, ೪೮, ೫೧
ಬೀಜಗಣಿತ algebra ೯, ೨೯೨
ಬುಧ Mercury ೫೪, ೧೫೩, ೨೭೨
ಬುದ್ಧ, ಗೌತಮ (ಕ್ರಿಪೂಸು ೫೬೩-ಸು ೪೮೩) ೨೭೮, ೨೮೨
ಬೃಹಸ್ಪತಿತ್ವ ಮಹಾಪ್ರತಿಭೆ genius ೬೮, ೬೯
ಬೆಕೆರಲ್, ಆ್ಯಂಟೊಯಿನ್ ಹೆನ್ರಿ (೧೮೫೨-೧೯೦೮)

೨೨೦, ೨೨೧, ೨೨೪
ಬೆನ್‌ಗೂರಿಯನ್, ಡೇವಿಡ್ (೧೮೮೯-೧೯೭೩) ೨೫೨
ಬೆಲ್ಜಿಯಮ್ಮಿನ ರಾಜದಂಪತಿಗಳು ೨೦೨
ಬೆಸ್ಸೊ, ಮೈಕಲ್ (೧೮೭೩-೧೯೫೫) ೨೫೬
ಬೆಳಕಿನ ಬಾಗು ೫೪
ಬೆಳಕಿನ ವೇಗ ೨೭೦
ಬೆಳಕಿನ ವೇಗದಲ್ಲಿ ಚಲನೆ ೬೬, ೬೭
ಬೆಳಕಿನ ವೇಗಶೋಧನೆ ೩೦೬, ೩೦೭
ಬೆಳಕು light ೨೧, ೨೨, ೧೫೨
ಬೆಳಕು ಬಗ್ಗಿತು ೫೮
ಬೇಂದ್ರೆ ದ. ರಾ. (ಅಂಬಿಕಾತನಯದತ್ತ) ೩೭
ಬೇಥೋವನ್, ಲಡ್ವಿಗ್ ಫಾನ್ (೧೭೭೦-೧೮೨೭) ೨೬೭
ಬೈಜಿಕ ಜ್ಯಾಮಿತಿ analytical/coordinate geometry ೩೧೫
ಬೈಜಿಕ ಶಕ್ತಿ nuclear energy ೩೦
ಬೈಬಲ್ ೧೧, ೨೮೩
ಬೋರ್, ನೀಲ್ಸ್ (೧೮೮೫-೧೯೬೨) ೪೭, ೧೪೭, ೧೬೦, ೧೬೧, ೨೨೬-೨೨೮, ೨೩೦, ೨೩೯, ೨೪೨-೨೪೭, ೨೬೩, ೩೧೫, ೩೧೬
ಬೋರ್-ಐನ್‌ಸ್ಟೈನ್ 'ಸಂಘಟ್ಟನೆ' ೨೪೬-೨೪೮
ಬೋರ್-ಚರ್ಚಿಲ್ ಭೇಟಿ ೩೧೬
ಬೋಲ್ಯಾಯ್, ಜೇನೋಸ್ (೧೮೦೨-೫೦) ೩೦೦
ಬೊಲ್ಟ್ಸ್‌ಮನ್, ಲಡ್ವಿಗ್ ಎಡ್ವರ್ಡ್ (೧೮೪೪-೧೯೦೬) ೧೫೦
ಬೋಸ್, ಸತ್ಯೇಂದ್ರನಾಥ್ (೧೮೯೪-೧೯೭೪) ೨೩೭
ಬ್ಯಾಡ್ ನ್ಯಾಹೀಮ್ ೮೪, ೮೫, ೮೭
ಬ್ಯೂಯೆಕ್, ಆಟ್ಟೊ ೫೧
ಬ್ಯೂರಿಡನ್, ಜೀನ್ (ಸು ೧೩೦೦-ಸು ೮೫) ೨೯೫
ಬ್ಯೂರಿಡನ್ನನ ಕತ್ತೆ ೧೭, ೨೯೫
ಬ್ರಹ್ಮಾಂಡ galaxy ೨೦೩
ಬ್ರಹ್ಮಾಂಡವಿಜ್ಞಾನ cosmology ೧೧೫
ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆ cosmic religious feeling ೨೮೮, ೨೮೯, ೩೦೩
ಬ್ರೌನ್, ರಾಬರ್ಟ್ (೧೭೭೩-೧೮೫೮) ೧೪೮, ೧೪೯
ಬ್ರೌನಿಯನ್ ಚಲನೆ ೧೪೮, ೧೪೯, ೧೫೧, ೧೫೩, ೧೫೪, ೨೪೫
ಬ್ಲೂಮೆನ್‌ಫೆಲ್ಡ್, ಕುರ್ಟ್ (೧೮೮೪-೧೯೬೩) ೧೦೧, ೧೦೬
ಭಯಕಾರಕ ಸರಳತೆ frightening simplicity ೩೦೦
ಭಯಾಧಾರಿತ ಧರ್ಮ ೨೮೭, ೨೮೮
ಭಾವನಾತ್ಮಕ ಪ್ರತಿರೂಪ ideal model ೨೪೪
ಭೂಕಾಂತತ್ವ geomagnetism ೨
ಭೂಕೇಂದ್ರವಾದ geocentric hypothesis ೧೪೪
ಭೌತವಿಜ್ಞಾನ ೧೧, ೧೫
ಭೌಮಿಕ ನಿಯಮಗಳು terrestrial laws ೨೯೯
ಮಂಕುತಿಮ್ಮ, ಡಿವಿಜಿ ೧, ೧೬, ೨೫, ೩೧, ೧೯೨, ೨೬೪, ೩೦೫, ೩೦೯
ಮಗ್ನತೆ involvement ೨೭೯
ಮತಭ್ರಾಂತಿ, ಮತಿವಿಕಲ್ಪ ೧೨೫, ೩೦೩
ಮತಾಂಧತೆ fanaticism ೩೦೩, ೩೦೪
ಮನಹಟ್ಟನ್ ಯೋಜನೆ ೨೩೫
ಮರೇ, ಗಿಲ್ಬರ್ಟ್ ೧೩೫
ಮಹಾಪಧಮನಿ aorta ೨೬೫
ಮಹಾಬಾಜಣೆ Big Bang ೧೭೮, ೩೧೧
ಮಹಾಯುದ್ಧ ೨೪೮, ೨೪೯, ೨೬೨
ಮಹಾಶ್ವಾನ Canis Major ೬೭
ಮಾರ್ಕ್ಸ್, ಕಾರ್ಲ್ (೧೮೧೮-೮೩) ೭೩
ಮಾರ್ಝ್ಯೂವ್ಸ್ಕಿ, ಅಲೆಕ್ಸಾಂಡರ್ (೧೮೫೧-೧೯೩೪) ೭೦
ಮಾನ್, ತಾಮಸ್ (೧೮೭೫-೧೯೫೧) ೧೯೪
ಮಾನವಜನ್ಯಬಲಗಳು ೨೭೪
ಮಾರ್ಲಿ, ಎಡ್ವರ್ಡ್ ವಿಲಿಯಮ್ಸ್ (೧೮೩೮-೧೯೨೩) ೭೨, ೧೦೮, ೨೯೬
ಮಿಂಕೊವ್ಸ್ಕಿ, ಹರ್ಮನ್ (೧೮೬೪-೧೯೦೯) ೧೬, ೧೭, ೨೫, ೩೫, ೨೫೪, ೨೭೧, ೩೧೬
ಮಿಲ್ಲರ್, ಡೇಟನ್ ಕ್ಲಾರೆನ್ಸ್ (೧೮೬೬-೧೯೪೧) ೧೦೮, ೧೦೯
ಮಿಲ್ಲಿಕನ್, ರಾಬರ್ಟ್ ಆ್ಯಂಡ್ರೂಸ್ (೧೮೬೮-೧೯೫೩) ೧೫೨, ೧೯೬, ೧೯೭, ೩೧೨
ಮುಸ್ಸೊಲೀನೀ, ಬೆನಿಟೊ (೧೮೮೩-೧೯೪೫) ೨೦೦
ಮೂರ್ತ concrete
ಮೂಲಬಿಂದು origin ೨೪೬, ೩೧೫

ಮೂಲಭೂತತತ್ತ್ವ fundamentalism ೩೦೩, ೩೦೪
ಮೆಕಾರ್ಥಿ, ಜೋಸೆಫ್ ರೇಮಂಡ್ (೧೯೦೮-೫೭) ೨೫೦
ಮೆಕಾರ್ಥಿತ್ವ ೨೫೦, ೩೧೫
ಮೆನೂಹಿನ್, ಯೆಹೂದಿ (೧೯೧೬-೯೯) ೨೫೨, ೨೫೮
ಮೇಯರ್, ವಾಲ್ಟರ್ (೧೮೮೭-೧೯೪೮) ೧೯೭, ೧೯೯
ಮೈಕಲ್‌ಸನ್, ಆಲ್ಬರ್ಟ್ ಅಬ್ರಹಾಮ್ (೧೮೫೨-೧೯೩೧) ೨೨, ೨೯೬
ಮೈಕಲ್‌ಸನ್-ಮಾರ್ಲಿಪ್ರಯೋಗ ೧೦೮, ೨೯೬
ಮೈಟ್ನರ್, ಲೈಸ್ (೧೮೭೮-೧೯೬೮) ೨೨೫-೨೨೮, ೨೩೮
ಮೊಝಾರ್ಟ್, ವೂಲ್ಫ್‌ಗಾಂಗ್ ಅಮಡ್ಯೂಸ್ (೧೭೫೬-೯೧) ೮೮, ೨೯೨
ಮೋಸಸ್ (ಕ್ರಿಪೂಸು ೧೫-೧೩ ಶತಮಾನಾವಧಿ)
ಮ್ಯಾಕ್ಸ್‌ವೆಲ್, ಜೇಮ್ಸ್ ಕ್ಲರ್ಕ್ (೧೮೩೧-೭೯) ೧೨೯, ೧೫೦, ೨೫೯, ೨೬೯
ಮ್ಯಾಕಿನ್‌ಟೈರ್ ಕರ್ನಲ್ ೨೦೧
ಯಂತ್ರಾಂಶ, ತೋರಣ hardware ೨೧೬
ಯಾದೃಚ್ಛಿಕತೆ randomness ೧೪೯
ಯುರೇನಿಯಮ್ ೨೨೦, ೨೨೫, ೨೨೬, ೨೩೧
ಯುರೇನಿಯಮ್-ಪರಮಾಣು ಛೇದನ ೨೨೭
ಯೂಂಕ್, ರಾಬರ್ಟ್ ೨೨೦
ಯೂಕ್ಲಿಡ್ (ಕ್ರಿಪೂಸು ೩೨೫) ೧೨೪, ೨೯೩
ಯೂಕ್ಲಿಡ್-ಅಭಿಗೃಹೀತಗಳು ೨೯೩
ಯೂಕ್ಲಿಡ್ ಜ್ಯಾಮಿತಿ ೧೧
"ಯೂರೊಪಿಯನ್ನರಿಗೆ ಪ್ರಣಾಳಿಕೆ" ೫೧, ೭೩
ಯೆಹೂದ್ಯದ್ವೇಷ ೧೭೮, ೧೭೯, ೧೮೩
ರಂಟ್ಜನ್, ವಿಲ್‌ಹೆಲ್ಮ್ ಕೊನ್ರಾಡ್ (೧೮೪೫-೧೯೨೩) ೮೦
ರಕ್ತಪಲ್ಲಟ red shift ೨೯೮
ರವೀಂದ್ರನಾಥ ಠಾಕೂರ್ (೧೮೬೧-೧೯೪೧) ೧೬೯, ೧೯೪
ರಸಲ್, ಬರ್ಟ್ರೆಂಡ್ (೧೮೭೨-೧೯೭೦) ೮೨, ೨೪೦, ೨೫೧, ೨೫೨, ೨೬೨-೨೬೪, ೨೬೭, ೩೦೩
ರಸಾಯನವಿಜ್ಞಾನ chemistry ೧೯
ರಾಧಾಕೃಷ್ಣನ್ ಎಸ್. (೧೮೮೮-೧೯೭೫) ೨೬೧
ರಾಬರ್ಟ್‌ಸನ್, ಹೊವಾರ್ಡ್ ಪರ್ಸಿ (೧೯೦೩-೬೧) ೨೧೧, ೨೧೨
*ರಾಮಾನುಜನ್ ಬಾಳಿದರಿಲ್ಲಿ* ೨೦
ರಾಮಾನುಜನ್, ಶ್ರೀನಿವಾಸ (೧೮೮೭-೧೯೨೦) ೧೩, ೨೦
ರಾಯಲ್ ಆ್ಯಸ್ಟ್ರನಾಮಿಕಲ್ ಸೊಸೈಟಿ ೧೧೯
ರಾಯಲ್ ಪ್ರಶ್ಯನ್ ಅಕಾಡೆಮಿ ಆಫ್ ಸೈನ್ಸ್ ೪೫
ರಾಶಿ, ದ್ರವ್ಯರಾಶಿ mass ೨೫, ೯೪, ೩೧೧
ರಾಶಿ zodiacal constellation ೬೦
ರಾಶಿ-ಶಕ್ತಿ ಸಮಾನತೆ mass-energy equivalence ೨೮, ೧೧೫
ರಾಷ್ಟ್ರಕತ್ವ nationality ೯೭
ರಾಷ್ಟ್ರಗಳ ಕೂಟ League of Nations ೧೩೨, ೧೩೭, ೧೩೮
ರಾಷ್ಟ್ರೀಯತೆ nationalism ೪೮, ೯೭
ರಾಷ್ಟ್ರೀಯ ಸಮಾಜವಾದಿ ಪಕ್ಷ (ನಾಟ್ಸೀಪಕ್ಷ) National Social Party ೧೦೨
ರೀಮಾನ್, ಜಾರ್ಜ್ ಫ್ರೀಡರಿಶ್ (೧೮೨೬-೬೬) ೩೦೦
ರೀಮಾನಿಯನ್ ಜ್ಯಾಮಿತಿ ೩೦೧
ರುದರ್ಫರ್ಡ್, ಅರ್ನೆಸ್ಟ್ (೧೮೭೧-೧೯೩೭) ೫೧, ೧೧೪-೧೧೬, ೨೨೫
ರೂಸ್‌ವೆಲ್ಟ್, ಎಲಿನಾರ್ (೧೮೮೪-೧೯೬೨) ೨೦೨
ರೂಸ್‌ವೆಲ್ಟ್, ಫ್ರ್ಯಾಂಕ್ಲಿನ್ ಡಿಲಾನೊ (೧೮೮೨-೧೯೪೫) ೧೯೯, ೨೦೧, ೨೩೦, ೨೩೨, ೨೩೩, ೨೩೬, ೨೫೩, ೩೧೬
ರೇಡಿಯಮ್ radium ೨೨೧
ರೋಸೆನ್‌ಫೆಲ್ಡ್, ಲೀಯಾನ್ (೧೯೦೪-೭೪) ೨೨೭-೨೨೯
ರೋಹಿತ spectrum ೧೩೯
ರೋಹಿಣಿ Aldebaran ೬೦
ರ್ಯೋಮರ್, ಓಲಾಸ್ (೧೬೪೪-೧೭೧೦) ೩೦೭
ರ್ಯಾತಿನೌ, ವಾಲ್ಟರ್ (೧೮೬೭-೧೯೨೨) ೧೩೦, ೧೩೫-೧೩೭
ಲಾಂಗೂಲಶ್ವಾನಚಾಲನೆ tail wagging the dog ೭೬
ಲಾಂಜ್ವಾನ್, ಪಾಲ್ (೧೮೭೨-೧೯೪೬) ೧೩೦-೧೩೨

ಲುಬ್ಧಕ Sirius ೬೭
ಲೂಬೂಚೇವ್ಸ್ಕಿ, ನಿಕೊಲಾಯ್ ಐವನೋವಿಚ್ (೧೭೯೩-೧೮೫೬) ೩೦೦
ಲೆತ್ತವೆಸೆಯುವ-ಲೆತ್ತವೆಸೆಯದ ಭಗವಂತರ 'ಸಂಘಟ್ಟನೆ' ೨೪೭
ಲೆನಾರ್ಡ್, ಫಿಲಿಪ್ (೧೮೬೨-೧೯೪೭) ೭೬-೭೯, ೮೪, ೮೬, ೧೩೬, ೧೪೭, ೧೭೩, ೧೮೦, ೧೮೧
ಲೆನಿನ್, ನಿಕೊಲಾಯ್ ವ್ಲಾಡಿಮಿರ್ ಇಲಿಚ್ (೧೮೭೦-೧೯೨೪) ೨೫೯
ಲೆವೆರಿಯರ್, ಅರ್ಬೇನ್ ಜೀನ್ ಜೋಸೆಫ್ (೧೮೧೧-೭೭) ೧೫೩
ಲೆಸ್ಸಿಂಗ್, ಥಿಯೊಡೋರ್ ೧೯೧
ಲೇಣೆದೇಣೆ ತಖ್ತೆ balance sheet ೨೪೦
ಲೇವೀ-ಚಿವಿಟ, ಟೂಲಿಯೊ (೧೮೭೩-೧೯೪೧) ೨೦೯
ಲೊರೆಂಟ್ಝ್, ಹೆಂಡ್ರಿಕ್ ಆಂಟೂನ್ (೧೮೫೩-೧೯೨೮) ೧೨೯, ೧೩೫, ೨೪೪, ೨೫೪, ೨೬೯
ಲೊರೆಂಟ್ಝ್ ಪರಿವರ್ತನೆಗಳು Lorentz transformations ೨೭೦
ಲೋಮನಾಳತೆ capillarity ೧೯
ಲ್ಯಾಂಕ್ಸೋಸ್, ಕಾರ್ನೀಲಿಯಸ್ (೧೮೯೩-೧೯೭೪) ೧೦೩, ೧೦೬, ೧೬೨, ೨೬೮, ೨೬೯
ಲ್ಯಾಂಪೆ, ಜಾನ್ ೧೯೨
ಲ್ಯಾಡೆನ್‌ಬರ್ಗ್, ರೂಡಾಲ್ಫ್(೧೮೮೨-೧೯೫೨) ೪೯
ವಕ್ರ curve ೨೭೧
ವಕ್ರತೆ curvature ೩೫
ವಕ್ರರೇಖೆ (ರೇಖೆ) curve ೧೧
ವಕ್ರಾಕಾಶ curved space ೮೯
ವರ್ಣಕ pigment ೩೦೯
ವರ್ತುಳೀಯ ಕಕ್ಷಾಸಂಚಾರ repetitive harangue ೧೩೩
ವಾಂಛೆ aspiration ೨೮೦, ೨೮೧
ವಾದ hypothesis ೩೦೦
ವಾಮಪಂಥೀಯರು leftists ೭೩, ೭೪
ವಾಸ್ತವಾಂಶ fact ೧೪೪
ವಿಂಟೆಲರ್, ಜಾಸ್ಟ್, (೧೮೪೬-೧೯೨೯) ೧೪
ವಿಂಟೆಲರ್, ಪಾಲ್ (೧೮೮೨-೧೯೫೨) ೧೪
ವಿಕಾಸವಾದ theory of evolution ೬೯
ವಿಕಿರಣ radiation ೨೨೧, ೨೨೪, ೩೧೧
ವಿಕಿರಣಪಟುತ್ವ radioactivity ೩೦, ೧೧೫, ೨೨೧, ೨೨೫
ವಿಕಿರಣ ಶಕ್ತಿ radiant energy ೧೫೨
ವಿಚಲಿತಸ್ಥಾನ displaced position ೬೧
ವಿಚಾರವಾದ/ವೈಚಾರಿಕತೆ rationalism ೨೮೦
ವಿಚಾರವಾದಿ rationalist ೨೮೦
ವಿಜಯನಾಥಭಟ್ಟ 'ವಿಜಯಿನಿ' ೨೯೯, ೩೧೪
ವಿಜ್ಞಾನ science ೧೬, ೧೧೦, ೨೭೪, ೨೭೫, ೨೮೨, ೨೮೩, ೨೯೪
ವಿಜ್ಞಾನ—ಅಮೆರಿಕದಲ್ಲಿ ೧೧೩
*ವಿಜ್ಞಾನ ಕರ್ನಾಟಕ* ೨೬೯, ೨೭೩, ೩೦೨
ವಿಜ್ಞಾನ-ಧರ್ಮ ಸಂಘರ್ಷ ಏಕೆ ? ೨೮೯
ವಿಜ್ಞಾನ ಮತ್ತು ತಂತ್ರವಿದ್ಯೆ science and technology ೨೯, ೨೯೮
ವಿಜ್ಞಾನಿಯ ಸಾಮಾಜಿಕ ಬದ್ಧತೆ ೩೦೯, ೩೧೦
ವಿಜ್ಞಾನಿಯ ಸಾಮಾಜಿಕ ಹೊಣೆ ೨೩೬
ವಿಟ್ಟೇಕರ್, ಎಡ್ಮಂಡ್ (೧೮೭೩-೧೯೫೩) ೨೬೯
ವಿದಲನ fission ೩೦, ೧೧೫, ೨೨೬-೨೨೮
ವಿದಲನ ಬಾಂಬ್ fission bomb ೨೬೨
ವಿದ್ಯಮಾನ phenomenon ೨೬, ೧೪೭
ವಿದ್ಯಮಾನವಿಜ್ಞಾನ phenomenology ೨೮೫
ವಿದ್ಯುತ್ಕಾಂತಕ್ಷೇತ್ರ electromagnetic field ೧೫೭
ವಿದ್ಯುತ್ಕಾಂತತ್ವ electromagnetism ೧೬೩
ವಿದ್ಯುತ್ಕಾಂತವಿಕಿರಣ electromagnetic radiation ೨೧೦
ವಿದ್ಯುತ್ಕಾಂತ ಸಮೀಕರಣಗಳು electromagnetic equations ೨೭೦
ವಿದ್ಯುದಾವಿಷ್ಟ, ಆವಿಷ್ಟ electrically charged ೧೨೩, ೨೪೭
ವಿದ್ಯುದಾವೇಶ, ಆವೇಶ electric charge ೧೫೬
ವಿದ್ಯುದ್ಗತಿವಿಜ್ಞಾನ electrodynamics ೩೭
ವಿಧಿ rule ೨೮೪
ವಿಧಿ ನಿರ್ಬಂಧಗಳು rituals ೩೦೩, ೩೦೪
ವಿಲ್ಸನ್, ವುಡ್ರೋ (೧೮೫೬-೧೯೨೪) ೭೪
ವಿವಿಕ್ತ discrete ೧೬೦, ೨೪೨
ವಿವೇಚನೆ ೨೮೧
ವಿಶೇಷ ಸಾಪೇಕ್ಷತಾ ಸಿದ್ಧಾಂತ Special theory

of Relativity ೩೨, ೩೩, ೩೫, ೫೩, ೫೪, ೭೬, ೨೭೦, ೨೭೧, ೨೯೬
ವಿಶೇಷೀಕರಣ specialization ೪೯
ವಿಶ್ವ universe ೧೧, ೨೫, ೨೯, ೬೧, ೨೭೭, ೨೭೮, ೩೧೧
ವಿಶ್ವಕಿರಣಗಳು cosmic rays ೩೧೨
ವಿಶ್ವಗುರುತ್ವಾಕರ್ಷಣ ನಿಯಮ law of universal gravitation ೨೦, ೩೨, ೬೯, ೨೯೫, ೨೯೬, ೨೯೮, ೩೦೧
ವಿಶ್ವಾಸ faith ೨೭೫
ವೀಕ್ಷಣೆ observation ೫೯
ವೃಷಭರಾಶಿ Taurus ೬೦
ವೆಂಕಟೇಶ್ ಎಚ್. ಜಿ. ೩೦೨
ವೇಗ velocity ೨೬, ೯೪
ವೇಗಾಪಕರ್ಷ retardation ೨೬
ವೇಗೋತ್ಕರ್ಷ acceleration ೨೬
ವೇಗೋತ್ಕರ್ಷಿತ ವ್ಯವಸ್ಥೆಗಳು accelerated systems ೧೦೮
ವೇದಾಂತ ೨೭೭
ವೇಯ್ಲೆಂಡ್, ಪಾಲ್ ೭೪, ೭೮, ೭೯
ವೈಜ್ಞಾನಿಕ ಮನೋಧರ್ಮ scientific temper ೧೩೩, ೨೭೩, ೨೭೪, ೨೭೬, ೨೭೮
*ವೈಜ್ಞಾನಿಕ ಮನೋಧರ್ಮ* ೨೯೪
ವೈಜ್ಞಾನಿಕ ವಿಧಾನ scientific method ೨೭೫, ೨೭೮
ವೈಝ್‌ಮನ್, ಚೈಮ್ (೧೮೭೪-೧೯೫೨) ೯೪, ೯೫, ೯೯-೧೦೩, ೧೦೬, ೧೦೭, ೨೫೨
ವೈಟ್‌ಸೇಕರ್, ಫಾನ್ ೨೩೧
ವೈಲ್, ಹರ್ಮನ್ (೧೮೮೫-೧೯೫೫) ೩೦೯
ವೈಟ್‌ಹೆಡ್, ಆಲ್‌ಫ್ರೆಡ್ ನಾರ್ತ್ (೧೮೬೧-೧೯೪೭) ೬೧, ೨೪೦
ವ್ಯಕ್ತ್ಯತೀತ ಮೌಲ್ಯ superpersonal value ೨೮೨
ವ್ಯತ್ಯಯ discrepancy ೨೭
ವ್ಯಾಕೋಚನೆ expansion ೧೧೬
ವ್ಯಾಘಾತ contradiction ೨೨, ೩೦೪
ಶಂಕುಜ conic ೩೦೦
ಶಕಲ quantum ೧೬೦
ಶಕಲಬಲವಿಜ್ಞಾನ quantum mechanics ೧೬೨
ಶಕಲವಿಕಿರಣ quantum radiation ೨೪೫
ಶಕಲಸಂಖ್ಯಾಕಲನ ವಿಜ್ಞಾನ quantum statistics ೨೪೫
ಶಕಲಸಿದ್ಧಾಂತ quantum theory ೨೩, ೩೬, ೩೭, ೫೭, ೧೩೧, ೧೫೧, ೨೯೬
ಶಕ್ತಿ energy ೨೭, ೧೪೯, ೧೫೨, ೩೦೬
ಶಕ್ತಿ-ರಾಶಿ ಸಮಾನತೆ energy-mass equivalence ೧೫೪, ೨೨೧, ೨೩೬
ಶಾಂತಿವಾದ pacifism ೭೨, ೭೩
ಶಿಲ್ಪ್, ಪಾಲ್ ಆರ್ಥರ್ (೧೮೯೭-?) ೨೪೦-೨೪೨, ೨೪೫
ಶಿಶುನಾಳ ಶರೀಫರು ೧೬೮
ಶುದ್ಧಕಾಲ, ನಿರಪೇಕ್ಷಕಾಲ absolute time ೫೩, ೨೭೧, ೨೯೯
ಶೂನ್ಯದ ಪರಿಕಲ್ಪನೆ ೨೯೮
ಶೃಂಖಲಾಕ್ರಿಯೆ chain reaction ೨೨೮, ೨೩೦, ೨೩೫, ೩೧೩
ಶೋಪೆನ್‌ಹಾರ್, ಆರ್ಥರ್ (೧೭೮೮-೧೮೬೦) ೨೮೯
ಶ್ರೀಕೃಷ್ಣ ೩೧೧
ಶ್ವಾನಲಾಂಗೂಲಚಾಲನೆ dog wagging the tail ೭೬
ಶ್ವೈಟ್ಜರ್, ಆಲ್ಬರ್ಟ್ (೧೮೭೫-೧೯೬೫) ೨೫೪
ಸಂಕೇತ code
ಸಂಕೋಚನೆ contraction ೧೧೬
ಸಂಖ್ಯಾಕಲನವಿಜ್ಞಾನ statistics ೧೫೧, ೧೬೧, ೨೪೨, ೨೪೩, ೩೧೫
ಸಂಘನನ condensation ೧೦೦
ಸಂಜ್ಞೆ signal
ಸಂತಾಯನ, ಜಾರ್ಜ್ (೧೮೬೩-೧೯೫೨) ೨೪೦
ಸಂತುಲತೆ balance ೨೭೬
ಸಂಭಾವ್ಯತಾಸಿದ್ಧಾಂತ theory of probability ೧೫೮, ೧೫೯, ೧೬೧
ಸಂಭಾವ್ಯತೆ probability ೨೪೩, ೩೧೫
ಸಂಮರ್ದ pressure ೩೦
ಸಂಯುಕ್ತ compound ೧೫೧
ಸಂಲಯನ fusion ೩೦

ಸಂಲಯನ ಬಾಂಬ್ fusion bomb, hydrogen bomb ೨೬೨
ಸಂವೇಗ momentum ೯೪, ೧೫೯, ೨೪೨, ೨೪೩,
ಸಂವೇದನೆ feeling ೨೮೭
ಸಂಶೋಧನೆ research
ಸಂಶ್ಲೇಷಣೆ synthesis ೨೭೧
ಸತ್ಯ truth ೧೨೧, ೧೨೨, ೩೦೯
*ಸಪ್ತಸಾಗರದಾಚೆಯೆಲ್ಲೋ* . . . ೩೦೦
ಸಮತಲ plane ೧೧, ೩೧೫
ಸಮಾಜವಾದ socialism ೭೩
ಸಮುಚಿತಕಾಲ proper time ೨೭೧
ಸರಳರೇಖೆ straight line ೧೧
ಸಲೆವೇಗ areal velocity ೨೯೫
ಸಾಕ್ರಟೀಸ್ (ಕ್ರಿಪೂಸು ೪೭೦-೩೯೯) ೧೩, ೧೭೦, ೨೫೭, ೩೧೨
ಸಾಪೇಕ್ಷ relative ೨೪
ಸಾಪೇಕ್ಷತಾತತ್ತ್ವ principle of relativity ೨೭೦
ಸಾಪೇಕ್ಷತಾಸಿದ್ಧಾಂತ theory of relativity ೨೪, ೬೯, ೭೩, ೭೮, ೮೬, ೮೭, ೮೯, ೧೦೭, ೧೦೮, ೧೧೫, ೧೧೬, ೧೨೪, ೧೩೭, ೧೪೦, ೧೪೫, ೧೪೭, ೧೪೮, ೧೫೪, ೧೮೧, ೧೮೩, ೨೫೫, ೨೫೭, ೨೬೯,
ಸಾಪೇಕ್ಷತಾಸಿದ್ಧಾಂತದ ಅತೀಂದ್ರಿಯ ಸ್ವರೂಪ ೧೨೬
ಸಾಪೇಕ್ಷತಾಸಿದ್ಧಾಂತದ ಅಸಮರ್ಥನೀಯತೆ ೧೭೪
ಸಾಪೇಕ್ಷತಾಸಿದ್ಧಾಂತದ ದಿವಾಳಿಖೋರತನ ೧೭೪
ಸಾಪೇಕ್ಷತಾಸಿದ್ಧಾಂತದ ಸತ್ತ್ವ ೧೦೪, ೧೦೫
ಸಾಪೇಕ್ಷತಾಸಿದ್ಧಾಂತ ಮತ್ತು ನಾಸ್ತಿಕತೆ ೧೨೪, ೧೨೫
'ಸಾಪೇಕ್ಷತಾಸಿದ್ಧಾಂತವನ್ನು ಕುರಿತು ನನ್ನ ಮುಖ್ಯ ಅಭ್ಯಂತರಗಳು' ೧೭೪
ಸಾರ್ವತ್ರಿಕಸಾಪೇಕ್ಷತಾಸಿದ್ಧಾಂತ General theory of Relativity ೩೩, ೪೪, ೫೩, ೫೪, ೧೫೫, ೨೭೨, ೩೦೧
ಸಿಂಗ್-ಐನ್‌ಸ್ಟೈನ್ ಭೇಟಿ ೨೫೮
ಸಿಂಗ್, ಜಾನ್ ಎಲ್. ೩೫, ೪೩, ೨೫೭, ೨೫೮, ೨೭೩, ೩೧೬
ಸಿದ್ಧಾಂತ theory ೨೭೫
ಸುಂದರತೆ the beautiful ೨೮೬, ೩೦೮, ೩೦೯
ಸುಂದರತೆಯ ಸಾನ್ನಿಧ್ಯದಲ್ಲಿ ಕಂಪನ shuddering before the beautiful ೩೧೦
ಸುಂದರಮ್ ೨೫೯
ಸುಜನಾ ೨೬೮
ಸುನಾಮ goodwill ೧೩೮
ಸುಸಂಬದ್ಧ ವ್ಯವಸ್ಥೆ coherent system ೩೦೦
ಸೂಕ್ಷ್ಮದರ್ಶಕ microscope ೬೧
ಸೂರ್ಯಕೇಂದ್ರವಾದ heliocentric hypothesis ೬೯, ೧೪೪, ೩೦೧
ಸೂರ್ಯಗ್ರಹಣ solar eclipse ೫೯, ೬೦, ೧೧೪
ಸೃಜನಶೀಲತೆಯ ಪ್ರರೂಪಗಳು Patterns of Creativity ೩೧೦
ಸೆನೆಕಾ (೧ನೆಯ ಶತಮಾನ) ೨೯೪
ಸೈದ್ಧಾಂತಿಕ ಭೌತವಿಜ್ಞಾನ theoretical physics ೨೧
ಸೈದ್ಧಾಂತಿಕ ವಿಜ್ಞಾನಿ theoretical scientist ೧೧೧
ಸೊನ್ನೆಯ ಉಪಜ್ಞೆ/ಸೃಷ್ಟಿ ೩೨
ಸೊಮ್ಮರ್‌ಫೆಲ್ಡ್, ಆರ್ನಾಲ್ಡ್ (೧೮೬೮-೧೯೫೧) ೮೧, ೨೯೭
ಸೋಮನಾಥಾನಂದ ೨೯೯
ಸೌಂದರ್ಯ beauty ೧೬೯, ೩೦೮, ೩೦೯
ಸೌರವ್ಯೂಹ solar system ೫೪, ೨೮೪
ಸ್ಕ್ವಯರ್, ಜಾನ್ (೧೮೮೪-೧೯೫೮) ೧೨೧
ಸ್ಟಾರ್ಕ್, ಯೋಹಾನೆಸ್ (೧೮೭೪-೧೯೫೭) ೧೮೦
ಸ್ಟ್ರಾಸ್‌ಮ್ಯಾನ್, ಫ್ರಿಟ್ಸ್ (೧೯೦೨-೮೦) ೨೨೫, ೨೨೯
ಸ್ಟೈನ್, ಗರ್ಟ್ರೂಡ್ (೧೮೭೪-೧೯೪೬) ೧೯೮, ೧೯೯
ಸ್ಥಾನ position ೩೦೭
ಸ್ಪೆನ್ಸರ್, ಹರ್ಬರ್ಟ್ (೧೮೨೦-೧೯೦೩) ೧೪೪
ಸ್ಯಾಕ್ಸ್, ಅಲೆಕ್ಸಾಂಡರ್ (೧೮೯೩-೧೯೭೩) ೨೩೨, ೨೩೩
ಸ್ಯಾಮ್ಯುಯೆಲ್, ಹರ್ಬರ್ಟ್ (೧೮೭೦-೧೯೬೩) ೧೪೩, ೧೪೪, ೨೮೬
ಸ್ಪಿನೋಜ಼ಾ, ಬೆನೆಡಿಕ್ಟ್ ಡ (೧೬೩೨-೭೭) ೭೦, ೧೭೦, ೨೭೭, ೨೮೨, ೨೮೯, ೩೦೧
ಸ್ಕ್ಲೀಶರ್, ಕುರ್ಟ್‌ಫಾನ್ (೧೮೮೨-೧೯೩೪) ೧೭೮
ಸ್ತೋಮಪ್ರಜ್ಞೆ ೧೨೨, ೧೨೪
ಸ್ವಾಮಿ ವಿವೇಕಾನಂದ (೧೮೬೩-೧೯೦೨) ೨೭೭

ಹಕ್ಸ್ಲೀ ಟಿ. ಎಚ್. (೧೮೨೫-೯೫) ೧೪೪
ಹರ್ಟ್ಸ್, ಹೈನ್ರಿಚ್ ರೂಡಾಲ್ಫ್ (೧೮೫೭-೯೪) ೧೭, ೨೯೪
ಹರ್ವಿಟ್ಸ್ಜ್ ೧೭
ಹಾರ್ಡಿ ಜಿ. ಎಚ್. (೧೮೭೭-೧೯೪೭) ೨೦
ಹಾಫ್‌ಮನ್, ಬನೆಶ್ (೧೯೦೬ -?) ೭೧, ೨೬೭
ಹಾಲ್ಡೇನ್, ಜಾನ್ ಬರ್ಡನ್ ಸ್ಯಾಂಡರ್ಸನ್ (೧೮೯೨-೧೯೬೪) ೧೨೧
ಹಾಲ್ಡೇನ್, ರಿಚರ್ಡ್ ಬರ್ಡನ್ (೧೮೫೬-೧೯೨೮) ೧೨೧-೧೨೩, ೧೨೫, ೧೨೬, ೧೪೪
ಹಿಂಡನ್‌ಬರ್ಗ್, ಫಾನ್ (೧೮೪೭-೧೯೩೪) ೧೭೬-೧೭೮
ಹಿಂಸಾನಂದಿ sadist ೭೭
ಹಿಟ್ಲರ್, ಅಡಾಲ್ಫ್, (ಫ್ಯೂರೆರ್) (೧೮೮೯-೧೯೪೫) ೧೭೩, ೧೭೬-೧೭೮, ೧೮೧, ೧೮೨, ೧೮೮-೧೯೦, ೨೨೮, ೨೩೨, ೨೪೯, ೨೫೭, ೩೧೧, ೩೧೨
ಹಿಪೊಕ್ರೇಟಸ್ (ಕ್ರಿಪೂಸು ೪೬೦-ಸು ೩೭೭) ೨೩೯
ಹೆಲ್ಮ್‌ಹಾಲ್ಟ್ಜ್, ಹರ್ಮನ್ ಲಡ್ವಿಗ್ ಫರ್ಡಿನಂಡ್ ಫಾನ್ (೧೮೨೧-೯೪) ೧೭, ೨೯೪
ಹೇಬರ್, ಫ್ರಿಟ್ಜ್ (೧೮೬೮-೧೯೩೪) ೧೨೦, ೧೮೯
ಹೈಡ್ರೊಜನ್ hydrogen ೧೫೦
ಹೈಡ್ರೊಜನ್ ಬಾಂಬ್ (ಸಂಲಯನ ಬಾಂಬ್) ೨೩೯, ೩೧೪
ಹೈಯೆಡೀಝ್ Hyades ೬೦
ಹೈಸನ್‌ಬರ್ಗ್, ವರ್ನರ್ (೧೯೦೧-೭೬) ೧೬೧, ೨೪೪, ೩೦೦, ೩೦೭, ೩೦೯, ೩೧೦
ಹ್ಯಾನ್, ಆಟೋ (೧೮೭೯-೧೯೬೮) ೨೨೫, ೨೨೬, ೨೨೯, ೩೩೮
ಹ್ಯಾಲರ್, ಫ್ರೀಡ್ರಿಚ್ (೧೮೪೪-೧೯೩೬) ೩೪, ೨೧೭
ಹ್ರಸ್ವಾಕ್ಷ minor axis ೧೬೩
*Albert Einstein : Philosoher- Scientist* ೨೪೧, ೨೪೨, ೨೪೫
*Annalen der Physik* ೧೯, ೨೫, ೩೧, ೩೭
*Belief and Action* ೨೮೬
*Berliner Tageblatt* ೭೯, ೮೧
*Brighter Than A Thousand Suns* ೩೧೪, ೩೧೫
*Daily Chronicle* ೧೬೩
*Einstein and the Universe* ೧೩೧
*Einstein Decade* ೨೬೯
*Einstein, His Life and Times* ೩೦೩
$E = mc^2$ ೨೮, ೨೯, ೧೧೫, ೧೫೫, ೧೮೩, ೨೨೧, ೨೨೬, ೩೧೪
"Generations to come . . . ." ೨೬೧
*Genesis* ೧೨೦
Geometry and Experience ೨೪೫
$GMM'/R^2$ ೧೫೫, ೨೯೫
"God is slick but He ain't mean" ೨೧೩
*Histories of the Theories of Aether and Electricity* ೨೬೯
*Nature* ೧೫೮, ೨೨೭
*New York Herald Tribune* ೧೬೩
*New York Times* ೧೧೮, ೧೨೮, ೧೨೯, ೧೬೩, ೨೫೦, ೨೫೧
*Principles of Mechanics* ೨೭೩
*The Born-Einstein Letters* ೩೦೩
*The Brown Book of Hitler Terror* ೧೯೧
*The Evolution of Physics* ೨೧೫, ೨೧೬, ೩೧೩
The Library of Living Philosophers ೨೪೦, ೨೪೧
*The Mathematical Theory of Relativity* ೨೫೪
*The Oppenheimer Case* ೩೧೫
*The Reign of Relativity* ೧೨೧
*The Universe and Dr Einstein* ೨೪೦

# Select Bibliography


*ABC of Relativity* by Bertrand Russell

*Albert Einstein and the Cosmic World Order* by Cornelius Lanczos

*Albert Einstein, Creator and Rebel* by Banesh Hoffmann with the collaboration of Helen Dukas

*Albert Einstein, Maker of Universes* by H. Gordon Garbedian

*Albert Einstein : Philosopher-Scientist* edited by Paul Arthur Schilpp

*Albert Einstein, the Human Side—New Glimpses from His Archives* selected and edited by Helen Dukas and Banesh Hoffmann

*Einstein and His Times* by Philipp Frank

*Einstein, Hilbert, and the Theory of Gravitation* by Jagadish Mehra

*Einstein Lived Here* by Abraham Pais

*Einstein on Peace* edited by Otto Nathan and H. Norden

*Einstein, the Life and Times* by Ronald W. Clark

*Einstein, the Man and His Achievement* edited by G. J. Whitrow

*Einstein the Searcher* by Alexander Moszkowski

*My Views* by Albert Einstein, edited and compiled by Sailesh Kumar Bandopadhyaya

*Out of My Later Years* by Albert Einstein

*Quest—The Evolution of a Scientist* by Leopald Infeld

*"Subtle is the Lord . . ."* by Abraham Pais

*Talking about Relativity* by John L. Synge

*The Einstein Decade* (1905-1915) by Cornelius Lanczos

*The Einstein Theory of Relativity* by H. G. and L. R. Lieber

*The Evolution of Physics* by Albert Einstein and Leopald Infeld

*The Meaning of Relativity* by Albert Einstein

*The Quotable Einstein* collected and edited by Alice Calaprice

*The Universe and Dr Einstein* by Lincoln Barnett

*The World As I See It* by Albert Einstein


ಅತ್ರಿಸೂನೆಂಬಾತ ಮಂಕುತಿಮ್ಮನಿಗೇನು
ಪುತ್ರನೇ ಭ್ರಾತೃವೇ ಕುಲಜನೇ ನಕಲಿಯೇ ?
ಚಿತ್ರಭಾನುವು ತಿಮ್ಮ ಬರಿಕಿರಿಸೊಡರು ಸೂನು
ಶತ್ರುಗಳುಭಯರೂ ತಮಂಧಕ್ಕೆ ಅತ್ರಿಸೂನು

## ಅತ್ರಿ ಬುಕ್ ಸೆಂಟರ್ ಕೆಲವು ಲಭ್ಯ ಶೀರ್ಷಿಕೆಗಳು

### ಏಪ್ರಿಲ್ ೨೦೦೯

| | | ರೂ. |
|---|---|---|
| ೧. | ಅಕ್ಷಮಾಲಾ (ಮಕ್ಕಳ ಕಥೆಗಳು) ಜಿ. ಎ. ರುಕ್ಮಿಣಿಮಾಲಾ . . . | ೨೦ |
| ೨. | ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು (ಭಾಷಾವಿಜ್ಞಾನ) ಡಿ. ಎನ್. ಶಂಕರಭಟ್ಟ . . . | ೧೮೦ |
| ೩. | ಊರುಭಂಗ (ಏಕಾಂಕ ನಾಟಕ) ಎಸ್. ವಿ. ಪರಮೇಶ್ವರಭಟ್ಟ . . . | ೮ |
| ೪. | ಕನ್ನಡಕ್ಕೇ ಬೇಕು ಕನ್ನಡದ್ದೇ ವ್ಯಾಕರಣ (ಭಾಷಾವಿಜ್ಞಾನ) ಡಿ. ಎನ್. ಎಸ್. | ೧೪೦ |
| ೫. | ಕನ್ನಡ ನುಡಿ ನಡೆದುಬಂದ ದಾರಿ (ಭಾಷಾವಿಜ್ಞಾನ) ಡಿ. ಎನ್. ಎಸ್. | ೧೬೦ |
| ೬. | ಕನ್ನಡ ಬರಹವನ್ನು ಸರಿಪಡಿಸೋಣ (ಭಾಷಾವಿಜ್ಞಾನ) ಡಿ. ಎನ್. ಎಸ್. | ೧೨೦ |
| ೭. | ಕನ್ನಡ ವಾಕ್ಯಗಳ ಒಳರಚನೆ (ಭಾಷಾವಿಜ್ಞಾನ) ಡಿ. ಎನ್. ಎಸ್. . . . | ೬೦ |
| ೮. | ಕನ್ನಡ ಸರ್ವನಾಮಗಳು (ಭಾಷಾವಿಜ್ಞಾನ) ಡಿ. ಎನ್. ಎಸ್. . . . | ೪೬ |
| ೯. | ತಾಯಂದಿರಿಗೆ ಕಿವಿಮಾತು (ಮಕ್ಕಳ ಆರೋಗ್ಯ ಕುರಿತು ಹಿತೋಕ್ತಿ) ಭಾರತಿ ಭಟ್ . . . | ೧೨೦ |
| ೧೦. | ತಾರಾವಲೋಕನ (ಬಾನಿಗೆ ಹಿಡಿದ ನುಡಿ ಚಿತ್ರ ದರ್ಪಣ) ಎ. ವಿ. ಗೋವಿಂದರಾವ್ . . . | ೮೦ |
| ೧೧. | ದೀವಟಿಗೆ (ಯಕ್ಷಗಾನ ರಂಗಪುನಾರಚನ ಸಾಹಸದ ಕಥನ) ಕೆ. ಎಂ. ರಾಘವ ನಂಬಿಯಾರ್ . . . | ೬೦ |
| ೧೨. | ದುಃಖಾರ್ತರು (ವಿಕ್ಟರ್ ಹ್ಯೂಗೋರಚಿತ *Les Miserables* ಕಾದಂಬರಿಯ ಸಂಗ್ರಹಾನುವಾದ) ಎ. ಪಿ. ಸುಬ್ಬಯ್ಯ . . . | ೭೦ |
| ೧೩. | ನನ್ನ ಬೆಲ್ಜಿಯಮ್ ಪ್ರವಾಸ (ಪ್ರವಾಸಾನುಭವ) ಭಾರತೀ ಭಟ್ . . . | ೫೦ |
| ೧೪. | ನಮ್ಮ ಜಪಾನ್ ಪ್ರವಾಸ (ಪ್ರವಾಸ ಕಥನ) ಗಂಗಾ ಬಿ. ರಾಜಪುರೋಹಿತ | ೬೦ |
| ೧೫. | ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದು? (ಭಾಷಾವಿಜ್ಞಾನ) ಡಿ.ಎನ್.ಎಸ್. | ೬೫ |
| ೧೬. | ನೃತ್ಯಲೋಕ (ಭರತನಾಟ್ಯ ಕುರಿತ ಆಕರಗ್ರಂಥ) ಕೆ. ಮುರಲೀಧರರಾವ್ | ೩೦೦ |
| ೧೭. | ಮಂಥರೆ (ಗೀತನಾಟಕ) ಎಚ್. ಎಸ್. ವೆಂಕಟೇಶಮೂರ್ತಿ . . . | ೧೦ |
| ೧೮. | ಮಾತಿನ ಒಳಗುಟ್ಟು (ಭಾಷಾವಿಜ್ಞಾನ) ಡಿ. ಎನ್. ಎಸ್. . . . | ೧೨೦ |
| ೧೯. | ಮಾರಿಷಾ ಕಲ್ಯಾಣ (ಯಕ್ಷಗಾನ ಪ್ರಸಂಗ) ಅಮೃತ ಸೋಮೇಶ್ವರ . . . | ೧೮ |
| ೨೦. | ಸನಾತನ ತತ್ವದ ಇಣುಕು ನೋಟಗಳು (ಸನಾತನ ಧರ್ಮಕ್ಕೆ ಪ್ರವೇಶ) ದರ್ಭೆ ನಾರಾಯಣ ಶಾಸ್ತ್ರಿ . . . | ೧೪೦ |
| ೨೧. | ಸಂಜೆ ಬಿಸಿಲು (ಕಥಾಸಂಕಲನ) ಎ. ಪಿ. ಮಾಲತಿ . . . | ೬೦ |

### ಜಿ. ಟಿ. ನಾರಾಯಣರಾಯರ ಲಭ್ಯ ಕೃತಿಗಳು

| | | |
|---|---|---|
| ೧. | ಅತ್ರಿಸೂನು ಉವಾಚ (ಮುಕ್ತಕಗಳು) . . . | ೩೦ |
| ೨. | ಆಲ್ಬರ್ಟ್ ಐನ್‌ಸ್ಟೈನ್ : ಮಾನವೀಯ ಮುಖ (ಅನುವಾದ) . . . | ೫೦ |

೩. ಉಲ್ಲೇಖನೀಯ ಐನ್‌ಸ್ಟೈನ್ (ಅನುವಾದ) . . . ೩೦
೪. ಋಷಿವಾಕ್ಯ ವಿಜ್ಞಾನಕಲೆ (ತತ್ತ್ವಶಾಸ್ತ್ರವಿಜ್ಞಾನ ಜಿಜ್ಞಾಸೆ) . . . ೧೫
೫. ಎನ್‌ಸಿಸಿ ದಿನಗಳು (ಅನುಭವಕಥನ) . . . ೫೫
೬. ಐನ್‌ಸ್ಟೈನ್ ಬಾಳಿದರಿಲ್ಲಿ (ವೈಜ್ಞಾನಿಕ ಜೀವನಚರಿತ್ರೆ) . . . ೭೦
೭. ಕುವೆಂಪು ದರ್ಶನ ಸಂದರ್ಶನ . . . ೪೫
೮. ಕೃಷ್ಣವಿವರಗಳು (*Black Holes*) . . . ೩೦
೯. ಕೊಪರ್ನಿಕಸ್ ಕ್ರಾಂತಿ (ಖಗೋಳ ವಿಜ್ಞಾನೇತಿಹಾಸ) . . . ೩೦
೧೦. ಜಾತಕ ಮತ್ತು ಭವಿಷ್ಯ (ನಾಳೆಯನ್ನು ಇಂದು ಅರಿಯಬಹುದೇ?) . . . ೧೫
೧೧. ಧೂಮಕೇತು (ಅದೃಷ್ಯಲೋಕದ ಅನಾದಿ ಕಾಲದ ಅಪೂರ್ವ ಅತಿಥಿ) . . . ೩೦
೧೨. ನವಕರ್ನಾಟಕ ಕನ್ನಡ ವಿಜ್ಞಾನಪದವಿವರಣ ಕೋಶ (ಪ್ರಸಂ) . . . ೫೦೦
೧೩. ಫರ್ಮಾ ಯಕ್ಷಪ್ರಶ್ನೆ ಮತ್ತು ಇತರ ವಿಜ್ಞಾನ ಲೇಖನಗಳು . . . ೬೦
೧೪. ಬಾನಬಯಲಾಟ ಗ್ರಹಣ (ಗ್ರಹಣದ ವಿಜ್ಞಾನವೃತ್ತಾಂತ) . . . ೧೦
೧೫. ಮುಗಿಯದ ಪಯಣ (ಆತ್ಮಚರಿತ್ರೆ) . . . ೧೨೦
೧೬. ರಾಮಾನುಜನ್ ಬಾಳಿದರಿಲ್ಲಿ (ಗಣಿತಮೇರುವಿನ ಜೀವನಚರಿತ್ರೆ) . . . ೫೦
೧೭. ವಿಜ್ಞಾನ ವರ್ತಮಾನ (ವಿಜ್ಞಾನ ವಾಚಿಕೆ ಆಯ್ದ ಬರಹಗಳು) . . . ೮೦
೧೮. ವಿಜ್ಞಾನ ಸಪ್ತರ್ಷಿಗಳು (ವರಾಹಮಿಹಿರ, ಕೆಪ್ಲರ್, ಲೈಪ್‌ನಿಟ್ಸ್, ಗೌಸ್, ಆಯ್ಲರ್, ರಾಮಾನುಜನ್, ರಾಮನ್) . . . ೩೫
೧೯. ವಿಶ್ವದ ಕಥೆ (ಜಗತ್ತಿನ ಹುಟ್ಟು, ಬೆಳವಣಿಗೆ, ಮುಪ್ಪು, ಸಾವು) . . . ೨೧
೨೦. ವೈಜ್ಞಾನಿಕ ಮನೋಧರ್ಮ (*Scientific Temper*) . . . ೮೦
೨೦. ವೈಜ್ಞಾನಿಕ ಮನೋಧರ್ಮ ಎಂದರೇನು? . . . ೫
೨೧. ಸಂಗೀತ ರಸನಿಮಿಷಗಳು (ಕಲಾವಿದರ ಜೊತೆಗಿನ ಒಡನಾಟದ ಅನುಭವ ಕಥನ) . . . ೬೦
೨೨. ಸಪ್ತಸಾಗರದಾಚೆಯೆಲ್ಲೋ . . . (ಚಂದ್ರಶೇಖರ್ ದರ್ಶನ, ಸಂವಾದ) ೬೦
೨೩. ಸವಾಲನ್ನು ಎದುರಿಸುವ ಛಲ (ವ್ಯಕ್ತಿತ್ವ ವಿಕಾಸ) . . . ೩೦
೨೪. ಸುಬ್ರಹ್ಮಣ್ಯನ್ ಚಂದ್ರಶೇಖರ್ (ವೈಜ್ಞಾನಿಕ ಜೀವನಚರಿತ್ರೆ) . . . ೫೫
೨೫. ಸೂಪರ್ನೋವಾ (ನಾಕ್ಷತ್ರಿಕಾಸ್ಫೋಟನೆ) . . . ೨೪
೨೬. Crossing the Dateline (Meeting with S. Chandrasekhar, Chicago . . . 40
೨೭. Scientific Temper . . . 15
೨೮. With the Great Minds (Ramanujan, Raman, Chandrasekhar, Muralidhara Rao and Suresh) . . . 30



**ಜಿ. ಟಿ. ನಾರಾಯಣರಾವ್** (೧೯೨೬-೨೦೦೮)

ಮಡಿಕೇರಿಯ ಜಿ. ಟಿ. ನಾರಾಯಣರಾವ್ ಮದ್ರಾಸು ವಿಶ್ವ ವಿದ್ಯಾಲಯದಿಂದ ಗಣಿತದಲ್ಲಿ ಎಂ.ಎ. ಪದವಿ ಗಳಿಸಿ (೧೯೪೭) ಮದ್ರಾಸು, ಮಂಗಳೂರು, ಮಡಿಕೇರಿ ಮತ್ತು ಬೆಂಗಳೂರು ನಗರಗಳಲ್ಲಿಯ ವಿವಿಧ ಕಾಲೇಜುಗಳಲ್ಲಿ ಗಣಿತೋಪನ್ಯಾಸಕರಾಗಿ (೧೯೪೭-೬೯) ಮತ್ತು ಅದೇ ಅವಧಿಯಲ್ಲಿ ಎನ್‌ಸಿಸಿ ಅಧಿಕಾರಿ ಯಾಗಿ (ಬಳ್ಳಾರಿಯಲ್ಲಿ ಎರಡು ವರ್ಷ ಪೂರ್ಣಾವಧಿಯ ಅಧಿ ಕಾರವೂ ಸೇರಿ) ಕೂಡ ಸೇವೆ ಸಲ್ಲಿಸಿದ್ದರು. ೧೯೬೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಹ್ವಾನ ಮನ್ನಿಸಿ ಅಲ್ಲಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕತ್ವ ವಹಿಸಿಕೊಂಡರು. ವಯಸ್ಸು ೬೦ ತುಂಬಿದಾಗ ಸೇವಾ ನಿಯಮಾನುಸಾರ ವೃತ್ತಿಯಿಂದ ನಿವೃತ್ತರಾದರು (೧೯೮೬). ವಿದ್ಯಾರ್ಥಿ ದಿನಗಳಂದು ಆರಂಭವಾದ ಕನ್ನಡದಲ್ಲಿ ಕಗ್ಗ ಹೊಸೆವ ಗೀಳು ಮುಂದೆ ಸಣ್ಣ ಕಥಾರಚನೆಯತ್ತ ಹೊರಳಿ ಉಭಯ ಕ್ಷೇತ್ರಗಳಲ್ಲಿಯೂ ಭ್ರಮನಿರಸನಗೊಂಡು ೧೯೪೯ರ ಸುಮಾರಿಗೆ ಕನ್ನಡ ಜನಪ್ರಿಯ ವಿಜ್ಞಾನ ಲೇಖನ ಬರವಣಿಗೆಯಲ್ಲಿ ಸ್ವಂತ ಅಭಿವ್ಯಕ್ತಿ ಮಾಧ್ಯಮವನ್ನು ಕಂಡು ಕೊಂಡಿತು. ಇತ್ತ ಹುಟ್ಟಿನಿಂದಲೇ ಅಂಕುರಿಸಿದ್ದ ಸಂಗೀತ ಪ್ರೇಮ ಕ್ರಮೇಣ ವರ್ಧಿಸಿ ಸಂಗೀತ ಶ್ರವಣ ಇವರ ಅತ್ಯಂತ ಪ್ರೀತಿಯ ಹವ್ಯಾಸವೇ ಆಗಿತ್ತು. ಎಂದೇ ಇವರ ಬಾಳಿನ ಸೂತ್ರ, "ಸಂಗೀತವೆನ್ನುಸಿರು, ಸಾಹಿತ್ಯವೆನ್ನೊಡಲು, ವಿಜ್ಞಾನವೆನ್ನಶನ, ಅಧ್ಯಾತ್ಮದೆಡೆ ಗಮನ." ಇಲ್ಲಿಯ ತನಕ ಇವರ ಸುಮಾರು ೭೦ ಕೃತಿಗಳೂ, ಅಸಂಖ್ಯಾತ ಲೇಖನಗಳೂ ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟವಾಗಿವೆ. ಗಮನಾರ್ಹವಾದ ಕೆಲವು: *ಐನ್‌ಸ್ಟೈನ್ ಬಾಳಿದರಿಲ್ಲಿ, ಸುಬ್ರಹ್ಮಣ್ಯನ್ ಚಂದ್ರಶೇಖರ್, ವೈಜ್ಞಾನಿಕ ಮನೋಧರ್ಮ, ಎನ್‌ಸಿಸಿ ದಿನಗಳು, ಮುಗಿಯದ ಪಯಣ* (ಆತ್ಮಚರಿತ್ರೆ, ೨೦೦೬), *ಸಂಗೀತ ರಸನಿಮಿಷಗಳು.* ಇಂಗ್ಲಿಷ್ ಕೃತಿಗಳು: ***Scientific Temper, With The Great Minds, Crossing the Dateline.***

* * *

೧೯ನೇ ಶತಮಾನದ ಉದ್ದಾಮ ವಿಜ್ಞಾನಿಗಳು ಕಂಡುಹಿಡಿದ ತಥ್ಯಗಳು ನ್ಯೂಟನ್ ನಿರ್ಮಿಸಿದ 'ವಿಶ್ವ'ವನ್ನು ಕದಲಿಸಿ ಭೌತಶಾಸ್ತ್ರಪ್ರಪಂಚವನ್ನು ಗೊಂದಲದಲ್ಲಿ ಕೆಡಹಿದ್ದಾಗ ಐನ್‌ಸ್ಟೈನರು ಹೊಸದೊಂದು ಕಾಣ್ಕೆಯ ಸೂತ್ರಕ್ಕೆ ವಿಶ್ವವನ್ನು ಒಳಪಡಿಸಿ 'ಅನರ್ಥ'ಗಳಿಗೆ 'ಅರ್ಥ'ದಾನ ಮಾಡಿದರು. ಅವರ ವಿಶೇಷ ಸಾಪೇಕ್ಷತಾ ಸಿದ್ಧಾಂತ ಮತ್ತು ಅನಂತರ ರೂಪಿಸಿದ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತವನ್ನು ಎಷ್ಟು ಮಟ್ಟಿಗೆ ವಿಜ್ಞಾನವೆಂದು ಹೇಳಬಹುದೋ ಅಷ್ಟೇ ಮಟ್ಟಿಗೆ 'ದರ್ಶನ'ವೆಂದೂ ಕರೆಯಬಹುದು. ಪದಾರ್ಥ ಮತ್ತು ಶಕ್ತಿಯನ್ನು ಕಾಲ ಮತ್ತು ದೇಶವನ್ನು ಒಂದೇ ಮಹಾ'ಋತ'ದ ಅಂಕೆಯಲ್ಲಿ ನೆಲೆಗೊಳಿಸಿದ ಅವರ ಕಾರ್ಯ ಕ್ವಾಂಟಮ್ ಭೌತಶಾಸ್ತ್ರ ದಿಂದ ಉದ್ಭವಿಸಿದ ಸಮಸ್ಯೆಗಳಿಗೆ ಪರಿಹಾರ ಒದಗಿಸಿದ ಬಗೆಯನ್ನು ಲೇಖಕರು ಈ ಪುಸ್ತಕ ದಲ್ಲಿ ವಿಸ್ತೃತವಾಗಿ ವಿವೇಚಿಸಿದ್ದಾರೆ.

—*ಮುನ್ನುಡಿಯಿಂದ*

ರೂ.20

ಅತ್ರಿ ಬುಕ್ ಸೆಂಟರ್
೪ ಶರಾವತಿ ಕಟ್ಟಡ ಬಲ್ಮಠ ಮಂಗಳೂರು ೫೭೫ ೦೦೧
ದೂರವಾಣಿ ೦೮೨೪ ೨೪೨೫೧೬೧, ೨೪೯೨೯೬೭